
ಕರ್ನಾಟಕ ಸರ್ಕಾರ

೫೦ ಕರ್ನಾಟಕ KARNATAKA

ರವೀಂದ್ರ ಕಥಾ ಮಂಜರಿ

ಭಾಗ ೩

ಅನು: ಆಹೋಬಲ ಶಂಕರ



ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಕಟಣೆ - ೧೯

ಸಾಹಿತ್ಯಮಾಲೆ - ೧೮

ಪ್ರಧಾನ ಸಂಪಾದಕರು

ಡಾ. ಪ್ರಧಾನ್ ಗುರುದತ್ತ

ರವೀಂದ್ರ ಕಥಾ ಮಂಜರಿ

ಭಾಗ – ೩

ರವೀಂದ್ರ ಕಥಾ ಮಂಜರಿ

ಭಾಗ – ೩

(ಇಪ್ಪತ್ತು ಕಥೆಗಳು)

ಕನ್ನಡ ಅನುವಾದ

ಅಹೋಬಲ ಶಂಕರ

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು

RAVINDRA KATHAMANJARI (Bhaga 3) - Kannada translation of Rabindranath Tagore's short stories (Part-3); Kannada translation by **Sri Ahobala Shankara;** Editor-in-Chief; **Dr. Pradhan Gurudatta;** Published by **Registrar, Karnataka Anuvada Sahitya Academy,** Kannada Bhavana, J. C. Road, Bangalore - 560 002. 2007; Pp. xv + 464, Price : Rs. 100/-

ಮೊದಲ ಮುದ್ರಣ : ೧೯೬೨, ಕಾವ್ಯಾಲಯ, ಮೈಸೂರು.
ಪುಟಗಳು : xv + ೪೬೪
ಬೆಲೆ : ರೂ. ೧೦೦/-
ಪ್ರತಿಗಳು : ೩,೨೦೦

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು
ದೂ : ೨೨೧೦೭೭೭೦

ಸಹಕಾರ :
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀಪಾದ್**

ISBN : 978-81-905692-0-0

ಮುದ್ರಕರು :
ಮೆ|| ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಹೆಚ್.ಡಿ. ಕುಮಾರಸ್ವಾಮಿ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ದಿನಾಂಕ : ೧೫.೦೩.೨೦೦೭

ಮುನ್ನುಡಿ

ಕರ್ನಾಟಕ ರಾಜ್ಯ ಪುನರ್ ಘಟನೆಯ ಐವತ್ತು ವರ್ಷಗಳ ನೆನಪಿಗಾಗಿ ಕರ್ನಾಟಕ ಸರ್ಕಾರ 'ಸುವರ್ಣ ಕರ್ನಾಟಕ'ದ ಸಂಭ್ರಮಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿತು. ಈ ಹೊತ್ತಿಗೆ ಸರಿಯಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯ ಮೂಲಕ ಕರ್ನಾಟಕ ಸರ್ಕಾರ ಇನ್ನೊಂದು ಹೊಸ ಹೆಜ್ಜೆಯನ್ನೂ ಇಟ್ಟಿತ್ತು. ಭಾರತೀಯ ಭಾಷೆಗಳ ನಡುವಣ ಪಾರಸ್ಪರಿಕ ಅರಿವನ್ನು ಹೆಚ್ಚಿಸುವುದರ ಜೊತೆಗೆ, ನಮ್ಮ ನಾಡು–ನುಡಿಗಳ ಹಿರಿಮೆಯನ್ನು ಇತರ ಭಾಷಾ–ಬಾಂಧವರಿಗೆ ಹಾಗೂ ಜಾಗತಿಕ ನೆಲೆಯಲ್ಲಿ ಪರಿಚಯಿಸಿ ಕೊಡುವುದು ಮತ್ತು ಜಗತ್ತಿನ ಇತರ ಭಾಷೆಗಳ ಶ್ರೇಷ್ಠ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುವುದು ಇದರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಅನುವಾದ ಸಾಹಿತ್ಯ ಈ ಹೊತ್ತು ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲದಿರುವುದರಿಂದ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ಕ್ಷೇತ್ರಗಳನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದೂ ಇದರಲ್ಲಿ ಸೇರಿದೆ. ಇದರಿಂದ ಐತಿಹಾಸಿಕ ಹಿರಿಮೆಯ ಜೊತೆಗೆ, ಕನ್ನಡದ ಸಾಮರ್ಥ್ಯ, ವೈಶಿಷ್ಟ್ಯ, ಹಿರಿಮೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಕಂಗೊಳಿಸುವಂತಾಗುತ್ತದೆ.

'ಸುವರ್ಣ ಕರ್ನಾಟಕ' ಸಂಭ್ರಮದ ಸಂದರ್ಭದಲ್ಲಿ, ಈ ಹಿಂದೆ ನಾಡು ನುಡಿಗೆ ಸೇವೆಯನ್ನು ಸಲ್ಲಿಸಿರುವ ಹಿರಿಯ ಚೇತನಗಳು ಸ್ವಪ್ರೇರಣೆಯಿಂದ ಕನ್ನಡಕ್ಕೆ ತಂದುಕೊಟ್ಟಿರುವ ಶ್ರೇಷ್ಠ ಕೃತಿಗಳಲ್ಲಿ ಆಯ್ದ ಗ್ರಂಥಗಳನ್ನು 'ಸುವರ್ಣ ಅನುವಾದ ಮಾಲೆಯ' ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹಾಗೂ ವಿಶ್ವದಲ್ಲಿನ ಶ್ರೇಷ್ಠ ಕೃತಿಗಳನ್ನೂ ಪರಿಚಯಿಸಿ ಕೊಡಲಾಗುತ್ತಿದೆ. ಇವು ಕನ್ನಡಿಗರಿಗೆ ಪ್ರಿಯವಾಗುತ್ತವೆಂದು ನಂಬಿದ್ದೇನೆ. ಈ ಕೃತಿಗಳನ್ನು ಸಹೃದಯತೆಯಿಂದ ಸ್ವಾಗತಿಸುವ ಮೂಲಕ, ಅನುವಾದ ಸಾಹಿತ್ಯ ಅಕಾಡೆಮಿಯ ಇಂಥ ಕೆಲಸಗಳಿಗೆ ಕನ್ನಡ ನಾಡಿನ ಜನತೆ ಪ್ರೋತ್ಸಾಹ ನೀಡುತ್ತದೆ ಎಂದು ಭಾವಿಸಿದ್ದೇನೆ.

(ಹೆಚ್.ಡಿ. ಕುಮಾರಸ್ವಾಮಿ)

ಹೆಚ್.ಎಸ್. ಮಹದೇವ ಪ್ರಸಾದ್
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. ೩೩೦, ೩ನೇ ಮಹಡಿ,
ವಿಧಾನಸೌಧ,
ಬೆಂಗಳೂರು - ೫೬೦ ೦೦೧

ದಿನಾಂಕ : ೦೮-೦೩-೨೦೦೭

ಶುಭಾಕಾಂಕ್ಷೆ

ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದಿರುವ ಅನುವಾದ ಸಾಹಿತ್ಯ ಅಕಾಡೆಮಿ, ರಾಷ್ಟ್ರದಲ್ಲಿಯೇ ಇಂಥ ಆದ್ಯ ಸಂಸ್ಥೆಯಾಗಿದ್ದು ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡು, ಕನ್ನಡ ಸಾಹಿತ್ಯ ಮತ್ತು ಜ್ಞಾನ-ವಿಜ್ಞಾನ ಕ್ಷೇತ್ರಕ್ಕೆ ಅರ್ಥಪೂರ್ಣವಾದ ಕೊಡುಗೆಗಳನ್ನು ನೀಡುವ ಹಂಬಲವನ್ನು ಹೊಂದಿದೆ. ಇದರ ಸ್ಥಾಪನೆಯ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಸುವರ್ಣ ಸಂಭ್ರಮದ ಉತ್ಸವವೂ ಕೂಡಿಬಂದಿರುವ ಕಾರಣದಿಂದಾಗಿ, ಅನುವಾದ ಸಾಹಿತ್ಯ ಅಕಾಡೆಮಿ ಗಾಂಧೀಜಿ, ನೆಹರೂ ಇಂಥ ಶ್ರೇಷ್ಠ ವ್ಯಕ್ತಿಗಳನ್ನು ಕುರಿತ ಮಹತ್ವದ ಕೃತಿಗಳನ್ನೇ ಅಲ್ಲದೆ, ವಿವಿಧ ಭಾಷೆಗಳಲ್ಲಿನ ಅತ್ಯುತ್ತಮ ಸಾಹಿತ್ಯ ಗ್ರಂಥಗಳನ್ನು ಮತ್ತು ಇತರ ಕೃತಿಗಳನ್ನು ಕನ್ನಡಿಗರಿಗೆ ಒದಗಿಸುವ ಕಾರ್ಯವನ್ನು ಹಮ್ಮಿಕೊಂಡಿರುವುದು ನನಗೆ ತುಂಬಾ ಸಂತೋಷವನ್ನು ಉಂಟುಮಾಡಿದೆ. ಇದರಲ್ಲಿ ದೇಶ-ವಿದೇಶಗಳ ಕಥೆ-ಕಾದಂಬರಿಗಳೂ, ನಾಟಕಗಳೂ, ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳ ಕೃತಿಗಳೂ ಸೇರಿದ್ದು, ಕನ್ನಡಿಗರಿಗೆ ವೈವಿಧ್ಯಮಯ ಅನುಭವವನ್ನು ತಂದುಕೊಡುವಲ್ಲಿ ನೆರವಾಗುತ್ತವೆ ಎಂದು ನಂಬಿದ್ದೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ನನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿದೆ. ಇದೇ ರೀತಿ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಹಾಗೂ ವಿದೇಶೀ ಭಾಷೆಗಳಿಗೆ ಅನುವಾದಿಸಿ ಕೊಡುವ ಕಾರ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ನಡೆದು ಕನ್ನಡಿಗರ ಸಾಧನೆ ಜಗತ್ತಿಗೆ ಚೆನ್ನಾಗಿ ತಿಳಿದು ಬರುವಂಥ ಸಾರ್ಥಕ ಪ್ರಯತ್ನಗಳು ನಡೆಯಲಿ ಎಂದು ಹಾರೈಸುತ್ತೇನೆ.

ಈಗ ಹೊರಬರುತ್ತಿರುವ ಕೃತಿಗಳಿಗೆ ಕನ್ನಡ ವಾಚಕಲೋಕದ ಸಹೃದಯಪೂರ್ಣ ಸ್ವಾಗತ ದೊರೆಯುತ್ತದೆಂದು ನಂಬಿದ್ದೇನೆ. ಇಂಥ ಸ್ವಾಗತ ಮತ್ತು ಪ್ರೋತ್ಸಾಹಗಳು ಅಕಾಡೆಮಿಯ ಮುಂದಿನ ಕಾರ್ಯಚಟುವಟಿಕೆಗಳಿಗೆ ಪ್ರೇರಣೆಯನ್ನೊದಗಿಸಲಿ ಎಂದು ಹಾರೈಸುತ್ತೇನೆ.

(ಹೆಚ್.ಎಸ್. ಮಹದೇವ ಪ್ರಸಾದ್)

ಕಛೇರಿ : ೨೨೨೫೫೪೮೨
೨೨೦೩೪೦೦೭

ಕರ್ನಾಟಕ ಸರ್ಕಾರ

ಐ.ಎಂ. ವಿಠ್ಠಲಮೂರ್ತಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ
ಹಾಗೂ ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊ.ನಂ.೫, ನೆಲಮಹಡಿ, ವಿಕಾಸಸೌಧ,
ಬೆಂಗಳೂರು-೫೬೦ ೦೦೧

ಹೊಸ ಹೆಜ್ಜೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿಸಲಾಗುತ್ತಿರುವ 'ಶ್ರೀ ಕುವೆಂಪು ಭಾಷಾಭಾರತೀ' ಎಂಬ ರಾಷ್ಟ್ರೀಯ ಸಂಸ್ಥೆಯ ಒಂದು ಸ್ವತಂತ್ರ ವಿಭಾಗವಾಗಿ ಕರ್ನಾಟಕ ಸರ್ಕಾರ 'ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ'ಯನ್ನು ಈಗಾಗಲೇ (೨೦೦೬ರಲ್ಲಿ) ಅಸ್ತಿತ್ವಕ್ಕೆ ತಂದಿದೆ. ಇಂಥ ಉಪಕ್ರಮವನ್ನು ಮೆರೆಯುವಲ್ಲಿ ಕರ್ನಾಟಕವೇ ಮೊದಲನೆಯ ರಾಜ್ಯವಾಗಿದೆ ಎಂಬುದು ಹೆಮ್ಮೆಯ ಸಂಗತಿಯೇ ಆಗಿದೆ. ಈ ಅನುವಾದ ಅಕಾಡೆಮಿ, ಪ್ರಾರಂಭಗೊಂಡ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಪುನರ್-ರಚನೆಯ ಸುವರ್ಣ ಮಹೋತ್ಸವದ ಸಂದರ್ಭ ಕೂಡಿ ಬಂದದ್ದು ಒಂದು ವಿಶಿಷ್ಟ ಯೋಗಾಯೋಗವೇ ಆಗಿದೆ. ಈ ಸುವರ್ಣ ಮಹೋತ್ಸವದ ಸಂದರ್ಭದ ಆಚರಣೆಯ ಅಂಗವಾಗಿ ಅನುವಾದ ಅಕಾಡೆಮಿ ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡಿದೆ. ಈ ಮೊದಲೇ ವಿಭಿನ್ನ ಭಾಷೆಗಳಲ್ಲಿನ ಹಲವು ಶ್ರೇಷ್ಠ ಲೇಖಕರ ಹಲವಾರು ಶ್ರೇಷ್ಠ ಕೃತಿಗಳು ನಮ್ಮ ಸಾಹಿತಿಗಳ ಗಮನವನ್ನು ಸೆಳೆದಿದ್ದು, ಅವುಗಳ ಯಥಾವತ್ತಾದ, ಸಂಗ್ರಹರೂಪವಾದ, ಅಳವಡಿಕೆಯಂತಿರುವ ಅನುವಾದಗಳನ್ನು ಅವರು ನಮಗೆ ಕೊಡಮಾಡಿದ್ದಾರೆ. 'ಒಬ್ಬನೇ ಉಂಡ ಊಟ ಹಬ್ಬವಲ್ಲ; ಒಬ್ಬನೇ ಸವಿದ ರುಚಿ ರುಚಿಯಲ್ಲ' ಎಂಬ ಗಾದೆ ಮಾತನ್ನು ಸಾರ್ಥಕಗೊಳಿಸುವಂತೆ, ಅವರು ಈ ಕೆಲಸವನ್ನು ಮಾಡಿದ್ದಾರೆ. ಇಂಥ ಪ್ರಸಿದ್ಧ, ಜನಪ್ರಿಯ, ಅಲಭ್ಯ ಕೃತಿಗಳನ್ನು 'ಸುವರ್ಣ ಕರ್ನಾಟಕ' ಯೋಜನೆಯ ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹೊಸ ಶ್ರೇಷ್ಠ ಗ್ರಂಥಗಳನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಹೀಗೆ, ದೇಶ-ವಿದೇಶಗಳ ಉತ್ಕೃಷ್ಟ ಕೃತಿಗಳಿಂದ ಕನ್ನಡ ಭಾಷೆ-ಸಾಹಿತ್ಯಗಳನ್ನು ಸಮೃದ್ಧಗೊಳಿಸುವ ದಿಕ್ಕಿನಲ್ಲಿ ಅನುವಾದ ಅಕಾಡೆಮಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಬೇಕಾಗಿದೆ.

ಅನುವಾದ ಇಂದು ತನ್ನ ಆಯಾಮವನ್ನು ಬಹುವಾಗಿ ವಿಸ್ತರಿಸಿಕೊಂಡು ಜ್ಞಾನ-ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ಒಳಪಡಿಸಿಕೊಂಡಿದೆ. ಹೀಗಾಗಿ, ಈ ದಿಕ್ಕಿನಲ್ಲಿಯೂ ಕನ್ನಡವನ್ನು ಸಮೃದ್ಧಗೊಳಿಸುವತ್ತ ನಮ್ಮ ಗಮನ ಹರಿಯಬೇಕಾಗಿದೆ. ಅಕಾಡೆಮಿ ಈ ದಿಕ್ಕಿನಲ್ಲಿಯೂ

ಕಾರ್ಯೋನ್ಮುಖವಾಗಿರುವುದು ಸಂತೋಷದ ವಿಚಾರವೇ ಆಗಿದೆ. ಈ ಬಗೆಯ ಬಹುಮುಖೀ ಕಾರ್ಯಚಟುವಟಿಕೆಗಳಿಂದ ಭಾರತೀಯ ಭಾಷೆಗಳಲ್ಲಿ ಈಗಾಗಲೇ ತನ್ನದೇ ಆದ ಹಿರಿಮೆಯನ್ನು ಮೆರೆದಿರುವ, ಮೆರೆಯುತ್ತಿರುವ ಕನ್ನಡ ಭಾಷೆ–ಸಾಹಿತ್ಯ ಮತ್ತಷ್ಟು ಕಂಗೊಳಿಸುವಂತಾಗುತ್ತದೆ. ಅನೇಕ ಮಹತ್ವದ ಗ್ರಂಥಗಳು ದೊರೆಯುವಂತಾಗುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷವನ್ನು ಉಂಟುಮಾಡುತ್ತಿದೆ. ಇಂಥ ಕಾರ್ಯಗಳಿಗೆ ಸರ್ಕಾರದ ಬೆಂಬಲದ ಜೊತೆಗೆ, ಜನತೆಯ ಹೃತ್ಪೂರ್ವಕ ಪ್ರೋತ್ಸಾಹವೂ ಅಗತ್ಯವಾಗುತ್ತದೆ. ವಿವೇಚನಾಶೀಲರೂ, ಸಹೃದಯರೂ ಆದ ಕನ್ನಡಿಗರು ಇಂಥ ಪ್ರೋತ್ಸಾಹ ನೀಡುವಲ್ಲಿ ಮುಂದಾಗುತ್ತಾರೆ ಎಂದು ನಂಬಿದ್ದೇನೆ. ಅಕಾಡೆಮಿಯ ಕಾರ್ಯಚಟುವಟಿಕೆಗಳು ಇತೋಪ್ಯತಿಶಯವಾಗಿ ಮುಂದುವರಿಯಲಿ ; ಕರ್ನಾಟಕದ ಜನತೆಗೆ ಹೊಸ ಅನುಭವಗಳ ಲೋಕವನ್ನು ತೆರೆದು ತೋರುವ ಕಾರ್ಯಗಳು ಅವಿಚ್ಛಿನ್ನವಾಗಿ ನಡೆಯಲಿ ಎಂದು ಈ ಸಂದರ್ಭದಲ್ಲಿ ಹಾರೈಸಬಯಸುತ್ತೇನೆ.

(ಐ.ಎಂ. ವಿಠ್ಠಲಮೂರ್ತಿ)

ಪ್ರಸ್ತಾವನೆ

ಭಾರತದಲ್ಲಿ ಯಾವುದೇ ರಾಜ್ಯವೊಂದರಲ್ಲಿ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಮೊಟ್ಟಮೊದಲ ಬಾರಿಗೆ ಸ್ಥಾಪಿಸಿದ ಹಿರಿಮೆ ಕರ್ನಾಟಕ ಸರ್ಕಾರದ್ದಾಗಿದೆ. ಜನವರಿ ೬, ೨೦೦೬ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರು ವಿಧ್ಯುಕ್ತವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ ಹಾಗೂ ಭಾಷಾಂತರವನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಶಿಕ್ಷಣ ವಿಷಯವಾಗಿ ಅಳವಡಿಸಿದ ಭಾಷಾಂತರ ಕ್ಷೇತ್ರದ ಭೀಷ್ಮಾಚಾರ್ಯರೂ ಆದ ಪ್ರೊ॥ ದೇ. ಜವರೇಗೌಡ ಅವರೂ, ಹಿರಿಯ ವಿದ್ವಾಂಸರಾದ ಪ್ರೊ॥ ಎಲ್.ಎಸ್. ಶೇಷಗಿರಿ ರಾವ್ ಅವರೂ ಅಕಾಡೆಮಿಯ ಕಾರ್ಯಚಟುವಟಿಕೆಗಳ ದಿಕ್ಕು-ದೆಸೆಗಳನ್ನು ನಿರ್ದೇಶಿಸಿದರು.

ನಮ್ಮ ನಾಡಿನಲ್ಲಿರುವ ವಿಚಿತ್ರ ಪರಿಸ್ಥಿತಿ ಎಂದರೆ ವಿದೇಶೀಯ ಭಾಷಾಸಾಹಿತ್ಯಗಳ ಅಷ್ಟಿಷ್ಟು ಪರಿಚಯವಾದರೂ ಇರುವ ನಮಗೆ ನಮ್ಮ ನಾಡಿನ ನೆರೆಹೊರೆಯ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯದ, ಶ್ರೇಷ್ಠ ಸಾಹಿತಿಗಳ ಪರಿಚಯ ಬಹುಮಂದಿಗೆ ಇಲ್ಲವೇ ಇಲ್ಲದಂತಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಇತರ ಕೆಲವು ರಾಷ್ಟ್ರೀಯ ಸಂಸ್ಥೆಗಳು ತಮ್ಮ ಕಾರ್ಯಚಟುವಟಿಕೆಗಳಲ್ಲಿ ಅನುವಾದಗಳನ್ನು ಹೊರತರುವ ಕೆಲವು ಯೋಜನೆಗಳನ್ನು ಕೈಗೊಳ್ಳುತ್ತಿರುವುದುಂಟು. ಆದರೆ, ಈ ಕಾರ್ಯಗಳು ಅಪೇಕ್ಷಣೀಯ ಪ್ರಮಾಣದಲ್ಲಿ ಹಾಗೂ ಪರಸ್ಪರ ಪೂರಕವಾಗುವ ರೀತಿಯಲ್ಲಿ ಆಗುತ್ತಿಲ್ಲ. ಮೇಲಾಗಿ ಈ ಕಾರ್ಯಕ್ರಮಗಳು ಬಹುಮಟ್ಟಿಗೆ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರವೇ ಸೀಮಿತವಾಗಿವೆ. ಹೀಗಾಗಿ, ಪರಸ್ಪರ ಕೊಳು-ಕೊಡೆಯ ಕಾರ್ಯಕ್ರಮಗಳು ಹೆಚ್ಚು-ಹೆಚ್ಚಾಗಿ ಹಾಗೂ ವೈವಿಧ್ಯಮಯವಾಗಿ ಆಗಬೇಕಾದ ಅಗತ್ಯವೂ ಇದೆ.

ಭಾರತೀಯ ಭಾಷಾಸಾಹಿತ್ಯಗಳು ಸಮೃದ್ಧವಾಗಿ ಬೆಳೆಯಬೇಕಾದರೆ, ಎರಡು ಮುಖಗಳಲ್ಲಿ ಕಾರ್ಯಗಳು ಆಗಬೇಕಾಗಿದೆ: (೧) ರಾಷ್ಟ್ರೀಯ ಮಟ್ಟದಲ್ಲಿ; (೨) ಅಂತಾರಾಷ್ಟ್ರೀಯ ಮಟ್ಟದಲ್ಲಿ. ರಾಷ್ಟ್ರೀಯ ಸ್ತರದಲ್ಲಿ ನಮ್ಮ ಭಾಷಾ ಸಾಹಿತ್ಯವನ್ನು ಬಿಂಬಿಸುವ ಕೆಲಸ ಎಷ್ಟು ಮುಖ್ಯವೋ, ಇತರ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಅಷ್ಟೇ ಮುಖ್ಯ. ರಾಷ್ಟ್ರೀಯ ಅಂತಾರಾಷ್ಟ್ರೀಯ ಮಹತ್ವದ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಹಾಗೂ ಕನ್ನಡ ಸಾಹಿತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಿಂಬಿಸುವುದೂ ಅಷ್ಟೇ ಮುಖ್ಯ. ಈ ದೃಷ್ಟಿಯಿಂದ ನೊಬೆಲ್ ಪ್ರಶಸ್ತಿ, ಬೂಕರ್ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮೊದಲಾದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿರುವ ಲೇಖಕರ ಮಹತ್ವದ

ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುವ ಯೋಜನೆಗಳನ್ನು ಅನುವಾದ ಸಾಹಿತ್ಯ ಅಕಾಡೆಮಿ ತನ್ನ ಮುಂದಿರಿಸಿಕೊಂಡಿದೆ. ಅಷ್ಟೇ ಅಲ್ಲದೆ, ವಿಜ್ಞಾನ-ತಂತ್ರಜ್ಞಾನ, ವೈದ್ಯಕೀಯ, ಮಾನವಿಕ ಮೊದಲಾದ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡದಲ್ಲಿ ತರುವ ಯೋಜನೆಗಳೂ ಅಕಾಡೆಮಿಯ ಮುಂದಿವೆ. ಇತರ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ, ಅಂತೆಯೇ, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಭಾಗ, ಕೇಂದ್ರೀಯ ಹಿಂದೀ ನಿರ್ದೇಶನಾಲಯ, ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಪದಾವಲಿ ಆಯೋಗ ಇತ್ಯಾದಿ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ಈ ದಿಕ್ಕಿನಲ್ಲಿ ಸಹಕಾರವನ್ನು ಪಡೆದುಕೊಳ್ಳುವ ಆಲೋಚನೆಯನ್ನೂ ಅಕಾಡೆಮಿ ಇರಿಸಿಕೊಂಡಿದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಕಾರ್ಯಶಿಬಿರಗಳನ್ನು ಆಯೋಜಿಸಿ, ಅನುವಾದದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ, ಸಮರ್ಥ ಭಾಷಾಂತರಕಾರರನ್ನು ಗುರುತಿಸುವ ಪ್ರಯತ್ನಗಳನ್ನು ಅಕಾಡೆಮಿ ಮಾಡುತ್ತಿದೆ. ಈಗಾಗಲೇ ಕನ್ನಡ-ತೆಲುಗು, ಕನ್ನಡ-ಹಿಂದೀ, ಯಂತ್ರಾನುವಾದ, ವಿಜ್ಞಾನ ಸಾಹಿತ್ಯ ಅನುವಾದ ಇವುಗಳಿಗೆ ಸಂಬಂಧಿಸಿದಂತೆ ರಾಜ್ಯದ ಬೇರೆ-ಬೇರೆ ಕೇಂದ್ರಗಳಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ಕಾರ್ಯಶಿಬಿರಗಳನ್ನೂ, ವಿಚಾರಗೋಷ್ಠಿಗಳನ್ನೂ ನಡೆಸಲಾಗಿದೆ. ಉರ್ದೂ ಮತ್ತು ತಮಿಳು ಭಾಷೆಗಳ ಕಾರ್ಯಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಭಾಷಾಂತರ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನಕ್ಕೆ ತೆಗೆದುಕೊಂಡು ಆ ದಿಕ್ಕಿನಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಆಲೋಚನೆಯೂ ಇದೆ. ಇತ್ತೀಚೆಗೆ ಸ್ಯಾಮ್ ಪಿಟ್ರೋಡಾ ಅವರು 'ರಾಷ್ಟ್ರೀಯ ಅನುವಾದ ಮಿಷನ್' (National Translation Mission) ಅನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯೋಜನೆಯೊಂದನ್ನು ಸಲ್ಲಿಸಿದ್ದು, ಕೇಂದ್ರ ಸರ್ಕಾರ ಆ ಯೋಜನೆಯನ್ನು ಒಪ್ಪಿಕೊಂಡಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದಲ್ಲಿ, ಜ್ಞಾನ-ವಿಜ್ಞಾನ-ತಂತ್ರಜ್ಞಾನಗಳು ಜನಸಾಮಾನ್ಯರವರೆಗೂ ಯಶಸ್ವಿಯಾಗಿ ಮುಟ್ಟುವುದು ಸಾಧ್ಯವಾಗುತ್ತದೆ ಹಾಗೂ ರಾಷ್ಟ್ರದ ಪ್ರಗತಿಯೂ ಅಭೂತಪೂರ್ವ ರೀತಿಯಲ್ಲಿ ಆಗುತ್ತದೆ ಎಂದು ಆಶಿಸಲಾಗಿದೆ. ಈ ಯೋಜನೆ ಉದ್ಯೋಗಸೃಷ್ಟಿಯ ಮಹತ್ತರ ಯೋಜನೆಯೂ ಆಗಲಿದೆ. ಇಂಥ ಸಂದರ್ಭದಲ್ಲಿ ಅಗತ್ಯವಾಗುವ ಲಕ್ಷಾಂತರ ಮಂದಿ ಅನುವಾದಕರ ಪಡೆಯನ್ನು ಸಿದ್ಧಪಡಿಸುವುದು ಇಂಥ ಸಂಸ್ಥೆಗಳ ಮತ್ತು ವಿಶ್ವವಿದ್ಯಾನಿಲಯಗಳ ಹೊಣೆಯೇ ಆಗಿರುತ್ತದೆ. ರಾಜ್ಯದ ಹಾಗೂ ಹೊರಗಿನ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಭಾಷಾಂತರ ವಿಭಾಗಗಳು ಸ್ಥಾಪಿತವಾಗಿದ್ದು, ಅವು ಕಾರ್ಯಶೀಲವಾಗುತ್ತಿರುವುದು ಶುಭಸೂಚಕವಾಗಿದೆ.

ಇದುವರೆಗೆ ವಿದ್ವಾಂಸರ ವೈಯಕ್ತಿಕ ಪಾಂಡಿತ್ಯ, ವ್ಯುತ್ಪತ್ತಿ ಮತ್ತು ಒಲವನ್ನು ಆಧರಿಸಿ ಅನುವಾದ ಕಾರ್ಯಗಳು ನಡೆಯುತ್ತಾ ಬಂದಿವೆ. ಆದರೆ ಇಂಥ ಕಾರ್ಯಗಳು ವ್ಯವಸ್ಥಿತವಾಗಿ ಹಾಗೂ ಉತ್ತಮ ಗುಣಮಟ್ಟದೊಂದಿಗೆ ನಡೆಯಬೇಕಾದ್ದು ಅಪೇಕ್ಷಣೀಯವಾಗಿರುವ ಹಿನ್ನೆಲೆಯಲ್ಲಿ, ಭಾಷಾಂತರ ಸಂಬಂಧವಾದ ಶಿಕ್ಷಣ-ಕ್ರಮಗಳನ್ನು ರೂಪಿಸುವುದು ಹಾಗೂ ದ್ವಿಭಾಷಾ ಮತ್ತು ಬಹುಭಾಷಾ ನಿಘಂಟುಗಳನ್ನು, ನುಡಿಗಟ್ಟುಗಳ ಮತ್ತು ಗಾದೆಗಳ ಕೋಶಗಳು, ಸಮಾನಾರ್ಥಕ

ಮತ್ತು ಭಿನ್ನಾರ್ಥಕ ಕೋಶಗಳು ಹಾಗೂ ವಾಕ್ಯರಚನಾ ಕೈಪಿಡಿಗಳನ್ನು ಹೊರತರುವುದು – ಇವೇ ಮೊದಲಾದ ಕಾರ್ಯಗಳು ಆದ್ಯತೆಯ ಮೇರೆಗೆ ನಡೆಯಬೇಕಾಗಿವೆ. ಅನುವಾದ ಅಕಾಡೆಮಿ ಸ್ಥಾಪಿತವಾದ ಅತ್ಯಲ್ಪ ಅವಧಿಯಲ್ಲಿಯೇ ಇತರ ಸಂಘ–ಸಂಸ್ಥೆಗಳ ಗಮನವನ್ನು ಸೆಳೆದಿದ್ದು, ಅಂತರರಾಷ್ಟ್ರೀಯ ಕನಕದಾಸ ಮಿಷನ್‌ನಂತಹ ಸಂಸ್ಥೆ ಅನುವಾದ ಅಕಾಡೆಮಿಯೊಂದಿಗೆ ಸಹಕರಿಸಲು ಮುಂದೆ ಬಂದಿರುವುದು ಗಮನಾರ್ಹವಾದ ವಿಚಾರವೇ ಆಗಿದೆ. ಅಂತೆಯೇ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕನ್ನಡದಲ್ಲಿ ಹೊರತರುವ ಬಗ್ಗೆಯೂ ಆಲೋಚನೆ ಮಾಡಲಾಗುತ್ತಿದೆ. ಹೀಗೆ ಅನುವಾದ ಅಕಾಡೆಮಿ ಅನೇಕ ದಿಕ್ಕುಗಳಲ್ಲಿ ಮುಂದುವರಿದು ಸಾಧನೆ ಮಾಡಬೇಕಾಗಿದೆ.

ಕರ್ನಾಟಕ ಸರ್ಕಾರ ಅನುವಾದ ಅಕಾಡೆಮಿಯ ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿ ಅಗತ್ಯವಾದ ನೆರವನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ವಿಶೇಷ ಸಂತೋಷದ ವಿಚಾರವೇ ಆಗಿದೆ. ಅದರಲ್ಲಿಯೂ ಈ ಬಾರಿ ಸುವರ್ಣ ಕರ್ನಾಟಕ ಕಾರ್ಯಕ್ರಮಗಳ ಅಂಗವಾಗಿ ವಿಶೇಷ ಧನಸಹಾಯ ನೀಡಿರುವುದರಿಂದ ಪ್ರಸಿದ್ಧ/ಅಲಭ್ಯ ಅನುವಾದಗಳ ಮರುಪ್ರಕಟಣೆ ಕಾರ್ಯವನ್ನು ಕೈಗೊಳ್ಳುವುದು, ಮತ್ತಿತರ ಮಹತ್ವದ ಪ್ರಕಟಣೆಗಳನ್ನು ಕೈಗೊಳ್ಳುವುದು ಸಾಧ್ಯವಾಗಿದೆ. ಈ ದಿಕ್ಕಿನಲ್ಲಿ ನಾಡಿನ ವಿದ್ವಾಂಸರು ವಿಶೇಷವಾದ ಸಹಾಯ–ಸಹಕಾರಗಳನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ಗೌರವದ, ಸಂತೋಷದ ಹಾಗೂ ಹೆಮ್ಮೆಯ ವಿಚಾರವೇ ಆಗಿದೆ. ಈ ಸಂದರ್ಭದಲ್ಲಿ ವಿಲ್ ಡ್ಯೂರಾಂಟ್ ಅವರ ಜಗತ್–ಪ್ರಸಿದ್ಧವಾಗಿರುವ ಹಾಗೂ ಭಾರತದ ಬೇರಾವ ಭಾಷೆಯಲ್ಲೂ ಇನ್ನೂ ಬೆಳಕು ಕಾಣದಿರುವ 'ದಿ ಸ್ಟೋರಿ ಆಫ್ ಸಿವಿಲಿಜೇಷನ್' ಸಂಪುಟಗಳ ಕನ್ನಡ ಅನುವಾದವನ್ನು ಹೊರತರುವಲ್ಲಿ ಪ್ರೊ॥ ಎಲ್.ಎಸ್. ಶೇಷಗಿರಿ ರಾವ್ ಅವರೂ, ಬಹಳ ಹಿಂದೆಯೇ ಇಂಗ್ಲಿಷ್‌ನಲ್ಲಿ ೧೦ ಸಂಪುಟಗಳಲ್ಲಿ ಪ್ರಕಟಣೆಗೊಂಡಿರುವ ಸಂಸ್ಕೃತ ಸಾಹಿತ್ಯದ ವಿಶಿಷ್ಟ ಕೃತಿಯಾದ ಸೋಮದೇವನ 'ಕಥಾಸರಿತ್ಸಾಗರ'ದ ಕನ್ನಡ ಅನುವಾದವನ್ನು ನೇರವಾಗಿ ಸಂಸ್ಕೃತದಿಂದ ಅನುವಾದಿಸಿ ಹೊರತರುವಲ್ಲಿ ಡಾ॥ ಪಿ.ಎಸ್. ರಾಮಾನುಜಮ್ ಅವರೂ ನೆರವು ನೀಡುತ್ತಿರುವುದು ವಿಶೇಷವಾಗಿ ಸ್ಮರಣೀಯವಾಗಿದೆ. ಕನ್ನಡ ಸಹೃದಯ ಲೋಕ ಅಕಾಡೆಮಿಯ ಈ ಕಾರ್ಯಚಟುವಟಿಕೆಗಳ ವಿಷಯದಲ್ಲಿ ತನ್ನ ಸಹೃದಯತೆಯನ್ನು ಮೆರೆಯುತ್ತದೆ ಎಂದು ಆಶಿಸಿದ್ದೇನೆ.

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಗೆ ಕಾರಣರಾದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರಿಗೂ, ಅಕಾಡೆಮಿಯ ಕಾರ್ಯಚಟುವಟಿಕೆಗಳ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿ, ಎಲ್ಲ ನೆರವನ್ನು ನೀಡುತ್ತಿರುವ ಇಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರಿಗೂ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಮಹದೇವ ಪ್ರಸಾದ್ ಅವರಿಗೂ ಅಕಾಡೆಮಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ. ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಬಗೆಯ

ಸಹಾಯ-ಸಹಕಾರ-ಮಾರ್ಗದರ್ಶನ ನೀಡುತ್ತಾ ಬಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಉಷಾ ಗಣೇಶ್ ಅವರಿಗೂ, ಚೈತನ್ಯಶೀಲರೂ, ದೂರಗಾಮಿ ದೃಷ್ಟಿಯನ್ನುಳ್ಳವರೂ ಆದ ಇಂದಿನ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿಂದಿನ ಆಯುಕ್ತರುಗಳಾಗಿದ್ದ ಶ್ರೀ ಕೆ.ಆರ್. ನಿರಂಜನ್ ಮತ್ತು ಶ್ರೀ ಎಸ್.ಎಫ್. ಯೋಗಪ್ಪನವರ್ ಅವರಿಗೂ, ನಿರ್ದೇಶಕರಾಗಿರುವ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೂ ಅಕಾಡೆಮಿ ವಿಶೇಷ ವಂದನೆಗಳನ್ನು ಸೂಚಿಸಬಯಸುತ್ತದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಸಹಾಯ ಸಹಕಾರ ಮತ್ತು ಮಾರ್ಗದರ್ಶನ ಮಾಡುತ್ತಿರುವ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ರವೀಂದ್ರನಾಥ ಠಾಕೂರ್ ಅವರ 'ಗೀತಾಂಜಲಿ' ಮತ್ತು 'ನೈವೇದ್ಯ' ಕೃತಿಗಳನ್ನು ನೇರವಾಗಿ ಬಂಗಾಳಿಯಿಂದ ಅನುವಾಸಿರುವ ಶ್ರೀ ಎಂ.ಆರ್.ಸಿ. ನಾಗರಾಜನ್ ಅವರ ಆವೃತ್ತಿಗಳನ್ನು ಪ್ರಕಟಿಸಿದ ತರುಣದಲ್ಲೇ 'ರವೀಂದ್ರ ಕಥಾಮಂಜರಿ'ಯ ಮೂರು ಭಾಗಗಳನ್ನು ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ವತಿಯಿಂದ ಪ್ರಕಟಿಸಲು ಸಾಧ್ಯವಾಗಿರುವುದು ಅಕಾಡೆಮಿಗೆ ತುಂಬ ಸಂತೋಷವನ್ನುಂಟು ಮಾಡಿದೆ. ಇದಕ್ಕೆ ಕಾರಣ ಈ ಮೂರೂ ಸಂಪುಟಗಳಲ್ಲಿನ ಕಥೆಗಳು ನೇರವಾಗಿ ಬಂಗಾಳಿಯಿಂದಲೇ ಅನುವಾದಗೊಂಡಿವೆ. ಅಹೋಬಲ ಶಂಕರ ಅವರ ಅಗಾಧ ಪರಿಶ್ರಮದಿಂದ ಇದು ಸಾಧ್ಯವಾಗಿದೆ. ಇದರ ಮೊದಲ ಆವೃತ್ತಿಗಳನ್ನು ಕನ್ನಡದಲ್ಲಿ ಪ್ರಕಟಿಸಿದ ಕಾವ್ಯಾಲಯದ ಕೂಡಲಿ ಕೃಷ್ಣಮೂರ್ತಿ ಅವರು ಸುವರ್ಣ ಕರ್ನಾಟಕ ಮಾಲೆಯ ಅಂಗವಾಗಿ ಈ ಸಂಪುಟಗಳನ್ನು ಪ್ರಕಟಿಸಲು ಉದಾರವಾಗಿ ಅನುಮತಿಯನ್ನು ಕೊಟ್ಟಿದ್ದಾರೆ. ಅವರಿಗೆ ಅಕಾಡೆಮಿ ಕೃತಜ್ಞವಾಗಿದೆ.

ಅನುವಾದ ಅಕಾಡೆಮಿಯ ಕೆಲಸ-ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಅಕಾಡೆಮಿಯ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ತಮ್ಮ ಅನೇಕ ಕಾರ್ಯಗಳ ನಡುವೆಯೂ ಬಿಡುವು ಮಾಡಿಕೊಂಡು ತಾಳ್ಮೆಯಿಂದ ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ಶ್ರೀ ವಿ. ನಾಗರಾಜರಾವ್ ಅವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

ಪ್ರಧಾನ್ ಗುರುದತ್ತ

ಅಧ್ಯಕ್ಷ

ಪರಿವಿಡಿ

ರವೀಂದ್ರ ಕಥಾ ಮಂಜರಿ

ಭಾಗ – ೩

೧. ಕರ್ಮಫಲ

೧

ಇಂದು ಸತೀಶನ ದೊಡ್ಡಮ್ಮ ಸುಕುಮಾರಿ ಮತ್ತು ದೊಡ್ಡಪ್ಪ ಶಶಧರಬಾಬು ಬಂದಿರುವರು. ಸತೀಶನ ಅಮ್ಮ, ವಿಧುಮುಖಿ ಅವರನ್ನು ಉಪಚಾರದಿಂದ ಬರಮಾಡಿಕೊಳ್ಳುವ ಸಡಗರದಲ್ಲಿದ್ದಾಳೆ.

"ಬಾ, ಅಕ್ಕ–ಬಾ ಕೂತುಕೋ. ಇವತ್ತೇನು ಪುಣ್ಯವೋ ಕಾಣೆ. ಭಾವಯ್ಯ ಕೂಡ ದಯಮಾಡಿಸಿಬಿಟ್ಟಿದಾರೆ. ಅಕ್ಕ ಬರದೆ ಹೋದರೆ ನಿಮ್ಮ ದರ್ಶನವಾಗುವುದೇ ಸಂಭವವಿರಲಿಲ್ಲವೇನೋ!"

"ಅಷ್ಟರಲ್ಲೇ ತಿಳಿದುಕೋ ಮತ್ತೆ. ನಿಮ್ಮಕ್ಕನ ಶಾಸನ ಎಷ್ಟು ಕಠಿಣ ಅಂತ. ಹಗಲು, ರಾತ್ರಿ ಕಣ್ಣ ಮೇಲೆ ಕಣ್ಣಿಟ್ಟುಕೊಂಡಿರುತ್ತಾಳೆ, ಗೊತ್ತೇ?" ಎಂದರು ಶಶಧರಬಾಬು.

ಸುಕುಮಾರಿಯಾಗ "ಆಹಾ...ಅದೇನೋ ನಿಜ. ಇಂತಹ ರತ್ನವನ್ನು ಮನೆಯಲ್ಲಿಟ್ಟುಕೊಂಡು ನಿಶ್ಚಿಂತೆಯಿಂದ ನಿದ್ದೆಮಾಡುವುದು ಸಾಧ್ಯವೇ ಹೇಳು" ಎಂದಳು.

"ಅಂದರೆ ಭಾವ ಅಷ್ಟು ಗೊರಕೆ ಹೊಡಿಯುತ್ತಾರೆ ಅಂತಲೆ?" ಎಂದಳು ವಿಧುಮುಖಿ.

ಸುಕುಮಾರಿ– "ಸತೀಶಾ, ಛೆ, ಇದೇನೋ, ಇಂಥ ಬಟ್ಟೆ ಹಾಕಿದ್ದೀಯ? ನಿತ್ಯವೂ ಪಂಚೆಯೇ ಕಟ್ಟಿಕೊಂಡು ಹೋಗುತ್ತೀಯಾ ಸ್ಕೂಲಿಗೆ? ಬಿಧೂ, ಅವನಿಗೊಂದು ಚಲ್ಲಣ ಹೊಲಿಸಿಕೊಟ್ಟಿದ್ದೆನಲ್ಲ, ಏನಾಯಿತದು?"

ವಿಧುಮುಖಿ– "ಯಾವತ್ತೋ ಹರಿದು ಹಾಕಿದ, ಅದನ್ನ."

ಸುಕುಮಾರಿ– "ಹರಿಯದೆ ಇರುತ್ತೆಯೆ? ಒಂದು ಬಟ್ಟೆ ಮಕ್ಕಳು ಎಷ್ಟು ದಿನ ಹಾಕಿಕೊಂಡಿರುತ್ತಾರೆ? ಹಾಗೆಂದು ಬೇರೆ ಬಟ್ಟೆ ಹೊಲಿಸದೆ ಇರುತ್ತಾರೆಯೆ? ನಿಮ್ಮ ಮನೆಯಲ್ಲೇನು ಎಲ್ಲಾ ಹೀಗೆ ವಿಪರೀತವೆ?"

ವಿಧು– "ನಿನಗೆ ಗೊತ್ತು, ಅಕ್ಕಾ, ಅವರು ಮಗನ ಮೈಮೇಲೆ ಒಳ್ಳೆ ಬಟ್ಟೆ ನೋಡಿಬಿಟ್ಟರೆ ಸಾಕು, ಬೆಂಕಿಯಾಗಿಬಿಡುತ್ತಾರೆ. ನಾನಿಲ್ಲದೆ ಹೋಗಿದ್ದರೆ ಮೈ ಮೇಲೆ ಬರೇ ದುಪ್ಪಟ ಹೊದಿಸಿ ಸೊಂಟಕ್ಕೊಂದು ನಾರು ಕಟ್ಟಿ ಸ್ಕೂಲಿಗೆ ಕಳಿಸಿಬಿಡುತ್ತಿದ್ದರು. ಅಬ್ಬಬ್ಬ ಅವರ ಹುಚ್ಚುತನ ದೇವರಿಗೇ ಮೆಚ್ಚು. ಯಾರೂ ಹಾಗಿಲ್ಲ."

ಸುಕು– "ನೀನನ್ನುವುದು ನಿಜವೇ. ಇರುವವನೊಬ್ಬ ಮಗ, ಅವನಿಗೂ ಸರಿಯಾಗಿ ಬಟ್ಟೆ ಬರೆ ಹಾಕಿ ಲಕ್ಷಣವಾಗಿಟ್ಟುಕೊಂಡಿರುವುದಕ್ಕೂ ಮನಸ್ಸಿಲ್ಲ. ಇಂಥ ತಂದೆಯನ್ನು ನಾನೆಲ್ಲೂ ನೋಡಿಲ್ಲಮ್ಮ. ಹೋಗಲಿ, ಸತೀಶ, ನಾಳಿದ್ದು ಹೇಗಿದ್ದರೂ ಭಾನುವಾರ, ನೀನು ನಮ್ಮ ಮನೆಗೆ ಬಾ. ನಾನು ನಿನಗೊಂದು ಸೂಟು ಹೊಲಿಸುವ ಹಾಗೆ ಹೇಳುತ್ತೇನೆ, ರ್‍ಯಾಮ್‌ಜೇಯವರ ಷಾಪಿನಲ್ಲಿ, ಆಹಾ! ಪಾಪ, ಎಳೇವಯಸ್ಸಿನಲ್ಲಿ ಒಳ್ಳೇ ಬಟ್ಟೆ ಹಾಕದೆ ಇನ್ನ್ಯಾವಾಗ ಹಾಕತಾರೆ. ಆಸೆಯಾಗುವುದಿಲ್ಲವೆ ಹುಡುಗರಿಗೆ?"

ಸತೀಶ– "ಒಂದು ಸೂಟು ಹಾಕಿದರೆ ಏನಾಗುತ್ತೆ, ದೊಡ್ಡಮ್ಮ? ಭಾದುಡೀ ಸಾಹೇಬರ ಮಗ ನನ್ನ ಕ್ಲಾಸಲ್ಲೇ ಓದುತ್ತಾನೆ. ಅವನು ನನ್ನ ಅವರ ಮನೆಗೆ ಪಿಂಗ್ ಪಾಂಗ್ ಆಡಲಿಕ್ಕೆ ಕರೆದಿದ್ದಾನೆ. ಅವನು ಮಖಮಲ್ಲಿನ ಬಟ್ಟೆ ಹಾಕುತ್ತಾನೆ. ನನಗೆಲ್ಲಿದೆ ಅಂಥ ಬಟ್ಟೆ?"

ಶಶಧರ– "ಅಂಥವರ ಮನೆಗೆ ಹೋಗದೇ ಇರುವುದೇ ಒಳ್ಳೆಯದಲ್ಲವೇನೋ ಸತೀಶ?"

ಸುಕು– "ಸಾಕು, ಸಾಕು ಸುಮ್ಮನಿರಿ....ನೀವೇನು ಬೋಧನೆ ಮಾಡಬೇಕಾಗಿಲ್ಲ. ಅವನಿಗೂ ನಿಮ್ಮ ವಯಸ್ಸಾಗಲಿ, ಆಗ..."

ಶಶಧರ– "ಆಗ ಅವನಿಗೆ ಬೋಧನೆ ಮಾಡೋಕೆ ಬೇರೊಬ್ಬರು ಬರುತ್ತಾರೆ. ಮುದಿ ದೊಡ್ಡಪ್ಪನ ಸಲಹೆ ಆಗ ಅವನಿಗೆ ಅವಶ್ಯವಾಗಿರೋದಿಲ್ಲ."

ಸುಕು– "ಆಹಾ ಹಾ...ಬೋಧನೆ ಮಾಡೋಕ್ಕೆ ಒಬ್ಬರಿರುವುದು ನಿಮ್ಮ ಪುಣ್ಯ ಅಂತಿಟ್ಟುಕೊಳ್ಳಿ... ಇಲ್ಲದೆ ಹೋಗಿದ್ದಿದ್ದರೆ ನಿಮಗೇನು ಗತಿ ಆಗುತಾಯಿತ್ತೋ ಗೊತ್ತೇ?"

ಶಶಧರ– "ಆ ಮಾತು ಹೇಳೇನು ಪ್ರಯೋಜನ? ಕಲ್ಪನೆ ಮಾಡಿಕೊಂಡು ಅನುಭವಿಸುವುದೇ ಒಳ್ಳೆಯದು."

ಸತೀಶ (ಪಕ್ಕಕ್ಕೆ ತಿರುಗಿ ನೋಡಿ ಯಾರನ್ನೋ ಉದ್ದೇಶಿಸಿ)– "ಬೇಡ, ಬೇಡ,....ಇಲ್ಲಿಗೆ ತರುವುದು ಬೇಡ, ನಾನೇ ಬರುತ್ತೇನೆ." (ಹೋಗುವನು)

ಸುಕು– "ಈ ಸತೀಶ ಹಾಗೇಕೆ ಗಾಬರಿಯಾಗಿ ಓಡಿಹೋದ."

ವಿಧು– "ತಟ್ಟೆಯಲ್ಲಿ ಅವನ ಫಲಾಹಾರ ಕಲಸಿಕೊಂಡು ಬರುತಾ ಇದ್ದಳಲ್ಲಾ, ನನ್ನ ಓರಗಿತ್ತಿ? ಹುಡುಗನಿಗೆ ನಿಮ್ಮೆದುರಿಗೆ ತಿನ್ನುವುದಕ್ಕೆ ನಾಚಿಕೆ."

ಸುಕು– "ಆಹಾ, ಪಾಪ...ನಾಚಿಕೆ ಇಲ್ಲದೆ ಇರತ್ತೆಯೆ? ಲೋ, ಸತೀಶ, ಕೇಳಿಲ್ಲಿ–ನಿಮ್ಮ ದೊಡ್ಡಪ್ಪನ ಜೊತೆಯಲ್ಲಿ ಹೋಗು. ನಿನಗೆ ಐಸ್ ಕ್ರೀಮ್ ತಿನ್ನಿಸಿಕೊಂಡು ಬರುತ್ತಾರೆ...ಕರೆದುಕೊಂಡು ಹೋಗಿ ಅಂದರೆ ಹುಡುಗನ್ನ ಪಾಪ..."

ಸತೀಶ– "ಹೇಗೆ ಹೋಗಲಿ, ದೊಡ್ಡಮ್ಮ...ಬಟ್ಟೆಯೇ ಇಲ್ಲ."

ವಿಧು– "ಯಾಕೋ.... ಕರೀ ಚಾಪ್‌ಕಾನ್ (ಲಾಂಗ್‌ಕೋಟು) ಇದೆಯಲ್ಲೋ..."

ಸತೀಶ– "ಥೂ, ಅದು ಚೆನ್ನಾಗಿಲ್ಲ."

ಸುಕು– "ಸದ್ಯ, ಏನಾದರೂ ಆಗಲಿ, ವಿಧೂ, ನಿನ್ನ ಮಗನ ಅದೃಷ್ಟ, ತಂದೆಯ ಅಭಿರುಚಿ ಹಾಗಿಲ್ಲ ಅವನದು. ಚಾಪ್‌ಕಾನ್ ಅನ್ನುವುದೊಂದು ಉಡುಪೇ ಹೇಳು. ಸಾಹೇಬರ ಮನೆ ಬಟ್ಲರುಗಳ ಹಾಗೆ, ನಾಟಕದ ಕಂಪೆನಿ ಹುಡುಗರ ಹಾಗೆ ಕಾಣುತ್ತಾನೆ ಅದನ್ನ ತೊಟ್ಟುಕೊಂಡರೆ, ಅಸಹ್ಯ."

ಶಶಧರ– "ಸ್ವಲ್ಪ ಇಂಥ ಮಾತುಗಳನ್ನೆಲ್ಲ..."

ಸುಕು– "ಪಿಸುಮಾತಿನಲ್ಲಿ ಹೇಳಬೇಕೇನು? ಯಾಕೆ, ಯಾರಿಗೆ ಭಯ ಪಡಬೇಕು? ಮನ್ಮಥ ತನ್ನ ಹುಚ್ಚು ಬಂದ ಹಾಗೆ ಮಗನಿಗೆ ವೇಷ ಹಾಕುತ್ತಾ ಇದ್ದರೆ ನಾವು ನೋಡುತ್ತಾ ಮಾತಾಡದೆ ಸುಮ್ಮನಿರಬೇಕೇನು?"

ಶಶಧರ– "ದೇವರೇ ಗತಿ, ಮಾತಾಡು, ಬೇಕಾದ ಹಾಗೆ ಮಾತಾಡು. ಆದರೆ ಸತೀಶನ ಮುಂದೆ, ಈ ವ್ಯಾಖ್ಯಾನವೆಲ್ಲಾ ಯಾಕೆ ಅಂದೆ, ಅಷ್ಟೆ."

ಸುಕು– "ಇರಲಿ, ಇರಲಿ, ಸಾಕು. ನೀವು ಸದ್ಯ ಅವನನ್ನ ಫೆಲೆಟ್ಟಿಯವರ ಹೋಟೆಲಿಗೆ ಕರೆದುಕೊಂಡು ಹೋಗಿ ಐಸ್‌ಕ್ರೀಮ್ ತಿನ್ನಿಸಿಕೊಂಡು ಬನ್ನಿ."

ಸತೀಶ– "ಇಲ್ಲ, ದೊಡ್ಡಮ್ಮ, ನಾನು ಅಲ್ಲಿಗೆ ಚಾಪ್‌ಕಾನ್ ತೊಟ್ಟುಕೊಂಡು ಹೋಗುವುದಿಲ್ಲ."

ಸುಕುಮಾರಿ– "ಇಗೋ, ಅವರಪ್ಪ ಬಂದ. ಇನ್ನು ಮಗನನ್ನು ನೋಡಿ ಚೆನ್ನಾಗಿ ಬೈದು ಅವನ ಅವಸ್ಥೆ ಯಾರಿಗೂ ಬೇಡದ ಹಾಗೆ ಮಾಡಿಬಿಡುತ್ತಾನೆ. ಪಾಪ, ಆ ಮಗುವಿಗೆ ಉಳಿಗಾಲವಿಲ್ಲ ಈ ಬೈಗಳಿಂದ. ಬಾರೋ ಸತೀಶ, ನೀನು ನಮ್ಮ ಜೊತೆಯಲ್ಲಿ ಬಂದುಬಿಡು ಈಗಲೇ....ನಿಮ್ಮಪ್ಪನಿಗೆ ಕಾಣದ ಹಾಗೆ ಹೊರಟು ಹೋಗೋಣ. ನಡಿ."

[ಸುಕುಮಾರಿಯ ನಿಷ್ಕ್ರಮಣ. ಮನ್ಮಥನ ಪ್ರವೇಶ.]

ವಿಧು– "ಗಡಿಯಾರ, ಗಡಿಯಾರ ಅಂತ ಸತೀಶ ಎಷ್ಟು ದಿನಗಳಿಂದ ಗೋಳು ಹುಯ್ದುಕೊಳ್ಳುತ್ತಿದ್ದನಲ್ಲ, ನೋಡಿ, ಈಗ ಅಕ್ಕ ಅವನಿಗೊಂದು ಬೆಳ್ಳಿಯ ಗಡಿಯಾರ ತೆಗೆದುಕೊಟ್ಟಿದ್ದಾಳೆ. ನಿಮಗೆ ಮೊದಲೇ ಹೇಳಲಿಲ್ಲ. ಈಗ ಭಯ. ನಿಮಗೆ ತಿಳಿದರೆ ಸುಮ್ಮನೆ ಬಿಡುವುದಿಲ್ಲ ಅಂತ–" (ಎಂದು ಹೇಳುತ್ತ ವಿಧುಮುಖಿಯು ನಿಷ್ಕ್ರಮಿಸುವಳು.)

ಮನ್ಮಥ– "ಮೊದಲೇ ಹೇಳಿದ್ದಿದ್ದರೂ ನಾನು ಸುಮ್ಮನೆ ಬಿಡುತ್ತಿರಲಿಲ್ಲ. ಶಶಧರ, ನೀನದನ್ನ ವಾಪಸ್ಸು ತೆಗೆದುಕೊಂಡು ಹೋಗಬೇಕಾಗುತ್ತೆ."

ಶಶಧರ– "ನೀನೊಬ್ಬ ವಿಚಿತ್ರ ಆಸಾಮಿ. ನಾನೇನೋ ವಾಪಸ್ಸು ತೆಗೆದುಕೊಂಡು ಹೋಗುತ್ತೇನೆ. ಆದರೆ ಮನೆಯಲ್ಲಿ ಕೊಡುವವರು ಯಾರು? ನಾನಾ, ನೀನಾ?"

ಮನ್ಮಥ– "ಇಲ್ಲ, ಶಶಧರ, ತಮಾಷೆ ಅಲ್ಲ. ನನಗಿದೆಲ್ಲ ಸರಿಹೋಗುವುದಿಲ್ಲ."

ಶಶಧರ– "ಸರಿಹೋಗುವುದಿಲ್ಲ, ನಿಜ. ಆದರೂ ಸೈರಿಸಿಕೊಂಡು ಹೋಗಬೇಕಾಗತ್ತೆ ಕಣಯ್ಯ. ಇದು ನಿನಗೊಬ್ಬನಿಗೇ ಅಲ್ಲ, ಈ ಪಾಡು ಸಂಸಾರದಲ್ಲಿ, ಗೊತ್ತೇನು?"

ಮನ್ಮಥ– "ನನ್ನ ವಿಷಯವಾಗದಿದ್ದರೆ ಹೇಗೋ ಸೈರಿಸಿಕೊಳ್ಳಬಹುದಾಗಿತ್ತು. ಆದರೆ ನನ್ನ ಮಗನ ಭವಿಷ್ಯ ಮಣ್ಣಾಗುವುದನ್ನ ನಾನು ನೋಡುತ್ತಾ ಇರಲಾರೆ. ಅನ್ನ ತಿನ್ನುವುದಕ್ಕೆ ಮುಂಚೆ ಕಡುಬು ಕೊಟ್ಟ ಹಾಗೆ ಅವನ ಸ್ಥಿತಿ. ಅಲ್ಲದೆ ಅದಿಲ್ಲ ಇದಿಲ್ಲ ಎಂದು ಗೊಣಗುತ್ತ, ಆಸೆ ತುಳಿದಿಟ್ಟುಕೊಳ್ಳುವುದನ್ನ ಕಲಿಯದೆ ಇರುವವನು ಅಭಿವೃದ್ಧಿಗೆ ಹೇಗೆ ಬಂದಾನು ಹೇಳು, ಏನು ಸುಖಪಟ್ಟಾನು ಪ್ರಪಂಚದಲ್ಲಿ? ಅಭಾವವಿದ್ದರೂ ಸ್ಥೈರ್ಯ ಕಾಪಾಡಿಕೊಂಡು ಇರುವಂಥ ವಿದ್ಯೆ ಕಲಿಸಿಕೊಡಬೇಕು ಅಂತ ಇದ್ದೇನೆ ನನ್ ಹುಡುಗನಿಗೆ... ಅದಕ್ಕೇ ಈಗಲಿಂದಲೇ ಗಡಿಯಾರ, ಗಡಿಯಾರದ ಚೈನು ಕೊಂಡುಕೊಡುವುದಕ್ಕೆ ಇಷ್ಟವಿಲ್ಲ."

ಶಶಧರ– "ಅದೇನೋ ಒಳ್ಳೆದೇ ಬಿಡು. ಆದರೆ, ನೋಡು, ನಿನ್ನ ಇಷ್ಟ ಪ್ರಕಾರವಾಗಿಯೇ ಪ್ರಪಂಚದಲ್ಲಿರುವ ಅಡ್ಡಿ, ಆತಂಕಗಳೆಲ್ಲ ತಮಗೆ ತಾವೇ ದೂರವಾಗಿ ಬಿಡುವುದಿಲ್ಲ ತಿಳಿದುಕೋ. ಎಲ್ಲರಿಗೂ ನಿನ್ನ ಹಾಗೇ ಒಳ್ಳೇ ಬುದ್ಧಿ ಇದ್ದಿದ್ದರೆ ಆಗ ಯೋಚನೆಯೇ ಇರುತ್ತಿರಲಿಲ್ಲ. ಹಾಗಿಲ್ಲದಿರುವಾಗ ಎಂಥ ಒಳ್ಳೆಯ ಸಂಕಲ್ಪಗಳನ್ನೂ ದುಡುಕಿ ಆಚರಣೆಗೆ ತರುವುದು ಸಾಧ್ಯವಿಲ್ಲ. ತಾಳ್ಮೆ ಇರಬೇಕಾಗುತ್ತೆ. ಅದರಲ್ಲೂ ಹೆಂಗಸರ ಆಸೆ, ಅಭಿಪ್ರಾಯಗಳನ್ನಂತೂ ಅಲ್ಲಗಳೆದು ಅವರ ವ್ಯತಿರಿಕ್ತವಾಗಿ ನಡೆದರೆ ದೇವರೇ ಗತಿ! ಅದರ ಬದಲಾಗಿ ಅವರಿಗೆ ನೇರವಾಗಿ ಎದುರು ಬೀಳದೆ ಸ್ವಲ್ಪ ದೂರ ಸರಿದು ಸುತ್ತಿಕೊಂಡು ಹೋದರೆ ಕಷ್ಟವಿಲ್ಲದೆಯೇ ಕೆಲಸವಾಗುತ್ತದೆ. ಈಗ ನೋಡು, ಗಾಳಿ ಎದುರು ದಿಕ್ಕಿನಲ್ಲಿ ಬೀಸುವಾಗ ನಾವೆಯ ಬಾವುಟವನ್ನು ಇಳಿಸಿಬಿಡಬೇಕಾಗುತ್ತೆ. ಇಲ್ಲದೆ ಹೋದರೆ ಮುಂದಕ್ಕೆ ಹೋಗುವುದೇ ಅಸಾಧ್ಯ."

ಮನ್ಮಥ– "ಅದಕ್ಕೇ ಏನೋ, ಬಹುಶಃ, ನೀನು ಹೆಂಡತಿ ಹೇಳಿದ ಹಾಗೆ ಕೇಳಿಕೊಂಡಿರುವುದು?–ಹೆಣ್ಣಿಗನ ಹಾಗೆ."

ಶಶಧರ– "ಇರಬಹುದು. ನಿನ್ನ ಸಾಹಸ ನನಗೆಲ್ಲಿ ಬಂದೀತು ಹೇಳು. ಅನ್ನ ಒದಗಿಸಿ, ಗೂಡನ್ನ ಬೆಚ್ಚಗೆ ಇಟ್ಟಿರುವವಳ ಮೇಲೆ ಇಪ್ಪತ್ತುನಾಲ್ಕು ಘಂಟೆಯೂ ನಂಬಿಕೊಂಡಿರಬೇಕಾದರೆ ಇನ್ನು ಅವಳ ಮಾತು ಕೇಳದೆ ಬೇರೆ ಯಾರ ಮಾತು ಕೇಳಬೇಕು ಹೇಳು. ಸ್ವಂತ ಹೆಂಡತಿಯ ಮುಂದೆ ವೀರತ್ವ ತೋರಿಸಿಕೊಂಡರೆ ಲಾಭವೇನು? ಪೆಟ್ಟು ಕೊಟ್ಟರೂ ಕಷ್ಟ, ತಿಂದರೂ ಕಷ್ಟ. ಅದಕ್ಕಿಂತಲೂ

ತರ್ಕದ ಸಮಯದಲ್ಲಿ ಹೆಂಡತಿಯ ಅಭಿಪ್ರಾಯವನ್ನೇ ಶ್ರೇಷ್ಠವೆಂದು ಒಪ್ಪಿಕೊಂಡು, ಕೆಲಸಮಾಡುವಾಗ ಮಾತ್ರ ಸ್ವಂತ ಅಭಿಪ್ರಾಯದಂತೆ ಮಾಡಿಬಿಟ್ಟರೇನೇ ಒಳ್ಳೆಯದು, ಸುಮ್ಮ ಸುಮ್ಮನೆ ಹೆಂಡತಿಯನ್ನ ಕೆಣಕಿದರೆ ಅವಾಂತರವಾಗಿ ಹೋಗುತ್ತದೆ."

ಮನ್ಮಥ– "ಆದರೇನು? ನಮ್ಮ ಜೀವನವೇನಾದರೂ ದೀರ್ಘವಾಗಿದ್ದಿದ್ದರೆ, ಆಗ ನೀನು ಹೇಳಿದ ಹಾಗೆ ನಿಧಾನವಾಗಿ, ತಾಳ್ಮೆಯಿಂದ ತಳ್ಳಿಕೊಂಡು ಹೋಗಬಹುದಾಗಿತ್ತು. ಆದರೆ ನಮಗಿರುವ ಈ ಅಲ್ಪಾಯುಸ್ಸಿನಲ್ಲಿ..."

ಶಶಧರ– "ಅದಕ್ಕೇ ಕಣಯ್ಯಾ ನಾನು ಹೇಳುತ್ತಾಯಿರೋದು, ಅದಕ್ಕೇ ವಿವೇಚನೆಯಿಂದ ನಡೆಸಿಕೊಂಡು ಹೋಗಬೇಕು ಎಂದು. ಬಂಡೆ ಎದುರಿಗೆ ಸಿಕ್ಕಿದಾಗ ಅದನ್ನು ಸುತ್ತಿಕೊಂಡು ಹೋಗದೆ, ಹಾರಿ ದೂರ ಕಡಮೆ ಮಾಡಿಕೊಳ್ಳುವುದಕ್ಕೆ ಹೋಗುವವನ ಹಣೆಯಲ್ಲಿ ಬರೆದಿರುವುದು ಏನು ಅನ್ನುವುದು, ಗೊತ್ತೇ ಇದೆ. ಆದರೆ ಇದೆಲ್ಲಾ ನಿನಗೆ ಹೇಳಿ ಪ್ರಯೋಜನವಿಲ್ಲ, ನಿತ್ಯವೂ ತಲೆಗೇಟು ತಗುಲಿದರೂ ಬುದ್ಧಿ ಬರದೇ ಇರುವವನಿಗೆ ನನ್ನ ಉಪದೇಶದಿಂದ ಏನುತಾನೇ ಆಗುತ್ತೆ? ನೀನಂತೂ ಯಾವತ್ತಿನ ಹಾಗೇ ನಿನ್ನ ಹೆಂಡತಿ ಎಂಬ ಒಂದು ಶಕ್ತಿಯ ಅಸ್ತಿತ್ವವಿಲ್ಲದೇ ಇರುವ ಹಾಗೇ ನಡೆದುಕೊಂಡು ಹೋಗಲಿಷ್ಟಪಡುತ್ತಿ. ಇಷ್ಟಾದರೂ ಅವಳಂತೂ ಇದ್ದೇ ಇರುತ್ತಾಳೆ. ಈ ವಿಷಯದಲ್ಲಿ ನನಗೆ ಯಾವ ಸಂದೇಹವೂ ಇರಲಿಕ್ಕೆ ಕಾರಣ ಕಂಡುಬರುವುದಿಲ್ಲ."

೨

ದಾಂಪತ್ಯ ಕಲಹೇ ಚೈವ ಬಹ್ವಾರಂಭೇ ಲಘುಕ್ರಿಯಾ–ಶಾಸ್ತ್ರದಲ್ಲಿ ಈ ರೀತಿಯಾಗಿ ಬರೆಯಲ್ಪಟ್ಟಿದೆ. ಆದರೆ ಬೇರೆ ಬೇರೆ ದಂಪತಿಗಳಲ್ಲಿ ಇದರ ನಿತ್ಯವ್ಯತ್ಯಾಸವಾಗುತ್ತದೆ ಎನ್ನುವುದನ್ನು ಪಂಡಿತರು ಒಪ್ಪಿಕೊಳ್ಳದಿರಲಾರರು.

ಮನ್ಮಥಬಾಬುಗಳ ಮತ್ತು ಅವರ ಹೆಂಡತಿಯ ನಡುವೆ ಆಗಾಗ ಆಗುತ್ತಿದ್ದ ವಾದ ಪ್ರತಿವಾದಗಳು ನಿಜವಾಗಿ ಜಗಳಗಳೇ ಆದರೂ ಅವುಗಳ ಆರಂಭವೂ ದೊಡ್ಡದೇನಲ್ಲ, ಪರಿಣಾಮವೂ ಕಿರಿಯದೇನಲ್ಲ– ಆದುದರಿಂದ ಅವುಗಳನ್ನು ಕೇವಲ ಮೇಕೆಗಳ ಜಗಳದೊಡನೆ ಹೋಲಿಸಲಾಗುವುದಿಲ್ಲ.

ಒಂದು ದಿನ ಮನ್ಮಥಬಾಬು ಹೆಂಡತಿಗೆ "ನಿನ್ನ ಮಗನಿಗೆ ವಿಲಾಯಿತೀ ಉಡುಪು ಹಾಕೋಕ್ಕೆ ಶುರುಮಾಡಿದ್ದೀಯ. ನನಗೆ ಸ್ವಲ್ಪವೂ ಇಷ್ಟವಿಲ್ಲ" ಎಂದರು.

ಬಿಧು– "ಇಷ್ಟ, ಅನಿಷ್ಟ ನಿಮಗೊಬ್ಬರಿಗೇ ಅಲ್ಲ ಇರುವುದು. ಈಗಿನ ಕಾಲದಲ್ಲಿ ಎಲ್ಲ ಹುಡುಗರೂ ವಿಲಾಯಿತೀ ಪೋಷಾಕು ಹಾಕಿಕೊಳ್ಳುವುದನ್ನ ಶುರುಮಾಡಿದ್ದಾರೆ. ನೋಡಿಕೊಂಡು ಬನ್ನಿ ಬೇಕಾದರೆ. ನಿಮಗೆ ಮಾತ್ರ ಇಷ್ಟವಿಲ್ಲ."

ಮನ್ಮಥನು ನಕ್ಕು "ಎಲ್ಲರ ಹಾಗೇ ನಡೆಯಬೇಕು ಅಂತ ಇರುವವಳು ಎಲ್ಲರನ್ನೂ ಬಿಟ್ಟು ನನ್ನನ್ನೇ ಯಾಕೆ ಆರಿಸಿ ಮದುವೆ ಮಾಡಿಕೊಂಡೆ?" ಎಂದ.

ವಿಧು– "ನೀವು ಮಾತ್ರ ಕೇವಲ ನಿಮ್ಮ ಸ್ವಂತ ಇರಾದೆ ಪ್ರಕಾರವೇ ನಡೆಯುವಂಥವರು. ಒಂಟಿಯಾಗಿರದೆ ನನ್ನನ್ನ ಯಾಕೆ ಕಟ್ಟಿಕೊಂಡಿರಿ, ಹೋಗಿ ಹೋಗಿ!"

ಮನ್ಮಥ– "ಸ್ವಂತ ಇರಾದೆಯಂತೆ ನಡೆಯುವುದಕ್ಕೂ ಬೇರೆಯೊಬ್ಬರ ಆವಶ್ಯಕತೆ ಇದೆ."

ವಿಧು– "ತನ್ನ ಹೊರೆ ಹೊರಿಸಲಿಕ್ಕೆ ಅಗಸನಿಗೆ ಕತ್ತೆಯ ಆವಶ್ಯಕತೆಯಿದ್ದ ಹಾಗೆ ಅಲ್ಲವೇನೋ?"

ಮನ್ಮಥ– (ನಾಲಗೆ ಕಚ್ಚಿಕೊಳ್ಳುತ್ತ) "ರಾಮರಾಮ– ನೀನು ಸಂಸಾರದ ಮರುಭೂಮಿಯಲ್ಲಿ ಅರಬ್ಬೀ ಕುದುರೆ. ಆದರೆ ಈಗ ಆ ಪ್ರಾಣಿಗಳ ವಿಷಯವೆಲ್ಲಾ ಯಾಕೆ, ಕೆಲಸವಿಲ್ಲ. ಸದ್ಯ ಏನಾದರೂ ಆಗಲಿ, ನಿನ್ನ ಮಗನನ್ನ ಸಾಹೇಬನಾಗಿ ಮಾಡಿಬಿಡಬೇಡ."

ವಿಧು– "ಯಾಕೆ ಮಾಡಕೂಡದು? ಅಲ್ಲದೆ ಹಳ್ಳೀಗಮಾರನಾಗಿ ಮಾಡಬೇಕೇನೋ?"

ಹೀಗೆನ್ನುತ್ತಾ ವಿಧುಮುಖಿ ರೇಗಿ ಕೋಣೆಯಿಂದ ಹೊರಗೆ ಹೊರಟು ಹೋದಳು.

ವಿಧುವಿನ ವಿಧವೆಯಾದ ಓರಗಿತ್ತಿ ಮಗ್ಗಲು ಕೋಣೆಯಲ್ಲಿ ಕೂತು ಕೇಳಿಸಿಕೊಳ್ಳುತ್ತ "ಗಂಡ ಹೆಂಡಿರಿಗೆ ಈ ವಯಸ್ಸಲ್ಲೂ ಪ್ರೇಮಕಲಹವಾಗುತ್ತಾ ಇರುತ್ತದೆ, ಅಂತೂ" ಎಂದುಕೊಂಡು ನಿಟ್ಟುಸಿರು ಬಿಟ್ಟಳು.

೩

ಮನ್ಮಥ– "ಏನೇ ಇದು? ನಿನ್ನ ಮಗನ ಮೈಗೇನೇ ಬಳಿದಿದ್ದೀಯ?"

ವಿಧು– "ಅಬ್ಬರಿಸಬೇಡಿ. ಅಂಥದೇನೂ ಇಲ್ಲ. ಸ್ವಲ್ಪ ಸೆಂಟು ಹಚ್ಚಿದ್ದೇನೆ ಅಷ್ಟೆ. ಅದೂ ವಿಲಾಯಿತಿಯದೇನಲ್ಲ, ನಿಮ್ಮ ಇಷ್ಟವಾದ ಸ್ವದೇಶೀ ಸೆಂಟು."

ಮನ್ಮಥ– "ನಾನೆಷ್ಟು ಸಲ ಹೇಳಿದ್ದೇನೆ ನಿನಗೆ.... ಹುಡುಗನಿಗೆ ಈ ಷೋಕಿ ಪಾಕಿ ಸಾಮಾನುಗಳೆಲ್ಲ ಅಭ್ಯಾಸಮಾಡಿಸಬೇಡ ಅಂತ."

ವಿಧು– "ಸರಿ, ಹಾಗಾದರೆ ನಿಮಗೆ ಇಷ್ಟವಾಗುವ ಹಾಗೆ ನಾಳೆಯಿಂದ ಅವನ ಮೈಗೆ ಸೀಮೆಯೆಣ್ಣೆಯೋ ಅಥವಾ ಹರಳೆಣ್ಣೆಯೋ ಬಳಿದುಬಿಡೋಣ ಬಿಡಿ."

ಮನ್ಮಥ– "ನಿನ್ನ ಕೊಂಕು ಮಾತಿಗೇನು ಬಿಡು. ಅದೂ ವ್ಯರ್ಥವಾದ ಖರ್ಚು. ಯಾವುದಿಲ್ಲದೇ ಹೋದರೂ ನಡೆಯುತ್ತೋ ಅಂಥದೆಲ್ಲಾ ಅಭ್ಯಾಸ ಮಾಡಿಸದೆ ಇರುವುದೇ ಒಳ್ಳೇದು. ಸೆಂಟಾಗಲಿ, ಸೀಮೆಯೆಣ್ಣೆಯಾಗಲಿ ಹರಳೆಣ್ಣೆಯೇ ಆಗಲಿ, ಮೈಗೆ ಯಾವುದನ್ನ ತಾನೇ ಯಾಕೆ ಬಳಿಯಬೇಕು. ಅನಾವಶ್ಯಕ, ನನ್ನ ಅಭಿಪ್ರಾಯದಲ್ಲಿ."

ವಿಧು– "ನಿಮ್ಮ ಅಭಿಪ್ರಾಯದಂತೆ ಆವಶ್ಯಕವಾಗಿರುವಂಥ ವಸ್ತುಗಳೆಷ್ಟಿವೆಯೋ ನನಗೆ ಗೊತ್ತಿಲ್ಲ. ಮೊದಲೇ ಇಂಥಿಂಥವು ಅಂತ ಪಟ್ಟಿ ಕೊಟ್ಟುಬಿಡಿ, ಒಂದೇ ಸಲ... ನಿಸೂರಾಗಿರುತೇನೆ."

ಮನ್ಮಥ– "ಮೊದಲೇ ಹಾಗೆ ಪಟ್ಟಿ ಕೊಟ್ಟುಬಿಟ್ಟರೆ, ಆಮೇಲೆ ನಿತ್ಯ ನಿನ್ನ ಜೊತೆಯಲ್ಲಾಗುವ ತರ್ಕ, ವಾದಗಳು ಒಂದೇ ಸಲ ನಿಂತುಹೋಗಿಬಿಟ್ಟೀತು. ಇಷ್ಟು ದಿನಗಳೂ ತಪ್ಪದೆ ಅಭ್ಯಾಸವಾಗಿರುವುದನ್ನ ಹಠಾತ್ತಾಗಿ ನಿಲ್ಲಿಸಿಬಿಟ್ಟರೆ ಈ ವಯಸ್ಸಿನಲ್ಲಿ...ಛೆ ಛೇ...ಹೇಗೆ ಸಹಿಸುತ್ತದೆ ಹೇಳು. ಅದೆಲ್ಲಾದರೂ ಹೋಗಲಿ ಕಣೆ, ನಾನು ನಿನಗೆ ಮೊದಲಿಂದಲೂ ಹೇಳುತ್ತಾಯಿರೋದೇನೆಂದರೆ– ನೀನು ನಿನ್ನ ಮಗನನ್ನ ಸಾಹೇಬನಾಗಿ ಮಾಡು, ನವಾಬನಾಗಿ ಮಾಡು– ಸಾಹೇಬಿ– ನವಾಬಿ ನಮೂನೆಯಲ್ಲಿ. ಅವನಿಗೆ ಬೇಕು ಬೇಕಾದ ತಿಂಡಿ ತಿನಿಸು ಮಾಡಿ ತಿನ್ನಿಸು– ಆದರೆ ಅವುಗಳ ಖರ್ಚು ಮಾತ್ರ ನಾನೊದಗಿಸಲಾರೆ...ನನ್ನ ಕೈಯಲ್ಲಿ ಸಾಧ್ಯವಿಲ್ಲ. ನನ್ನ ಸಾವಿನ ಅನಂತರ ಏನು ಆಸ್ತಿ ಅವನಿಗೆ ಸಿಗುತ್ತೋ ಅದರಿಂದ ಈ ಷೋಕಿಪಾಕಿಗಳ ಖರ್ಚು ಸಾಧ್ಯವಿಲ್ಲ, ನಿನಗೇ ಗೊತ್ತು."

ವಿಧು– "ಗೊತ್ತು ಗೊತ್ತು ಅಂದರೇ, ಗೊತ್ತಿಲ್ಲದೇ ಇಲ್ಲ. ನಿಮ್ಮ ಹಣದ ಮೇಲೇ ನಂಬಿಕೊಂಡಿದ್ದರೆ ಹುಡುಗನಿಗೆ ಕೌಪೀನದಲ್ಲೇ ಇಟ್ಟಿರುತಾಯಿದ್ದೆ."

ವಿಧುವಿನ ಈ ತಾತ್ಸಾರದ ಮಾತಿನಿಂದ ಮನಸ್ಸಿನಾಳದಲ್ಲಿ ಪೆಟ್ಟಾದರೂ ಮನ್ಮಥ ಒಂದು ನಿಮಿಷದಲ್ಲಿ ಸೈರಣೆ ತಂದುಕೊಂಡ. ಆಮೇಲೆ,

"ನನಗೂ ಗೊತ್ತು ಅದು. ನಿನ್ನ ಭಾವ, ಶಶಧರನ ಹಣದ ಮೇಲೇ ಅಲ್ಲವೇ ನಿನ್ನ ಭರವಸೆ. ಅವನಿಗೆ ಮಕ್ಕಳಿಲ್ಲ....ನಿನ್ನ ಮಗನಿಗೇ ಆಸ್ತಿಪಾಸ್ತಿ ಎಲ್ಲಾ ಬರೆದಿಟ್ಟು ಹೋಗುತ್ತಾನೆ ಅಂತ ನಂಬಿಕೊಂಡೇ ನೀನು ಕೂತಿರುವುದು. ಅದಕ್ಕಾಗೇ ನೀನು ಮಾತೆತ್ತಿದರೆ ಹುಡುಗನಿಗೆ ವಿಲಾಯಿತಿ ಪೋಷಾಕು ಹಾಕಿ ಮೈತುಂಬ ಗಂಧ ಮೆತ್ತಿ ಅವನ ದೊಡ್ಡಮ್ಮನ ಆದರ ಸಂಪಾದಿಸುವುದಕ್ಕೆ ಕಳಿಸುತ್ತಾ ಇರುವುದು. ನಾನು ಬಡತನದ ಅವಮಾನ ಎಷ್ಟಿದ್ದರೂ ಅನಾಯಾಸವಾಗಿ ಸಹಿಸಬಲ್ಲೆ. ಆದರೆ ಹಣವಂತ ಬಂಧುಬಳಗದ ಆದರ, ಉಪಚಾರ ಯಾಚನೆ ಮಾಡುವ ಅವಮಾನ ಎಂದಿಗೂ ಸಹಿಸಲಾರೆ" ಎಂದುಬಿಟ್ಟ.

ಈ ಮಾತು ಮನ್ಮಥನ ಮನಸ್ಸಿನಲ್ಲಿ ಎಷ್ಟೋ ಸಲ ಹುಟ್ಟಿಕೊಂಡಿತ್ತು. ಆದರೆ ಬಾಯಲ್ಲಾಡಿದರೆ ಕ್ರೂರವಾದೀತು ಎಂದು ಇದುವರೆಗೆ ಹೇಳಿರಲಿಲ್ಲ. ವಿಧು ಮನಸ್ಸಿನಲ್ಲಿ ಗಂಡ ತನ್ನ ಗೂಢವಾದ ಆಸೆಯನ್ನು ಇನ್ನೂ ಸರಿಯಾಗಿ ಊಹಿಸಿಲ್ಲ ಎಂದುಕೊಂಡಿದ್ದಳು. ಈ ಗಂಡಸರಿಗಷ್ಟು ಬುದ್ಧಿ ಎಲ್ಲಿರುತ್ತದೆ ಅಂತಲೇ ಅವಳಿಗೆ. ಆದರೆ ಇವತ್ತು ಈ ಬುದ್ಧಿಯಿಲ್ಲದ ಗಂಡ ಅದ್ಯಾವ ತಂತ್ರದಿಂದಲೋ ಅವಳ ಮನಸ್ಸಿನ ರಹಸ್ಯವನ್ನು ಕಂಡುಕೊಂಡು ಬಿಟ್ಟಿದ್ದ. ಇದು ಅವಳಿಗೆ ಸಹಿಸಲಾರದಷ್ಟು ಪೆಟ್ಟು ಕೊಟ್ಟಿತು. ಕೂಡಲೇ ಮುಖ ಕೆಂಪಾಗಿ "ಮಗನನ್ನ ದೊಡ್ಡಮ್ಮನ ಮನೆಗೆ ಕಳುಹಿಸಿದರೂ ಸೈರಣೆ ಇಲ್ಲ ಇವರಿಗೆ... ಆಹಾಹಾ! ಇಷ್ಟು ದೊಡ್ಡ ಬಿಂಕ, ಮಾನ ಇರುವವರ ಮನೆಯಲ್ಲಿದೇನೆ ಅಂತ ನನಗೆ ತಿಳಿದಿರಲಿಲ್ಲ ಇದುವರೆಗೆ"– ಎಂದಳು ಕಣ್ಣಿಂದ ವ್ಯಂಗ್ಯವಾದ ನೋಟವೆಸೆಯುತ್ತಾ. ಈ ಸಮಯದಲ್ಲಿ ಅವಳ ಓರಗಿತ್ತಿಯು ಒಳಗೆ ಹೊಕ್ಕು "ಏನೇ ತಂಗಿ, ಚೆನ್ನಾಗಿದೆ ಕಣೆ, ಬಹಳ ಚೆನ್ನಾಗಿದೆ. ಅದೇನು ಕೊನೆಮೊದಲಿಲ್ಲ ನಿಮ್ಮ ಸರಸ, ಸಲ್ಲಾಪ? ಹದಿನೇಳು ವರುಷಗಳಾಯಿತು ಮದುವೆಯಾಗಿ, ಇನ್ನೂ ಪೂರೈಸಿಲ್ಲ ಅಂತ ಕಾಣತ್ತೆ. ರಾತ್ರಿಯೆಲ್ಲ ಮಾತಾಡಿದರೂ ಸಾಲದು, ಕಡೆಗೆ ಹಗಲು ಹೊತ್ತು ಕೂಡ ಗುಸು, ಪಿಸು ಅಂತ... ಅದೇನಷ್ಟು ವಿಶೇಷ ನಿಮ್ಮಿಬ್ಬರಲ್ಲಿ. ಕೋಪಿಸಿಕೊಳ್ಳಬೇಡಪ್ಪಾ, ಭಾವಯ್ಯ. ನಿಮ್ಮ ಸರಸಕ್ಕೆ ವಿಘ್ನ ಮಾಡಲಿಕ್ಕೆ ಬಂದಿಲ್ಲ ನಾನು, ಈ ಹೊಲಿಗೆ ಪ್ಯಾಟರ್ನ್ ಕೇಳಿ ಹೋಗೋಣ ಅಂತ ತಂಗಿ ಹತ್ತಿರ ಬಂದೆ, ಅಷ್ಟೆ..." ಎಂದಳು.

೪

ಸತೀಶ– "ದೊಡ್ಡಮ್ಮಾ!"

ದೊಡ್ಡಮ್ಮ– "ಏನಪ್ಪ?"

"ಇವತ್ತು ಭಾದುಡೀಬಾಬುಗಳ ಮಗನಿಗೆ ನಮ್ಮಮ್ಮ ಚಹಾ, ತಿಂಡಿ ಔತಣಕ್ಕೆ ಕರೆದಿದ್ದಾಳೆ. ಆ ಸಮಯದಲ್ಲಿ ಹಠಾತ್ತಾಗಿ ನೀವು ಬಂದುಬಿಡಬೇಡಿ."

"ನಾನ್ಯಾಕೋ ಅಲ್ಲಿ ಬರಬೇಕು, ಸತೀಶ? ಆವಶ್ಯಕತೆಯೇನಿದೆ ನನಗೆ?"

"ಅದಕ್ಕಲ್ಲ... ಒಂದು ಪಕ್ಷ ಬಂದರೂ ಈ ಉಡುಪಿನಲ್ಲಿ ಬರಬೇಡಿ... ಒಳ್ಳೇದೊಂದು..."

"ಹೋಗು ಹೋಗೋ, ನಿನಗೇನು ಹೆದರಿಕೆ ಬೇಡ. ನಾನಿವತ್ತು ಕೋಣೆ ಬಿಟ್ಟು ಹೊರಗೆ ಹೋಗುವುದೇ ಇಲ್ಲ. ನಿನ್ನ ಸ್ನೇಹಿತ ಚಹಾ ಕುಡಿಯುವುದು ಮುಗಿಯುವವರೆಗೂ ನಾನಿಲ್ಲೇ ಇದ್ದು ಬಿಡುತ್ತೇನೆ."

"ಬೇಡ, ಭಾದುಡೀಯವರ ಮಗನಿಗೆ ಈ ಕೋಣೆಯಲ್ಲೇ ಏಕೆ ಏರ್ಪಾಡು ಮಾಡಕೂಡದು ಅಂತ ನೋಡುತ್ತಯಿದ್ದೇನೆ. ನಮ್ಮಮ್ಮನ ಕೋಣೆ ತುಂಬಾ

ಯಾವುಯಾವುದೋ ಸಾಮಾನುಗಳು ತುಂಬಿಸಿ ಕೂಡುವುದಕ್ಕೂ ಜಾಗವಿಲ್ಲ. ಈ ಮನೆಯಲ್ಲೆಲ್ಲೂ ಒಂದು ಒಳ್ಳೇ ಕೋಣೆ ಇದ್ದರೆ ತಾನೇ, ಯಾರನ್ನಾದರೂ ಕರೆದು ಉಪಚಾರ ಮಾಡೋಣ ಅಂದರೆ. ನಿಮ್ಮ ಕೋಣೆಯೇ ಇರುವುದರಲ್ಲಿ ಸುಮಾರಾಗಿದೆ. ಇಲ್ಲೂ ಯಾವಯಾವುದೋ ಕೆಲಸಕ್ಕೆ ಬಾರದ ಸಾಮಾನುಗಳು...ಅಗೊ, ಆ ಬುಟ್ಟಿ, ಆ ಅಕ್ಕಿ ಕೇರುವ ಮರ... ಆ ಪೊರಕೆ, ...ಇವೆಲ್ಲಾ ಯಾಕೆ ಅಂತೀನಿ, ಮಲಗುವ ಕೋಣೆಯಲ್ಲಿ?"

"ಏನೋ ಹಾಗೆಂದರೆ...ಇವೆಲ್ಲಾ ಕೆಲಸಕ್ಕೆ ಬಾರದ ಸಾಮಾನುಗಳೇ? ಎಲ್ಲರ ಮನೆಗಳಲ್ಲೂ ಹೀಗೇ ಇರುತ್ತೆ..."

"ಅದೆಲ್ಲಾ ನನಗೆ ಗೊತ್ತಿಲ್ಲ, ದೊಡ್ಡಮ್ಮ. ಆದರೆ ಚಹಾ ಕುಡಿಯುವ ಕೋಣೆಯಲ್ಲಿ ಇವುಗಳನ್ನೆಲ್ಲಾ ಇಡುವುದು ಚೆನ್ನಾಗಿ ಕಾಣುವುದಿಲ್ಲ. ಇವನ್ನೆಲ್ಲಾ ನೋಡಿ ಬಿಟ್ಟರೆ ಅವನು ಖಂಡಿತ ನಕ್ಕುಬಿಡುತಾನೆ...ಆಮೇಲೆ ಮನೆಗೆ ಹೋಗಿ ಅಕ್ಕ, ತಂಗಿಯರ ಸಂಗಡ ಆಡಿಕೊಂಡು ನಗುತಾನೆ, ನನಗೆ ಗೊತ್ತು."

"ಆಹಾಹಾ?...ಏನು ಮಾತೋ ನಿನ್ನದು, ...ನಗುಪಾಟಲು!...ಅಲ್ಲೋ ...ಮನೆ ಅಂದರೆ ಬುಟ್ಟಿ, ತಟ್ಟೆ, ಪಾತ್ರೆಗಳಿಲ್ಲದೆ ಆಗುತ್ತೆಯೇನೋ. ಅವನ್ನ ನೋಡಿ ನಗುತಾರೆಯೇ ಯಾರಾದರೂ? ನಾನಂತೂ ಕೇಳಿಲ್ಲಮ್ಮ!"

"ಆಮೇಲೆ ಇನ್ನೊಂದು ಮಾಡಬೇಕಾಗತ್ತೆ ದೊಡ್ಡಮ್ಮ...ನಮ್ಮ ನಂದಾ ಇದ್ದಾನಲ್ಲ, ಅಡಿಗೆಯವನು...ಅವನು ಬರೇ ಎದೆ ಬಿಟ್ಟುಕೊಂಡು ನನ್ನ ಸ್ನೇಹಿತನೆದುರಿಗೆ ಓಡಾಡದೆ ಇರುವ ಹಾಗೆ ನೋಡಿಕೊಳ್ಳಬೇಕು... ಅವನು ನನ್ನ ಮಾತು ಕೇಳುವುದಿಲ್ಲ. ಬೆತ್ತಲೆ ಎದೆ ತೋರಿಸಿಕೊಂಡು ಥೈ ಅಂತ ಬಂದು ಎದುರಿಗೆ ನಿಂತುಕೊಂಡುಬಿಡುತ್ತಾನೆ."

"ಆಗಲಪ್ಪ...ಅವನನ್ನೇನೋ ತಡೆಯೋಣಂತೆ. ಆದರೆ ನಿಮ್ಮಪ್ಪನೇ ಬರೇ ಎದೆ ಬಿಟ್ಟುಕೊಂಡು..."

"ಆ ಏರ್ಪಾಡು ನಾನಾಗಲೇ ಮಾಡಿದ್ದೇನೆ...ನಮ್ಮ ದೊಡ್ಡಪ್ಪನ ಮನೆಯಲ್ಲಿ ಅವರಿಗೆ ಇವತ್ತು ಊಟಕ್ಕೆ ಕರಿ ಅಂತ ಹೇಳಿ ಬಂದಿದ್ದೇನೆ... ಅಪ್ಪನಿಗೆ ಇದೇನೂ ಗೊತ್ತೇ ಇಲ್ಲ."

"ಏನೇನು ಮಾಡುತ್ತೀಯೋ ಮಾಡಪ್ಪ, ಸತೀಶ. ಆದರೆ ಈ ಕೋಣೆಯಲ್ಲಿ ನಿನ್ನ ಚಹಾ, ತಿಂಡಿ ವ್ಯವಸ್ಥೆ..."

"ನೀವೇನೂ ಯೋಚಿಸಬೇಡಿ...ನಾನೀಗಲೇ ರೂಮನ್ನ ಖಾಲಿಮಾಡಿ, ಚೊಕ್ಕಟ ಮಾಡಿಬಿಡುತೇನೆ."

೫

"ಅಮ್ಮಾ....ಹೀಗೆಲ್ಲಾ ಇದ್ದರೆ ನನಗೆ ಸರಿಹೋಗುವುದಿಲ್ಲ."

"ಯಾಕೋ....ಏನಾಯಿತು?"

"ಈ ಹಳೇ ಕಾಲದ ಕೋಟು, ಷರಾಯಿ ಹಾಕಿಕೊಂಡು ಹೊರಗೆ ಹೋಗೋಕ್ಕೇ ನಾಚುಗೆಯಾಗುತ್ತೆ ನನಗೆ– ಅವತ್ತು ಭಾದುಡೀಸಾಹೇಬರ ಮನೆಯಲ್ಲಿ ಈವನಿಂಗ್ ಪಾರ್ಟಿಯಿತ್ತು. ಕೆಲವು ಜನ ಬಾಬುಗಳು (ಗುಮಾಸ್ತೆಯರು) ಹೊರತಾಗಿ ಬೇರೆ ಎಲ್ಲರೂ ಒಳ್ಳೊಳ್ಳೇ ಸೂಟುಗಳನ್ನ ಹಾಕಿಕೊಂಡು ಬಂದಿದ್ದರು. ನಾನಾವಾಗ ಈ ಹಾಳು ದ್ರಾಬೆ ಬಟ್ಟೆ ಹಾಕಿಕೊಂಡು ಹೋಗಿದ್ದೆ, ಎಷ್ಟು ನಾಚುಗೆ ಆಯಿತು ಗೊತ್ತಾ? ಈ ಅಪ್ಪ ಅಗ್ಗದ ಬಟ್ಟೆಗಳನ್ನೇ ಹುಡುಕಿಕೊಂಡು ತರುತ್ತಾರೆ. ನನಗಿಲ್ಲಿ ಅಂಥದನ್ನ ಹಾಕಿಕೊಂಡು ಮಾನ ಹೋಗುತ್ತೆ."

"ನಿಮ್ಮಪ್ಪ ಬಿಡು.... ಏನು ಮಾಡುವುದು ಹೇಳು– ಅವರ ಹಠವೇ ಹಠ. ಅಲ್ಲೋ, ನಿನ್ನ ಇಷ್ಟಕ್ಕೆ ಸರಿಯಾಗಿ ಬಟ್ಟೆ ಹೊಲಿಸಬೇಕಾದರೆ ಎಷ್ಟಾಗತ್ತೆ ಹೇಳು, ತಿಳಿದುಕೊಳ್ಳೋಣ."

"ಒಂದು ಮಾರ್ನಿಂಗ್ ಸೂಟು ಮತ್ತು ಒಂದು ಲೌಂಜ್ ಸೂಟು... ಇಷ್ಟಕ್ಕೆ ಸುಮಾರು ಒಂದುನೂರು ರೂಪಾಯಿಯಾಗುತ್ತೆ. ಒಂದು ಸಾಧಾರಣ ಈವನಿಂಗ್ ಸೂಟಿಗೆ ಏನಿಲ್ಲ ಅಂದರೂ ನೂರೈವತ್ತು ರೂಪಾಯಿಗೆ ಕಮ್ಮಿ ಆಗೋದಿಲ್ಲ."

"ಅಬ್ಬಬ್ಬಾ...ಅಷ್ಟೊಂದೇ? ಅಲ್ಲವೋ...ಹ್ಯಾಗೋ ತರೋದು ಅಷ್ಟು ದುಡ್ಡು...ಎರಡೂ ಸೇರಿ ಸುಮಾರು ಮುನ್ನೂರು ರೂಪಾಯಿ...!"

"ಅಮ್ಮಾ, ನೀನು ಕೂಡ ಅದೇ ರಾಗ ತೆಗೆದೆಯಲ್ಲಾ? ಫಕೀರನ ಹಾಗೆ ಇದ್ದುಬಿಡು ಅನ್ನು ತೊಂದರೆಯೇ ಇಲ್ಲ. ಆದರೆ ದೊಡ್ಡಮನುಷ್ಯರ ಗುಂಪಿನಲ್ಲಿ ಓಡಾಡಬೇಕಾದರೆ ಈ ತರಹೆ ಚೌಕಾಶಿ ಮಾಡುವುದಕ್ಕಾಗುವುದಿಲ್ಲ ಗೊತ್ತಾ? ದೊಡ್ಡಮನುಷ್ಯತನ ಉಳಿಸಿಕೊಳ್ಳಬೇಕಾದರೆ ಖರ್ಚು ಮಾಡಲೇಬೇಕಾಗುತ್ತೆ. ಬೇರೆ ಉಪಾಯವೇಯಿಲ್ಲ...ಸಾಧ್ಯವಿಲ್ಲದೆ ಹೋದರೆ ದಂಡಕಾರಣ್ಯಕ್ಕೆ ಕಳುಹಿಸಿಬಿಡು... ಹೋಗುತ್ತೇನೆ...ಅಲ್ಲಿ ಡ್ರೆಸ್ಸೇ ಬೇಕಾಗಿಲ್ಲ."

"ಎಲ್ಲಾ ಗೊತ್ತು ಕಣೋ, ಗೊತ್ತಿಲ್ಲದೆಯಿಲ್ಲ. ಆದರೆ– ಒಳ್ಳೇದು, ಬಿಡು... ನಿನ್ನ ದೊಡ್ಡಪ್ಪನವರು ಹೇಗಿದ್ದರೂ ನಿನ್ನ ಹುಟ್ಟಿದ ಹಬ್ಬಕ್ಕೆ ಉಡುಗೊರೆ ಕೊಟ್ಟೇ ಕೊಡುತ್ತಾರೆ. ಈ ಸಲಕ್ಕೆ ಮಾತ್ರ ಅವರಿಂದಲೇ ನಿನಗೆ ಬೇಕಾದ ಪಾರ್ಟಿ ಡ್ರೆಸ್ಸನ್ನು ಒದಗಿಸಿಕೊಂಡು ಹೋಗು. ಆಮೇಲೆ ಸಮಯ ನೋಡಿಕೊಂಡು ಆಗಾಗ ಮಾತಿನಲ್ಲಿ ಮಾತು ಸೇರಿಸಿ ನಿಮ್ಮ ದೊಡ್ಡಮ್ಮನಿಗೆ ನಿನ್ನ ಡ್ರೆಸ್ಸಿನ ಸೂಚನೆ ಕೊಟ್ಟುಬಿಟ್ಟರೆ ಸರಿ."

"ಅದಕ್ಕೇನು ಸುಲಭವಾಗಿ ಮಾಡಬಲ್ಲೆ. ಆದರೆ ಅಪ್ಪನಿಗೇನಾದರೂ, ನಾನು ದೊಡ್ಡಪ್ಪನಿಂದ ಸೂಟು ವಸೂಲು ಮಾಡಿಕೊಂಡೆ ಅಂತ ತಿಳಿದುಬಿಟ್ಟರೆ ದೇವರೇ ಗತಿ."

"ಅದೇನೂ ಯೋಚಿಸಬೇಡ...ಅವರ ವಿಷಯವಾಗಿ ನಾನು ನೋಡಿಕೊಳ್ಳುತ್ತೇನೆ, ನೀನು ಹೋಗಿನ್ನು."

[ಸತೀಶ ನಿಷ್ಕ್ರಮಿಸುವನು]

ವಿಧು– (ತನ್ನಲ್ಲೇ) 'ಭಾದುಡೀಸಾಹೇಬರ ಮಗಳ ಸಂಗಡ ಸತೀಶನ ಸಂಬಂಧ ಹೇಗಾದರೂ ನಿಷ್ಕರ್ಷೆ ಮಾಡಿಸಿಬಿಟ್ಟರೆ ನಾನಾಗ ಅವನ ವಿಷಯದಲ್ಲಿ ನಿಶ್ಚಿಂತೆಯಿಂದಿರಬಹುದು. ಭಾದುಡೀಸಾಹೇಬರು ಬ್ಯಾರಿಸ್ಟರು. ಸಾವಿರಾರು ರೂಪಾಯಿ ಸಂಪಾದನೆ, ಚಿಕ್ಕ ವಯಸ್ಸಿಂದಲೂ ಸತೀಶ ಅವರ ಮನೆಗೆ ಹೋಗಿ ಬರುತ್ತಾಯಿದ್ದಾನೆ. ಹುಡುಗಿಗೂ ಮನಸ್ಸು ಕಲ್ಲೇನಲ್ಲ. ಖಂಡಿತವಾಗಿ ನಮ್ಮ ಸತೀಶನನ್ನ ಕಂಡರೆ ಇಷ್ಟಪಡುತ್ತಾಳೆ. ಇಲ್ಲಿ ಇವರೋ, ಮಗನ ವಿಷಯವಾಗಿ ಸ್ವಲ್ಪವೂ ತಲೆಗೆ ಹಚ್ಚಿಕೊಳ್ಳುವುದಿಲ್ಲ. ಹೇಳುವುದಕ್ಕೆ ಹೋದರೆ ಬುಸ್ ಅಂತ ಮೇಲೆ ಬೀಳಲಿಕ್ಕೆ ಬರುತ್ತಾರೆ. ಹುಡುಗನ ಏಳಿಗೆ ವಿಷಯವಾಗಿ ನಾನೊಬ್ಬಳೇ ಚಿಂತಿಸಿ ಚಿಂತಿಸಿ ತಲೆಕೆಡಿಸಿಕೊಳ್ಳಬೇಕಾಗುತ್ತದೆ.'

೬

ಮಿಸ್ಟರ್ ಭಾದುಡಿಯವರ ಬಂಗಲೆಯ ಕಾಂಪೌಂಡಿನೊಳಗೆ ಟೆನಿಸ್ ಕೋರ್ಟು.

ನಳಿನಿ– "ಓ ಸತೀಶ, ಏನಿದು, ಓಟ ಕೀಳುತಾಯಿದ್ದೀಯಲ್ಲ."

ಸತೀಶ– "ನಿಮ್ಮ ಮನೆಯಲ್ಲಿ ಟೆನಿಸ್ ಪಾರ್ಟಿ ಇವತ್ತು ಅಂತ ನನಗೆ ಗೊತ್ತಿರಲಿಲ್ಲ. ಅದಕ್ಕೇ ಟೆನಿಸ್ ಸೂಟ್ ಹಾಕಿಕೊಂಡು ಬರಲಿಲ್ಲ."

ನಳಿನಿ– "ಎಲ್ಲಾ ದನಗಳೂ ಒಂದೇ ಬಣ್ಣದ ಚರ್ಮಹೊಂದಿರುವುದಿಲ್ಲ, ಬಿಡು. ನಿನಗೆ ಒರಿಜಿನಲ್ ಮನುಷ್ಯ ಅಂತ ಟೈಟಲ್ ಕೊಟ್ಟುಬಿಡುತ್ತಾರೆ. ಹೋಗಲಿ, ನಾನು ನಿನಗೊಂದು ಅನುಕೂಲ ಮಾಡಿಕೊಂಡುತ್ತೇನೆ.... ಮಿಸ್ಟರ್ ನಂದೀ, ನಿಮ್ಮ ಹತ್ತಿರ ನನ್ನದೊಂದು ರಿಕ್ವೆಸ್ಟು!"

ನಂದಿ– "ರಿಕ್ವೆಸ್ಟೇಕೆ, ಆರ್ಡರನ್ನಿ! ಹುಕುಂ ಮಾಡಿ....ನಾನು ನಿಮ್ಮ ಸರ್ವಿಸ್ಸಿಗಾಗಿ ರೆಡಿ ಇದ್ದೇನೆ."

ನಳಿನಿ– "ಸಾಧ್ಯವಾದರೆ ಇವತ್ತಿಗೆ ಮಾತ್ರ ನಮ್ಮ ಸತೀಶನನ್ನ ಮಾಫ್ ಮಾಡಿ ಬಿಡಿ. ಆತ ಇವತ್ತು ಟೆನಿಸ್‌ಸೂಟನ್ನ ತೊಟ್ಟು ಬರಲಿಲ್ಲ. ಎಷ್ಟು ದೊಡ್ಡ ಅನರ್ಥ, ನೋಡಿ ಮತ್ತೆ!"

ನಂದಿ– "ನೀವು ವಕಾಲತಿ ಮಾಡಿದರೆ ಖೂನಿ, ಮೋಸ, ಮನೆಗೆ ಬೆಂಕಿ ಹಚ್ಚುವಂಥ ದುಷ್ಕೃತ್ಯಗಳನ್ನು ಕೂಡ ಮಾಫ್ ಮಾಡಬಲ್ಲೆ. ಟೆನಿಸ್ ಸೂಟನ್ನು ತೊಟ್ಟುಕೊಂಡು ಬರದೇ ಹೋದದ್ದಕ್ಕಾಗಿ ನಿಮಗಿಷ್ಟು ಕರುಣೆಯಾಗಿರುವಾಗ ನನ್ನ ಈ ಟೆನ್ನಿಸ್ ಸೂಟನ್ನ ಮಿಸ್ಟರ್ ಸತೀಶನಿಗೆ ನಾನು ದಾನಮಾಡಬಲ್ಲೆ. ಮತ್ತು ಆತನ ಈ...ಇದಕ್ಕೇನಂತಾರೆ...ನಿಮ್ಮ ಈ ಸೂಟು ಯಾವ ನಮೂನೆಯದು, ಸತೀಶ್, ಖಿಚಡಿ ಸೂಟ್ ಅನ್ನೋಣವೇ? ಹೂಂ, ನಾನು ಇವರ ಖಿಚಡಿ ಸೂಟನ್ನ ತೊಟ್ಟು ನಿತ್ಯವೂ ಇಲ್ಲಿ ಹಾಜರಾಗಬಲ್ಲೆ. ನನ್ನ ಕಡೆ ಇಡೀ ಲೋಕವೇ, ಅಷ್ಟೇಕೆ, ಇಡೀ ಸೂರ್ಯ ಚಂದ್ರ, ನಕ್ಷತ್ರಗಳೆಲ್ಲಾ ನೋಡುತ್ತ ನಗುತ್ತಿದ್ದರೂ ನನಗೆ ಸ್ವಲ್ಪವೂ ಅವಮಾನವಾಗುವುದಿಲ್ಲ. ಸತೀಶ್, ನಿಮ್ಮ ಸೂಟನ್ನ ನನಗೆ ದಾನ ಮಾಡುವುದರಲ್ಲಿ ನಿಮಗೇನಾದರೂ ಆಕ್ಷೇಪಣೆಯಿದ್ದರೆ ನಿಮ್ಮ ಟೈಲರ್ (ದರ್ಜಿ) ಅಡ್ರೆಸ್ಸನ್ನಾದರೂ ಕೊಡಿ. ಫ್ಯಾಷನ್ನು ಎಷ್ಟೇ ಹೊಲಸಾದರೂ ಚಿಂತೆಯಿಲ್ಲ, ಮಿಸ್ ಭಾದುಡಿಯ ಕರುಣೆಯ ಬೆಲೆಯೇ ದೊಡ್ಡದು."

ನಳಿನಿ– "ಕೇಳಿ, ಕೇಳಿ, ಸತೀಶ್. ಜ್ಞಾಪಕದಲ್ಲಿಟ್ಟುಕೊಳ್ಳಿ. ಗಮನಿಸಿ. ಬರೇ ಬಟ್ಟೆಗಳ ಸೊಗಸಿನಲ್ಲೊಂದೇ ಅಲ್ಲ. ಮಾತಿನ ಸೊಗಸಿನಲ್ಲೂ ನೀವು ಮಿಸ್ಟರ್ ನಂದಿಯವರ ಹತ್ತಿರ ಕಲಿಯಬೇಕಾದ್ದೆಷ್ಟೋ ಇದೆ. ಅಂತಹ ಮಾದರಿ ನಿಮಗೆ ಬೇರೆಲ್ಲೂ ಸಿಗುವುದಿಲ್ಲ. ಇಂಗ್ಲೆಂಡಿನಲ್ಲಿ ಈತ ಡ್ಯೂಕ್, ಡಚೆಸ್‌ಗಳ ಹೊರತು ಬೇರೆಯವರ ಸಂಗಡ ಕಲೆಯುತ್ತಿರಲಿಲ್ಲ ಗೊತ್ತೆ? ಮಿಸ್ಟರ್ ನಂದೀ ನೀವಲ್ಲಿದ್ದಾಗ ಇಂಗ್ಲೆಂಡಿನಲ್ಲಿ ಬಂಗಾಳೀ ವಿದ್ಯಾರ್ಥಿಗಳು ಯಾರ್‍ಯಾರಿದ್ದರು?"

ನಂದಿ– "ನಾನಷ್ಟಾಗಿ ಬೆಂಗಾಳಿಗಳ ಜೊತೆಯಲ್ಲಿ ಸೇರುತ್ತಲೇ ಇರಲಿಲ್ಲ."

ನಳಿನಿ– "ಕೇಳಿದಿರಾ, ಸತೀಶ್, ಕೇಳಿ, ಕ್ರಮಬದ್ಧವಾಗಿ ದೊಡ್ಡ ಮನುಷ್ಯ ಅನ್ನಿಸಿಕೊಳ್ಳಬೇಕಾದರೆ ಎಷ್ಟು ಹುಷಾರಿಂದಿರಬೇಕಾಗುತ್ತೆ. ನೀವು ಪ್ರಯತ್ನಪಟ್ಟರೆ ಆಗಬಹುದು. ಟೆನಿಸ್ ಸೂಟಿನ ವಿಷಯದಲ್ಲಿ ನೀವು ತೋರಿಸಿದ ಸೂಕ್ಷ್ಮ ಜ್ಞಾನವೇ ಸಾಕು, ನೀವು ಹಾಗಾಗಬಹುದು ಅನ್ನುವುದಕ್ಕೆ ಭರವಸೆ...ಈಗಲೇ ಬಂದುಬಿಡುತ್ತೇನೆ..." (ಎಂದು ಬೇರೊಂದು ಕಡೆ ಹೋಗುವಳು)

ಸತೀಶ (ಮನಸ್ಸಿನಲ್ಲಿ ನಿಟ್ಟುಸಿರು ಬಿಡುತ್ತ) "ನೆಲ್ಲಿಯನ್ನು ಇವತ್ತಿನವರೆಗೆ ಅರ್ಥಮಾಡಿಕೊಳ್ಳುವುದಕ್ಕಾಗಿಲ್ಲ ನನಗೆ– ನನ್ನನ್ನ ನೋಡಿ ಅವಳು ಬಹುಶಃ ಒಳಗೊಳಗೇ ನಗುತಾಯಿದ್ದಾಳೆ ಅಂತ ಅನ್ನಿಸತ್ತೆ. ನನಗೂ ಕಷ್ಟಕ್ಕೆ ಬಂದಿದೆ. ನಾನು ಇಲ್ಲಿಗೆ ಬಂದಾಗ ಏನು ಮಾಡಿದರೂ ಮನಸ್ಸು ನೆಮ್ಮದಿಯಾಗಿರುವುದಕ್ಕೆ

ಸಾಧ್ಯವಿಲ್ಲ– ನನ್ನ ಉಡುಪು, ನನ್ನ ಚಹರೆ ಎಷ್ಟು ಅಸಹ್ಯ ಕಾಣುತ್ತಾಯಿದೆಯೋ ಅಂತ! ನನ್ನ ಟೈ ಕಾಲರ ಮೇಲೆ ಹಾರಿಕೊಂಡು ಬಂದುಬಿಟ್ಟಿದೆಯೇನೋ, ಬೂಟ್ಸಿನ ಲೇಸು ಬಿಚ್ಚಿಕೊಂಡು ಬಂದಿದೆಯೇನೋ–ನನ್ನ ಪ್ಯಾಂಟು ಮೊಣಕಾಲು ಹತ್ತಿರ ಬಿಗಿಸಿಕೊಂಡು ಬಂದಿದೆ. ಜೋರಾಗಿ ಕೂಡುವಾಗ ಎಲ್ಲಿ ಫಟಕ್ ಅಂತ ಹರಿದುಹೋಗುತ್ತೋ ಅಂತ...ಎದೆ ಡವ ಡವ ಅನ್ನುತ್ತಲೇ ಇರುತ್ತದೆ. ಮಿಸ್ಟರ್ ನಂದಿಯ ಹಾಗೆ ಯಾವಾಗ ನಾನೂ ಅನಾಯಾಸವಾಗಿ ಉತ್ಸಾಹ, ಲವಲವಿಕೆಯಿಂದ ನಡೆದುಕೊಳ್ಳುವುದಕ್ಕೆ ಸಾಧ್ಯವೋ ಗೊತ್ತಿಲ್ಲ."

ನಳಿನಿ– (ಮತ್ತೆ ಪ್ರವೇಶಮಾಡುತ್ತ) "ಏನು ಸತೀಶ್, ಇನ್ನೂ ನಿಮ್ಮ ಮನಸ್ಸಿನ ಚಿಂತೆ ದೂರವಾಗಲಿಲ್ಲವಾ? ಟೆನಿಸ್ ಕೋರ್ಟಿನ ಶೋಕದಿಂದ ನಿಮ್ಮ ಎದೆ ಚೂರು ಚೂರಾಗುತ್ತಿದೆಯೇನೋ ಅಲ್ಲವಾ? ಹಾಯ್, ಕೋರ್ಟಿನಲ್ಲಿ ಸೋತುಹೋದ ಹೃದಯದ ಸಾಂತ್ವನವನ್ನು ಪ್ರಪಂಚದಲ್ಲಿ ಎಲ್ಲಿ ಹುಡುಕೋಣ– ದರ್ಜಿಯ ಮನೆಯಲ್ಲಿ ಹೊರತು?"

ಸತೀಶ– "ನನ್ನ ಹೃದಯದ ಬಗ್ಗೆ ನಿನಗಷ್ಟು ಯೋಚನೆಯಿದ್ದಿದ್ದರೆ ಈ ತರಹೆ ಮಾತಾಡುತ್ತಾ ಇರಲಿಲ್ಲ ನೀನು, ನೆಲ್ಲಿ."

ನಳಿನಿ– (ಚಪ್ಪಾಳೆ ಹೊಡೆಯುತ್ತ) "ಭೇಷ್, ಭಲೆ, ಮಿಸ್ಟರ್ ನಂದಿಯವರ ಮಾದರಿ ನೋಡಿದುದರ ಫಲವಾಗಿ ಸವಿ ಮಾತುಗಳ ಸಪ್ಲೈ ಆಗಲೇ ಶುರುವಾಯಿತು ನೋಡಿ. ಅವಕಾಶ ಸಿಕ್ಕಿದರೆ ಹೀಗೇ ಬೇಗ ಏಳಿಗೆಗೆ ಬರುವುದರ ಭರವಸೆಯಿದೆ. ಬನ್ನಿ ಸ್ವಲ್ಪ ಕೇಕ್ ತಿನ್ನುವಿರಂತೆ. ಸಿಹಿ ಮಾತುಗಳಿಗೆ ಪುರಸ್ಕಾರ ಸಿಹಿ ತಿಂಡಿ."

ಸತೀಶ– "ಇಲ್ಲ, ಇನ್ನು ತಿನ್ನುವುದಿಲ್ಲ. ನನ್ನ ಮೈಯೇಕೋ ಇವತ್ತು..."

ನಳಿನಿ– "ಸತೀಶ್, ನನ್ನ ಮಾತು ಕೇಳಿ, ಟೆನಿಸ್ ಕೋರ್ಟಿನಲ್ಲಾದ ಖೇದದಿಂದ ಮೈ ಕೆಡಿಸಿಕೊಳ್ಳಬೇಡಿ. ತಿಂಡಿ, ತೀರ್ಥ ಬಿಟ್ಟುಬಿಡುವುದೊಳ್ಳೆಯದಲ್ಲ. ಟೆನಿಸ್ ಆಟ ಜಗತ್ತಿನ ಉತ್ತಮ ಸುಖಗಳಲ್ಲೊಂದು ನಿಜ. ಆದರೆ ಈ ತುಚ್ಛವಾದ ಶರೀರವಿಲ್ಲದೆ ಹೋದರೆ ಅದನ್ನು ಲೀಲಾಜಾಲವಾಗಿ ಓಡಾಡಿಸುವ ಸುಖವೆಲ್ಲಿರುತ್ತೆ ಹೇಳಿ."

೭

ಶಶಧರ– "ಇಲ್ಲಿ ನೋಡು ಮನ್ಮಥ, ಸತೀಶನ ವಿಷಯದಲ್ಲಿ ನೀನು ಅಷ್ಟು ನಿಷ್ಠುರವಾಗಿ ನಡೆದುಕೊಳ್ಳುವುದು ಸರಿಯಲ್ಲ. ಎಷ್ಟಾದರೂ ವಯಸ್ಸು ಬಂದ ಮಗ, ಈಗ ಅವನ ಮೇಲೆ ಅಷ್ಟು ಕಠಿಣವಾಗಿ ಜೋರುಮಾಡುವುದು ಒಳ್ಳೆಯದಲ್ಲ."

ವಿಧು– "ಹೇಳಿ ಭಾವಯ್ಯ, ಚೆನ್ನಾಗಿ ಹೇಳಿ, ಬುದ್ಧಿ. ನಾನೆಷ್ಟು ಹೇಳಿದರೂ ಅವರಿಗೆ ತಿಳಿಯುವುದಿಲ್ಲ."

ಮನ್ಮಥ– "ಎರಡು ಕಡೆಯಿಂದಲೂ ದೂರುಗಳು ಒಂದೇ ಸಲ–ಒಬ್ಬರು ಹೇಳುವ ಹಾಗೆ ನಾನು ನಿಷ್ಕರುಣಿ– ಇನ್ನೊಬ್ಬರು ಹೇಳುವುದು ನಾನು ಮೂರ್ಖ. ಯಾರ ಮುಂದೆ ಬುದ್ಧಿ ಕಳೆದುಕೊಂಡವನಾಗಿದ್ದೇನೋ ಅವಳ ಮಾತನ್ನ ಸೈರಿಸಬೇಕಾಗುತ್ತೆ...ವಿಧಿಯಿಲ್ಲ. ಅವಳ ಅಕ್ಕನ ಮಾತಿಗೂ ಪ್ರತಿಯಾಡಲಾರೆ. ಆದರೆ ಹಾಗೆಂದುಬಿಟ್ಟು ಅವಳ ಭಾವನು ಆಡಿದ ಮಾತನ್ನೆಲ್ಲ ಸೈರಿಸಬೇಕು ಅಂತ ಅಗತ್ಯವೇನಿಲ್ಲ...ಕಠಿಣ ಅಂದೆಯಲ್ಲ, ಹೇಗೆ? ಅಪ್ಪಣೆಕೊಡಿಸು."

ಶಶಧರ– "ಪಾಪ, ಆ ಹುಡುಗನಿಗೆ ಒಳ್ಳೇ ಬಟ್ಟೆ ಹಾಕಿಕೊಳ್ಳುವುದಕ್ಕೆ ಆಸೆ. ನಾಲ್ಕು ಜಾಗಗಳಲ್ಲಿ ಓಡಾಡಿ ಕಲೆಯುವುದಕ್ಕೆ ಶುರುಮಾಡಿದ್ದಾನೆ, ಅವನು. ಅಂಥವನಿಗೆ ನೀನು ನಿನ್ನ ಆ ಹಳೇ ಕಾಲದ ಜರತಾರಿ ಬಟ್ಟೆಯನ್ನು..."

ಮನ್ಮಥ– "ನಾನೇನು ಅವನಿಗೆ ಆ ಜರತಾರಿ ಬಟ್ಟೆಯನ್ನು ಹಾಕಿಕೋ ಅಂತ ಹೇಳಲಿಲ್ಲ. ಆದರೆ ಫರಂಗಿಯವರ ಪೋಷಾಕು ಕಂಡರೆ ನನಗೆ ವಿಷ, ಬೇಕಿದ್ದರೆ ಪಂಚೆ, ಚಾದರ, ಚಾಪಕಾನ್ ತೊಟ್ಟುಕೊಳ್ಳಲಿ... ಅದಕ್ಕೆ ಅವನು ನಾಚಿಕೊಳ್ಳಬೇಕಾಗಿಲ್ಲ, ಎಂದಿಗೂ."

ಶಶಧರ– "ನೋಡು, ಮನ್ಮಥ, ಸತೀಶನು ಈ ವಯಸ್ಸಿನಲ್ಲಿ ಅವನ ಚಪಲ ತೀರಿಸಿಕೊಳ್ಳದೆ ಹೋದರೆ, ಮುದಿ ವಯಸ್ಸಿನಲ್ಲಿ ಅದೊಂದು ಹುಚ್ಚಾಗಿ ತಿರುಗಿಬಿಡುತ್ತದೆ, ಹಠಾತ್ತಾಗಿ ಆಗ ಅದರ ಕೆಡುಕು ಇನ್ನು ತಡೆಯಲಸಾಧ್ಯವಾಗಿ ಹೋಗುತ್ತದೆ. ಅಲ್ಲದೆ ಇನ್ನೊಂದು ಯೋಚಿಸು, ಚಿಕ್ಕ ವಯಸ್ಸಿಂದಲೂ ನಾವು ಸಭ್ಯತೆ ಅಂತ ಯಾವುದನ್ನ ಕಲಿತಿದ್ದೇವೋ ಅದು ಹೇಗೆ ನಿನಗೆ ಕೆಟ್ಟುದೆನ್ನಿಸತ್ತೆ, ಹೇಳು ಮತ್ತೆ."

ಮನ್ಮಥ– "ಸಭ್ಯರಾಗಬೇಕೆಂದಿರುವವರು ಸಭ್ಯತೆಯ ಮಾಲು, ಮಸಾಲೆಗಳನ್ನ ಸ್ವಂತ ಖರ್ಚಿಂದ ಒದಗಿಸಿಕೊಳ್ಳಬೇಕು. ಒಳ್ಳೇ ಚೆನ್ನಾಗಿದೆ, ನಿನ್ನ ಸಭ್ಯತೆ ಯಾವ ಕಡೆಯಿಂದ ಬರತ್ತೋ ಆ ಕಡೆಯಿಂದ ದುಡ್ಡು ಮಾತ್ರ ಬರುವುದಿಲ್ಲ. ಕೇವಲ ಈ ಸ್ಥಳದಿಂದ ಆ ಕಡೆ ಹರಿಯುತ್ತೆ ಹಣ."

ವಿಧು– "ಭಾವಯ್ಯ, ಅವರ ಹತ್ತಿರ ಮಾತಾಡಿದರೆ ಹೀಗೇ ಎಲ್ಲೆಲ್ಲೋ ತಿರುಗತ್ತೆ ಅವರ ಬುದ್ಧಿ– ತಡೆಯೇ ಇಲ್ಲ."

ಶಶಧರ– "ನೋಡು, ಮನ್ಮಥ, ಕೋಪಿಸಿಕೊಳ್ಳಬೇಡ. ನೀನು ಹೇಳುವುದೆಲ್ಲ ನನಗೂ ಗೊತ್ತು. ಆದರೆ ಹುಡುಗು ಮನಸ್ಸಿನ ಚಪಲಕ್ಕೆ ಅಡ್ಡಿ ಬರಲಾರೆ. ಸತೀಶ ಭಾದುಡೀ ಸಾಹೇಬರ ಮನೆಯವರ ಸಂಗಡ ಕಲೆಯುವುದಕ್ಕೆ ಶುರುಮಾಡಿದ್ದಾನೆ. ಹಾಗಿರುವಾಗ ಅವನಿಗೆ ತಕ್ಕ ಉಡುಪು ಇಲ್ಲದೆ ಹೋದರೆ ಪಾಪ, ಅವನ

ಅವಸ್ಥೆ ಹೇಗಿರಬೇಕು ಹೇಳು. ನಾನು ರ್‍ಯಾಂಕಿನ್‌ರವರ ಅಂಗಡಿಯಲ್ಲಿ ಅವನ ಸಲುವಾಗಿ–"

[ಭೃತ್ಯನ ಪ್ರವೇಶ]

ಭೃತ್ಯ– "ಸಾಹೇಬರ ಮನೆಯಿಂದ ಈ ಬಟ್ಟೆಗಳು ಬಂದಿವೆ, ಬಾಬುಜಿ."

ಮನ್ಮಥ– "ತಗೊಂಡು ಹೋಗು ಆ ಬಟ್ಟೆ, ತಗೊಂಡು ಹೋಗು, ಈಗಲೇ. (ವಿಧುವನ್ನು ಕುರಿತು) ನೋಡು ಸತೀಶನೇನಾದರೂ ಈ ಬಟ್ಟೆಗಳನ್ನು ಹಾಕಿರೋದನ್ನ ನಾನು ಕಂಡರೆ ಅವನನ್ನ ಈ ಮನೆಯಲ್ಲಿರುವುದಕ್ಕೆ ಬಿಡುವುದಿಲ್ಲ, ಹಾಸ್ಟೆಲಿಗೆ ಕಳಿಸಿಬಿಡುತ್ತೇನೆ. ಅಲ್ಲಿ ಅವನಿಗೆ ಇಷ್ಟ ಬಂದ ಹಾಗೆ ಇರಬಹುದು" (ಎಂದು ಬೇಗ ಬೇಗ ಹೆಜ್ಜೆ ಹಾಕುತ್ತ ನಿಷ್ಕ್ರಮಿಸುವನು).

ಶಶಧರ– "ವಿಚಿತ್ರ ಮನುಷ್ಯ!"

ವಿಧು– (ಅಳುತ್ತ) "ನೋಡಿ, ಭಾವಯ್ಯ, ನೀವೇ ನೋಡಿ, ಏನು ಹೇಳಲಿ ನಿಮಗೆ. ನಾನು ಬದುಕಿದ್ದೇನು ಸುಖ ಹೇಳಿ, ಸ್ವಂತ ಮಗನ ವಿಷಯದಲ್ಲಿ ಯಾವ ತಂದೆಯಾದರೂ ಹೀಗಾಡುವುದನ್ನು ಕೇಳಿದ್ದೀರಾ?"

ಶಶಧರ– "ನನ್ನ ವಿಷಯದಲ್ಲಿ ಅವನು ನಡೆದುಕೊಳ್ಳುವುದೂ ಸರಿಯಾದ್ದಲ್ಲ. ನನಗನ್ನಿಸತ್ತೆ, ಮನ್ಮಥನಿಗೇನೋ ಅಜೀರ್ಣದ ರೋಗ ಬಂದಿದೆ ಅಂತ. ಅದಕ್ಕೇ ಅವನ ಬುದ್ಧಿ ಹೀಗೆ ವಿಪರೀತವಾಗಿರುವುದು. ನೀನು ನನ್ನ ಮಾತೊಂದು ಕೇಳು. ನಿತ್ಯವೂ ಒಂದೇ ಸಮನಾಗಿ ಬರೇ ಅನ್ನ, ಸಾರು ತಿನ್ನಿಸಬೇಡ ಅವನಿಗೆ. ಅವನು ಏನು ಹೇಳಿದರೂ ಹೇಳಿಕೊಳ್ಳಲಿ, ಆಗಾಗ ಖಾರ, ಮಸಾಲೆ ಊಟವಾಗದೆ ಹೋದರೆ ಊಟವೂ ರುಚಿಸುವುದಿಲ್ಲ, ಜೀರ್ಣವೂ ಆಗುವುದಿಲ್ಲ. ಕೆಲವು ದಿನ ಒಳ್ಳೊಳ್ಳೇ ತಿಂಡಿ, ತಿನಿಸು ಮಾಡಿ ಹಾಕುತಾಯಿರು– ನೋಡುತಾಯಿರು– ಆಗ ನೀನು ಏನು ಹೇಳುತ್ತೀಯೋ ಹಾಗೇ ಮಾಡುತಾನೆ ನಿನ್ನ ಗಂಡ. ಈ ವಿಷಯದಲ್ಲಿ ನಿಮ್ಮಕ್ಕ ನಿನಗಿಂತಲೂ ಬುದ್ಧಿವಂತಳು. ಹೂ, ನಾನಿನ್ನು ಬರುತ್ತೇನೆ...ನಾನು ಹೇಳಿದ್ದು ಜ್ಞಾಪಕದಲ್ಲಿರಲಿ." (ಶಶಧರನ ನಿಷ್ಕ್ರಮಣ. ವಿಧುಮುಖಿ ಮಾತಾಡದೆ ಅಳುವಳು.)

ವಿಧವೆ ಓರಗಿತ್ತಿ– (ಪ್ರವೇಶಿಸುತ್ತ, ತನ್ನಲ್ಲೇ ಒಂದು ಸಲ ಅಳು, ಒಂದು ಸಲ ನಗು). "ಇವರ ಸರಸ ಎಷ್ಟು ತರಹವೆ ಅನ್ನುವುದು ಗೊತ್ತಾಗೋದಿಲ್ಲ... ಒಳ್ಳೇದೇ ಆಯಿತು ಬಿಡು (ದೀರ್ಘ ನಿಶ್ವಾಸ). ಲೇ, ತಂಗೀ, ವಿಧೂ ಕೋಪಿಸಿಕೊಂಡು ಉಗ್ರಾಣದಲ್ಲಿ ಹೋಗಿ ಕೂತಿದ್ದೀಯಾ? ತಡಿ, ಮೈದುನನನ್ನ ಕಳಿಸುತ್ತೇನೆ. ಕೆನ್ನೆಗೆ ಹಾಕಿಕೊಳ್ಳುವವರೆಗೂ ಬಿಡಬೇಡ."

೮

"ಸತೀಶ್, ನಾನು ನಿನಗೇಕೆ ಹೇಳಿಕಳುಹಿಸಿದೇಂತ ಹೇಳುತ್ತೇನೆ, ಕೋಪಿಸಿಕೋಬೇಡ."

"ನೀನು ಕರೆಸಿದೆ ಅಂತ ಕೋಪಿಸಿಕೊಳ್ಳುವಷ್ಟು ಕೆಟ್ಟವನೇ ನಾನು, ನೆಲ್ಲಿ?"

"ಛೆ, ಹಾಗಲ್ಲ...ಅದು ಬೇಡ ಈಗ, ಸದಾ ನಂದೀಸಾಹೇಬರ ಶಿಷ್ಯನ ಹಾಗೆ ಮಾತಾಡಬೇಡ. ಹೇಳು ನೋಡೋಣ, ನನ್ನ ಹುಟ್ಟಿದ ಹಬ್ಬದ ದಿನ ಅಷ್ಟು ಬೆಲೆಯಾದ ಉಡುಗೊರೆ ಕೊಟ್ಟೆಯಲ್ಲ ಯಾಕೆ?"

"ಯಾರಿಗೆ ಉಡುಗೊರೆ ಕೊಟ್ಟೆನೋ ಅವಳಿಗೆ ಹೋಲಿಸಿದರೆ ಅದರ ಬೆಲೆ ಅಷ್ಟು ಹೆಚ್ಚೇ?"

"ಮತ್ತೆ ಅದೇ ನಂದೀಸಾಹೇಬರ ನಕಲು!"

"ಹೌದು, ನಂದೀಸಾಹೇಬರ ನಕಲನ್ನು ಬೇಕೆಂತಲೇ ಮಾಡುತ್ತೇನೆ. ಅವರ ವ್ಯಕ್ತಿತ್ವದ ಮೇಲೆ ಅಷ್ಟು ಪಕ್ಷಪಾತವಿರುವಾಗ–"

ನಳಿನಿ– "ಹಾಗಾದರೆ ಹೋಗು, ನಿನ್ನ ಜೊತೆಯಲ್ಲಿನ್ನು ಮಾತಾಡುವುದಿಲ್ಲ ನಾನು."

ಸತೀಶ್– "ಇಲ್ಲ, ಇಲ್ಲ, ಮಾಫ್‌ಮಾಡಿ ಬಿಡು. ನಾನು ಬಾಯಿ ಮುಚ್ಚಿಕೊಂಡು ಕೇಳುತ್ತೇನೆ, ಹೇಳು."

ನಳಿನಿ– "ನೋಡು, ಸತೀಶ್, ಮಿಸ್ಟರ್ ನಂದಿ ಏನೂ ತಿಳಿಯದವರ ಹಾಗೆ ನನಗೊಂದು ಬ್ರೇಸ್‌ಲೆಟ್ ಉಡುಗೊರೆಯಾಗಿ ಕಳಿಸಿದ್ದಾರೆ. ನೀನೂ ಅಷ್ಟೇ ಬುದ್ಧಿಹೀನನಾಗಿ ಅದಕ್ಕಿಂತ ಬೆಲೆಯಾದ ನೆಕ್‌ಲೇಸ್ ಕಳಿಸಿದ್ದು ಯಾಕೆ ಅಂತ?"

ಸತೀಶ್– "ಯಾವ ಅವಸ್ಥೆಯಲ್ಲಿ ಜನರಿಗೆ ವಿವೇಚನಾಶಕ್ತಿಯಿರೋದಿಲ್ಲವೊ ಆ ಅವಸ್ಥೆ ನಿನ್ನ ಬಗ್ಗೆ ಇಲ್ಲದಿರುವುದೇ ನಿನಗೆ ಕೋಪ ಅಲ್ಲವೇ, ನೆಲ್ಲಿ?"

ನಳಿನಿ– "ಅದೆಲ್ಲ ವ್ಯಾಖ್ಯಾನ ಕೇಳಲಿಕ್ಕೆ ಇಷ್ಟವಿಲ್ಲ ನನಗೆ. ಆದರೆ ಈ ನೆಕ್‌ಲೇಸನ್ನ ನೀನು ವಾಪಸ್ಸು ತೆಗೆದುಕೊಳ್ಳಲೇಬೇಕು."

ಸತೀಶ್– "ವಾಪಸ್ಸು ಕೊಡುತ್ತೀಯಾ?"

ನಳಿನಿ– "ಹೂಂ, ಕೊಡುತ್ತೇನೆ. ದೊಡ್ಡಸ್ತಿಕೆ ತೋರಿಸುವುದಕ್ಕೆ ಕೊಟ್ಟ ಉಡುಗೊರೆಗೆ ನಾನು ಬೆಲೆಯೇ ಕೊಡುವುದಿಲ್ಲ."

ಸತೀಶ್– "ನೀನು ಅನ್ಯಾಯ ಮಾಡುತಾಯಿದ್ದೀಯ, ನೆಲ್ಲಿ."

ನಳಿನಿ– "ಅನ್ಯಾಯವೂ ಇಲ್ಲ, ಗಿನ್ಯಾಯವೂ ಇಲ್ಲ. ನೀನು ನನಗೊಂದು ಹೂ ಮಾತ್ರ ಕೊಟ್ಟಿದ್ದರೆ ನನಗೆಷ್ಟೋ ಖುಷಿಯಾಗುತ್ತಿತ್ತು. ನಾನು ನೋಡುತಾಯಿದ್ದೇನೆ, ನೀನು ಸಮಯ ಬಂದಾಗೆಲ್ಲ ಬಹಳ ಸಲ ನನಗೇನಾದರೊಂದು ಬೆಲೆಯಾದ ಸಾಮಾನನ್ನ ಕಳಿಸೋಕೆ ಶುರುಮಾಡಿದ್ದೀಯ. ನೀನು ಏನಾದರೂ

ಅಂದುಕೊಂಡೀಯೇನೋ ಎಂದುಬಿಟ್ಟು ನಾನು ಏನೂ ಹೇಳದೆ ಸುಮ್ಮನಿದ್ದೆ. ಆದರೆ ಕ್ರಮೇಣ ಜಾಸ್ತಿಯಾಗುತಾಯಿದೆ, ಇನ್ನು ನಾನು ಸುಮ್ಮನಿದ್ದರೆ ಸರಿಯಾಗಿರುವುದಿಲ್ಲ. ಇಕೋ ತಗೋ ನಿನ್ನ ನೆಕ್‌ಲೇಸು."

ಸತೀಶ್– "ಈ ನೆಕ್‌ಲೇಸನ್ನ ನೀನು ರಸ್ತೆಯಲ್ಲಿ ಬಿಸಾಟರೂ ಪರವಾಯಿಲ್ಲ. ಆದರೆ ಏನು ಮಾಡಿದರೂ ನಾನು ತೆಗೆದುಕೊಳ್ಳುವುದಿಲ್ಲ."

ನಳಿನಿ– "ಒಳ್ಳೇದು ಸತೀಶ್, ನಾನು ನಿನ್ನನ್ನ ಚಿಕ್ಕ ವಯಸ್ಸಿಂದಲೂ ಬಲ್ಲೆ. ನನ್ನ ಹತ್ತಿರ ನೀನು ಮುಚ್ಚುಮರೆ ಮಾಡಬೇಡ. ಸತ್ಯವಾಗಿ ಹೇಳು. ನೀನು ಬಹಳ ಸಾಲ ಮಾಡಿದ್ದೀಯಲ್ಲವೆ?"

ಸತೀಶ– "ಯಾರು ಹೇಳಿದರು ನಿನಗೆ– ನರೇನ ಅಂತ ಕಾಣತ್ತೆ."

ನಳಿನಿ– "ಯಾರೂ ಹೇಳಲಿಲ್ಲ. ನಾನು ನಿನ್ನ ಮುಖ ನೋಡಿದ ತತ್‌ಕ್ಷಣ ತಿಳಿದುಕೊಳ್ಳಬಲ್ಲೆ. ನನ್ನ ಸಲುವಾಗಿ ನೀನು ಯಾಕೆ ಈ ಅನ್ಯಾಯ ಮಾಡಿದ್ದು?"

ಸತೀಶ– "ಕೆಲವು ವಿಶೇಷ ಸಮಯಗಳಲ್ಲಿ ವಿಶೇಷ ವ್ಯಕ್ತಿಗಳಿಗಾಗಿ ಮನುಷ್ಯರು ಜೀವ ಕೂಡ ಕೊಡಲು ತಯಾರಾಗಿರುತ್ತಾರೆ. ಈಗಿನ ದಿನಗಳಲ್ಲಿ ಹಾಗೆ ಜೀವ ಕೊಡಬೇಕಾದ ಅವಕಾಶ ಅಷ್ಟು ಸುಲಭವಾಗಿ ಸಿಗುವುದಿಲ್ಲ. ಕಡೆಗೆ ಸಾಲ ಮಾಡಬೇಕಾದ ಸಂಕಟವನ್ನಾದರೂ ಪಟ್ಟು ಆ ಮೂಲಕ ಆತ್ಮ ತೃಪ್ತಿಯನ್ನ ಅನುಭವಿಸುವುದನ್ನೂ ಯಾಕೆ ತಪ್ಪಿಸುವುದಕ್ಕೆ ಹೋಗುತ್ತೀಯ, ನೆಲ್ಲಿ? ನನಗೆ ಯಾವುದು ದುಸ್ಸಾಧ್ಯವೆನ್ನಿಸುತ್ತೋ ಅದನ್ನ ನಾನು ನಿನಗಾಗಿ ಮಾಡಲಿಷ್ಟ, ನೆಲ್ಲಿ. ಅದನ್ನೂ ನೀನು ನಂದೀಸಾಹೇಬರ ನಕಲು ಅಂದುಬಿಟ್ಟರೆ ಎಷ್ಟು ನೋವಾಗುತ್ತೆ ಗೊತ್ತಾ?"

"ಒಳ್ಳೇದು, ನೀನು ಏನು ಮಾಡಬೇಕು ಅಂತ ಇದ್ದೆಯೋ ಅದನ್ನ ಹೇಗೊ ಮಾಡಿಬಿಟ್ಟಿದ್ದೀಯ. ನಿನ್ನ ಆ ತ್ಯಾಗದ ಸ್ವೀಕಾರ ಕೂಡ ಮಾಡಿದೆ. ಈಗ ಈ ಒಡವೆಯನ್ನು ವಾಪಸ್ಸು ತೆಗೆದುಕೋ."

"ಅದನ್ನ ನೀನು ನನಗೆ ವಾಪಸ್ಸು ಕೊಡಲೇಬೇಕಿದ್ದರೆ ಆ ನೆಕ್‌ಲೇಸನ್ನೇ ಕತ್ತಿಗೆ ಉರಲು ಹಾಕಿಕೊಂಡು ಸಾಯವುದು ಲೇಸು ನನಗೆ."

"ಸಾಲ ಹೇಗೆ ತೀರಿಸುತ್ತಿ ಹೇಳು."

"ಅಮ್ಮನ ಹತ್ತಿರ ದುಡ್ಡು ಕೇಳಿ ತೆಗೆದುಕೊಳ್ಳುತ್ತೇನೆ."

"ಛೆ ಛೆ? ಅವರೇನು ಅಂದುಕೊಳ್ಳುತ್ತಾರೆ ಗೊತ್ತೆ...ನನಗಾಗಿ ಮಗ ಸಾಲ ಮಾಡಿದಾನೆ ಅಂತ."

"ಹಾಗೆಂದಿಗೂ ಅಂದುಕೊಳ್ಳುವುದಿಲ್ಲ ಅಮ್ಮ. ಅಮ್ಮನಿಗೆ ಮಗನ ಸ್ವಭಾವ ಚೆನ್ನಾಗಿ ಗೊತ್ತು."

"ಒಳ್ಳೇದು ಹಾಗಿದ್ದರೆ. ಈಗ ಹೇಗಾದರೂ ಆಗಿಹೋಯಿತಲ್ಲ. ಇನ್ನು ಮೇಲಾದರೂ ನನಗೆ ಅಷ್ಟು ಬೆಲೆಯಾದ ಸಾಮಾನು ಕೊಡುವುದಿಲ್ಲ ಅಂತ ಮಾತುಕೊಡು, ಮತ್ತೆ ಹೆಚ್ಚೆಂದರೆ ಒಂದು ಹೂವಿನ ತೋಡಾ ಹೊರತಾಗಿ ಬೇರೇನೂ ಕೊಡುವುದಿಲ್ಲ ಅಂತ."

"ಸರಿ. ಮಾತು ಕೊಟ್ಟೆ."

"ಹೋಗಲಿ, ಬಿಡು. ಈಗ ಸದ್ಯಕ್ಕೆ ಸ್ತೋತ್ರ ಮಾಡುವುದರಲ್ಲಿ ಗುರು ನಂದೀಬಾಬುಗಳು ಕಲಿಸಿಕೊಟ್ಟ ವಿದ್ಯೆ ಎಷ್ಟರಮಟ್ಟಿಗೆ ಮುಂದುವರಿದಿದೆ. ಕೇಳೋಣ. ನನ್ನ ಕಿವಿಯ love well ಲೋಲಾಕ ಹೇಗಿದೆ. ವರ್ಣನೆಮಾಡು ನೋಡೋಣ. ನಿನಗೆ ಐದು ನಿಮಿಷ ಟೈಂ ಕೊಟ್ಟಿದ್ದೇನೆ."

ಸತೀಶ್– "ಹೇಗಿದೆಯಾ? ನಾನು ಅದನ್ನೇನಾದರೂ ವರ್ಣನೆ ಮಾಡಿದಲ್ಲಿ ಲೋಲಾಕು ಕೂಡ ನಾಚಿ ಕೆಂಪಡರಬೇಕಾಗುತ್ತದೆ."

ನಳಿನಿ– "ಭೇಷ್, ಭೇಷ್, ಭೂಮಿಕೆ ಪರವಾಯಿಲ್ಲ. ಇವತ್ತಿಗೆ ಇಷ್ಟು ಸಾಕು ಬಿಡು, ಉಳಿದದ್ದನ್ನು ಇನ್ನೊಂದು ದಿವಸ ಕೇಳೋಣ. ಈಗಾಗಲೇ ಕಿವಿ ಅದುರಲಿಕ್ಕೆ ಶುರುವಾಗಿದೆ."

೬

ವಿಧು– "ನನ್ನ ಮೇಲೆ ಕೋಪಿಸಿ, ಬೇಕಾದರೆ, ಮಗುವಿನ ಮೇಲೆ ಸುಮ್ಮಸುಮ್ಮನೆ ರೇಗಬೇಡಿ. ನಿಮ್ಮ ಕಾಲಿಗೆ ಬಿದ್ದೇನು, ಈ ಸಲ ಒಂದು ಸಲ, ಅವನು ಮಾಡಿದ ಸಾಲ ತೀರಿಸಿಬಿಡಿ."

ಮನ್ಮಥ– "ನಾನು ಯಾರ ಮೇಲೂ ರೇಗುತಾಯಿಲ್ಲ. ನಿನ್ನ ಕರ್ತವ್ಯವನ್ನ ನಾನು ಮಾಡಬೇಕಾಗಿದೆ. ನಾನು ಸತೀಶನಿಗೆ ಎಷ್ಟು ಸಲ ಹೇಳಿದ್ದೇನೆ, ಸಾಲ ಮಾಡಿದರೆ ತೀರಿಸುವ ಭಾರ ನನ್ನದಲ್ಲ ಅಂತ. ಈಗ ಆ ತೀರ್ಮಾನ ಬದಲಾಯಿಸುವ ಆವಶ್ಯಕತೆ ಕಾಣಲಿಲ್ಲ."

ವಿಧು– "ಅಯ್ಯೋ, ಬಿಡಿ ಬಿಡಿ ಅಂದರೆ ಇಷ್ಟು ಧರ್ಮರಾಯನ ಹಾಗೆ ಹಠ ಹಿಡಿದರೆ ಸಂಸಾರ ನಡೆಯುವುದು ಹೇಗೆ? ಸತೀಶನಿಗೀಗ ವಯಸ್ಸು ಬಂದಿದೆ. ಅವನನ್ನು ಸಾಕಬೇಕೋ ಬೇಡವೋ...ಅದಕ್ಕೆ ಸ್ವಲ್ಪ ಸಾಲವಾದರೂ ತೀರಿಸಲೇ ಬೇಕಾಗತ್ತೆ...ಅವನು ಯಾರು–ಹೊಟ್ಟೆಮಗ ತಾನೆ?"

ಮನ್ಮಥ– "ಹೊಟ್ಟೆ ಮಗನೇ ಸರಿ...ಹೊಟ್ಟೆ ಮಗನಿಗೆ ಎಷ್ಟಾಗಬೇಕೋ ಅದಕ್ಕಿಂತಲೂ ಹೆಚ್ಚಾಗಿ ಖರ್ಚುಮಾಡಲಿಕ್ಕೆ ಯಾರ ಕೈಯಲ್ಲೂ ಸಾಧ್ಯವಿಲ್ಲ– ಫಕೀರನಿಗೂ ಇಲ್ಲ, ಬಾದಷಹನಿಗೂ ಇಲ್ಲ."

ವಿಧು– "ಹಾಗಾದರೆ ಹುಡುಗ ಜೈಲಿಗೆ ಹೋಗಬೇಕೇನು?"

ಮನ್ಮಥ– "ಜೈಲಿಗೆ ಹೋಗುವ ಏರ್ಪಾಡನ್ನ ಅವನು ಮಾಡಿದರೆ, ನೀವೆಲ್ಲಾ ಅದಕ್ಕೆ ತಕ್ಕ ಕುಮ್ಮಕ್ಕು, ಬಂದೋಬಸ್ತು ಮಾಡಿಕೊಟ್ಟರೆ ತಡೆಯುವುದಕ್ಕೆ ನಾನು ಯಾರು?"

[ಮನ್ಮಥನ ನಿಷ್ಕ್ರಮಣ. ಶಶಧರನ ಪ್ರವೇಶ.]

ಶಶಧರ– "ನನ್ನನ್ನ ಈ ಮನೆಯಲ್ಲಿ ಕಂಡರೆ ಮನ್ಮಥ ಭಯಪಡುತ್ತಾನೆ. ಕರಿಯ ಕುಡುತಾ ಅವನಿಗೆ ಹೊಲಿಸುವುದಕ್ಕೆ ಅವನ ಮೈಯಳತೆ ತೆಗೆದುಕೊಂಡು ಹೋಗಲು ಟೇಪು ಕೈಲಿ ಹಿಡಿದುಕೊಂಡು ಬಂದಿದ್ದೇನೆ ಅಂದುಕೊಳ್ಳುತ್ತಾನೆ. ಅದಕ್ಕೇ ಈಚೆಗೆ ಕೆಲವು ದಿನಗಳಿಂದ ಬರಲಿಲ್ಲ. ಇವತ್ತು ನಿನ್ನ ಕಾಗದ ತಲಪಿ ನಿನ್ನಕ್ಕ ಅತ್ತು, ರಗಳೆಮಾಡಿ ನನ್ನನ್ನಿಲ್ಲಿಗೆ ಕಳಿಸಿದಳು. ಏನು ಸಂಗತಿ?"

ವಿಧು– "ಅಕ್ಕ ಬರಲಿಲ್ಲವಾ?"

ಶಶ– "ಅವಳು ಇಷ್ಟರಲ್ಲೇ ಬರುತಾಳೆ. ಏನು ಗಲಾಟೆ?"

ವಿಧು– "ಎಲ್ಲಾ ನಿಮಗೇ ಗೊತ್ತಿದೆ. ಈಗ ಮಗನನ್ನ ಜೈಲಿಗೆ ಕಳಿಸದೆ ಹೋದರೆ ಅವರ ಮನಸ್ಸಿಗೆ ತೃಪ್ತಿಯಿಲ್ಲ ಅಂತ ಕಾಣತ್ತೆ. ರ್‍ಯಾಂಕಿನ್– ಹಾರಮನ್ಸ್ ಷಾಪಿನ ಪೋಷಾಕು ಅವರಿಗೆ ಇಷ್ಟವಿಲ್ಲ ಅಂತ ಕಾಣತ್ತೆ. ಜೈಲಿನ ಉಡುಪೇ ಅವರ ಅಭಿರುಚಿಯ ಪ್ರಕಾರ ಮಗನಿಗೆ ಸರಿಯಾಗಿ ಒಪ್ಪತ್ತೆ."

ಶಶಧರ– "ನೀನೇನೇ ಹೇಳು, ನಿನ್ನ ಗಂಡನ ಮನಸ್ಸನ್ನ ಬದಲಾಯಿಸುವುದು ನನ್ನ ಕೈಲಾಗುವುದಿಲ್ಲ. ಅವನ ಮಾತು ನನಗೆ ತಿಳಿಯುವುದಿಲ್ಲ, ನನ್ನ ಮಾತು ಅವನಿಗೆ ತಿಳಿಯುವುದಿಲ್ಲ. ಕಡೆಗೆ–"

ವಿಧು– "ಅದೆಲ್ಲಾ ನನಗೆ ಗೊತ್ತಿಲ್ಲ...ನೀವೇನೂ ಅವರ ಹೆಂಡತಿಯಲ್ಲ, ತಲೆ ಬಗ್ಗಿಸಿಕೊಂಡು ಕೇಳುತಾ ಇರೋದಕ್ಕೆ. ಆದರೆ ಈಗ ಈ ವಿಪತ್ತಿನಿಂದ ಹೇಗೆ ಪಾರುಮಾಡೋದು ಹೇಳಿ?"

ಶಶಧರ– "ನಿನ್ನ ಕೈಯಲ್ಲೇನಾದರೂ...ಸ್ವಲ್ಪ?"

ವಿಧು– "ಏನೂ ಇಲ್ಲ. ಸತೀಶನ ಸಾಲ ತೀರಿಸೋದಕ್ಕೆ ನನ್ನ ಮೈ ಮೇಲಿದ್ದ ನಗ, ನತ್ತು ಎಲ್ಲಾ ಅಡವಿಟ್ಟಾಯಿತು. ಇಗೋ ತಾಳಿ, ಈ ಕೈ ಮೇಲಿರೋ ಎರಡು ಬಳೆ ಇವೆ ಇನ್ನೂ. ಅದನ್ನೂ ಬೇಕಾದರೆ–"

[ಸತೀಶನ ಪ್ರವೇಶ]

ಶಶಧರ– "ಏನೋ ಸತೀಶ, ಖರ್ಚುಮಾಡುವಾಗ ಸ್ವಲ್ಪ ವಿವೇಚನೆ ಇರಬೇಡವೇನಯ್ಯಾ? ಈಗೆಂತಹ ಕಷ್ಟಕ್ಕೆ ಬಿದ್ದಿದ್ದೀಯಾ, ನೋಡು."

ಸತೀಶ- "ಕಷ್ಟವೇನು ಗೊತ್ತಾಗಲಿಲ್ಲ ನನಗೆ."

ಶಶಧರ- "ಹಾಗಾದರೆ ಕೈಯಲ್ಲೇನಾದರೂ ಇಟ್ಟುಕೊಂಡಿದ್ದೀಯಾ, ಏನು ಕಥೆ? ಎಲ್ಲಾ ಖರ್ಚು ಮಾಡಿಬಿಟ್ಟಿಲ್ಲವಲ್ಲ?"

ಸತೀಶ- "ಇದೆ ಸ್ವಲ್ಪ ಇನ್ನೂ...."

ಶಶಧರ- "ಎಷ್ಟು?"

ಸತೀಶ- "ಅಫೀಮು ಕೊಂಡುಕೊಳ್ಳಬಹುದು."

ವಿಧು (ಗಟ್ಟಿಯಾಗಿ ಅಳುತ್ತ)- "ಸತೀಶಾ, ಇದೇನು ಮಾತಾಡುತಾ ಇದ್ದೀಯೋ ಬಾಯಿಗೆ ಬಂದ ಹಾಗೆ? ನಾನದೆಷ್ಟು ಸಂಕಟ ಅನುಭವಿಸಿದ್ದೇನೆ. ನನ್ನನ್ನಿನ್ನು ಹೊಟ್ಟೆ ಉರಿಸಬೇಡ, ದಮ್ಮಯ್ಯ"

ಶಶಧರ- "ಛೆ ಛೆ! ಸತೀಶ... ಏನು ಮಾತಿದು? ಇಂಥ ಯೋಚನೆ ಮನಸ್ಸಲ್ಲಿ ಬಂದರೂ ಹೆತ್ತ ತಾಯಿ ಮುಂದೆ ಹೇಳಬಹುದೇ ಅದನ್ನ? ಬಹಳ ಅನ್ಯಾಯ, ಬಹಳ ಅನ್ಯಾಯ."

[ಸುಕುಮಾರಿಯ ಪ್ರವೇಶ]

ವಿಧು- "ಅಕ್ಕಾ, ನಮ್ಮ ಸತೀಶನ್ನ ಕಾಪಾಡು ಹೇಗಾದರೂ ಮಾಡಿ. ಅವನು ಯಾವತ್ತು ಏನು ಮಾಡಿಬಿಡುತಾನೋ ಅಂತ ಹೆದರಿಕೆಯಾಗುತ್ತಾಯಿದೆ ನನಗೆ. ಅವನು ಮಾತಾಡೋದನ್ನ ಕೇಳಿ ನನ್ನ ಮೈ ಇನ್ನೂ ನಡುಗುತ್ತಾಯಿದೆ."

ಸುಕು- "ಏನು, ಏನಂದ ಅವನು?"

ವಿಧು- "ಅಫೀಮು ತರುತಾನಂತೆ ಹೋಗಿ- ಕೇಳು ಮತ್ತೆ."

ಸುಕು- "ಏನು ವಿಪತ್ತಮ್ಮಾ ಹಾಳು! ಸತೀಶಾ ನನ್ನ ಮೈ ಮುಟ್ಟಿ ಹೇಳು, ಆಣೆ ಇಡು, ಇನ್ನು ಮೇಲೆ ಇಂಥಾ ಮಾತಾಡೋದಿಲ್ಲ ಅಂತ ಹೇಳೀಗಲೆ. ಸುಮ್ಮನೆ ಯಾಕೆ ನಿಂತಿ? ನನ್ನ ಮುದ್ದು ಕಂದ, ನನ್ನ ಚಿನ್ನ, ನಿನ್ನ ತಾಯಿ-ದೊಡ್ಡಮ್ಮನ ವಿಷಯ ಯೋಚನೆ ಮಾಡು."

ಸತೀಶ- "ಜೈಲಿನಲ್ಲಿ ಕೂತು ಯೋಚನೆ ಮಾಡುವುದಕ್ಕಿಂತ ಈ ನಗೆಪಾಟಲು ನಾಟಕವನ್ನು ಜೈಲಿನ ಹೊರಗಡೆಯೇ ಮುಗಿಸಿಬಿಟ್ಟು ಹಾಯಾಗಿರುವುದೊಳ್ಳೆಯದು."

ಸುಕು- "ನಾವೆಲ್ಲಾ ಇರುವಾಗ ನಿನ್ನ ಜೈಲಿನಲ್ಲಿ ಹಾಕುವುದಕ್ಕೆ ಧೈರ್ಯ ಯಾರಿಗಿದೆ."

ಸತೀಶ- "ಕೋರ್ಟಿನ ಪ್ಯಾದೆಗಿದೆ."

ಸುಕುಮಾರಿ- "ಸರಿ, ಹಾಗಾದರೆ, ನೋಡೋಣ, ಆ ಪ್ಯಾದೆಗೆಷ್ಟು ಸಾಮರ್ಥ್ಯವೋ! ಏನೊಂದರೆ ಆ ಹಾಳು ದುಡ್ಡು ಎಷ್ಟಾಗತ್ತೋ ಬಿಸಾಡಬಾರದೆ ಅತ್ತಲಾಗೆ? ಆ ಕಂದನ ಸಂಕಟ ಎಷ್ಟು ಅಂತ ನೋಡುತಾಯಿರೋದು?"

ಶಶಧರ– "ದುಡ್ಡು ಬಿಸಾಡಿಬಿಡಬಹುದು. ಆದರೆ ನಿನ್ನ ಮೈದುನ ನನ್ನ ತಲೆ ಮೇಲೆ ಇಟ್ಟಿಗೆ ಬಿಸಾಡತಾನೇನೋ ಎನ್ನುವ ದಿಗಿಲು."

ಸತೀಶ– "ದೊಡ್ಡಪ್ಪಾ, ಆ ಇಟ್ಟಿಗೆ ನಿಮ್ಮ ತಲೆಯವರೆಗೂ ಬರುವುದಿಲ್ಲ. ಅದಕ್ಕೆ ಮೊದಲೇ ನನ್ನ ಕುತ್ತಿಗೆಗೆ ಬಂದು ಬೀಳತ್ತೆ. ಈ ಕಡೆ ಪರೀಕ್ಷೆಯಲ್ಲೂ ಫೈಲು. ಅದರ ಮೇಲೆ ಈ ಸಾಲ. ಸಾಲದ್ದಕ್ಕೆ ಜೈಲಿಗೆ ಹೋಗಬೇಕಾದ ಇಷ್ಟು ದೊಡ್ಡ ಸುಯೋಗವನ್ನ ನಷ್ಟಮಾಡಿದ್ದಕ್ಕೆ ಅಪ್ಪ ನನ್ನನ್ನ ಸುಮ್ಮನೆ ಬಿಡುತಾನೇನು?"

ವಿಧು– "ಹೌದು, ಅಕ್ಕ! ಸತೀಶನೇನಾದರೂ ಅವರ ದೊಡ್ಡಪ್ಪನ ಹಣ ತೆಗೆದುಕೊಂಡ ಅಂತ ತಿಳಿದರೆ ಅವರು ಅವನನ್ನ ಮನೆಯಲ್ಲಿ ಇರಿಸಿಕೊಳ್ಳೋದಿಲ್ಲ."

ಸುಕು– "ಇರಿಸಿಕೊಳ್ಳದೆ ಇದ್ದರೆ ಏನು ಮಾಡುತ್ತಾರೆ? ಮನೆ ಬಿಟ್ಟು ಓಡಿಸುತ್ತಾರೆಯೆ? ಓಡಿಸಲಿ ಬಿಡು. ಅವನಿಗೇನು ಬೇರೆ ಮನೆಯಿಲ್ಲವೆ? ಲೇ, ವಿಧು, ಸತೀಶನನ್ನಾಕೆ ನೀನು ನಮ್ಮ ಸುಪರ್ದಿಗೇ ಕೊಟ್ಟುಬಿಡಬಾರದು? ನಮಗೆ ಬೇರೆ ಮಕ್ಕಳೆಲ್ಲಿವೆ? ನಾನೇ ಅವನನ್ನು ಸಾಕಿ ದೊಡ್ಡವನನ್ನಾಗಿ ಮಾಡುತ್ತೇನೆ. ಏನಂತೀರೀಂದರೆ? ಮಾತಾಡಿ."

ಶಶಧರ– "ಅದೇನೋ ಭೇಷಾದ ಉಪಾಯವೇ...ಆದರೆ ಸತೀಶನು ಹುಲಿಯ ಸಂತಾನ, ಅವನನ್ನು ಕಸಿದುಕೊಂಡು ಹೋದರೆ ಹುಲಿಯ ಬಾಯಿಂದ ನಮ್ಮನ್ನ ಕಾಪಾಡುವವರು ಯಾರೇ?"

ಸುಕು– "ಆ ಯೋಚನೆ ಬಿಡಿ. ನಿಮ್ಮ ಆ ಹುಲಿರಾಯರು ಮಗನನ್ನ ಜೈಲಿಗೆ ಕಳಿಸಲಿಕ್ಕೆ ಕೋರ್ಟಿನ ಪ್ಯಾದೆ ಕೈಯಲೊಪ್ಪಿಸುವುದಕ್ಕೆ ತಯಾರು ಮಾಡಿಕೊಳ್ಳುತಾಯಿದ್ದಾರೆ. ನಾವು ಅವನನ್ನು ಬಚಾಯಿಸಿ ಕರೆದುಕೊಂಡ ಹೋದರೆ ಅವರು ಯಾವ ಬಾಯಿಂದ ಬೇಡ ಅಂತಾರೆ?"

ಶಶಧರ– "ಹುಲಿಯ ರಾಣಿ ಏನಂತಾಳೆ? ಮಗ?"

ಸುಕು– "ಏನಂತಾರೆ ನನ್ನನ್ನ ಕೇಳಿ, ನನ್ಗಗೊತ್ತು. ಅವರನ್ನ ಇನ್ನು ಕೇಳಬೇಕಾಗಿಲ್ಲ. ಈಗ ಸದ್ಯಕ್ಕೆ ಸಾಲ ತೀರಿಸಿಬಿಡಿ. ಅದರ ಕಥೆ ಇಲ್ಲೇ ಮುಗಿದುಹೋಗಲಿ."

ವಿಧು– "ಅಕ್ಕಾ!"

ಸುಕು– "ಇನ್ನು ಅಕ್ಕಾ, ಗಿಕ್ಕಾ ಅಂತ ಕೂತು ಅಳುವುದಕ್ಕೆ ಶುರುಮಾಡಬೇಡ. ನಡಿ, ನಿನ್ನ ತಲೆ ಬಾಚಿ ಹೆರಳು ಹಾಕುತ್ತೇನೆ ನಡಿ. ಕೂದಲೆಲ್ಲ ಹಾಗೆ ಕೆದರಿಕೊಂಡು ನಿಮ್ಮ ಭಾವನ ಮುಂದೆ ನಿಂತುಕೊಳ್ಳಲಿಕ್ಕೆ ನಾಚುಗೆ ಆಗೋದಿಲ್ಲವೇನೆ?"

[ಶಶಧರನ ಹೊರತಾಗಿ ಬೇರೆಲ್ಲರ ನಿಷ್ಕ್ರಮಣ. ಮನ್ಮಥನ ಪ್ರವೇಶ]

ಶಶಧರ– "ಮನ್ಮಥಾ, ಸ್ವಲ್ಪ ಯೋಚಿಸಿ ನೋಡಣ್ಣ, ನೀನು ಸ್ವಲ್ಪ ವಿವೇಚನೆ ಮಾಡಿ ನೋಡಿದರೆ?"

ಮನ್ಮಥ– "ವಿವೇಚನೆಯಿಲ್ಲದೆ ನಾನೇನನ್ನೂ ಮಾಡುವುದಿಲ್ಲ."

ಶಶಿಧರ– "ಹಾಗಾದರೆ ಸಂತೋಷ, ವಿವೇಚನೆ ಇನ್ನೂ ಸ್ವಲ್ಪ ಚೆನ್ನಾಗಿ ಮಾಡು. ಮಗನನ್ನ ಸೀದಾ ಜೈಲಿಗೆ ಕಳಿಸುವುದಕ್ಕೆ ತಯಾರಿದ್ದೀಯಾ? ಅದರಿಂದ ಅವನಿಗೆ ಒಳ್ಳೇದಾದೀತೆ?"

ಮನ್ಮಥ– "ಒಳ್ಳೇದು, ಕೆಟ್ಟದ್ದು– ಯಾವುದಾದೀತು ಅಂತ ಯಾರೂ ಕಡೆಯವರೆಗೆ ಯೋಚಿಸುತ್ತಾ ಇರುವುದಕ್ಕಾಗದು. ನನಗೆ ಸುಮಾರಾಗಿ ಇಷ್ಟು ಗೊತ್ತು. ಬಾರಿ ಬಾರಿಗೂ ಎಚ್ಚರಿಕೆ ಕೊಟ್ಟಮೇಲೂ ಯಾರು ತಪ್ಪು ಮಾಡುತ್ತಾರೋ ಅಂಥವರನ್ನ ಅವರ ಫಲಭೋಗದಿಂದ ಕೃತ್ರಿಮ ಉಪಾಯದಿಂದ ಕಾಪಾಡಲಿಕ್ಕೆ ಹೋಗುವುದು ಯೋಗ್ಯವಲ್ಲ. ನಾವು ನಡುವೆ ತಲೆ ಹಾಕಿ ಹಾಳುಮಾಡದೆ ಹೋಗಿದ್ದಿದ್ದರೆ ಪ್ರಕೃತಿಯ ಉಗ್ರ ಶಿಕ್ಷೆಯಿಂದ ಮನುಷ್ಯ ನಿಜವಾದ ಮನುಷ್ಯನಾಗುತಾಯಿದ್ದ."

ಶಶಧರ– "ಪ್ರಕೃತಿಯ ಉಗ್ರ ಶಿಕ್ಷೆಯೇ ಏಕಮಾತ್ರ ಶಿಕ್ಷೆಯಾಗಿದ್ದಿದ್ದರೆ ಬ್ರಹ್ಮ-ತಂದೆತಾಯಿಯ ಎದೆಯಲ್ಲಿ ಸ್ನೇಹದ ಕುಡಿ ಚಿಗುರಿಸುತ್ತಾಯಿರಲಿಲ್ಲ. ಮನ್ಮಥ, ನೀನು ಹಗಲು, ರಾತ್ರಿ ಕರ್ಮಫಲ, ಕರ್ಮಫಲ ಎಂದುಕೊಂಡು ಸೌಟಲ್ಲಿ, ಬಾಣಲೆಯಲ್ಲಿ ತೆಗೆದು ತೆಗೆದು ಶೇಖರಿಸುತ್ತಾಯಿರಬೇಕೆಂದಿದ್ದೀಯಲ್ಲಾ, ಆದರೆ ಪ್ರಕೃತಿಯ ಮೇಲೆ ಯಾರು ಒಡೆತನ ಮಾಡುತಾಯಿದಾನೋ ಅವನು ನಡುವೆ ತಲೆ ಹಾಕಿ ಆ ಕರ್ಮಫಲದಲ್ಲೆಷ್ಟನ್ನೋ ಮಹಾ ಕೂಪದಲ್ಲಿ ಎಸೆಯುತ್ತಾಯಿರುತ್ತಾನೆ. ಇಲ್ಲದೆ ಹೋದರೆ ಕರ್ಮಫಲದ ಋಣ ತೀರಿಸುತ್ತ ತೀರಿಸುತ್ತ ನಮ್ಮಗಳ ಅಸ್ತಿತ್ವ ಕೂಡ ಸಮೆದು ಹೋಗುತಾಯಿತ್ತು. ವಿಜ್ಞಾನದ ದೃಷ್ಟಿಯಲ್ಲಿ ಕರ್ಮಫಲ ಸತ್ಯವಿರಬಹುದು. ಆದರೆ ವಿಜ್ಞಾನದ ಮೇಲೆ ಕೂಡ ಇನ್ನೊಂದು ವಿಜ್ಞಾನವಿದೆ. ಅದರ ಸೀಮೆಯಲ್ಲಿ ಪ್ರೇಮದ ಲೆಕ್ಕಾಚಾರದ ಪ್ರಕಾರ ಫಲಾಫಲಗಳು ಬೇರೆ ವಿಧ. ಕರ್ಮಫಲವೇನೋ ನೈಸರ್ಗಿಕ, ನಿಜ. ಆದರೆ ಕ್ಷಮೆ ಎನ್ನುವುದು ಅದರ ಮೇಲಿನ ಪ್ರಾಂತದ್ದು."

ಮನ್ಮಥ– "ಯಾರು ನಿಸರ್ಗವನ್ನ ಲೆಕ್ಕಿಸುವುದಿಲ್ಲವೋ ಅವರು ಖುಷಿ ಬಂದ ಹಾಗೆ ಮಾಡಬಹುದು. ನಾನು ಅತಿ ಸಾಮಾನ್ಯ ನೈಸರ್ಗಿಕ ಮನುಷ್ಯ. ನಾನಂತೂ ಕರ್ಮಫಲವನ್ನ ಕಡೆಯವರೆಗೂ ನಂಬುತ್ತೇನೆ."

ಶಶಧರ– "ಒಳ್ಳೇದು, ನಾನೊಂದು ಪಕ್ಷ ಸತೀಶನ ಸಾಲವನ್ನ ತೀರಿಸಿ ಅವನನ್ನ ಜೈಲಿನಿಂದ ತಪ್ಪಿಸಿದರೆ ನೀನೇನಂತಿ?"

ಮನ್ಮಥ– "ನಾನವನನ್ನ ಪೂರ್ತಿ ಕೈ ಬಿಟ್ಟುಬಿಡುತ್ತೇನೆ. ನೋಡು, ಸತೀಶನನ್ನು ನಾನು ಯಾವ ರೀತಿ ದೊಡ್ಡವನಾಗಿ, ಯೋಗ್ಯನಾದ ಮನುಷ್ಯನಾಗಿ ಮಾಡಬೇಕು ಅಂತಿದ್ದೇನೋ, ಮೊದಲಿಂದಲೂ ನೀವುಗಳು ತಲೆಹಾಕಿ, ನನಗೆ ಅಡ್ಡಿ ಬಂದು ಅದನ್ನೆಲ್ಲಾ ವ್ಯರ್ಥಮಾಡಿದಿರಿ. ಒಂದು ಕಡೆಯಿಂದ ಶಿಸ್ತು, ಕಟ್ಟುನಿಟ್ಟು– ಇನ್ನೊಂದು ಕಡೆಯಿಂದ ಅತಿ ಸಲಿಗೆ, ಅತಿ ಮುಚ್ಚಟೆ ಪಡೆದು ಅವನು ಪೂರ್ತಿಯಾಗಿ ಕೆಟ್ಟು ಹೋಗಿದ್ದಾನೆ. ಕ್ರಮವಾಗಿ ಶಿಕ್ಷಣ ಪಡೆಯದೆ ಅವನ ಸನ್ಮಾನ, ಅವನ ಜವಾಬುದಾರಿಯನ್ನು ಅವನು ಅರಿತುಕೊಳ್ಳದೆ ಹಾಳಾಗಿ ಹೋಗುತಿರುವಾಗ, ಅವನು ಮಾಡಿದ ಅವಿವೇಕಕ್ಕೆ ತಕ್ಕ ಫಲ ಅನುಭವಿಸಿ ಕಡೆಗಾದರೂ ಅವನಿಗೆ ಸರಿಯಾದ ಬುದ್ಧಿ ಬರುವ ಅವಕಾಶವನ್ನು ನೀವು ತಪ್ಪಿಸುತಾಯಿರಬೇಕಾದರೆ, ನಾನವನ ಆಸೆ ಪೂರ್ತಿಯಾಗಿ ಬಿಟ್ಟುಬಿಟ್ಟೆ. ನಿಮ್ಮಗಳ ಹಾಗೆಯೇ ಅವನನ್ನ ತಯಾರುಮಾಡಿ, ಅಗತ್ಯವಾಗಿ ಎರಡು ದೋಣಿಗಳಲ್ಲಿ ಕಾಲಿಟ್ಟು ಮುಂದೆ ಹೋಗುವುದಕ್ಕೆ ಹೋಗಿ ಪೂರ್ತಿ ಮುಳುಗಿಬಿಟ್ಟಾನು ಆಮೇಲೆ."

ಶಶಧರ– "ಏನು ಮಾತಾಡುತಾಯಿದ್ದೀಯ, ಮನ್ಮಥ, ಅವನು ನಿನ್ನ ಮಗ."

ಮನ್ಮಥ– "ನೋಡು, ಶಶಧರ, ನನ್ನ ಪ್ರಕೃತಿ, ನಂಬಿಕೆಗಳ ಪ್ರಕಾರ ನನ್ನ ಮಗನನ್ನ ಬೆಳೆಸಬಲ್ಲೆ. ಬೇರೆ ಯಾವ ಉಪಾಯವೂ ನನಗೆ ಗೊತ್ತಿಲ್ಲ. ಯಾವಾಗ ನನಗೆ ಖಂಡಿತವಾಯಿತು, ಅದು ಸಾಧ್ಯವಾಗುವುದಿಲ್ಲ ಅಂತ, ಆಗ ತಂದೆಯ ಜವಾಬುದಾರಿಯನ್ನ ನಾನಿನ್ನು ಹೊರಲಾರೆ. ನನ್ನ ಕೈಲಿ ಎಷ್ಟು ಸಾಧ್ಯವೋ ಅದಕ್ಕಿಂತ ಹೆಚ್ಚಾಗಿ ಮಾಡಲಾರೆ." (ಮನ್ಮಥನ ನಿಷ್ಕ್ರಮಣ.)

ಶಶಧರ– "ಏನು ಮಾಡುವುದೀಗ? ಹುಡುಗನನ್ನಂತೂ ಜೈಲಿಗೆ ಕಳಿಸುವುದಕ್ಕಾಗದು. ತಪ್ಪುಮಾಡುವುದು ಮನುಷ್ಯನಿಗೆ ಎಷ್ಟೇ ಕೆಡುಕಾದರೂ, ಜೈಲಿನ ವಾಸ ಅದಕ್ಕಿಂತಲೂ ಭಯಂಕರ...!"

೧೦

[ಭಾದುಡಿ ಸಾಹೇಬರ ಮನೆ]

ಭಾದುಡೀ ಪತ್ನಿ– "ಕೇಳಿದಿರಾ, ಸತೀಶನ ತಂದೆ ಹಠಾತ್ತಾಗಿ ಸತ್ತುಹೋದರಂತಲ್ಲಾ?"

ಮಿಸ್ಟರ್ ಭಾದುಡಿ– "ಹೂಂ, ಹಾಗಂತ ಕೇಳಿದೆ."

"ಅವರ ಆಸ್ತಿಯನ್ನೆಲ್ಲಾ ಆಸ್ಪತ್ರೆಗೆ ಕೊಟ್ಟು ಹೋಗಿದ್ದಾರಂತೆ. ಸತೀಶನ ತಾಯಿಯ ಸಲುವಾಗಿ ಮಾತ್ರ ಜೀವಿಸಿರುವವರೆಗೂ ೭೫ ರೂ. ಮಾಸಾಶನ ಬಿಟ್ಟುಹೋಗಿದ್ದಾರೆ. ಈಗೇನು ಮಾಡುವುದು?"

"ಇಷ್ಟೆಲ್ಲಾ ಚಿಂತೆ ಯಾಕೀಗ?"

"ಒಳ್ಳೇ ಚೆನ್ನಾಗಿ ಹೇಳುತೀರಿ ನೀವೂನು. ನಿಮ್ಮ ಮಗಳು ಸತೀಶನ ಮೇಲೆ ಮನಸ್ಸಿಟ್ಟಾಗಿದೆ. ಅದನ್ನ ತಿಳಿದೂ, ನೀವು ಎರಡು ಕಣ್ಣು ತೆರೆದಿಟ್ಟುಕೊಂಡೂ ನಿಮಗೆ ಏನೂ ಕಾಣ್ಸೋದಿಲ್ಲವೆ? ನೀವಿದಕ್ಕೆ ಮೊದಲೇ ಅವರಿಬ್ಬರ ಮದುವೆಗೆ ತಯಾರುಮಾಡುವುದರಲ್ಲಿದ್ದಿರಿ? ಈಗೇನು ಮಾಡುವುದು?"

"ಮಾಡೋದೇನು? ನಾನೇನು ಮನ್ಮಥಬಾಬುವಿನ ಹಣದ ಮೇಲೆ ವಿಶೇಷವಾಗಿ ನಂಬಿರಲಿಲ್ಲ."

"ಹಾಗಾದರೆ ಹುಡುಗನ ಮುದ್ದು ಮುಖ ನೋಡಿ ನಂಬಿಕೊಂಡಿದ್ದಿರೇನು. ಪೂರ್ತಿಯಾಗಿ? ಊಟ, ಉಡಿಗೆ ಹಾಗಾದರೆ ಏನು ಆವಶ್ಯಕವಿಲ್ಲೇನು?"

"ಆಹಾ, ಪೂರ್ತಿಯಾಗಿ ಆವಶ್ಯಕ. ಯಾರು ಏನು ಹೇಳಲಿ, ಅದಕ್ಕಿಂತಲೂ ಹೆಚ್ಚು ಆವಶ್ಯಕವಾದದ್ದು ಬೇರೇನೂ ಇಲ್ಲ. ಸತೀಶನಿಗೊಬ್ಬ ದೊಡ್ಡಪ್ಪನಿದಾನೆ. ಬಹುಶಃ ನಿನಗೆ ಗೊತ್ತಿರಬಹುದು."

"ದೊಡ್ಡಪ್ಪ ಅಂತ ಎಷ್ಟೋ ಜನಕ್ಕಿರುತ್ತಾರೆ. ಅದರಿಂದ ಹೊಟ್ಟೆ ತುಂಬುತ್ತೇನು?"

"ಈ ದೊಡ್ಡಪ್ಪ ನನ್ನ ಕಕ್ಷಿಗಾರ, ಅಗಾಧ ಹಣ– ಮಕ್ಕಳು ಮರಿಯಿಲ್ಲ. ವಯಸ್ಸೂ ಅಷ್ಟು ಚಿಕ್ಕದೇನಲ್ಲ. ಆತ ಸತೀಶನನ್ನ ದತ್ತು ಮಗನಾಗಿ ತೆಗೆದುಕೊಳ್ಳಬೇಕೆಂದಿದ್ದಾರೆ."

"ಆ ದೊಡ್ಡಪ್ಪ ಹಾಗಾದರೆ ಒಳ್ಳೆಯವರು. ಹಾಗಾದರೆ ಏಕೆ ಮಾಡಿಲ್ಲ ಹಾಗೆ? ನೀವು ಸ್ವಲ್ಪ ಅವಸರ ಮಾಡೋಕಾಗದೆ?"

"ನಾನೇನೂ ಅವಸರ ಮಾಡಬೇಕಿಲ್ಲ ಕಣೆ. ಅವರ ಮನೆಯಲ್ಲಿ ಅವಸರ ಮಾಡುವಂಥ ಮನುಷ್ಯರಿದ್ದೇ ಇದ್ದಾರೆ. ಎಲ್ಲಾ ಬಹುಶಃ ನಿಷ್ಕರ್ಷೆಯಾಗಿದೆ. ಈಗ ಕೇವಲ ಕಾನೂನಿನ ತೊಡಕೊಂದು ಎದ್ದಿದೆ. ಒಬ್ಬನೇ ಮಗನಾಗಿರುವವನನ್ನ ದತ್ತು ತೆಗೆದುಕೊಳ್ಳಬಹುದೇ ಎಂತ! ಅಲ್ಲದೆ ಸತೀಶನಿಗೆ ವಯಸ್ಸು ಬೇರೆ ಆಗಿದೆ."

"ಕಾನೂನೆಲ್ಲಾ ನಿಮ್ಮ ಕೈಯಲ್ಲಿದೆ. ನೀವು ಕಣ್ಣು ಮುಚ್ಚಿಕೊಂಡು ಯಾವುದಾದರೊಂದು ಅಡ್ಡದಾರಿ ತೋರಿಸಿಕೊಟ್ಟರೆ ಆಯಿತು."

"ಹೆದರಬೇಡ...ದತ್ತು ಮಗನಾಗಿ ಅಲ್ಲದೆ ಹೋದರೂ ಬೇರೆ ದಾರಿಯಿದೆ."

"ಸದ್ಯ ಬದುಕಿಸಿದಿರಿ. ನಾನು ಹೆದರಿದ್ದೆ ಸಂಬಂಧವೆಲ್ಲಿ ಮುರಿದು ಹೋದೀತೋ ಅಂತ. ಅಲ್ಲದೆ ನಮ್ಮ ನೆಲ್ಲಿಯಂಥ ಹಠದ ಹುಡುಗಿ ಏನಾದರೂ ದುಡುಕಿನ ಕೆಲಸ ಮಾಡಿಬಿಟ್ಟಾಳು ಅಂತ. ಆದರೆ ಹಾಗೆಂದುಬಿಟ್ಟು ಗತಿಯಿಲ್ಲದವನ ಕೈಯಲ್ಲಿ ಮಗಳನ್ನ ಕೊಡುವುದಕ್ಕಾಗುತ್ತೆಯೆ, ಹೇಳಿ. ಇಕೋ ನೋಡಿ, ನಿಮ್ಮ ಮಗಳು ಅತ್ತು ಅತ್ತು ಕಣ್ಣು ಊದಿಕೊಂಡಿರೋದು. ನಿನ್ನೆ ಊಟಕ್ಕೆ ಕೂತಿದ್ದಾಗಲೇ ಸತೀಶನ ತಂದೆ ತೀರಿಕೊಂಡ ಸುದ್ದಿ ಕೇಳಿದಳು. ಹಾಗಿಂದ ಹಾಗೇ ಊಟ ಬಿಟ್ಟು ಎದ್ದು ಹೊರಟು ಹೋದಳು."

"ಆದರೆ ನೆಲ್ಲಿ ಸತೀಶನ ಮೇಲೆ ಮನಸಿಟ್ಟಿದ್ದಾಳೆ ಅಂತ ನೋಡಿದರೆ ತಿಳಿಯೋದಿಲ್ಲವಲ್ಲ! ಅವಳು ಸದಾ ಸತೀಶನನ್ನ ಗೇಲಿ ಮಾಡುತ್ತಾ ಪೀಡಿಸುತ್ತಿರುತ್ತಾಳೆ.... ನನಗೆ ಅನ್ನಿಸಿದ ಹಾಗೆ ಅವಳಿಗೆ ಮಿಸ್ಟರ್ ನಂದಿಯನ್ನ ಕಂಡರೆ ತುಂಬಾ ಮೆಚ್ಚುಗೆ."

"ನಿಮ್ಮ ಮಗಳ ಸ್ವಭಾವವೇ ವಿಚಿತ್ರ ಅವಳು ಯಾರ ಮೇಲೆ ಮನಸ್ಸಿಟ್ಟಿದ್ದಾಳೋ ಅವನನ್ನೇ ಪೀಡಿಸುತ್ತಾಳೆ. ನೋಡಿದ್ದೀರಲ್ಲ...ಬೆಕ್ಕಿನ ಮರಿಯನ್ನ ಎಷ್ಟು ಪ್ರಾಣಿಹಿಂಸೆ ಮಾಡುತಾಳೆ. ಆದರೆ ಅದನ್ನ ಒಂದು ಕ್ಷಣ ಹೊರಗೆ ಬಿಡಲಾರಳು."

[ನಳಿನಿಯ ಪ್ರವೇಶ]

ನಳಿನಿ– "ಅಮ್ಮಾ, ಒಂದು ಸಲ ಸತೀಶಬಾಬು ಮನೆಗೆ ಹೋಗಬಾರದೆ? ಅವರ ತಾಯಿ ಎಷ್ಟು ಕಂಗೆಟ್ಟಿರುತ್ತಾರೋ. ಅಪ್ಪಾ, ನಾನೊಂದು ಸಲ ಹೋಗಿ ಆಕೆಯನ್ನು ನೋಡಿಕೊಂಡು ಬರುತ್ತೇನೆ."

೧೧

ಸತೀಶ– "ಅಮ್ಮಾ, ಇಲ್ಲಿ ನಾನೆಷ್ಟು ಸುಖದಿಂದ ಇದ್ದೇನೆ ಅನ್ನುವುದನ್ನ ನನ್ನ ಬಟ್ಟೆ, ಬರೆ ನೋಡಿದರೆ ತಿಳಿಯತ್ತೆ ನಿನಗೆ. ಆದರೆ ದೊಡ್ಡಪ್ಪ ನನ್ನನ್ನ ದತ್ತು ಮಗನಾಗಿ ತೆಗೆದುಕೊಳ್ಳುವವರೆಗೆ ನನ್ನ ಮನಸ್ಸು ನೆಮ್ಮದಿಯಿರುವುದಿಲ್ಲ. ನಿನಗೆ ಬರುವ ಮಾಸಾಶನದಲ್ಲಿ ನನಗೇನೂ ಸಹಾಯವಾಗುವುದಿಲ್ಲ. ಬಹಳ ದಿನಗಳಿಂದ 'ಇಗೊ ಇವತ್ತು...ಇಕೋ ನಾಳೆ' ಅಂತ ದಿನ ತಳ್ಳಿ ಹಾಕುತ್ತಾಯಿದ್ದಾರೆ. ಬಹುಶಃ ಅವರಿಗೆ ತಮಗೆ ಇನ್ನುಮೇಲಾದರೂ ಮಗ ಹುಟ್ಟಬಹುದು ಎಂಬ ಆಸೆ ಇನ್ನೂ ಇದ್ದ ಹಾಗೆ ತೋರುತ್ತೆ."

ವಿಧು– (ಹತಾಶ ಭಾವದಿಂದ) "ಆ ಆಸೆ ಸಫಲವಾಗೋ ಹಾಗಿದೆಯೋ, ಸತೀಶ."

"ಆಂ! ಏನಂದೆಯಮ್ಮಾ?"

"ಲಕ್ಷಣಗಳನ್ನ ನೋಡಿದರೆ ಹಾಗೇ ಅನ್ನಿಸತ್ತೆ ಕಣೋ."

"ಅಂಥ ಲಕ್ಷಣಗಳು ಎಷ್ಟೋ ಸಲ ತಪ್ಪಾಗುತ್ತವಲ್ಲ?"

"ಇಲ್ಲ, ತಪ್ಪಲ್ಲ, ಈಸಲ ನಿನಗೊಬ್ಬ ತಮ್ಮ ಹುಟ್ಟುತ್ತಾನೆ."

"ಏನಮ್ಮಾ ಹೀಗೆ ಹೇಳುತ್ತಾಯಿದ್ದೀಯ, ನನಗೇನೂ ತೋಚದು. ತಮ್ಮ ನಾಗುತಾನೆ ಅಂತ ಯಾರು ಹೇಳಿದರು? ತಂಗಿಯಾಗಲಿಕ್ಕೆ ಸಾಧ್ಯವೇ ಇಲ್ಲವೇನು ಹಾಗಾದರೆ?"

"ಇಲ್ಲ ಕಣೋ, ಅಕ್ಕನ ಲಕ್ಷಣಗಳನ್ನ ಕಂಡರೆ ಖಂಡಿತ ಮಗಳಲ್ಲ, ಮಗ ಆಗುವ ಹಾಗಿದೆ. ಅಲ್ಲದೆ ಮಗನಾದರೇನು, ಮಗಳಾದರೇನು, ನಮ್ಮ ಪಕ್ಷಕ್ಕೆ ಎಲ್ಲ ಒಂದೇ."

"ಇಷ್ಟು ವಯಸ್ಸಾದ ಮೇಲೆ ಮೊದಲನೇ ಮಗ, ಯಾರಿಗೆ ಗೊತ್ತು, ನಡುವೆ ಏನಾದರೂ ವಿಘ್ನವಾದರೂ ಆಗಬಹುದು."

"ಸತೀಶ, ನೀನು ಯಾವುದಾದರೂ ಕೆಲಸಕ್ಕೆ ಪ್ರಯತ್ನ ಮಾಡು."

"ಸಾಧ್ಯವೇ ಇಲ್ಲ. ಫೈಲಾದವನಿಗೆ ಕೆಲಸ ಯಾರು ಕೊಡುತ್ತಾರೆ, ಅಲ್ಲದೆ ಕೆಲಸಮಾಡುವ ಅಭ್ಯಾಸ ನನಗೆ ಪೂರ್ತಿಯಾಗಿ ಹೊರಟುಹೋಗಿದೆ. ಆದರೆ, ನೀನು ಏನೇ ಅನ್ನಮ್ಮ, ಇದು ಬಹಳ ಅನ್ಯಾಯ. ನಾನು ಸರಿಯಾಗಿದ್ದಿದ್ದರೆ ಅಪ್ಪನ ಆಸ್ತಿ ಸಿಗುತಾಯಿತ್ತು ನನಗೆ. ಈಗ ಅದನ್ನ ಕಳೆದುಕೊಂಡೆ. ಸಾಲದೆ ಈ ಕಡೆ ಇಲ್ಲಿ ಹೀಗೆ."

"ಅನ್ಯಾಯವಲ್ಲದೆ ಏನೋ ಸತೀಶ್! ಈ ಕಡೆ ನಿನ್ನನ್ನ ಕರೆಸಿಟ್ಟುಕೊಂಡಿದ್ದಾರೆ. ಇನ್ನೊಂದು ಕಡೆ ಡಾಕ್ಟರನ್ನು ಕರೆಸಿ ಔಷಧಿಗಳನ್ನು ಕುಡಿಸೋದಾಗುತಾಯಿದೆ. ಸ್ವಂತ ತಂಗಿಯ ಮಗನ ವಿಷಯದಲ್ಲಿ ಇದೆಂತಹ ಆಚರಣೆ. ಕಡೆಗೆ ದಯಾಳ್ ಡಾಕ್ಟರ ಔಷಧಿ ಫಲ ಕೊಟ್ಟೇ ಕೊಟ್ಟಿತು. ಆದರೆ ನೀನು ಕಂಗೆಡಬೇಡ, ಸತೀಶ, ಒಂದೇ ಮನಸ್ಸಿನಿಂದ ದೇವರನ್ನು ನೆನೆ. ಅವನ ಮುಂದೆ ಯಾವ ಡಾಕ್ಟರನ ಕೈಯೂ ಕಿಸಿಯೋದಿಲ್ಲ, ಅವನೇನಾದರೂ–"

"ಆಹಾ– ಅವನೇನಾದರೂ ಒಂದು ಪಕ್ಷ ಇನ್ನೂ– ಈಗಲೂ ಸಮಯ ಇದೆ. ಇವರ ಬಗ್ಗೆ ನಮಗೆ ಕೃತಜ್ಞತೆಯಿರಬೇಕಾದ್ದು ಉಚಿತ. ಆದರೆ ಈಗಾಗತಾಯಿರುವ ಅನ್ಯಾಯ ನೋಡಿದರೆ ಆ ಭಾರ ಕಾಪಾಡುವುದು ಕಠಿಣವಾಗಿ ಕಾಣುತ್ತೆ, ಅಲ್ಲವೆ? ದೇವರ ಬಳಿ ಇವರಿಗೇನಾದರೂ ಕೆಟ್ಟದ್ದು ಬಯಸದೆ ವಿಧಿಯಿಲ್ಲ... ಅವನೇನಾದರೂ ದಯೆ ತೋರಿದರೆ..."

"ಆಹಾ...ಹಾಗೇ ಆಗಲಿ...ಇಲ್ಲವಾದರೆ ನಿನಗೆ ಬೇರೆ ದಾರಿಯೇನೋ ಸತೀಶ? ನನಗೆ ಅದೇ ಯೋಚನೆ...ಹೇ, ಭಗವಂತ ನಮ್ಮಪ್ಪ, ನೀನೇ ಗತಿ."

"ಛೆ...ಹಾಗೆಲ್ಲಾ ಅನ್ನಬಾರದು, ಸುಮ್ಮನಿರು. ಅವನು ದಯಾಮಯ. ಅವನ ದಯೆ ಇದ್ದರೆ ಏನು ತಾನೇ ಅಸಾಧ್ಯ? ಸತೀಶ, ನೀನಿಷ್ಟು ಶಿಸ್ತಾಗಿ ಬಟ್ಟೆ ಹಾಕಿಕೊಂಡು ಎಲ್ಲಿಗೆ ಹೊರಟಿದ್ದೀಯ? ಅಷ್ಟು ಮೇಲಕ್ಕೆ ಕಾಲರ್ ತೊಟ್ಟು ನಿನ್ನ ತಲೆ ಆಕಾಶಕ್ಕೆ ಹೋಗಿದೆಯಲ್ಲೋ. ಕತ್ತು ಬಾಗಿಸುವುದು ಹೇಗೆ, ಹೇಳು."

"ಏನಿಲ್ಲಮ್ಮ, ಹೀಗೆ ಮೇಲಕ್ಕೆ ಕಾಲರ್ ತೊಟ್ಟು ಎಷ್ಟು ಕಾಲ ಸಾಧ್ಯವೋ ಅಷ್ಟು ಕಾಲ ತಲೆ ಎತ್ತಿಕೊಂಡು ತಿರುಗುವುದು. ಆಮೇಲಂತೂ ಇದ್ದೇ ಇದೆ, ಕತ್ತು ಬಗ್ಗಿಸಿಕೊಂಡು ತಿರುಗುವ ಕಾಲ ಬಂದಾಗ ಇದನ್ನ ಒಗೆದುಬಿಟ್ಟರಾಯಿತು. ಹೆಚ್ಚು ಕೆಲಸವಿದೆಯಮ್ಮಾ, ಆಮೇಲೆ ಬಂದು ಮಾತಾಡುತ್ತೀನಿ."

[ನಿಷ್ಕ್ರಮಣ]

ವಿಧು– "ಕೆಲಸ ಎಲ್ಲಿದೆ ನನಗೆ ಗೊತ್ತು ಬಿಡು. ಅಯ್ಯಮ್ಮ, ನಮ್ಮ ಹುಡುಗನಿಗೆ ಸ್ವಲ್ಪವೂ ತಡ ಆಗಕೂಡದು. ದೇವರ ದಯದಿಂದ ಈ ಮದುವೆಯೊಂದು ಆಗಿ ಹೋದರೆ! ಆಗತ್ತೆ ನನಗೆ ಗೊತ್ತು. ನಮ್ಮ ಸತೀಶನ ಅದೃಷ್ಟ ಒಳ್ಳೆಯದೇ. ಮೊದಲಲ್ಲಿ ವಿಘ್ನಗಳು ಬಂದರೂ ಕಡೆಗೆಲ್ಲಾ ಒಳ್ಳೇಯದೇ ಆಗತ್ತೆ. ನಾನು ಆಗಲಿಂದ ನೋಡುತ್ತಾ ಬಂದಿದ್ದೇನೆ. ಯಾಕಾಗುವುದಿಲ್ಲ. ನಾನಂತೂ ತಿಳಿದ ಹಾಗೆ ಯಾವ ಪಾಪವೂ ಮಾಡಿಲ್ಲ. ಹದಿನಾರಾಣೆ ಪತಿವ್ರತೆಯಾಗಿದ್ದೆ, ಆದ್ದರಿಂದಲೇ ನನಗೆ ಚೆನ್ನಾಗಿ ನಂಬಿಕೆಯಿದೆ– ಅಕ್ಕನಿಗೆ ಈ ಸಲ–

೧೨

"ಲೋ, ಸತೀಶ"

"ಏನು ದೊಡ್ಡಮ್ಮಾ?"

"ನಿನ್ನೆ ನಿನಗೆ ನಮ್ಮ ಕೂಸಿಗಾಗಿ ಬಟ್ಟೆ ತೆಗೆದುಕೊಂಡು ಬಾ ಅಂತ ಹೇಳಿದೆನಲ್ಲ, ಅಷ್ಟು ಸಲ. ತರೋದಕ್ಕೆ ನಿನಗೆ ಅವಮಾನವಾಯಿತೇನೋ!"

"ಅವಮಾನವೆಂಥಾದ್ದು, ದೊಡ್ಡಮ್ಮ! ನಿನ್ನೆ ಭಾದುಡೀ ಸಾಹೇಬರ ಮನೆಯಲ್ಲಿ ನನಗೆ ಊಟಕ್ಕೆ ಕರೆದಿದ್ದರು. ಅದಕ್ಕೆ..."

"ಓಹೋ, ಹಾಗೋ...ಅಲ್ಲೋ ಭಾದುಡೀ ಸಾಹೇಬರ ಬಂಗಲೆಗೆ ನೀನು ಅಷ್ಟು ಸಲಿಗೆಯಿಂದ ಮೂರು ಹೊತ್ತು ಹೋಗಿ ಬರುವುದರ ಅಗತ್ಯವೇನು ಅಂತೀನಿ. ನನಗೆ ಬೇರೆ ಗೊತ್ತಿಲ್ಲ. ಅವರು ಅತಿ ದೊಡ್ಡ ಮನುಷ್ಯರು, ಸಾಹೇಬ ಜನ. ನಿನ್ನಂಥ ಅವಸ್ಥೆಯಲ್ಲಿರುವವನು ಅವರಂಥವರ ಸಂಗಡ ಹಾಗೆ ಮೇಲೆ ಮೇಲೆ ಬಿದ್ದುಕೊಂಡು ಹೋಗುವುದು ಒಪ್ಪುತ್ತೆಯೇ ಹೇಳು. ನಾನೂ ಕೇಳಿದೆ, ಈ ನಡುವೆ ಅವರಿಗೆ ನಿನ್ನ ಮೇಲೆ ಅಷ್ಟಾಗಿ ಸಲಿಗೆ ಇಲ್ಲ ಅಂತ. ಆದರೂ ಆ ನಿನ್ನ ಬಣ್ಣದ ಟೈ ಮೇಲೆ ಟೈ ಪಿನ್ ಬೇರೆ ಚುಚ್ಚಿಕೊಂಡು ವಿಲಾಯಿತಿ ಕಾಮಣ್ಣನ ಹಾಗೆ ಸಿಂಗಾರ ಮಾಡಿಕೊಂಡು ಅವರ ಮನೆಗೆ ಹೋಗಿ ಹಾಜರಾಗಬೇಕಾಗಿದೆಯೇ? ನಿನಗೇನು ಸ್ವಲ್ಪವಾದರೂ ಮರ್ಯಾದೆ, ನಾಚುಗೆ ಬೇಡವೇ? ಹ್ಯಾಗಿರತ್ತೇ ಹೇಳು. ಹಾಗಿದ್ದಿದ್ದರೆ ಇಷ್ಟು ದಿನಗಳಾದರೂ ಒಂದು ನೌಕರಿ, ಗಿವುಕರಿ ಹುಡುಕದೆ ಇಲ್ಲಿ ಹೀಗೆ ಬಿದ್ದುಕೊಂಡಿರುತ್ತಾಯಿದ್ದೆಯ? ಸಾಲದ್ದಕ್ಕೆ ಏನಾದರೊಂದು ಸಣ್ಣ ಕೆಲಸ ಮಾಡು ಅಂತ ಹೇಳಿಬಿಟ್ಟರೆ ಅದೆಷ್ಟು ಬಿಗುಮಾನ ನಿನಗೆ? ನಿನ್ನನ್ನ ಯಾರಾದರೂ ನಮ್ಮ ನೌಕರ ಅಂತ ಎಲ್ಲಿ ತಪ್ಪು ತಿಳಿದುಕೊಂಡಾರು ಎಂಬ ಭಯವೇನೋ! ಆದರೇನು....ನೌಕರನಾದರೂ ಏನು ಹೀನಾಯ ! ದುಡಿದು ತಿನ್ನುತ್ತಾನೆ–ಕೂತು ತಿನ್ನುವುದಿಲ್ಲ."

"ದೊಡ್ಡಮ್ಮ, ನಾನೂ ಹಾಗೆ ಮಾಡಬಹುದಾಗಿತ್ತು. ಆದರೆ ನೀನೇ ಅಲ್ಲವೆ ನನಗೆ–"

"ಹ್ಞಾ....ಏನಂದೆ? ಗೊತ್ತು ನನಗೆ, ಕಡೆಗೆ ನನ್ನ ಮೇಲೆ ತಪ್ಪು ಬೀಳುತ್ತೆ ಅಂತ. ಈಗ ತಿಳೀತು ನನಗೆ, ನಿಮ್ಮಪ್ಪ ನಿನ್ನನ್ನ ಸರಿಯಾಗಿ ಅರ್ಥ ಮಾಡಿಕೊಂಡಿದ್ದರು. ಅದಕ್ಕೇ ನಿನ್ನನ್ನ ಅಷ್ಟು ಕಟ್ಟುನಿಟ್ಟಲ್ಲಿ ಇಟ್ಟಿದ್ದರು. ನಾನೇನೋ ಪಾಪ, ಇನ್ನೂ ಸಣ್ಣ ಹುಡುಗ ಎಂದುಬಿಟ್ಟು ಕನಿಕರ ತೋರಿಸಿ ನಮ್ಮ ಮನೆಯಲ್ಲಿ ಸ್ಥಳ ಕೊಟ್ಟೆ. ಜೈಲಿನಿಂದ ಬಿಡಿಸಿದೆ. ಕಡೆಗೆ ನನ್ನದೇ ತಪ್ಪಾಗಿಹೋಯಿತು. ಇದಕ್ಕೇ ಹೇಳುವುದು ಕೃತಜ್ಞತೆ ಅಂತ. ಒಳ್ಳೇದು, ನನ್ನದೇ ತಪ್ಪಿರಲಿ. ಆದರೂ ಈಗ ಎಷ್ಟು ವರುಷಗಳಾಯಿತು. ನೀನು ನಮ್ಮ ಅನ್ನ ತಿಂದುಕೊಂಡಿದ್ದು...ಅಂಥಾದ್ದು, ಆವಶ್ಯಕ ಬಿದ್ದಾಗೆಲ್ಲ ಒಂದೆರಡು ಕೆಲಸ ಮನೆಗೋಸ್ಕರ ಮಾಡಿರಬಹುದು, ಯಾರೂ ಮಾಡದೇ ಇರೋ ಅಂಥದಲ್ಲ ಬಿಡು...ಅದು ನಿನಗೆ ಅಷ್ಟೊಂದು ಅವಮಾನ ಅನ್ನಿಸತ್ತೆ."

"ಇಲ್ಲ ದೊಡ್ಡಮ್ಮ...ಅವಮಾನ ಸ್ವಲ್ಪವೂ ಇಲ್ಲ. ಏನು ಮಾಡಬೇಕೀಗ ಹೇಳು...ನಾನೀಗಲೇ ಮಾಡುತ್ತೇನೆ."

"ಕೂಸಿಗೋಸ್ಕರ ಏಳೂವರೆ ಗಜ ರೇನ್‌ಬೊ ಸೀಲ್ಕ್‌ಬೇಕು; ಇನ್ನೊಂದು ಸೈಲರ್ ಸೂಟು–"

[ಸತೀಶನು ನಿಷ್ಕ್ರಮಿಸುತ್ತಿರುವಾಗ]

"ಕೇಳಿಲ್ಲಿ ಇನ್ನೂ....ಅವನ ಅಳತೆ ತಗೊಂಡು ಹೋಗು. ಅವನಿಗೆ ಷೂ ತರಬೇಕು."

[ಸತೀಶ ಹೊರಡಲುದ್ಯುಕ್ತನಾಗಿರುವನು]

"ಅಷ್ಟು ಅವಸರವೇಕೆ? ಎಲ್ಲ ಸರಿಯಾಗಿ ಕೇಳಿಬಿಟ್ಟು ಹೋಗು. ಇವತ್ತೂ ಬಹುಶಃ ನಿನಗೆ ಭಾದುಡೀ ಸಾಹೇಬರ ಮನೆಯಲ್ಲಿ ರೊಟ್ಟಿ, ಬಿಸ್ಕಟ್ ತಿನ್ನುವುದಕ್ಕೆ ಆತುರವೇನೋ...ನಮ್ಮ ಕೂಸಿನ ಸಲುವಾಗಿ ಸ್ಟ್ರಾ ಹ್ಯಾಟ್ ತಗೊಂಡು ಬಾ ಹಾಗೇ–ಹಾಗೆ ಒಂದು ಡಜ಼ನ್ ಕರವಸ್ತ್ರಗಳು ಕೂಡ."

[ಸತೀಶನ ನಿಷ್ಕ್ರಮಣ. ಸುಕುಮಾರಿ ಅವನನ್ನ ಪುನಃ ಕೂಗುವಳು]

"ಕೇಳೋ, ಕೇಳಿಲ್ಲಿ ಸತೀಶ. ಇನ್ನೊಂದು ಮಾತು ನಾನು ಕೇಳಿದೆ. ನೀನು ನಿಮ್ಮ ದೊಡ್ಡಪ್ಪನ ಹತ್ತಿರ ಹೊಸ ಸೂಟು ಕೊಳ್ಳಲಿಕ್ಕೆ ನನಗೆ ತಿಳಿಸದೆ ದುಡ್ಡು ಕೇಳಿ ತೆಗೆದುಕೊಂಡೆಯಂತೆ. ಸ್ವಂತ ಸಂಪಾದನೆ ಮಾಡೋ ಸಾಮರ್ಥ್ಯ ಬಂದಾಗ ನಿನ್ನ

ಖುಷಿ ಬಂದ ಹಾಗೆ ಸಾಹೇಬತನ ಮಾಡಿಕೊಂಡು ಮೆರೆಯುವಿಯಂತೆ. ಆದರೆ ಬೇರೆಯವರ ದುಡ್ಡಿನಲ್ಲಿ ಭಾದುಡೀ ಸಾಹೇಬರ ಪೈಪೋಟಿ ಮಾಡುವ ಸಲುವಾಗಿ ನಿಮ್ಮ ದೊಡ್ಡಪ್ಪನನ್ನ ದಿವಾಳಿ ಮಾಡಿಬಿಡಬೇಡ. ಆ ದುಡ್ಡನ್ನ ನನಗೆ ವಾಪಸ್ಸುಕೊಡು...ಈಚೆಗೆ ನಮಗೆ ಬಹಳ ಅನನುಕೂಲವಾಗಿದೆ ದುಡ್ಡಿಗೆ."

"ಸರಿ, ದೊಡ್ಡಮ್ಮ...ತಂದು ಕೊಡುತ್ತೇನೆ."

"ಸರಿ, ಇನ್ನು ನೀನು ಪೇಟೆಗೆ ಹೋಗು. ಆ ದುಡ್ಡಿನಲ್ಲೇ ಸಾಮಾನೆಲ್ಲ ಕೊಂಡುಕೊಂಡು ಬಾಕಿ ದುಡ್ಡನ್ನು ನನ್ನ ಕೈಲಿ ಕೊಡು. ಎಲ್ಲದಕ್ಕೂ ಲೆಕ್ಕ ಇಡೋದನ್ನ ಮರೆಯಬೇಡ."

[ಸತೀಶನು ಮತ್ತೆ ಹೊರಡಲನುವಾಗುತ್ತಾನೆ.]

"ಇಲ್ಲಿ ಕೇಳು ಸತೀಶ...ಈ ಒಂದಿಷ್ಟು ಸಾಮಾನುಗಳನ್ನ ಕೊಂಡು ತರುವಾಗ ಮತ್ತೆ ಒಂದೂವರೆ ರೂಪಾಯಿ ಗಾಡಿ ಬಾಡಿಗೆ ಮಾಡಿಕೊಂಡು ತಂದು ಬಿಡಬೇಡ ಮತ್ತೆ. ಅದಕ್ಕೇ ನಿನಗೆ ಏನು ಹೇಳೋದಕ್ಕೂ ಹೆದರಿಕೆ ನನಗೆ. ಕಾಲಲ್ಲಿ ನಡೆದುಕೊಂಡು ಹೋಗೋದಕ್ಕೆ ನಿನಗೇನೋ ಅಷ್ಟು ಉದಾಸೀನ? ಗಂಡಸಾದವನು ಇಷ್ಟು ನಾಜೋಕಾಗಿದ್ದರೆ ನಡೆಯತ್ತೇನೋ? ನಿಮ್ಮಪ್ಪ ನಿತ್ಯ ಬೆಳಗೆದ್ದು ಎರಡು ಮೈಲಿ ದೂರ ನಡೆದು ಪೇಟೆಗೆ ಹೋಗಿ ಮೀನು, ತರಕಾರಿ ತರತಾಯಿದ್ದರು ಗೊತ್ತೆ? ಜ್ಞಾಪಕ ಇದೆಯಾ? ಕೂಲಿಯವನಿಗೂ ಒಂದು ಬಿಡಿಕಾಸು ಖರ್ಚುಮಾಡುತಾಯಿರಲಿಲ್ಲ."

ಸತೀಶ– "ನಿಮ್ಮ ಉಪದೇಶ ಮನಸ್ಸಲ್ಲಿಟ್ಟುಕೊಳ್ಳುತ್ತೇನೆ, ದೊಡ್ಡಮ್ಮಾ. ನಾನೂ ಕೂಲಿಗೆ ದುಡ್ಡು ಕೊಡೋದಿಲ್ಲ, ಇವತ್ತಿನಿಂದ ನಿಮ್ಮ ಕೈಯಿಂದ ಗಾಡಿಬಾಡಿಗೆ, ಕೂಲಿ ಹಣ, ಆದಷ್ಟು ಕಡಮೆಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ."

೧೩

ಹರೇನ್– "ಅಣ್ಣಾ, ನೀನು ಯಾವಾಗಲೂ ಅದೇನೋ ಬರೀತಾನೇ ಇರುತೀಯಲ್ಲ. ಯಾರಿಗೆ ಬರೀತೀಯಾ ಹೇಳು ಮತ್ತೆ."

ಸತೀಶ– "ಹೋಗು ಹೋಗು, ನಿನಗೆ ಯಾಕೆ ಅದೆಲ್ಲಾ? ನೀನು ಹೋಗಿ ಆಡಿಕೋ."

ಹರೇನ್– "ಎಲ್ಲಿ ನೋಡೋಣ, ಏನು ಬರೀತೀಯೋ. ನನಗೀಗ ಓದಲಿಕ್ಕೆ ಬರತ್ತೆ."

ಸತೀಶ– "ಹರೇನ್, ನೀನು ನನಗೆ ಬೇಜಾರು ಮಾಡಬೇಡ, ಹೋಗು, ಹೇಳತೇನೆ."

ಹರೇನ್– "ಪಿ ದೀರ್ಘ ರವತ್ತು 'ಪ್ರೀ', 'ತ'ಗೆ ಗುಡಿಸು– ಪ್ರೀತಿ. ನೋಡಿದೆಯಾ ಓದಿಬಿಟ್ಟೆ. ಅಣ್ಣಾ, ಪ್ರೀತಿ ಯಾವುದಕ್ಕೆ ಅಣ್ಣಾ? ಚೇಪೆಕಾಯಿ ನಿನಗೆ ಪ್ರೀತಿಯಾ, ನನಗೆ ಪ್ರೀತಿ."

ಸತೀಶ– "ಆಹ್, ಹರೇನ್, ಯಾಕಿಷ್ಟು ಕೂಗುತೀಯೋ. ಪ್ರೀತಿ ವಿಷಯ ನಾನು ಬರೆದಿಲ್ಲ ಇಲ್ಲಿ."

ಹರೇನ್– "ಆಂ...ಸುಳ್ಳು ಹೇಳುತೀಯಾ? ನಾನೀಗ ಓದಿದೆ. ಪೀಗೆ 'ರ'ವತ್ತು 'ತ'ಗೆ ಗುಡಿಸು ಪ್ರೀತಿ ಅಲ್ಲವಾ? ಅಮ್ಮನ ಕರೀತೀನಿ ಮತ್ತೆ. ಅಮ್ಮನಿಗೆ ತೋರಿಸು."

ಸತೀಶ– "ಬೇಡ, ಬೇಡ. ಅಮ್ಮನ್ನ ಕರೆಯಬೇಕಾಗಿಲ್ಲ, ನೀನು ಒಳ್ಳೇ ಹುಡುಗ. ಈಗ ಆಡಿಕೋ ಹೋಗು. ನಾನಿದನ್ನ ಮುಗಿಸಿಬಿಡುತ್ತೇನೆ."

ಹರೇನ್– "ಇದೇನಣ್ಣ, ಹೂವಿನ ತೋಡಾ ಅಲ್ಲವಾ? ನಾನು ತಗೋತೀನಿ, ಆಂ?"

ಸತೀಶ– "ಲೋ, ಮುಟ್ಟಬೇಡ ಅದನ್ನ. ಮುಟ್ಟಬೇಡ ಅಂದರೆ ಕೇಳಬೇಕು, ಕಿತ್ತುಹೋದೀತು."

ಹರೇನ್– "ಇಲ್ಲಣ್ಣ, ನಾನು ಕೀಳೋದಿಲ್ಲ. ನನಗೆ ಕೊಡಣ್ಣ ಅದನ್ನ."

ಸತೀಶ– "ಇಲ್ಲ, ಚಿನ್ನಾ, ನಾಳೆ ನಿನಗೆ ಬೇಕಾದಷ್ಟು ತೋಡಾ ತಂದು ಕೊಡುತ್ತೇನೆ. ಅದನ್ನಲ್ಲೆ ಇಡು."

ಹರೇನ್– "ಅಣ್ಣಾ, ನನಗೆ ಇದೇ ಬೇಕು. ಇದೇ ಚೆನ್ನಾಗಿದೆ."

ಸತೀಶ– "ಬೇಡ, ಅದು ಬೇರೆಯವರಿಗೆ, ಅದನ್ನ ನೀನು ತಗೋಕೂಡದು."

ಹರೇನ್– "ಊಂ, ಎಲ್ಲಾ ಸುಳ್ಳು. ನಾನು ನಿನಗೆ ಪೆಪ್ಪರ್‌ಮೆಂಟ್ ತರಲಿಕ್ಕೆ ಹೇಳಿದ್ದೆ. ನೀನು ಆ ದುಡ್ಡಲ್ಲಿ ಹೂವಿನ ತೋಡಾ ತಂದಿದ್ದೀಯ, ಬೇರೆಯವರಿಗಂತೆ ಊಂ..."

ಸತೀಶ– "ಹರೇನ್, ನೀನು ಒಳ್ಳೆ ಹುಡುಗ, ಬಂಗಾರದಂಥ ಹುಡುಗ, ಜಾಣಮರಿ, ನೀನು ಸ್ವಲ್ಪಹೊತ್ತು ಸುಮ್ಮನಿರು. ಈ ಕಾಗದ ಒಂದು ಬರೆದು ಮುಗಿಸಿಬಿಡುತ್ತೇನೆ, ನಾಳೆ ನಿನಗೆ ಬೇಕಾದಷ್ಟು ಪೆಪ್ಪರ್‌ಮೆಂಟ್ ತಂದು ಕೊಡುತ್ತೇನೆ."

ಹರೇನ್– "ಹಾಗಾದರೆ ಏನು ಬರೀತೀಯಾ ತೋರಿಸು ಮತ್ತೆ."

ಸತೀಶ– "ಆಗಲಿ, ತೋರಿಸುತ್ತೇನೆ. ಮೊದಲು ಮುಗಿಸಿ ಬಿಡೋಣಂತೆ ಸುಮ್ಮನಿರು."

ಹರೇನ್– "ಹಾಗಾದರೆ ನಾನೂ ಬರೀತೀನಿ. (ಸ್ಲೇಟ್ ತೆಗೆದುಕೊಂಡು. ಗಟ್ಟಿಯಾಗಿ ಕೂಗುತ್ತ ಬರೆಯ ಹೋಗುವನು) ಪೀಗೆ 'ರ' ವತ್ತು 'ಪ್ರೀ... ತಗೆ ಗುಡಿಸು...ಪ್ರೀತಿ...ಪ್ರೀತಿ"

ಸತೀಶ– "ಸುಮ್ಮನಿರು, ಕೂಗಬೇಡ ಹಾಗೆ. ನಿಲ್ಲಿಸು, ನಿಲ್ಲಿಸೋ."

ಹರೇನ್– "ಹಾಗಾದರೆ ನನಗೆ ತೋಡಾ ಕೊಡು ಮತ್ತೆ."

ಸತೀಶ– "ಒಳ್ಳೇದು ತಗೋ ಹಾಗಾದರೆ. ಆದರೆ ಹುಷಾರ್, ಕೀಳಬೇಡ. ಏನು ಮಾಡಿದೆ, ಏನು ಮಾಡಿಬಿಟ್ಟೆ– ಬೇಡ ಅಂತ ಹೇಳಿದ್ದನ್ನೇ ಮಾಡಿದೆಯಲ್ಲ, ಪೀನಾಶಿ ಎಲ್ಲೋ– ಹೂವೆಲ್ಲ ಕಿತ್ತುಬಿಟ್ಟೆಯಲ್ಲೋ, ಎಂಥ ದುಷ್ಟ ಹುಡುಗನೋ ನೀನು? (ತೋಡಾ ಕಸಿದುಕೊಂಡು ಅವನ ಬೆನ್ನಮೇಲೊಂದು ಏಟು ಕೊಡುವನು) ಹಾಳಾದವನೆಲ್ಲೋ, ಹೋಗಾಚೆ ಹೋಗು ಹೇಳ್ತೇನೆ– (ಗಟ್ಟಿಯಾಗಿ ಅರಚುತ್ತಾ ಅಳುವನು. ಸತೀಶನು ಜೋರಾಗಿ ಹೆಜ್ಜೆಹಾಕುತ್ತ ಅಲ್ಲಿಂದ ನಿಷ್ಕ್ರಮಣ).

[ವಿಧುಮುಖಿಯ ಪ್ರವೇಶ]

ವಿಧು– "ಸತೀಶನೆಲ್ಲೋ ಹರೇನನ್ನ ಅಳಿಸಿಬಿಟ್ಟು ಹೋಗಿದಾನೆ. ಅಕ್ಕನಿಗೆ ತಿಳಿದರೆ ದೊಡ್ಡ ರಾಮಾಯಣವೇ ಮಾಡಿಬಿಡುತ್ತಾಳೆ. ಹರೇನ್, ಅಳಬೇಡಪ್ಪ, ಅಳಬೇಡಕಣೋ ನನ್ನಪ್ಪ, ನನ್ನ ಕಂದ, ನನ್ನ ಚಿನ್ನ ಅಳಬೇಡ."

ಹರೇನ್– (ಇನ್ನೂ ಗಟ್ಟಿಯಾಗಿ ಅಳುತ್ತ) "ಅಣ್ಣಾ ನನಗೆ ಹೊಡೆದು ಬಿಟ್ಟಾ ಆ ಆಂ!"

ವಿಧು– "ಹೋಗಲಿ ಬಿಡು, ಅಣ್ಣನಿಗೆ ಚೆನ್ನಾಗಿ ಹೊಡೆಯೋಣವಂತೆ ನೀನು ಸುಮ್ಮನಿರಪ್ಪ ಈಗ, ಅಳು ನಿಲ್ಲಿಸು."

ಹರೇನ್– "ಅಣ್ಣ, ಹೂವಿನ ತೋಡ ಕಿತ್ತುಕೊಂಡು ಹೋಗಿಬಿಟ್ಟಾ ಊಂ...ಊಂ..."

ವಿಧು– "ನಾನದನ್ನ ಈಗಲೇ ಅವನಿಂದ ಕಿತ್ತುಕೊಂಡು ಬಂದು ಕೊಡುತ್ತೇನೆ ನಿನಗೆ, ಅಳಬೇಡ ಸುಮ್ಮನಿರು. (ಹರೇನ್ ಇನ್ನೂ ಅಳುವನು) ಅಯ್ಯೋ, ಇನ್ನೂ ಜೋರಾಗಿ ಅಳಲಿಕ್ಕೆ ಶುರುಮಾಡಿದ. ಏನು ಮಾಡೋದಮ್ಮಾ ಈಗ–? ಈ ಅಕ್ಕ ಅಷ್ಟು ಮುದ್ದು ಮಾಡಿಬಿಟ್ಟಿದಾಳೆ. ಕೇಳಿದ್ದು ಕೊಟ್ಟು ಕೊಟ್ಟೂ ಈಗ ಹಿಡೀಲಿಕ್ಕೆ ಆಗೋದಿಲ್ಲ, ಇಷ್ಟು ಹಠಮಾರಿ ಚಂಡಿ ಹುಡುಗನ್ನ ನಾನೆಲ್ಲೂ ನೋಡಿಲ್ಲಮ್ಮ. ಮುದ್ದು ಮಾಡೋದರಲ್ಲೂ ಮಿತಿ ಬೇಡವೆ? ಅಂಗಡಿಗಳೆಲ್ಲಾ ಖಾಲಿಮಾಡಿ ಅವನಿಗಷ್ಟು ರಾಶಿ ಬಟ್ಟೆ ತಂದು ಹಾಕಿರೋದು ನೋಡಲಿಲ್ಲ, ಈ ರಾಜಕುಮಾರನಿಗೆ. ಛೇ, ಛೆ– ಮಕ್ಕಳು ಇನ್ನು ಯಾರಿಗೂ ಇಲ್ಲವೇ ಇಲ್ಲವೆ? ಹೆತ್ತ ಮಗನನ್ನ ಹೀಗೆ

ಹಾಳುಮಾಡೋದು ನಾನೆಲ್ಲೂ ಕಂಡಿಲ್ಲ. (ಗದರುತ್ತ) ಅಳಬೇಡ್ತೋ, ಹರೇನ್, ಮುಚ್ಚು ಬಾಯಿ. ಅಳಬೇಡ ಅಂದರೆ ಕೇಳಬೇಕು. ಇಕೋ ಗುಮ್ಮ ಬಂದ ನೋಡು."

[ಸುಕುಮಾರಿಯ ಪ್ರವೇಶ]

ಸುಕುಮಾರಿ– "ವಿಧೂ, ಏನೇ ಇದು, ಹೀಗೆ ಗುಮ್ಮಗಿಮ್ಮ ಅಂತ ಹೆದರಿಸೋದೇನೆ ಮಗೂನ? ಗುಮ್ಮ, ಭೂತದ ಭಯ ಹಿಡಿಸಕೂಡದು ಅಂತ ನಾನು ಆಳು, ಕಾಳುಗಳಿಗೂ ಎಚ್ಚರಿಕೆ ಕೊಟ್ಟಿದ್ದೇನೆ. ಅದು ಒಳ್ಳೇದಲ್ಲ. ಅವರ್‍ಯಾರೂ ಹಾಗೆ ಮಾಡೋದಿಲ್ಲ. ಅಂಥಾದ್ದು ನೀನು, ನನ್ನ ತಂಗಿಯಾಗಿ, ಅವನ ಚಿಕ್ಕಮ್ಮನಾಗಿ, ಇಂಥ ಉಪಕಾರ ಮಾಡುತಾಯಿದ್ದೀಯ. ಯಾಕೇ ವಿಧು? ನನ್ನ ಮಗ ನಿನ್ನ ಹತ್ತಿರ ಅಂಥದೇನು ತಪ್ಪು ಮಾಡಿದ್ದ ಅಂತ. ನಿನ್ನ ಕಣ್ಣುಗಳಿಗೆ ಅವನು ವಿಷವೇನೆ? ನನಗದೇ ಅನುಮಾನ. ನನಗೆ ಚೆನ್ನಾಗಿ ಗೊತ್ತಾಗಿದೆ, ಅವನಿರೋದು ನಿನಗೆ ಸಹಿಸೋದಿಲ್ಲ. ನಾನು ಈ ಕಡೆ ನಿನ್ನ ಮಗನನ್ನ ನನ್ನ ಹೆತ್ತ ಮಗನ ಹಾಗೇ ಮನೇಲಿಟ್ಟುಕೊಂಡು ಬೆಳೆಸಿದೆ. ಅದಕ್ಕೆ ಬಹುಶಃ ನೀನು ಸೇಡು ತೀರಿಸಿಕೊಳ್ಳೋಕೆ ಬಂದಿದ್ದೀಯ ಅಂತ ಕಾಣುತ್ತೆ.

ವಿಧು (ಅಳುತ್ತ)–"ಅಕ್ಕ, ಅಂಥ ಮಾತು ಹೇಳಬೇಡಕ್ಕ, ನನ್ನ ಕಣ್ಣಲ್ಲಿ ನನ್ನ ಸತೀಶ ಹೇಗೋ ನಿನ್ನ ಹರೇನನೂ ಹಾಗೇ."

ಹರೇನ್– "ಅಮ್ಮಾ, ಅಣ್ಣಾ ನನ್ನನ್ನು ಹೊಡೆದುಬಿಟ್ಟ ಅಮ್ಮಾ."

ವಿಧು– "ಛೆ, ಎಲ್ಲೋ ಹೊಡೆದ ಮಗು, ಸುಳ್ಳು ಹೇಳಬಾರದಪ್ಪಾ, ಅಣ್ಣ ಇಲ್ಲಿ ಇರಲೇ ಇಲ್ಲವಲ್ಲೋ ನಿನ್ನ ಹೊಡೆಯೋದಕ್ಕೆ?"

ಹರೇನ್– "ಊಂ...ಅಣ್ಣ ಇಲ್ಲೇ ಕೂತು ಯಾರಿಗೋ ಕಾಗದ ಬರೀತೀದ್ದ. ಅದರಲ್ಲಿ 'ಪಿ'ಗೆ ದೀರ್ಘ, 'ರ'ವತ್ತು, 'ತ'ಗೆ ಗುಡಿಸು 'ಪ್ರೀತಿ' ಅಂತ ನಾನು ಓದಿಬಿಟ್ಟೆ. ಅಮ್ಮಾ, ನೀನು ಅಣ್ಣನ ಹತ್ತಿರ ನನಗೆ ಪೆಪ್ಪರ್‌ಮೆಂಟ್ ತಂದುಕೊಡು ಅಂತ ದುಡ್ಡು ಕೊಟ್ಟಿದ್ದೆಯಲ್ಲ, ಅಣ್ಣ ಆ ದುಡ್ಡಲ್ಲಿ ಹೂವಿನ ತೋಡಾ ತಂದುಬಿಟ್ಟಿದ್ದಾನೆ. ಅದನ್ನ ನಾನು ಮುಟ್ಟಿದೆ ಅಂತ ನನ್ನನ್ನ ಹೊಡೆದಿದ್ದಾನೆ."

ಸುಕುಮಾರಿ– "ನೀವು, ತಾಯಿ ಮಗ ಸೇರಿಕೊಂಡು ನನ್ನ ಮಗನ ಪ್ರಾಣ ಹಿಂಡೋದಕ್ಕೆ ತಯಾರು ಮಾಡತಾಯಿದೀರಿ ಅಂತ ಕಾಣತ್ತೆ. ಅವನನ್ನ ನೋಡಿದರೆ ನಿಮಗೆ ಸಹನೆಯಿಲ್ಲ, ಅವನು ಹೋಗಿಬಿಟ್ಟರೆ ನೀವು ಹಾಯಾಗಿರುತೀರಿ. ಅದಕ್ಕೇ ನಾನು ಹೇಳೋದು– ಹುಡುಗ ಬರತ ಬರತಾ ಬಡವಾಗತಾಯಿದಾನೆ, ಅಷ್ಟೊಂದು ಟಾನಿಕ್ಕು, ಹಾಲು ಕುಡಿಸಿದರೂ ಕೂಡ. ಏನು ನಡೀತಾಯಿದೆ ಅಂತ ಈಗ ಗೊತ್ತಾಯಿತು."

೧೪

ಸತೀಶ– "ನಾನು ನಿನ್ನ ಬಳಿಯಿಂದ ಬೀಳ್ಕೊಳ್ಳಲು ಬಂದಿದ್ದೇನೆ, ನೆಲ್ಲಿ."

ನಳಿನಿ– "ಯಾಕೆ, ಎಲ್ಲಿಗೆ ಹೋಗುತ್ತಿ?"

"ಯಮನೂರಿಗೆ."

"ಆ ಊರಿಗೆ ಹೋಗಬೇಕಾದರೆ ಬೀಳ್ಕೊಳ್ಳಬೇಕೇನು? ಯಾರಿಗೆ ದಾರಿ ಗೊತ್ತೋ ಅವರು ಮನೆಯಲ್ಲಿ ಕೂತೇ ಅಲ್ಲಿಗೆ ಹೋಗುತ್ತಾರೆ. ಇವತ್ತೇಕೆ ನಿನ್ನ ಪ್ರಕೃತಿ ಈ ತರಹೆಯಿದೆ? ನಿನ್ನ ಕಾಲರ್ ಬಹುಶಃ ಹೊಸ ಫ್ಯಾಷನ್ನಿಗೆ ಸರಿಯಾಗಿಲ್ಲವೇನೋ?"

"ನೀನೇನು ಅಂದುಕೊಂಡಿದ್ದೀಯ, ನಾನು ಕಾಲರ್ ವಿಷಯವಾಗೇ ಹಗಲು ರಾತ್ರಿ ಚಿಂತಿಸುತಾಯಿರುತ್ತೇನೆ ಅಂತ?"

"ನನಗೇನೋ ಹಾಗೇ ಅನ್ನಿಸತ್ತೆ, ಅದರ ಸಲುವಾಗೇ ಏನೋ ನಿನ್ನ ಮುಖ ಇಷ್ಟು ಚಿಂತಾಗ್ರಸ್ತವಾಗಿರೋ ಹಾಗೆ ಕಾಣತ್ತೆ."

"ಹಾಸ್ಯ ಮಾಡಬೇಡ, ನೆಲ್ಲಿ. ನಿನಗೇನಾದರೂ ನನ್ನ ಎದೆಯಲ್ಲಾಗುತ್ತಾಯಿರೋದು ಕಾಣಬಂದ ಪಕ್ಷದಲ್ಲಿ..."

"ಹಾಗಾದರೆ ಅದರಲ್ಲಿ ಚಿನ್ನದ ಕಮಲ ಮತ್ತು ಐದು ಹೆಡೆ ನಾಗರಹಾವು ಕಾಣುತಾಯಿತ್ತೇನೋ!"

"ಮತ್ತೆ ಹಾಸ್ಯ! ನೀನು ಬಹಳ ನಿಷ್ಠುರಳು ನೆಲ್ಲಿ. ಸತ್ಯವಾಗಿ ಹೇಳತೇನೆ ನೆಲ್ಲಿ, ಇವತ್ತು ನಿನ್ನ ಕಡೆಯ ಭೇಟಿಗಾಗಿ ಬಂದಿದ್ದೇನೆ."

"ಅಂಗಡಿಗೆ ಹೋಗಬೇಕೇನು?"

"ನಿನ್ನ ದಮ್ಮಯ್ಯ, ನೆಲ್ಲಿ. ಮತ್ತೆ ಹಾಸ್ಯಮಾಡಿ ನನ್ನನ್ನ ಉರಿಸಬೇಡ. ಇವತ್ತು ನಿನ್ನ ಕಡೆಯ ಸಂದರ್ಶನ ಮಾಡಿಕೊಂಡು ಹೋಗೋಣ ಅಂತ ಬಂದಿದ್ದೇನೆ!"

"ಅದೇನು ಅಂಥಾದ್ದು? ಏನು ಅವಸರ?"

"ಸತ್ಯವಾಗಿ ಹೇಳತೇನೆ, ಕೇಳು, ನಾನು ಎಷ್ಟು ದರಿದ್ರಾವಸ್ಥೆಯಲ್ಲಿಳಿದಿದ್ದೇನೋ ನಿನಗೆ ಗೊತ್ತಿಲ್ಲ."

"ಅದರಿಂದೇಕೆ ನಿನಗೆ ಅಷ್ಟು ಭಯ? ನಾನು ನಿನ್ನ ಹತ್ತಿರ ದುಡ್ಡು ಸಾಲ ಕೇಳಬೇಕಾಗಿಲ್ಲ."

"ನಿನ್ನ ಸಂಗಡ ನನ್ನ ಮದುವೆಯ ಪ್ರಸ್ತಾಪವಾಗಿತ್ತಲ್ಲ!"

"ಅದಕ್ಕಾಗಿ ಓಡಿಹೋಗಬೇಕು ಅಂತಿದ್ದೀಯೇನು?"

"ನನ್ನ ಅವಸ್ಥೆ ತಿಳಿದುಹೋದ ಮೇಲೆ ಮಿಸ್ಟರ್ ಭಾದುಡಿ ನಮ್ಮ ಸಂಬಂಧ ಕಡಿದುಹಾಕಿಬಿಟ್ಟರು."

"ಆ ಅವಮಾನದ ಸಲುವಾಗಿ ನೀನು ದೇಶಾಂತರ ಹೋಗಬೇಕಾಗಿದೆಯೇನು? ಇಷ್ಟು ದೊಡ್ಡ ಮಾನಿಷ್ಠರಾದವರ ಸಂಗಡ ಯಾವ ತರಹೆ ಸಂಬಂಧವಿಡೋದೂ ಸರಿಯಲ್ಲ. ಹಾಗಾದರೆ ಇನ್ನು ಮೇಲೆ ನಿನ್ನ ಬಾಯಿಂದ ಪ್ರಯತ್ನಪೂರ್ವಕವಾಗಿ ಪ್ರೀತಿ ವಿಷಯವಾದ ಮಾತು ಕೇಳಿದರೆ ನಾನು ಅದನ್ನ ಪರಿಹಾಸ್ಯ ಮಾಡಬೇಕಾಗತ್ತೆ."

"ನೆಲ್ಲಿ, ಹಾಗಾದರೆ ನಾನು ಇನ್ನೂ ನಿನ್ನ ಬಗ್ಗೆ ಆಸೆಯಿಟ್ಟುಕೊಳ್ಳಬಹುದು ಅಂತ ಹೇಳುತೀಯಾ?"

"ನಿನ್ನ ದಮ್ಮಯ್ಯ, ಸತೀಶ್, ಹಾಗೆಲ್ಲಾ ನಾವೆಲ್‌ನ ಧಾಟಿಯಲ್ಲಿ ಮಾತು ಕಟ್ಟಿ ಹೇಳಬೇಡ. ನನಗೆ ನಗು ಬರುತ್ತೆ. ನಾನು ನಿನಗೆ ಆಸೆಯಿಟ್ಟುಕೋ ಅಂತ ಏಕೆ ಹೇಳಲಿ? ಆಸೆಯಿಟ್ಟುಕೊಳ್ಳುವವರು ಸ್ವಂತ ಬಲದಿಂದ ಇಟ್ಟುಕೊಳ್ಳಬೇಕು. ಇತರರ ಸಲಹೆ ಕೇಳಿ ಇಟ್ಟುಕೊಳ್ಳುವುದಲ್ಲ."

"ಅದೇನೋ ಸರಿ. ನಾನು ಕೇಳಬೇಕು ಎಂದಿರೋದು ನಿನಗೆ ಬಡತನ ಅಂದರೆ ಹೆದರಿಕೆಯಿಲ್ಲವೆ ಅಂತ."

"ಹೆದರಿಕೆಯಿಲ್ಲದೆ? ಬೇಕಾದಷ್ಟು– ಬಡತನ ಅಂದರೆ ಹೇಸಗೆ ನನಗೆ– ಅದರಲ್ಲೂ ಸುಳ್ಳು ವೇಷ ಹಾಕಿಕೊಂಡು ಬರುವ ಬಡತನ ಕಂಡರಂತೂ..."

"ನೆಲ್ಲಿ, ನೀನು ನಿನಗೆ ಮೊದಲಿನಿಂದಲೂ ಅಭ್ಯಾಸವಾಗಿರುವ ಸುಖ, ನೆಮ್ಮದಿಗಳನ್ನು ಅಲ್ಲಗಳೆದು ಬಡವನ ಮನೆಯ ಲಕ್ಷ್ಮಿಯಾಗಿರಲು ಹಿಂದೆಗೆಯುವುದಿಲ್ಲವೆ?"

"ನಾವೆಲ್ಲುಗಳಲ್ಲಿ ಹೇಗೆ ದುಃಖದ ವಿಷಯ ಬರುತ್ತದೆ, ಹಾಗೆ ಅದನ್ನು ಎತ್ತಿ ಹಿಡಿದರೆ ಸುಖ ತಾನಾಗಿ ಮನೆಬಿಟ್ಟು ಓಡುತ್ತದೆ."

"ನೆಲ್ಲಿ, ಆ ದುಃಖದ ಯಾವ ಲಕ್ಷಣಗಳೂ ನಿನ್ನ ಕಣ್ಣಿಗೆ–"

"ಸತೀಶ್, ನೀನೆಂದೂ ಯಾವ ಪರೀಕ್ಷೆಯಲ್ಲೂ ಪಾಸಾಗಲಿಕ್ಕಾಗಲಿಲ್ಲ. ನಂದೀಸಾಹೇಬ ಕೂಡ ಇಂಥ ಪ್ರಶ್ನೆ ಹಾಕುತಾಯಿರಲಿಲ್ಲ.– ಛೆ...ನಿನಗೆ ಸ್ವಲ್ಪವೂ ಸಲಿಗೆ ಕೊಡಕೂಡದು."

"ನಿನ್ನನ್ನ ಇಷ್ಟರವರೆಗೂ ಅರ್ಥವೇ ಮಾಡಿಕೊಳ್ಳಲಿಕ್ಕಾಗಲಿಲ್ಲ, ನೆಲ್ಲಿ."

"ಅರ್ಥ ಹೇಗೆ ಮಾಡಿಕೊಂಡೀಯ? ನಾನೇನು ನಿನ್ನ ಈಗಿನ ಕಾಲದ ಫ್ಯಾಶನ್ನಿನ ಟೈ ಅಲ್ಲ, ಕಾಲರ್ ಅಲ್ಲ. ಹಗಲು ರಾತ್ರಿ ಅದರ ವಿಷಯವಾಗಿ ಯೋಚನೆಮಾಡಿ ಅರ್ಥ ಮಾಡಿಕೊಂಡಿರೋ ಹಾಗೆ–"

"ನಾನು ನಿನಗೆ ಕೈ ಜೋಡಿಸಿ ಹೇಳುತ್ತೇನೆ, ನೆಲ್ಲಿ. ನೀನು ಆ ತರಹ ಮಾತಾಡಬೇಡ, ಇವತ್ತು, ನನ್ನ ಮುಂದೆ. ನಾನು ಯಾವ ವಿಷಯವಾಗಿ ಮೂರು ಹೊತ್ತೂ ಯೋಚನೆ ಮಾಡುತ್ತೇನೆ ಎನ್ನುವುದು ನಿನಗೆ ಗೊತ್ತಿಲ್ಲದೆಯಿಲ್ಲ, ಖಂಡಿತ."

"ನಿನ್ನ ವಿಷಯವಾಗಿ ನನ್ನ ಒಳದೃಷ್ಟಿ ಅಷ್ಟು ತೀಕ್ಷ್ಣವಾಗಿದೆಯೆಂದು ಇಷ್ಟು ಖಡಾಖಂಡಿತವಾಗಿ ಹೇಳಿಬಿಡಬೇಡ. ಇಕೋ, ಅಪ್ಪ ಈ ಕಡೆ ಬರುತಾಯಿದಾರೆ, ನನ್ನನ್ನೇನಾದರೂ ಇಲ್ಲಿ ನೋಡಿಬಿಟ್ಟರೆ ಸುಮ್ಮಸುಮ್ಮನೆ ರೇಗಿಬಿಡುತ್ತಾರೆ...ನಾನು ಹೊರಟೆ..."

[ನಿಷ್ಕ್ರಮಣ]

ಸತೀಶ– "ಮಿಸ್ಟರ್ ಭಾದುಡಿ, ನಾನು ನಿಮ್ಮನ್ನ ಬೀಳ್ಕೊಳ್ಳುವುದಕ್ಕೆ ಬಂದಿದ್ದೇನೆ."

ಭಾದುಡಿ– "ಒಳ್ಳೇದು, ಆದರೆ ಈಗ–"

"ಹೋಗುವುದಕ್ಕೆ ಮೊದಲು ಒಂದು ಮಾತು ಹೇಳಬೇಕಾಗಿತ್ತು."

"ಆದರೆ ಈಗ ಸಮಯವಿಲ್ಲ. ನಾನೀಗ ಹೊರಗಡೆ ಹೋಗಬೇಕಾಗಿದೆ."

"ಸ್ವಲ್ಪ ಹೊತ್ತು ನಾನೂ ನಿಮ್ಮ ಸಂಗಡ ಬರುತೇನೆ ಹೊರಗೆ."

"ನೀನೇನೋ ಬರಬಲ್ಲೆ ನಿಜ. ಆದರೆ ನನಗೆ ಈಗ ಅನುಕೂಲವಿಲ್ಲ. ಈಗ ನನಗೆ ಸಂಗಡ ಯಾರಾದರೂ ಬರಬೇಕೆನ್ನುವ ಆತುರವೂ ಇಲ್ಲ ಅಷ್ಟು."

೧೫

ಶಶಧರ– "ಓಹ್...ಏನು ನೀನು ಹೇಳುತಾಯಿರುವುದು? ಹುಚ್ಚುಗಿಚ್ಚು ಹಿಡಿಯಿತೇನು, ನಿನಗೆ?"

ಸುಕುಮಾರಿ– "ನನಗೆ ಹುಚ್ಚುಹಿಡಿದಿಲ್ಲ, ನಿಮಗೆ ಕಣ್ಣು ಕಾಣಿಸುತಾಯಿಲ್ಲ ಅಷ್ಟೆ"

ಶಶಧರ– "ಯಾವುದೂ ಆಶ್ಚರ್ಯವಿಲ್ಲ. ಎರಡೂ ಸಂಭವ. ಆದರೆ–"

"ನಮ್ಮ ಹರೇನ್ ಹುಟ್ಟಿದಾಗಲಿಂದ ಅವರುಗಳ ಮುಖ ಹೇಗಾಗಿ ಬಿಟ್ಟಿದೆ ನಿಮಗೆ ಕಾಣಲಿಲ್ಲವೇನೋ. ಸತೀಶನ ನಡವಳಿಕೆ ನೋಡಿದರೆ ಗೊತ್ತಾಗುವುದಿಲ್ಲವೇನೋ!"

"ನನಗೆ ಅಷ್ಟು ಅವರ ಅಭಿಪ್ರಾಯಗಳನ್ನ ಅರ್ಥಮಾಡಿಕೊಳ್ಳುವಷ್ಟು ಸಾಮರ್ಥ್ಯವಿಲ್ಲ. ಅದು ನಿನಗೇ ಗೊತ್ತು. ಮನಸ್ಸು ಎಂಬುದು ಅದೃಶ್ಯವಾದ ಪದಾರ್ಥ ಎಂಬ ತಿಳಿವಳಿಕೆ ನನಗೆ ಚಿಕ್ಕತನದಿಂದಲೂ ಬೇರೂರಿಬಿಟ್ಟಿದೆ– ಅದೊಂದು ಸಂಸ್ಕಾರ ಅಂತ ಇಟ್ಟುಕೋ. ಅದು ಬಂದುಹೋಗಿದೆ ನನ್ನಲ್ಲಿ. ನಡೆದದ್ದೇನು ಅಂತ ನೋಡಿದರೆ ಆಗ ಆದಷ್ಟು ಅರ್ಥ ಮಾಡಿಕೊಳ್ಳಬಲ್ಲೆ."

"ಏನಿಲ್ಲ, ಈ ಸತೀಶ ನಮ್ಮ ಮಗು ಒಬ್ಬನೇ ಸಿಕ್ಕಿದಾಗೆಲ್ಲ ಅವನನ್ನ ಹೊಡೀತಾಯಿರುತಾನೆ. ಆಮೇಲೆ ಈ ನಮ್ಮ ವಿಧು ಕೂಡ ಅವನ ಹಿಂದೆ ಹಿಂದೆ ಹೋಗಿ ಏನೇನೋ ಗುಮ್ಮ, ಭೂತ ಅಂತ ಹೆದರಿಕೆಯಿಡುತಾಳೆ ಕೂಸಿಗೆ, ಗೊತ್ತಾ?"

"ಇಕೋ ನೋಡು, ನೀವೆಲ್ಲಾ ಸಣ್ಣದನ್ನ ದೊಡ್ಡದಾಗಿ ಮಾಡುತೀರಿ, ಸತೀಶನು ಯಾವಾಗಾದರೂ ಒಂದೊಂದು ಸಲ ಹುಡುಗನನ್ನ ಹೊಡೆದಿದ್ದರೂ–"

"ಅದು ನಿಮಗೆ ಸಹಿಸಬಹುದು– ನನಗೆ ಆಗೋದಿಲ್ಲ. ಅವನನ್ನ ನೀವೇನು ಹೆತ್ತಿಲ್ಲ."

"ಆ ಮಾತು ನಾನು ಒಪ್ಪಿಕೊಳ್ಳದೆ ಸಾಧ್ಯವಿಲ್ಲ. ಈಗ ನಿನ್ನ ಅಭಿಪ್ರಾಯವೇನು ಹೇಳು ಕೇಳೋಣ."

"ಏನಿಲ್ಲ, ಮಕ್ಕಳ ಶಿಕ್ಷಣದ ವಿಷಯವಾಗಿ ಅಷ್ಟು ದೊಡ್ಡ ದೊಡ್ಡ ಮಾತಾಡುತೀರಲ್ಲ–ಒಂದು ಸಲ ನೀವು ಯೋಚಿಸಿ ನೋಡಿ ಮತ್ತೆ, ನಾವು ಹರೇನ್‌ನ್ನು ಯಾವ ತರಹೆ ಬೆಳೆಸಬೇಕು ಅಂದುಕೊಂಡಿದ್ದೇವೆ– ಅವನ ಚಿಕ್ಕಮ್ಮ ಅದಕ್ಕೆ ವ್ಯತಿರಿಕ್ತವಾಗಿ ಹೇಳಿಕೊಡುತಾಯಿದ್ದಾಳೆ. ಸತೀಶನ್ನ ಬೆಳೆಸಿರೋದೇ ಒಂದು ದೃಷ್ಟಾಂತ ಅದನ್ನ ಯೋಚಿಸಬೇಕು."

"ನೀನು ಅಷ್ಟು ಚೆನ್ನಾಗಿ, ಅಷ್ಟು ಗಾಢವಾಗಿ ಯೋಚಿಸುತಾಯಿರುವಾಗ ಅದರ ಮೇಲೆ ನಾನ್ಯಾಕೆ ಯೋಚಿಸಬೇಕು ಹೇಳು. ಈಗ ನಾನೇನು ಮಾಡಬೇಕು ಅದನ್ನಾದರೂ ಹೇಳು."

"ನಾನು ಹೇಳೋದು, ಸತೀಶನಿಗೆ ನೀವು ಹೇಳಿ. ಅವರ ಅಮ್ಮನಿಂದ ಸಹಾಯ ಪಡೆದು ಅವನು ಯಾವುದಾದರೂ ಕೆಲಸಪಲಸ ನೋಡಿಕೊಳ್ಳಲಿ. ಗಂಡಸಾದವನು ಇತರರ ದುಡ್ಡಲ್ಲಿ ದೊಡ್ಡಸ್ತಿಕೆ ಮಾಡುವುದು ಚೆನ್ನಾಗಿರತ್ತೆಯೇ ಹೇಳಿ."

"ಅವರಮ್ಮನಿಗೆ ಬರುವ ದುಡ್ಡಲ್ಲಿ ಸತೀಶನಿಗೆಷ್ಟರ ಮಟ್ಟಿಗೆ ಸಹಾಯವಾದೀತೊ?"

"ಯಾಕೆ? ಅವರಿಗೀಗ ಮನೆಬಾಡಿಗೆ ಕೊಡಬೇಕಾಗಿದೆಯೇನು? ತಿಂಗಳಿಗೆ ಎಪ್ಪತ್ತೈದು ರೂಪಾಯಿ ಕಡಿಮೆಯಾಗಿಹೋಯಿತಾ?"

"ಸತೀಶನಿಗೆ ಯಾವ ರೀತಿ ಜೀವನ ಅಭ್ಯಾಸವಾಗಿಹೋಗಿದೆ–ಎಪ್ಪತ್ತೈದು ರೂಪಾಯಿ ಅವನು ಚುರುಟಿನ ಹಾಗೆ ಸೇದಿ ಉಡಾಯಿಸಿಬಿಡುತ್ತಾನೆ. ಅವರಮ್ಮನ ಒಡವೆ ಗಿಡವೆಯಿತ್ತು– ಅವೆಲ್ಲಾ ಹೋಗಿ ಎಷ್ಟು ದಿನವಾಯಿತು. ಈಗ ಅವರಪ್ಪನ ದಿನ, ಕರ್ಮಕ್ಕೆ ಇಟ್ಟಿರುವ ಹಣ ಕೊಟ್ಟರೂ ಸಾಲ ತೀರುವುದಿಲ್ಲ."

"ಅಷ್ಟು ಶಕ್ತಿಯಿಲ್ಲದೆ ಇರೋವರಿಗೆ ಇಷ್ಟು ಷೋಕಿ, ದಿಮಾಕು ತಾನೆ ಯಾಕೆ?"

"ಮನ್ಮಥನೂ ಇದೇ ಮಾತು ಹೇಳುತಾಯಿದ್ದ, ನಿನಗೆ ಜ್ಞಾಪಕವಿಲ್ಲವೇನೋ! ನಾವೇ ಸತೀಶನಿಗೆ ಬೇರೆ ವಿಧವಾಗಿ ಹೇಳಿಕೊಟ್ಟಿದ್ದು. ಈಗ ಅವನ ಮೇಲೆ ಹೇಗೆ ತಪ್ಪು ಹೊರಿಸುವುದು ಹೇಳು."

"ಇಲ್ಲ, ತಪ್ಪು ಅವನದ್ಯಾಕಾದೀತು? ಎಲ್ಲಾ ತಪ್ಪೂ ನನ್ನದೇ. ನಿಮಗಂತೂ ಬೇರೆ ಯಾರ ತಪ್ಪೂ ಕಾಣಬರೋದಿಲ್ಲ, ಎಂದೂ, ನನ್ನ ತಪ್ಪುಗಳ ಮೇಲೇ ನಿಮ್ಮ ದೃಷ್ಟಿ ಅಷ್ಟು ಹೆಚ್ಚಾಗಿ ಬೀಳೋದು."

"ರೇಗಬೇಡವೇ– ತಪ್ಪು ನನ್ನದೂ ಇದೆಯಲ್ಲಾ?"

"ಇರಬಹುದು. ನಿಮ್ಮ ವಿಷಯ ನಿಮಗೆ ಗೊತ್ತು. ಆದರೆ ನಾನೆಂದೂ ಅವನಿಗೆ ಹೀಗೆಂದೂ ಹೇಳಿಲ್ಲ– ನೀನು ನಿಮ್ಮ ದೊಡ್ಡಪ್ಪನ ಮನೆಯಲ್ಲಿ ಕಾಲ ಮೇಲೆ ಕಾಲು ಹಾಕಿಕೊಂಡು ಮೀಸೆ ತೀಡುತಾ ಇರು, ಈಸೀ ಛೇರಿನ ಮೇಲೆ ಆರಾಮವಾಗಿ ಕೂತುಕೊಂಡು ನಮ್ಮ ಹುಡುಗನ ಮೇಲೆ ವಿಷದೃಷ್ಟಿ ಹಾಕುತಾಯಿರು ಅಂತ–!"

"ಛೆ, ಇಲ್ಲ– ಸರಿಯಾಗಿ ಇದೇ ಮಾತುಗಳಲ್ಲಿ ನೀನೇನು ಅವನಿಗೆ ಹೀಗೇ ಮಾಡು ಅಂತ ಆಣೆಯಿಟ್ಟುಕೊಂಡು ಹೇಳಿದೆ ಅನ್ನಲಿಲ್ಲ, ಇಷ್ಟಾದರೂ ನಾನು ನಿನ್ನ ಮೇಲೆ ತಪ್ಪು ಹಾಕುವುದೇಯಿಲ್ಲ. ಈಗೇನು ಮಾಡಬೇಕು ಹೇಳು."

"ನಿಮಗೆ ಯಾವುದು ಸರಿ ಅಂತ ತೋಚುತ್ತೋ ಹಾಗೆ ಮಾಡಿ. ಆದರೆ ನಾನಿಷ್ಟು ಹೇಳತೇನೆ, ಕೇಳಿ. ಸತೀಶ ನಮ್ಮ ಮನೆಯಲ್ಲಿರೋವರೆಗೂ ನಾನು ನಮ್ಮ ಮಗುವನ್ನ ಹೊರಗಡೆ ಕಳುಹಿಸೋದಕ್ಕೆ ಆಗೋದಿಲ್ಲ. ಡಾಕ್ಟರು ಹುಡುಗನಿಗೆ ಚೆನ್ನಾಗಿ ಹೊರಗಡೆಯ ಹವಾ ಸೇವನೆ ಮಾಡಿಸಿ ಅಂತ ಹೇಳಿದ್ದಾರೆ. ಆದರೆ ಹವಾ ಕುಡಿಯಲಿಕ್ಕೆ ಅಂತ ಹೋದಾಗ ಎಲ್ಲಾದರೂ ಹೊರಗಡೆ ಒಬ್ಬನೇ ಸತೀಶನ ದೃಷ್ಟಿಗೆ ಬಿದ್ದ ಅಂದರೆ, ಆ ಸಂಭವ ಮನಸ್ಸಿಗೆ ಬಂದರೆ ನನ್ನ ಮನಸ್ಸು ಸ್ಥಿರವಾಗಿರೋದಿಲ್ಲ. ಅವನು ಸ್ವಂತ ತಂಗಿಯ ಮಗನೇ ಆಗಿದ್ದರೂ, ನಾನವನನ್ನು ಒಂದು ಮುಹೂರ್ತವಾದರೂ ನಂಬುವುದಕ್ಕಾಗುವುದಿಲ್ಲ. ಇದನ್ನು ನಾನು ನಿಮಗೆ ಸ್ಪಷ್ಟವಾಗಿ ಹೇಳುತ್ತೇನೆ."

[ಸತೀಶನ ಪ್ರವೇಶ]

ಸತೀಶ– "ಯಾರನ್ನು ನಂಬುವುದಕ್ಕಾಗೋದಿಲ್ಲ ದೊಡ್ಡಮ್ಮ? ನನ್ನನ್ನೇ? ನಾನು ನಿಮ್ಮ ಹುಡುಗನನ್ನ ಸಮಯ ಸಿಕ್ಕಿದರೆ ಕತ್ತು ಕಿವಿಚಿ ಕೊಂದೇನು ಅನ್ನೋ ದಿಗಿಲಿಂದಲೆ? ಒಂದು ಪಕ್ಷ ಕೊಂದರೂ ನೀವು ನಿಮ್ಮ ತಂಗಿಯ ಮಗನನ್ನ ಮನೆಗೆ ಕರೆಸಿಕೊಂಡು ಹಾಳುಮಾಡಿದಿರಲ್ಲ– ಅದಕ್ಕಿಂತಲೂ ಅವನಿಗೆ ಕೆಡುಕುಮಾಡಿದ ಹಾಗಾಯಿತೇ? ಯಾರು ನನಗೆ ಚಿಕ್ಕವಯಸ್ಸಿಂದಲೂ ರಾಜಕುಮಾರನ ಹಾಗೆ ಶೋಕೀಲಾಲನಾಗಿ ಮಾಡಿದ್ದು ಮತ್ತು ಇವತ್ತು ಭಿಕ್ಷುಕನ ಹಾಗೆ ಬೀದಿಗೆ ಬಿಸಾಟಿದ್ದು? ಯಾರು ನನ್ನನ್ನ ತಂದೆಯ ಶಾಸನದಿಂದ ಕಸಿದುತಂದು ಪ್ರಪಂಚಕ್ಕೇ ಕಳಂಕವಾಗೋ

ಹಾಗೆ, ಜನಗಳ ನಗುಪಾಟಲಾಗಿರೋ ಹಾಗೆ ಎಳೆದು ತಂದದ್ದು? ಯಾರು ನನ್ನನ್ನ-"

ಸುಕುಮಾರಿ- "ಅಯ್ಯೋ, ಕೇಳಿದಿರಾ ಅಂದ್ರೆ? ನಿಮ್ಮೆದುರಿಗೇ ನನ್ನನ್ನು ಹೀಗೆ ಅವಮಾನ ಮಾಡುತಾನಲ್ಲ? ತನ್ನ ಬಾಯಲ್ಲೇ ಹೇಳಿದನೋ ಇಲ್ಲವೋ ನೋಡಿ ಕೂಸಿನ ಕತ್ತು ಕಿವಿಚುತೇನೆ ಅಂತ? ಅಯ್ಯೋ ಅಮ್ಮಾ....ಏನು ಗತಿ ಇನ್ನ? ನಾವು ವಿಷದ ನಾಗರಹಾವಿಗೆ ಕೈಯಾರೆ ಹಾಲು, ಬಾಳೇಹಣ್ಣು ತಿನ್ನಿಸಿ ಸಾಕಿದ ಫಲ ಇದು!"

ಸತೀಶ- "ಹಾಲು, ಬಾಳೇಹಣ್ಣು ನಮ್ಮ ಮನೆಯಲ್ಲೂ ಇತ್ತು ದೊಡ್ಡಮ್ಮಾ. ಆದರೆ ಆ ಹಾಲು, ಬಾಳೇಹಣ್ಣು ತಿಂದು ನನ್ನ ರಕ್ತ ವಿಷವಾಗತಾನೇ ಇರಲಿಲ್ಲ. ನನ್ನನ್ನ ಅದರಿಂದ ಶಾಶ್ವತವಾಗಿ ವಂಚಿತನಾಗಿ ಮಾಡಿ ನೀವು ಯಾವ ಹಾಲು, ಬಾಳೆಹಣ್ಣು ತಿನ್ನಿಸಿದ್ದೀರೋ ಅದರಿಂದಲೇ ನನ್ನ ರಕ್ತ ವಿಷವಾಗಿಬಿಟ್ಟಿದೆ ಈಗ. ಸತ್ಯವಾದ ಮಾತೇ ಅಂದಿರಿ, ದೊಡ್ಡಮ್ಮಾ, ಸತ್ಯವಾದ ಮಾತೇ ಅಂದಿರಿ- ಈಗ ನನ್ನನ್ನ ಕಂಡರೆ ಭಯಪಡಲೇ ಬೇಕು. ಈಗ ನಾನು ಕಚ್ಚಬಲ್ಲೆ-"

[ವಿಧುಮುಖಿಯ ಪ್ರವೇಶ]

ವಿಧು- "ಇದೇನೋ ಸತೀಶ. ಏನಾಯಿತೋ, ನಿನ್ನನ್ನ ಕಂಡರೆ ದಿಗಿಲಾಗುತ್ತಲ್ಲೋ. ಹಾಗೆ ಯಾಕೋ ದುರುಗುಟ್ಟಿಕೊಂಡು ನೋಡುತೀಯೋ. ನನ್ನ ಗುರುತು ಹಿಡಿಯಿತೇನೋ? ನಾನು ನಿನ್ನ ಅಮ್ಮ ಅಲ್ಲವೇನೋ!"

ಸತೀಶ- "ಅಮ್ಮ? ನಿನ್ನನ್ನ ಯಾವ ನಾಲಗೆಯಲ್ಲಿ ಅಮ್ಮ ಅನ್ನಲಿ ಹೇಳು. ಅಮ್ಮನಾಗಿ ನೀನೇಕೆ ಅಪ್ಪನ ಶಿಕ್ಷೆಯಿಂದ ನನ್ನನ್ನ ವಂಚಿತನಾಗಿ ಮಾಡಿದೆ. ನೀನ್ಯಾಕೆ ಜೈಲಿನಿಂದ ತಪ್ಪಿಸಿದೆ? ಅದೇನು ದೊಡ್ಡಮ್ಮನ ಮನೆಗಿಂತ ಭಯಂಕರವಾಗಿರುತ್ತಿತ್ತೆ? ನೀವೆಲ್ಲಾ ಈಶ್ವರನನ್ನ 'ಅಮ್ಮ'ನೆಂದು ಕೂಗುತ್ತೀರಿ. ಈಶ್ವರನೇನಾದರೂ ನಿಮ್ಮ ಹಾಗೆ ತಾಯಾಗಿಬಿಟ್ಟರೆ ಅವನ ದಯೆಯೂ ಬೇಕಿಲ್ಲ ನನಗೆ. ನನ್ನನ್ನ ನರಕಕ್ಕೆ ಹಾಕಿಬಿಟ್ಟಾನು, ಸೀದಾ."

ಶಶಧರ- "ಆಹ- ಸತೀಶ್- ನಡಿ, ನಡಿ- ಏನು ಹುಚ್ಚು ಮಾತಾಡುತಾಯಿದ್ದೀಯ? ನಡಿ, ಹೊರಗಡೆ ನನ್ನ ರೂಮಿಗೆ, ಬಾ, ಮಾತಾಡೋಣ."

೧೬

ಶಶಧರ- "ಸತೀಶ್, ಸ್ವಲ್ಪ, ಸ್ವಲ್ಪ ತಣ್ಣಗಾಗು. ನಾನು ಹೇಳತೇನೆ, ನಿನ್ನ ಬಗ್ಗೆ ಅತ್ಯಂತ ಅನ್ಯಾಯವಾಗಿದೆ. ನನಗದು ಗೊತ್ತಿಲ್ಲವೆ? ನಿನ್ನ ದೊಡ್ಡಮ್ಮನೇನೋ ಕೋಪದಲ್ಲಿ ಹೇಳಿದ್ದರೆ, ಅದನ್ನೆಲ್ಲ ಹಾಗೆ ಮನಸ್ಸಿಗೆ ಹಚ್ಚಿಸಿಕೊಳ್ಳುವುದೆ, ಹೇಳು?

ನೋಡು, ಮೊದಲಲ್ಲಿ ಯಾವ ತಪ್ಪನ್ನು ಮಾಡಿದ್ದಾಗಿದೆ, ಈಗ ಅದರ ಚಿಕಿತ್ಸೆ ಮಾಡೋಣಂತೆ. ನೀನು ನಿಶ್ಚಿಂತನಾಗಿರು."

ಸತೀಶ– "ದೊಡ್ಡಪ್ಪಾ, ಚಿಕಿತ್ಸೆಗೆ ಈಗ ಸಾಧ್ಯವೇ ಇಲ್ಲ. ದೊಡ್ಡಮ್ಮನ ಸಂಗಡ ಇವತ್ತು ನನ್ನ ಸಂಪರ್ಕ ಎಷ್ಟರವರೆಗೆ ಬಂದುಬಿಟ್ಟಿದೆ– ಅಂದರೆ ಇವತ್ತಿನಿಂದ ನಿಮ್ಮ ಮನೆಯ ಅನ್ನ ನನ್ನ ಗಂಟಲಲ್ಲಿ ಇಳಿಯುವುದೇ ಇಲ್ಲ. ಇಷ್ಟು ದಿನ ನೀವು ನನ್ನ ಮೇಲೆ ಮಾಡಿರುವ ಖರ್ಚನ್ನೆಲ್ಲಾ ಕಡೆಯ ಕವಡೆಯವರೆಗೂ ತೀರಿಸದೆ ಇದ್ದರೆ ನಾನು ಸತ್ತಮೇಲೂ ನನಗೆ ಶಾಂತಿಯಿರೋದಿಲ್ಲ. ಚಿಕಿತ್ಸೆ ಏನು ಮಾಡಬೇಕಾಗಿದ್ದರೂ ಅದು ನನ್ನ ಕೈಯಲ್ಲಿದೆ, ನೀವು ಏನು ತಾನೇ ಮಾಡಬಲ್ಲಿರಿ?"

ಶಶಧರ– "ಇಲ್ಲ, ಸತೀಶ್, ಕೇಳಿಲ್ಲ, ಸ್ವಲ್ಪ ಕೇಳು, ಸ್ವಲ್ಪ ಸ್ಥಿರಮಾಡಿಕೊಂಡು ಕೇಳು. ನಿನ್ನ ಕರ್ತವ್ಯವೇನಿದೆಯೋ ಅದನ್ನ ನೀನು ಆಮೇಲೆ ಯೋಚಿಸಿಕೊಳ್ಳುವಿಯಂತೆ. ನಿನ್ನ ವಿಷಯದಲ್ಲಿ ನಾವು ಮಾಡಿರುವ ಅನ್ಯಾಯಕ್ಕಾಗಿ ಅದರ ಪ್ರಾಯಶ್ಚಿತ್ತವನ್ನ ನಾನು ತಾನೇ ಮಾಡಬೇಕಾಗಿರುವುದು? ನೋಡಿಲ್ಲಿ, ನನ್ನ ಆಸ್ತಿಯಲ್ಲಿ ಒಂದಂಶವನ್ನ ನಾನು ನಿನಗೆ ಬರೆದುಕೊಡುತೇನೆ. ಅದನ್ನ ನೀನು ದಾನ ಅಂತ ತಿಳಿದುಕೊಳ್ಳಬೇಡ. ಅದು ನಿನಗೆ ಪ್ರಾಪ್ಯವಾದದ್ದು. ನಿನ್ನ ಹಕ್ಕು. ನಾನೆಲ್ಲ ನಿಷ್ಕರ್ಷೆ ಮಾಡಿಟ್ಟಿದ್ದೀನಿ. ನಾಳಿದ್ದು ಶುಕ್ರವಾರ, ರಿಜಿಸ್ಟರ್ ಮಾಡಿಸಿಬಿಡುತ್ತೇನೆ."

ಸತೀಶ– (ಶಶಧರನ ಕಾಲನ್ನ ಮುಟ್ಟಿ ತಲೆಗೊತ್ತಿಕೊಂಡು) "ದೊಡ್ಡಪ್ಪಾ, ನಾನೇನು ಹೇಳಲಿ ಇನ್ನ– ನಿಮ್ಮ ಈ ಸ್ನೇಹ–"

ಶಶಧರ– "ಹೂ...ಇರಲಿ...ಇರಲಿ. ಬಿಡಪ್ಪಾ– ಆ ಸ್ನೇಹ, ಪಾಪ ನನಗೊಂದೂ ಗೊತ್ತಿಲ್ಲ–ರಸ, ಕಸ ನನ್ನಲ್ಲಿ ಯಾವುದೂ ಇಲ್ಲ. ನನ್ನ ಕರ್ತವ್ಯವ್ಯಾವುದೋ ಅದನ್ನ ಯಾವುದೋ ಒಂದು ರೀತಿಯಲ್ಲಿ ಪಾಲಿಸಿಕೊಂಡು ಹೋಗಬೇಕು– ಅನ್ನುವುದು ಮಾತ್ರ ಗೊತ್ತಾಗತ್ತೆ ನನಗೆ–ಎಂಟೂವರೆ ಆಯಿತು ಆಗಲೇ. ನೀನಿವತ್ತು ಕಾರಿನ್‌ಥಿಯನ್ ಥಿಯೇಟರಿಗೆ ಹೋಗಬೇಕು. ಅಂತಿದ್ದೆಯಲ್ಲೋ, ಹೋಗು ಹೊತ್ತಾಗಲಿಲ್ಲವೆ? ಸತೀಶ್, ಒಂದು ಮಾತನ್ನ ನಿನಗೆ ಹೇಳಿಬಿಡುತ್ತೇನೆ. ದಾನಪತ್ರವನ್ನ ನಾನು ಮಿಸ್ಟರ್ ಭಾದುಡಿ ಕೈಯಲ್ಲಿ ಬರೆಸಿದ್ದೇನೆ. ಅವರು ಈ ಏರ್ಪಾಡಿನಿಂದ ಬಹಳ ಸಂತುಷ್ಟರಾದ ಹಾಗೆ ಕಂಡಿತು. ನಿನ್ನ ವಿಷಯದಲ್ಲಿ ಅವರಿಗೀಗ ಅಷ್ಟಾಗಿ ಆಸಕ್ತಿಯಿಲ್ಲ ಅಂತ ಅನ್ನಿಸಲಿಲ್ಲ. ಅಷ್ಟೇಕೆ, ನಾನು ಹೊರಟು ಬರುವಾಗ ಆತ ಸತೀಶ್ ಈ ನಡುವೆ ನಮ್ಮನ್ನ ನೋಡಲಿಕ್ಕೇ ಬರುವುದಿಲ್ಲ ಯಾಕೋ ಅಂತ ಅಂದರು."

[ಸತೀಶನ ನಿಷ್ಕ್ರಮಣ.]

"ಲೋ, ರಾಮಚರಣಾ, ನಿಮ್ಮ ಅಮ್ಮಾವರನ್ನ ಸ್ವಲ್ಪ ಕರೆಯೋ ಈ ಕಡೆ."

[ಸುಕುಮಾರಿಯ ಪ್ರವೇಶ.]

ಸುಕುಮಾರಿ– "ಏನು ನಿಷ್ಕರ್ಷೆ ಮಾಡಿದಿರಿ?"

ಶಶಧರ– "ಒಂದು ಚಮತ್ಕಾರವಾದ ಪ್ಲ್ಯಾನ್ ಕಂಡುಹಿಡಿದಿದ್ದೇನೆ."

ಸುಕುಮಾರಿ– "ನಿಮ್ಮ ಪ್ಲ್ಯಾನ್ ಎಷ್ಟು ಚಮತ್ಕಾರವಾಗಿರತ್ತೆ ಅನ್ನೋದು ನನಗೆ ಗೊತ್ತು ಬಿಡಿ. ಎಲ್ಲಾದರೂ ಹೋಗಲಿ, ಸತೀಶನನ್ನ ಈ ಮನೆಯಿಂದ ಏನಾದರೂ ಮಾಡಿ ಹೊರಗೆ ಹೊರಡಿಸುತೀರಿ ತಾನೆ?"

ಶಶಧರ– "ನಾನು ಹಾಗೆ ಮಾಡದೆಹೋದರೆ ಇನ್ನು ನನ್ನ ಪ್ಲ್ಯಾನ್ ಯಾಕೆ? ನಾನೇನು ನಿಷ್ಕರ್ಷೆ ಮಾಡಿದೆ ಅಂದರೆ ಸತೀಶನಿಗೆ ನಮ್ಮ ಹೆಸರಿನಲ್ಲಿರುವ ಮಾಣಿಕ್‌ಪುರದ ಜಮೀನನ್ನ ಅವನ ವಿದ್ಯಾಭ್ಯಾಸಕ್ಕೋಸ್ಕರ ಬರೆದುಕೊಟ್ಟುಬಿಡುತ್ತೇನೆ.– ಆಗ ಅವನು ಸ್ವಚ್ಛಂದವಾಗಿ ತನ್ನ ಖರ್ಚಿನಲ್ಲಿ ತಾನು ಅಲಾಯದಿಯಾಗಿ ಇರೋದಕ್ಕೆ ಆಗತ್ತೆ. ನಿನ್ನನ್ನ ಇನ್ನುಮೇಲಿಂದ ಬೇಸರಪಡಿಸಬೇಕಾಗಿಲ್ಲ."

ಸುಕುಮಾರಿ– "ಆಹಾ...ಅದೆಷ್ಟು ಚೆನ್ನಾಗಿದೆಯೋ ನಿಮ್ಮ ಪ್ಲ್ಯಾನು! ಅಬ್ಬ, ಏನು ಮೈಮರೆಯಿಸಿಬಿಟ್ಟರಿ ನನಗೆ...ಅಷ್ಟು ಚೆನ್ನ! ಸಾಕು ಸುಮ್ಮನಿರಿ... ನೀವೋ ನಿಮ್ಮ ಪ್ಲ್ಯಾನೋ! ಅಂತಹ ಹುಚ್ಚು ಕೆಲಸ ಎಂದಿಗೂ ಮಾಡಬೇಡಿ, ಹೇಳಿದ್ದೀನಿ ಈಗಲೇ!"

ಶಶಧರ– "ನೋಡಿಲ್ಲಿ. ಒಂದು ಕಾಲದಲ್ಲಿ ಅವನಿಗೇ ನಮ್ಮ ಆಸ್ತಿಯನ್ನೆಲ್ಲ ಕೊಡುವ ಮಾತಿತ್ತು. ಹೌದೋ ಇಲ್ಲವೋ?"

ಸುಕುಮಾರಿ– "ಆಗ ನಮ್ಮ ಹರೇನ ಇನ್ನೂ ಹುಟ್ಟಿರಲಿಲ್ಲ. ಅಲ್ಲದೆ ನಿಮ್ಮ ಅಂದಾಜೇನು, ನಿಮಗಿನ್ನು ಮಕ್ಕಳಾಗೋದೇ ಇಲ್ಲ ಅಂತಲೆ?"

ಶಶಧರ– "ಸುಕು, ಯೋಚಿಸಿ ನೋಡು, ನಾವೆಷ್ಟು ಅನ್ಯಾಯ ಮಾಡಿದ್ದೇವೆ. ಹೋಗಲಿ, ಹೀಗಂತ ಅಂದುಕೋ, ನಮಗಿಬ್ಬರು ಗಂಡಮಕ್ಕಳು ಅಂತ."

ಸುಕು– "ನನಗೆ ಅಷ್ಟೆಲ್ಲಾ ಗೊತ್ತಾಗೋದಿಲ್ಲ. ನೀವೇನಾದರೂ ಅಂಥ ಕೆಲಸಮಾಡಿದಿರಿ ಅಂದರೆ, ನಾನು ಕುತ್ತಿಗೆಗೆ ಹಗ್ಗ ಕಟ್ಟಿಕೊಂಡು ಸಾಯುತ್ತೇನೆ... ನಾನೀಗಲೇ ಹೇಳಿದ್ದೇನೆ ನಿಮಗೆ."

[ಸುಕುಮಾರಿಯ ನಿಷ್ಕ್ರಮಣ, ಸತೀಶನ ಪ್ರವೇಶ.]

ಶಶಧರ– "ಏನೋ, ಸತೀಶ್, ಥಿಯೇಟರಿಗೆ ಹೋಗಲಿಲ್ಲವೇ?"

ಸತೀಶ– "ಇಲ್ಲ, ದೊಡ್ಡಪ್ಪಾ, ಇನ್ನು ಇವತ್ತು ಥಿಯೇಟರು ಬೇಕಾಗಿಲ್ಲ. ಈಗ ನೋಡಿ, ಬಹಳ ದಿನಗಳಾದ ಮೇಲೆ ಮಿಸ್ಟರ್ ಭಾದುಡಿಯವರ ಕಡೆಯಿಂದ ನನಗೆ ಕರೆಯೋಲೆ ಬಂದಿದೆ. ನಿಮ್ಮ ದಾನಪತ್ರದ ಫಲ ನೋಡಿ. ಪ್ರಪಂಚದ

ಮೇಲೇ ನನಗೆ ಅಸಹ್ಯ ಹುಟ್ಟಿಬಿಟ್ಟಿದೆ, ದೊಡ್ಡಪ್ಪಾ. ನಾನು ನಿಮ್ಮ ಆ ಜಪ್ತಿನನ್ನ ತಗೋಳೋದಿಲ್ಲ ಅಂತ ಮಾಡಿದ್ದೇನೆ."

ಶಶಧರ– "ಯಾಕೋ ಸತೀಶ?"

ಸತೀಶ– "ನಾನು ಕಳ್ಳವೇಷದಲ್ಲಿ ಪ್ರಪಂಚದ ಯಾವ ಸುಖವನ್ನೂ ಅನುಭವಿಸುವುದಕ್ಕೆ ತಯಾರಿಲ್ಲ. ಸ್ವಂತ ಯೋಗ್ಯತೆಗೆ ಬೆಲೆಯೇನಾದರೂ ಇದ್ದರೆ, ಆ ಬೆಲೆಯಿಂದ ಎಷ್ಟು ಸಿಗುತ್ತೋ ಅಷ್ಟನ್ನ ಮಾತ್ರ ಅನುಭವಿಸುತೇನೆ, ಅದಕ್ಕಿಂತಲೂ ಒಂದು ಕುರುಡು ಕಾಸು ಹೆಚ್ಚಾದರೂ ನನಗೆ ಬೇಡ. ಅದೂ ಅಲ್ಲದೆ, ನೀವು ನನಗೆ ನಿಮ್ಮ ಆಸ್ತಿಯ ಒಂದು ಭಾಗ ಕೊಡಬೇಕು ಅಂತ ಇದ್ದಿರಲ್ಲ, ದೊಡ್ಡಮ್ಮನ ಒಪ್ಪಿಗೆ ತಗೊಂಡಿದ್ದೀರಾ ಅದಕ್ಕೆ?"

ಶಶಧರ– "ಇಲ್ಲ, ಅವಳು ಅದಕ್ಕೆ– ಅಂದರೆ ಅದರ ಏರ್ಪಾಡನ್ನ ಆಮೇಲೆ ಮಾಡೋಣಂತೆ. ತತ್‌ಕ್ಷಣ ಅವಳದಕ್ಕೆ ಒಪ್ಪಿಗೆ ಕೊಡದೇ ಇರಬಹುದು. ಆದರೆ–"

ಸತೀಶ– "ನೀವು ಆಕೆಗೆ ಹೇಳಿದ್ದೀರೇನು?"

ಶಶಧರ– "ಹೂಂ, ಹೇಳದೆ ಇರುತ್ತೇನೆಯು? ಒಳ್ಳೇ ಚೆನ್ನಾಯಿತು, ಅವಳಿಗೆ ಹೇಳದೆ ಏನುತಾನೇ ಮಾಡುವುದಕ್ಕೆ ಸಾಧ್ಯ?"

ಸತೀಶ– "ಆಕೆ ಒಪ್ಪಿದ್ದಾಳಾ?"

ಶಶಧರ– "ಸಂಯಾಗಿ ಒಪ್ಪಿದ್ದಾಳೆ ಅಂತ ಹೇಳೋಕ್ಕಾಗಲ್ಲ, ನಿಜ. ಆದರೆ ವಿಶದವಾಗಿ ಎಲ್ಲ ಹೇಳಿದರೆ–"

ಸತೀಶ– "ವ್ಯರ್ಥ ಪ್ರಯತ್ನ, ದೊಡ್ಡಪ್ಪಾ. ಆಕೆಯ ಒಪ್ಪಿಗೆಯಿಲ್ಲದೆ ನಿಮ್ಮ ಆಸ್ತಿಯನ್ನ ತೆಗೆದುಕೊಳ್ಳಲು ಇಷ್ಟವಿಲ್ಲ ನನಗೆ. ತಾವು ಆಕೆಗೆ ಹೇಳಿ, ಇದುವರೆಗೆ ಆಕೆ ನನಗೆ ಹಾಕಿರುವ ಅನ್ನ ನಾನು ವಾಪಸು ಕೊಡದೆ ಹೋದರೆ ನಾನು ಬದುಕುವುದಿಲ್ಲ. ಆಕೆಯ ಋಣವನ್ನೆಲ್ಲ ನಾನು ಬಡ್ಡಿ, ಚಕ್ರಬಡ್ಡಿ ಸೇರಿಸಿ ತೀರಿಸಿಬಿಟ್ಟೆ ಅಂದರೆ, ಆಗ ಸುಖವಾಗಿ ಉಸಿರು ಬಿಡಬಹುದು."

ಶಶಧರ– "ಅದೇನೂ ಅಗತ್ಯವಿಲ್ಲವೋ, ಸತೀಶ್. ನಿನಗೆ ಏನಾದರೂ ಮಾಡಿ ಗುಟ್ಟಾಗಿ ಸ್ವಲ್ಪ ನಗದು ಹಣ ನಾನು ಕೊಡೋಣ ಅಂತ–"

ಸತೀಶ– "ಛೇ ಬೇಡ ದೊಡ್ಡಪ್ಪಾ. ಇನ್ನು ಋಣ ಹೆಚ್ಚಿಸಬೇಡಿ. ನಿಮ್ಮ ಹತ್ತಿರ ಕೇವಲ ಒಂದು ಕೇಳಿಕೆ ಇದೆ– ಏನು ಅಂದರೆ ನಿಮ್ಮ ಇಂಗ್ಲಿಷ್ ಸ್ನೇಹಿತರು ಯಾರ ಆಫೀಸಿನಲ್ಲಾದರೂ ನನಗೊಂದು ಕೆಲಸ ಕೊಡಿಸಬೇಕು ಅಂತ ಇದ್ದಿರಿ, ಅದೊಂದು ಮಾತ್ರ ಬೇಗ ನಡೆಸಿಕೊಟ್ಟುಬಿಟ್ಟರೆ–"

ಶಶಧರ– "ಮಾಡುತೀಯೋ ಕೆಲಸ?"

ಸತೀಶ– "ಇಷ್ಟೆಲ್ಲಾ ಆದಮೇಲೂ ನಾನು ಮಾಡುವುದಕ್ಕಾಗದೆ ತಿರುಗಿ ನಾನು ದೊಡ್ಡಮ್ಮನ ಅನ್ನ ತಿಂದೆ ಅಂದರೆ ನನಗೆ ತಕ್ಕ ಶಿಕ್ಷೆ ಆಗಬೇಕು ಆಗ."

೧೭

ಸುಕುಮಾರಿ– "ನೋಡಿ ಈಗ, ಸತೀಶ ಹೇಗೆ ಕಷ್ಟಪಟ್ಟು ದುಡೀತಾಯಿದ್ದಾನೆ! ನೋಡಿ, ಅಷ್ಟು ದೊಡ್ಡ ಸಾಹೇಬನಾಗಿದ್ದವನು ಈಗ ಹಳೇ ಕಾಲದ ಕರೀ ಅಲ್‌ಪಾಕಾ ಕೋಟು ಹಾಕಿಕೊಂಡು, ಕಚ್ಚೆ ಪಂಚೆ ಉಟ್ಟು ಹೇಗೆ ಹೊತ್ತಿಗೆ ಸರಿಯಾಗಿ ಆಫೀಸಿಗೆ ಹೋಗುತಾಯಿದ್ದಾನೆ."

ಶಶಧರ– "ದೊಡ್ಡ ಸಾಹೇಬ ಸತೀಶನನ್ನು ತುಂಬಾ ಹೊಗಳುತ್ತಾನೆ."

ಸುಕುಮಾರಿ– "ನೋಡಿ ಮತ್ತೆ, ನೀವೇನಾದರೂ ನಿಮ್ಮ ಜಮೀನನ್ನ ಅವನಿಗೆ ಬರೆದುಕೊಟ್ಟು ಬಿಟ್ಟಿದ್ದರೆ ಇಷ್ಟು ಹೊತ್ತಿಗಾಗಲೇ ಟೈ, ಕಾಲರ್, ಸೂಟುಗಳು, ಬೂಟುಗಳು, ಚಾವಟಿಗಳು ಎಲ್ಲಾ ಕೊಂಡು ಅದನ್ನೆಲ್ಲಾ ಹರಾಜಿಗಿಟ್ಟುಬಿಡುತಾಯಿದ್ದ, ಅದೃಷ್ಟದಿಂದ ನನ್ನ ಸಲಹೆ ತಗೊಂಡಿರಿ, ಅದರಿಂದಲೇ ಸತೀಶನೂ ಈಗೊಬ್ಬ ಮನುಷ್ಯನಾದ."

ಶಶಧರ– "ಏನು ಮಾಡುವುದು ಹೇಳು, ಬ್ರಹ್ಮ ನನಗೆ ಬುದ್ಧಿ ಕೊಡದೆ ಹೋದರೂ, ಹೆಂಡತಿ ಕೊಟ್ಟಿದ್ದಾನೆ. ನಿನಗೆ ಬುದ್ಧಿ ಕೊಡುವುದರ ಜೊತೆಗೆ ಬುದ್ಧಿಯಿಲ್ಲದಿರೋ ಗಂಡನನ್ನೂ ನಿನ್ನ ಕೈಗೊಪ್ಪಿಸಿದ್ದಾನಲ್ಲ...ಅದು ಹೇಳು. ನಾನೇ ಗೆದ್ದ ಹಾಗಾಯಿತು."

ಸುಕುಮಾರಿ– "ಒಳ್ಳೇದೊಳ್ಳೇದು. ಹುಡುಗಾಟಿಕೆ ಮಾಡೋದು ಸಾಕಿನ್ನು. ಆದರೆ ಸತೀಶನ ಮೇಲೆ ನೀವಿಷ್ಟು ದಿನ ಖರ್ಚು ಮಾಡಿದಿರಲ್ಲ, ಆ ದುಡ್ಡು ಇವತ್ತಿದ್ದಿದ್ದರೆ?"

ಶಶಧರ– "ಸತೀಶ ಹೇಳಿದ್ದಾನಲ್ಲ, ಯಾವತ್ತಾದರೊಂದು ದಿನ ಅದನ್ನೆಲ್ಲಾ ತೀರಿಸದೆ ಬಿಡುವುದಿಲ್ಲ ಅಂತ."

ಸುಕುಮಾರಿ– "ಆಹಾ, ಅವನೆಷ್ಟರಮಟ್ಟಿಗೆ ತೀರಿಸುತಾನೆ ನನಗೆ ಗೊತ್ತಿಲ್ಲದೆಯಿಲ್ಲ; ಅವನು ಇವತ್ತೇ, ಹೀಗೆಲ್ಲಾ ಡೌಲು ಮಾತು ಆಡುವುದು? ನೀವು ಹಾಗಾದರೆ ಆ ಹಣಕ್ಕೇ ಕಾದುಕೊಂಡುಕೂತಿದ್ದೀರಿ?"

ಶಶಧರ– "ಇಷ್ಟು ದಿನದವರೆಗೆ ಆ ಆಸೆಯಿಟ್ಟುಕೊಂಡಿದ್ದೆ, ಆದರೆ ನೀನು ಸಲಹೆ ಕೊಟ್ಟರೆ ಅದನ್ನ ಬಿಟ್ಟುಬಿಡುತ್ತೇನೆ."

ಸುಕು– "ಬಿಟ್ಟುಬಿಟ್ಟರೆ ನಿಮಗೆ ನಷ್ಟವಾಗೋದಷ್ಟರಲ್ಲೇ ಇದೆ ಬಿಡಿ. ಅಕೋ ಅಂದಹಾಗೆ, ನಿಮ್ಮ ಸತೀಶಬಾಬು ಬಂದ. ಕೆಲಸ ಆದಲಾಗಾಯಿತು. ಒಂದು ದಿನವೂ ನಮ್ಮ ಮನೆ ಹೊಸ್ತಿಲು ತುಳೀಲಿಲ್ಲ. ಇದೇ ಅವನ ಕೃತಜ್ಞತೆ! ನಾನು ಹೋಗುತೇನೆ."

[ಸತೀಶನ ಪ್ರವೇಶ]

ಸತೀಶ– "ದೊಡ್ಡಮ್ಮಾ, ಓಡಿಹೋಗಬೇಕಾಗಿಲ್ಲ ನೀವು. ನೋಡಿ ಇಲ್ಲಿ ನನ್ನ ಕೈಲಿ ಅಸ್ತ್ರ, ಶಸ್ತ್ರ ಯಾವುದೂ ಇಲ್ಲ. ಬರೇ ಈ ನೋಟುಗಳ ಕಟ್ಟು!"

ಶಶಧರ– "ಅರೆ, ಅಷ್ಟು ದೊಡ್ಡ ನೋಟಿನ ಕಟ್ಟು! ಇದು ಆಫೀಸಿನ ದುಡ್ಡಾದರೆ ಹೀಗೆಲ್ಲಾ ಅದನ್ನ ಕೈಯಲ್ಲಿ ಹಿಡಿದುಕೊಂಡು ಓಡಾಡುವುದು ಒಳ್ಳೇದಲ್ಲ, ಸತೀಶ್."

ಸತೀಶ– "ಇನ್ನು ಇದನ್ನ ಕೈಲಿಟ್ಟುಕೊಂಡು ಓಡಾಡುವುದಿಲ್ಲ ದೊಡ್ಡಪ್ಪಾ, ಈಗಲೇ ಇದನ್ನ ದೊಡ್ಡಮ್ಮನ ಪಾದಗಳ ಹತ್ತಿರ ವಿಸರ್ಜನೆ ಮಾಡಿಬಿಡುತ್ತೇನೆ. ಇಕೋ, ನಿಮಗೆ ನಮಸ್ಕಾರ ದೊಡ್ಡಮ್ಮಾ. ಬಹಳ ಅನುಗ್ರಹ ಮಾಡಿದ್ದಿರಿ. ಆದರೆ ಆಗ ಅದರ ಲೆಕ್ಕಾಚಾರ ಇಡಬೇಕಾಗತ್ತೆ ಅಂತ ಅಂದುಕೊಂಡಿರಲಿಲ್ಲ. ಆದ್ದರಿಂದ ವಾಪಸ್ಸು ಕೊಡುವಾಗ ಅಲ್ಪಸ್ವಲ್ಪ ಕಡಿಮೆ ಇದ್ದರೂ ಇರಬಹುದು. ಈ ಹದಿನೈದು ಸಾವಿರ ರೂಪಾಯಿ ಎಣಿಸಿಟ್ಟುಕೊಳ್ಳಿ ಈಗ. ನಿಮ್ಮ ಮುದ್ದು ಮಗನ ಪಾಯಿಸ, ಪರಮಾನ್ನದಲ್ಲಿ ಒಂದು ಅಕ್ಕಿ ಕಾಳಾದರೂ ಕಡಿಮೆಯಾಗದಿರಲಿ."

ಶಶಧರ– "ಇದೇನು ಹುಚ್ಚು, ಸತೀಶ. ಇಷ್ಟೊಂದು ಹಣ ಎಲ್ಲಿ ಸಿಕ್ಕಿತು. ನಿನಗೆ?"

ಸತೀಶ– "ನಾನು ಆರು ತಿಂಗಳಿಂದ ಗೋಣೀ ಬಟ್ಟೆಯನ್ನು ಒಟ್ಟಿಗೆ ಕೊಂಡಿಟ್ಟಿದ್ದೆ. ಈಗದರ ಬೆಲೆ ಏರಿಬಿಟ್ಟಿದೆ. ಇದು ಅದರ ಲಾಭ!"

ಶಶಧರ– "ಸತೀಶ್, ಇದು ಜೂಜಾಡಿದ ಹಾಗಾಯಿತಲ್ಲೋ!"

ಸತೀಶ– "ಜೂಜಾಟ ಇವತ್ತು ಇಲ್ಲಿಗೇ ಮುಗಿದಹಾಗೆ. ಇನ್ನು ಮೇಲೆ ಆವಶ್ಯಕವಿಲ್ಲ."

ಶಶಧರ– "ನಿನ್ನ ಈ ದುಡ್ಡನ್ನ ತಗೊಂಡು ಹೋಗು. ನನಗೆ ಬೇಕಾಗಿಲ್ಲ."

ಸತೀಶ– "ನಿಮಗೆ ನಾನು ಕೊಡಲೇಯಿಲ್ಲ, ದೊಡ್ಡಪ್ಪ, ಇದು ದೊಡ್ಡಮ್ಮನ ಋಣದ ಪಾವತಿ. ನಿಮ್ಮ ಋಣವನ್ನ ನಾನು ತೀರಿಸಲಿಕ್ಕೇ ಸಾಧ್ಯವಿಲ್ಲ."

ಶಶಧರ– "ಏನು ಸುಕೂ, ಈ ದುಡ್ಡನ್ನೆಲ್ಲಾ–"

ಸುಕು– "ಎಣಿಸಿ ನಿಮ್ಮ ಸರಾಫನ ಹತ್ತಿರ ಕೊಡಿ ಅಂದರೇ! ಇಲ್ಲೇ ಹಾಗೆ ಚದರಿಕೊಂಡು ಬಿದ್ದಿರಬೇಕೇನು?"

ಶಶಧರ– "ಸತೀಶ್ ಊಟ ಮಾಡಿಕೊಂಡು ಬಂದೆಯೇನು?"

ಸತೀಶ– "ಮನೆಗೆ ಹೋಗಿ ಊಟ ಮಾಡುತೇನೆ."

ಶಶಧರ– "ಏನು ಮಾತು? ಹೊತ್ತೆಷ್ಟಾಗಿಹೋಗಿದೆ ಇವತ್ತಿಲ್ಲೇ ಊಟ ಮಾಡಿಹೋಗು."

ಸತೀಶ– "ಇನ್ನು ಊಟ ಮಾಡುವ ಹಾಗಿಲ್ಲ, ದೊಡ್ಡಪ್ಪಾ, ಒಂದು ಸಲ ಋಣ ತೀರಿಸಿದ್ದಾಗಿದೆ. ಅನ್ನ ಋಣವನ್ನು ಮತ್ತೆ ಹೊಸದಾಗಿ ಬೆಳೆಸಲಾರೆ."

[ನಿಷ್ಕ್ರಮಣ]

ಸುಕುಮಾರಿ– "ಅವರಪ್ಪನ ಕೈಯಿಂದ ತಪ್ಪಿಸಿ ಇಷ್ಟು ದಿನ ಅವನಿಗೆ ಉಣಿಸಿ ಉಡಿಸಿ ಮನುಷ್ಯನಾಗಿ ಮಾಡಿದೆ ನಾನು. ಇವತ್ತು ನಾಲಕ್ಕು ಕಾಸು ಕೈಗೆ ಬಂದ ತತ್‌ಕ್ಷಣ ಅವನು ಮಾತಾಡೋ ಜರಬು ನೋಡಿ– ಕೃತಜ್ಞತೆ ಅಂದರೆ ಇದೇತಾನೇ....ಕಲಿ ಕಾಲ...ಅವನನ್ನೇನು ಅನ್ನೋದು?"

೧೮

ಸತೀಶ– "ದೊಡ್ಡ ಸಾಹೇಬರು ಲೆಕ್ಕದ ಪುಸ್ತಕಗಳನ್ನು ನಾಳೆ ನೋಡುತ್ತಾರೆ. ನಾನೆಂದುಕೊಂಡಿದ್ದೆ, ಇಷ್ಟರಲ್ಲಿ ಗೋಣಿಬಟ್ಟೆಯ ಹಣ ಕೈಗೆ ಬರುವುದೆಂದುಕೊಂಡಿದ್ದೆ ನಾನು. ಆಗ ಅಕೌಂಟನ್ನು ಸರಿಯಾಗಿಡಬಹುದು ಅಂತ. ಆದರೆ ಇಷ್ಟರಲ್ಲಿ ಪೇಟೆ ದರ ಇಳಿದೇಹೋಯಿತು. ಈಗ ಜೈಲಿನ ಹೊರತು ಬೇರೆ ಗತಿಯಿಲ್ಲ. ಚಿಕ್ಕ ವಯಸ್ಸಿಂದಲೂ ಅಲ್ಲಿಗೆ ಹೋಗುವ ಏರ್ಪಾಡೇ ನಡೆದುಕೊಂಡು ಬರುತ್ತಿದೆ. ಆದರೆ ನನ್ನ ಅದೃಷ್ಟಕ್ಕೆ ನಾನು ಕೈ ಕೊಡುತ್ತೇನೆ. ಈ ಪಿಸ್ತೂಲಿನಲ್ಲಿ ಎರಡು ಗೋಲಿಗಳನ್ನು ತುಂಬಿಸಿದ್ದೇನೆ. ಅವು ಸಾಕು. ನೆಲ್ಲಿ– ಇಲ್ಲ. ಇಲ್ಲ, ಆ ಹೆಸರು ಬೇಡ. ಆ ಹೆಸರು ಬೇಡ. ಆ ಹೆಸರೆತ್ತಿದರೆ ನಾನು ಸಾಯುವುದಕ್ಕಾಗುವುದಿಲ್ಲ. ಅವಳೇನಾದರೂ ನನ್ನ ಪ್ರೀತಿಸುತ್ತಿರುವುದು ನಿಜವಾದರೆ, ಆ ಪ್ರೀತಿಯನ್ನು ನಾನು ಮಣ್ಣುಪಾಲು ಮಾಡಿ ಬಂದಿದ್ದೇನೆ. ನನ್ನ ಕಾಗದದಲ್ಲೆಲ್ಲ ವಿಶದವಾಗಿ ಬಿಚ್ಚಿ ಎಲ್ಲಾ ಒಪ್ಪಿಕೊಂಡು ಬರೆದುಬಿಟ್ಟಿದ್ದೇನೆ. ಈಗ, ಈ ಗಳಿಗೆಯಲ್ಲಿ ನನಗೆ ಉಳಿದಿರುವ ಪ್ರೇಯಸಿಯೆಂದರೆ ಈ ಪಿಸ್ತೂಲು. ನನ್ನ ಅಂತಿಮ ಪ್ರೇಯಸಿ...ನನ್ನ ಹಣೆಯಲ್ಲಿ ಇದರ ಚುಂಬನವನ್ನು ಪಡೆದು ಕಣ್ಣು ಮುಚ್ಚುತ್ತೇನೆ.

"ದೊಡ್ಡಪ್ಪನ ಈ ತೋಟ ನನ್ನ ಕೈಯಿಂದ ತಯಾರಾದದ್ದು. ಎಲ್ಲೆಲ್ಲಿ ಎಂತೆಂತಹ ದುರ್ಲಭ ಗಿಡಗಳು ದೊರೆಯುತ್ತವೋ ಎಲ್ಲವನ್ನೂ ಸಂಗ್ರಹ ಮಾಡಿ ತಂದಿದ್ದೆ. ನಾನಂದುಕೊಂಡಿದ್ದೆ, ಒಂದು ದಿನ ಈ ತೋಟ ನನ್ನದೇ ಆಗುವುದೆಂದು. ಅದೃಷ್ಟವು ಯಾರ ಸಲುವಾಗಿ ನನ್ನ ಕೈಯಿಂದ ಈ ಗಿಡಗಳನ್ನು ನೆಡಿಸಿ ಬೆಳೆಸಿತ್ತು ಎಂದು ಆಗ ನನಗೆ ತಿಳಿಸಲಿಲ್ಲ. ಹೋಗಲಿ, ಈ ಸಣ್ಣ ಕೊಳದ ಅಂಚಿನಲ್ಲಿ ಈ ವಿಲಾಯತಿಯಿಂದ ತರಿಸಿದ ಸ್ಟಿಫನೋಟಿಸ್ ಲತಾ ಕುಂಜದಲ್ಲಿ ನನ್ನ ಬಾಳಿನ ಕಡೆಯ ಹವಾ ಸೇವನೆಯನ್ನು ಮುಗಿಸಿಬಿಡುತ್ತೇನೆ. ಸಾವಿನ ಮೂಲಕ ನಾನೀ ತೋಟವನ್ನು ವಶಮಾಡಿಕೊಂಡು ಹೋಗುತ್ತೇನೆ. ಇಲ್ಲಿ ಹವಾಸೇವನೆ ಮಾಡಲು ಬರುವುದಕ್ಕೆ ಇನ್ನು ಮುಂದೆ ಯಾರಿಗೂ ಸಾಹಸವಾಗುವುದಿಲ್ಲ. ದೊಡ್ಡಪ್ಪನಿಗೆ

ಪ್ರಣಾಮ ಮಾಡಿ ಬಂದಿದ್ದರೆ ಚೆನ್ನಾಗಿತ್ತು. ಪ್ರಪಂಚದಲ್ಲಿ ಇವರೊಬ್ಬರ ಪಾದಧೂಳಿಯೊಂದು ತೆಗೆದುಕೊಂಡು ಹೋಗಿದ್ದಿದ್ದರೆ ನನ್ನ ಬಾಳು ಸಾರ್ಥಕವಾಗುತ್ತಿತ್ತು. ಆದರೆ ಈಗ ಸಂಜೆಯ ಹೊತ್ತು ಆತ ನಮ್ಮ ದೊಡ್ಡಮ್ಮನ ಜೊತೆಯಲ್ಲಿರುತ್ತಾರೆ. ಅಂಥದರಲ್ಲಿ ನನ್ನ ಈ ಅವಸ್ಥೆಯಲ್ಲಿ ದೊಡ್ಡಮ್ಮನ ಎದುರಿಗೆ ಕಾಣಿಸಿಕೊಳ್ಳುವುದಕ್ಕೆ ನನಗೆ ಧೈರ್ಯವಿಲ್ಲ. ಅದೂ ಅಲ್ಲದೆ ಈ ಪಿಸ್ತೂಲು ಗೋಲಿಯಿಂದ ತುಂಬಲ್ಪಟ್ಟಿದೆ. ಸಾಯುವಾಗ ಎಲ್ಲರನ್ನೂ ಕ್ಷಮಿಸಿ ಶಾಂತಿಯಿಂದ ಸಾಯಬೇಕೆಂಬ ಉಪದೇಶ ಶಾಸ್ತ್ರದಲ್ಲಿದೆ. ಆದರೆ ನಾನು ಕ್ಷಮಿಸಲಾಗಲಿಲ್ಲ. ನನಗೀಗ ಸಾಯುವ ಸಮಯವಲ್ಲ. ನನಗೆಷ್ಟೋ ಸುಖಗಳ ಕಲ್ಪನೆಯಿತ್ತು, ಎಷ್ಟೋ ಭೋಗಗಳ ಆಸೆಗಳಿದ್ದುವು. ಈ ನನ್ನ ಅಲ್ಪ ಆಯುಸ್ಸಿನಲ್ಲಿ ಅವೆಲ್ಲ ತುಂಡು ತುಂಡಾಗಿ ಮುರಿದು ಹೋದುವು. ನನಗಿಂತಲೂ ಎಷ್ಟೋ ಅಯೋಗ್ಯರು, ಎಷ್ಟೋ ಮೂರ್ಖರು– ಇಂಥವರಿಗೆ ಎಷ್ಟೋ ಬಗೆಯ ಅಯಾಚಿತವಾದ ಸುಖಗಳು ಒದಗಿವೆ, ನನಗೆ ಒದಗಿದ್ದರೂ ಕೈಗೆ ಬರಲಿಲ್ಲ. ಇದಕ್ಕೆ ಕಾರಣರಾದವರನ್ನು ನಾನೇನು ಮಾಡಿದರೂ ಕ್ಷಮಿಸಲಾರೆ. ಎಂದಿಗೂ ಸಾಧ್ಯವಿಲ್ಲ. ನನ್ನ ಮೃತ್ಯು ಕಾಲದ ಅಭಿಶಾಪ ಅವರು ಬದುಕಿರುವವರೆಗೂ ಅವರನ್ನು ಹಿಮ್ಮೆಟ್ಟುತ್ತಿರುತ್ತದೆ. ಅವರ ಸುಖಗಳೆಲ್ಲವನ್ನೂ ಹಾಳುಮಾಡುತ್ತಿರುತ್ತದೆ. ಅವರ ದಾಹದ ನೀರನ್ನು ವಿಷವಾಗಿ ಮಾಡುವ ಸಲುವಾಗಿ ನನ್ನ ಸುಟ್ಟ ಬಾಳಿನ ದಾಹವನ್ನು ನಾನಿಲ್ಲೇ ಇಟ್ಟು ಹೋಗಬಲ್ಲೆ.

“ಹಾಯ್, ಹಾಯ್! ಗೋಳಿನ ಪ್ರಪಂಚ...ಬರೇ ಗೋಳು, ಅಭಿಶಾಪಕ್ಕೆ ಯಾವ ಶಕ್ತಿಯೂ ಇಲ್ಲ. ನನ್ನ ಸಾವು ಕೇವಲ ನನ್ನನ್ನೇ ಮುಗಿಸಿಬಿಡುತ್ತದೆ. ಬೇರೆ ಯಾರ ಮೈಮೇಲೂ ಕೈ ಮಾಡುವ ಹಾಗಿಲ್ಲ. ಯಾರು ನನ್ನ ಬಾಳನ್ನು ಚೂರುಚೂರಾಗಿ ಛಿದ್ರ ಮಾಡಿದ್ದಾರೋ ಅವರನ್ನು ನಾನು ಸತ್ತೂ ಏನೂ ಮಾಡಲಾರೆ. ಅವರಿಗೆ ಯಾವ ನಷ್ಟವೂ ಆಗುವುದಿಲ್ಲ. ಸುಖವಾಗೇ ಇರುತ್ತಾರೆ. ಅವರು ಬೆಳಗೆದ್ದು ಹಲ್ಲುಜ್ಜುವುದರಿಂದ ಮೊದಲುಗೊಂಡು ರಾತ್ರಿ ಸೊಳ್ಳೆಪರದೆ ಹರಡಿಕೊಂಡು ಮಲಗುವವರೆಗೂ ಮಾಡುವ ಯಾವ ತುಚ್ಛ ಕೆಲಸಗಳಿಗೂ ಭಂಗ ಬರುವುದಿಲ್ಲ. ಆದರೆ ನನ್ನ ಪಾಲಿನ ಸೂರ್ಯ– ಚಂದ್ರ– ತಾರಾ– ಮಂಡಿತವಾದ ಈ ಸುಂದರ ಪ್ರಪಂಚ ಮಾತ್ರ ಒಂದೇ ಒಂದು ಸಿಡಿತದಲ್ಲಿ ಸೊನ್ನೆಯಾಗುತ್ತದೆ. ಮತ್ತು ನನ್ನ ಆ ನೆಲ್ಲಿ– ಉಹುಂ...ಬೇಡ ಆ ಹೆಸರೆತ್ತುವುದು ಬೇಡ.

“ಅಲ್ಲಿ ಯಾರು ಬರುತ್ತಿರುವುದು? ಹರೇನ್! ಸಂಜೆಯ ಹೊತ್ತು ತೋಟದೊಳಗೆ ಬಂದಿದ್ದಾನೆ. ತಂದೆ ತಾಯಿಯರಿಗೆ ಕಾಣದಂತೆ ಕಳ್ಳತನದಿಂದ ಸೀಬೇಕಾಯಿಗಳನ್ನು ಕಿತ್ತು ತಿನ್ನುವುದಕ್ಕೆ ಬಂದಿದ್ದಾನೆ. ಅವನ ಆಕಾಂಕ್ಷೆ ಆ ಸೀಬೇಕಾಯಿಗಳಿಗಿಂತಲೂ ಮೇಲೇರಲಾರದು, ಈ ಸೀಬೇ ಗಿಡದ ತಳಗಡೆಯ ರೆಂಬೆಯಲ್ಲೇ ಅವನ ಅಧಿಕಾಂಶ ಸುಖವು ಹಣ್ಣಾಗಿದೆ. ಪ್ರಪಂಚದಲ್ಲಿ ಇವನ

ಜೀವಕ್ಕೆ ಏನು ಬೆಲೆಯಿದೆ? ಗಿಡದ ಕಸುಗಾಯೊಂದು ಹೇಗೋ ಈ ಪ್ರಪಂಚದಲ್ಲಿ ಇವನ ಅಪಕ್ವ ಜೀವವೂ ಹಾಗೇ...ಅದಕ್ಕಿಂತಲೂ ಇದಕ್ಕೆ ಹೆಚ್ಚು ಬೆಲೆ ಹೇಗೆ? ಈಗಲೇ ಅದನ್ನು ಛಿದ್ರಮಾಡಿ ಬಿಟ್ಟರೆ, ಜೀವನದ ಎಷ್ಟೋ ನಿರಾಸೆಗಳಿಂದದನ್ನು ತಪ್ಪಿಸಬಹುದು- ಎಂದು ಹೇಗೆ ಹೇಳಲು ಸಾಧ್ಯ? ಮತ್ತೆ ದೊಡ್ಡಮ್ಮ ಧೂಳಿನಲ್ಲಿ ಹೊರಳಾಡುತ್ತ ಇರುತ್ತಾಳೆ. ಆಹ!

"ಸರಿಯಾದ ಸಮಯ! ಸರಿಯಾದ ಸ್ಥಳ- ಸರಿಯಾದ ವ್ಯಕ್ತಿ. ಕೈಯನ್ನಿನ್ನು ತಡೆದಿಡಲಾರೆ. ನನ್ನ ಕೈಯನ್ನೀಗ ಹೇಗೆ ಹಿಡಿದಿಡಲಿ? ಈ ಕೈಯಿಂದೀಗ ಏನು ಮಾಡುವುದು?"

(ಛಡಿಯಿಂದ ಸತೀಶನು ಜೋರಾಗಿ ಹತ್ತಿರಿದ್ದ ಗಿಡಗಳನ್ನೆಲ್ಲಾ ಒಂದೊಂದಾಗಿ ಬಾರಿಸತೊಡಗುವನು. ಅದರಿಂದ ಅವನ ಉತ್ತೇಜನವೂ ಇನ್ನೂ ಹೆಚ್ಚಾಗಲು ತೊಡಗುವುದು. ಕಡೆಗೆ ತನ್ನ ಕೈಗೇ ಜೋರಾಗಿ ಹೊಡೆದುಕೊಳ್ಳುವನು. ನೋವೇ ತೋಚುವುದಿಲ್ಲ. ಕಡೆಗೆ ಜೇಬಿನಿಂದ ಪಿಸ್ತೂಲನ್ನು ತೆಗೆದು ಹರೇನನ ಕಡೆ ವೇಗವಾಗಿ ಧಾವಿಸುವನು.)

ಹರೇನ್- (ಬೆಚ್ಚಿ ಬಿದ್ದು) "ಇದೇನು? ಅಣ್ಣಾ? ಅಣ್ಣಾ, ಹೇಳಬೇಡಣ್ಣಾ, ನಿನ್ನ ಕಾಲಿಗೆ ಬೀಳ್ತೇನೆ, ಹೇಳಬೇಡಣ್ಣ ಅಮ್ಮನಿಗೆ-"

ಸತೀಶ- (ಚೀತ್ಕಾರ ಮಾಡುತ್ತ) "ದೊಡ್ಡಪ್ಪಾ, ದೊಡ್ಡಪ್ಪಾ, ಬನ್ನಿ ಬೇಗ, ಕಾಪಾಡಿ ಬೇಗ....ನಿಧಾನ ಮಾಡಬೇಡಿ- ನಿಮ್ಮ ಮಗನ್ನ ಈಗಲೇ ಕಾಪಾಡೀ!"

ಶಶಧರ- (ಓಡಿ ಬಂದು) "ಏನಾಯಿತು, ಸತೀಶ್, ಏನಾಯಿತು."

ಸುಕುಮಾರಿ- (ಓಡಿ ಬಂದು) "ಏನಾಯಿತು, ನನ್ನ ಮುದ್ದು ಕಂದನಿಗೆ ಏನಾಯಿತು?"

ಹರೇನ್- "ಏನೂ ಆಗಿಲ್ಲ, ಅಮ್ಮಾ...ಏನೂ ಆಗಿಲ್ಲ, ಅಣ್ಣ ತಮಾಷೆ ಮಾಡುತಾಯಿದ್ದಾನೆ."

ಸುಕುಮಾರಿ- "ಇದೇನು ವಿಚಿತ್ರ ತಮಾಷೆ, ಅಸಹ್ಯ! ಛಿ ಛಿ! ಎಲ್ಲ ಅತಿರೇಕವೇ! ನೋಡಿ ಮತ್ತೆ ನನ್ನ ಎದೆ ಇನ್ನೂ ಢವಢವ ಅಂತ ಹೊಡೆದುಕೊಳ್ಳುತ್ತಾಯಿದೆ. ಸತೀಶ ಹೆಂಡಗಿಂಡ ಕುಡಿದಿದ್ದಾನೇನೋ!"

ಸತೀಶ- "ಓಡಿ, ಓಡಿಹೋಗಿ, ನಿಮ್ಮ ಮಗನನ್ನ ಕರೆದುಕೊಂಡು ಈಗಲೇ ಓಡಿ. ಇಲ್ಲದೆ ಹೋದರೆ ನಿಮಗೆ ಗತಿಯಿಲ್ಲ ಇನ್ನ."

[ಹರೇನನ್ನ ಎತ್ತಿಕೊಂಡು ಬೇಗ ಬೇಗ ಸುಕುಮಾರಿಯು ಓಡುವಳು]

ಶಶಧರ- ಸತೀಶಾ, ಹಾಗೆಲ್ಲಾ ಕಳವಳಪಡಬೇಡ. ವಿಷಯ ಏನು ಹೇಳು ನನಗೆ. ಹರೇನನ್ನ ಯಾರ ಕೈಯಿಂದ ಕಾಪಾಡು ಅಂದೆ?

ಸತೀಶ– ನನ್ನ ಕೈಯಿಂದ! (ಪಿಸ್ತೂಲನ್ನು ತೋರಿಸುತ್ತ) ಇಕೋ ನೋಡಿ, ದೊಡ್ಡಪ್ಪಾ.

[ವೇಗವಾಗಿ ವಿಧುಮುಖಿಯ ಪ್ರವೇಶ]

ವಿಧು– "ಸತೀಶ್, ನೀನು ಮತ್ತೆ ಏನು ಅನಾಹುತ ಮಾಡಲಿಕ್ಕೆ ಹೊರಟಿದ್ದೀಯೋ? ನಿಮ್ಮ ಆಫೀಸಿನ ಸಾಹೇಬ ಪೋಲೀಸರ ಜೊತೆಯಲ್ಲಿ ಬಂದು ನಮ್ಮ ಮನೆ ಝಡ್ತಿ ಮಾಡಲಿಕ್ಕೆ ಬಂದಿದ್ದಾರೆ. ಓಡಿಹೋಗುವ ಕೆಲಸವೇನಾದರೂ ಮಾಡಿದ್ದರೆ ಈ ಕ್ಷಣವೇ ಓಡಿಹೋಗು...ಹಾಯ್, ಭಗವಂತ! ನಾನ್ಯಾವ ಪಾಪವನ್ನೂ ಮಾಡಿಲ್ಲ. ನನ್ನ ಹಣೆಯಲ್ಲೇ ಇಂಥ ಸಂಕಟಗಳು ಬರೆದಿರಬೇಕೆ?"

ಸತೀಶ– "ಹೆದರುವುದು ಬೇಡ. ತಪ್ಪಿಸಿಕೊಳ್ಳುವ ಉಪಾಯ ನನ್ನ ಕೈಯಲ್ಲೇ ಇದೆ."

ಶಶಧರ– "ಹಾಗಾದರೆ ಏನು ನೀನು–!"

ಸತೀಶ– "ಹೌದು, ದೊಡ್ಡಪ್ಪಾ! ನೀವು ಏನು ಸಂದೇಹಪಡುತ್ತಾಯಿದ್ದೀರೋ ಅದು ನಿಜ. ನಾನು ಕಳ್ಳತನಮಾಡಿ ದೊಡ್ಡಮ್ಮನ ಋಣ ತೀರಿಸಿದ್ದೇನೆ. ನಾನು ಕಳ್ಳ, ಅಮ್ಮಾ, ನೀನು ಕೇಳಿ ಸಂತೋಷಪಡು, ನಾನು ಕಳ್ಳ. ನಾನು ಕೊಲೆಗಡುಕ. ಇನ್ನು ಅಳಬೇಕಾಗಿಲ್ಲ. ಹೋಗು, ಹೋಗು, ನನ್ನೆದುರಿಗೆ ನಿಲ್ಲಬೇಡ, ನನಗೆ ಅಸಹ್ಯವಾಗುತಾಯಿದೆ."

ಶಶಧರ– "ಸತೀಶ್, ನೀನು ನನ್ನ ಕಡೆಯೂ ನಿನ್ನ ಋಣ ತೀರಿಸಬೇಕಾಗಿದೆ. ಅದನ್ನ ತೀರಿಸಿಬಿಟ್ಟು ಹೋಗು."

ಸತೀಶ– "ಹೇಳಿ, ಹೇಗೆ ತೀರಿಸಲಿ? ನಾನು ಏನುತಾನೇ ಕೊಡಬಲ್ಲೆ ನಿಮ್ಮ ಋಣ ತೀರಿಸಲಿಕ್ಕೆ? ಏನಿದೆ ನನ್ನ ಹತ್ತಿರ ಈಗ?"

ಶಶಧರ– "ಆ ಪಿಸ್ತೂಲನ್ನ ಕೊಡು."

ಸತೀಶ– "ತಗೊಳ್ಳಿ ಹಾಗಾದರೆ, ನಾನು ಜೈಲಿಗೆ ಹೋಗುತ್ತೇನೆ. ಜೈಲಿಗೆ ಹೋಗದೆ ಹೋದರೆ ನನ್ನ ಪಾಪದ ಋಣ ತೀರಿಸಿದ ಹಾಗೆ ಆಗುವುದಿಲ್ಲ."

ಶಶಧರ– "ಪಾಪದ ಋಣ ಶಾಸ್ತಿಯಿಂದಲೇ ತೀರುವುದಿಲ್ಲವೋ, ಸತೀಶ. ಕರ್ಮದ ಮೂಲಕ ತೀರತ್ತೆ, ನೀನು ಖಂಡಿತ ತಿಳಿದುಕೋ. ನಾನು ಕೇಳಿಕೊಂಡರೆ ನಿಮ್ಮ ದೊಡ್ಡ ಸಾಹೇಬರು ನಿನ್ನನ್ನು ಜೈಲಿಗೆ ಕಳುಹಿಸಲಾರರು. ಈಗಲಿಂದ ಬದುಕನ್ನು ಸಾರ್ಥಕ ಮಾಡಿಕೊಳ್ಳುವುದಕ್ಕಾಗೇ ಬದುಕಿರು."

ಸತೀಶ– "ದೊಡ್ಡಪ್ಪಾ, ಈಗ ಬದುಕಿರುವುದೆಂದರೆ ಎಷ್ಟು ಕಷ್ಟ ನನಗೆ, ನಿಮಗೇ ಗೊತ್ತು. ಸಾಯುತ್ತೇನೆ ಎಂದು ಮನಸ್ಸು ಮಾಡಿ ಬಿಟ್ಟು, ನನ್ನ ಕಾಲಡಿಯಿಂದ

ನನ್ನ ಕಡೆಯ ಸುಖದ ಆಧಾರವನ್ನೇ ನಾನು ಒದ್ದು ಎಸೆದು ಬಂದಿದ್ದೇನೆ. ಈಗ ಯಾವುದನ್ನ ನಂಬಿಕೊಂಡು ಬದುಕಿರಲಿ?"

ಶಶಧರ– "ಆದರೂ ಬದುಕಿರಲೇಬೇಕು. ನನ್ನ ಋಣ ಹೀಗೇ ತೀರಿಸಬೇಕು ನೀನು. ನನ್ನನ್ನ ತಪ್ಪಿಸಿ ನೀನು ಓಡಿಹೋಗಕೂಡದು."

ಸತೀಶ– "ಹಾಗಾದರೆ ಹಾಗೇ ಆಗಲಿ."

ಶಶಧರ– "ನನ್ನದು ಇನ್ನೊಂದು ಕೇಳಿಕೆಯಿದೆ, ಕೇಳು. ನಿನ್ನ ತಾಯಿಯನ್ನೂ, ನಿನ್ನ ದೊಡ್ಡಮ್ಮನನ್ನೂ ಎದೆಯಾರೆ ಕ್ಷಮಿಸಿಬಿಡು."

ಸತೀಶ– "ನೀವು ನನ್ನನ್ನು ಕ್ಷಮಿಸಿರಬೇಕಾದರೆ ನಾನು ಕ್ಷಮಿಸಲಿಕ್ಕಾಗದಂಥವರು ಯಾರಿದಾರೆ, ಈ ಪ್ರಪಂಚದಲ್ಲಿ?"

[ಪ್ರಣಾಮ ಮಾಡುತ್ತ]

"ಅಮ್ಮ, ಆಶೀರ್ವಾದ ಮಾಡು, ನಾನು ಏನು ಬಂದರೂ ಸಹಿಸಿಕೊಳ್ಳುವ ಹಾಗೆ, ನನ್ನ ಗುಣದೋಷಗಳೆಲ್ಲವನ್ನೂ ನೀನು ಹೇಗೆ ಗ್ರಹಣ ಮಾಡಿದ್ದೀಯೋ ಹಾಗೆ ನಾನೂ ಈ ಸಂಸಾರವನ್ನು ಗ್ರಹಣ ಮಾಡುವಂಥ ಸ್ಥೈರಣೆ ಬರುವ ಹಾಗೆ.

ವಿಧು– "ಅಪ್ಪಾ, ಮಗು, ನಾನೇನು ಹೇಳಲಿ. ತಾಯಿಯಾಗಿ ನಾನು ನಿನ್ನನ್ನ ಸ್ನೇಹದಲ್ಲೇ ಕಂಡಿದ್ದೇನೆ. ಆದರೆ ನಿನ್ನ ಒಳ್ಳೆಯದು ಯಾವುದೋ ಅದನ್ನ ಸ್ವಲ್ಪವೂ ಮಾಡಲಾಗಲಿಲ್ಲ. ದೇವರು ನಿನಗೆ ಒಳ್ಳೆಯದು ಮಾಡಬೇಕು. ಅಕ್ಕನ ಬಳಿ ನಾನು ಹೋಗಿ ನಿನ್ನ ಪರವಾಗಿ ಕ್ಷಮೆ ಕೇಳಿಕೊಳ್ಳುತ್ತೇನೆ."

[ಹೋಗುವಳು]

ಶಶಧರ– "ಹಾಗಾದರೆ ಬಾ, ಇನ್ನು, ಸತೀಶ್, ನಮ್ಮ ಮನೆಯಲ್ಲೇ ಇವತ್ತು ಊಟ ಮಾಡಿ ಹೋಗಬೇಕು."

[ಬೇಗ ಬೇಗ ನಳಿನಿಯ ಪ್ರವೇಶ]

ನಳಿನಿ– "ಸತೀಶ್!"

ಸತೀಶ– "ನಳಿನೀ...ನೀನಿಲ್ಲಿ!"

ನಳಿನಿ– "ಇದರರ್ಥವೇನು? ಈ ಕಾಗದವನ್ನ ನನಗೇಕೆ ಬರೆದೆ?"

ಸತೀಶ– "ಅರ್ಥ? ಅರ್ಥ ನೀನು ಹೇಗೆ ತಿಳಿದುಕೊಂಡೆಯೋ ಅದೇ ಸರಿ, ನಾನು ನಿನಗೆ ಬೈದು, ದೂಷಿಸಿ ಬರೆದಿಲ್ಲ. ಹಾಗಾದರೆ ನನ್ನ ಭಾಗ್ಯದಲ್ಲಿ ಎಲ್ಲಾ ತಿರುಗು ಮುರುಗಾಗಿಬಿಡುತ್ತಿದೆ. ನೀನು ಬಹುಶಃ ಅಂದುಕೊಂಡಿರಬಹುದೇನೋ,

ನಾನು ನಿನ್ನ ಕರುಣೆಯನ್ನ ಉದ್ರೇಕಿಸುವುದಕ್ಕೆ ಹೀಗೆ ಬರೆದಿದ್ದೇನೆ ಎಂದು. ಆದರೆ ದೊಡ್ಡಪ್ಪ ಸಾಕ್ಷಿ ಇದ್ದಾರೆ. ನಾನೀಗ ನಟನೆ ಮಾಡುತ್ತಿಲ್ಲ. ಆದರೂ ವಿಶ್ವಾಸವಾಗದೆ ಹೋದರೆ ನನ್ನ ಪ್ರತಿಜ್ಞೆ ಪೂರೈಸುವುದಕ್ಕೆ ಈಗಲೂ ಸಮಯವಿದೆ ನನಗೆ."

ನಳಿನಿ– "ಏನಿದು ಹುಚ್ಚನ ಹಾಗೆ ಹರಟುತಾಯಿದ್ದೀಯಾ? ನಾನು ನಿನ್ನ ಹತ್ತಿರ ಅಂಥ ತಪ್ಪೇನು ಮಾಡಿದ್ದೇನೆ, ನೀನು ನನ್ನ ಬಗ್ಗೆ ಇಷ್ಟು ನಿಷ್ಠುರವಾಗಿ–"

ಸತೀಶ– "ಏತಕ್ಕಾಗಿ ನಾನೀ ಸಂಕಲ್ಪಕ್ಕೆ ಬಂದೆ ಅನ್ನುವುದು ನಿನಗೆ ಗೊತ್ತು ನಳಿನಿ. ನಾನು ಒಂದೂ ಮುಚ್ಚಿಡಲಿಲ್ಲ. ಇಷ್ಟಾದರೂ ನಿನಗೆ ನನ್ನ ಮೇಲೆ ಶ್ರದ್ಧೆಯಿದೆಯೆ?"

ನಳಿನಿ– "ಶ್ರದ್ಧೆ! ಸತೀಶ್, ನಿನ್ನ ಮೇಲೆ ನನಗೆ ಇದಕ್ಕೇ ಕೋಪ ಬರೋದು. ಶ್ರದ್ಧೆಯಂತೆ! ಛಿ ಛೀ, ಶ್ರದ್ಧೆಯಂತೂ ಅನೇಕರಲ್ಲಿರತ್ತೆ. ನೀನು ಏನು ಕೆಲಸಮಾಡಿದ್ದೀಯೋ ನಾನೂ ಅದನ್ನೇ ಮಾಡಿದ್ದೀನಿ. ನಿನಗೂ ನನಗೂ ಯಾವ ವ್ಯತ್ಯಾಸವೂ ಇಲ್ಲದ ಹಾಗೆ ಮಾಡಿದ್ದೇನೆ. ಇಗೋ ನೋಡು, ನನ್ನ ಒಡವೆಗಳನ್ನೆಲ್ಲ ತಂದಿದ್ದೇನೆ. ಇವುಗಳು ಈಗಲೂ ನನ್ನವಲ್ಲ, ನಮ್ಮ ತಂದೆ, ತಾಯಿಯರದು. ನಾನು ಅವರಿಗೆ ಹೇಳದೆ ತಂದುಬಿಟ್ಟಿದ್ದೇನೆ. ಇವುಗಳ ಬೆಲೆ ಎಷ್ಟಾಗುತ್ತೋ ನನಗೆ ಸ್ವಲ್ಪವೂ ಗೊತ್ತಿಲ್ಲ. ಆದರೆ ಇವುಗಳಿಂದ ನಿನ್ನ ಉದ್ಧಾರವಾಗಲು ಸಾಧ್ಯವಿಲ್ಲವೆ?"

ಶಶಧರ– "ಉದ್ಧಾರವಾಗತ್ತಮ್ಮ, ಆಗತ್ತೆ. ಈ ಒಡವೆಗಳ ಸಂಗಡ ಇನ್ನೂ ಬೆಲೆಯಾದ ಧನ ಯಾವುದು ಕೊಟ್ಟಿದ್ದೀಯೋ ಅದರಿಂದ ಸತೀಶನ ಉದ್ಧಾರವಾಗುತ್ತದೆ."

ನಳಿನಿ– "ಅಯ್ಯೋ ಶಶಧರ ಬಾಬು, ನಾನು ನೋಡಲೇಯಿಲ್ಲ ನೀವಿಲ್ಲಿರುವುದು! ಗಾಬರಿಯಾಗಿದ್ದೆ. ಆತುರದಲ್ಲಿ ನೀವಿಲ್ಲಿರೋದೇ ನೋಡಲಿಲ್ಲ. ಕ್ಷಮಿಸಿಬಿಡಿ."

ಶಶಧರ– "ಅದಕ್ಯಾಕಮ್ಮ ಸಂಕೋಚಪಡಬೇಕು. ದೃಷ್ಟಿಯ ದೋಷ ನಮ್ಮಂಥ ಮುದುಕರಿಗೆ ಮಾತ್ರವೇ ಅಲ್ಲ ಇರುವುದು. ನಿಮ್ಮ ವಯಸ್ಸಲ್ಲಿ ನಮ್ಮಂಥವರು ಅಷ್ಟು ಬೇಗ ಕಣ್ಣಿಗೆ ಬೀಳುವುದೂ ಕಷ್ಟ. ಅದು ಹೋಗಲಿ, ಸತೀಶ, ನಿಮ್ಮ ಆಫೀಸಿನ ಸಾಹೇಬರು ಬಂದಿದಾರೆ ಅಂತ ಕಾಣುತ್ತೆ. ನಾನು ಹೋಗಿ ಅವರ ಸಂಗಡ ಮಾತುಕಥೆ ಆಡಿ ಬರುತ್ತೇನೆ. ಅಷ್ಟರ ವರೆಗೂ ನೀನು ನನ್ನ ಪರವಾಗಿ ನಮ್ಮ ನಳಿನಿಗೆ ಸರಿಯಾದ ಉಪಚಾರ ಮಾಡು. ಅಮ್ಮ, ನಳಿನಿ, ಈ ಪಿಸ್ತೂಲನ್ನು ಇನ್ನು ಮೇಲೆ ನೀನು ಭದ್ರವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಅದು ನಿನ್ನ ಜವಾಬುದಾರಿ."

೨. ಮಾಸ್ಟರ್ ಮಹಾಶಯ

೧

ರಾತ್ರಿಯಾಗ ಸುಮಾರು ಎರಡು ಘಂಟೆ. ಕಲಿಕತ್ತೆಯ ಆ ನಟ್ಟಿರುಳ ಮೌನದ ಕಡಲಲ್ಲಿ ಒಂದಿಷ್ಟು ತೆರೆಯೆಬ್ಬಿಸಿ ದೊಡ್ಡ ಜೋಡು ಕುದುರೆಯ ಸಾರೋಟೊಂದು ಭವಾನೀಪುರದ ದಿಕ್ಕಿನಿಂದ ಬಂದು ಬಿರ್ಜಿತಲಾದ ತಿರುಗಣೆಯ ಬಳಿ ನಿಂತುಕೊಂಡಿತು. ಅಲ್ಲೊಂದು 'ಠಿಕಾ' ಗಾಡಿಯನ್ನು ಕಂಡು ಸಾರೋಟಿನಲ್ಲಿದ್ದೊಬ್ಬ ವ್ಯಕ್ತಿ ಕರೆದು ಹತ್ತಿರ ತರಿಸಿದ. ಅವನ ಪಕ್ಕದಲ್ಲಿ ಕೋಟು, ಹ್ಯಾಟು ತೊಟ್ಟ ಬಂಗಾಳಿ ಯುವಕನೊಬ್ಬ ಎದುರಿನ ಆಸನದ ಮೇಲೆ ಕಾಲುನೀಡಿ ಸ್ವಲ್ಪ ಅಮಲೇರಿದ ಅವಸ್ಥೆಯಲ್ಲಿ ಕೊರಳು ಬಾಗಿಸಿ ನಿದ್ದೆ ಮಾಡುತ್ತಿದ್ದ. ಈ ಯುವಕ ಅದೇ ತಾನೆ ವಿಲಾಯಿತಿಯಿಂದ ಮರಳಿದ್ದ. ಅವನ ಸತ್ಕಾರಕ್ಕಾಗಿ ಗೆಳೆಯರೊಬ್ಬರ ಮನೆಯಲ್ಲಿ ಊಟದ ವ್ಯವಸ್ಥೆಯಾಗಿತ್ತು. ಆ ಸಮಾರಂಭದಿಂದ ಮನೆಗೆ ಹೋಗುವಾಗ ಬೇರೊಬ್ಬ ಗೆಳೆಯ ಅವನನ್ನ ಸ್ವಲ್ಪ ದೂರ ಬಿಟ್ಟು ಬರಲು ಸ್ವಂತ ಗಾಡಿಯಲ್ಲಿ ಕೂಡಿಸಿಕೊಂಡು ಬಂದ. ಠಿಕಾ ಗಾಡಿ ಬಂದೊಡನೆ ಆ ಗೆಳೆಯ ಅವನನ್ನು ಒಂದೆರಡು ಸಲ ಮೈಯಲುಗಿಸಿ ಎಚ್ಚರಿಸಿದ. "ಏಯ್, ಮಜುಮ್‌ದಾರ್...ಏಳಿ, ಗಾಡಿ ಸಿಕ್ಕಿತು. ಮನೆಗೆ ಹೋಗಿ" ಎಂದ. ಮಜುಮದಾರ ಬೆಚ್ಚಿ ಎಚ್ಚರನಾಗೆದ್ದು ಹಸನಾದ ವಿಲಾಯಿತಿಯ ಬೈಗಳನ್ನು ಗೊಣಗಿಕೊಳ್ಳುತ್ತ ಬಾಡಿಗೆ ಗಾಡಿಯಲ್ಲಿ ಹೋಗಿ ಏರಿ ಕೂತ. ಗಾಡಿಯವನಿಗೆ ಯುವಕನ ಮನೆಯ ವಿಳಾಸವನ್ನು ಚೆನ್ನಾಗಿ ಹೇಳಿ ಸಾರೋಟಿನ ಗೆಳೆಯ ತನ್ನ ಮನೆಯ ದಾರಿ ಹಿಡಿದ.

'ಠಿಕಾ'ಗಾಡಿ ಸ್ವಲ್ಪ ದೂರ ನೇರವಾಗಿ ಹೋಗಿ ಪಾರ್ಕ್‌ಸ್ಟ್ರೀಟಿನ ಎದುರುಗಡೆ ಮೈದಾನದ ರಸ್ತೆಯ ತಿರುಗಣೆ ಕಡೆ ಬಂತು. ಮಜುಮದಾರನು ಇನ್ನೊಮ್ಮೆ ಇಂಗ್ಲಿಷಿನಲ್ಲಿ ಶಪಿಸುತ್ತ ತನ್ನಲ್ಲೇ "ಇದೇನಿದು, ಇದು ನನ್ನ ಮನೆ ದಾರಿಯಲ್ಲ" ಎಂದುಕೊಂಡ. ಆಮೇಲೆ ನಿದ್ದೆಯ ಮಂಪರಿನಲ್ಲೇ "ಇರಬೇಕು. ಇದೇ ಸರಿಯಾದ ದಾರಿ" ಅಂದುಕೊಂಡ.

ಮೈದಾನವನ್ನು ಹೊಕ್ಕೊಡನೆ ಮಜುಮದಾರನ ಮೈಯೆಲ್ಲಾ ಏನೋ ಒಂದು ಬಗೆಯಾಯಿತು. ಹಠಾತ್ತಾಗಿ ಅವನಿಗೆನ್ನಿಸಿತು, ಒಳಗೆ ತನ್ನನ್ನು ಬಿಟ್ಟು ಬೇರೊಬ್ಬ ಮನುಷ್ಯರಿಲ್ಲ, ಆದರೂ ತನ್ನ ಪಕ್ಕದಲ್ಲಿನ ಖಾಲಿ ಜಾಗ ಭರ್ತಿಯಾಗುತ್ತಿದೆ, ಆ ಖಾಲಿ ಜಾಗದ ಶೂನ್ಯ ಆಕಾಶ ಆಕಾರ ತಾಳಿ ಅವನನ್ನು ಒತ್ತಿ ತಳ್ಳುತ್ತಿರುವಂತೆ

ಅನ್ನಿಸುತ್ತಿದೆ. ಮಜುಮದಾರನಾಗ "ಇದೇನು ವಿಚಿತ್ರ, ಈ ಗಾಡಿ ನನ್ನನ್ನ ಈ ರೀತಿ ಚುಡಾಯಿಸುತಾಯಿದೆ" ಎಂದುಕೊಂಡ.

"ಏಯ್, ಗಾಡಿವಾಲಾ, ಗಾಡೀವಾಲಾ!" ಎಂದು ಕೂಗಿದ.

(ಗಾಡಿಯವನು ಜವಾಬೇನೂ ಕೊಡಲಿಲ್ಲ. ಆಗವನು ಹಿಂದುಗಡೆ ಕಿಡಿಕಿಯನ್ನು ತೆರೆದು ಹಿಂದೆ ಕೂತಿದ್ದ ಸೈಸ್ (syce) – ಕುದುರೆಯ ಚಾಕರನ ಕೈಹಿಡಿದು "ನೀನು ಒಳಗೆ ಬಂದು ಕೂಡು (ತುಮ್ ಭೀತರ್ ಆಗೇ ಬೈಠೋ)" ಎಂದ.

ಆ ಚಾಕರ ಹೆದರಿ "ಇಲ್ಲ, ಬಾಬುಜಿ, ನಾನು ಒಳಗೆ ಬರುವುದಿಲ್ಲ" ಎಂದುಬಿಟ್ಟ. (ನಹೀ, ಬಾಬುಜಿ, ಭೀತರ್ ನಹೀ ಜಾಯೇಗಾ.)

ಅದನ್ನ ಕೇಳಿ ಮಜುಮ್‌ದಾರನ ಮೈಯುರಿದು ಜೋರಾಗಿ ಆ ಚಾಕರನ ಕೈಹಿಡಿದು "ಜಲ್ದೀ ಭೀತರ್ ಆವೋ" ಎಂದು ಗದರಿದ.

ಆ ಆಳು ಬಲವಾಗಿ ಕೈ ಬಿಡಿಸಿಕೊಂಡು ಕೆಳಗಿಳಿದು ಓಡಿಹೋದ. ಆಗ ಮಜುಮದಾರನು ಪಕ್ಕದ ಸೀಟಿನ ಕಡೆ ದಿಗಿಲಿನಿಂದ ನೋಡಹತ್ತಿದ. ಏನೂ ಕಂಡುಬರಲಿಲ್ಲ. ಆದರೂ ಯಾವುದೋ ಘನವಾದ ಪದಾರ್ಥ ಆ ಜಾಗವನ್ನಾಕ್ರಮಿಸಿ ಭದ್ರವಾಗಿ ಕೂತುಬಿಟ್ಟಿರುವಂತೆ ಅನ್ನಿಸಿತು. ಹೇಗೋ ಕೊರಳಲ್ಲಿ ದನಿ ಎಳೆದು ತಂದುಕೊಂಡು ಮಜುಮದಾರನು "ಏಯ್, ಗಾಡೀವಾಲಾ, ಗಾಡಿರೋಖೋ" ಎಂದು ಕೂಗಿದ. ಅವನಿಗಾಗನ್ನಿಸಿತು, ಗಾಡಿವಾಲನು ಎದ್ದು ನಿಂತು ಎರಡು ಕೈಗಳಿಂದಲೂ ಲಗಾಮನ್ನು ಎಳೆದು ಕುದುರೆಗಳನ್ನು ನಿಲ್ಲಿಸಲು ಯತ್ನಿಸಿದಂತೆ, ಕುದುರೆಗಳು ಏನು ಮಾಡಿದರೂ ನಿಲ್ಲದೆ, ರೆಡ್‌ರೋಡಿನ ರಸ್ತೆ ಹಿಡಿದು ಮತ್ತೆ ದಕ್ಷಿಣದ ಕಡೆ ತಿರುಗಣೆಯ ದಿಕ್ಕಿಗೆ ಓಡುತ್ತಿರುವಂತೆ. ಮಜುಮದಾರನು ವ್ಯಸ್ತನಾಗಿ "ಅರೇ, ಕಹಾಂ ಜಾತಾ?" ಎಂದು ಕೂಗಿದ. ಅದಕ್ಕೆ ಜವಾಬೇ ಸಿಗಲಿಲ್ಲ. ಪಕ್ಕದ ಶೂನ್ಯತೆಯ ಕಡೆ ನಡುಗುತ್ತ ನಡುಗುತ್ತ ಕಟಾಕ್ಷವೆಸೆದಾಗ ಮಜುಮದಾರನ ಮೈಮೇಲೆಲ್ಲಾ ಬೆವರು ಸೋರಲು ತೊಡಗಿತು. ಹೇಗೋ ಧೈರ್ಯ ತಂದುಕೊಂಡು ಮನಸ್ಸು ಗಟ್ಟಿ ಮಾಡಿಕೊಂಡು ತನ್ನ ಮೈಯನ್ನು ಆದಷ್ಟು ಬಿಗಿಸಿ ಸಂಕುಚಿತ ಮಾಡಿಕೊಂಡರೂ ಆ ಖಾಲಿಯಾದ ಸ್ಥಳ ಕೂಡ ಭರ್ತಿಯಾಗುತ್ತ ಬಂತು. ಮಜುಮದಾರನಾಗ ಮನಸ್ಸಿನಲ್ಲೇ ತರ್ಕಮಾಡುತ್ತ ಮಾಡುತ್ತ ಯಾವನೋ ಪುರಾತನ ಐರೋಪ್ಯ ವೈಜ್ಞಾನಿಕ ಹೇಳಿದ್ದ "Nature abhors vacuum" ಎಂಬ ವಾಕ್ಯವನ್ನು ನೆನಪಿಗೆ ತಂದುಕೊಂಡ. "ಅದೇ ನೋಡುತ್ತಿದ್ದೇನೆ. ಆದರೆ ಇದೇನಿದು? ಇದು Nature ಆದೀತೆ? ನನ್ನನ್ನೇನೂ ಅನ್ನದಿದ್ದರೆ ಈ ಕೂಡಲೆ ಇದಕ್ಕೆ ನನ್ನ ಪೂರ್ತಿಜಾಗ ಬಿಟ್ಟುಕೊಟ್ಟು ಧುಮುಕಿ ಹೊರಟುಬಿಟ್ಟೇನು," ಎಂದುಕೊಂಡ. ಆ ಕೂಡಲೆ ಧುಮುಕುವುದಕ್ಕೆ ಪ್ರಯತ್ನಪಟ್ಟ. ಸಾಹಸ ಬರಲಿಲ್ಲ. ಹಿಂದಿನಿಂದ ಎಣಿಸಲಾರದ್ದೇನಾದರೂ ನಡೆದೀತೆಂಬ ಹೆದರಿಕೆ.

"ಪಹರೇವಾಲಾ!" (ಪೋಲೀಸ್ ಗಸ್ತು ತಿರುಗುವವನು) ಎಂದು ಕೂಗು ಹಾಕಲು ಯತ್ನಿಸಿದ. ಆದರೆ ಬಹು ಕಷ್ಟದಿಂದ ಅದೆಂತಹ ಅದ್ಭುತ, ಕ್ಷೀಣವಾದ ದನಿ ಅವನ ಗಂಟಲಿಂದ ಹೊರಬಿದ್ದಿತೆಂದರೆ, ಅತ್ಯಂತ ಭಯದಲ್ಲಿದ್ದರೂ ಅವನಿಗೇ ನಗು ಬರುವಂತಾಯಿತು. ಆ ಮಬ್ಬಿನಲ್ಲಿ ಮೈದಾನದ ಮರಗಿಡಗಳು ಭೂತಗಳ ನಿಸ್ತಬ್ಧ ಪಾರ್ಲಿಮೆಂಟಿನಂತೆ ಎದುರು ಬದುರು ನಿಂತುಕೊಂಡಿದ್ದುವು. ಮತ್ತು ಗ್ಯಾಸಿನ ಕಂಬಗಳೆಲ್ಲಾ ತಮಗೆಲ್ಲಾ ತಿಳಿದಿದ್ದರೂ ಏನೂ ಹೇಳಲು ತಯಾರಿಲ್ಲದೆ 'ಗಪ್‌ಚಿಪ್' ಆಗಿರುವ ಭಾವದಲ್ಲಿ ನಿಂತುಕೊಂಡು ಮಿಕಮಿಕನೆ ಉರಿಯುವ ದೀಪಗಳಿಂದ ಕಣ್ಣು ಮಿಟುಕಿಸುತ್ತ ಇದ್ದುವು. ಆಗ ಮಜುಮದಾರ ಮನಸ್ಸಿನಲ್ಲಿ ಅಂದುಕೊಂಡ, ಚಡಕ್ಕೆಂದು ಒಂದೇ ನೆಗೆತದಲ್ಲಿ ಎದುರಿನ ಸೀಟಿನಲ್ಲಿ ಕೂತುಬಿಟ್ಟರೆ ಹೇಗೆ? ಹಾಗೆಂದು ಅಂದುಕೊಂಡೊಡನೆ ಎದುರಿನ ಆಸನದಿಂದ ಕೇವಲ ದೃಷ್ಟಿಯೊಂದು ಅವನ ಮುಖದ ಕಡೆ ದುರುಗುಟ್ಟಿ ನೋಡುತ್ತಿದ್ದಂತೆ ಅನುಭವವಾಯಿತು. ಕಣ್ಣಿಲ್ಲ, ಏನೂ ಇಲ್ಲ, ಬರೇ ದೃಷ್ಟಿಯೊಂದು! ನಂಬಲು ಸಾಧ್ಯವಿಲ್ಲ. ಆ ದೃಷ್ಟಿ ಯಾರದಿರಬೇಕು ಎಂದು ಮನಸ್ಸಿಗೆ ಬಿದ್ದಂತಾಯಿತು. ಆದರೆ ಏನು ಮಾಡಿದರೂ ಸ್ಪಷ್ಟವಾಗಿ ಮನಸ್ಸಿಗೆ ತಂದುಕೊಳ್ಳಲಾಗಲಿಲ್ಲ. ಮಜುಮದಾರ ತನ್ನೆರಡು ಕಣ್ಣುಗಳನ್ನು ಬಲವಂತವಾಗಿ ಮುಚ್ಚಿಕೊಳ್ಳಲು ಪ್ರಯತ್ನಮಾಡಿದ. ಆದರೆ ಭಯದಿಂದ ಮುಚ್ಚಿಕೊಳ್ಳಲಾಗಲಿಲ್ಲ. ಆ ಗೊತ್ತು ಹರಿಯದ ದೃಷ್ಟಿಯ ಕಡೆ ತನ್ನೆರಡು ಕಣ್ಣುಗಳನ್ನೂ ಎಷ್ಟು ಪ್ರಯಾಸದಿಂದ ತೆಗೆದುಕೊಂಡಿದ್ದನೆಂದರೆ ರೆಪ್ಪೆ ಹಾಕುವುದಕ್ಕೇ ಸಾಧ್ಯವಾಗಲಿಲ್ಲ.

ಈ ಕಡೆ ಗಾಡಿಯು ಕೇವಲ ಮೈದಾನದ ರಸ್ತೆಯ ಉತ್ತರದಿಂದ ದಕ್ಷಿಣಕ್ಕೆ ಮತ್ತು ದಕ್ಷಿಣದಿಂದ ಉತ್ತರಕ್ಕೆ ಚಕ್ರಾಕಾರವಾಗಿ ಸುತ್ತುಹಾಕತೊಡಗಿತು. ಕುದುರೆಗಳೆರಡೂ ಕ್ರಮೇಣ ಹುಚ್ಚು ಹಿಡಿದವುಗಳಂತಾದುವು. ಅವುಗಳ ವೇಗವು ಕ್ರಮವಾಗಿ ಜೋರಾಗಲು ತೊಡಗಿತು. ಗಾಡಿಯ ಕಿಟಿಕಿಗಳು, ಬಾಗಿಲುಗಳು ಫಡಫಡವೆಂದು ನಡುಗುತ್ತ ಮುರಿದು ಹೋಗುತ್ತಿರುವಂತೆ ಶಬ್ದ ಮಾಡಲು ತೊಡಗಿದುವು.

ಇಂಥ ಸಮಯದಲ್ಲಿ ಗಾಡಿಯು ಯಾವುದೋ ಒಂದು ಪದಾರ್ಥದ ಮೇಲೆ ಜೋರಾಗಿ ಡಿಕ್ಕಿ ಹೊಡೆದು ಹಠಾತ್ತಾಗಿ ನಿಂತುಬಿಟ್ಟಿತು. ಮಜುಮದಾರ ಚಕಿತನಾಗಿ ನೋಡಿದ, ತಮ್ಮ ಮನೆಯ ರಸ್ತೆಯಲ್ಲೇ ಗಾಡಿ ನಿಂತಿದೆ. ಮತ್ತು ಗಾಡಿಯವನು ಇವನ ಮೈಯನ್ನಲ್ಲಾಡಿಸುತ್ತ "ಸಾಹೇಬ್, ಎಲ್ಲಿಗೆ ಹೋಗಬೇಕು ಹೇಳಿ" ಎಂದು ಕೇಳುತ್ತಿದ್ದಾನೆ. ಮಜುಮದಾರ ರೇಗಿ "ಇಷ್ಟು ಹೊತ್ತಿನವರೆಗೂ ನನ್ನನ್ನ ಮೈದಾನದ ನಡುವೆ ಸುತ್ತಿಸಿದ್ದೇಕೆ?" ಎಂದು ಕೇಳಿದ.

ಗಾಡಿಯವನು ಆಶ್ಚರ್ಯದಿಂದ "ಎಲ್ಲಿ, ಸಾಹೇಬ್, ಮೈದಾನದ ಮಧ್ಯೆ ಸುತ್ತಿಸಲಿಲ್ಲವಲ್ಲ?" ಎಂದ.

ಮಜುಮದಾರ ನಂಬದೆ "ಹಾಗಾದರೆ ಇದೇನು ಕನಸು ಕಂಡೆನೆ?" ಎಂದ.

ಗಾಡಿಯವನು ಸ್ವಲ್ಪ ಯೋಚಿಸಿ, ಹೆದರುತ್ತಲೇ "ಬಾಬುಸಾಹೇಬ್,.... ಬರೇ ಕನಸಿಲ್ಲದೆ ಇದ್ದರೂ ಇರಬಹುದು. ನನ್ನ ಈ ಗಾಡಿಯಲ್ಲೇ ಇವತ್ತಿಗೆ ಮೂರು ವರುಷಗಳಾಯಿತು – ಒಂದು ಸಂಗತಿ ಜರುಗಿತ್ತು" ಎಂದ.

ಮಜುಮದಾರನ ಅಮಲೂ ಮತ್ತು ನಿದ್ದೆಯ ಮಂಪರೂ ಅಷ್ಟುಹೊತ್ತಿಗೆ ಪೂರ್ತಿಯಾಗಿ ಜಾರಿಹೋಗಿದ್ದುದರಿಂದ ಗಾಡಿಯವನ ಕಥೆಯ ಕಡೆ ಕಿವಿ ಗೊಡದೆ ಬಾಡಿಗೆ ಹಣ ಕೊಟ್ಟು ಹೊರಟುಹೋದ.

ಆದರೆ ರಾತ್ರಿ ಅವನಿಗೆ ಚೆನ್ನಾಗಿ ನಿದ್ದೆ ಬರಲಿಲ್ಲ. ಸುಮ್ಮನೆ ಯೋಚಿಸತೊಡಗಿದ – 'ಆ ದೃಷ್ಟಿ ಯಾರದು?' ಯಾರದು...ಯಾರದು?

೨

ಅಧರ ಮಜುಮದಾರರ ತಂದೆ ಸಾಮಾನ್ಯ ಹಡಗಿನ ಪಾರುಪತ್ತೆಗಾರರ ನೌಕರಿಯಿಂದ ಆರಂಭವಾಗಿ ದೊಡ್ಡದೊಂದು ಕಂಪೆನಿಯ ಮ್ಯಾನೇಜರ್ ಪದವಿಯವರೆಗೆ ಏರಿಬಿಟ್ಟಿದ್ದರು. ಅಧರಬಾಬುಗಳು ಮಾತ್ರ ತಂದೆಯು ಗಳಿಸಿದ್ದ ನಗದು ಹಣದ ಬಡ್ಡಿಯಿಂದಲೇ ಜೀವಿಸುತ್ತಿದ್ದರು. ಸ್ವಂತವಾಗಿ ದುಡಿಯಲೇಬೇಕಾಗಿರಲಿಲ್ಲ – ಅವರ ತಂದೆಯು ತಲೆಯ ಮೇಲೆ ಬಿಳಿಯ ಪೇಟಾ ಸುತ್ತಿಕೊಂಡು ಮೇನಾದೊಳಗೆ ಕೂತು ಕಛೇರಿಗೆ ಹೋಗುತ್ತಿದ್ದರು. ಈ ಕಡೆ ಮನೆಯಲ್ಲೂ ಅವರ ಕ್ರಿಯಾ ಕರ್ಮಗಳು, ದಾನ, ಧ್ಯಾನಗಳು ಯಥೇಷ್ಟವಿದ್ದುವು – ಸುಖ, ದುಃಖಗಳಲ್ಲೂ, ಅಭಾವ ಕಷ್ಟಗಳಲ್ಲೂ ನಾನಾ ಶ್ರೇಣಿಯ ಜನರು ಬಂದು ಅವರ ಕಾಲು ಹಿಡಿಯುತ್ತಿದ್ದರು. ಇದನ್ನವರು ಹೆಮ್ಮೆಯ ವಿಷಯವೆಂದು ಅರಿತುಕೊಂಡಿದ್ದರು. ಅಧರಬಾಬುಗಳು ದೊಡ್ಡ ಮನೆ ಮಾಡಿ, ಜೋಡುಕುದುರೆ ಗಾಡಿಯನ್ನೂ ಕೊಂಡಿದ್ದರು. ಆದರೆ ತಂದೆಯಂತೆ ಜನರ ಸಂಗಡ ಹೆಚ್ಚು ಸಂಪರ್ಕವಿಟ್ಟಿರಲಿಲ್ಲ. ಕೇವಲ ದುಡ್ಡಿನ ಲೇವಾದೇವಿಯ ದಳ್ಳಾಳಿ ಬಂದು ಅವರ ಹುಕ್ಕಾದಲ್ಲಿ ತಂಬಾಕು ಸೇದಿ ಹೋಗುತ್ತಿದ್ದ ಮತ್ತು ಅಟರ್ನಿ ಆಫೀಸಿನ ಗುಮಾಸ್ತೆಯರ ಸಂಗಡ ಸ್ಟಾಂಪು ಹಚ್ಚಿದ ದಸ್ತಾವೇಜುಗಳ ಶರತ್ತುಗಳನ್ನು ಕುರಿತು ಆಲೋಚನೆ ನಡೆಯುತ್ತಿತ್ತು. ಅವರ ಸಂಸಾರದ ಖರ್ಚುವೆಚ್ಚಗಳ ಬಗ್ಗೆಯ ಲೆಕ್ಕಾಚಾರ ಎಷ್ಟರ ಮಟ್ಟಿಗೆ ಬಿಗಿಯಾಗಿತ್ತೆಂದರೆ ಆ ಕೇರಿಯ ಫುಟ್‌ಬಾಲ್ ಕ್ಲಬ್ಬಿನ ಜಿಗಣೆಯಂತೆ ಹಿಡಿಯುವ ಹುಡುಗರು ಕೂಡ ಎಷ್ಟು ಪ್ರಯತ್ನ ಮಾಡಿದರೂ ಅವರ ನಗದು ರೂಪಾಯಿಗಳನ್ನ ಹಲ್ಲಿಗೆ ಸೋಕಿಸಲಾಗಲಿಲ್ಲ.

ಇಂಥ ಸಮಯದಲ್ಲಿ ಅವರ ಕುಟುಂಬಕ್ಕೊಬ್ಬ 'ಅತಿಥಿ' ಆಗಮಿಸಿದ. ಮಗನಾಗಲಿಲ್ಲ, ಆಗಲಿಲ್ಲ ಎಂದುಕೊಳ್ಳುತ್ತಿರುವಾಗ ಎಷ್ಟೋ ದಿನಗಳಾದ ಮೇಲೆ ಮಗ ಹುಟ್ಟಿದ. ಹುಡುಗನ ಮುಖಚಹರೆ ತಾಯಿಯಂತೆ. ದೊಡ್ಡ ದೊಡ್ಡ ಕಣ್ಣುಗಳು, ಚೂಪಾದ ಮೂಗು, ಬಣ್ಣ ರಜನೀಗಂಧದ ಹೂವಿನ ಎಸಳಿನಂತೆ. ನೋಡಿದವರೆಲ್ಲ "ಆಹಾ, ಮಗನಲ್ಲ, ಸಾಕ್ಷಾತ್ ಕಾರ್ತಿಕನೇ (ಷಣ್ಮುಖ)" ಎಂದರು. ಅಧರ ಬಾಬುವಿನ ಹಳೆಯ ಕಾಲದಿಂದಲೂ ಇದ್ದ ಅನುಚರ, ರತೀಕಾಂತನು "ದೊಡ್ಡವರ ಮನೆಯ ಹುಡುಗ ಯಾವ ರೀತಿಯಲ್ಲಿರಬೇಕಾದದ್ದು ಉಚಿತವೋ ಆ ರೀತಿಯಲ್ಲೇ ಇದ್ದಾನೆ" ಎಂದ.

ಹುಡುಗನ ಹೆಸರು ವೇಣುಗೋಪಾಲ. ಇದಕ್ಕೆ ಮುಂಚೆ ಅಧರಬಾಬುಗಳ ಹೆಂಡತಿ, ನನೀಬಾಲ, ಸಂಸಾರದ ಖರ್ಚಿನ ಬಗ್ಗೆ ಗಂಡನ ಎದುರಾಗಿ ತನ್ನ ಅಭಿಪ್ರಾಯವನ್ನು ಜೋರಿನಿಂದ ಎಂದೂ ಮಂಡಿಸಲಿಲ್ಲ. ಒಂದೆರಡು ಇಷ್ಟದ ಸಾಮಾನುಗಳ ವಿಷಯವಾಗಿ ಅಥವಾ ಲೌಕಿಕತೆಗೆ ಅತ್ಯವಶ್ಯಕವಾದ ಹಲಕೆಲವು ಸಲಕರಣೆಗಳಿಗಾಗಿ ಆಗಾಗ ವಾಗ್ಯುದ್ಧಗಳಾದದ್ದು ನಿಜ, ಆದರೆ ಗಂಡನ ಜಿಪುಣತನವನ್ನು ತಿರಸ್ಕಾರ ಮಾಡಿ ಮೌನವಾಗಿ ಸೋಲೊಪ್ಪಿಕೊಂಡಿದ್ದಳು.

ಈ ಬಾರಿ ಮಾತ್ರ ನನೀಬಾಲಳನ್ನು ಅಧರಲಾಲನು ಅಲ್ಲಗಳೆಯಲಾಗಲಿಲ್ಲ. ವೇಣುಗೋಪಾಲನ ವಿಷಯವಾಗಿ ಅವನ ಲೆಕ್ಕಾಚಾರದ ಬಿಗಿತ ಸ್ವಲ್ಪ ಸ್ವಲ್ಪವಾಗಿ ಸಡಿಲವಾಗತೊಡಗಿತು. ವೆಚ್ಚದ ಬಾಬತಿನಲ್ಲಿ ಒಂದೊಂದೇ ಮೆಟ್ಟಲು ಮೇಲೇರತೊಡಗಿತು. ಮಗುವಿನ ಕಾಲಿಗೆ ಗೆಜ್ಜೆ, ಕೈಗೆ ಬಳೆ, ಕೊರಳಿಗೆ ಸರ, ತಲೆಗೆ ಟೋಪಿ, ಅದರ ನಾನಾ ಬಗೆಯ ನಾನಾ ಬಣ್ಣದ ದೇಶಿ, ವಿದೇಶಿ ಉಡಿಗೆ, ತೊಡಿಗೆಗಳ ಬಗ್ಗೆ ನನೀಬಾಲಳು ಏನೇನು ಪಟ್ಟು ಕೊಡುತ್ತಿದ್ದಳೋ ಅವುಗಳೆಲ್ಲವನ್ನೂ ಅವಳು ಒಮ್ಮೊಮ್ಮೆ ಬರೀ ಮೌನದ ಕಣ್ಣೀರಿನಿಂದಲೋ, ಒಮ್ಮೊಮ್ಮೆ ಮೊನೆಯಾದ ಮಾತಿನ ಮಳೆಯಿಂದಲೋ ಗೆದ್ದುಕೊಂಡು ಹೋಗುತ್ತಿದ್ದಳು. ವೇಣುಗೋಪಾಲನ ಸಲುವಾಗಿ ಅವಶ್ಯಕವಾದದ್ದು, ಅವಶ್ಯಕವಿಲ್ಲದ್ದು – ಎಲ್ಲ ಆಗಲೇಬೇಕು. ಈ ವಿಷಯದಲ್ಲಿ ನಾಳೆ ನೋಡೋಣ ಎಂಬ ಸುಳ್ಳು ಆಸೆಯ ಮಾತಾಗಲಿ ಲೆಕ್ಕಾಚಾರದ ಶೂನ್ಯಾಂಕದ ನೆಪವಾಗಲಿ, ಯಾವುದೂ ಎದುರು ನಿಲ್ಲಲಾಗಲಿಲ್ಲ.

೨

ವೇಣುಗೋಪಾಲ ದೊಡ್ಡವನಾಗತೊಡಗಿದ. ಅವನ ಸಲುವಾಗಿ ಖರ್ಚು ಮಾಡುವುದು ಅಧರಲಾಲನಿಗೆ ವಾಡಿಕೆಯಾಗಿಹೋಯಿತು. ಅವನಿಗೋಸ್ಕರ ಹೆಚ್ಚು ಸಂಬಳ ಕೊಟ್ಟು, ಏನೇನೋ ಪರೀಕ್ಷೆಗಳನ್ನು ಪಾಸು ಮಾಡಿದ ಮುದಿ ಮಾಸ್ಟರನನ್ನು ಇಡಲಾಯಿತು. ಈ ಮಾಸ್ಟರು ವೇಣುವನ್ನು ಸವಿಮಾತುಗಳಿಂದಲೂ, ಒಣ

ಉಪಚಾರದಿಂದಲೂ ವಶಪಡಿಸಿಕೊಳ್ಳುವ ಎಷ್ಟೋ ಪ್ರಯತ್ನ ಮಾಡಿದರು. ಆದರೆ ಅವರು ಹಳೇ ಪದ್ಧತಿಯ ಶಿಕ್ಷಕರಂತೆಯೇ ಶಿಷ್ಯರನ್ನು ಕ್ರೂರವಾದ ಕಟ್ಟಳೆಯಲ್ಲಿಟ್ಟು ಇದುವರೆಗೆ ತಮ್ಮ ವೃತ್ತಿಯ ಮರ್ಯಾದೆಯನ್ನು ಕುಂದಿಲ್ಲದಂತೆ ನಡೆಸಿಕೊಂಡು ಬಂದಂಥವರಾದ್ದರಿಂದ, ಅವರ ಬಾಯಲ್ಲಿ ಈ ಸವಿಮಾತುಗಳೂ, ಒಣ ಉಪಚಾರಗಳೂ ಬರೇ ಅಪಸ್ವರದಂತೆ ತೋರುತ್ತಿದುವು. ಅವರ ಒಣ ಮುದ್ದು ಮಾತುಗಳಿಗೆ ಹುಡುಗ ಸೋಲಲಿಲ್ಲ.

ನನೀಬಾಲ ಗಂಡನಿಗೆ "ಇವನೆಂಥ ಮಾಸ್ಟರು, ಅವನನ್ನು ಕಂಡರೆ ಹುಡುಗ ಚಡಪಡಿಸುತ್ತಾನೆ. ಅವನನ್ನ ಬಿಡಿಸಿ ಬಿಡಿ" ಎಂದಳು.

ಮುದಿಮಾಸ್ಟರು ತಮ್ಮ ಮನೆ ದಾರಿ ಹಿಡಿಯಬೇಕಾಯಿತು. ಹಿಂದಿನ ಕಾಲದಲ್ಲಿ ಕನ್ಯೆಯರು ಹೇಗೆ ಸ್ವಯಂವರದ ಮೂಲಕ ಗಂಡನನ್ನ ಆರಿಸಿಕೊಳ್ಳುತ್ತಿದ್ದರೋ ಹಾಗೆ ನನೀಬಾಲಳ ಮಗ ಸ್ವಯಂ 'ಮಾಸ್ಟರ' ಮಾಡಿಕೊಳ್ಳಲು ಅಣಿಯಾದ. ಅವನು ವರಿಸದಿದ್ದ ಮಾಸ್ಟರನಿಗೆ ಎಷ್ಟು ಡಿಗ್ರಿಗಳು, ಎಷ್ಟು ಸರ್ಟಿಫಿಕೇಟುಗಳಿದ್ದರೂ ವ್ಯರ್ಥ.

ಇಂಥ ಸಮಯದಲ್ಲಿ ಮೈಮೇಲೊಂದು ಕೊಳೆಯ ಚಾದರ ಮತ್ತು ಕಾಲಿಗೊಂದು ಹರಿದ ಕ್ಯಾನ್ವಾಸಿನ ಮೆಟ್ಟುಗಳನ್ನು ಧರಿಸಿ ಮಾಸ್ಟರಿಗೆ ಉಮೇದುವಾರನಾಗಿ ಹರಲಾಲನೆಂಬವನು ಬಂದು ಹಾಜರಾದ. ಅವನ ವಿಧವೆಯಾದ ತಾಯಿ ಇತರರ ಮನೆಗಳಲ್ಲಿ ಅಡಿಗೆ, ಧಾನ್ಯ, ಮಸಾಲೆ ಕುಟ್ಟುವುದು ಮುಂತಾದ ದುಡಿಮೆ ಮಾಡಿ ಮಗನನ್ನ ಯಾವುದೋ ತಾಲ್ಲೂಕಿನ ಸ್ಕೂಲಿನಲ್ಲಿ ಎಂಟ್ರೆನ್ಸ್ ಪರೀಕ್ಷೆಯವರೆಗೂ ಹೇಗೋ ಓದಿಸಿ ಪಾಸು ಮಾಡಿಸಿದಳು. ಈಗ ಹರಲಾಲನು ಕಲಿಕತ್ತೆಯ ಕಾಲೇಜಿನಲ್ಲಿ ಓದಬೇಕೆಂದು ಹಟತೊಟ್ಟು ಹೊರ ಬಿದ್ದಿದ್ದ. ಕಾಲ ಕಾಲಕ್ಕೆ ತಕ್ಕ ಆಹಾರವಿಲ್ಲದೆ ಅವನ ಮುಖದ ಕೆಳಭಾಗವು ಒಣಗಿಕೊಂಡು ಭರತವರ್ಷದ ಕನ್ಯಾಕುಮಾರಿಯಂತೆ ಅತಿ ಸಣ್ಣದಾಗಿಬಿಟ್ಟಿದೆ. ಕೇವಲ ಹಣೆಮಾತ್ರ ಪ್ರಶಸ್ತವಾಗಿ, ಹಿಮಾಲಯದಂತೆ ಉನ್ನತವಾಗಿ, ನೋಡಿದವರ ಕಣ್ಣಿಗೆ ಹೊಡೆಯುತ್ತದೆ. ಮರುಭೂಮಿಯ ಮರಳಿನಿಂದ ನೇಸರ ಕಿರಣಗಳು ಪುಟ ನೆಗೆದು ದೃಷ್ಟಿಗೆ ತಾಕುವ ಹಾಗೆ ಅವನೆರಡು ಕಣ್ಣುಗಳಿಂದ ದೈನ್ಯದ ಅಸ್ವಾಭಾವಿಕ ದೀಪ್ತಿಯೊಂದು ಹೊರಗೆ ಬರುತ್ತಿದೆ.

ಬಾಗಿಲು ಕಾಯುವವನು ಅವನನ್ನ ಕಂಡೊಡನೆ "ನಿಮಗೇನು ಬೇಕು? ಯಾರು ಬೇಕು?" ಎಂದು ಕೇಳಿದಾಗ ಹರಲಾಲ ಹೆದರುತ್ತ ಹೆದರುತ್ತ "ಮನೆಯ ಮಾಲಿಕರೊಡನೆ ಭೆಟ್ಟಿಯಾಗಬೇಕು" ಎಂದ. ಕಾವಲುಗಾರ "ಭೆಟ್ಟಿಯಾಗುವುದು ಸಾಧ್ಯವಿಲ್ಲ" ಎಂದುಬಿಟ್ಟ. ಅವನ ಜವಾಬಿಗೇನು ಹೇಳುವುದೆಂದು ತೋಚದೆ ಹರಲಾಲ ಅತ್ತಿತ್ತ ನೋಡುತ್ತಿರುವಾಗ ಏಳು ವರುಷದ ಹುಡುಗ, ವೇಣುಗೋಪಾಲ,

ತೋಟದಲ್ಲಿ ಆಟ ಮುಗಿಸಿಕೊಂಡು ಮನೆಯ ಪ್ರಾಂಗಣದ ಕಡೆ ಬಂದ. ಕಾವಲುಗಾರ ಹರಲಾಲನು ದಿಕ್ಕು ತೋಚದೆ ನಿಂತಿದ್ದನ್ನು ಕಂಡು "ಬಾಬು, ಚಲೇಜಾವೋ (ಹೊರಟುಹೋಗಿ)" ಎಂದು ಕೂಗಿದ.

ವೇಣುವಿಗೆ ಇದನ್ನು ಕೇಳಿ ಹಠಾತ್ತಾಗಿ ಹಠವೇರಿತು. ಅವನು "ನೈ ಜಾಯೇಗಾ" ಎಂದು ಕೂಗಿ ಹರಲಾಲನ ಕೈಹಿಡಿದು ಅವನನ್ನು ಮೇಲುಗಡೆಯ ಅಂತಸ್ತಿನ ಹಜಾರದಲ್ಲಿ ಕೂತಿದ್ದ ತಂದೆಯ ಬಳಿ ಕರೆದುಕೊಂಡು ಹೋದ.

ಅಧರಬಾಬುಗಳಾಗ ಮಧ್ಯಾಹ್ನದ ನಿದ್ದೆಯನ್ನು ಪೂರೈಸಿಕೊಂಡು ಜಡ, ಆಲಸ್ಯಭಾವದಲ್ಲಿ ವರಾಂಡದಲ್ಲಿ ಒಂದು ಬೆತ್ತದ ಆರಾಮ ಕುರ್ಚಿಯಲ್ಲಿ ಒರಗಿಕೊಂಡು ಕಾಲನ್ನು ಓಲಾಡುತ್ತಿದ್ದರು. ಮುದಿ ಚಾಕರ ರತೀಕಾಂತ ಒಂದು ಮರದ ಕುರ್ಚಿಯಲ್ಲಿ ಕೂತು ನಿಧಾನವಾಗಿ ತಂಬಾಕು ಸೇದುತ್ತಿದ್ದ. ಅವತ್ತು ಇಂತಹ ಸಮಯದಲ್ಲಿ ಈ ಅವಸ್ಥೆಯಲ್ಲೇ ದೈವ ಕ್ರಮದಿಂದ ಹರಲಾಲನ ಮಾಸ್ಟರಿ ವ್ಯವಸ್ಥೆಯಾಗಿ ಹೋಗಿತು.

ರತೀಕಾಂತನು "ನಿಮ್ಮ ಓದು ಎಲ್ಲಿಯವರೆಗೆ?" ಎಂದು ಕೇಳಿದ.

ಹರಲಾಲ ಸ್ವಲ್ಪ ಮುಖ ತಗ್ಗಿಸಿಕೊಂಡು "ಎಂಟ್ರೆನ್ಸ್ ಪಾಸು ಮಾಡಿದ್ದೇನೆ" ಎಂದ. ರತೀಕಾಂತನು ಹುಬ್ಬೆತ್ತಿ "ಬರೇ ಎಂಟ್ರೆನ್ಸೇ? ಕಾಲೇಜು ಓದುತ್ತಿದ್ದೀರಿ ಅಂದುಕೊಂಡಿದ್ದೆ. ನಿಮ್ಮ ವಯಸ್ಸು ತೀರ ಕಡಮೆಯಂತೆ ತೋರುವುದಿಲ್ಲ" ಎಂದ. ಹರಲಾಲ ಸುಮ್ಮನಿದ್ದ. ಆಶ್ರಿತರನ್ನೂ ಮತ್ತು ಆಶ್ರಯಾರ್ಥಿಗಳನ್ನೂ ಎಲ್ಲ ವಿಧವಾಗಿ ಪೀಡಿಸುವುದರಲ್ಲೊಂದು ದೊಡ್ಡ ಆನಂದ ರತೀಕಾಂತನಿಗೆ.

ರತೀಕಾಂತನು ಆದರ ತೋರುತ್ತ ವೇಣುವನ್ನು ತನ್ನ ತೊಡೆಯ ಮೇಲೆ ಕೂಡಿಸಿಕೊಳ್ಳಲು ಅವನನ್ನ ತನ್ನ ಕಡೆ ಮೆಲ್ಲಗೆ ಎಳೆಯುತ್ತ "ಎಷ್ಟು ಎಮ್.ಎ., ಬಿ.ಎ., ಗಳು ಬಂದರು, ಹೋದರು, ಯಾರೂ ಸರಿಹೋಗಲಿಲ್ಲ. ಕಡೆಗೆ ನಮ್ಮ ಚಿನ್ನ ಎಂಟ್ರೆನ್ಸ್ ಪಾಸು ಮಾಡಿದ ಮಾಸ್ಟರನ ಹತ್ತಿರ ಓದಬೇಕು... ಛ!" ಎಂದ, ತಿರಸ್ಕಾರವಾಗಿ.

ವೇಣು ರತೀಕಾಂತನ ಲಾಲನೆಯನ್ನು ಅಸಡ್ಡೆಯಿಂದ ತಪ್ಪಿಸಿಕೊಂಡು "ಹೋಗಾಚೆ" ಎಂದ. ರತೀಕಾಂತನನ್ನ ಕಂಡರೆ ಈಚೆಗೆ ಹುಡುಗನಿಗೆ ಬಹಳ ಹೇಸುಗೆಯಾಗುತ್ತಿತ್ತು. ರತೀಕಾಂತನು ಈ ಅಸಡ್ಡೆಯನ್ನು ಚಿಕ್ಕ ಬಾಬುವಿನ ಬಾಲ್ಯ ಮಾಧುರ್ಯದ ಲಕ್ಷಣವೊಂದೆಂಬುದಾಗಿ ಅಂದುಕೊಂಡು ಅದರಿಂದಲೂ ಆನಂದಪಡಲು ಯತ್ನಿಸುತ್ತ ಅವನನ್ನು "ಚಿನ್ನಬಾಬು, ಬೆಳ್ಳಿಬಾಬು" ಎಂದು ಮುದ್ದು ಮಾತುಗಳಾಡಿ ಮೈಯುರಿಸತೊಡಗಿದ.

ಹರಲಾಲನ ಉಮೇದುವಾರಿಯು ಸಫಲವಾಗುವುದಕ್ಕೆ ಅಡ್ಡಿಯಾವುದೂ ಕಂಡುಬರಲಿಲ್ಲ. ಆಗವನು ಮನಸ್ಸಿನಲ್ಲೇ "ಈ ಸಲ ಯಾವ ಸುಯೋಗದಿಂದಾದರೂ

ಆ ಹಳ್ಳಿಗಾಡಿನಿಂದ ಹೊರಗೆ ಬರುವಂತಾದರೆ ಬದುಕಿದಹಾಗೆ," ಎಂದುಕೊಂಡ. ಇಂತಹ ಸಮಯದಲ್ಲಿ ಅಧರಲಾಲನಿಗೆ ಹಠಾತ್ತಾಗಿ ಅನ್ನಿಸಿತು. ಈ ಹುಡುಗನಿಗೆ ತೀರ ಸ್ವಲ್ಪ ಸಂಬಳ ಕೊಟ್ಟರೂ ಒಪ್ಪಿಕೊಂಡುಬಿಡುವ ಹಾಗಿದ್ದಾನೆ. ಮನೆಯಲ್ಲಿಟ್ಟುಕೊಂಡು ಊಟ, ಉಡಿಗೆ ಕೊಟ್ಟು ತಿಂಗಳಿಗೆ ಐದು ರೂಪಾಯಿ ಸಂಬಳ ಕೊಟ್ಟರೆ ಸಾಕು. ಕಡೆಗೆ ಹರಲಾಲನ ಉಪಚಾರವೇನಾದರೂ ಮಾಡಿದರೆ ಅದಕ್ಕೆ ಬದಲಾಗಿ ಮನೆಯ ಬೇರಾವ ಕೆಲಸಗಳನ್ನಾದರೂ ಮಾಡಿಸಿಕೊಳ್ಳಬಹುದು. ಹಾಗೆ ಮಾಡಿದರೆ ಇಷ್ಟರ ಮಟ್ಟಿಗೆ ಕನಿಕರ ತೋರಿಸಿದ್ದು ಸಾರ್ಥಕವಾದ ಹಾಗೂ ಇರುತ್ತದೆ.

ಈ ಬಾರಿಗೆ ಮಾಸ್ಟರು ಸ್ಥಿರವಾಗಿ ನಿಂತ. ಮೊದಲಿಂದಲೇ ಹರಲಾಲನ ಸಂಗಡ ವೇಣುವು ಬಹಳ ಹೊಂದಿಕೊಂಡುಬಿಟ್ಟ. ಒಡಹುಟ್ಟಿದವರಂತೆ ಅವರ ಸಲಿಗೆ ಬೆಳೆದುಹೋಯಿತು. ಕಲಿಕತ್ತೆಯಲ್ಲಿ ಹರಲಾಲನಿಗೆ ತನ್ನವರೆನ್ನುವವರು ಯಾರೂ ಇರಲಿಲ್ಲ. ಈ ಚೆಲುವಾದ ಚಿಕ್ಕ ಹುಡುಗ ಅವನ ಹೃದಯವನ್ನೆಲ್ಲ ಆಕ್ರಮಿಸಿಬಿಟ್ಟ. ನಿರ್ಭಾಗ್ಯನಾದ ಹರಲಾಲನಿಗೆ ಇದಕ್ಕೆ ಮೊದಲು ಯಾರನ್ನಾಗಲಿ ಇಷ್ಟು ಗಾಢವಾಗಿ ಪ್ರೀತಿಸುವ ಅವಕಾಶ ಎಂದೂ ಬಂದಿರಲಿಲ್ಲ. ಏನು ಮಾಡಿದರೆ ತನ್ನ ಸ್ಥಿತಿ ಚೆನ್ನಾಗಿ ಆದೀತು ಎಂಬ ಆಸೆಯಿಂದ ಅವನು ಅತಿ ಪ್ರಯಾಸದಿಂದ ತನಗೆ ಆವಶ್ಯಕವಾದ ಪುಸ್ತಕಗಳನ್ನೊದಗಿಸಿಕೊಂಡು. ಕೇವಲ ಸ್ವಪ್ರಯತ್ನದಿಂದ ಹಗಲಿರುಳೂ ವ್ಯಾಸಂಗವನ್ನು ನಡೆಸಿಕೊಂಡು ಬರುತ್ತಿದ್ದಾನೆ. ತಾಯಿ ಅವನಿಗೆ ಬುದ್ಧಿ ತಿಳಿದಾಗಲಿಂದ ಪರಾಧೀನಳಾಗಿರಬೇಕಾದುದರಿಂದ ಹುಡುಗನ ಎಳೆತನ ಸಂಕೋಚದಲ್ಲೇ ಕಳೆಯಿತು. ನಿಷೇಧದ ಮೇರೆಯನ್ನು ದಾಟಿ ತುಂಟತನದಿಂದ, ಹಠಮಾರಿತನದಿಂದ ತನ್ನ ಬಾಲ್ಯ ಪ್ರತಾಪವನ್ನು ಜಯಶಾಲಿಯಾಗಿ ಮಾಡುವ ಸುಖ ಅವನಿಗೆಂದೂ ಲಭಿಸಲಿಲ್ಲ. ಅವನು ಯಾವ ತಂಡಕ್ಕೂ ಸೇರಲಿಲ್ಲ. ತನ್ನ ಹರಿದ ಪುಸ್ತಕ, ಮುರಿದ ಸ್ಲೇಟುಗಳ ನಡುವೆ ಒಬ್ಬನೇ ಮುಳುಗಿದ್ದ. ಎಳೆತನದಲ್ಲೇ ಬಾಯಿ ಮುಚ್ಚಿಕೊಂಡು ಸದಾ ಸಭ್ಯನಂತೆ ಗಂಭೀರವಾಗಿರಬೇಕಾದಂಥ ಹುಡುಗ ಆಗಲಿಂದಲೂ ತಾಯಿಯ ಸಂಕಟ ಮತ್ತು ತನ್ನ ದುರವಸ್ಥೆಗಳನ್ನು ತಿಳಿದುಕೊಂಡು ಸಾವಧಾನವಾಗಿ ನಡೆದುಕೊಳ್ಳಬೇಕಾದಂಥವ, ಒಮ್ಮೆಯಾದರೂ ಯಾರಿಗೂ ಲೆಕ್ಕಿಸದೆ ಇಷ್ಟಬಂದಂತೆ ಮಾಡುವಷ್ಟು ಸ್ವಾತಂತ್ರ್ಯ ಕೂಡ ಹಣೆಯಲ್ಲಿ ಬರೆಯದಿದ್ದವ, ಆಮೋದದಲ್ಲಿ ಚಾಂಚಲ್ಯ ತೋರಿಸಿ, ದುಃಖವಾದಾಗ ಅಳುವುದರ ಸ್ವಾಚ್ಛಂದ್ಯವನ್ನು ಯಾರಿಗಾದರೂ ತೊಂದರೆಯಾಯಿತೆಂದೋ, ಯಾರಾದರೂ ರೇಗಬಹುದೆಂದೋ ಹೆದರಿ ತನಗಿದ್ದ ಅಲ್ಪಶಕ್ತಿಯನ್ನೆಲ್ಲಾ ವಿನಿಯೋಗಿಸಿ ತುಳಿದಿಟ್ಟುಕೊಳ್ಳಲೇ ಬೇಕಾದಂಥವ

– ಅವನಂಥ, ಕರುಣಾಪಾತ್ರನೂ, ಅವನಂಥ ಕರುಣೆಯಿಂದ ವಂಚಿತನಾಗಿರುವವನೂ ಪ್ರಪಂಚದಲ್ಲಿ ಬೇರೆ ಯಾರಿದ್ದಾರೆ?

ಹೀಗೆ ಪ್ರಪಂಚದ ಮನುಷ್ಯರೆಲ್ಲರ ಕಾಲಡಿಗೆ ಸಿಕ್ಕಿ ಜಜ್ಜಿಹೋದ ಹರಲಾಲನಿಗೇ ತನ್ನ ಮನಸ್ಸಿನಲ್ಲಿ ಇಷ್ಟೊಂದು ಸ್ನೇಹರಸದೈಶ್ವರ್ಯವು ವಿನಿಯೋಗಿಸುವುದಕ್ಕೆ ತಕ್ಕ ಅವಕಾಶವನ್ನೆದುರು ನೋಡುತ್ತಾ ಶೇಖರಿಸಿಕೊಂಡು ಬಿದ್ದಿದೆ ಎಂದು ಗೊತ್ತಿರಲಿಲ್ಲ. ವೇಣುಗೋಪಾಲನೊಡನೆ ಆಟವಾಡಿ, ಅವನಿಗೆ ಓದು ಹೇಳಿಕೊಟ್ಟು, ಅಸ್ವಸ್ಥವಾದಾಗ ಉಪಚರಿಸಿ ಹರಲಾಲನಿಗೆ ಒಂದು ಸತ್ಯ ಸ್ಪಷ್ಟವಾಗಿ ಗೊತ್ತಾಗಿತ್ತು : ಏನೆಂದರೆ ಮನುಷ್ಯನಿಗೆ ಸ್ವಂತ ಏಳಿಗೆಯನ್ನು ಸಾಧಿಸುವುದಕ್ಕಿಂತಲೂ ದೊಡ್ಡದಾದ, ಪ್ರೀತಿಕರವಾದ ಮತ್ತೊಂದು ವಸ್ತುವಿದೆ, ಅದು ದೊರೆತಾಗ ಅದರ ಮುಂದೆ ಬೇರಾವುದೂ ಬೇಕಾಗುವುದಿಲ್ಲ.

ವೇಣುವೂ ಹರಲಾಲನನ್ನು ಪಡೆದು ಸುಖಿಯಾದ. ಕಾರಣ, ಮನೆಯಲ್ಲಿ ಅವನೊಬ್ಬನೇ ಗಂಡು ಮಗು, ಒಬ್ಬಳು ಅತಿ ಸಣ್ಣ ಮತ್ತು ಇನ್ನೊಬ್ಬಳು ಮೂರು ವರುಷಗಳ ತಂಗಿಯರಿದ್ದರು. ಅವರು ತನಗೆ ಜೊತೆಯಾಗಿರಲು ತಕ್ಕವರಲ್ಲವೆಂದು ಅವನ ಎಣಿಕೆ. ಆ ಕೇರಿಯಲ್ಲಿ ಅವನ ಓರಗೆಯ ಹುಡುಗರು ಬೇಕಾದಷ್ಟಿದ್ದರು. ಆದರೆ ಅವನಪ್ಪ, ತನ್ನ ಮನೆತನವನ್ನು ಅತ್ಯಂತ ಮೇಲಿನದೆಂದು ತಿಳಿದುಕೊಂಡಿದ್ದುದರಿಂದ ವೇಣುವಿಗೆ ಗೆಳೆತನ ಬೆಳೆಸಿಕೊಳ್ಳತಕ್ಕಂಥ ಹುಡುಗರು ಸಿಗಲಿಲ್ಲ. ತತ್ಫಲವಾಗಿ ಮಾಸ್ಟರಾದ ಹರಲಾಲನೇ ಅವನ ಏಕಮಾತ್ರ ಸಂಗಡಿಗನೂ ಆಗಬೇಕಾಯಿತು. ಅನುಕೂಲವಿದ್ದಿದ್ದರೆ ಹತ್ತು ಜನ ಸಂಗಾತಿಗಳ ಮೇಲೆ ಪ್ರಯೋಗಿಸಬಹುದಾಗಿದ್ದ ವೇಣುವಿನ ದುಷ್ಟತನ, ಪುಂಡುತನಗಳನ್ನು ಈಗ ಹರಲಾಲನೊಬ್ಬನೇ ಅನುಭವಿಸಬೇಕಾಯಿತು. ಈ ಮುಚ್ಚಟೆಯ ಪುಟ್ಟ ಗೆಳೆಯನ ಉಪದ್ರವ, ಹಿಂಸೆಗಳನ್ನೆಲ್ಲ ಪ್ರತಿ ದಿನ ಸೈರಿಸಿಕೊಂಡು ಬರುತ್ತ ಅವನ ಮೇಲೆ ಹರಲಾಲನ ಸ್ನೇಹವೂ ಅಷ್ಟಕಷ್ಟು ದೃಢವಾಗಿ ಬೆಳೆಯುತ್ತ ಬಂತು. ರತೀಕಾಂತನು "ನಮ್ಮ ಬಂಗಾರಬಾಬುವನ್ನು ಈ ಮಾಸ್ಟರು ಮಹಾಶಯ ಅತಿಯಾಗಿ ಕೆಡಿಸಿ ಮಣ್ಣುಪಾಲು ಮಾಡುತ್ತಿದ್ದಾರೆ" ಎನ್ನಲು ತೊಡಗಿದ. ಅಧರಲಾಲನಿಗೂ ನಡುನಡುವೆ ಈ ಮಾಸ್ಟರನ ಸಂಗಡ ಶಿಷ್ಯನ ಸಂಬಂಧವು ಸರಿಯಾಗಿ ಯಥೋಚಿತವಾಗಿಲ್ಲವೆಂದು ಅನ್ನಿಸಹತ್ತಿತು. ಆದರೆ ಈಗ ಹರಲಾಲನನ್ನು ವೇಣುವಿನಿಂದ ಬೇರೆ ಮಾಡುವುದು ಯಾರ ಕೈಲಿ ಸಾಧ್ಯ?

೪

ವೇಣುವಿನ ವಯಸ್ಸೀಗ ಹನ್ನೊಂದು. ಹರಲಾಲ ಎಫ್.ಎ., ಪಾಸು ಮಾಡಿ ಸ್ಕಾಲರ್‌ಷಿಪ್ ಪಡೆದು ಯೂನಿವರ್ಸಿಟಿಯ ಮೂರನೇ ವರ್ಗದಲ್ಲಿ ಓದುತ್ತಿದ್ದಾನೆ.

ಈ ಮಧ್ಯೆ ಕಾಲೇಜಿನಲ್ಲೂ ಅವನಿಗೆ ಒಬ್ಬಿಬ್ಬರು ಗೆಳೆಯರು ದೊರೆಯಲಿಲ್ಲವೆಂದಲ್ಲ. ಆದರೆ ಈ ಹನ್ನೊಂದು ವರುಷದ ಸಣ್ಣ ಹುಡುಗನೇ ಅವನಿಗೆ ಶ್ರೇಷ್ಠ ಮಿತ್ರನಾಗಿಬಿಟ್ಟ. ಕಾಲೇಜಿನಿಂದ ಬಂದೊಡನೆ ವೇಣುವನ್ನು ಕರೆದುಕೊಂಡು ಗೋಲ್‌ದಿಘಿ*ಗೋ, ಒಮ್ಮೊಮ್ಮೆ ಈಡೆನ್ ಗಾರ್ಡನ್ನಿಗೋ ಸುತ್ತಾಡಲು ಹೋಗುವನು. ಅವನಿಗೆ ಗ್ರೀಕ್ ಇತಿಹಾಸದ ವೀರ ಪುರುಷರ ಕಥೆಗಳನ್ನೆಲ್ಲ ಹೇಳುವನು, ಸ್ಕಾಟ್ ಮತ್ತು ವಿಕ್ಟರ್ ಹ್ಯೂಗೋರ ಕಾದಂಬರಿಗಳನ್ನು ಸ್ವಲ್ಪ ಸ್ವಲ್ಪವಾಗಿ ಬಂಗಾಳಿಯಲ್ಲಿ ಹೇಳುವನು. ಅವನ ಮುಂದೆ ದೊಡ್ಡ ದನಿಯಲ್ಲಿ ಇಂಗ್ಲಿಷ್ ಕವಿತೆಗಳನ್ನು ಹಾಡಿ ಅವನ್ನು ಬಂಗಾಳಿಯಲ್ಲಿ ತರ್ಜುಮೆ ಮಾಡಿ ಅರ್ಥ ಹೇಳುವನು. ಷೇಕ್ಸ್‌ಪಿಯರನ 'ಜೂಲಿಯಸ್ ಸೀಸರ'ನ್ನು ಅರ್ಥವಾಗುವಂತೆ ಓದಿ ಅದರಿಂದ ಆಂಟೋನಿಯ ಭಾಷಣವನ್ನು ಬಾಯಿಪಾಠ ಮಾಡಿಸಲು ಯತ್ನಿಸುವನು. ಈ ಚೋಟುದ್ದದ ಹುಡುಗ ಹರಲಾಲನ ಹೃದಯವನ್ನು ಸೂರೆಗೊಳ್ಳುವ ಶಕ್ತಿಯುಳ್ಳ ಚಿನ್ನದ ಮಾಯಾ ದಂಡವಾಗಿಬಿಟ್ಟ. ಒಬ್ಬನೇ ಕೂತು ಓದಿದಾಗ ಇಂಗ್ಲಿಷ್ ಸಾಹಿತ್ಯವನ್ನು ಅಷ್ಟು ಚೆನ್ನಾಗಿ ಮನನಮಾಡಿಕೊಳ್ಳಲಾಗುತ್ತಿರಲಿಲ್ಲ. ಈಗ ಅದೇ ಇಂಗ್ಲಿಷ್ ಇತಿಹಾಸ, ಸಾಹಿತ್ಯ, ವಿಜ್ಞಾನಗಳನ್ನೋದಿದಾಗ ಅವುಗಳಲ್ಲಿ ಸ್ವಲ್ಪ ರಸ ದೊರೆತರೂ ಅದನ್ನ ಮೊದಲು ವೇಣುವಿಗೆ ತಿಳಿಸಿ ಅದರಲ್ಲಿ ಅವನು ಭಾಗವಹಿಸುವಂತೆ ಮಾಡಲು ಹರಲಾಲನಿಗೆ ಆತುರ. ಇದರಿಂದ ವೇಣುವಿನ ಮನಸ್ಸಿನಲ್ಲಿ ಅದೇ ಆನಂದದ ಸಂಚಾರವಾಗುವಂತೆ ಮಾಡಲು ಯತ್ನಿಸುವಾಗ ಸ್ವಂತ ಗ್ರಹಣಶಕ್ತಿಯೂ ಆನಂದದ ಒಡೆತನವೂ ಇಮ್ಮಡಿಯಾದಂತೆ ಅನ್ನಿಸುತ್ತಿತ್ತು.

ವೇಣುವು ಶಾಲೆಯಿಂದ ಬಂದೊಡನೆ ಹೇಗೊ ತನ್ನ ತಿಂಡಿ, ತೀರ್ಥ ಮುಗಿಸಿಕೊಂಡು ಹರಲಾಲನ ಬಳಿ ಓಡಿಹೋಗಲು ತವಕದಿಂದಿರುವುದನ್ನು ಕಂಡಾಗ ಅವನ ತಾಯಿ ಯಾವ ನೆಪದಿಂದಲೂ ಏನು ಆಸೆ ತೋರಿಸಿದರೂ ಅವನನ್ನ ತನ್ನ ಹತ್ತಿರವೇ ಇರಿಸಿಕೊಳ್ಳಲಾಗುತ್ತಿರಲಿಲ್ಲ. ನನೀಬಾಲಳಿಗೆ ಇದು ಸರಿಬೀಳಲಿಲ್ಲ. ಅವಳ ಮನಸ್ಸಿನಲ್ಲಿ ಹರಲಾಲನು ತನ್ನ ಚಾಕರಿಯನ್ನು ಉಳಿಸಿಕೊಳ್ಳಲೋಸುಗವೇ ಹುಡುಗನನ್ನ ಇಷ್ಟರಮಟ್ಟಿಗೆ ವಶಮಾಡಿಕೊಳ್ಳಲು ಯತ್ನಿಸುತ್ತಿದ್ದಾನೆನ್ನಿಸಿತು. ಆಕೆ ಆಗ ಹರಲಾಲನನ್ನೊಂದು ದಿನ ಕರೆಸಿ ಪರದೆಯ ಮರೆಯಿಂದಲೇ "ನೀವು ಮಾಸ್ಟರು. ಹುಡುಗನಿಗೆ ಕೇವಲ ಬೆಳಗ್ಗೆ ಒಂದು ಘಂಟೆ, ಸಂಜೆ ಒಂದು ಘಂಟೆ ಪಾಠ ಹೇಳಿಕೊಡಿ. ಹಗಲು, ರಾತ್ರಿ ಇವನನ್ನ ಹತ್ತಿರ ಇರಿಸಿಕೊಳ್ಳುವುದೇಕೆ? ಈ ನಡುವೆ ಹುಡುಗ ತಾಯಿ, ತಂದೆ ಯಾರನ್ನೂ ಲೆಕ್ಕಿಸುವುದಿಲ್ಲ. ಎಂಥ ಪಾಠ ಹೇಳಿಕೊಡುವುದಿದು ಅಂತೀನಿ? ಮೊದಲು ಅಮ್ಮ ಅಂದರೆ ಕುಣಿದುಕೊಂಡು

* ಕಲಿಕತ್ತೆಯ ಪ್ರಸಿದ್ಧವಾದ ದುಂಡುಕೆರೆ.

ಓಡಿ ಬರುತ್ತಿದ್ದ ಹುಡುಗ ಈಗ ಹತ್ತಿರ ಕರೆದರೂ ಬರವೊಲ್ಲ, ಹಾಗಾಗಿದಾನೆ. ನಮ್ಮ ವೇಣು ದೊಡ್ಡ ಮನೆತನದ ಹುಡುಗ, ತಿಳೀರಿ. ಇವನ ಸಂಗಡ ನಿಮಗ್ಯಾಕೆ ಇಷ್ಟೊಂದು ಸಲಿಗೆ ಅಂತೀನಿ!" ಎಂದು ತಿರಸ್ಕಾರವಾಗಿ ನುಡಿದಳು.

ಆ ದಿನ ರತೀಕಾಂತನು ಅಧರಬಾಬುಗಳ ಸಂಗಡ ಮಾತಾಡಿದ್ದ – ದೊಡ್ಡ ಮನುಷ್ಯರ ಮಗನಿಗೆ ಪಾಠಹೇಳಲು ಬಂದವ ಈ ರೀತಿಯಾಗಿ ಹುಡುಗನ ಮನಸ್ಸನ್ನು ವಶಮಾಡಿಕೊಂಡುಬಿಟ್ಟದ್ದಾನೆ – ಆಮೇಲೆ ಹುಡುಗನಿಗೆ ಆಸ್ತಿ ದಕ್ಕಿದಾಗ ಈ ಮಾಸ್ಟರನದೇ ಪಾರುಪತ್ತೆಯಾಗಿಬಿಡುತ್ತದೆ. ಆಮೇಲೆ ಹುಡುಗನನ್ನು ಸ್ವೇಚ್ಛೆಯಂತೆ ನಡೆಸಿಬಿಡಬಹುದು ಎಂಬುದಾಗಿ ರತೀಕಾಂತ ತನಗೆ ತಿಳಿದಿದ್ದ ಮೂರು ನಾಲ್ಕು ಜನ ಟೀಕೆ ಮಾಡಿದ್ದರೆಂದು ಉಸುರಿದ್ದ. ಹರಲಾಲನ ಕಡೆ ಸನ್ನೆ ಮಾಡಿ ಹೀಗೆಲ್ಲ ಹೇಳುತ್ತಿದ್ದಾಗ ಹರಲಾಲನಿಗೆ ತಿಳಿಯುವುದು ಕಷ್ಟವಾಗಲಿಲ್ಲ. ಆದರೂ ಅವನು ಮಾತೊಂದೂ ಆಡದೆ ಸುಮ್ಮನೆ ಎಲ್ಲವನ್ನೂ ಸೈರಿಸಿಕೊಂಡು ಬಿಟ್ಟಿದ್ದ. ಆದರೆ ಈಗ ವೇಣುವಿನ ತಾಯಿಯ ಮಾತನ್ನು ಕೇಳಿ ಅವನ ಎದೆಯೊಡೆದು ಹೋಗುವಂತಾಯಿತು. ದೊಡ್ಡ ಮನುಷ್ಯರ ಮನೆಯಲ್ಲಿ ಪಾಠ ಹೇಳುವವರ ಅಂತಸ್ತೇನು ಎಂದು ಇಂದವನಿಗೆ ಮಂದಟ್ಟಾಯಿತು. ಹುಡುಗನಿಗೆ ಹಾಲನ್ನು ಒದಗಿಸಲು ಕೊಟ್ಟಿಗೆಯಲ್ಲಿ ದನವನ್ನು ಕಟ್ಟಿರುವ ಹಾಗೆ, ಅವನಿಗೆ ವಿದ್ಯೆಯೊದಗಿಸಲು ಮಾಸ್ಟರನ್ನ ಇಟ್ಟಿರುವುದು ಕೂಡ. ಅಂತಹ ಸ್ಥಾನದಲ್ಲಿರುವವನು ಶಿಷ್ಯನ ಸಂಗಡ ಸ್ನೇಹಪೂರ್ಣವಾಗಿ ಆತ್ಮೀಯತೆಯನ್ನು ಬೆಳೆಸಿಕೊಳ್ಳಲು ಹೋಗುವುದು ಎಷ್ಟು ದೊಡ್ಡ ಸೊಕ್ಕು ಎಂದರೆ, ಆಳು, ಕಾಳು ಮೊದಲುಗೊಂಡು ಮನೆಯ ಯಜಮಾನಿಯವರೆಗೆ ಯಾರೂ ಅದನ್ನು ಸಹಿಸಲಾರರು. ಅಲ್ಲದೆ ಎಲ್ಲರೂ ಅದನ್ನು ಸ್ವಾರ್ಥಸಾಧನೆಯ ಒಂದು ಉಪಾಯವೆಂದೇ ತಿಳಿಯುವರು.

ಹರಲಾಲನು ನಡುಗುವ ದನಿಯಲ್ಲಿ "ವೇಣುವಿಗೆ ನಾನು ಇನ್ನು ಮೇಲೆ ಬರೇ ಪಾಠ ಹೇಳಿಕೊಡುತ್ತೇನೆ. ಅವನೊಂದಿಗೆ ಬೇರಾವ ಸಂಪರ್ಕವನ್ನೂ ಇಟ್ಟುಕೊಳ್ಳುವುದಿಲ್ಲ" ಎಂದುಬಿಟ್ಟ. ಅಂದು ಸಂಜೆ, ವೇಣುವಿನ ಸಂಗಡ ಅವನು ಕಾಲ ಕಳೆಯುತ್ತಿದ್ದ ಸಮಯದಲ್ಲಿ ಹರಲಾಲನು ಕಾಲೇಜಿನಿಂದ ವಾಪಸು ಬರಲಿಲ್ಲ; ಆ ರಸ್ತೆ, ಈ ರಸ್ತೆಯೆನ್ನದೆ ಸುತ್ತಾಡಿ ಹೇಗೆ ಕಾಲ ಕಳೆದನೋ ಅದು ಅವನಿಗೇ ಗೊತ್ತು. ಸಂಜೆಯಾಗುತ್ತಲೂ ಪಾಠ ಹೇಳಿಕೊಡುವುದಕ್ಕೆ ಬಂದಾಗ ವೇಣು ಮುಖ ಭಾರ ಮಾಡಿಕೊಂಡು ಕೂತಿದ್ದ. ಹರಲಾಲನು ಅಂದು ತಾನು ಬೇಗ ಬರದಿದ್ದುದಕ್ಕಾಗಿ ಕಾರಣವೇನೂ ಹೇಳದೆ ಪಾಠ ಹೇಳಿಕೊಡುತ್ತ ಹೋದ. ಆ ದಿನ ಓದು ಅಷ್ಟು ಸುಗಮವಾಗಿ ನಡೆಯಲಿಲ್ಲ.

ಹರಲಾಲನು ಪ್ರತಿದಿನ ಇನ್ನೂ ಕತ್ತಲು ಕತ್ತಲಾಗಿರುವಾಗಲೇ ಎದ್ದು ಮುಖ ತೊಳೆದು ತನ್ನ ವ್ಯಾಸಂಗ ಆರಂಭಿಸುತ್ತಿದ್ದ. ವೇಣು ಬೆಳಗಾದ ಮೇಲೆದ್ದು ಮುಖ

ತೊಳೆದು ತಿಂಡಿ ತಿಂದು ಅವನ ಬಳಿಗೆ ಓಡುತ್ತಿದ್ದ. ತೋಟದೊಳಗೆ ಕಟ್ಟೆ ಕಟ್ಟಿರುವ ಕೊಳದಲ್ಲಿ ಮೀನುಗಳಿದ್ದುವು. ಅವುಗಳಿಗೆ ಪುರಿ ತಿನ್ನಿಸುವುದೊಂದು ಬೆಳಗಿನ ಕೆಲಸ ಇವನಿಗೆ. ತೋಟದ ಒಂದು ಮೂಲೆಯಲ್ಲಿ ಕೆಲವು ಕಲ್ಲುಗಳನ್ನು ಸಾಲಾಗಿ ಜೋಡಿಸಿ ಸಣ್ಣ ದಾರಿಗಳನ್ನೂ ಚಿಕ್ಕದೊಂದು ಗೇಟನ್ನು, ಬೇಲಿಯನ್ನೂ ತಯಾರುಮಾಡಿ ವೇಣುವು ವಾಲಖಿಲ್ಯ ಋಷಿಯ ಆಶ್ರಮಕ್ಕೆ ಅನುಕೂಲವಾಗತಕ್ಕಂಥ ಪುಟ್ಟ ಉದ್ಯಾನವೊಂದನ್ನು ನಿರ್ಮಿಸಿಕೊಂಡಿದ್ದ. ಆ ತೋಟದಲ್ಲಿ ಮನೆಯ ತೋಟಗಾರನಿಗೆ ಯಾವ ಅಧಿಕಾರವೂ ಇರಲಿಲ್ಲ. ಮುಂಜಾನೆ ಈ ಉದ್ಯಾನದಲ್ಲಿ ಕೈಯಾಡಿಸುವುದು ಅವರಿಬ್ಬರ ಎರಡನೆಯ ಕೆಲಸ. ಆಮೇಲೆ ಬಿಸಿಲು ಬಂದನಂತರ ಮನೆಗೆ ಮರಳಿ ಬಂದು ವೇಣು ಹರಲಾಲನ ಬಳಿ ಪಾಠಕ್ಕೆ ಹೋಗುತ್ತಿದ್ದ. ಹಿಂದಿನ ಸಂಜೆ ಹರಲಾಲನು ಅರ್ಧ ಹೇಳಿದ್ದ ಕಥೆಯಲ್ಲಿ ಇನ್ನೂ ಉಳಿದಿದ್ದ ಭಾಗವನ್ನು ಅವನಿಂದ ಹೇಳಿಸಬೇಕೆಂದು ವೇಣು ಬೆಳಗ್ಗೆ ಕತ್ತಲು ಕತ್ತಲಾಗಿರುವಾಗಲೇ ಎದ್ದು ಹೊರಗೆ ಬಂದಿದ್ದ. ಮುಂಜಾನೆ ಹೊತ್ತು ಹುಟ್ಟುವುದಕ್ಕೆ ಮೊದಲೇ ಏಳುವುದರಲ್ಲಿ ಇಂದು ತಾನು ಹರಲಾಲನನ್ನು ಸೋಲಿಸಿದ್ದೇನೆ ಎಂದುಕೊಂಡ. ಹೆಮ್ಮೆಯಿಂದ ಕೋಣೆಯನ್ನು ಹೊಕ್ಕು ನೋಡಿದರೆ, ಮಾಸ್ಟರರಿಲ್ಲ. ಬಾಗಿಲು ಕಾಯುವವನನ್ನು ಕೇಳಿದಾಗ ಮಾಸ್ಟರು ಮಹಾಶಯರು ಹೊರಗೆ ಹೋಗಿದ್ದಾರೆಂದು ತಿಳಿಯಿತು. ಆ ದಿನವೂ ಬೆಳಗ್ಗೆ ಪಾಠ ಓದುವ ಸಮಯದಲ್ಲಿ ವೇಣು ತನ್ನ ಪುಟ್ಟ ಹೃದಯದಲ್ಲಿ ಹುದುಗಿದ್ದ ನೋವಿನಿಂದ ಮುಖವನ್ನು ಗಂಭೀರವಾಗಿ ಮಾಡಿಕೊಂಡು ಕೂತಿದ್ದ. ಬೆಳಗ್ಗೆ ಅಷ್ಟು ಹೊತ್ತಿಗೇ ಹರಲಾಲ ಹೊರಗಡೆ ಏಕೆ ಹೋಗಿದ್ದ ಎಂದು ಕೇಳಲಿಲ್ಲ. ಮಾಸ್ಟರನೂ ಶಿಷ್ಯನ ಮುಖದ ಕಡೆಯೇ ನೋಡದೆ ಪುಸ್ತಕದ ಹಾಳೆಯ ಮೇಲೆ ನೋಟ ನೆಟ್ಟು ಪಾಠ ಹೇಳುತ್ತಾ ಹೋದ. ವೇಣು ಮನೆಗೆ ಬಂದು ತಾಯ ಬಳಿ ಊಟಕ್ಕೆ ಕೂತಾಗ ತಾಯಿ "ನಿನ್ನೆ ಸಂಜೆಯಿಂದ ನಿನಗೇನಾಗಿದೆಯೋ, ಹೇಳು ನೋಡೋಣ. ಮುಖವನ್ನು ಮುಸುರೆಪಾತ್ರೆಯ ಹಾಗೆ ಮಂಕಾಗಿ ಯಾಕೆ ಮಾಡಿಕೊಂಡಿದ್ದೀಯಾ, ಹೇಳು. ಸರಿಯಾಗಿ ಊಟ ಕೂಡ ಮಾಡುತ್ತಿಲ್ಲ. ಏನು ನಡೆಯಿತು ಹೇಳೋ, ವೇಣು?" ಎಂದು ಕೇಳಿದಳು.

ವೇಣು ಉತ್ತರ ಕೊಡಲಿಲ್ಲ. ಊಟವಾದ ಮೇಲೆ ತಾಯಿ ಅವನನ್ನ ಹತ್ತಿರ ಎಳೆದುಕೊಂಡು ಅವನ ಮೈದಡವಿ ಅಕ್ಕರೆಯಿಂದ ಅವನನ್ನು ಬಾರಿಬಾರಿಗೂ ಪ್ರಶ್ನೆ ಮಾಡಿದಾಗ ಅವನಿಗೆ ತಡೆಯದಂತಾಯಿತು. ಬಿಕ್ಕಿಬಿಕ್ಕಿ ಅಳತೊಡಗಿದ. "ಮಾಸ್ಟರ್...ಮಾಸ್ಟರ್..." ಎಂದು ಮಾತ್ರ ಅವನ ಬಾಯಿಂದ ಬಂತು.

ತಾಯಿಯಾಗ "ಏನು...ಮಾಸ್ಟರೇನಂದರು?" ಎಂದು ಕೇಳಿದಳು.

ವೇಣುವಿಗೆ ಹೇಳಲಾಗಲಿಲ್ಲ. ಮಾಸ್ಟರು ಏನು ಮಾಡಿದ್ದಾರೆ ಎಂದು, ದೂರು ಏನು ಎಂಬುದಾಗಿ ಮಾತಿನಲ್ಲಿ ಪ್ರಕಟಗೊಳಿಸುವುದವನಿಗೆ ಕಷ್ಟವಾಯಿತು.

ನನೀಬಾಲಳಾಗ "ಮಾಸ್ತರ ಮಹಾಶಯ ನಿನ್ನ ತಾಯಿಯ ಹೆಸರಿನಲ್ಲೇನಾದರೂ ನಿನ್ನ ಮುಂದೆ ಆಡಿಕೊಂಡಿದ್ದಾನೇನೋ" ಎಂದಳು.

ಈ ಮಾತಿನ ಅರ್ಥವೇನೂ ಆಗದೆ ವೇಣು ಬೇರೇನೂ ಹೇಳದೆ ಹೊರಟು ಬಂದುಬಿಟ್ಟ.

೫

ಇದೇ ಸಮಯದಲ್ಲಿ ಮನೆಯೊಳಗೆ ಅಧರಬಾಬುವಿನ ಕೆಲವು ವಸ್ತ್ರ, ಒಡವೆ ಕಳುವಾಗಿಹೋದುವು. ಪೋಲೀಸರಿಗೆ ದೂರು ತಲಪಿಸಲಾಯಿತು. ಪೋಲೀಸರು ಬಂದು ತನಿಖೆ ಮಾಡುವಾಗ ಹರಲಾಲನ ಪೆಟ್ಟಿಗೆಯನ್ನು ಹುಡುಕದೆ ಇರಲಿಲ್ಲ. ರತೀಕಾಂತನು ಅತ್ಯಂತ ಗಂಭೀರವಾಗಿ "ಕಳ್ಳತನ ಮಾಡಿದ ಆಳು ಸಾಮಾನನ್ನು ಪೆಟ್ಟಿಗೆಯೊಳಗೆ ಇಟ್ಟಿರುತ್ತಾನೆಯೆ?" ಎಂದು ಮೆಲ್ಲಗೆ ನುಡಿದ.

ಕಳುವಾದ ಮಾಲು ಎಲ್ಲಿ ಎಂದು ತಿಳಿಯಲಿಲ್ಲ. ಈ ಬಗೆಯಾಗಿ ಸಾಮಾನು ಕಳೆದುಹೋಗುವುದೆಂದರೆ ಅಧರಲಾಲನಿಗೆ ಸಹಿಸಲಾಗುತ್ತಿರಲಿಲ್ಲ. ಅವನು ಮನೆಯವರ ಮೇಲೆಲ್ಲ ಕೂಗಿ ಹಾರಾಡಿದ. ರತೀಕಾಂತನಾಗ "ಮನೆಯಲ್ಲಿ ಎಷ್ಟೋ ಜನರಿದ್ದಾರೆ. ಯಾರ ಮೇಲೆ ತಪ್ಪು ಹೊರಿಸೋದಕ್ಕಾಗುತ್ತದೆ? ಯಾರ ಮೇಲೆ ಸಂದೇಹಪಡುವುದು? ಖುಷಿ ಬಂದ ಹಾಗೆ ಬರುವವರೂ ಹೋಗುವವರೂ ಇದ್ದಾರೆ" ಎಂದ, ವ್ಯಂಗ್ಯವಾಗಿ.

ಅಧರಲಾಲನಾಗ ಮಾಸ್ಟರನನ್ನು ಕರೆದು "ನೋಡು, ಹರಲಾಲ, ನಿಮ್ಮನ್ಯಾರನ್ನೂ ಮನೆಯಲ್ಲಿಟ್ಟುಕೊಳ್ಳುವುದಕ್ಕನುಕೂಲವಿಲ್ಲ. ಇವತ್ತಿನಿಂದ ನೀನು ಬೇರೆ ವಾಸ ನೋಡಿಕೋ. ನಿತ್ಯ ಹೊತ್ತಿಗೆ ಸರಿಯಾಗಿ ಬಂದು ವೇಣುವಿಗೆ ಪಾಠ ಹೇಳಿಕೊಟ್ಟು ಹೋಗು. ಹೋಗಬೇಕಾದರೆ ನಿನಗೆ ಇನ್ನೂ ಎರಡು ರೂಪಾಯಿ ಹೆಚ್ಚಾಗಿ ಕೊಡಲು ತಯಾರಿದ್ದೇನೆ" ಎಂದ.

ರತೀಕಾಂತನು ತಂಬಾಕಿನ ಹೊಗೆಯೆಳೆಯುತ್ತ "ಹ್ಹಾ, ಇದು ಸರಿಯಾದ ವ್ಯವಸ್ಥೆ. ಎರಡು ಕಡೆಯೂ ಕ್ಷೇಮ" ಎಂದ.

ಹರಲಾಲನು ತಲೆ ತಗ್ಗಿಸಿಕೊಂಡು ಎಲ್ಲ ಕೇಳಿದ. ಆಗ ಏನೂ ಮಾತಾಡಲಾಗಲಿಲ್ಲ. ತನ್ನ ಕೋಣೆಗೆ ಬಂದು ಅಧರಬಾಬುವಿಗೆ ಒಂದು ಕಾಗದ ಬರೆದು ಕಳುಹಿಸಿದ. ಕೆಲವು ಕಾರಣಗಳ ದೆಸೆಯಿಂದ ವೇಣುವಿಗೆ ಇನ್ನು ಮೇಲೆ ತನ್ನಿಂದ ಪಾಠ ಹೇಳುವುದು ಅನುಕೂಲವಾಗದೆಂದೂ, ಇಂದೇ ತಾನು ಬೀಳ್ಕೊಳ್ಳಲು ತಯಾರಾಗುವೆನೆಂದೂ ಬರೆದಿದ್ದ. ಅಂದು ಶಾಲೆಯಿಂದ ವೇಣು ಮರಳಿ ಬಂದದ್ದೇ ಮಾಸ್ಟರನ ಬಳಿ ಓಡಿದಾಗ ನೋಡಿದ ಅವನ ಕೋಣೆ ಖಾಲಿ. ಅವನ ಮುರಿದ ತಗಡಿನ ಪೆಟ್ಟಿಗೆಯೂ ಇಲ್ಲ. ಹಗ್ಗದ ಮೇಲೆ ಅವನ ಪಂಚೆ, ಟವಲು ಸಾಮಾನ್ಯವಾಗಿ

ಒಣಗಹಾಕಲ್ಪಡುತ್ತಿದ್ದುವು. ಹಗ್ಗವೇನೋ ಇದೆ. ಆದರೆ ಪಂಚೆ, ಟವಲುಗಳಿಲ್ಲ. ಮೇಜಿನ ಮೇಲೆ ನೋಟುಬುಕ್ಕುಗಳೂ, ಇತರ ಪುಸ್ತಕಗಳೂ ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತಿದ್ದುವು. ಅವುಗಳ ಬದಲಾಗಿ ಅಲ್ಲಿ ಒಂದು ದೊಡ್ಡ ಗಾಜಿನ ಶೀಸೆಯೊಳಗೆ ಹೊಂಬಣ್ಣದ ಮೀನು ಝುಕಝುಕನೆ ಕೆಳಗೂ ಮೇಲೂ ಈಜಾಡುತ್ತಿದೆ. ಆ ಶೀಸೆಯ ಮೈಮೇಲೆ ಮಾಸ್ಟರರ ಕೈ ಅಕ್ಷರಗಳಲ್ಲಿ ವೇಣುವಿನ ಹೆಸರಿಗೆ ಬರೆದ ಒಂದು ಪತ್ರ ಅಂಟಿಸಿದೆ. ಮೇಜಿನ ಮೇಲೆ ಇದಲ್ಲದೆ ಒಂದು ಚೆನ್ನಾಗಿ ರಟ್ಟುಹಾಕಿದ ಒಂದು ಇಂಗ್ಲಿಷ್ ಚಿತ್ರದ ಪುಸ್ತಕ ಕೂಡ ಇತ್ತು. ಅದರ ಒಳಗಡೆ ಮೊದಲನೇ ಪುಟದ ಮೇಲೆ ಒಂದು ಕಡೆ ವೇಣುಗೋಪಾಲನ ಹೆಸರು, ತಾರೀಖು, ತಿಂಗಳು, ವರುಷ ಬರೆಯಲಾಗಿದೆ.

ವೇಣು ತತ್‌ಕ್ಷಣ ಓಡಿಹೋಗಿ ತಂದೆಯನ್ನು "ಅಪ್ಪಾ, ಮಾಸ್ಟರ್ ಮಹಾಶಯ ಎಲ್ಲಿ ಹೋದರು?" ಎಂದು ಕೇಳಿದ.

ತಂದೆ ಅವನನ್ನ ಪಕ್ಕಕ್ಕೆ ಕರೆದುಕೊಂಡು "ಅವರು ಕೆಲಸ ಬಿಟ್ಟು ಹೊರಟು ಹೋದರಪ್ಪಾ" ಎಂದ.

ವೇಣುವು ತಂದೆಯ ಹಿಡಿತದಿಂದ ಬಲವಂತವಾಗಿ ಬಿಡಿಸಿಕೊಂಡು ತನ್ನ ಕೋಣೆಗೆ ಹೋಗಿ ಜೋರಲಾಗಿ ನೆಲದ ಮೇಲೆ ಬಿದ್ದು ಅಳತೊಡಗಿದ. ಅಧರ ಬಾಬುವಿಗೆ ವ್ಯಸನವಾಯಿತು. ಏನು ಮಾಡಬೇಕೆಂದವನಿಗೆ ತೋಚಲಿಲ್ಲ.

ಮರುದಿನ ಬೆಳಗ್ಗೆ ಹತ್ತೂವರೆ ಘಂಟೆಯಾಗಿದೆ. ಹರಲಾಲನು ಒಂದು ಹಾಸ್ಟಲಿನ ಕೋಣೆಯೊಂದರಲ್ಲಿ ಮಂಚದ ಮೇಲೆ ಕೂತು ಸುಮ್ಮನೆ ಚಿಂತಿಸುತ್ತ ಇದ್ದಾನೆ. ಕಾಲೇಜಿಗೆ ಹೋಗಲೇ, ಬೇಡವೇ ಎಂದು ಅನುಮಾನ ಮಾಡುತ್ತಿದ್ದಾನೆ. ಈ ಸಮಯದಲ್ಲಿ ಹಠಾತ್ತಾಗಿ ನೋಡಿದರೆ, ಮೊದಲು ಅಧರಬಾಬುವಿನ ಬಾಗಿಲು ಕಾಯುವವ ಚಂದ್ರಭಾನ್ ಒಳಗೆ ಬಂದ ಅವನ ಹಿಂದೆ ವೇಣು ಒಳ ಹೊಕ್ಕು ಕೂಡಲೇ ಹರಲಾಲನ ಕೊರಳನ್ನೇ ಬಿಗಿಯಾಗಿ ಅಪ್ಪಿದ. ಹರಲಾಲನ ದನಿ ಉಡುಗಿಹೋಯಿತು. ಮಾತಾಡಹೋದರೆ ಕಣ್ಣುಗಳಿಂದ ನೀರು ಸುರಿದೀತೆಂದು ಅಂಜಿ ಯಾವ ಮಾತನ್ನೂ ಆಡಲಿಲ್ಲ.

ವೇಣು ಆಗ "ಮಾಸ್ಟರ್ ಮಹಾಶಯರೆ ಮನೆಗೆ ನಡಿಯಿರಿ" ಎಂದ.

ವೇಣು ಅಂದು ಮಾಸ್ಟರನ್ನ ಹೇಗಾದರೂ ಮಾಡಿ ನೋಡಲೇಬೇಕೆಂದು ಹಠ ತೊಟ್ಟು ಮುದಿ ಕಾವಲುಗಾರ, ಚಂದ್ರಭಾನನನ್ನು ಮರೆಹೊಕ್ಕನು. ಏನೇ ಆಗಲಿ, ಮಾಸ್ಟರ್ ಮಹಾಶಯರಿರುವ ಕಡೆ ಕರೆದುಕೊಂಡು ಹೋಗಲೇ ಬೇಕೆಂದು ಕೇಳಿಕೊಂಡ. ಆ ಕೇರಿಯಲ್ಲಿ ಹರಲಾಲನ ಸಾಮಾನನ್ನು ಹೊತ್ತು ತಂದಿದ್ದ ಕೂಲಿಯವನನ್ನು ಪತ್ತೆ ಹಚ್ಚಿ ಅವನಿಂದ ವಿಳಾಸವನ್ನು ತಿಳಿದುಕೊಂಡು ಚಂದ್ರಭಾನನು ವೇಣುವನ್ನು ಶಾಲೆಗೆ ಹೋಗುವುದಕ್ಕೆ ಮುಂಚೆ, ಮನೆಯ ಗಾಡಿಯಲ್ಲಿ

ಕೂರಿಸಿಕೊಂಡು ಹರಲಾಲನ ಹಾಸ್ಟಲಿನ ಬಳಿ ಕರೆದುಕೊಂಡು ಬಂದ. ವೇಣುವಿನ ಮನೆಗೆ ತಾನೇಕೆ ಹೋಗುವುದಕ್ಕೆ ಅಸಾಧ್ಯ ಎಂಬುದನ್ನು ಹರಲಾಲ ಹೇಳಲಾರದೆ ಹೋದ. ಆದರೂ ಅವರ ಮನೆಗಂತೂ ಹೋಗಲಾರ. ವೇಣು ಅವನ ಕೊರಳನ್ನ ಬಿಗಿಯಾಗಿ ಹಿಡಿದುಕೊಂಡು "ನಡೀರಿ ನಮ್ಮ ಮನೆಗೆ" ಎಂದು ಅಂಗಲಾಚಿದ್ದ. ಈ ಪುಟ್ಟ ಹುಡುಗನ ಮೃದು ಸ್ಪರ್ಶ, ಅವನ ಈ ದೈನ್ಯವಾದ ಮಾತು, ಇವುಗಳ ನೆನಹು, ಎಷ್ಟು ದಿನ, ಎಷ್ಟು ರಾತ್ರಿ ಅವನ ಕೊರಳನ್ನು ಬಿಗಿಸಿ ಅವನು ಉಸಿರಾಡದಿರುವಂತೆ ಮಾಡಿತ್ತೊ! ಆದರೆ ಕ್ರಮೇಣ ಇಬ್ಬರೂ ಪರಸ್ಪರ ಏನೂ ಬಾಕಿಯಿಲ್ಲದಂತೆ ಮರೆಯುವಂಥ ದಿನವೂ ಬಂತು, ಒಮ್ಮೆ. ಎದೆಯ ನರಗಳಿಗೆ ಅಂಟಿಕೊಂಡ ನೋವೆಂಬ ನಿಶಾಚರನು ಬಾವುಲಿ ಹಕ್ಕಿಯಂತೆ ನೇತಾಡುತ್ತ ನಿಲ್ಲುವುದು ನಿಂತುಹೋಯಿತು, ಅಂದಿನಿಂದ.

೬

ಎಷ್ಟು ಪ್ರಯತ್ನ ಮಾಡಿದರೂ ಹರಲಾಲನಿಗೆ ಓದಿನಲ್ಲಿ ಮತ್ತೆ ಮನಸ್ಸು ಮುಳುಗಿಸಲು ಅಸಾಧ್ಯವಾಯಿತು. ಸ್ಥಿರ ಮನಸ್ಸಿನಿಂದ ಕೂಡುವುದಕ್ಕೇ ಆಗದೆಹೋಯಿತು. ಸ್ವಲ್ಪ ಓದಲು ತೊಡಗಿ ಕೂಡಲೇ ನಿಲ್ಲಿಸಿ ಪಟ್ಟನೆ ಪುಸ್ತಕ ಮುಚ್ಚಿ ಒಗೆದುಬಿಡುತ್ತಿದ್ದ. ಸುಮ್ಮನಿರಲು ಮನಸ್ಸಾಗದೆ ಉದ್ದೇಶ್ಯವಿಲ್ಲದೆ ಬೇಗಬೇಗ ಹೆಜ್ಜೆ ಹಾಕುತ್ತ ಬೀದಿಬೀದಿ ಅಲೆಯುತ್ತಿದ್ದ. ಕಾಲೇಜಿನಲ್ಲೂ ಲೆಕ್ಚರುಗಳ ನೋಟ್ಸು ಪುಸ್ತಕಗಳಲ್ಲಿ ಅಲ್ಲಲ್ಲಿ ಜಾಗ ಖಾಲಿ ಬೀಳುತ್ತಿತ್ತು. ಮಧ್ಯೆ ಮಧ್ಯೆ ಏನಾದರೂ ಅಕ್ಷರಗಳಂತೆ ಕಂಡುಬಂದರೂ ಅವು ಪುರಾತನ ಈಜಿಪ್ಟಿನ (heiroglyphics) ಚಿತ್ರಲಿಪಿಯಂತೆ ಕಾಣುತ್ತಿದ್ದುವೇ ವಿನಾ ವರ್ಣಮಾಲೆಯ ಯಾವ ಅಕ್ಷರಗಳನ್ನೂ ಹೋಲುತ್ತಿರಲಿಲ್ಲ.

ಇದಾವುದೂ ಒಳ್ಳೆಯ ಲಕ್ಷಣವಲ್ಲ ಎಂದು ಹರಲಾಲನಿಗೆ ತಿಳಿಯಿತು. ಪರೀಕ್ಷೆಯಲ್ಲಿ ಒಂದುಪಕ್ಷ ಪಾಸಾದರೂ ನೌಕರಿ ಸಿಕ್ಕುವ ಸಂಭವವೇನಿಲ್ಲ.

ನೌಕರಿಯಿಲ್ಲದೆ ಕಲಿಕತ್ತೆಯಲ್ಲಿ ಒಂದು ದಿನ ಕೂಡ ಇರಲು ಸಾಧ್ಯವಿಲ್ಲ. ಈ ಕಡೆ ಊರಿನಲ್ಲಿರುವ ತಾಯಿಗೂ ಐದಾರು ರೂಪಾಯಿ ಕಳಿಸಬೇಕಾಗಿತ್ತು... ಕಡೆಗೆ ಓದುವುದನ್ನು ಅಲ್ಲಿಗೇ ನಿಲ್ಲಿಸಿ ಈಗಲೇ ಏನಾದರೊಂದು ಚಾಕರಿ ಹುಡುಕೋಣವೆಂದು ನಿಷ್ಕರ್ಷೆಮಾಡಿದ. ಅಂದಿನಿಂದ ಆ ಪ್ರಯತ್ನದಲ್ಲಿ ತೊಡಗಿ ಓಡಾಡಲು ಆರಂಭಿಸಿದ. ನೌಕರಿ ಸಿಗುವುದು ಕಷ್ಟ, ನೌಕರಿ ಸಿಗದೆ ಹೋದರೆ ಇರುವುದು ಇನ್ನೂ ಕಷ್ಟ. ಈ ಕಾರಣದಿಂದ ಆಸೆ ಬಿಟ್ಟಿದ್ದರೂ ಕೆಲಸ ಹುಡುಕುವುದನ್ನ ಮಾತ್ರ ಬಿಡದೇಹೋದ.

ಹರಲಾಲನ ಅದೃಷ್ಟವಶದಿಂದ ದೊಡ್ಡದೊಂದು ಆಂಗ್ಲ ವ್ಯಾಪಾರ ಸಂಸ್ಥೆಯ ಆಫೀಸಿನಲ್ಲಿ ಅರ್ಜಿಹಾಕಲು ಹೋದಾಗ ಹಠಾತ್ತಾಗಿ ಅಲ್ಲಿನ ದೊಡ್ಡ ಸಾಹೇಬರ

ದೃಷ್ಟಿಗೆ ಬಿದ್ದ. ಸಾಹೇಬನಿಗೆ ತಾನು ಮುಖ ನೋಡಿದೊಡನೆ ಯೋಗ್ಯತೆ ಕಂಡುಹಿಡಿಯಬಲ್ಲೆನೆಂಬ ನಂಬಿಕೆಯಿತ್ತು. ಹರಲಾಲನನ್ನ ಕರೆದು ಅವನೊಡನೆ ನಾಲ್ಕೈದು ಮಾತುಗಳಾಡಿ "ಪರವಾ ಇಲ್ಲ ಈ ಮನುಷ್ಯ ಸರಿಹೋಗುತ್ತಾನೆ" ಎಂದುಕೊಂಡ. ಆಮೇಲೆ "ಕೆಲಸ ಮಾಹಿತಿ ಇದೆಯೆ?" ಎಂದು ಕೇಳಿದ. "ಇಲ್ಲ" ಎಂದ ಹರಲಾಲ.

"ಜಾಮೀನು ಕೊಡಲು ಸಾಧ್ಯವೆ?" ಎಂದದ್ದಕ್ಕೂ "ಇಲ್ಲ" ಎಂದುತ್ತರ ಬಂತು. "ಯಾರಾದರೂ ದೊಡ್ಡ ಮನುಷ್ಯರಿಂದ ಶಿಫಾರಸು ಕಾಗದ ತರಬಲ್ಲೆಯಾ?" ದೊಡ್ಡ ಮನುಷ್ಯರಂಥವರ್ಯಾರೂ ಅವನಿಗೆ ಗುರುತಿಲ್ಲ.

ಇದೆಲ್ಲ ಕೇಳಿದ ಸಾಹೇಬ ಇನ್ನೂ ಸಂತುಷ್ಟವಾಗಿ "ಸರಿ, ಹಾಗಾದರೆ, ಇಪ್ಪತ್ತೈದು ರೂಪಾಯಿ ಸಂಬಳದ ಮೇಲೆ ಕೆಲಸ ಆರಂಭಿಸು. ಚೆನ್ನಾಗಿ ಕೆಲಸ ಕಲಿತ ಮೇಲೆ ಸಂಬಳ ಇನ್ನೂ ಹೆಚ್ಚಾಗುವುದು" ಎಂದ. ಆಮೇಲೆ ಸಾಹೇಬನು ಹರಲಾಲನ ಉಡಿಗೆತೊಡಿಗೆಗಳನ್ನು ನೋಡಿ "ಹದಿನೈದು ರೂಪಾಯಿ ಮುಂಗಡ ಕೊಡುತ್ತೇನೆ. ನೌಕರಿಗೆ ಯೋಗ್ಯವಾದ ಬಟ್ಟೆಗಳನ್ನು ಹೊಲಿಸಿಕೋ" ಎಂದ.

ಉಡುಪು ಸಿದ್ಧವಾಯಿತು. ಹರಲಾಲನು ಕಛೇರಿಗೆ ಹೋಗುವುದಕ್ಕೆ ತೊಡಗಿದ. ದೊಡ್ಡ ಸಾಹೇಬ ಅವನ ಕೈಯಲ್ಲಿ ದೆವ್ವದಂತೆ ದುಡಿಸತೊಡಗಿದ. ಉಳಿದ ಗುಮಾಸ್ತೆಯರು ಮನೆಗೆ ಹೋದಮೇಲೂ ಹರಲಾಲನಿಗೆ ವಿರಾಮವಾಗುತ್ತಿರಲಿಲ್ಲ. ಒಮ್ಮೊಮ್ಮೆ ಸಾಹೇಬನ ಮನೆಗೂ ಹೋಗಿ ಅವನಿಗೆ ಕೆಲಸದ ಕ್ರಮವನ್ನು ತಿಳಿಸಿ ಒಪ್ಪಿಸಿ ಬರಬೇಕಾಗಿತ್ತು.

ಹೀಗೆ ಕೆಲಸದಲ್ಲಿ ನಿಪುಣನಾಗಲು ಹರಲಾಲನಿಗೆ ಹೆಚ್ಚು ಕಾಲವಾಗಲಿಲ್ಲ. ಅವನ ಸಹೋದ್ಯೋಗಿಗಳನೇಕರು ಅವನ ಮೇಲಿನ ಅಸೂಯೆಯಿಂದ ಅವನಿಗೆ ಕೆಡುಕು ಮಾಡಲು ಯತ್ನಿಸಿದರು. ಅವನ ಮೇಲೆ ದೊಡ್ಡ ಅಧಿಕಾರಗಳ ಬಳಿ ಸುಳ್ಳು ದೂರುಗಳನ್ನು ಹೇಳಿದರು. ಆದರೆ ಇಂತಹ ಪ್ರಯತ್ನಗಳೆಲ್ಲಾ ಈ ಸಭ್ಯ, ಶಾಂತಪ್ರಕೃತಿಯುಳ್ಳ, ಮಾತುಬಲ್ಲ ಹರಲಾಲನಿಗೆ ಯಾವ ಕೆಡುಕನ್ನೂ ಮಾಡಲಾರದಾದುವು.

ಹರಲಾಲನಿಗೆ ನಲವತ್ತು ರೂಪಾಯಿಗಳಷ್ಟು ಸಂಬಳ ಏರಿದೊಡನೆ ಅವನು ಊರಿನಿಂದ ತಾಯಿಯನ್ನು ಕರೆಯಿಸಿ ಸಣ್ಣದೊಂದು ಓಣಿಯಲ್ಲಿ ಸಣ್ಣ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡ. ಇಷ್ಟು ದಿನಗಳಾದ ಮೇಲೆ ಅವನ ತಾಯಿಯ ಒಂಟಿತನದ ಸಂಕಟ ಕಳೆದು ನಿಸೂರಾಯಿತು. ಆಕೆ "ಅಪ್ಪಾ, ಹರಲಾಲ, ಈಗ ಮನೆಗೆ ಸೊಸೆಯನ್ನ ಬರಮಾಡಿಕೊಳ್ಳೋಣ, ಏನು?" ಎಂದಳು. ಹರಲಾಲನು

ತಾಯಿಯ ಕಾಲು ಮುಟ್ಟಿ ಕಣ್ಣಿಗೊತ್ತಿಕೊಂಡು "ಅಮ್ಮಾ, ಸದ್ಯಕ್ಕೆ ಆ ವಿಷಯದಲ್ಲಿ ನನ್ನನ್ನ ಕ್ಷಮಿಸಿಬಿಡು" ಎಂದ.

ತಾಯಿಗೆ ಮತ್ತೊಂದು ಚಪಲವಿತ್ತು. "ನೀನು ಹಗಲಿರುಳು ನಿನ್ನ ಶಿಷ್ಯ ವೇಣುಗೋಪಾಲನ ವಿಷಯವಾಗಿ ಮಾತಾಡುತ್ತಿರುತ್ತಿ. ಅವನನ್ನ ಒಂದು ಸಲ ಊಟಕ್ಕೇಕೆ ಕರೆಯಬಾರದು? ನನಗವನನ್ನ ನೋಡಬೇಕೆಂದಾಸೆಯಾಗಿದೆ" ಎಂದಳು.

ಹರಲಾಲನು "ಅಮ್ಮಾ, ಈ ಮನೆಯಲ್ಲಿ ಅಂತಹ ದೊಡ್ಡ ಮನುಷ್ಯರ ಮಗನನ್ನ ಹೇಗೆ, ಎಲ್ಲಿ ಕೂಡಿಸುವುದು ಹೇಳು. ಸ್ವಲ್ಪ ದಿನ ತಡಿ. ಒಂದು ದೊಡ್ಡ ಮನೆ ಮಾಡೋಣಂತೆ. ಆಮೇಲೆ ಅವನನ್ನು ಊಟಕ್ಕೆ ಕರೆಯೋಣ" ಎಂದ.

೭

ಹರಲಾಲನ ವೇತನ ಏರಿದಂತೆಲ್ಲ ಸಣ್ಣ ಗಲ್ಲಿಯಿಂದ ದೊಡ್ಡ ಗಲ್ಲಿಗೆ, ಅಂತೆಯೆ ಸಣ್ಣ ಮನೆಯಿಂದ ದೊಡ್ಡ ಮನೆಗೆ ಅವನ ವಸತಿ ಬದಲಾಯಿತು. ಆದರೂ ಏಕೋ, ಏನೋ, ಅವನು ಅಧರಲಾಲನ ಮನೆಗೆ ಹೋಗಲು ಮತ್ತು ವೇಣುವನ್ನು ತನ್ನ ಮನೆಗೆ ಕರೆಯಲು ನಿರ್ಧಾರ ಮಾಡಲಾಗಲಿಲ್ಲ. ಏನೋ ಸಂಕೋಚ ಅವನನ್ನ ತಡೆದಿಟ್ಟಿತ್ತು.

ಬಹುಶಃ ಅವನ ಸಂಕೋಚವು ಎಂದೂ ನಿವಾರಣೆಯಾಗುತ್ತಿರಲಿಲ್ಲ. ಇಂತಹ ಸಮಯದಲ್ಲಿ ವೇಣುವಿನ ತಾಯಿ ತೀರಿಕೊಂಡಳೆಂಬ ಸುದ್ದಿ ತಿಳಿಯಿತು. ಅದನ್ನ ಕೇಳಿದೊಡನೆ ಒಂದು ಕ್ಷಣವೂ ತಡಮಾಡದೆ ಅವನು ಅಧರಲಾಲನ ಮನೆಗೆ ಹೋದ.

ಈ ಇಬ್ಬರು ಅಸಮವಯಸ್ಸಿನ ಗೆಳೆಯರಿಗೆ ಎಷ್ಟೋ ವರುಷಗಳಾದ ಮೇಲೆ ಮತ್ತೊಮ್ಮೆ ಭೇಟಿಯಾಯಿತು. ವೇಣುವಿನ ಸೂತಕದ ಅವಧಿ ಮುಗಿದುಹೋದ ಮೇಲೂ ಹರಲಾಲನು ಅವರ ಮನೆಗೆ ಹೋಗಿಬರುವುದನ್ನು ನಿಲ್ಲಿಸಲಿಲ್ಲ. ಆದರೆ ಈಗಂತೂ ಮೊದಲಿನಹಾಗೆ ಸ್ವಲ್ಪವೂ ಇಲ್ಲ. ವೇಣು ಈಗ ಬೆಳೆದು ದೊಡ್ಡವನಾಗಿ ತನ್ನ ಹೆಬ್ಬೆರಳು, ಮಧ್ಯದ ಬೆರಳುಗಳನ್ನು ಜೋಡಿಸಿ ಆಗತಾನೇ ಬೆಳೆಯುತ್ತಿದ್ದ ಚಿಗುರುಮೀಸೆಯನ್ನು ನೇವರಿಸುತ್ತಿರುತ್ತಾನೆ ಸದಾ. ಅವನ ನಡೆವಳಿಕೆಯಲ್ಲಿ ದೊಡ್ಡಸ್ತಿಕೆಯ ಮೆರುಗು ಮೂಡಿಬರುತ್ತಿದೆ. ಈಗವನಿಗೆ ಯೋಗ್ಯರಾದ ಗೆಳೆಯರಿಗೂ, ಆಪ್ತೇಷ್ಟರಿಗೂ ಕಡಿಮೆಯಿಲ್ಲ. ಗ್ರಾಮಾಫೋನಿನಲ್ಲಿ ನಾಟಕದ ನಟಿಯರ ಹಾಡುಗಳನ್ನು ನುಡಿಯಿಸಿ ತನ್ನ ಹೊಸಗೆಳೆಯರ ತಂಡವನ್ನು ಆಮೋದಗೊಳಿಸುತ್ತಾನೆ. ತನ್ನ ಓದುವ ಕೋಣೆಯಲ್ಲಿ ಆ ಹಳೆಯಕಾಲದ ಮುರುಕುಮಂಚ ಮತ್ತು ಕಲೆಗಳು ಬಿದ್ದಿದ್ದ ಮೇಜು ಎಲ್ಲಿ ಹೋದುವೋ! ಅವನ ಕೋಣೆಯೀಗ ಅಂದವಾದ ನಿಲುವು ಗನ್ನಡಿಗಳಿಂದಲೂ, ಬಣ್ಣಬಣ್ಣದ ಚಿತ್ರ, ತಸಬೀರುಗಳಿಂದಲೂ, ಭೋಗ

ಸಾಮಗ್ರಿಗಳಿಂದಲೂ ರಂಜಿಸುತ್ತಿದೆ. ವೇಣು ಈಗ ಕಾಲೇಜಿಗೆ ಹೋಗುತ್ತಾನೆ. ಆದರೆ ಎರಡನೆಯ ಇಯತ್ತೆಯ ಮೇರೆಯನ್ನು ದಾಟುವುದಕ್ಕಾಗಿ ಅವನಿಗೆ ಸಾಕಷ್ಟು ಉತ್ಸಾಹವಿಲ್ಲ. ಅವನ ತಂದೆ, ಪಾಪ, ಆತುರದಿಂದಿದ್ದಾನೆ – ಹುಡುಗ ಒಂದೆರಡು ಪರೀಕ್ಷೆ ಪಾಸುಮಾಡಿದರೆ ಸಾಕು, ಮದುವೆಗಂಡುಗಳ ಮಾರುಕಟ್ಟೆಯಲ್ಲಿ ಹುಡುಗನ ಧಾರಣೆ ಬಹಳ ಮೇಲೆ ಏರಬಹುದು ಎಂದು ಎದುರು ನೋಡುತ್ತಿದ್ದಾನೆ. ಆದರೆ ಹುಡುಗನ ತಾಯಿಯೋ, ಅವಳ ಅಭಿಪ್ರಾಯ ಅದಕ್ಕೆ ತೀರವಿರುದ್ಧ. ಹಾಗೆಂದು ಸ್ಪಷ್ಟವಾಗಿ ಹೇಳಿಯೂ ಇದ್ದಳು. "ನಮ್ಮ ವೇಣು ಸಾಮಾನ್ಯ ಹುಡುಗರಂತೆ ತನ್ನ ದೊಡ್ಡಸ್ತಿಕೆ ತೋರಿಸಲು ಪರೀಕ್ಷೆಯ ಲೆಕ್ಕ ಒಪ್ಪಿಸಬೇಕಾಗಿಲ್ಲ. ಅವನ ಕಬ್ಬಿಣದ ಪೆಟ್ಟಿಗೆಯಲ್ಲಿ ಕಂಪೆನಿಯ ಷೇರುಕಾಗದಗಳು ಅಕ್ಷಯವಾಗಿರಲಿ, ಸಾಕು" ಎಂದು. ಆಕೆಯ ಮಗನದೂ ಅದೇ ಮತವೆಂಬಂತೆ ಅವನು ಆಚರಣೆಯಲ್ಲಿ ತೋರುತ್ತಿದ್ದ.

ಅದು ಹೇಗಾದರಿರಲಿ. ಈಗ ತಾನು ವೇಣುವಿಗೆ ಪೂರ್ತಿಯಾಗಿ ಅನಾವಶ್ಯಕವೆಂದು ಹರಲಾಲನಿಗೆ ಚೆನ್ನಾಗಿ ತಿಳಿದುಹೋಯಿತು. ಆಗವನಿಗೆ ಹಳೆಯ ನೆನಹೊಂದು ಬಾರಿಬಾರಿಗೂ ಮರುಕೊಳಿಸಿ ಬರುತ್ತಿತ್ತು : ಒಮ್ಮೆ ಒಂದು ದಿನ ಬೆಳಗ್ಗೆ ವೇಣು ತನ್ನ ಹಾಸ್ಟೆಲಿನ ಕೋಣೆಗೆ ಬಂದಕೂಡಲೆ ತನ್ನ ಕೊರಳನ್ನ ಬಿಗಿಯಪ್ಪಿ "ಮಾಸ್ಟರ್ ಮಹಾಶಯರೆ, ನಮ್ಮ ಮನೆಗೆ ನಡಿಯಿರಿ" ಎಂದು ಅಂಗಲಾಚಿದ್ದು. ಆ ವೇಣು ಈಗೆಲ್ಲಿ? ಅವನಿಲ್ಲ ಈಗ. ಆ ಮನೆ ಇಲ್ಲ. ಈಗ ಮಾಸ್ಟರ್ ಮಹಾಶಯನನ್ನು ಹಾಗೆ ಕರೆಯುವವರಾರು?

ಹರಲಾಲನು ಈ ಸಲ ವೇಣುವನ್ನೊಮ್ಮೆ ತನ್ನ ಮನೆಗೆ ಊಟಕ್ಕೆ ಕರೆಸಬೇಕೆಂದುಕೊಂಡಿದ್ದ. ಆದರೆ ಈಗ ಅವನನ್ನ ಕರೆಯುವುದಕ್ಕೆ ಮನಸ್ಸೇ ಬರಲಿಲ್ಲ ಏಕೋ. ಒಂದು ಸಲ "ಊಟಕ್ಕೆ ಬರಲು ಹೇಳೋಣವೇ" ಎಂದುಕೊಳ್ಳುವನು. ಮಗುದೊಮ್ಮೆ "ಹೇಳಿ ಪ್ರಯೋಜನವಿಲ್ಲ. ಅವನೇನೋ ಬರಲು ಒಪ್ಪಿಕೊಳ್ಳಬಹುದು; ಆದರೆ ಕೆಲಸವಿಲ್ಲ" ಎಂದು ಆ ಯೋಚನೆಯನ್ನೇ ತಳ್ಳಿಹಾಕುವನು.

ಆದರೆ ಹರಲಾಲನ ತಾಯಿ ಬಿಡಬೇಕಲ್ಲ? ಆಕೆ ಬಾರಿಬಾರಿಗೂ ಒತ್ತಾಯ ಮಾಡತೊಡಗಿದಳು. ತನ್ನ ಕೈಯಾರೆ ಅವನಿಗೆ ಅಟ್ಟುಬಡಿಸಬೇಕೆಂದು ಅವಳಿಗೇನೋ ಅಷ್ಟು ಚಪಲ. ಅದರಲ್ಲೂ ಪಾಪ, ಹುಡುಗನ ತಾಯಿ ಕೂಡ ತೀರಿಕೊಂಡಿದ್ದಾಳೆ.

ಕಡೆಗೊಮ್ಮೆ ಹರಲಾಲನು ವೇಣುವನ್ನು ಊಟಕ್ಕೆ ಕರೆಯಲೇ ಬೇಕಾಯಿತು. ಅವನ ಮನೆಗೆ ಹೋಗಿ ವೇಣುವನ್ನು ಕಂಡು ತನ್ನ ತಾಯಿಯ ಆಸೆಯನ್ನು ತಿಳಿಯಹೇಳಿ "ನಿಮ್ಮ ತಂದೆಯ ಅಪ್ಪಣೆಪಡೆದು ಬರೋಣ, ಬಾ" ಎಂದ.

ವೇಣು "ಅಪ್ಪನ ಅಪ್ಪಣೆ ಏಕೆ? ಕೆಲಸವಿಲ್ಲ. ನಾನಿನ್ನೂ ಹಿಂದಿನಂತೆ ಎಳೇ ಹುಡುಗನಾಗಿದ್ದೇನೆಂದುಕೊಂಡಿರಾ?" ಎಂದ.

ವೇಣು ಊಟಕ್ಕೆ ಬಂದುದಾಯಿತು. ಹರಲಾಲನ ತಾಯಿಯು ಈ ಸುಬ್ರಹ್ಮಣ್ಯನಂತೆ ಸುಂದರನಾದ ಹುಡುಗನನ್ನು ಕಂಡು ಹರುಷದಿಂದ ಹರಸಿದಳು. ಅವಳ ಕಂಗಳು ಸ್ನೇಹ ಸೂಸಿದುವು. ಆಮೇಲೆ ಅವನಿಗೆ ಎಲೆ ಹಾಕಿ ಬಡಿಸಿದಳು. ಅತಿ ಆಸಕ್ತಿಯಿಂದ, ಅತಿ ಪಾಂಗಿತವಾಗಿ ಅಡಿಗೆ ಮಾಡಿದ್ದಳು. ಹುಡುಗ ಸಂಕೋಚವಿಲ್ಲದೆ ಊಟಮಾಡುತ್ತಿದ್ದುದನ್ನ ಕಣ್ಣು ತಣಿಯುವಷ್ಟು ನೋಡುತ್ತ "ಪಾಪ, ಇಂಥ ಭಲೋ ಮಗನನ್ನ ಈ ವಯಸ್ನಲ್ಲಿ ಒಬ್ಬನಾಗಿ ಬಿಟ್ಟು ಕಣ್ಣುಮುಚ್ಚಿದಳಲ್ಲಾ, ಆ ತಾಯಿ...! ಆ ಹೊಟ್ಟೆಗೆ ಎಷ್ಟು ಸಂಕಟವಾಗಿತ್ತೋ ಹೋಗುವಾಗ" ಎಂದು ಸೆರಗಿನಿಂದ ಕಣ್ಣೊರಸಿಕೊಂಡಳು.

ಊಟ ಮುಗಿಯುತ್ತಲೂ ವೇಣು "ಮಾಸ್ಟರೇ, ನಾನು ಸ್ವಲ್ಪ ಅವಸರದಲ್ಲಿದ್ದೇನೆ. ನನ್ನ ಫ್ರೆಂಡ್ಸ್ ಕೆಲವರು ಬರುತ್ತಾರೆ ನನ್ನನ್ನ ಹುಡುಕಿಕೊಂಡು. ನಾನು ಈಗಲೇ ಹೋಗಬೇಕು..." ಎಂದದ್ದೇ ಜೇಬಿನಿಂದ ಚಿನ್ನದ ಗಡಿಯಾರವನ್ನು ತೆಗೆದು ನೋಡಿಕೊಂಡು, ಬೇಗ ಹರಲಾಲನಿಗೂ ಅವನ ತಾಯಿಗೂ ನಮಸ್ಕಾರ ಹೇಳಿ ಹೋಗಿ ತನ್ನ ಜೋಡಿ ಕುದುರೆಗಾಡಿಯಲ್ಲಿ ಕೂತುಕೊಂಡ. ಗಾಡಿ ಹೊರಟಿತು.

ಹರಲಾಲನ ತಾಯಿ ಗಾಡಿಯ ಕಡೆಯೇ ನೋಡುತ್ತ ನಿಟ್ಟುಸಿರು ಬಿಟ್ಟು "ಲೋ, ಹರಲಾಲ, ಆಗಾಗ ಅವನನ್ನ ಊಟಕ್ಕೆ ಕರೆದುಕೊಂಡು ಬಾರೋ; ಪಾಪ, ಹಸುಕಂದನ್ನ ಬಿಟ್ಟುಹೋಗಿದಾಳೆ ಅವನ ತಾಯಿ, ನೆನೆಸಿಕೊಂಡರೆ ನನ್ನ ಮನಸ್ನಲ್ಲಿ ಹೇಗೆಹೇಗೋ ಆಗುತ್ತೆ" ಎಂದಳು.

ಹರಲಾಲನು ಏನೂ ಅನ್ನದೆ ಸುಮ್ಮನಿದ್ದ. ಈ ತಾಯಿ ಕಳೆದುಕೊಂಡ ಹುಡುಗನನ್ನ ಸಂತೈಸಹೋಗುವುದು ಅವಳಿಂದಾದೀತೆ? ಸುಮ್ಮನೆ ನಿಟ್ಟುಸಿರು ಬಿಟ್ಟು "ಸಾಕು ಇವತ್ತಿಗೆ. ಇನ್ನೆಂದೂ ಅವನನ್ನ ಕರೆಯಬೇಕಾಗಿಲ್ಲ. ಒಂದು ಕಾಲದಲ್ಲಿ ನಾನವನಿಗೆ ಐದು ರೂಪಾಯಿ ಸಂಬಳದ ಮಾಸ್ಟರಾಗಿದ್ದಿರಬಹುದು... ಆದರೆ ಈಗ ನಾನು ಸಾಮಾನ್ಯ ಹರಲಾಲ ಮಾತ್ರ" ಎಂದುಕೊಂಡ.

೮

ಒಂದು ದಿನ ಸಂಜೆಯಾಗುವುದಕ್ಕೆ ಮೊದಲೇ ಹರಲಾಲನು ಆಫೀಸಿನಿಂದ ಮನೆಗೆ ಬಂದು ನೋಡಿದ. ಅವರ ಮನೆಯ ಕೆಳ ಅಂತಸ್ತಿನ ಕೋಣೆಯೊಳಗೆ ಯಾರೋ ಕತ್ತಲಲ್ಲಿ ಕೂತಿರುವುದನ್ನು ನೋಡಿಯೂ ಯಾರೋ ಇರಬಹುದು ಎಂದು ನಿರ್ಲಕ್ಷ್ಯದಿಂದ ಮಹಡಿಯ ಮೇಲಣ ತನ್ನ ಕೋಣೆಗೆ ಹತ್ತಿ ಹೋಗುವುದರಲ್ಲಿದ್ದ. ಆದರೆ ಬಾಗಿಲ ಬಳಿ ಬಂದೊಡನೆ ವಿದೇಶೀ ಸೆಂಟಿನ ಸುವಾಸನೆ ಮೂಗಿಗೆ ಬಡಿಯಿತು. ಆಗ ಕುತೂಹಲದಿಂದ ಕೋಣೆಯೊಳಗೆ ಬಂದು

ಕತ್ತಲಲ್ಲಿ ಕೂತಿದ್ದವನನ್ನು ಕಂಡು "ಯಾರು ಸ್ವಾಮಿ?" ಎಂದು ಕೇಳಿದ. "ಮಾಸ್ತರರೇ, ನಾನು, ವೇಣು" ಎಂದು ಉತ್ತರ ಬಂತು. ಹರಲಾಲನಿಗೆ ಅಚ್ಚರಿಯಾಯಿತು.

"ಏನು ಸಮಾಚಾರ? ಯಾವಾಗ ಬಂದೆ?" ಎಂದ. "ಬಂದು ಎಷ್ಟೋ ಹೊತ್ತಾಯಿತು. ನೀವು ಇಷ್ಟು ಹೊತ್ತಾಗಿ ಬರುತ್ತೀರೆಂದುಕೊಂಡಿರಲಿಲ್ಲ. ಸುಮ್ಮನೆ ಕಾಯುತ್ತ ಕೂತಿದ್ದೆ." ಎಷ್ಟೊ ದಿನಗಳಾಗಿದ್ದುವು ವೇಣು ಅಂದು ಊಟಮಾಡಿ ಹೋದಂದಿನಿಂದ ಈ ಕಡೆ ಬಂದೇ ಇರಲಿಲ್ಲ. ಇಂದು ಹಠಾತ್ತಾಗಿ, ಹೇಳದೆ, ಕೇಳದೆ ಸಂಜೆಯ ವೇಳೆಯಲ್ಲಿ ಈ ಕತ್ತಲ ಕೋಣೆಯೊಳಗೆ ತನಗಾಗಿ ಕಾಯುತ್ತ ಕೂತಿದ್ದಾನೆ. ಸಂಗತಿ ಏನಿರಬಹುದೋ! ಹರಲಾಲನ ಮನಸ್ಸಿನಲ್ಲಿ ಗಾಬರಿಯಾಯಿತು. ಅವನನ್ನ ಸಂಗಡ ಕರೆದುಕೊಂಡು ಮಹಡಿಯ ಮೇಲಣ ಕೋಣೆಗೆ ಹೋದ. ದೀಪ ಹತ್ತಿಸಿದ ಮೇಲೆ ಇಬ್ಬರೂ ಕೂತುಕೊಂಡರು. ಆಗ ಹರಲಾಲ "ಎಲ್ಲಾ ಚೆನ್ನಾಗಿದಾರೆ ತಾನೇ? ವಿಶೇಷ ಸಂಗತಿಯೇನಾದರೂ ಇದೆಯಾ?" ಎಂದು ವಿಚಾರಿಸಿದ. ವೇಣು ಹೇಳತೊಡಗಿದ.

"ಏನು ಇಲ್ಲ. ಇಷ್ಟೆ. ಓದಿನ ಕಡೆ ನನಗೆ ಬಹಳ ಬೇಸರ ಬಂದುಬಿಟ್ಟಿದೆ. ಎಲ್ಲಿಯ ತನಕ ನಾನು ಹೀಗೆ ವರುಷವಾದ ಮೇಲೆ ವರುಷ ಈ ಎರಡನೇ ಎಫ್.ಎ. ಕ್ಲಾಸಿನಲ್ಲಿ ಬಂದಿಯಾಗಿ ಬಿದ್ದುಕೊಂಡಿರುವುದು? ನನಗಿಂತ ವಯಸ್ಸಲ್ಲಿ ಎಷ್ಟೋ ಕಿರಿಯರಾದವರೊಂದಿಗೆ ಕೂತು ಓದಲು ನನಗೆ ಅವಮಾನವಾಗುತ್ತದೆ. ನಮ್ಮಪ್ಪನಿಗೆ ಎಷ್ಟು ಹೇಳಿದರೂ ಅರ್ಥವಾಗುವುದಿಲ್ಲ. ಏನುಮಾಡಲಿ?" ಎಂದು ಗೊಣಗಿದ.

"ಏನು ಮಾಡಬೇಕು ಅಂತ ಇದ್ದೀಯ?" ಎಂದ ಹರಲಾಲ.

"ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಪರೀಕ್ಷೆ ಪಾಸುಮಾಡಿಕೊಂಡು ಬರಬೇಕೆಂದಿದ್ದೇನೆ" ಎಂದ ವೇಣು. ಅವನ ಸಹಪಾಠಿಯೊಬ್ಬ, ವಯಸ್ಸಲ್ಲಿ ಅವನಿಗಿಂತಲೂ ಎಷ್ಟೋ ಚಿಕ್ಕವನಾದವನು, ಇಂಗ್ಲೆಂಡಿಗೆ ಹೋಗಲು ಆಗಲೇ ನಿರ್ಣಯಿಸಿಬಿಟ್ಟಿದ್ದಾಗಿದೆ.

"ನಿಮ್ಮ ತಂದೆಗೆ ನಿನ್ನಿಷ್ಟ ತಿಳಿಸಿದ್ದೀಯಾ?" ಎಂದು ಕೇಳಿದ ಹರಲಾಲ.

"ಹೂಂ... ತಿಳಿಸಿದೆ. ಆದರೆ ಅಪ್ಪ ಪರೀಕ್ಷೆ ಪಾಸಾಗದೆ ಇಂಗ್ಲೆಂಡಿಗೆ ಹೋಗುವ ಮಾತೇ ಎತ್ತಬೇಡ ಅಂತಾರೆ. ಆದರೆ ನನಗಂತೂ ಮನಸ್ಸು ಪೂರ್ತಿ ಕೆಟ್ಟುಹೋಗಿದೆ. ಇಲ್ಲೇ ಇದ್ದುಬಿಟ್ಟರೆ ಏನು ಮಾಡಿದರೂ ಪಾಸಾಗುವುದಿಲ್ಲ, ನನಗೆ ಖಂಡಿತ."

ಹರಲಾಲನು ಸ್ವಲ್ಪ ಹೊತ್ತು ಏನೂ ಹೇಳದೆ ಸುಮ್ಮನೆ ಯೋಚಿಸತೊಡಗಿದ. ವೇಣು ಹೇಳುತ್ತಲೇ ಹೋದ. "ಇವತ್ತು ಬೆಳಗ್ಗೆ ಅಪ್ಪ ಈ ಮಾತಿನ ಮೇಲೆ ನನ್ನನ್ನ ಬಾಯಿಗೆ ಬಂದಹಾಗೆ ಬೈದುಬಿಟ್ಟರು. ನನಗೆ ತಡೆಯಲಿಕ್ಕಾಗದೆ ಮನೆಬಿಟ್ಟು ಬಂದುಬಿಟ್ಟೆ.

ನಮ್ಮಮ್ಮ ಇದ್ದಿದ್ದರೆ ಹೀಗೆಂದಿಗೂ ಆಗುತ್ತಾಯಿರಲಿಲ್ಲ.'' ಎಂದು ಬಿಕ್ಕಿಬಿಕ್ಕಿ ಅಳಲಾರಂಭಿಸಿದ.

ಹರಲಾಲನಾಗ "ನಡಿ, ನಾನೂ ನಿನ್ನ ಜತೆಯಲ್ಲಿ ಬರುತ್ತೇನೆ, ನಿಮ್ಮ ತಂದೆಯ ಹತ್ತಿರ. ಅವರ ಸಂಗಡ ಮಾತಾಡಿ ಮುಂದೆ ಏನು ಮಾಡಬೇಕೋ ಅದನ್ನ ನಿರ್ಣಯಿಸೋಣ" ಎಂದ.

"ಊ ಹೂ, ನಾನಪ್ಪನ ಹತ್ತಿರ ಮತ್ತೆ ಏನು ಮಾಡಿದರೂ ಹೋಗುವುದಿಲ್ಲ" ಎಂದ ವೇಣು.

ತಂದೆಯ ಮೇಲಣ ಸಿಟ್ಟಿನಿಂದ ವೇಣು ಹರಲಾಲನ ಮನೆಯಲ್ಲಿ ಬಂದಿರುವುದು ಸರಿಹೋದೀತೆ? ಹರಲಾಲನಿಗೇನೋ ಏನೂ ತೋಚದಾಯಿತು. ಆದರೂ, ನೀನು ನನ್ನ ಮನೆಯೊಳಗೆ ಇರಲು ಸಾಧ್ಯವಿಲ್ಲ, ಎಂದು ಹೇಗೆ ಹೇಳುವುದು? ಹರಲಾಲನು ಯೋಚಿಸತೊಡಗಿದ. ಇನ್ನು ಸ್ವಲ್ಪ ಹೊತ್ತಾಗುತ್ತಲೂ ಅವನ ಮನಸ್ಸು ತಣ್ಣಗಾದ ಮೇಲೆ ಮೆಲ್ಲಗೆ ಪುಸಲಾಯಿಸಿ ಮನೆಗೆ ಕರೆದುಕೊಂಡು ಹೋದರಾಯಿತು ಎಂದುಕೊಂಡು "ನಿನ್ನ ಊಟವಾಯಿತಾ?" ಎಂದು ಕೇಳಿದ.

"ಇಲ್ಲ ನನಗೆ ಹಸಿವಿಲ್ಲ, ನಾನಿವತ್ತು ಊಟ ಮಾಡುವುದಿಲ್ಲ" ಎಂದ ವೇಣು.

"ಛೆ, ಎಲ್ಲಾದರೂ ಉಂಟೆ...ಏನು ಮಾತಿದು?" ಎಂದು ಗದರಿ ಹರಲಾಲನು ತಾಯಿಯ ಬಳಿ ಹೋಗಿ "ಅಮ್ಮಾ, ವೇಣು ಬಂದಿದ್ದಾನೆ, ಅಡಿಗೆ ಆಗಿದೆಯಾ?" ಎಂದ.

"ಹೋ...ಅಗತ್ಯವಾಗಿ ಊಟಕ್ಕೆಬ್ಬಿಸು. ಈಗಲೇ ಎಲೆ ಹಾಕುತ್ತೇನೆ" ಎಂದು ಹೊರಟಳು. ಹರಲಾಲನು ತನ್ನ ಆಫೀಸಿನ ಉಡುಪನ್ನು ಕಳಚಿ ಹಾಕಿ ಕೈಕಾಲು ತೊಳೆದುಕೊಂಡು ವೇಣುವಿನ ಹತ್ತಿರ ಬಂದು ಕೂತ. ಆಮೇಲೆ ಸ್ವಲ್ಪ ಗಂಟಲು ಸರಿಮಾಡಿಕೊಂಡು, ಹಿಂದೆ ಮುಂದೆ ನೋಡಿ ಅವನ ಹೆಗಲ ಮೇಲೆ ಕೈಯಿಟ್ಟು "ವೇಣು, ನೀನು ಮಾಡಿದ ಕೆಲಸ ಒಳ್ಳೆಯದಲ್ಲ, ನೋಡಪ್ಪ, ನನ್ನ ಮಾತು ಕೇಳು. ನಿಮ್ಮ ತಂದೆಯ ಹತ್ತಿರ ಜಗಳವಾಡಿಕೊಂಡು ಹೀಗೆ ಬರಬಾರದಾಗಿತ್ತು" ಎಂದ.

ಅದನ್ನ ಕೇಳಿದೊಡನೆ ವೇಣು ಸರಕ್ಕನೆ ಮೇಲೆದ್ದು "ನಿಮಗೆ ಮನಸ್ಸಿಲ್ಲದಿದ್ದರೆ ನಾನೀಗಲೇ ಸತೀಶನ ಮನೆಗೆ ಹೋಗುತ್ತೇನೆ" ಎಂದದ್ದೇ ಹೊರಗೆ ಹೋಗಲು ಕಾಲಿಟ್ಟ. ಹರಲಾಲನಾಗ ಅವನ ಕೈಹಿಡಿದು "ಅರೇ, ನಿಲ್ಲಪ್ಪಾ ವೇಣು, ಹಾಗೆಲ್ಲ ಆತುರಪಡಬಾರದು. ಹೋಗುವ ಹಾಗಿದ್ದರೆ ಅಗತ್ಯವಾಗಿ ಹೋಗು. ಆದರೆ ಸ್ವಲ್ಪ ಹೊಟ್ಟೆಗೇನಾದರೂ ಹಾಕಿಕೊಂಡು ಹೋಗುವಿಯಂತೆ" ಎಂದ.

"ಏನೂ ಬೇಕಾಗಿಲ್ಲ, ಬಿಡಿ, ನನ್ನ ಕೈಯನ್ನ" ಎಂದು ಸಿಟ್ಟಿನಿಂದ ಕೈ ಬಿಡಿಸಿಕೊಂಡು ಕೋಣೆಯಿಂದ ಹೊರಬಿದ್ದ. ಇದನ್ನು ಕೆಳಗಣಿಂದ ನೋಡುತ್ತಿದ್ದ

ಹರಲಾಲನ ತಾಯಿ ಬೇಗ ಅಡಿಗೆ ಮನೆಗೆ ಹೋಗಿ ಮಗನಿಗಾಗಿ ಮಾಡಿಟ್ಟದ್ದ ಸ್ವಲ್ಪ ತಿಂಡಿಯನ್ನ ತಟ್ಟೆಯಲ್ಲಿ ಕಲಸಿಕೊಂಡು ಬಂದು "ಯಾಕಪ್ಪಾ ಅಷ್ಟವಸರ, ಮಗು? ಕೋ, ಇದಿಷ್ಟಾದರೂ ಬಾಯಿಗೆ ಹಾಕಿಕೊಂಡು ಹೋಗು. ಬರೀ ಹೊಟ್ಟೆಯಲ್ಲಿ ಹೋಗಬೇಡ" ಎಂದಳು.

ವೇಣು "ಇಲ್ಲಮ್ಮ, ಬಲವಂತ ಮಾಡಬೇಡಿ, ನನಗೆ ಕೆಲಸವಿದೆ. ಈಗಲೇ ಹೋಗಬೇಕು" ಎಂದ.

"ಛೆ ಛೆ! ಕೆಲಸವಿದ್ದರೆ ಬರೇ ಹೊಟ್ಟೆಯಲ್ಲಿ ಹೋಗಬೇಕೆಂದಿದೆಯೇ. ಹಾಗೆಂದಿಗೂ ಹೋಗಬೇಡ, ನನ್ನಾಣೆ...ಇದೆಷ್ಟಿದೆ, ಇದಿಷ್ಟನ್ನ ತಿಂದುಬಿಟ್ಟು ಹೋಗು, ಸಾಕು. ಒಳ್ಳೇ ಹುಡುಗ ನೀನು" ಎಂದು ಅವನನ್ನ ಅಲ್ಲೇ ಕೈಹಿಡಿದು ಕೂಡಿಸಿ ಅವನ ಮುಂದೆ ತಿಂಡಿಯ ತಟ್ಟೆಯನ್ನಿಟ್ಟಳು.

ವೇಣು ಕೋಪದಲ್ಲಿ ಏನೂ ತಿನ್ನಲಾಗಲಿಲ್ಲ. ತಿಂಡಿಯನ್ನು ಕೈಯಲ್ಲಿಟ್ಟುಕೊಂಡು ತಟ್ಟೆಯ ಮೇಲೇ ಅದನ್ನ ಅತ್ತಿಂದಿತ್ತ ಸರಿಸಾಡುತ್ತಿದ್ದ. ಈ ಸಮಯದಲ್ಲಿ ರಸ್ತೆಯಲ್ಲಿ ಇವರ ಮನೆಯ ಮುಂದೆ ಗಾಡಿಯೊಂದು ಬಂದು ನಿಂತುಕೊಂಡಿತು. ಮೊದಲು ಅದರಿಂದೊಬ್ಬ ದರವಾನನು ಇಳಿದ. ಅವನ ಹಿಂದೆಯೇ ಸ್ವಯಂ ಅಧರಬಾಬುವೇ, ಮಚ್‌ಮಚ್ ಎಂದು ಮೆಟ್ಟಿನಿಂದ ಶಬ್ದಮಾಡುತ್ತ ಮೆಟ್ಟಲು ಹತ್ತಿಕೊಂಡು ಮೇಲೆ ಬಂದುಬಿಟ್ಟ. ವೇಣುವಿನ ಮುಖ ಬಣ್ಣಗೆಟ್ಟು ಹೋಯಿತು.

ಹರಲಾಲನ ತಾಯಿ ಅಲ್ಲಿಂದ ಹೇಗೋ ಸರಿದು ಹೋದಳು. ಅಧರಲಾಲನು ಮಗನ ಎದುರಿಗೆ ಬಂದು ಕೋಪದಿಂದ ನಡುಗುವ ದನಿಯಲ್ಲಿ ಹರಲಾಲನ ಕಡೆ ನೋಡುತ್ತ "ಈಗ ಗೊತ್ತಾಯಿತು. ರತೀಕಾಂತ ನನಗಾಗಲೇ ಹೇಳಿದ್ದ. ಆದರೆ ನಿನ್ನ ಹೊಟ್ಟೆಯಲ್ಲಿ ಇಂತಹ ದುರುದ್ದೇಶ ಇರತ್ತೆ ಅಂತ ನಾನೆಂದೂ ನಂಬಲಿಲ್ಲ. ನೀನು ಅಂದುಕೊಂಡಿದ್ದೀಯೇನೋ, ವೇಣುವನ್ನ ವಶಮಾಡಿಕೊಂಡು ಕಡೆಗೆ ಅವನ ಬಾಯಿಗೆ ಸುಲಭವಾಗಿ ಮಣ್ಣು ಹಾಕಬಹುದೆಂದು. ಆದರೆ ಇಷ್ಟು ತಿಳಿದುಕೋ, ನಾನು ಜೀವದಿಂದಿರುವವರೆಗೂ ಹಾಗಾಗಲು ಬಿಡುವುದಿಲ್ಲ. ನನ್ನ ಹುಡುಗನನ್ನು ಕದ್ದಿರಿಸಿಕೊಳ್ಳುತೀಯಾ ನೀನು! ನಿನ್ನ ಮೇಲೆ ಈಗಲೇ ಹೋಗಿ ಪೊಲೀಸಿಗೆ ಕಂಪ್ಲೈಂಟು ಕೊಡುತ್ತೇನೆ. ನಿನ್ನನ್ನ ಮೊದಲು ಜೈಲಿಗೆ ಕಳುಹಿಸಿ ಆಮೇಲೆ ನಾನು ಉಸಿರು ಬಿಡುತ್ತೇನೆ" ಎಂದು ಬಡಬಡಿಸಿದ. ಆಮೇಲೆ ವೇಣುವಿನ ಕಡೆ ನೋಡಿ "ನಡಿ ಮನೆಗೆ, ಹೂಂ ಏಳು" ಎಂದು ಗರ್ಜಿಸಿದ. ವೇಣು ತುಟಿ ಪಿಟಕ್ಕೆನ್ನದೆ ತಂದೆಯನ್ನು ಹಿಂಬಾಲಿಸಿ ಹೊರಟುಹೋದ.

ಆ ರಾತ್ರಿ, ಪಾಪ, ಹರಲಾಲನ ಬಾಯಿಗೆ ಮಾತ್ರ ಅನ್ನ ಸೇರಲಿಲ್ಲ.

೯

ಈ ಸಲ ಹರಲಾಲನ ಆಫೀಸಿನವರು ಕಾರಣಾಂತರದಿಂದ ಸಮೀಪದ ಗ್ರಾಮಗಳಿಂದ ಹೇರಳವಾಗಿ ಅಕ್ಕಿ, ಬೇಳೆಗಳನ್ನು ಒಟ್ಟಾಗಿ ಕೊಳ್ಳಲು ನಿಷ್ಕರ್ಷಿಸಿದ್ದರು. ಈ ಕೆಲಸದ ಮೇಲೆ ಹರಲಾಲನು ಪ್ರತಿ ಶನಿವಾರವೂ ಬೆಳಗಿನ ಗಾಡಿಗೆ ಕೈಯಲ್ಲಿ ಏಳೆಂಟು ಸಾವಿರ ರೂಪಾಯಿ ನಗದು ಹಣ ತೆಗೆದುಕೊಂಡು ತಾಲ್ಲೂಕು ಸ್ಥಳಕ್ಕೆ ಹೋಗಬೇಕಾಗಿತ್ತು. ದಳ್ಳಾಳಿ ವ್ಯಾಪಾರಿಗಳಿಗೆ ನಗದು ಪಾವತಿ ಮಾಡಲು ತಾಲ್ಲೂಕು ಕೇಂದ್ರದಲ್ಲಿ ಅವರದೊಂದು ಶಾಖೆಯಿತ್ತು. ಆ ಶಾಖೆಗೆ ಹತ್ತು, ಮತ್ತು ಐದು ರೂಪಾಯಿ ನೋಟುಗಳ ಕಟ್ಟುಗಳನ್ನೂ, ಸ್ವಲ್ಪ ಚಿಲ್ಲರೆ ಹಣವನ್ನೂ ತೆಗೆದುಕೊಂಡು ಹರಲಾಲನು ಹೋಗುತ್ತಿದ್ದ. ಅಲ್ಲಿ ಹಣ ಪಾವತಿಯ ರಶೀತಿ ಪುಸ್ತಕಗಳನ್ನೂ, ಲೆಕ್ಕದ ಪುಸ್ತಕಗಳನ್ನೂ ತನಿಖೆ ಮಾಡಿ, ಹಿಂದಿನ ವಾರದ ಜಮಾ ಖರ್ಚುಗಳನ್ನು ಸರಿನೋಡಿ ಈ ವಾರದ ಪಾವತಿಗೋಸ್ಕರ ಸಾಕಷ್ಟು ಹಣವಿಟ್ಟು ಬರುತ್ತಿದ್ದ. ಅವನ ಜೊತೆಯಲ್ಲಿ ಆಫೀಸಿನ ಇಬ್ಬರು ಕಾವಲುಗಾರರು ಹೋಗುತ್ತಿದ್ದರು. ಹರಲಾಲನು ಈ ಕೆಲಸ ಮಾಡಲು ಅವನು ಜಾಮೀನು ಹಣ ಠೇವಣಾತಿ ಮಾಡದೆ ಇದ್ದುದನ್ನು ಕುರಿತು ಆಫೀಸಿನಲ್ಲಿ ಮಾತು ನಡೆದಿತ್ತು. ಆದರೆ ದೊಡ್ಡ ಸಾಹೇಬರು ಸ್ವಂತ ಜವಾಬುದಾರಿ ತೆಗೆದುಕೊಂಡು ಹರಲಾಲನಿಗೆ ಜಾಮೀನು ಹಣದ ಠೇವಣಾತಿ ಆವಶ್ಯಕವಿಲ್ಲವೆಂದು ಹೇಳಿದ್ದರಿಂದ ಯಾರೂ ಹೆಚ್ಚು ಆಕ್ಷೇಪಣೆ ಮಾಡಲಾಗಲಿಲ್ಲ.

ಮಾಘಮಾಸದಿಂದ ಈ ವ್ಯವಹಾರ ನಡೆಯುತ್ತ ಬಂದಿದೆ. ಚೈತ್ರಮಾಸದವರೆಗೂ ನಡೆಯಬೇಕಾಗಿತ್ತು. ಈ ಹವ್ಯಾಸದಲ್ಲೇ ಹರಲಾಲನ ಮನಸ್ಸು ಪೂರ್ತಿಯಾಗಿ ಮುಳುಗಿ ಹೋಗಿತ್ತು. ಸಾಧಾರಣವಾಗಿ ರಾತ್ರಿ ಬಹಳ ವೇಳೆಯಾದ ಮೇಲೇ ಆಫೀಸಿನಿಂದ ಮನೆಗೆ ಹಿಂತಿರುಗುತ್ತಿದ್ದ.

ಒಂದು ದಿನ ರಾತ್ರಿ ಹೀಗೇ ಬಹಳ ಹೊತ್ತು ಮಾಡಿಕೊಂಡು ಮನೆಗೆ ಬಂದಾಗ ವೇಣು ಬಂದಿದ್ದನೆಂದು ತಾಯಿಯಿಂದ ಕೇಳಿದ. ಆಕೆ ಅವನಿಗೆ ತಿಂಡಿ, ತೀರ್ಥ ಕೊಟ್ಟು ಉಪಚರಿಸಿ, ವಿಶ್ವಾಸದಿಂದ ಮಾತುಕಥೆಯಾಡಿ ಕಳುಹಿಸಿದ್ದಳು. ಅವನ ಜೊತೆಯಲ್ಲಿ ಮಾತಾಡಿ ಅವನ ಮೇಲೆ ಆಕೆಯ ಹೃದಯ ಮತ್ತಷ್ಟು ವಾತ್ಸಲ್ಯದಿಂದ ತುಂಬಿಹೋಗಿತ್ತು. ಹೀಗೇ ಇನ್ನು ಎರಡು ಮೂರು ದಿನ ಕಳೆದುವು. ತಾಯಿ ಒಂದು ದಿನ "ಮನೆಯಲ್ಲಿ ಪಾಪ, ಹೆತ್ತ ತಾಯಿಯಿಲ್ಲ. ನೀನೇ ಅನ್ನುವವರೊಬ್ಬರಿಲ್ಲ...ತಂದೆ ಬಿಟ್ಟರೆ, ಅದಕ್ಕೇ ಅವನಿಗಲ್ಲಿ ಮನಸ್ಸು ನಿಲ್ಲುವುದಿಲ್ಲ. ಇಲ್ಲಿಗೆ ಬರಬೇಕೆನ್ನಿಸತ್ತೆ. ನನ್ನ ಹತ್ತಿರ ಬಂದರೆ ನಾನವನನ್ನ ನಿನ್ನ ತಮ್ಮನ ಹಾಗೆ, ನನ್ನ ಹೆತ್ತ ಮಗನ ಹಾಗೆ ನೋಡಿಕೊಳ್ಳುತ್ತೇನೆ. ಅದು ಅವನಿಗೆ ಬಹಳ ಹೊಂದಿಹೋಗಿದೆ. ಅದಕ್ಕೇ ನನ್ನನ್ನು ಅಮ್ಮಾ, ಅಮ್ಮಾ ಎಂದು ಕೂಗುವುದಕ್ಕೋಸ್ಕರ

ಇಲ್ಲಿಗೆ ಹೀಗೆ ಬರುತಾಯಿರುತ್ತಾನೆ" ಎಂದು ಗದ್ಗದ ದನಿಯಲ್ಲಿ ಹೇಳುತ್ತಾ ಸೆರಗಿನಿಂದ ಕಣ್ಣೊರಸಿಕೊಂಡಳು.

ಹರಲಾಲನಿಗೊಂದು ದಿನ ವೇಣುವಿನ ಭೆಟ್ಟಿಯಾಯಿತು. ಅವತ್ತು ವೇಣು ಹರಲಾಲನಿಗಾಗಿಯೇ ಕಾಯುತ್ತ ಕೂತಿದ್ದ. ರಾತ್ರಿ ಬಹಳ ಹೊತ್ತಿನವರೆಗೂ ಮಾತುಕಥೆಯಾಯಿತು. ವೇಣುವು "ಅಪ್ಪ ಈ ನಡುವೆ ಬಹಳ ಬದಲಾಯಿಸಿ ಬಿಟ್ಟಿದ್ದಾನೆ ನನ್ನ ವಿಷಯದಲ್ಲಿ. ನಾನಿನ್ನು ಆ ಮನೆಯಲ್ಲಿರುವುದೇ ಸಾಧ್ಯವಿಲ್ಲ. ಅದರಲ್ಲೂ ಒಂದು ಸುದ್ದಿ ಕೇಳಿದೆ. ಅಪ್ಪ ಎರಡನೇ ಮದುವೆಗೆ ತಯಾರು ಮಾಡಿಕೊಳ್ಳುತ್ತಾ ಇದ್ದಾನಂತೆ. ರತೀಬಾಬು ಸಂಬಂಧ ಹುಡುಕಿಕೊಂಡು ಬಂದಿದಾನೆ. ಮೂರು ಹೊತ್ತೂ ಅದರ ವಿಷಯವಾಗೇ ಆಲೋಚನೆ ನಡೆಸುತ್ತಾ ಇರುತ್ತಾರೆ. ಇದಕ್ಕೆ ಮೊದಲು ನಾನೆಲ್ಲಾದರೂ ಹೊರಗೆ ಹೋಗಿ ತಡವಾಗಿ ಮನೆಗೆ ಬಂದರೆ ಎಷ್ಟು ಗಾಬರಿಪಡುತ್ತಿದ್ದರು. ಈಗಂತೂ ನಾನು ಮೂರು ನಾಲ್ಕು ದಿನ ಮನೆಗೆ ವಾಪಸು ಬರದೆ ಇದ್ದರೂ ಅವರಿಗಿನ್ನೂ ಸಂತೋಷ, ಯಾಕೆ ಗೊತ್ತಾ?

"ನಾನು ಮನೆಯಲ್ಲಿದ್ದರೆ ಅವರಿಬ್ಬರು ಮದುವೆ ವಿಷಯವನ್ನು ಗುಟ್ಟು ಗುಟ್ಟಾಗಿ, ಹೆದರಿಕೊಂಡು ಹೆದರಿಕೊಂಡು ಮಾತಾಡಿಕೊಳ್ಳಬೇಕಾಗುತ್ತದೆ, ...ಆಗವರಿಗೆ ಉಸಿರೇ ಕಟ್ಟಿದ ಹಾಗಾಗುತ್ತದೆ. ಅದಕ್ಕೇ ನಾನು ಮನೆಯಲ್ಲಿಲ್ಲದೆ ಹೊದರೆ ಹಾಯಾಗಿ ಉಸಿರು ಬಿಡುತ್ತಾರೆ. ಈ ಮದುವೆಯೇನಾದರೂ ಆಗಿಹೋದರೆ ನಾನಂತೂ ಮನೆಯಲ್ಲೆಂದಿಗೂ ಇರಲಾರೆ. ನನಗೆ ನೀವೇನಾದರೂ ಮಾಡಿ ಒಂದು ದಾರಿ ತೋರಿಸಿಕೊಡಬೇಕು. ಏನಾದರೂ ಆಗಲಿ, ನಾನು ಸ್ವತಂತ್ರನಾಗಿರಬೇಕೆನ್ನಿಸುತ್ತದೆ," ಎಂದು ಹೇಳಿಕೊಂಡ.

ಇದೆಲ್ಲಾ ಕೇಳಿ ಹರಲಾಲನ ಹೃದಯ ಮರುಕದಿಂದಲೂ, ಸ್ನೇಹದಿಂದಲೂ ತುಂಬಿಹೋಯಿತು. ಇಂತಹ ಸಂಕಟ ಕಾಲದಲ್ಲಿ ಇವನಿಗಾರೂ ಇಲ್ಲದೆ ತನ್ನ ಆ ಹಳೇ ಮಾಸ್ಟರನ ಬಳಿ ಗೋಳು ಹೇಳಿಕೊಳ್ಳಲು ಬಂದಿದ್ದಾನೆ, ಪಾಪ. ಇದನ್ನು ನೆನಸಿಕೊಂಡು ಅವನಿಗೆ ನೋವಿನೊಂದಿಗೇ ಒಂದು ಬಗೆಯ ತೃಪ್ತಿಯೂ ಆಯಿತು. ಆದರೆ ಈ ಬಡ ಮಾಸ್ಟರ್ ಮಹಾಶಯ ಏನುತಾನೇ ಮಾಡಬಲ್ಲವನಾಗಿದ್ದಾನೆ?

ಆಗ ವೇಣುವು "ಹೇಗಾದರೂ ಸರಿಯೇ ನಾನು ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರಾಗಿಬಿಟ್ಟು ಬಂದರೆ ಈ ಸಂಕಟದಿಂದ ತಪ್ಪಿಸಿಕೊಳ್ಳಬಹುದು" ಎಂದುಸುರಿದ.

"ನಿಮ್ಮಪ್ಪ ನಿನ್ನನ್ನ ಹೋಗುವುದಕ್ಕೆ ಬಿಡುತ್ತಾರೇನು?" ಎಂದ ಹರಲಾಲ.

"ಬಿಡದೇ ಏನು? ಸದ್ಯ ನಾನು ಹೋದರೆ ಅವರು ಬದುಕುತ್ತಾರೆ. ಆದರೆ ಹಣ ಕಂಡರೆ ಎಷ್ಟು ಪ್ರಾಣ, ಅವರ ಕೈಯಿಂದ ಇಂಗ್ಲೆಂಡಿಗೆ ಹೋಗುವ ಖರ್ಚು ಹುಟ್ಟಿಸುವುದು ಮಾತ್ರ ಸುಲಭವಲ್ಲ. ಅದಕ್ಕೇನಾದರೂ ಉಪಾಯ ಮಾಡಲೇಬೇಕು."

ಹರಲಾಲನು ವೇಣುವಿನ ಜಾಣತನವನ್ನು ಕಂಡು ನಗುತ್ತಾ "ಏನುಪಾಯ?" ಎಂದ.

ನಾನೊಂದು ಕೈಪತ್ರ ಬರೆದು ಕೊಟ್ಟು ಸಾಲ ಮಾಡಿಬಿಡುತ್ತೇನೆ. ಸಾಲಗಾರರು ನನ್ನ ಮೇಲೆ ದಾವಾ ಮಾಡುತ್ತಾರೆ. ಆಗ ಅಪ್ಪ ವಿಧಿಯಿಲ್ಲದೆ ಸಾಲ ತೀರಿಸಬೇಕಾಗುತ್ತದೆ. ಆ ಹಣ ಉಪಯೋಗಿಸಿಕೊಂಡು ಓಡಿಹೋಗಿ ಇಂಗ್ಲೆಂಡಿಗೆ ಹೋಗುತ್ತೇನೆ. ಅಲ್ಲಿ ಹೋದ ಮೇಲೆ ಅಪ್ಪ ನನ್ನ ಖರ್ಚಿಗೆ ದುಡ್ಡು ಕಳಿಸದೆ ಇರಲಾರ."

"ನಿನಗೆ ದುಡ್ಡು ಸಾಲ ಕೊಡುವವರು ಯಾರು?"

ಆಗ ವೇಣು ಹರಲಾಲನ ಕಡೆ ನೋಡಿ "ನಿಮಗೆ ಕೊಡಲಾಗುತ್ತಾ?" ಎಂದ.

ಹರಲಾಲನು ಆಶ್ಚರ್ಯದಿಂದ "ನಾನು?" ಎಂದ. ಅವನ ಬಾಯಿಂದ ಬೇರಾವ ಮಾತೂ ಹೊರಡಲಿಲ್ಲ.

"ಯಾಕೆ, ಈಗತಾನೇ ನಿಮ್ಮ ಆಳು ಕಟ್ಟು ಕಟ್ಟು ನೋಟುಗಳನ್ನ ತಂದು ನಿಮ್ಮ ಮನೆಯಲ್ಲಿಟ್ಟನಲ್ಲಾ?" ಎಂದ ವೇಣು.

ಹರಲಾಲನಿಗೆ ನಗು ಬಂತು "ಹಹ್ಹ...ನಿಜ, ಆ ಆಳು ಎಷ್ಟರಮಟ್ಟಿಗೆ ನನ್ನವನೋ ಆ ಹಣವೂ ಅಷ್ಟರಮಟ್ಟಿಗೆ ನನ್ನ ಹಣ" ಎಂದ. ಹೀಗೆಂದು ತನ್ನ ಆಫೀಸಿನ ಹಣದ ವ್ಯವಹಾರದ ಬಗ್ಗೆ ವಿವರವಾಗಿ ವೇಣುವಿಗೆ ಮಂದಟ್ಟು ಮಾಡಿಸಿದ. ಈಗವನು ಕಂಡ ಹಣ ಕೇವಲ ಈ ಒಂದು ರಾತ್ರಿ ಮಾತ್ರ ಈ ದರಿದ್ರನ ಮನೆಯಲ್ಲಿ ಆಸರೆ ಪಡೆಯುತ್ತದೆ. ಹಗಲಾದೊಡನೆ ಹತ್ತು ಕಡೆ ಹೋಗುತ್ತದೆ.

ಆಗ ವೇಣು "ನಿಮ್ಮ ಸಾಹೇಬ ನನಗೆ ಸಾಲ ಕೊಡುವುದಕ್ಕೆ ಆಗುವುದಿಲ್ಲವೇ? ನಾನು ಬೇಕಾದರೆ ಕೇಳಿದಷ್ಟು ದರದಲ್ಲಿ ಬಡ್ಡಿ ಕೊಡಲು ತಯಾರು" ಎಂದ.

"ನಿಮ್ಮಪ್ಪನೇನಾದರೂ ಸೆಕ್ಯೂರಿಟಿ ಕೊಡುವ ಹಾಗಿದ್ದರೆ ಸಾಲ ಕೊಡುವುದಕ್ಕೇನು, ಸಾಹೇಬನಿಗೆ?"

"ಒಳ್ಳೇ ಮಾತು? ನಮ್ಮಪ್ಪ ಸೆಕ್ಯೂರಿಟಿ ಕೊಡುವ ಹಾಗಿದ್ದರೆ ದುಡ್ಡೇ ಯಾಕೆ ಕೊಡಬಾರದು?" ಎಂದ ವೇಣು.

ವಾದ ಅಲ್ಲಿಗೇ ಮುಗಿಯಿತು. ಹರಲಾಲನು ಮನಸ್ಸಿನಲ್ಲಿ "ನನ್ನ ಹತ್ತಿರ ಏನಾದರೂ ಇದ್ದಿದ್ದರೆ, ಆಗ ಮನೆ, ಮಠ, ಹೊಲ, ಗದ್ದೆ ಏನಿದ್ದರೂ ಮಾರಿ ಇವನಿಗೆ ದುಡ್ಡು ಒದಗಿಸಬಹುದಾಗಿತ್ತು" ಎಂದುಕೊಂಡ. ಆದರೆ ಅದಕ್ಕೊಂದೇ ಅಡ್ಡಿ, ಅವನಿಗೆ ಮನೆ, ಮಠ, ಹೊಲ, ಗದ್ದೆ ಏನೂ ಇಲ್ಲ, ಸದ್ಯ.

೧೦

ಒಂದು ದಿನ ಶುಕ್ರವಾರ ರಾತ್ರಿ ಹರಲಾಲನ ಮನೆಯ ಮುಂದೆ ಜೋಡು ಕುದುರೆಯ ಗಾಡಿ ಬಂದು ನಿಂತುಕೊಂಡಿತು. ವೇಣು ಗಾಡಿಯಿಂದಿಳಿದೊಡನೆ ಹರಲಾಲನ ಆಫೀಸಿನ ಆಳು ಅವನಿಗೆ ದೊಡ್ಡದೊಂದು ಸಲಾಮು ಮಾಡಿ ಅತಿ ಸಡಗರದಿಂದ ಹರಲಾಲನಿಗೆ ಸುದ್ದಿ ತಿಳಿಸಲು ಮಹಡಿಯ ಮೇಲೆ ಹೋದ. ಹರಲಾಲನಾಗ ತನ್ನ ಮಲಗುವ ಕೋಣೆಯಲ್ಲಿ ನೆಲದ ಮೇಲೆ ಕೂತು ರೂಪಾಯಿಗಳೆಣಿಸುತ್ತ ಲೆಕ್ಕ ಸರಿ ನೋಡುತ್ತಿದ್ದ. ವೇಣು ಅದೇ ಕೋಣೆಯೊಳಗೆ ಪ್ರವೇಶ ಮಾಡಿದ. ಇಂದು ಅವನ ಧಾಟಿಯೇ ಬೇರೆ. ಬಹಳ ಶಿಸ್ತಾಗಿ ಬಟ್ಟೆ ಹಾಕಿದ್ದ. ಸೊಗಸಾದ ಧೋತರ, ಉತ್ತರೀಯಕ್ಕೆ ಬದಲಾಗಿ ತನ್ನ ಅಂದವಾದ ತುಂಬಿದ ಮೈಗೆ ಉದ್ದನೆಯ ಪಾರ್ಸಿ ನಿಲುವಂಗಿ, ಪ್ಯಾಂಟಲೂನ್ ತೊಟ್ಟು, ತಲೆಗೊಂದು ಹೊಸ ಟೋಪಿ ಧರಿಸಿ ಬಂದಿದ್ದ. ಅವನ ಕೈಗಳೆರಡರ ಬೆರಳುಗಳಲ್ಲಿ ವಜ್ರದ ಉಂಗುರಗಳು ಹೊಳೆಯುತ್ತಿದ್ದುವು. ಕೊರಳಿನಿಂದ ಜೋಲಾಡುವ ಉದ್ದವಾದ ಮತ್ತು ದಪ್ಪವಾದ ಬಂಗಾರದ ಚೈನಿಗೆ ಕಟ್ಟಿದ್ದ ಗಡಿಯಾರವು ಎದೆಯ ಮೇಲಿನ ಜೇಬಿನಲ್ಲಿ ಅಡಕವಾಗಿತ್ತು. ಕೋಟಿನ ತೋಳಿನ ಒಳಗಣಿಂದ ತಳಗಡೆ ಹಾಕಿದ್ದ ನವುರಾದ ಮಸ್ಲಿನ್ ಜುಬ್ಬದ ತೋಳಿಗೆ ಹಾಕಿದ ರತ್ನದ ಗುಂಡಿಗಳು ಕಾಣಬರುತ್ತಿವೆ.

ಹರಲಾಲನು ರೂಪಾಯಿಗಳೆಣಿಸುವುದನ್ನು ನಿಲ್ಲಿಸಿ ಅಚ್ಚರಿಯಿಂದ ಕಣ್ಣು ಬಿಡುತ್ತ "ಇದೇನು ಸಮಾಚಾರ, ವೇಣು! ಇಷ್ಟು ರಾತ್ರಿಯಲ್ಲಿ – ಈ ವೇಷ?" ಎಂದ.

ಅದಕ್ಕೆ ವೇಣು "ನಾಳಿದ್ದು ಅಪ್ಪನ ಮದುವೆ. ಅವರು ನನಗೆ ಅದನ್ನು ಮರೆಮಾಚಿಟ್ಟಿದ್ದರೂ ನಾನು ಹೇಗೋ ತಿಳಿದುಕೊಂಡುಬಿಟ್ಟೆ. ನಾನು ಅಪ್ಪನ ಹತ್ತಿರ ಕೆಲವು ದಿನಗಳು ಮಾತ್ರ ಬರಾಕ್‌ಪುರದ ನಮ್ಮ ತೋಟಕ್ಕೆ ಹೋಗುವೆನೆಂದು ಹೇಳಿದೆ, ಅವರದನ್ನ ಕೇಳಿ ಸಂತೋಷದಿಂದ ಒಪ್ಪಿಕೊಂಡುಬಿಟ್ಟರು. ಅದಕ್ಕೇ ಈಗ ನಾನು ತೋಟದ ಕಡೆ ಹೊರಟಿದ್ದೇನೆ. ವಾಪಸು ಬರಲೇ ಬಾರದೆಂದುಕೊಂಡಿದ್ದೇನೆ. ಧೈರ್ಯ ಬಂದರೆ ಗಂಗೆಯಲ್ಲಿ ಮುಳುಗಿ ಸಾಯುತ್ತಿದ್ದೆ. ಆದರೆ ಧೈರ್ಯವಿಲ್ಲ" ಎನ್ನುತ್ತ ವೇಣು ಅಳತೊಡಗಿದ. ಹರಲಾಲನ ಎದೆಯೊಳಗೆ ಚೂರಿ ಇರಿದಂತಾಯಿತು. ಗುರುತಿಲ್ಲದ ಯಾರೋ ಹೆಂಗಸು ಬಂದು ವೇಣುವಿನ ತಾಯಿಯ ಕೊಠಡಿ, ತಾಯಿಯ ಮಂಚ, ಮನೆಯೊಳಗೆ ಆ ತಾಯಿಗಿದ್ದ ಇಡೀ ಸ್ಥಾನವನ್ನೇ ಆಕ್ರಮಿಸಿ ಅಧಿಕಾರ ಮಾಡುತ್ತ ಕೂತರೆ, ವೇಣುವಿನ ತಾಯಿಯ ಸ್ನೇಹದ ನೆನಹುಗಳಿಂದ ತುಂಬಿದ್ದ ಆ ಮನೆ ವೇಣುವಿಗೆ ಎಷ್ಟು ಕಠೋರವಾಗಿ ತೋರುವುದೆಂಬುದನ್ನು ಹರಲಾಲನು ಮನಃಪೂರ್ವಕವಾಗಿ ಅರ್ಥಮಾಡಿಕೊಂಡನು. ಆಗವನಿಗೆನ್ನಿಸಿತು–

ಬಡವನಾಗೇ ಇರಬೇಕಾಗಿಲ್ಲ ದುಃಖ, ಅವಮಾನ ತಡೆಯಲಾರದಷ್ಟು ಅನುಭವಿಸಬೇಕಾದರೆ ಎಷ್ಟು ಹಣವಂತನಾಗಿ ಹುಟ್ಟಿದ್ದರೇನು? ಏನು ಹೇಳಿ ವೇಣುವನ್ನು ಸಮಾಧಾನ ಮಾಡುವುದೆಂದು ಎಷ್ಟು ಯೋಚಿಸಿದರೂ ತೋಚದೆ ಕಡೆಗೆ ಅವನ ಕೈಯನ್ನು ಹಿಡಿದು ತನ್ನ ಕೈಯಲ್ಲಿಟ್ಟುಕೊಂಡ.

ಹಾಗೆ ಮಾಡಿದೊಡನೆ ಇನ್ನೊಂದು ಯೋಚನೆಯೂ ಅವನಲ್ಲಿ ಬಂತು– ಇಷ್ಟು ಸಂಕಟದ ಸಮಯದಲ್ಲೂ ವೇಣು ಇಷ್ಟು ಶಿಸ್ತಾಗಿ ಸಿಂಗಾರ ಮಾಡಿಕೊಳ್ಳಲು ಅವನಿಗೆ ಮನಸ್ಸು ಹೇಗೆ ಬಂತೋ?

ಹರಲಾಲನು ಅವನ ಕೈ ಬೆರಳಿನ ಉಂಗುರಗಳ ಕಡೆ ನೋಟ ನೆಟ್ಟಿದ್ದನ್ನೆ ಕಂಡು ವೇಣು ಅವನ ಮನಸ್ಸಿನಲ್ಲಿ ಹುಟ್ಟಿದ ಸಂಶಯವನ್ನು ಅರ್ಥಮಾಡಿಕೊಂಡ. "ಈ ಉಂಗುರಗಳೆಲ್ಲ ನಮ್ಮಮ್ಮನದು" ಎಂದ.

ಇದನ್ನ ಕೇಳಿ ಹರಲಾಲನು ಕಷ್ಟದಿಂದ ಕಂಬನಿಯನ್ನು ತಡೆದುಕೊಂಡ. ಆಮೇಲೆ ಸ್ವಲ್ಪ ಹೊತ್ತಾದ ಅನಂತರ "ವೇಣು, ಊಟ ಮಾಡಿ ಬಂದೆಯಾ?" ಎಂದ.

"ಹೂಂ, ನಿಮ್ಮದಿನ್ನೂ ಆಗಿಲ್ಲವೆ?" ಎಂದ ವೇಣು.

"ಇಲ್ಲಪ್ಪ, ಹಣ ಎಣಿಸಿ ಕಬ್ಬಿಣದ ಪೆಟ್ಟಿಗೆಯೊಳಗೆ ಇಟ್ಟ ಹೊರತು ಈ ಕೊಠಡಿ ಬಿಟ್ಟು ಹೋಗುವ ಹಾಗಿಲ್ಲ" ಎಂದ ಹರಲಾಲ.

ಆಗ ವೇಣು "ಛೇ, ಹಾಗೆ ಯಾಕೆ. ನೀವು ಊಟ ಮುಗಿಸಿ ಬನ್ನಿ, ನಿಮ್ಮ ಜೊತೆಯಲ್ಲಿ ಮಾತಾಡುವುದೆಷ್ಟೋ ಇದೆ. ನಾನಿಲ್ಲೇ ಕೂತಿರುತ್ತೇನೆ. ನಿಮ್ಮಮ್ಮ ನಿಮಗಾಗಿ ಕಾದುಕೊಂಡು ಕೂತಿರುತ್ತಾರೆ" ಎಂದ. ಹರಲಾಲನು ಸ್ವಲ್ಪ ಹಿಂದೆ ಮುಂದೆ ನೋಡುತ್ತ "ಹಾಗಾದರೆ ನಾನು ಚಟ್ಟಂತ ಊಟ ಮುಗಿಸಿಕೊಂಡು ಬಂದುಬಿಡುತ್ತೇನೆ" ಎಂದು ಬೇರೆ ಮಾತಾಡದೆ ಹೊರಟ.

ಸ್ವಲ್ಪ ಹೊತ್ತಾದ ಅನಂತರ ಹರಲಾಲನು ಅವಸರದಿಂದ ಊಟ ಹೇಗೋ ಮುಗಿಸಿಕೊಂಡು ತಾಯಿಯ ಸಂಗಡ ಮತ್ತೆ ಆ ಕೋಣೆಗೆ ಬಂದ. ವೇಣು ಎದ್ದದ್ದೇ ಆಕೆಯ ಕಾಲು ಮುಟ್ಟಿ ನಮಸ್ಕಾರ ಮಾಡಿದ. ಆಕೆ ಅವನ ಗಲ್ಲ ಮುಟ್ಟಿ ತನ್ನ ಕೈಬೆರಳನ್ನ ಮುತ್ತಿಟ್ಟುಕೊಂಡಳು. ಹರಲಾಲನಿಂದ ಅವನ ಸುದ್ದಿಯನ್ನೆಲ್ಲ ಕೇಳಿ ತಿಳಿದು ಅವಳ ಎದೆ ಒಡೆಯುವಷ್ಟು ಸಂಕಟವಾಗಿತ್ತು. ತನ್ನ ಹೃದಯದೊಳಗಣ ಸ್ನೇಹವನ್ನೆಲ್ಲಾ ತೋಡಿಕೊಟ್ಟರೂ ವೇಣುವಿನ ಅಭಾವವನ್ನು ಪರಿಹರಿಸಲು ಸಾಧ್ಯವಿಲ್ಲವಲ್ಲ ಎಂಬುದೇ ಅವಳ ವ್ಯಸನ.

ನಾಲ್ಕು ಕಡೆಯೂ ಹರಡಿದ್ದ ರೂಪಾಯಿಗಳ ನಡುವೆ ಅವರು ಮೂರು ಜನವೂ ಕೂತು ವೇಣುವಿನ ಕಿರಿತನದ ದಿನಗಳನ್ನು ಕುರಿತು ಮಾತಾಡುತ್ತ ಸಮಯ ಕಳೆದರು. ಮಾಸ್ಟರ ಮಹಾಶಯರೊಂದಿಗೆ ಹೆಣೆದ ಅದೆಷ್ಟು ದಿನಗಳ ಎಷ್ಟು

ಸಂಗತಿಗಳೋ! ಮಧ್ಯೆ ಮಧ್ಯೆ ತಡೆಯಿಲ್ಲದ ಸ್ನೇಹಮಯಿಯಾದ ತಾಯಿಯ ನೆನಹು ಬೇರೆ.

ಹೀಗೆ ರಾತ್ರಿ ಬಹಳ ಹೊತ್ತು ಕಳೆಯಿತು. ಆಗ ವೇಣು ಹಠಾತ್ತಾಗಿ ತನ್ನ ಗಡಿಯಾರ ತೆಗೆದು ನೋಡಿಕೊಂಡು "ಹೂ, ಇನ್ನು ಏಳೋಣ. ಆಮೇಲೆ ಗಾಡಿ ತಪ್ಪಿಹೋದೀತು" ಎಂದ.

ಹರಲಾಲನ ತಾಯಿ "ಇಷ್ಟು ಹೊತ್ತಿನಲ್ಲಿ ಹೋಗದೆ ಹೋದರೆ ಆಗೋಲ್ಲವೇನೋ ಮಗು. ಇಲ್ಲೇ ಮಲಗಿಕೊಂಡು ಬಿಡಬಾರದೇ ಹಾಯಾಗಿ ಬೆಳಗ್ಗೆಯಾಗುತ್ತಲೂ ಹರಲಾಲನ ಸಂಗಡ ಹೊರಟುಬಿಡಬಹುದು" ಎಂದಳು.

ವೇಣು "ಇಲ್ಲಮ್ಮ, ಸಾಧ್ಯವೇ ಇಲ್ಲ. ದಯವಿಟ್ಟು ಬಲವಂತ ಮಾಡಬೇಡಿ. ಈ ರಾತ್ರಿಯೇ ನಾನು ಹೋಗಬೇಕು, ಏನಾದರೂ ಸರಿ" ಎಂದು ದೈನ್ಯವಾಗಿ ಹೇಳಿದ.

ಆಮೇಲೆ ಹರಲಾಲನನ್ನು ಕುರಿತು "ಮಾಸ್ಟರ್ ಮಹಾಶಯರೆ, ಈ ಉಂಗುರಗಳು, ಗಡಿಯಾರ ಇವನ್ನೆಲ್ಲ ನಮ್ಮ ತೋಟಕ್ಕೆ ಇಂತಹ ರಾತ್ರಿಯಲ್ಲಿ ತೆಗೆದುಕೊಂಡು ಹೋಗುವುದು ಅಪಾಯ. ಅವನ್ನ ಇಲ್ಲೇ ನಿಮ್ಮ ಹತ್ತಿರ ಬಿಟ್ಟು ಹೋಗುತ್ತೇನೆ. ಆಮೇಲೆ ವಾಪಸು ಬರುವಾಗ ತೆಗೆದುಕೊಂಡು ಹೋಗುತ್ತೇನೆ. ನಿಮ್ಮ ಆಫೀಸಿನ ಆಳಿಗೆ ಹೇಳಿ. ನನ್ನ ಗಾಡಿಯೊಳಗೆ ಹ್ಯಾಂಡ್‌ಬ್ಯಾಗಿದೆ, ಅದನ್ನವನು ತರಲಿ. ಅದರೊಳಗೆ ಅವನ್ನ ಇಟ್ಟು ನಿಮ್ಮ ಹತ್ತಿರ ಬಿಟ್ಟು ಹೋಗುತ್ತೇನೆ," ಎಂದ.

ಆಳು ಹ್ಯಾಂಡ್‌ಬ್ಯಾಗನ್ನ ತಂದೊಡನೆ ವೇಣು ತನ್ನ ಚಿನ್ನದ ಚೈನು, ಗಡಿಯಾರ, ಉಂಗುರಗಳು, ಗುಂಡಿಗಳನ್ನೆಲ್ಲಾ ಒಂದೊಂದಾಗಿ ತೆಗೆದು ಆ ಚೀಲದೊಳಗಡೆ ಇರಿಸಿದ. ಹರಲಾಲನು ಅತಿ ಜಾಗರೂಕತೆಯಿಂದದನ್ನು ಆ ಕೂಡಲೇ ಕಬ್ಬಿಣದ ಪೆಟ್ಟಿಗೆಯೊಳಗೆ ಭದ್ರವಾಗಿರಿಸಿದ.

ವೇಣು ಹರಲಾಲನ ತಾಯಿಯ ಕಾಲು ಮುಟ್ಟಿ ಕಣ್ಣಿಗೊತ್ತಿಕೊಂಡಾಗ ಆಕೆ ಗದ್ಗದ ದನಿಯಲ್ಲಿ "ಅಮ್ಮ ಜಗದಂಬೆ ನಿನ್ನ ತಾಯಿಯಾಗಿದ್ದುಕೊಂಡು ನಿನ್ನನ್ನ ಕಾಪಾಡಲಿ, ಮಗು" ಎಂದು ಹರಸಿದಳು.

ಆಮೇಲೆ ವೇಣು ಹರಲಾಲನ ಕಾಲಿಗೂ ನಮಿಸಿದ. ಬೇರಾವ ದಿನವೂ ವೇಣು ಹೀಗೆ ತನ್ನ ಮಾಸ್ಟರನ ಕಾಲು ಮುಟ್ಟಿ ನಮಿಸಿರಲಿಲ್ಲ. ಹರಲಾಲನಿಗೇನು ಮಾತೂ ಆಡಲಾಗದೆ ವೇಣುವಿನ ಬೆನ್ನ ಮೇಲೆ ಕೈಯಿಟ್ಟು ಅವನ ಜೊತೆಯಲ್ಲೇ ಮೆಟ್ಟಲಿಳಿದು ಬಂದ. ಗಾಡಿಯ ಲಾಂದ್ರದಲ್ಲಿ ದೀಪ ಉರಿಯಿತು. ಕುದುರೆಗಳೆರಡೂ ಚಡಪಡಿಸಹತ್ತಿದುವು. ಕಲಿಕತ್ತೆಯ ಗ್ಯಾಸ್‌ದೀಪಗಳ ಬೆಳಕಿನಿಂದ ತುಂಬಿದ ಆ ರಾತ್ರಿ ವೇಣುವನ್ನು ಕೂರಿಸಿಕೊಂಡು ಗಾಡಿ ಬೇಗ ಕಣ್ಮರೆಯಾಗಿಹೋಯಿತು.

ಹರಲಾಲನು ಮತ್ತೆ ತನ್ನ ಕೋಣೆಗೆ ಬಂದು ಬಹಳ ಹೊತ್ತಿನವರೆಗೂ ಯೋಚನೆ ಮಾಡುತ್ತ ಸುಮ್ಮನೆ ಕೂತಿದ್ದ. ಆಮೇಲೊಂದು ನಿಟ್ಟುಸಿರು ಬಿಟ್ಟು ರೂಪಾಯಿಗಳನ್ನೆಣಿಸುತ್ತ ಒಂದೊಂದೇ ರಾಶಿ ಮಾಡಿ ಪೆಟ್ಟಿಗೆಯ ಕಪಾಟುಗಳಲ್ಲಿಡುತ್ತ ಬಂದನು. ನೋಟುಗಳೆಲ್ಲ ಇದಕ್ಕೆ ಮೊದಲೇ ಎಣಿಸಲ್ಪಟ್ಟು ಕಟ್ಟು ಕಟ್ಟಾಗಿ ಸಂದೂಕದಲ್ಲಿಡಲ್ಪಟ್ಟಿದ್ದುವು.

೧೧

ಕಬ್ಬಿಣದ ಸಂದೂಕದ ಬೀಗದಕೈ ಗೊಂಚಲನ್ನು ತಲೆ ದಿಂಬಿನ ಕೆಳಗಡೆ ಇಟ್ಟು ಆ ಹಣ ಇರಿಸಿದ್ದ ಕೋಣೆಯಲ್ಲೇ ಮಲಗಿಕೊಂಡ. ನಿದ್ದೆ ಸರಿಯಾಗಿ ಬರಲಿಲ್ಲ. ಕನಸು ಕಂಡ. ವೇಣುವಿನ ತಾಯಿ ಪರದೆಯ ಮರೆಯಿಂದಲೇ ದೊಡ್ಡ ದನಿಯಲ್ಲಿ ಅವನನ್ನ ಬೈಯುತ್ತಿದ್ದಳು. ಮಾತಾವುದೂ ಸ್ಪಷ್ಟವಾಗಿ ತಿಳಿಯುವುದಿಲ್ಲ. ಆ ಸ್ಪಷ್ಟವಾದ ಕೊರಳ ದನಿಯೊಂದಿಗೇ ಆಕೆಯ ಮುತ್ತು, ರತ್ನ, ಕೆಂಪು, ವಜ್ರಗಳ ನಗಗಳಿಂದ ಹೊರಟುಬರುವ ಕೆಂಪು, ಹಸಿರು, ಬಿಳಿಯ ಬಣ್ಣದ ಹೊಳಪಿನ ಕಿರಣಗಳು ಮುಂದಿದ್ದ ಕಪ್ಪು ತೆರೆಯೊಳಗಿಂದ ತೂರಿ ಬಂದು ಅವನ ಕಣ್ಣ ರೆಪ್ಪೆಗಳ ಮುಂದೆ ಕುಣಿದಾಡತೊಡಗಿದುವು. ಹರಲಾಲನು ತನ್ನ ಉಸಿರನ್ನೆಲ್ಲ ಕೊರಳಿಗೆ ತಂದುಕೊಂಡು ವೇಣುವನ್ನು ಕೂಗಲು ಪ್ರಯತ್ನಿಸುತ್ತಿದ್ದಾನೆ. ಆದರೆ ಎಷ್ಟು ಹೆಣಗಾಡಿದರೂ ದನಿಯೇ ಹೊರಡವೊಲ್ಲದು. ಈ ಸಮಯದಲ್ಲಿ ಪ್ರಚಂಡವಾದ ಶಬ್ದದೊಂದಿಗೆ ಏನೋ ಒಂದು ಒಡೆದು ಪರದೆಯನ್ನ ಹರಿದು ಚೆಲ್ಲಿತು. ಬೆಚ್ಚಿ ಕಣ್ಣು ತೆರೆದು ನೋಡಿದರೆ ಮುಂದೆ ಮಬ್ಬಿನ ರಾಶಿ. ಹಠಾತ್ತಾಗಿ ಗಾಳಿ ಹೊಡೆದು ಕಿಟಕಿಯ ಬಾಗಿಲನ್ನು ದೊಡ್ಡದಾಗಿ ಸದ್ದುಮಾಡಿ ಓಸರಿಸಿ ಕೋಣೆಯೊಳಗೆ ಉರಿಯುತ್ತಿದ್ದ ದೀಪವನ್ನಾರಿಸಿಬಿಟ್ಟಿತ್ತು. ಹರಲಾಲನ ಮೈಯೆಲ್ಲಾ ಬೆವತು ಒದ್ದೆಯಾಗಿ ಹೋಗಿತ್ತು. ಅವನು ಸರಕ್ಕನೆ ಎದ್ದು ಬೆಂಕಿಯ ಪೆಟ್ಟಿಗೆಯಿಂದ ದೀಪ ಹೊತ್ತಿಸಿದ. ಗಡಿಯಾರದಲ್ಲಿ ನೋಡಿದ. ನಾಲ್ಕು ಹೊಡೆದು ಹೋಗಿದೆ. ಇನ್ನು ನಿದ್ದೆ ಮಾಡಲು ಸಮಯವಿಲ್ಲ. ಹಣ ತೆಗೆದುಕೊಂಡು ಸ್ಟೇಷನ್ನಿಗೆ ಹೋಗಲು ಸಿದ್ಧ ಮಾಡಿಕೊಳ್ಳಬೇಕು. ಹರಲಾಲನು ಮುಖ ತೊಳೆದು ಬರುವಷ್ಟರಲ್ಲಿ ಅವನ ತಾಯಿ ತನ್ನ ಕೋಣೆಯಿಂದಲೇ "ಏನಪ್ಪಾ, ಎದ್ದೆಯಾ?" ಎಂದು ಕೂಗಿದಳು.

ಹರಲಾಲನು ಸೂರ್ಯೋದಯಕ್ಕೆ ಮುಂಚೆ ತಾಯಿಯ ಮಂಗಳವಾದ ಮುಖವನ್ನು ನೋಡಬೇಕೆಂದು ಆಕೆಯ ಕೋಣೆಯನ್ನು ಪ್ರವೇಶ ಮಾಡಿದ. ತಾಯಿ ಅವನ ನಮಸ್ಕಾರವನ್ನು ಅಂಗೀಕರಿಸಿ ಅವನನ್ನ ಹರಸಿ "ಅಪ್ಪಾ, ಹರಲಾಲ, ನನಗೀಗತಾನೆ ಒಂದು ಕನಸು ಬಿದ್ದಿತ್ತು ಕಣೋ. ನಮ್ಮ ಮನೆಗೆ ನೀನು ಸೊಸೆಯನ್ನು

ಕರೆದುಕೊಂಡು ಬಂದಹಾಗೆ... ನಿಜವಾಗಿಯೂ! ಬೆಳಗಿನ ಜಾವದಲ್ಲಿ ಬಂದ ಕನಸು ಸುಳ್ಳಾಗುವುದಿಲ್ಲ ನೋಡುತ್ತಿರು" ಎಂದಳು.

ಹರಲಾಲನು ನಗುತ್ತ ತನ್ನ ಕೋಣೆಯನ್ನು ಹೊಕ್ಕ. ರೂಪಾಯಿಗಳ ಚೀಲಗಳನ್ನೂ ನೋಟಿನ ಕಟ್ಟುಗಳನ್ನೂ ಸಂದೂಕದಿಂದ ಹೊರಗೆ ತೆಗೆದು ಪ್ಯಾಕ್ ಮಾಡುವ, ಟ್ರಂಕಿನಲ್ಲಿಡುವ ಕೆಲಸದಲ್ಲಿ ನಿರತನಾದ. ಹಠಾತ್ತಾಗಿ ಅವನ ಎದೆಯಲ್ಲಿ ಧಸಕ್ಕೆಂದಿತು. ಎರಡು ಮೂರು ನೋಟಿನ ಕಟ್ಟುಗಳಿಟ್ಟದ್ದ ಚೀಲಗಳು ಬರಿದಾಗಿದ್ದುವು. ಇದೇನು ಕನಸು ಕಾಣುತ್ತಿದ್ದಾನೆಯೆ? ಚೀಲಗಳನ್ನು ತೆಗೆದು ಪೆಟ್ಟಿಗೆಯ ಮೈಗೆ ಬಲವಾಗಿ ಹೊಡೆದ. ಆದರೇನು, ಅದರಿಂದಾಗಿ ಚೀಲಗಳು ಬರಿದಾಗಿದ್ದದ್ದು ಸುಳ್ಳಾಗಲಿಲ್ಲ. ಆದರೂ ವ್ಯರ್ಥವಾದ ಆಸೆಯಿಂದ ಚೀಲಗಳ ಮುಖಕ್ಕೆ ಕಟ್ಟಿದ್ದ ದಾರವನ್ನು ಬಿಚ್ಚಿ ಬೋರಲುಮಾಡಿ ಝಾಡಿಸಿದ. ಒಂದು ಚೀಲದೊಳಗಡೆಯಿಂದ ಎರಡು ಕಾಗದಗಳು ಕೆಳಗೆ ಬಿದ್ದುವು. ವೇಣುವಿನ ಕೈಬರೆಹದ ಕಾಗದಗಳು. ಒಂದು ಕಾಗದ ಅವನ ತಂದೆಯ ಹೆಸರಿಗೆ, ಇನ್ನೊಂದು ಹರಲಾಲನ ಹೆಸರಿಗೆ.

ಆತುರಾತುರವಾಗಿ ಕಾಗದ ಬಿಚ್ಚಿ ಓದಲಾರಂಭಿಸಿದ. ಕಣ್ಣಿಗೆ ಸರಿಯಾಗಿ ಕಾಣುವಂತಿರಲಿಲ್ಲ. ಇದೇನು, ಬೆಳಕೇ ಸಾಲದಂತಿದೆ, ಸುಮ್ಮನೆ ಬತ್ತಿಯನ್ನು ಮೇಲಕ್ಕೆತ್ತತೊಡಗಿದ. ಓದುತ್ತಿರುವುದೇನೋ ಸರಿಯಾಗಿ ಅರ್ಥವಾಗುವಂತಿಲ್ಲ – ಬಂಗಾಳಿ ಭಾಷೆಯನ್ನೇ ಮರೆತುಹೋಗಿರುವನೆ?

ಅದರಲ್ಲಿ ಬರೆದದ್ದೇನೋ ಇಷ್ಟು – ವೇಣು, ಮೂರು ಸಾವಿರ ರೂಪಾಯಿಗಳಾಗುವಷ್ಟು, ಹತ್ತು ರೂಪಾಯಿಗಳ ಕಟ್ಟುಗಳನ್ನು ತೆಗೆದುಕೊಂಡು ಇಂಗ್ಲೆಂಡಿಗೆ ಯಾತ್ರೆ ಹೊರಟಿದ್ದಾನೆ. ಅಂದು ಬೆಳಗ್ಗೆಯೇ ಜಹಜು ಹೊರಡಲಿದೆ. ಹರಲಾಲನು ವೇಣುವನ್ನೊಬ್ಬನನ್ನೇ ಬಿಟ್ಟು ಊಟಕ್ಕೆ ಹೊರಟಾಗ ವೇಣು ಈ ಕೆಲಸ ಮಾಡಿದ್ದ.

ಮತ್ತೂ ಹೀಗೆ ಬರೆದಿದ್ದ : ಅಪ್ಪನಿಗೆ ಕಾಗದ ಬರೆದಿದ್ದೇನೆ – ಹೀಗೆ ನನ್ನ ಋಣವನ್ನು ಅವರು ತೀರಿಸಬೇಕೆಂದು. ಅದೂ ಅಲ್ಲದೆ ನನ್ನ ಹ್ಯಾಂಡ್ ಬ್ಯಾಗನ್ನು ತೆಗೆದು ನೋಡಿ. ಅದರೊಳಗೆ ನಮ್ಮಮ್ಮನ ಒಡವೆಗಳಿಟ್ಟಿದ್ದೇನಲ್ಲ – ಅವುಗಳ ಬೆಲೆಯೆಷ್ಟೋ ಸರಿಯಾಗಿ ಗೊತ್ತಿಲ್ಲ, ಬಹುಶಃ ಮೂರು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿರಬೇಕು. ಅಮ್ಮನೇನಾದರೂ ಬದುಕಿದ್ದಿದ್ದರೆ ಅಪ್ಪ ನನಗೆ ಇಂಗ್ಲೆಂಡಿಗೆ ಹೋಗಲು ಹಣ ಕೊಡದಿದ್ದರೂ ಈ ಒಡವೆಗಳನ್ನಾದರೂ ಮಾರಿಸಿ ನನ್ನ ಪ್ರಯಾಣದ ಖರ್ಚನ್ನು ಒದಗಿಸಿಕೊಡುತ್ತಿದ್ದಳು, ಖಂಡಿತ. ನಮ್ಮಮ್ಮನ ಒಡವೆಗಳನ್ನು ನಮ್ಮಪ್ಪ ಬೇರಾರಿಗಾದರೂ ಕೊಡುವುದು ನನಗೆ ಸಹಿಸಲಾಗಲಿಲ್ಲ. ಅದರ ಸಲುವಾಗಿಯೇ ಏನಾದರೂ ಆಗಲಿ ಎಂದು ನಾನವನ್ನು ತಂದುಬಿಟ್ಟೆ.

ಅಪ್ಪನೇನಾದರೂ ನಿಮಗೆ ಹಣ ಪಾವತಿ ಮಾಡುವುದಕ್ಕೆ ನಿಧಾನ ಮಾಡಿದರೆ ತಾವು ನಿಸ್ಸಂಕೋಚದಿಂದ ಇವುಗಳನ್ನ ಗಿರವಿ ಇಟ್ಟು ಅಥವಾ ಮಾರಿ ಬರಬೇಕಾದ ಹಣವನ್ನು ವಸೂಲು ಮಾಡಿಕೊಳ್ಳಬಹುದು. ಇವು ನಮ್ಮಮ್ಮನ ಒಡವೆಗಳು – ಆ ಕಾರಣದಿಂದ, ಅವು ನನ್ನ ಸ್ವತ್ತೇ..." ಇದಲ್ಲದೆ ಇನ್ನೂ ಏನೇನೋ ಬರೆದಿದ್ದ. ಅವುಗಳಿಂದೇನೂ ಪ್ರಯೋಜನವಿಲ್ಲ.

ಹರಲಾಲನು ತನ್ನ ಕೋಣೆಗೆ ಬೀಗ ಹಾಕಿ ಸ್ವಲ್ಪವೂ ತಡಮಾಡದೆ ಹೊರಗೆ ಬಂದು ಬೇಗ ಒಂದು ಗಾಡಿ ಗೊತ್ತುಮಾಡಿ ಗಂಗಾ ನದಿಯ ಘಾಟಿಗೆ ಓಡಿದ. ಯಾವ ಜಹಜಿನಲ್ಲಿ ಕೂತು ವೇಣು ಇಂಗ್ಲೆಂಡಿಗೆ ಹೊರಟಿದ್ದಾನೋ ಅದರ ಹೆಸರು ಕೂಡ ಅವನಿಗೆ ಗೊತ್ತಿಲ್ಲ. ಮೇಟಿಯಾ ಬುರುಜು ಪರ್ಯಂತ ಹೋಗಿ ನೋಡಿ ವಿಚಾರಿಸಿದ ಮೇಲೆ ಎರಡು ಜಹಜುಗಳು ಅಂದು ಬೆಳಗಿನ ಝಾವವೇ ರವಾನೆಯಾಗಿದ್ದುವೆಂದು ತಿಳಿದುಬಂತು. ಎರಡೂ ಇಂಗ್ಲೆಂಡಿಗೆ ಹೋಗುವ ಜಹಜುಗಳು. ಯಾವ ಜಹಜಿನಲ್ಲಿ ವೇಣುವಿದ್ದನೆಂದು ಅವನು ಊಹಿಸುವುದು ಸಾಧ್ಯವೆ? ಒಂದು ಪಕ್ಷ ಆದರೂ ಆ ಜಹಜನ್ನು ತಡೆದು ನಿಲ್ಲಿಸಲಾದೀತೆ?

ಮೇಟಿಯಾ ಬುರುಜಿನಿಂದ ಅವನು ಮನೆಗೆ ಮರಳುವಾಗ ಬೆಳಗಿನ ಬಿಸಿಲಿನಲ್ಲಿ ಕಲಿಕತ್ತೆಯ ಷಹರಾಗಲೇ ಎಚ್ಚರವಾಗಿಯೇಬಿಟ್ಟಿದೆ. ಹರಲಾಲನ ಕಣ್ಣಿಗೇನೋ ಏನೂ ಬೀಳಲಿಲ್ಲ. ಅವನ ಕಳವಳಗೊಂಡ ಬುದ್ಧಿಯ ಜೀವಾಂಶವೆಲ್ಲ ಕಳೇಬರವಿಲ್ಲದ ನಿಷ್ಠುರ ಪ್ರತಿಕೂಲತೆಯೊಂದನ್ನು ಒಂದೇ ಹಠದಿಂದ ತಳ್ಳುತ್ತಿರುವಂತಿದೆ. ಆದರೆ ಏನು ಮಾಡಿದರೂ ಎಳ್ಳಷ್ಟಾದರೂ ಅದನ್ನು ತಳ್ಳಿ ಹಾಕಲಾಗಲಿಲ್ಲ. ಅವನ ತಾಯಿಯು ವಾಸವಾಗಿರುವ ಆ ಮನೆ – ಇಷ್ಟು ದಿನ ಆ ಮನೆಗೆ ಕಾಲಿಟ್ಟೊಡನೆ ಅವನ ಇಡೀ ದಿನದ ಕೆಲಸದ ಜಂಜಡ, ಬೇಸರ, ಆಯಾಸಗಳೆಲ್ಲ ಒಂದು ಕ್ಷಣದಲ್ಲಿ ದೂರವಾಗುತ್ತಿದ್ದಂಥ ಆ ಮನೆಯ ಮುಂದೆ ಇಂದು ಗಾಡಿ ಬಂದು ನಿಂತುಕೊಂಡಿತು. ಗಾಡಿಯವನಿಗೆ ಬಾಡಿಗೆ ಕೊಟ್ಟು ಆ ಮನೆಯೊಳಗಡೆ ಅತ್ಯಂತ ನಿರಾಶೆಯಿಂದ, ದಿಗಿಲಿನಿಂದ ಮೈಯೆಲ್ಲಾ ಥರ ಥರ ನಡುಗುತ್ತಿದ್ದಂತೆಯೇ ಪ್ರವೇಶ ಮಾಡಿದ.

ತಾಯಿ ಉದ್ವಿಗ್ನಳಾಗಿ ವರಾಂಡದಲ್ಲಿ ನಿಂತಿದ್ದಳು. "ಎಲ್ಲಿ ಹೋಗಿದ್ದಿಯೋ, ಹರಲಾಲ?" ಎಂದು ವಿಚಾರಿಸಿದಳು.

"ಅಮ್ಮಾ, ನಿನಗೊಂದು ಸೊಸೆ ತರಲಿಕ್ಕೆ ಹೋಗಿದ್ದೆನಮ್ಮಾ!" ಎನ್ನುತ್ತಾ ಒಣ ದನಿಯಲ್ಲಿ 'ಹ್ಹಹ್ಹಹ್ಹ' ಎಂದು ಗಹಗಹಿಸಿ ನಕ್ಕು ಅಲ್ಲೇ ಜ್ಞಾನತಪ್ಪಿ ಬಿದ್ದುಬಿಟ್ಟ.

"ಅಯ್ಯೋ ಅಮ್ಮಾ...ಏನಾಯಿತಮ್ಮಾ!" ಎಂದು ಕಿರುಲುತ್ತಾ ತಾಯಿ ಬೇಗ ಹೋಗಿ ಒಂದು ಥಾಲಿ ನೀರು ತಂದು ಅವನ ಮುಖಕ್ಕೆ ಎರಚಿ, ಗಾಳಿ ಹಾಕಿದ ಮೇಲೆ ಅವನಿಗೆ ಸ್ವಲ್ಪ ಹೊತ್ತಿನ ಅನಂತರ ಎಚ್ಚರವಾಯಿತು. ಕಣ್ಣು ತೆರೆದು

ಶೂನ್ಯ ದೃಷ್ಟಿಯಿಂದ ನಾಲ್ಕೂ ಕಡೆ ನೋಡಿದ. ಆಮೇಲೆ ಮೆಲ್ಲನೆ ಎದ್ದು ಕೂತ. ತಾಯಿಯನ್ನು ಕುರಿತು "ಅಮ್ಮಾ, ಗಾಬರಿಪಡಬೇಡ, ಸ್ವಲ್ಪ ಹೊತ್ತು ನಾನೊಬ್ಬನೇ ಇರುವುದಕ್ಕೆ ಬಿಡು" ಎಂದು ಹೇಳಿ ಆ ಕೂಡಲೇ ತನ್ನ ಕೋಣೆಗೆ ಹೋಗಿ ಒಳಗಣಿಂದ ಅಗುಳಿ ಹಾಕಿಕೊಂಡುಬಿಟ್ಟ. ತಾಯಿ ಬಾಗಿಲ ಹೊರಗೆ ನೆಲದ ಮೇಲೆಯೆ ಕುಸಿದುಬಿದ್ದಳು. ಫಾಲ್ಗುಣಮಾಸದ ಉರಿಬಿಸಿಲು ಅವಳ ಮೈಮೇಲೆ ಬಿದ್ದಿತು. ಆಕೆ ಮುಚ್ಚಿದ ಬಾಗಿಲ ಮೇಲೆ ತನ್ನ ತಲೆಯಿಟ್ಟು ಮತ್ತೆ ಮತ್ತೆ "ಹರಲಾಲ, ಲೋ, ಹರಲಾಲ..." ಎಂದು ಕೂಗತೊಡಗಿದಳು.

ಹರಲಾಲನು ಒಳಗಣ್ಣಿಂದಲೇ "ಅಮ್ಮಾ, ಸ್ವಲ್ಪ ಹೊತ್ತಿಗೆ ನಾನು ಹೊರಗೆ ಬರುತ್ತೇನೆ, ಈಗ ನೀನು ಹೋಗು" ಎಂದ.

ತಾಯಿ ಹೋಗದೆ ಆ ಬಿಸಿಲಿನಲ್ಲೇ ಕೂತು ಜಪಮಾಡತೊಡಗಿದಳು. ಆಫೀಸಿನ ಆಳು ಬಂದು ಬಾಗಿಲನ್ನು ಬಡಿದು "ಬಾಬು, ಈಗಲೇ ಹೊರಡದೆ ಹೋದರೆ ಟ್ರೈನ್ ಸಿಗುವುದಿಲ್ಲ" ಎಂದ.

ಹರಲಾಲನು ಒಳಗಣಿಂದಲೇ "ಇವತ್ತು ಏಳು ಘಂಟೆಯ ಗಾಡಿಗೆ ಹೋಗಬೇಕಾಗಿಲ್ಲ" ಎಂದ.

"ಹಾಗಾದರೆ ಬೇರಾವ ಗಾಡಿಗೆ?" ಎಂದ ಆಳು.

"ಆಮೇಲೆ ಹೇಳುತ್ತೇನೆ, ನೀನು ಈಗ ಹೋಗು" ಎಂದುತ್ತರ ಬಂತು. ಆ ಆಫೀಸಿನ ಆಳು ತಲೆ ಅಲ್ಲಾಡಿಸಿ ಅಂಗೈಯನ್ನು ಮೇಲೂ ಕೆಳಗೂ ತಿರುವಿ ಮೆಟ್ಟಲಿಳಿದು ಕೆಳಗೆ ಬಂದ.

ಹರಲಾಲನು ಯೋಚಿಸತೊಡಗಿದ. "ಏನು ಮಾಡುವುದೀಗ? ಯಾರಿಗೆ ಹೇಳುವುದು? ಇದು ಕಳ್ಳತನ. ವೇಣುವನ್ನು ಜೈಲಿಗೆ ಕಳುಹಿಸುವುದೇ?" ಹಠಾತ್ತಾಗಿ ಆ ಒಡವೆಗಳ ವಿಷಯ ನೆನಹಿಗೆ ಬಂತು, ಅದನ್ನಿದುವರೆಗೆ ಪೂರ್ತಿಯಾಗಿ ಮರೆತುಹೋಗಿದ್ದ. ಸದ್ಯ ಪಾರಾದ ಹಾಗಾಯಿತು ಅಂದುಕೊಂಡ. ಬ್ಯಾಗನ್ನು ತೆರೆದು ನೋಡಿದ. ಅದರೊಳಗೆ ಉಂಗುರಗಳು, ಗಡಿಯಾರ, ಗುಂಡಿಗಳು, ಚೈನು ಇಷ್ಟೇ ಅಲ್ಲ. ಬಾಜೂ ಬಂದಿ, ಚಂದ್ರಹಾರ, ಬೈತಲೆ ಮಣಿ, ರತ್ನಹಾರ ಮುಂತಾದ ಇನ್ನೂ ಎಷ್ಟೋ ಬೆಲೆಯಾದ ನಗಗಳಿದ್ದುವು. ಅವೆಲ್ಲದರ ಬೆಲೆ ಮೂರು ಸಾವಿರಕ್ಕಿಂತಲೂ ಎಷ್ಟೋ ಬಾರಿ ಹೆಚ್ಚು. ಆದರೆ ಇವೂ ಕಳ್ಳಮಾಲೇ. ಇವು ಸಹ ವೇಣುವಿಗೆ ಸೇರಿದ್ದಲ್ಲ. ಈ ಹ್ಯಾಂಡ್ ಬ್ಯಾಗ್ ತನ್ನ ಮನೆಯಲ್ಲಿರುವಷ್ಟು ಹೊತ್ತೂ ಅವನಿಗೆ ಅಪಾಯವೇ.

ಹೀಗನ್ನಿಸಿದ್ದೇ ತಡ, ಹೆಚ್ಚು ನಿಧಾನ ಮಾಡದೆ ಅಧರಲಾಲನ ಹೆಸರಿಗೆ ಬರೆದಿದ್ದ ಆ ಪತ್ರ ಮತ್ತು ಆ ಬ್ಯಾಗನ್ನೂ ತೆಗೆದುಕೊಂಡು ಹರಲಾಲನು ಹೊರಗೆ ಬಂದ.

ತಾಯಿಯು ನೋಡಿ ಇನ್ನೂ ಗಾಬರಿಯಾಗಿ "ಈಗೆಲ್ಲಿ ಹೊರಟೆಯೋ, ಮತ್ತೆ, ಈಗ ತಾನೇ ಬಂದಿ?" ಎಂದಳು.

"ಅಧರಬಾಬುವಿನ ಮನೆಗೆ. ನೀನು ಬಾಗಿಲು ಹಾಕಿಕೊಂಡಿರು. ಬಂದು ಬಿಟ್ಟೆ" ಎಂದು ಅಧರಬಾಬುವಿನ ಮನೆಯ ಕಡೆ ಹೊರಡಲು ಹೆಜ್ಜೆಯಿಟ್ಟ.

ತಾಯಿಯ ಎದೆಯ ಮೇಲಿಂದ ಅರಿಯಲಾರದ ಭಯದ ದೊಡ್ಡ ಹೊರೆಯೊಂದು ಇಳಿಸಲ್ಪಟ್ಟಂತಾಯಿತು. ಆಕೆ ಹಿಂದಿನ ದಿನ ಅಧರಲಾಲನ ಎರಡನೆಯ ಮದುವೆ ಬಗ್ಗೆ ವೇಣುವಿನ ಬಾಯಲ್ಲಿ ಕೇಳಿದ್ದಳು. ಅದನ್ನು ಕೇಳಿದಾಗಲಿಂದ ತನ್ನ ಮಗನ ಮನಸ್ಸು ಸ್ಥಿರವಾಗಿಲ್ಲ. ಆಹಾ, ವೇಣುವನ್ನ ಕಂಡರೆ ಇವನಿಗೆಷ್ಟು ಪ್ರೀತಿಯೋ! "ಇವತ್ತು ಹಾಗಾದರೆ ನೀನು ಊರಿಗೆ ಹೋಗಬೇಕಾಗಿಲ್ಲವಲ್ಲ?" ಎಂದು ಕೂಗಿ ಕೇಳಿದಳು, ತಾಯಿ.

"ಊಹುಂ, ಇಲ್ಲ" ಎಂದು ಹೇಳುತ್ತಾ ಹರಲಾಲ ಆತುರಾತುರವಾಗಿ ನಡೆದುಹೋಗತೊಡಗಿದ.

ಅಧರಬಾಬುವಿನ ಮನೆಯನ್ನವನು ತಲಪುವುದಕ್ಕೆ ಮುಂಚೆಯೇ ದೂರದಿಂದ ಅವರ ಮನೆಯ ಮುಂದೆ ರಸನ್ ಚೌಕಿಯ ಓಲಗವು ಆಲೆಯಾ ರಾಗದಲ್ಲಿ, ಕರುಣಾಸ್ವರದಲ್ಲಿ, ಆಲಾಪನೆ ಊದತೊಡಗಿತ್ತು. ಆದರೆ ಹರಲಾಲನು ಬಾಗಿಲೊಳಗೆ ಹೋದೊಡನೆ ಮದುವೆಯ ಮನೆಯ ಉತ್ಸವದೊಂದಿಗೆ ಏನೋ ಒಂದು ಅಶಾಂತಿಯ ಮಂಕು ಕವಿದಂತಿರುವುದನ್ನು ಕಂಡ. ಬಾಗಿಲು ಕಾಯುವವನ ಕಾವಲು ಅತಿ ಗಡುಸಾಗಿರುವುದನ್ನು ನೋಡಿದ. ಮನೆಯೊಳಗಿನ ಆಳು ಕಾಳುಗಳ್ಯಾರೂ ಹೊರಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಎಲ್ಲರ ಮೋರೆಗಳ ಮೇಲೂ ಏನೋ ದುಗುಡ, ಏನೋ ಭಯ. ಹರಲಾಲನು ವಿಚಾರಿಸಿದ ಮೇಲೆ ತಿಳಿದುಬಂತು. ಹಿಂದಿನ ರಾತ್ರಿ ಆ ಮನೆಯಲ್ಲಿ ಸಾವಿರಾರು ರೂಪಾಯಿಗಳು ಬೆಲೆಬಾಳುವ ಆಭರಣಗಳೆಲ್ಲ ಕಳುವಾಗಿಹೋಗಿವೆ. ಇಬ್ಬರು ಮೂವರು ಆಳುಗಳ ಮೇಲೆ ಅನುಮಾನ ದೃಢವಾದದ್ದರಿಂದ ಅವರನ್ನು ಪೊಲೀಸರಿಗೊಪ್ಪಿಸುವುದಕ್ಕೆ ತಯಾರಾಗುತ್ತಿದೆ.

ಹರಲಾಲನು ಮೇಲು ಅಂತಸ್ತಿನ ವರಾಂಡಕ್ಕೆ ಹೋಗಿ ನೋಡಿದ. ಅಧರ ಬಾಬು ಹೊತ್ತಿದ ಬೆಂಕಿಯಂತೆ ಬುಸುಗುಟ್ಟುತ್ತಿದ್ದ. ಅವನ ಬಳಿ ರತೀಕಾಂತನು ತಂಬಾಕಿನ ಹೊಗೆಯೆಳೆಯುತ್ತಿದ್ದ. ಹರಲಾಲನು "ತಮ್ಮ ಜೊತೆಯಲ್ಲಿ ಸ್ವಲ್ಪ ಗುಟ್ಟಾಗಿ ಮಾತಾಡಬೇಕಾಗಿತ್ತು" ಎಂದ ಅಧರಬಾಬುವನ್ನು ಕುರಿತು. ಅಧರಬಾಬು ಅವನ ಕಡೆ ಕೆಂಡದಂಥ ನೋಟ ಬೀರುತ್ತ "ನಿನ್ನ ಜತೆಯಲ್ಲಿ ಗುಟ್ಟಾಗಿ ಮಾತಾಡುವುದಕ್ಕೆ ನನಗೆ ಸಮಯವಿಲ್ಲ. ಏನು ಹೇಳಬೇಕೋ ಇಲ್ಲೇ ಹೇಳು" ಎಂದು ಗದರಿದ. ಅವನು ಅಂದುಕೊಂಡಿದ್ದನೇನೋ–ಇಂಥಾ ಸಮಯದಲ್ಲಿ ಈ ಮಾಸ್ಟರನು ತನ್ನ

ಬಳಿ ಹಣ ಸಹಾಯಕ್ಕಾಗೋ ಇಲ್ಲವೇ ಸಾಲ ಮಾಡುವುದಕ್ಕಾಗೋ ಬಂದಿದ್ದಾನೆ ಎಂದು. ಆಗ ರತೀಕಾಂತನು "ನನ್ನೆದುರಿಗೆ ಮಾಸ್ಟರ್ ಬಾಬು ಏನಾದರೂ ಹೇಳಲು ಸಂಕೋಚವಿದ್ದರೆ ನಾನು ಬೇಕಿದ್ದರೆ ಎದ್ದು ಹೋಗುತ್ತೇನೆ" ಎಂದ.

ಅಧರಲಾಲನು ಬೇಸರದಿಂದ "ಅರೇ, ಕೂತುಕೊಳ್ಳಯ್ಯಾ,"ಎಂದ.

ಹರಲಾಲನು "ನಿನ್ನೆ ರಾತ್ರಿ ವೇಣು ನನ್ನ ಮನೆಗೆ ಬಂದು ಈ ಬ್ಯಾಗನ್ನು ಬಿಟ್ಟು ಹೋಗಿದ್ದಾನೆ" ಎಂದ.

"ಬ್ಯಾಗಿನಲ್ಲೇನಿದೆ?" ಎಂದ ಅಧರಲಾಲ. ಹರಲಾಲನು ಬ್ಯಾಗನ್ನು ತೆಗೆದು ಆತನ ಮುಂದಿಟ್ಟ.

"ಮಾಸ್ಟರೂ ಶಿಷ್ಯನೂ ಸೇರಿಕೊಂಡು ಒಳ್ಳೇ ಪಿತೂರಿ ಮಾಡಿದ್ದೀರಿ ಅಂತೂನೂ, ಈ ಕಳ್ಳಮಾಲನ್ನು ಮಾರಲಿಕ್ಕೆ ಹೋದರೆ ಎಲ್ಲಿ ಸಿಕ್ಕಿಬೀಳುತೇನೋ ಅಂದು ಈಗದನ್ನ ತಂದುಕೊಡಲಿಕ್ಕೆ ಬಂದೆಯೇನೋ? ಈ ಸಾಚಾತನದ ಸೋಗು ಹಾಕಿಕೊಂಡು ಬಂದರೆ ಇನಾಮು ಕೂಡ ಸಿಗತ್ತೆ ಅಂದುಕೊಂಡೆಯೇನೋ!" ಎಂದ ಅಧರಲಾಲ.

ಆಗ ಹರಲಾಲನು ಅವನ ಕೈಗೆ ವೇಣು ಬರೆದಿದ್ದ ಎರಡು ಪತ್ರಗಳನ್ನೂ, ಕೊಟ್ಟ. ಅವನ್ನ ಓದಿ ಅಧರಲಾಲನು ಮತ್ತೂ ಬೆಂಕಿಯಾದ.

"ನಾನೀಗಲೇ ಪೊಲೀಸರಿಗೆ ರಿಪೋರ್ಟು ಮಾಡುತ್ತೇನೆ. ನನ್ನ ಮಗ ಇನ್ನೂ ಮೆಜಾರಿಟಿಗೆ ಬಂದಿಲ್ಲ. ನೀನವನನ್ನ ಅಪಹಾರ ಮಾಡಿ ಇಂಗ್ಲೆಂಡಿಗೆ ಕಳುಹಿಸಿದ್ದಿ ಕಳ್ಳತನದಿಂದ. ಬಹುಶಃ ಐನೂರು ರೂಪಾಯಿ ಸಾಲವಾಗಿ ಕೊಟ್ಟು ಮೂರು ಸಾವಿರ ರೂಪಾಯಿ ಬರೆಸಿಕೊಂಡಿದ್ದೀಯಾ? ಈ ಸಾಲ ನಾನೆಂದಿಗೂ ತೀರಿಸುವುದಿಲ್ಲ" ಎಂದು ಹೂಂಕರಿಸಿದ.

"ನಾನು ಸಾಲ ಕೊಟ್ಟಿಲ್ಲ" ಎಂದ ಹರಲಾಲ.

"ಹಾಗಾದರೆ ಅವನಿಗೆ ದುಡ್ಡು ಸಿಕ್ಕಿದ್ದು ಹೇಗೆ? ನಿನ್ನ ಪೆಟ್ಟಿಗೆ ಒಡೆದು ಹಣ ಕದ್ದುಕೊಂಡು ಹೋದನೇನು?"

ಹರಲಾಲನು ಈ ಪ್ರಶ್ನೆಗಾವ ಉತ್ತರವನ್ನೂ ಕೊಡಲಿಲ್ಲ. ರತೀಕಾಂತನು ಮುಸಿಮುಸಿ ನಗುತ್ತ "ಅವರನ್ಯಾಕೆ ಕೇಳುತೀರಿ. ಮೂರು ಸಾವಿರವೇಕೆ ಐನೂರು ರೂಪಾಯಿ ಕೂಡ ಕಣ್ಣಿಂದ ನೋಡಿರುತಾರೆಯೆ ಅವರು?" ಎಂದ.

ಏನಾದರಾಗಲಿ, ಒಡವೆಗಳ ಕಳುವಿನ ಬಗ್ಗೆ ಆದ ಕಳವಳ ತೀರಿಹೋದರೂ ವೇಣು ಇಂಗ್ಲೆಂಡಿಗೆ ಓಡಿಹೋದ ಸುದ್ದಿ ತಿಳಿದು ಮನೆಯಲ್ಲೆಲ್ಲ ಗುಸು ಗುಂಪುಲು ಆರಂಭವಾಯಿತು. ಹರಲಾಲನು ಅಪರಾಧದ ಹೊರೆಯನ್ನೆಲ್ಲ ತನ್ನ ತಲೆಯ ಮೇಲೆ ಹೊತ್ತುಕೊಂಡು ಆ ಮನೆಯಿಂದ ಹೇಗೋ ಹೊರಬಿದ್ದ.

ರಸ್ತೆಯೊಳಗೆ ಬಂದೊಡನೆ ಮನಸ್ಸು ಜಿಡ್ಡು ಕಟ್ಟಿದಂತಾಗಿ ಹೋಯಿತು. ಹೆದರಿಕೊಳ್ಳುವುದಕ್ಕಾಗಲಿ, ಚಿಂತೆಮಾಡುವುದಕ್ಕಾಗಲಿ ಶಕ್ತಿಯಿರಲಿಲ್ಲ. ಈ ಘಟನೆಯ ಪರಿಣಾಮವೇನಾದೀತೆಂಬ ಯೋಚನೆ ಮಾಡುವುದಕ್ಕೂ ಇಷ್ಟವಾಗಲಿಲ್ಲ.

ತನ್ನ ಓಣಿಯನ್ನು ಪ್ರವೇಶ ಮಾಡಿದೊಡನೆ ಅವನಿಗೆ ಕಂಡುಬಂತು. ಅವನ ಮನೆಯ ಮುಂದೆಯೇ ಗಾಡಿಯೊಂದು ನಿಂತಿದೆ. ಹಠಾತ್ತಾಗಿ ಅವನ ತಲೆಯಲ್ಲೊಂದು ಆಸೆ ಹುಟ್ಟಿಕೊಂಡಿತು. ಓ ವೇಣುವೇನಾದರೂ ವಾಪಸು ಬಂದುಬಿಟ್ಟಿದಾನೇನೋ! ಖಂಡಿತ ವೇಣುವೇ ಇರಬೇಕು. ಅವನ ವಿಪತ್ತು ಅಷ್ಟು ಪೂರ್ತಿಯಾಗಿ, ನಿರುಪಾಯದವಸ್ಥೆಯವರೆಗೂ ಏರಿ ನಿಲ್ಲುತ್ತದೆಂದು ಅವನೆಂದೂ ನಂಬಲಾರ.

ಆತುರದಿಂದ ಅವನು ಗಾಡಿಯ ಹತ್ತಿರ ಬಂದು ನೋಡಿದ. ಗಾಡಿಯೊಳಗೆ ಅವನ ಆಫೀಸಿನ ಸಾಹೇಬನೊಬ್ಬ ಕೂತುಕೊಂಡಿದ್ದ. ಸಾಹೇಬನು ಹರಲಾಲನನ್ನ ನೋಡಿದೊಡನೆ ಗಾಡಿಯಿಂದಿಳಿದು ಅವನ ಕೈಹಿಡಿದುಕೊಂಡು ಮನೆಯೊಳಗೆ ಬಂದ. ಆಮೇಲೆ ಹರಲಾಲನನ್ನ ಕುರಿತು "ಇವತ್ತೇಕೆ moffussil (ತಾಲ್ಲೂಕು)ಗೆ ಹೊರಡಲಿಲ್ಲ?" ಎಂದು ಕೇಳಿದ.

ಆಫೀಸಿನ ಆಳೆಲ್ಲೋ ಅನುಮಾನದಿಂದ ದೊಡ್ಡ ಸಾಹೇಬನಿಗೆ ಹೋಗಿ ತಿಳಿಸಿದ್ದಾನೆ. ದೊಡ್ಡ ಸಾಹೇಬ ಹೋಗಿ ನೋಡಿಕೊಂಡು ಬಾರೆಂದು ಈ ಚಿಕ್ಕ ಸಾಹೇಬನನ್ನ ಕಳುಹಿಸಿದ್ದಾನೆ.

ಆಗ ಹರಲಾಲನು "ಮೂರುಸಾವಿರ ರೂಪಾಯಿಗಳ ನೋಟುಗಳು ಪತ್ತೆ ಇಲ್ಲ" ಎಂದ.

"ಎಲ್ಲಿ ಹೋದುವು?" ಎಂದು ಕೇಳಿದ ಸಾಹೇಬ.

"ಗೊತ್ತಿಲ್ಲ" ಎಂದು ಹೇಳುವಷ್ಟು ಕೂಡ ಮಾತು ಬರಲಾಗಲಿಲ್ಲ ಹರಲಾಲನ ಬಾಯಿಂದ. ಸುಮ್ಮನೆಯಿದ್ದುಬಿಟ್ಟ.

ಸಾಹೇಬನಾಗ "ಎಲ್ಲಿ ದುಡ್ಡೆಲ್ಲಿಟ್ಟಿದೀಯೋ ನೋಡೋಣ, ನಡಿ" ಎಂದ.

ಹರಲಾಲನವನನ್ನ ಮೇಲಿನ ಕೊಠಡಿಗೆ ಕರೆದುಕೊಂಡು ಹೋದ. ಸಾಹೇಬನಲ್ಲಿದ್ದ ಹಣವನ್ನೆಲ್ಲ ಎಣಿಸಿ ನಾಲ್ಕೂ ಕಡೆ ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಕೋಣೆಯ ಸಾಮಾನುಗಳನ್ನೆಲ್ಲ ತಲೆಕೆಳಗುಮಾಡಿ ಉರುಳಿಸಿ, ಎಲ್ಲೆಲ್ಲಿ ಸಂದಿ, ಮೂಲೆಗಳಿವೆಯೋ ಅಲ್ಲೆಲ್ಲಾ ಹುಡುಕಿದ. ಇಷ್ಟೆಲ್ಲಾ ನಡೆಯುತ್ತಿರುವಾಗ ತಾಯಿಯದನ್ನ ನೋಡುತ್ತ ಸುಮ್ಮನಿರಲಾಗಲಿಲ್ಲ. ಆಕೆ ಸಾಹೇಬನ ಎದುರಿಗೆ ಬಂದು ನಿಂತು ವ್ಯಾಕುಲದಿಂದ "ಲೋ, ಹರಲಾಲ, ಏನಾಗಿದೆಯೋ?" ಎಂದು ಕೇಳಿದಳು.

"ರೂಪಾಯಿ ಕಳುವಾಗಿದೆಯಮ್ಮಾ" ಎಂದ ಹರಲಾಲ.

"ಅದು ಹೇಗೋ ಕಳುವಾಗತ್ತೆ ರೂಪಾಯಿ? ಹರಲಾಲ, ಇಂಥ ಮನೆಹಾಳು ಕೆಲಸ ಯಾವನೋ ಮಾಡಿದ?" ಎಂದಳು ತಾಯಿ.

ಆಗ ಹರಲಾಲ "ಸಾಕು, ಸುಮ್ಮನಿರಮ್ಮ ಇನ್ನು" ಎಂದ.

ತನಿಖೆಯನ್ನು ಪೂರೈಸಿ ಸಾಹೇಬನು "ಈ ಕೋಣೆಯಲ್ಲಿ ರಾತ್ರಿ ಯಾರಿದ್ದರು? ಎಂದು ಕೇಳಿದ.

ಅದಕ್ಕೆ ಹರಲಾಲ "ಬಾಗಿಲನ್ನು ಮುಚ್ಚಿಕೊಂಡು ನಾನೊಬ್ಬನೇ ಮಲಗಿದ್ದೆ ಕೋಣೆಯಲ್ಲಿ. ಬೇರೆ ಯಾರೂ ಇರಲಿಲ್ಲ" ಎಂದ.

ಸಾಹೇಬನು ಹಣದ ಪೆಟ್ಟಿಗೆಯನ್ನು ಗಾಡಿಯೊಳಗೆ ತೆಗೆದಿಟ್ಟು ಹರಲಾಲನನ್ನು ಕಂಡು "ಸರಿ, ಹಾಗಾದರೆ, ದೊಡ್ಡ ಸಾಹೇಬರ ಹತ್ತಿರ ಹೋಗೋಣ, ನಡಿ" ಎಂದ.

ಹರಲಾಲನು ಸಾಹೇಬನ ಸಂಗಡ ಹೊರಡುವುದನ್ನ ಕಂಡು ತಾಯಿ ಅವನ ದಾರಿಗಡ್ಡ ನಿಂತು "ಸಾಹೇಬರೆ, ನನ್ನ ಮಗನನ್ನ ಎಲ್ಲಿಗೆ ಕರೆದುಕೊಂಡು ಹೋಗುತ್ತೀರಿ? ನಾನು ಹೊಟ್ಟೆಗೆ ತಿನ್ನದೆ ಈ ಹುಡುಗನನ್ನ ಬೆಳಸಿದ್ದೇನೆ. ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗ ಎಂದಿಗೂ ಪರರ ದ್ರವ್ಯದ ಮೇಲೆ ಕೈ ಹಾಕುವವನಲ್ಲ" ಎಂದು ಅಂಗಲಾಚಿದಳು.

ಸಾಹೇಬನು ಆಕೆಯ ಬಂಗಾಳಿಯ ಮಾತನ್ನು ಸ್ವಲ್ಪವೂ ಅರ್ಥಮಾಡಿಕೊಳ್ಳದೆ "ಅಚ್ಛಾ, ಅಚ್ಛಾ" ಎಂದನು.

ಹರಲಾಲನು "ಅಮ್ಮಾ, ನೀನ್ಯಾಕಮ್ಮಾ ಸುಮ್ಮನೆ ಗಾಬರಿಪಡುತೀಯ? ದೊಡ್ಡ ಸಾಹೇಬರನ್ನ ನೋಡಿಕೊಂಡು ನಾನು ಬೇಗಲೇ ಬಂದುಬಿಡುತ್ತೇನೆ" ಎಂದ.

ತಾಯಿ ದುಗುಡದಿಂದ "ನೀನು ಬೆಳಗಿನಿಂದ ಹೊಟ್ಟೆಗೇನೂ ಹಾಕಿಲ್ಲ ವಲ್ಲೋ!" ಎಂದಳು.

ಆ ಮಾತಿಗಾವ ಉತ್ತರವನ್ನೂ ಕೊಡದೆ ಹರಲಾಲನು ಗಾಡಿಯನ್ನು ಹತ್ತಿ ಹೊರಟುಹೋದ. ತಾಯಿ ನೆಲದ ಮೇಲೆ ಬೋರಲಾಗಿ ಬಿದ್ದುಕೊಂಡಿದ್ದಳು. ದೊಡ್ಡ ಸಾಹೇಬನು ಹರಲಾಲನನ್ನ ಕಂಡು "ಇದ್ದದ್ದು ಇದ್ದಹಾಗೆ ಹೇಳಿಬಿಡು. ಏನಾಯಿತು ಹಣ?" ಎಂದು ಕೇಳಿದ.

"ನಾನು ಹಣವನ್ನ ತೆಗೆದುಕೊಂಡಿಲ್ಲ" ಎಂದ ಹರಲಾಲ.

"ಆ ಮಾತನ್ನ ನಾನೇನೋ ಪೂರ್ತಿಯಾಗಿ ನಂಬುತ್ತೇನೆ. ಆದರೆ ಏಂಡಿತವಾಗಿ ನಿನಗೆ ಗೊತ್ತಿಲ್ಲವೇ, ಹಣ ಯಾರು ಕದ್ದಿದ್ದಾರೆ ಅಂತ?"

ಹರಲಾಲನು ಆ ಮಾತಿಗೆ ಉತ್ತರಕೊಡದೆ ತಲೆತಗ್ಗಿಸಿಕೊಂಡು ಕೂತಿದ್ದ.

"ನಿನಗೆ ತಿಳಿದ ಹಾಗೆ ಈ ಹಣ ಯಾರು ತೆಗೆದುಕೊಂಡು ಹೋಗಿದ್ದಾರೆ?" ಎಂದು ಪುನಃ ಕೇಳಿದ ಸಾಹೇಬ.

"ನನ್ನ ಪ್ರಾಣವಿರುವವರೆಗೆ ನನಗೆ ತಿಳಿದಹಾಗೆಯೇ ಈ ಹಣ ಯಾರೂ ತೆಗೆದುಕೊಂಡು ಹೋಗಲಾರರು" ಎಂದುತ್ತರಿಸಿದ ಹರಲಾಲ.

ದೊಡ್ಡ ಸಾಹೇಬನಾಗ "ನೋಡು, ಹರಲಾಲ, ನಾನು ನಿನ್ನ ಮೇಲೆ ನಂಬಿಕೆಯಿಟ್ಟು ಯಾವ ಜಾಮೀನನ್ನೂ ತೆಗೆದುಕೊಳ್ಳದೆ ಇಂತಹ ಜವಾಬುದಾರಿಯ ಕೆಲಸವನ್ನ ನಿನಗೆ ಒಪ್ಪಿಸಿದ್ದೆ. ಆಫೀಸಿನ ಇತರರೆಲ್ಲರ ವಿರೋಧವನ್ನೂ ಎದುರಿಸಿ. ಮೂರುಸಾವಿರ ರೂಪಾಯಿ ಅಂತಹದೇನೂ ದೊಡ್ಡ ಹಣವಲ್ಲ. ಆದರೆ ನಿನ್ನಿಂದ ನಾನೀಗ ಎಲ್ಲರ ಮುಂದೆ ಮುಖ ತಗ್ಗಿಸಿಕೊಳ್ಳಬೇಕಾಗಿದೆ. ಇವತ್ತು ಇಡೀ ದಿನ ನಿನಗೆ ಅವಕಾಶ ಕೊಡುತ್ತೇನೆ. ಹೇಗಾದರೂ ಮಾಡಿ ಹಣವನ್ನು ಕೂಡಿಸಿ ತಾ. ಹಾಗೆ ಮಾಡಿದರೆ ಈ ವಿಷಯವಾಗಿ ನಾನು ಯಾರ ಮುಂದೆಯೂ ಈ ಮಾತೆತ್ತುವುದಿಲ್ಲ. ನೀನು ಮೊದಲು ಹೇಗೆ ಕೆಲಸ ಮಾಡುತ್ತಿದ್ದೆಯೋ ಹಾಗೇ ಮಾಡಿಕೊಂಡು ಹೋಗು" ಎಂದ.

ಹೀಗೆ ಹೇಳಿ ಸಾಹೇಬ ಎದ್ದು ಹೊರಟುಹೋದ. ಆಗ ಸಮಯ ಹನ್ನೊಂದು ಘಂಟೆ. ಹರಲಾಲನು ತಲೆಬಾಗಿಸಿಕೊಂಡು ಹೊರಟದ್ದನ್ನು ಕಂಡು ಆಫೀಸಿನ ಉಳಿದ ಗುಮಾಸ್ತೆಯರೆಲ್ಲರಿಗೂ ಬಹಳ ಸಂತೋಷವಾಗಿಹೋಯಿತು. ಅವರೆಲ್ಲ ಹರಲಾಲನು ಹಾಳಾದ ವಿಷಯವಾಗಿ ಮಾತಾಡಿಕೊಳ್ಳತೊಡಗಿದರು.

ಹರಲಾಲನಿಗೆ ಒಂದು ದಿನದ ಅವಧಿಯೇನೋ ಸಿಕ್ಕಿತ್ತು. ಮತ್ತೊಂದು ದೀರ್ಘವಾದ ದಿನ, ನಿರಾಸೆಯ ಅರ್ಧಪಾತಾಳದ ಕೊಚ್ಚೆಯನ್ನು ಕೆದರಿ ನೋಡುವ ಅವಕಾಶ.

ದಾರಿಯೇನು? ದಾರಿಯೇನು? ದಾರಿಯೇನು? ಎಂದು ಒಂದೇ ಮಾತನ್ನು ಯೋಚಿಸುತ್ತ, ಯೋಚಿಸುತ್ತ ಆ ಉರಿಬಿಸಿಲಲ್ಲಿ ಹರಲಾಲನು ಬೀದಿ, ಬೀದಿ ಸುತ್ತಾಡುತ್ತ ಕಾಲ ಕಳೆದ. ಕಡೆಗೆ ದಾರಿಯಿದೆಯೋ ಇಲ್ಲವೋ ಎಂಬ ಯೋಚನೆ ಕೂಡ ನಿಂತುಹೋಯಿತು. ಆದರೆ ಕಾರಣವಿಲ್ಲದೆ ಬೀದಿ ಬೀದಿ ಅಲೆಯುವುದು ಮಾತ್ರ ನಿಲ್ಲಲಿಲ್ಲ.

ಲಕ್ಷಾವಧಿ ಜನರ ಆಶ್ರಯಸ್ಥಾನವಾಗಿದ್ದ ಕಲಿಕತ್ತೆಯ ಷಹರು ಒಂದು ಕ್ಷಣದಲ್ಲಿ ಹರಲಾಲನ ಪಾಲಿಗೆ ಒಂದು ಪ್ರಚಂಡವಾದ ಜೀವ ಹಿಂಡುವ ನೋವಿನ ಯಂತ್ರವಾಗಿ ಹೋಯಿತು. ಈ ಚಕ್ರವ್ಯೂಹದಿಂದ ದಾಟಿಹೋಗಲು ದಾರಿಯೇ ಇಲ್ಲ ಎಲ್ಲೂ. ಈ ಒಟ್ಟು ಜನ ಸಮಾಜವು ಈ ಅತಿ ಸಾಮಾನ್ಯನಾದ ಹರಲಾಲನನ್ನು ನಾಲ್ಕೂ ಕಡೆಯಿಂದ ಸುತ್ತಿ ಅಡ್ಡ ನಿಂತಿದೆ. ಯಾರೂ ಅವನನ್ನು ಅರಿತಿಲ್ಲ. ಅವನ ಬಗ್ಗೆ ಯಾರ ಮನಸ್ಸಿನಲ್ಲೂ ವೈರವಿಲ್ಲ. ಆದರೆ ಪ್ರತಿಯೊಬ್ಬ ವ್ಯಕ್ತಿಯೂ ಅವನಿಗೆ ಆಜನ್ಮ ಶತ್ರುವಿರುವಂತೆ ಅನ್ನಿಸುತ್ತದೆ. ಹಾಗಿದ್ದರೂ ಹಾದಿಹೋಕರು ಅವನ ಮೈಗೆ ತಾಗುವಂತೆ

ಅವನ ಅಕ್ಕಪಕ್ಕದಲ್ಲಿ ಓಡಾಡುತ್ತಿದ್ದಾರೆ. ಅಲ್ಲಲ್ಲಿ ಆಫೀಸುಗಳಿಗೆ ಹೋಗುವ ಕೆಲಸಗಾರರು ಹೊರಗೆ ಬಂದು ಕಾಗದದ ಪೊಟ್ಟಣಗಳಲ್ಲಿ ತಂದ ತಿಂಡಿ, ಫಲಾಹಾರಗಳನ್ನು ಕಬಳಿಸಿ ನೀರು ಕುಡಿಯುತ್ತಾ ಇದಾರೆ. ಅವನ ಕಡೆ ಯಾರೂ ಕಣ್ಣು ಹಾಯಿಸುವುದಿಲ್ಲ. ಆಟದ ಬಯಲಿನ ಒಂದು ಕೊನೆಯಲ್ಲಿ, ದಣಿದ ದಾರಿಹೋಕನೊಬ್ಬ ತಲೆಯ ಕೆಳಗೆ ಕೈಯಿಟ್ಟುಕೊಂಡು ಒಂದು ಕಾಲಮೇಲೆ ಮತ್ತೊಂದು ಕಾಲುಹಾಕಿ ಮರದ ಬುಡಕ್ಕೆ ಮೈ ಒರಗಿಸಿ ನಿದ್ದೆ ಮಾಡುತ್ತಿದ್ದಾನೆ. ಒಂದು ಗಾಡಿಯ ತುಂಬ ಕೂತು ಮಾರವಾಡಿ ಹೆಣ್ಣು ಮಕ್ಕಳು ಕಾಳೀಘಾಟಿಗೆ ಹೊರಟಿದ್ದಾರೆ. ಯಾವುದೋ ಆಫೀಸಿನ ಒಬ್ಬ ಚಾಕರ ಬಂದು ಒಂದು ಪತ್ರ ಹರಲಾಲನ ಮುಖಕ್ಕೆ ಹಿಡಿದು "ಬಾಬು, ಇದರ ಅಡ್ರೆಸ್ ಸ್ವಲ್ಪ ನೋಡಿ" ಎಂದು ಕೇಳುತ್ತಾನೆ. ಅವನಿಗೂ ಬೇರಾವ ದಾರಿಹೋಕರಿಗೂ ಯಾವ ವ್ಯತ್ಯಾಸವೂ ಇಲ್ಲ ಅವನ ದೃಷ್ಟಿಯಲ್ಲಿ. ಹರಲಾಲನೇನೋ ಅಡ್ರೆಸ್ ಓದಿ ಹೇಳಿ ಅವನಿಗೆ ತಿಳಿಸಿದ. ಬರಬರುತ್ತ ಆಫೀಸುಗಳೆಲ್ಲ ಮುಚ್ಚುವ ಹೊತ್ತಾಗುತ್ತ ಬಂತು. ಮನೆಯ ಕಡೆ ತಿರುಗಿದ ಗಾಡಿಗಳು, ಆಫೀಸಿನ ಕಟ್ಟಡಗಳ ಬೇರೆ ಬೇರೆ ದಾರಿಗಳಿಂದ ಹೊರಗೆ ಹೊರಟು ಬಂದುವು. ಕಛೇರಿಯ ನೌಕರರು ಟ್ರಾಂಗಾಡಿಯ ತುಂಬ ತುಂಬಿ, ನಾಟಕ ಶಾಲೆಗಳ ಜಾಹಿರಾತು ಪಟಗಳನ್ನೋದುತ್ತ ಓದುತ್ತ ತಂತಮ್ಮ ಮನೆಗಳಿಗೆ ಹೊರಟರು. ಇವತ್ತಿನಿಂದ ಹರಲಾಲನಿಗೆ ಆಫೀಸಿಲ್ಲ, ಆಫೀಸಿನ ವಿರಾಮವೂ ಇಲ್ಲ. ತನ್ನ ಮನೆಗೆ ಮರಳುವ ಸಲುವಾಗಿ ಓಡಿ ಟ್ರಾಂ ಗಾಡಿಯನ್ನು ಹಿಡಿಯಬೇಕಾದ ಅವಸರವೂ ಇಲ್ಲ. ಷಹರಿನ ಕ್ರಿಯಾಕರ್ಮಗಳೆಲ್ಲವೂ, ಆ ಸಾಲುಮನೆಗಳೂ, ಉನ್ನತವಾದ ಸೌಧಗಳೂ, ಗಾಡಿ, ಟ್ರಾಮುಗಳೂ, ಅವುಗಳ ಮತ್ತು ಜನರ ಓಡಾಟಗಳೂ, ಹರಲಾಲನಿಗೊಂದೊಂದು ಸಲ ಕರಾಳ ಸತ್ಯದ ಹಾಗೆ ಹಲ್ಲು ಕಿರಿಯುತ್ತಿರುವಂತೆ ತೋರಿತು. ಒಂದೊಂದು ಸಲ ಅವು ಸತ್ತ್ವಹೀನ ಕನಸಂತೆ ಕೇವಲ ನೆರಳಾಗಿ ಕಾಣುತ್ತವೆ. ಹೊಟ್ಟೆಗೆ ಅನ್ನವಿಲ್ಲ, ವಿಶ್ರಾಂತಿಯಿಲ್ಲ, ಆಸರೆಯಿಲ್ಲ. ಹರಲಾಲನ ದಿನ ಹೇಗೆ ಕಳೆದುಹೋಯಿತೋ ಅವನಿಗೇ ಗೊತ್ತಾಗಲಿಲ್ಲ. ಬೀದಿ ಬೀದಿಗಳಲ್ಲಿ ಗ್ಯಾಸ್ ದೀಪ ಉರಿಯತೊಡಗಿದುವು. ಮಬ್ಬು ಮೈಯೆಲ್ಲಾ ಕಣ್ಣಾಗಿ, ಹತ್ತು ದಿಕ್ಕುಗಳಲ್ಲೂ ತನ್ನ ಸಾವಿರಾರು ಕ್ರೂರ ಕಣ್ಣುಗಳನ್ನ ತೆರೆದು ಆಹುತಿಗೆ ಕಾಯುತ್ತಿರುವ ದೈತ್ಯನಂತೆ ಹೊಂಚುಕಾಯುತ್ತ ಕೂತಿರುವಂತೆ ಅನ್ನಿಸಿತು. ರಾತ್ರಿ ಎಷ್ಟು ಹೊತ್ತಾಗಿದೆ ಎಂಬುದನ್ನು ಹರಲಾಲ ಯೋಚಿಸಲೇ ಇಲ್ಲ. ಅವನ ಹಣೆಯ ಮೇಲಣ ನರಗಳು ಸುಮ್ಮನೆ ಅದುರತೊಡಗಿದುವು. ಮೆದುಳು ಸಿಡಿದುಹೋಗುವ ಹಾಗಿತ್ತು. ಮೈಯೊಳಗೆಲ್ಲಾ ಸುಮ್ಮನೆ ಉರಿ. ಕಾಲುಗಳಂತೂ ಇನ್ನು ಹೆಜ್ಜೆ ಹಾಕುವುದಕ್ಕೇ ಸಾಧ್ಯವಿಲ್ಲವೆನ್ನುತ್ತಿವೆ. ಇಡೀ ದಿನ ಒಂದಾದಮೇಲೊಂದು ನಡೆದ ಭಯಂಕರ ಘಟನೆಗಳು, ಅವುಗಳಿಂದಾದ ಸಂಕಟ, ಗ್ಲಾನಿ, ನಿರಾಹಾರ

ಮತ್ತು ಬಳಲಿಕೆಗಳಿಂದಾದ ಜಡತೆ ಅವನನ್ನು ಹಿಂಡಿಹಾಕಿಬಿಟ್ಟವೆ. ಇಂಥ ಅವಸ್ಥೆಯಲ್ಲಿ ಆಗಾಗ ಅವನ ತಾಯಿಯ ನೆನಪು ಅವನ ಮನಸ್ಸಿಗೆ ಬಂದಿದೆ. ಕಲಿಕತ್ತೆಯ ಲೆಕ್ಕವಿಲ್ಲದಷ್ಟು ಜನಸಂದಣಿಯಲ್ಲಿ ಕೇವಲ ಈ ಒಂದು ವ್ಯಕ್ತಿಯ ನೆನಪು, ಒಂದು ಹೆಸರು ಮಾತ್ರ ಅವನ ಒಣಗಿಹೋದ ಕೊರಳನ್ನು ಭೇದಿಸಿ ಬಾಯಲ್ಲಿ ಬಂದಿತ್ತು. ಅಮ್ಮಾ...ಅಮ್ಮಾ...ಅಮ್ಮಾ – ಅವಳನ್ನು ಬಿಟ್ಟು ಕರೆಯಬೇಕೆಂದರೆ ಬೇರಾರಿದ್ದಾರೆ? ಆಗೆಂದುಕೊಡ. ರಾತ್ರಿ ಹೆಚ್ಚು ನಿಬಿಡವಾಗುತ್ತ ಬಂದ ಮೇಲೆ, ಆಗ ಈ ಅತಿ ಸಾಮಾನ್ಯನಾದ ಹರಲಾಲನನ್ನು, ಯಾವ ತಪ್ಪೂ ಅರಿಯದಿದ್ದವನನ್ನು ಅವಮಾನ ಮಾಡುವುದಕ್ಕೆ ಯಾರೂ ಎಚ್ಚರವಾಗಿರುವುದಿಲ್ಲ...ಆ ಸಮಯದಲ್ಲಿ ಅವನು ಸುಮ್ಮನೆ ಹೋಗಿ ಅಮ್ಮನ ಕಾಲ ಬಳಿ ಮಲಗಿಕೊಂಡುಬಿಡುವುದು. ಮಲಗಿ ನಿದ್ದೆಮಾಡಿ ಬಿಟ್ಟರೆ ಇನ್ನು ಎಚ್ಚರವಾಗಬೇಕಾಗೇ ಇಲ್ಲ. ಎಚ್ಚರವಾಗಲೇ ಕೂಡದು.

ಅಮ್ಮನ ಎದುರಿನಲ್ಲಿ ಪೊಲೀಸಿನವರಾಗಲಿ, ಮತ್ತೆ ಯಾರೇ ಆಗಲಿ ಅವನನ್ನು ಅವಮಾನ ಮಾಡಲು ಬರಬಹುದೆಂಬ ಭಯದಿಂದಲೇ ಅವನಿದುವರೆಗೆ ಮನೆಗೆ ಹೋಗಲು ಹಿಂಜರಿಯುತ್ತಿದ್ದ. ಮೈ ಭಾರವನ್ನು ಇನ್ನು ತಡೆಯಲು ಸಾಧ್ಯವಿಲ್ಲ ಅನ್ನಿಸುವಷ್ಟು ಹೊತ್ತಿಗೆ ಸರಿಯಾಗಿ ಎದುರಿಗೊಂದು ಬಾಡಿಗೆ ಗಾಡಿ ಬಂತು. ತತ್‌ಕ್ಷಣ ಅದನ್ನು ಹತ್ತಿರ ಕರೆದ. ಗಾಡಿಯವನು "ಎಲ್ಲಿಗೆ ಹೋಗಬೇಕು?" ಎಂದು ಕೇಳಿದ.

ಹರಲಾಲನು "ಎಲ್ಲಿಗೂ ಇಲ್ಲ. ಈ ಮೈದಾನದ ರಸ್ತೆಯಲ್ಲೇ ಸ್ವಲ್ಪ ಹೊತ್ತು ಗಾಳಿ ಸೇವನೆಮಾಡುತ್ತ ಸುತ್ತಾಡುತ್ತೇನೆ" ಎಂದ.

ಗಾಡಿಯವನು ಅನುಮಾನದಿಂದ ಹೋಗುತ್ತಿರುವಾಗ ಹರಲಾಲನು ಅವನ ಕೈಯಲ್ಲಿ ಒಂದು ರೂಪಾಯನ್ನು ಮುಂಗಡವಾಗಿ ಇಟ್ಟು "ಗಾಡಿ ಹೊಡೆಯುತ್ತೀಯಾ?" ಎಂದ. ಅವನು ಸಮ್ಮತಿಸುತ್ತಲೂ ಹರಲಾಲನು ಹತ್ತಿ ಕೂತ. ಆ ಗಾಡಿ ಹರಲಾಲನನ್ನು ಕೂಡಿಸಿಕೊಂಡು ಮೈದಾನದ ರಸ್ತೆಯ ಸುತ್ತಲು ಓಡಾಡತೊಡಗಿತು.

ಆಗ ಅತ್ಯಂತವಾಗಿ ಬಳಲಿ, ನೊಂದ ಆ ಹರಲಾಲ ತನ್ನ ಸುಡುವ ತಲೆಯನ್ನು ತೆರೆದ ಕಿಟಕಿಯ ಮೇಲಿಟ್ಟು ಕಣ್ಣು ಮುಚ್ಚಿದ. ಸ್ವಲ್ಪ ಸ್ವಲ್ಪವಾಗಿ ಅವನ ವೇದನೆ ಕಡಿಮೆಯಾಗುತ್ತ ಬಂತು. ಮೈ ಸ್ವಲ್ಪ ಹಗುರವಾಗುತ್ತ ಬಂತು. ತಣ್ಣಗಾಗುತ್ತ ಬಂತು. ಮನಸ್ಸಿನೊಳಗೆ ಗಾಢವಾದೊಂದು ಆನಂದ ತುಂಬಿದ ಶಾಂತಿ, ನೆಮ್ಮದಿಯ ಭಾವನೆ ತುಂಬುತ್ತ ಬಂತು. ಯಾವುದೋ ಒಂದು ದೊಡ್ಡತರಹದ ರಕ್ಷಿಸುವ ಶಕ್ತಿ ಅವನನ್ನು ನಾಲ್ಕೂ ಕಡೆಗಳಿಂದ ತಬ್ಬಿ ಹಿಡಿದುಕೊಳ್ಳುವಂತೆ ತೋರಿತು. ಅವನು ಆ ಇಡೀ ದಿನ ತನಗಿನ್ನು ಎಲ್ಲೂ ಯಾವ ದಾರಿಯೂ ಇಲ್ಲ, ಬೆಂಬಲವಿಲ್ಲ, ಬಿಡುಗಡೆ, ಆಸರೆಗಳಿಲ್ಲ; ತನ್ನ ದುಃಖಕ್ಕೆ, ಅವಮಾನಕ್ಕೆ ಕೊನೆಯೇ ಇಲ್ಲ ಎಂದು ತಿಳಿದುಕೊಂಡಿದ್ದ.

ಆ ಮಾತು ಈಗ ಒಂದು ಕ್ಷಣದಲ್ಲಿ ಸುಳ್ಳಾಗಿಹೋಯಿತು. ಅದೆಲ್ಲ ಕೇವಲ ವೃಥಾ ಹೆದರಿಕೆ, ನಿಜವಲ್ಲ, ಎಂದು ಈಗ ತೋರಿತು.

ಯಾವುದು ಅವನ ಬದುಕನ್ನಿದುವರೆಗೆ ತನ್ನ ವಜ್ರಮುಷ್ಟಿಯಲ್ಲಿ ಹಿಡಿದು ಹಿಸುಕಿಹಾಕುತ್ತಿತ್ತೋ ಅದನ್ನು ಈಗ ಅವನು ಒಪ್ಪಲಿಲ್ಲ. ಅದನ್ನೀಗ ಪೂರ್ತಿಯಾಗಿ ನಿರ್ಲಕ್ಷಿಸಬಲ್ಲವನಾದ. ಮುಕ್ತಿ ಎಂಬುದೀಗ ಇಡೀ ಅನಂತ ಆಕಾಶದಲ್ಲಿ ಹರಡಿಕೊಂಡಿದೆ. ಶಾಂತಿಗೆ ಮೇರೆಯೇ ಇಲ್ಲ. ಈ ಅತಿ ಸಾಮಾನ್ಯ ಹರಲಾಲನನ್ನು ವೇದನೆಯ ನಡುವೆ, ಅವಮಾನ ಅವಹೇಳನದ ನಡುವೆ, ಅನ್ಯಾಯದ ನಡುವೆ ಕಟ್ಟಿಹಾಕಿಡಬಲ್ಲ ಶಕ್ತಿ ಈ ಬ್ರಹ್ಮಾಂಡದಲ್ಲಿ ಯಾವ ರಾಜ, ಮಹಾರಾಜನಿಗೂ ಇಲ್ಲ. ಯಾವ ಆತಂಕ, ನಿರ್ಬಂಧಗಳಿಂದ ಅವನು ತನ್ನನ್ನೇ ಕಟ್ಟಿಹಾಕಿಕೊಂಡಿದ್ದನೋ ಆ ಹಗ್ಗಗಳೆಲ್ಲಾ ಬಿಚ್ಚಿಹೋದುವು. ಆಗ ಅವನ ಬಂಧನದಿಂದ ಬಿಡುಗಡೆಹೊಂದಿದ ಹೃದಯದ ನಾಲ್ಕೂ ಕಡೆಯ ಆಕಾಶದಲ್ಲಿ ಹರಲಾಲನಿಗೆ ಅನುಭವವಾಗತೊಡಗಿತು. ಅವನ ಆ ಮುದಿ, ದರಿದ್ರ ತಾಯಿ ನೋಡನೋಡುತ್ತಿರುವ ಹಾಗೆ ಬೆಳೆದು ಬೆಳೆದು ವಿರಾಟ ಆಕಾರದಲ್ಲಿ ಆ ಮಬ್ಬು ತುಂಬಿದ ರಾತ್ರಿಯನ್ನೆಲ್ಲ ವ್ಯಾಪಿಸಿಕೊಂಡು ಕೂತಿದ್ದಾಳೆ. ಆಕೆ ಎಲ್ಲೂ ಹಿಡಿಸಲಾಗದಂತೆ ಆಗಿದ್ದಾಳೆ. ಕಲಿಕತ್ತೆಯ ರಾಜಬೀದಿ, ನದೀಘಟ್ಟ ಅಂತಸ್ತಿನ ಸೌಧಗಳು, ಪೇಟೆ, ಅಂಗಡಿಗಳು ಎಲ್ಲವೂ ಸ್ವಲ್ಪ ಸ್ವಲ್ಪವಾಗಿ, ಕ್ರಮೇಣ ಅವಳೊಳಗೆ ಹೋಗಿ ಮಾಯವಾಗಿಬಿಡುತ್ತಿವೆ. ಗಾಳಿ ತುಂಬಿ ಹೋಗುತ್ತಿದೆ, ಆಕಾಶ ತುಂಬಿಹೋಯಿತು, ಒಂದೊಂದಾಗಿ ನಕ್ಷತ್ರಗಳೂ ಆಕೆಯಲ್ಲಿ ಲೀನವಾಗಿ ಹೋದುವು. ಹರಲಾಲನ ಮೈ, ಮನಸ್ಸಿನ ನೋವೆಲ್ಲ, ಚಿಂತೆಯೆಲ್ಲ, ಭಯವೆಲ್ಲ, ಚೇತನವೆಲ್ಲ ಆ ಮಹಾತಾಯಿಯಲ್ಲಿ ಸ್ವಲ್ಪ ಸ್ವಲ್ಪವಾಗಿ ಸೇರಿ ಕ್ರಮೇಣ ನಿಶ್ಶೇಷವಾಗಿ ಹೋದುವು. ಅಗೋ ಹೋದುವು, ಹೋದುವು – ಹೊರಟೇ ಹೋದುವು. ಬಿಸಿ ಕಣ್ಣೀರಿನ ಬುದ್ಬುದಗಳು ಕೂಡಲೇ ಒಡೆದುಹೋದುವು. ಈಗಿನ್ನು ಕತ್ತಲೆಯಿಲ್ಲ, ಬೆಳಕಿಲ್ಲ. ಇರುವುದು ಕೇವಲ ಒಂದು ಅತಿ ಗಾಢವಾದ ಪರಿಪೂರ್ಣತೆ ಮಾತ್ರ.

ಎದುರಿನ ಚರ್ಚಿನ ಗಡಿಯಾರದಲ್ಲಿ ಒಂದು ಘಂಟೆ ಹೊಡೆಯಿತು. ಗಾಡಿಯವನು ಕತ್ತಲೆಯಲ್ಲಿ ಗಾಡಿ ನಡೆಸಿ ನಡೆಸಿ, ಮೈದಾನ ಸುತ್ತು ಹಾಕಿ ಹಾಕಿ ಕಡೆಗೆ ಬೇಸತ್ತು ಸಿಡುಕಿನ ದನಿಯಲ್ಲಿ "ಬಾಬುಜಿ, ಕುದುರೆ ಇನ್ನು ನಡೆಯುವುದಕ್ಕೆ ಆಗುವುದಿಲ್ಲ. ಎಲ್ಲಿಗೆ ಹೋಗಬೇಕು ಹೇಳಿ" ಎಂದ. ಉತ್ತರವೇ ಬರಲಿಲ್ಲ. ಕೋಚ್ ಬಾಕ್ಸಿನಿಂದ ಇಳಿದದ್ದೇ ಬಂದು ಹರಲಾಲನ ಮೈ ಮುಟ್ಟಿ ಅಲ್ಲಾಡಿಸಿ ಮತ್ತೆ ಕೇಳಿದ. ಉತ್ತರವಿಲ್ಲ. ಆಗವನು ಹೆದರಿ ಪರೀಕ್ಷಿಸಿ ನೋಡಿದ. ಹರಲಾಲನ ಮೈ ಚಲನೆಯಿಲ್ಲದೆ ಬಿದ್ದುಕೊಂಡಿದೆ. ಉಸಿರು ನಿಂತುಹೋಗಿದೆ. ಎಲ್ಲಿಗೆ ಹೋಗಬೇಕು ಎಂದು ಪ್ರಶ್ನೆಗೆ ಹರಲಾಲನಿಂದ ಇನ್ನೆಲ್ಲಿ ಉತ್ತರ ಬಂದೀತು?

೩. ಹೂತಿಟ್ಟ ಹಣ (ಗುಪ್ತಧನ)

೧

ಅಮಾವಾಸ್ಯೆಯ ನಟ್ಟಿರುಳು. ಮೃತ್ಯುಂಜಯ ತಾಂತ್ರಿಕ ವಿಧಿಯಂತೆ ತಮ್ಮ ಮನೆದೇವರಾದ ಜಯಕಾಳಿಯ ಪೂಜೆಗೆ ಕೂತಿದ್ದಾನೆ. ಪೂಜೆ ಮುಗಿಸಿ ಎದ್ದೊಡನೆ ಸನಿಹದ ಮಾವಿನ ತೋಪಿನೊಳಗಿಂದ ಮುಂಜಾನೆಯ ಮೊದಲ ಕಾಗೆ ಕೂಗಿತು.

ಮೃತ್ಯುಂಜಯ ಹಿಂದೆ ತಿರುಗಿ ನೋಡಿದ. ಗುಡಿಯ ಬಾಗಿಲು ಮುಚ್ಚಿದೆ. ಆಗವನು ಒಮ್ಮೆ ದೇವಿಯ ಪಾದಗಳಡಿಯಲ್ಲಿ ತಲೆಬಾಗಿ ಅನಂತರ ದೇವಿಯ ಪೀಠವನ್ನು ಒತ್ತಟ್ಟಿಗೆ ಸರಿಸಿದ. ಆ ಪೀಠದ ಅಡಿಯೊಳಗಿಂದ ಒಂದು ಹಲಸಿನ ಮರದ ಪೆಟ್ಟಿಗೆಯನ್ನು ಈಚೆಗೆ ತೆಗೆದ. ಜನಿವಾರಕ್ಕೆ ಕಟ್ಟಿದ್ದ ಬೀಗದ ಕೈಯಿಂದ ಮೃತ್ಯುಂಜಯ ಆ ಪೆಟ್ಟಿಗೆಯನ್ನು ತೆರೆದ. ತೆರೆದೊಡನೆಯೇ ನೋಡಿ, ಬೆಚ್ಚಿ ಎದ್ದುನಿಂತು, ಹಣೆಯ ಮೇಲೆ ಹೊಡೆದುಕೊಂಡ.

ಮೃತ್ಯುಂಜಯನ ಮನೆಯ ಒಳತೋಟವು ಗೋಡೆಯಿಂದ ಸುತ್ತುವರಿದಿತ್ತು. ಆ ತೋಟದ ಒಂದು ಪಾರ್ಶ್ವದಲ್ಲಿ ದೊಡ್ಡ ದೊಡ್ಡ ಮರಗಳ ನೆರಳಿನ ಮಬ್ಬಿನಲ್ಲಿತ್ತು ಈ ಸಣ್ಣ ಗುಡಿ; ಗುಡಿಯೊಳಗೆ ಜಯಕಾಳಿಯ ಪ್ರತಿಮೆಯ ಹೊರತು ಬೇರೊಂದಿಲ್ಲ. ಅದಕ್ಕೆ ಒಂದೆ ಬಾಗಿಲು. ಮೃತ್ಯುಂಜಯ ಪೆಟ್ಟಿಗೆಯನ್ನು ಹಿಡಿದು ಅತ್ತಿಂದಿತ್ತ ಸುಮ್ಮನೆ ಅಲ್ಲಾಡಿಸಿದ. ಅವನದನ್ನು ಈಚೆಗೆ ತೆಗೆದಾಗ ಪೆಟ್ಟಿಗೆ ಮುಚ್ಚೇ ಇತ್ತು, ಯಾರೂ ಅದನ್ನು ಒಡೆದಿರಲಿಲ್ಲ. ಮೃತ್ಯುಂಜಯನು ಹತ್ತು ಬಾರಿ ಪ್ರತಿಮೆಯ ಸುತ್ತು ನಾಲ್ಕೂ ಕಡೆ ಕೈ ಹಾಕಿ ಹುಡುಕಿದ...ಏನೂ ಸಿಕ್ಕಲಿಲ್ಲ. ಹುಚ್ಚು ಹಿಡಿದವನಂತೆ ಎದ್ದು ಬಂದು ಗುಡಿಯ ಬಾಗಿಲನ್ನು ಅಗಲವಾಗಿ ತೆಗೆದುಬಿಟ್ಟ. ಆಗತಾನೇ ಮುಂಜಾನೆಯ ಬೆಳಕು ಮೂಡುತ್ತಿತ್ತು. ಗುಡಿಯ ನಾಲ್ಕೂ ದಿಕ್ಕುಗಳಲ್ಲೂ ಮೃತ್ಯುಂಜಯ ಸುತ್ತಿ ಸುತ್ತಿ ಸುಮ್ಮನೆ ವ್ಯರ್ಥ ಆಸೆಯಿಂದ ಮೇಲುಸಿರು ಬಿಡುತ್ತ ಓಡಾಡಲು ತೊಡಗಿದ.

ಕ್ರಮೇಣ ಹೊತ್ತೇರಿದಂತೆಲ್ಲ ಬೆಳಕು ಸ್ಪಷ್ಟವಾಗಿ ಹರಡುತ್ತ ಬಂತು. ಆಗವನು ಹೊರಗಡೆಯ ಚಂಡೀ ಮಂಟಪದಲ್ಲಿ ಬಂದು ಕೂತು ತಲೆಯ ಮೇಲೆ ಕೈಯಿಟ್ಟುಕೊಂಡು ಯೋಚಿಸತೊಡಗಿದ. ರಾತ್ರಿಯೆಲ್ಲ ನಿದ್ದೆಗೆಟ್ಟಿದ್ದರಿಂದ ಮೈ ಬಳಲಿ ತೂಕಡಿಕೆ ಬರತೊಡಗಿತು.

ಅಂಥ ಸಮಯದಲ್ಲಿ ಹಠಾತ್ತಾಗಿ ಏನೋ ಕಿವಿಗೆ ಕೇಳಿ ಬೆಚ್ಚಿಬಿದ್ದ.... "ಜಯವಾಗಲಿ, ಅಪ್ಪಾ!" ಎಂಬ ದನಿ.

ಕಣ್ಣೆತ್ತಿ ನೋಡಿದರೆ ಎದುರಿನ ಅಂಗಳದಲ್ಲೊಬ್ಬ ಜಟೆಕಟ್ಟಿರುವ ಬೈರಾಗಿ. ಮೃತ್ಯುಂಜಯ ಭಕ್ತಿಯಿಂದ ಆ ಬೈರಾಗಿಗೆ ಸಾಷ್ಟಾಂಗ ಮಾಡಿದ. ಬೈರಾಗಿ ಅವನ ತಲೆಯ ಮೇಲೆ ಕೈಯಿಟ್ಟು ಹರಸುತ್ತಾ "ಅಪ್ಪಾ, ನೀನು ವ್ಯರ್ಥವಾಗಿ ಮನಸ್ಸಿನಲ್ಲೇ ದುಃಖಿಸುತ್ತಿದ್ದೀಯಲ್ಲ?" ಎಂದ.

ಇದನ್ನು ಕೇಳಿ ಮೃತ್ಯುಂಜಯ ಅಚ್ಚರಿಯಿಂದ ಬೆಪ್ಪಾಗಿ "ತಾವು ನಿಜವಾಗಿ ಅಂತರ್ಯಾಮಿಯಾಗಿರಬೇಕು. ಇಲ್ಲದಿದ್ದರೆ ನನ್ನ ಸಂಕಟ ತಮಗೆ ಹೇಗೆ ತಿಳಿಯುತ್ತಿತ್ತು? ನಾನಂತೂ ಯಾರಿಗೂ ಬಾಯಿ ಬಿಟ್ಟಿಲ್ಲ" ಎಂದ.

ಆಗ ಬೈರಾಗಿಯೆಂದ – "ವತ್ಸ, ನನ್ನ ಮಾತು ಕೇಳು. ನಿನ್ನ ವಸ್ತು ಏನು ಕಳೆದುಹೋಗಿದೆಯೋ ಅದನ್ನ ಕುರಿತು ಸಂತೋಷಪಡು, ಸಂಕಟಪಡಬೇಡ."

ಹಾಗೆಂದೊಡನೆ ಮೃತ್ಯುಂಜಯ ಆತನ ಕಾಲುಗಳೆರಡನ್ನೂ ಬಿಗಿಯಾಗಿ ಹಿಡಿದುಕೊಂಡು "ಸ್ವಾಮಿ, ತಾವು ಯಾರೇ ಆಗಿರಲಿ. ತಾವು ನನ್ನ ವಿಷಯವೆಲ್ಲ ತಿಳಿದುಕೊಂಡಿದ್ದೀರಿ. ಅದು ಹೇಗೆ ಕಳೆದುಹೋಯಿತು, ಎಲ್ಲಿ ಹೋಗಿ ಹುಡುಕಿದರೆ ಸಿಕ್ಕಬಹುದು ಎಂಬುದಾಗಿ ತಾವು ಹೇಳಿದ ಹೊರತು ನಾನು ತಮ್ಮ ಪಾದಗಳನ್ನ ಬಿಡುವುದಿಲ್ಲ" ಎಂದುಬಿಟ್ಟ.

ಆಗ ಬೈರಾಗಿ ಹೇಳಿದ "ಅಪ್ಪಾ, ನಾನೇನಾದರೂ ನಿನಗೆ ಅಮಂಗಳ ಕೋರಬೇಕೆಂದಿದ್ದರೆ ಹೇಳಬಹುದಾಗಿತ್ತು. ಆದರೆ ಭಗವತಿ ನಿನ್ನ ಮೇಲೆ ಕರುಣೆಯಿಟ್ಟು ಅದು ಕಳೆದುಹೋಗುವ ಹಾಗೆ ಮಾಡಿದ್ದಾಳೆ...ಅದಕ್ಕಾಗಿ ದುಃಖಿಸದಿರು."

ಮೃತ್ಯುಂಜಯ ಬೈರಾಗಿಯನ್ನು ಹೇಗಾದರೂ ತನ್ನ ಬಗ್ಗೆ ಪ್ರಸನ್ನನಾಗುವಂತೆ ಮಾಡಲು ಆತನನ್ನು ಮನೆಯಲ್ಲಿ ಉಳಿಸಿಕೊಂಡು ನಾನಾ ರೀತಿಯಲ್ಲಿ ಸೇವೆ, ಉಪಚಾರಗಳನ್ನು ಸಲ್ಲಿಸಿದ. ಮರುದಿನ ಮುಂಜಾನೆ ಎದ್ದು ತನ್ನ ದನದ ಕೊಟ್ಟಿಗೆಯಿಂದ ದೊಡ್ಡ ಬಟ್ಟಲು ತುಂಬ ನೊರೆ ಹಾಲನ್ನು ತೆಗೆದುಕೊಂಡು ಬಂದು ನೋಡುತ್ತಾನೆ – ಬೈರಾಗಿಯಿಲ್ಲ!

೨

ಮೃತ್ಯುಂಜಯ ಮಗುವಾಗಿದ್ದಾಗ ಅವನ ಅಜ್ಜ ಹರಿಹರನು ಒಂದು ದಿನ ಇದೇ ಚಂಡೀಮಂಟಪದಲ್ಲಿ ಕೂತು ತಂಬಾಕು ಹೊಗೆಯೆಳೆಯುತ್ತಿದ್ದಾಗ, ಇದೇ ರೀತಿಯಾಗಿ ಒಬ್ಬ ಬೈರಾಗಿ "ಜಯವಾಗಲಿ, ಅಪ್ಪಾ" ಎಂದು ಕೂಗುತ್ತ ಇದೇ ಅಂಗಳದಲ್ಲಿ ಬಂದು ನಿಂತುಕೊಂಡಿದ್ದ. ಹರಿಹರನು ಆ ಬೈರಾಗಿಯನ್ನು ಕೆಲವು ದಿನ ಮನೆಯಲ್ಲಿರಿಸಿಕೊಂಡು ಅನೇಕ ವಿಧವಾಗಿ ಸೇವೆ, ಉಪಚಾರಗಳನ್ನು ಸಲ್ಲಿಸಿದ್ದ.

ಬೀಳ್ಕೊಟ್ಟು ಹೊರಡುವಾಗ ಬೈರಾಗಿ ಅವನನ್ನ "ಅಪ್ಪಾ, ನಿನ್ನ ಕೋರಿಕೆಯೇನು, ಕೇಳು" ಎಂದಿದ್ದ.

ಹರಿಹರನು "ತಾವು ನನ್ನ ಸೇವೆಯಿಂದ ಪ್ರಸನ್ನರಾಗಿದ್ದರೆ ದಯವಿಟ್ಟು ನನ್ನ ಅವಸ್ಥೆಯನ್ನು ಕೇಳೋಣವಾಗಬೇಕು. ಒಂದು ಕಾಲದಲ್ಲಿ ಈ ಗ್ರಾಮದಲ್ಲಿ ನಾವು ಎಲ್ಲರಿಗಿಂತಲೂ ದೊಡ್ಡವರೆಂದೆನ್ನಿಸಿಕೊಂಡಿದ್ದೆವು. ನನ್ನ ಮುತ್ತಜ್ಜ ದೂರದಿಂದೊಬ್ಬ ಕುಲೀನನನ್ನ ಕರೆತಂದು ಅವನಿಗೆ ತನ್ನ ಮಗಳನ್ನ ಧಾರೆಯೆರೆದುಕೊಟ್ಟಿದ್ದ. ಆತನ ಮೊಮ್ಮಕ್ಕಳ ವಂಶದವರು ನಮ್ಮನ್ನು ವಂಚಿಸಿ ಇದೇ ಗ್ರಾಮದಲ್ಲೀಗ ದೊಡ್ಡವರೆನ್ನಿಸಿಕೊಂಡಿದ್ದಾರೆ. ನಮ್ಮ ಅವಸ್ಥೆಯೀಗ ಚೆನ್ನಾಗಿಲ್ಲ. ಆ ಕಾರಣದಿಂದ ಇವರುಗಳ ಅಹಂಕಾರವನ್ನು ಸಹನೆ ಮಾಡಿಕೊಂಡು ಇದ್ದೇವೆ. ಆದರೆ, ಇನ್ನು ಸಹನೆ ಮಿತಿಮೀರಿ ಹೋಗಿದೆ. ಏನು ಮಾಡಿದರೆ ನಮ್ಮ ಮನೆತನ ಮತ್ತೆ ಮೇಲಕ್ಕೆ ಬಂದೀತು. ಅದಕ್ಕೊಂದುಪಾಯ ತೋರಿಸಿಕೊಟ್ಟರೆ ದೊಡ್ಡ ಅನುಗ್ರಹವಾದ ಹಾಗೆ ಆಗುತ್ತದೆ. ತಾವು ಕೃಪೆ ತೋರಿಸಿದರೆ ಅದು ಅಸಾಧ್ಯವಿಲ್ಲ" ಎಂದು ಬಿನ್ನವಿಸಿಕೊಂಡ.

ಬೈರಾಗಿ ಸ್ವಲ್ಪ ನಕ್ಕು "ಅಪ್ಪಾ, ಬಡವರಾಗಿದ್ದರೂ ಸುಖವಾಗಿದ್ದರೆ ಸರಿಯಲ್ಲವೆ? ದೊಡ್ಡವರಾಗಬೇಕೆನ್ನುವ ಶ್ರಮದಲ್ಲಿ ಶ್ರೇಯಸ್ಸೇನೂ ಕಾಣುವುದಿಲ್ಲ" ಎಂದ.

ಆದರೆ ಹರಿಹರ ಅಷ್ಟಕ್ಕೆ ಬಿಡಲಿಲ್ಲ. ಮನೆತನವನ್ನು ಏಳಿಗೆಗೆ ತರುವ ಪ್ರಯತ್ನದಲ್ಲಿ ಅವನು ಏನನ್ನಾದರೂ ಅನುಭವಿಸಲು ಸಿದ್ಧ.

ಆಗ ಬೈರಾಗಿ ತನ್ನ ಜೋಳಿಗೆಯಿಂದ ಬಟ್ಟೆಯಲ್ಲಿ ಸುತ್ತಿದ್ದ ಅರಳೆಯಲ್ಲಿ ತಯಾರಿಸಿದ ನಾಡ ಕಾಗದದ ಬರೆವಣಿಗೆಯೊಂದನ್ನು ಹೊರಕ್ಕೆ ತೆಗೆದ. ಆ ಕಾಗದ ಬಹಳ ಉದ್ದವಾದದ್ದು. ಜಾತಕಪತ್ರದಂತೆ ಸುರುಳಿಯಾಗಿ ಸುತ್ತಲ್ಪಟ್ಟಿತ್ತು. ಬೈರಾಗಿಯದನ್ನು ನೆಲದ ಮೇಲೆ ಹರಡಿ ಹಿಡಿದ. ಹರಿಹರನು ಅದನ್ನು ಗಮನಿಸಿದ. ಅದರಲ್ಲಿ ನಾನಾ ರೀತಿಯ ಚಕ್ರಗಳಲ್ಲಿ ಬೇರೆ ಬೇರೆ ಸಂಕೇತಗಳ ಗುರುತುಗಳನ್ನ ಬರೆದಿತ್ತು. ಅವೆಲ್ಲದರ ಕೆಳಗೆ ಒಂದು ಪದ್ಯ ಬರೆದಿತ್ತು.

ಕಾಲು ಹಿಡಿದು ಸಾಧಿಸೈ–
'ರಾ' ಕೊಡಲಾರಳು ರಾಧಾ
ತಡೆಯದೆ ಕಡೆಗೆ ಬಾಧಾ
'ರಾ' ನೀಡಿದಳೀಗ ಶೋಧಿಸೈ
ಭೂಗೋಳದಲಿ ಬಿಡು 'ಭೂ'
ಹುಣಿಸೆ ಆಲದ ಬುಡ ಹಿಡಿ
ದಕ್ಷಿಣ ದಿಕ್ಕಿನ ದಾರಿ ನಡಿ
ಈಶಾನ್ಯದ ಈಶಾನಿಯ ಮುಟ್ಟು
ಹೇಳಿಬಿಟ್ಟೆನೀಗ ಒಗಟಿನ ಗುಟ್ಟು.

– ಇತ್ಯಾದಿ.

ಹರಿಹರನಿದನ್ನು ನೋಡಿ "ಗುರೂಜಿ, ಏನೂ ತಿಳಿಯುವುದಿಲ್ಲವಲ್ಲ" ಎಂದ.

ಆಗ ಬೈರಾಗಿ "ಇದನ್ನಿಟ್ಟುಕೊಂಡಿರು. ದೇವಿ ಭವಾನಿಯ ಪೂಜೆ ಮಾಡುತ್ತಿರು. ಆಕೆಯ ಅನುಗ್ರಹದಿಂದ ನಿನ್ನ ವಂಶದಲ್ಲಿ ಯಾರಾದರೊಬ್ಬರಿಗೆ ಈ ಒಕ್ಕಣೆ ತಿಳಿಯಬಹುದು. ಆಗ ಅದರಿಂದವನಿಗೆ ಯಾರಿಗೂ ಲಭಿಸದಂತಹ ಅಗಾಧ ಸಂಪತ್ತು ಸಿಗುವುದು" ಎಂದ.

ಹರಿಹರನು ಅತ್ಯಂತ ವಿನೀತನಾಗಿ "ಗುರುವೇ, ತಾವು ನನಗೆ ಅದರ ಅರ್ಥ ಹೇಳಲಾಗುವುದಿಲ್ಲವೇ?" ಎಂದು ಕೇಳಿಕೊಂಡ.

ಬೈರಾಗಿ "ಇಲ್ಲಪ್ಪ. ಸಾಧನೆ ಮಾಡಿದಲ್ಲದೆ ಅದು ತಿಳಿಯುವ ಹಾಗಿಲ್ಲ" ಎಂದು ನುಡಿದುಬಿಟ್ಟ. ಅದೇ ಸಮಯಕ್ಕೆ ಸರಿಯಾಗಿ ಹರಿಹರನ ತಮ್ಮ, ಶಂಕರ, ಅಲ್ಲಿ ಬಂದು ನಿಂತ. ಅವನನ್ನು ಕಂಡೊಡನೆ ಹರಿಹರ ಬೇಗ ಆ ಬರವಣಿಗೆಯ ಕಾಗದವನ್ನು ಅಡಗಿಸಿಡಲು ಹವಣಿಸಿದ.

ಬೈರಾಗಿಯು ನಗುತ್ತ "ನೋಡು ಮತ್ತೆ, ದೊಡ್ಡವನಾಗಬೇಕೆನ್ನುವ ಹುಚ್ಚಿನ ಸಂಕಟ ಈಗಾಗಲೇ ಆರಂಭವಾಗಿದೆ. ಅಯ್ಯೋ, ಮಂಕೆ, ಇದನ್ನು ಅಡಗಿಸಿಡುವುದರ ಅಗ್ಯವೇನು, ಹೇಳು. ಯಾಕೆಂದರೆ, ಇದರ ಗುಟ್ಟು ಕೇವಲ ಒಬ್ಬ ಮನುಷ್ಯನಿಗೆ ಮಾತ್ರ ಗೊತ್ತಾಗುತ್ತದೆ. ಸಾವಿರ ಪ್ರಯತ್ನ ಮಾಡಿದರೂ ಬೇರೆ ಯಾರಿಗೂ ಅದು ಸಾಧ್ಯವಾಗುವುದಿಲ್ಲ. ನಿಮ್ಮಗಳಲ್ಲಿ ಆ ಮನುಷ್ಯ ಯಾರು ಎಂಬುದಾಗಿ ಹೇಳಲು ಯಾರಿಗೂ ಸಾಧ್ಯವಿಲ್ಲ. ಆ ಕಾರಣದಿಂದ ನೀನು ಈ ಕಾಗದವನ್ನು ಎಲ್ಲರಿಗೂ ಗೊತ್ತಾಗುವ ಹಾಗೆ ನಿರ್ಭಯವಾಗಿ ತೆಗೆದಿಟ್ಟುಕೊಂಡಿರಬಹುದು. ಇನ್ನು ನಾನು ಬರಲೆ?" ಎಂದು ಹೇಳಿ ಹರಸಿ ಬೈರಾಗಿ ಹೊರಟುಹೋದ.

ಅವನು ಹಾಗೆ ಹೇಳಿ ಹೋದರೂ ಹರಿಹರನು ಆ ಕಾಗದದ ಸುರುಳಿಯನ್ನು ಅಡಗಿಸಿಡಲಾರದೆ ಹೋದ. ತನ್ನ ತಮ್ಮ, ಶಂಕರನಿಗೆಲ್ಲಾದರೂ ಅದು ಸಿಕ್ಕಿ ಅವನದರ ಫಲ ಪಡೆದುಬಿಟ್ಟಾನು ಎಂಬ ಅನುಮಾನದಿಂದ ಹರಿಹರ ಆ ಕಾಗದವನ್ನು ಒಂದು ಹಲಸಿನಮರದ ಹಲಗೆಯ ಪೆಟ್ಟಿಗೆಯೊಳಗೆ ಇಟ್ಟು ಬೀಗ ಹಾಕಿ ಅದನ್ನು ತಮ್ಮ ಮನೆದೇವತೆ, ಜಯಕಾಳಿಯ ಪ್ರತಿಮೆಯ ಪೀಠದ ತಳಗಡೆ ಅಡಗಿಸಿಟ್ಟ. ಪ್ರತಿ ಅಮಾವಾಸ್ಯೆಯ ನಟ್ಟಿರುಳಲ್ಲಿ ದೇವಿಯ ಅರ್ಚನೆ ಪೂರೈಸಿ ಅವನು ಪೆಟ್ಟಿಗೆಯನ್ನ ತೆಗೆದು ಒಮ್ಮೆ ಕಾಗದದ ಸುರುಳಿಯನ್ನು ಹರಡಿ ನೋಡುತ್ತಿದ್ದ. ದೇವಿಯೇನಾದರೂ ಅನುಗ್ರಹಮಾಡಿ ಅವನಿಗದರ ಅರ್ಥ ತಿಳಿದುಕೊಳ್ಳುವ ಶಕ್ತಿ ಕೊಟ್ಟಾಳೆಂಬ ವ್ಯರ್ಥ ಆಸೆ!

ಶಂಕರ ಕೆಲವು ದಿನ ಹರಿಹರನ ಬಳಿ "ಅಣ್ಣಾ, ನನಗೆ ಆ ಕಾಗದವನ್ನು ಒಂದು ಸಲವಾದರೂ ಚೆನ್ನಾಗಿ ನೋಡುವುದಕ್ಕೆ ಕೊಡು" ಎಂದು ಅಂಗಲಾಚುತ್ತಿದ್ದ.

ಆಗ ಹರಿಹರ "ಹೋಗೋ ಹುಚ್ಚ! ಏನಿದೆ ಆ ಕಾಗದದಲ್ಲಿ? ಆ.... ರಂಡೇಮಗ ಕಳ್ಳ ಬೈರಾಗಿ ಕಾಗದದಲ್ಲೇನೇನೋ ಬಡಬಡ ಅಂತ ಗೀಚಿ ನನಗೆ ಟೋಪಿಹಾಕಿ ಹೋಗಿದ್ದಾನೆ. ನಾನಾಗಲೇ ಅದನ್ನ ಸುಟ್ಟುಹಾಕಿಬಿಟ್ಟೆ" ಎಂದ.

ಶಂಕರ ಸುಮ್ಮನಿದ್ದುಬಿಟ್ಟ. ಹಠಾತ್ತಾಗಿ ಒಂದು ದಿನ ಆ ಮನೆಯಲ್ಲಿ ಶಂಕರ ಕಾಣದಾದ. ಎಲ್ಲಿ ಹೋದನೋ ಗೊತ್ತಿಲ್ಲ. ಅವತ್ತಿನಿಂದ ಅವನೆಲ್ಲೋ ದೇಶಾಂತರ ಹೋದನೆಂದು ಎಲ್ಲರೂ ಅವನಾಸೆಯನ್ನು ಬಿಟ್ಟಬಿಟ್ಟರು.

ಹರಿಹರನಿಗೆ ಅಂದಿನಿಂದ ಬೇರೆಲ್ಲಾ ಕೆಲಸ, ಕಾರ್ಯಗಳೂ ನಿಂತು ಹೋದುವು. ಆ ಕಾಗದದಲ್ಲಿ ನಿರೂಪಿಸಿದ್ದ ಗುಪ್ತಧನದ ಧ್ಯಾನವನ್ನು ಅವನು ಒಂದು ಕ್ಷಣವೂ ಬಿಡಲಾರದೆ ಹೋದ.

ಸಾವಿನ ಕಾಲ ಬಂದಾಗ ಅವನು ತನ್ನ ದೊಡ್ಡ ಮಗ ಶಾಮಾಪದನನ್ನು ಕರೆದು ಆ ಸಂನ್ಯಾಸಿಕೊಟ್ಟ ಕಾಗದವನ್ನು ಒಪ್ಪಿಸಿ ಹೋದ.

ಶಾಮಾಪದನು ಆ ಕಾಗದ ಕೈಗೆ ಬಂದ ಕೂಡಲೆ ತನ್ನ ನೌಕರಿಯನ್ನು ಬಿಟ್ಟುಬಿಟ್ಟ. ಜಯಕಾಳಿಯ ಪೂಜೆಯಲ್ಲಿ ಮತ್ತು ಈ ಕಾಗದದ ಒಕ್ಕಣೆಯನ್ನು ಕುರಿತು ನಟ್ಟ ಮನಸ್ಸಿನಿಂದ ಧ್ಯಾನಿಸುವುದರಲ್ಲೇ ಅವನ ಬಾಳೆಲ್ಲಾ ಹೇಗೆ ಕಳೆದುಹೋಯಿತೆಂದು ಅವನಿಗೆ ಅರಿವೇ ಆಗಲಿಲ್ಲ.

ಮೃತ್ಯುಂಜಯ ಶಾಮಾಪದನ ಹಿರಿಯ ಮಗ. ತಂದೆಯ ಸಾವಾದ ಮೇಲೆ ಅವನು ಆ ಬೈರಾಗಿ ಕೊಟ್ಟ ಕಾಗದದ ಒಕ್ಕಣೆಗೆ ಹಕ್ಕುದಾರನಾದ. ಅವನ ಅವಸ್ಥೆ ಬರಬರುತ್ತಾ ಅತಿ ಕೀಳಾಗಿ ಹೋದಂತೆಲ್ಲ, ಅಷ್ಟಕ್ಕಷ್ಟು ಹೆಚ್ಚಾಗಿ ಆ ಕಾಗದದ ಮೇಲೆ ಅವನ ಹುಚ್ಚು ಏರತೊಡಗಿತು.

ಇಂಥ ಸಮಯದಲ್ಲಿ ಕಳೆದ ಅಮಾವಾಸ್ಯೆಯ ರಾತ್ರಿ ಪೂಜೆಯಾದ ಮೇಲೆ ಕಾಣಬರದೆ ಹೋದ ಮೇಲೆ, ಆ ಸಂನ್ಯಾಸಿಯೂ ಮಾಯವಾಗಿ ಹೋಗಿದ್ದ.

ಆಗ ಮೃತ್ಯುಂಜಯನೆಂದುಕೊಂಡ. "ಈ ಬೈರಾಗಿಯನ್ನೇನಾದರೂ ಸರಿ, ಬಿಡಕೂಡದು. ಕಾಗದದ ರಹಸ್ಯವೇನಿದ್ದರೂ ಎಲ್ಲಾ ಅವನಿಂದಲೇ ಗೊತ್ತಾಗುತ್ತದೆ."

ಹೀಗೆಂದುಕೊಂಡದ್ದೇ ಅವನು ಆಗಲಿಂದಲೇ ಮನೆ, ಮಠ ಎಲ್ಲಾ ಬಿಟ್ಟು ಬೈರಾಗಿಯನ್ನು ಹುಡುಕಿಕೊಂಡು ಹೊರಟ. ಹೀಗೆ ಇಡೀ ಒಂದು ವರುಷ ಊರೂರು, ದಾರಿ, ದಾರಿ ಅಲೆಯುತ್ತ ಕಳೆದುಬಿಟ್ಟ.

೩

ಗ್ರಾಮದ ಹೆಸರು ಧಾರಾಗೋಳ, ಅಲ್ಲೊಂದು ದಿನಸಿ ಅಂಗಡಿಯ ಮುಂದೆ ಮೃತ್ಯುಂಜಯ ತಂಬಾಕು ಸೇವನೆಮಾಡುತ್ತ ಹಾಗೇ ಏನೇನೋ ಯೋಚನೆ ಮಾಡುತ್ತ ಕೂತಿದ್ದ. ಸ್ವಲ್ಪ ದೂರದಲ್ಲಿ ಎದುರು ಬದಿಯ ಬಯಲಿನ ಅಂಚಿನ

ದಾರಿಯಲ್ಲಿ ಬೈರಾಗಿಯೊಬ್ಬ ನಡೆದುಹೋದ. ಮೊದಲಲ್ಲಿ ಮೃತ್ಯುಂಜಯನ ಗಮನ ಆ ಕಡೆ ಹೋಗಲಿಲ್ಲ. ಒಂದೆರಡು ನಿಮಿಷಗಳಲ್ಲಿ ಅವನಿಗೆ ತತ್‌ಕ್ಷಣ ಏನೋ ಹೊಳೆಯಿತು. ಈಗ ಆಕಡೆ ಹಾದುಹೋದನಲ್ಲ, ಅವನೇ ಆ ಬೈರಾಗಿ! ಆ ಕ್ಷಣವೇ ತಂಬಾಕಿನ ನಳಿಗೆಯನ್ನಲ್ಲೇ ಇಟ್ಟು ಅಂಗಡಿಯವನಿಗೆ ಹೇಳಿ ಒಂದೇ ಓಟದಲ್ಲಿ ಬೀದಿಗೆ ಓಡಿಬಂದ. ಆದರೆ ಬೈರಾಗಿಯೆಲ್ಲೂ ಕಾಣಬರಲಿಲ್ಲ.

ಆಗ ಸಂಜೆಯ ಕತ್ತಲು ಕ್ರಮೇಣ ಹೆಚ್ಚಾಗುತ್ತ ಬಂದಿತ್ತು. ಗುರುತಿಲ್ಲದ ಈ ಜಾಗದಲ್ಲಿ ಬೈರಾಗಿಯನ್ನು ಎಲ್ಲೆಂದು ಹುಡುಕಿಕೊಂಡು ಹೋಗುವುದು? ಅವನಿಗೇನೂ ತೋಚಲಿಲ್ಲ. ಅಂಗಡಿಗೆ ಮರಳಿ ಬಂದು ಅಂಗಡಿಯವನನ್ನು "ಈ ಎದುರಿಗೆ ಕಾಣುತ್ತಲ್ಲ, ದಟ್ಟವಾದ ಕಾಡು, ಏನಿದೆ ಅದರೊಳಗೆ?" ಎಂದು ಪ್ರಶ್ನೆಮಾಡಿದ.

ಅವನೆಂದ – "ಓ...ಅದೇ?... ಒಂದು ಕಾಲದಲ್ಲಿ ಅಲ್ಲೊಂದು ದೊಡ್ಡ ಷಹರಿತ್ತು. ಆದರೆ ಅಗಸ್ತ್ಯಋಷಿಗಳ ಶಾಪದಿಂದ ಅದರ ರಾಜ, ಪ್ರಜೆಗಳು ಎಲ್ಲ ಸಿಡುಬು ಬಂದು ಸತ್ತುಹೋದರು. ಅಲ್ಲೀಗಲೂ ಆಗ ಹೂತಿಟ್ಟಿದ್ದ ಹಣ, ಮುತ್ತು ರತ್ನಗಳು ಹುಡುಕಿದರೆ ಸಿಗುತ್ತೆ ಅಂತ ಜನ ಹೇಳುತ್ತಾರೆ. ಆದರೇನು? ನಡುಹಗಲಿನಲ್ಲಿ ಕೂಡ ಆ ಕಾಡಿನೊಳಗೆ ಕಾಲಿಡುವುದಕ್ಕೆ ಯಾರಿಗಿದೆ ಎದೆ? ಹಾಗೆ ಯಾರಾದರೂ ಹೋಗಿದ್ದರೆ ಮತ್ತೆ ವಾಪಸ್ಸು ಬಂದಿಲ್ಲ."

ಮೃತ್ಯುಂಜಯ ಚಂಚಲಚಿತ್ತನಾಗಿ ಅಲ್ಲಿಂದೆದ್ದ. ರಾತ್ರಿಯೆಲ್ಲ ಆ ಅಂಗಡಿಯೊಳಗೆ ಚಾಪೇಹಾಸಿ ಮಲಗಿ, ಸೊಳ್ಳೆಯ ಕಡಿತದಿಂದ ಮೈಯೆಲ್ಲ ಕೆರೆಯುತ್ತ, ಈ ಕಾಡಿನ ಹಳೆಯ ಕಥೇ, ಬೈರಾಗಿಯ ವಿಷಯ, ಆ ಕಳೆದುಹೋದ ಒಕ್ಕಣೆಯ ಕಾಗದದ ವಿಷಯ, ಎಲ್ಲ ಯೋಚಿಸುತ್ತ ಕಾಲ ಕಳೆದ. ಬಾರಿ ಬಾರಿಗೂ ಓದಿ ಆ ಒಕ್ಕಣೆಯ ಪದ್ಯ ಮೃತ್ಯುಂಜಯನಿಗೆ ಬಾಯಿಪಾಠವಾಗಿ ಹೋಗಿತ್ತು...ಆ ಸಾಲುಗಳೀಗ ಈ ನಿದ್ದೆಗೆಟ್ಟ ಅವಸ್ಥೆಯಲ್ಲಿ ಅವನ ತಲೆಯಲ್ಲಿ ಸುಳಿದಾಡತೊಡಗಿದುವು.

– ಕಾಲು ಹಿಡಿದು ಸಾಧಿಸ್ಯೆ
'ರಾ' ಕೊಡಲಾರಳು ರಾಧಾ
ತಡೆಯದೆ ಕಡೆಗೆ ಬಾಧಾ
'ರಾ' ನೀಡಿದಳೀಗ ಶೋಧಿಸ್ಯೆ
ಭೂಗೋಳದಲಿ ಬಿಡು 'ಭೂ'.

ಅವನ ತಲೆ ಕಾವೇರಿ ಉರಿಯತೊಡಗಿತು. ಏನು ಮಾಡಿದರೂ ಈ ಪದ್ಯದ ಸಾಲುಗಳನ್ನು ಅವನ ಮೆದುಳಿನಿಂದ ದೂರವಿರಿಸಲಾಗಲಿಲ್ಲ. ಕಟ್ಟಕಡೆಗೆ ಬೆಳಕು ಹರಿಯುವುದಕ್ಕೆ ಹತ್ತಿರ ಬಂದಾಗ ಅವನಿಗೆ ಮಂಪರು ಹಿಡಿಯಿತು. ಆಗ ಸ್ವಪ್ನಾವಸ್ಥೆಯಲ್ಲಿ ಈ ಐದು ಸಾಲುಗಳ ಅರ್ಥ ಅತಿ ಸುಲಭವಾಗಿ ಅವನಿಗೆ ಹೊಳೆದು ಹೋಯಿತು. 'ರಾ' ಕೊಡಲಾರಳು ರಾಧಾ, ಅಂದರೆ 'ರಾ' ಇಲ್ಲದೆಹೋದರೆ

ಉಳಿದದ್ದು 'ಧಾ' – ಕಡೆಗೆ 'ರಾ' ನೀಡಿದಳು ತಡೆಯದೆ ಬಾಧಾ..... ಈಗ 'ರಾ' ಸೇರಿಸಿದರೆ 'ಧಾರಾ' ಆಯಿತು. ಆಮೇಲೆ ಭೂಗೋಳದಲ್ಲಿ 'ಭೂ' ಬಿಟ್ಟರೆ 'ಗೋಳ' ಉಳಿಯಿತು. 'ಧಾರಾ' ಮತ್ತು 'ಗೋಳ' – 'ಧಾರಾಗೋಳ'..... ಈ ಊರಿನ ಹೆಸರೂ ಧಾರಾಗೋಳ! ಎಷ್ಟು ಸ್ಪಷ್ಟವಾಗಿ ಹೋಯಿತೀಗ ಎಂದುಕೊಂಡ ಕನಸಿನಲ್ಲೇ.

ತತ್‌ಕ್ಷಣ ಕನಸೊಡೆದೆದ್ದು ಬೆಚ್ಚಿ ಕೂತುಕೊಂಡ. ಕೇಕೆಹಾಕೋಣವೆನ್ನಿಸಿತು!

೪

ಇಡೀ ದಿನ ಕಾಡೆಲ್ಲ ಅಲೆದು ಸಂಜೆಯ ಹೊತ್ತಿಗೆ ಅತಿ ಕಷ್ಟದಿಂದ ಹೇಗೋ ದಾರಿಯ ಗುರುತು ಸಿಕ್ಕಿ, ಊಟ, ತಿಂಡಿಯಿಲ್ಲದೆ ಶ್ರಮದಿಂದ ಸಾಯುವ ಸ್ಥಿತಿಯಲ್ಲಿ ಊರಿಗೆ ವಾಪಸು ಬಂದ.

ಮರುದಿನ ಅಂಗವಸ್ತ್ರದಲ್ಲಿ ಅವಲಕ್ಕಿ ಕಟ್ಟಿಕೊಂಡು ಮತ್ತೆ ಆ ಕಾಡನ್ನು ಹೊಕ್ಕ. ಕೊಳದ ನಡುವೆ ಸ್ವಚ್ಛವಾದ ನೀರಿತ್ತು. ದಡದ ಸುತ್ತ ಕಮಲದ ಮತ್ತು ಕುಮುದ ಪುಷ್ಪಗಳ ಬಳ್ಳಿಗಳು ಹರಡಿದ್ದುವು. ಕಲ್ಲಿನಲ್ಲಿ ಕಟ್ಟಿದ ಮೆಟ್ಟಲುಗಳು ಮುರಿದುಹೋಗಿ ಚೂರುಮಾರಾಗಿ ಬಿದ್ದಿವೆ. ಅಲ್ಲೇ ಇಳಿದು ನೀರಿನಲ್ಲಿ ಅವಲಕ್ಕಿಯನ್ನು ತೋಯಿಸಿ ತಿಂದ. ಆಮೇಲೆ ಕೊಳದ ಸುತ್ತ ನಾಲ್ಕೂ ಕಡೆ ಸುಮ್ಮನೆ ಒಂದೆರಡು ಸಲ ಪ್ರದಕ್ಷಿಣೆ ಮಾಡಿ ನೋಡತೊಡಗಿದ.

ಕೊಳದ ಪಶ್ಚಿಮದ ದಡದಂಚಿನಲ್ಲಿ ಹಠಾತ್ತಾಗಿ ನಿಂತು ಬೆಚ್ಚಿ ನೋಡಿದ. ಸ್ವಲ್ಪ ದೂರದಲ್ಲಿ ಎದುರಿಗೆ ಒಂದು ಹುಣಿಸೇ ಮರವನ್ನು ಸುತ್ತುವರಿದು ಪ್ರಕಾಂಡವಾದ ಆಲದ ಮರವೊಂದು ಹುಟ್ಟಿಕೊಂಡು ನಿಂತಿದೆ. ತತ್‌ಕ್ಷಣ ಅವನಿಗೆ ಪದ್ಯದ ಮುಂದಿನ ಎರಡು ಸಾಲುಗಳು ನೆನಪಿಗೆ ಬಂದುವು.

ಹುಣಿಸೇ ಆಲದ ಬುಡ ಹಿಡಿ,
ದಕ್ಷಿಣ ದಿಕ್ಕಿನ ದಾರಿ ನಡಿ.

ಕೂಡಲೇ ಅವನು ದಕ್ಷಿಣ ದಿಕ್ಕಿನ ದಾರಿಯ ಕಡೆ ನಡೆದ. ಸ್ವಲ್ಪ ದೂರ ಹೋಗುತ್ತಲೂ ಒಂದು ದಟ್ಟವಾದ ಅಡವಿಯ ನಡುವೆ ಬಂದು ನಿಂತ. ಅಲ್ಲಿದ್ದ ಬಿದಿರು ಮೆಳೆಯನ್ನು ಭೇದಿಸಿ ಪಾರಾಗುವುದು ಆಗದ ಕೆಲಸ. ಏನಾದರಾಗಲಿ, ಮೃತ್ಯುಂಜಯ ಮನಸ್ಸು ಮಾಡಿದ. ಈ ಆಲದ ಮರ, ಏನಾದರೂ ಸರಿ, ದೃಷ್ಟಿಯಿಂದ ತಪ್ಪಿಸಿಕೊಳ್ಳದಂತೆ ಇರಬೇಕು. ಇಲ್ಲವಾದರೆ ದಾರಿ ತಪ್ಪಿ ಹೋಗುವುದು.


ಹೀಗೆಂದು ಮರದ ಬಳಿಗೆ ಮತ್ತೆ ಹಿಂದಿರುಗಿ ಬರುವಾಗ ಮರದ ಬುಡದಿಂದ ಸ್ವಲ್ಪ ದೂರದಲ್ಲಿ ಒಂದು ಗುಡಿಯ ಗೋಪುರ ಕಾಣಬಂತು. ಆ ಕಡೆ ಹೆಜ್ಜೆ ಹಾಕಲು ತೊಡಗಿದ. ಸ್ವಲ್ಪ ಹೊತ್ತಿಗೆ ಒಂದು ಹಾಳುಬಿದ್ದ ದೇಗುಲದ ಬಳಿ ಬಂದು

ನಿಂತ. ಬಂದೊಡನೆ ಅವನ ಕಣ್ಣಿಗೆ ಬಿದ್ದದ್ದು – ಅದರ ಬದಿಯಲ್ಲೇ ಒಂದು ಕಡೆ ಕಲ್ಲುಗಳಲ್ಲಿ ಜೋಡಿಸಿದ ಒಂದು ಒಲೆ, ಸುಟ್ಟ ಕಟ್ಟಿಗೆಗಳು, ಬೂದಿ.

ಅತಿ ಎಚ್ಚರಿಕೆಯಿಂದ ಮೃತ್ಯುಂಜಯ ಆ ದೇಗುಲದ ಮುರಿದ ಬಾಗಿಲೊಳಗೆ ಹಣಿಕಿ ನೋಡಿದ. ನರಪ್ರಾಣಿಯ ಸುಳಿವಿಲ್ಲ. ದೇವರ ಪ್ರತಿಮೆಯೂ ಇಲ್ಲ. ಬರೇ ಒಂದು ಕಂಬಳಿ, ಕಮಂಡಲು ಮತ್ತು ಒಂದು ಕಾವಿಯ ಅಂಗವಸ್ತ್ರ, ಒಂದು ಕಡೆ ಬಿದ್ದಿದ್ದುವು.

ಸಂಜೆಯಾಗುತ್ತ ಬಂದಿತ್ತು. ಊರೋ ಬಹಳ ದೂರವಿದೆ. ಈ ದಟ್ಟವಾದ ಕಾಡಿನಲ್ಲಿ ಕತ್ತಲಲ್ಲಿ ದಾರಿ ಬಿಡಿಸಿಕೊಂಡು ಹೋಗುವುದು ಕಷ್ಟವಾದೀತೆಂದುಕೊಂಡ. ಒಂದು ವಿಷಯ ಮಾತ್ರ ತಿಳಿಯಿತು. ಈ ಗುಡಿಯಲ್ಲಿನ ಸಾಮಾನು ನೋಡಿದರೆ ಮನುಷ್ಯರಾರೋ ವಾಸಿಸುತ್ತಿರುವುದು ಸ್ಪಷ್ಟವಾದ ಹಾಗೆ. ಇದೊಂದು ಸಂತೋಷದ ಸಂಗತಿ. ದೇಗುಲದ ಮೇಲುಭಾಗದಿಂದ ದೊಡ್ಡ ಕಲ್ಲೊಂದು ಒಡೆದು ಬಾಗಿಲ ಮುಂದೆ ಬಿದ್ದಿತ್ತು. ಆ ಕಲ್ಲ ಮೇಲೆ ಕೂತು ಮೃತ್ಯುಂಜಯ ಏನೇನೋ ಯೋಚಿಸುತ್ತಿದ್ದಾಗ ಅಕಸ್ಮಾತ್ ಕಲ್ಲ ಮೇಲೆ ಕೆತ್ತಿರುವ ಯಾವುದೋ ಬರೆಹದ ಕಡೆ ಅವನ ಗಮನ ಹೋಯಿತು. ಕತ್ತು ಬಗ್ಗಿಸಿ ಅದನ್ನು ನೋಡಿದ. ಸ್ಪಷ್ಟವಾಗಿ ಒಂದು ಚಕ್ರ ಬರೆದಿತ್ತು. ಅದರಲ್ಲಿ ಕೆಲವು ಸಾಂಕೇತಿಕ ಅಕ್ಷರಗಳು ಸ್ವಲ್ಪ ಸ್ಪಷ್ಟವಾಗಿ, ಸ್ವಲ್ಪ ಅಸ್ಪಷ್ಟವಾಗಿ ಕೆತ್ತಲ್ಪಟ್ಟದ್ದವು. ಆ ಚಕ್ರ ಮುಂದೆ ಕಂಡಂತಿತ್ತು.

ಅರೆ, ಈ ಚಕ್ರ ಅವನಿಗೆ ಹೊಸದಲ್ಲ. ಇದನ್ನವನು ಆ ಕಳೆದುಹೋದ ಕಾಗದದಲ್ಲಿ ನೋಡಿದ್ದ. ಎಷ್ಟೋ ಅಮಾವಾಸ್ಯೆಯ ರಾತ್ರಿಗಳಲ್ಲಿ, ದೇಗುಲದ ನರುಗಂಪಾದ ಧೂಪದ ಹೊಗೆಯಲ್ಲಿ, ತುಪ್ಪದ ಹಣತೆಗಳ ಬೆಳಕಿನಲ್ಲಿ, ಆ ನಾಡ ಕಾಗದದಲ್ಲಿ ಬರೆದಿದ್ದ ಇದೇ ಚಕ್ರದ ಗುರುತಿನ ಮೇಲೆ ಬಾಗಿ, ಅರ್ಥವಾಗದೆ ಸುಮ್ಮನೆ ನೋಡುತ್ತ ಕಾಲ ಕಳೆದಿದ್ದಾನೆ. ಮತ್ತೆ ಒಂದೇ ಮನಸ್ಸಿನಿಂದ ಆ ಸಮಸ್ಯೆಯ ರಹಸ್ಯವನ್ನರಿಯುವಂತೆ ಅನುಗ್ರಹಮಾಡೆಂದು ದೇವಿಯನ್ನಾರಾಧನೆ ಮಾಡಿ ಕೇಳಿಕೊಂಡಿದ್ದಾನೆ. ಇಂದು, ಅನಿರೀಕ್ಷಿತವಾಗಿ ಅವನ ಅಭೀಷ್ಟವು ಸಿದ್ಧಿಯಾಗಲು ಹತ್ತಿರವಾಗಿದೆಯೆಂದೆನ್ನಿಸಿತು! ಅಂದುಕೊಂಡ ಕೂಡಲೆ ಅವನ ಮೈ ಥರಥರ ನಡುಗಿತು. ಒಮ್ಮೊಂದೊಮ್ಮೆ ದಿಗಿಲಾಗಹತ್ತಿತ್ತು. ಕೈಗೆ ಬಂದ ತುತ್ತು ಬಾಯವರೆಗೂ ಬಂದೀತೆ? ಹೊಳೆಯ ತೀರದವರೆಗೂ ಬಂದು ದೋಣಿ ಹಠಾತ್ತಾಗಿ ಮುಳುಗಿಹೋದರೆ ಏನು ಗತಿ? ಯಾವುದೋ ಒಂದು ಸಣ್ಣ ತಪ್ಪು ಹೆಜ್ಜೆಯಿಂದ ಎಲ್ಲ ಹಾಳಾಗಿಹೋದರೆ ಏನು ಮಾಡುವುದು? ಆ ಬೈರಾಗಿಯೇ ಒಂದು ಪಕ್ಷ ತನಗೆ ಮೊದಲೇ ಇಲ್ಲಿಗೆ ಬಂದಿದ್ದು ಸಂಪತ್ತನ್ನೆಲ್ಲ ಎತ್ತಿಕೊಂಡು ಹೋಗಿ ಬಿಟ್ಟಿದ್ದಾನೇನೋ! ಇಂತಹ ಅನುಮಾನಗಳು ಮೂಡಿ ಅವನ ಎದೆಯನ್ನು ಕಲಕಿ



ಗಡಿಬಿಡಿ ಮಾಡಿದ್ದುವು. ಈಗ ಮಾಡುವುದೇನು? ಅವನಿಗೇನೂ ತೋಚಲಿಲ್ಲ. ಇನ್ನೂ ಒಂದು ಯೋಚನೆ. ಬಹುಶಃ ಅವನ ಕನಸಿನ ಗುರಿಯಾಗಿರುವ ಸಂಪತ್ತಿನ ರಾಶಿಯ ಮೇಲೇ ಅವನೀಗ ಭದ್ರವಾಗಿ ಕೂತಿರಬಹುದು. ಆದರೂ ಅವನಿಗದು ಸ್ವಲ್ಪವೂ ತಿಳಿಯಲು ಸಾಧ್ಯವಾಗಿಲ್ಲ.

ಹೀಗೆ ಯೋಚನೆ ಮಾಡುತ್ತ ಕೂತು ಕೂತು ಅವನು ಕಾಳೀ ಮಂತ್ರವನ್ನು ಜಪಿಸತೊಡಗಿದ. ಸಂಜೆಯ ಮಬ್ಬು ಹೆಪ್ಪುಗಟ್ಟುತ್ತಾ ಬಂತು. ಜೀರುದುಂಬಿಗಳ ಶಬ್ದದಿಂದ ಆ ವನವೆಲ್ಲಾ ತುಂಬಿಹೋಯಿತು.

೫

ಇಂಥ ವೇಳೆಯಲ್ಲಿ ಸ್ವಲ್ಪ ದೂರದಲ್ಲಿನ ದಟ್ಟವಾದ ಕಾಡಿನ ನಡುವೆ ಬೆಂಕಿಯ ಬೆಳಕು ಕಾಣಬಂತು. ಮೃತ್ಯುಂಜಯ ತಾನು ಕೂತಿದ್ದ ಬಂಡೆಯನ್ನು ಬಿಟ್ಟು ಎದ್ದು ಹೊರಟ. ಆ ಬೆಂಕಿಯ ಬೆಳಕು ಕಾಣ ಬಂದ ಕಡೆ ಕಾಲು ಹಾಕಿದ.

ಬಹಳ ಕಷ್ಟದಿಂದ ಸ್ವಲ್ಪ ದೂರ ಹೋಗಿ ಒಂದು ದೊಡ್ಡ ಅರಳಿಯ ಮರದ ಮೇಲೆ ಹತ್ತಿ ಸುತ್ತ ನೋಡಿದರೆ ಸಮೀಪದಲ್ಲೇ ನೆಲದ ಮೇಲೆ ತಾನು ನೋಡಿದ್ದ ಆ ಬೈರಾಗಿ ಕೂತು ಬೆಂಕಿಯ ಬೆಳಕಿನಲ್ಲಿ ಅದೇ ಆ ಹತ್ತಿಯ ಕಾಗದದ ಮೇಲೆ ಬರೆದಿದ್ದ ಒಕ್ಕಣೆಯನ್ನು ಬಿಚ್ಚಿ ನೋಡುತ್ತ ಒಂದು ಕಡ್ಡಿಯಿಂದ ಬೂದಿಯ ಮೇಲೆ ಒಂದೇ ಮನಸ್ಸಿನಿಂದ ಏನೋ ಲೆಕ್ಕ ಗುಣಿಸುತ್ತಿದ್ದಾನೆ.

ಮೃತ್ಯುಂಜಯನ ಮನೆಯೊಳಗಿದ್ದ, ಪರಂಪರೆಯಾಗಿ ಉಳಿಸಿಕೊಂಡು ಬಂದಿದ್ದ ಅದೇ ಒಕ್ಕಣೆಯ ಕಾಗದ!

ಎಲಾ ಭಂಡ ಬೈರಾಗಿ! ಎಲಾ ಹುಟ್ಟು ಕಳ್ಳ! ಇದಕ್ಕೇ ಅಲ್ಲವೇ ಅವನು ಮೃತ್ಯುಂಜಯನಿಗೆ ದುಃಖಿಸಬೇಡವೆಂದು ಹೇಳಿದ್ದು!

ಬೈರಾಗಿಯು ಒಮ್ಮೆ ಲೆಕ್ಕ ಗುಣಿಸುತ್ತಾನೆ. ಮತ್ತೆ ಒಂದು ಅಳತೆ ಕಡ್ಡಿಯಿಂದ ನೆಲವನ್ನು ಅಳೆಯುತ್ತಾನೆ. ಸ್ವಲ್ಪ ದೂರ ಹಾಗೆ ಅಳೆದು ಇದ್ದಕ್ಕಿದ್ದ ಹಾಗೆ ನಿರಾಶನಾಗಿ ಅಲ್ಲೇ ನಿಲ್ಲಿಸಿ, ತಲೆಯಲ್ಲಾಡಿಸುತ್ತ ಮತ್ತೆ ಬಂದು ಕೂತು ಬೂದಿಯಲ್ಲಿ ಗುಣಾಕಾರ ಮಾಡುತ್ತಾನೆ.

ಹೀಗೇ ಮಾಡುತ್ತ ರಾತ್ರಿ ಮುಗಿಯುತ್ತ ಬರುತ್ತಲೂ, ಕಡೆಯ ಝಾವದ ಚಳಿಗಾಳಿಯು ಬೀಸಿ ಮರಗಿಡಗಳ ತುದಿಯಲ್ಲಿನ ಚಿಗುರೆಲೆಗಳು ಚಲಿಸುತ್ತ ಮರ್ಮರ ಶಬ್ದ ಮಾಡುತ್ತಿರುವಾಗ ಆ ಬೈರಾಗಿ ಆ ಕಾಗದದ ಸುರುಳಿಯನ್ನು ಸುತ್ತಿಕೊಂಡು ಎತ್ತಲೋ ಹೊರಟುಹೋದ.

ಈ ಕಡೆ ಮರದ ಮೇಲೆ ಕೂತು ನೋಡುತ್ತಿದ್ದ ಮೃತ್ಯುಂಜಯನಿಗೆ ಏನು ಮಾಡಬೇಕೆಂದು ತೋಚದಾಯಿತು. ಆದರೆ ಒಂದು ವಿಷಯ ಮಾತ್ರ ಖಂಡಿತವಾಯಿತು. ಬೈರಾಗಿಯ ನೆರವಿಲ್ಲದೆ ಈ ಒಕ್ಕಣೆಯ ಗುಟ್ಟು ಬಯಲು ಮಾಡುವುದು ಸಾಧ್ಯವಿಲ್ಲ. ಆದರೆ ಲುಬ್ಧನಾದ ಬೈರಾಗಿ ಅವನಿಗಂತೂ ನೆರವಾಗುವುದಿಲ್ಲ. ಅದೂ ಖಂಡಿತ. ಆದರೂ ಕೂಡ ಗೋಪ್ಯವಾಗಿ ಬೈರಾಗಿಯ ಮೇಲೆ ಗಮನವಿಟ್ಟಿರುವುದಲ್ಲದೆ ಬೇರೆ ಮಾರ್ಗವಿಲ್ಲ. ಆದರೆ ಹಗಲು ಹೊತ್ತಿನಲ್ಲಿ ಗ್ರಾಮಕ್ಕೆ ಹೋಗದಿದ್ದರೆ ಅವನಿಗೆ ಅನ್ನ ಸಿಗುವುದಿಲ್ಲ. ಆದ್ದರಿಂದ ಏನಾದರಾಗಲಿ, ನಾಳೆ ಬೆಳಗ್ಗೆಯಾದರೂ ಒಮ್ಮೆ ಗ್ರಾಮದೊಳಗೆ ಹೋಗಿ ಬರುವುದೊಳ್ಳೆಯದು.

ಮುಂಜಾನೆ ಸಮೀಪಿಸಿದ ಹಾಗೆಲ್ಲ ಸುತ್ತ ಹರಡಿದ್ದ ಮಬ್ಬು ಕರಗಲು ತೊಡಗಿತು. ಆಗವನು ಮರದಿಂದ ಕೆಳಗಿಳಿದು ಬಂದ. ಬೈರಾಗಿ ಎಲ್ಲಿ ಕೂತು ಬೂದಿಯಲ್ಲಿ ಲೆಕ್ಕ ಮಾಡುತ್ತಿದ್ದನೋ ಆ ಜಾಗ ನೋಡಿದ. ಆದರೆ ಏನೂ ಅರ್ಥವಾಗಲಿಲ್ಲ. ನಾಲ್ಕೂ ಕಡೆ ಸ್ವಲ್ಪ ಓಡಾಡಿ ನೋಡಿದ. ಉಳಿದ ವನ ಪ್ರದೇಶಕ್ಕೂ ಇದಕ್ಕೂ ಯಾವ ವ್ಯತ್ಯಾಸವೂ ಕಂಡುಬರಲಿಲ್ಲ.

ಅಡವಿಯೊಳಗಡೆಯ ಕತ್ತಲು ಕ್ರಮೇಣ ಕಡಿಮೆಯಾಗುತ್ತ ಬಂದಾಗ ಮೃತ್ಯುಂಜಯ ಅತಿ ಜಾಗರೂಕತೆಯಿಂದ ನಾಲ್ಕೂ ಕಡೆ ಗಮನವಿಟ್ಟು ನೋಡುತ್ತ ಗ್ರಾಮದ ದಾರಿ ಹಿಡಿದ..... ಬೈರಾಗಿಯೆಲ್ಲಾದರೂ ತನ್ನನ್ನ ನೋಡಿಬಿಟ್ಟಾನೆಂಬ ಹೆದರಿಕೆ.

ಅಂದು ಮೃತ್ಯುಂಜಯ ಬಿಡಾರಮಾಡಿದ್ದ ಅಂಗಡಿಯ ಬಳಿ ಒಬ್ಬ ಕಾಯಸ್ಥ ಹೆಂಗಸು ಯಾವುದೋ ವ್ರತದ ಉದ್ಯಾಪನೆಯ ನಿಮಿತ್ತ ಬ್ರಾಹ್ಮಣ ಭೋಜನಕ್ಕೆ ಏರ್ಪಾಡು ಮಾಡಿದ್ದಳು. ಆ ಸ್ಥಳದಲ್ಲಿ ಇಂದು ಮೃತ್ಯುಂಜಯನಿಗೆ ಊಟವಾಯಿತು. ಕೆಲವು ದಿನಗಳಿಂದ ಸರಿಯಾದ ಊಟವಿಲ್ಲದೆ ಇಂದು ಇಷ್ಟು ಭೂರಿ ಭೋಜನ ಹೊಟ್ಟೆಗೆ ಬಿದ್ದು ಸ್ವಲ್ಪ ಹೊಟ್ಟೆ ಭಾರವಾಯಿತು. ಆಮೇಲೆ ತಂಬಾಕು ಸೇವನೆ ಮಾಡಿ ಅಂಗಡಿಯ ಹಜಾರದಲ್ಲಿ ಚಾಪೆ ಹಾಸಿ ಹಾಗೇ ಒರಗಿಕೊಂಡು ವಿಶ್ರಾಂತಿ ತೆಗೆದುಕೊಳ್ಳೋಣವೆಂದು ಕಾಲು ಚಾಚಿದ. ಹಿಂದಿನ ರಾತ್ರಿ ನಿದ್ದೆಯಿಲ್ಲದಿದ್ದುದರಿಂದ ಚೆನ್ನಾಗಿ ಮೈಮರೆಯುವ ಹಾಗೆ ನಿದ್ದೆ ಬಂದುಬಿಟ್ಟಿತು.

ಮೃತ್ಯುಂಜಯ ಅಂದು ಸ್ವಲ್ಪ ಬೇಗನೆ ಊಟ ತೀರಿಸಿಕೊಂಡು ಇನ್ನೂ ಹಗಲಾಗಿರುವಾಗಲೇ ಅಡವಿಯ ಕಡೆ ಹೊರಡಬೇಕೆಂದು ನಿರ್ಧರಿಸಿದ್ದ. ಆದರೆ ಆದದ್ದು ಅದರ ವ್ಯತಿರಿಕ್ತ. ಅವನಿಗೆ ನಿದ್ದೆಯಿಂದ ಎಚ್ಚರಾಗುವ ವೇಳೆಗೆ ಸೂರ್ಯ ಮುಳುಗಿದ್ದ. ಆದರೂ ಅಳುಕದೆ ಮೃತ್ಯುಂಜಯ ಮನಸ್ಸು ಮಾಡಿ ಆ ಕತ್ತಲಲ್ಲೇ ಅಡವಿಯನ್ನು ಹೊಕ್ಕ.

ನೋಡನೋಡುತ್ತ ರಾತ್ರಿಯ ಕತ್ತಲು ಹೆಪ್ಪುಗಟ್ಟುತ್ತಾ ಬಂತು. ಮರಗಳ ನೆರಳಿನಲ್ಲಿ ಏನೂ ಕಾಣಬರುವುದಿಲ್ಲ. ಅಡವಿಯ ನಡುವೆ ದಾರಿ ತಡೆದು ಹೋಗುವುದು. ಮೃತ್ಯುಂಜಯನು ಯಾವ ದಿಕ್ಕಿನಲ್ಲಿ ಎಲ್ಲಿಗೆ ಹೋಗುತ್ತಿರುವೆನೆಂದು ತಿಳಿಯದೆ ಸುಮ್ಮನೆ ನಡೆಯುತ್ತ ಹೋದ. ಹೀಗೆ ಎಷ್ಟೋ ಹೊತ್ತು ನಡೆದು ನಡೆದು ಅವನಿಗೆ ಕಾಲು ಬಿದ್ದುಹೋದುವು....ಕೊನೆಯೇ ಇಲ್ಲದಂತೆ ಯಾವುದೋ ಭ್ರಾಂತಿಯಲ್ಲಿ ಗುರಿಯಿಲ್ಲದೆ ಹಾಗೆ ನಡೆಯುತ್ತ ನಡೆಯುತ್ತ ನೋಡಿದರೆ ಆಗಲೇ ರಾತ್ರಿ ಮುಗಿಯುತ್ತ ಬಂದಿದೆ. ಅಡವಿಯ ಒಂದೇ ಪ್ರದೇಶದಲ್ಲಿ ಅವನು ಸುಮ್ಮನೆ ಸುತ್ತು ಹಾಕಿದ್ದ ಇಡೀ ರಾತ್ರಿ! ಕಾಗೆಗಳ ಗುಂಪೊಂದು 'ಕಾ ಕಾ' ಎನ್ನುತ್ತ ಗ್ರಾಮದ ಕಡೆ ಹಾರಿಕೊಂಡು ಹೋದುವು. ಅವುಗಳ 'ಕಾ ಕಾ' ಶಬ್ದ ಮೃತ್ಯುಂಜಯನ ಕಿವಿಗೆ ವ್ಯಂಗ್ಯವಾದ ತಿರಸ್ಕಾರದಂತೆ ಕೇಳಬಂತು.

೬

ಲೆಕ್ಕಾಚಾರದಲ್ಲಿ ಬಾರಿಬಾರಿಗೂ ತಪ್ಪು, ಮತ್ತು ಆ ತಪ್ಪನ್ನು ಹುಡುಕುತ್ತ ಹುಡುಕುತ್ತಲೇ ಕಟ್ಟಕಡೆಗೆ ಬೈರಾಗಿ ಸುರಂಗದ ದಾರಿಯನ್ನು ಕಂಡುಹಿಡಿದುಬಿಟ್ಟಿದ್ದ. ಸುರಂಗದ ಮಧ್ಯೆ ಪಂಜು ಹಿಡಿದುಕೊಂಡು ಅವನು ಪ್ರವೇಶ ಮಾಡಿದ. ಸುತ್ತ ಕಟ್ಟಿದ್ದ ಪುರಾತನ ಕಾಲದ ಗೋಡೆಯ ಮೇಲೆಲ್ಲಾ ತೇವ. ಅಲ್ಲಲ್ಲಿ ಒಂದೊಂದು ಕಡೆ ನೀರು ಸೋರುತ್ತದೆ. ಕೆಲವೆಡೆಗಳಲ್ಲಿ ಕಪ್ಪೆಗಳು ಒಂದಕ್ಕೊಂದು ಅಪ್ಪಿಕೊಂಡು ರಾಶಿರಾಶಿಯಾಗಿ ಬಿದ್ದು ನಿದ್ದೆಮಾಡುತ್ತಿವೆ. ಎಲ್ಲೆಲ್ಲೂ ಜಾರಿಕೆ. ಎಚ್ಚರಿಕೆಯಿಂದ

ಹೆಜ್ಜೆಯಿಡುತ್ತ ಮುಂದೆ ಹೋಗುತ್ತ ಸ್ವಲ್ಪ ದೂರ ಬಂದ ಮೇಲೆ ಬೈರಾಗಿಗೆ ದಾರಿಗೆದುರಾಗೊಂದು ಗೋಡೆಯೆದ್ದಿರುವುದು ಕಾಣಬಂತು. ಅವನಿಗೆ ಆಗೇನು ಮಾಡುವುದೆಂದು ತೋರದಾಯಿತು. ಗೋಡೆಯ ಮೇಲೆಲ್ಲಾ ತನ್ನ ಕಬ್ಬಿಣದ ದಂಡದಿಂದ ಬಲವಾಗಿ ಬಡಿದು ನೋಡಿದ – ಎಲ್ಲಾದರೂ ಒಳಗಡೆ ಟೊಳ್ಳಾಗಿರುವ ಶಬ್ದ ಕೇಳಬರುತ್ತೇನೋ ಎಂದು. ಇಲ್ಲ, ಕೇಳಬರಲಿಲ್ಲ. ಗೋಡೆಯಲ್ಲೆಲ್ಲೂ ತೂತಿಲ್ಲ.... ದಾರಿಯಿಲ್ಲೇ ಮುಗಿದಂತಾಯಿತು. ಸಂದೇಹವಿಲ್ಲ.

ತತ್‌ಕ್ಷಣ ಅವನು ಸೊಂಟದಿಂದ ಆ ಕಾಗದದ ಸುರುಳಿ ತೆಗೆದು ತಲೆಯ ಮೇಲೆ ಕೈಯಿಟ್ಟು ಯೋಚಿಸತೊಡಗಿದ. ಇಡೀ ರಾತ್ರಿಯನ್ನು ಹೀಗೇ ಕಳೆದ.

ಮಾರನೆ ದಿನ ಬೆಳಗ್ಗೆಯಾಗುತ್ತಲೂ ಮತ್ತೆ ಲೆಕ್ಕಾಚಾರ ಮಾಡಿದ. ಗುಣಿಸಿ ಏನೋ ನಿರ್ಧಾರಕ್ಕೆ ಬಂದು ಸುರಂಗವನ್ನು ಹೊಕ್ಕ. ಒಕ್ಕಣೆಯ ಸಂಕೇತವನ್ನು ಸೂಕ್ಷ್ಮವಾಗಿ ಅನುಸರಿಸಿ ಮುಂದೆ ಹೋಗಿ ಒಂದು ಕಡೆಯ ಗೋಡೆಯಲ್ಲಿ ಕಲ್ಲೊಂದು ಅಲುಗುವುದನ್ನು ಕಂಡ. ಕೂಡಲೇ ಅದನ್ನು ಮೀಟಿ ತೆಗೆದು ನೋಡಿದರೆ ಅಲ್ಲೊಂದು ದಾರಿ ಹೋಗುವುದು ಕಾಣಬಂತು. ಆ ಕತ್ತಲ ದಾರಿಯಲ್ಲಿ ನಿಧಾನವಾಗಿ ಹೆಜ್ಜೆ ಹಾಕುತ್ತ ಮುಂದುವರಿದ. ಅದೂ ಒಂದು ಕಡೆ ಮುಚ್ಚಿಹೋಗಿತ್ತು. ಮುಂದೆ ಹೋಗುವ ಹಾಗೇ ಇಲ್ಲ. ಮತ್ತೆ ಹಿಂದಿರುಗಿ ಬಂದ. ಮತ್ತೆ ಮಾರನೇ ದಿನ ಒಕ್ಕಣೆ ನೋಡಿ ಗುಣಾಕಾರ ಹಾಕುವುದು.

ಹೀಗೇ ಐದನೇ ರಾತ್ರಿ ಅವನು ಸುರಂಗದೊಳಗೆ ಹೊಕ್ಕು "ಇವತ್ತು ತಪ್ಪಾಗುವ ಹಾಗಿಲ್ಲ, ಇವತ್ತು ದಾರಿ ಸಿಕ್ಕಿಹೋಯಿತು. ಖಂಡಿತ" ಎಂದು ಕೂಗಿಕೊಂಡ. ಈ ದಾರಿಯೂ ಬಹಳ ಕಡಿದು, ಅಲ್ಲಲ್ಲಿ ದಾರಿ ಕವಲೊಡೆದು, ಒಂದಾದ ಮೇಲೊಂದು ನಾನಾ ಕವಲು ದಾರಿಗಳಾದುವು. ಕೆಲವು ಕಡೆಗಳಲ್ಲಂತೂ ಬಹಳ ಇಕ್ಕಟ್ಟು, ಹೊಟ್ಟೆಯ ಮೇಲೆ ದೂಡಿಕೊಂಡು ಮುಂದೆ ಹೋಗಬೇಕಾಗಿತ್ತು. ಅತಿ ಜಾಗರೂಕತೆಯಿಂದ ಕೈಯಲ್ಲಿ ಪಂಜು ಹಿಡಿದು ನಿಧಾನವಾಗಿ ದೇಕುತ್ತ ದೇಕುತ್ತ ಮುಂದರಿದು ಕಡೆಗೆ ಗೋಳಾಕಾರದ ಒಂದು ಕೋಣೆಗೆ ಬಂದು ತಲಪಿದ. ಆ ಕೋಣೆಯ ನಡುವೆ ಕಟ್ಟೆ ಕಟ್ಟಿದ ದೊಡ್ಡದೊಂದು ಬಾವಿ. ಬೈರಾಗಿ ಪಂಜು ಹಿಡಿದು ನೋಡಿದ. ಅದರ ಬೆಳಕಿನಲ್ಲೂ ಬೈರಾಗಿಗೆ ಬಾವಿಯ ತಳ ಕಾಣಲಿಲ್ಲ. ಕೋಣೆಯ ಛಾವಣಿಯಿಂದ ದೊಡ್ಡದೊಂದು ಕಬ್ಬಿಣದ ಸರಪಳಿ ಆ ಬಾವಿಯೊಳಗೆ ಇಳಿಯಬಿಟ್ಟಿದ್ದುದು ಕಾಣಬಂತು. ಬೈರಾಗಿ ಅದನ್ನು ಎರಡು ಕೈಗಳಿಂದಲೂ ಹಿಡಿದು ಬಲವೆಲ್ಲ ಬಿಟ್ಟು ಜಗ್ಗಿ ಅಲ್ಲಾಡಿಸಿದ. 'ಟಂಗ್' ಎಂಬ ಶಬ್ದವೊಂದು ಆ ಬಾಯಿಯ ತಳಭಾಗದಿಂದ ಹೊರಬಿದ್ದು ಆ ಕೋಣೆಯಲ್ಲೆಲ್ಲ ಮಾರ್ದನಿಯಾಯಿತು. ಬೈರಾಗಿಯಾಗ ಆವೇಶ ತಡೆಯಲಾರದೆ "ಹಾ ಸಿಕ್ಕಿಹೋಯಿತು" ಎಂದು ಗಟ್ಟಿಯಾಗಿ ಕೂಗಿದ.

ಹಾಗೆ ಕೂಗಿದುದೇ ತಡ, ಹಠಾತ್ತಾಗಿ ಆ ಕೋಣೆಯ ಹಾಳುಬಿದ್ದ ಗೋಡೆಯ ಮೇಲಿಂದ ಒಂದು ದೊಡ್ಡ ಕಲ್ಲು "ಧಪ್" ಎಂದು ಉರುಳಿಕೊಂಡು ಬಿತ್ತು. ಅದರೊಡನೆಯೇ ಮತ್ತೊಂದು ಯಾವುದೋ ಜೀವಂತ ವಸ್ತು ಕೂಡ ಧಪ್ಪನೆ ಬಿದ್ದು, ಆ ಕೂಡಲೆ 'ಅಯ್ಯಪ್ಪಾ' ಎಂದು ಕಿರುಲಿತು. ಬೈರಾಗಿ ಈ ಶಬ್ದ ಕೇಳಿ ಬೆಚ್ಚಿ ನಡುಗಿದ. ಅಲ್ಲಿಯವರೆಗೂ ಕೈಯಲ್ಲಿ ಹಿಡಿದಿದ್ದ ಪಂಜು ಕೆಳಗೆ ಬಿದ್ದು ಬೆಳಕು ನಂದಿಹೋಯಿತು.

೭

"ಯಾರು ನೀನು?" ಎಂದು ಕೂಗಿದ ಬೈರಾಗಿ ಕೆಳಗೆ ಬಿದ್ದಿದ್ದವನನ್ನ ಕುರಿತು.

ಉತ್ತರವಿಲ್ಲ.

ಆಗ ಆ ಕತ್ತಲಲ್ಲೇ ಕೈ ತಡಕಿದಾಗ ಮನುಷ್ಯದೇಹ ಕೈಗೆ ಸಿಕ್ಕಿತು. ಬೈರಾಗಿಯು ಆ ಮೈಯನ್ನು ಅಲ್ಲಾಡಿಸಿ "ಯಾರು ನೀನು?" ಎಂದು ಸ್ವಲ್ಪ ಗಡುಸಾಗಿ ಕೂಗಿದ. ಇನ್ನೂ ಉತ್ತರವಿಲ್ಲ. ಜ್ಞಾನವಿಲ್ಲದೆ ಬಿದ್ದಿರಬೇಕೆಂದೆನ್ನಿಸಿತು. ಆಗ ಬೈರಾಗಿ ಕೂಡಲೆ ಚಕುಮಕಿ ಕಲ್ಲನ್ನು ಒಂದಕ್ಕೊಂದು ಬಡಿದು ಬಹಳ ಪ್ರಯಾಸದಿಂದ ಪಂಜು ಹೊತ್ತಿಸಿದ. ಅಷ್ಟು ಹೊತ್ತಿಗೆ ಬಿದ್ದಿದ್ದವನಿಗೆ ಎಚ್ಚರ ಬಂತು. ಏಳಲು ಹವಣಿಸಿ ಆಗದೆ ನೋವಿನಿಂದ ನರಳುತ್ತಾ ಕೂಗಿಕೊಂಡ. ಬೈರಾಗಿ ಪಂಜಿನ ಬೆಳಕಿನಲ್ಲಿ ಅವನ ಮುಖ ನೋಡಿ ಬೆಚ್ಚಿ ಒಂದೆರಡು ಹೆಜ್ಜೆ ಹಿಂದೆ ಬಂದು "ಏನಿದು?.....ನೀನು ಮೃತ್ಯುಂಜಯ! ನಿನಗೆ ಈ ಕೆಟ್ಟ ಬುದ್ಧಿ ಹೇಗೆ ಬಂತು?" ಎಂದು ಕೂಗಿದ.

ಮೃತ್ಯುಂಜಯ "ಸ್ವಾಮೀ, ನನ್ನನ್ನು ಕ್ಷಮಿಸಿ. ದೇವರು ನನಗೆ ಶಾಸ್ತಿ ಮಾಡಿದ. ತಮ್ಮ ಮೇಲೆ ಕಲ್ಲು ತಳ್ಳಿ ಕೊಲ್ಲಲು ಯತ್ನಿಸಿದೆ. ಆದರೆ ಸಂಭಾಳಿಸಿಕೊಳ್ಳಲಾಗದೆ ಜಾರಿಕೆಯ ಕಲ್ಲಿನೊಂದಿಗೆ ನಾನೂ ಉರುಳಿಕೊಂಡು ಬಿದ್ದೆ. ನನ್ನ ಕಾಲು ಮುರಿದೇ ಹೋಗಿದೆಯೆಂದು ಕಾಣುತ್ತದೆ" ಎಂದ.

"ನನ್ನನ್ನ ಕೊಂದಿದ್ದರೆ ನಿನಗೇನಪ್ಪಾ ಲಾಭ ಸಿಗುತ್ತಿತ್ತು?" ಎಂದು ಕೇಳಿದ ಬೈರಾಗಿ.

"ಲಾಭದ ಮಾತನ್ನ ಕೇಳುತ್ತೀರಲ್ಲ. ಯಾವ ಬಾಯಿಂದ? ತಾವು ಬೈರಾಗಿಗಳು, ಎಲ್ಲಾ ತ್ಯಜಿಸಿದಂಥವರು, ಯಾವ ದುರಾಸೆಯಿಂದ ನನ್ನ ಪೂಜೆಯ ಮನೆಯಿಂದ ಆ ಒಕ್ಕಣೆಯ ಕಾಗದವನ್ನು ಕಳ್ಳತನ ಮಾಡಿ ಈ ಸುರಂಗದ ಮಧ್ಯೆ ಓಡಾಡುತ್ತಿದ್ದೀರಿ? ನೀವು ಕಳ್ಳರು, ಭಂಡಸಂನ್ಯಾಸಿ! ನನ್ನ ಅಜ್ಜನಿಗೊಬ್ಬ, ನಿಮ್ಮಂತಹವನಲ್ಲ – ನಿಜವಾದ ಸಂನ್ಯಾಸಿಯೊಬ್ಬರು, ಈ ಕಾಗದ ಕೊಟ್ಟು ಹೋಗಿದ್ದರು. ಆತನು ನಮ್ಮ ಮನೆತನದಲ್ಲಿ ಯಾರಾದರೊಬ್ಬರು ಈ ಕಾಗದದ ಸಂಕೇತವನ್ನು ಅರ್ಥಮಾಡಿಕೊಳ್ಳಬಲ್ಲನೆಂದು

ಹೇಳಿದ್ದರು. ಈ ಗುಪ್ತ ಐಶ್ವರ್ಯವು ನಮ್ಮ ವಂಶದವರಿಗೆ ಮಾತ್ರ ಪ್ರಾಪ್ಯ. ಆದ್ದರಿಂದಲೇ ನಾನೀ ಕೆಲವು ದಿನಗಳಿಂದಲೂ ಊಟ, ನಿದ್ದೆಗಳಿಲ್ಲದೆ ನೆರಳಿನಂತೆ ನಿಮ್ಮ ಹಿಂದೆ ಬಿದ್ದಿದ್ದೇನೆ. ಇವತ್ತು ನೀವು "ಸಿಕ್ಕಿಬಿಟ್ಟಿತು" ಎಂದು ಕೂಗಿಕೊಂಡಾಗ ನನಗೆ ತಡೆಯುವುದಕ್ಕಾಗಲಿಲ್ಲ. ನಾನು ನಿಮಗೆ ತಿಳಿಯದಂತೆ ನಿಮ್ಮನ್ನು ಹಿಂಬಾಲಿಸಿ ಆ ದೊಡ್ಡ ರಂಧ್ರದ ಹಿಂದೆ ಅಡಗಿ ಕೂತಿದ್ದೆ. ಅಲ್ಲೇ ಒಂದು ಕಲ್ಲನ್ನು ಸಡಿಲಿಸಿ ನಿಮ್ಮ ಮೇಲೆ ತಳ್ಳಿ ಸಾಯಿಸಲೆಣಿಸಿದೆ. ಆದರೆ ನನ್ನ ಕೈಯಲ್ಲಿ ಬಲ ಉಡುಗಿಹೋಗಿದೆ. ಜಾಗವೂ ನೀರಿನಿಂದ ತೋಇದು ಬಲು ಜಾರಿಕೆ. ಅದಕ್ಕೇ ನಾನು ಜಾರಿ ಉರುಳಿ ಬಿದ್ದುಬಿಟ್ಟೆ. ಈಗ ನೀವು ನನ್ನನ್ನ ಕೊಂದುಹಾಕಿದರೂ ಒಳ್ಳೆಯದೇ. ನಾನು ಯಕ್ಷಪಿಶಾಚಿಯಾಗಿ ಈ ಧನವನ್ನು ಕಾಯುತ್ತೇನೆ. ನೀವು ಮಾತ್ರ ಇದನ್ನ ತೆಗೆದುಕೊಳ್ಳಲು ಸಾಧ್ಯವಿಲ್ಲ. ಏನು ಮಾಡಿದರೂ ಸಾಧ್ಯವಿಲ್ಲ... ಒಂದು ವೇಳೆ ತೆಗೆದುಕೊಳ್ಳಲು ಯತ್ನಿಸಿದರೆ, ನಾನು ಬ್ರಾಹ್ಮಣ. ನಿಮಗೆ ಶಾಪ ಕೊಟ್ಟು ಈ ಬಾವಿಯಲ್ಲಿ ಧುಮುಕಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ. ಈ ಧನವಾಗ ನಿಮ್ಮ ಪಾಲಿಗೆ ಬ್ರಹ್ಮರಕ್ತ, ಗೋರಕ್ತಕ್ಕೆ ಸಮಾನವಾಗುವುದು. ಈ ಧನವನ್ನೆಂದಿಗೂ ನೀವು ನೆಮ್ಮದಿಯಿಂದ ಭೋಗಿಸಲಾರಿರಿ. ನನ್ನ ಪಿತೃಪಿತಾಮಹರು ಈ ಧನದ ಮೇಲೆ ತಮ್ಮ ಮನಸ್ಸೆಲ್ಲ ನಟ್ಟು ಸತ್ತುಹೋಗಿದ್ದಾರೆ. ಈ ಧನದ ಬಗ್ಗೆ ಧ್ಯಾನಮಾಡುತ್ತ ಮಾಡುತ್ತಲೆ ನಾವು ದರಿದ್ರರಾಗಿಹೋದೆವು. ಈ ಧನದ ಸಂಧಾನ ಮಾಡಲೋಸುಗವೇ ನಾನು ಮನೆಯಲ್ಲಿ ಅನಾಥಳಾದ ಹೆಂಡತಿ, ಮಕ್ಕಳನ್ನು ತೊರೆದು, ನಿದ್ರಾಹಾರ ಬಿಟ್ಟು, ನಿರ್ಭಾಗ್ಯನಾದ ಹುಚ್ಚನಂತೆ ಬೆಟ್ಟ, ಬಯಲು ಹಳ್ಳಕೊಳ್ಳವೆನ್ನದೆ ಅಲೆಯುತ್ತಿದ್ದೇನೆ. ಈ ಧನವನ್ನು ನಾನು ಬದುಕಿರುವಾಗ ನೀವೆಂದಿಗೂ ತೆಗೆದುಕೊಳ್ಳಲು ಬಿಡುವುದಿಲ್ಲ" ಎಂದ ಮೃತ್ಯುಂಜಯ.

೮

ಆಗ ಬೈರಾಗಿ ನುಡಿದ. "ಹಾಗಾದರೆ ನನ್ನ ಮಾತು ಕೇಳು, ಸ್ವಲ್ಪ. ಎಲ್ಲಾ ವಿವರವನ್ನೂ ಹೇಳುತ್ತೇನೆ. ನಿನಗೆ ಗೊತ್ತೋ, ನಿಮ್ಮ ಅಜ್ಜನಿಗೊಬ್ಬ ಚಿಕ್ಕ ತಮ್ಮನಿದ್ದ, ಅವನ ಹೆಸರು ಶಂಕರ ಅಂತ?"

"ಹೂಂ. ಅವನೆಂದೋ ದೇಶಾಂತರ ಹೋದವನು ಆಮೇಲೆ ಪತ್ತೆಯೇ ಇಲ್ಲ" ಎಂದ ಮೃತ್ಯುಂಜಯ.

"ನಾನೇ ಆ ಶಂಕರ" ಎಂದ ಬೈರಾಗಿ. ಮೃತ್ಯುಂಜಯನಾಗ ಹತಾಶನಾಗಿ ದೊಡ್ಡದಾಗಿ ನಿಟ್ಟುಸಿರು ಬಿಟ್ಟ. ಇಷ್ಟು ದಿನ ಈ ಗುಪ್ತಧನದ ಮೇಲೆ ಅಧಿಕಾರವಿರುವವನು ತಾನೊಬ್ಬನೇ, ಬೇರೆ ಯಾರೂ ಇಲ್ಲ ಎಂದುಕೊಂಡಿದ್ದ.

ಈಗ ಅವನ ವಂಶದವನೇ ಆದ ಹತ್ತಿರದ ಬಂಧುವೊಬ್ಬ ಬಂದು ಆ ಅಧಿಕಾರವನ್ನು ಕಸಿದುಕೊಂಡುಬಿಟ್ಟ.

ಶಂಕರ ಹೇಳತೊಡಗಿದ – "ನಿಮ್ಮಜ್ಜ – ನಮ್ಮಣ್ಣ – ಬೈರಾಗಿಯ ಕೈಯಿಂದ ಆ ಕಾಗದವನ್ನು ತೆಗೆದುಕೊಂಡಲಾಗಾಯಿತು ಅದು ನನ್ನ ಕಣ್ಣಿಗೆ ಬೀಳದಂತೆ ಅಡಗಿಸಿಡಲು ಪ್ರಯತ್ನಿಸುತ್ತಿದ್ದರು. ಆದರೆ ನಾನು ಸುಮ್ಮನಿರಲಿಲ್ಲ. ಅವರೆಷ್ಟು ಮಟ್ಟಿಗೆ ಅದನ್ನ ಬಚ್ಚಿಡಲು ಯತ್ನಿಸಿದರೂ ನನ್ನ ಕುತೂಹಲವೂ ಅಷ್ಟಕಷ್ಟು ಏರುತ್ತ ಹೋಯಿತು. ಅವರದನ್ನು ದೇವತೆಯ ಪೀಠದ ಕೆಳಗಡೆ ಪೆಟ್ಟಿಗೆಯೊಳಗಿಟ್ಟು ಜೋಪಾನವಾಗಿಟ್ಟಿದ್ದರು. ನನಗದು ತಿಳಿದುಹೋಯಿತು. ಮತ್ತು ಅದರ ಬೀಗದ ಕೈಯ ನಕಲೊಂದನ್ನು ಮಾಡಿಸಿ ನಿತ್ಯವೂ ಅವರಿಗೆ ತಿಳಿಯದಂತೆ ಆ ಕಾಗದ ತೆಗೆದು ಅದರ ಒಕ್ಕಣೆಯನ್ನು ಸ್ವಲ್ಪ ಸ್ವಲ್ಪವಾಗಿ ಬೇರೊಂದು ಕಾಗದದಲ್ಲಿ ನಕಲು ಮಾಡಿಕೊಳ್ಳಲಾರಂಭಿಸಿದೆ. ನಕಲು ಪೂರೈಸಿದ ದಿನವೇ ನಾನು ಈ ಧನದ ಸಂಧಾನಕ್ಕಾಗಿ ಮನೆ ಬಿಟ್ಟು ಹೊರಗೆ ಹೊರಟೆ. ನನಗೂ ಮನೆಯಲ್ಲಿ ಹೆಂಡತಿ, ಒಂದು ಮಗು ಇದ್ದರೂ ಅವರನ್ನು ಅನಾಥರನ್ನಾಗಿ ಬಿಟ್ಟು ಬಂದುಬಿಟ್ಟೆ. ಈಗ ಅವರಲ್ಲಿ ಯಾರೂ ಬದುಕಿಲ್ಲ.....

"ಎಷ್ಟು ದೇಶ, ದೇಶಾಂತರಗಳನ್ನಲೆದಿದ್ದೇನೋ ಅವನ್ನೆಲ್ಲಾ ವಿಸ್ತಾರವಾಗಿ ವರ್ಣಿಸುವುದು ಆವಶ್ಯಕವಿಲ್ಲ ಈಗ. ಬೈರಾಗಿ ಕೊಟ್ಟ ಈ ಕಾಗದದ ಒಕ್ಕಣೆಯನ್ನು ಯಾವನಾದರೊಬ್ಬ ಬೈರಾಗಿಯೇ ನನಗೆ ಅರ್ಥ ಮಾಡಿಕೊಡಬಲ್ಲನೆಂದುಕೊಂಡು ಅವೆಷ್ಟು ಸನ್ಯಾಸಿ, ಬೈರಾಗಿಗಳನ್ನು ಸೇವೆ ಮಾಡಿದ್ದೇನೊ! ಅನೇಕ ಕಳ್ಳ ಬೈರಾಗಿಗಳು ನನ್ನ ಈ ಕಾಗದದ ವಿಷಯ ತಿಳಿದುಕೊಂಡು ಅದನ್ನ ನನ್ನಿಂದ ಕಸಿದುಕೊಳ್ಳಲು ಪ್ರಯತ್ನಪಟ್ಟಿದ್ದರು.

"ಈ ರೀತಿಯಾಗಿ ಅದೆಷ್ಟು ವರುಷಗಳಾದ ಮೇಲೆ ವರುಷಗಳುರುಳಿ ಹೋದವು..... ನನ್ನ ಮನಸ್ಸಿನಲ್ಲಿ ಒಂದು ಕ್ಷಣ, ಒಂದು ಘಳಿಗೆ ಶಾಂತಿಯಿರಲಿಲ್ಲ, ಸುಖವಿರಲಿಲ್ಲ. ಕಡೆಗೆ ಒಂದು ಸಲ ಪೂರ್ವಜನ್ಮದ ಪುಣ್ಯದಿಂದಲೋ ಏನೋ ಕುಮಾಯೂನ್ ಪರ್ವತದ ತಪ್ಪಲಲ್ಲಿ ಬಾಬಾ ಸ್ವರೂಪಾನಂದರ ದರ್ಶನ ಲಾಭವಾಯಿತು. ಆತನು ನನಗೆ "ವತ್ಸ, ತೃಷ್ಣೆಯನ್ನು ದೂರಮಾಡು, ಹಾಗೆ ಮಾಡಿದಲ್ಲಿ ವಿಶ್ವವ್ಯಾಪಿಯಾದ ಅಕ್ಷಯಸಂಪದವು ತಾನಾಗಿ ನಿನ್ನ ಬಳಿ ಬರುವುದು" ಎಂದರು. ಆತನು ನನ್ನ ಮನಸ್ಸಿನ ದಾಹವನ್ನು ತಣಿಸಿದರು. ಅವರ ಅನುಗ್ರಹದಿಂದ ಆಕಾಶದ ಉಜ್ವಲ ಬೆಳಕೂ, ಭೂಮಿಯ ಹಸಿರು ಶೋಭೆಯೂ ನನ್ನ ಕಣ್ಣಿಗೆ ರಾಜಭೋಗವಾಗಿ ಹೋದುವು. ಒಂದು ದಿನ ಪರ್ವತ ತಪ್ಪಲಿನ ಒಂದು ದೊಡ್ಡ ಬಂಡೆಯ ಕೆಳಗೆ ಚಳಿಗಾಲದ ಸಂಜೆ ಪರಮಹಂಸ ಬಾಬಾ ಅವರ ಅಗ್ನಿಕುಂಡದ ಬಳಿ ಕೂತಿದ್ದಾಗ ಆ ಧಗಧಗ ಉರಿಯುವ ಬೆಂಕಿಯಲ್ಲಿ ಆ ಕಾಗದವನ್ನು ಆಹುತಿಮಾಡಿಬಿಟ್ಟೆ.

ಬಾಬಾ ಸ್ವಲ್ಪ ಮುಗುಳುನಗೆ ತೋರಿದರು. ಆ ನಗುವಿನ ಅರ್ಥ ಆಗ ತಿಳಿದುಕೊಳ್ಳಲಿಲ್ಲ. ಈಗ ಅರ್ಥವಾಯಿತು, ಆತ ಖಂಡಿತವಾಗಿ ಮನಸ್ಸಿನಲ್ಲಿ ಅಂದುಕೊಂಡಿದ್ದರು. ಕಾಗದವನ್ನೇನೋ ಬೂದಿ ಮಾಡಿ ಬಿಸುಟಿದ್ದು ಸುಲಭ. ಆದರೆ ಮನಸ್ಸಿನ ವಾಸನೆಯೆನ್ನುವುದೊಂದು ಯಾವುದಿದೆಯೋ ಅದನ್ನು ಅಷ್ಟು ಸುಲಭವಾಗಿ ಬೂದಿಮಾಡಲಾಗುವುದಿಲ್ಲ.

"ಆ ಕಾಗದದ ಗುರುತು ಸ್ವಲ್ಪವೂ ಇಲ್ಲದಂತಾದಾಗ ನನ್ನ ಮನವು ಹಗುರವಾಯಿತು. ನಾಲ್ಕೂ ದಿಕ್ಕುಗಳಿಂದ ಕಟ್ಟಿಹಾಕಿದ್ದ ಯಾವುದೊಂದು ನಾಗಪಾಶ ಬಂಧನವು ಸಂಪೂರ್ಣವಾಗಿ ಬಿಚ್ಚಿಹೋದಂತಾಯಿತು. ಮುಕ್ತಿಯ ಅಪೂರ್ವ ಆನಂದದಿಂದ ನನ್ನ ಚಿತ್ತ ಪರಿಪೂರ್ಣವಾಗಿ ಹೋಯಿತು. ನಾನು ಮನಸ್ಸಿನಲ್ಲಂದುಕೊಂಡೆ – ಇನ್ನು ಮೇಲಿಂದ ನನಗಿನ್ನಾವ ಭಯವೂ ಇಲ್ಲ. ನಾನೀ ಜಗತ್ತಿನಲ್ಲಿ ಯಾವುದನ್ನೂ ಆಶಿಸುವುದಿಲ್ಲ. ನನಗೆ ಯಾವ ಅಭಾವವೂ ಇಲ್ಲವೆನ್ನಿಸಿತು.

"ಇದಾದ ಕೆಲವು ದಿನಗಳಲ್ಲಿಯೇ ಪರಮಹಂಸ ಬಾಬಾ ಅವರ ಸಾನ್ನಿಧ್ಯವು ನನಗೆ ಇಲ್ಲವಾಯಿತು. ಅವರನ್ನೆಷ್ಟೊ ಅರಸಿದೆ. ಎಲ್ಲೂ ಅವರು ನನಗೆ ಕಾಣಬರಲಿಲ್ಲ.

"ನಾನಾಗ ಸಂನ್ಯಾಸ ತೆಗೆದುಕೊಂಡು ನಿರಾಸಕ್ತ ಮನಸ್ಸಿನಿಂದ ಸುಮ್ಮನೆ ಅಲೆದಾಡತೊಡಗಿದೆ. ಎಷ್ಟೋ ವರುಷಗಳುರುಳಿಹೋದುವು. ಆ ಕಾಗದದ ಯೋಚನೆಯೇ ಮರೆತುಹೋಯಿತು...

"ಹೀಗೇ ಕೆಲವು ವರುಷಗಳಾದ ಮೇಲೆ ಒಂದು ದಿನ ಈ ಧಾರಾಗೋಳ ಗ್ರಾಮದ ವನದಲ್ಲಿ ಹೊಕ್ಕು ಬಂದು ಹಾಳು ಬಿದ್ದ ದೇಗುಲದಲ್ಲಿ ವಸತಿ ಮಾಡಿಕೊಂಡೆ. ಒಂದೆರಡು ದಿನ ಅಲ್ಲಿ ಇರುವಾಗ ಆ ದೇಗುಲದ ಗೋಡೆಯ ಮೇಲೆ ಅಲ್ಲಲ್ಲಿ ಕೆಲವು ಚಿಹ್ನೆಗಳು ಕೊರೆಯಲ್ಪಟ್ಟಿದ್ದುದನ್ನು ಕಂಡೆ. ಆ ಚಿಹ್ನೆಗಳು ನನಗೆ ಹೊಸವಲ್ಲ. ನನ್ನ ಅಣ್ಣನಿಂದ ನಾನು ನಕಲು ಮಾಡಿಕೊಂಡಿದ್ದ ಕಾಗದದಲ್ಲಿ ಅದೇ ಚಿಹ್ನೆಗಳಿದ್ದುವು.

"ಒಂದು ಕಾಲದಲ್ಲಿ ಬಹಳ ದಿನಗಳಿಂದಲೂ ಯಾವುದರ ಸಂಧಾನಕ್ಕಾಗಿ ಅಲೆದಾಡುತ್ತಿದ್ದೆನೋ ಅದೀಗ ನನ್ನ ಕೈಗೆಟುಕುವುದರಲ್ಲಿದೆ ಎಂಬುದರಲ್ಲಿ ನನಗಾವ ಸಂದೇಹವೂ ಉಳಿಯಲಿಲ್ಲ. ಆಗ ನಾನು ಇನ್ನಿಲ್ಲಿರುವುದು ಒಳ್ಳೆಯದಲ್ಲ ಎಂದುಕೊಂಡೆ. ಆ ಕೂಡಲೆ ಆ ವನವನ್ನು ಬಿಟ್ಟು ಹೊರಡಲು ಮನಸ್ಸು ಮಾಡಿದೆ.

"ಆದರೆ ಬಿಟ್ಟು ಹೊರಡುವುದು ಅಷ್ಟು ಸುಲಭವಾಗಲಿಲ್ಲ ನನಗೆ... ನೋಡಿಯೇಬಿಡೋಣ, ಏನಿದೆಯೋ ಎಂದು ಅನ್ನಿಸತೊಡಗಿತು. ಕುತೂಹಲವನ್ನು ಒಂದೇ ಸಲ ನಿವೃತ್ತಿ ಮಾಡಿಬಿಡುವುದೇ ಒಳ್ಳೆಯದು ಅನ್ನಿಸಿತು. ಆ ಕಲ್ಲ ಮೇಲಿನ ಗುರುತುಗಳ ಬಗ್ಗೆ ಎಷ್ಟೋ ಆಲೋಚನೆ ಮಾಡಿದೆ. ಆದರೆ ಏನೂ ಪ್ರಯೋಜನವಾಗಲಿಲ್ಲ. ಆಗ ಬಾರಿ ಬಾರಿಗೂ ಆ ಕಾಗದವನ್ನೇಕೆ ಆತುರದಲ್ಲಿ

ಸುಟ್ಟುಹಾಕಿಬಿಟ್ಟೆ ಎಂದು ಪೇಚಾಡಿಕೊಳ್ಳಲಾರಂಭಿಸಿದೆ, ಅದು ಇಟ್ಟುಕೊಂಡಿದ್ದರೆ ಏನಾಗುತ್ತಾಯಿತ್ತು?

"ಆಗ ಮತ್ತೆ ನನ್ನ ಹುಟ್ಟೂರಿಗೆ ಮರಳಿದೆ. ನಮ್ಮ ಪಿತೃಗಳ ಮನೆಯ ಅತಿ ಹೀನಾವಸ್ಥೆಯನ್ನು ನೋಡಿ ಮನಸ್ಸು ಕದಡಿತು. ಆಗಂದುಕೊಂಡೆ. ನಾನೇನೋ ಸಂನ್ಯಾಸಿ. ಎಲ್ಲಾ ಬಿಟ್ಟವನು. ನನಗೆ ಯಾಕೆ ಧನ, ಚಿನ್ನ, ರತ್ನ ಇವುಗಳೆಲ್ಲ? ಆದರೆ ಈ ಬಡಕುಟುಂಬಸ್ಥರಿಗೆ ಸಿಕ್ಕಿದರೆ ಅವರು ಉದ್ಧಾರವಾಗುತ್ತಾರೆ. ಆ ಗುಪ್ತ ಸಂಪತ್ತನ್ನು ಇವರ ಉದ್ಧಾರಕ್ಕೋಸ್ಕರ ಉಪಯೋಗಿಸುವುದರಲ್ಲಿ ದೋಷವೇನು?...

"ಆ ಕಾಗದವೆಲ್ಲಿತ್ತು ಎಂದು ಗೊತ್ತಿತ್ತು. ಅದನ್ನು ಸಂಗ್ರಹ ಮಾಡುವುದು ಕಷ್ಟವಾಗಲಿಲ್ಲ ನನಗೆ.

"ಆಮೇಲೆ ಒಂದು ವರುಷ ಪರ್ಯಂತ ಈ ಕಾಗದವನ್ನು ತೆಗೆದುಕೊಂಡು ಈ ನಿರ್ಜನವನದ ನಡುವೆ ಬೀಡು ಬಿಟ್ಟು ನಿತ್ಯವೂ ಗುಣಾಕಾರಹಾಕಿದ್ದೇನೆ, ಸಂಧಾನ ನಡೆಸಿದ್ದೇನೆ. ಮನದಲ್ಲಿ ಬೇರಾವ ಯೋಚನೆಯೂ ಇರಲಿಲ್ಲ. ಬಾರಿ ಬಾರಿಗೂ ಎಷ್ಟೋ ತಡೆ, ವಿಘ್ನಗಳು ಬಂದಂತೆಲ್ಲ ನನ್ನ ಹಠವೂ ಅಷ್ಟಕ್ಕಷ್ಟು ಹೆಚ್ಚಾಗುತ್ತ ಬಂತು. ಹುಚ್ಚು ಹಿಡಿದವನಂತೆ ಅಹೋರಾತ್ರಿ ಈ ಅಧ್ಯವಸಾಯದಲ್ಲಿ ನಿರತನಾಗಿಬಿಟ್ಟೆ.

"ಈ ಮಧ್ಯೆ ಅದು ಯಾವಾಗ ನೀನು ನನ್ನನ್ನ ಹಿಂಬಾಲಿಸುತ್ತಿದ್ದಿಯೆಂದು ನನಗೆ ಅರಿವಾಗಲಿಲ್ಲ. ನಾನು ಎಂದಿನ ಹಾಗೆ ಸ್ಥಿರಚಿತ್ತನಾಗಿದ್ದಿದ್ದರೆ ನೀನೆಂದಿಗೂ ನನ್ನಿಂದ ಮರೆಯಾಗಿರಲು ಸಾಧ್ಯವಿರುತ್ತಿರಲಿಲ್ಲ. ಆದರೆ ನಾನು ಮುಳುಗಿಹೋಗಿಬಿಟ್ಟಿದ್ದೆ ಆ ಚಿಂತೆಯಲ್ಲಿ. ಹೊರಗಿನ ನಡೆವಳಿಕೆಗಳು ಯಾವುವೂ ನನ್ನ ಕಣ್ಣಿಗೆ ಕಾಣುತ್ತಿರಲಿಲ್ಲ.

"ಅದಾದಮೇಲೆ, ನಾನು ಯಾವುದನ್ನು ಇದುವರೆಗೆ ಅರಸುತ್ತಿದ್ದೆನೋ ಇಂದು, ಇಗೋ. ಈಗ ತಾನೇ ಕಂಡುಹಿಡಿದುಬಿಟ್ಟೆ.

"ಈ ಜಾಗದಲ್ಲಿ ಯಾವುದು ಗುಪ್ತವಾಗಿಡಲ್ಪಟ್ಟಿದೆಯೋ ಈ ಪ್ರಪಂಚದಲ್ಲಿ ಯಾವ ರಾಜ, ರಾಜಾಧಿರಾಜರುಗಳ ಬೊಕ್ಕಸದಲ್ಲೂ ಇಷ್ಟೊಂದು ಐಶ್ವರ್ಯವಿರುವುದಿಲ್ಲ. ಮತ್ತು ಇನ್ನೊಂದು ರಹಸ್ಯವನ್ನು ಮಾತ್ರ ಭೇದಿಸಿಬಿಟ್ಟರೆ ಆ ಐಶ್ವರ್ಯ ಕೈಗೆಟುಕಿಬಿಡುತ್ತದೆ.

"ಈ ರಹಸ್ಯವೇ ಎಲ್ಲ ಸಂಕೇತಗಳಿಗಿಂತಲೂ ದುರೂಹ್ಯವಾದದ್ದು. ಆದರೆ ಈ ಸಂಕೇತವನ್ನೂ ನಾನು ಮನಸ್ಸಿನಲ್ಲೇ ಭೇದಿಸಿಬಿಟ್ಟಿದ್ದೇನೆ. ಆದ್ದರಿಂದಲೇ ನಾನು 'ಸಿಕ್ಕಿಹೋಯಿತು!' ಎಂದು ಆವೇಶದಿಂದ ಕಿರುಚಿದ್ದು...ಈಗ ಇಷ್ಟಪಟ್ಟರೆ ಕಣ್ಣು ಮುಚ್ಚಿ ತೆಗೆಯುವುದರೊಳಗಾಗಿ ಈ ಚಿನ್ನ, ರತ್ನ, ವೈಡೂರ್ಯಗಳ ಭಂಡಾರದ ನಡುವೆ ಹೋಗಿ ನಿಲ್ಲಬಲ್ಲೆ..."

ಆಗ ಮೃತ್ಯುಂಜಯ ತನ್ನ ಚಿಕ್ಕಜ್ಜನ ಕಾಲುಗಳೆರಡನ್ನೂ ಬಿಗಿಯಾಗಿ ಹಿಡಿದುಕೊಂಡು "ನೀವು ಸಂನ್ಯಾಸಿ. ನಿಮಗಂತೂ ಈ ಧನ ಯಾವ ಪ್ರಯೋಜನಕ್ಕೂ

ಬರುವುದಿಲ್ಲ. ನನಗೆ ಈ ಭಂಡಾರದ ನಡುವೆ ಕರೆದುಕೊಂಡು ಹೋಗಿ. ನನಗೆ ಅದು ನಷ್ಟವಾಗುವ ಹಾಗೆ ಮಾಡಬೇಡಿ" ಎಂದು ಅಂಗಲಾಚಿದ.

ಅದಕ್ಕೆ ಶಂಕರನು ನುಡಿದ "ಇಂದು ನನ್ನ ಕಡೆಯ ಬಂಧನ ಮುಕ್ತವಾಗಿ ಹೋಗಿದೆ. ನೀನು ಯಾವ ಕಲ್ಲನ್ನು ಉರುಳಿಸಿ ನನ್ನನ್ನ ಕೊಲ್ಲಲು ಹವಣಿಸಿದ್ದೆಯೋ ಅದರ ಪೆಟ್ಟು ನನ್ನ ಮೈಗೇನೂ ತಾಗದಿದ್ದರೂ ನನ್ನ ಮೋಹಾವರಣವನ್ನು ಕತ್ತರಿಸಿಹಾಕಿಬಿಟ್ಟಿತು. ತೃಷ್ಣೆಯ ಕರಾಳ ಮೂರ್ತಿಯನ್ನು ಇಂದು ನಾನು ನೋಡಿದೆ. ನನ್ನ ಗುರು ಪರಮಹಂಸರ ಅಂದಿನ ನಿಗೂಢ, ಪ್ರಶಾಂತವಾದ ಮುಗುಳ್ನಗೆಯು ಇಷ್ಟು ದಿನಗಳಾದ ಮೇಲೆ ನನ್ನ ಆಂತರ್ಯದ ಕಲ್ಯಾಣ ದೀಪದಲ್ಲಿ ಎಂದಿಗೂ ನಂದದೆ ಉರಿಯುವ ಬೆಳಕಿನ ಶಿಖೆಯನ್ನು ಹತ್ತಿಸಿಬಿಟ್ಟಿತು."

ಮೃತ್ಯುಂಜಯನಿಗೆ ಈ ಮಾತುಗಳೇನೂ ಅರ್ಥವಾದಂತೆ ತೋರಲಿಲ್ಲ. ಮತ್ತೆ ಅವನ ಪಾದಗಳನ್ನ ಬಿಗಿಯಾಗಿ ಹಿಡಿದು ಕಾತರದನಿಯಲ್ಲಿ "ನೀವು ಮುಕ್ತ ಪುರುಷರು, ನಾನು ಮುಕ್ತನಲ್ಲ. ನನಗೆ ಮುಕ್ತಿ ಬೇಕಿಲ್ಲ. ನನ್ನನ್ನ ಈ ಐಶ್ವರ್ಯದಿಂದ ವಂಚಿತನಾಗಿ ಮಾಡಬೇಡಿರಿ. ನಿಮ್ಮ ದಮ್ಮಯ್ಯ" ಎಂದು ಬೇಡಿಕೊಂಡ.

ಸಂನ್ಯಾಸಿಯಾಗ "ವತ್ಸ, ಹಾಗಾದರೆ ನೀನೀಗ ಈ ನಿನ್ನ ಒಕ್ಕಣೆಯ ಕಾಗದವನ್ನು ತೆಗೆದುಕೋ. ಇದರ ಸಹಾಯದಿಂದ ಧನವನ್ನು ಹುಡುಕಲು ಸಾಧ್ಯವಾಗುವ ಹಾಗಿದ್ದರೆ ಅಗತ್ಯವಾದ ನೀನೇ ತೆಗೆದುಕೋ. ಅಭ್ಯಂತರವಿಲ್ಲ" ಎಂದ.

ಹೀಗೆಂದು ಸಂನ್ಯಾಸಿಯು ತನ್ನ ದಂಡವನ್ನೂ ಮತ್ತು ಆ ಕಾಗದದ ಸುರುಳಿಯನ್ನೂ ಮೃತ್ಯುಂಜಯನ ಮುಂದೆ ಇಟ್ಟು ಹೊರಟುಹೋದ.

ಮೃತ್ಯುಂಜಯನಾಗ "ಅಜ್ಜಾ, ನಾನು ನಿನಗೆ ಹೊರಗಿನವನಲ್ಲ. ನನ್ನ ಮೇಲೆ ಕೃಪೆಯಿಡು. ಹೀಗೆ ನನ್ನನೊಬ್ಬನನ್ನೇ ತೊರೆದು ಹೋಗಬೇಡ. ನನಗೆ ದಾರಿ ತೋರಿಸಿಕೊಡು," ಎಂದು ದೈನ್ಯದಿಂದ ಕೂಗಿದ. ಉತ್ತರವೇನೂ ಬರಲಿಲ್ಲ.

ಆಗ ಮೃತ್ಯುಂಜಯ ಆ ದಂಡದ ಮೇಲೆ ಭಾರ ಊರಿ ಕುಂಟುತ್ತ ಕುಂಟುತ್ತ ಕೈಯಿಂದ ತಡಕಾಡಿ ದಾರಿ ಮಾಡಿಕೊಂಡು ಸುರಂಗದೊಳಗಿಂದ ಹೊರಗಡೆಗೆ ಬರಲು ಪ್ರಯತ್ನಿಸಿದ. ಆದರೆ ದಾರಿ ಅತ್ಯಂತ ಕಡಿದು, ನಾನಾ ಕವಲುಗಳು, ದಿಕ್ಕು, ದಿಕ್ಕಿಗೆ ತಿರುಗಿಸಿ ಮತ್ತೆ ಇದ್ದಲ್ಲಿಗೇ ಕರೆತರುವ ಬಿಕ್ಕಟ್ಟಿನ ದಾರಿಗಳು...

ಇಂತಹ ದಾರಿಗಳಲ್ಲವನು ಬಾರಿ ಬಾರಿಗೂ ಎಡರು, ತೊಡರುಗಳನ್ನು ಅತಿಕ್ರಮಿಸಿ ಕಡೆಗೂ ಸರಿಯಾದ ದಾರಿ ತಿಳಿಯದೆ ಕಾಲು ಸೋತು ಮೈ ಬಳಲಿ ಬಿದ್ದುಬಿಟ್ಟ. ಅಲ್ಲೇ ಅವನಿಗೆ ನಿದ್ದೆಯೂ ಬಂದುಬಿಟ್ಟಿತು. ನಿದ್ದೆಯಿಂದೆಚ್ಚರವಾದಾಗ ಹಗಲೋ ರಾತ್ರಿಯೋ ಹೊತ್ತೆಷ್ಟಾಗಿದೆಯೋ ಏನೂ ತಿಳಿಯಲಿಲ್ಲ. ಹೊಟ್ಟೆಯಲ್ಲಿ ಹಸಿವಾಯಿತು. ತನ್ನ ಅಂಗವಸ್ತ್ರದಲ್ಲಿ ಕಟ್ಟಿಕೊಂಡಿದ್ದ ಅವಲಕ್ಕಿಯನ್ನು ತಿಂದ. ಆ ಮೇಲೆ ಮತ್ತೆ ಎದ್ದು ಅದೇ ದಂಡದ ಮೇಲೆ ಭಾರ ಊರಿ ಸುರಂಗದಿಂದ

ಪಾರಾಗಲು ಹವಣಿಸಿದ. ಮತ್ತೆ ಅವನಿಗೆ ಹಿಡಿದ ದಾರಿಗಳೆಲ್ಲ ಅಡ್ಡ ಬರಲು ತೊಡಗಿತು.... ಕಡೆಗೆ ಹತಾಶನಾಗಿ ಕುಸಿದು ಬಿದ್ದುಬಿಟ್ಟ. ಏನು ಮಾಡುವುದಕ್ಕೂ ತೋಚದೆ ಗಟ್ಟಿಯಾಗಿ "ಓ ಬೈರಾಗೀ, ನೀನು ಎಲ್ಲಿದ್ದೀಯಾ?" ಎಂದು ಕೂಗಿದ.

ಆ ಕೂಗು ಸುರಂಗದ ನಾನಾ ಕವಲು ದಾರಿಗಳಿಂದ ಬಾರಿ, ಬಾರಿಗೂ ಮಾರ್ದನಿಸತೊಡಗಿತು, 'ಓ ಬೈರಾಗೀ....ಎಲ್ಲಿದ್ದೀ....ಯಾ....ಎಲ್ಲೀದ್ದಿಯಾ.... ಎಲ್ಲಿದ್ದೀಯಾ....ದ್ದೀಯಾ...ಆ!' .....ಅದು ನಿಂತ ಕೂಡಲೆ ಹತ್ತಿರದಿಂದಲೇ ದನಿಯೊಂದು ಉತ್ತರಿಸಿತು.

"ನಾನು ನಿನ್ನ ಹತ್ತಿರವೇ ಇದ್ದೇನೆ. ಏನು ಬೇಕು ಹೇಳು."

ಮೃತ್ಯುಂಜಯ ದೈನ್ಯದಿಂದ "ಆ ಧನವೆಲ್ಲಿದೆ....ದಯಮಾಡಿ ನನಗದನ್ನು ತೋರಿಸಲಾರೆಯಾ?" ಎಂದು ಕೂಗಿದ.

ಆಗದಕ್ಕೆ ಉತ್ತರವೇನೂ ಬರಲಿಲ್ಲ. ಮೃತ್ಯುಂಜಯ ಬಾರಿ ಬಾರಿಗೂ ಕೂಗಿದ. ಆದರೆ ಉತ್ತರ ಬರಲಿಲ್ಲ.

ಘಳಿಗೆ, ನಿಮಿಷ, ಪ್ರಹರಗಳ ವ್ಯತ್ಯಾಸವೇ ಇಲ್ಲದ ಆ ಪಾತಾಳದ ಚಿರ ರಾತ್ರಿಯ ಕತ್ತಲಲ್ಲಿ ಮೃತ್ಯುಂಜಯ ಮತ್ತೆ ಮಲಗಿ ನಿದ್ರಿಸಿದ. ಎಷ್ಟೋ ಹೊತ್ತಾದ ಮೇಲೆ ಎಚ್ಚರವಾಗಲು ಮತ್ತೆ ತಾನಿದ್ದ ಸ್ಥಳ, ಸ್ಥಿತಿಗಳ ನೆನಹಾಗಿ "ಅಯ್ಯಾ, ಬೈರಾಗೀ, ಇದ್ದೀಯೇನು?" ಎಂದು ಕೂಗಿದ.

ಆಗ ಹತ್ತಿರದಿಂದಲೇ "ಇಲ್ಲೇ ಇದ್ದೇನಪ್ಪಾ....ಏನು ಬೇಕು ಹೇಳು" ಎಂಬ ಉತ್ತರ ಬಂತು.

ಮೃತ್ಯುಂಜಯ "ನನಗೆ ಬೇರೇನೂ ಬೇಕಿಲ್ಲಪ್ಪ. ನನ್ನನ್ನ ಸದ್ಯ ಈ ಸುರಂಗದ ನರಕದಿಂದ ಪಾರು ಮಾಡಿ ಹೊರಗೆ ಕರೆದುಕೊಂಡು ಹೋಗಿಬಿಟ್ಟರೆ ನಿನಗೆ ಪುಣ್ಯ" ಎಂದ.

"ನಿನಗೆ ಧನ ಬೇಡವೇ ಹಾಗಾದರೆ?"

"ಬೇಡ....ನನಗದು ಬೇಕಿಲ್ಲ."

ಆಗ ಬೆಣಚುಕಲ್ಲು ಉಜ್ಜುವ ಶಬ್ದ ಕೇಳ ಬಂತು. ಒಂದೆರಡು ಕ್ಷಣಗಳಲ್ಲೇ ಉರಿಯುವ ಪಂಜು ಕಾಣಿಸಿತು.

ಆಗ ಬೈರಾಗಿ "ನಡಿ, ಹಾಗಾದರೆ, ಮೃತ್ಯುಂಜಯಾ.... ಈ ಸುರಂಗದಿಂದ ಹೊರಗೆ ಹೋಗೋಣ, ನಡಿ" ಎಂದ.

ಮೃತ್ಯುಂಜಯನಾಗ ಕಾತರದನಿಯಲ್ಲಿ "ಅಜ್ಜಾ, ಹಾಗಾದರೆ ಎಲ್ಲಾ ಪೂರ್ತಿಯಾಗಿ ವ್ಯರ್ಥವಾದ ಹಾಗೇನೆ? ಇಷ್ಟು ಕಷ್ಟ ಪಟ್ಟಮೇಲೂ ಧನ ಸಿಗುವುದೇ ಇಲ್ಲವೇ?" ಎಂದ.

ಆ ಮಾತಂದದ್ದೇ ತಡ ಪಂಜು ಆರಿಹೋಯಿತು. ಮೃತ್ಯುಂಜಯನೆಂದ "ಏನು ಕಲ್ಲೆದೆಯಪ್ಪಾ!" ಎಂದು ಕೂಗಿ ಅಲ್ಲೇ ಕುಸಿದು ಬಿದ್ದು ಯೋಚನೆ ಮಾಡುತ್ತ ಕೂತ. ಹೊತ್ತಿಗೆ ಗೊತ್ತು ಗುರಿಯೇಯಿಲ್ಲ. ಕತ್ತಲಿಗೂ ಕೊನೆಯಿಲ್ಲ. ಆಗ ಅವನಿಗೆ ತನ್ನ ಮೈ, ಮನಸ್ಸಿನ ಬಲವನ್ನೆಲ್ಲ ಉಪಯೋಗಿಸಿ ಈ ಕತ್ತಲ ಭೂತವನ್ನು ಒಡೆದು ವಿವಿಧ ಚಿತ್ರಗಳಿಗಾಗಿ ಅವನ ಪ್ರಾಣ ಹೊಡೆದುಕೊಂಡಿತು. ಆಗವನು ವ್ಯಾಕುಲನಾಗಿ ಮತ್ತೆ "ಅಯ್ಯಾ, ಬೈರಾಗಿಯಜ್ಜಾ, ಕಲ್ಲೆದೆಯ ಅಜ್ಜಾ, ನನಗೆ ಧನ ಬೇಡವೇ ಬೇಡ, ಬಿಡು. ನನ್ನನ್ನ ಹೇಗಾದರೂ ಮಾಡಿ ಇಲ್ಲಿಂದ ಪಾರು ಮಾಡಿಬಿಡು, ನಿನ್ನ ದಮ್ಮಯ್ಯ!" ಎಂದು ಕೂಗಿದ.

"ಧನ ಬೇಡವೇ? ನನ್ನ ಕೈಹಿಡಿದುಕೋ ಹಾಗಾದರೆ. ನನ್ನ ಸಂಗಡ ಬಾ" ಎಂದ ಬೈರಾಗಿ.

ಆದರೆ ಈ ಬಾರಿ ಪಂಜು ಹೊತ್ತಿಸಲಿಲ್ಲ. ಒಂದು ಕೈಯಲ್ಲಿ ದಂಡ, ಇನ್ನೊಂದು ಕೈಯಲ್ಲಿ ಸಂನ್ಯಾಸಿಯ ಉತ್ತರೀಯವನ್ನು ಹಿಡಿದುಕೊಂಡು ಮೃತ್ಯುಂಜಯನು ನಿಧಾನವಾಗಿ ಹೆಜ್ಜೆ ಹಾಕಲು ತೊಡಗಿದ. ಎಷ್ಟೋ ಹೊತ್ತು ಹೀಗೆ ನಡೆದು, ಅನೇಕ ಸೊಟ್ಟ ಸೊಟ್ಟಾದ ಕವಲು ದಾರಿಗಳನ್ನೆಲ್ಲ ಅತಿಕ್ರಮಿಸಿ ಒಂದು ಸ್ಥಳಕ್ಕೆ ಬಂದು ಬೈರಾಗಿ "ಇಲ್ಲಿ ನಿಂತುಕೋ" ಎಂದ.

ಮೃತ್ಯುಂಜಯನಲ್ಲೇ ನಿಂತ. ಆಮೇಲೆ ತುಕ್ಕು ಹಿಡಿದುಹೋದ ಕಬ್ಬಿಣದ ಬಾಗಿಲು ತೆಗೆದ ವಿಕಟವಾದ ಶಬ್ದ ಕೇಳಬಂತು. ಬೈರಾಗಿಯು ಮೃತ್ಯುಂಜಯನ ಕೈಯನ್ನು ಹಿಡಿದು "ಬಾ" ಎಂದ.

ಮೃತ್ಯುಂಜಯ ಸ್ವಲ್ಪ ಮುಂದೆ ಹೋದೊಡನೆ ತಾನು ಯಾವುದೋ ಒಂದು ಕೋಣೆಯನ್ನು ಹೊಕ್ಕಂತೆ ಅನ್ನಿಸಿತು. ಆಗ ಮತ್ತೆ ಬೆಣಚುಕಲ್ಲನ್ನು ಉಜ್ಜಿದ ಶಬ್ದವಾಗಿ, ಸ್ವಲ್ಪ ಹೊತ್ತಾದೊಡನೆ ಪಂಜು ಹತ್ತಿ ಉರಿಯಿತು. ಸುತ್ತ ಬೆಳಕಾಯಿತು. ಕಣ್ತೆರೆದು ನೋಡಿದರೆ ಏನು ಅದ್ಭುತ ನೋಟ! ನಾಲ್ಕು ಕಡೆಯೂ ಗೋಡೆಗೆ ಅಂಟಿಸಿದಂತೆ ದಪ್ಪನೆಯ ಬಂಗಾರದ ತಗಡುಗಳು ಒಂದರ ಮೇಲೊಂದು ಪದರ ಪದರವಾಗಿ ಜೋಡಿಸಲ್ಪಟ್ಟಿವೆ. ಉಜ್ವಲ ಸೂರ್ಯ ತೇಜಸ್ಸಿನ ಮೂಲಪುಂಜವನ್ನೇ ಪಾತಾಳದಲ್ಲಿ ಹಿಡಿದಿಟ್ಟಂತಿದೆ – ಆ ಚಿನ್ನದ ಪ್ರಕಾಶ. ನೋಡುತ್ತ ನೋಡುತ್ತ ಮೃತ್ಯುಂಜಯನ ಕಣ್ಣುಗಳೆರಡೂ ಕೆಂಡಗಳಂತೆ ಉರಿಯತೊಡಗಿದುವು. ಅವನಿಗೆ ಹುಚ್ಚು ತಲೆಗೇರಿ ಕೂಗತೊಡಗಿದ.

"ಈ ಚಿನ್ನವೆಲ್ಲ ನನ್ನದು... ನನ್ನದು. ಇದನ್ನ ನಾನಾರಿಗೂ ಕೊಡುವುದಿಲ್ಲ. ಇದನ್ನೆಂದಿಗೂ ನಾನು ಬಿಟ್ಟು ಕದಲುವುದಿಲ್ಲ – ಇಲ್ಲ... ಇದೆಲ್ಲ ನನ್ನದು... ನನ್ನದು... ಬೇರಾರದೂ ಅಲ್ಲ!"

ಆಗ ಸಂನ್ಯಾಸಿ "ಹಾಗಾ?... ನಿನ್ನದೇ ಸರಿ...ನೀನೆಂದಿಗೂ ಅವನ್ನ ಬಿಟ್ಟು ಕದಲಬೇಡ. ಇಗೋ, ಈ ಪಂಜನ್ನು ಇಲ್ಲೇ ಇಡುತ್ತೇನೆ. ಮತ್ತು ಈ ಹುರಿಕಡಲೆಯ ಹಿಟ್ಟು, ಈ ಅವಲಕ್ಕಿ – ಬೇಕಾದರೆ ಈ ಕೊಡದ ತುಂಬ ನೀರಿಟ್ಟು ಹೋಗುತ್ತೇನೆ....ನೀನಿಲ್ಲೇ ನೆಮ್ಮದಿಯಾಗಿರು" ಎಂದ. ನೋಡ ನೋಡುತ್ತ ಸಂನ್ಯಾಸಿ ಅವನ ಕಣ್ಣ ಮುಂದೆಯೇ ಹೊರಗೆ ಹೊರಟುಬಿಟ್ಟ. ಒಂದೆರಡು ಕ್ಷಣಗಳಲ್ಲಿ ಆ ಹೊನ್ನ ಬೊಕ್ಕಸದ ಕಬ್ಬಿಣದ ಬಾಗಿಲುಗಳು ಮುಚ್ಚಿದ ಶಬ್ದ ಕೇಳಿಸಿತು.

ಮೃತ್ಯುಂಜಯನು ಬಾರಿ ಬಾರಿಗೂ ಆ ಚಿನ್ನದ ರಾಶಿಯನ್ನು ಮುಟ್ಟುತ್ತ, ಕೋಣೆಯೊಳಗೆಲ್ಲ ಸುಮ್ಮನೆ ಸುತ್ತುತ್ತ ಬಂದ. ಸಣ್ಣ ಸಣ್ಣ ಬಂಗಾರದ ಹಾಳೆಗಳನ್ನೆಳೆದು ನೆಲದ ಮೇಲೆ ಎಸೆಯತೊಡಗಿದ. ಎದೆಯ ಮೇಲೆ ಎಳೆದು ಹಿಡಿದುಕೊಂಡ. ಒಂದರಮೇಲೊಂದನ್ನು ಬಡಿದು ಶಬ್ದ ಮಾಡತೊಡಗಿದ. ಒಂದೊಂದು ಹಾಳೆಯನ್ನ ತನ್ನ ಮೈ ಮೇಲೆಲ್ಲಾ ಮುಟ್ಟಿಕೊಂಡು ಚಿನ್ನದ ಸ್ಪರ್ಶ ಸುಖವನ್ನನುಭವಿಸಿದ. ಕಡೆಗೆ ಸುಸ್ತಾಗಿ ಚಿನ್ನದ ಹಾಳೆಯೊಂದನ್ನು ಹಾಸಿ ಅದರ ಮೇಲೆ ಮಲಗಿ ನಿದ್ದೆ ಮಾಡಿದ.

ಎಚ್ಚರವಾದ ಮೇಲೆ ಎದ್ದು ನೋಡಿದ. ನಾಲ್ಕು ದಿಕ್ಕುಗಳಲ್ಲಿ ಚಿನ್ನ ಝುಗಝುಗಿಸುತ್ತಿದೆ. ಚಿನ್ನ ಬಿಟ್ಟರೆ ಬೇರೊಂದಿಲ್ಲ ಎಲ್ಲೂ.

ಮೃತ್ಯುಂಜಯ ಆಗ ಯೋಚಿಸತೊಡಗಿದ. ಭೂಮಿಯ ಮೇಲೆ ಬಹುಶಃ ಇಷ್ಟು ಹೊತ್ತಿಗೆ ಸೂರ್ಯ ಹುಟ್ಟಿರುತ್ತಾನೆ. ಜೀವಜಂತುಗಳೆಲ್ಲ ಆನಂದದಿಂದ ಎಚ್ಚತ್ತು ಎದ್ದಿರುತ್ತವೆ. ಅವನ ಮನೆಯಲ್ಲಿನ ಕೊಳದ ಅಂಚಿನ ಹೂದೋಟದ ಮೇಲೆ ಬೀಸಿದ ಮುಂಜಾನೆಯ ಗಾಳಿ ಸ್ನಿಗ್ಧವಾದ ನರುಗಂಪನ್ನು ಹೊತ್ತು ಅವನ ಕಲ್ಪನೆಯಲ್ಲಿ ಅವನ ಮೂಗಿಗೆ ಅರ್ಪಿಸುತ್ತಿರುವಂತೆ ಅನ್ನಿಸಿತು. ಅವನು ಸ್ಪಷ್ಟವಾಗಿ ಕಣ್ಣಿಂದ ನೋಡತೊಡಗಿದ. ಬಾತುಕೋಳಿಗಳು ಬಳುಕಿಕೊಂಡು ಬಳುಕಿಕೊಂಡು ನಡೆಯುತ್ತ ಕಲರವ ಮಾಡುತ್ತ ಬೆಳಗಿನ ಹೊತ್ತು ಕೊಳದ ನೀರಿನಲ್ಲಿ ಬೀಳುತ್ತವೆ. ಮತ್ತು ಅವನ ಮನೆಯ ಒಕ್ಕಲಗಿತ್ತಿ, ಭಾಮಾ, ಸೊಂಟಕ್ಕೆ ಸೀರೆಯನ್ನು ಸಿಕ್ಕಿಸಿಕೊಂಡು ಮೇಲಕ್ಕೆತ್ತಿ ಹಿಡಿದ ಬಲಗೈಯಲ್ಲಿ ಹಿತ್ತಾಳೆಯ ಮತ್ತು ಕಂಚಿನ ತಟ್ಟೆ, ಬಟ್ಟಲುಗಳನ್ನ ತೆಗೆದುಕೊಂಡು ಕೊಳದ ಮೆಟ್ಟಲುಗಳ ಮೇಲೆ ತಂದಿಟ್ಟು ಒಂದೊಂದಾಗಿ ಉಜ್ಜಿ ತೊಳೆದಿಡುತ್ತಿರುತ್ತಾಳೆ...

ಮೃತ್ಯುಂಜಯ ಬಾಗಿಲಿಗೊಮ್ಮೆ ಬಡಿದು "ಅಯ್ಯಾ, ಬೈರಾಗಿ ಅಜ್ಜಾ, ಇದ್ದೀಯಾ?" ಎಂದು ಕೂಗಿದ.

ಬಾಗಿಲು ತೆಗೆಯಿತು. ಬೈರಾಗಿಯು "ಏನು ಬೇಕು?" ಎಂದು ಕೇಳಿದ.

ಮೃತ್ಯುಂಜಯ "ನಾನು ಹೊರಗೆ ಹೋಗಬೇಕು. ಆದರೆ ಸಂಗಡ ಈ ಚಿನ್ನ ಒಂದೆರಡು ತಗಡುಗಳನ್ನಾದರೂ ತೆಗೆದುಕೊಂಡು ಹೋಗಲಾಗುವುದಿಲ್ಲವೆ?" ಎಂದ.

ಬೈರಾಗಿ ಜವಾಬು ಕೊಡದೆ ಹೊಸದಾಗಿ ಪಂಜು ಹೊತ್ತಿಸಿದ, ಕಮಂಡಲದ ತುಂಬ ನೀರಿಟ್ಟ. ಮತ್ತು ಉತ್ತರೀಯದ ಗಂಟಿನಿಂದ ಒಂದು ಹಿಡಿ ಅವಲಕ್ಕಿ ನೆಲದ ಮೇಲೆ ಇಟ್ಟು ಹೊರಗಡೆ ಬಂದುಬಿಟ್ಟ. ಬಾಗಿಲು ಮತ್ತೆ ಮುಚ್ಚಿಕೊಂಡಿತು.

ಮೃತ್ಯುಂಜಯ ತೆಳುವಾದ ಚಿನ್ನದ ತಗಡೊಂದನ್ನು ಹಿಡಿದೆಳೆದು ಅದನ್ನು ಮುರಿದು ತುಂಡುತುಂಡಾಗಿ ಮಾಡತೊಡಗಿದ. ಆ ಮುರಿದ ಚಿನ್ನದ ತುಂಡುಗಳನ್ನು ಒಂದೊಂದಾಗಿ ತೆಗೆದುಕೊಂಡು ಮಣ್ಣಿನ ಹೆಂಟೆಗಳನ್ನೆಸೆಯುವಂತೆ ನಾಲ್ಕು ದಿಕ್ಕುಗಳಲ್ಲೂ ಎಸೆಯಲು ತೊಡಗಿದ. ಒಮ್ಮೊಮ್ಮೆ ಹಲ್ಲು ಹಾಕಿ ಕಡಿದು ಚಿನ್ನದ ತಗಡಿನ ಮೇಲೆ ಹಲ್ಲಿನ ಗುರುತು ಬೀಳುವ ಹಾಗೆ ಮಾಡಿದ. ಒಮ್ಮೊಮ್ಮೆ ಚಿನ್ನದ ತಗಡುಗಳನ್ನ ನೆಲದ ಮೇಲೆ ಹಾಸಿ ಅದರ ಮೇಲೆ ಕಾಲಿನಿಂದ ಒದೆಯಲು ತೊಡಗಿದ. ಮನಸ್ಸಿನಲ್ಲೇ ಈ ಲೋಕದಲ್ಲಿ ಇಂತಹ ಸಮ್ರಾಟರು ಎಷ್ಟು ಜನ ಇದ್ದಾರೆ – ಚಿನ್ನ ತೆಗೆದುಕೊಂಡು ಈ ರೀತಿಯಾಗಿ ಒದೆದು ಎಸೆಯಬಲ್ಲವರು? ಎಂದುಕೊಂಡ. ಮೃತ್ಯುಂಜಯನಿಗೆ ಪ್ರಳಯದ ಆವೇಶವೊಂದು ಮೈಮೇಲೆ ಬಂದಂತಾಯಿತು. ಈ ರಾಶಿಗೂಡಿದ ಚಿನ್ನವನ್ನು ಪುಡಿ ಪುಡಿಮಾಡಿ ಧೂಳಿನಂತೆ ಕಸಪೊರಕೆಯಿಂದ ಗುಡಿಸಿ ಗಾಳಿಯಲ್ಲಿ ಹಾರಿಸಿಬಿಡಬೇಕೆನ್ನಿಸಿತು. ಹೀಗೇ ಇಡೀ ಪ್ರಪಂಚದ ಮೇಲಿರುವ ಚಿನ್ನದ ಲೋಭವಿರುವ ರಾಜ, ಮಹಾರಾಜರುಗಳನ್ನೆಲ್ಲ ನಿಕೃಷ್ಟದಿಂದ ತಿರಸ್ಕರಿಸಬಲ್ಲವನಾಗಬೇಕೆಂದು ಆಸೆಯಾಯಿತು.

ಹೀಗೇ ಎಷ್ಟೋ ಹೊತ್ತು ಮೃತ್ಯುಂಜಯ ಚಿನ್ನದ ತಗಡುಗಳನ್ನ ಎಳೆದಾಡುತ್ತ ಕಾಲ ಕಳೆದು ಕಡೆಗೊಮ್ಮೆ ಸುಸ್ತಾಗಿ ನಿದ್ದೆಮಾಡಿಬಿಟ್ಟ. ನಿದ್ದೆಯಿಂದ ಎಚ್ಚರವಾಗೆದ್ದು ಮತ್ತೆ ನಾಲ್ಕೂ ದಿಕ್ಕು ಚಿನ್ನದ ರಾಶಿಗಳನ್ನ ಗಮನಿಸತೊಡಗಿದ. ಆಮೇಲೆ ಬಾಗಿಲ ಮೇಲೆ ಬಡಿಯುತ್ತ "ಓ, ಸಂನ್ಯಾಸಿ ಅಜ್ಜಾ... ನನಗೀ ಚಿನ್ನ ಬೇಕಾಗಿಲ್ಲ...ಸ್ವಲ್ಪವೂ ಬೇಕಿಲ್ಲ ಈ ಚಿನ್ನ... ನನ್ನ ಮಾತು ಕೇಳು" ಎಂದು ಕೂಗಿದ.

ಆದರೆ ಬಾಗಿಲು ತೆಗೆಯಲೇ ಇಲ್ಲ. ಕೂಗಿ ಕೂಗಿ ಮೃತ್ಯುಂಜಯನ ಗಂಟಲೊಣಗಿಕೊಂಡು ಬಂತು. ಆದರೂ ಬಾಗಿಲು ತೆಗೆಯಲೇ ಇಲ್ಲ. ಒಂದೊಂದೇ ಚಿನ್ನದ ತುಂಡು ತೆಗೆದುಕೊಂಡು ಬಾಗಿಲ ಮೇಲೆ ಹೊಡೆಯಲಾರಂಭಿಸಿದ... ಫಲವಾಗಲಿಲ್ಲ. ಮೃತ್ಯುಂಜಯನ ಎದೆಯಿಳಿದುಹೋಯಿತು. ಬೈರಾಗಿ ಒಂದೇ ಸಲಕ್ಕೆ ಹೊರಟೇ ಹೋಗಿದ್ದಾನೆ? ಏನು ಗತಿ! ಹಾಗಾದರವನು ಈ ಚಿನ್ನದ ಸೆರೆಮನೆಯಲ್ಲೇ ಸ್ವಲ್ಪ ಸ್ವಲ್ಪವಾಗಿ ಸವೆದು ಒಣಗಿ ಸಾಯಬೇಕೇ?

ಆಗ ಆ ಚಿನ್ನದ ರಾಶಿ ಅವನ ಕಣ್ಣಿಗೆ ವಿಷವಾಯಿತು. ಭಯಂಕರ ದುಃಸ್ವಪ್ನದ ಕ್ರೂರ ಹಾಸ್ಯದಂತೆ ಈ ಚಿನ್ನದ ರಾಶಿ ನಾಲ್ಕೂ ಕಡೆ ನಿಶ್ಶಬ್ದವಾಗಿ ನಿಂತು ಅಣಕಿಸುತ್ತಿದೆ. ಅವುಗಳ ಮಧ್ಯೆ ಅಲುಗಾಟವಿಲ್ಲ, ಬದಲಾವಣೆಯಿಲ್ಲ. ಮೃತ್ಯುಂಜಯನ ಹೃದಯವೀಗ

ತತ್ತರಿಸುತ್ತಿದೆ, ವ್ಯಾಕುಲದಿಂದ. ಭಯದಿಂದ ಹೊಡೆದುಕೊಳ್ಳಹತ್ತಿದೆ. ಆ ಚಿನ್ನದ ರಾಶಿಗೆ ಅದರ ಗೊಡವೆಯೇ ಇಲ್ಲ. ಅದಕ್ಕೆ ಇವನ ಸಂಪರ್ಕವೇ ಇಲ್ಲ. ಇವನ ವೇದನೆಯದಕ್ಕೆ ಹತ್ತೇ ಇಲ್ಲ. – ಎಂಥ ಕಠೋರವಸ್ತು ಈ ಧನ! ಈ ಚಿನ್ನದ ತಗಡುಗಳಿಗೆ ಬೆಳಕು ಬೇಕಿಲ್ಲ. ಆಕಾಶ ಬೇಡ, ಗಾಳಿ ಬೇಡ... ಜೀವ ಬೇಕಿಲ್ಲ... ಮುಕ್ತಿಯಾಸೆಯಿಲ್ಲ. ಇವುಗಳು ಈ ಶಾಶ್ವತವಾದ ಮಬ್ಬಿನ ನಡುವೆ ಸದಾ ಉಜ್ವಲವಾಗಿ, ಕಠಿಣವಾಗಿ, ಚಲಿಸದೆ ನಿಂತಿರುತ್ತವೆ.

ಭೂಮಿಯ ಮೇಲೀಗ ಗೋಧೂಲಿಯು ಬರಲಿದೆ. ಆಹಾ... ನೇಸರು ಮುಳುಗುವಾಗ ಬಾನಲ್ಲಿ ತೋರುವ ಆ ಚಿನ್ನವೆಲ್ಲಿ... ಇದೆಲ್ಲಿ! ಕ್ಷಣಕಾಲವೇ ಆದರೂ ಅದು ಕಂಗಳನ್ನ ತಣಿಸಿ, ಮನ ಮುಗ್ಧಮಾಡಿ, ಕತ್ತಲ ಪ್ರದೇಶದ ಕಡೆ ಕಣ್ಮರೆಯಾಗುವಾಗ ಅಳುತ್ತ ಬೀಳ್ಕೊಟ್ಟು ಹೋಗುವುದು... ಆಮೇಲೆ ಮೃತ್ಯುಂಜಯನ ಕುಟೀರದ ಅಂಗಳದ ಕಡೆ ಸಂಜೆಯ ತಾರೆ ಒಂದೇ ದೃಷ್ಟಿಯಿಂದ ನೋಡುತ್ತಿರುತ್ತದೆ. ದನದ ಕೊಟ್ಟಿಗೆಯಲ್ಲಿ ಹಣತೆ ಹೊತ್ತಿಸಿ ಮನೆಯ ಸೊಸೆ ಹಜಾರದಲ್ಲಿ ಸಂಜೆಯ ದೀಪ ಹೊತ್ತಿಸಿಡುವಳು. ದೇಗುಲದಲ್ಲಿ ಆರತಿಯ ಸಮಯ – ಗಂಟೆ, ಜಾಗಟೆಗಳು ಬಾರಿಸಲ್ಪಡುತ್ತವೆ.

ಅವನ ಗ್ರಾಮದ ಅತಿ ಸಾಮಾನ್ಯ ದೈನಂದಿನ ನಡೆವಳಿಕೆಗಳು ಅವನ ಕಲ್ಪನೆಯಲ್ಲಾಗ ಅತಿ ರಮಣೀಯವಾಗಿ ಕಂಡವು. ಅವನ ಮನೆಯ ಸಾಕುನಾಯಿ, ಭೋಲಾ, ತಲೆ, ಬಾಲ ಒಂದು ಮಾಡಿಕೊಂಡು ಅಂಗಳದ ಒಂದು ಮೂಲೆಯಲ್ಲಿ ನೆಲದ ಮೇಲೆ ಮಲಗಲು ತೊಡಗಿರುವುದು. ಆ ಕಲ್ಪನೆಯೂ ಅವನ ಮನಸ್ಸಿನಲ್ಲಿ ನೋವುಂಟುಮಾಡಿತು. ಧಾರಾಗೋಳ ಗ್ರಾಮದಲ್ಲಿ ಇಷ್ಟು ದಿನ ಅವನು ಬಿಡಾರ ಹೂಡಿದ್ದ ಆ ದಿನಸಿ ಅಂಗಡಿಯವನು ಇಷ್ಟು ಹೊತ್ತಿಗೆ ರಾತ್ರಿಯ ದೀಪವನ್ನು ಆರಿಸಿ ಅಂಗಡಿಯ ಕದದ ಹಲಗೆಗಳನ್ನು ಒಂದೊಂದಾಗಿ ಮುಚ್ಚಿ ನಿಧಾನವಾಗಿ ಗ್ರಾಮದಲ್ಲಿರುವ ತನ್ನ ಮನೆಗೆ ಊಟ ಮಾಡಲು ಹೊರಟಿರುತ್ತಾನೆ. ಈ ಚಿತ್ರ ಮನಸ್ಸಿಗೆ ಬರುತ್ತಲೆ ಅವನಿಗೆ 'ಆಹಾ, ಆ ದಿನಸಿ ಅಂಗಡಿಯವನು ಎಷ್ಟು ಪುಣ್ಯವಂತನೋ !' ಎನ್ನಿಸಿತು. 'ಇವತ್ತು ಯಾವ ವಾರವೋ ಯಾರಿಗೆ ಗೊತ್ತು ! ಬಹುಶಃ ಭಾನುವಾರವಾಗಿದ್ದರೆ ಇಷ್ಟು ಹೊತ್ತಿಗೆ ಸಂತೆ ಮುಗಿದು ಸಂತೆಯ ಜನ ಅವರವರ ಮನೆಗಳಿಗೆ ಮರಳುತ್ತಿರುತ್ತಾರೆ. ದೂರ ಹೋದ ಅವರ ಸಂಗಡಿಗರನ್ನ ಕುರಿತು ದೊಡ್ಡ ದನಿಯಲ್ಲಿ ಕೂಗು ಹಾಕಿ ಕರೆಯುತ್ತಿದ್ದಾರೆ. ಗುಂಪು ಗುಂಪಾಗಿ ದೋಣಿಯನ್ನು ಹತ್ತಿ ಹೊಳೆ ದಾಟುತ್ತಿರುತ್ತಾರೆ. ಕಾಲುದಾರಿ ಹಿಡಿದು, ಹೊಲಗದ್ದೆಗಳ ಉತ್ತ ಭೂಮಿಯನ್ನು ದಾಟಿ ಒಣಗಿದ ಆಲದ ಮರದೆಲೆಗಳಿಂದ ತುಂಬಿಹೋಗಿರುವ

ಹಳ್ಳಿಗಳ ಅಂಗಳಗಳ ಬದಿಯಲ್ಲಿ ನಡೆಯುತ್ತ ಕೈಯಲ್ಲಿ ಮೂಗಿಗೆ ದಾರ ಕಟ್ಟಿದ ಒಂದೆರಡು ಮೀನುಗಳನ್ನು ತೂಗಿಸುತ್ತ ತಲೆಯ ಮೇಲೆ ಬುಟ್ಟಿಯಿಟ್ಟುಕೊಂಡು ಕತ್ತಲಲ್ಲಿ ಆಕಾಶದಲ್ಲಿ ಕಿಕ್ಕಿರಿದು ತುಂಬಿರುವ ನಕ್ಷತ್ರ ರಾಶಿಯ ಮಿನುಗುವ ಮಂದವಾದ ಬೆಳಕಿನಲ್ಲಿ ರೈತಜನರು ತಂತಮ್ಮ ಗ್ರಾಮದ ಹಟ್ಟಿಗಳಿಗೆ ಹಿಂದಿರುಗುತ್ತಿದ್ದಾರೆ.'

ಭೂಮಿಯ ಮೇಲ್ಭಾಗದ ಮೇಲೆ ನಡೆಯುವ ಈ ಚಿತ್ರಮಯವಾದ, ಅತಿ ದೊಡ್ಡ ಮತ್ತು ಚಿರಚಂಚಲವಾದ ಬದುಕಿನ ಯಾತ್ರೆಯ ನಡುವೆ ತುಚ್ಛಪ್ರಾಯನಾಗಿ, ದೀನನಾಗಿ ಆದರೂ ಚಿಂತೆಯಿಲ್ಲ, ತಾನೂ ಸೇರಿಕೊಂಡು ತನ್ನ ಬಾಳುವೆಯನ್ನು ಅದರೊಂದಿಗೆ ಬೆರೆಸಿಬಿಡಲು ಬಾರೆಂದು ಅವನ ಸುತ್ತು, ಮುತ್ತು ಮೇಲಿದ್ದ ನೂರಾರು ಪದರಗಳ ಮಣ್ಣಿನ ಭಾವಣಿಯನ್ನು ಭೇದಿಸಿ, ಹೊರಗಿನ ಶಬ್ದಮಯ, ಕರ್ಮಮಯ, ಜೀವಮಯ ಪ್ರಪಂಚವು ಅವನ ಬಳಿಗೆ ಬಂದು ಕರೆಕೊಡುತ್ತಿತ್ತು. ಆ ಜೀವನ, ಆ ಆಕಾಶ, ಆ ಬೆಳಕಿನ ಸಂಭ್ರಮ, ಪ್ರಪಂಚದ ಒಟ್ಟು ಮುತ್ತು, ರತ್ನ, ಚಿನ್ನಗಳಿಗಿಂತ ಅವನ ಕಣ್ಣಿಗೆ ಅತ್ಯಂತ ಅಮೌಲ್ಯವೆಂದು ಅನ್ನಿಸಹತ್ತಿತು ... 'ಕೇವಲ ಒಂದೆರಡು ಕ್ಷಣಕಾಲವಾದರೂ ಸರಿ, ಒಮ್ಮೆ ಆ ನನ್ನ ಹಸಿರು ಶೋಭೆಯ ಭೂಮಿತಾಯಿಯ ಮಡಿಲಲ್ಲಿ, ಆ ಬಿಚ್ಚು ಬಯಲಾದ ಬೆಳೆದು ತುಂಬಿದ ನೀಲಿಯಾಕಾಶದ ತಳಗಡೆ ಆ ಒಣಗಿದೆಲೆಗಳ ವಾಸನೆಯಿಂದ ತುಂಬಿದ ಗಾಳಿಯನ್ನು ಎದೆತುಂಬ ಒಂದು ಸಲವಾದರೂ ಉಸಿರು ತೆಗೆದುಕೊಂಡು ಆಮೇಲೆ ಕೊನೆಯ ಉಸಿರು ಬಿಟ್ಟು ಸಾಯುವಂತಾದರೂ ಸಾಕು, ನನ್ನ ಬದುಕು ಸಾರ್ಥಕವಾದ ಹಾಗೆ' ಎಂದುಕೊಂಡ.

ಇಂತಹ ಸಮಯದಲ್ಲಿ ಬಾಗಿಲು ತೆಗೆಯಲ್ಪಟ್ಟಿತು. ಬೈರಾಗಿ ಕೋಣೆಯನ್ನು ಹೊಕ್ಕು "ಮೃತ್ಯುಂಜಯಾ, ಹೇಗಿದ್ದೀಯ ಈಗ ? ... ಏನು ಬೇಕೆನ್ನಿಸುತ್ತದೆ ಈಗ ?" ಎಂದ.

ಆಗ ಮೃತ್ಯುಂಜಯ ಜೀವ ಬಂದಂತವನಾಗಿ "ಸದ್ಯ ಬಂದೆಯಲ್ಲ ... ನನಗೇನೂ ಬೇಕಿಲ್ಲ. ನಾನೀಕ್ಷಣ ಈ ಸುರಂಗದ ಆಚೆ, ಈ ಕತ್ತಲಾಚೆ, ಈ ಚಕ್ರತಂತ್ರದ ಸೆರೆಮನೆಯಿಂದಾಚೆ, ಈ ಚಿನ್ನದ ನರಕದಿಂದಾಚೆ ಹೊರಟು ಹೋಗಬೇಕೆಂದಾಸೆ ! ನನಗೀಗ ಬೆಳಕು ಬೇಕು, ಆಕಾಶ ಬೇಕು, ಮುಕ್ತಿ ಬೇಕು." ಎಂದು ಕೂಗಿದ.

ಬೈರಾಗಿ "ಈ ಚಿನ್ನದ ಬೊಕ್ಕಸಕ್ಕಿಂತ ಬೆಲೆಯಾದ ರತ್ನಗಳ ಬೊಕ್ಕಸವಿದೆ ಇಲ್ಲೇ. ಒಮ್ಮೆ ನೋಡುವುದಿಲ್ಲವೇ ಹೋಗಿ ?" ಎಂದ.

"ಇಲ್ಲ, ಹೋಗುವುದಿಲ್ಲ."

"ಒಮ್ಮೆಯಾದರೂ ಹೋಗಿ ನೋಡಿ ಬರುವ ಕುತೂಹಲವೂ ಇಲ್ಲವೆ ?"

"ಇಲ್ಲ....ನನಗೆ ನೋಡಲಿಕ್ಕೂ ಇಷ್ಟವಿಲ್ಲ. ನನಗೆ ಒಂದು ಪಕ್ಷ ಕೌಪೀನ ಉಟ್ಟು ಬೀದಿ ಬೀದಿ ಭಿಕ್ಷೆ ಎತ್ತಿಕೊಂಡು ಅಲೆದಾಡಬೇಕಾಗಿ ಬಂದರೂ ಸರಿ, ಏನಾದರೂ ನಾನಿಲ್ಲಿ ಒಂದು ಕ್ಷಣ ಹೆಚ್ಚಾಗಿ ಕಳೆಯಲು ಇಷ್ಟವಿಲ್ಲ."

ಬೈರಾಗಿಯಾಗ "ಒಳ್ಳೇದು ಹಾಗಾದರೆ, ಬಾ ನನ್ನ ಸಂಗಡ" ಎಂದ.

ಮೃತ್ಯುಂಜಯನ ಕೈ ಹಿಡಿದುಕೊಂಡು ಬೈರಾಗಿ ಅವನನ್ನ ಆ ಗಭೀರವಾದ ಕೂಪದ ಮುಂದೆ ತಂದು ಬಿಟ್ಟ. ಅವನ ಕೈಯಲ್ಲಿ ತನ್ನ ಬಳಿಯಿದ್ದ ಕಾಗದದ ಸುರುಳಿಯನ್ನು ಕೊಟ್ಟು "ಇದನ್ನ ತೆಗೆದುಕೊಂಡು ಏನು ಮಾಡುತ್ತೀಯಾ ಈಗ?" ಎಂದ ನಗುತ್ತ.

ಮೃತ್ಯುಂಜಯ ೞ ಕಾಗದವನ್ನು ಚೂರು ಚೂರಾಗಿ ಹರಿದು ಆ ಬಾವಿಯಲ್ಲಿ ಎಸೆದುಬಿಟ್ಟ.

೪. ರಾಸಮಣಿಯ ಮಗ

೧

ರಾಸಮಣಿ ಕಾಳೀಪದನ ತಾಯಿ. ತಾಯಿಯಾದರೂ, ತಂದೆಯ ಹೊಣೆಯನ್ನೂ ಹೊತ್ತುಕೊಳ್ಳುವ ಹಾಗೆ ಸಂದರ್ಭ ಉಂಟಾಯಿತು. ಏಕೆಂದರೆ ತಂದೆ, ತಾಯಿ ಇಬ್ಬರೂ ತಾಯಿಯಂತೇ ಆದರೆ ಹುಡುಗನ ಏಳಿಗೆಗೆ ಸರಿಯಲ್ಲ. ಆಕೆಯ ಗಂಡ, ಭವಾನೀಚರಣ ಮಗನನ್ನು ಸ್ವಲ್ಪವೂ ದಂಡಿಸಲಾರ.

ಆತನಿಗೆ ಮಗನೆಂದರೆ ಅತಿಯಾದ ಮುದ್ದು. ಏಕೆ ಹಾಗೆ ಮಾಡುತ್ತಿದ್ದ ಎಂಬ ಪ್ರಶ್ನೆಗೆ ಅವನು ಹೇಳುವ ಉತ್ತರವನ್ನು ಅರ್ಥಮಾಡಿಕೊಳ್ಳಲು ಹಿಂದಿನ ಇತಿಹಾಸ ತಿಳಿಯಬೇಕಾಗುತ್ತದೆ.

ಶಾನಿಯಾಡಿಯ ಗೌರವಸ್ಥ ಹಣವಂತರ ವಂಶದಲ್ಲಿ ಭವಾನೀಚರಣ ಹುಟ್ಟಿದುದು. ಅವನ ತಂದೆ ಅಭಯಾಚರಣ. ಅಭಯಾಚರಣನ ಮೊದಲನೇ ಹೆಂಡತಿಯ ಮಗ ಶ್ಯಾಮಾಚರಣ. ವಯಸ್ಸಾದ ಮೇಲೆ ಹೆಂಡತಿಯ ಸಾವಾಗಿದ್ದರೂ ಅಭಯಾಚರಣ ಎರಡನೇ ಲಗ್ನ ಮಾಡಿಕೊಂಡ. ಆತನ ಮಾವ ಆಗ ಷರತ್ತಿನ ಮೇಲೆ ಆಲಂದೀ ಎಂಬ ಗ್ರಾಮವನ್ನು ತಮ್ಮ ಮಗಳ ಹೆಸರಲ್ಲಿ ಬರೆಯಿಸಿಕೊಂಡಿದ್ದರು. ಉದ್ದೇಶ್ಯವೇನೆಂದರೆ, ಅಳಿಯನ ವಯಸ್ಸು ನೋಡಿ, ಒಂದು ವೇಳೆ ಮಗಳಿಗೆ ವೈಧವ್ಯ ಒದಗಿದರೂ ಹೊಟ್ಟೆ, ಬಟ್ಟೆಗಳಿಗಾಗಿ ಸವತಿಯ ಮಗನನ್ನ ಬೇಡಬೇಕಾಗಿ ಬರಬಾರದು ಎಂದು.

ಅವರ ಮುಂದಾಲೋಚನೆಯ ಮೊದಲ ಅಂಶ ನಡೆಯಲು ವಿಳಂಬವಾಗಲಿಲ್ಲ. ಮೊಮ್ಮಗ ಭವಾನೀಚರಣನು ಹುಟ್ಟಿದ ಸ್ವಲ್ಪ ಕಾಲದಲ್ಲೇ ಅಳಿಯ ಅಭಯಾಚರಣ ತೀರಿಹೋದರು. ಆಗ ಮಗಳು ತನ್ನ ಅಪಾರ ಆಸ್ತಿಗೆ ಒಡತಿಯಾದದ್ದನ್ನು ಕಣ್ಣಾರೆ ನೋಡಿದ ಮೇಲೆ ಮಗಳ ಇಹಲೋಕದ ಅವಸ್ಥೆಯ ಬಗ್ಗೆ ನಿಶ್ಚಿಂತರಾಗಿ ಅವರೂ ಪರಲೋಕಕ್ಕೆ ಪಯಣ ಮಾಡಿದರು.

ಶ್ಯಾಮಾಚರಣ ತನ್ನ ಮಕ್ಕಳ ಜೊತೆಯಲ್ಲೇ ಭವಾನೀಚರಣನನ್ನ ಸಾಕಿ ಅವನ ಯೋಗಕ್ಷೇಮ ನೋಡಿಕೊಳ್ಳತೊಡಗಿದ. ಮಲತಾಯಿಯ ಆಸ್ತಿಯಲ್ಲಿ ಒಂದು ಕವಡೆಯನ್ನೂ ಮುಟ್ಟುತ್ತಿರಲಿಲ್ಲ. ಅಲ್ಲದೆ ಪ್ರತಿ ವರುಷವೂ ಆ ಆಸ್ತಿಯ ಆದಾಯ ಖರ್ಚಿನ ಲೆಕ್ಕವನ್ನು ಚಾಚೂ ತಪ್ಪದೆ ಆಕೆಗೆ ತೋರಿಸಿ ಆಕೆಯ ಕೈಯಕ್ಷರದ

ರಶೀತಿಗಳನ್ನು ತೆಗೆದುಕೊಂಡಿಟ್ಟಿರುತ್ತಿದ್ದ. ಎಲ್ಲರೂ ಇದನ್ನ ಕಂಡು ಆತನ ಪ್ರಾಮಾಣಿಕತೆಯನ್ನು ಹೊಗಳುತ್ತಿದ್ದರು.

ಆದರೆ ಎಷ್ಟೋ ಜನ ಇಷ್ಟೊಂದು ಸೌಜನ್ಯ ಆವಶ್ಯಕವಿಲ್ಲವೆಂದರು. ಕೆಲವರು ಇದನ್ನ ಸೌಜನ್ಯವಲ್ಲ, ಹೆಡ್ಡತನ ಎಂದರು. ಅಪಾರವಾದ ಪಿತ್ರಾರ್ಜಿತ ಆಸ್ತಿಯ ಅಷ್ಟು ದೊಡ್ಡ ಭಾಗವೇ ಅಭಯಾಚರಣರ ಎರಡನೇ ಹೆಂಡತಿಯ ಕೈವಶವಾದದ್ದು ಊರಿನ ಜನರಾರಿಗೂ ಸರಿಬೀಳಲಿಲ್ಲ. ಶ್ಯಾಮಾಚರಣನು ಒಂದು ಪಕ್ಷ ಏನಾದರೂ ಕುಂಟುನೆವದಿಂದ ತಂತ್ರಮಾಡಿ ಆ ದಾಖಲೆ ಪತ್ರವನ್ನು ಕಸಿದು ಅಡಗಿಸಿಬಿಟ್ಟಿದ್ದರೆ ಈ ಜನ ಅವನ ಬುದ್ಧಿವಂತಿಕೆಯನ್ನು ಮೆಚ್ಚಿಕೊಳ್ಳುತ್ತಿದ್ದರು. ಅಂತಹ ಕೆಲಸ ಸುಲಭವಾಗಿ ಮಾಡುವುದು ಹೇಗೆ ಎನ್ನುವುದಕ್ಕೆ ತಕ್ಕ ಸಲಹೆ, ಒತ್ತಾಸೆ ಒದಗಿಸಿಕೊಡುವಂಥ ಪಳಗಿದ ಆಳುಗಳಿಗೂ ಕಡಿಮೆಯಿರಲಿಲ್ಲ. ಆದರೆ ಶ್ಯಾಮಾಚರಣ ಮಾತ್ರ ಪರಂಪರೆಯಾಗಿ ಬೆಳೆದು ಬಂದಿದ್ದ ಪಿತೃಗಳ ಆಸ್ತಿಯನ್ನು ಕತ್ತರಿಸಬೇಕಾಗುವ ಸಂದರ್ಭ ಬಂದರೂ ಸರಿ, ಮಲತಾಯಿಯ ಆಸ್ತಿಯನ್ನು ಭದ್ರವಾಗಿ ಇರಿಸಲು ಪ್ರಯತ್ನಿಸುತ್ತಿದ್ದ.

ಈ ಕಾರಣದಿಂದ, ಮತ್ತು ತನ್ನ ಸ್ವಭಾವ ಸ್ನೇಹಶೀಲತೆಯಿಂದ ಮಲ ತಾಯಿ, ವ್ರಜಸುಂದರಿಯು, ಶ್ಯಾಮಾಚರಣನನ್ನು ಸ್ವಂತ ಮಗನಂತೆ ಪ್ರೀತಿಸುತ್ತ ಅವನಲ್ಲಿ ದೃಢವಾದ ನಂಬಿಕೆಯನ್ನೂ ಇಟ್ಟಿದ್ದಳು. ಮತ್ತು ತನ್ನ ಆಸ್ತಿಯನ್ನು ಶ್ಯಾಮಾಚರಣನು ಇಷ್ಟು ಅತಿಯಾಗಿ, ಬೇರೆಯವರ ಸ್ವತ್ತಿನಂತೆ, ನೋಡುವುದಕ್ಕಾಗಿ ಅವನನ್ನು ಸುಮ್ಮನೆ ದೂರುತ್ತಿದ್ದಳು. "ಅಲ್ಲವೋ ಮಗು, ಇದೆಲ್ಲ ನಿನ್ನದೇ ಅಲ್ಲವೇನೋ? ಇದನ್ನ ನಾನು ಸ್ವರ್ಗಕ್ಕೆ ಹೋಗುವಾಗ ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತೇನೆಯೇ ಹೇಳು...ಇದು ನಿನ್ನದಾಗಿಯೇ ಉಳಿಯುತ್ತೆ. ನನಗೆ ಇದರ ಲೆಕ್ಕ ಪತ್ರಗಳನ್ನೆಲ್ಲ ತೋರಿಸುವ ಅಗ್ಯವೇನು ಹೇಳು" ಎನ್ನುತ್ತಿದ್ದಳು.

ಶ್ಯಾಮಾಚರಣನು ಆ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳುತ್ತಲೇ ಇರಲಿಲ್ಲ.

ಆತ ತನ್ನ ಮಕ್ಕಳನ್ನು ಕಠಿಣವಾದ ಅಂಕೆಯಲ್ಲಿಟ್ಟಿದ್ದ. ಆದರೆ ಭವಾನೀಚರಣನನ್ನು ಸ್ವಲ್ಪವೂ ದಂಡಿಸುತ್ತಿರಲಿಲ್ಲ. ಇದನ್ನು ಕಂಡು ಜನ, ಸ್ವಂತ ಮಕ್ಕಳಿಗಿಂತೂ ಆತನಿಗೆ ತಮ್ಮನೇ ಹೆಚ್ಚು ಎಂದು ಆಡಿಕೊಳ್ಳಹತ್ತಿದರು. ಈ ಕಾರಣದಿಂದ ಭವಾನೀಚರಣನಿಗೆ ಓದುಬರೆಹ ಕೂಡ ಆಗಲಿಲ್ಲ. ಮತ್ತು ಸ್ವಂತ ಆಸ್ತಿ, ಹಣಕಾಸಿನ ಸಂಬಂಧವಾಗಿ ಸದಾ ಏನೂ ಅರಿಯದ ಮಗುವಿನ ಹಾಗೆ ಇದ್ದುಬಿಟ್ಟು ಅಣ್ಣನ ಮೇಲೇ ಎಲ್ಲ ಭಾರವನ್ನೂ ಹಾಕಿ ಕಾಲ ತಳ್ಳಲಾರಂಭಿಸಿದ. ಆದಾಯ, ಖರ್ಚುಗಳ ಬಗ್ಗೆ ಅವನೆಂದೂ ಯೋಚನೆ ಹಚ್ಚಿಕೊಳ್ಳಬೇಕಾಗಿರಲಿಲ್ಲ...ಯಾವಾಗಲೋ ಒಮ್ಮೊಮ್ಮೆ ರುಜು ಮಾಡಬೇಕಾಗಿತ್ತು ಅಷ್ಟೆ. ರುಜು ಯಾವುದಕ್ಕೆ, ಏಕೆ ಎಂಬುದಾಗಿ ಕೇಳುತ್ತಲೂ

ಇರಲಿಲ್ಲ, ಅರಿಯಲು ಪ್ರಯತ್ನವೂ ಮಾಡುತ್ತಿರಲಿಲ್ಲ. ಪ್ರಯತ್ನ ಮಾಡಿದ್ದರೂ ಅರಿಯಲು ಅವನಿಗಾಗುತ್ತಿರಲಿಲ್ಲ.

ಈ ಕಡೆ ಶ್ಯಾಮಾಚರಣನ ಹಿರಿಯ ಮಗ ತಾರಾಪದನಾದರೋ ಎಲ್ಲ ವಿಷಯಗಳಲ್ಲೂ ತಂದೆಗೆ ಸರಿಸಮನಾಗಿ ನೆರವು, ಸಲಹೆಗಳನ್ನು ನೀಡುತ್ತ ಎಲ್ಲ ವಿಧವಾದ ವಹಿವಾಟುಗಳಲ್ಲೂ ಅನುಭವ ಹೊಂದಿ ವ್ಯವಹಾರ ನಿಪುಣನಾದನು. ಶ್ಯಾಮಾಚರಣನು ಕಾಲವಾದ ಮೇಲೆ ತಾರಾಪದನು ಭವಾನೀಚರಣನ ಬಳಿ ಬಂದು "ಚಿಕ್ಕಪ್ಪ, ನಾವಿನ್ನು ಮೇಲೆ ಒಟ್ಟಿಗೇ ಇದ್ದುಕೊಂಡು ಹೋದರೆ ಇಬ್ಬರಿಗೂ ಒಳ್ಳೆಯದಲ್ಲ. ಯಾವತ್ತು ಯಾವ ಸಣ್ಣ ನೆಪಕ್ಕೆ ನಮ್ಮ ನಮ್ಮಲ್ಲಿ ಮನಸ್ಸು ಕೆಡುವಂಥ ಸಂದರ್ಭ ಬರತ್ತೋ ಯಾರಿಗೆ ಗೊತ್ತು. ಆಗ ನಮ್ಮ ಮನೆತನಕ್ಕೇ ಅಪಾಯ ಬರಬಹುದು. ಅದಕ್ಕೆ ಹೇಳಿದೆ. ಏನೂ ಅಂದುಕೊಳ್ಳಬೇಡ" ಎಂದ.

ಇದನ್ನು ಕೇಳಿ ಭವಾನೀಚರಣ ತಬ್ಬಿಬ್ಬಾದ. ಹೀಗೆ ಎಂದಾದರೊಂದು ದಿನ ತಾನೊಬ್ಬನಾಗಿ ತನ್ನ ಆಸ್ತಿಯನ್ನು ನೋಡಿಕೊಳ್ಳಬೇಕಾದಂಥ ಪ್ರಮೇಯ ಬರಬಹುದೆಂದು ಅವನೆಣಿಸಿಯೇ ಇರಲಿಲ್ಲ. ತಾನದುವರೆಗೆ ಹುಟ್ಟಿಬೆಳೆದು ಬಂದಿದ್ದ ಸಂಸಾರವೇ ಎಂದೆಂದಿಗೂ ಒಂದಾಗಿ, ಅಖಂಡವಾಗಿರುತ್ತದೆಂದು ತಿಳಿದಿದ್ದ. ಆ ಸಂಸಾರದ ಎಲ್ಲೋ ಒಂದು ಕಡೆ ಬೆಸುಗೆಯಾಗಿ ಎರಡು ಭಾಗಗಳು ಜೋಡಿಸಲ್ಪಟ್ಟಿವೆ, ಆ ಜಾಗದಲ್ಲಿ ಮತ್ತೆ ಅದನ್ನು ಬಿಡಿಸಿ ಎರಡು ಭಾಗವಾಗಿ ಬೇರ್ಪಡಿಸಬಹುದು ಎಂಬುದನ್ನು ಹೊಸದಾಗಿ ತಿಳಿದು ಗಾಬರಿಗೊಂಡ. ಸಂಕಟವೂ ಆಯಿತು.

ವಂಶದ ಗೌರವ–ನಷ್ಟ, ಮತ್ತು ಸ್ವಜನರ ಮನೋವೇದನೆಗಳ ಸಂಭವವೂ ತಾರಾಪದನ ಮನಸ್ಸನ್ನು ಬದಲಾಯಿಸಲಾರದೆ ಹೋಯಿತು. ಆಗ ಯಾವ ರೀತಿ ಆಸ್ತಿಯ ಭಾಗವಾಗಲಿಕ್ಕೆ ಸಾಧ್ಯ ಎಂಬ ಚಿಂತೆಯಲ್ಲಿ ಮುಳುಗಿದ ಭವಾನೀಚರಣ. ತಾರಾಪದನು ಅವನ ಚಿಂತೆಯನ್ನು ಕಂಡು ಅಚ್ಚರಿಗೊಂಡು "ಇದೇನು ಚಿಕ್ಕಪ್ಪ, ಯಾಕಿಷ್ಟು ಯೋಚನೆ? ಅಲ್ಲ, ಯೋಚನೆ ಯಾಕೆ ಅಂತೀನಿ? ಆಸ್ತಿಯ ವಿಭಾಗ ಯಾವತ್ತೋ ಆಗಿಹೋಗಿದೆ. ಅಜ್ಜ ಬದುಕಿದ್ದಾಗಲೇ ಭಾಗ ಮಾಡಿಬಿಟ್ಟು ಹೋಗಿದ್ದರು" ಎಂದ.

ಭವಾನಿ ಕಕ್ಕಾಬಿಕ್ಕಿಯಾಗಿ "ಹಾ! ಹೌದೇನು? ನನಗೊಂದೂ ಗೊತ್ತೇ ಇರಲಿಲ್ಲ" ಎಂದ.

ತಾರಾಪದನು "ಚೆನ್ನಾಯಿತು...ಗೊತ್ತಿಲ್ಲ ಅಂದರೆ ಏನು? ಲೋಕಕ್ಕೆಲ್ಲಾ ಗೊತ್ತು. ನಮ್ಮ ನಮ್ಮೊಳಗೆ ಜಗಳವಾಗದೇ ಇರಲಿ ಅಂತಲೇನೆ, ಆಲಂದಿ ಗ್ರಾಮವನ್ನು ನಿಮ್ಮಗಳ ಭಾಗವಾಗಿ ಬರೆದಿಟ್ಟು ಅಜ್ಜ ಮೊದಲಿಂದಲೂ ನಿಮ್ಮಗಳನ್ನು ಬೇರೆಯಾಗಿ ಮಾಡಿಬಿಟ್ಟಿದ್ದರು. ಹೀಗೇ ನಡೆದುಕೊಂಡು ಬರುತಾಯಿದೆ, ಇದುವರೆಗೂ" ಎಂದು ಮೂದಲಿಸಿದ.

ಆಗ ಭವಾನೀಚರಣ ತನ್ನಲ್ಲೇ 'ಎಲ್ಲ ಸಂಭವವೇ' ಎಂದುಕೊಂಡು "ಈ ಮನೆ ಯಾರಿಗೆ?" ಎಂದ.

ತಾರಾಪದನು "ನಿಮಗೆ ಬೇಕಿದ್ದರೆ ಮನೆ ನೀವೇ ಇಟ್ಟುಕೊಳ್ಳಬಹುದು. ಪಟ್ಟಣದಲ್ಲಿರುವ ದೊಡ್ಡ ಮನೆ ನಮಗೆ ಸಾಕಾಗುತ್ತದೆ. ಹೇಗೋ ಸರಿಮಾಡಿಕೊಂಡು ಹೋಗುತ್ತೇವೆ" ಎಂದ.

ತಾರಾಪದನು ಇಷ್ಟು ಸುಲಭವಾಗಿ ಪಿತೃಗಳ ಈ ಮನೆಯನ್ನು ಬಿಟ್ಟು ಬಿಡಲು ತಯಾರಿರುವುದನ್ನು ಕಂಡು ಅವನ ಔದಾರ್ಯದಿಂದ ಭವಾನಿ ಅಚ್ಚರಿಗೊಂಡ. ಪಟ್ಟಣದ ದೊಡ್ಡ ಮನೆಯನ್ನು ಅವನೆಂದೂ ಕಂಡಿದ್ದಿಲ್ಲವಾದುದರಿಂದ ಅದರ ಮೇಲೆ ಅವನಿಗಷ್ಟಾಗಿ ಆಸೆಯೇನಿಲ್ಲ.

ಭವಾನಿ ಆಗ ತನ್ನ ತಾಯಿ ವ್ರಜಸುಂದರಿಗೆ ನಡೆದ ಸಂಗತಿಯೆಲ್ಲಾ ಹೇಳಿದಾಗ ಆಕೆ ಹಣೆಯ ಮೇಲೆ ಬಡಿದುಕೊಂಡು "ಅಯ್ಯಯ್ಯೋ, ಎಂಥ ಮಾತಿದು, ಆಲಂದಿ ಗ್ರಾಮವನ್ನು ನನ್ನ ಅನ್ನ, ಬಟ್ಟೆಯ ಏರ್ಪಾಡಿಗೆಂದು, ಸ್ತ್ರೀಧನವಾಗಿ ಕೊಡಲ್ಪಟ್ಟಿದೆ. ಅದರ ವರಮಾನ ತಾನೇ ಎಷ್ಟಾದೀತು? ಆದರೆ ಪಿತ್ರಾರ್ಜಿತ ಸಂಪತ್ತಿನಲ್ಲಿ ನಿನ್ನ ಭಾಗಕ್ಕೆ ಬರುವ ಸ್ವತ್ತು? ಅದೆಲ್ಲಿ ಹೋದೀತು?" ಎಂದು ಗೋಳಿಟ್ಟಳು.

ಭವಾನೀ, "ಏನೋಮ್ಮ, ಈ ತಾರಾಪದ ಹೇಳುತ್ತಾನೆ...ಅಪ್ಪ, ಈ ಆಲಂದಿ ಗ್ರಾಮ ಬಿಟ್ಟರೆ ಬೇರೇನೂ ನಮ್ಮ ಭಾಗಕ್ಕೆ ಕೊಟ್ಟಿಲ್ಲವಂತೆ" ಎಂದು ಗೊಣಗಿದ.

"ಆಹಾಹಾ! ಹಾಗೆಂತ ಬಾಯಿಂದ ಹೇಳಿಬಿಟ್ಟರೆ ನಾನು ಕೇಳಿ ಬಿಡುತ್ತೇನೇನೋ? ನಿಮ್ಮ ತಂದೆ ಕೈಯಾರೆ ಎರಡು ನಕಲು ಉಯಿಲು ಬರೆದು ಹೋಗಿದ್ದರು. ಅದರ ಒಂದು ನಕಲು ನನ್ನ ಬಳಿ ಕೊಟ್ಟಿದ್ದಾರೆ. ಅದೀಗಲೂ ನನ್ನ ಸಂದೂಕದಲ್ಲಿ ಭದ್ರವಾಗಿದ್ದೇ ಇದೆ" ಎಂದಳು ವ್ರಜಸುಂದರಿ.

ಹಾಗೆಂದದ್ದೇ ಕೂಡಲೇ ಹೋಗಿ ಪೆಟ್ಟಿಗೆ ತೆಗೆದಳು. ಅಲ್ಲೇನಿದೆ? ಕೇವಲ ಆಲಂದಿ ಗ್ರಾಮದ ದಾನಪತ್ರ ಮಾತ್ರ ಇದೆ. ಉಯಿಲಿನ ನಕಲಿನ ಪತ್ತೆಯಿಲ್ಲ...ಯಾರೋ ಕದ್ದುಕೊಂಡು ಹೋಗಿದ್ದಾರೆ...ವ್ರಜಸುಂದರಿ 'ಎಲ್ಲಾ ಹಾಳಾದ ಹಾಗೆ!... ಮುಳುಗಿಸಿಬಿಟ್ಟರು ನಮ್ಮನ್ನ!' ಎಂದುಕೊಂಡು ಹಿತೈಷಿಗಳಾದ ತಮ್ಮ ಮನೆ ಪುರೋಹಿತರ ಮಗನನ್ನು ಹೇಳಿ ಕಳುಹಿಸಿ ಸಲಹೆ ಕೇಳಿದರು. ಅವನ ಹೆಸರು ಬಗಲಾಚರಣ. ಅತ್ಯಂತ ಚತುರ, ಸೂಕ್ಷ್ಮ ಬುದ್ಧಿಯವನೆಂದು ಹೆಸರು ತೆಗೆದವನು. ಅವನ ತಂದೆ ಊರಿನ ಜನರಿಗೆ ಮಂತ್ರ ಹೇಳುವವನಾದರೆ ಅವನು ತಂತ್ರ ಹೇಳಿಕೊಡುವವನಾಗಿದ್ದ. ತಂದೆ, ಮಗ ಸೇರಿ ಗ್ರಾಮದ ಇಹ, ಪರಗಳನ್ನು ಭಾಗವಾಗಿ ಮಾಡಿಕೊಂಡುಬಿಟ್ಟಿದ್ದರು. ಇತರರ ಪಕ್ಷದಲ್ಲಿ ಈ ಏರ್ಪಾಡಿನ ಫಲಾಫಲಗಳೇನೇ ಇರಲಿ, ಅವರಿಬ್ಬರಿಗೆ ಮಾತ್ರ ಯಾವ ಅನನುಕೂಲಗಳೂ ಒದಗಲಿಲ್ಲ.

ಬಗಲಾಚರಣನು ಬಂದು "ಉಯಿಲು ಸಿಗಲಿಲ್ಲ...ಆದರೇನು? ತಂದೆಯ ಆಸ್ತಿಯಲ್ಲಿ ಮಕ್ಕಳಿಬ್ಬರಿಗೂ ಸಮನಾದ ಭಾಗವಂತೂ ಇರಬೇಕಲ್ಲ?" ಎಂದ.

ಇಂತಹ ಸಂದರ್ಭದಲ್ಲಿ ಎದುರು ಪಕ್ಷದವರಿಂದ ಒಂದು ಉಯಿಲು ಹೊರಬಿದ್ದಿತು. ಅದರಲ್ಲಿ ಭವಾನೀಚರಣನ ಹೆಸರಿಗೆ ಏನೂ ಬರೆದಿರಲಿಲ್ಲ. ಆಸ್ತಿಯೆಲ್ಲಾ ಮೊಮ್ಮಕ್ಕಳಿಗೆ ಬರೆದಿಟ್ಟಿತ್ತು. ಆಗ ಅಭಯಾಚರಣನಿಗೆ ಇನ್ನೂ ಮಗ ಹುಟ್ಟಿರಲಿಲ್ಲ.

ಬಗಲಾಚರಣನನ್ನ ಬೆಂಬಲ ಮಾಡಿಕೊಂಡು ಭವಾನೀಚರಣ ಕೋರ್ಟು ಮೊಕದ್ದಮೆಗಳ ಸಮುದ್ರದಲ್ಲಿ ಹಾರಿದ. ಬಂದರಿಗೆ ಬಂದು ಕಬ್ಬಿಣದ ಪೆಟ್ಟಿಗೆಯನ್ನ ತೆಗೆದು ನೋಡಿದರೆ ಅವನ ಎದೆ ಕುಸಿದುಹೋಯಿತು, ಲಕ್ಷ್ಮಿಯ ಬಿಡಾರವಾಗಿದ್ದ ಮನೆ, ಈಗ ಅವಳ ನೆರಳೇ ಕಾಣದೇ, ಬಿಕೋ ಅನ್ನುತ್ತಿದೆ. ಅಲ್ಲೊಂದು ಇಲ್ಲೊಂದು ಲಕ್ಷ್ಮಿಯ ಕ್ಷುದ್ರವಾದ ಚಿನ್ನದ ಬಿಡಿ ಪದರಗಳು ಉದುರಿ ಬಿದ್ದಿವೆ. ಪಿತೃಗಳ ಆಸ್ತಿಯೆಲ್ಲ ಎದುರು ಕಕ್ಷಿಯವರ ಕೈವಶವಾಗಿದ್ದುವು. ಮತ್ತು ಆಲಂದಿ ಗ್ರಾಮದಲ್ಲಿ ಮೊಕದ್ದಮೆ ಖರ್ಚುಗಳ ಮೂಲಕ ಆದ ವಿನಾಶದ ತಳಗಡೆಯಿಂದ ಎಷ್ಟರ ಮಟ್ಟಿಗೆ ಉಳಿಸಲ್ಪಟ್ಟಿತ್ತೋ ಅಷ್ಟು ಭಾಗದ ಆಧಾರದ ಮೇಲೆ ಹೇಗೋ ಜೀವಿಸಿಕೊಂಡಿರಬಹುದು... ಆದರೆ ಮನೆತನದ ಹಿಂದಿನ ಗೌರವವನ್ನ ಮಾತ್ರ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಹಳೆಯ ಪರಂಪರೆಯಿಂದ ಬಂದ ಮನೆಯನ್ನು ದಕ್ಕಿಸಿಕೊಂಡು ತಾನೇನೋ ದೊಡ್ಡ ಜಯ ಪಡೆದೆನೆಂದುಕೊಂಡ. ತಾರಾಪದನ ಸಂಸಾರವೆಲ್ಲ ಪಟ್ಟಣದ ಮನೆಗೆ ಹೊರಟುಹೋದರು. ಇಬ್ಬರು ದಾಯಾದರ ಮನೆಯವರ ನಡುವೆ ಪರಸ್ಪರ ನೋಡುವುದೂ ನಿಂತುಹೋಯಿತು.

೨

ಶ್ಯಾಮಾಚರಣನ ದ್ರೋಹವು ಈಟಿಯಂತೆ ವ್ರಜಸುಂದರಿಯ ಹೃದಯವನ್ನ ತಿವಿಯಿತು. ಶ್ಯಾಮಾಚರಣನು ಅನ್ಯಾಯವಾಗಿ ಯಜಮಾನರು ಬರೆದಿದ್ದ ಉಯಿಲನ್ನ ಕಳ್ಳತನ ಮಾಡಿ ತಮ್ಮನನ್ನು ವಂಚಿಸಿದ್ದೇ ಅಲ್ಲದೆ ಸ್ವಂತ ತಂದೆಗೇ ದ್ರೋಹಮಾಡಿದ್ದ. ಅದನ್ನೆಂದೂ ಮರೆಯಲಾರಳು. ಬದುಕಿದ್ದಷ್ಟು ಕಾಲ ನಿತ್ಯವೂ ಆಕೆ "ದೇವರಿಗಿದೆಂದೂ ಸಹನೆಯಾಗುವುದಿಲ್ಲ... ನೋಡಿಕೊಂಡಿರಲಿ" ಎಂದುಕೊಳ್ಳುತ್ತಿದ್ದಳು. ಭವಾನೀಚರಣನಿಗೆ ಪ್ರತಿದಿನವೂ "ನನಗೆ ಕಾನೂನು, ಕಟ್ಟಳೆ ಒಂದೂ ಗೊತ್ತಿಲ್ಲದೆ ಇರಬಹುದು. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಯಜಮಾನರ ಆ ಉಯಿಲಂತೂ ಕಡೆಯವರೆಗೂ ಅಡಗಿರಲಿಕ್ಕೆ ಸಾಧ್ಯವಿಲ್ಲ. ಅದು ಖಂಡಿತ ನಿನ್ನ ಕೈಗೇ ಬರುತ್ತದೆ" ಎಂದು ಭರವಸೆ ಕೊಡುತ್ತ ಬಂದಳು.

ತಾಯಿಯ ಬಾಯಿಂದ ಒಂದೇ ಸಮನಾಗಿ ಈ ಮಾತು ಕೇಳಿ ಕೇಳಿ ಭವಾನೀಚರಣನ ಮನಸ್ಸಿನಿಂದ ಒಂದು ವಿಧವಾದ ನಂಬಿಕೆ ದೃಢವಾಗಿ ಬೇರೂರಿತು.

ಅವನಂತೂ ಕೆಲಸದಲ್ಲಿ ಪಳಗಿದವನಲ್ಲ. ಈ ಕಾರಣದಿಂದಲೇ ಅವನಿಗೆ ಈ ಬಗೆಯ ಭರವಸೆ ಬಹಳ ಹಿತವಾದ ಮಾತಾಗಿಹೋಯಿತು. ಪತಿವ್ರತೆಯಾದಂಥ ತನ್ನ ತಾಯಿಯ ನುಡಿ ಸುಳ್ಳಾಗಲಾರದು. ತನ್ನದಾಗಿರುವ ಸ್ವತ್ತು ತಾನಾಗಿಯೇ ತನ್ನ ಬಳಿ ಬಂದೇ ಬರುತ್ತದೆ... ಈ ನಂಬಿಕೆಯನ್ನ ಅವನು ಗಟ್ಟಿಯಾಗಿ ಮನಸ್ಸಿನಲ್ಲಿಟ್ಟುಕೊಂಡು ನಿಶ್ಚಿಂತನಾಗಿಬಿಟ್ಟ.

ತಾಯಿ ತೀರಿಕೊಂಡ ಅನಂತರವೂ ಈ ನಂಬಿಕೆ ಅವನಲ್ಲಿ ಇನ್ನೂ ದೃಢವಾಗಿ ನಿಂತುಹೋಯಿತು. ಏಕೆಂದರೆ ಮರಣದ ಅಗಲಿಕೆಯಿಂದ ತಾಯಿಯ ಪುಣ್ಯ ತೇಜಸ್ಸು ಅವನಿಗೆ ಇಮ್ಮಡಿ ಉಜ್ವಲವಾಗಿ ಕಾಣಿಸಿತು. ದಾರಿದ್ರ್ಯದ ಅಭಾವದಿಂದಾಗುವ ನೋವು ಅವನಿಗಷ್ಟಾಗಿ ತಾಕುತ್ತಿರಲಿಲ್ಲ. ಈ ಅನ್ನ, ಬಟ್ಟೆಗಳ ಕಷ್ಟ, ಈ ಪರಂಪರೆಯಿಂದ ಬಂದ ರೀತಿ, ನೀತಿಗಳ ಮಾರ್ಪಾಡು, ಇವೆಲ್ಲ ಎರಡು ದಿನಗಳ ನಾಟಕ ಮಾತ್ರ..... ಇವು ಸ್ವಲ್ಪವೂ ನಿಜವಲ್ಲ ಎನ್ನಿಸುತ್ತಿತ್ತು.

ಈ ಕಾರಣದಿಂದ ಹಿಂದಿನ ಕಾಲದ ಢಾಕಾ ಮಸ್ಲಿನ್ನಿನ ಪಂಚೆ ಹರಿದು ಹೋದಾಗ ಅಗ್ಗದ ಬೆಲೆಯ ಒರಟು ಪಂಚೆ ಕೊಂಡು ಉಡಬೇಕಾಗಿ ಬಂದಾಗ ಅವನಿಗೆ ನಗು ಕೂಡ ಬಂತು. ನವರಾತ್ರಿಯುತ್ಸವದ ಸಮಯದಲ್ಲಿ ಹಳೆಯ ಕಾಲದಂತೆ ಅದ್ದೂರಿಯಾದ ಸಮಾರಂಭ ನಡೆಯಲಾಗಲಿಲ್ಲ.... ದುರ್ಗಾ ಮಾತೆಗೆ ಇನ್ನೊಂದೆರಡು ಹೆಚ್ಚು ನಮಸ್ಕಾರ ಹಾಕಿ, ಆಯಿತು ಅನ್ನಿಸಿಬಿಟ್ಟನು. ಅಭ್ಯಾಗತರು ಈ ದರಿದ್ರ ಏರ್ಪಾಡನ್ನ ಕಂಡು ನಿಟ್ಟುಸಿರು ಬಿಡುತ್ತ ಹಳೆಯ ಪದ್ಧತಿಗಳನ್ನು ನೆನೆಸಿದರು. ಭವಾನೀಚರಣ ಮನಸ್ಸಿನಲ್ಲೇ ನಗುತ್ತ 'ಹ್ಹ... ಇವರಿಗೇನು ಗೊತ್ತು?.... ಇದೆಲ್ಲ ಎರಡು ದಿನಗಳ ಮಟ್ಟಿಗೆ ... ನೋಡುತ್ತಿರಲಿ, ಆಮೇಲೆ ಒಂದು ದಿನ ಇದೇ ಮನೆಯಲ್ಲಿ ಎಷ್ಟು ಅದ್ದೂರಿಯಾಗಿ, ಎಷ್ಟು ವೈಭವವಾಗಿ ಉತ್ಸವ ಜರುಗುವುದೋ, ನೋಡಿ ಕಣ್ಣು ಕಣ್ಣು ಬಿಡಬೇಕಾಗುತ್ತದೆ' ಎಂದುಕೊಂಡ. ಮುಂದೆ ನಡೆಯಲಿರುವ ಆ ಕಲ್ಪನೆಯ ವೈಭವವನ್ನು ಅವನು ಪ್ರತ್ಯಕ್ಷಕ್ಕಿಂತಲೂ ಹೆಚ್ಚು ಸ್ಪಷ್ಟವಾಗಿ ಕಾಣುತ್ತಿದ್ದ. ಅದರ ಮುಂದೆ ಈಗಿನ ದೀನತೆ ಮರೆಯಾಗಿಹೋಗುತ್ತಿತ್ತು.

ಇಂತಹ ಆಲೋಚನೆಗಳಲ್ಲಿ ಭಾಗವಹಿಸುತ್ತಿದ್ದವನು ನಟವಿಹಾರಿ ಎಂಬ ಅವನ ಮನೆಯ ನೌಕರ. ದುರ್ಗಾಪೂಜೆಯ ಉತ್ಸವದ ಬಡತನದಲ್ಲಿ ಕೂತು ಎಷ್ಟೋ ಬಾರಿ ಈ ಧಣಿ, ನೌಕರರು ಮುಂದೆ ಬಂದೇ ಬರುವ ಒಳ್ಳೆಯ ದಿನಗಳಲ್ಲಿ ಯಾವ ಯಾವ ಏರ್ಪಾಡು ಮಾಡಬೇಕಾಗುತ್ತದೆ ಎಂಬುದರಲ್ಲೇ ಪರಸ್ಪರ ಸಲಹೆಗಳನ್ನ ಕೊಡುತ್ತ ಅದರಲ್ಲೇ ಮುಳುಗಿಹೋಗುತ್ತಿದ್ದರು. ಯಾರಿಗೆ ಔತಣ ಹೇಳಬೇಕು, ಯಾರಿಗೆ ಕೂಡದು. ಕಲಿಕತ್ತೆಯಿಂದ ನಾಟಕದ ದಳವನ್ನು ಕರೆಯಿಸುವ ಆವಶ್ಯಕತೆಯಿದೆಯೋ, ಇಲ್ಲವೋ ಮುಂತಾದ ಮಾತುಗಳಾಗುವಾಗ ಇಬ್ಬರಿಗೂ

ವಾಗ್ವಾದವಾಗಿ, ಭಿನ್ನಾಭಿಪ್ರಾಯದಿಂದ ಮನಸ್ಸೂ ಕೆಡಿಸಿಕೊಳ್ಳುವಂತಾಗುತ್ತಿತ್ತು. ಆಜನ್ಮವಾಗಿ ರಕ್ತಗತವಾಗಿದ್ದ ಜಿಪುಣತೆಯಿಂದ ನಟವಿಹಾರಿಯು ಭಾವೀಕಾಲದ ಸಮಾರಂಭದ ವಿಷಯವಾಗಿ ಖರ್ಚಿನ ಪಟ್ಟಿ ತಯಾರು ಮಾಡುವಾಗ ಕೃಪಣತೆ ತೋರಿಸಿದ್ದಕ್ಕಾಗಿ ಭವಾನೀಚರಣ ಅವನ ಮೇಲೆ ರೇಗಿ ಗದರಿಸಿ ಆಮೇಲೆ ನಿಂದೆಗೂ ಗುರಿಯಾಗಿದ್ದ. ಇಂತಹ ಸಂದರ್ಭಗಳೆಷ್ಟೋ ಆಗಿಹೋಗಿದ್ದವು.

ಅಂತೂ ಒಟ್ಟಿನಲ್ಲಿ ಆಸ್ತಿಯ ಸಂಬಂಧವಾಗಿ ಭವಾನೀಚರಣನ ಮನಸ್ಸಿನಲ್ಲಿ ಯಾವ ದುಶ್ಚಿಂತೆಯೂ ಇರಲಿಲ್ಲ. ಅವನಿಗಿದ್ದ ವ್ಯಾಕುಲವೊಂದೇ... ತಾನಾದ ಮೇಲೆ ತನ್ನಾಸ್ತಿಯನ್ನ ಅನುಭವಿಸುವವರು ಯಾರು? ಏಕೆಂದರೆ ಇದುವರೆಗೆ ಅವನಿಗೆ ಮಕ್ಕಳೇ ಆಗಲಿಲ್ಲ. ಹೆಣ್ಣು ಮಕ್ಕಳ ಭಾರ ಹೊತ್ತ ಎಷ್ಟೋ ಹಿತೈಷಿಗಳು ಇನ್ನೊಂದು ಲಗ್ನವಾಗೆಂದು ಅವನನ್ನ ಒತ್ತಾಯಪಡಿಸಿದಾಗೆಲ್ಲ ಅವನ ಮನಸ್ಸಿನಲ್ಲಿ ಚಾಂಚಲ್ಯವಾಗುತ್ತಿದ್ದುದೂ ಉಂಟು. ಅಂದರೆ ಹೊಸ ಹೆಣ್ಣಿನ ಚಪಲದಿಂದಲ್ಲ. ಆ ವಿಷಯದಲ್ಲಿ ಭವಾನೀಚರಣ ಮಾತ್ರ ತನ್ನ ಸೇವಕ ಮತ್ತು ಅನ್ನ ಸ್ಥಿತಿ ಹೇಗೆ ಪುರಾತನ ರೀತಿಯಂತೆಯೇ ಯಥೇಚ್ಛವೆಂದುಕೊಂಡಿದ್ದನೋ ಹಾಗೆ ಇದ್ದ ಹೆಂಡತಿಯೂ ತನಗೆ ಸಾಕೆಂದು ಗಣನೆ ಮಾಡಿದ್ದ. ಆದರೆ ಧನಲಾಭವಿರುವವನಿಗೆ ಮಕ್ಕಳಾಗುವ ಸಂಭವವಿಲ್ಲ ಎಂದರೆ ಅದೊಂದು ಸಂಕಟಕರವಾದ ವಿಡಂಬನೆಯಲ್ಲವೆ? ಇದೇ ಅವನಿಗೆ ದೊಡ್ಡ ಕೊರತೆ.

ಇಂಥ ಸಮಯದಲ್ಲಿ ಅವನಿಗೆ ಮಗನೂ ಹುಟ್ಟಿದ. ಆಗ ಎಲ್ಲರೂ ಇನ್ನು ಈ ಮನೆತನಕ್ಕೆ ಭಾಗ್ಯದ ಲಕ್ಷಣ ಬಂತೆಂದರು. ಇದೇ ನಾಂದಿಯೆಂದರು. ಸ್ವರ್ಗವಾಸಿಗಳಾದ ಧಣಿ ಅಭಯಾಚರಣರೇ ಸ್ವತಃ ಮತ್ತೆ ಈ ಮನೆಯಲ್ಲೆ ಹುಟ್ಟಿ ಬಂದಿದ್ದಾರೆ. ಎಲ್ಲ ಅವರಂತೆಯೇ. ಆ ವಿಶಾಲವಾದ ಕಣ್ಣುಗಳು ಅವರದೇ, ಹೆಚ್ಚು ಕಡಿಮೆ ಮುಖವೆಲ್ಲಾ ಅವರದೇ. ಮಗುವಿನ ಜಾತಕವೂ ಹಾಗೇ. ಕಳೆದುಹೋದ ಆಸ್ತಿ ಪುನಃ ಕೈಗೆ ಬರುವುದೆಂದು ಸೂಚಿಸುವ ಗ್ರಹ, ನಕ್ಷತ್ರಗಳು ಹೊಂದಿಕೊಂಡಿವೆ.

ಮಗ ಹುಟ್ಟಿದಂದಿನಿಂದ ಭವಾನೀಚರಣನ ನಡೆವಳಿಕೆಯಲ್ಲಿ ಬದಲಾವಣೆ ಕಾಣಬಂತು. ಅದುವರೆಗೆ ಅವನಿಗೆ ಬಡತನ ಒಂದು ಆಟವಾಗಿತ್ತು. ಸ್ವಲ್ಪವೂ ಮನಸ್ಸಿಗೆ ಹಚ್ಚಿಕೊಳ್ಳದೆ ಅದರ ಭಾರವನ್ನ ಹೊತ್ತು ನಿಶ್ಚಿಂತನಾಗಿರುತ್ತಿದ್ದ. ಆದರೆ ಮಗನ ವಿಷಯದಲ್ಲಿ ಮಾತ್ರ ಆ ಉದಾಸೀನ ಭಾವ ಸಾಧ್ಯವಾಗದೆ ಹೋಯಿತು. ಶಾನಿಯಾಡಿಯ ಹೆಸರಾಂತ ಚೌಧುರಿ ಮನೆತನದಲ್ಲಿ ಮಂಕು ಮಂಕಾಗಿದ್ದು ಕಡೆಗೆ ನಂದಿಹೋಗುವಂತಿದ್ದ ವಂಶದ ಬೆಳಕನ್ನು ಮತ್ತೆ ಪ್ರಕಾಶಮಾನವಾಗಿ ಉರಿಸಲೆಂದು ಗಗನದ ಗ್ರಹನಕ್ಷತ್ರಗಳೆಲ್ಲ ಸಂಚುಮಾಡಿದುದರ ಫಲವಾಗಿ ಈ ನನ್ನ ಮಗು ಈ ಸಾಮಾನ್ಯ ಭೂಲೋಕದಲ್ಲಿ ಅವತರಿಸಿದ್ದಾನೆ. ಇಂತಹ ದಿವ್ಯ

ಶಿಶುವಿಗೆ ತಂದೆಯೆನ್ನಿಸಿಕೊಂಡ ಅವನಿಗೆ ಕರ್ತವ್ಯವೆಂಬುದೊಂದಿಲ್ಲವೆ? ಇದುವರೆಗೂ ಅವನ ಮನೆತನದಲ್ಲಿ ಪ್ರತಿ ತಲೆಮಾರಿನಲ್ಲೂ ಗಂಡು ಮಗು ಹುಟ್ಟಿದ ಅಂದರೆ ಎಷ್ಟು ಸಂಭ್ರಮ, ಎಷ್ಟು ಉತ್ಸವ. ಪರಂಪರೆಯಿಂದ ಬಂದ ಪದ್ಧತಿ ಅದು.

ಅಂತಹ ಗೌರವಕ್ಕೆ ಈ ಭವಾನೀಚರಣನ ಮೊದಲ ಮಗನಾದವನೇ ಮೊಟ್ಟಮೊದಲಾಗಿ ವಂಚಿತನಾಗಬೇಕೆ? ಈ ಸಂಕಟವನ್ನು ಭವಾನೀಚರಣ ಮರೆಯುವುದು ಹೇಗೆ? "ಈ ವಂಶದಲ್ಲಿ ಹುಟ್ಟಿದವರಿಗೆಲ್ಲ ಸಹಜವಾಗಿ ಲಭ್ಯವಾಗಿದ್ದನ್ನು ನಾನು ನನ್ನ ಮಗನಿಗೆ ಒದಗಿಸಲಾರೆನಲ್ಲ" ಎಂದು ಕೊರಗಿ ಕೊರಗಿ "ಇಲ್ಲ, ಇದು ನನ್ನ ತಪ್ಪೆ, ನಾನು ಇವನನ್ನ ವಂಚನೆ ಮಾಡಿದ್ದೇನೆ" ಎಂದು ತನ್ನನ್ನೇ ಬೈದುಕೊಂಡ... ಹಾಗೆನ್ನಿಸಿದಂದಿನಿಂದ ಕಾಳೀಪದನ ಸಲುವಾಗಿ ಆಗಬೇಕಾಗಿದ್ದ ಖರ್ಚಿನ ಅಭಾವವನ್ನ ತನ್ನ ಅಪಾರವಾದ ವಾತ್ಸಲ್ಯದಿಂದ ಮತ್ತು ಮೇರೆಯಿಲ್ಲದ ಮುದ್ದಿನಿಂದ ತುಂಬಿ ಹೋಗಲಾಡಿಸಲು ಭವಾನೀಚರಣ ಯತ್ನಿಸತೊಡಗಿದ. ಭವಾನಿಯ ಹೆಂಡತಿ ರಾಸಮಣಿಯು ಬೇರೊಂದು ಪ್ರಕೃತಿಯ ವ್ಯಕ್ತಿ. ಆಕೆ ಶಾನಿಯಾಡಿಯ ಚೌಧುರಿ ವಂಶದವರ ಗೌರವದ ಸಂಬಂಧವಾಗಿ ಅಂತಹ ಉದ್ವೇಗವನ್ನೆಂದೂ ಅನುಭವಿಸಲಿಲ್ಲ. ಗಂಡನಿಗೆ ಇದು ಗೊತ್ತಿಲ್ಲದೆಯಿಲ್ಲ. ಗೊತ್ತಾದರೂ ಮನಸ್ಸಿನೊಳಗೇ ನಗುತ್ತಿದ್ದ. ಸಾಮಾನ್ಯ ದರಿದ್ರ ವೈಷ್ಣವ ವಂಶದಲ್ಲಿ ಹುಟ್ಟಿದ ಅವನ ಹೆಂಡತಿಯಂತಹವಳಲ್ಲಿ ಈ ಕೊರತೆಯಿದ್ದರೂ ಅದು ಕ್ಷಮಿಸತಕ್ಕದ್ದೇ... ಅದು ಸಹಜ. ಪಾಪ, ಅವಳಿಗೇನು ಗೊತ್ತು? ಚೌಧುರಿ ಮನೆತನದವರ ಮಾನ, ಮರ್ಯಾದೆಗಳ ಬಗ್ಗೆ ಯುಕ್ತವಾದ ಅಭಿಪ್ರಾಯ ಅವಳ ಮನಸ್ಸಿಗೆ ಹೇಗೆ ತಾನೆ ಬಂದೀತು?

ರಾಸಮಣಿ ಒಪ್ಪಿಕೊಳ್ಳುತ್ತಿದ್ದಳು. "ಹೌದು, ನಾನು ಬಡವರ ಮನೆ ಹೆಣ್ಣು. ಮಾನ, ಸಂಭ್ರಮ ಅಂದರೆ ನನಗೇನು ಗೊತ್ತಾಗತ್ತೆ? ನನ್ನ ಕೂಸು, ಕಾಳೀಪದ ಆಯುಷ್ಮಂತನಾಗಿದ್ದರೆ ಸಾಕು. ಅದೇ ನನಗೆ ಅಷ್ಟೈಶ್ವರ್ಯ" ಎನ್ನುತ್ತಿದ್ದಳು.

ಉಯಿಲು ಮತ್ತೆ ಕೈಗೆ ಬರುತ್ತದೆ. ಮತ್ತು ಕಾಳೀಪದನ ಅಭಿವೃದ್ಧಿಗಾಗಿ ಮತ್ತು ಈ ವಂಶದ ಕೀರ್ತಿಗಾಗಿ ಕಳೆದುಹೋಗಿದ್ದ ಸಂಪತ್ತಿನ ಒಣಗಿದ ನದೀಭೂಮಿ ಮತ್ತೆ ತುಂಬಿ ಹರಿಯುತ್ತದೆ – ಮುಂತಾದ ಸವಿಗನಸಿನ ಮಾತುಗಳಿಗೆ ಅವಳು ಕಿವಿಗೊಡುತ್ತಲೇ ಇರಲಿಲ್ಲ. ಕಳೆದುಹೋದ ಉಯಿಲಿನ ಬಗ್ಗೆ ಮಾತೆತ್ತಿ ಅವಳ ಗಂಡ ಪ್ರಸ್ತಾಪಿಸದಿದ್ದ ಆಳಿಲ್ಲ. ಆದರೆ ಹೆಂಡತಿಯ ಮುಂದೆ ಮಾತ್ರ ತಮ್ಮ ವಂಶದ ಧಾರಾಳತೆಯ ವಿಷಯವೊಂದನ್ನ ಭವಾನೀಚರಣ ಪ್ರಸ್ತಾಪ ಮಾಡುತ್ತಿರಲಿಲ್ಲ. ಒಂದೆರಡು ಸಲ ಹಾಗೆ ಮಾತಾಡಲು ಪ್ರಯತ್ನಿಸಿದ್ದ. ಆದರೆ ಅವಳ ಮನಸ್ಸಿಗದು ಎಳ್ಳಷ್ಟೂ ಸ್ವಾರಸ್ಯವಿಲ್ಲದಿದ್ದುದು ಕಾಣಬಂದು ಅವನು ಅಲ್ಲಿಗೇ ನಿಲ್ಲಿಸಿಬಿಡುತ್ತಿದ್ದ.

ಮುಂದೆ ಬರುವ ಸಂಪತ್ತು ಮತ್ತು ಹಿಂದಿನ ಭಾಗ್ಯದ ವರ್ಣನೆ ಇವೆರಡರ ಕಡೆಗೂ ಅವನ ಹೆಂಡತಿ ಮನಸ್ಸು ಕೊಡುತ್ತಿರಲಿಲ್ಲ. ಸದ್ಯದಲ್ಲಿರುವ ಅಲ್ಪಸ್ವಲ್ಪದರಿಂದಲೇ ಅನುಕೂಲ ಮಾಡಿಕೊಳ್ಳುವ ಆವಶ್ಯಕತೆ ಅವಳ ಮನವನ್ನ ತುಂಬಿಬಿಟ್ಟಿತ್ತು.

ಹೀಗೆ ಅನುಕೂಲ ಮಾಡಿಕೊಳ್ಳುವುದೇನೂ ಅಷ್ಟು ಸುಲಭದ ಮಾತಲ್ಲ. ಸಂಸಾರ ನಡೆಸಬೇಕಾದರೆ ಎಷ್ಟು ಜಾಣತನ ಮಾಡಬೇಕಾಗಿತ್ತೊ. ಏಕೆಂದರೆ, ಲಕ್ಷ್ಮಿ ತ್ಯಜಿಸಿ ಹೋದರೂ ತನ್ನ ಭಾರ ಸ್ವಲ್ಪ ಬಿಟ್ಟು ಹೋಗುತ್ತಾಳೆ... ಅದರಿಂದೇನೂ ಉಪಾಯವಿಲ್ಲದೆ ಹೋದರೂ ಅಪಾಯವಂತೂ ಬೇಕಾದಷ್ಟಿರುತ್ತದೆ. ಈ ಪರಿವಾರದಲ್ಲಿ ಆಶ್ರಯ ಬಹಳಮಟ್ಟಿಗೆ ಮುರಿದು ಬಿದ್ದಿದೆ. ಆದರೆ ಆಶ್ರಿತ ಜನರಂತೂ ಈ ಮನೆಯವರಿಗೆ ಬಿಡುವು ಕೊಡಲು ತಯಾರಿಲ್ಲ. ಭವಾನೀಚರಣನೂ ಅಭಾವದ ಭಯದಿಂದ ಬಂದ ಜನರಿಗೆ "ಇಲ್ಲ, ಹೋಗಿ ಬನ್ನಿ" ಎಂದು ಹೇಳುವಂಥ ಮನುಷ್ಯನಲ್ಲ.

ಇಂತಹ ಭಾರಗಳಿಂದ ಕುಗ್ಗಿದ, ಮುರಿದ ಸಂಸಾರವನ್ನ ನಡೆಸಿಕೊಂಡು ಹೋಗುವ ಭಾರ ರಾಸಮಣಿಯ ಮೇಲೆ ಬಿದ್ದಿದೆ. ಇದರಲ್ಲಿ ಯಾರ ಕಡೆಯಿಂದಲೂ ಅವಳು ಸಹಾಯ ಪಡೆಯುವಂತಿಲ್ಲ. ಕಾರಣ ಈ ಮನೆತನದ ಒಳ್ಳೆಯ ದಿನಗಳಲ್ಲಿ ಆಶ್ರಿತ ಜನರು ಸ್ವಲ್ಪವೂ ಶ್ರಮವಿಲ್ಲದೆ ಆರಾಮವಾಗಿ ದಿನ ಕಳೆದಿದ್ದರು. ಚೌಧುರಿ ಮನೆತನದ ಹೆಮ್ಮರದ ತಳದಲ್ಲಿ ಇವರುಗಳ ಸುಖ ಶಯ್ಯೆಯ ಮೇಲೆ ನೆರಳು ತಾನಾಗಿ ಬಿದ್ದು ಪಸರಿಸಿದೆ, ಮತ್ತು ಇವರ ಬಾಯ ಹತ್ತಿರ ಮಾಗಿದ ಹಣ್ಣು ತಾನಾಗಿ ಬಿದ್ದಿದೆ. ಆದುದರಿಂದ ಇವರುಗಳು ಯಾರೂ ಸ್ವಲ್ಪವೂ ಶ್ರಮವಹಿಸಬೇಕಾಗಿರಲಿಲ್ಲ. ಇವತ್ತು ಇವರುಗಳಿಗೆ ಯಾವ ಪ್ರಕಾರವಾದರೂ ಕೆಲಸ ಮಾಡೆಂದರೆ ಇವರದನ್ನು ಬಹಳ ಅಪಮಾನವಾದಂತೆ ತಿಳಿಯುತ್ತಾರೆ. ಅಡಿಗೆ ಮನೆ ಹೊಗೆ ತಗುಲಿದರೆ ಇವರಿಗೆ ತಲೆ ನೋಯುತ್ತದೆ. ಮತ್ತು ಸಂತೆ, ಪೇಟೆಗಳಿಗೆ ಹೋಗಿ ಸಾಮಾನು ತರುವುದೆಂದರೆ ಎಲ್ಲಿಂದಲೋ ಯಾವುದೋ ಕೆಟ್ಟ ಗಾಳಿ ಬೀಸಿ ಇವರ ಕೈಕಾಲು ಹಿಡಿದುಕೊಳ್ಳಬೇಕೆ? ಪಂಡಿತರ ಬೆಲೆಬಾಳುವ ಔಷಧಿಗಳಿಂದಲೂ ಆ ಬೇನೆ ವಾಸಿಯಾಗುವಂಥದಲ್ಲ. ಇದಲ್ಲದೆ ಭವಾನೀಚರಣ ಹೇಳಿಬಿಟ್ಟಿದ್ದ, ಆಶ್ರಿತ ಜನರಿಂದ ಕೆಲಸ ಮಾಡಿಸಿಕೊಂಡರೆ, ಆಗ ಅವರಿಂದ ಸೇವೆ ಮಾಡಿಸಿಕೊಂಡಂತಾಗುತ್ತದೆ. ಅದರಿಂದ ಆಶ್ರಯ ಕೊಟ್ಟುದರ ಪುಣ್ಯವೇ ಹೋಗಿ ಬಿಡುತ್ತದೆ. ಚೌಧುರಿ ಮನೆಯವರಲ್ಲಿ ಇಂತಹ ಪದ್ಧತಿಯಿಂದಿಗೂ ಇಲ್ಲ.

ಈ ಕಾರಣದಿಂದ ಎಲ್ಲಾ ಜವಾಬುದಾರಿಯೂ ರಾಸಮಣಿಯ ಹೆಗಲ ಮೇಲೆ ಬಿದ್ದಿತ್ತು. ಹಗಲಿರುಳು ನಾನಾ ಕುಶಲತೆಯಿಂದ, ಪರಿಶ್ರಮದಿಂದ, ಈ ಸಂಸಾರದ ಸಮಸ್ತ ಅಭಾವವನ್ನೂ ಅವಳು ಯಾರಿಗೂ ಅರಿಯದಂತೆಯೇ

ಸರಿಮಾಡಿಕೊಂಡು ಹೋಗಬೇಕಾಗಿತ್ತು. ಹೀಗೆ ಹಗಲು, ರಾತ್ರಿ ಬಡತನ, ಅಭಾವಗಳೊಂದಿಗೆ ಹಣಗಾಡಿ ಸಾಮಾನುಗಳ ಧಾರಣೆಯ ಬಗ್ಗೆ ಚೌಕಾಶಿ ಮಾಡುತ್ತ ಹೆಜ್ಜೆ ಹೆಜ್ಜೆಗೂ ಜಾಗರೂಕತೆಯಿಂದ ನಡೆದುಕೊಂಡು ಹೋಗಬೇಕಾದವರ ರೀತಿ ನೀತಿಗಳಲ್ಲಿ, ಮಾತುಕತೆಗಳಲ್ಲಿ ಒಂದು ಬಗೆಯ ಒರಟುತನ ಬಂದುಹೋಗುತ್ತದೆ. ಅವರ ಕಮನೀಯತೆ ಕಣ್ಮರೆಯಾಗುತ್ತದೆ. ಯಾರ ಒಳ್ಳೆಯದಕ್ಕಾಗಿ ಅವಳು ಹೆಜ್ಜೆ ಹೆಜ್ಜೆಗೂ ದುಡಿದು ಸವೆಯುತ್ತಿದ್ದಳೋ ಅವರೇ ಅವಳನ್ನ ಕಂಡರೆ ಸಹಿಸುತ್ತಿರಲಿಲ್ಲ. ರಾಸಮಣಿಯು ಕೇವಲ ಅಡಿಗೆ ಮನೆಯಲ್ಲಿ ಅಡಿಗೆ ಮಾಡುವುದೊಂದೇ ಅಲ್ಲ, ಅನ್ನವನ್ನ ಯಥಾರೀತಿಯಾಗಿ ಎಲ್ಲರಿಗೂ ವಿತರಣೆಯಿಂದ ಬಡಿಸಿ ತೃಪ್ತಿಪಡಿಸುವ ಹೊಣೆಯೂ ಆಕೆಯ ಮೇಲೇ. ಹೀಗಿದ್ದರೂ ಆ ಅನ್ನ ತಿಂದು ಮಧ್ಯಾಹ್ನ ಸುಖವಾಗಿ ನಿದ್ದೆಮಾಡಿ ವಿಶ್ರಮಿಸುತ್ತಿದ್ದವರೂ ಪ್ರತಿ ದಿನ ಆ ಅನ್ನ ನಿಂದೆ ಮಾಡದೆ ಇರುತ್ತಿರಲಿಲ್ಲ. ಅನ್ನದಾತರನ್ನೂ ಅನ್ನದೆ ಬಿಡುತ್ತಿರಲಿಲ್ಲ.

ಬರೇ ಸಂಸಾರದ ಕೆಲಸವೊಂದೇ ಅಲ್ಲ ಅವರ ಗ್ರಾಮದಲ್ಲಿ ಅಳಿದುಳಿದದ್ದು- ಯಾವುದಿತ್ತೋ ಅದರ ಆದಾಯ ಖರ್ಚುಗಳ ಲೆಕ್ಕಾಚಾರ ನೋಡಿಕೊಳ್ಳುವುದು, ಕಂದಾಯದ ಪಾವತಿ ಬಗ್ಗೆ ಏರ್ಪಾಡು ಮಾಡುವುದು, ಎಲ್ಲ ರಾಸಮಣಿಯೇ ಮಾಡಬೇಕಾಗಿತ್ತು. ಅವರ ಜಮೀನಿನ ವರಮಾನದ ಬಗ್ಗೆ ಇದಕ್ಕೆ ಮೊದಲು ಇಷ್ಟೊಂದು ಸೂಕ್ಷ್ಮವಾದ ಪರಿಶೀಲನೆ ಎಂದೂ ಇರುತ್ತಿರಲಿಲ್ಲ. ಭವಾನೀಚರಣನ ಹಣವೆಂದರೆ ಅಭಿಮನ್ಯುವಿಗೆ ಪೂರ್ತಿಯಾಗಿ ವಿರುದ್ಧ... ಅದಕ್ಕೆ ಹೊರಗೆ ಹೋಗುವುದು ಗೊತ್ತು. ಒಳಗೆ ಬರುವುದು ಗೊತ್ತಿಲ್ಲ. ಭವಾನೀಚರಣನು ಎಂದೂ ಯಾರನ್ನೂ ಹಣಕ್ಕಾಗಿ ಒತ್ತಾಯ ಮಾಡುವುದೆಂದರೆ ಅವನಿಗೆ ಸಾಧ್ಯವಿಲ್ಲ. ರಾಸಮಣಿಯಾದರೋ ತನಗೆ ಬರಬೇಕಾದ ಹಣದಲ್ಲಿ ಒಂದು ಬಿಡಿಕಾಸನ್ನೂ ಬಿಟ್ಟುಕೊಡುತ್ತಿರಲಿಲ್ಲ. ಇದನ್ನು ಕಂಡು ರೈತರು ಅವಳನ್ನ ದೂಷಿಸುತ್ತಿದ್ದರು. ಗುಮಾಸ್ತರು ಕೂಡ ಅವಳ ಲೆಕ್ಕಾಚಾರದ ಷರತ್ತುಗಳನ್ನ ಸಹಿಸುತ್ತಿರಲಿಲ್ಲ. ಅವಳ ಪೀಡೆಯನ್ನ ತಡೆಯಲಾರದೆ ಅವಳ ಹಿಂದುಗಡೆ ಅವಳ ಬಡವಂಶದ ಕ್ಷುದ್ರತೆಯನ್ನು ಎತ್ತಿ ಆಡಿಕೊಳ್ಳುತ್ತಿದ್ದರು. ಅಷ್ಟೇಕೆ, ಅವಳ ಗಂಡನೂ ಅವಳ ಕೃಪಣತೆ ಮತ್ತು ಒರಟುತನಗಳು ತಮ್ಮ ಲೋಕವಿಖ್ಯಾತವಾದ ಮನೆತನಕ್ಕೆ ಮಾನ ತರುವಂಥದಲ್ಲವೆಂದು ಆಗಾಗ ಮೃದುನುಡಿಗಳಲ್ಲೇ ಟೀಕೆ ಮಡುತ್ತಿದ್ದ. ಈ ನಿಂದೆ, ಮತ್ತು ತಿರಸ್ಕಾರಗಳನ್ನೆಲ್ಲಾ ಅವಳು ಅತ್ಯಂತ ಉದಾಸೀನದಿಂದ, ಲೆಕ್ಕಿಸದೆ ತನ್ನ ನಿಯಮದಂತೆ ತಾನು ಕೆಲಸ ಮಾಡಿಕೊಂಡು ಹೋಗುತ್ತ, ತಪ್ಪೆಲ್ಲವನ್ನೂ ತನ್ನ ಹೆಗಲ ಮೇಲೇ ಹಾಕಿಕೊಳ್ಳುತ್ತಿದ್ದಳು. ಬಡವರ ಮನೆ ಹೆಣ್ಣು; ದೊಡ್ಡ ಮನೆತನದವರ ದೊಡ್ಡಸ್ತಿಕೆ ಅವಳಿಗೇನು ಗೊತ್ತಾಗುತ್ತದೆ - ಎಂಬುದಾಗಿ ಬಾರಿ ಬಾರಿಗೂ ಒಪ್ಪಿಕೊಳ್ಳುತ್ತ, ಮನೆಯೊಳಗೂ ಹೊರಗೂ ಎಲ್ಲರಿಗೂ ಬೇಡದವಳಾಗಿ,

ಸೆರಗನ್ನು ಸದಾ ಸೊಂಟದಲ್ಲಿ ಇರುಕಿಸಿಕೊಂಡು ಬಿರುಗಾಳಿಯ ರಭಸದಲ್ಲಿ ಕೆಲಸಗಳನ್ನ ಮಾಡಿಕೊಂಡು ಹೋಗುತ್ತಿದ್ದಳು – ಆಗ ಯಾರೂ ಅವಳ ದಾರಿಗಡ್ಡವಾಗಲು ಸಾಹಸ ಮಾಡುತ್ತಿರಲಿಲ್ಲ.

ಗಂಡನಿಗೆ ಅವಳು ಎಂದಾದರೂ ಯಾವ ಕೆಲಸಕ್ಕಾದರೂ ಕರೆಯುವುದು ಹಾಗಿರಲಿ – ಆತನೆಲ್ಲಾದರೂ ತಾನಾಗಿ ಯಾವ ಕೆಲಸಕ್ಕಾದರೂ ಕೈಹಚ್ಚಿ ಎಲ್ಲಿ ಹಾಳುಮಾಡಿಬಿಡುತ್ತಾರೋ ಎಂಬ ಭಯ ಅವಳಿಗೆ ಯಾವಾಗಲೂ ಇರುತ್ತಿತ್ತು. "ನೀವೇನೂ ಯೋಚಿಸಬೇಕಾಗಿಲ್ಲ. ಈ ಸಣ್ಣ ಪುಟ್ಟ ವಿಷಯಗಳಿಗೆಲ್ಲಾ ನೀವಿರಬೇಕಾದ ಆವಶ್ಯಕತೆಯೇ ಇಲ್ಲ" ಎಂದು ಹೇಳುತ್ತ ಎಲ್ಲ ವಿಷಗಳಲ್ಲೂ ಗಂಡ ಕೈಕಟ್ಟಿಕೊಂಡು ತೆಪ್ಪನೆ ಇದ್ದುಬಿಡುವಂತೆ ಮಾಡಲು ಅವಳು ಪ್ರಯತ್ನಿಸುತ್ತಿದ್ದಳು. ಗಂಡನೂ ಅಷ್ಟೆ ಹುಟ್ಟಿದಂದಿನಿಂದ ಈ ಬಗೆಯಾಗಿ ಅಚ್ಚುಕಟ್ಟಾಗಿ ಕೈಕಟ್ಟಿಕೊಂಡು ಕೂತಿರುವುದು ಅಭ್ಯಾಸವಾಗಿದ್ದುದರಿಂದ, ಈ ವಿಷಯದಲ್ಲಿ ಹೆಂಡತಿ ಅಷ್ಟಾಗಿ ಗಾಬರಿಪಡಬೇಕಾದ ಆವಶ್ಯಕತೆಯೇ ಇರಲಿಲ್ಲ.

ರಾಸಮಣಿಗೆ ಬಹಳ ಕಾಲ ಮಕ್ಕಳೇ ಆಗಲಿಲ್ಲ. ಆ ಕಾರಣದಿಂದ ಅವಳು ಈ ಕೆಲಸಕ್ಕೆ ಬಾರದ ಸರಳ ಬುದ್ಧಿಯ, ಎಲ್ಲ ಕೆಲಸಗಳಿಗೂ ಬೇರೆಯವರ ಮುಖ ನೋಡಿಕೊಂಡು ಇರುತ್ತಿದ್ದ ಗಂಡನ ಮೇಲೆ ಪತ್ನೀ ಪ್ರೇಮ ಮತ್ತು ಮಾತೃ ಸ್ನೇಹ, ಇವೆರಡನ್ನೂ ವಿನಿಯೋಗಿಸಿ ತೃಪ್ತಿಪಡೆಯುತ್ತಿದ್ದಳು. ಗಂಡನನ್ನು ಅವಳು ವಯಸ್ಸು ಬಂದ ಒಬ್ಬ ಹುಡುಗನಂತೆಯೇ ಕಾಣುತ್ತಿದ್ದಳು. ಆದ್ದರಿಂದ ಅತ್ತೆ ಕಾಲವಾದ ಮೇಲೆ ಅವಳೇ ಮನೆಯ ಯಜಮಾನಿ ಅಲ್ಲದೆ ಗೃಹಿಣಿ, ಹೀಗೆ ಎರಡೂ ಕೆಲಸಗಳನ್ನು ವಹಿಸಿಕೊಂಡು ಬರಬೇಕಾಗಿತ್ತು.

ಮನೆಯ ಪುರೋಹಿತನ ಮಗ ಬಗಲಾಚರಣ ಮತ್ತು ಅಂತಹ ಇತರ ಕೆಲಜನರಿಂದ ಗಂಡನನ್ನು ಕಾಪಾಡಿಕೊಂಡು ಬರಲೋಸುಗ ಎಷ್ಟು ಕಠಿಣವಾಗಿ ನಡೆದುಕೊಂಡು ಬರುತ್ತಿದ್ದಳೆಂದರೆ, ಅವಳ ಗಂಡನ ಸಂಗಡಿಗರು ಅವಳನ್ನ ಕಂಡರೆ ಹೆದರುತ್ತಿದ್ದರು. ತನ್ನ ಹರಿತವನ್ನು ಅಡಗಿಸಿಟ್ಟು ಸ್ಪಷ್ಟವಾದ ಮಾತುಗಳಲ್ಲಿ ಮಾರ್ದವ ತೋರಿ ಗಂಡಸರೊಡನೆ ಯಥೋಚಿತವಾದ ಲಜ್ಜೆ, ಸಂಕೋಚಗಳನ್ನ ನಟಿಸುವ ಹೆಂಗಸಿಗೆ ಸಹಜವಾದ ನಡವಳಿಕೆ ಅವಳಿಗೇಕೋ ಕಲಿಯಲಾಗಲಿಲ್ಲ.

ಇಷ್ಟರವರೆಗೆ ಭವಾನೀಚರಣನು ಹೆಂಡತಿ ಹೇಳಿದಂತೆಯೇ ಕೇಳಿಕೊಂಡು ಬರುತ್ತಿದ್ದ. ಆದರೆ ಮಗ, ಕಾಳೀಪದನ ಬಗ್ಗೆ ಮಾತ್ರ ರಾಸಮಣಿಯ ಇಷ್ಟದಂತೆ ನಡೆಯುವುದು ಅವನಿಗೆ ಕಷ್ಟವಾಗಿ ಹೋಯಿತು.

ಅದಕ್ಕೆ ಕಾರಣ, ರಾಸಮಣಿಯು ಮಗನನ್ನು ತಂದೆಯ ಕಣ್ಣಿನಿಂದ ನೋಡುತ್ತಿರಲಿಲ್ಲ. ಗಂಡನ ರೀತಿಯನ್ನ ಅವಳು "ಪಾಪ, ಅವರಿಗೇನು ಗೊತ್ತು! ದೊಡ್ಡವರ ಮನೆಯಲ್ಲಿ ಹುಟ್ಟಿದ ಮೇಲೆ ಅವರ ದೃಷ್ಟಿ ಹಾಗಲ್ಲದೆ ಬೇರೆ ಸಾಧ್ಯವಿಲ್ಲ.

ಇದರಲ್ಲಿ ಅವರ ದೋಷವೇನಿಲ್ಲ" ಎಂದು ಮರುಕ ತೋರುತ್ತಿದ್ದಳು. ಆದಕಾರಣ ಅವಳು ಗಂಡ ಎಷ್ಟು ಸಾಧಾರಣ ಕಷ್ಟವನ್ನು ಕೂಡ ತಡೆದುಕೊಳ್ಳಲಾರ ಎಂದುಕೊಂಡು ತನ್ನ ಶಕ್ತಿ ಮೀರಿ ಅವನ ಸುಖಕ್ಕಾಗಿ ಎಲ್ಲ ವಿಧದ ಅನುಕೂಲತೆಗಳನ್ನ ಒದಗಿಸಲು ಹವಣಿಸುತ್ತಿದ್ದಳು. ಮನೆಯಲ್ಲಿ ಹೊರಗಿನ ಬೇರೆ ಜನಗಳ ವಿಷಯದಲ್ಲಿ ಅತಿ ಲೆಕ್ಕಾಚಾರವಾಗಿ ಖರ್ಚು ನಡೆಯುತ್ತಿತ್ತು. ಆದರೆ ಭವಾನೀಚರಣನ ಊಟ, ತಿಂಡಿ, ಬಟ್ಟೆ, ವಿಶ್ರಾಂತಿಗಳ ಬಗ್ಗೆ ಮಾತ್ರ ಹಳೆಯ ಕಾಲದಿಂದ ಬಂದ ಪದ್ಧತಿಯಂತೆಯೇ ಯಾವುದೂ ವ್ಯತ್ಯಾಸವಿಲ್ಲದಂತೆ ನಡೆಯಿಸುತ್ತಿದ್ದಳು. ಹೇಗೋ ಅಂತು ದಿನ ಕಳೆದರೆ ಸಾಕು ಎನ್ನುವಂಥ ಹೀನ ಪರಿಸ್ಥಿತಿ ಬಂದಾಗ ಕೂಡ ಎಷ್ಟೋ ಅನುಕೂಲಗಳನ್ನು ಒದಗಿಸಲಾರದಿರುವಾಗ ಅದು ಅಭಾವದಿಂದ ಆಯಿತು ಎಂಬ ವಿಷಯ ಗಂಡನಿಗೆ ಗೋಚರವಾಗದಿರುವ ಹಾಗೆ ಬೇರೆ ಏನಾದರೂ ನೆವ ಹೇಳಿ ಅವನಿಗೆ ವ್ಯಥೆಯಾಗದಿರುವಂತೆ ಮಾಡುತ್ತಿದ್ದಳು.

"ಅಯ್ಯೋ, ಆ ಹಾಳು ನಾಯಿ ನೋಡಿ, ತಿಂಡಿಯಿಟ್ಟಿದ್ದ ಪಾತ್ರೆಗೆ ಬಾಯಿ ಹಾಕಿ ಎಲ್ಲ ಹಾಳುಮಾಡಿಬಿಟ್ಟಿದೆ" ಎಂದು ಅದಕ್ಕೆ ತನ್ನ ಕಲ್ಪಿತ ತಿಳಿಗೇಡಿತನವನ್ನ ಬೈದುಕೊಳ್ಳುತ್ತಿದ್ದಳು. ಇಲ್ಲದೆ ಹೋದರೆ ಆ ಸೋಂಬೇರಿ ನೌಕರ ನಟಬಿಹಾರಿಯ ಅಜಾಗರೂಕತೆಯಿಂದ ಹೊಸದಾಗಿ ತಂದ ವಸ್ತ್ರ ಕಳುವಾಗಿಬಿಟ್ಟಿದೆ ಎಂದು ಕೂಗಾಡಿ ಅವನ ಬುದ್ಧಿಯನ್ನ ಕುರಿತು, ಚೆನ್ನಾಗಿ ಬೈಯುತ್ತಿದ್ದಳು. ಭವಾನೀಚರಣನಾಗ ತನ್ನ ಅಚ್ಚುಮೆಚ್ಚಿನ ನೌಕರನ ಪಕ್ಷ ವಹಿಸಿಕೊಂಡು ಹೆಂಡತಿಯ ಕೋಪದಿಂದ ಅವನನ್ನು ಪಾರುಮಾಡಲು ವ್ಯಸ್ತನಾಗುತ್ತಿದ್ದ. ಅಷ್ಟೇಕೆ, ಒಮ್ಮೊಮ್ಮೆ ಹೀಗೂ ನಡೆಯುತ್ತಿತ್ತು – ಹೆಂಡತಿ ಕೊಂಡು ಬಾರದೆಯೇ ಇದ್ದ, ತಾನು ಕಣ್ಣಿಂದ ನೋಡದೆಯೇ ಇದ್ದ, ಆ ಕಾಲ್ಪನಿಕ ವಸ್ತ್ರವನ್ನು ನಟಬಿಹಾರಿ ಕಳೆದುಬಿಟ್ಟ ಎಂಬ ದೂರನ್ನು ಸುಳ್ಳು ಮಾಡಲೋಸುಗ, ಭವಾನೀಚರಣನು ಸ್ವಲ್ಪವೂ ಮುಖ ಕೆಡಿಸಿಕೊಳ್ಳದೆ ಆ ವಸ್ತ್ರವನ್ನು ನಟಬಿಹಾರಿ ನಿರಿಹಿಡಿದುಕೊಟ್ಟನೆಂದೂ ತಾನದನ್ನ ಉಟ್ಟಿದ್ದನೆಂದೂ ಆಮೇಲೆ?... ಆಮೇಲೇನಾಯಿತು ಎನ್ನಲು ಅವನ ಕಲ್ಪನಾಶಕ್ತಿ ಸಹಾಯಮಾಡದಿರುವಾಗ ರಾಸಮಣಿಯೇ ಅದನ್ನ ಪೂರ್ಣಮಾಡುತ್ತ "ಖಂಡಿತವಾಗಿಯೂ ನೀವೇ ಅದನ್ನ ನಿಮ್ಮ ಹೊರಗಿನ ಬೈಠಕು ಖಾನೆಯಲ್ಲೆಲ್ಲೋ ಕಳಚಿ ಬಿಸಾಟಿದ್ದೀರಿ?... ಅಲ್ಲಂತೂ ಬೀದಿಯಲ್ಲಿ ಹೋಗಿ ಬರುವವರಿಗೆಲ್ಲ ಪ್ರವೇಶ! ಯಾವನದನ್ನ ಕೈಲಿಟ್ಟುಕೊಂಡು ಹೋದನೋ ಏನು ಕಥೆಯೋ!" ಎಂದುಬಿಡುತ್ತಿದ್ದಳು.

ಭವಾನೀಚರಣನ ವಿಷಯದಲ್ಲಿ ಈ ರೀತಿಯಾಯಿತು. ಆದರೆ ಸ್ವಂತ ಮಗನನ್ನೆಂದೂ ತನ್ನ ಗಂಡನ ಸರಿಸಮಾನನಂತೆ ನೋಡಿಕೊಳ್ಳಲು ಅವಳು ತಯಾರಿಲ್ಲ.

ಅವನಂತೂ ತನ್ನ ಹೊಟ್ಟೆಯಲ್ಲಿ ಹೆತ್ತ ಮಗ – ಅವನಿಗೇಕೆ ಈ ದೊಡ್ಡಸ್ತಿಕೆ?... ಈ ಶ್ರೀಮಂತತನ? ಅವನು ಎಲ್ಲರ ಹಾಗೆ ಗಟ್ಟಿಮುಟ್ಟಾಗಿ ಕೆಲಸದಾಳಾಗಬೇಕು. ಅವನು ಎಲ್ಲರಂತೆ ಕಷ್ಟ ನಿಷ್ಠುರಗಳನ್ನ ಸೈರಿಸಿಕೊಂಡು, ಮೈ ಮುರಿಯುವಂತೆ ದುಡಿದೇ ತಿನ್ನಬೇಕು. ಅವನಿಗೆ ಇದಿಲ್ಲದಿದ್ದರೆ ಆಗದು, ಅದಿಲ್ಲದಿದ್ದರ ಅವಮಾನ, ಹೀಗೆಲ್ಲ ಅಂದರೆ ಸರಿಹೋದೀತೆ? ಆದ್ದರಿಂದ ಕಾಳೀಪದನ ಸಂಬಂಧವಾಗಿ ತೀರ ಒರಟಾದ ವ್ಯವಸ್ಥೆಯನ್ನೇ ಮಾಡಿಬಿಟ್ಟಿದ್ದಳು. ಅರಳು – ಬೆಲ್ಲದುಂಡೆಯಿಂದಲೇ ಅವನ ಫಲಾಹಾರ ಮುಗಿಯುವ ಹಾಗೆ ನಿಯಮಿಸಿದ್ದಳು. ಮತ್ತು ತಲೆ, ಕಿವಿಗಳನ್ನ ಮುಚ್ಚುವಂಥ ಕುಲಾವಿಯನ್ನು ಹೊಲಿಸಿ ಅವನಿಗೆ ಚಳಿಯಾಗದಂತೆ ನೋಡಿಕೊಳ್ಳುತ್ತಿದ್ದಳೇ ವಿನಾ ಬೆಲೆಬಾಳುವ ಕಾಶ್ಮೀರ ಶಾಲನ್ನ ಕೊಂಡುಕೊಡುವ ಗೋಜಿಗೆ ಹೋಗುತ್ತಿರಲಿಲ್ಲ. ಅವನ ಉಪಾಧ್ಯಾಯನಿಗೆ ಹೇಳಿಕಳುಹಿಸಿ ಓದುಬರೆಹದಲ್ಲಿ ಸ್ವಲ್ಪವೂ ಸಡಿಲ, ಸಲಿಗೆ ತೋರಿಸದಿರುವಂತೆಯೂ, ಕಠಿಣವಾದ ಶಿಸ್ತು, ಶಿಕ್ಷೆಗಳಿಂದ ಅವನಿಗೆ ಶಿಕ್ಷಣ ಕೊಡುವಂತೆಯೂ ಹೇಳಿದಳು.

ಆದರೆ ಈ ವಿಷಯದಲ್ಲೇ ಸ್ವಲ್ಪ ಅಡಚಣೆ ಬಂತು. ಸಾಧುವಾದ ಭವಾನೀಚರಣನೂ ಆಗಾಗ ಆಕ್ಷೇಪಣೆಗಳನ್ನೆತ್ತಲು ತೊಡಗಿದ. ಆದರೆ ರಾಸಮಣಿಯು ಅವುಗಳ ಕಡೆ ಸ್ವಲ್ಪವೂ ಗಮನ ಕೊಡದೆ ತನ್ನಿಷ್ಟದಂತೆಯೇ ನಡೆಸುತ್ತ ಹೋದಳು. ಭವಾನೀಚರಣನು ಮೊದಲಿಂದ ತನಗಿಂತಲೂ ಬಲವಾದ ವ್ಯಕ್ತಿಯ ಮುಂದೆ ಸೋಲೊಪ್ಪಿಕೊಂಡೇ ಬಂದಿದ್ದ. ಈ ಬಾರಿಯೂ ಸೋಲೊಪ್ಪಿಕೊಳ್ಳಬೇಕಾಯಿತು. ಆದರೆ ಮನಸ್ಸಿನಿಂದ ಮಾತ್ರ ಅವಳ ಆಚರಣೆಯ ಬಗ್ಗೆ ವಿರುದ್ಧತೆಯನ್ನು ಅಳಿಸಲಾಗಲಿಲ್ಲ. ಈ ಮನೆತನದಲ್ಲಿ ಹುಟ್ಟಿದ ಹುಡುಗ ತಲೆಗೆ ಕುಲಾವಿ ಕಟ್ಟಿ ಮಧ್ಯಾಹ್ನದ ತಿಂಡಿಗೆ ಅರಳು ಬೆಲ್ಲ ತಿನ್ನವುದೆಂದರೆ? ಅಂತಹ ವಿಸದೃಶ ನೋಟವನ್ನು ದಿನವಾದ ಮೇಲೆ ದಿನ ನೋಡಬೇಕಾಗಿ ಬಂತಲ್ಲ, ಏನು ಗ್ರಹಚಾರ!

ದುರ್ಗಾಪೂಜೆಯ ಸಮಯದಲ್ಲಿ ಅವನಿಗೆ ಜ್ಞಾಪಕ ಬರುತ್ತಿತ್ತು – ಅವನ ತಂದೆಯವರ ಕಾಲದಲ್ಲಿ ಹೊಸದಾದ ಅರಿವೆ ಧರಿಸಿ ಶಿಸ್ತಾಗಿ ಎಷ್ಟು ಸಂಭ್ರಮವಾಗಿರುತ್ತಿದ್ದರು! ಈಗ ರಾಸಮಣಿ ಕಾಳೀಪದನಿಗೆ ತೊಡಲು ಕೊಂಡು ತಂದಿದ್ದ ಅಗ್ಗದ ಬಟ್ಟೆಗಳನ್ನು ನೋಡಿದ್ದರೆ ಆಗಿನ ಕಾಲದ ಆಳುಜನ ಕೂಡ ಆಕ್ಷೇಪಣೆ ಮಾಡುತ್ತಿದ್ದರು. ರಾಸಮಣಿಯು ಮಾತ್ರ ಅವನಿಗೆ ಬಾರಿ ಬಾರಿಗೂ ಸಮಾಧಾನ ಹೇಳುತ್ತಿದ್ದಳು "ಅಲ್ಲಾಂದರೆ, ಕಾಳೀಪದನಿಗೆ ಏನು ಕೊಟ್ಟರೂ ಅದರಿಂದಲೇ ಖುಷಿಯಾಗುತ್ತದೆ. ಅವನಿಗೆ ನಿಮ್ಮ ಹಿಂದಿನ ಕಾಲದ ದೊರೆತನ ಗೊತ್ತಿದೆಯೇ?... ನೀವು ಸುಮ್ಮನೆ ಯಾಕೆ ಮನಸ್ಸಿಗೆ ಪೇಚಾಟ ಮಾಡಿಕೊಳ್ಳುವುದು?"

ಆದರೆ ಭವಾನೀಚರಣನಾದರೋ ಅದರಿಂದ ಸಮಾಧಾನವಾಗುತ್ತಿರಲಿಲ್ಲ. ಅವನಿಗೆ ಪಾಪ, ಈ ಏನೂ ಅರಿಯದ ಕಾಳೀಪದನು ತನ್ನ ವಂಶದ ಹಿಂದಿನ

ಹಿರಿಮೆ ತಿಳಿದಿಲ್ಲವೆಂದು, ಸುಮ್ಮನೆ ವಂಚಿಸಲ್ಪಡುತ್ತಿದ್ದಾನಲ್ಲ ಎಂಬುದನ್ನು ಏನುಮಾಡಿದರೂ ಮರೆಯಲಾಗಲಿಲ್ಲ. ಅತಿಸಾಮಾನ್ಯವಾದ ಅಗ್ಗದ ಬೆಲೆಯ ಉಪಹಾರವೇನಾದರೂ ಸಿಕ್ಕಿದರೆ, ಅದನ್ನೇ ಗರ್ವದಿಂದಲೂ, ಸಂತೋಷದಿಂದಲೂ ಕುಣಿಯುತ್ತ ಕುಣಿಯುತ್ತ ಓಡಿ ಬಂದು ತಂದೆಗೆ ತೋರಿಸುತ್ತಿದ್ದ. ಆಗ ಭವಾನೀಚರಣನ ಮನಸ್ಸಿಗೆ ಮತ್ತೂ ನೋವಾಗುತ್ತಿತ್ತು. ಅದನ್ನು ಅವನು ಕಣ್ಣಿಂದ ನೋಡಲಿಕ್ಕಾಗುತ್ತಿರಲಿಲ್ಲ. ಮುಖ ಎತ್ತಲೋ ತಿರುಗಿಸಿಕೊಂಡು ಹೋಗಿಬಿಡುತ್ತಿದ್ದ.

ಭವಾನೀಚರಣನ ಮೊಕದ್ದಮೆ ಆರಂಭವಾದಲಾಗಾಯಿತು, ಅವರ ಪುರೋಹಿತರ ಮನೆಯಲ್ಲಿ ತಕ್ಕಮಟ್ಟಿಗೆ ಹಣ ಶೇಖರಿಸಿತ್ತು. ಅದರಿಂದ ಸಂತುಷ್ಟನಾಗದೆ ಗುರುಪುತ್ರನು ಪ್ರತಿ ವರುಷವೂ ನವರಾತ್ರಿಗೆ ಮುನ್ನವೇ ಕಲಿಕತ್ತೆಯಿಂದ ನಾನಾವಿಧವಾದ ಕಣ್ಣಿಗೆ ಇಂಬಾಗಿರುವ ಅಗ್ಗವಾದ ಸಿಂಗಾರದ ಸಾಮಾನುಗಳನ್ನು ತರಿಸಿ ಒಂದೆರಡು ತಿಂಗಳು ವ್ಯಾಪಾರ ಮಾಡುತ್ತಿದ್ದ. ಅದೃಶ್ಯವಾಗುವ ಮಸಿ (Ink), ಮೀನು ಹಿಡಿಯುವ ಗಾಳ, ಛತ್ರಿ, ಮತ್ತು ಕೈಗೋಲು – ಇವು ಮೂರು ಏಕತ್ರವಿರುವ ಒಂದು ವಿಚಿತ್ರವಸ್ತು, ಚಿತ್ರವಂಟಿಸುವ ಕಾಗದಗಳು. ಹರಾಜಿನಲ್ಲಿ ಕೊಂಡ ನಾನಾಬಣ್ಣದ ನಕಲು ರೇಶಿಮೆಯ ಮತ್ತು ಸ್ಯಾಟಿನ್ನಿನ ಬಟ್ಟೆಗಳು. ಕವಿತೆ ಬರೆದಿರುವ ಅಂಚುಳ್ಳ ಸೀರೆಗಳು, ಇತ್ಯಾದಿಗಳೆಲ್ಲವನ್ನೂ ತರಿಸಿ ಗ್ರಾಮದ ಗಂಡು, ಹೆಣ್ಣುಗಳ ಮನಸ್ಸನ್ನೆಲ್ಲಾ ತಳಮಳಗೊಳಿಸುತ್ತಿದ್ದ. ಕಲಿಕತ್ತೆಯ ಬಾಬುಗಳ ಮಹಲುಗಳಲ್ಲಿ ಈಗಿನ ಕಾಲದಲ್ಲಿ ಇವೆಲ್ಲ ಉಪಕರಣಗಳಿಲ್ಲದೆ ಹೋದರೆ ದೊಡ್ಡಸ್ತಿಕೆಯೇ ಉಳಿಯುವುದಿಲ್ಲವೆಂದು ಕೇಳಿ ಗ್ರಾಮದ ದೊಡ್ಡ ಅಭಿಲಾಷೆಗಳುಳ್ಳ ಜನರೆಲ್ಲ ತಮ್ಮ ಗ್ರಾಮ್ಯತೆಯನ್ನು ತೊಡೆದು ಹಾಕಲು ಇಚ್ಛಿಸಿ ತಮ್ಮ ಯೋಗ್ಯತೆ ಮೀರಿ ಹಣ ವೆಚ್ಚ ಮಾಡುವುದಕ್ಕೆ ಹಿಂದೇಟು ಹಾಕುತ್ತಿರಲಿಲ್ಲ.

ಒಮ್ಮೆ ಬಗಲಾಚರಣನು ಒಂದು ಅತಿ ಅದ್ಭುತವಾದ ಆಂಗ್ಲ ಮಹಿಳೆಯ ಗೊಂಬೆಯನ್ನು ತರಿಸಿದ್ದ. ಅದರ ಒಂದು ಭಾಗದಲ್ಲಿದ್ದ ಕೀಲಿಯನ್ನು ತಿರುಗಿಸಿದೊಡನೆ ಆ ಗೊಂಬೆ ಕುಳಿತಿದ್ದ ಕುರ್ಚಿಯಿಂದೆದ್ದು ನಿಂತು ಅತಿವೇಗವಾಗಿ ಕೈಲಿದ್ದ ಬೀಸಣಿಗೆಯಿಂದ ಬೀಸಿಕೊಳ್ಳಲಾರಂಭಿಸುತ್ತಿತ್ತು.

ಈ ಗಾಳಿ ಸೇವನೆಯಾತುರವುಳ್ಳ ಆಂಗ್ಲ ಮಹಿಳೆಯ ಬೊಂಬೆಯನ್ನು ಕಂಡು ಕಾಳೀಪದನಿಗೆ ಆಸೆಯಾಯಿತು. ಅವನಿಗೆ ಅಮ್ಮ ಹೇಗೆ ಎಂದು ಗೊತ್ತು. ಅದಕ್ಕಾಗಿ ಆಕೆಯನ್ನ ಕೇಳದೆ ತಂದೆಯನ್ನ ದೈನ್ಯದಿಂದ ಕೇಳಿದ. ಭವಾನೀಚರಣನು ಕೂಡಲೇ ಉದಾರತೆಯಿಂದ 'ಆಗಲಿ' ಎಂದು ಮಾತು ಕೊಟ್ಟುಬಿಟ್ಟ. ಆದರೆ ಆಮೇಲೆ ಅದರ ಬೆಲೆಯನ್ನು ಕೇಳಿ ಅವನ ಮುಖ ಒಣಗಿಹೋಯಿತು.

ಮನೆಗೆ ಬರಬೇಕಾದ ವರಮಾನದ ಹೊಣೆ ರಾಸಮಣಿಯ ಮೇಲೆ. ಖರ್ಚು ಮಾಡುವ ಜವಾಬುದಾರಿಯೂ ಅವಳದೇ. ಆದ್ದರಿಂದ ಭವಾನೀ ಚರಣನು

ಭಿಕ್ಷುಕನಂತೆ ಅನ್ನಪೂರ್ಣೆಯ ಬಾಗಿಲಲ್ಲಿ ಹೋಗಿ ನಿಂತ. ಮೊದಲಲ್ಲಿ ಯಾವುದೋ ಸಲ್ಲದ ವಿಷಯಗಳನ್ನ ವಿಸ್ತಾರವಾಗಿ ಮಾತಾಡುತ್ತ ಮಧ್ಯದಲ್ಲಿ ಥಟ್ಟನೆ ತನ್ನ ಮನಸ್ಸಿನ ಆಸೆಯನ್ನು ವ್ಯಕ್ತಗೊಳಿಸಿಬಿಟ್ಟ. ರಾಸಮಣಿ ಅತಿ ಸಂಕ್ಷೇಪವಾಗಿ "ಹುಚ್ಚು ಹಿಡಿದಿದೆಯೇ ನಿಮಗೆ?" ಎಂದು ಕೇಳಿಬಿಟ್ಟಳು.

ಭವಾನೀಚರಣನು ಸುಮ್ಮನೆ ಸ್ವಲ್ಪ ಹೊತ್ತು ಯೋಚಿಸುತ್ತಿದ್ದು ಆಮೇಲೆ ಹಠಾತ್ತಾಗಿ "ಸರಿ, ಹಾಗಾದರೆ – ನಿತ್ಯವೂ ನೀನು ನನ್ನ ಅನ್ನದ ಜೊತೆಯಲ್ಲಿ ತುಪ್ಪ, ಮತ್ತು ಪಾಯಸ ಬಡಿಸುತ್ತೀಯಲ್ಲ? ಅದರ ಪ್ರಯೋಜನವೇನಿಲ್ಲವಲ್ಲ?" ಎಂದ.

"ಪ್ರಯೋಜನವಿಲ್ಲ ಎಂದರೇನು? ವೈದ್ಯರು ಹೇಳಿದ್ದಾರೆ... ಅದರಿಂದ ಪಿತ್ಥ ಕಡಿಮೆಯಾಗುತ್ತಂತೆ."

ರಾಸಮಣಿಯು ಬಿರುಸಾಗಿ ತಲೆಯಲ್ಲಾಡಿಸಿ "ನಿಮ್ಮ ವೈದ್ಯರಿಗೆ ಬಹಳ ಗೊತ್ತು ಬಿಡಿ" ಎಂದಳು.

ಭವಾನೀಚರಣನು ಮತ್ತೆ "ನಾನಿನ್ನೊಂದು ಹೇಳುತ್ತೇನೆ ಕೇಳು – ರಾತ್ರಿ ಊಟಕ್ಕೆ ಪೂರಿ ಬದಲು ಅನ್ನ ಬಡಿಸುವ ಏರ್ಪಾಡು ಮಾಡು. ಪೂರಿ ತಿಂದರೆ ಹೊಟ್ಟೆ ಭಾರವಾಗುತ್ತದೆ" ಎಂದ.

"ಹಾಗೇನು?... ಹೊಟ್ಟೆ ಭಾರವಾಗುವುದರಿಂದ ಇದುವರೆಗೆ ನಿಮಗೆ ಅಂಥದೇನು ಕೆಡುಕಾದದ್ದನ್ನ ನಾನು ನೋಡಲಿಲ್ಲ. ಹುಟ್ಟಿದಾಗಲಿಂದಲೂ ಪೂರಿ ತಿಂದೇ ನೀವು ದೊಡ್ಡವರಾಗಿರೋದು...?" ಎಂದಳು ಹೆಂಡತಿ.

ಭವಾನೀಚರಣನು ಎಲ್ಲ ವಿಷಯಗಳಲ್ಲೂ ತ್ಯಾಗ ಸ್ವೀಕಾರ ಮಾಡಲು ಸಿದ್ಧನಾಗಿದ್ದ. ಆದರೆ ಈ ಕಡೆ ಅತ್ಯಂತ ಕಟ್ಟುನಿಟ್ಟು. ತುಪ್ಪದ ಬೆಲೆ ಏರುತ್ತಿದ್ದರೂ ಪೂರಿಗಳ ಸಂಖ್ಯೆ ಒಂದೇ ಸಮನಾಗಿರುತ್ತಿತ್ತು. ಮಧ್ಯಾಹ್ನದೂಟದಲ್ಲಿ ಪಾಯುಸವಿರಬೇಕಾದರೆ ಮೊಸರು ತಿನ್ನದಿದ್ದರೂ ಆಗುತ್ತದೆ. ಆದರೆ ಆವಶ್ಯಕತೆಯಿಲ್ಲದಿದ್ದರೂ ಈ ಮನೆಯ ಬಾಬುಗಳು ಪಾಯಸದ ಜೊತೆಗೆ ಮೊಸರನ್ನೂ ಸೇವಿಸುತ್ತ ಬಂದಿದ್ದಾರೆ. ಎಂದಾದರೂ ಒಂದು ದಿನ ಗಂಡನ ಎಲೆಯಲ್ಲಿ ಆ ಅನುದಿನದ ಮೊಸರಿನ ಅಭಾವವನ್ನ ನೋಡಿದರೆ ರಾಸಮಣಿಗದರಿಂದ ಸ್ವಲ್ಪವೂ ಸಹನೆಯಾಗುತ್ತಿರಲಿಲ್ಲ. ಅಂತೂ ಆ ಗಾಳಿ ಬೀಸಿಕೊಳ್ಳುವ ಆಂಗ್ಲ ಮಹಿಳೆಯ ಗೊಂಬೆ ಭವಾನೀಚರಣನ ತುಪ್ಪ, ಪಾಯಸ, ಪೂರಿ, ಮೊಸರು ಮುಂತಾದವುಗಳ ಯಾವ ಛಿದ್ರ ದಾರಿಯಿಂದಲಾದರೂ ಪ್ರವೇಶ ಮಾಡುವ ಉಪಾಯ ತೋರಲಿಲ್ಲ.

ಭವಾನೀಚರಣನು ತನ್ನ ಪುರೋಹಿತ ಪುತ್ರನ ಮನೆಗೆ ಒಂದು ದಿನ ಏನೋ ಸಹಜವಾಗಿ ಕಾರಣವಿಲ್ಲದೆ ಹೋದಂತೆ ನಟಿಸುತ್ತ ಏನೇನೋ ಅಪ್ರಾಸಂಗಿಕವಾದ ಮಾತುಗಳನ್ನ ಹರಟುತ್ತ ಹಾಗೇ ಆ ಬೊಂಬೆಯ ಬೆಲೆಯನ್ನ ವಿಚಾರಿಸಿದ. ತನ್ನ

ಸದ್ಯದ ಆರ್ಥಿಕ ದುರವಸ್ಥೆಯ ಮಾತನ್ನ ಬಗಲಾಚರಣನ ಮುಂದೆ ಮರೆಮಾಚುವುದಕ್ಕೆ ಕಾರಣವೇನಿಸಿಲ್ಲವೆಂದವನಿಗೆ ಗೊತ್ತು. ಆದರೂ ಇಂದೇಕೋ ತನ್ನ ಬಳಿ ಹಣವಿಲ್ಲದ ಕಾರಣ ತನ್ನ ಮಗನಿಗೆ ಬೇಕಾದ ಈ ಸಾಮಾನ್ಯ ಆಟದ ಸಾಮಾನನ್ನ ಕೊಳ್ಳಲು ತಾನು ಶಕ್ತನಲ್ಲವೆಂಬುದರ ಸುಳಿವನ್ನು ಕೂಡ ತೋರಗೊಡಲು ಅವನಿಗೆ ಅಸಾಧ್ಯವೆನಿಸಿತು. ಆದರೂ ದುಸ್ಸಹ ಸಂಕೋಚವನ್ನೂ ಹೇಗೋ ತಳ್ಳಿಹಾಕಿ ತನ್ನ ಚಾದರದ ಒಳಗಡೆಯಿಂದ ಕಾಗದದಲ್ಲಿ ಸುತ್ತಿದ ಒಂದು ಬೆಲೆಯುಳ್ಳ ಹಳೆಯ ಕಾಲದ ರೇಶಿಮೆ ಶಾಲನ್ನು ಹೊರತೆಗೆದನು. ಒಣಗಿದ ಕೊರಳದನಿಯಲ್ಲಿ "ಸಮಯ ಸ್ವಲ್ಪ ಕೆಟ್ಟುಹೋಗಿರೋಣದರಿಂದ ಸದ್ಯಕ್ಕೆ ಕೈಯಲ್ಲಿ ನಗದು ಹಣ ಹೆಚ್ಚಿಲ್ಲ. ಅದಕ್ಕೆ ಅಂದುಕೊಂಡೆ... ಈ ಶಾಲನ್ನು ನಿನ್ನ ಹತ್ತಿರ ಅಡವಿಟ್ಟು ಆ ಬೊಂಬೆಯನ್ನ ಕಾಳೀಪದನ ಸಲುವಾಗಿ ಕೊಂಡುಹೋಗೋಣ ಅಂತ..." ಎಂದು ಉಗುಳು ನುಂಗುತ್ತ ಹೇಳಿದ.

ಆ ಶಾಲಿಗಿಂತಲೂ ಕಡಿಮೆ ದರದ ಯಾವುದಾದರೂ ಸಾಮಾನಾಗಿದ್ದಿದ್ದರೆ ಆಗ ಬಗಲಾಚರಣನು ಸಂಕೋಚವಿಲ್ಲದೆ ತೆಗೆದುಕೊಳ್ಳುತ್ತಿದ್ದ. ಆದರೆ ಅವನಿಗೆ ಗೊತ್ತು – ಇದನ್ನು ಜೀರ್ಣಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಗ್ರಾಮದ ಜನರೆಲ್ಲ ಆಮೇಲೆ ಆಡಿಕೊಳ್ಳುವುದಕ್ಕೆ ಆರಂಭಿಸುತ್ತಾರೆ. ಅದರಲ್ಲೂ ರಾಸಮಣಿಯ ನಾಲಗೆಯಿಂದ ಏನೇನು ಬರಬಹುದು ಎಂದು ನೆನೆದು ಅವನು ಹಿಂದೆಗೆದ. ಶಾಲನ್ನು ಪುನಃ ಚಾದರದೊಳಗೆ ಬೈತಿಟ್ಟುಕೊಂಡು ನಿರಾಶನಾಗಿ ಭವಾನೀಚರಣ ಹಿಂದಿರುಗಬೇಕಾಯಿತು.

ಕಾಳೀಪದನು ತಂದೆಯನ್ನು ನಿತ್ಯವೂ ಕೇಳತೊಡಗಿದ – "ಅಪ್ಪಾ, ಆ ಬೊಂಬೆಯೇನಾಯಿತಪ್ಪಾ?"

ಭವಾನೀಚರಣನು ನಿತ್ಯವೂ ನಗುಮುಖದಿಂದಲೇ "ಆಗಲಿ ತಡೆಯೋ... ಏನವಸರ? ಸಪ್ತಮಿ ಪೂಜೆ ದಿನ ಬರಲಿ" ಎನ್ನುತ್ತಿದ್ದ.

ಪ್ರತಿ ದಿನ ಹೀಗೇ ಬಲಾತ್ಕಾರವಾಗಿ ಮುಖದ ಮೇಲೆ ನಗುವನ್ನೆಳೆದು ತರುವುದು ದೊಡ್ಡ ಪ್ರಯಾಸವಾಗಿಹೋಯಿತು. ಇಂದು ಚತುರ್ಥಿ. ಭವಾನೀಚರಣನು ಹೊತ್ತಲ್ಲದ ಹೊತ್ತಿನಲ್ಲಿ ಹೆಂಡತಿಯ ಕೋಣೆಗೆ ಏನೋ ನೆಪದ ಮೇಲೆ ಬಂದು ನಿಂತ.

ಹಠಾತ್ತಾಗಿ ಮಾತು ಬಂದಂತೆ ರಾಸಮಣಿಯನ್ನು ಕುರಿತು "ನೋಡಿಲ್ಲಿ, ನಾನೀ ಕೆಲದಿನಗಳಿಂದ ಗಮನಿಸುತ್ತಿದ್ದೇನೆ. ಕಾಳೀಪದನ ಮೈಯೇಕೋ ದಿನ ದಿನಕ್ಕೂ ಕೆಟ್ಟುಹೋಗುತ್ತ ಇದೆ" ಎಂದುಸುರಿದ.

ರಾಸಮಣಿಯು "ನಕ್ಕಾರು! ಕೆಟ್ಟುಹೋಗುತ್ತೆ ಯಾಕೆ? ನಾನಂತೂ ಅವನಿಗೇನಾಗಿರುವುದನ್ನೂ ಕಂಡಿಲ್ಲ" ಎಂದಳು.

ಭವಾನೀಚರಣನು "ಕಂಡಿಲ್ಲವೇ? ಅವನು ಸುಮ್ಮನೆ ಮಾತಿಲ್ಲದೆ ಕೂತಿರುತ್ತಾನೆ ಸದಾ. ಏನೋ ಸುಮ್ಮನೆ ಚಿಂತಿಸುತಾ ಇರುತಾನೆ" ಎಂದ.

ರಾಸಮಣಿಯು "ಸುಮ್ಮನಿರುತಾನೇಕೆ? ಒಂದು ಕ್ಷಣವಾದರೂ ಅವನು ಸುಮ್ಮನಿದ್ದರೆ ನಾನು ಬದುಕಿದೆ... ಅವನಿಗೆ ಚಿಂತೆಯೊಂದು ಬೇರೆ. ಎಲ್ಲೇನು ತುಂಟತನ ಮಾಡೋಣ ಅಂತ ಚಿಂತಿಸುತಾನೇನೋ ಅಷ್ಟೆ" ಎಂದುಬಿಟ್ಟಳು.

ದುರ್ಗದ ಗೋಡೆಯಲ್ಲಿ ಈ ದಿಕ್ಕಿನಲ್ಲೂ ಯಾವ ದುರ್ಬಲತೆಯೂ ತೋರಿಬರಲಿಲ್ಲ. ಕಲ್ಲಿನ ಮೇಲೆ ಗುಂಡಿನ ಗುರುತು ಕೂಡ ಬೀಳಲಿಲ್ಲ. ನಿಟ್ಟುಸಿರು ಬಿಡುತ್ತ ತಲೆಯ ಮೇಲೆ ಕೈಯಾಡಿಸಿಕೊಂಡು ಭವಾನೀಚರಣ ಹೊರಗಡೆ ಬಂದು ಬಿಡಬೇಕಾಯಿತು.

ಆಮೇಲೆ ಒಬ್ಬನೇ ತನ್ನ ಕೋಣೆಯ ಬಾಗಿಲ ಬಳಿ ಕೂತು ಜೋರಾಗಿ ಹುಕ್ಕಾ ಸೇದಲು ತೊಡಗಿದ.

ಪಂಚಮಿಯ ದಿನ ಅವನ ಎಲೆಯಲ್ಲಿ ಎಂದಿನಂತೆ ಪಾಯಸ, ಮೊಸರು ಬಂದು ಬಿತ್ತು. ಸಂಜೆಯ ವೇಳೆ ಬರೇ ಒಂದು ಸಂದೇಶ (ಹಾಲಿನ ಮಿಠಾಯಿ) ತಿಂದು ನೀರು ಕುಡಿದುಬಿಟ್ಟ, ಪೂರಿಯನ್ನ ಮುಟ್ಟಲೂ ಸಹ ಇಲ್ಲ. "ಇವತ್ತೇಕೋ ಹಸಿವೆಯೇ ಇಲ್ಲ" ಎಂದು ಎದ್ದುಬಿಟ್ಟ.

ಈ ಸಲ ದುರ್ಗದ ಗೋಡೆಯಲ್ಲಿ ದೊಡ್ಡದೊಂದು ರಂಧ್ರ ಕಂಡುಬಂತು.

ಷಷ್ಠಿಯ ದಿನ ರಾಸಮಣಿಯು ತಾನಾಗಿ ಕಾಳೀಪದನನ್ನ ತನ್ನ ಬಳಿಗೆ ಏಕಾಂತದಲ್ಲಿ ಕರೆದುಕೊಂಡು ಅವನನ್ನ ಹಳೆಯ ಮುದ್ದಿನ ಹೆಸರಲ್ಲಿ ಸಂಬೋಧಿಸಿ "ಭೇಂಟೂ, ನಿನಗೆ ವಯಸ್ಸಿಷ್ಟು ಬೆಳೆದಿದೆ. ಆದರೂ ನಿನ್ನ ಹಠಮಾರಿತನ ಬಿಡಲಿಲ್ಲ. ಅಲ್ಲವೋ, ಕೊಂಡುಕೊಡಲು ಅಸಾಧ್ಯವಾದಂಥ ಸಾಮಾನು ಬೇಕು ಅಂತ ಹಠಹಿಡಿದರೆ ಅದನ್ನ ಅರ್ಥ ಕದ್ದುತಂದ ಹಾಗೆ... ಗೊತ್ತೇ ನಿನಗೆ?" ಎಂದಳು.

ಕಾಳೀಪದನು ಮೂಗಿನಲ್ಲಿ ದನಿ ಹೊರಡಿಸುತ್ತ "ನನಗೇನು ಗೊತ್ತು? ಅಪ್ಪನೇ ನನಗದನ್ನ ತಂದುಕೊಡುತ್ತೇನೆ ಅಂತ ಹೇಳಿದ್ದು" ಎಂದ.

ಆಗ ತಂದೆ ಹಾಗೆ ಹೇಳಿದುದರ ಅರ್ಥವೇನೆಂದು ರಾಸಮಣಿಯು ಕಾಳೀಪದನಿಗೆ ತಿಳಿಯಹೇಳಲು ಕೂತಳು. ತಂದೆ ಹೀಗೆ ಮಾತುಕೊಡುವುದರ ನಡುವೆ ಎಷ್ಟು ಆದರ, ಎಷ್ಟು ನೋವು, ಇಷ್ಟಾದರೂ ಸಾಮಾನು ತಂದು ಕೊಡುವುದರಲ್ಲಿ ಅವರ ದಾರಿದ್ರ್ಯದ ಮನೆಯಲ್ಲಿ ಎಷ್ಟು ನಷ್ಟ, ಎಷ್ಟು ಸಂಕಟ... ಇವನ್ನೆಲ್ಲಾ ಬೇಕಾದಷ್ಟು ವಿವರಿಸಿ ಹೇಳಿದಳು. ರಾಸಮಣಿಯು ಹೀಗೆ, ಇಷ್ಟರ ಮಟ್ಟಿಗೆ, ಎಂದೂ ಕಾಳೀಪದನಿಗೆ ತಿಳಿಯ ಹೇಳಿರಲಿಲ್ಲ... ಏನು ಹೇಳಿದರೂ ಅದನ್ನು ಸಂಕ್ಷೇಪವಾಗಿ, ಅತಿ ಒರಟಾಗಿ ಹೇಳಿಬಿಡುತ್ತಿದ್ದಳು. ಯಾವ ಆಜ್ಞೆಯನ್ನೂ ಮೃದುವಾದ ಮಾತಲ್ಲಿ ಹೇಳುವ ಆವಶ್ಯಕತೆಯನ್ನೇ ಕಂಡಿರಲಿಲ್ಲ ಅವಳು. ಆದ್ದರಿಂದ

ಕಾಳೀಪದನಿಗೆ ಅವಳು ಇಂದು ಇಷ್ಟು ನಿಧಾನವಾಗಿ, ಮೃದುವಾಗಿ, ಇಷ್ಟು ವಿವರವಾಗಿ ಹೇಳಿದುದನ್ನ ಕೇಳಿ ಆಶ್ಚರ್ಯವಾಗಿ ಹೋಯಿತು. ಮತ್ತು ತಾಯಿಯ ಮನಸ್ಸಿನ ಒಂದು ಮೂಲೆಯಲ್ಲಿ ಎಂತಹ ಒಂದು ಅನುಕಂಪವಿದೆ ಎಂಬುದನ್ನು ಎಳೆಯವನಾದರೂ ಕಂಡುಕೊಂಡ. ಆದರೂ ಆ ಗೊಂಬೆಯ ಕಡೆಯ ಆಕರ್ಷಣದಿಂದ ಮನಸ್ಸನ್ನು ಒಂದು ಕ್ಷಣವಾದರೂ ಎಳೆದು ತರುವುದು ಎಷ್ಟು ಕಷ್ಟವೆಂದು ವಯಸ್ಕರಾದ ಓದುಗರಿಗೆ ತಿಳಿಯದಿರಲಾರದು. ಅದಕ್ಕೇ ಕಾಳೀಪದನು ಮುಖವನ್ನು ಅತ್ಯಂತ ಗಂಭೀರ ಮಾಡಿಕೊಂಡು ಒಂದು ಕಟ್ಟಿಗೆಯನ್ನು ಕೈಯಲ್ಲಿ ಹಿಡಿದು ನೆಲದ ಮೇಲೆ ಗೆರೆ ಬರೆಯತೊಡಗಿದ.

ಆಗ ರಾಸಮಣಿಯು ಮತ್ತೆ ಗಡುಸಾಗಿಬಿಟ್ಟಳು. ಬಿರುನುಡಿಯಲ್ಲಿ "ನೀನು ಎಷ್ಟು ಹಟ ಮಾಡಿದರೂ, ಅತ್ತು ಗೋಳಾಡಿದರೂ ಸರಿ, ನಿನಗೆ ನಾವು ಕೊಳ್ಳಲಾರದ ವಸ್ತು ಸಿಗುವ ಹಾಗೇಯಿಲ್ಲ. ತಿಳಿದುಕೊಂಡಿರು" ಎಂದುಬಿಟ್ಟಳು.

ಹೀಗೆ ಹೇಳುತ್ತ ಬೇಗ ಬೇಗ ಹೆಜ್ಜೆ ಹಾಕುತ್ತ ತನ್ನ ಮನೆಗೆಲಸ ಮಾಡಲು ಹೊರಟುಹೋದಳು.

ಈ ಕಡೆ ಕಾಳೀಪದ ಹೊರಗಡೆ ಹೋದ. ಆಗ ಭವಾನೀಚರಣನು ಹೊರಗೆ ಒಂಟಿಯಾಗಿ ಕೂತು ಹುಕ್ಕಾ ಸೇದುತ್ತಿದ್ದ. ದೂರದಿಂದ ಕಾಳೀಪದನನ್ನು ಕಂಡು ಅವಸರದಿಂದ ಎದ್ದು ಏನೋ ತುರುತಾದ ಕೆಲಸವಿರುವವನ ಹಾಗೆ ಯಾವ ಕಡೆಯೋ ಹೊರಟ. ಕಾಳೀಪದನು ಓಡಿಕೊಂಡು ಬಂದು "ಅಪ್ಪಾ...ಗೊಂಬೇ...?" ಎಂದು ಜ್ಞಾಪಿಸಿದ.

ಈಗ ಮಾತ್ರ ಭವಾನೀಚರಣನ ಮುಖದ ಮೇಲೆ ಗೆಲುವು ಮೂಡಲಿಲ್ಲ. ಮಗನ ಕೊರಳ ಸುತ್ತ ತೋಳನ್ನು ಸುತ್ತಿ "ಸ್ವಲ್ಪ ತಡೆದುಕೊಳ್ಳೋ, ಮಗು, ನನಗೀಗೊಂದು ಕೆಲಸವಿದೆ, ಅದನ್ನ ಮುಗಿಸಿ ಬರುತ್ತೇನೆ. ಆಮೇಲೆ ಎಲ್ಲಾ ಆಗತ್ತೆ..." ಎಂದು ಮನೆಯ ಹೊರಗೆ ಹೊರಟು ಬಂದ. ಆಗ ಕಾಳೀಪದನ ಮನಸ್ಸಿನಲ್ಲಿ ತನ್ನ ತಂದೆ ಬೇಗ ಬೇಗ ಕಂಬನಿ ಒರೆಸಿಕೊಂಡರೆಂದೆನ್ನಿಸಿತು.

ಆಗ ಆ ಪಾಳೆಯದ ಒಂದು ಮನೆಯಲ್ಲಿ ಉತ್ಸವಕ್ಕಾಗಿ ಕೊಳಲೂದುವುದಕ್ಕಾಗಿ ಮುಂಗಡ ಹಣಕೊಡುವ ಮೊದಲು ಗಾನದ ಪರೀಕ್ಷೆಯಾಗುತ್ತಿತ್ತು. ಆ ರಸನ್‌ಚೌಕಿ ಕಡೆಯವರ ಕೊಳಲಗಾನದ ಮುಂಜಾನೆಯ ಕರುಣಸ್ವರದಲ್ಲಿ ಶರದೃತುವಿನ ಹೊಸ ಹಸಿಯ ಬಿಸಿಲು ಗೂಢವಾಗಿ ಹೊತ್ತ ಕಂಬನಿಯ ಭಾರದಿಂದ ಭಿನ್ನವಾದಂತೆ ತೋರುತ್ತಿತ್ತು. ಕಾಳೀಪದನು ತಮ್ಮ ಮನೆಯ ಬಾಗಿಲ ಮುಂದೆ ನಿಂತು ಸುಮ್ಮನೆ ಬೀದಿಯ ಕಡೆ ನೋಡುತ್ತಿದ್ದ. ಅಪ್ಪ ಅದಾವ ಕೆಲಸದ ಮೇಲೂ ಎಲ್ಲಿಗೂ ಹೊರಟಿಲ್ಲವೆಂಬುದು ಆತನ ನಡಿಗೆಯನ್ನು ನೋಡಿದೊಡನೆ ಹೇಳಬಹುದಾಗಿತ್ತು. ಪ್ರತಿ ಹೆಜ್ಜೆಯಿಡುವಾಗಲೂ ನಿರಾಸೆಯ ಹೊರೆಯನ್ನು ಎಳೆದುಕೊಂಡು

ಎಳೆದುಕೊಂಡು ಹೊರಟಿದ್ದ; ಅದನ್ನೆಲ್ಲಿಯೂ ಒಗೆದುಬಿಡಲೂ ಸಾಧ್ಯವಿಲ್ಲ – ಎಂಬುದನ್ನ ಆತನ ಬೆನ್ನು ನೋಡಿದರೂ ತಿಳಿಯಬಹುದಾಗಿತ್ತು.

ಕಾಳೀಪದನಾಗ ತಾಯಿಯ ಕೋಣೆಗೆ ಮರಳಿ ಬಂದು "ಅಮ್ಮಾ, ನನಗೆ ಆ ಗೊಂಬೆ ಬೇಕಾಗಿಲ್ಲಮ್ಮಾ" ಎಂದುಬಿಟ್ಟ.

ಅಮ್ಮನಾಗ ಅಡಿಕೆ ಕತ್ತರಿಯಲ್ಲಿ ಬೇಗ ಬೇಗ ಅಡಿಕೆ ಕತ್ತರಿಸುತ್ತಿದ್ದಳು. ಅವಳ ಮುಖವಾಗ ಉಜ್ವಲವಾಗಿಹೋಯಿತು.

ತಾಯಿ, ಮಗ – ಇಬ್ಬರೂ ಅಲ್ಲಿ ಕೂತು ಪರಸ್ಪರ ಏನೇನು ಮಾತಾಡಿ ಗೊತ್ತುಮಾಡಿಕೊಂಡರೋ ಹೇಳಲಿಕ್ಕಾಗದು. ಅಡಿಕೆ ಕತ್ತರಿಯನ್ನೂ ಅರ್ಧ ಕತ್ತರಿಸಿದ ಅಡಿಕೆಯನ್ನೂ ಅಲ್ಲೇ ಇಟ್ಟುಬಿಟ್ಟು, ರಾಸಮಣಿ ಆ ಕೂಡಲೇ ಬಗಲಾಚರಣನ ಮನೆಗೆ ಹೊರಟುಬಿಟ್ಟಳು.

ಅಂದು ಭವಾನೀಚರಣನು ಮನೆಗೆ ಹಿಂದಿರುಗಲು ಬಹಳ ವೇಳೆಯಾಯಿತು. ಸ್ನಾನ ತೀರಿಸಿಕೊಂಡು ಊಟಕ್ಕೆ ಕೂಡುವಾಗ ಅವನ ಮುಖ ನೋಡಿದರೆ ಹೇಳಬಹುದಾಗಿತ್ತು – ಇವತ್ತೂ ಮೊಸರು, ಪಾಯಸಗಳಿಗೆ ಸದ್ಗತಿಯ ಸಂಭವವೇ ಇಲ್ಲ. ಮತ್ತು ಮೀನಿನ ರಸವತ್ತಾದ ಮುಂಡವು ಬೆಕ್ಕಿನ ಹೊಟ್ಟೆಗೇ ಹಬ್ಬವಾಗಲಿದೆ.

ಆಗ ರಾಸಮಣಿಯು ಹುರಿ ಕಟ್ಟಿದ ರಟ್ಟಿನಿಂದ ಮಾಡಿದ ಒಂದು ಪೆಟ್ಟಿಗೆಯನ್ನು ತಂದು ಗಂಡನ ಎದುರಿನಲ್ಲಿ ಇರಿಸಿದಳು. ಊಟವಾದ ಮೇಲೆ ಗಂಡನು ವಿಶ್ರಾಂತಿಗೆಂದು ಹೋಗುವಾಗ ಅದರ ರಹಸ್ಯವನ್ನು ಬಿಚ್ಚಿ ಹೇಳಬೇಕೆಂದು ಅವಳ ಅಭಿಪ್ರಾಯ. ಆದರೆ ಗಂಡನ ಎಲೆಯಲ್ಲಿ ಬಡಿಸಿದ ಮೊಸರು, ಪಾಯಸ, ಮೀನಿಗಾಗುವ ಅನಾದರವನ್ನು ದೂರಮಾಡಲೋಸುಗ ಆಗಲೇ ಆ ಪೆಟ್ಟಿಗೆಯನ್ನು ಹೊರಗೆ ತೆಗೆಯಬೇಕಾಯಿತು.

ಪೆಟ್ಟಿಗೆಯ ಒಳಗಡೆಯಿಂದ ಅದೇ ಬೀಸಣಿಗೆ ಬೀಸಿಕೊಳ್ಳುವ ಆಂಗ್ಲ ಮಹಿಳೆಯ ಬೊಂಬೆಯು ಹೊರಗೆ ಬಂದು ಹೆಚ್ಚು ವಿಳಂಬಮಾಡದೆ ಪ್ರಬಲವಾದ ಉತ್ಸಾಹದಿಂದ ತನ್ನ ಸೆಕೆ ಹೋಗಲಾಡಿಸಲು ಮಗ್ನವಾಯಿತು. ಬೆಕ್ಕು ಅಂದು ನಿರಾಶೆಯಾಗಿ ತನ್ನ ದಾರಿ ಹಿಡಿಯಬೇಕಾಯಿತು. ಭವಾನೀಚರಣನು ಹೆಂಡತಿಗೆ "ಇವತ್ತು ಅಡಿಗೆಯಂತೂ ಮಜವಾಗಿದೆ ಕಣೆ. ಎಷ್ಟು ದಿನವಾಯಿತೋ ಇಂಥಾ ಮೀನಿನ ಹುಳಿ ತಿಂದು! ಮತ್ತು ಮೊಸರು ಎಷ್ಟು ಚೆನ್ನಾಗಿ ಹೆಪ್ಪಾಗಿದೆಯೋ, ಏನು ಹೇಳಲಿ...!" ಎಂದು ನಾಲಗೆ ಚಪ್ಪರಿಸಿದ.

ಸಪ್ತಮಿಯ ದಿವಸ ಕಾಳೀಪದನು ತನ್ನ ಅನೇಕ ದಿನಗಳ ಬಯಕೆಯನ್ನ ಪೂರೈಸಿಕೊಂಡನು. ಅಂದು ಇಡೀ ದಿವಸ ಅವನು ಆಂಗ್ಲಮಹಿಳೆಯ ಗೊಂಬೆ ಗಾಳಿ ಬೀಸಿಕೊಳ್ಳುವುದನ್ನ ನೋಡಿದ. ಅವನ ಸಮವಯಸ್ಸಿನವರಾದ ಹುಡುಗರಿಗೆಲ್ಲರಿಗೂ ತೋರಿಸಿ ಅವರಿಗೆಲ್ಲರಿಗೂ ಅಸೂಯೆಯುಂಟಾಗುವಂತೆ

ಮಾಡಿದ. ಬೇರೆ ಸಂದರ್ಭದಲ್ಲಾಗಿದ್ದರೆ ಸದಾ ಆ ಗೊಂಬೆ ಒಂದೇ ಸಮನಾಗಿ ಗಾಳಿ ಬೀಸಿಕೊಳ್ಳುವುದು ನೋಡಿ ಬೇಸರವಾಗಿಬಿಡುತ್ತಿದ್ದ. ಆದರೆ ಅಷ್ಟಮಿಯ ದಿನವೇ ಪ್ರತಿಮಾ ವಿಸರ್ಜನೆ ಮಾಡಬೇಕೆಂದು ತಿಳಿದು ಅವನ ಆಕರ್ಷಣ ಸ್ಥಿರವಾಗಿ ನಿಂತುಹೋಯಿತು. ರಾಸಮಣಿಯು ತಮ್ಮ ಪುರೋಹಿತರ ಮಗನಿಗೆ ಎರಡು ರೂಪಾಯಿ ನಗದು ಕೊಟ್ಟು ಕೇವಲ ಒಂದೇ ದಿನದ ಅನುಭೋಗಕ್ಕಾಗಿ ಆ ಗೊಂಬೆಯನ್ನು ಬಾಡಿಗೆಗೆ ತಂದಿದ್ದಳು. ಅಷ್ಟಮೀ ದಿನ ಕಾಳೀಪದನು ನಿಟ್ಟುಸಿರು ಬಿಟ್ಟು ಕೈಯಾರೆ ಪೆಟ್ಟಿಗೆಯ ಸಮೇತ ಗೊಂಬೆಯನ್ನು ಬಗಲಾಚರಣನ ಅಂಗಡಿಗೆ ವಾಪಸು ಕೊಟ್ಟು ಬಂದುಬಿಟ್ಟ.

ಆ ಒಂದು ದಿನದ ಮಿಲನದ ಸುಖದ ನೆನಪು ಅನೇಕ ದಿನಗಳವರೆಗೂ ಅವನ ಮನದಲ್ಲಿ ಜಾಗರಿತವಾಗಿತ್ತು. ಅವನ ಕಲ್ಪನಾಲೋಕದಲ್ಲಿ ಬೀಸಣಿಗೆ ಬೀಸಿಕೊಳ್ಳುವ ಆ ಆಟ ವಿರಾಮವೇ ಇಲ್ಲದೆ ನಡೆಯಿತು.

ಅಂದಿನಿಂದ ಕಾಳೀಪದನು ತಾಯಿಯ ಮನೆಗೆಲಸದ ಸಲಹೆಗಳಲ್ಲಿ ಒಂದಾಗಿ ಹೋದ, ಮತ್ತು ಅಂದಿನಿಂದ ಭವಾನೀಚರಣನೂ ಪ್ರತಿ ವರುಷವೂ ಅಷ್ಟು ಉತ್ಸಾಹದಿಂದ ಅತಿ ಬೆಲೆಬಾಳುವ ಉಪಹಾರಗಳನ್ನು ಮಗನಿಗೆ ತಂದು ಕೊಡುತ್ತಿದ್ದುದನ್ನು ಕಂಡು ಅವನಿಗೇ ಆಶ್ಚರ್ಯವಾಗಿ ಹೋಯಿತು.

ಈ ಜಗತ್ತಿನಲ್ಲಿ ಬೆಲೆ ಕೊಡದೆ ಯಾವ ವಸ್ತುವೂ ಸಿಗುವುದಿಲ್ಲ. ಮತ್ತು ಆ ಬೆಲೆ, ದುಃಖದ ಬೆಲೆಯೆಂಬುದನ್ನು ತಾಯಿಯ ಅಂತರಂಗವನ್ನು ಹೊಕ್ಕು ಪ್ರತಿದಿನವೂ ಅರ್ಥಮಾಡಿಕೊಂಡಷ್ಟೂ ನೋಡನೋಡುತ್ತ ಕಾಳೀಪದನು ಒಳಗಿನಿಂದ ಹಿರಿತನಕ್ಕೆ ಬೆಳೆದುಕೊಂಡು ಬಂದ. ಎಲ್ಲ ಕೆಲಸಗಳಲ್ಲೂ ಈಗವನು ತಾಯಿಯ ಮಗ್ಗುಲಲ್ಲೇ ನಿಂತು ನೆರವಾಗುತ್ತ ಬಂದ. ಸಂಸಾರದ ಭಾರ ಹೊರಬೇಕಾಗುತ್ತದೆ, ಆ ಭಾರ ಹೆಚ್ಚಾಗುವುದಕ್ಕೆ ಬಿಡಕೂಡದು – ಎಂಬ ಪಾಠವನ್ನು ಅವನು ಯಾರೂ ಹೇಳಿ ಕೊಡದೆಯೇ ಕಲಿತು, ಅದು ಅವನ ರಕ್ತದಲ್ಲಿ ಸೇರಿಹೋಯಿತು.

ಬದುಕಿನ ಹೊಣೆ ತಾನು ಹೊರುವುದಕ್ಕೆ ಸಿದ್ಧನಾಗಿರಬೇಕಾಗುತ್ತದೆ ಎಂದು ನೆನೆದು ಅವನು ಅತಿ ನಿಷ್ಠೆಯಿಂದ ಓದತೊಡಗಿದ. ಸ್ಕಾಲರ್‌ಷಿಪ್‌ನ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ಅವನು ಸ್ಕಾಲರ್‌ಷಿಪ್ಪನ್ನು ಪಡೆದಾಗ ಭವಾನೀಚರಣನು "ಇನ್ಯಾಕೆ, ಕಾಳೀಪದ ಹೆಚ್ಚು ಓದಬೇಕು? ಇದು ಸಾಕು. ಇನ್ನು ಮೇಲೆ ಮನೆಯ ಆಸ್ತಿ, ಪಾಸ್ತಿ ನೋಡಿಕೊಂಡಿದ್ದರಾಯಿತು" ಎಂದ.

ಕಾಳೀಪದನು ತಾಯಿಯ ಬಳಿ ಬಂದು "ಅಮ್ಮಾ, ಕಲಿಕತ್ತೆಗೆ ಹೋಗಿ ಓದು ಬರೆಹ ಪೂರೈಸದೆ ಹೋದರೆ ನಾನು ಮನುಷ್ಯನಾಗುವುದು ಹೇಗೆ?" ಎಂದು ಹೇಳಿದ.

ತಾಯಿಯೂ "ಹೌದು ಕಣೋ, ನೀನು ಹೇಳುವುದು ಸರಿಯೇ,... ಕಲಿಕತ್ತೆಗಂತೂ ಹೋಗಲೇಬೇಕಾಗುತ್ತದೆ." ಎಂದಳು.

ಕಾಳೀಪದನು "ನನಗಾಗಿ ಹೆಚ್ಚೇನೂ ಖರ್ಚೂ ಮಾಡಬೇಕಾಗಿಲ್ಲ. ಈ ಸ್ಕಾಲರ್‌ಷಿಪ್ಪಿನ ಹಣದಿಂದಲೇ ನಡೆಸಿಕೊಂಡು ಹೋಗುತ್ತೇನೆ. ಜೊತೆಯಲ್ಲಿ ಯಾವುದಾದರೂ ಕೆಲಸವನ್ನೂ ಹುಡುಕಿಕೊಳ್ಳುತ್ತೇನೆ" ಎಂದ.

ಭವಾನೀಚರಣನನ್ನು ಒಪ್ಪಿಸಬೇಕಾದರೆ ಅದೆಷ್ಟು ಕಷ್ಟವಾಯಿತೋ! ನೋಡಿಕೊಳ್ಳುವುದಕ್ಕೆ ಆಸ್ತಿ, ಪಾಸ್ತಿಯೇನಿದೆ ಅಂಥಾದ್ದು ಎಂದು ಹೇಳಿದರೆ ಗಂಡನಿಗೆ ಬಹಳ ದುಃಖವಾದೀತೆಂದು ರಾಸಮಣಿಯು ಹಾಗೆ ಹೇಳದೆ "ಕಾಳೀಪದನು ಹೇಗಾದರೂ ದೊಡ್ಡಮನುಷ್ಯನಾಗಬೇಡವೆ?" ಎಂದಳು. ಆದರೆ ಪರಂಪರೆಯಿಂದ ಶಾನಿಯಾಡಿಯ ಚೌಧುರಿ ಮನೆಯ ಗಂಡಸರು ಊರೇ ಬಿಟ್ಟುಹೋಗದೆ ದೊಡ್ಡ ಮನುಷ್ಯರಾಗಿಲ್ಲವೆ? ವಿದೇಶವನ್ನು ಅವರು ಯಮಪುರಿಯಂತೆ ತಿಳಿಯುತ್ತಿದ್ದರು. ಕಾಳೀಪದನಂತಹ ಹುಡುಗನನ್ನು ಒಂಟಿಯಾಗಿ ಕಲಿಕತ್ತೆಗೆ ಕಳುಹಿಸುವ ಯೋಚನೆ ಯಾರ ತಲೆಯಲ್ಲಾದರೂ ಹೇಗೆ ತಾನೇ ಹೊಳೆಯುತ್ತದೆ!...ಭವಾನೀಚರಣನಿಗೆ ಅದೇ ಆಶ್ಚರ್ಯ! ಕಟ್ಟಕಡೆಗೆ ಊರಿನ ಅತಿ ಕುಶಲಬುದ್ಧಿಯವನಾದ ಬಗಲಾಚರಣನೂ ರಾಸಮಣಿಯ ಮತವನ್ನೇ ಸರಿಯೆಂದು ಒಪ್ಪಿಕೊಂಡನು. "ಕಾಳೀಪದನು ಒಂದು ದಿನ ವಕೀಲನಾಗಿ ಬಂದು ಆ ಉಯಿಲು ಕಳುವಿನ ದ್ರೋಹಕ್ಕೆ ಪ್ರತೀಕಾರ ಮಾಡುತ್ತಾನೆ. ಆದ್ದರಿಂದ ಅವನು ಕಲಿಕತ್ತೆಗೆ ಹೋಗುವುದನ್ನು ಯಾರೂ ತಡೆಯುವಹಾಗಿಲ್ಲ" ಎಂದುಬಿಟ್ಟ ಬಗಲಾಚರಣ.

ಈ ಮಾತನ್ನ ಕೇಳಿ ಭವಾನೀಚರಣ ಎಷ್ಟೋ ಸಮಾಧಾನಪಡೆದ. ಸ್ನಾನದ ವಸ್ತ್ರದಲ್ಲಿ ಕಟ್ಟಿಟ್ಟಿದ್ದ ಹಳೆದಾದ ಕಾಗದ, ಪತ್ರ, ದಸ್ತಾವೇಜುಗಳ ಕಂತೆಯನ್ನು ತೆಗೆದು ಉಯಿಲು ಕಳುವಿನ ಬಗ್ಗೆ ಕಾಳೀಪದನ ಸಂಗಡ ಬಾರಿ ಬಾರಿಗೂ ಪ್ರಸ್ತಾಪ ಮಾಡತೊಡಗಿದ. ಅದುವರೆಗೆ ತಾಯಿಯ 'ಮಂತ್ರಿ'ಯಾಗಿ, ಆ ಕೆಲಸವನ್ನು ಕಾಳೀಪದ ಅತಿ ವಿಚಕ್ಷಣತೆಯಿಂದ ನಿರ್ವಹಿಸತೊಡಗಿದ್ದ. ಆದರೆ ತಂದೆಯ ಮಂತ್ರಾಲೋಚನೆಗವನು ತಕ್ಕವನಲ್ಲ. ಏಕೆಂದರೆ ಅವರ ಮನೆತನದ ಈ ಪುರಾತನ ಅನ್ಯಾಯದ ಬಗ್ಗೆ ಅವನ ಮನಸ್ಸಿನಲ್ಲಿ ಅಂತಹ ಆಕರ್ಷಣವಿರಲಿಲ್ಲ. ಆದರೂ ಅವನು ತಂದೆಯ ಮಾತಿಗೆ ಹೂಗುಟ್ಟುತ್ತಾ ಹೋದ. ಸೀತೆಯನ್ನುದ್ಧಾರಮಾಡಲು ವೀರ ಶ್ರೇಷ್ಠನಾದ ಹನುಮಂತ ಹೇಗೆ ಲಂಕೆಗೆ ದಂಡಯಾತ್ರೆ ಮಾಡಿದನೋ, ಕಾಳೀಪದನ ಕಲಿಕತ್ತೆಯ ಯಾತ್ರೆಯನ್ನೂ ಭವಾನೀಚರಣನು ಅದೇ ಮಹತ್ವವುಳ್ಳಂತೆ ನೋಡತೊಡಗಿದ. ಅವನು ಸಾಮಾನ್ಯವಾದೊಂದು ಪರೀಕ್ಷೆಯನ್ನು ಪಾಸಾಗಲು ಹೋಗುತ್ತಿಲ್ಲ. ಮನೆತನದ ಲಕ್ಷ್ಮಿಯನ್ನು ಮತ್ತೆ ಮನೆಗೆ ಕರೆತರುವುದಕ್ಕಾಗಿ ಹೋಗುತ್ತಿದ್ದಾನೆ.

ಕಲಿಕತ್ತೆಗೆ ಹೋಗುವ ಹಿಂದಿನ ದಿನ ರಾಸಮಣಿಯು ಕಾಳೀಪದನ ಕೊರಳಿಗೆ ಒಂದು ತಾಯತಿಯನ್ನು ದಾರದಲ್ಲಿ ಕಟ್ಟಿ ತೂಗುಹಾಕಿದಳು. ಅವನ ಕೈಯಲ್ಲಿ ಒಂದು ಐವತ್ತು ರೂಪಾಯಿಗಳ ನೋಟನ್ನು ಕೊಟ್ಟು "ಈ ನೋಟನ್ನು ಇಟ್ಟುಕೋ, ಕಷ್ಟದಲ್ಲಿ, ಆಪತ್ತಿನಲ್ಲಿ, ಅಗತ್ಯದ ಸಮಯದಲ್ಲಿ ಕೆಲಸಕ್ಕೆ ಬರುತ್ತೆ" ಎಂದಳು. ಸಂಸಾರದ ಖರ್ಚಿನಿಂದ, ಎಷ್ಟೋ ಕಾರ್ಪಣ್ಯ ಮಾಡಿ ಉಳಿಸಿಟ್ಟಿದ್ದ ಈ ನೋಟನ್ನು ತಾಯಿಯ ಹರಕೆಯಂತೆ ಕಾಳೀಪದನು ಸದಾಕಾಲವೂ ಕಾಪಾಡಿಕೊಂಡಿರುವೆನೆಂದೂ, ಎಷ್ಟು ಅಗತ್ಯ ಬಂದರೂ ಎಂದೂ ಖರ್ಚುಮಾಡುವುದಿಲ್ಲವೆಂದೂ ಮನಸ್ಸಿನಲ್ಲೇ ಸಂಕಲ್ಪ ಮಾಡಿದ.

೩

ಭವಾನೀಚರಣನ ಬಾಯಿಂದ ಉಯಿಲು ಕಳುವಿನ ಸಂಬಂಧವಾಗಿ ಈಗಷ್ಟರಮಟ್ಟಿಗೆ ಕೇಳಬರುತ್ತಿಲ್ಲ. ಈಗ ಅವನ ಒಂದೇ ಒಂದು ಆಲೋಚನೆಯೆಂದರೆ ಕಾಳೀಪದನ ವಿಷಯ. ಅವನ ಮಾತನ್ನು ಹೇಳುವುದಕ್ಕೆಂದೇ ಈಗಾತನು ಇಡೀ ಗ್ರಾಮವನ್ನು ಸುತ್ತಾಡುವನು. ಅವನಿಂದ ಪತ್ರ ಬಂದರೆ ಮನೆಮನೆಗೂ ಹೋಗಿ ಅದನ್ನು ಓದಿ ಹೇಳುವ ಸಂಭ್ರಮದಲ್ಲಿ ಅವನ ಕನ್ನಡಕ ಮೂಗಿನಿಂದ ಕೆಳಗಿಳಿಯುವುದಕ್ಕೇ ಸಾಧ್ಯವಿಲ್ಲ. ಹಿಂದೆಂದೂ ಯಾವ ಗಂಡಸೂ ಕಲಿಕತ್ತೆಗೆ ಆ ಗ್ರಾಮದಿಂದ ಹೋಗಿಲ್ಲವೆಂಬ ಅರಿವಿನಿಂದ ಕಲಿಕತ್ತೆಯ ಶ್ರೇಷ್ಠತೆಯು ಅವನ ಕಲ್ಪನೆಯಲ್ಲಿ ಅತ್ಯಂತ ಉತ್ತೇಜಿತವಾಗಿ ಹೋಯಿತು. ನಮ್ಮ ಕಾಳೀಪದ ಕಲಿಕತ್ತೆಯಲ್ಲಿ ಓದುತ್ತಾನೆ ಮತ್ತು ಕಲಿಕತ್ತೆಯಲ್ಲಿ ನಡೆಯುವ ಯಾವ ವಿಷಯವೂ ಅವನಿಗೆ ತಿಳಿಯದೆ ಇಲ್ಲ. ಅಷ್ಟೇಕೆ... ಹುಗಲಿಯ ಹತ್ತಿರ ಗಂಗಾನದಿಯ ಮೇಲೆ ಎರಡನೆಯದಿನ್ನೊಂದು ಸೇತುವೆಯನ್ನು ಕಟ್ಟುತಾಯಿದ್ದಾರೆ. ಇಂಥಾ ದೊಡ್ಡ ದೊಡ್ಡ ಸುದ್ದಿಗಳೆಲ್ಲ ಅವನ ಬಳಿ ಸರ್ವಸಾಮಾನ್ಯವಾದ ಸಮಾಚಾರಗಳು... "ಕೇಳಿದೆಯೇನಣ್ಣಾ?... ಗಂಗೆಯ ಮೇಲೆ ಇನ್ನೊಂದು ಸೇತುವೆ ಕಟ್ಟುತಾಯಿದ್ದಾರೆ... ಇವತ್ತೇ ಕಾಳೀಪದನಿಂದ ಕಾಗದ ಬಂತು... ಅದರಲ್ಲಿ ಎಲ್ಲ ಸಮಾಚಾರವನ್ನೂ ಬರೆದಿದ್ದಾನೆ..." ಎನ್ನುತ್ತ ಜೇಬಿನಿಂದ ಕನ್ನಡಕ ತೆಗೆದು ಅದರ ಗಾಜನ್ನು ಚೆನ್ನಾಗಿ ಅಂಗವಸ್ತ್ರದಿಂದೊರಸಿ ಕಾಗದವನ್ನು ನಿಧಾನವಾಗಿ ಮೊದಲಿಂದ ಕೊನೆಯವರೆಗೂ ನೆರೆಹೊರೆಯವರಿಗೆ ಓದಿ ಹೇಳುವನು. "ನೋಡಿದೆಯೇನಣ್ಣಾ..., ಕಾಲ ಬರುತಾ ಬರುತಾ ಹೇಗೆ ಹೇಗೆ ಆಗುತಾಯಿದೆಯೋ,...ಯಾರಿಗೆ ಗೊತ್ತಾಗುತ್ತೆ ಹೇಳು... ಕಟ್ಟ ಕಡೆಗೂ ಧೂಳಿನ ಕಾಲುಗಳಲ್ಲಿ ಗಂಗೆಯ ಮೇಲುಗಡೆ ಹೋಗಿ ನಾಯಿ, ನರಿಗಳು ಕೂಡ ದಾಟಿ ಹೋಗುತ್ತವೆ. ಕಲಿಗಾಲದಲ್ಲಿ ಇಂಥದೂ ನಡೆಯಬೇಕು ನೋಡು..."

ಪವಿತ್ರಗಂಗೆಗೆ ಬಂದ ಇಂತಹ ದುರವಸ್ಥೆ ನಿಶ್ಚಯವಾಗೂ ಅತಿ ಶೋಚನೀಯವೇ. ಆದರೆ ಕಾಳೀಪದನು ಈ ಕಲಿಕಾಲದ ಇಷ್ಟು ದೊಡ್ಡ ಜಯವಾರ್ತೆಯನ್ನು ತನಗೆ ಅಕ್ಷರಗಳಲ್ಲಿ ಕಟ್ಟಿ ಕಳುಹಿಸುವನಾಗಿದ್ದಾನೆ. ಮತ್ತು ಈ ಗ್ರಾಮದ ಪೆದ್ದು ಜನ ತನ್ನ ಪುಣ್ಯದಿಂದಲೇ ಈ ಸುದ್ದಿಯನ್ನು ತಿಳಿಯಲು ಸಾಧ್ಯವಾಯಿತು, ಎಂಬ ಆನಂದದಲ್ಲಿ ಅವನು ಈಗಿನ ಯುಗದಲ್ಲಿ ಜೀವಿಗಳಿಗಾದ ಅಪಾರ ದುರ್ಗತಿಯು ದುಶ್ಚಿಂತೆಯನ್ನು ಕೂಡ ಅನಾಯಾಸವಾಗಿ ಮರೆತುಬಿಡುವಂತಾಯಿತು. ಯಾರನ್ನ ನೋಡಿದರೂ ಅವರ ಮುಂದೆಲ್ಲ ಸುಮ್ಮನೆ ತಲೆಯಲ್ಲಾಡಿಸುತ್ತ "ನೋಡುತಾಯಿರಿ, ನಾ ಹೇಳಿದ್ದೀನಿ ಈಗಲೇ, ಗಂಗೆ ಇನ್ನು ಹೆಚ್ಚು ದಿನ ಇರುವುದಿಲ್ಲ"... ಎಂದರೂ ಮನಸ್ಸಿನಲ್ಲಿಯೆ ಅವನಿಗೆ ಆಸೆ – ಏನೆಂದರೆ ಗಂಗೆ ಎಂದು ಹೊರಡಲು ಅಣಿಯಾಗುತ್ತದೋ ಆ ಕೂಡಲೇ ಆ ಸುದ್ದಿಯನ್ನು ಎಲ್ಲರಿಗಿಂತ ಮೊದಲು ಕಾಳೀಪದನ ಕಾಗದದಿಂದ ಅವನಿಗೆ ಗೊತ್ತಾಗಿಹೋಗಬೇಕು...

ಈ ಕಡೆ ಕಲಿಕತ್ತೆಯಲ್ಲಿ ಕಾಳೀಪದನೋ ಬಹು ಕಷ್ಟದಿಂದ ಇತರರ ಮನೆಯಲ್ಲಿ ಇದ್ದುಕೊಂಡು ಮಕ್ಕಳಿಗೆ ಪಾಠ ಹೇಳಿಕೊಡುತ್ತ ರಾತ್ರಿ ಲೆಕ್ಕದ ಪುಸ್ತಕದ ನಕಲು ಬರೆಯುತ್ತ ಓದು ಬರೆಹವನ್ನು ನಡೆಸಲು ತೊಡಗಿದ. ಹೇಗೋ ಮಾಡಿ ಎಂಟ್ರೆನ್ಸ್ ಪರೀಕ್ಷೆ ತೇರ್ಗಡೆಯಾಗಿ ಮತ್ತೆ ವಿದ್ಯಾರ್ಥಿ ವೇತನ ಪಡೆದ. ಈ ಆಶ್ಚರ್ಯದ ಸುವಾರ್ತೆಯ ನಿಮಿತ್ತ ಗ್ರಾಮದಲ್ಲಿ ಭವಾನೀಚರಣನು ಊರಿನ ಜನರಿಗೆಲ್ಲ ದೊಡ್ಡದಾಗಿ ಸಂತರ್ಪಣೆ ಮಾಡಿಸಲು ಸಿದ್ಧತೆ ಮಾಡತೊಡಗಿದ. ಅವನೆಂದುಕೊಂಡ– ಇನ್ನೇನು ನಾವೆಯು ದಡಕ್ಕೆ ಮುಟ್ಟಿದ ಹಾಗೇ. ಆ ಧೈರ್ಯದ ಮೇಲೆ ಇನ್ನು ಮೇಲಿಂದ ಮನಸ್ಸು ಬಿಚ್ಚಿ ಖರ್ಚುಮಾಡಬಹುದು... ಆದರೆ ರಾಸಮಣಿಯ ಕಡೆಯಿಂದ ಯಾವ ಉತ್ಸಾಹವನ್ನೂ ಕಾಣದೆ ಸಂತರ್ಪಣೆಯ ಸನ್ನಾಹ ಅಲ್ಲೇ ನಿಂತುಹೋಗಬೇಕಾಯಿತು.

ಕಾಳೀಪದನು ಈ ಬಾರಿ ಕಾಲೇಜಿಗೆ ಸಮೀಪದಲ್ಲೇ ಒಂದು ಹಾಸ್ಟೆಲಿನಲ್ಲಿ ಬಿಡಾರ ಮಾಡಿದ. ಹಾಸ್ಟೆಲಿನ ಮಾಲೀಕ ಅವನಿಗೆ ತಳಗಡೆಯ ಅಂತಸ್ತಿನಲ್ಲಿ ಉಪಯೋಗಿಸಲ್ಪಡದ ಒಂದು ಕೋಣೆಯಲ್ಲಿ ಸ್ಥಳ ಕೊಟ್ಟ. ಕಾಳೀಪದನು ಅವನ ಮನೆಯಲ್ಲಿ ಅವನ ಮಗನಿಗೆ ಪಾಠ ಹೇಳಿಕೊಟ್ಟು ಎರಡು ಹೊತ್ತು ಊಟ ಸಂಪಾದಿಸುತ್ತಾನೆ ಮತ್ತು ಹಾಸ್ಟೆಲಿನ ಆ ತೇವವಾದ ಕತ್ತಲ ಕೊಠಡಿಯಲ್ಲಿ ಇರುತ್ತಾನೆ. ಆ ಕೋಣೆಯ ಹೆಚ್ಚಿನ ಅನುಕೂಲವೇನೆಂದರೆ,... ಕಾಳೀಪದನಿಗೆ ಭಾಗಿಗಳಾರು ಅಲ್ಲಿರಲಿಲ್ಲ. ಅಲ್ಲಿ ಸುತರಾಂ ಗಾಳಿಯ ಪ್ರವೇಶ ಅಷ್ಟಿಲ್ಲದಿದ್ದರೂ ಸರಿ, ಹೇಗೋ ಅವನ ವ್ಯಾಸಂಗ ಮಾತ್ರ ಅಡ್ಡಿ, ಆತಂಕಗಳಿಲ್ಲದೆ ಸಾಗಿತು. ಏನಾದರಾಗಲಿ, ಅನುಕೂಲ, ಅನನುಕೂಲಗಳ ಬಗ್ಗೆ ಯೋಚಿಸುವ ಅವಸ್ಥೆ ಕಾಳೀಪದನಿಗೆ ಇರಲಿಲ್ಲ.

ಈ ಹಾಸ್ಟಲಿನಲ್ಲಿ ಬಾಡಿಗೆ ಕೊಟ್ಟು ವಾಸಮಾಡುವ ಜನರ ಜೊತೆಯಲ್ಲಿ, ವಿಶೇಷವಾಗಿ ಎರಡನೇ ಅಂತಸ್ತಿನ ದೊಡ್ಡ ಮನುಷ್ಯರ ಜೊತೆಯಲ್ಲಿ ಕಾಳೀಪದನಿಗೆ ಯಾವ ಸಂಪರ್ಕವೂ ಇರಲಿಲ್ಲ. ಸಂಪರ್ಕ ಇರದಿದ್ದರೇನು ಅವರ ಸಂಘಾತದಿಂದ ಅವನಿಗೆ ಬಿಡುಗಡೆಯಿರಲಿಲ್ಲ. ಮೇಲಿನ ವರ್ಗದವರ ಸಿಡಿಲಿನೇಟು ಕೆಳ ವರ್ಗದವರಿಗೆಷ್ಟು ಪ್ರಾಣಾಪಾಯವೆಂಬುದನ್ನ ಕಾಳೀಪದ ಮನಗಾಣುವುದಕ್ಕೆ ವಿಳಂಬವಾಗಲಿಲ್ಲ.

ಈ ಹಾಸ್ಟಲಿನ ಮೇಲುವರ್ಗದವರ ಇಂದ್ರಪದವಿ ಯಾರದೋ ಅವನ ಪರಿಚಯ ಇಲ್ಲಿ ಅಗತ್ಯ. ಅವನ ಹೆಸರು ಶೈಲೇಂದ್ರ, ಅವನು ದೊಡ್ಡ ಮನುಷ್ಯರ ಮಗ. ಕಾಲೇಜಿನಲ್ಲಿ ಓದುವಾಗ ಹಾಸ್ಟಲಿನಲ್ಲಿರಬೇಕಾಗಿರಲಿಲ್ಲ ಅವನು. ಆದರೂ ಅವನಿಗೆ ಹಾಸ್ಟಲ್ಲಿನಲ್ಲಿರಲು ಇಷ್ಟ.

ಅವನ ಮನೆಯ ದೊಡ್ಡ ಪರಿವಾರದಿಂದ ಒಂದೆರಡು ಗಂಡು, ಹೆಣ್ಣಾಳುಗಳನ್ನು ಕರೆದುಕೊಂಡು ಬಂದು ಬೇರೆಯಾಗಿ ಒಂದು ಮನೆಮಾಡಿಕೊಂಡಿರೆಂದು ಅವನ ಮನೆಯವರಿಂದ ಅನುರೋಧವಿದ್ದರೂ ಅವನದಕ್ಕೆ ಏನುಮಾಡಿದರೂ ಒಪ್ಪಲಿಲ್ಲ. ಮನೆಯ ಆಳುಕಾಳುಗಳ ನಡುವೆ ಇದ್ದುಕೊಂಡಿದ್ದರೆ ಓದು, ಬರೆಹ ಸಾಗದೆಂದು ಅವನ ಆಕ್ಷೇಪಣೆ. ಆದರೆ ನಿಜವಾದ ಕಾರಣ ಬೇರೆ, ಶೈಲೇಂದ್ರನಿಗೆ ಜನಸಂಪರ್ಕವೆಂದರೆ ಬಹಳ ಇಷ್ಟ. ಆದರೆ ಬಂಧು, ಬಳಗಗಳೆಂದರೆ ಅವರ ಮಧ್ಯೆ ಇರುವುದು ಸುಲಭವಲ್ಲ. ನಾನಾಬಗೆಯ ಉಪಚಾರ, ಬಿಂಕಗಳನ್ನೂ, ಸಂಕೋಚಗಳನ್ನೂ ಅನುಭವಿಸಬೇಕಾಗುತ್ತದೆ. ಇಂಥವರ ಬಗ್ಗೆ ಹೀಗೇ ನಡೆದುಕೊಳ್ಳಬೇಕು. ಅಂಥವರ ಬಗ್ಗೆ ಹಾಗೆ ನಡೆದುಕೊಳ್ಳುವುದು ತಪ್ಪು. ಹೀಗೆಲ್ಲ ಏನೇನೋ ಆತಂಕಗಳಿರುತ್ತವೆ. ಈ ಕಾರಣದಿಂದಲೇ ಎಲ್ಲಾ ವಿಷಯಗಳಲ್ಲೂ ಹಾಸ್ಟೆಲೇ ಒಳ್ಳೆಯದೆಂದುಕೊಂಡಿದ್ದ ಶೈಲೇಂದ್ರ, ಅಲ್ಲಿ ಜನ ಬೇಕಾದಷ್ಟಿರುತ್ತಾರೆ, ಆದರೆ ಅವರ ಬಗ್ಗೆ ಇವನಿಗೆ ಯಾವ ವಿಧವಾದ ಹೊಣೆಯೂ ಇರಬೇಕಾಗಿಲ್ಲ. ಬರುತ್ತಾರೆ, ಹೋಗುತ್ತಾರೆ, ಹಾಸ್ಯ ಲೇವಡಿ ಮಾಡುತ್ತಾರೆ. ಹೊಳೆಯ ನೀರಿನಂತೆ ಸುಮ್ಮನೆ ಹರಿದುಕೊಂಡು ಹೋಗುತ್ತಿರುತ್ತಾರೆ. ಎಲ್ಲೂ ಸ್ವಲ್ಪವೂ ಛಿದ್ರವಿರುವುದಿಲ್ಲ.

ಶೈಲೇಂದ್ರನ ಅಭಿಪ್ರಾಯದಲ್ಲಿ ಸಹೃದಯತೆಯೆಂಬುದು ಯಾವನಿಗಿರುತ್ತದೋ ಅವನೇ ಒಳ್ಳೆಯ ಮನುಷ್ಯ. ಇಂತಹ ಭಾವನೆಯಲ್ಲಿ ಒಂದು ಅನುಕೂಲವಿದೆ. ಇದನ್ನು ಸದಾ ಎಚ್ಚರಿಸಿಕೊಂಡಿರಲು ಒಳ್ಳೆಯ ಮನುಷ್ಯನೇ ಆಗಬೇಕಾಗಿಲ್ಲ. ಅಹಂಕಾರವೆಂಬುದು ಆನೆಯಲ್ಲ, ಕುದುರೆಯೂ ಅಲ್ಲ. ಅದನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ, ಹೆಚ್ಚು ಪೋಷಣೆಯಿಲ್ಲದೆ ಪುಷ್ಟಿಯಾಗಿ ಬೆಳೆಸಿಕೊಂಡಿರಬಹುದು.

ಆದರೆ ಶೈಲೇಂದ್ರನಿಗೆ ಖರ್ಚುಮಾಡಲು ಹಣಕ್ಕೆ ಕೊರತೆಯಿರಲಿಲ್ಲ... ಖರ್ಚುಮಾಡುವ ಪ್ರವೃತ್ತಿಯೂ ಇತ್ತು. ಆದ್ದರಿಂದ ಅವನು ತನ್ನ ಅಹಂಕಾರವನ್ನು

ಖರ್ಚೇ ಮಾಡದೆ ಎಲ್ಲೆಂದರಲ್ಲಿ ಮೇವು ಹುಡುಕಿಕೊಂಡು ಹೋಗುವಂತೆ ಮಾಡುತ್ತಿರಲಿಲ್ಲ. ಅದಕ್ಕೆ ಹೆಚ್ಚು ಬೆಲೆಯಾದ ಆಹಾರ ಹಾಕಿ ಚೆನ್ನಾಗಿ, ಸುಂದರವಾಗಿ ಬೆಳೆಸಿದ್ದ.

ನಿಜವಾಗಿಯೂ ಶೈಲೇಂದ್ರನಲ್ಲಿ ಬೇಕಾದಷ್ಟು ಕನಿಕರವೆಂಬುದಿತ್ತು. ಜನಗಳ ದುಃಖವನ್ನು ದೂರಮಾಡುವುದಕ್ಕೆ ಅವನಿಗೆ ಬಹಳ ಆತುರವಿತ್ತು. ಅದೆಷ್ಟರಮಟ್ಟಿಗೆಂದರೆ ಯಾರೂ ತಮ್ಮ ದುಃಖವನ್ನು ದೂರಮಾಡೆಂದು ಅವನ ಬಳಿ ಬಾರದೆ ಹೋದರೆ ಅವರಿಗೆ ಅವನು ತಾನಾಗಿ ದುಃಖವುಂಟು ಮಾಡುವುದಕ್ಕೂ ಹಿಂದೆಗೆಯುತ್ತಿರಲಿಲ್ಲ. ಅವನ ದಯೆಯಾಗ ನಿರ್ದಯವಾಗಿ ಹೋಗಿ ಅತಿ ಭೀಕರ ರೂಪ ತಾಳುತ್ತಿತ್ತು.

ಹಾಸ್ಟೆಲಿನ ಜನರನ್ನು ನಾಟಕಕ್ಕೆ ಕರೆದುಕೊಂಡು ಹೋಗುವುದು, ಆ ದಿನ ಮಾಂಸ ತಿನ್ನಿಸುವುದು, ಹಣ ಸಾಲಕೊಟ್ಟು ಅದರ ವಿಷಯವನ್ನು ಪೂರ್ತಿಯಾಗಿ ಮರೆತು ಹೋಗುವುದು – ಇಂಥವೆಲ್ಲ ಅವನಿಂದ ಸಾಧಾರಣವಾಗಿ ನಡೆಯುತ್ತಿದ್ದವು. ಹೊಸದಾಗಿ ಮದುವೆಯಾದ ಮುಗ್ಧ ಯುವಕನ ನವರಾತ್ರಿಯ ಪೂಜೆಗೆಂದು ಊರಿಗೆ ಹೋಗುವ ಮೊದಲು ಕಲಿಕತ್ತೆಯಲ್ಲಿ ಇರುವ ಖರ್ಚನ್ನೆಲ್ಲಾ ತೀರಿಸಿ ಬರಿಗೈಯಲ್ಲಿರುವಾಗ ಅವನ ಹೆಂಡತಿಯ ಮನಸ್ಸು ಸೂರೆ ಮಾಡುವಂತಹ ಫ್ಯಾಷನ್ನಿನ ಸಾಬೂನು, ಪರಿಮಳದ ಸೀಸೆ, ಮತ್ತು ಒಂದೆರಡು ವಿಲಾಯಿತಿಯಿಂದ ತರಿಸಿದ ಚೀಟಿಯ ಜಾಕೆಟ್ಟು ಮುಂತಾದುವುಗಳನ್ನೆಲ್ಲಾ ಕೊಂಡುಹೋಗಲು ಚಿಂತಿತನಾಗಿರಬೇಕಾಗಿಲ್ಲ. ಶೈಲೇಂದ್ರನ ಬಳಿ ಹೋಗಿ ಅವನ ರಸಿಕತೆ ಮತ್ತು ಅಭಿರುಚಿಯ ಮೇಲೆ ಭಾರಹಾಕಿ ಆ ಯುವಕ "ನೀನೇ ಅವನ್ನೆಲ್ಲಾ ಆಯ್ದು ಕೊಡಬೇಕು, ಶೈಲೇನ್, ನನಗೊಂದೂ ತಿಳಿಯದು" ಎಂದು ಶೈಲೇನನ್ನ ಅಂಗಡಿಗೆ ಕರೆದುಕೊಂಡು ಹೋಗಿ ಬೇಕೆಂದೇ ಯಾವುದೋ ಅಗ್ಗದ, ಕೆಲಸಕ್ಕೆ ಬಾರದ ವಸ್ತುವನ್ನು ಆಯ್ದುಕೊಳ್ಳಲು ಹೋಗುವನು. ಆಗ ಶೈಲೇಂದ್ರನು ಅವನನ್ನ ಧಿಕ್ಕರಿಸಿ, "ಲೋ, ಛೀಛೀ, ಎಂತಹ ಹೊಲಸು ಸಾಮಾನನ್ನಾರಿಸಿದ್ದೀಯೋ....?" ಎಂದು ತಾನೇ ಎಲ್ಲಕ್ಕಿಂತಲೂ ಅತಿ ಸೊಗಸಾದ ಸಾಮಾನನ್ನು ಆರಿಸಿ ತೆಗೆಯುವನು. ಅಂಗಡಿಯವನಾಗ "ಹಾಂ...ಈತನಿಗೆ ಗೊತ್ತು, ಸಾಮಾನು ಆರಿಸುವುದು" ಎಂದು ಹೇಳುವನು. ಕೊಳ್ಳುವ ಯುವಕ ಅದರ ಬೆಲೆಯರಿತು ಮುಖ ಕಪ್ಪು ಮಾಡಿಕೊಂಡದನ್ನು ಕಂಡು ಶೈಲೇನನೇ ದುಡ್ಡು ಕೊಡುವ ಭಾರ ವಹಿಸಿಕೊಂಡು, ಗೆಳೆಯನ ಆಕ್ಷೇಪಣೆಗಳಿಗೊಂದಕ್ಕೂ ಕಿವಿಗೊಡದಿರುವನು.

ಹೀಗೆಯೇ ಶೈಲೇನನೆಲ್ಲಿದ್ದರೂ ಅಲ್ಲಿ ನಾಲ್ಕುದಿಕ್ಕೂ ಎಲ್ಲರಿಗೂ ಆಶ್ರಯ ದಾತನಾಗಿ ನಿಲ್ಲುತ್ತಿದ್ದ. ಯಾರಾದರೂ ಅವನ ಆಶ್ರಯವನ್ನ ಅಂಗೀಕಾರ ಮಾಡದಿದ್ದಲ್ಲಿ

ಅಂತಹವರ ಅಹಂಕಾರವನ್ನ ಅವನು ಸಹಿಸುತ್ತಿರಲಿಲ್ಲ. ಜನರ ಹಿತವನ್ನು ಸಾಧಿಸುವುದೆಂದರೆ ಅವನಿಗಷ್ಟು ಹಟ.

ಈ ಕಡೆ, ಕಾಳೀಪದನು, ಪಾಪ, ಕೆಳ ಅಂತಸ್ತಿನ ತೇವತುಂಬಿದ ಕತ್ತಲ ಕೋಣೆಯಲ್ಲಿ ಹರಕಲು ಚಾಪೆಯ ಮೇಲೆ ಕೂತು ಹರಕು ಬನಿಯನ್ನು ತೊಟ್ಟು ಪುಸ್ತಕದ ಹಾಳೆಗಳಲ್ಲಿ ನೋಟ ನಟ್ಟು ಮೈತೂಗಿಸುತ್ತ ಪಾಠ ಗಟ್ಟಿಮಾಡುತ್ತಿದ್ದ. ಹೇಗಾದರೂ ಸರಿ, ಈ ಸಲ ಅವನು ಸ್ಕಾಲರ್‌ಷಿಪ್ ಪಡೆಯಲೇಬೇಕು.

ಕಲಿಕತ್ತೆಗೆ ಬರುವ ಮೊದಲು ಅವನ ತಾಯಿ ಆಣೆಯಿಟ್ಟು ಅವನಿಗೆ ದೊಡ್ಡವರ ಸಹವಾಸ ಮಾಡಕೂಡದೆಂದೂ, ಅವರೊಡನೆ ಸೇರಿ ನಗರ ಭೋಗಗಳಲ್ಲಿ ಮೈ ಮರೆಸಿ ಕೆಟ್ಟುಹೋಗಕೂಡದೆಂದೂ ಎಚ್ಚರಿಕೆ ಕೊಟ್ಟಿದ್ದಳು. ಅಮ್ಮ ಎಚ್ಚರಿಕೆ ಕೊಟ್ಟಿದ್ದಳೆಂಬುದೊಂದೇ ಅಲ್ಲ. ಕಾಳೀಪದನಿಗೆ ಯಾವ ದೈನ್ಯಸ್ಥಿತಿಯನ್ನು ಈಗ ಅನಿವಾರ್ಯವಾಗಿ ಅಂಗೀಕರಿಸಬೇಕಾಗಿತ್ತೋ ಅದನ್ನು ಕಾಪಾಡಿಕೊಳ್ಳಲು ದೊಡ್ಡ ಮನುಷ್ಯರ ಮಕ್ಕಳ ಸಹವಾಸ ಮಾಡುವುದೂ ಅಸಂಭವವಾಗಿತ್ತು. ಅವನೆಂದೂ ಶೈಲೇಂದ್ರನೊಂದಿಗೆ ಕಲೆಯಲು ಪ್ರಯತ್ನಿಸಲಿಲ್ಲ. ಮತ್ತು ಶೈಲೇಂದ್ರನ ಗೆಳೆತನ ಪಡೆದರೆ ತನ್ನ ಪ್ರತಿ ದಿನದ ಅನೇಕ ಕಷ್ಟ, ತಾಪತ್ರಯಗಳನ್ನೆಲ್ಲಾ ಒಂದು ನಿಮಿಷದಲ್ಲಿ ಸುಲಭವಾಗಿ ತೀರಿಸಿಬಿಡಬಹುದೆಂದು ಅವನಿಗೆ ಗೊತ್ತಿದ್ದರೂ, ಎಂತಹ ಕಷ್ಟ ಪ್ರಸಂಗ ಬಂದಾಗಲೂ ಶೈಲೇನನ ಪ್ರಸನ್ನತೆಯನ್ನು ಪಡೆಯಲು ಕಾಳೀಪದನು ಪ್ರಯತ್ನಿಸಲಿಲ್ಲ. ತನ್ನ ಬಡತನವನ್ನಿಟ್ಟುಕೊಂಡು ಆ ದರಿದ್ರದ, ಕತ್ತಲ ಕೋಣೆಯಲ್ಲೇ ಯಾರ ಗೋಜೂ ಇಲ್ಲದೆ, ಯಾರ ಹಂಗೂ ಬೇಡದೆ ಇದ್ದುಕೊಂಡಿರುತ್ತಿದ್ದ. ದರಿದ್ರನಾದರೂ ದೂರವಾಗಿದ್ದುಕೊಂಡಿರುವಂಥ ದರ್ಪವನ್ನು ಶೈಲೇನನು ಸಹಿಸಿಕೊಳ್ಳಲಾಗದೆ ಹೋದ. ಅಷ್ಟೇ ಅಲ್ಲದೆ ಊಟ, ಬಟ್ಟೆಯಲ್ಲಿ ಕಾಳೀಪದನ ದಾರಿದ್ರ್ಯ ಕಣ್ಣಿಗೆ ಕುಟುಕುವಷ್ಟು ಒಡೆದು ಕಾಣುತ್ತಿತ್ತು. ಅವನ ಅತಿ ಸಾಧಾರಣ, ಒರಟು ಅರಿವೆ, ಹಾಸಿಗೆ ಹೊದಿಕೆ ಮತ್ತು ಸೊಳ್ಳೆಯ ಪರದೆಗಳು, ಮಹಡಿಯ ಮೆಟ್ಟಲು ಹತ್ತಿ ಹೋಗುವಾಗೆಲ್ಲ ಶೈಲೇಂದ್ರನ ಕಣ್ಣಿಗೆ ಬಿದ್ದಾಗ ಅದೊಂದು ಕ್ಷಮಿಸಲಾಗದ ಅಪರಾಧವೆನ್ನಿಸುತ್ತಿತ್ತು. ಇಷ್ಟು ಸಾಲದೆನ್ನುವಂತೆ ಕಾಳೀಪದನ ಕೊರಳಲ್ಲಿ ಕಟ್ಟಿರುವ ತಾಯತಿ, ಅವನು ಪ್ರತಿ ದಿನ ತಪ್ಪದೆ ಎರಡು ಹೊತ್ತೂ ಮಾಡುತ್ತಿದ್ದ ಸಂಧ್ಯಾಹ್ನಿಕ ಇನ್ನೂ ನಿಕೃಷ್ಟಕರವಾಗಿತ್ತು.

ಇವೆಲ್ಲ ಹಳ್ಳಿಗೊಡ್ಡುತನವು ಮೇಲಿನಂತಸ್ತಿನ ಹುಡುಗರಿಗೆ ಹೀನಾಯವೂ ಹಾಸ್ಯಾಸ್ಪದವೂ ಆಗಿಹೋಗಿದ್ದುವು. ಶೈಲೇಂದ್ರನ ಗೆಳೆಯರಲ್ಲೊಬ್ಬಿಬ್ಬರು ಈ ಏಕಾಂತವಾಸಿಯಾದ ಸರಳ ಹುಡುಗನ ಗುಟ್ಟನ್ನು ರಟ್ಟು ಮಾಡಬೇಕೆಂದು ಮೂರು

ನಾಲ್ಕು ದಿನ ಅವನ ಕೋಣೆಗೆ ಹೋಗುವುದು, ಬರುವುದು ಮಾಡಿದರು. ಆದರೆ ಈ ಮುಖಹೇಡಿ ಹುಡುಗನ ಬಾಯಿಂದ ಒಂದಾದರೂ ಮಾತನ್ನ ಹೊರಡಿಸುವುದಾಗಲಿಲ್ಲ ಅವರಿಂದ. ಅವನ ಕತ್ತಲು ತುಂಬಿದ, ಗಾಳಿಯಿಲ್ಲದ ಕೋಣೆಯಲ್ಲಿ ಎಷ್ಟು ಹೊತ್ತು ಕೂಡಲು ಸಾಧ್ಯ? ಹಾಗೆ ಕೂತಿರುವುದು ಸ್ವಾರಸ್ಯವೂ ಅಲ್ಲ, ಆರೋಗ್ಯಕ್ಕೂ ಒಳ್ಳೆಯದಲ್ಲ. ಆದಕಾರಣ ಅವರೆಲ್ಲ ಬಂದು ಹೋಗುವುದನ್ನ ನಿಲ್ಲಿಸಿಬಿಡಬೇಕಾಯಿತು.

ಅವನಿಗೆ ನಾಗರಿಕತೆ ಕಲಿಸಲು ಬೇರೊಂದು ಹವಣಿಕೆ ಮಾಡಿದರು. ತಮ್ಮೊಂದಿಗೆ ಮೀನು, ಮಾಂಸದ ಒಳ್ಳೆಯ ಭೋಜನಕ್ಕೆ ಅವನನ್ನು ಕರೆದದ್ದಾದರೆ ಈ ದರಿದ್ರ ಹುಡುಗ ನಿಜವಾಗಿ ಕೃತಾರ್ಥನಾಗುತ್ತಾನೆ ಎಂದು ಒಂದು ಸಲ ಅವನಿಗೆ ಹೇಳಿಕಳುಹಿಸಿದರು. ಕಾಳೀಪದನದಕ್ಕೆ ತನಗಿದುವರೆಗೆ ಮೀನು, ಮಾಂಸ ಮುಂತಾದ ದೊಡ್ಡ ತರಹೆ ಊಟಮಾಡಿ ಅಭ್ಯಾಸವಿಲ್ಲದುದರಿಂದ ಕ್ಷಮಿಸಬೇಕೆಂದು ಹೇಳಿ ಕಳುಹಿಸಿಬಿಟ್ಟ. ಈ ಅಧಟುತನದ ಜವಾಬನ್ನ ಕೇಳಿ ಶೈಲೇಂದ್ರನೂ ಅವನ ತಂಡದವರೂ ಕೆಂಡವಾಗಿ ಹೋದರು.

ಇದಾದ ಕೆಲದಿನಗಳು ಕಾಳೀಪದನ ಕೋಣೆಯ ಮೇಲಿನ ಕೋಣೆಯಲ್ಲಿ 'ಧಪ್ ಧುಪ್' ಎಂಬ ಶಬ್ದ, ಮತ್ತು ಅತಿ ಅಬ್ಬರದಿಂದ ವಾದ್ಯವಾದನ, ಹಾಡು ನಡೆಯಿತು. ಇದರ ಫಲವಾಗಿ ಕಾಳೀಪದನು ಗಮನವಿಟ್ಟು ಓದುವುದು ಅಸಾಧ್ಯವಾಗಿ ಹೋಯಿತು. ಆಗವನು ಹಗಲು ಹೊತ್ತು ಕಲಿಕತ್ತೆಯ ಗೋಲ್‌ದಿಘಿ ಎಂಬ ದುಂಡುಕೆರೆಯ ದಡದ ಮೇಲೆ ಹೋಗಿ ಸಾಧ್ಯವಿದ್ದಷ್ಟು ಕಾಲ ಒಂದು ಗಿಡದ ಕೆಳಗೆ ಕೂತು ಓದನ್ನು ಸಾಗಿಸುತ್ತಿದ್ದ. ಮತ್ತು ಬೆಳಗಾಗುವುದಕ್ಕೆ ಮುಂಚೆಯೇ ಎದ್ದು ಕೋಣೆಯಲ್ಲಿ ದೀಪ ಹಚ್ಚಿಕೊಂಡು ಓದುತ್ತಿದ್ದ.

ಕಲಿಕತ್ತೆಯಲ್ಲಿ ಊಟದ ಅನನುಕೂಲತೆ ಮತ್ತು ಅನಾರೋಗ್ಯ ವಸತಿಯಿಂದಾಗಿ, ಜೊತೆಗೆ ಹೆಚ್ಚು ಓದುವ ಆಯಾಸದಿಂದಲೂ ಕಾಳೀಪದನಿಗೆ ತಲೆನೋವು ಬರಲಾರಂಭಿಸಿತು. ಒಂದೊಂದು ಸಲ ಅವನು ಮೂರು ನಾಲ್ಕು ದಿನ ನೋವಿನಿಂದ ಮಲಗಿಬಿಡುತ್ತಿದ್ದ. ಈ ಸುದ್ದಿ ತಂದೆಗೆ ತಿಳಿದರೆ ತನ್ನನ್ನ ಕಲಿಕತ್ತೆಯಿಂದ ಕರೆಸಿಬಿಡಬಹುದೆಂಬ ಭಯ ಅವನಿಗಿತ್ತು. ಸ್ವಲ್ಪ ಸುಳಿವು ಸಿಕ್ಕಿದರೂ ಅಪ್ಪನು ಗಾಬರಿಗೊಂಡು ತಾನೇ ಕಲಿಕತ್ತೆಗೆ ಓಡಿ ಬಂದುಬಿಡಲೂ ಸಾಧ್ಯ. ಅವನ ತಂದೆಯ ಅಭಿಪ್ರಾಯದಲ್ಲಿ ಮಗನು ತನ್ನಂಥ ಗ್ರಾಮದ ಜನರ ಕಲ್ಪನೆಯಲ್ಲೂ ಬರದಂಥ ಸುಖವನ್ನನುಭವಿಸುತ್ತಿದ್ದಾನೆ ಎಂದಿತ್ತು. ಹಳ್ಳಿಗಳಲ್ಲಿ ಹುಲ್ಲು, ಪೊದೆ, ಗಿಡ, ಮರಗಳು ಎಲ್ಲಂದರಲ್ಲಿ ತಾವಾಗಿ ಹುಟ್ಟಿ ಸುಮ್ಮನೆ ಬೆಳೆಯುವಂತೆ, ಕಲಿಕತ್ತೆಯ ಗಾಳಿಯಲ್ಲಿ ಎಲ್ಲ ವಿಧವಾದ ಸುಖ ಸಾಮಗ್ರಿ ತಾವಾಗಿ ಹುಟ್ಟಿಕೊಂಡು ಬೇಕಾದಾಗ

ದೊರೆಯುವುವೆಂದೂ ಭವಾನೀಚರಣನ ಭಾವನೆ. ಇಂತಹ ಭಾವನೆಯನ್ನ ತಂದೆಯ ಮನಸ್ಸಿನಿಂದ ದೂರಮಾಡಿ ಅವನಿಗೆ ನಿರಾಸೆಮಾಡಲು ಕಾಳೀಪದನು ಹಿಂದೆಗೆದು ಸುಮ್ಮನಿದ್ದ. ಕಾಯಿಲೆಯಿಂದ ಅತಿ ಬಳಲಿದಾಗಲೂ ಅವನು ತಂದೆ, ತಾಯಿಯರಿಗದನ್ನ ತಿಳಿಸದೆ ಕಾಗದ ಮಾತ್ರ ಬಿಡದೆ ಬರೆಯುತ್ತಿದ್ದ. ಆದರೆ ಅವನು ಹೀಗೆ ತಲೆನೋವಿನಿಂದ ನರಳುತ್ತಿದ್ದಾಗ ಕೂಡ ಶೈಲೇಂದ್ರನೂ ಅವನ ಗೆಳೆಯರೂ ಗಲಭೆ ಮಾಡುತ್ತ ಭೂತದ ಕುಣಿತ ನಡೆಸಲು ತೊಡಗಿದಾಗ ಕಾಳೀಪದನ ಸಂಕಟಕ್ಕೆ ಮೇರೆಯೇ ಇರಲಿಲ್ಲ. ಆಗವನು ಆ ಕಡೆಯಿಂದ ಈ ಕಡೆಗೆ ಹೊರಳಾಡುತ್ತ ತನ್ನ ಕತ್ತಲ ಕೋಣೆಯಲ್ಲಿ ಮಲಗಿಕೊಂಡು 'ಅಪ್ಪಾ', 'ಅಮ್ಮಾ' ಎಂದು ತಾಯಿತಂದೆಯರನ್ನು ನೆನೆಸಿಕೊಂಡು ಕೂಗುತ್ತ ನರಳಿದನು. ಹೀಗೆ ಬಡತನದ ಈ ಬಾಧೆಯನ್ನೂ ಅವಮಾನವನ್ನೂ ಎಷ್ಟೆಷ್ಟು ಅನುಭವಿಸಬೇಕಾಗಿತ್ತೋ ಅಷ್ಟಕ್ಕಷ್ಟು ಈ ಹಾವಿನ ಹಿಡಿತದಿಂದ ತಾಯಿ, ತಂದೆಯರನ್ನ ಬಿಡುಗಡೆಮಾಡಬೇಕೆಂಬ ಛಲ ಅವನ ಮನಸ್ಸಿನಲ್ಲಿ ಇನ್ನೂ ದೃಢವಾಗಿ ಬೇರು ಬಿಟ್ಟುಕೊಂಡಿತು.

ಕಾಳೀಪದನು ಶಕ್ತಿಮೀರಿ ಯಾರ ಕಣ್ಣಿಗೂ ಬೀಳದಂತೆ ತನ್ನನ್ನೇ ತಾನು ಎಲ್ಲೋ ಒಂದು ಕಡೆ ಹುದುಗಿಸಿಕೊಂಡಿರಲು ಯತ್ನಿಸುತ್ತಿದ್ದ. ಆದರೂ ಅವನಿಗೆ ಮೇಲಿನ ಕೊಠಡಿಯವರ ಹಿಂಸೆ ಕಡಿಮೆಯಾಗಲಿಲ್ಲ. ಒಂದು ದಿನ ಅವನು ಕಾಲೇಜಿನಿಂದ ಬಂದು ನೋಡಿದಾಗ ಕೋಣೆಯ ಮೂಲೆಯಲ್ಲಿ ತಾನು ಚೀನಾಬಜಾರಿನಲ್ಲಿ ಕೊಂಡು ತಂದಿದ್ದ ಅಗ್ಗದ ಮೆಟ್ಟಿನ ಜೋಡಿಯಲ್ಲಿ ಒಂದು ಮಾಯವಾಗಿ ಅದರ ಸ್ಥಳದಲ್ಲಿ ಒಂದು ಅತಿ ಹೆಚ್ಚು ಬೆಲೆಯ ವಿಲಾಯಿತಿಯ ಒಂಟಿ ಸ್ಯಾಂಡಲ್ ಇರಿಸಲ್ಪಟ್ಟಿತ್ತು. ಈ ವಿಲಕ್ಷಣ ಜೋಡಿಯನ್ನ ಹಾಕಿಕೊಂಡು ಕಾಲೇಜಿಗೆ ಹೇಗೆ ಹೋಗುವುದು? ಸ್ವಲ್ಪ ಯೋಚಿಸಿ ಯಾವ ಗಲಾಟೆಯನ್ನೂ ಮಾಡದೆ ತನ್ನದಲ್ಲದ ಆ ಬೆಲೆಬಾಳುವ ವಿದೇಶೀ ಮೆಟ್ಟನ್ನು ಕೋಣೆಯ ಹೊರಗಡೆ ಇಟ್ಟು ಚಮ್ಮಾರನೊಬ್ಬನ ಬಳಿ ಹೋಗಿ ಅಗ್ಗದ ಹಳೆಯ ಜೋಡನ್ನ ಕೊಂಡು ಹೇಗೋ ಕಾಲ ಕಳೆದ. ಒಂದು ದಿನ ಮೇಲಿನ ಕೋಣೆಯಿಂದ ಒಬ್ಬ ಹುಡುಗ ಹಠಾತ್ತಾಗಿ ಬಂದು ಅವನನ್ನ "ನೀವೇನಾದರೂ ಮರೆತು ನಮ್ಮ ಕೋಣೆಯಲ್ಲಿದ್ದ ನನ್ನ ಸಿಗರೇಟ್ ಕೇಸನ್ನು ತೆಗೆದುಕೊಂಡು ಬಂದಿದ್ದೀರಾ? ಎಷ್ಟು ಹುಡುಕಿದರೂ ನನಗೆ ಸಿಗಲಿಲ್ಲ" ಎಂದು ದೂರಿದಾಗ ಕಾಳೀಪದನು ರೇಗಿ "ಏನು ಮಾತು? ನಾನು ನಿಮ್ಮ ಕೋಣೆಯಲ್ಲೇ ಕಾಲಿಟ್ಟಿಲ್ಲ" ಎಂದ. "ಅರೇ...ಅದು ಇಲ್ಲೇ ಬಿದ್ದಿದೆ" ಎಂದು ಆ ಹುಡುಗ ಕಾಳೀಪದನ ಕೋಣೆಯ ಒಂದು ಮೂಲೆಯಿಂದ ಹೆಚ್ಚು ಬೆಲೆಯುಳ್ಳ ಒಂದು ಸಿಗರೇಟ್ ಕೇಸನ್ನು ಎತ್ತಿ ಕೈಯಲ್ಲಿಟ್ಟುಕೊಂಡು ಬೇರೇನೂ ಮಾತಾಡದೆ ಮಹಡಿಯ ಮೇಲೆ ಹೊರಟುಹೋದ.

ಈ ಅವಮಾನವು ಕಾಳೀಪದನ ಎದೆಯೊಳಗೆ ನೆಟ್ಟು ನೋಯಿಸಿತು. ಆಗವನು "ಎಫ್.ಎ. ಪರೀಕ್ಷೆಯಲ್ಲಿ ಸ್ಕಾಲರ್‌ಷಿಪ್ ದೊರಕಿದ್ದೇ ಆದರೆ ಈ ಹಾಸ್ಟಲನ್ನು ಬಿಟ್ಟು ಹೊರಟುಹೋಗುತ್ತೇನೆ, ಏನಾದರೂ ಸರಿ" ಎಂದು ನಿರ್ಧಾರ ಮಾಡಿಕೊಂಡ.

ಹಾಸ್ಟೆಲಿನ ಹುಡುಗರೆಲ್ಲ ಸೇರಿ ಬಹಳ ವೈಭವವಾಗಿ ಸರಸ್ವತೀ ಪೂಜೆಯನ್ನು ನಡೆಸುತ್ತಿದ್ದರು. ಅದರ ಖರ್ಚಿನ ಹೆಚ್ಚು ಭಾಗವನ್ನು ಶೈಲೇಂದ್ರನು ವಹಿಸುತ್ತಿದ್ದ. ಅಲ್ಲದೆ ಇತರ ಹುಡುಗರೆಲ್ಲ ಚಂದಾಕೊಡುತ್ತಿದ್ದರು. ಹಿಂದಿನ ವರುಷ ಕಾಳೀಪದನನ್ನು ಅತ್ಯಂತ ನಿಕೃಷ್ಟಮಾಡಿ ಅವನ ಬಳಿ ಚಂದಾ ವಸೂಲು ಮಾಡಲು ಯಾರೂ ಹೋಗಿರಲಿಲ್ಲ. ಈ ಸಲ ಅವನನ್ನ ಬೇಕೆಂದು ರೇಗಿಸುವುದಕ್ಕಾಗಿ ಚಂದಾ ಪಟ್ಟಿಯನ್ನು ತಂದು ಅವನೆದುರಿಗೆ ಹಿಡಿದರು. ಈ ತಂಡದವರಿಂದ ಒಮ್ಮೆಯಾದರೂ ಕಾಳೀಪದನು ಯಾವ ಉಪಕಾರವನ್ನೂ ಹೊಂದಿರಲಿಲ್ಲ. ಅವರಿದುವರೆಗೆ ನಿತ್ಯವೂ ಪದ್ಧತಿಯಂತೆ ಅವನಿಗೆ ಹಿಂಸೆ ಕೊಟ್ಟಿದ್ದಾರೆ. ಅವರ ಹುಡುಗಾಟಿಕೆ, ಚೇಷ್ಟೆಗಳಲ್ಲಿ ಭಾಗವಹಿಸಲು ಅವನು ನಿರಾಕರಿಸಿದ್ದಾನೆ. ಈಗ ಅಂಥವರೇ ಬಂದು ಚಂದಾ ಕೇಳಿದಾಗ ಅವನಿಗೇನು ಮನಸ್ಸಿಗೆ ಬಂತೋ ಏನೋ, ನೇರವಾಗಿ ಎದ್ದು ಐದುರೂಪಾಯಿ ಕೊಟ್ಟುಬಿಡಬೇಕೆ? ಶೈಲೇಂದ್ರನ ತಂಡದವರಲ್ಲಿ ಯಾರೂ ಐದು ರೂಪಾಯಷ್ಟು ಚಂದಾ ಕೊಟ್ಟಿರಲಿಲ್ಲ. ಕಾಳೀಪದನ ಬಡತನ, ದೀನತೆಗಳು ಅವರಿಗೆ ತಿಳಿಯದಿದ್ದ ವಿಷಯವಲ್ಲ. ಅದಕ್ಕೇ ಅವನನ್ನ ಇಷ್ಟು ಕಡೆಗಣಿಸಿದ್ದಾರೆ. ಆದರೆ ಈಗವನು ಐದುರೂಪಾಯಿ ಚಂದಾ ಕೊಟ್ಟುದನ್ನು ಕಂಡು ಅವರಿಗೆ ಸಹಿಸದಾಯಿತು, "ಎಲಾ, ಇವನ ದರ್ಪ ನೋಡಿದಿಯಾ? ಇವನ ದಾರಿದ್ರ್ಯ ನಮಗೆ ತಿಳಿಯದೇ! ನಮ್ಮೆಲ್ಲರಿಗಿಂತಲೂ ತಾನೇ ಮೇಲು ಎಂದು ತೋರಿಸಿಕೊಳ್ಳಲಿಕ್ಕೇ ಇದು, ಬೇರೇನಿಲ್ಲ" ಎಂದು ಅವನ ಮೇಲೆ ಇನ್ನೂ ಆಕ್ರೋಶಗೊಂಡರು.

ಸರಸ್ವತೀ ಪೂಜೆಯು ಬಹಳ ಅದ್ದೂರಿಯಿಂದ ಜರುಗಿತು. ಕಾಳೀಪದನು ಆ ಐದು ರೂಪಾಯಿ ಕೊಡದಿದ್ದರೂ ಪೂಜೆಗೆ ಯಾವ ಕೊರತೆಯೂ ಆಗುತ್ತಿರಲಿಲ್ಲ. ಆದರೆ ಆ ಐದು ರೂಪಾಯಿ ಕೊಟ್ಟುದರಿಂದ ಕಾಳೀಪದನಿಗೆ ಕೊರತೆ ಯಾಗಲಿಲ್ಲವೆನ್ನುವಂತಿಲ್ಲ. ಪರರ ಮನೆಯಲ್ಲಿ ಅವನ ಊಟ; ಎಲ್ಲ ದಿನಗಳೂ ಅವನಿಗೆ ಹೊತ್ತಿಗೆ ಸರಿಯಾಗಿ ಊಟ ದೊರೆಯುತ್ತಿರಲಿಲ್ಲ. ಅಲ್ಲದೆ ಅಡಿಗೆಯ ಪರಿಚಾರಕರೇ ಅವನ ಭಾಗ್ಯದಾತರು. ಆದುದರಿಂದ ಅವರು ಅವನಿಗೆ ಬಡಿಸುವ ಊಟ ಒಳ್ಳೆಯದೆ, ಕೆಟ್ಟುದೇ, ರುಚಿಯಾದದ್ದೇ, ರುಚಿಯಿಲ್ಲದ್ದೇ, ಹೆಚ್ಚೇ ಕಡಿಮೆಯೇ ಎನ್ನದೆ ಯಾವ ಆಕ್ಷೇಪಣೆಯನ್ನೂ ಮನಸ್ಸಿನಲ್ಲೂ ಮಾಡಿಕೊಳ್ಳದೆ, ಹೊರಗಡೆಯಾದರೂ ಅಲ್ಪ ಸ್ವಲ್ಪ ಹೊಟ್ಟೆ ತುಂಬಿಸಿಕೊಳ್ಳಲಿಕ್ಕಾಗಿ ತಿಂಡಿ ಕೊಳ್ಳಲು ಸ್ವಲ್ಪ ಹಣ ಕೈಯಲ್ಲಿಟ್ಟುಕೊಂಡಿರುತ್ತಿದ್ದ. ಆ ಸ್ವಲ್ಪ ಹಣವೀಗ ಸರಸ್ವತಿ ದೇವಿಯ

ವಿಸರ್ಜಿತ ಪ್ರತಿಮೆಯೊಡನೆಯೇ ನಿರ್ಮಾಲ್ಯದ ಒಣ ಹೂ, ಪತ್ರೆಗಳೊಂದಿಗೆ ಅಂತರ್ಧಾನವಾಯಿತು.

ಕಾಳೀಪದನ ತಲೆನೋವು ಬೇನೆ ಹೆಚ್ಚಾಗುತ್ತ ಬಂತು. ಈ ಬಾರಿ ಪರೀಕ್ಷೆಯಲ್ಲಿ ಅವನಿಗೆ ಪಾಸೇನೋ ಆಯಿತು. ಆದರೆ ಸ್ಕಾಲರ್‌ಷಿಪ್‌ಸಿಗಲಿಲ್ಲ. ಇದರ ಫಲವಾಗಿ ಅವನು ತನ್ನ ವ್ಯಾಸಂಗದ ಸಮಯದಲ್ಲಿ ಸ್ವಲ್ಪ ಭಾಗವನ್ನು ಕಡಿಮೆಮಾಡಿ ಇನ್ನೊಂದು ಪಾಠದ ಹುಡುಗನನ್ನ ಹುಡುಕಬೇಕಾಯಿತು. ಅಲ್ಲದೆ ಶೈಲೇಂದ್ರನ ತಂಡದವರ ಹಿಂಸೆ ಹೆಚ್ಚಾಗುತ್ತಿದ್ದರೂ ಹಳೆಯ ಕೊಠಡಿಯನ್ನು ಬಿಡಲು ಸಾಧ್ಯವಾಗದೆ ಹೋಯಿತು.

ಈ ಸಲವಂತೂ ಬೇಸಗೆ ರಜವಾದ ಮೇಲೆ ಖಂಡಿತವಾಗಿ ಕಾಳೀಪದ ಈ ಹಾಸ್ಟೆಲ್ಲಿಗೆ ಹಿಂದಿರುಗಿ ಬಾರನೆಂದೇ ಮೇಲಿನ ಕೋಣೆಗಳ ವಿದ್ಯಾರ್ಥಿಗಳು ತಿಳಿದುಕೊಂಡಿದ್ದರು. ಆದರೆ ಯಥಾವೇಳೆಯಲ್ಲಿ ಅವನ ಕೆಳಗಡೆ ಕೋಣೆಯ ಬೀಗ ತೆಗೆಯಲ್ಪಟ್ಟದ್ದು ಕಂಡುಬಂತು. ವಾಡಿಕೆಯಂತೆ ಧೋತರವುಟ್ಟು ಚಿರಪರಿಚಿತವಾದ ಚೈನಾಚೆಕ್ ಕೋಟನ್ನು ಧರಿಸಿ ಕಾಳೀಪದನು ಅದೇ ಕತ್ತಲಗವಿಯನ್ನು ಹೊಕ್ಕ ; ಮತ್ತು ಒಂದು ಕೊಳಕಾದ ಬಟ್ಟೆಯಲ್ಲಿ ಕಟ್ಟಿದ ಒಂದು ದೊಡ್ಡ ಗಂಟನ್ನೂ ಟಿನ್ನಿನ ತಗಡಿನ ಪೆಟ್ಟಿಗೆಯನ್ನೂ ಇಳಿಸಿಟ್ಟು ಶಿಯಾಲಡಾ ಸ್ಟೇಷನ್ನಿನ ಕೂಲಿಯಾಳು ಅವನ ಕೋಣೆಯೆದುರಿಗೆ ಭದ್ರವಾಗಿ ಕೂತು ಎಷ್ಟೋ ಕೂಗಿ, ಗಲಾಟೆಮಾಡಿ ತನ್ನ ಕೂಲಿಯನ್ನ ತೆಗೆದುಕೊಂಡು ಹೊರಟುಹೋದ. ಈ ಕೊಳೆಯ ಬಟ್ಟೆಯ ಗಂಟಿನ ಬಸಿರಿನಲ್ಲಿ, ನಾನಾ ವಿಧವಾದ ಪಾತ್ರೆ, ಭರಣಿ, ಜಾಡಿಗಳಲ್ಲಿ ಕಾಳಿಪದನ ತಾಯಿ ಬೇರೆ ಬೇರೆ ನಮೂನೆಯ ಉಪ್ಪಿನಕಾಯಿ, ಮುರಬ್ಬ ಮುಂತಾದ ರುಚಿಕರವಾದ ಪದಾರ್ಥಗಳನ್ನು ಕೈಯಾರೆ ತಯಾರಿಸಿ ತುಂಬಿಸಿ ಕಳಿಸಿದ್ದಳು. ತಾನಿಲ್ಲದಿದ್ದಾಗ ಮೇಲಿನಂತಸ್ತಿನ ಕುತೂಹಲಾವಿಷ್ಟರಾದ ಹುಡುಗರು ತನ್ನ ಕೋಣೆಯಲ್ಲಿ ಕಳ್ಳತನದಿಂದ ಕಾಲಿಡುವರೆಂದು ಕಾಳೀಪದನಿಗೆ ಗೊತ್ತು. ಅವನಿಗೆ ಬೇರಾವುದರ ಯೋಚನೆಯೂ ಇರಲಿಲ್ಲ. ಆದರೆ ತನ್ನ ತಾಯಿ ಪ್ರೀತಿಯಿಂದ ಒದಗಿಸಿ ಕೊಟ್ಟಿದ್ದ ತಿಂಡಿ, ತಿನಿಸುಗಳು ಅಮೃತದಂತೆ. ಅಂಥವು ಈ ಕುಚೇಷ್ಟೆಯ ಹುಡುಗರ ಕೈಗೆ ಬಿದ್ದರೆ ಏನು ಮಾಡುವುದು ಎಂದು ಅವನ ಹೆದರಿಕೆ. ಆ ತನ್ನ ಮೆಚ್ಚಿನ ಪದಾರ್ಥಗಳೆಲ್ಲ ದರಿದ್ರ ಹಳ್ಳಿಯ ಮನೆಯ ಆದರದ ಆಸ್ತಿ. ಕೆಲವು ಜಾಡಿ, ಸೀಸೆಗಳು ಹಿಟ್ಟಿನಿಂದ ಅಂಟಿಸಿದ ಮಣ್ಣಿನ ಮುಚ್ಚಳಗಳಿಂದ ಮುಚ್ಚಲ್ಪಟ್ಟಿದ್ದುವು. ಅವುಗಳಲ್ಲಿಟ್ಟಿದ್ದ ವಸ್ತುಗಳಾವುವೂ ನಗರದ ಐಶ್ವರ್ಯ ಸೂಚಕಗಳಲ್ಲ. ಅವು ಸೀಮೆಯ ಗಾಜಿನ ಮತ್ತು ಪಿಂಗಾಣಿಯ ಜಾಡಿಗಳಲ್ಲ. ಆದರೂ ಅವುಗಳನ್ನ ಕಂಡು ನಗರದ ಶ್ರೀಮಂತ ಹುಡುಗರಾರೂ ಅವಹೇಳನ ಮಾಡಿ ನಕ್ಕು ಕೇಕೆ ಹಾಕುವುದು ಅವನಿಗೆ ಸಹಿಸುವುದಿಲ್ಲ. ಇದಕ್ಕೆ ಮೊದಲು ಅವನು ತನ್ನ ವಿಶೇಷ ವಸ್ತುಗಳನ್ನೆಲ್ಲ ಮಲಗುವ ಮಂಚದ ತಳದಲ್ಲಿ ಹಳೆಯ

ಸುದ್ದಿ ಪತ್ರಿಕೆಗಳನ್ನು ಹೊದಿಸಿ ಮುಚ್ಚಿಟ್ಟಿರುತ್ತಿದ್ದ. ಈಗ ಅದು ಸಾಲದೆ ಬೀಗದ ಮೇಲೆ ನಂಬಬೇಕಾಯಿತು. ಐದು ನಿಮಿಷ ಹೊರಗಡೆ ಹೋಗಬೇಕಾದರೂ ಬೀಗ ಹಾಕಿ ಹೋಗುತ್ತಿದ್ದ.

ಇದು ಎಲ್ಲರ ಕಣ್ಣಿಗೂ ಬಿದ್ದು ಚುಚ್ಚಿತು. ಶೈಲೇಂದ್ರನು "ಆಹಾ, ಇವನ ಐಶ್ವರ್ಯ ಇದ್ದಕಿದ್ದಹಾಗೆ ಅಪಾರವಾಗಿ ಹೋದಂತೆ ಕಾಣುತ್ತದೆ. ಇವನ ಮನೆಗೆ ಕನ್ನ ಕೊರೆದ ಕಳ್ಳನ ಕಣ್ಣು ಕೋರೈಸಿ ಹೋಗಬೇಕು. ಇವನೀಗ ಅಷ್ಟು ಹುಷಾರಿನಿಂದ ಬೀಗ ಹಾಕುವುದು ನೋಡಿದರೆ ಹಠಾತ್ತಾಗಿ ಇವನ ಕತ್ತಲ ಕೋಣೆ ಬ್ಯಾಂಕ್ ಆಫ್ ಬೆಂಗಾಳಿನ ಪ್ರತಿದ್ವಂದ್ವಿಯಾಗಿಹೋಯಿತೇನೋ! ನಮ್ಮ ಮೇಲೆ ಅವನಿಗೆ ಅಷ್ಟು ಅಪನಂಬಿಕೆ!... ಪಾಪ, ನಮ್ಮಲ್ಲಿ ಯಾರಾದರೂ ಅವನ ಆ ಹಳೆಯ ಮೊಣಕು ಕಟ್ಟಿದ ಚೈನಾ ಚೆಕ್ ಕೋಟಿನ ಮೇಲಿನ ಆಸೆ ತಡೆದುಕೊಳ್ಳದೆ ಹೋದರೇನು ಮಾಡುವುದು?... ಲೋ, ರಾಧು, ಅವನಿಗೊಂದು ಗೌರವಸ್ಥರು ಹಾಕುವಂಥ ಒಳ್ಳೆಯ ಕೋಟನ್ನ ಕೊಂಡುಕೊಡದೆ ಹೋದರೆ ಆಗದು ಕಣೋ; ಶಾಶ್ವತವಾಗಿ ಆ ಒಂದೇ ಒಂದು ಹಳೆಯ ಕೋಟನ್ನ ಹಾಕಿಕೊಳ್ಳುತ್ತಾ ಇರುವುದನ್ನು ನಾನು ನೋಡಲಾರೆ" ಎಂದ.

ಶೈಲೇಂದ್ರನು ಕಾಳೀಪದನ ಆ ಜೌಗು ನೆಲದ ಕತ್ತಲ ಗವಿಯೊಳಗೆಂದೂ ಕಾಲಿಟ್ಟಿರಲಿಲ್ಲ. ಮಹಡಿ ಮೆಟ್ಟಲುಗಳೇರಿ ಹೋಗುವಾಗ ಹೊರಗಿಂದ ಆ ಕೋಣೆಯನ್ನು ನೋಡೇ ಅವನ ಮನಸ್ಸಿನಲ್ಲಿ ಹೇಸಿಗೆಯುಂಟಾಗುತ್ತಿತ್ತು. ಅದರಲ್ಲೂ ಸಂಜೆಯ ವೇಳೆ ಒಂದು ಮಿಣುಮಿಣುಕುವ ದೀಪವಿಟ್ಟುಕೊಂಡು ಬರಿ ಎದೆ ಬಿಟ್ಟುಕೊಂಡು ಕುಳಿತು ಕಾಳೀಪದನು ಪುಸ್ತಕದ ಮೇಲೆ ಬಾಗಿಕೊಂಡು ಓದುತ್ತಿರುವುದನ್ನು ಕಂಡಾಗಂತೂ ಶೈಲೇಂದ್ರನಿಗೆ ಕುತ್ತಿಗೆ ಬಿಗಿದಂತಾಗುತ್ತಿತ್ತು. ತನ್ನ ಗೆಳೆಯರಿಗವನು "ಈ ಸಲ ಕಾಳೀಪದನು ಯಾವ ಸಪ್ತಸಮುದ್ರಗಳ ಮುತ್ತು, ರತ್ನಗಳನ್ನ ಶೇಖರಿಸಿ ತಂದು ಗುಟ್ಟಾಗಿಟ್ಟಿದ್ದಾನೋ ಅದನ್ನ ಹುಡುಕಿ ತರಬೇಕು, ನೋಡೋಣ" ಎಂದು ಆಜ್ಞೆ ಮಾಡಿದ.

ಈ ಸಾಹಸಕಾರ್ಯಕ್ಕೆ ಎಲ್ಲರೂ ನಾನು, ತಾನೆಂದು ಮುಂದೆ ಬಂದರು. ಕಾಳೀಪದನ ಕೋಣೆಯ ಬೀಗ, ಅತ್ಯಂತ ಕಡಿಮೆ ಬೆಲೆಯ ವಸ್ತು. ಅದನ್ನು ತೆಗೆಯುವುದಷ್ಟು ಕಷ್ಟವೇನಲ್ಲ. ಎಂಥವನಾದರೂ ಸುಲಭವಾಗಿ ತೆಗೆದುಬಿಡಬಹುದು. ಒಂದು ದಿನ ಕಾಳೀಪದನು ಸಂಜೆಗೆ ಮೊದಲು ಪಾಠ ಹೇಳಿಕೊಡಲು ಹೋದಾಗ, ಸಮಯ ಕಾಯುತ್ತ ಇಬ್ಬರು ಮೂವರು ಚೇಷ್ಟೆಯ ಹುಡುಗರು ನಗುನಗುತ್ತ ಬೀಗವನ್ನು ತೆಗೆದುಬಿಟ್ಟೊಡನೆ ಕೈಯಲ್ಲಿ ಒಂದು ಕೈದೀಪವನ್ನು ಹಿಡಿದು ಅವನ ಕೋಣೆಯೊಳಗೆ ಹೊಕ್ಕರು, ಮತ್ತೆ ಅವನ ಮಂಚದಡಿಯಿಂದ ಅವನ ತಾಯಿಯ

ಅಷ್ಟು ಆದರದಿಂದ ಕಳಿಸಿದ್ದ ಚಟ್ನಿಪುಡಿ, ಮುರಬ್ಬ, ಉಪ್ಪಿನಕಾಯಿ ಮೊದಲಾದ ತಿನಿಸುಗಳ ಜಾಡಿಗಳನ್ನ ಈಚೆ ತೆಗೆದರು... ಅವಲ್ಲದೆ ಬೇರಾವ ಮುಚ್ಚಿಡಬೇಕಾದ ಅಮೌಲ್ಯ ಸಾಮಾನುಗಳೂ ಅಲ್ಲಿ ಸಿಗಲಿಲ್ಲ. ಹಾಗೇ ಹುಡುಕುತ್ತ ಹುಡುಕುತ್ತ ಕಾಳೀಪದನ ತಲೆದಿಂಬಿನ ಕೆಳಗಡೆ ಬೀಗದ ಕೈ ಉಂಗುರವೊಂದಕ್ಕೆ ತಗುಲಿಹಾಕಿದ್ದದ್ದು ಸಿಕ್ಕಿತು. ಆ ಬೀಗದಕೈಯಿಂದ ಟಿನ್ನಿನ ಪೆಟ್ಟಿಗೆ ತೆಗೆದಾಗ ಹಲಕೆಲವು ಕೊಳೇಬಟ್ಟೆಗಳು, ಪುಸ್ತಕಗಳು, ಕಾಗದಗಳು, ಮೊಂಡುಚಾಕು ಮತ್ತು ಲೇಖನಿ ಇವುಗಳೆಲ್ಲ ಕಣ್ಣಿಗೆ ಬಿದ್ದುವು. ಪೆಟ್ಟಿಗೆಯನ್ನು ಮುಚ್ಚಿ ಇನ್ನೇನು ಕೊಠಡಿಯಿಂದಾಚೆ ಹೊರಟುಬಿಡಬೇಕೆಂದಿರುವಷ್ಟರಲ್ಲಿ, ಆ ಕೊಳೆ ಬಟ್ಟೆಗಳ ತಳಗಡೆ ಒಂದು ಕರವಸ್ತ್ರದಲ್ಲಿ ಸುತ್ತಿಟ್ಟಿದ್ದ ಯಾವುದೋ ಪದಾರ್ಥ ಕಂಡುಬಂತು. ಅದನ್ನ ಹೊರತೆಗೆದು ಕರವಸ್ತ್ರವನ್ನು ಬಿಚ್ಚಿದಾಗ ಅದರೊಳಗೆ ಹರಕು ಬಟ್ಟೆಯಲ್ಲಿ ಸುತ್ತಿದ್ದ ಮತ್ತೊಂದು ಮಡಿಕೆ ಸಿಕ್ಕಿತು. ಅದನ್ನೂ ಬಿಚ್ಚಿದೊಡನೆ ಒಂದಾದ ಮೇಲೊಂದು ಕಾಗದದಲ್ಲಿ ಸುತ್ತಿ ಮಡಿಸಿಟ್ಟಿದ್ದ ಒಂದು ಐವತ್ತು ರೂಪಾಯಿಗಳ ನೋಟು ಸಿಕ್ಕಿತು.

ಈ ನೋಟು ಕಣ್ಣಿಗೆ ಬಿದ್ದೊಡನೆ ಆ ಹುಡುಗರಾರಿಗೂ ನಗು ತಡೆಯಲಾಗಲಿಲ್ಲ. ಹೋಹೋ ಎಂದು ಗಟ್ಟಿಯಾಗಿ ಗಹಗಹಿಸಿ ನಗತೊಡಗಿದರು. ಈ ಒಂದು ನೋಟಿಗೋಸ್ಕರವಾಗಿಯೇ ಕಾಳೀಪದನು ಇಷ್ಟು ಎಚ್ಚರಿಕೆಯಿಂದ ಬೀಗ ಹಾಕಿಕೊಂಡು ಹೋಗುತ್ತಿರುವನೆಂದರೆ ಪ್ರಪಂಚದಲ್ಲಿ ಯಾರೂ ನಂಬುವುದಿಲ್ಲ. ಮನುಷ್ಯನ ಲುಬ್ಧತೆ, ಕೃಪಣತೆಯೆಷ್ಟರವರೆಗೂ ಹೋಗಿತ್ತು ಎಂದುಕೊಂಡು ಶೈಲೇನನನ್ನು ಅವಲಂಬಿಸಿದ ಗೆಳೆಯರೆಲ್ಲರಿಗೂ ಆದ ಆಶ್ಚರ್ಯ ಅಷ್ಟಿಷ್ಟಲ್ಲ.

ಇಂಥಾ ಸಮಯದಲ್ಲಿ ರಸ್ತೆಯಲ್ಲಿ ಯಾರೋ ಕಾಳೀಪದನಂಥವರದೇ ಕೆಮ್ಮಲು ಶಬ್ದ ಕೇಳಬಂದು, ತತ್‌ಕ್ಷಣ ಅವರೆಲ್ಲ ಟಿನ್ನಿನ ಪೆಟ್ಟಿಗೆಯ ಮುಚ್ಚಳ ಮುಚ್ಚಿ ನೋಟನ್ನು ಮಾತ್ರ ಕೈಯಲ್ಲಿ ತೆಗೆದುಕೊಂಡು ಬೇಗಬೇಗ ಮಹಡಿಯ ಮೇಲೆ ಹತ್ತಿ ಹೊರಟುಹೋದರು. ಅವರಲ್ಲೊಬ್ಬ ಬೇಗ ಬಾಗಿಲಿಗೆ ಬೀಗ ಹಾಕಿದ.

ಶೈಲೇಂದ್ರನ ಕೈಗೆ ಆ ನೋಟನ್ನು ಕೊಟ್ಟಾಗ ಅವನದನ್ನ ಕಂಡು ಗಟ್ಟಿಯಾಗಿ ನಕ್ಕುಬಿಟ್ಟ. ಐವತ್ತು ರೂಪಾಯಿಗಳು ಶೈಲೇಂದ್ರನ ದೃಷ್ಟಿಯಲ್ಲಿ ಹಣವೇ ಅಲ್ಲ. ಆದರೂ ಇಷ್ಟು ಹಣ ಕೂಡ ಕಾಳೀಪದನ ಪೆಟ್ಟಿಗೆಯಲ್ಲಿ ಇರಬಹುದೆಂದು ಅವನ ಸ್ಥಿತಿ, ನಡೆವಳಿಕೆಗಳನ್ನ ಕಂಡವರು ಯಾರೂ ಅನುಮಾನಿಸಲಾರರು. ಅದು ಸಾಲದೆ ಈ ಅಲ್ಪನೋಟಿಗಾಗಿಯೇ ಅಷ್ಟು ಎಚ್ಚರಿಕೆ?...ಆಗ ಅವರೆಲ್ಲ ಕಾಳೀಪದನು ರೂಮಿಗೆ ಹಿಂದಿರುಗಿ ರೂಪಾಯನ್ನು ಕಾಣದೆ ಗಲಾಟೆ ಮಾಡುವನೋ ನೋಡೋಣವೆಂದು ನಿರ್ಧಾರ ಮಾಡಿದರು.

ರಾತ್ರಿ ಒಂಬತ್ತು ಘಂಟೆಯಾದ ಮೇಲೆ ತನ್ನ ಪಾಠಗಳನ್ನು ಮುಗಿಸಿ ದಣಿದು ಮನೆಗೆ ಬಂದು ಕಾಳೀಪದ ತನ್ನ ಕೋಣೆಯಲ್ಲಿನ ಅಸ್ತವ್ಯಸ್ತತೆಯನ್ನು ಗಮನಿಸಲಿಲ್ಲ.

ಏಕೆಂದರೆ ಅವನಿಗಂದು ಎಂದಿಗಿಂತ ಹೆಚ್ಚಾಗಿ ತಲೆ ಸಿಡಿದುಹೋಗುವಂತೆ ನೋಯುತ್ತಿತ್ತು. ಇನ್ನೂ ಎಷ್ಟು ದಿನಗಳು ಈ ಹಾಳು ನೋವಿರುತ್ತದೋ ಎನ್ನಿಸಿತು. ಅಂದು ರಾತ್ರಿ ಹಾಗೇ ಕಳೆದ.

ಮರುದಿನ ಬೆಳಗ್ಗೆ ಉಡುಪು ತೆಗೆದುಕೊಳ್ಳಲು ಮಂಚದ ಅಡಿಯಿಂದ ಪೆಟ್ಟಿಗೆಯೆಳೆದು ನೋಡಿದರೆ... ಅದು ತೆರೆದೇ ಇದೆ! ಯಾರು ತೆಗೆದಿದ್ದರು? ಅವನೇನು ಅಂತಹ ಮರೆವು ಮನುಷ್ಯನಲ್ಲದಿದ್ದರೂ ತಾನೇ ಅದರ ಬೀಗ ಹಾಕಲು ಮರೆತಿರಬಹುದೆಂದುಕೊಂಡ. ಬೇರೆ ಯಾರೂ ಬಂದಿರಲಿಕ್ಕಿಲ್ಲ – ಏಕೆಂದರೆ ಹೊರಗಡೆ ಬೀಗ ಹಾಕೇ ಇತ್ತಲ್ಲ !

ಪೆಟ್ಟಿಗೆ ತೆರೆದು ನೋಡಿದ. ಮೇಲಿನ ಬಟ್ಟೆಗಳೆಲ್ಲ ಚದರಿ ಚಲ್ಲಾಪಿಲ್ಲಿಯಾಗಿವೆ. ಅವನ ಎದೆಯಲ್ಲಿ 'ಧಡಕ್' ಎಂದಿತು. ಆತುರಾತುರವಾಗಿ ಪೆಟ್ಟಿಗೆಯಲ್ಲಿಟ್ಟಿದ್ದ ಸಾಮಾನುಗಳೆಲ್ಲವನ್ನೂ ಒಂದೊಂದಾಗಿ ಹೊರಗೆ ಹಾಕಿ ತನ್ನ ತಾಯಿ ಕೊಟ್ಟಿದ್ದ ನೋಟನ್ನು ಹುಡುಕಿದ. ಅದು ಮಾತ್ರ ಕಾಣಬರಲಿಲ್ಲ. ಅದಕ್ಕೆ ಸುತ್ತಿದ ಕಾಗದ, ಕಟ್ಟಿದ್ದ ಹರಕುಬಟ್ಟೆಯ ತುಂಡು ಮಾತ್ರ ಕಂಡುಬಂದುವು. ಮತ್ತೆ ಆಸೆಯನ್ನು ಬಿಡದೆ ಒಂದೊಂದಾಗಿ ಬಟ್ಟೆಗಳನ್ನ ತೆಗೆದು ಕೊಡವಿದ. ನೋಟು ಮಾತ್ರ ಹೊರಬರಲಿಲ್ಲ. ಈ ಕಡೆ ಮೇಲಿನ ಕೊಠಡಿಯ ಹುಡುಗರು ಒಬ್ಬೊಬ್ಬರಾಗಿ ತಂತಮ್ಮ ಕೆಲಸದ ಮೇಲೇನೊ ಎಂಬಂತೆ ಮೆಟ್ಟಲಿಳಿದು ಕಾಳೀಪದನ ಕೋಣೆಯ ಕಡೆ ಓರೆನೋಟವೆಸೆಯುತ್ತ ಮತ್ತೆ ಮತ್ತೆ ಇಳಿಯುವುದು, ಹತ್ತುವುದು, ಮಾಡತೊಡಗಿದರು. ಮೇಲಿನ ಛಾವಣಿಯ ಮೇಲೆ ಗಹಿಗಹಿಸಿ ನಗುವ ಶಬ್ದದ ಪ್ರವಾಹವೇ ಹರಿಯಿತು.

ನೋಟು, ಇನ್ನು ಹೋದಹಾಗೇ, ಸಿಗುವ ಆಸೆಯಿಲ್ಲ ಎನ್ನಿಸಿದಾಗ, ತಲೆನೋವಿನ ಬಾಧೆಯಿಂದ ಇನ್ನು ಹುಡುಕುವುದು ಅಸಾಧ್ಯವೆನ್ನಿಸಿದಾಗ, ಎದೆಯೊಡೆದಂತಾಗಿ ಹಾಸಿಗೆಯ ಮೇಲೆ ಬೋರಲಾಗಿ ಸತ್ತವನಂತೆ ಬಿದ್ದುಕೊಂಡುಬಿಟ್ಟ. ಅದು ತನ್ನ ತಾಯಿಯು ಅತ್ಯಂತ ಕಷ್ಟದಿಂದ ಕೂಡಿಸಿಟ್ಟ ಹಣ. ನಿತ್ಯದ ಬಾಳುವೆಯಲ್ಲಿ ಎಷ್ಟು ದಿನ ಎಷ್ಟು ನೋವು, ಎಷ್ಟು ಕಾವು ಸಹಿಸಿ ಜೀವನವನ್ನ ಹಿಂಡಿಹಿಂಡಿ, ಸ್ವಲ್ಪಸ್ವಲ್ಪವಾಗಿ ಕಾಸಿಗೆ ಕಾಸಾಗಿ ಉಳಿಸಿ ಕೂಡಿಹಾಕಿಟ್ಟಿದ್ದ ಹಣ. ಹಿಂದೆ ಒಂದು ಕಾಲದಲ್ಲಿ ಈ ಸಂಕಟದ ಕಥೆ ಅವನಿಗೇನೂ ತಿಳಿದಿರಲಿಲ್ಲ. ಆಗವನು ತನ್ನ ತಾಯಿಯು ಹೊತ್ತ ಭಾರ ಸಾಲದೆಂದು ಇನ್ನಷ್ಟು ಭಾರಹಾಕಿ ತನ್ನ ಪಾಡಿಗೆ ತಾನಿದ್ದುಬಿಟ್ಟಿದ್ದ. ಆದರೆ ಕೊನೆಗೆ ಒಂದು ದಿನ ಅಮ್ಮ ಅವನನ್ನ ಹತ್ತಿರ ಕರೆದು ತನ್ನ ದಿನದಿನದ ಕಷ್ಟ ನಿಷ್ಠುರಗಳ ಕಥೆಯನ್ನು ಬಣ್ಣಿಸಿ ಹೇಳಿ ಅವನನ್ನು ತನ್ನ ಪ್ರತಿದಿನದ ವಾಡಿಕೆಯಂತೆ, ತಪ್ಪದೆ ಬರುವ ಸಂಕಟ, ಅಪಮಾನಗಳ ಅನುಭವದಲ್ಲಿ

ಭಾಗಿಯಾಗಿ ಮಾಡಿಕೊಂಡಳು. ಆ ದಿನದ ಆ ಗೌರವವನ್ನು ಆ ಚಿಕ್ಕ ವಯಸ್ಸಿನಲ್ಲಿ ಮತ್ತೆ ಎಂದೂ ಅನುಭವಿಸಿರಲಿಲ್ಲ ಕಾಳೀಪದ.

ಅವನ ಬಾಳುವೆಯಲ್ಲಿ ಅತ್ಯಂತ ಉತ್ಕೃಷ್ಟವಾದ ಅಂತಹ ತಾಯಿಯ ಹರಕೆಯ ಮಾತನ್ನು ಪಡೆದಿದ್ದ. ಆ ಹರಕೆಯು ಈ ಐವತ್ತು ರೂಪಾಯಿನ ನೋಟಿನಲ್ಲಿ ಹುದುಗಿ ಅಲ್ಲಿ ಪೂರ್ಣವಾಗಿತ್ತು. ಅಂಥ ತಾಯಿಯ ಅಗಾಧವಾದ ಅಕ್ಕರೆಯ ಕಡಲನ್ನ ಕಡೆದು ಅಮೃತದಂತೆ ಹೊರಗೆ ಬಂದ ಬೆಲೆ ಕಟ್ಟಲಾಗದ ದುಃಖದ ಉಡುಗೊರೆಯ ಸ್ವರೂಪವಾಗಿದ್ದ ನೋಟು ಕಳುವಾಗಿಹೋದುದು ಅವನಿಗೆ ಪೈಶಾಚಿಕ ಅಭಿಶಾಪದ ಹಾಗೆ ತೋರಿಬಂತು. ಮಗ್ಗುಲಿನ ಮಹಡಿ ಮೆಟ್ಟಲುಗಳ ಮೇಲಿಂದ ಇಂದು ಸುಮ್ಮನೆ ಹತ್ತಿ ಇಳಿದು ಬರುವ ಹೆಜ್ಜೆಗಳ ಸದ್ದು ಎಡೆಬಿಡದೆ ಕಿವಿಗೆ ಬೀಳುತ್ತಿತ್ತು. ಇಂದು ಕಾರಣವೇ ಇಲ್ಲದೆ ಮೆಟ್ಟಲುಗಳನ್ನು ಹತ್ತುವುದು ಇಳಿಯುವುದು ಸ್ವಲ್ಪವೂ ಬಿಡುವಿಲ್ಲದೆ ಒಂದೇ ಸಮನೆ ಆಗುತ್ತಿತ್ತು. ಈ ಕಡೆ ಊರಿಗೆ ಬೆಂಕಿ ಬಿದ್ದು ಸುಟ್ಟು ಹಾಳಾಗುತ್ತಿದೆ. ಅದರ ಪಕ್ಕದಲ್ಲೇ ವಿಚಿತ್ರ ಕಲಕಲ ದನಿಯೊಂದಿಗೆ ಹೊಳೆ ಅವಿರತವಾಗಿ ಹರಿದುಕೊಂಡು ಹೋಗುತ್ತಿದೆ. ಮೇಲಿನಂತಸ್ತಿನವರು ಹತ್ತಿ ಇಳಿಯುವುದೂ ಇದೇ ರೀತಿ.

ಮಹಡಿಯ ಮೇಲೆ ನಡೆಯುತ್ತಿದ್ದ ಅಟ್ಟಹಾಸವನ್ನು ಕೇಳಿದೊಡನೆ ಕಾಳೀಪದನಿಗೆ ಹಠಾತ್ತಾಗಿ ಇದು ಕಳ್ಳರ ಕೆಲಸವಲ್ಲ ಎನ್ನಿಸಿತು. ಆ ಕ್ಷಣದಲ್ಲಿ ಅವನಿಗೆ ಹೊಳೆದುಹೋಯಿತು – ಈ ಕೆಟ್ಟ ಕೆಲಸ ಮಾಡಿದವರು ಈ ಶೈಲೇಂದ್ರನ ಗುಂಪಿನವರೇ, ಬೇರೆ ಯಾರೂ ಅಲ್ಲ...ಕುಚೇಷ್ಟೆಗಾಗಿ ಬಂದು ತನ್ನ ನೋಟನ್ನ ಅಪಹರಿಸಿಕೊಂಡು ಹೋಗಿದ್ದಾರೆ, ಖಂಡಿತ! ಒಂದು ವೇಳೆ ನಿಜವಾದ ಕಳ್ಳರೇ ಬಂದು ನೋಟನ್ನು ಕದ್ದುಕೊಂಡು ಹೋಗಿದ್ದರೂ ಅವನಿಗೆ ಅಷ್ಟು ವ್ಯಸನವಾಗುತ್ತಿರಲಿಲ್ಲ...ಆದರೆ...ಈಗ? ಹಣದ ಮದವೇರಿದ ಪಡ್ಡೆ ಹುಡುಗರು ತನ್ನ ಹೆತ್ತ ತಾಯಿಯ ಮೇಲೆ ಕೈಮಾಡಿದ್ದಾರೆನ್ನುವಂತಾಯಿತು...ಅವನ ಸಂಕಟ, ರೋಷ, ತಡೆಯಲಾಗಲಿಲ್ಲ. ಇಷ್ಟು ದಿನ ಈ ಹಾಸ್ಟೆಲಿನಲ್ಲಿದ್ದರೂ ಅವನು ಮೆಟ್ಟಲು ಹತ್ತಿ ಮೇಲೆ ಹೋಗಿರಲಿಲ್ಲ. ಆದರೆ ಇಂದು ರೋಷದಿಂದ ರಭಸವಾಗಿ ಕಾಲುಹಾಕುತ್ತ ಮೆಟ್ಟಲೇರಿ ಮೇಲೆ ಹೋದ.

ಮೈಮೇಲೆ ಹರಕು ಬನಿಯನ್ನು, ಕಾಲಲ್ಲಿ ಚಪ್ಪಲಿಯಿಲ್ಲ. ಮನಸ್ಸಿನ ಉದ್ವೇಗ ಮತ್ತು ತಲೆನೋವಿನ ಉದ್ರೇಕದಿಂದ ಮುಖ ಕೆಂಪಡರಿದೆ.

ಇಂದು ಭಾನುವಾರ. ಕಾಲೇಜಿಗೆ ಹೋಗುವ ಅವಸರವಿಲ್ಲವೆಂದು ಆ ಗೆಣೆಯರ ಗುಂಪಿನವರು ಕೆಲವರು ಮರದ ಮೇಲುಭಾವಣಿಯ ಕೆಳಗೆ, ಕೆಲವರು ಮುಂದಿನ ಹಜಾರದಲ್ಲಿ, ಕೆಲವರು ಕುರ್ಚಿಯ ಮೇಲೆ, ಬೇರೆ ಕೆಲವರು ಬೆತ್ತದ ಆರಾಮ ಕುರ್ಚಿಯ ಮೇಲೆ ಕೂತು ನಗುತ್ತಾ ಹರಟೆ ಕೊಚ್ಚುತ್ತಿದ್ದಾರೆ. ಕಾಳೀಪದನು

ನೇರವಾಗಿ ಅವರ ನಡುವೆ ಹೋಗಿ ನಿಂತದ್ದೇ ರೋಷದಿಂದ ನಡುಗುವ ದನಿಯಲ್ಲಿ "ಕೊಡಿ, ನನ್ನ ನೋಟನ್ನ. ಕೊಟ್ಟುಬಿಡಿ" ಎಂದು ಕೂಗಿದ.

ಒಂದು ವೇಳೆ ವಿನಯವಾಗಿ ಕೇಳಿಕೊಂಡಿದ್ದರೆ ನಿಸ್ಸಂದೇಹವಾಗಿ ಅವನು ಕೇಳಿದಂತೆಯೇ ಆಗುತ್ತಿತ್ತು. ಆದರೆ ಹುಚ್ಚುಹಿಡಿದವನಂತಿದ್ದ ಅವನ ಕೋಪಮೂರ್ತಿಯನ್ನು ಕಂಡು ಶೈಲೇಂದ್ರನೂ ರೇಗಿಕೊಂಡ. ಅವನ ಮನೆಯ ಕಾವಲುಗಾರನಲ್ಲಿದ್ದಿದ್ದರೆ ಈ ಮಾನವಿಲ್ಲದವನನ್ನ ಕತ್ತು ಹಿಡಿದು ದಬ್ಬು ಎಂದು ಹೇಳಿಬಿಡುತ್ತಿದ್ದನೇನೋ, ಅದಕ್ಕೆ ಸಂದೇಹವಿಲ್ಲ. ಆಗ ಎಲ್ಲರೂ ಎದ್ದು ನಿಂತು ಒಂದೇ ಗಂಟಲಲ್ಲಿ "ಏನು ಹೇಳುತಾ ಇದ್ದೀರಿ ಸ್ವಾಮೀ, ಯಾವ ನೋಟು, ಎಂತಹ ನೋಟು?" ಎಂದು ಗರ್ಜಿಸಿದರು.

ಕಾಳೀಪದನು ಅದೇ ರೋಷದ ದನಿಯಲ್ಲಿ "ನನ್ನ ಪೆಟ್ಟಿಗೆಯಿಂದ ನೀವು ನೋಟು ಕದ್ದು ತಂದಿದ್ದೀರಿ ಕೊಟ್ಟುಬಿಡಿ ಅದನ್ನ!" ಎಂದು ಕೂಗಿದ.

"ಹಾಂ! ಎಷ್ಟು ದೊಡ್ಡ ಮಾತು? ನಾವೇನು ಕಳ್ಳರೆಂದು ತಿಳಿದಿರಾ? ಹುಷಾರಾಗಿ ಮಾತಾಡಿ!"

ಕಾಳೀಪದನ ಕೈಯಲ್ಲಿಂದು ಏನಾದರೂ ಇದ್ದಿದ್ದರೆ ಆ ಗಳಿಗೆಯಲ್ಲಿ ರಕ್ತ ಪಾತವಾಗಿ ಹೋಗುತ್ತಿತ್ತು. ಅವನ ಅವಸ್ಥೆ ನೋಡಿ ನಾಲ್ಕೈದು ಜನ ಓಡಿ ಬಂದು ಒಟ್ಟಿಗೆ ಅವನ ಕೈಗಳನ್ನು ಬಿಗಿಯಾಗಿ ಹಿಡಿದರು. ಆಗವನು ಬೋನಿನಲ್ಲಿ ಸಿಕ್ಕಿಹಾಕಿಕೊಂಡ ಹುಲಿಯಂತೆ ಗುರುಗುಟ್ಟತೊಡಗಿದ.

ಈ ಅನ್ಯಾಯಕ್ಕೆ ಪ್ರತೀಕಾರ ಮಾಡಲು ಅವನಿಗೇನೂ ಶಕ್ತಿಯಿಲ್ಲ. ಯಾವ ಪ್ರಮಾಣವೂ ಅಲ್ಲ, ಎಲ್ಲರೂ ಅವನ ದೂರನ್ನು ಹುಚ್ಚೆಂದು ಹಾರಿಸಿಬಿಡುವರು.

ಈಗ ಅವನನ್ನು ಮೃತ್ಯುಬಾಣದಿಂದ ಹೊಡೆದಿರುವವರೇ ಅವನ ದುಂಡಾವರ್ತಿಯು ಅಸಹನೀಯವೆಂದು ಕೂಗಾಡುತ್ತಾ ಅವನನ್ನು ಬೈಯುತ್ತಿದ್ದಾರೆ!

ಆ ರಾತ್ರಿಯನ್ನು ಕಾಳೀಪದನು ಹೇಗೆ ಕಳೆದನೋ ಯಾರಿಗೂ ಗೊತ್ತಿಲ್ಲ.

ಶೈಲೇನನು ಒಂದು ನೂರು ರೂಪಾಯಿಗಳ ನೋಟನ್ನು ತೆಗೆದು "ತಗೊಂಡು ಹೋಗು, ಹೋಗಿ ಆ ಕಂಗಾಲಿಯ ಕೈಯಲ್ಲದನ್ನು ಕೊಟ್ಟು ಬಾ" ಎಂದು ಅವನ ಅನುಚರನೊಬ್ಬನ ಕೈಯಲ್ಲಿ ಕೊಟ್ಟ.

ಇತರ ಅನುಚರರು "ನಿನಗೇನು ಹುಚ್ಚೇ? ಅವನ ಜೋರು ಸ್ವಲ್ಪ ನುಂಗಿಕೊಳ್ಳಲಿ, ನಮ್ಮೆಲ್ಲರಿಗೂ ಒಂದು Written Apology (ಕ್ಷಮೆ ಕೋರಿ ಕಾಗದ) ಮೊದಲು ಕೊಡಲಿ. ಆಮೇಲೆ ವಿವೇಚನೆ ಮಾಡಿ ನೋಡೋಣವಂತೆ" ಎಂದರು.

ಯಥಾ ಸಮಯದಲ್ಲಿ ಎಲ್ಲರೂ ಮಲಗಲು ಹೋದರು, ಮತ್ತು ನಿದ್ದೆಯಲ್ಲಿ ಮುಳುಗುವುದಕ್ಕೂ ಯಾರಿಗೂ ತಡವಾಗಲಿಲ್ಲ.

ಬೆಳಗ್ಗೆಯಾಗುತ್ತಲೂ ಕಾಳೀಪದನ ವಿಷಯವನ್ನು ಬಹುಶಃ ಅವರೆಲ್ಲ ಮರೆತುಹೋಗಿಬಿಟ್ಟಿದ್ದರು. ಬೆಳಗ್ಗೆ ಅವರಲ್ಲಿ ಕೆಲವರು ಮೆಟ್ಟಲಿಳಿದು ಕೆಳಗೆ ಬರುತ್ತಿರುವಾಗ ಅವನ ಕೋಣೆಯ ಕಡೆಯಿಂದ ಕೆಲ ಮಾತುಗಳು ಕಿವಿಗೆ ಬಿದ್ದುವು. ಬಹುಶಃ ವಕೀಲನನ್ನ ಕರೆಯಿಸಿ ಸಲಹೆ ಕೇಳುತ್ತಿದ್ದಾನೇನೋ ಎಂದುಕೊಂಡರು. ಬಾಗಿಲು ಒಳಗಡೆಯಿಂದ ಚಿಲುಕಹಾಕಲ್ಪಟ್ಟಿತ್ತು. ಹೊರಗೆ ಕಿವಿಯಾನಿಸಿ ಕೇಳಿಸಿಕೊಂಡ ಕೆಲವು ಮಾತುಗಳಲ್ಲಿ ಕಾನೂನಿನ ಬಗ್ಗೆ ಯಾವ ಮಾತೂ ಇರಲಿಲ್ಲ, ಎಲ್ಲ ಅಸಂಬದ್ಧ ಪ್ರಲಾಪ!

ಮೇಲೆ ಹೋಗಿ ಶೈಲೇನನಿಗೆ ಹೇಳಿದರು. ಶೈಲೇನನು ಕೆಳಗಿಳಿದು ಬಾಗಿಲ ಹೊರಗೆ ಬಂದು ನಿಂತ. ಕಾಳೀಪದನು ಏನೇನೋ ಒದರುತ್ತಾ ಇದ್ದಾನೆ. ಅದೇನೂ ಅರ್ಥವಾಗುತ್ತ ಇಲ್ಲ, ಸುಮ್ಮನೆ ಆಗಾಗ "ಅಪ್ಪಾ! ಅಯ್ಯೋ...ಅಪ್ಪಾ!" ಎಂದು ಕೂಗುತ್ತಾನೆ.

ಶೈಲೇನನಿಗಾಗ ಭಯವಾಯಿತು. ಬಹುಶಃ ಆ ನೋಟು ಕಳೆದುಕೊಂಡ ದುಃಖಕ್ಕೆ ಹುಚ್ಚು ಹಿಡಿದಿದೆಯೇನೋ. ಏನು ಗತಿ! ಹೊರಗಡೆಯಿಂದಲೇ ಒಂದೆರಡು ಬಾರಿ "ಕಾಳೀಪದಬಾಬೂ. ಕಾಳೀಪದಬಾಬೂ!" ಎಂದು ಕೂಗಿದ. ಜವಾಬೇ ಇಲ್ಲ. ಸುಮ್ಮನೆ ಒಡ ಒಡ ಎಂದು ಒದರುವುದು, ನರಳುವುದು ಕೇಳಬರುತ್ತಿದೆ.

ಶೈಲೇನನು ಮತ್ತೆ ಗಟ್ಟಿಯಾಗಿ "ಕಾಳೀಪದಬಾಬೂ, ಬಾಗಿಲು ತೆಗೆಯಿರಿ. ನಿಮ್ಮ ಆ ನೋಟು ಸಿಕ್ಕಿದೆ" ಎಂದು ಕೂಗಿದ. ಬಾಗಿಲು ತೆಗೆಯಲ್ಪಡಲಿಲ್ಲ. ಯಥಾಪ್ರಕಾರ ಗುನಗುನವೆಂದು ಮಾತು. ಮತ್ತು ನರಳುವಿಕೆ!

ಸಂಗತಿ ಇಷ್ಟು ವಿಪರೀತಕ್ಕೆ ಹೋದೀತೆಂದು ಶೈಲೇನನಿಗೆ ಕಲ್ಪನೆಯಲ್ಲೂ ಇರಲಿಲ್ಲ. ಆದರೆ ಬಾಯಲ್ಲಿ ಮಾತ್ರ ತನ್ನ ಸಂಗಡಿಗರ ಮುಂದೆ ಅನುತಾಪವೇನನ್ನೂ ಪ್ರಕಟಗೊಳಿಸಲಿಲ್ಲ. ಮನಸ್ಸಿನಲ್ಲೇ ಕೊರಗತೊಡಗಿದ.

ಆಗವನು "ಬಾಗಿಲನ್ನೊಡೆಸಿಬಿಡೋಣ" ಎಂದ. ಹಲ ಕೆಲವರು "ಬೇಡ, ಪೋಲೀಸರನ್ನ ಕರೆಯಿಸೋಣ...ಯಾರಿಗೆ ಗೊತ್ತು...ಹುಚ್ಚು ಹಿಡಿದು ಏನಾದರೂ ಮಾಡಿಕೊಂಡುಬಿಟ್ಟಿದ್ದರೆ! ನಿನ್ನೆ ಅವನಿದ್ದಿದ್ದ ಅವತಾರ ನೋಡಿದರೆ ಸಾಹಸವಾಗುವುದಿಲ್ಲ..." ಎಂದರು.

ಶೈಲೇಂದ್ರನಾಗ "ಸರಿ, ಹಾಗಾದರೆ ಬೇಗ ಓಡಿಹೋಗಿ ಅನಾದಿ ಡಾಕ್ಟರನ್ನ ಕರೆದುಕೊಂಡು ಬನ್ನಿ ಯಾರಾದರೂ" ಎಂದ. ಅನಾದಿ ಡಾಕ್ಟರು ಹತ್ತಿರದಲ್ಲೇ ಒಂದು ಮನೆಯಲ್ಲಿದ್ದು ಆತನು ಬಂದು ಬಾಗಿಲಿಗೆ ಕಿವಿಯಿಟ್ಟು ಕೇಳಿ "ಇದು ಬುದ್ಧಿವಿಕಾರದಂತೆ ತೋರುತ್ತದೆ" ಎಂದ.

ಬಾಗಿಲನ್ನೊಡೆದು ಒಳಗೆ ಹೋಗಿ ನೋಡಿದರೆ ಕಂಡುಬಂದದ್ದೇನು? ಮಂಚದಮೇಲೆ ಚದರಿ ಬಿದ್ದಿದ್ದ ಹಾಸುಗೆ ಜಾರಿ ಅರ್ಧ ಭಾಗ ನೆಲದ ಮೇಲೆ

ಬಿದ್ದಿದೆ. ಕಾಳೀಪದನು ನೆಲದಮೇಲೆ ಬಿದ್ದುಕೊಂಡಿದ್ದಾನೆ. ಅವನಿಗೆ ಜ್ಞಾನವೇ ಇಲ್ಲ. ಹೊರಳಾಡುತ್ತಾನೆ. ಗಳಿಗೆಗಳಿಗೆಗೂ ಕೈಕಾಲುಗಳನ್ನು ಹೊಡೆಯುತ್ತಾ ಬಾಯಿಗೆ ಬಂದಂತೆ ಪಿತ್ಥವಿಕಾರದ ಮಾತುಗಳಾಡುತ್ತಾನೆ. ಅವನ ಕೆಂಪಡರಿದ ಕಣ್ಣುಗಳು ತೆರೆದಿವೆ ಮತ್ತು ಬಾಯಿಂದ ರಕ್ತ ಸೋರುತ್ತಿದೆ.

ಡಾಕ್ಟರು ಅವನ ಮಗ್ಗುಲಲ್ಲಿ ಕೂತು ಬಹಳ ಹೊತ್ತು ಪರೀಕ್ಷೆಮಾಡಿ ಶೈಲೇನನ್ನ "ಇವನಿಗೆ ಆಪ್ತರಾರಾದರೂ ಇದಾರೆಯೆ?" ಎಂದು ಕೇಳಿದ. ಶೈಲೇನನ ಮುಖ ಬಣ್ಣಗೆಟ್ಟು ಹೋಯಿತು. ಅವನು ಹೆದರಿದ ದನಿಯಲ್ಲಿ "ಯಾಕೆ?– ಯಾಕೆ ಹೇಳಿ" ಎಂದ.

ಡಾಕ್ಟರು ಗಂಭೀರವಾಗಿ "ಸುದ್ದಿ ತಿಳಿಸುವುದೊಳ್ಳೆಯದು. ಲಕ್ಷಣ ಚೆನ್ನಾಗಿಲ್ಲ." ಎಂದರು.

ಆಗ ಶೈಲೇಂದ್ರ "ನನಗೂ ಇವರಿಗೂ ಅಷ್ಟು ಪರಿಚಯವಿಲ್ಲ. ಈತನ ಆಪ್ತೇಷ್ಟರು ಯಾರೋ ನನಗೆ ತಿಳಿಯದು. ಕೂಡಲೇ ವಿಚಾರಿಸಿ ಹುಡುಕಿಸುತ್ತೇನೆ. ಆದರೆ ಅದಕ್ಕೆ ಮೊದಲು ಏನು ಮಾಡಿದರೆ ಒಳ್ಳೆಯದು ಹೇಳಿ, ಡಾಕ್ಟರೆ?" ಎಂದು ಕೇಳಿಕೊಂಡ.

ಡಾಕ್ಟರರಾಗ "ಮೊದಲು ರೋಗಿಯನ್ನು ಈ ಕತ್ತಲು ಕೋಣೆಯಿಂದ ಕೊಂಡು ಹೋಗಿ ಮೇಲಿನ ಅಂತಸ್ತಿನ ಯಾವುದಾದರೂ ಗಾಳಿ, ಬೆಳಕು ಇರುವ ಕೋಣೆಯಲ್ಲಿ ಮಲಗಿಸಬೇಕಾಗುತ್ತದೆ. ಮತ್ತೆ ಹಗಲು, ರಾತ್ರೆ ಶುಶ್ರೂಷೆ ಮಾಡಬೇಕಾಗುತ್ತದೆ ಯಾರಾದರೂ" ಎಂದರು.

ಶೈಲೇಂದ್ರನು ಆ ಕೂಡಲೆ ರೋಗಿಯನ್ನು ತನ್ನ ಕೋಣೆಗೆ ಸಾಗಿಸಿ ಮಲಗಿಸಿದ. ತನ್ನ ಸಂಗಡಿಗರೆಲ್ಲರನ್ನೂ 'ಗಲಾಟೆ ಮಾಡಕೂಡ'ದೆಂದು ಹೇಳಿ ಹೊರಗೆ ಕಳುಹಿಸಿಬಿಟ್ಟ. ಕಾಳೀಪದನ ತಲೆಗೆ ಮಂಜಿನಗಡ್ಡೆಯ ಬುಟ್ಟಿಯನ್ನು ಒತ್ತುತ್ತ ತಾನೇ ಕೈಯಾರೆ ಗಾಳಿ ಬೀಸುತ್ತ ಬಂದ.

ಮೊದಲೇ ಹೇಳಿದ್ದಾಗಿದೆ. ಮೇಲಿನಂತಸ್ತಿನ ದೊಡ್ಡ ಮನುಷ್ಯರ ಹುಡುಗರು ಇನ್ನೂ ಹೆಚ್ಚಾಗಿ ತಿರಸ್ಕಾರ ಮತ್ತು ಹಾಸ್ಯ ಮಾಡಿಯಾರೆಂಬ ಭಯದಿಂದ ಕಾಳೀಪದನು ತನ್ನ ತಾಯಿ, ತಂದೆಯರ ಪರಿಚಯವನ್ನು ಇವರಿಗೆ ತಿಳಿಯದಂತೆ ಗೋಪ್ಯವಾಗಿಟ್ಟದ್ದ. ಊರಿಗೆ ತಾನು ಬರೆಯುವ ಕಾಗದಗಳನ್ನೆಲ್ಲ ತಾನೇ ಪೋಸ್ಟಾಫೀಸಿಗೆ ಹೋಗಿ ಹಾಕುತ್ತಿದ್ದ. ತನಗೆ ಊರಿಂದ ಬರುವ ಕಾಗದಗಳನ್ನೆಲ್ಲ ಪೋಸ್ಟಾಫೀಸಿನ ವಿಳಾಸಕ್ಕೇ ಬರೆಸಿ, ತಾನೇ ಅಲ್ಲಿಗೆ ಹೋಗಿ ಅವನ್ನು ತರುತ್ತಿದ್ದ.

ಕಾಳೀಪದನ ಮನೆಯವರ ವಿಳಾಸವನ್ನು ತಿಳಿಯಲೋಸುಗ ಮತ್ತೊಮ್ಮೆ ಅವನ ಪೆಟ್ಟಿಗೆಯನ್ನು ತೆರೆಯಬೇಕಾಯಿತು. ಪೆಟ್ಟಿಗೆಯಲ್ಲಿ ಎರಡು ಕಟ್ಟು ಪತ್ರಗಳಿದ್ದುವು. ಪ್ರತೀ ಕಟ್ಟನ್ನೂ ಚೆನ್ನಾಗಿ ದಾರಕಟ್ಟಿ ಭದ್ರವಾಗಿಟ್ಟಿದ್ದ ಕಾಳೀಪದ. ಒಂದು ಕಟ್ಟಿನಲ್ಲಿ

ಅವನ ತಾಯಿಯ ಕಾಗದ, ಇನ್ನೊಂದರಲ್ಲಿ ತಂದೆಯದು; ತಾಯಿಯ ಕಾಗದಗಳು ಸ್ವಲ್ಪ, ತಂದೆಯದೇ ಹೆಚ್ಚು. ಕಾಗದಗಳನ್ನು ಕೈಯಲ್ಲಿ ಹಿಡಿದುತಂದು ಶೈಲೇನನು ಬಾಗಿಲನ್ನ ಹಾಕಿಕೊಂಡು ರೋಗಿಯ ಹಾಸುಗೆಯ ಪಕ್ಕದಲ್ಲಿ ಕೂತು ಓದತೊಡಗಿದ. ಕಾಗದದಲ್ಲಿ ಬರೆದಿದ್ದ ಹೆಸರು, ವಿಳಾಸಗಳನ್ನೋದಿದೊಡನೆ ಬೆಚ್ಚಿಬಿದ್ದ. ಶಾನಿಯಾಡಿ ಚೌಧುರಿಯವರ ಮನೆ...ಕಾಗದದಡಿಯಲ್ಲಿ ಬರೆದಿದ್ದವರ ಹೆಸರನ್ನ ನೋಡಿದ. ಭವಾನೀಚರಣ ದೇವಶರ್ಮ – ಭವಾನೀಚರಣ ಚೌಧುರಿ!

ಕಾಗದವನ್ನಲ್ಲೇ ತಳಗಿಟ್ಟು ಸ್ತಬ್ಧನಾಗಿ ಕೂತು ಕಾಳೀಪದನ ಮುಖದ ಕಡೆ ಒಂದೇಸಮನೆ ನೋಡತೊಡಗಿದ. ಕೆಲದಿನಗಳ ಹಿಂದೆ ಒಮ್ಮೆ ಅವನ ಸಂಗಡಿಗರಲ್ಲೊಬ್ಬಿಬ್ಬರು...ತನ್ನ ಮುಖಕ್ಕೂ ಕಾಳೀಪದನ ಮುಖಕ್ಕೂ ಸ್ವಲ್ಪ ಹೋಲಿಕೆಯಿದೆಯೆಂದು ಹೇಳಿದ್ದ ವಿಷಯ ಜ್ಞಾಪಕಕ್ಕೆ ಬಂತು. ಅದನ್ನ ಮೊದಲು ಕೇಳಿದಾಗ ಅವನ ಮನಸ್ಸಿಗೆ ಹಿತವಾಗಿರಲಿಲ್ಲ...ಮತ್ತು ಅದನ್ನ ಕಂಡು ಇತರರು ಆ ಸಂಗತಿಯನ್ನು ಹಾಸ್ಯಮಾಡಿ ಹಾರಿಸಿಬಿಟ್ಟಿದ್ದರು. ಈಗ ನೋಡಿದರೆ ಸ್ಪಷ್ಟವಾಯಿತು... ಆ ಊಹೆ ನಿರಾಧಾರವಲ್ಲ! ಅವನ ಅಜ್ಜಂದಿರಿಬ್ಬರು ಸಹೋದರರೆಂದು ಗೊತ್ತು. ಶ್ಯಾಮಾಚರಣ ಮತ್ತು ಭವಾನೀಚರಣ. ಅವರ ಹಿಂದಿನ ವೃತ್ತಾಂತವನ್ನಾರೂ ಮನೆಯಲ್ಲಿ ಮಾತಾಡುತ್ತಿರಲಿಲ್ಲ. ಭವಾನೀಚರಣನಿಗೆ ಮಗನೊಬ್ಬನಿದ್ದದ್ದು, ಅವನ ಹೆಸರು ಕಾಳೀಪದನೆಂದೂ ಅವನಿಗೆ ತಿಳಿದಿರಲಿಲ್ಲ. ಇವನೇ ಕಾಳೀಪದ! ಇವನೇ ಅವನಿಗೆ ಚಿಕ್ಕಪ್ಪ!

ಶೈಲೇನನಿಗಾಗ ನೆನಪಿಗೆ ಬರಲಾರಂಭಿಸಿತು. ಅವನ ಅಜ್ಜಿ, ಶ್ಯಾಮಾಚರಣನ ಪತ್ನಿ, ಬದುಕಿದ್ದಷ್ಟು ದಿನಗಳೂ ಕಡೆಯವರೆಗೂ ಅತಿವಾತ್ಸಲ್ಯದಿಂದ ಭವಾನೀಚರಣನ ಹೆಸರು ಹೇಳಿದೊಡನೆ ಆಕೆಯ ಕಣ್ಣುಗಳು ಒದ್ದೆಯಾಗುತ್ತಿದ್ದುವು. ಭವಾನೀಚರಣನು ಆಕೆಯ ಮೈದುನನಾದರೂ ಮಗನೋಪಾದಿಯಲ್ಲಿದ್ದ. ತನ್ನ ಮಗನಿಗಿಂತಲೂ ವಯಸ್ಸಿನಲ್ಲಿ ಕಿರಿಯ, ಅವನನ್ನಾಕೆ ತನ್ನ ಮಗನಂತೆಯೇ ಸಾಕಿ ದೊಡ್ಡವನಾಗಿ ಮಾಡಿದ್ದಳು. ಆಸ್ತಿಯ ಬಗ್ಗೆ ಆದ ವಿಚ್ಛೇದದ ಫಲವಾಗಿ ಅವರು ಬೇರೆಯಾಗಿ ಹೋದಮೇಲೆ ಭವಾನೀಚರಣನ ಕ್ಷೇಮ ಸಮಾಚಾರ ತಿಳಿಯಲು ಆಕೆಗೆ ಎಷ್ಟು ಆಸೆಯಾಗುತ್ತಿತ್ತೋ. ಬಾರಿ ಬಾರಿಗೂ ಮಕ್ಕಳನ್ನು ಕುರಿತು "ಭವಾನೀಚರಣ, ಪಾಪ, ಅತ್ಯಂತ ಹಸುಗೂಸಿನಂಥ ಮನುಷ್ಯನೆಂದುಬಿಟ್ಟು ನೀವೆಲ್ಲ ಅವನಿಗೆ ಮೋಸ ಮಾಡಿದ್ದೀರಿ. ನಿಮ್ಮಜ್ಜನಿಗೆ, ಅವನನ್ನ ಕಂಡರೆ ಬಹಳ ಪ್ರೀತಿ. ಹಾಗಿದ್ದೂ ಅವನಿಗೇನೂ ಆಸ್ತಿ ಬಿಟ್ಟುಹೋಗಿಲ್ಲ ಅಂತ ಹೇಳಿದರೆ ನಾನು ನಂಬುತ್ತೇನೆಯೆ?" ಎಂದು ಹೇಳುತ್ತಿದ್ದಳು. ಆಕೆಯ ಮಕ್ಕಳು ಇಂಥ ಮಾತುಗಳನ್ನ ಕೇಳಿ ರೇಗಿಬೀಳುತ್ತಿದ್ದರು. ಅಷ್ಟೇಕೆ? ಶೈಲೇನನಿಗೂ ಕೋಪ ಬರುತ್ತಿತ್ತು. ತಮ್ಮಜ್ಜಿಯೇ ಹೀಗೆ ಅವನ ಪಕ್ಷವಾಗಿ ವಹಿಸಿಕೊಂಡು ಮಾತಾಡುತ್ತಿದ್ದಳೆಂಬ ಕಾರಣಕ್ಕೆ

ಭವಾನೀಚರಣನ ಮೇಲೂ ಅವನಿಗೆ ಕೋಪ ಬರುತ್ತಿತ್ತು. ಆ ದಿನಗಳಲ್ಲಿ ಭವಾನೀಚರಣನಿಗೆಂತಹ ಬಡತನದ ಸ್ಥಿತಿಯಿತ್ತೆಂದೂ ಅವನಿಗೆ ಗೊತ್ತಿಲ್ಲ. ಕಾಳೀಪದನ ಅವಸ್ಥೆಯನ್ನು ಕಂಡು ಸಂಗತಿಯೆಲ್ಲವನ್ನೂ ತಿಳಿದುಕೊಂಡ, ಮತ್ತು ಇಷ್ಟು ದಿನ ನೂರಾರು ಆಸೆ, ಪ್ರಲೋಭನೆಗಳನ್ನು ತೋರಿದರೂ ಕೂಡ ಕಾಳೀಪದನು ತನ್ನ ಅನುಯಾಯಿಗಳ ಗುಂಪಿನಲ್ಲಿ ಸೇರಿಕೊಳ್ಳಲು ನಿರಾಕರಿಸಿದುದಕ್ಕೆ ಅವನ ಬಗ್ಗೆ ಗೌರವವುಂಟಾಯಿತು. ಅಕಸ್ಮಾತ್ತಾಗಿ ಕಾಳೀಪದನೇನಾದರೂ ಅವನ ಅನುಯಾಯಿಗಳಲ್ಲೊಬ್ಬನಾಗಿದ್ದಿದ್ದರೆ ಇಂದವನಿಗೆ ಎಷ್ಟು ಅವಮಾನವಾಗುತ್ತಿತ್ತೋ!

ಶೈಲೇನನ ದಳದವರು ಪ್ರತಿಯೊಬ್ಬರೂ ಇಷ್ಟು ದಿನ ಕಾಳೀಪದನನ್ನು ನಾನಾವಿಧವಾಗಿ ಪೀಡಿಸಿ ಅವಮಾನ ಮಾಡಿದ್ದರು. ಈಗ ಅಂತಹ ಹಾಸ್ಟೆಲಿನಲ್ಲಿ ಚಿಕ್ಕಪ್ಪನನ್ನು ಇಟ್ಟಿರಲು ಶೈಲೇನನಿಗೆ ಇಷ್ಟವಾಗಲಿಲ್ಲ. ಡಾಕ್ಟರನ ಸಲಹೆಯ ಮೇರೆಗೆ ಬಹಳ ನಾಜೂಕಿನಿಂದ ಅವನನ್ನ ಬೇರೊಂದು ಒಳ್ಳೆಯ ಮನೆಗೆ ಸಾಗಿಸಿದ.

ಭವಾನೀಚರಣನು ಶೈಲೇನನ ಪತ್ರ ಪಡೆದು ಒಬ್ಬ ಸಂಗಾತಿಯೊಂದಿಗೆ ಜಾಗ್ರತೆಯಾಗಿ ಕಲಿಕತ್ತೆಗೆ ಬಂದು ತಲಪಿದ. ಹೊರಡುವಾಗ ಅತ್ಯಂತ ವ್ಯಾಕುಲಳಾಗಿ ರಾಸಮಣಿಯು ಇಷ್ಟು ದಿನ ಅತೀಕಷ್ಟದಿಂದ ಕೂಡಿಟ್ಟಿದ್ದ ದುಡ್ಡಿನಲ್ಲಿ ಹೆಚ್ಚು ಭಾಗ ಗಂಡನ ಕೈಯಲ್ಲಿಟ್ಟು "ನೋಡಿ...ಸದ್ಯ ಎಡವಟ್ಟೇನೂ ಆಗದಿರಲಿ. ಹುಷಾರಾಗಿ ನೋಡಿಕೊಳ್ಳಿ. ಆವಶ್ಯಕವೆನ್ನಿಸಿದರೆ ತತ್‌ಕ್ಷಣ ನನಗೆ ಸುದ್ದಿ ತಿಳಿಸಿ...ನಾನೂ ಬಂದುಬಿಡುತ್ತೇನೆ" ಎಂದಳು. ಚೌಧುರಿ ವಂಶದ ಹೆಂಗಸರು ದುಡುಮ್ಮೆಂದು ಮನಸ್ಸಿಗೆ ಬಂದೊಡನೆ ಕಲಿಕತ್ತೆಗೆ ಓಡಿಬರುವುದು ಎಂದೂ ವಾಡಿಕೆಯಲ್ಲ. ಆದುದರಿಂದಲೇ ಮೊದಲ ಸುದ್ದಿ ತಿಳಿದೊಡನೆಯೆ ರಾಸಮಣಿಗೆ ಹೊರಡಲಾಗಲಿಲ್ಲ. ಆದರೆ ಆಕೆ ದುರ್ಗಾಮಾತೆಯ ಬಳಿ ಮುಡಿಪು ತೆಗೆದಿಟ್ಟಳು ಮತ್ತು ಮನೆ ಪುರೋಹಿತನನ್ನು ಕರೆಯಿಸಿ ಸ್ವಸ್ತ್ಯಯನ ವ್ರತ (ಶುಭವಾಗಲೆಂದು ಮಾಡಿಸುವ ವ್ರತ) ಮಾಡಿಸಲು ಏರ್ಪಾಡು ಮಾಡಿದಳು.

ಭವಾನೀಚರಣನು ಮಗನ ಅವಸ್ಥೆಯನ್ನು ಕಂಡು ಹತಾಶನಾದನು. ಕಾಳೀಪದನಿಗಿನ್ನೂ ಸರಿಯಾಗಿ ಪ್ರಜ್ಞೆ ಬಂದಿರಲಿಲ್ಲ. ಅವನು ತಂದೆಯನ್ನ ಗುರುತಿಸದೆ "ಏನು ಮೇಷ್ಟರೇ" ಎಂದ. ಕೇಳಿ ಭವಾನೀಚರಣನಿಗೆ ಎದೆಯೊಡೆದು ಹೋಗುವಂತಾಯಿತು. ಕಾಳೀಪದನು ಆಗಾಗ "ಅಪ್ಪಾ...ಅಪ್ಪಾ" ಎಂದು ಕೂಗಿಕೊಂಡೇಳುತ್ತಿದ್ದ. ಆಗ ಭವಾನೀಚರಣ ಅವನ ಕೈಹಿಡಿದುಕೊಂಡು ಅವನ ಮುಖದ ಬಳಿ ಮುಖವಿಟ್ಟು ಗಟ್ಟಿಯಾಗಿ "ಇಗೋ ನಾನೇ ಕಣೋ, ನಾನೇ ಬಂದಿದ್ದೇನೋ. ಇಗೋ ನೋಡು ನನ್ನಪ್ಪ, ನಾನೇ ಕಾಣೋ, ನಾನೇ ಕಾಣೋ" ಎಂದು ಕೂಗುತ್ತಿದ್ದ. ಆದರೆ ಮಗ ಅವನನ್ನ ಆಗಲೂ ಗುರುತಿಸಿದಂತೆ ತೋರಲಿಲ್ಲ.

ಡಾಕ್ಟರು ಬಂದು ಪರೀಕ್ಷೆಮಾಡಿ "ಜ್ವರ ಈಗ ಸ್ವಲ್ಪ ಕಮ್ಮಿಯಾಗಿದೆ. ಬಹುಶಃ ಕಮ್ಮಿಯಾಗುತ್ತಾ ಹೋಗುತ್ತದೆ" ಎಂದು ಭರವಸೆಯಿತ್ತರು. ಕಾಳೀಪದನಿಗೆ ವಾಸಿಯಾಗದು, ಜ್ವರ ಕಮ್ಮಿಯಾಗದು, ಎಂಬ ಯೋಚನೆ ಭವಾನೀಚರಣನಿಗೆ ಬರುವ ಸಂಭವವೇಯಿಲ್ಲ. ಎಂದಾದರೂ ಉಂಟೆ?...ಅವನಿಗೆ ವಾಸಿಯಾಗೇ ತೀರಬೇಕು. ಚಿಕ್ಕಂದಿನಿಂದಲೂ ಎಲ್ಲರೂ ಏನು ಹೇಳುತ್ತ ಬಂದಿದ್ದಾರೆ?...ಕಾಳೀಪದ ದೊಡ್ಡವನಾಗಿ ಅಸಾಧಾರಣವಾದದ್ದೇನನ್ನೋ ಸಾಧಿಸುತ್ತಾನೆ ಎಂಬುದಾಗಿ ಜನ ಸುಮ್ಮನೆ ಮಾತಿಗಾಗಿ ಆಡುತ್ತಾರೆ ಎಂದು ತಿಳಿದಿರಲಿಲ್ಲ ಭವಾನೀಚರಣ. ಆ ನಂಬಿಕೆ ಅವನಲ್ಲಿ ರಕ್ತಗತವಾಗಿ ಅವನ ಸಂಸ್ಕಾರದಲ್ಲಿ ಸೇರಿಹೋಗಿತ್ತು. ಕಾಳೀಪದನು ವಾಸಿಯಾಗಿ ಎದ್ದು ಓಡಾಡುತ್ತಾನೆ. ಅವನು ಬದುಕಬೇಕು. ಹಾಗೆ ಬರೆದೇ ಇದೆ!

ಈ ಕಾರಣದಿಂದ ಡಾಕ್ಟರು ಎಷ್ಟು ಧೈರ್ಯ ಹೇಳಿದರೂ ಅದಕ್ಕೆ ಮುಂಚೆಯೇ ಅವನು ಇನ್ನೂ ಧೈರ್ಯದಿಂದ ಇರುತ್ತ ಹೆಂಡತಿಗೆ ಬರೆಯುವ ಕಾಗದಗಳಲ್ಲಿ ಶಂಕೆಯ ಯಾವ ಮಾತನ್ನೂ ಬರೆಯುತ್ತಿರಲಿಲ್ಲ.

ಶೈಲೇಂದ್ರನ ವ್ಯವಹಾರದಿಂದ ಭವಾನೀಚರಣನಿಗೆ ಬಹಳ ಅಚ್ಚರಿಯಾಗಿ ಹೋಯಿತು. ಅವನೀಗ ತನಗೆ ಪರಮ ಆತ್ಮೀಯನಲ್ಲವೆಂದು ಯಾರು ಹೇಳಲಿಕ್ಕೆ ಸಾಧ್ಯ? ಅದರಲ್ಲೂ ಕಲಿಕತ್ತೆಯಂತ ಷಹರಿನ ಸುಶಿಕ್ಷಿತ ಯುವಕ, ಶ್ರೀಮಂತರ ಹುಡುಗನಾದಾಗ್ಯೂ, ಭವಾನೀಚರಣನನ್ನು ಕಂಡರೆ ಎಷ್ಟು ಶ್ರದ್ಧಾಗೌರವಗಳನ್ನು ತೋರುತ್ತಿದ್ದ. ಹೀಗೆ ಯಾರನ್ನೂ ಕಂಡಿಲ್ಲ. ಕಲಿಕತ್ತೆಯ ಹುಡುಗರ ಸ್ವಭಾವವೇ ಹೀಗೆ ಎಂದುಕೊಂಡ. ಅದು ಸಹಜವೇ. ನಮ್ಮ ಹಳ್ಳಿಗಾಡಿನ ಶಿಕ್ಷಣವೆಲ್ಲಿ, ಇಂಥಾ ಷಹರಿನ ಶಿಕ್ಷಣವೆಲ್ಲಿ, ಎಂದೂ ಅನ್ನಿಸಿತು.

ಜ್ವರ ಸ್ವಲ್ಪಸ್ವಲ್ಪವಾಗಿ ಇಳಿಯುತ್ತ ಬಂತು. ಬೇಗಲೇ ಕಾಳೀಪದನಿಗೆ ಚೇತನವೂ ಬಂತು. ತಂದೆಯನ್ನು ಹಾಸುಗೆ ಪಕ್ಕದಲ್ಲಿ ನೋಡಿ ಅವನಿಗೆ ಆಶ್ಚರ್ಯವಾಯಿತು. ತಾನು ಕಲಿಕತ್ತೆಯಲ್ಲಿರುವ ದುರವಸ್ಥೆಯು ಅಪ್ಪನಿಗೆ ಗೊತ್ತಾಗಿಹೋಗುತ್ತದೆ ಎಂಬ ಯೋಚನೆಯೂ ಬಂತು, ತತ್‌ಕ್ಷಣ ಅದಕ್ಕಿಂತಲೂ ದೊಡ್ಡ ಯೋಚನೆ – ತನ್ನ ಹಳ್ಳಿಗಾಡಿನ ಒರಟುಸ್ವಭಾವದ ತಂದೆ ಈ ಹಾಸ್ಟೆಲಿನ ಹುಡುಗರ ಅಪಹಾಸ್ಯಕ್ಕೆ ಗುರಿಯಾದಾನೆಂದು. ನಾಲ್ಕೂ ಕಡೆ ನೋಡಿ ಇದಾರ ಮನೆ, ತಾನೇಕೆ ಇಲ್ಲಿ ಬಂದಿದೇನೆ ಎಂದು ಯೋಚಿಸಿದ. ಇದೇನು ಕನಸೇ ಎನ್ನಿಸಿತು.

ಆಗವನಿಗೆ ಹೆಚ್ಚು ಹೊತ್ತು ಯೋಚಿಸುವ ಶಕ್ತಿಯೂ ಇರಲಿಲ್ಲ. ತನ್ನ ತಂದೆಯೆಲ್ಲೋ ತನ್ನ ಕಾಯಿಲೆ ವಿಷಯ ತಿಳಿದು ಕಲಿಕತ್ತೆಗೆ ಬಂದು ಬೇರೆ ಒಳ್ಳೇ ಮನೆಯನ್ನು ಬಾಡಿಗೆ ಮಾಡಿ ತನ್ನನ್ನು ಇಟ್ಟಿದ್ದಾನೇನೋ ಎಂದುಕೊಂಡ. ಹೇಗೆ ತನ್ನನ್ನು ಕರೆದುಕೊಂಡು ಬಂದ, ಖರ್ಚಿಗೆ ಹಣ ಎಲ್ಲಿ ದೊರಕಿತು? ಇಷ್ಟು ಖರ್ಚುಮಾಡಿದರೆ ಆಮೇಲೆ ಎಷ್ಟು ಕಷ್ಟವಾದೀತು? ಹೀಗೆಲ್ಲ ಯೋಚನೆಮಾಡಲು

ಅವನಿಗೆ ಸಮಯವಿಲ್ಲ. ಈಗವನು ವಾಸಿಯಾಗಿ ಮೇಲೇಳಬೇಕು, ಆ ಕಾರಣದಿಂದ ಇಡೀ ಜಗತ್ತಿನ ಮೇಲೆ ಅವನ ಬಾಧ್ಯತೆಯಿದೆ.

ಒಂದು ಸಲ ಅವನ ತಂದೆಯು ಮನೆಯಲ್ಲಿಲ್ಲದಿರುವಾಗ ಶೈಲೇಂದ್ರನು ಒಂದು ಹರಿವಾಣದಲ್ಲಿ ಕೆಲವು ಹಣ್ಣುಗಳನ್ನು ತಂದು ಅವನ ಮುಂದೆ ಬಂದು ನಿಂತ – ಕಾಳೀಪದನು ಅವನ ಮುಖ ನೋಡಿದೊಡನೆ – "ಇದೇನಪ್ಪಾ... ಮತ್ತೆ ಏನಾದರೂ ಕುಚೇಷ್ಟೆಯೋ" ಎಂದು ನಡುಗಿದ. ಅವನಿಗಾಗ ಮೊದಲ ಯೋಚನೆ ಏನೆಂದರೆ, ಹೇಗಾದರೂ ಮಾಡಿ ಅಪ್ಪನನ್ನು ಇವನ ಬಾಧೆಯಿಂದ ತಪ್ಪಿಸಬೇಕು.

ಆಗ ಶೈಲೇಂದ್ರನು ಹಣ್ಣಿನ ತಟ್ಟೆಯನ್ನು ಮೇಜಿನ ಮೇಲಿಟ್ಟು ಕಾಳೀಪದನ ಕಾಲು ಮುಟ್ಟಿ ನಮಸ್ಕಾರ ಮಾಡಿ "ನನ್ನಿಂದ ಮಹಾಪರಾಧ ಆಗಿದೆ ನಿಮಗೆ. ನೀವು ಯಾವುದೂ ಮನಸ್ಸಿಗೆ ಹಚ್ಚಿಕೊಳ್ಳದೆ ನನ್ನನ್ನ ಕ್ಷಮಿಸಬೇಕು" ಎಂದು ಕೇಳಿಕೊಂಡ.

ಕಾಳೀಪದನಿಗೇನೂ ತೋಚಲಿಲ್ಲ. ಸ್ವಲ್ಪ ತಬ್ಬಿಬ್ಬಾಯಿತು. ಆದರೆ ಶೈಲೇಂದ್ರನ ಮುಖ ನೋಡಿದಾಗ ಅವನ ಮನಸ್ಸಿನಲ್ಲಾವ ಕಾಪಟ್ಯವೂ ಇದ್ದಂತೆ ತೋರಲಿಲ್ಲ. ಮೊದಲು ಮೊದಲು ಕಾಳೀಪದನು ಈ ಹಾಸ್ಟೆಲಿಗೆ ಬಂದಾಗ ಪ್ರಾಯದ, ಆರೋಗ್ಯದ ಕಾಂತಿಯಲ್ಲಿ ಮೆರೆಯುತ್ತ, ಕೋರೈಸುವಂಥ ಸುಂದರ ಮುಖವುಳ್ಳ ಶೈಲೇಂದ್ರನನ್ನು ಕಂಡು ಅವನ ಮನಸ್ಸು ಆಕರ್ಷಿತವಾಗಿತ್ತು. ಆದರೆ ತನ್ನ ದಾರಿದ್ರ್ಯದ ಸಂಕೋಚದಿಂದ ಅವನ ಹತ್ತಿರ ಹೋಗಿ ಸಲಿಗೆ ಮಾಡಿಕೊಳ್ಳಲು ಮನಸ್ಸು ಬರಲಿಲ್ಲ. ಅವನೇನಾದರೂ ತನ್ನ ಅಂತಸ್ತಿನವನೇ ಆಗಿದ್ದಿದ್ದರೆ ಗೆಳೆಯನಂತೆ ಅವನ ಬಳಿ ಹೋಗುವ ಹಕ್ಕು ಇರಬಹುದಾಗಿತ್ತು. ಹಾಗಿದ್ದಿದ್ದರೆ ಎಷ್ಟು ಆನಂದವಾಗುತ್ತಿತ್ತೋ. ಆದರೆ ಈಗಂತೂ ಇಬ್ಬರೂ ಒಂದೇ ಕಡೆ ಇದ್ದರೂ, ಅಷ್ಟು ಸನಿಯದಲ್ಲಿದ್ದರೂ ಇಬ್ಬರ ನಡುವೆ ಅದೆಷ್ಟು ಆಳವಾದ ಕಮರಿ! ಅದನ್ನ ದಾಟುವ ಮಾರ್ಗವೇ ಇಲ್ಲ. ಶೈಲೇಂದ್ರನು ಮಹಡಿಯ ಮೆಟ್ಟಲಿಳಿಯುವಾಗ, ಹತ್ತುವಾಗ ಅವನು ಹೊದ್ದುಕೊಳ್ಳುತ್ತಿದ್ದ ವಲ್ಲಿಯ ಮೃದುವಾದ ನರುಗಂಪು ಕಾಳೀಪದನ ಕತ್ತಲ ಕೋಣೆಯೊಳಗೆಲ್ಲ ಹರಡುತ್ತಿತ್ತು. ಆಗವನು ತನ್ನ ಓದನ್ನಲ್ಲೇ ನಿಲ್ಲಿಸಿ ಕತ್ತು ಚಾಚಿ ಚಿಂತೆಯ ಗೆರೆಗಳೇ ಇಲ್ಲದ ಮುಗುಳ್ನಗೆಯಿಂದ ಬೆಳಗುವ ಆ ಚೆಲುವಾದ ಮುಖದ ಕಡೆ ನೋಡದೆ ಇರುವುದು ಕಷ್ಟವಾಗುತ್ತಿತ್ತು. ಅಂಥ ಸಮಯದಲ್ಲಿ, ಒಂದೇ ಒಂದು ಗಳಿಗೆ, ಅವನ ಆ ಜೌಗು ನೆಲದ ಕತ್ತಲ ಕೋಣೆಯಲ್ಲಿ ಬಹುದೂರದ ಚೆಲುವಿನಾಗರದ ಲೋಕದಿಂದ ಒಂದೊಂದು ಸಿರಿತುಂಬಿದ ಹೊಗರು ಹೊಕ್ಕು ಹರಡಿಕೊಳ್ಳುತ್ತಿತ್ತು. ಆದರೆ ಆ ಕೂಡಲೆ ಶೈಲೇಂದ್ರನ ಆ ನಿಷ್ಠುರವಾದ ಚೇಷ್ಟೆಯ ಪ್ರಾಯವು ಕಾಳೀಪದನಿಗೆಂಥ ಉಪದ್ರವವಾಗಿ ಕೊನೆಗಂಡಿತು ಎಂಬುದನ್ನು ಈಗಾಗಲೇ ಬೇಕಾದಷ್ಟು ನೋಡಿಯಾಗಿದೆ. ಇಂದು ಶೈಲೇಂದ್ರನು ಹಣ್ಣಿನ ತಟ್ಟೆಯನ್ನು ಕಾಳೀಪದನ ಹಾಸುಗೆಯ

ಬಳಿ ತಂದಿರಿಸಿದಾಗ ಕಾಳೀಪದನು ನಿಟ್ಟುಸಿರುಬಿಡುತ್ತ ಅವನ ಅಂದವಾದ ಮುಖದ ಕಡೆ ಮತ್ತೊಮ್ಮೆ ನೋಡಿದ. ಕ್ಷಮಿಸುವ ಮಾತನ್ನ ಬಾಯಲ್ಲಿ ಆಡದೆ ಹೋದರೂ ತಟ್ಟೆಯಿಂದ ಹಣ್ಣನ್ನು ತೆಗೆದುಕೊಂಡು ಒಂದೊಂದಾಗಿ ತಿನ್ನತೊಡಗಿದ. ಈ ವಿಧವಾಗಿಯೇ ಹೇಳಬೇಕಾಗಿದ್ದುದನ್ನು ಹೇಳಿದಂತಾಯಿತು.

ತನ್ನ ಹಳ್ಳಿಗಾಡಿನ ತಂದೆಯ ಸಂಗಡ ಶೈಲೇಂದ್ರನ ಸಲಿಗೆ ಬೆಳೆಯುತ್ತಿದ್ದುದನ್ನು ಕಾಳೀಪದನು ಅಚ್ಚರಿಯಿಂದ ಪ್ರತಿ ದಿನವೂ ಗಮನಿಸತೊಡಗಿದ. ಶೈಲೇಂದ್ರನು ಭವಾನೀಚರಣನನ್ನ "ಅಜ್ಜ, ಅಜ್ಜ" ಎಂದು ಸಂಬೋಧಿಸುತ್ತಿದ್ದ. ಒಬ್ಬರಿಗೊಬ್ಬರು ನಿರಾತಂಕವಾಗಿ ಚೇಷ್ಟೆ, ತಮಾಷೆಗಳನ್ನು ಮಾಡುತ್ತಿದ್ದರು. ಅವರಿಬ್ಬರ ನಡುವೆ ತಿಳಿ ಹಾಸ್ಯ, ಟೀಕೆಗಳ ಮುಖ್ಯ ಗುರಿಯಾಗಿದ್ದವಳು ಕಣ್ಮುಂದೆ ಇಲ್ಲದ ಅಜ್ಜಿ–ರಾಸಮಣಿ–ಕಾಳೀಪದನ ಮೆಚ್ಚಿನ ತಾಯಿ–ಇಷ್ಟು ದಿನಗಳಾದ ಮೇಲೆ ತಮಾಷೆ, ಹಾಸ್ಯಗಳ ತಂಬೆಲರಿನ ಹಿಲ್ಲೋಲದಲ್ಲಿ ಭವಾನೀಚರಣನ ಮನಸ್ಸಿನಲ್ಲಿ ಮತ್ತೆ ಯೌವನದ ನೆನಹುಗಳ ಪುಳಕವು ಸಂಚಾರ ಮಾಡತೊಡಗಿತು.

ಕಿರಿಯಜ್ಜಿಯು ಕೈಯಾರೆ ತಯಾರಿಸಿದ ಉಪ್ಪಿನಕಾಯಿ, ಮುರಬ್ಬ ಮುಂತಾದ ಒಳ್ಳೊಳ್ಳೆಯ ತಿನಿಸುಗಳನ್ನು ಕಾಳೀಪದನ ಅನಾರೋಗ್ಯ ಸ್ಥಿತಿಯನ್ನವಕಾಶಮಾಡಿಕೊಂಡು ಕದ್ದು ತಿಂದು ಮುಗಿಸಿದ್ದ ಶೈಲೇನ. ಈ ವಿಷಯವಾಗಿ ಸ್ವಲ್ಪವೂ ಸಂಕೋಚವಿಲ್ಲದೆ ಒಪ್ಪಿಕೊಂಡುಬಿಟ್ಟ ಕಿರಿಯಜ್ಜನ ಮುಂದೆ. ಈ ಕಳ್ಳತನದ ಸುದ್ದಿಯನ್ನು ಕೇಳಿ ಕಾಳೀಪದನ ಮನಸ್ಸಿಗಾದ ಆನಂದ ಅಷ್ಟಿಷ್ಟಲ್ಲ. ತನ್ನ ತಾಯಿಯ ಕೈಯಿಂದ ತಯಾರಿಸಿದ ರುಚಿಯ ತಿನಿಸುಗಳನ್ನು ಇಡೀ ಪ್ರಪಂಚವನ್ನೇ ಕರೆದು ತಿನ್ನಿಸಲು ಆಸೆ ಅವನಿಗೆ – ಕಾಳೀಪದನ ದೃಷ್ಟಿಯಲ್ಲಾಗ ತನ್ನ ರೋಗಶಯ್ಯೆಯು ಆನಂದ ಸಭೆಯಾಗಿ ಪರಿಣಮಿಸಿತು. ಇಂತಹ ಸುಖ ಅವನ ಬಾಳುವೆಯಲ್ಲಿ ಅಷ್ಟು ಹೆಚ್ಚಾಗಿ ಬಂದಿರಲಿಲ್ಲ. ಆಹಾ, ಅಮ್ಮನೂ ಈಗಿಲ್ಲಿದ್ದಿದ್ದರೆ – ಎಂಬ ಯೋಚನೆಯೊಂದು ಆಗಾಗ ಬರುತ್ತಿತ್ತು. ಅಮ್ಮನು ಎದುರಿಗಿದ್ದಿದ್ದರೆ ಈ ಹಾಸ್ಯಪ್ರವೃತ್ತಿಯ ಸುಂದರನಾದ ಮೊಮ್ಮಗನನ್ನ ಕಂಡು ಅದೆಷ್ಟು ಆನಂದಿಸುತ್ತಿದ್ದಳೋ!

ಅವನ ಆ ರೋಗದ ಕೋಣೆಯಲ್ಲಿ ನಡೆಯುತ್ತಿದ್ದ ಆ ಆನಂದಕೂಟಕ್ಕೆ ಭಂಗ ತರುತ್ತಿದ್ದ ಒಂದು ವಿಷಯ ಮಾತ್ರ ಇಲ್ಲದೆ ಹೋಗಿದ್ದರೆ! ಕಾಳೀಪದನ ಮನಸ್ಸಿನಲ್ಲಿ ತನ್ನ ದಾರಿದ್ರ್ಯದ ಅಭಿಮಾನವೊಂದಿತ್ತು. ಏನೆಂದರೆ ತಮ್ಮ ಮನೆತನ ಒಂದಾನೊಂದು ಕಾಲದಲ್ಲಿ ಅತ್ಯಂತ ಐಶ್ವರ್ಯವಂತರಾಗಿದ್ದರೆಂಬುದನ್ನ ನೆನಸಿಕೊಂಡು ಗರ್ವಪಡುವುದೆಂದರೆ ಅವನಿಗದು ಅತಿ ನಾಚುಗೇಡಾದ ವಿಷಯ. ನಾವು ಬಡವರಪ್ಪ ಎಂದು ಹೇಳುವಾಗ "ಆದರೆ" ಎಂಬ ಹಿನ್ನುಡಿಯನ್ನು ಆಡಿ ಆ ವಿಷಯವನ್ನು ಮುಚ್ಚುವುದಕ್ಕೆ ಅವನಿಗೆಂದೂ ಇಷ್ಟವಿರಲಿಲ್ಲ. ಭವಾನೀಚರಣನಾದರೋ ಅದಕ್ಕೆ ವ್ಯತಿರಿಕ್ತವಾಗಿ ತಮ್ಮ ಸಿರಿತನದ ದಿನಗಳ ಬಗ್ಗೆ ನೆನಸಿಕೊಂಡು

ಗರ್ವಿಸುತ್ತಿದ್ದುದೇನೋ ಸಹಜವಿರಬಹುದು. ಏಕೆಂದರೆ ಅವನ ಅತ್ಯಂತ ಸುಖದ ದಿನಗಳು ಅವನ ಯೌವನ ಕಾಲದವು. ಸಂಸಾರದಲ್ಲಿ ಆಗಿನ್ನೂ ನಂಬಿಕೆ ದ್ರೋಹವೆಂಬುದು ತನ್ನ ಬೀಭತ್ಸ ಸ್ವರೂಪ ತೋರಿಸಿಕೊಂಡಿರಲಿಲ್ಲ. ಹೆಚ್ಚಾಗಿ ಶ್ಯಾಮಾಚರಣರ ಹೆಂಡತಿ, ಪರಮ ಆದರಣೀಯಳಾಗಿದ್ದ ಅತ್ತಿಗೆ, ರಮಾಸುಂದರಿ ಮನೆಯ ಯಜಮಾನಿಯಾಗಿದ್ದಾಗ ಆ ಲಕ್ಷ್ಮೀಭಂಡಾರದ ಸ್ವಾಗತದ್ವಾರದಲ್ಲಿ ನಿಂತು ಅವರೆಲ್ಲ ಅದೆಷ್ಟು ಅಮಿತವಾದ ಆದರೋಪಚಾರಗಳನ್ನ ಅನುಭೋಗಿಸಿದ್ದರು!

ಅಂದಿನ ಆ ಮುಳುಗಿಹೋದ ಸುಖೋಲ್ಲಾಸದ ದಿನಗಳ ಉಜ್ವಲ ನೆನಹಿನ ಕಿರಣಗಳ ಮೂಲಕವೇ ಭವಾನೀಚರಣನ ಬಾಳುವೆಯ ಸಂಜೆಯಿಂದು ಕೂಡ ಹೊಂಬೆಳಗಿನಿಂದ ಬೆಳಗಲ್ಪಟ್ಟಿದೆ. ಆದರೆ, ಇಂತಹ ಸುಖದ ನೆನಹುಗಳ ಆಲೋಚನೆಗಳ ನಡುವೆ ಆ ಹಾಳಾದ ಉಯಿಲಿನ ಕಳುವಿನ ಮಾತು ಮತ್ತೆ ಮತ್ತೆ ಬರಬೇಕೆ? ಭವಾನೀಚರಣನು ಆ ಮಾತಾಡುವಾಗ ಅತ್ಯಂತ ಉತ್ತೇಜಿತನಾಗಿಬಿಡುತ್ತಿದ್ದ. ಇನ್ನು ಮೇಲೆ ಆ ಕಳುವಾದ ಉಯಿಲಿನ ನಕಲು ಸಿಕ್ಕೇ ಸಿಗುವುದು ಎಂಬುದರಲ್ಲಿ ಅವನಿಗೆ ಸಂದೇಹವೇ ಇಲ್ಲ. ಅಂತಹ ಸಾಧ್ವಿ, ತನ್ನ ತಾಯಿ; ಆಕೆಯ ಮಾತು ಎಂದೂ ಸುಳ್ಳಾಗುವುದಿಲ್ಲ. ಈ ಒಂದು ಮಾತನ್ನೆತ್ತಿದೊಡನೆ, ಪಾಪ, ಕಾಳೀಪದನಿಗೆ ಬಹಳ ನೋಯುತ್ತಿತ್ತು. ಇದು ತನ್ನ ತಂದೆಯ ಬಹಳ ದಿನಗಳ ಭ್ರಾಂತಿಯೆಂದು ಅವನಿಗೆ ಗೊತ್ತು. ಅವನ ತಾಯಿಯೂ ಅವನೂ ಇದರ ಬಗ್ಗೆ ತಮ್ಮೊಳಗೇ ಮಾತಾಡಿಕೊಂಡು ಈ ಭ್ರಾಂತಿಗೆಂದೂ ಅಡ್ಡಿಬಂದಿರಲಿಲ್ಲ. ಆದರೆ ಈಗ, ಈ ಸ್ಥಳದಲ್ಲಿ ಶೈಲೇಂದ್ರನೆದುರಿಗೆ ತನ್ನ ತಂದೆಯು ಈ ದೌರ್ಬಲ್ಯ ತೋರಿಸಿಕೊಳ್ಳುವುದು ಅವನಿಗೆ ಸರಿಬೀಳಲಿಲ್ಲ. ಆದ್ದರಿಂದ ಈ ಮಾತು ಬಂದಾಗೆಲ್ಲ ಅವನು ತಂದೆಗೆ "ಇಲ್ಲಪ್ಪಾ, ಅದು ನಿನ್ನ ಆಧಾರವಿಲ್ಲದ ಸಂದೇಹ ಮಾತ್ರ" ಎಂದು ಅಡ್ಡಿ ಮಾತಾಡುತ್ತಿದ್ದ. ಹೀಗೆ ಅಡ್ಡಿ ಮಾಡಿದ್ದರಿಂದ ಆ ಮಾತನ್ನ ತಡೆಯುವ ಬದಲು ಅದು ಇನ್ನೂ ವಿಪರೀತಕ್ಕೆ ಹೋಗುತ್ತಿತ್ತು. ತನ್ನ ಸಂದೇಹಕ್ಕೆ ಆಧಾರವಿಲ್ಲದೆ ಇಲ್ಲ ಎಂದು ಪ್ರಮಾಣ ಮಾಡಲು ಹಿಂದೆ ನಡೆದ ಪುರಾಣವನ್ನೆಲ್ಲ ಬಿಚ್ಚಿ ಒಂದೊಂದಾಗಿ ವಿವರಣೆಮಾಡಲು ಹೋಗುತ್ತಿದ್ದ ಅವನ ತಂದೆ. ಆಗಂತೂ ಕಾಳೀಪದನೆಷ್ಟು ಪ್ರಯತ್ನಿಸಿದರೂ ಆತನ ಮಾತಿನ ಹೊಳೆಯನ್ನ ತಡೆಯಲಾಗುತ್ತಲೇ ಇರಲಿಲ್ಲ.

ಇದಲ್ಲದೆ ಕಾಳೀಪದನಿಗೆ ಇನ್ನೊಂದು ಲಕ್ಷ್ಯದಲ್ಲಿ ಬಂದಿತ್ತು – ಈ ಮಾತಿನ ಪ್ರಸ್ತಾಪವು ಶೈಲೇಂದ್ರನಿಗೆ ಸ್ವಲ್ಪವೂ ಮನಸ್ಸಿಗಾಗುತ್ತಿರಲಿಲ್ಲ. ಅವನೂ ಉದ್ರೇಕಗೊಂಡು ಭವಾನೀಚರಣನ ಸಂದೇಹವನ್ನು ಖಂಡಿಸಲು ತೊಡಗುತ್ತಿದ್ದ.

ಬೇರೆ ಎಲ್ಲ ವಿಷಯಗಳಲ್ಲೂ ಭವಾನೀಚರಣನು ಇತರ ಜನರ ಅಭಿಪ್ರಾಯಗಳನ್ನ ಮನ್ನಣೆ ಮಾಡಲು ತಯಾರಾಗಿದ್ದರೂ ಈ ವಿಷಯದಲ್ಲಿ ಮಾತ್ರ ಯಾರ ಮುಂದೆಯೂ ಸೋಲೊಪ್ಪಿಕೊಳ್ಳುತ್ತಿರಲಿಲ್ಲ. ಅವನ ತಾಯಿಗೆ

ಓದುಬರೆಹ ಗೊತ್ತಿತ್ತು. ಆಕೆ ಕೈಯಾರೆ ಆ ಉಯಿಲಿನ ನಕಲನ್ನೂ ಉಳಿದ ಕಾಗದಪತ್ರಗಳನ್ನೂ ಕಬ್ಬಿಣದ ಸಂದೂಕದಲ್ಲಿ ಭದ್ರವಾಗಿಟ್ಟಿದ್ದಳು. ಆದರೂ ಅವನ ತಾಯಿ ಮತ್ತೆ ಒಂದು ದಿನ ಅವನ ಸಮಕ್ಷಮದಲ್ಲೇ ಪೆಟ್ಟಿಗೆ ತೆಗೆದು ನೋಡಿದಾಗ ಇತರ ದಸ್ತಾವೇಜುಗಳು ಇಟ್ಟಂತೆಯೇ ಇದ್ದುವು. ಆದರೆ ಉಯಿಲಿನ ನಕಲು ಮಾತ್ರ ಮಾಯ. ಇದನ್ನ ಕಳುವೆನ್ನದೆ ಬೇರೇನೆನ್ನಬೇಕು? ಹಾಗೆಂದಾಗ ಕಾಳೀಪದನು ತಂದೆಗೆ "ಹಾಗೇ ಆಗಲಿ ಅಪ್ಪಾ...ನಿನ್ನ ಮಾತನ್ನೇ ಒಪ್ಪೋಣಂತೆ. ಆದರೆ ಈಗ ನಿನ್ನ ಆಸ್ತಿಯನ್ನ ಯಾರು ಅನುಭವಿಸುತ್ತಾ ಇದ್ದಾರೋ ಅವರಂತೂ ನಿನ್ನ ಸ್ವಂತ ಮಕ್ಕಳಂತೆಯೇ ಅಲ್ಲವೆ? ನಿನ್ನ ಅಣ್ಣನ ಮಕ್ಕಳು, ಮೊಮ್ಮಕ್ಕಳು, ಆ ಆಸ್ತಿ ನಿಮ್ಮ ತಂದೆಯವರ ವಂಶಸ್ಥರಲ್ಲೇ ಉಳಿದಿದೆ...ಇದೇನು ಕಡಿಮೆ ಸುಖವೇ ಹೇಳು" ಎಂದು ಸಮಾಧಾನ ಹೇಳುತ್ತಿದ್ದ.

ಶೈಲೇಂದ್ರನಂತೂ ಈ ಮಾತುಗಳನ್ನ ಹೆಚ್ಚು ಹೊತ್ತು ಕೇಳಲು ಸಹಿಸುತ್ತಿರಲಿಲ್ಲ. ಆಗವನು ತತ್‌ಕ್ಷಣ ಎದ್ದು ಹೊರಗೆ ಹೊರಟುಹೋಗುತ್ತಿದ್ದ. ಕಾಳೀಪದನಿಗೆ ಮನಸ್ಸಿನಲ್ಲಿ ಬಹಳ ಹಿಂಸೆಯಾಗುತ್ತಿತ್ತು. ಶೈಲೇಸನು ಬಹುಶಃ ತನ್ನ ತಂದೆಯ ಬಗ್ಗೆ ದುಡ್ಡಿನಾಸೆಯ ಮರುಳನೆಂದೇನಾದರೂ ತಿಳಿದುಕೊಂಡಿದ್ದಾನೇನೋ! ಆದರೆ ನಿಜವಾಗಿಯೂ ತನ್ನ ತಂದೆಯಲ್ಲಿ ದುಡ್ಡಿನಾಸೆಯ ವಾಸನೆ ಕೂಡ ಇಲ್ಲ ಎಂಬ ಸತ್ಯವನ್ನು ಶೈಲೇಸನಿಗೆ ಹೇಗಾದರೂ ಮಾಡಿ ಮಂದಟ್ಟು ಮಾಡಬಲ್ಲವನಾಗಿದ್ದರೆ ಕಾಳೀಪದನಿಗೆಷ್ಟೋ ಸುಖವಾಗುತ್ತಿತ್ತು.

ಇಷ್ಟು ದಿನಗಳಲ್ಲಿ ಕಾಳೀಪದ ಮತ್ತು ಭವಾನೀಚರಣರ ಮುಂದೆ ಶೈಲೇಸನು ತನ್ನ ನಿಜವಾದ ಪರಿಚಯವನ್ನು ಹೇಳಿಬಿಡುವುದರಲ್ಲಿದ್ದ. ಆದರೆ ಈ ಉಯಿಲಿನ ಕಳುವಿನ ಪ್ರಸ್ತಾಪವು ಅದನ್ನ ತಡೆಹಾಕಿತ್ತು. ತನ್ನ ತಂದೆಯೂ ಮತ್ತು ಅಜ್ಜನೂ ಉಯಿಲಿನ ನಕಲನ್ನು ಕದ್ದರೆಂಬ ಮಾತನ್ನ ಅವನೆಂದೂ ನಂಬಲಾರ. ಏನಾದರೂ ಭವಾನೀಚರಣನ ಭಾಗಕ್ಕೆ ನ್ಯಾಯವಾಗಿ ಬರಬೇಕಾಗಿದ್ದ ಅಂಶದಿಂದ ಆತನು ವಂಚಿತನಾಗಿರುವುದರಲ್ಲಂತೂ ಏನೋ ಒಂದು ನಿಷ್ಠುರವಾದ ಅನ್ಯಾಯವಿದೆಯೆಂಬ ಮಾತನ್ನ ಮಾತ್ರ ಅವನು ಒಪ್ಪಿಕೊಳ್ಳದೆ ಇರುವಹಾಗಿಲ್ಲ.

ಅಂದಿನಿಂದ ಈ ಪ್ರಸ್ತಾಪ ಬಂದಾಗ ಯಾವ ಬಗೆಯ ತರ್ಕಮಾಡುವುದನ್ನೂ ನಿಲ್ಲಿಸಿಬಿಟ್ಟ – ಪೂರ್ತಿಯಾಗಿ ಮೌನವಾಗಿ ಕೂತುಬಿಡುತ್ತಿದ್ದ. ಅಲ್ಲದೆ ಅವಕಾಶ ದೊರಕಿಸಿಕೊಂಡು ಎದ್ದು ಹೊರಗೆ ಹೊರಟುಹೋಗುತ್ತಿದ್ದ.

ಈಗಲೂ ಕಾಳೀಪದನಿಗೆ ಸಂಜೆಯ ಹೊತ್ತು ಸ್ವಲ್ಪ ಜ್ವರ ಬರುತ್ತಿತ್ತು. ಸ್ವಲ್ಪ ತಲೆನೋವು ಕೂಡ ಆಗುತ್ತಿತ್ತು. ಆದರೆ ಅದನ್ನ ಕಾಯಿಲೆಯೆನ್ನುವಂತಿಲ್ಲ. ಓದು ಆರಂಭಮಾಡಬೇಕೆಂದು ಅವನ ಮನಸ್ಸು ಉದ್ವಿಗ್ನವಾಗುತ್ತಿತ್ತು. ಒಂದು ಸಲವಾಗಲೇ ಅವನ ಸ್ಕಾಲರ್‌ಶಿಪ್ ಗದ್ದಾಗಿಹೋಗಿದೆ. ಇನ್ನು ಮುಂದೆ ಹೀಗಾದರೆ ನಡೆಯುವಂತಿಲ್ಲ.

ಶೈಲೇನನಿಗೆ ತಿಳಿಯದಂತೆ ಅವನು ಮತ್ತೆ ಓದಲಾರಂಭಿಸಿದ. ಈ ಬಗ್ಗೆ ಡಾಕ್ಟರು ಕಠಿಣವಾಗಿ ನಿಷೇಧಮಾಡಿದ್ದರೂ ಅದನ್ನವನು ಅಲ್ಲಗಳೆದ.

ಕಾಳೀಪದನು ತಂದೆಯನ್ನು ಕುರಿತು "ಅಪ್ಪಾ, ನೀವಿನ್ನು ಮನೆಗೆ ವಾಪಸು ಹೋಗಿ. ಅಲ್ಲಿ ಅಮ್ಮ ಒಬ್ಬಳೇ ಇದ್ದಾಳೆ. ಈಗ ನನಗೆ ಪರವಾಯಿಲ್ಲ. ಚೆನ್ನಾಗಿ ವಾಸಿಯಾಗಿದೆ" ಎಂದ.

ಶೈಲೇನನೂ "ಈಗ ತಾವು ಹೊರಟರೂ ಏನೂ ಹಾನಿಯಿಲ್ಲ. ಇನ್ನೇನು ಗಾಬರಿಪಡಬೇಕಾದ ಅಗತ್ಯವಿಲ್ಲ. ಈಗೇನು ಅಲ್ಪಸ್ವಲ್ಪ ಅಸ್ವಸ್ಥತೆಯಿದ್ದರೂ ಒಂದೆರಡು ದಿನಗಳಲ್ಲಿ ವಾಸಿಯಾಗಿ ಹೋಗಿಬಿಡುತ್ತದೆ. ಅಲ್ಲದೆ ನಾವಂತೂ ಇದ್ದೇವಲ್ಲ, ಹೇಗಿದ್ದರೂ ನೋಡಿಕೊಳ್ಳುತ್ತೇವೆ" ಎಂದು ಧೈರ್ಯ ಹೇಳಿದ.

ಭವಾನೀಚರಣನಾಗ "ಅದು ನನಗೆ ಗೊತ್ತಿಲ್ಲವೇ ಅಪ್ಪಾ! ನೀವೆಲ್ಲ ಇರುವಾಗ ನನಗೇತರ ಹೆದರಿಕೆ? ಹಾಗೆ ನೋಡಿದರೆ ನಾನು ಇಷ್ಟು ದೂರ ಬರಬೇಕಾಗೇ ಇರಲಿಲ್ಲ. ಆದರೂ ಮನಸ್ಸು ಸುಮ್ಮಗಿರಬೇಕಲ್ಲಪ್ಪಾ! ಅಲ್ಲದೆ ನಿಮ್ಮ ಅಜ್ಜಿ ಇದಾಳಲ್ಲ. ಅವಳೇನಾದರೂ ಹಠಹಿಡಿದಳು ಅಂದರೆ – ಸುಮ್ಮನೆ ಬಿಡುವುದಿಲ್ಲ" ಎಂದ.

ಆಗ ಶೈಲೇನನು ನಗುತ್ತ "ಏನಜ್ಜ? – ಅದಕ್ಕೆ ಕಾರಣರಾರು? ನೀವೇ ಅಜ್ಜಿಯನ್ನು ಮುಚ್ಚಟೆ ಮಾಡಿ ತಲೆ ಮೇಲೆ ಕೂಡಿಸಿಕೊಂಡಿದ್ದೀರಿ ಅಂತ ಕಾಣುತ್ತದೆ. ಈಗ ಕೈಮೀರಿಹೋಗಿದೆ" ಎಂದು ತಮಾಷೆ ಮಾಡಿದ.

ಭವಾನೀಚರಣನೂ ನಗುತ್ತ "ಸುಮ್ಮನಿರಪ್ಪಾ ಸಾಕು...ನಾಳೆ ಹೆಂಡತಿ ಮನೆಗೆ ಬರಲಿ ನಿನಗೆ...ನೋಡುತ್ತೀನಿ, ನಾನೂ ಕೂಡ...ತಲೆ ಮೇಲೆ ಕೂತುಕೋತೀಯೋ ಕೂಡಿಸಿಕೊಳ್ಳುತ್ತೀಯೋ ಅನ್ನೋದನ್ನ" ಎಂದ.

ಭವಾನೀಚರಣನು ಹೆಚ್ಚಾಗಿ ಹೆಂಡತಿಯ ಆದರೋಪಚಾರಗಳ ಮೇಲೇ ಆಧಾರವಾಗಿದ್ದ ಮನುಷ್ಯ. ಕಲಿಕತ್ತೆಯ ಈ ಮನೆಯಲ್ಲಿ ಎಷ್ಟೇ ಸೌಕರ್ಯಗಳಿದ್ದರೂ ಹೆಂಡತಿಯ ಆದರದ ಸೇವೆಗಳ ಅಭಾವವನ್ನು ಪೂರ್ಣಮಾಡಲು ಸಾಧ್ಯವಾಗದ ಮಾತು. ಈ ಕಾರಣದಿಂದ ಊರಿಗೆ ಹೋಗಲು ಆತನನ್ನ ಹೆಚ್ಚು ಒತ್ತಾಯಮಾಡಬೇಕಾದ ಆವಶ್ಯಕತೆಯಿರಲಿಲ್ಲ.

ಬೆಳಗ್ಗೆಯೇ ಸಾಮಾನೆಲ್ಲ ಕಟ್ಟಿಟ್ಟು ಸಿದ್ಧವಾಗಿಬಿಟ್ಟ. ಆಮೇಲೆ ಕಾಳೀಪದನ ಕೋಣೆಗೆ ಹೋಗಿ ನೋಡಿದರೆ ಅವನ ಮುಖ, ಕಣ್ಣುಗಳೆಲ್ಲ, ಕೆಂಪಡರಿಬಿಟ್ಟಿದ್ದುವು. ಮೈಮುಟ್ಟಿ ನೋಡಿದರೆ ಬೆಂಕಿ! ಹಿಂದಿನ ರಾತ್ರಿಯರ್ಧವೆಲ್ಲ ಅವನು ನಿದ್ದೆಗೆಟ್ಟು ಲಾಜಿಕ್ (ತರ್ಕಶಾಸ್ತ್ರ) ಬಾಯಿಪಾಠ ಮಾಡಿದ್ದ. ಉಳಿದರ್ಧ ರಾತ್ರಿ ಎಷ್ಟು ಹೊರಳಾಡಿದರೂ ನಿದ್ದೆ ಬರಲಿಲ್ಲ.

ಕಾಳೀಪದನ ನಿಶ್ಶಕ್ತಿ ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ಈಗ ಅದು ಸಾಲದೆ, ಹೋಗಿದ್ದ ಕಾಯಿಲೆ ಮತ್ತೆ ಜೋರಾಗಿ ಬಂದಿದ್ದನ್ನ ಕಂಡು ಡಾಕ್ಟರು ಕಳವಳಗೊಂಡರು.

ಶೈಲೇನನನ್ನ ಮರೆಯಾಗಿ ಕರೆದು "ಈಗಿನ ಅವಸ್ಥೆಯಂತೂ ಸಮಾಧಾನಕರವಾಗಿಲ್ಲ" ಎಂದು ಎಚ್ಚರಿಕೆ ಕೊಟ್ಟರು.

ಶೈಲೇನನಾಗ ಭವಾನೀಚರಣನ ಬಳಿ ಹೋಗಿ "ನೋಡಿ ಅಜ್ಜ, ನಿಮಗೂ ಕಷ್ಟವಾಗುತ್ತಾಯಿದೆ. ರೋಗಿಗೂ ಸರಿಯಾಗಿ ಶುಶ್ರೂಷೆ ಆಗುತ್ತಿರುವ ಹಾಗೆ ಕಾಣುತ್ತಿಲ್ಲ. ಆದ್ದರಿಂದ ನಾನು ಹೇಳುವುದು – ಇನ್ನು ಹೆಚ್ಚು ನಿಧಾನ ಮಾಡದೆ ಅಜ್ಜಿಗೆ ಹೇಳಿಕಳುಹಿಸುವುದು ಒಳ್ಳೆಯದು" ಎಂದು ಹೇಳಿಬಿಟ್ಟ.

ಶೈಲೇನನು ಎಷ್ಟೇ ಮರೆಮಾಚಲು ಯತ್ನಿಸಿದರೂ ಏನೋ ಗಾಢವಾದ ಭೀತಿಯೊಂದು ಭವಾನೀಚರಣನ ಮನಸ್ಸಿನಲ್ಲಿ ಹುಟ್ಟಿಕೊಂಡಿತು. ಮೈ, ಕೈ ನಡುಗಲು ತೊಡಗಿದುವು. ಆಗ ಹೆಚ್ಚು ಮಾತಾಡಲಾಗದೆ "ನಿನಗೇನು ಸರಿ ಅಂತ ತೋಚುತ್ತೋ ಹಾಗೇ ಮಾಡಪ್ಪಾ" ಎಂದು ಮಾತ್ರ ಉಸುರಿದ.

ರಾಸಮಣಿಗೆ ಪತ್ರ ಹೋಯಿತು. ಆಕೆ ಸ್ವಲ್ಪವೂ ತಡಮಾಡದೆ ಬಗಲಾಚರಣನನ್ನು ಜತೆಮಾಡಿಕೊಂಡು ಕಲಿಕತ್ತೆಗೆ ಬಂದು ತಲಪಿದಳು. ಸಂಜೆಯ ಹೊತ್ತಿಗೆ ಬಂದವಳು ಕೇವಲ ಒಂದೆರಡು ಘಂಟೆಗಳ ಕಾಲ ಮಾತ್ರ ಮಗ ಜೀವದಿಂದಿರುವುದನ್ನು ನೋಡಬಲ್ಲವಳಾದಳು...ಕೊನೆಯ ಘಳಿಗೆಯ ವಿಕಾರಾವಸ್ಥೆಯಲ್ಲಿ ಕಾಳೀಪದನು ಬಾರಿ ಬಾರಿಗೂ ತಾಯಿಯನ್ನು ಕೂಗತೊಡಗಿದ್ದ. ಆ ಕೂಗಿನ್ನೂ ಆಕೆಯ ಎದೆಯೊಳಗೆ ಬಾರಿಬಾರಿಗೂ ಶೂಲದಂತೆ ತಿವಿದು ನೋಯಿಸುತ್ತಿತ್ತು.

ಭವಾನೀಚರಣನು ಈ ಭಯಂಕರ ಪೆಟ್ಟನ್ನು ಸಹಿಸಿಕೊಂಡು ಹೇಗೆತಾನೆ ಜೀವ ಹಿಡಿದುಕೊಂಡಿರಬಲ್ಲನೋ ಎಂಬ ಭಯವೊಂದಿತ್ತು ಆಕೆಗೆ. ಈ ಭಯದಿಂದಲೇ ಆಕೆಗೆ ಮಗನನ್ನು ಕಳೆದುಕೊಂಡ ದುಃಖದ ಆಳವನ್ನು ಹೊರಗೆ ತೋರುವ ಅವಕಾಶವಾಗಲಿಲ್ಲ. ಆಕೆಯ ಮಗನೀಗ ಮತ್ತೆ ಆಕೆಯ ಸ್ವಾಮಿಯ ವ್ಯಕ್ತಿತ್ವದಲ್ಲಿ ಲೀನನಾಗಿಹೋದ. ಅವಳ ಸಂಕಟದಿಂದ ಜಜ್ಜಿ ಹೋದ ಹೃದಯವು ತನ್ನ ಗಂಡನ ಮುಖಾಂತರವಾಗಿ ಮಗ, ಪತಿ–ಇವರಿಬ್ಬರ ಭಾರವನ್ನೂ ಹೊತ್ತುಕೊಂಡಿತು. ಆಗ ಅವಳ ಪ್ರಾಣವು ಕಾತರದಿಂದ "ಅಯ್ಯೋ, ನನಗಿನ್ನು ತಡೆಯಲು ಸಾಧ್ಯವೇ ಇಲ್ಲ" ಎಂದು ಗೋಳಿಟ್ಟಿತು. ಆದರೂ ಅವಳದನ್ನ ತಡೆಯಲೇಬೇಕಾಯಿತು.

೫

ಆಗ ರಾತ್ರಿ ಬಹಳವಾಗಿತ್ತು. ಗಂಭೀರವಾದ ಶೋಕದ ಗ್ಲಾನಿಯಿಂದ ಕೇವಲ ಕ್ಷಣಕಾಲ ರಾಸಮಣಿಯು ನಿದ್ದೆಯ ಜೊಂಪು ಹತ್ತಿ ಮಲಗಿದ್ದಳು. ಆದರೆ ಭವಾನೀಚರಣನಿಗೆ ಆ ಅದೃಷ್ಟವೂ ಇಲ್ಲ. ಸ್ವಲ್ಪ ಹೊತ್ತು ಮಂಚದ ಮೇಲೆ ಅತ್ತಿಂದಿತ್ತ ಹೊರಳಾಡಿ ಕಡೆಗೆ ನಿಟ್ಟುಸಿರು ಬಿಟ್ಟು "ದಯಾಮಯ ಹರೀ" ಎಂದು ಕೂಗುತ್ತ

ಎದ್ದು ಬಂದುಬಿಟ್ಟ. ಕಾಳೀಪದನು ಕಲಿಕತ್ತೆಗೆ ಹೋಗುವ ಮೊದಲು, ಗ್ರಾಮದ ಶಾಲೆಯಲ್ಲಿ ಓದುತ್ತಿದ್ದಾಗ ಅವನು ವ್ಯಾಸಂಗಮಾಡುತ್ತಿದ್ದ ಕೋಣೆಯೊಂದಿತ್ತು. ಭವಾನೀಚರಣನು ನಡುಗುವ ಕೈಯಲ್ಲಿ ಹಣತೆ ಹಿಡಿದುಕೊಂಡು ಆ ಶೂನ್ಯವಾಗಿದ್ದ ಕೋಣೆಯನ್ನು ಹೊಕ್ಕ. ರಾಸಮಣಿಯು ಕೈಯಾರೆ ಹೆಣೆದು ಚಿತ್ತಾರಮಾಡಿದ್ದ ಹರಿದ ಮಗ್ಗುಲ ಹಾಸುಗೆ ಮಂಚದ ಮೇಲಿನ್ನೂ ಹರವಿತ್ತು.

ಅದರ ಮೇಲೆ ಈಗಲೂ ಮಸಿಯ ಮಚ್ಚೆಗಳು ಕಾಣುತ್ತಿವೆ. ಸುಣ್ಣವಿಲ್ಲದ ಹಳೆಯ ಗೋಡೆಯ ಮೇಲೆ ಅವನು ಮಾಡಿದ್ದ ರೇಖಾಗಣಿತದ ಗೆರೆಗಳು, ತ್ರಿಕೋಣಗಳು ಈಗಲೂ ಅಳಿಸಿಹೋಗದೆ ಅಣಕವಾಡುತ್ತಿವೆ. ಮಂಚದ ಒಂದು ಮೂಲೆಯಲ್ಲಿ ಅದೆಷ್ಟು ಕೈಗಳಿಂದ ರಟ್ಟು ಹಾಕಲ್ಪಟ್ಟಿರುವ ಕೊಳಕು ಕಾಗದಗಳ ಪುಟಗಳುಳ್ಳ ಮೂರನೇ ಭಾಗದ ರಾಯಲ್ ರೀಡರಿನ ಹರಿದ ಅವಶೇಷವು ಇನ್ನೂ ಬಿದ್ದಿದೆ. ಅಲ್ಲದೆ,...ಅಯ್ಯಯ್ಯೋ! ಅವನ ಎಳೆಯ ವಯಸ್ಸಿನ ಎಳೆಯ ಪಾದಗಳ ಒಂದು ಜತೆ ಮೆಟ್ಟುಗಳು ಕೋಣೆಯ ಯಾವುದೋ ಒಂದು ಮೂಲೆಯಲ್ಲಿ ಬೇರೆಲ್ಲ ಕೆಲಸಕ್ಕೆ ಬಾರದ ಹಳೆಯ ಸರಕುಗಳ ನಡುವೆ ಯಾರೂ ನೋಡಿಯೂ ನೋಡದೆ ಇರುವ ಹಾಗೆ ಬಿದ್ದುಕೊಂಡಿದ್ದುದು, ಈಗೇಕೋ ಅವಕ್ಕೆ ಅಕಸ್ಮಾತ್ ದೊಡ್ಡತನ ಬಂದಂತಾಗಿ 'ನಾವಿಲ್ಲಿದ್ದೇವೆ ನೋಡು' ಎಂದು ತೋರಿಸಿಕೊಳ್ಳಬೇಕೆ? ಈ ಹಾಳು ಹಳೆಯ ಮರವೆಯ ಲೋಕಕ್ಕೆ ಸೇರಿದ್ದ ಈ ಪುಟ್ಟ ಮೆಟ್ಟಿನ ಜೋಡಿಯನ್ನು ನೋಟದಿಂದ ಮರೆಮಾಡಬಲ್ಲ ಯಾವ ದೊಡ್ಡ ವಸ್ತುವೂ ಇಲ್ಲ, ಈ ಇಡೀ ಪ್ರಪಂಚದಲ್ಲಿಂದು!

ಗೂಡಿನಲ್ಲಿ ಹಣತೆಯಿಟ್ಟು ಭವಾನೀಚರಣನು ತನ್ನ ಮಗನ ಮಂಚದ ಮೇಲೆ ಬಂದು ಕೂತ. ಒಣಗಿಹೋಗಿದ್ದ ಕಣ್ಣುಗಳಿಂದ ನೀರು ಸೋರಲಿಲ್ಲ. ಆದರೆ ಎದೆಯೊಳಗಡೆ ಮಾತ್ರ ತಡೆಯಲಾರದ ಸಂಕಟ. ಉಸಿರು ಎಳೆದುಕೊಂಡರೆ ಎಲ್ಲಿ ಎಲುಬುಗೂಡೇ ಬಿರಿದುಹೋಗುತ್ತೇನೋ ಎನ್ನಿಸಿತು. ಪೂರ್ವದಿಕ್ಕಿನ ಬಾಗಿಲನ್ನು ತೆರೆದು ಕಟಕಟೆಯ ಕಬ್ಬಿಣದ ಕಂಬಿಯನ್ನು ಹಿಡಿದು ಅದರ ಸಂದುಗಳ ಮೂಲಕ ಹೊರಗೆ ನೋಡಿದ.

ಗವ್ವೆಂದು ಕತ್ತಲು ಮುಸುಗಿದೆ ಎಲ್ಲೆಲ್ಲೂ. ಟಪ್ ಟಪ್ಪೆಂದು ಮಳೆ ಹನಿಯುತ್ತಿದೆ. ಎದುರುಗಡೆ ಗೋಡೆಯಿಂದ ಸುತ್ತುವರಿಯಲ್ಪಟ್ಟ ಒತ್ತಾದ ಮರಗಿಡಗಳ ತೋಟ. ಅದರ ನಡುವೆ ಎಲ್ಲೋ ಒಂದು ಕಡೆ ಕಾಳೀಪದ ತನ್ನ ಓದುವ ಕೋಣೆಯ ಮುಂದುಗಡೆ ಸ್ವಲ್ಪವೇ ಸ್ವಲ್ಪ ಜಾಗದಲ್ಲಿ ಒಂದು ಸಣ್ಣ ಹೂದೋಟ ಮಾಡಿಕೊಳ್ಳಲು ಪ್ರಯತ್ನಿಸಿದ್ದ. ಈಗಲೂ ಅವನು ಕೈಯಾರೆ ನಟ್ಟು ಬೆಳೆಸಿದ್ದ. ನಿತ್ಯಮಲ್ಲಿಗೆಯ ಬಳ್ಳಿ ಚೆನ್ನಾಗಿ ಹಬ್ಬಿ ಮೈ ತುಂಬಾ ಚಿಗುರುಗಳಿಂದ ತುಂಬಿ, ಮೊಗ್ಗು ಹೂಗಳಿಂದ ನಗುನಗುತ್ತಾ ಜೀವಂತವಾಗಿದೆ.

ಇಂದು ಆ ಮಗನು ಅಷ್ಟು ಇಷ್ಟದಿಂದ ಬೆಳೆಸಿದ್ದ, ಹೂದೋಟದ ಕಡೆ ನೋಡುತ್ತ ಉಸಿರೇ ಕೊರಳವರೆಗೂ ಬಂದು ಬಿಗಿಸಿಕೊಂಡಿತ್ತು. ಇನ್ನು ಯಾವ ಆಸೆಯನ್ನೂ ಇಟ್ಟುಕೊಳ್ಳಲಾಗದು. ಗ್ರೀಷ್ಮಕಾಲ. ನವರಾತ್ರೆ ದುರ್ಗಾಪೂಜೆಯು ಹತ್ತಿರವೇ, ಕಾಲೇಜುಗಳಿಗೆ ರಜ ಬರುವ ಸಮಯ. ಆದರೆ ಯಾರು ಬರುತ್ತಾರೆಂದು ಇನ್ನು ಈ ದಿಕ್ಕು ಕೆಟ್ಟ ದರಿದ್ರ ಮನೆ ಬಾಗಿಲು ತೆಗೆದುಕೊಂಡು ಕಾದಿರಬೇಕು?... "ಅಯ್ಯೋ, ನನ್ನಪ್ಪಾ...ಮಗನೇ!" ಎಂದು ತಡೆಯಲಾಗದ ಕೂಗೊಂದು ಅವನ ಕೊರಳಿಂದ, ಕರುಳಿಂದ ಹೊರಬಿತ್ತು. ಕೂಡಲೇ ಧಸಕ್ಕೆಂದು ನೆಲದ ಮೇಲೆ ಹಾಗೇ ಕುಸಿದು ಬಿದ್ದ.

ಕಾಳೀಪದನು ತನ್ನ ತಂದೆಯ ದಾರಿದ್ರ್ಯವನ್ನು ಹೋಗಲಾಡಿಸಲೆಂದೇ ಕಲಿಕತ್ತೆಗೆ ಹೋಗಿದ್ದು. ಆದರೆ ಆದದ್ದೇನು? ಮುದಿ ತಂದೆಯನ್ನು 'ನೀನೇ' ಅನ್ನುವವರು ಯಾರೂ ಇಲ್ಲದೆ ನಿರಾಧಾರವಾಗಿ ಮಾಡಿಬಿಟ್ಟು ಹೋದನಲ್ಲ! ಹೊರಗಡೆ ಮಳೆ ಇನ್ನೂ ಜೋರಾಗಿ ಬೀಳಹತ್ತಿತು.

ಇಂತಹ ಸಮಯದಲ್ಲಿ ಮಬ್ಬಿನಲ್ಲಿ ಒಣಗಿದೆಲೆ, ಹುಲ್ಲುಗಳ ಮಧ್ಯೆ ಹೆಜ್ಜೆಯ ಶಬ್ದ ಕೇಳಬಂತು. ಭವಾನೀಚರಣನ ಎದೆ ಡವಡವ ಹೊಡೆದುಕೊಂಡಿತು. ಇದೇನು ಶಬ್ದ! ಯಾರು ಬರುತ್ತಿರುವುದು? ಯಾವುದನ್ನ ಆಸೆಪಡುವುದೇ ಅಸಾಧ್ಯವೋ ಅದನ್ನೆ ಕೊನರಿಸಿಕೊಂಡು ಆ ಕಡೆ ನೋಡಹತ್ತಿದ. ಕಾಳೀಪದನೇ ಬಹುಶಃ ತನ್ನ ಹೂದೋಟ ನೋಡಲು ಬಂದಿದ್ದಾನೇನೋ! ಅಯ್ಯೋ, ಆದರೆ ಈ ಮಳೆ ಜೋರೋ ಎಂದು ಸುರಿಯುತ್ತಿದೆಯಲ್ಲ...ನೆನೆದುಹೋದರೆ ಮಗು! ನಿರರ್ಥಕವಾಗಿ, ಅಸಂಭವದ ಬಗ್ಗೆ ಉದ್ವೇಗವನುಭವಿಸಿ ಅವನ ಮನಸ್ಸು ಸುಮ್ಮನೆ ತಲ್ಲಣಿಸಿತು. ಇಂತಹ ಸಮಯದಲ್ಲಿ ಕಟಕಟೆಯ ಹೊರಗಡೆ ಯಾರೋ ಮನೆಯ ಮುಂದೆ ಬಂದು ನಿಂತುಕೊಂಡಂತೆ ಅನ್ನಿಸಿತು. ಹೊದ್ದುಕೊಂಡಿದ್ದ ಚಾದರವನ್ನೇ ತಲೆಯ ಮೇಲೆ ಮುಸುಕು ಹಾಕಿಕೊಂಡಿದ್ದಂತಿತ್ತು. ಮುಖ ಕಾಣಬರುತ್ತಿರಲಿಲ್ಲ. ಆದರೆ...ಅವನ ತಲೆಯ ಮಾಟವೆಲ್ಲ ಕಾಳೀಪದನ ತಲೆಯಂತೆಯೇ.

"ಬಂದೆಯಾಪ್ಪಾ ಮಗೂ!"

ಎನ್ನುತ್ತ ಭವಾನೀಚರಣ ಸರಕ್ಕನೆ ಎದ್ದು ಹೊರಬಾಗಿಲನ್ನು ತೆರೆಯಲು ಹೋದ. ಬಾಗಿಲನ್ನು ತೆರೆದು ತೋಟಕ್ಕೆ ಬಂದು ಮನೆಯ ಮುಂದುಗಡೆ ಬಂದು ನಿಂತು ನೋಡಿದ. ಎಲ್ಲೂ ಯಾರೂ ಇಲ್ಲ. ಆ ಮಳೆಯಲ್ಲಿ ನೆನೆದುಕೊಂಡೇ ತೋಟದಲ್ಲೆಲ್ಲಾ ಓಡಾಡಿ ಕಣ್ಣಲ್ಲಿ ಕಣ್ಣಿಟ್ಟು ಹುಡುಕಿದ. ಆ ಮಬ್ಬು ತುಂಬಿದ ರಾತ್ರಿಯಲ್ಲಿ ನಿಂತು ಒಡೆದ ಕಂಠದಿಂದ "ಕಾಳೀಪದಾ!" ಎಂದೊಂದು ಕೂಗು ಹಾಕಿದ. ಜವಾಬೇ ಇಲ್ಲ. ಸದ್ದಿಲ್ಲ!...ಸ್ವಲ್ಪ ಹೊತ್ತಿಗೆ ಆ ಕೂಗು ಕೇಳಿ ನೌಕರ ಆಕಳ

ದೊಡ್ಡಿಯಿಂದ ಹೊರಗೆ ಬಂದು ಮುದುಕನನ್ನ ಸಂತೈಸಿ ಏನ್ನೋ ಹೇಳಿ ನಿಧಾನವಾಗಿ ಒಳಗಡೆ ಕರೆದುಕೊಂಡು ಬಂದ.

ಮರುದಿನ ಬೆಳಗ್ಗೆ ನಟೂ ಕಸ ಗುಡಿಸಲು ಹೋದವನು ಕಟಕಟೆಯ ಸಮೀಪದಲ್ಲಿ ಮನೆಯೊಳಗಡೆ ಗಂಟಿನಲ್ಲಿ ಕಟ್ಟಿದ್ದ ಏನೋ ಪದಾರ್ಥವೊಂದು ಬಿದ್ದಿದ್ದನ್ನ ನೋಡಿ ತೆಗೆದುಕೊಂಡು ಬಂದ. ಭವಾನೀಚರಣನ ಕೈಯಲ್ಲಿ ಕೊಡುತ್ತಲೂ ಅವನದನ್ನ ಬಿಚ್ಚಿ ನೋಡಿದ. ಯಾವುದೋ ಹಳೆಯ ದಸ್ತಾವೇಜಿನ ಕಾಗದ. ಕನ್ನಡಕ ತೆಗೆದು ಹಾಕಿಕೊಂಡು ನೋಡಿದ – ಓದಿದೊಡನೆ "ಹಾ" ಎಂದು ಕೂಗುತ್ತ ಅವಸರವಸರವಾಗಿ ಓಡಿ ರಾಸಮಣಿಯ ಬಳಿ ಬಂದು ಅವಳ ಮುಂದೆ ಆ ಕಾಗದವನ್ನು ಹರಡಿ ತೋರಿಸಿದ.

"ಏನೂಂದರೆ ಅದು?" ಎಂದಳು ರಾಸಮಣಿ.

"ಅದೇ ಕಣೆ...ಆ ಉಯಿಲು..."

"ಯಾರು ಕೊಟ್ಟರಿದನ್ನ?"

"ಇನ್ನು ಯಾರು ಹೇಳು...ಅವನೇ...ನಿನ್ನೆ ರಾತ್ರಿ ಬಂದಿದ್ದ...ಅವನೇ ಕೊಟ್ಟುಹೋದ...ಮಗು!" ಆಗ ರಾಸಮಣಿಯು ಗಂಡನ ಕಡೆ ಅರ್ಥವಾಗದಂತೆ ದಿಟ್ಟಿಸಿ ನೋಡುತ್ತ "ಏನಾಗತ್ತೆ ಇದರಿಂದ?" ಎಂದಳು... "ಏನೂ ಇಲ್ಲ...ಏನೂ ಇಲ್ಲ..."

"ಇನ್ನದರಿಂದ ಏನಾಗಬೇಕು ನಮಗೆ?" ಎನ್ನುತ್ತ ಭವಾನೀಚರಣನು ಅದನ್ನು ಚೂರು ಚೂರಾಗಿ ಹರಿದು ಒಗೆದುಬಿಟ್ಟ.

ಈ ಸುದ್ದಿಯು ಗ್ರಾಮದಲ್ಲೆಲ್ಲಾ ಹರಡಿಹೋಯಿತು. ಬಗಲಾಚರಣನು ತಲೆಯಲ್ಲಾಡಿಸುತ್ತ ಹೆಮ್ಮೆಯಿಂದ "ಅಂತೂ ನಾನು ಹೇಳಿದ ಹಾಗೆ ಆಯಿತು. ಕಾಳೀಪದನಿಂದಲೇ ಆ ಉಯಿಲು ವಾಪಸು ಬರುವುದೆಂದು ಹೇಳಿದ್ದೆ..." ಎಂದ.

ರಾಮಚರಣನೆಂಬ ದಿನಸಿ ಅಂಗಡಿ ಮಾಲಿಕ ಬಂದು "ಆದರೆ ಅಯ್ಯ ನೋರೆ, ನಿನ್ನೆ ರಾತ್ರಿ ಹತ್ತು ಘಂಟೆಯ ಗಾಡಿ ಸ್ಟೇಷನ್ನಿಗೆ ಬಂದು ತಲಪಿದಾಗ ಒಬ್ಬ ಚೆನ್ನಾಗಿರುವ ಹುಡುಗ ನನ್ನ ಅಂಗಡಿಗೆ ಬಂದವನೇ 'ಚೌಧುರಿಯವರ ಮನೆಯ ದಾರಿ ಯಾವುದು' ಎಂದು ಕೇಳಿದ. ನಾನವನಿಗೆ ದಾರಿ ತೋರಿಸಿ ಕೊಟ್ಟೆ. ಅವನ ಕೈಯಲ್ಲೇನೋ ಇದ್ದದು ಕಂಡೆ" ಎಂದ.

"ಅರೇ, ಹೋಗು ಹೋಗಲೇ, ನೀನು ಕಂಡೆಯಂತೆ!... ಏನು ಕನಸೇ?" ಎಂದು ಬಗಲಾಚರಣನು ಅವನ ಮಾತನ್ನು ಅಲ್ಲಗಳೆದು ಕಳುಹಿಸಿಬಿಟ್ಟ.

೫. ಹಠಸಾಧನೆ

೧

ಬಂಶೀವದನನು ತನ್ನ ತಮ್ಮ ರಸಿಕನನ್ನು ಪ್ರೀತಿಸುತ್ತಿದ್ದಷ್ಟು ಗಾಢವಾಗಿ ಪ್ರಪಂಚದಲ್ಲಿ ಯಾವ ತಾಯಿಯೂ ಮಗನನ್ನ ಪ್ರೀತಿಸಲಾರಳು. ಶಾಲೆಯಿಂದ ರಸಿಕ ಮರಳಿ ಬರುವುದು ಸ್ವಲ್ಪ ತಡವಾದರೂ ಸಾಕು, ಆಗ ಇದ್ದ ಕೆಲಸವನ್ನೆಲ್ಲ ಬಿಟ್ಟು ಅವನನ್ನರಸಿಕೊಂಡು ಓಡುತ್ತಿದ್ದ. ಅವನಿಗೆ ಊಟ ಉಣಿಸದೆ ತಾನೆಂದೂ ಉಣ್ಣಲಾಗುತ್ತಿರಲಿಲ್ಲ. ಅವನಿಗೆ ಒಂದಿಷ್ಟು ಮೈ ಕೆಟ್ಟುಹೋದರೂ ಬಂಶಿಯ ಕಣ್ಣಲ್ಲಿ ನೀರು ತೊಟ್ಟಿಕ್ಕುತ್ತಿತ್ತು.

ರಸಿಕನು ಬಂಶಿಗಿಂತಲೂ ಹದಿನಾರು ವರುಷ ಕಿರಿಯ. ನಡುವೆ ಕೆಲ ಸೋದರ, ಸೋದರಿಯರು ಹುಟ್ಟಿದ್ದವರು, ಎಲ್ಲರೂ ಸತ್ತುಹೋಗಿದ್ದರು. ಕೇವಲ ಈ ಕಟ್ಟಕಡೆಯ ಮಗುವನ್ನು ಬಿಟ್ಟು, ರಸಿಕನಿಗೆ ಒಂದು ವರುಷವಾಗಿದ್ದಾಗ, ಅವನಮ್ಮನೂ ಹೋಗಿಬಿಟ್ಟಳು. ರಸಿಕನಿಗೆ ಮೂರು ವರುಷಗಳಾದಾಗ ಅಪ್ಪನೂ ಹಿಂಬಾಲಿಸಿದ. ಈಗ ರಸಿಕನನ್ನು ದೊಡ್ಡವನನ್ನಾಗಿ ಮಾಡುವ ಭಾರ ಅಣ್ಣ ಬಂಶಿಯ ಹೆಗಲ ಮೇಲೆ.

ಬಂಶಿಯ ವಂಶವೃತ್ತಿ ನೆಯಿಗೆ. ಈ ಕಸಬನ್ನು ನಡೆಸಿಕೊಂಡೇ ಬಂಶಿಯ ಮುದಿ ಅಜ್ಜ, ಅಭಿರಾಮ ಬಸಕನು ಆ ಗ್ರಾಮದಲ್ಲೊಂದು ದೇವರ ಗುಡಿಯನ್ನು ಕಟ್ಟಿಸಿದ್ದ. ಈಗಲೂ ಅದರಲ್ಲಿ ರಾಧಾನಾಥ ಮೂರ್ತಿಯ ಪೂಜೆಯಾಗುತ್ತಿರುತ್ತದೆ. ಆದರೆ ಕಡಲು ದಾಟಿಕೊಂಡು ಯಂತ್ರದೈತ್ಯನೊಬ್ಬ ಬಂದು, ಬಡಪಾಯಿ ನೆಯಿಗೆಯವರ ಮೇಲೆ ಕರುಬಿ ಅವರನ್ನವನ್ನು ಕಸಿದುಕೊಳ್ಳಲಾರಂಭಿಸಿದ. ನೆಯಿಗೆಯವರ ಮನೆಗಳಲ್ಲಿ ಹಸಿವಿನ ಭೂತವನ್ನು ಕೂಡಿಸಿಟ್ಟು, ಹೆಮ್ಮೆಯಿಂದ ಹೊಗೆ ಬಿಡುತ್ತ ಆಗಾಗ ಕೊಳವೆಯಿಂದ ಹೂಂಕರಿಸಿ ತನ್ನ ದೊಡ್ಡತನವನ್ನ ಲೋಕಕ್ಕೆ ತೋರಿಕೊಳ್ಳತೊಡಗಿದ.

ಆದರೂ ನೆಯಿಗೆಯವರ ಗಟ್ಟಿ ಜೀವವು ಸುಮ್ಮನೆ ಹೋಗಲೊಪ್ಪದೆ, ಠೂಕ್‌ಠಾಕ್, ಠೂಕ್‌ಠಾಕ್ ಎನ್ನುತ ದಾರವನ್ನ ಹಲ್ಲಿಗೆ ಕಚ್ಚಿಕೊಂಡು ಮಗ್ಗವನ್ನು ಇನ್ನೂ ನಡೆಸಿಕೊಂಡು ಹೋಗುತ್ತಲಿದೆ. ಏನಾದರೇನು, ಅವರುಗಳು ಇದುವರೆಗೆ ನಂಬಿಕೊಂಡಿದ್ದ ಚಂಚಲಲಕ್ಷ್ಮಿಯ ಮನವೊಲಿಸಲಾಗಲಿಲ್ಲ. ಆ ಹಾಳು ಕಬ್ಬಿಣದ

ದೈತ್ಯ, ಯಂತ್ರ, ತಂತ್ರ, ಕೌಶಲಗಳಿಂದ ಅವಳನ್ನು ಪೂರ್ತಿಯಾಗಿ ವಶಮಾಡಿಕೊಂಡುಬಿಟ್ಟಿದ್ದ.

ಬಂಶಿಗೆ ಮಾತ್ರ ಇನ್ನೂ ಒಂದು ಆಧಾರವಿತ್ತು, ಸದ್ಯ. ಥಾನಾಗಡದ ಜಮೀನ್ದಾರ ಬಾಬುಗಳು ಅವನ ಖಾಯಂ ವರ್ತನೆಯ ಗಿರಾಕಿಗಳು. ಅವರ ಅಪಾರವಾದ ಕುಟುಂಬ, ಪರಿವಾರದವರಿಗೆಲ್ಲ ಬೇಕಾದ ನಾಜೂಕು ಅರಿವೆಗಳನ್ನು ಬಂಶಿಯೇ ನೆಯಿದು ಕೊಡಬೇಕು. ಒಬ್ಬನೇ ಅಷ್ಟು ಕೆಲಸ ಮಾಡಲಾರ. ಸಹಾಯಕ್ಕೆ ಆಳುಗಳನ್ನಿರಿಸಿಕೊಳ್ಳಬೇಕಾಯಿತು.

ಅವರ ಜಾತಿಯಲ್ಲಿ ಮದುವೆ ಹೆಣ್ಣುಗಳ ಬೆಲೆ ಹೆಚ್ಚಾದರೂ ಪ್ರಯತ್ನ ಪಟ್ಟಿದ್ದರೆ ಬಂಶಿಯು ಇಷ್ಟು ದಿನಗಳಲ್ಲಿ ಹೇಗೋ ಒಬ್ಬ ಮಡದಿಯನ್ನು ಮನೆಗೆ ಕರೆತರಬಹುದಾಗಿತ್ತು. ಆದರೆ ರಸಿಕನ ಬಗ್ಗೆ ಯೋಚನೆಮಾಡಿಯೇ ಆ ಕೆಲಸಮಾಡಲು ಮನ ಬರಲಿಲ್ಲ. ಪ್ರತಿ ನವರಾತ್ರೆ ಹಬ್ಬದ ಸಮಯದಲ್ಲಿ ರಸಿಕನಿಗಾಗಿ ಕಲಿಕತ್ತೆ ಕಡೆಯಿಂದ ತರಿಸುತ್ತಿದ್ದ ಬಟ್ಟೆ, ಬರೆ ಅಲಂಕಾರಗಳನ್ನು ಕಂಡಿದ್ದರೆ ಯಾವ ಅರಸುಗುವರನೂ ಕರುಬಬೇಕು. ಈ ಬಗೆಯಾಗಿಯೇ ಇನ್ನೂ ಎಷ್ಟೋ ವಿಷಯಗಳಲ್ಲಿಯೂ ರಸಿಕನಿಗೆ ಉಪಯೋಗವಿರುವುದೂ ಇಲ್ಲದ್ದನ್ನು ಕೂಡ ತರಿಸಿಕೊಡುವುದರಲ್ಲಿ ಬಂಶಿಯು ತನಗೇ ಉಪಯೋಗ, ಆವಶ್ಯಕವಾದವುಗಳ ಕಡೆ ಕೂಡ ಗಮನವಿಡುತ್ತಿರಲಿಲ್ಲ.

ಇಷ್ಟಾದರೂ ಮನೆ ಬೆಳೆಯಬೇಕಲ್ಲ! ತನಗೊಂದು ಹೆಣ್ಣು ಹುಡುಕಬೇಕು.

ಹುಡುಕುವುದೇನು?...ತಕ್ಕ ಹುಡುಗಿಯೊಬ್ಬಳು ಬಂಶಿಯ ಮನಸ್ಸಿನಲ್ಲಿದಾಳೆ. ಅದಕ್ಕೆ ಬೇಕಾದ ಹಣವನ್ನು ಈಗಲಿಂದ ಕೂಡಿಹಾಕತೊಡಗಿದ. ಏನಿಲ್ಲವೆಂದರೂ ಮುನ್ನೂರು ರೂಪಾಯಿಗಳಷ್ಟು ಕನ್ಯಾಶುಲ್ಕ, ಅಲ್ಲದೆ ನಗ, ನತ್ತುಗಳಿಗಾಗಿ ಇನ್ನೊಂದು ನೂರು ರೂಪಾಯಿ...ಮೊತ್ತ ನಾಲ್ಕುನೂರರಷ್ಟು ಆದರೆ ಸಾಕು. ಮನೆಗೆ ಹೆಂಡತಿ ಬರುತ್ತಾಳೆ ಎಂದುಕೊಂಡು ಸ್ವಲ್ಪ ಸ್ವಲ್ಪವಾಗಿ ದುಡ್ಡು ಕೂಡಿಡಲು ತೊಡಗಿದ. ಕೈಯಲ್ಲೇನು ಅಷ್ಟಾಗಿ ಹಣ ಓಡಾಡುತ್ತಿಲ್ಲವಾದರೂ ಸಮಯ ಬೇಕಾದಷ್ಟಿತ್ತು. ಹುಡುಗಿಯ ವಯಸ್ಸಿನ್ನೂ ನಾಲಕ್ಕು. ನಾಲ್ಕೈದು ವರುಷಗಳಾದರೂ ಅವಧಿಯಿದೆ.

ಆದರೆ ಒಂದು ಆತಂಕ. ಅವನ ಜಾತಕದಲ್ಲಿ ಸಂಚಯಸ್ಥಾನದ ಮೇಲೆ ದೃಷ್ಟಿಯಿದ್ದದ್ದು ಶನಿಯದಲ್ಲದೆ ಹೋದರೂ ರಸಿಕನದು ಬೇಕಾದಷ್ಟಿತ್ತು.

ರಸಿಕ ಆ ಗ್ರಾಮದ ಸಣ್ಣ ಮತ್ತು ಸಮವಯಸ್ಸಿನ ಹುಡುಗರಿಗೆಲ್ಲ ಸರದಾರ. ಸುಖದಲ್ಲೇ ಬೆಳೆದ ಮತ್ತು ಕೇಳಿದುದನ್ನು ಪಡೆದು ಅಭ್ಯಾಸವಿರುವಂಥವರನ್ನ ಕಂಡರೆ ಅಂತಹ ಭಾಗ್ಯ ಪಡೆದು ಬರದೆ ಇರುವ ನತದೃಷ್ಟರಿಗೇನೋ ಒಂದು ಬಗೆಯ ಆಕರ್ಷಣವಿರುತ್ತದೆ. ಅಂತಹವರೊಂದಿಗೆ ಮೈ ತಗುಲುವಷ್ಟು ಸಲಿಗೆಯಾದರೆ

ಸಾಕು. ಏನೋ ಅತಿ ಇಷ್ಟವಾದ ವಸ್ತು ಲಭ್ಯವಾದಷ್ಟು ತೃಪ್ತಿ, ಸಂತೋಷ. ಬೇಕಾದಷ್ಟು ಇರುವವನ ಬಳಿ ಹೋದರೆ ಕೇಳಿದ್ದು ಕೊಡಬಲ್ಲನೆಂಬ ಆಸೆಯಿಂದಲ್ಲ ಅವನೇನೂ ಕೊಡದೇ ಹೋದರೂ ಸರಿ, ಅವರ ಲುಬ್ಧ ಕಲ್ಪನೆಯನ್ನು ತೃಪ್ತಿಪಡಿಸಬಲ್ಲ.

ಕೇವಲ ರಸಿಕನ ಶೋಕಿಯೇ ಗ್ರಾಮದ ಹುಡುಗರ ಮನಸ್ಸನ್ನ ಸೆಳೆದಿತ್ತೆಂದು ಹೇಳಿದರೆ ಅನ್ಯಾಯವಾಗುತ್ತದೆ. ಎಲ್ಲ ವಿಷಯಗಳಲ್ಲೂ ರಸಿಕನಿಗೆ ಒಂದು ಅಸಾಧಾರಣ ನಿಪುಣತೆಯಿತ್ತು. ಆ ನೈಪುಣ್ಯವನ್ನು ಕಂಡೇ ಅವನಿಗಿಂತಲೂ ಮೇಲುವಂಶದ ಹುಡುಗರೆಲ್ಲ ಅವನ ಬಗ್ಗೆ ಅಷ್ಟು ಗೌರವದಿಂದ ಕಾಣುತ್ತಿದ್ದುದು. ಅವನು ಯಾವ ಕೆಲಸಕ್ಕೆ ಕೈಹಾಕಲಿ, ಅದರಲ್ಲಿ ಅವನ ದಕ್ಷತೆ, ಜಾಣತನ ಎದ್ದು ಕಾಣುತ್ತಿತ್ತು. ಅವನ ಮನಸ್ಸಿನ ಮೇಲೆ ಯಾವ ಪೂರ್ವ ಸಂಸ್ಕಾರದ ಮೌಢ್ಯವೂ ಹೊರಿಸಲ್ಪಟ್ಟಿರಲಿಲ್ಲವೆನ್ನುವಂತೆ, ಅವನು ಯಾವುದನ್ನು ಕಂಡರೂ ಅದನ್ನು ಒಂದು ಕ್ಷಣದಲ್ಲಿ ಅರ್ಥಮಾಡಿಕೊಂಡುಬಿಡುತ್ತಿದ್ದ.

ರಸಿಕನ ಈ ಕಾರ್ಯದಕ್ಷತೆಯನ್ನು ಕಂಡು ಅವನ ಬಳಿಗೆ ಸಣ್ಣ ಹುಡುಗ, ಹುಡುಗಿಯರೇ ಅಲ್ಲದೆ ಅವರ ಮನೆಯ ದೊಡ್ಡವರು ಕೂಡ ಬಂದು ಬೇಕಾದ ಕೆಲಸಮಾಡಿಸಿಕೊಂಡು ಹೋಗುತ್ತಿದ್ದರು. ಆದರೆ ಅವನಲ್ಲಿ ಒಂದು ತಪ್ಪಿತ್ತು. ಯಾವುದೊಂದೇ ಕೆಲಸದಲ್ಲಿ ಅವನು ಹೆಚ್ಚು ದಿನ ಮನಸ್ಸಿಡುತ್ತಿರಲಿಲ್ಲ. ಒಂದು ವಿದ್ಯೆಯನ್ನು ಚೆನ್ನಾಗಿ ವಶಮಾಡಿಕೊಂಡೊಡನೆ ಅದರಲ್ಲವನ ರುಚಿ ಕೆಡುತ್ತಿತ್ತು. ಆಗ ಬೇರೆಯವರು ಬಂದು ಅವನನ್ನ ಅದರಲ್ಲಿ ಮಗ್ನವಾಗುವಂತೆ ಮಾಡಿದರೆ ರೇಗಿಬಿಡುತ್ತಿದ್ದ. ಜಮೀನ್ದಾರ ಬಾಬುಗಳ ಮನೆಗೆ ದೀಪಾವಳಿ ಉತ್ಸವಕ್ಕೆ ಕಲಿಕತ್ತೆಯಿಂದ ಬಾಣಬಿರುಸುಗಳವನೊಬ್ಬ ಬಂದಿದ್ದ. ಅವನ ಬಳಿ ಹೋಗಿ ರಸಿಕನು ಪಟಾಕಿ, ಬಾಣ, ಬಿರುಸುಗಳು ಮಾಡುವ ವಿದ್ಯೆಯನ್ನು ಕಲಿತುಬಿಟ್ಟ. ಮತ್ತು ಎರಡೇ ವರುಷಗಳಲ್ಲಿ ಗ್ರಾಮದಲ್ಲಿ ಕಾಳೀ ಪೂಜೆಯುತ್ಸವವನ್ನು ಬೆಳಕು ಬಾಣಗಳ ಹಬ್ಬವಾಗಿ ಮಾಡಿಬಿಟ್ಟಿದ್ದ. ಮೂರನೇ ವರುಷ ಅವನಿಗೆಷ್ಟು ಹೇಳಿದರೂ ಅವನಿಂದ ಬಾಣ, ಬಿರುಸುಗಳು ತಯಾರಾಗಲಿಲ್ಲ. ರಸಿಕನಾಗ ಉದ್ದನೆಯ ನಿಲುವಂಗಿ (ಚಾಪ್‌ಕಾನ್), ಇಜಾರ ಧರಿಸಿ, ಎದೆಯ ಮೇಲೆ ಮೆಡಲುಗಳನ್ನು 'ಮೆರವಣಿಗೆ' ಮಾಡಿಕೊಳ್ಳುವ ಒಬ್ಬ ಆಧುನಿಕ ನಾಟಕ ಕಂಪೆನಿಯವನೊಬ್ಬನ ಮಾದರಿಗೆ ಮನಸೋತು ಬಾಕ್ಸ್‌ಹಾರ್ಮೋನಿಯಮ್ಮನ್ನು ನುಡಿಸುವ ವಿದ್ಯೆ ಕಲಿತುಬಿಟ್ಟು ಒಮ್ಮೆಗೇ ಲಕ್ನೌ 'ಟುಮ್ರಿ' ಸಂಗೀತವನ್ನು ಅಭ್ಯಾಸ ಮಾಡಲು ತೊಡಗಿದ.

ಅವನ ಸಾಮರ್ಥ್ಯದ ಈ ಹುಚ್ಚಾಟಗಳ ಲೀಲೆಯಲ್ಲಿ ಒಮ್ಮೆ ಅತಿ ಸುಲಭನಾಗಿಯೂ ಇನ್ನೊಮ್ಮೆ ಅತಿ ದುರ್ಲಭನೂ ಆಗಿ, ಮಂದಿಯನ್ನು ಇನ್ನೂ ಬೆರಗುಗೊಳಿಸುತ್ತಿದ್ದ. ಅವನ ಅಣ್ಣನಂತೂ ಎಲ್ಲೂ ಹಿಡಿದಿಟ್ಟುಕೊಳ್ಳಲಾರ. 'ಆಹಾ...ಏನು ಹುಡುಗಾ ನೋಡಿ! ನಮ್ಮಂಥವರ ಮನೆಯಲ್ಲಿ ಅವನು ಹುಟ್ಟುವುದು ಅಂದರೆ

ಏನು, ಸಾಮಾನ್ಯದ ಮಾತಾಯಿತೇ! ಹ್ಹಾ... ಇನ್ನು ಪರವಾಯಿಲ್ಲ...ಇನ್ನು ಹೇಗಾದರೂ ಬದುಕಿ ಬಾಳಿದರೆ ಸಾಕು...' ಎಂದುಕೊಳ್ಳುತ್ತಿದ್ದ. ಹೀಗೆ ಯೋಚಿಸುತ್ತ ಇದ್ದಕ್ಕಿದ್ದ ಹಾಗೆ ಪುಳಕಗೊಂಡು ಎದೆ ಕರಗಿ ಕಣ್ಣುಗಳೊದ್ದೆಯಾಗುತ್ತಿತ್ತು ಅವನಿಗೆ. ಮನದಲ್ಲೇ ರಾಧಾನಾಥಾ ದೇವರಿಗೆ ಮೊರೆಯಿಡುತ್ತಿದ್ದ. "ಸದ್ಯ ನಾನು ಇವನಿಗೆ ಮೊದಲೇ ಕಣ್ಣು ಮುಚ್ಚಿದರೆ ಪುಣ್ಯ."

ಇಂತಹ ಪ್ರತಿಭಾಶಾಲಿ ತಮ್ಮನ ಹೊಸಹೊಸ ಚಪಲ, ಬಯಕೆಗಳನ್ನು ಪೂರೈಸುತ್ತ ಹೋದಾಗ ಭಾವೀ ಹೆಂಡತಿಯು ಮನೆಗೆ ಬರುವ ಸಂಭವವು ದೂರದ ಭವಿಷ್ಯತ್ತಿನ ನಡುವೆ ಮಾಯವಾಗುತ್ತ ಹೋಗುತ್ತದೆ; ಮತ್ತು ಈ ಕಡೆ ತನ್ನ ವಯಸ್ಸೂ ಇದ್ದ ಕಡೆ ನಿಲ್ಲುವುದಿಲ್ಲ. ಬಂಶಿಯ ವಯಸ್ಸು ಮೂವತ್ತನ್ನು ಮೀರುತ್ತಲೂ,–ಕೂಡಿಡುತ್ತಿದ್ದ ಹಣ ನೂರು ಕೂಡ ತುಂಬಿಲ್ಲ–ಮನಸ್ಸಿನಲ್ಲಿ ನಿಶ್ಚಯ ಮಾಡಿಕೊಂಡಿದ್ದ ಹುಡುಗಿ ಬೇರೊಬ್ಬರ ಮನೆ ಉದ್ಧಾರಮಾಡಲು ಹೊರಟುಹೋದಳು–ಆಗ ಬಂಶೀ ಅಂದುಕೊಂಡ–"ಉಹೂಂ...ಇನ್ನು ಹೆಚ್ಚಿಗೆ ಆಶೆಯಿಲ್ಲ. ಈಗ ಕುಲವನ್ನು ಕಾಪಾಡುವ ಭಾರ ರಸಿಕನೇ ಹೊರಬೇಕಾಗುತ್ತದೆ."

ಗ್ರಾಮದಲ್ಲಿ ಸ್ವಯಂವರ ಪದ್ಧತಿಯೇನಾದರೂ ಇದ್ದಿದ್ದರೆ ಆಗ ರಸಿಕನ ಮದುವೆಯ ಬಗ್ಗೆ ಯಾರೂ ಯೋಚನೆ ಮಾಡಬೇಕಾಗಿರಲಿಲ್ಲ. ವಿಧೂ, ತಾರಾ, ನನೀ, ಶಶೀ, ಸುಧಾ–ಹೀಗೇ ಎಷ್ಟು ಹೆಸರು ಹೇಳೋಣ–ಎಲ್ಲರೂ ರಸಿಕನೆಂದರೆ ನಿಟ್ಟುಸಿರು ಬಿಡುತ್ತಿದ್ದರು. ರಸಿಕನು ಜೇಡಿಮಣ್ಣಿನಲ್ಲಿ ಬೊಂಬೆ ತಯಾರುಮಾಡುವ ಹವ್ಯಾಸದಲ್ಲಿರುವಾಗ, ಪೂರ್ತಿಯಾದ ಬೊಂಬೆಯ ಒಡೆತನದ ಬಗ್ಗೆ ಪರಸ್ಪರ ಪೈಪೋಟಿಯೆದ್ದು ಮನಸ್ತಾಪಗಳೂ ಆಗುತ್ತಿದ್ದುವು. ಈ ಹುಡುಗಿಯರಲ್ಲೆಲ್ಲ ಅತಿ ಶಾಂತ, ಮೃದುಸ್ವಭಾವದವಳೆಂದರೆ ಸೌರಭಿ. ಅವಳಿಗೆ ಸುಮ್ಮನೆ ಕೂತು ರಸಿಕನು ಬೊಂಬೆ ತಯಾರು ಮಾಡುವುದನ್ನು ನೋಡುವುದೆಂದರೆ ಇಷ್ಟ, ಮತ್ತು ಅವನಿಗೆ ಬೇಕಾಗುವ ಮಣ್ಣು, ಕಡ್ಡಿ, ಬಣ್ಣ ಮುಂತಾದುವುಗಳನ್ನು ಕೈಗೆ ತೆಗೆದುಕೊಡುವುದರಲ್ಲಿ ಸಂತೋಷ. ರಸಿಕನು ಅದನ್ನು ಸ್ವಲ್ಪವಾದರೂ ಮೆಚ್ಚಿಕೊಳ್ಳಬೇಕೆಂದು ಅವಳ ಆಸೆ. ಕೆಲಸ ಮಾಡುತ್ತ ಮಾಡುತ್ತ ರಸಿಕನಿಗೆ ಎಲೆ, ಅಡಿಕೆ ಬೇಕಾಗುತ್ತದೆಂದು ತಿಳಿದು ಸೌರಭಿಯು ಅದನ್ನ ಒದಗಿಸಿಕೊಡಬೇಕೆಂದು ಪ್ರತಿದಿನವೂ ವ್ಯಸ್ತಳಾಗಿರುತ್ತಿದ್ದಳು. ರಸಿಕನು ತಾನು ಬೊಂಬೆಗಳನ್ನ ಮಾಡಿ ಮುಗಿಸಿ ಅವಳ ಮುಂದಿಟ್ಟು "ಸೌರಿ, ಇದರಲ್ಲಿ ನಿನಗೆ ಯಾವುದಿಷ್ಟ? ಹೇಳು" ಎಂದು ಕೇಳಿದಾಗ ಅವಳು ಯಾವುದನ್ನಿಷ್ಟ ಪಟ್ಟಿದ್ದರೂ ಅದು ಅವಳದಾಗುತ್ತಿತ್ತು. ಆದರೆ ಸಂಕೋಚದಿಂದ ಅವಳು ಯಾವುದನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ರಸಿಕನೇ ತನಗೆ ಮೆಚ್ಚುಗೆಯಾದುದನ್ನ ತಾನೇ ಆರಿಸಿ

ಅವಳಿಗೆ ತೆಗೆದುಕೊಡುತ್ತಿದ್ದ. ಬೊಂಬೆ ಮಾಡುವ ಪರ್ವವಾದ ಅನಂತರ ಹಾರ್ಮೋನಿಯಮ್ಮನ್ನು ನುಡಿಸುವ ಸರದಿ ಬಂದಾಗ ಹಳ್ಳಿಯ ಹುಡುಗ, ಹುಡುಗಿಯರೆಲ್ಲ ಈ ಯಂತ್ರದ ಮೇಲೆ ಕೈಯಾಡಿಸಲು ತವಕದಿಂದ ನಾನು ತಾನೆಂದು ಮುಂದೆ ಬಂದಾಗ ರಸಿಕನು ಗದರಿಸಿ ದೂರವಿಡುತ್ತಿದ್ದ. ಸೌರಭಿ ಮಾತ್ರ ಸ್ವಲ್ಪವೂ ಆತುರ ತೋರದೆ, ಚಚ್ಚೌಕಗಳಿಂದ ತುಂಬಿದ ಗೆರೆಗಳ ಸೀರೆಯುಟ್ಟು ದೊಡ್ಡ ಕಣ್ಣುಗಳನ್ನರಳಿಸಿ ಎಡಗೈ ಮೇಲೆ ಮೈ ಊರಿಕೊಂಡು, ಮಾತಾಡದೆ ಮುಗ್ಧವಾಗಿ ನೋಡುತ್ತ ಕೂತಿರುತ್ತಿದ್ದಳು. ರಸಿಕನಾಗ "ಬಾ, ಸೌರೀ, ಇದನ್ನೊಂದು ಸಲ ನುಡಿಸುವಿಯಂತೆ" ಎಂದು ಹತ್ತಿರ ಕರೆದರೂ ಅವಳು ನಸುನಕ್ಕು ಮುಂದೆ ಬಾರದೆ ಕೂತಿದ್ದರೂ ರಸಿಕನು ಅವಳನ್ನ ಬಲವಂತವಾಗಿ ಹತ್ತಿರ ಎಳೆದುಕೊಂಡು ತಾನೇ ಅವಳ ಕೈಹಿಡಿದು ಅವಳ ಕೈಬೆರಳುಗಳಿಂದ ಹಾರ್ಮೋನಿಯಮ್ಮಿನ ಮೆಟ್ಟಲುಗಳಿಂದ ಸ್ವರ ಹೊರಡಿಸುತ್ತಿದ್ದ.

ಸೌರಭಿಯ ಅಣ್ಣ ಗೋಪಾಲನೂ ರಸಿಕನ ಭಕ್ತಶ್ರೇಣಿಯಲ್ಲಿ ಒಬ್ಬ ಮುಖ್ಯ. ಸೌರಭಿಗೂ ಅವನಿಗೂ ಒಂದು ವ್ಯತ್ಯಾಸವೇನೆಂದರೆ, ಒಳ್ಳೆಯ ವಸ್ತುವನ್ನು ಪಡೆಯಲು ಅವನು ಶ್ರಮಿಸಲಾಗುತ್ತಿರಲಿಲ್ಲ. ಇಷ್ಟವೇನೋ ಪಡುತ್ತಿದ್ದ, ಸಿಕ್ಕದೆ ಹೋದರೆ ಸಂಕಟವನ್ನೂ ಪಡುತ್ತಿದ್ದ. ಹೊಸ ಬಗೆಯ ಯಾವ ಸಾಮಾನನ್ನ ಕಂಡರೂ ಅದರ ಮೇಲೆ ಅವನಿಗೆ ಆಸೆಯಾಗುತ್ತಿತ್ತು. ರಸಿಕನಿಗೆ ಬೇರೆ ಯಾರಿಂದಲೂ ಆ ಬಗೆಯ ಆಸೆಯನ್ನು ಸಹಿಸುತ್ತಿರಲಿಲ್ಲ. ಆದರೆ ಗೋಪಾಲನನ್ನ ಕಂಡರೆ ಹಾಗಿಲ್ಲ. ಬೇರೆಲ್ಲ ಹುಡುಗರಿಗಿಂತಲೂ ಗೋಪಾಲನಿಗೇ ಅವನ ಬಳಿ ಹೆಚ್ಚು ಪ್ರೋತ್ಸಾಹ.

ಬಂಶಿಯು ಮನದಲ್ಲೇ ನಿಶ್ಚಯಮಾಡಿಕೊಂಡ. 'ಈ ಸೌರಭಿಯ ಸಂಗಡವೇ ರಸಿಕನ ಲಗ್ನ ಮಾಡಿಕೊಡಬೇಕು.'

ಆದರೆ ಸೌರಭಿಯ ಮನೆಯವರು ಅವನ ಮನೆಗಿಂತ ದೊಡ್ಡವರು. ಐದಾರು ನೂರು ರೂಪಾಯಿಗಳಿಗೆ ಕಡಿಮೆಯಿಲ್ಲದೆ ಕೆಲಸವಾಗುವ ಆಸೆಯಿಲ್ಲ.

೨

ಇಷ್ಟು ದಿನ ಬಂಶಿಯು ಎಂದೂ ರಸಿಕನಿಗೆ ತನ್ನ ನೆಯಿಗೆ ಕೆಲಸದಲ್ಲಿ ನೆರವಾಗಲು ಒತ್ತಾಯಪಡಿಸಿದುದಿಲ್ಲ. ದುಡಿತವೆಲ್ಲಾ ತನ್ನ ಹೆಗಲ ಮೇಲೇ ಹೊತ್ತುಕೊಂಡಿದ್ದ. ಈ ಕಡೆ ರಸಿಕನು ಕೆಲಸಕ್ಕೆ ಬಾರದ ಹವ್ಯಾಸಗಳಲ್ಲಿ ಮುಳುಗಿ ಜನರ ಮನೋರಂಜನೆ ಮಾಡುತ್ತಿದ್ದ; ಅದನ್ನ ನೋಡಿಯೇ ಬಂಶಿ ಮೆಚ್ಚಿಕೊಂಡಿದ್ದ. ರಸಿಕ 'ಈ ಅಣ್ಣ ಅದು ಹೇಗೆ ತಾನೇ ಆ ಹಾಳು ಬರೇ ನೂಲುಬಟ್ಟೆ ನೇಯುವುದರಲ್ಲಿ ಕಾಲ ಕಳೆಯುತ್ತಾನೋ...ನನಗಂತೂ ಪ್ರಾಣ ಹೋದರೂ ಇಷ್ಟವಾಗುವುದಿಲ್ಲ ಅದರಲ್ಲಿ' ಎಂದುಕೊಳ್ಳುತ್ತಿದ್ದ. ಅಣ್ಣ ತನ್ನ ನೆಮ್ಮದಿಯ ಬಗ್ಗೆಯೂ ಖರ್ಚುಮಾಡದೆ ಇರುವುದನ್ನ

ಕಂಡು ಈ ಅಣ್ಣ ಏಕೋ ಬಹಳ ಜಿಪುಣಾಗ್ರೇಸರ ಎಂದುಕೊಳ್ಳುತ್ತಿದ್ದ. ತನ್ನ ಅಣ್ಣನ ಬಗ್ಗೆ ಅವನಿಗೊಮ್ಮೊಮ್ಮೆ ನಾಚುಗೆಯಾಗುತ್ತಿತ್ತು. ಎಳೆತನದಿಂದಲೂ ತನ್ನನ್ನೇ ಅವನು ಅಣ್ಣನಿಗಿಂತಲೂ ಎಲ್ಲ ವಿಷಯಗಳಲ್ಲೂ ಬೇರೆ ನಮೂನೆಯ ಮನುಷ್ಯನೆಂದುಕೊಂಡಿದ್ದ. ಆ ಅಣ್ಣನೇ ಅವನಿಗೀಭಾವನೆ ಬರುವಂತೆ ಮಾಡಿದುದು.

ಇಂತಹ ಸಮಯದಲ್ಲಿ ಬಂಶಿಯು ತನ್ನ ಮದುವೆಯ ಬಗ್ಗೆ ಯೋಚನೆಯನ್ನೇ ಪೂರ್ತಿಯಾಗಿ ತೊರೆದು ರಸಿಕನಿಗೆ ಹೆಣ್ಣು ತರುವುದರಲ್ಲಿ ಉತ್ಸುಕನಾದಾಗ ಬರಬರುತ್ತ ತಾಳ್ಮೆಯನ್ನು ಕಳೆದುಕೊಳ್ಳತೊಡಗಿದ. ತಿಂಗಳಾದ ಮೇಲೆ ತಿಂಗಳು ಕಳೆದರೂ ಏನೂ ಆಗಲಿಲ್ಲ. ಇನ್ನು ತಡಮಾಡುವುದೆಂದರೆ ಸಹನೆಯಾಗದು. ಸುಮ್ಮನೆ ಮನದಲ್ಲೇ ತಮ್ಮನ ಮದುವೆಯ ಚಿತ್ರವನ್ನ ಕಲ್ಪಿಸಿಕೊಳ್ಳುವನು. ಓಲಗ ಊದುತ್ತಿದೆ. ದೀಪಗಳುರಿಯುತ್ತಿವೆ. ಚಪ್ಪರ, ಮಂಟಪಗಳೆಲ್ಲ ಸಿಂಗರಿಸಲ್ಪಟ್ಟಿವೆ. ರಸಿಕನ ಲಗ್ನವಾಗುತ್ತಿದೆ...ಈ ಸಂತಸದ ಚಿತ್ರ ಬಂಶಿಯ ಮನದಲ್ಲಿ ಮರುಭೂಮಿಯಲ್ಲಿ ಬಾಯಾರಿದವನ ಕಲ್ಪನೆಯ ಕಾರಂಜಿಯಂತೆ ಸದಾ ಎಚ್ಚತ್ತಿರುತ್ತದೆ.

ಅವನೆಷ್ಟು ಶ್ರಮಿಸಿದರೂ ಬೇಗ ಶೇಖರವಾಗಲು ದುಡ್ಡೇ ಹಿಂಜರಿಯ ಹತ್ತಿದೆ. ಕೂಡಿಹಾಕುತ್ತ ಹೋದಷ್ಟೂ ಪೂರೈಸುವುದಕ್ಕೆ ಇನ್ನೂ ಎಷ್ಟು ದಿನಗಳಪ್ಪಾ ಎನ್ನಿಸುತ್ತದೆ...ಸಾಲದ್ದಕ್ಕೆ ಮನಸ್ಸಿನ ವೇಗಕ್ಕೆ ಸರಿಸಮನಾಗಿ ಮೈ ಹೋಗಲು ಹಿಂದೇಟು ಹಾಕುತ್ತದೆ. ಬಾರಿಬಾರಿಗೂ ಮುರಿದುಬೀಳುತ್ತದೆ, ಎಡೆಬಿಡದ ಉದ್ಯಮದ ಫಲವೇನೆಂದರೆ ಮೈಯಲ್ಲಿ ಇದ್ದ ಬದ್ದ ಬಲವೆಲ್ಲ ಉಡುಗಿಹೋಗುತ್ತ ಬರುತ್ತಿದೆ.

ಗ್ರಾಮವೆಲ್ಲ ನಿದ್ದೆಯಲ್ಲಿ ಮುಳುಗಿರುವಾಗ, ಕೇವಲ ನಿಶಾಚರ, ನಿಶಾಚರಿಯರ ರಕ್ಷಾಭಟರಂತೆ ರಾತ್ರಿಯ ಮೌನವನ್ನು ಕತ್ತರಿಸಿಕೊಂಡು ಜಾವ ಜಾವಕ್ಕೂ ನರಿಗಳು ಕೂಗಿಕೊಂಡು ಹೋಗುತ್ತಿರುವಾಗ, ಮನೆಯೊಳಗೆ ಮಿಕ ಮಿಕನೆ ಹಣತೆಯುರಿಸಿಕೊಂಡು ಬಂಶೀ ಮಗ್ಗ ನಡೆಸುತ್ತಿರುತ್ತಾನೆ. ಹೀಗೆ ಎಷ್ಟು ರಾತ್ರಿಗಳೋ. ಮನೆಯಲ್ಲಿ ಯಾರಿದ್ದಾರೆ ಅವನನ್ನ ಹಾಗೆಲ್ಲ ಮಾಡಬಾರದೆಂದು ತಡೆಯುವುದಕ್ಕೆ? ಸಾಕಷ್ಟು ಸರಿಯಾದ, ಪುಷ್ಟಿಕರ ಆಹಾರ ತಿನ್ನುವುದನ್ನ ಕೂಡ ಬಿಟ್ಟುಬಿಟ್ಟಿದ್ದಾನೆ ಬಂಶಿ. ಮೈ ಮೇಲೆ ಚಳಿ ತಡೆಯುವುದಕ್ಕೆಂದು ಹಾಕಿದ ಬಟ್ಟೆ ಚಿಂದಿಯಾಗಿ, ಎಲ್ಲ ಕಡೆಯೂ ತೂತುಗಳಾಗಿ ಚಳಿಗೆ ಕರೆಗೊಡುತ್ತಿದೆ. ಕಳೆದ ಎರಡು ವರುಷಗಳಿಂದ ಪ್ರತಿ ಮಾಗಿಯ ಕಾಲದಲ್ಲೂ ಬಂಶಿಯು ಮನದಲ್ಲೇ 'ಈ ಸಲ ಹೇಗೋ ಕಳೆದರಾಯಿತು. ಇನ್ನೂ ಸ್ವಲ್ಪ ಕಾಸು ಸೇರಲಿ, ಬರುವ ವರುಷ ಕಾಬೂಲಿನ ಉಣ್ಣೆಬಟ್ಟೆ ವ್ಯಾಪಾರಿ ಗ್ರಾಮಕ್ಕೆ ಬಂದಾಗ ಅವನಿಂದೊಂದು ಬಟ್ಟೆ ಸಾಲವಾಗಿ ಕೊಂಡು ಅದಕ್ಕೆ ಮುಂದಿನ ವರುಷ ತೀರಿಸಿಬಿಟ್ಟರಾಯಿತು. ಅಷ್ಟರಲ್ಲಿ ಸಾಕಷ್ಟು ದುಡ್ಡು ಜಮಾಯಿಸಿರುತ್ತದೆ'–ಎಂದುಕೊಳ್ಳುತ್ತಿದ್ದ. ಆದರೆ ಅಂತಹ ಅನುಕೂಲವಾಗುವ

ವರುಷ ಬಂದರೆ ತಾನೇ? ಹೀಗೇ ಒಂದು ಸಲ ಅವನ ಆರೋಗ್ಯ ಕ್ರಮೇಣ ಕ್ಷೀಣವಾಗುತ್ತ ಬಂದು ಇನ್ನು ಈ ಮೈ ಹೆಚ್ಚು ದಿನ ಉಳಿಯುವುದಿಲ್ಲ ಎನ್ನಿಸಹತ್ತಿತು.

ಇಷ್ಟು ದಿನಗಳಾದ ಮೇಲೆ ಬಂಶಿಯು ತಮ್ಮನನ್ನ ಕುರಿತು "ಲೋ, ರಸಿಕಾ, ನೆಯಿಗೆ ಕೆಲಸವನ್ನು ನಾನಿನ್ನು ಒಬ್ಬನೇ ಮಾಡುವುದಕ್ಕಾಗುವುದಿಲ್ಲಪ್ಪ, ನೀನೂ ಒಂದು ಕೈಹಾಕು ಬಾ" ಎಂದ. ರಸಿಕನು ಉತ್ತರವೇ ಕೊಡದೆ ಮೂತಿಯನ್ನು ಸೊಟ್ಟಮಾಡಿಕೊಂಡ. ಮೈ ಸ್ವಸ್ಥವಿಲ್ಲದಿದ್ದುದರಿಂದ ಬಂಶಿಯ ಪ್ರಕೃತಿಯೂ ಸ್ವಲ್ಪ ಕೆಟ್ಟುಹೋಗಿತ್ತು. ತಮ್ಮನ ವ್ಯವಹಾರ ಕಂಡು ರೇಗಿದ, ನಾಲ್ಕಾರು ಮಾತಾಡಿದ. "ಅಲ್ಲೋ, ಅಜ್ಜನ ಕಾಲದಿಂದ ಬಂದ ಕಸಬು ಬಿಟ್ಟುಬಿಟ್ಟು ಹಗಲುರಾತ್ರಿ ಮಜಾ ಮಾಡಿಕೊಂಡು ತಿರುಗುತಾಯಿದ್ದೀಯಲ್ಲಾ? ನಿನ್ನ ಅವಸ್ಥೆ ಏನಾಗತ್ತೆ ಇನ್ನು ಮುಂದೆ?" ಎಂದ.

ಅವನು ಹೇಳಿದ ಮಾತು ಅಸಂಗತವೇನಲ್ಲ. ಅದನ್ನು ಕೆಟ್ಟಮಾತು ಎಂದೂ ಹೇಳಲಾಗುವುದಿಲ್ಲ. ಆದರೆ ರಸಿಕನಿಗೆ ಅನ್ನಿಸಿದ್ದೇ ಬೇರೆ. ಇಷ್ಟು ದೊಡ್ಡ ಅನ್ಯಾಯ ಅವನ ಬಾಳುವೆಯಲ್ಲಿದುವರೆಗೆಂದೂ ಅವನನುಭವಿಸಿದ್ದೇ ಇಲ್ಲ ಎಂದುಕೊಂಡ. ಅವನಿಗೆ ಅನ್ನವೇ ಸೇರಲಿಲ್ಲ ಬಾಯಿಗೆ. ಗಾಳ ಹಿಡಿದುಕೊಂಡು ಮೀನು ಹಿಡಿಯುವುದರಲ್ಲಿ ಕಾಲ ಕಳೆದ, ದಿನವಿಡೀ ಹೊಳೆಯ ಬಳಿ ಕೂತ. ಮಾಗಿ ಕಾಲದ ಮಧ್ಯಾಹ್ನದ ಹೊತ್ತು ನಿಶ್ಶಬ್ದ. ಎತ್ತರದ ಮುರುಕು ಮರದ ಮೇಲೆ ಹಕ್ಕಿಯೊಂದು ಕುಣಿಯುತ್ತಿದೆ. ಹಿಂದಿನ ಬದಿಯ ಮಾವಿನ ತೋಪಿನಲ್ಲಿ ಕಪೋತದ ಹಕ್ಕಿ ಕೂಗುತ್ತಿದೆ. ಎದುರಿಗೆ ಹೊಳೆಯಂಚಿನ ಪಾಚಿಯ ಮೇಲೆ ಬಣ್ಣಬಣ್ಣದ ಚಿಟ್ಟೆಯೊಂದು ತನ್ನೆರಡು ಅಗಲವಾದ ರೆಕ್ಕೆಗಳನ್ನು ಹರಡಿಕೊಂಡು ನಿಶ್ಚಿಂತೆಯಿಂದ ಬಿಸಿಲು ಕಾಯುತ್ತಿದೆ. ಅಂದು ರಸಿಕನು ಗೋಪಾಲನಿಗೆ ದೋಣ್ಣೆ ತಿರುಗಿಸುವುದನ್ನ ಕಲಿಸಬೇಕೆಂಬ ಮಾತಾಗಿತ್ತು. ಗೋಪಾಲನು ಅದು ಇಷ್ಟರಲ್ಲೇ ಆಗುವುದೆಂಬ ಆಸೆಯನ್ನು ಬಿಟ್ಟು ರಸಿಕನು ಮಡಕೆಯಲ್ಲಿರಿಸಿದ್ದ ಗಾಳದ ಹುಳುಗಳನ್ನ ಚದರಿಸುತ್ತ ಕೂತ. ರಸಿಕನದನ್ನ ಕಂಡು ಅವನ ಕುತ್ತಿಗೆಯ ಮೇಲೆ ರಸ್ಸೆಂದು ಒಂದೇಟು ಕೊಟ್ಟ. ರಸಿಕನು ಯಾವಾಗ ತನ್ನ ಬಳಿ ಬಂದು ವೀಳೇದೆಲೆ ಬೀಡಾವನ್ನು ಕೇಳುತ್ತಾನೋ ಎಂದು ಸೌರಭಿಯು ಸೋಪಾನಗಳ ಮೇಲುಗಡೆ ಸೊಂಪಾದ ಹುಲ್ಲಿನ ಮೇಲೆ ಕಾಲು ನೀಡಿಕೊಂಡು ಕಾಯುತ್ತ ಕೂತಿದ್ದಳು. ರಸಿಕನಾಗ "ಸೈರೀ, ಬಹಳ ಹಸಿವೆಯಾಗುತ್ತಿದೆ ಕಣೆ. ಏನಾದರೂ ಸ್ವಲ್ಪ ತಿನ್ನಲಿಕ್ಕೆ ತಂದುಕೊಡೋದಿಲ್ಲವಾ?" ಎಂದು ಕೂಗಿದ. ಸೌರಭಿಯು ಹರುಷದಿಂದ ಬೇಗನೆ ಓಡಿ ಹೋಗಿ ಮನೆಯಿಂದ ತನ್ನ ಸೆರಗಿನ ತುಂಬ ಪುರಿ, ಅರಳನ್ನು ತಂದು ನಿಂತಳು. ರಸಿಕನಂದು ತನ್ನ ಅಣ್ಣನ ನೆರಳಿನ ಹತ್ತಿರ ಕೂಡ ಹೋಗಲಿಲ್ಲ.

ಬಂಶಿಯ ಮೈ, ಮನಸ್ಸು ಎರಡೂ ಕೆಟ್ಟುಹೋಗಿದ್ದುವು. ರಾತ್ರಿ ಅವನು ಕನಸಿನಲ್ಲಿ ಸತ್ತುಹೋಗಿದ್ದ ತಂದೆಯನ್ನು ಕಂಡ. ಕನಸಿನಿಂದೆದ್ದು ಅವನ ಮನಸ್ಸು ಮತ್ತೂ ವಿಕಲವಾಯಿತು. ವಂಶವಲ್ಲೇ ಮುಗಿಯುವುದೆಂಬ ಭಯದಲ್ಲಿ ತಂದೆಗೆ ಪರಲೋಕದಲ್ಲೂ ನೆಮ್ಮದಿಯಿಲ್ಲವೆಂದವನ ಭಾವನೆ.

ಮರುದಿನ ಬಂಶಿಯು ಸ್ವಲ್ಪ ಹೆಚ್ಚಾಗಿ ಬಲವಂತಮಾಡಿ ರಸಿಕನನ್ನು ಕೆಲಸಕ್ಕೆ ಕೂಡುವಂತೆ ಮಾಡಿದ. ಇದಂತೂ ವ್ಯಕ್ತಿಗತ ಸುಖ, ದುಃಖಗಳ ಮಾತಲ್ಲ. ವಂಶವೃತ್ತಿಯನ್ನುಳಿಸುವ ಕರ್ತವ್ಯ. ರಸಿಕನೇನೋ ಮನಸ್ಸಿಲ್ಲದೆಯೇ ಕೆಲಸಕ್ಕೆ ಕೂತಿದ್ದಷ್ಟೆ, ಆದರೆ ಕೆಲಸವೇನೋ ಆಗವೊಲ್ಲದು. ಅವನ ಕೈಯೇ ಆಡುವುದಿಲ್ಲ. ನಿಮಿಷ ನಿಮಿಷಕ್ಕೆ ದಾರ ಕಿತ್ತುಹೋಗುವುದು, ಮತ್ತೆ ದಾರ ಕಟ್ಟಿ ಸರಿಮಾಡುವುದಕ್ಕೆ ವೇಳೆಯಾಗುವುದು. ಅದನ್ನು ಕಂಡು ಬಂಶಿ "ಅಭ್ಯಾಸವಿಲ್ಲ, ಕೆಲವು ದಿನ ಮಾಡುತ್ತ ಮಾಡುತ್ತ ಎಲ್ಲ ಸರಿಹೋದೀತು ಕೈಪಳಗೀತು" ಎಂದು ಸಮಾಧಾನ ತಂದುಕೊಳ್ಳುತ್ತಿದ್ದ. ಆದರೆ ಹುಟ್ಟು ಜಾಣನಾದ ರಸಿಕನ ಕೈ, ಪಳಗಲೇಬೇಕಿಲ್ಲವೆಂದೇ ಪಳಗಲಾತುರಪಡಲಿಲ್ಲ. ಹೆಚ್ಚಾಗಿ ಅವನ ಸಂಗಡಿಗರು ಅವನನ್ನರಸಿಕೊಂಡು ಬಂದು ಅವನು ಅತ್ಯಂತ ಒಳ್ಳೆಯ ಹುಡುಗನಂತೆ ಹೇಳಿದ ಮಾತು ಕೇಳಿಕೊಂಡು ತಂದೆ, ತಾತಂದಿರ ಕಸಬಿನಲ್ಲಿ ಮುಳುಗಿರುವುದನ್ನು ನೋಡಿದಾಗ ರಸಿಕನಿಗೆ ಬಹಳ ನಾಚುಗೆಯೂ ಆಯಿತು. ಕೋಪವೂ ಬಂತು.

ಸೌರಭಿಯ ಸಂಗಡ ರಸಿಕನ ಮದುವೆಯ ಸಂಬಂಧವನ್ನು ನಿಷ್ಕರ್ಷೆ ಮಾಡಿದಾನೆಂದು ಅಣ್ಣನವನಿಗೆ ಯಾರಿಂದಲೋ ಹೇಳಿಸಿದ. ಈ ಒಳ್ಳೆಯ ಸುದ್ದಿಯಿಂದ ಖಂಡಿತವಾಗಿ ರಸಿಕನ ಮನಸ್ಸು ಮೆತ್ತಗಾಗುವುದೆಂದುಕೊಂಡಿದ್ದ ಬಂಶಿ. ಆದರೆ ಹಾಗೇನೂ ಫಲಿಸಿದಂತೆ ತೋರಲಿಲ್ಲ. ಸೌರಭಿಯನ್ನು ಮದುವೆಯಾದರೆ ನನಗೇನೋ ದೊಡ್ಡ ಮೋಕ್ಷ ಸಿಗುತ್ತದೆ ಎಂದು ತಿಳಿದುಕೊಂಡಿದ್ದಾನೆ ಈ ನಮ್ಮಣ್ಣ, ಎಂದುಕೊಂಡ ರಸಿಕ. ಸೌರಭಿಯ ಬಗ್ಗೆ ಅವನ ವ್ಯವಹಾರವೇ ವ್ಯತ್ಯಾಸವಾಗಿ ಹೋಯಿತು ಇದರಿಂದ. ಆ ಬಡಪಾಯಿ ಹುಡುಗಿಗೆ ಇನ್ನು ಸೆರಗಿನಲ್ಲಿ ವೀಳೆಯದ ಬೀಡಾಗಳನ್ನು ತುಂಬಿಕೊಂಡು ಅವನ ಬಳಿ ಬರುವುದಕ್ಕೆ ಧೈರ್ಯವೇ ಬರಲಿಲ್ಲ. ಅವನ ರೀತಿ, ನೀತಿಗಳಲ್ಲೆಲ್ಲ ಏನೋ ಒಂದು ಕಟುವಾದ ಬದಲಾವಣೆ ಕಂಡು ಅವಳಿಗೆ ಅಳು ಬರುವಂತಾಯಿತು. ಹಾರ್ಮೋನಿಯಮ್ ನುಡಿಸುವ ಅಧಿಕಾರದಲ್ಲಿ ಬೇರೆಲ್ಲ ಹುಡುಗಿಯರಿಗಿಂತಲೂ ಹೆಚ್ಚಾಗಿದ್ದ ಅವಳ ದೊಡ್ಡಸ್ತಿಕೆ ಇಂದೆಲ್ಲೋ ಹೊರಟುಹೋಯಿತು. ಅಂದಿನಿಂದ ಸದಾ ರಸಿಕನ ಇಚ್ಛೆ, ಚಪಲಗಳಿಗನುಸಾರವಾಗಿ ಅವನ ಮನಸ್ಸನ್ನ ಸಂತೋಷಪಡಿಸುವ ಭಾರವೂ ಇಲ್ಲ ಅವಳ ಮೇಲೆ. ಹಠಾತ್ತಾಗಿ ಅವಳ ಬದುಕೆಲ್ಲ ನೀರಸವಾದಂತೆ, ಪ್ರಪಂಚವೇ ಒಣಗಿಹೋದಂತೆ ಅನ್ನಿಸಿತವಳಿಗೆ.

ಇಷ್ಟು ದಿನ ರಸಿಕನಿಗೆ ಈ ಗ್ರಾಮದ ತೋಟ, ತೋಪುಗಳು, ತೇರಿನ ಚಾವಡಿ, ರಾಧಾನಾಥನ ದೇಗುಲ, ನದಿ, ಸ್ನಾನಘಟ್ಟ, ಖಾರಿ, ಕೆರೆ, ಕಮ್ಮಾರಹಟ್ಟಿ, ಸಂತೆಯ ಬಯಲು, ಬಡಗಿಗಳ ಕೇರಿ–ಇಂಥವನ್ನೆಲ್ಲ ತನ್ನ ಆನಂದಕ್ಕೆ, ಪ್ರಯೋಜನಕ್ಕೆ ವಿಚಿತ್ರ ಭಾವದಲ್ಲಿ ಒಡೆತನ ತೋರಿ ಬಳಸಿದ್ದ. ಎಲ್ಲೆಡೆಗಳಲ್ಲೂ ಅವನದೊಂದು ಪ್ರತ್ಯೇಕ ಸ್ಥಳವಿರುತ್ತಿತ್ತು. ಅಲ್ಲಿ ಇಷ್ಟಬಂದಾಗೆಲ್ಲ ಒಬ್ಬನೇ ಆಗಲಿ, ಅಥವಾ ಗೆಳೆಯರ, ಅನುಯಾಯಿಗಳ ದಳ, ಬಲ ಸಮೇತ ಹೋಗಿ ಕಾಲ ಕಳೆಯುತ್ತಿದ್ದ. ಈ ಗ್ರಾಮ ಮತ್ತು ಥಾನಾಗಡದ ಜಮೀನ್ದಾರರ ಮಹಲು, ಇವುಗಳ ಹೊರತು ಜಗತ್ತಿನಲ್ಲಿ ಬೇರಾವ ಸ್ಥಳವೂ ತನ್ನ ಬಾಳ ಯಾತ್ರೆಯಲ್ಲಿ ಪ್ರಯೋಜನಕ್ಕೆ ಬರಬಹುದೆಂಬ ಯೋಚನೆ ಅವನಿಗೆಂದೂ ಬಂದಿರಲಿಲ್ಲ. ಈಗ ಒಮ್ಮೆಲೇ ಅವನಿಗೀ ಗ್ರಾಮವೇಕೋ ರುಚಿಸದಾಯಿತು. ದೂರ, ಬಹುದೂರ ಪ್ರದೇಶಗಳಿಗಾಗಿ ಅವನ ಮನ ಹಾತೊರೆಯ ತೊಡಗಿತು. ಅವನಿಗೆ ಸಮಯ ಬೇಕಾದಷ್ಟಿತ್ತು. ಬಂಶಿಯು ಅವನಿಂದ ಸಾಕಷ್ಟು ಕೆಲಸವನ್ನೂ ಮಾಡಿಸಿಕೊಳ್ಳುತ್ತಿರಲಿಲ್ಲ. ಆದರೆ ಇಂದು ಸ್ವಲ್ಪ ಹೊತ್ತು ಬಲವಂತವಾಗಿ ನೆಯಿಗೆ ಕೆಲಸ ಮಾಡಿದ್ದರಿಂದಲೇ ಅವನಿಗಿದ್ದ ಅಪಾರವಾದ ವಿರಾಮವೆಲ್ಲ ರುಚಿಗೆಟ್ಟುಹೋಯಿತು. ಈ ಬಗೆಯಾಗಿ ಕತ್ತರಿಸಲ್ಪಟ್ಟ ವಿರಾಮವನ್ನು ಬೇರಾವ ಹವ್ಯಾಸದಲ್ಲೂ ಕಳೆಯಲು ಅವನಿಗೆ ಸರಿಹೋಗಲಿಲ್ಲ.

೩

ಈ ಸಮಯದಲ್ಲಿ ಥಾನಾಗಡದ ಬಾಬುಗಳ ಮನೆಯ ಹುಡುಗನೊಬ್ಬ ಒಂದು ಬೈಸಿಕಲ್ಲನ್ನು ಕೊಂಡುತಂದು ಹತ್ತಿ ಸವಾರಿಮಾಡಲು ಅಭ್ಯಾಸ ಮಾಡುತ್ತಿದ್ದ. ರಸಿಕನು ಅವನಿಂದದನ್ನ ತೆಗೆದುಕೊಂಡು ಸ್ವಲ್ಪ ಹೊತ್ತಿನಲ್ಲೇ ಸವಾರಿಮಾಡುವುದನ್ನ ಕಲಿತುಬಿಟ್ಟ. ಅದೆಷ್ಟು ಬೇಗ, ಎಷ್ಟು ಸಹಜವಾಗಿ ಅದಕ್ಕೆ ಹೊಂದಿಕೊಂಡುಬಿಟ್ಟನೆಂದರೆ ಆ ವಾಹನಯಂತ್ರ ಅವನ ಕಾಲಡಿಗೆ ಅಂಟಿಕೊಂಡಿರುವ ರೆಕ್ಕೆಗಳೇನೋ ಎನ್ನುವಂತೆ ಲೀಲಾಜಾಲವಾಗದನ್ನು ಉಪಯೋಗಿಸುತ್ತಿದ್ದ. ಅದನ್ನ ನಡೆಸುತ್ತಿದ್ದರೆ ಏನು ಆನಂದ, ಏನು ಚಮತ್ಕಾರ, ಏನು ಸ್ವಾಚ್ಛಂದ್ಯ! ದೂರತ್ವದ ಅಡಚಣೆಗಳೆಲ್ಲವನ್ನೂ ಈ ವಾಹನವೂ ಹರಿತವಾದ ಸುದರ್ಶನ ಚಕ್ರದಂತೆ ಅತಿ ಅನಾಯಾಸವಾಗಿ ಕತ್ತರಿಸಿ ಮುಂದಕ್ಕೋಡುತ್ತಿತ್ತು. ಬಿರುಗಾಳಿಯೇ ಬಂದು ಚಕ್ರದಾಕಾರ ತಳೆದು ಉನ್ಮತ್ತನಂತೆ ಮನುಷ್ಯನನ್ನ ಬೆನ್ನಮೇಲೆ ಕೂರಿಸಿಕೊಂಡು ಓಡುವಂತಿತ್ತು. ರಾಮಾಯಣ, ಮಹಾಭಾರತಗಳ ಕಾಲದಲ್ಲಿ ಒಮ್ಮೊಮ್ಮೆ ಮನುಷ್ಯರು ದೇವತೆಗಳ ಅಸ್ತ್ರಗಳನ್ನು ವಶಮಾಡಿಕೊಂಡು ಹೀಗೇ ವರ್ತಿಸುತ್ತಿದ್ದರೇನೋ!

ರಸಿಕನಿಗಾಗೆನ್ನಿಸಿತು. ಇಂತಹ ಬೈಸಿಕಲ್ ತನಗಿಲ್ಲದೆ ಹೋದರೆ ಬಾಳುವೆಯೇ ವ್ಯರ್ಥ. ಬೆಲೆಯೇನು ಅಷ್ಟು ಹೆಚ್ಚಲ್ಲ. ಒಂದುನೂರ ಇಪ್ಪತ್ತೈದು ರೂಪಾಯಿಗಳನ್ನು

ಖರ್ಚುಮಾಡಿದರೆ ಸಾಕು, ಮನುಷ್ಯನಿಗೆ ಹೊಸದೊಂದು ಶಕ್ತಿ! ಅದೊಂದು ವೆಲೆಯೆ? ವಿಷ್ಣುವಿನ ಗರುಡವಾಹನ, ಸೂರ್ಯನ ಅರುಣಸಾರಥಿಯರು ಸೃಷ್ಟಿಕರ್ತರಿಗೆ ಒದಗಿಸಿದ್ದ ಭೋಗವೇನಷ್ಟು ಕಡಿಮೆಯಾದ್ದೆ? ಇಂದ್ರನ ಉಚ್ಚೈಶ್ರವಸ್ಸಿಗಾಗಿ ಸಮುದ್ರವನ್ನೇ ಕಡೆಯಬೇಕಾಯಿತಲ್ಲ! ಆದರೆ ಈಗ ಈ ಬೈಸಿಕಲ್ಲು ತನ್ನ ಭೂಲೋಕವನ್ನ ಗೆಲ್ಲುವ ಗತಿವೇಗವನ್ನು ತಡೆಹಾಕಿ, ಕೇವಲ ಒಂದು ನೂರ ಇಪ್ಪತ್ತೈದು ರೂಪಾಯಿಗಳಿಗೋಸ್ಕರ ಅಂಗಡಿಯಲ್ಲಿನ ಒಂದು ಮೂಲೆಯ ಗೋಡೆಗೊರಗಿಕೊಂಡು ನಿರೀಕ್ಷೆಮಾಡುತ್ತ ನಿಂತಿದೆ!

ಅಣ್ಣನ ಬಳಿ ರಸಿಕನು ಬೇರೇನೂ ಕೆಳುವುದಿಲ್ಲವೆಂದು ಪಣತೊಟ್ಟಿದ್ದನಲ್ಲ! ಆದರೆ ಆ ಪಣ ಈಗ ಉಳಿಸಿಕೊಳ್ಳಲಾಗಲಿಲ್ಲ. ಆದರೆ ಕೇಳುವ ರೀತಿಯಲ್ಲಿ ಸ್ವಲ್ಪ ಬದಲಾವಣೆ ಮಾಡಿಸಿತು ಬಿಗುಮಾನ.

"ನನಗೊಂದು ನೂರು ಇಪ್ಪತ್ತೈದು ರೂಪಾಯಷ್ಟು ಸಾಲ ಬೇಕಾಗಿದೆ" ಎಂದ.

ಬಂಶಿಯ ಬಳಿ ರಸಿಕ ಈಚೆಗೆಷ್ಟೋ ದಿನಗಳಿಂದ ಯಾವ ಆಸೆಯನ್ನೂ ವ್ಯಕ್ತಪಡಿಸದೆ ಇದ್ದುದು ಬಂಶಿಯ ಮೈ ಬೇನೆಗಿಂತಲೂ ಹೆಚ್ಚು ನೋವುಂಟು ಮಾಡಿತು, ಮನಸ್ಸಿಗೆ. ಈ ಆಳವಾದ ನೋವು ಹಗಲು, ರಾತ್ರಿಯೆನ್ನದೆ ಪೀಡಿಸ ತೊಡಗಿತು.

ಈಗ ರಸಿಕನು ಇಷ್ಟು ದಿನಗಳಾದ ಮೇಲೆ ತನ್ನ ಬಯಕೆಯ ಬಗ್ಗೆ ಹಕ್ಕು ಸ್ಥಾಪಿಸಲು ತನ್ನ ಮುಂದೆ ಬಂದುದನ್ನ ಕಂಡು ಅವನ ಮನ ಚೇತನಗೊಂಡು ಕುಣಿಯಲಾರಂಭಿಸಿತು.

"ಸುಡಲಿ ದುಡ್ಡಿಗೆ! ಹೀಗೇಕೆ ಸುಮ್ಮನೆ ಎಳೆದಾಡಬೇಕು? ಕೊಟ್ಟುಬಿಡೋಣ ಅತ್ತಲಾಗೆ!" ಎಂದುಕೊಂಡ.

ಆದರೆ ವಂಶಮರ್ಯಾದೆ! ಅದು ಪೂರ್ತಿ ಮುಳುಗಿಹೋಗುತ್ತಲ್ಲ! ನೂರ ಇಪ್ಪತ್ತೈದು ರೂಪಾಯಿ ಕೊಟ್ಟಮೇಲೆ ಉಳಿಯುವುದೇನಿನ್ನು? ಸಾಲ! ರಸಿಕನು ನೂರ ಇಪ್ಪತ್ತೈದು ರೂಪಾಯಿಗಳ ಸಾಲ ತೀರಿಸುವಂಥವನೆ? ಅಷ್ಟು ಪುಣ್ಯ ಇದ್ದಿದ್ದರೆ ಬಂಶಿಗೆ ಇನ್ನು ಕೊರತೆ ಎಂಥದು? ನಿಶ್ಚಿಂತೆಯಿಂದ ಸಾಯಬಹುದಾಗಿತ್ತು.

ಕೂಡಲೆ ಬಂಶಿ ಮೆತ್ತಗಾಗಿದ್ದ ಮನಸ್ಸನ್ನು ಮತ್ತೆ ಅತಿ ಕಷ್ಟದಿಂದ ಕಲ್ಲಾಗಿ ಮಾಡಿಕೊಂಡ.

"ಹೇಗೆ ಸಾಧ್ಯವೋ? ನೂರ ಇಪ್ಪತ್ತೈದು ರೂಪಾಯಿ ಎಲ್ಲಿಂದ ತರಲೋ ನಾನು? ಏನು ಹುಡುಗಾಟಿಕೆಯೆ?" ಎಂದುಬಿಡಬೇಕಾಯಿತು.

ರಸಿಕನು ಮಾತಾಡದೆ ಹೊರಟುಹೋದ. ತನ್ನ ಆಪ್ತರೊಡನೆ ಹೇಳಿಕೊಂಡ: "ಈ ದುಡ್ಡು ನನಗೆ ಸಿಕ್ಕಿದ ಹೊರತು ನಾನು ಮದುವೆಯೇ ಮಾಡಿಕೊಳ್ಳುವುದಿಲ್ಲ"–

ಎಂದು.

ಬಂಶಿಯ ಕಿವಿಗೆ ಈ ಮಾತು ಬಿದ್ದೊಡನೆ "ಇದೀಗ ಮಜಾ! ವಧುವಿಗೆ ಮುದ್ದು ಕೊಡಲೇಬೇಕು. ಈ ಕಡೆ ವರನಿಗೂ ಕೊಡದೆ ಹೋದರೆ ನಡೆಯುವ ಹಾಗಿಲ್ಲ. ಎಂಥಾ ಪಂಚಾಯತಿ...ಇಂಥ ಸಂದರ್ಭ ನನ್ನ ವಂಶದಲ್ಲಿ ಏಳು ತಲೆಗಳವರೆಗೂ ಬಂದಿದ್ದಹಾಗಿಲ್ಲ!" ಎಂದುಕೊಂಡ.

ರಸಿಕನಂದಿನಿಂದ ಸ್ಪಷ್ಟವಾಗಿ ಎದುರುಬಿದ್ದು ನೆಯಿಗೆ ಕೆಲಸದಿಂದ ಬಿಡುಗಡೆ ಹೊಂದಿದ. ಕೇಳಿದರೆ 'ನನಗೆ ಮೈ ಚೆನ್ನಾಗಿಲ್ಲ' ಎಂದುಬಿಟ್ಟೆ. ಆದರೆ ನೆಯಿಗೆ ಕೆಲಸಕ್ಕೆ ಚೆನ್ನಾಗಿಲ್ಲದ ಮೈ ನಿತ್ಯದ ಊಟ, ಆಟಗಳಿಗೆ ಬೇಕಾದಷ್ಟು ಗೆಲುವಾಗಿತ್ತು. ಬಂಶಿಯೂ ಸ್ವಲ್ಪ ಬಿಗುಮಾನದಿಂದ "ಹೋಗಲಿ ಬಿಡು...ಅವನು ಕೆಲಸ ಮಾಡದೆ ಹೋದರೆ ಹೋಯಿತು. ನಾನು ಅವನನ್ನ ಕೇಳುವುದೇ ಇಲ್ಲ, ನನಗೇನು ಬರುತ್ತೆ ಸಾಮ್ರಾಜ್ಯ!" ಎಂದುಕೊಂಡು ಸುಮ್ಮನಾದ. ಹೀಗೆಂದುಕೊಂಡು ತಾನೇ ಇನ್ನೂ ಶ್ರಮವಹಿಸಿ ದುಡಿಯುತ್ತ ಹೋದ. ಅದೃಷ್ಟವಶಾತ್ ಆ ವರುಷ ವಿದೇಶೀವಸ್ತ್ರ ಬಹಿಷ್ಕಾರ ಚಳವಳಿಯ ದೆಸೆಯಿಂದ ಹಠಾತ್ತಾಗಿ ಕೈ ಮಗ್ಗದ ಬಟ್ಟೆಗಳ ದರ ಮತ್ತು ಆ ದರ ಇಮ್ಮಡಿ, ನಾಲ್ಮಡಿಯಾಗಿ ಬೆಳೆದುವು. ನೆಯಿಗೆಯವರಲ್ಲಿ ಯಾರು ಯಾರು ಬೇರೆ ಬೇರೆ ಕೆಲಸಗಳಲ್ಲಿ ಕೈಹಾಕಿದ್ದರೋ ಅವರೆಲ್ಲ ಈಗ ಮತ್ತೆ ಹಳೆಯ ವೃತ್ತಿಗೆ ಮರಳಿ ಬಂದರು. ಈಗ ಒಂದು ಕ್ಷಣ ಮಗ್ಗವಾಡದೆ ಸುಮ್ಮನಿದ್ದರೂ ಬಂಶಿಗೆ ಸೈರಣೆಯಾಗುತ್ತಿರಲಿಲ್ಲ. ಈ ಸಮಯದಲ್ಲಿ ರಸಿಕನು ಅವನ ನೆರವಿಗೆ ಬಂದದ್ದೇ ಆದರೆ ಎರಡು ವರುಷಗಳ ಆದಾಯವನ್ನು ಆರೇ ತಿಂಗಳಲ್ಲಿ ಗಳಿಸಿಬಿಡಬಲ್ಲ. ಆದರೆ ಅದೆಲ್ಲಿ ಸಾಧ್ಯ? ತತ್ಫಲವಾಗಿ ಬಡಕಲಾದ ಮೈಯಲ್ಲೇ ಒಂದೇ ಸಮನಾಗಿ ಮಿತಿಮೀರಿ ದುಡಿಯತೊಡಗಿದ.

ರಸಿಕನು ಆ ಸಮಯದಲ್ಲಿ ಸಾಧಾರಣವಾಗಿ ಹೊರಗಡೆಯೇ ಕಾಲ ಕಳೆಯ ತೊಡಗಿದ. ಆದರೆ ಒಂದು ದಿನ ಹಠಾತ್ತಾಗಿ ಸಂಜೆಯ ಹೊತ್ತು ಬಂಶಿಯ ಕೈ ಸೋತುಹೋಗುತ್ತ ಬಂದಿದ್ದಾಗ ಬೆನ್ನೆಲುಬು ಮುರಿದು ಬೀಳುವಂತಿರುವಾಗ, ಕೆಲಸ ಮಾಡುವುದಿನ್ನೂ ರಾಶಿಯಷ್ಟಿದ್ದಾಗ...ಅಂತಹ ಸಮಯದಲ್ಲಿ ಈಚೆಗೆ ಕೆಲವು ದಿನಗಳಿಂದ ಅಸಡ್ಡೆಮಾಡಲ್ಪಟ್ಟು ಬಿದ್ದಿದ್ದ ಆ ಹಾರ್ಮೋನಿಯಮ್ ವಾದ್ಯದಲ್ಲಿ (Lucknow) ಲಕ್ನೌ ಟುಮ್ರಿಯ ಸ್ವರ ನುಡಿಸಲ್ಪಡುತ್ತಿರುವುದು ಕೇಳಬಂತು. ಹಿಂದೆ ಒಂದು ಕಾಲದಲ್ಲಿ ಕೆಲಸ ಮಾಡುತ್ತ ಮಾಡುತ್ತ ಇರುವಾಗ ರಸಿಕನ ಈ ಹಾರ್ಮೋನಿಯಮ್ ದನಿ ಕೇಳಿದೊಡನೆ ಹೆಮ್ಮೆಯಿಂದ, ಹರುಷದಿಂದ ಬಂಶಿಯ ಮನ ಪುಳಕಗೊಳ್ಳುತ್ತಿತ್ತು. ಇಂದೇಕೋ ಹಾಗಾಗಲಿಲ್ಲ.

ಆಗವನು ಮಗ್ಗವನ್ನ ಅಲ್ಲೇ ಬಿಟ್ಟು ಮನೆಯ ಅಂಗಳದ ಸಮೀಪಕ್ಕೆ ಬಂದು ನೋಡಿದರೆ, ಯಾರೋ ಒಬ್ಬ ಗುರುತಿಲ್ಲದ ಮನುಷ್ಯನನ್ನ ಕೂಡಿಸಿಕೊಂಡು

ಹಾರ್ಮೋನಿಯಮ್ಮನ್ನ ನುಡಿಸುತ್ತಿದ್ದಾನೆ, ರಸಿಕ. ಇದನ್ನು ನೋಡಿದೊಡನೆ ಬಂಶಿಯ ಜ್ವರದಿಂದ ಕಾಯುತ್ತಿದ್ದ ಮೈ ಇನ್ನೂ ಉರಿದುಹೋಯಿತು. ತಡೆಯಲಾರದೆ ಬಾಯಿಗೆ ಬಂದದ್ದನ್ನಾಡಿಬಿಟ್ಟ. ರಸಿಕನೂ ಉರಿದೆದ್ದು ಬಿರುಸಾಗಿ "ಇನ್ನು ಮೇಲೆ ನಿನ್ನ ಅನ್ನದ ಮೇಲೆ ನಾನೇನಾದರೂ ನಂಬಿಕೊಂಡಿದ್ದರೆ ಆಗ ನನ್ನ ಹೆಸರೂ–" ಹೀಗೆಲ್ಲಾ ಒದರಿದ. ಬಂಶಿ ಅದಕ್ಕೆ ಬದಲಾಗಿ "ಸಾಕು ಸಾಕುಬಿಡೋ ನಿನ್ನ ಬಡಾಯಿಯೆಲ್ಲಾ ಕಂಡಿದ್ದೇನೆ...ದೊಡ್ಡ ತಲೆ ಚೇಷ್ಟೆಮಾಡುತ್ತಾ ಹಾರ್ಮೋನಿಯಮ್ಮು ಅಂಥದ್ದೆಲ್ಲ ನುಡಿಸಿಕೊಂಡು ನವಾಬಗಿರಿ ಮಾಡಿಬಿಟ್ಟರೆ ಆಗಿಹೋಗಿಬಿಡಲಿಲ್ಲ" – ಎಂದು ಗುಡುಗಿ ಅಲ್ಲಿಂದ ಹೊರಟುಹೋದ. ಆಮೇಲೆ ಮಗ್ಗದ ಕೆಲಸ ನಡೆಯಲಿಲ್ಲ. ಕೋಣೆಗೆ ಹೋಗಿ ಚಾಪೆ ಹಾಸಿ ಮಲಗಿಬಿಟ್ಟ.

ರಸಿಕನು ಹಾರ್ಮೋನಿಯಮ್ಮನ್ನು ನುಡಿಸಿ ಮಜಾಮಾಡುವುದಕ್ಕಲ್ಲ ಜೊತೆಗಾರನೊಬ್ಬನನ್ನ ಕರೆದುಕೊಂಡು ಬಂದಿದ್ದು–ಥಾನಾಗಡಕ್ಕೊಂದು ಸರ್ಕಸ್ ದಳ ಬಂದಿತ್ತು. ಆ ದಳದಲ್ಲೊಬ್ಬನ ಸಂಗಡ ಪರಿಚಯ ಪಡೆದು ಅವನ ಮುಂದೆ ತನ್ನ ವಾದ್ಯಸಾಮರ್ಥ್ಯವನ್ನು ತೋರಿಸಿಕೊಳ್ಳಲೋಸುಗವೇ ಅವನನ್ನು ಮನೆಗೆ ಕರೆದುಕೊಂಡು ಬಂದು, ತನಗೆ ತಿಳಿದಿದ್ದ ಒಂದೆರಡು ರಾಗ, ಗತ್ತುಗಳನ್ನು ನುಡಿಸಿದ. ಅವನದರಲ್ಲಿ ಮುಳುಗಿದ್ದಾಗಲೇ ಸಂಗೀತ ಅವನೆಣಿಸದಿದ್ದ ಬೇರೊಂದು ರಾಗಕ್ಕಿಳಿದುಬಿಟ್ಟು ರಸ, ವಿರಸವಾಗಿಹೋಯಿತು.

ಇಂದಿನವರೆಗೆ ಬಂಶಿಯ ಬಾಯಿಂದ ಇಷ್ಟು ಬಿರುಸಾದ ನುಡಿಗಳು ಹೊರ ಬಿದ್ದಿರಲಿಲ್ಲ. ತನ್ನ ಮಾತುಗಳಿಂದ ತನಗೇ ಅಚ್ಚರಿಯಾಯಿತು. ಈ ಮಾತುಗಳನ್ನಾಡಿದವನು ತಾನೇ? ಇಲ್ಲವೆ, ಬೇರೆ ಯಾರೋ ತನ್ನೊಳಗೆ ಹೊಕ್ಕು ಹೀಗೆಲ್ಲ ಬಿರುನುಡಿಗಳನ್ನಾಡಿಸಿರಬೇಕು. ಇಷ್ಟು ಮರ್ಮವನ್ನು ಚುಚ್ಚುವಂಥ ಬೈಗಳಾಡಿದ ಮೇಲೆ ತಾನಿದುವರೆಗೆ ಕೂಡಿಸಿಟ್ಟಿದ್ದ ಹಣವನ್ನು ಇನ್ನಿಟ್ಟುಕೊಂಡು ಫಲವೇನು? ಯಾರಿಗಾಗಿ? ಈ ಹಾಳು ಹಣಕೋಸ್ಕರವಲ್ಲವೇ ಈ ಬಗೆಯಾದ ಎಣಿಸಲಾಗದಂಥಾ ಅನಾಹುತವಾದದ್ದು. ಸುಡಲಿ ಹಣವನ್ನು! ಅದರಿಂದ ಆಗುವ ಸುಖವೇನು? ರಸಿಕ, ತನ್ನ ಮುದ್ದು ತಮ್ಮ–ಅವನೆಲ್ಲಿ, ಈ ಹಣವೆಲ್ಲಿ? ಅವನಿಗೀಗಲೂ ನೆನಪಿದೆ– ರಸಿಕನಿನ್ನೂ ಸಣ್ಣ ಕೂಸಾಗಿದ್ದಾಗ, ಮಾತಿನ್ನೂ ಬರುತ್ತಿರಲಿಲ್ಲ. 'ಅಣ್ಣಾ' ಅನ್ನುವುದಕ್ಕೆ ಕೂಡ ತೊದಲಿಕೊಂಡು ಉಚ್ಚರಿಸಲು ಬರುತ್ತಿರಲಿಲ್ಲ. ಆಗ ಅವನ ದುಷ್ಟತನದ ಕೈಯಿಂದ ಮಗ್ಗದ ಮೇಲೆ ಕಷ್ಟಪಟ್ಟು ಹೆಣೆದಿದ್ದ ದಾರದ ಪಂಕ್ತಿಗಳನ್ನು ಕಾಪಾಡುವುದು ಎಷ್ಟು ಪ್ರಯಾಸವಾದ ಕೆಲಸವಾಗಿತ್ತು!...ತಾನೊಮ್ಮೆ ಕೈಚಾಚಿದೊಡನೆಯೇ ಬೇರೆ ಯಾರ ಕಂಕುಳಲ್ಲಿದ್ದರೂ ತತ್‌ಕ್ಷಣ ವಾಲಿ ಬಿದ್ದು ವೇಗವಾಗಿ ತನ್ನ ಎದೆಯ ಮೇಲೆ ಹೇಗೆ ಬೀಳುತ್ತಿದ್ದ–! ತನ್ನ ಒತ್ತಾದ ಕೂದಲನ್ನ ಹೇಗೆ ಹಿಡಿದು ಎಳೆದಾಡುತ್ತಿದ್ದ. ಅಣ್ಣನ ಮೂಗನ್ನು ಹಿಡಿದು ತನ್ನ ಹಲ್ಲಿಲ್ಲದ ಬಾಯಲ್ಲಿ ತುರುಕಿಕೊಳ್ಳಲು

ಪ್ರಯತ್ನಿಸುತ್ತಿದ್ದ...ಇವೆಲ್ಲ ಚಿತ್ರಗಳು ಸುಸ್ಪಷ್ಟವಾಗಿ ಬಂಶಿಯ ಮನದ ಭಿತ್ತಿಯ ಮೇಲೆ ಮೂಡಿ ಬಂದು ಅವನ ಪ್ರಾಣ ಸುಮ್ಮನಿರಲಾರದೆ ಹೋಯಿತು. ಇನ್ನವನು ಮಲಗಿರಲು ಸಾಧ್ಯವಿಲ್ಲ. ಕೂಡಲೇ ರಸಿಕನ ಹೆಸರು ಹಿಡಿದು ಗದ್ಗದ ದನಿಯಲ್ಲಿ ಅನೇಕ ಬಾರಿ ಕೂಗಿದ. ಉತ್ತರ ಬಾರದಿರಲು ತನ್ನ ಜ್ವರವನ್ನು ಲೆಕ್ಕಿಸದೆ ಮೇಲಕ್ಕೆದ್ದ. ಹೋಗಿ ನೋಡುತ್ತಾನೆ. ಆ ಹಾರ್ಮೋನಿಯಮ್ಮೇನೋ ಒಂದೆಡೆ ಬಿದ್ದಿದೆ. ಆ ಕತ್ತಲಲ್ಲಿ ಬಂಶೀ ಸೊಂಟದಿಂದ ಒಂದು ಹಾವಿನಂತೆ ಉದ್ದವಾದ ಸಣ್ಣ ಅಗಲವುಳ್ಳ ಚೀಲವನ್ನು ಹೊರದೆಗೆದು ಅವನ ಮುಂದೆ ಎಸೆದು ಗದ್ಗದ ದನಿಯಲ್ಲಿ "ಇಕೊ, ತಗೊಳ್ಳೋ ನನ್ನಪ್ಪ, ತಗೋ ರಸಿಕಾ...ಈ ದುಡ್ಡೆಲ್ಲ ಯಾರಿಗೋಸ್ಕರ ಅಂತ ಇಟ್ಟುಕೊಂಡಿದ್ದೆ?...ನಿನಗೇ...ನಿನಗೆ ಕಣೋ...ಬೇರೆ ಯಾರಿಗೂ ಅಲ್ಲ...ನಿನಗೇ ಒಂದು ಹೆಣ್ಣು ತರುವುದಕ್ಕೋಸ್ಕರ ನಾನಿದನ್ನ ಕೂಡಿಟ್ಟದ್ದು. ಆದರೆ ನಿನ್ನನ್ನ ಅಳುವಹಾಗೆ ಮಾಡಿ ನಾನಿನ್ನು ಹಣ ಕೂಡಿಡಲಾರೆ ಕಣೋ. ನನ್ನ ರಸಿಕ, ನನ್ನ ತಂದೇ, ನನ್ನ ಚಿನ್ನಾ, ನನಗಿನ್ನು ಆ ಶಕ್ತಿಯಿಲ್ಲಪ್ಪಾ. ತಕೋ, ನೀನಿದರಲ್ಲಿ ಚಕ್ರದ ಗಾಡಿ ಕೊಂಡುಕೋಬೇಕಾದ್ದು ಕೊಂಡುಕೊಳ್ಳೋ,...ನಿನಗೆ ಏನು ಖುಷಿಯೋ ಮಾಡು..." ಎಂದು ಕೂಗಿದ.

ರಸಿಕನು ಎದ್ದು ನಿಂತು ಆಣೆಯಿಟ್ಟುಕೊಳ್ಳುತ್ತ ಅತಿ ಬಿರುಸಾದ ದನಿಯಲ್ಲಿ "ಚಕ್ರದ ಗಾಡಿ ಕೊಳ್ಳಬೇಕಾದರೆ, ಹೆಣ್ಣು ತರಬೇಕಾದರೆ ಸ್ವಂತ ದುಡ್ಡಿನಲ್ಲಿ ಮಾಡಿಕೊಳ್ಳುತ್ತೇನೆ. ನಿನ್ನ ಆ ದರಿದ್ರ ಕಾಸನ್ನ ಕೈಯಿಂದ ಮುಟ್ಟುತ್ತೇನೆ ಅಂದುಕೊಂಡೆಯಾ, ಥೂ..." ಎಂದದ್ದೇ ಬಂಶಿಯ ಉತ್ತರಕ್ಕೆ ಎದುರುನೋಡದೆಯೇ ಸರಸರನೆ ಅಲ್ಲಿಂದ ಹೊರಟುಹೋದ. ಯಾರಿಗೂ ಬೇಡದ ಆ ಹಣದ ಚೀಲ ಅಲ್ಲೇ ಬಿದ್ದುಕೊಂಡಿತ್ತು.

೪

ರಸಿಕನ ಭಕ್ತ ಶ್ರೇಷ್ಠನಾದ ಗೋಪಾಲನು ಅತಿ ಬಿಂಕದಿಂದ ಸ್ವಲ್ಪ ದೂರದಲ್ಲಿರುತ್ತಿದ್ದ ಇತ್ತೀಚೆಗೆ. ರಸಿಕನು ಕಾಣುವಂತೆಯೇ ಹೋಗಿ ಸ್ವಲ್ಪ ದೂರದಲ್ಲಿ ತಾನೊಬ್ಬನೇ ಮೀನು ಹಿಡಿಯಲು ಗಾಳವೆಸೆದು ಕೂಡುತ್ತಿದ್ದ. ಮೊದಲಿನಂತೆ ಅವನನ್ನ ಕೂಗಿ ಮಾತಾಡಿಸುತ್ತಿರಲಿಲ್ಲ. ಈ ಕಡೆ ಸೌರಭಿಯ ಸುದ್ದಿಯೇ ಇಲ್ಲ. ರಸಿಕನ ಸಂಗ ಈಗವಳು "ಠೂ" ಬಿಟ್ಟುಬಿಟ್ಟಿದ್ದಾಳೆ. ಕಡೆಯವರೆಗೂ ಸಾಯುವವರೆಗೂ. "ಠೂ"...ಆದರೆ ಇಷ್ಟು ದೃಢವಾಗಿ "ಠೂ" ಬಿಟ್ಟಿರುವುದನ್ನ ಅವನ ಮುಂದೆ ಹೋಗಿ ಹೇಳಲು ಸಾಧ್ಯವಾಗದೆ ತನ್ನ ಮನೆಯ ಕೋಣೆಯ ಮೂಲೆಯೊಂದರಲ್ಲಿ ಕಣ್ಣೀರು ಸುರಿಸುತ್ತ ಗಳಿಗೆ ಗಳಿಗೆಗೂ ಅವನ ನಿಷ್ಠುರವನ್ನು ನೆನೆದುಕೊಳ್ಳುತ್ತ ಅಳುತ್ತಿರುತ್ತಾಳೆ.

ಇಂತಹ ಸಮಯದಲ್ಲಿ ರಸಿಕನು ಒಂದು ದಿನ ಮಧ್ಯಾಹ್ನ ಗೋಪಾಲನ ಮನೆಗೆ ಹೋಗಿ ಅವನನ್ನು ಕೂಗಿದ. ಅವನು ಹೊರಗೆ ಬಂದೊಡನೆ ಅವನನ್ನ ತಬ್ಬಿಕೊಂಡು ಕಿವಿ ಹಿಂಡಿದ. ಮೈಮೇಲೆಲ್ಲ ಕಚಗುಳಿಯಿಟ್ಟ. ಗೋಪಾಲನು ಮೊದಲು ಪ್ರತಿಭಟಿಸಿ ಹೊಡೆದಾಡಿದರೂ ಆಮೇಲೆ ನಗುವುದಕ್ಕೆ ತೊಡಗಿ ರಸಿಕನನ್ನೂ ಕಚಗುಳಿಯಿಡಲು ಆರಂಭಿಸಿ, ಇಬ್ಬರೂ ಗಟ್ಟಿಯಾಗಿ ನಗುತ್ತಾ ಕೋಲಾಹಲಮಾಡಿಬಿಟ್ಟರು. ರಸಿಕನಾಗ "ಗೋಪಾಲ, ನನ್ನ ಹಾರ್ಮೋನಿಯಮ್ಮನ್ನು ತೆಗೆದುಕೊಳ್ಳುತ್ತೀಯಾ?" ಎಂದು ಕೇಳಿದ.

ಹಾರ್ಮೋನಿಯಮ್ಮೆ? ಇಷ್ಟು ದೊಡ್ಡ ದಾನ? ಈ ಕಲಿಗಾಲದಲ್ಲೂ ಸಾಧ್ಯವೇ ಇದು? ಆದರೆ ತನಗೆ ಇಷ್ಟವಾಗುವಂಥ ಸಾಮಾನನ್ನು ಆಕ್ಷೇಪಣೆಯೇನೂ ಇಲ್ಲವಾದರೆ ನಿಸ್ಸಂಕೋಚವಾಗಿ ಪರಿಗ್ರಹಿಸುವುದಕ್ಕೆ ಗೋಪಾಲನಿಗಾವ ಅಡ್ಡಿಯೂ ಇಲ್ಲ. ಕೇಳಿದ್ದೇ ತಡ, ವಸ್ತುವನ್ನು ವಶಮಾಡಿಕೊಂಡಿದ್ದೂ ಆಯಿತು. ಮತ್ತೆ ಕೇಳಿದರೆ ಕೊಡುವುದಿಲ್ಲ, ಆಯಿತಾ ಎಂದೂ ಹೇಳಿಬಿಟ್ಟ.

ರಸಿಕನು ಗೋಪಾಲನನ್ನು ಕೂಗಿದಾಗ ಆ ಕೂಗು ಬೇರೊಬ್ಬರ ಕಿವಿಯಲ್ಲೂ ಬಿದ್ದಿರುತ್ತೆಂದು ಅವನ ಎಣಿಕೆ. ಆದರೆ ಹಾಗಾದಂತೆ ಯಾವ ಸಾಕ್ಷ್ಯವೂ ಕಂಡುಬರಲಿಲ್ಲ. ಆಗ ರಸಿಕನು ಗೋಪಾಲನಿಗೆ "ಸೈರಿ ಎಲ್ಲಿದ್ದಾಳೆ...ಒಂದು ಸಲ ಕರೆ, ನೋಡೋಣ" ಎಂದ.

ಗೋಪಾಲನು ಕರೆತರುತ್ತೇನೆಂದು ಹೋಗಿ ಮರಳಿ ಬಂದು "ಸೈರಿಗೆ ಈಗ ಸಮಯವಿಲ್ಲಂತೆ ಕಣೋ...ಸಂಡಿಗೆ ಒಣಗಿಸಬೇಕಂತೆ" ಎಂದು ಹೇಳಿಬಿಟ್ಟ. ರಸಿಕನು ನಗುತ್ತ "ನಡಿ, ನೋಡೋಣಂತೆ, ಅವಳೆಲ್ಲಿ ಸಂಡಿಗೆ ಒಣಗಿಸುತ್ತ ಇದ್ದಾಳೋ" ಎಂದು ಅಂಗಳದೊಳಗೆ ಹೋಗಿ ನೋಡಿದ. ಅಲ್ಲೆಲ್ಲೂ ಸಂಡಿಗೆ ಒಣಗಿಸಲು ಹರವಿರುವುದನ್ನು ಕಾಣಲಿಲ್ಲ. ಸೈರಿಯು ಅವನ ಕಾಲುಸಪ್ಪುಳವನ್ನು ಕೇಳಿದೊಡನೆ ಬೇರೆಲ್ಲೂ ತಲೆಮರೆಸಿಕೊಳ್ಳಲು ಯತ್ನಿಸಿ ಸಾಧ್ಯವಾಗದೆ ಅವನ ಕಡೆ ಬೆನ್ನು ತಿರುಗಿಸಿ ಮಣ್ಣಿನ ಗೋಡೆಗೆ ಒರಗಿಕೊಂಡು ನಿಂತಿದ್ದಳು. ರಸಿಕನು ಹತ್ತಿರ ಹೋಗಿ ಅವಳನ್ನು ತನ್ನ ಕಡೆ ತಿರುಗಿಸಲು ಯತ್ನಿಸುತ್ತ "ಕೋಪವೇ ಸೈರಿ?" ಎಂದು ಕೇಳಿದ. ಅವಳು ಆಗಲೂ ಉತ್ತರ ಕೊಡದೆ ಅತ್ತಿತ್ತ ಬಾಗುತ್ತ ತಳ್ಳುತ್ತ ಮತ್ತೆ ಗೋಡೆಗೆ ಮುಖ ಮಾಡಿಕೊಂಡು ನಿಂತಳು.

ಒಮ್ಮೆ ರಸಿಕನು ಅತಿ ಚಪಲದಿಂದ ಬಗೆಬಗೆಯ ಬಣ್ಣಗಳ ದಾರಗಳಿಂದ ಒಂದು ಚೌಕಟ್ಟಿನಲ್ಲಿ ಕಸೂತಿ ಹೆಣೆಯಲಾರಂಭಿಸಿದ್ದ. ಹೆಣ್ಣು ಮಕ್ಕಳೆಷ್ಟೋ ಕಸೂತಿ ಹೆಣೆದರೂ ಬೇರೆಯವರು ತಯಾರಿಸಿದ ನಕ್ಷೆಗಳ ಮೇಲೆ ಮಾಡುತ್ತಿದ್ದರು. ರಸಿಕನಾದರೋ ತಾನೆ ಒಂದು ನಕ್ಷೆ ತಯಾರುಮಾಡಿದ್ದ. ಆ ಕಸೂತಿಯ ಕೆಲಸ

ನಡೆಯುತ್ತಿದ್ದಾಗ ಸೈರಿಯು ಬೆರಗಾಗಿ ನಟ್ಟನೋಟದಿಂದ ನೋಡುತ್ತಿದ್ದಳು. ಅವಳ ದೃಷ್ಟಿಯಲ್ಲಿ ಜಗತ್ತಿನಲ್ಲೆಲ್ಲೂ ಇಷ್ಟು ಸುಂದರವಾದ ಇಷ್ಟು ಅದ್ಭುತವಾದ ಕಸೂತಿಯನ್ನು ಯಾರೂ ಹೆಣೆದಿಲ್ಲ. ಕಸೂತಿಯ ಹೆಣಿಗೆ ಇನ್ನೇನು ಪೂರ್ಣವಾಗಬೇಕು, ಆಗ ಒಮ್ಮೆಗೇ ರಸಿಕನಿಗೆ ಬೇಸರ ಹುಟ್ಟಿಕೊಂಡುಬಿಟ್ಟಿತು. ಇನ್ನದನ್ನ ಪೂರ್ತಿಮಾಡಲು ಅವನಿಗೆ ಮನ ಬರಲಿಲ್ಲ. ಸೈರಿಯಾಗ ಕಸೂತಿಯನ್ನು ಹೇಗಾದರೂ ಪೂರ್ತಿಮಾಡಿಬಿಡಬೇಕೆಂದು ಅವನನ್ನೆಷ್ಟು ಅನುನಯದಿಂದ ಅದೆಷ್ಟು ದೈನ್ಯದಿಂದ ಬೇಡಿಕೊಂಡಿದ್ದಳೋ! ಇನ್ನೊಂದೆರಡು ಘಂಟೆ ಕೂತರೆ ಸಾಕು, ಕಸೂತಿಯ ಕೆಲಸ ಕೊನೆಮುಟ್ಟುವುದು. ಚೆಲುವಾದ ಚಿತ್ರ ಹೊರಗಾಣುವುದು. ಆದರೆ ರಸಿಕನಿಗೆ ಮನ ಬೇಡವೆಂದಾಗ ಅವನನ್ನು ಕೆಲಸದಲ್ಲಿ ಮಗ್ನವಾಗಿಸಲು ಯಮನಿಂದಲೂ ಸಾಧ್ಯವಿಲ್ಲ. ಆದರೆ ಇಷ್ಟು ದಿನ ಮುಗಿಸದೆಯಿದ್ದ ಹೆಣಿಗೆಯನ್ನು ನಿನ್ನೆ ರಾತ್ರಿಯೆಲ್ಲಾ ಕೂತು ಪೂರ್ತಿಮಾಡಿಬಿಟ್ಟಿದ್ದ.

ಈಗ ರಸಿಕನು "ಸೈರಿ, ಆ ಕಸೂತಿ ಮುಗಿಸಿಬಿಟ್ಟೆ, ನೋಡಬೇಕೇನು?" ಎಂದ.

ಎಷ್ಟೋ ಪ್ರಯಾಸದಿಂದ ಸೌರಭಿಯ ಮುಖವನ್ನು ತನ್ನ ಕಡೆ ತಿರುಗಿಸಲು ಪ್ರಯತ್ನಿಸಿದಾಗ ಸೌರಭಿಯ ಸೆರಗು ಮುಖದ ಮೇಲಿಂದ ಜಾರಿ ಬಿತ್ತು. ಆಗವಳು ತನ್ನ ಎರಡು ಕೆನ್ನೆಗಳ ಮೇಲೂ ಹರಿದು ಬರುತ್ತಿದ್ದ ಕಂಬನಿಯನ್ನು ಹೇಗೆ ತಾನೇ ತೋರಿಸಿಕೊಳ್ಳುವುದು?

ಸೌರಭಿಯ ಸಂಗಡ ತನ್ನ ಮೊದಲಿನ ಗೆಳೆತನ, ಸಲಿಗೆಗಳನ್ನು ಮತ್ತೆ ಕೊನರಿಸಿಕೊಳ್ಳುವುದಕ್ಕೆ ಅದೆಷ್ಟು ಕಷ್ಟವಾಯಿತೋ ರಸಿಕನಿಗೆ. ಕಡೆಗೆ ಅವರಿಬ್ಬರಿಗೂ ಸಂಧಿ ಎಷ್ಟರವರೆಗೆ ಬೆಳೆಯಿತೆಂದರೆ–ಸೌರಭಿಯು ಕೂಡಲೇ ಒಳಗಡೆ ಹೋಗಿ ರಸಿಕನಿಗೆ ವೀಳೆ ಅಡಿಕೆಯನ್ನು ತಂದುಕೊಟ್ಟಳು–ರಸಿಕನೂ ತಾನು ತಂದಿದ್ದ ಕಸೂತಿಯ ಹೊದಿಕೆಯನ್ನು ಬಿಚ್ಚಿ ಅದನ್ನ ನೆಲದ ಮೇಲೆ ಹರವಿದ. ಸೌರಭಿಯ ಎದೆ ಅಚ್ಚರಿಯಿಂದ ತುಂಬಿಹೋಯಿತು. ಕಡೆಗೆ ರಸಿಕನು "ಸೈರಿ, ಈ ಕಸೂತಿಯನ್ನು ನಿನ್ನ ಸಲುವಾಗಿಯೇ ಹೆಣೆದಿದ್ದೇನೆ. ಇದನ್ನ ನಾನು ನಿನಗೇ ಕೊಡುತ್ತೇನೆ" ಎಂದಾಗ ಅವಳ ಹಿಗ್ಗು ಹಿಡಿಸದಂತಾಯಿತು.

ಆದರೆ ಇಷ್ಟು ದೊಡ್ಡ ಅನಿರೀಕ್ಷಿತವಾದ ದಾನವನ್ನು ಸ್ವೀಕರಿಸುವುದು ಅವಳಿಂದೇನು ಮಾಡಿದರೂ ಸಾಧ್ಯವಿಲ್ಲ. ಲೋಕದಲ್ಲಿ ಯಾವ ದುರ್ಲಭ ವಸ್ತುವಿನ ಮೇಲೂ ತನ್ನ ಹಕ್ಕನ್ನು ಸ್ಥಾಪಿಸಲು ಕಲಿತಿಲ್ಲ ಸೌರಭಿ. ಗೋಪಾಲನಾಗ ಅವಳನ್ನ ಚೆನ್ನಾಗಿ ಗದರಿದ. ಪಾಪ, ಮನುಷ್ಯರ ಮನಸ್ತತ್ತ್ವದ ಸೂಕ್ಷ್ಮತೆಯ ಬಗ್ಗೆ ಅವನಿಗೇನು ತಾನೆ ಗೊತ್ತು? ಅವನ ಭಾವನೆಯಲ್ಲಿ ಲೋಭನೀಯವಾದ ವಸ್ತುವನ್ನು ತೆಗೆದುಕೊಳ್ಳುವುದರಲ್ಲಿ ಸಂಕೋಚ ತೋರುವುದೊಂದು ಕ್ಷಮಿಸಲಾಗದ ಕಪಟ

ಮಾತ್ರ. ಆಗವನು ವ್ಯರ್ಥವಾಗಿ ಹೊತ್ತು ಕಳೆಯದೆ ತಾನೇ ಆ ಕಸೂತಿಯನ್ನೆತ್ತಿ ಒಳಗಡೆ ಜೋಪಾನವಾಗಿಟ್ಟು ಬಂದ. ಹಿಂದಿದ್ದ ಒಡಕು ಈಗ ಮತ್ತೆ ಮುಚ್ಚಿಕೊಂಡಿತು. ಇನ್ನು ಮೇಲಿಂದ ಮತ್ತೆ ಮೊದಲಿನ ಕ್ರಮದಂತೆಯೇ ಅವರುಗಳ ಬಂಧುತ್ವದ ಇತಿಹಾಸದ ದೈನಿಕ ಪ್ರಣಾಲಿ ನಡೆದುಕೊಂಡು ಹೋಗುತ್ತದೆಂಬ ಆಸೆ ಆ ಅಣ್ಣ, ತಂಗಿಯರ ಮನದಲ್ಲಿ ಕೊನರಿಕೊಂಡಿತು.

ಆ ದಿನ ಆ ಗ್ರಾಮದಲ್ಲಿ ತನ್ನ ದಳದ ಎಲ್ಲ ಹುಡುಗ, ಹುಡುಗಿಯರೊಂದಿಗೂ ರಸಿಕನು ಮೊದಲಿನಂತೆಯೇ ಸಲಿಗೆಯಿಂದ ನಡೆದುಕೊಂಡ. ಕೇವಲ ತನ್ನಣ್ಣನ ಮನೆಯೊಳಗೆ ಮಾತ್ರ ಒಮ್ಮೆಯೂ ಕಾಲಿಡಲಿಲ್ಲ. ಅವರ ಮನೆಗೆ ನಿತ್ಯವೂ ಬಂದು ಅಡಿಗೆ ಮಾಡಿ ಹೋಗುತ್ತಿದ್ದ ವಯಸ್ಕಳಾದ ಮಡಿ ಹೆಂಗಸು ಬೆಳಗ್ಗೆ ಬಂದು ರಸಿಕನ ಮುಂದೆ ಇವತ್ತೇನು ಅಡಿಗೆ ಮಾಡಬೇಕೆಂದು ಕೇಳಿದಾಗ ಬಂಶಿ ಹಾಸುಗೆ ಮೇಲೆ ಮಲಗಿದ್ದವನು "ನನಗೆ ಮೈ ಚೆನ್ನಾಗಿಲ್ಲ. ನಾನೇನೂ ಊಟಮಾಡುವುದಿಲ್ಲ ಇವತ್ತು. ರಸಿಕನನ್ನ ಕರೆದು ಏನು ಬೇಕೋ ಅದನ್ನ ಮಾಡಿಹಾಕಿ" ಎಂದುಬಿಟ್ಟ. ಆ ಹೆಂಗಸು ರಸಿಕನು ಈ ಮೊದಲೇ ತನ್ನನ್ನ ಕಂಡು ಇವತ್ತು ತಾನು ಮನೆಯಲ್ಲಿ ಊಟಮಾಡುವುದಿಲ್ಲೆಂದು ಹೇಳಿದ ಎಂದರುಹಿ, "ಬೇರೆಲ್ಲೋ ಹೊರಗೆ ಅವನಿಗೌತಣವಿರಬಹುದು" ಎಂದಳು. ಅದನ್ನ ಕೇಳಿ ಬಂಶಿ ನಿಟ್ಟುಸಿರುಬಿಟ್ಟು ಮೈಮೇಲಿನ ಹೊದಿಕೆಯನ್ನ ತಲೆಯವರೆಗೂ ಎಳೆದುಕೊಂಡು ಮಗ್ಗುಲಿಗೆ ಹೊರಳಿ ಕಣ್ಣು ಮುಚ್ಚಿದ.

ಅಂದು ರಸಿಕನು ಸಂಜೆಯಾದ ಮೇಲೆ ಗ್ರಾಮವನ್ನು ತೊರೆದು ಸರ್ಕಸ್ಸಿನ ದಳದವರೊಂದಿಗೆ ಹೊರಟುಹೋದ. ದಿನ ಹೀಗೆಯೇ ಕಳೆಯಿತು. ಚಳಿ ರಾತ್ರಿ, ಮುಗಿಲಿನಲ್ಲಿ ಅರ್ಧಚಂದ್ರ ಹುಟ್ಟಿದ್ದಾನೆ. ಅಂದಿನ ಸಂತೆ ಪೂರೈಸಿ ಎಲ್ಲರೂ ಮನೆಗಳಿಗೆ ಹೊರಟುಹೋಗಿದ್ದಾರೆ. ದೂರದಲ್ಲಿ ಮನೆಗಳಿದ್ದವರು ಹೊಲ, ಬಯಲುಗಳ ಮೂಲಕ ಹಾದುಹೋಗುತ್ತಾ ಮಾತು, ಕಥೆಯಾಡಿಕೊಂಡು ಹೊರಟದ್ದಾರೆ. ಸಾಮಾನೇನೂ ಹೇರಿಲ್ಲದ ಎತ್ತಿನ ಬಂಡಿಯೊಂದರಲ್ಲಿ ಗಾಡಿಯವನು ಮೇಲುಗಡೆಯ ಚಪ್ಪರವನ್ನು ಮುಚ್ಚಿಕೊಂಡು ಮಲಗಿ ನಿದ್ರಿಸುತ್ತಿದ್ದಾನೆ. ಎತ್ತುಗಳೆರಡೂ ವಿಶ್ರಾಂತಿಯನ್ನು ನಿರೀಕ್ಷೆ ಮಾಡುತ್ತ ಮನೆಯ ಕಡೆ ನಿಧಾನವಾಗಿ ಕಾಲುಹಾಕುತ್ತಾ ಗಾಡಿಯೆಳೆದುಕೊಂಡು ಹೊರಟಿವೆ. ಗ್ರಾಮದ ಗೊಲ್ಲರ ಹಟ್ಟಿಯಿಂದ ಬೆರಣಿ ಸುಡುವ ಹೊಗೆ, ಗಾಳಿಯಿಲ್ಲದ ಆ ಚಳಿ ರಾತ್ರಿಯಲ್ಲಿ ಇಬ್ಬನಿಯ ಭಾರವನ್ನು ಹೊತ್ತುಕೊಂಡು ಪದರ ಪದರವಾಗಿ ಬೊಂಬುಗಳ ಗಿಡಗಳ ನಡುವೆ ಸಿಕ್ಕಿಹಾಕಿಕೊಂಡುಬಿಟ್ಟಿದೆ. ರಸಿಕನು ಆ ಗ್ರಾಮದ ಸರಹದ್ದನ್ನು ಹಾದು ಬಂದಾಗ ಮಸಕು ಮಸಕಾದ ಆ ಚಂದ್ರನ ಬೆಳಕಿನಲ್ಲಿ ಅವನೂರಿನ ನಿಬಿಡವಾದ ಮರಗಿಡಗಳ ನೀಲಿಯ ಛಾಯೆಯೂ ಕಾಣಬರದೆ ಹೋಯಿತು. ಆಗ ಅವನ ಗಂಟಲು ಬಿಗಿದುಕೊಂಡು ಬಂತು. ಆಗಲೂ ಮನಸ್ಸು

ಮಾಡಿದ್ದರೆ ಮರಳಿ ಹೋಗುವುದಕ್ಕೆ ದಾರಿ ಕಠಿಣವಾಗಿರಲಿಲ್ಲ. ಆದರೆ ಅವನ ಹೃದಯ ಮಾತ್ರ ಇನ್ನೂ ಕಠಿಣವಾಗೇ ಇತ್ತು. ಸಂಪಾದನೆ ಮಾಡೋದಿಲ್ಲ, ಅಣ್ಣನ ಮನೆ ಅನ್ನ ತಿಂದುಕೊಂಡಿದಾನೆ ಅನ್ನುವ ಅವಮಾನವನ್ನು ಏನಾದರೂ ಮಾಡಿ ಅಳಿಸಿಹಾಕದೆ, ಸ್ವಂತ ಗಳಿಸಿದ ಹಣದಲ್ಲೇ ಬೈಸಿಕಲ್ಲನ್ನು ಕೊಂಡು ಸವಾರಿ ಮಾಡದೆಹೋದರೆ ಜೀವವಿರುವತನಕ ಗ್ರಾಮಕ್ಕೆ ಕಾಲಿಡುವ ಹಾಗಿಲ್ಲ ಎಂಬ ಹಠ.

ಇಲ್ಲಿನ ಚಂದನೀ ಸ್ಮಶಾನದ ಘಾಟ್, ಇಲ್ಲಿನ ಸುಖಸಾಗರದ ಕೊಳ, ಈ ಗ್ರಾಮದ ಫಾಲ್ಗುಣ ಮಾಸದ ಸಾಸುವೇ ಹೊಲದ ಕಂಪು, ಚೈತ್ರಮಾಸದ ಮಾವಿನ ತೋಪಿನ ದುಂಬಿಗಳ ಸವಿಗಾನ, ಇಲ್ಲಿನ ಬಂಧುತ್ವ, ಇಲ್ಲಿನ ನಗುಚೆಲ್ಲಾಟಗಳು, ಎಲ್ಲಾ ಇಲ್ಲೇ ಉಳಿದುಹೋಗಲಿ. ಈಗಿರುವುದು ಮುಂದೆ ಗುರುತರಿಯದ ಪೃಥಿವಿ, ಪರಿಚಯವಿಲ್ಲದ ಪ್ರಪಂಚ ಸಂಸಾರ, ಮತ್ತು ಹಣೆಯಲ್ಲಿ ಅನಿರ್ದಿಷ್ಟವಾದ ಅದೃಷ್ಟ ಬರೆಹ.

೫

ರಸಿಕನಿಗೆ ಕೇವಲ ನೆಯಿಗೆ ಕೆಲಸದಲ್ಲಿ ಮಾತ್ರ ಅಷ್ಟು ಬೇಸರ. ಬೇರೆಲ್ಲ ಕೆಲಸಗಳೂ ಎಷ್ಟೋ ಚೆನ್ನಾಗಿರುತ್ತವೆಂದೇ ಅವನ ಭಾವನೆ. ಒಮ್ಮೆ ಈ ಇಕ್ಕಟ್ಟಾದ ಮನೆಯ ಬಂಧನ ಬಿಡಿಸಿಕೊಂಡು ಹೊರಟರೆ ಸಾಕು, ಆಮೇಲೆ ಯೋಚನೆಯಿಲ್ಲ. ಹಾಗೆಂದುಕೊಂಡೇ ಇಂದವನು ಅತಿ ಹಿಗ್ಗಿನಿಂದ ಊರು ಬಿಟ್ಟು ಹೊರಟಿದ್ದಾನೆ. ದಾರಿಯಲ್ಲಿ ಯಾವ ಎಡರು, ತೊಡರುಗಳು, ಕಷ್ಟ ಕೊರತೆಗಳು ಬರಬಹುದೆಂಬ, ವ್ಯರ್ಥವಾಗಿ ಸಮಯ ನಷ್ಟವಾಗಬಹುದೆಂಬ ಯೋಚನೆ ಯಾವುದೂ ಇಲ್ಲ. ದೂರದಿಂದ ಬೆಟ್ಟವನ್ನು ಕಂಡಾಗ ಎನ್ನಿಸುವಂತೆ – ಇನ್ನರ್ಧ ತಾಸಿನೊಳಗೆ ಹೋಗಿ ಶಿಖರ ಮುಟ್ಟುವೆನೆಂಬ ಭರವಸೆ. ಅವನ ಗ್ರಾಮದ ಸರಹದ್ದನ್ನು ಪಾರಾದೊಡನೆ ರಸಿಕನು ತನ್ನ ಮನದಾಸೆಗಳ ದುರ್ಲಭ ಸಾರ್ಥಕತೆಯನ್ನು ಅಷ್ಟೇ ಸುಲಭ, ಹತ್ತಿರವಿರುವಂತೆ ಭಾವಿಸಿಕೊಂಡ. ತಾನೆಲ್ಲಿಗೆ ಹೋಗುತ್ತಿದ್ದೇನೆಂದು ಯಾರಿಗೂ ಹೇಳಲಿಲ್ಲ. ಎಂದೋ ಒಮ್ಮೆ ಸುದ್ದಿ ತಾನಾಗಿ ಗಾಳಿಯಲ್ಲಿ ಬೀಸಿಕೊಂಡು ಬರಲಿ ಎಂದೇ ಅವನ ಎಣಿಕೆ.

ಸರ್ಕಸ್ಸಿನಲ್ಲಿ ಕೆಲಸಕ್ಕೆ ಸೇರಿದಾಗ ಅವನಿಗಾದ ಅನುಭವ ಅನಿರೀಕ್ಷಿತವಾದದ್ದು. ನಿರುದ್ಯೋಗಿಗೆ ಕೆಲಸವೆಂದರೆ ಆದರವಿರಬಹುದು. ಯಾವುದೊಂದು ಚಿಲ್ಲರೆ ಕೆಲಸದಲ್ಲೂ ಅವನಿಗೆ ಆಸಕ್ತಿ ಬರಬಹುದು. ಆದರೆ ಅಗತ್ಯದ ಹಂಗಿನಲ್ಲಿ ಮಾಡಬೇಕಾದ ಕೆಲಸದಲ್ಲಿ ದಯಾದಾಕ್ಷಿಣ್ಯಗಳಿರುವುದಿಲ್ಲ. ನಿರುದ್ಯೋಗದವನು ತಾನಾಗಿ ಮಾಡುವ ಕೆಲಸದಲ್ಲಿ ಸ್ವಂತ ಇಚ್ಛೆಯೆಂಬ ವಸ್ತುವನ್ನು ಚೆನ್ನಾಗಿ ಬಳಲಿಸಿ ಓಡಾಡಿಸಬಹುದು. ಅ ಇಚ್ಛೆಯ ಜೋರಿನಿಂದ ಅನಿರೀಕ್ಷಿತವಾದ ಜಾಣತನವನ್ನು

ಎಚ್ಚರಿಸಿಕೊಂಡು ಮನವನ್ನು ಉತ್ಸಾಹದಿಂದ ತುಂಬಿಕೊಳ್ಳಬಹುದು. ಆದರೆ ಕೂಲಿಗಾಗಿ ಮಾಡುವ ಕೆಲಸದಲ್ಲಿ ಈ ಇಚ್ಛೆಯೆಂಬುದೊಂದು ಅಡಚಣೆ. ಇಂತಹ ಕೆಲಸದ ವ್ಯವಧಾನದಲ್ಲಿ ಗುರುತಿಲ್ಲದ ಇಚ್ಛೆಯ ಹವೆಯನ್ನು ಬೀಸುವಂತೆ ಮಾಡಲು ನೌಕಾಪಟದಲ್ಲಿ ಯಾವ ವ್ಯವಸ್ಥೆಯೂ ಇಲ್ಲ. ಸುಮ್ಮನೆ ಬರಿಗೂಲಿಗಾಗಿ ಕೂಳಿಗಾಗಿ ಹುಟ್ಟುಗೋಲೆಳೆಯುತ್ತಿರುವುದು, ಗಾಲಿ ತಿರುಗಿಸುತ್ತಲೇ ಇರುವುದು. ನೋಟಕನಂತೆ ನೋಡುತ್ತಿದ್ದಾಗ ಸರ್ಕಸ್ಸು ಅತಿ ಮಜವಾಗಿತ್ತು. ಈಗ ಒಳಗೆ ಹೊಕ್ಕು ನೋಡಿದರೆ ಆ 'ಮಜ' ಎಲ್ಲಾ ಹೊರಗೆ ಓಡಿಹೋಗಿದೆ. ಆಮೋದದ ವಸ್ತುವಾಗಿದ್ದುದು ಆಮೋದವುಂಟುಮಾಡದಿದ್ದಾಗ, ಅದರ ನಿಯಮಬದ್ಧ ಪ್ರತಿದಿನದ ಪುನರಾವೃತ್ತಿಯು, ಸದ್ಯ, ನಿಂತರೆ ಸಾಕಪ್ಪ ಎನ್ನಿಸುತ್ತಿರುವಾಗ, ಅದೇನು ಮಾಡಿದರೂ ನಿಲ್ಲಲು ತಯಾರಿಲ್ಲದಿರುವಾಗ ಅದರಷ್ಟು ಬೇಡವೆನ್ನಿಸುವಂಥ ಪದಾರ್ಥವಿಲ್ಲ. ಈ ಸರ್ಕಸ್ಸಿನ ದಳದಲ್ಲಿ ಸಿಕ್ಕಿಹಾಕಿಕೊಂಡು ರಸಿಕನಿಗೆ ಪ್ರತಿಯೊಂದು ದಿನವೂ ಅತ್ಯಂತ ರುಚಿಗೆಟ್ಟದ್ದಾಗಹತ್ತಿತು. ಆಗವನು ಹೆಚ್ಚಾಗಿ ಮನೆಯ ಕನಸು ಕಾಣತೊಡಗಿದ. ರಾತ್ರಿ ನಿದ್ದೆಬರದೆ ಇದ್ದಾಗ ಕತ್ತಲಲ್ಲಿ ತಾನಾಗ ಮನೆಯಲ್ಲಿ ಅಣ್ಣನ ಹಾಸುಗೆಯ ಮೇಲೆ ಮಲಗಿಕೊಂಡಿರುವುದಾಗಿ ಭಾವಿಸುವನು. ಮರುಗಳಿಗೆಯೆ ಭ್ರಾಂತಿ ಕಳಚಿ ಅಚ್ಚರಿಯಿಂದ ಅಣ್ಣನು ಅಲ್ಲಿಲ್ಲದಿರುವುದನ್ನ ಗಮನಕ್ಕೆ ತಂದುಕೊಳ್ಳುವನು. ಮನೆಯಲ್ಲಿದ್ದಾಗ ಒಂದೊಂದು ದಿನ ಚಳಿ ರಾತ್ರಿಯಲ್ಲಿ ನಿದ್ದೆಯ ಜೊಂಪಿನಲ್ಲೆ ಅನುಭವ ಮಾಡುತ್ತಿದ್ದ–ಏನೆಂದರೆ ಅಣ್ಣನು ತಮ್ಮನಿಗೆ ಚಳಿಯಾಗಬಹುದೆಂದು ಅವನು ಹೊದ್ದಿದ್ದ ಬಟ್ಟೆಗಳ ಮೇಲೆಯೇ ತನ್ನ ಶಾಲನ್ನು ಹೊದಿಸುತ್ತಿದ್ದ, ಮೆಲ್ಲಗೆ. ಇಲ್ಲೂ ಪುಷ್ಯಮಾಸದ ಕೊರೆಯುವ ಚಳಿಗಾಲದಲ್ಲಿ ನಿದ್ದೆ ಮಾಡುತ್ತಿದ್ದರೂ ಚಳಿಚಳಿಯಾಗುತ್ತಿರುವಾಗ ಅಣ್ಣ ಬಂದು ತನ್ನ ಮೇಲೆ ಅವನ ಶಾಲನ್ನ ಬೆಚ್ಚಗೆ ಹೊದಿಸಿ ಹೋಗುತ್ತಾನೆಂದು ನಿರೀಕ್ಷಿಸುವನು, ರಸಿಕ. ಎಷ್ಟು ಹೊತ್ತಾದರೂ ಏಕೆ ಬರಲಿಲ್ಲ ಎಂದು ಕೋಪವೂ ಬರುವುದು. ಆಗ ಇದ್ದಕ್ಕಿದ್ದಂತೆ ಎಚ್ಚರವಾಗಿ ಹೋಗುವುದು. ಇಲ್ಲೆಲ್ಲಿ ಬಂದಾನು ಅಣ್ಣ, ಎನ್ನಿಸುವುದು. ಹಾಗೇ ಊರಿನಲ್ಲಿ ಈ ಚಳಿಗಾಲದ ರಾತ್ರಿಯಲ್ಲಿ ತನ್ನ ಮೈ ಮೇಲೆ ಬೆಚ್ಚಗೆ ಹೊದಿಕೆ ಹೊದಿಸಲಾರದೆ ಒಬ್ಬಂಟಿಗನಾಗಿ ಹಾಸುಗೆಯ ಮೇಲೆ ಮಲಗಿ ನಿದ್ದೆಗೆಟ್ಟು ತಪಿಸುತ್ತಿರುವ ಅಣ್ಣನನ್ನ ನೆನೆಸಿಕೊಳ್ಳುವನು. ಆಗ "ನಾಳೆ ಬೆಳಗ್ಗೆಯೇ ಎದ್ದು ಊರಿಗೆ ಹೊರಟುಹೋಗಿ ಬಿಡುತ್ತೇನೆ" ಎಂದುಕೊಳ್ಳುವನು. ಆದರೆ ಪುನಃ ಚೆನ್ನಾಗಿ ಎಚ್ಚರವಾಗೆದ್ದು ಮತ್ತೆ ದೃಢವಾಗಿ ಪ್ರತಿಜ್ಞೆಮಾಡಿಕೊಳ್ಳುವನು,–ಮನದಲ್ಲೇ ಬಾರಿಬಾರಿಗೂ ಜಪಿಸಿಕೊಳ್ಳುವನು– "ನಾನು, ಏನಾದರೂ ಸರಿ, ದಾರಿಯ ಖರ್ಚಿಗೆ ಬೇಕಾದಷ್ಟು ಹಣ ಸಂಪಾದಿಸುವುದೇ

ಅಲ್ಲದೆ, ಬೈಸಿಕಲ್ಲನ್ನೂ ಕೊಂಡು ಅದರ ಮೇಲೆ ಸವಾರಿಮಾಡಿಕೊಂಡೇ ಮನೆಗೆ ಮರಳುವುದು. ಹಾಗೆ ಮಾಡದೆ ಹೋದರೆ ನಾನು ಗಂಡಸಲ್ಲ, ನನ್ನ ಹೆಸರು ರಸಿಕನಲ್ಲ.

ಒಂದು ದಿನ ಸರ್ಕಸ್‌ದಳದ ಮಾಲಿಕ ಯಾವುದೋ ಕಾರಣಕ್ಕಾಗಿ ರೇಗಿ "ಎಲ್ಲೋ ಮಗ್ಗದ ಕೆಲಸ ಮಾಡುವವನು!" ಎಂದು ಬೈದ. ಆವತ್ತಿನ ದಿವಸವೇ ರಸಿಕನು ತನ್ನ ಸಾಮಾನ್ಯ ಅರಿವೆ, ಹೊದಿಕೆಗಳನ್ನೂ ತಟ್ಟೆ, ಬಟ್ಟಲುಗಳನ್ನೂ ಆ ದಳದವರೊಂದಿಗೆ ತನಗಿದ್ದ ಅಲ್ಪಸ್ವಲ್ಪ ಸಾಲದ ಬದಲಾಗಿ ಒಗೆದು, ಪೂರ್ತಿಯಾಗಿ ಬರಿಗೈಯಲ್ಲಿ ಹೊರಗೆ ಹೊರಟುಬಂದ.. ಇಡೀ ದಿನ ಉಂಡಿರಲಿಲ್ಲ. ಸಂಜೆಗೆ ಮುಂಚೆ ನದೀತೀರಕ್ಕೆ ಬಂದು ದಡದಲ್ಲಿ ದನ ಕರುಗಳು ನೆಮ್ಮದಿಯಾಗಿ ಮೇಯುತ್ತಿದ್ದುದನ್ನು ಕಂಡು ಅವುಗಳ ಮೇಲೆ ಅಸೂಯೆಯನ್ನನುಭವಿಸಿದ. ನಿಜವಾಗಿಯೂ ಈ ಭೂಮಿತಾಯಿಗೆ ಈ ಪಶುಪಕ್ಷಿಗಳೇ ಮಕ್ಕಳು. ತನ್ನ ಕೈಯಾರೆ ಅವುಗಳಿಗೆ ಉಣಿಸು ನೀಡುವಳು. ಮನುಷ್ಯರು ಅವಳಿಗೆ ಸವತಿಮಕ್ಕಳು, ಅದಕ್ಕೇ ಈ ಉರಿಯುವ ಬಿಸಿಲಿನಲ್ಲಿ ಇಷ್ಟು ದೊಡ್ಡ ಬಯಲಿನಲ್ಲಿ ರಸಿಕನಂಥವನಿಗೆ ಒಂದು ಹಿಡಿ ಅನ್ನ ದೊರೆಯುತ್ತಿಲ್ಲ... ನದಿಯ ಅಂಚಿಗೆ ಇಳಿದು ಬಂದು ರಸಿಕನು ಬೊಗಸೆಯ ತುಂಬ ನೀರೆತ್ತಿ ತೃಪ್ತಿಯಾಗುವವರೆಗೂ ಕುಡಿದು ಹೊಟ್ಟೆ ತುಂಬಿಸಿಕೊಂಡ. ಈ ನದಿಗೂ ಹಸಿವಿಲ್ಲ, ಬಾಯಾರಿಕೆಯಿಲ್ಲ; ಯಾವ ಹಂಬಲೂ, ತಾಪತ್ರಯವೂ ಇಲ್ಲ. ಉದ್ಯೋಗದ ಪರಿಶ್ರಮವಿಲ್ಲ, ಮನೆಯಿಲ್ಲ, ಮನೆಯಿಲ್ಲವೆಂಬ ಕೊರತೆಯೂ ಇಲ್ಲ. ಇಷ್ಟರಲ್ಲೇ ಕಗ್ಗತ್ತಲು ಕವಿಯುತ್ತದೆ. ಆದರೂ ಸ್ವಲ್ಪವೂ ಉದ್ವೇಗವಿಲ್ಲದೆ, ಉದ್ದೇಶವಿಲ್ಲದೆ ಮುಂದೆ ಓಡುತ್ತಿದೆ. ಹೀಗೇ ಯೋಚಿಸುತ್ತ, ಯೋಚಿಸುತ್ತ ರಸಿಕನು ನೆಟ್ಟನೋಟದಿಂದ ಹೊಳೆಯ ಪ್ರವಾಹವನ್ನು ನೋಡುತ್ತ ಕೂತಿದ್ದ. ಭರಿಸಲಾಗದ ಈ ಮನುಷ್ಯ ಜನ್ಮವನ್ನು ಈ ಕಟ್ಟುಪಾಡಿಲ್ಲದ ನಿಶ್ಚಿಂತ ಜಲಧಾರೆಯ ಸಂಗಡ ಸೇರಿಕೊಳ್ಳುವಂತೆ ಮಾಡಿಬಿಟ್ಟರೆ, ಆಗ ಶಾಶ್ವತವಾದ ಶಾಂತಿಯಿರಬಹುದೆಂಬ ಯೋಚನೆಯೂ ಅವನ ಮನಸ್ಸಿನಲ್ಲಿ ಸುಳಿಯಿತೋ ಏನೋ!...

ಇಂತಹ ವೇಳೆಯಲ್ಲಿ ಒಬ್ಬ ಯುವಕ ತಲೆಯ ಮೇಲಿಂದ ಭಾರವಾದೊಂದು ಮೂಟೆಯನ್ನು ಇಳಿಸಿ ನದಿಯ ಅಂಚಿನಲ್ಲಿ ಕುಳಿತು ತನ್ನ ಉತ್ತರೀಯದಲ್ಲಿ ಕಟ್ಟಿಕೊಂಡಿದ್ದ* ಹುರಿಗಡಲೆ ಹಿಟ್ಟನ್ನು ನೀರಲ್ಲಿ ನೆನಸಿ ತಿನ್ನಲು ತೊಡಗಿದ. ಈ

---

* ವಂಗ ದೇಶದಲ್ಲಿ ಕಾಲ್ನಡಿಗೆಯ ಪ್ರಯಾಣಿಕರು "ಚಿಂಗ್ಡಾ" ಎಂಬ ಈ ಹುರಿಗಡಲೆ ಹಿಟ್ಟನ್ನು, ದಾರಿಯಲ್ಲಿ, ಹಸಿವು ನೀಗಲು, ಸೌಕರ್ಯಮಾಡಿಕೊಂಡು ಹೋಗುತ್ತಾರೆ. ನೀರು ಸಿಕ್ಕಿದಲ್ಲಿ ಅದರಲ್ಲಿ ನೆನಸಿ ತಿನ್ನುತ್ತಾರೆ.

ಆಳನ್ನು ಕಂಡಾಗ ರಸಿಕನಿಗೆ ಇವನೊಬ್ಬ ಹೊಸ ನಮೂನೆ ಮನುಷ್ಯನೆನ್ನಿಸಿತು. ಕಾಲಿಗೆ ಚಡಾವಿಲ್ಲ. ಉಟ್ಟಿದ್ದುದು ಒಂದು ಪಂಚೆ. ಮೈಮೇಲೆ ಒಂದು ಜುಬ್ಬಾ. ತಲೆಯ ಮೇಲೆ ಪಗಡಿ (ರುಮಾಲು ಅಲ್ಲ, ಟೊಪ್ಪಿಗೆಯೂ ಅಲ್ಲ ಅಂಥದೊಂದು). –ನೋಡಿದೊಡನೆ ಇವನೊಬ್ಬ ಅನುಕೂಲಸ್ಥರ ಮನೆಯವನೆಂದು ತಿಳಿದುಬರುತ್ತಿತ್ತು. ಆದರೆ ಕೂಲಿಯಾಳಿನಂತೆ ತಲೆಯ ಮೇಲೆ ಮೂಟೆ ಹೊತ್ತುಕೊಂಡು ಹೀಗೇಕೆ ಅಲೆಯುತ್ತಿದ್ದಾನೆ? ಅವರಿಬ್ಬರಿಗೂ ಮಾತುಕಥೆ ಬೆಳೆಯುವುದಕ್ಕೆ ಕಷ್ಟವಾಗಲಿಲ್ಲ. ಅಲ್ಲದೆ ರಸಿಕನಿಗೂ ನೀರಿನಲ್ಲಿ ಕಲಸಿದ ಹುರಿಗಡಲೆ ಹಿಟ್ಟಿನಲ್ಲಿ ಒಂದು ಭಾಗ ಸಿಗದೆಹೋಗಲಿಲ್ಲ. ಈ ಹುಡುಗ ಕಲಿಕತ್ತೆಯ ಕಾಲೇಜಿನಲ್ಲಿ ವಿದ್ಯಾರ್ಥಿ, ಸ್ವದೇಶೀವಸ್ತ್ರಗಳ ಪ್ರಚಾರವನ್ನು ಕೈಕೊಂಡ ವಿದ್ಯಾರ್ಥಿಗಳ ಪಂಗಡದಲ್ಲೊಬ್ಬ. ಸ್ವದೇಶೀ ವಸ್ತ್ರಗಳ ಮೂಟೆಯನ್ನು ತಲೆಯ ಮೇಲೆ ಹೊತ್ತು ಊರೂರು ಸಂತೆಗಳಲ್ಲಿ ಮಾರುವುದಕ್ಕಾಗಿ ಹೊರಟಿದ್ದಾನೆ. ಹೆಸರು ಸುಬೋಧ. ಜಾತಿಯಲ್ಲಿ ಬ್ರಾಹ್ಮಣ. ಅವನ ಮಾತುಗಳಲ್ಲಿ ಯಾವ ಸಂಕೋಚ, ಅನುಮಾನಗಳೂ ತೋರುವುದಿಲ್ಲ. ದಿನವೆಲ್ಲಾ ಆ ಊರಿನ ಸಂತೆಯಲ್ಲಿ ಸುತ್ತಿ ಈಗ ಸಂಜೆ ಹುರಿಗಡಲೆಹಿಟ್ಟು ತಿಂದು ಹಸಿವು ನೀಗಿಸಿಕೊಳ್ಳಲು ಬಂದಿದ್ದ. ನೋಡಿ, ಕೇಳಿ, ತನ್ನ ವಿಷಯದಲ್ಲೇ ಬಹಳ ನಾಚುಗೆಯಾಯಿತು ರಸಿಕನಿಗೆ. ಜೊತೆಯಲ್ಲೇ 'ಸದ್ಯ ಇನ್ನು ಬದುಕಿದೆ' ಎಂಬ ನಿಶ್ಚಿಂತೆಯ ಭರವಸೆಯೂ ಸುಳಿಯಿತು. ಈ ಬಗೆಯಾಗಿ ತಲೆಯ ಮೇಲೆ ಮೂಟೆ ಹೊತ್ತು ಕೂಲಿಯಾಳಿನಂತೆ ಬರಿಗಾಲಿನಲ್ಲಿ ಓಡಾಡುವುದಕ್ಕಾದರೆ ಹಾಗೆ ಹೊಟ್ಟೆಗೆ ಗಳಿಸಿಕೊಳ್ಳಲು ಅವಕಾಶ ಸಿಗುವುದು. ಬದುಕಿನ ಮಾರ್ಗ ಅಷ್ಟಾಗಿ ಕಡಿದಾಗಿರುವಂತೆನ್ನಿಸದು ಆಗ. ತಾನು ಉಪವಾಸವಿರಬೇಕಾಗಿರಲಿಲ್ಲ–ಮನಸ್ಸು ಮಾಡಿದ್ದರೆ ಮೂಟೆ ಹೊರಬಹುದಾಗಿತ್ತು ಎಂದುಕೊಂಡ.

ಸುಬೋಧನು ಮತ್ತೆ ಮೂಟೆಯನ್ನು ತಲೆಯ ಮೇಲೆ ಹೊರಲು ಹೋದಾಗ ರಸಿಕನದಕ್ಕೆ ತಡೆದು"ಮೂಟೆ ನಾನು ಹೊರುತ್ತೇನೆ" ಎಂದ. ಸುಬೋಧನು ಅಸಮಾಧಾನ ತೋರಲು ರಸಿಕ "ನಾನು ನೇಯಿಗೆಯವರ ಮನೆ ಹುಡುಗ. ನಾನು ನಿಮ್ಮ ಮೂಟೆ ಹೊತ್ತು ತರುತ್ತೇನೆ. ನನ್ನನ್ನ ಕಲಿಕತ್ತೆಗೆ ಕರೆದುಕೊಂಡುಹೋಗಿ" ಎಂದ. 'ನಾನು ನೇಯಿಗೆಯವ' ಎಂಬ ಮಾತು ಮೊದಲು ಅವನ ಬಾಯಿಂದ ಬರಲಾಗದಂಥದು. ಇಂದು ಆ ಅಡ್ಡಿ ಹೋಯಿತು. ಸುಬೋಧನವನ ಮಾತು ಕೇಳಿದ್ದೇ ಖುಷಿಯಿಂದ ನೆಗೆದ. "ನೀನು ನೇಯಿಗೆಯವನೆ? ಭೇಷ್ ಬಿಡು ಹಾಗಾದರೆ. ನಾನು ನೇಯಿಗೆಯವನೊಬ್ಬನನ್ನು ಹುಡುಕಿಕೊಂಡು ಊರೂರು ಅಲೆಯುತ್ತಿದ್ದೇನೆ. ಈ ನಡುವೆ ನೇಯಿಗೆಯವರ ಬೆಲೆಯೇರುತಾಯಿದೆ. ಯಾರು ನಮ್ಮ ನೇಯಿಗೆ ಸ್ಕೂಲಿನಲ್ಲಿ ಶಿಕ್ಷಕರಾಗಲು ಮುಂದೆ ಬರುವುದಿಲ್ಲ" ಎಂದ.

ಸರಿ, ರಸಿಕನು ನೆಯಿಗೆಯ ಶಾಲೆಯಲ್ಲಿ ಶಿಕ್ಷಕನಾಗಿ ಕಲಿಕತ್ತೆಗೆ ಬಂದ. ಇಷ್ಟು ದಿನಗಳಾದ ಮೇಲೆ ಊಟ, ವಸತಿಯ ವೆಚ್ಚವಾದ ಮೇಲೆ ಸ್ವಲ್ಪ ಹಣ ಉಳಿಸಿಟ್ಟುಕೊಳ್ಳಬಹುದಾದರೂ ಬೈಸಿಕಲ್ಲ ಚಕ್ರದ ಗುರಿ ಹೊಡೆಯಬೇಕಾದರೆ ಇನ್ನೂ ನಿಧಾನವಿದೆ. ಇನ್ನು ಮದುವೆ ಹೆಣ್ಣಿನ ಯೋಚನೆ ದೂರವಿರಲಿ. ಈ ಮಧ್ಯೆ ನೆಯಿಗೆಯ ಶಾಲೆ ಮೊದಲು ಹೇಗೆ ಒಮ್ಮೆಗೇ ಮನಸ್ಸಿಗಿಂಬಾಗಿ ಹೊಳೆದಿತ್ತೋ ಹಾಗೆ ಹಠಾತ್ತಾಗಿ ಅದರ ಹೊಳಪು ಮಸಕಾಗಿ ಹೋಯಿತು. ಕಮಿಟಿಯ ಬಾಬುಗಳು ಮೀಟಿಂಗು ಮಾಡುತ್ತಿದ್ದಾಗೇನೋ ಚಮತ್ಕಾರವಾಗಿರುತ್ತದೆ. ಆದರೆ ಅವರು ಕೆಲಸಕ್ಕಿಳಿದಾಗಂತೂ ದೊಡ್ಡ 'ಪಂಚಾಯತಿ.' ಅವರು ನಾನಾ ದೇಶಗಳಿಂದ ನಾನಾ ವಿಧವಾದ ಮಗ್ಗಗಳನ್ನು ತರಿಸಿ ನಾನಾ ನಮೂನೆಗಳನ್ನು ಬೆರಕೆಮಾಡಿ ಕಡೆಗೆಲ್ಲಾ ದೊಡ್ಡ ಗೊಂದಲ ಮಾಡಿಬಿಟ್ಟಿದ್ದರು. ಆಮೇಲೆ ಅವರಿಗೇ ಬೇಸರವಾಗಿ ಎಲ್ಲಾ ಪೀಡೆಯನ್ನೂ ಯಾಪೆ ತಿಪ್ಪೆಗೆಸೆದುಬಿಡಬೇಕೆಂದು ಕಮಿಟಿಯಾದ ಮೇಲೆ ಕಮಿಟಿ ಸೇರಿ ಇತ್ಯರ್ಥ ಮಾಡಲಾರದೆ ಹೋದರು.

ರಸಿಕನಿಗೆ ಇನ್ನು ತಡೆಯುವುದು ಸಾಧ್ಯವಿಲ್ಲ. ಮನೆಗೆ ಮರಳಿ ಹೋಗ ಬೇಕೆಂದು ಅವನ ಜೀವ ಹಾತೊರೆಯುತ್ತಿತ್ತು. ಕಣ್ಮುಂದೆ ಅವನ ಗ್ರಾಮ ಜೀವನದ ಚಿತ್ರಗಳೇ ಯಾವಾಗಲೂ ಮೂಡಿ ಬರುತ್ತಿದ್ದುವು. ಅತಿಸಾಮಾನ್ಯ ತುಚ್ಛ ನಡೆವಳಿಕೆಗಳೂ ಉಜ್ವಲಗೊಂಡು ಮನಸ್ಸಿನ ಮುಂದೆ ಸುಳಿದುವು. ಆ ಊರ ಪುರೋಹಿತರ ಅರೆಹುಚ್ಚಾದ ಮಗ. ತಮ್ಮ ನೆರೆಮನೆಯ ಹಳದಿ ಬಣ್ಣದ ಕರು. ಹೊಳೆಯ ಹಾದಿಯಲ್ಲಿ ಹೋಗುವಾಗ ರಸ್ತೆಯ ದಕ್ಷಿಣ ಭಾಗದಲ್ಲಿ ಒಂದು ತಾಳೆಯ ಮರದ ಬುಡಕ್ಕೆ ಅಶ್ವತ್ಥಗಿಡದ ಬುಡ ಸೇರಿಸಿಕೊಂಡು ಎರಡು ಮರಗಳೂ ಬೆಳೆದು ಪರಸ್ಪರ ಕುಸ್ತಿಗೆ ಅಣಿಯಾಗಿ ನಿಂತಿರುವಂತೆ ಒಂದರ ಮುಂದೊಂದು ನಿಂತಿವೆ. ಆ ಮರಗಳಡಿಯಲ್ಲೇ ಒಂದು ಯಾರೂ ವಾಸಮಾಡದ ಹಾಳುಬಿದ್ದ ಗುಡಿಸಲು. ಅದರ ಸುತ್ತ ಮಾಗಿಯ ಬತ್ತದ ಪೈರು. ಒಂದು ಪಾರ್ಶ್ವದಲ್ಲಿ ಆಳವಾದ ಕೊಳದ ನೀರಿನಲ್ಲಿ ಮೀನು ಹಿಡಿಯುವ ಬಲೆ ಹೆಣೆಯಬೇಕೆಂದು ಬಿದಿರಿನ ಚೌಕಟ್ಟು ಹರಡಲ್ಪಟ್ಟಿದೆ. ಅದರ ಮೇಲೆ ಒಂದು ಬಕಪಕ್ಷಿ ಕೂತಿದೆ. ಬೆಸ್ತರ ಹಟ್ಟಿಯಿಂದ ಸಂಜೆಯಾಯಿತೆಂದರೆ ಬಯಲನ್ನ ಪಾರುಮಾಡಿಕೊಂಡು ಹರಿಕೀರ್ತನೆಯ ಹಾಡಿನ ಶಬ್ದ ಕೇಳಬರುತ್ತದೆ. ಬೇರೆಬೇರೆ ಋತುಗಳಲ್ಲಿ ನಾನಾಪ್ರಕಾರವಾದ ವಾಸನೆಗಳು ಬೆರಕೆಯಾದ ನರುಗಂಪು, ಗ್ರಾಮದ ನೆರಳು ತುಂಬಿದ ಹಾದಿಯ ಮೇಲೆ ಸ್ತಬ್ಧವಾಗಿ ಆವರಿಸಿಕೊಂಡಿದೆ. ಮತ್ತು ಅದರ ಸಂಗಡವೇ ಸೇರಿಕೊಂಡು ಅವನ ಭಕ್ತ ವೃಂದದ ಹುಡುಗರ ತಂಡ, ಆ ಚಪಲಮನದ ಗೋಪಾಲ, ಆ ಬೊಗಸೆಗಂಗಳ, ಸೆರಗಿನಲ್ಲಿ ಎಲೆ ಅಡಕೆಗಳನ್ನ ಕಟ್ಟಿಕೊಂಡು

ಇರುವ ಮುಗ್ಧ ಸೌರಭಿ,—ಇವರೆಲ್ಲರ ನೆನಹು, ಚಿತ್ರದ, ಶಬ್ದದ, ಸುಗಂಧದ ನೆನಪುಗಳು, ಸ್ನೇಹದ, ವಾತ್ಸಲ್ಯದ ವೇದನೆಯ ನೆನಪುಗಳು, ಇವೆಲ್ಲ ಸೇರಿ ಅವನ ಮನವನ್ನಾಕ್ರಮಿಸಿ ಸ್ವಲ್ಪವೂ ನೆಮ್ಮದಿ ಕೊಡದೆ ಕೂತುವು. ಗ್ರಾಮದಲ್ಲಿದ್ದಾಗ ನಾನಾಬಗೆಯಾದ ಕುಶಲತೆಯ ವಸ್ತುಗಳನ್ನು ರಚಿಸಿ ಗೆಳೆಯರ ಮೆಚ್ಚುಗೆ ಪಡೆದು ಆತ್ಮತೃಪ್ತಿಯನ್ನೂ ಉಂಟುಮಾಡಿಕೊಳ್ಳುತ್ತಿದ್ದ. ಈಗದಕ್ಕೆ ಅವಕಾಶವಿಲ್ಲ. ಇಲ್ಲಿ ಅವುಗಳಿಗೆ ಬೆಲೆ ತಾನೇ ಎಲ್ಲಿ! ಇಲ್ಲಿನ ಪೇಟೆ, ಬಜಾರುಗಳ ಅಂಗಡಿಗಳಲ್ಲಿ ಕೈಗಾರಿಕೆ ಕೆಲಸದ ವಸ್ತುಗಳು ನಾಚುವಂತೆ ಯಂತ್ರದಿಂದ ತಯಾರಾದ ಬಗೆ ಬಗೆಯ ಸಾಮಾನುಗಳು ದೊರಕುತ್ತವೆ. ನೆಯಿಗೆಯ ಶಾಲೆಯ ನೌಕರಿಯು ಹೆಸರಿಗೆ ಮಾತ್ರ ಕೆಲಸ. ಅದೊಂದು ವಿಡಂಬನೆ. ಮನಕ್ಕೆ ಸ್ವಲ್ಪವೂ ತೃಪ್ತಿಯಿಲ್ಲ. ಷಹರಿನ ನಾಟ್ಯಮಂದಿರಗಳ ಕೋರೈಸುವ ಬೆಳಕು ಹಲವೊಮ್ಮೆ ಅವನ ಕಣ್ಣುಗಳನ್ನೂ, ಮನವನ್ನೂ ಆಕರ್ಷಿಸಿತ್ತು, ಪತಂಗವನ್ನು ಸಾವಿನ ದಾರಿಗೆಳೆಯುತ್ತಿರುವ ದೀಪದ ಬೆಳಕಿನಂತೆ. ಸದ್ಯ, ಹಣ ಕೂಡಿಡುವ ಹಠ ಅವನನ್ನ ಬದುಕಿಸಿತು. ಪ್ರಪಂಚದ ಎಲ್ಲ ರಸ್ತೆಗಳೂ ತೆರೆದಿದ್ದುವು. ಅವನ ಗ್ರಾಮದ ಕಡೆ ಹೋಗುವ ರಸ್ತೆ ಮಾತ್ರ ತಡೆಹಾಕಲ್ಪಟ್ಟಿದೆ. ಆ ಕಾರಣದಿಂದಲೇ ಪ್ರತಿ ಕ್ಷಣವೂ ಊರಿನ ಹುಚ್ಚು ಅವನನ್ನು ಹಾಗೆ ಎಳೆಯುತ್ತಿದ್ದುದು. ನೆಯಿಗೆಯ ಶಾಲೆಯ ಮೇಲೆ ಮೊದಲು ಮೊದಲು ಅವನಿಗೆ ಬಹಳ ಭರವಸೆಯಿತ್ತು. ಆದರೆ ಈಗ ಎರಡು ತಿಂಗಳ ಸಂಬಳ ಕೂಡ ಅವನಿಗಿನ್ನೂ ಪಾವತಿಯಾಗದಿರುವಾಗ ಅಂತಹ ಭರವಸೆ ಎಲ್ಲಿಂದ ಬಂದೀತು? ಇನ್ನು ತನ್ನನ್ನು ತಾನೇ ತಡೆದಿಟ್ಟುಕೊಳ್ಳಲಾರ. ನಾಚುಗೆಯನ್ನು ನುಂಗಿಕೊಂಡು, ಸೋಲೊಪ್ಪಿಕೊಂಡು ತಲೆಬಾಗಿಸಿ ಈ ಒಂದು ವರುಷದ ದೇಶಾಂತರವಾಸದ ದೊಡ್ಡ ವ್ಯರ್ಥತೆಯನ್ನು ಹೊತ್ತುಕೊಂಡು ಮತ್ತೆ ಅಣ್ಣನ ಆಶ್ರಯವನ್ನು ಬೇಡಲು ಹೋಗುವುದೇ ಸರಿ ಎಂದು ಸುಮ್ಮನೆ ಮನಸ್ಸಿನಲ್ಲನ್ನಿಸಹತ್ತಿತು.

ಯಾವಾಗ ಹೋದೇನು, ಯಾವಾಗ ಹೋದೇನು ಎಂದು – ಹೀಗೆ ಮನ ಚಡಪಡಿಸುತ್ತಿದ್ದಾಗ ಒಂದು ದಿನ ಅವನು ವಾಸವಾಗಿದ್ದ ಮನೆಯ ಬಳಿ ಯಾರದೋ ಒಬ್ಬರ ಮನೆಯಲ್ಲಿ ಬಹಳ ವಿಜೃಂಭಣೆಯಿಂದ ಮದುವೆಯಾಯಿತು. ಸಂಜೆಯ ವೇಳೆ ವರಪೂಜೆಯ ಮೆರವಣಿಗೆಯಾಯಿತು. ಆ ರಾತ್ರಿಯೇ ರಸಿಕನು ಕನಸನ್ನ ಕಂಡ. ತನ್ನ ತಲೆಯ ಮೇಲೆ ಮದುಮಗನ ಟೊಪ್ಪಿಗೆ, ಹಣೆಗೆ ಬಾಷಿಂಗ, ಮೈ ಮೇಲೆ ಕೆಂಪುರೇಶಿಮೆಯ ವಸ್ತ್ರ. ಆದರೆ ಅವನು ತನ್ನೂರಿನ ಬಿದಿರು ಮೆಳೆಯ ಹಿಂದುಗಡೆ ಮರೆಯಲ್ಲಿ ನಿಂತಿದ್ದಾನೆ. ಊರಿನ ಹುಡುಗ, ಹುಡುಗಿಯರೆಲ್ಲ "ನಿನ್ನ ಗಂಡ ನೋಡೆ, ನಿನ್ನ ಗಂಡ ನೋಡೇ..." ಎಂದು ಸೌರಭಿಯನ್ನು ಗೇಲಿಮಾಡುತ್ತಿದ್ದಾರೆ. ಸೌರಭಿಯು ನಾಚಿ, ಕೆಂಪಡರಿ ಅಳುತ್ತಿದ್ದಾಳೆ. ರಸಿಕನಿಗೆ ಅವರನ್ನೆಲ್ಲಾ ಅಟ್ಟಿ

ಬಿಡಬೇಕೆಂದು ಆತುರವಾಗಿ ಆ ಕಡೆ ಓಡಬೇಕೆನ್ನಿಸುತ್ತದೆ. ಆದರೆ, ಹಾಳು, ಅವನ ವಸ್ತ್ರ ಆ ಬಿದಿರು ಮೆಳೆಯೊಳಗೆ ಸಿಕ್ಕಿಹಾಕಿಕೊಂಡುಬಿಟ್ಟಿದೆ. ಎಷ್ಟು ಒದ್ದಾಡಿದರೂ ಬಿಡಿಸಿಕೊಂಡು ದಾರಿಮಾಡಿಕೊಂಡು ಬರುವುದಕ್ಕಾಗುತ್ತಿಲ್ಲ. ಇದ್ದಕ್ಕಿದ್ದಂತೆ ಎಚ್ಚರವಾಗೆದ್ದು ರಸಿಕನ ಮನದಲ್ಲಿ ಬಹಳ ನಾಚುಗೆಯಾಯಿತು. ತನ್ನ ಮದುವೆ ಹೆಣ್ಣು ತನಗಾಗಿ ಕಾದಿದ್ದಾಳೆ...ಆದರೆ ತನಗೆ ಮಾತ್ರ ಅವಳನ್ನು ಮನೆಗೆ ಕರೆದುಕೊಂಡು ಬರುವುದಕ್ಕೆ ಯೋಗ್ಯತೆಯಿಲ್ಲ-ಇದೇ ಅವನ ಹೇಡಿತನವು ತುಟ್ಟತುದಿಯ ಶಿಖರಮುಟ್ಟಿದ ಕುರುಹು. ಉಹುಂ-ಇಲ್ಲ... ಇಷ್ಟು ದೊಡ್ಡ ಹೀನತೆಯನ್ನು ಅಂಗೀಕರಿಸಿ ತನ್ನೂರಿಗೆ ಹೀಗೆ ಹಿಂದಿರುಗಿ ಹೋಗುವುದೆಂದರೆ ಅವನ ಕೈಯಲ್ಲಾಗದ ಕೆಲಸ.

ಅನಾವೃಷ್ಟಿ ಮುಸುಗಿಕೊಂಡಿರುವಾಗ ದಿನವಾದ ಮೇಲೆ ದಿನ ಕಳೆದು ಹೋಗುತ್ತದೆ ಹೇಗೋ. ಮೋಡವನ್ನಿನ್ನು ನೋಡುವಹಾಗಿಲ್ಲ. ಇದ್ದಕ್ಕಿದ್ದ ಹಾಗೆ ಮೋಡ ಒಮ್ಮೆ ಕಾಣಿಸಿಕೊಂಡರೂ ಮಳೆ ಬೀಳುವುದಿಲ್ಲ. ಒಂದು ಪಕ್ಷ ಮಳೆ ಬಿದ್ದರೂ ಅದರಿಂದ ನೆಲ ಕೂಡ ತೋಯುವುದಿಲ್ಲ. ಆದರೆ ಸರಿಯಾಗಿ ಮಳೆ ಬೀಳಲು ಆರಂಭವಾದರೆ ಆಗ ದಿಗಂತದ ಒಂದು ಮೂಲೆಯಲ್ಲೆಲ್ಲೋ ಮೋಡ ಕಾಣಿಸಿಕೊಂಡರೂ ಸಾಕು, ನೋಡುತ್ತ ನೋಡುತ್ತ ಆಕಾಶವನ್ನೆಲ್ಲಾ ಮುಸುಗಿಬಿಡುತ್ತದೆ. ಆಮೇಲೆ ಎಡೆಬಿಡದೆ ಸುಮ್ಮನೆ ಮಳೆ ಸುರಿದು ಇಡೀ ಭೂಮಂಡಲವನ್ನ ತೊಡೆದುಹಾಕುವುದಕ್ಕೆ ಹೊರಟಿದೆಯೇನೋ ಅನ್ನಿಸುತ್ತದೆ. ಹಠಾತ್ತಾಗಿ ರಸಿಕನ ಭಾಗ್ಯದಲ್ಲೂ ಇದೇ ಬಗೆಯಾಯಿತು.

ಜಾನಕೀ ನಂದಿಯೆಂಬವನೊಬ್ಬ ಭಾರೀ ಹಣವಂತ. ಅವನಿಗೆ ಯಾರೋ ಒಬ್ಬರಿಂದ ಸುದ್ದಿಯೊಂದು ತಿಳಿಯಿತು. ನೆಯಿಗೆಯ ಶಾಲೆಯ ಎದುರು ಬದಿಯಲ್ಲಿ ಅವನ ಜೋಡಿ ಕುದುರೆಗಾಡಿ ಬಂದು ನಿಂತುಕೊಂಡಿತು. ನೆಯಿಗೆ ಶಾಲೆಯ ಶಿಕ್ಷಕನೊಂದಿಗೆ ಅವನು ಸ್ವಲ್ಪ ಮಾತುಕಥೆ ನಡೆಸಿದ. ಮರುದಿನವೇ ರಸಿಕನು ತನ್ನ ಹಾಸ್ಟೆಲಿನ ವಾಸವನ್ನು ತೊರೆದು ನಂದೀಬಾಬುಗಳ ದೊಡ್ಡ ಮೂರಂತಸ್ತಿನ ಮನೆಯ ಕೋಣೆಯೊಂದರಲ್ಲಿ ಬಿಡದಿಮಾಡಿದ.

ನಂದೀ ಬಾಬುಗಳು ವಿಲಾಯಿತಿಯ ಕೆಲವು ವಾಣಿಜ್ಯ ಸಂಸ್ಥೆಗಳೊಂದಿಗೆ ಕಮಿರ್ಷ ವ್ಯವಹಾರ ನಡೆಸುತ್ತಿದ್ದರು. ಅಂತಹ ಈ ಜಾನಕೀನಂದಿಗಳು ಅವನು ಅಪೇಕ್ಷಿಪಡದೆಯೇ, ತಮ್ಮ ಈ ಕಾರುಬಾರಿನಲ್ಲಿ ಸಣ್ಣ ಉದ್ಯೋಗದಲ್ಲಿ ನಿಯಮಿಸಿ ಅದಕ್ಕೆ ಇಷ್ಟು ದೊಡ್ಡ ಸಂಬಳವೇಕೆ ಕೊಡುತ್ತಿದ್ದಾರೋ ರಸಿಕನಿಗೆ ಅರ್ಥವಾಗಲಿಲ್ಲ. ಅಂತಹ ನೌಕರಿಗಳಿಗೆ ಉಮೇದುವಾರರನ್ನು ಹುಡುಕಲೇಬೇಕಾಗಿಲ್ಲ. ಮತ್ತು ಜನ ಸಿಕ್ಕಿದರೂ ಅವರಿಗಾವ ಆದರವೂ ಬೇಕಾಗುವುದಿಲ್ಲ. ನೌಕರಿಯ ಬಜಾರಿನಲ್ಲಿ ತನ್ನ ಬೆಲೆ ಎಷ್ಟೆಂದು ಈಗಾಗಲೇ ವೇದ್ಯವಾಗಿದೆ ರಸಿಕನಿಗೆ. ಹೀಗಿರುವಾಗ

ಜಾನಕೀಬಾಬುಗಳು ಅವನನ್ನು ಮನೆಗೆ ಕರೆತಂದು ಇಟ್ಟುಕೊಂಡು ಆದರೋಪಚಾರಗಳನ್ನು ಮಾಡುತ್ತಿದ್ದರೆ ರಸಿಕನಿಗಾಗ ಇಷ್ಟು ಆಪ್ಯಾಯನದ ಮೂಲ ಕಾರಣವನ್ನು ದೂರದ ಮುಗಿಲಿನ ಗ್ರಹನಕ್ಷತ್ರಗಳಲ್ಲಿ ಅಲ್ಲದೆ ಬೇರೆ ಕಡೆ ಹುಡುಕಲಾಗಲಿಲ್ಲ.

ಆದರೆ ಅವನ ಶುಭಗ್ರಹವೇನೋ ಅಷ್ಟು ದೂರದಲ್ಲಿರಲಿಲ್ಲ. ಅದಕ್ಕೆ ಸ್ವಲ್ಪ ಸಂಕ್ಷಿಪ್ತ ವಿವರವನ್ನು ಇಲ್ಲಿ ಕೊಡುವುದಾವಶ್ಯಕ.

ಹಿಂದೆ ಒಂದಾನೊಂದು ಕಾಲದಲ್ಲಿ ಜಾನಕೀಬಾಬುಗಳ ಅವಸ್ಥೆ ಇಷ್ಟು ಚೆನ್ನಾಗಿರಲಿಲ್ಲ. ಆತನು ಅತಿ ಕಷ್ಟದಿಂದ ಕಾಲೇಜಿನಲ್ಲಿ ಓದುತ್ತಿದ್ದಾಗ ಆತನ ಸಹಪಾಠಿ ಹರಮೋಹನ ಬಸು ಎಂಬುವನು ಅವನಿಗೆ ಅತಿ ಹತ್ತಿರದ ಗೆಳೆಯ. ಹರಮೋಹನನು ಬ್ರಹ್ಮ ಸಮಾಜದವ. ಈ ಕಮೀರ್ಷ ಏಜೆನ್ಸಿಯು ಅವನ ತಂದೆಯ ಕಾಲದ್ದು. ಅವರ ಗಿರಾಕಿಯಾದ ಒಬ್ಬ ಆಂಗ್ಲ ವರ್ತಕ ಹರಮೋಹನನ ತಂದೆಯನ್ನು ಬಹಳ ಗೌರವಿಸುತ್ತಿದ್ದ. ಆತನೇ ಅವನಿಗೆ ಈ ಕಮೀರ್ಷ ಏಜೆನ್ಸಿಯನ್ನು ಕೊಡಿಸಿದ್ದು. ಹರಮೋಹನನು ತನ್ನ ಆಪ್ತ ಗೆಳೆಯನಾದ ಜಾನಕೀನಂದಿಗೆ ಅದನ್ನು ವಹಿಸಿದ.

ಆಗ ದರಿದ್ರಾವಸ್ಥೆಯಲ್ಲಿದ್ದಾಗಲೂ ಹೊಸ ಪ್ರಾಯದ ಹುರುಪಿನಲ್ಲಿ ಸಮಾಜಸುಧಾರಣೆಯ ಸಂಬಂಧವಾಗಿ ಜಾನಕಿಗೆ ಉತ್ಸಾಹ ಹರಮೋಹನನಿಗಿಂತಲೂ ಕಡಿಮೆಯೇನಲ್ಲ. ಆ ಕಾರಣದಿಂದಲೇ ಅವನು ತಂದೆಯ ಸಾವಾದ ಅನಂತರ ತನ್ನ ತಂಗಿಗೆ ಗೊತ್ತಾಗಿದ್ದ ಮದುವೆಯ ಸಂಬಂಧವನ್ನು ತಪ್ಪಿಸಿ ಅವಳಿಗೆ ಉನ್ನತ ವಿದ್ಯಾಭ್ಯಾಸ ಕೊಡಿಸಲೋಸುಗ ಹೆಚ್ಚು ವಯಸ್ಸಾಗುವವರೆಗೂ ಓದಿಸತೊಡಗಿದ. ಆಗ ಅವನ ನೆಯಿಗೆ ಕುಲದಲ್ಲಾದರೂ ಅವನ ತಂಗಿಯನ್ನು ಲಗ್ನವಾಗಲು ಮುಂದೆ ಬರಲಿಲ್ಲ. ಕಾಯಸ್ಥಜಾತಿಯ ಹರಮೋಹನನೇ ತಾನಾಗಿ ಆ ಭಾರ ಹೊತ್ತು ಅವನನ್ನು ಉದ್ಧಾರಮಾಡಲು ಬಂದು ಹುಡುಗಿಯನ್ನು ಲಗ್ನವಾದನು.

ಎಷ್ಟೋ ದಿನಗಳು ಕಳೆದುವು. ಹರಮೋಹನನ ಸಾವಾಯಿತು. ಜಾನಕಿ ನಂದಿಯ ತಂಗಿಯೂ ಸತ್ತುಹೋದಳು. ಭಾವನ ವ್ಯಾಪಾರ ಸಂಸ್ಥೆಯೆಲ್ಲಾ ಜಾನಕಿಯ ವಶಕ್ಕೆ ಬಂತು. ಕ್ರಮೇಣ ಬಾಡಿಗೆ ಮನೆ ಹೋಗಿ ಮೂರು ಮಹಡಿಯ ಮಹಲಾಯಿತು. ಬಹಳ ಕಾಲದಿಂದಿದ್ದ ನಿಕ್ಕಲಿನ ಗಡಿಯಾರಕ್ಕೆ ಅವಮಾನಮಾಡಿ ಬಿಸಾಟು, ಅದರ ಬದಲಾಗಿ ಚಿನ್ನದ ಗಡಿಯಾರ ಅವನ ಎದೆಯ ಬಳಿ "ಟಕ್, ಟಕ್" ಶಬ್ದ ಮಾಡತೊಡಗಿತು.

ಈ ರೀತಿಯಲ್ಲಿ ಅವನ ಹಣ ವೃದ್ಧಿಯಾಗುತ್ತ ಬಂದ ಹಾಗೆಲ್ಲ ಅವನ ಕಿರಿತನದ ಬಡತನದ ಅವಸ್ಥೆಯಲ್ಲಿದ್ದ ಉತ್ಸಾಹ, ಧ್ಯೇಯಗಳೆಲ್ಲ ಅವನ ಮುಂದೆ ಈಗ ಬರೇ ಹುಡುಗುತನದ ಹುಚ್ಚು ಎನ್ನಿಸಿತು. ಹೇಗಾದರೂ ಮಾಡಿ ಅವನ

ವಂಶದ ಪುರಾತನ ಇತಿಹಾಸದ ಈ ತಾತ್ಕಾಲಿಕ ಅಧ್ಯಾಯವನ್ನು ಅಳಿಸಿಬಿಟ್ಟು ಮತ್ತೆ ತನ್ನ ಜಾತಿಯಲ್ಲಿ ಪ್ರತಿಷ್ಠಿತನೆನ್ನಿಸಿಕೊಂಡರೆ ಸಾಕು, ಎಂಬ ಒಂದೇ ಹಠ ಈಗ. ತನ್ನ ಮಗಳನ್ನು ತನ್ನ ಜಾತಿಯವನಿಗೇ ಕೊಟ್ಟು ಲಗ್ನ ಮಾಡುತ್ತೇನೆ ಎಂದವನ ತೀರ್ಮಾನವಾಯಿತು. ಹಣದಾಸೆ ಹುಟ್ಟಿಸಿ ಒಂದೆರಡು ಹುಡುಗರನ್ನು ಒಪ್ಪಿಸಿದ್ದ. ಆದರೆ ಹೇಗೋ ಈ ಸುಳಿವು ತಿಳಿದ ಅವನ ಬಂಧುಗಳಲ್ಲಿ ಕೆಲವರು ಆ ಸಂಬಂಧಗಳನ್ನು ತಪ್ಪಿಸಿಬಿಟ್ಟಿದ್ದರು. ಶಿಕ್ಷಿತನಾದ ಸತ್ಪಾತ್ರನೇ ಸಿಕ್ಕದೇ ಹೋದರೂ ಪರವಾಯಿಲ್ಲ. ನಡೆದೀತು. ಮಗಳ ಭಾವೀ ಜೀವನವನ್ನು ಕೆರೆಯ ಪಾಲು ಮಾಡಿಯಾದರೂ ಸರಿ, ಜಾತಿ ದೇವತೆಯ ಪೂಜೆಮಾಡಿ ಅದರ ಅನುಗ್ರಹ ಪಡೆದರೆ ಅವನ ಬಾಳು ಸಾರ್ಥಕ.

ಇಂತಹ ಸಮಯದಲ್ಲಿ ಅವನಿಗೆ ನೆಯಿಗೆಯ ಶಾಲೆಯ ಮಾಸ್ತರನ ವಿಷಯ ತಿಳಿಯಿತು. ಅವನು ಥಾನಾಗಡದ ಬಸಾಕ್ ವಂಶದ ಹುಡುಗ. ಅವನ ವಂಶದ ಪೂರ್ವ ಪುರುಷನಾದ ಅಭಿರಾಮ ಬಸಾಕನನ್ನ ಎಲ್ಲರೂ ಬಲ್ಲರು. ಈಗ ಅವನ ಅವಸ್ಥೆ ಸ್ವಲ್ಪ ಕೆಳಮಟ್ಟಕ್ಕೆ ಇಳಿದಿದ್ದರೇನಂತೆ? ಆದರೆ ವಂಶ ಮಾತ್ರ ಜಾನಕೀನಂದಿಯವರಿಗಿಂತಲೂ ಮೇಲು ಮಟ್ಟದ್ದು.

ದೂರದಿಂದ ನೋಡಿಯೇ ಮನೆಯ ಯಜಮಾನಿಗೆ ಹುಡುಗನ ಒಪ್ಪಿಗೆಯಾಯಿತು.

"ಹುಡುಗನ ಓದು ಎಲ್ಲಿಯವರೆಗಾಗಿದೆ?" ಎಂದು ಗಂಡನನ್ನು ಕೇಳಿದಳು.

ಜಾನಕೀಬಾಬು "ಓದು ತಿಪ್ಪೆಗೆ ಹೋಗಲಿ. ಓದಂತೆ! ಈಗಿನ ಕಾಲದಲ್ಲಿ ನಾಲ್ಕಕ್ಷರ ಬಂತು ಅಂದರೆ ಸಾಕು, ಜಾತಿಗೀತಿ ಎಲ್ಲ ಮರೆತು ಕೂತುಕೊಳ್ಳುತ್ತಾರೆ" ಎಂದು ಉದ್ಗರಿಸಿದರು.

"ಆಸ್ತಿಪಾಸ್ತಿ?"

"ಆಂ....ಏನಂದೆ, ಆಸ್ತಿಯೇ? ....ಹೂ, ಇದೆ ಬೇಕಾದಷ್ಟು, ... ಹಿಂದಿನ ಆಸ್ತಿಯ ನೆನಪು, ಅಷ್ಟೇ. ಈಗ ಏನೂ ಇಲ್ಲ. ನನಗೆ ಬೇಕಾಗಿರುವುದೂ ಅದೇ." ಆಗ ಯಜಮಾನಿ "ಬಂಧುಬಳಗಗಳು ಬಹಳ ಇದಾರಾ? ಅವರನ್ನೆಲ್ಲ ಕರೆಸಬೇಕಾಗುತ್ತೆ" ಎಂದು ಗೊಣಗಿದಳು.

"ನೋಡು...ಏನೇನೋ ತೆಗಿಯಬೇಡ-ಹಿಂದೆ ಅಂಥವೆಲ್ಲ ಆಗಿದೆ. ಬಂಧು ಬಳಗಗಳೆಲ್ಲ ಬಂದಿದ್ದರು... ಆದರೆ ಮದುವೆ ಆಗಲಿಲ್ಲ. ಈ ಸಲ ಮನಸ್ಸು ಮಾಡಿದೇನೆ, ಮೊದಲು ಮದುವೆ ಮಾಡಿಬಿಡುತ್ತೇನೆ, ಬಂಧು ಬಳಗಗಳನ್ನೆಲ್ಲ ಆಮೇಲೆ ಕರೆಸಿ ಉಪಚಾರ ಮಾಡೋಣವಂತೆ" ಎಂದದ್ದೇ ಮುಂದಿನ ಏರ್ಪಾಡು ಮಡುವ ಬಗ್ಗೆ ಆಲೋಚಿಸತೊಡಗಿದರು.

ರಸಿಕನು ಹಗಲು, ರಾತ್ರಿ ತನ್ನ ಗ್ರಾಮಕ್ಕೆ ಮರಳುವ ಚಿಂತೆಯಲ್ಲಿ ಮುಳುಗಿದ್ದಾಗ, ಮತ್ತು ಹೇಗೆ ತ್ವರೆಯಾಗಿ ತನಗೆ ಬೇಕಾಗಿದ್ದ ಹಣ ಸಂಪಾದನೆ ಮಾಡುವುದೆಂದು ಯೋಚಿಸುತ್ತಿದ್ದಾಗ ಅವನು ಅರಸುತ್ತಿದ್ದ ಫಲ ಅವನ ಬಾಯ ಬಳಿಯೇ ಬಂದು ನಿಂತುಕೊಂಡಿತು. "ಹೂಂ" ಎಂದೆನ್ನಲು ಅವನೊಂದು ಗಳಿಗೆ ಕೂಡ ತಡಮಾಡಲು ಇಷ್ಟಪಡಲಿಲ್ಲ.

ಜಾನಕೀಬಾಬು "ನಿಮ್ಮ ಅಣ್ಣನಿಗೆ ಸುದ್ದಿ ತಿಳಿಸಬೇಕೆಂದಿಷ್ಟವೋ?" ಎಂದು ಕೇಳಿದರು.

ರಸಿಕನು "ಇಲ್ಲ, ಅಗತ್ಯವಿಲ್ಲ" ಎಂದುಬಿಟ್ಟ. ಎಲ್ಲಾ ಸಾಂಗವಾಗಿ ನೆರವೇರಿದ ಮೇಲೆಯೇ ತಾನು ಹೋಗಿ ಅಣ್ಣನಿಗೆ ಆಶ್ಚರ್ಯಗೊಳಿಸಬೇಕೆಂದಿಷ್ಟ ಅವನಿಗೆ. ಕೆಲಸಕ್ಕೆ ಬಾರದವನೆಂದು ಹೆಸರು ತೆಗೆದಿದ್ದ ರಸಿಕನ ಸಾಮರ್ಥ್ಯವೆಂಥದೆಂದು ಪ್ರತ್ಯಕ್ಷಪ್ರಮಾಣ ಮಾಡಿಕೊಡುವುದರಲ್ಲಿ ಯಾವುದೂ ಕಡಿಮೆಯಿರುವುದಿಲ್ಲ.

ಶುಭ ಲಗ್ನದಲ್ಲಿ ಮದುವೆಯಾಗಿ ಹೋಯಿತು. ಎಲ್ಲ ವಿಧವಾದ ದಾನ ಸಾಮಗ್ರಿಗಳನ್ನು ಪಡೆಯುವುದಕ್ಕೆ ಮೊದಲು ರಸಿಕನು ಬೈಸಿಕಲ್ಲನ್ನು ಮುಖ್ಯವಾಗಿ ಕೇಳಿ ತೆಗೆದುಕೊಂಡ.

೭

ಆಗ ಮಾಘ ಮಾಸದ ಕೊನೆ. ಸಾಸುವೆ ಮತ್ತು ಹುಚ್ಚೆಳ್ಳಿನ ಹೂಗಳಿಂದ ತುಂಬಿವೆ ಹೊಲಗಳು. ಕಬ್ಬಿನ ಗದ್ದೆಗಳಲ್ಲಿ ಬೆಲ್ಲದ ತಯಾರಿಕೆ. ಪಾಕದ ನರುಗಂಪು ಗಾಳಿಯಲ್ಲಿ ಧಾರಾಳವಾಗಿ ಏರಿ ಬರುತ್ತಿದೆ. ಮನೆ ಮನೆಗಳಲ್ಲಿ ಕಣಜಗಳು ಕಾಳಿನಿಂದ ತುಂಬಿವೆ. ಗೊಲ್ಲರ ಹಟ್ಟಿಗಳ ಅಂಗಳಗಳಲ್ಲಿ ಒಣಹುಲ್ಲು ಗುಡ್ಡಗಳಾಗಿ ಪೇರಿಸಲ್ಪಟ್ಟಿದೆ. ನದಿಯ ಆ ಬದಿಯಲ್ಲಿ ಹುಲ್ಲುಗಾವಲುಗಳಲ್ಲಿ ದನಕರುಗಳು, ಎಮ್ಮೆಗಳ ಮಂದೆಗಳನ್ನು ಮುಂದೆ ಬಿಟ್ಟುಕೊಂಡು ಅಲ್ಲಲ್ಲೇ ಗುಡಿಸಲುಗಳನ್ನು ಕಟ್ಟಿಕೊಂಡು ಗೊಲ್ಲರು ವಾಸ ಮಾಡುತ್ತಾರೆ. ನೌಕಾಘಟ್ಟದಲ್ಲಿನ್ನು ಕೆಲಸವೇನೂ ಇಲ್ಲ. ನದಿಯ ನೀರೀಗ ಕಡಿಮೆಯಾಗುತ್ತಿದೆ. ಜನರು ಬಟ್ಟೆಗಳನ್ನು ಮೊಳಕಾಲಿನವರೆಗೂ ಎತ್ತಿಕೊಂಡು ನದಿಯನ್ನು ದಾಟಿ ಹೋಗಲು ಸಾಧ್ಯವಾಗುತ್ತಿದೆ.

ರಸಿಕನು ಕಾಲರ್ ಹೊಲಿಸಿರುವ ಷರಟನ್ನು ಧರಿಸಿ, ಢಾಕಾಧೋತರವನ್ನು ಕಚ್ಚೆಯಾಗಿ ಉಟ್ಟಿದ್ದಾನೆ. ಷರಟಿನ ಮೇಲೆ ಗುಂಡಿಗಳನ್ನು ಬಿಚ್ಚಿರುವ ಕರಿಯ ಬನಾತಿನ ಕೋಟು. ಪಾದಗಳಲ್ಲಿ ಬಣ್ಣದ ಹೂ ಕೆಲಸ ಮಾಡಿದ ಮೋಜಾ ಮತ್ತು ನಿಗನಿಗ ಹೊಳೆಯುತ್ತಿರುವ ಕರಿಯ ತೊಗಲಿನ ವಿಲಾಯಿತಿಯ ಶೋಕಿನ ಪಂಪ್ ಶೂ. ಡಿಸ್ಟ್ರಿಕ್ಟ್ ಬೋರ್ಡಿನ ಜಲ್ಲಿಯ ರಸ್ತೆಯಲ್ಲಿ ಬೈಸಿಕಲ್ಲನ್ನು ವೇಗ ಕಡಿಮೆ

ಮಾಡಬೇಕಾಗಿ ಬಂತು. ಗ್ರಾಮದ ಜನ ಅವನ ಈ ಹೊಸ ವೇಷ, ಭೂಷಣಗಳನ್ನು ನೋಡಿ ಗುರುತಿಸದೆ ಹೋದರು. ಅವನೂ ಯಾರನ್ನೂ ಮಾತನಾಡಿಸದೆ ಹೊರಟು ಬಂದ. ಇತರರಾರೂ ಅವನನ್ನು ಗುರುತಿಸುವುದಕ್ಕೆ ಮೊದಲೇ, ಮೊಟ್ಟಮೊದಲು ಅಣ್ಣನನ್ನ ಹೋಗಿ ಕಂಡು ಅವನನ್ನ ಚಕಿತನನ್ನಾಗಿ ಮಾಡಬೇಕು. ಮನೆಯ ಸಮೀಪದಲ್ಲಿ ಬಂದಾಗ ಸಣ್ಣ ಹುಡುಗರ ಕಣ್ಣುಗಳನ್ನು ತಪ್ಪಿಸಲಾಗಲಿಲ್ಲ. ಅವರು ಅವನನ್ನು ಒಂದೇ ನಿಮಿಷದಲ್ಲಿ ಗುರುತಿಸಿಬಿಟ್ಟರು.

ಸೌರಭಿಯ ಮನೆಯೂ ಹತ್ತಿರದಲ್ಲೇ. ಹುಡುಗರೆಲ್ಲಾ ಆ ದಿಕ್ಕಿನಲ್ಲಿ ಓಡುತ್ತ "ಹೋ, ಸೌರಿಯ ಗಂಡ ಬಂದಿದಾನೆ, ಸೌರಿಯ ಗಂಡ ಬಂದಿದಾನೆ..." ಎಂದು ಕೇಕೆಹಾಕುವುದಕ್ಕೆ ತೊಡಗಿದರು. ಗೋಪಾಲನು ಮನೆಯಲ್ಲೇ ಇದ್ದ. ಅವನು ಕೂಗು ಕೇಳಿ ಹೊರಗಡೆ ಓಡಿಬಂದ. ಅವನು ಹೊರಗೆ ಬರುವಷ್ಟರಲ್ಲಿ ಬೈಸಿಕಲ್ಲು ರಸಿಕನ ಮನೆಯ ಮುಂದುಗಡೆ ಬಂದು ನಿಂತಿತು.

ಆಗ ಸಂಜೆಯಾಗುತ್ತ ಬಂದಿತ್ತು. ಮನೆ ಕತ್ತಲು. ಹೊರಗಡೆ ಬೀಗ ತಗುಲಿಸಿತ್ತು. ನಿರ್ಜನವಾದ ಖಾಲಿಯಾದ ಮನೆ ನೀರವವಾಗಿ "ಇಲ್ಲಿ ಯಾರೂ ಇಲ್ಲ. ಯಾರೂ ಇಲ್ಲ" ಎಂದು ಅಳುತ್ತಿರುವ ಹಾಗಿದೆ. ಒಂದು ನಿಮಿಷದಲ್ಲಿ ರಸಿಕನ ಎದೆಯೊಳಗೆ ಇದ್ದುದೆಲ್ಲಾ ಕುಸಿದುಬಿತ್ತು. ಒಳಗಡೆ ಇದ್ದಕ್ಕಿದ್ದಹಾಗೆ ಎಲ್ಲಾ ಖಾಲಿ. ಕಣ್ಮುಂದೆ ಕಾಣುವುದೆಲ್ಲಾ ಮಂಜು ಮಂಜಾಗಿ ತೋರಹತ್ತಿತು. ಮುಚ್ಚಿದ ಬಾಗಿಲನ್ನು ಹಿಡಿದುಕೊಂಡು ಅವನು ನಿಂತೇ ಇದ್ದ. ಗಂಟಲು ಒಣಗಿಹೋಯಿತು. ಯಾರನ್ನೂ ಕೂಗಿ ಕರೆಯಲು ಶಕ್ತಿಯೂ ಇಲ್ಲ, ಸಾಹಸವೂ ಇಲ್ಲ. ದೂರದ ದೇವಾಲಯದಲ್ಲಿ ಸಂಜೆಯ ಮಂಗಳಾರತಿಯಾಗುವ ಮುಂಚೆ ಹೊಡೆದ ಜಾಗಟೆಯ ಶಬ್ದ ಯಾವುದೋ ಹಿಂದಿನ ಜನುಮದ ಹೊರದಡದಾಚೆಯಿಂದ ಸುಗಭೀರವಾದೊಂದು ವಿಯೋಗದ ವಾರ್ತೆಯನ್ನು ಹೊತ್ತುಕೊಂಡು ಅವನ ಕಿವಿಯ ಮೇಲೆ ಬೀಳುತ್ತಿತ್ತು. ಎದುರುಗಡೆ ಕಾಣುತ್ತಿದ್ದುದೆಲ್ಲ–ಆ ಮಣ್ಣಿನ ಗೋಡೆ, ಆ ಒಣಹುಲ್ಲಿನ ಛಾವಣಿ, ಈ ಬೀಗಹಾಕಿ ಮುಚ್ಚಿದ ಬಾಗಿಲು, ಈ ಮುಳ್ಳು ಗಿಡದ ಬೇಲಿ, ಈ ಬಾಗಿ ಬಿದ್ದಿರುವ ತಾಳೆಯ ಮರ....ಎಲ್ಲವೂ ಯಾವುದೋ ಕಳೆದುಹೋದ ಕುಟುಂಬದ ನೆರಳು ಮಾತ್ರ. ಇದು ಯಾವುದೂ ವಾಸ್ತವವಲ್ಲ.

ಗೋಪಾಲನು ಬಂದು ಹತ್ತಿರ ನಿಂತ. ರಸಿಕನು ಬಿಳಿಚಿದ ಮುಖವನ್ನು ಅವನ ಕಡೆ ತಿರುಗಿಸಿ ನೋಡಿದ. ಗೋಪಾಲನು ಏನೂ ಹೇಳದೆ ತಲೆ ತಗ್ಗಿಸಿದ. ರಸಿಕನಾಗ ಮೆಲ್ಲಗೆ "ಗೊತ್ತಾಯಿತು...ಗೊತ್ತಾಯಿತು ನನಗೆ. ಅಣ್ಣ ಇಲ್ಲ" ಎಂದು ತೊದಲಿದ. ಹಾಗೇ ಗೋಡೆಯನ್ನು ಹಿಡಿದುಕೊಂಡು ನೆಲದ ಮೇಲೆ ಕುಸಿದುಬಿದ್ದ.

ಗೋಪಾಲನು ಹತ್ತಿರ ಬಂದು ಕೂತು ಮೃದುವಾಗಿ ಹೆಗಲು ಮುಟ್ಟಿ "ರಸಿಕಣ್ಣಾ, ನಡಿ ನಮ್ಮ ಮನೆಗೆ ಹೋಗೋಣ" ಎಂದ. ರಸಿಕನು ಅವನೆರಡು

ಕೈಗಳನ್ನೂ ಬಿಡಿಸಿಕೊಂಡು ಆ ಮುಚ್ಚಿದ ಬಾಗಿಲ ಮುಂದೆ ಬೋರಲಾಗಿ ಬಿದ್ದು ಹೊರಳಾಡಿದ "ಅಣ್ಣಾ...ಅಣ್ಣಾ...ಅಣ್ಣಾ...!"

ಅವನ ಕಾಲಿನ ಸಪ್ಪುಳ ಕೇಳಿದೊಡನೆ ಎಲ್ಲಿದ್ರೂ ತಾನಾಗಿ ಓಡಿ ಬರುತ್ತಿದ್ದಂಥ ಅಣ್ಣ, ಇವತ್ತು ಎಲ್ಲೋ...! ಅವನ ಯಾವ ಸದ್ದೂ, ಸುಳಿವೂ ಇಲ್ಲ; ಎಲ್ಲಿ ಹೋದನೋ.

ಗೋಪಾಲನ ತಂದೆ ಬಂದು ಎಷ್ಟೋ ಹೇಳಿ ಸಂತೈಸಿ ರಸಿಕನನ್ನು ಮೆಲ್ಲಗೆ ತಮ್ಮ ಮನೆಗೆ ಕರೆದುಕೊಂಡು ಬಂದರು. ರಸಿಕನಲ್ಲಿ ಹೊಕ್ಕೊಡನೆ ನೋಡಿದ. ಸೌರಭಿಯು ಅವನಷ್ಟು ಜಾಣತನದಿಂದ ಹೆಣೆದಿದ್ದ ಕಸೂತಿಯ ಬಟ್ಟೆಯನ್ನು ಹೊದಿಸಿದ್ದ ಯಾವುದೋ ಒಂದು ಪದಾರ್ಥವನ್ನು ಜೋಪಾನವಾಗಿ ಗೋಡೆಗೊರಗಿಸಿಡುತ್ತಿದ್ದವಳು, ಯಾರೋ ಬಂದ ಕಾಲು ಸಪ್ಪುಳ ಕೇಳಿದೊಡನೆ ತಟಕ್ಕನೆ ಮುಖಕ್ಕೆ ಮುಸುಗೆಳೆದುಕೊಂಡು ಒಳಗೆ ಹೊರಟುಹೋದಳು. ರಸಿಕನು ಹತ್ತಿರ ಹೋಗಿ ನೋಡಿದ. ಆ ಕಸೂತಿಯ ಬಟ್ಟೆ ಹೊದಿಸಲ್ಪಟ್ಟಿದ್ದ ಪದಾರ್ಥ ಒಂದು ಹೊಸ ಬೈಸಿಕಲ್ಲು. ತಕ್ಷಣವೇ ಅದರ ಅರ್ಥವರಿಯಲು ತಡವಾಗಲಿಲ್ಲ ಅವನಿಗೆ. ಎದೆಯೊಡೆಯುವಂಥ ಅಳು ಅವನ ಹೃದಯದೊಳಗಣಿಂದ ಉಕ್ಕಿ, ಉಕ್ಕಿ ಬರುತ್ತ ಗಂಟಲಿನ ದ್ವಾರದಲ್ಲಿ ತಡೆಯಲ್ಪಟ್ಟಿತು...ಏನಾದರೂ ಮಾಡಿ ಎದೆಯೊಳಗಣ ಸಂಕಟ ತೋಡಿಕೊಳ್ಳೋಣವೆಂದರೆ ಕಣ್ಣೊಳಗಣ ನೀರೆಲ್ಲ ಹೊರಗೆ ಬರಲು ಅಡಚಣೆಯಾಯಿತು.

ರಸಿಕನು ಹೊರಟುಹೋದ ಮೇಲೆ ಬಂಶೀ ಹಗಲಿರುಳು ದುಡಿದು ಸೌರಭಿಯ ಕನ್ಯಾ ಶುಲ್ಕ, ಮತ್ತು ಈ ಬೈಸಿಕಲ್ಲನ್ನು ಕೊಳ್ಳುವ ಸಲುವಾಗಿ ಹಣ ಕೂಡಿಹಾಕತೊಡಗಿದ. ಅವನಿಗೊಂದು ಕ್ಷಣ ಕೂಡ ಬೇರಾವ ಯೋಚನೆಯೂ ಇರಲಿಲ್ಲ. ದಣಿದ ಕುದುರೆ ಒಂದೇ ಗಮನದಲ್ಲಿ ಗುರಿ ಮುಟ್ಟುವವರೆಗೂ ಓಡಿಕೊಂಡು ಹೋಗಿ ತಲಪಿದೊಡನೆ ಸತ್ತುಬೀಳುವ ಹಾಗೆ. ಎಂದು ಕನ್ಯಾಶುಲ್ಕದ ಹಣವನ್ನು ಪೂರ್ತಿಮಾಡಿ ಬೈಸಿಕಲ್ಲನ್ನು ವಿ.ಪಿ. ಮೂಲಕ ಪಡೆದನೋ ಆ ದಿನವೇ ಅವನ ಕೈ ಇನ್ನು ನಡೆಯದೆ ಹೋಯಿತು. ಅವನ ಮಗ್ಗ ಕೂಡ ಮುರಿದುಹೋಯಿತು. ಗೋಪಾಲನ ತಂದೆಯನ್ನು ಕರೆದು ಅವನ ಕೈಹಿಡಿದು "ಇನ್ನೊಂದು ವರುಷ ಮಾತ್ರ ರಸಿಕನಿಗಾಗಿ ಕಾದಿರಿ ದಯಮಾಡಿ, ಇಗೋ, ನಿಮ್ಮ ಕೈಯಲ್ಲಿ ಶುಲ್ಕದ ಹಣ ಕೊಟ್ಟಿದ್ದೇನೆ. ಯಾವತ್ತಿನ ದಿನ ರಸಿಕ ಬರುತ್ತಾನೋ ಆಗ ಅವನಿಗೆ ಈ ಎರಡು ಚಕ್ರದ ಗಾಡಿಯನ್ನು ಕೊಟ್ಟು "ನೋಡಪ್ಪ, ನೀನು ಕೇಳುತಾಯಿದ್ದ ಗಾಡಿಯನ್ನು ಕೂಡಲೇ ಕೊಡುವುದಕ್ಕೆ ನಿನ್ನ ನಿರ್ಭಾಗ್ಯ ಅಣ್ಣನ ಕೈಲಾಗಲಿಲ್ಲ, ಹಾಗಂತ ಕೋಪ ಇನ್ನೂ ಮನಸ್ಸಿನಲ್ಲಿಟ್ಟುಕೊಳ್ಳಬೇಡ, ಅಂತ ಹೇಳಿಬಿಡಿ" ಎಂದು ಹೇಳಿದ.

ಅಣ್ಣನ ದುಡ್ಡಿನಲ್ಲಿ ಕೊಂಡ ಉಪಹಾರವನ್ನು ತಾನೆಂದೂ ಮುಟ್ಟುವುದಿಲ್ಲವೆಂದು ಒಂದು ದಿನ ಶಪಥಮಾಡಿ ಹೊರಟುಹೋಗಿದ್ದ ರಸಿಕ. ವಿಧಾತನು ಅವನ ಆ

ಕಠೋರ ಶಪಥವನ್ನು ಕೇಳಿಸಿಕೊಂಡಿದ್ದ. ಇಂದು ಅದೇ ರಸಿಕ ಮನೆಗೆ ಮರಳಿ ಬಂದು ನೋಡಿದಾಗ, ಅಣ್ಣ ಕೊಂಡಿಟ್ಟ ಉಪಹಾರ ಅವನಿಗಾಗಿ ದಾರಿ ಕಾಯುತ್ತ ಇದೆ. ಆದರೆ ಅದನ್ನು ಗ್ರಹಣಮಾಡುವ ದ್ವಾರ ಮಾತ್ರ ಪೂರ್ತಿಯಾಗಿ ಮುಚ್ಚಿದೆ. ಅವನಣ್ಣ ಮಗ್ಗದಲ್ಲಿ ತನ್ನ ಬಾಳುವೆಯನ್ನೇ ನೆಯಿದು ತಮ್ಮನಿಗೆ ದಾನ ಮಾಡಿದ್ದಾನೆ. ರಸಿಕನಿಗಾಗ ತನಗಿರುವುದನ್ನೆಲ್ಲ ತ್ಯಜಿಸಿ ಆ ಮಗ್ಗದ ಮುಂದೆಯೇ ತನ್ನ ಮುಂದಿನ ಬಾಳುವೆಯನ್ನು ಕಳೆದುಬಿಡಬೇಕೆಂದು ಹಂಬಲಾಯಿತು. ಆದರೆ ಹಾಯ್, ಕಲಿಕತ್ತೆ ಷಹರಿನ ಹಣದ ಕಸಾಯಿ ಮನೆಯಲ್ಲಿ ತನ್ನ ಜೀವನವನ್ನು ಶಾಶ್ವತವಾಗಿ ಬಲಿಕೊಟ್ಟು ಬಂದಿದ್ದಾನೆ.

೬. ಹಾಲದಾರ್ ಕುಟುಂಬ

ಈ ಕುಟುಂಬದಲ್ಲಿ ಯಾವ ರೀತಿಯ ಗಲಾಟೆಯಾಗುವುದಕ್ಕೂ ಸರಿಯಾದ ಕಾರಣವಿಲ್ಲ. ಸ್ಥಿತಿವಂತ ಮನೆತನ. ಮನುಷ್ಯರು ಯಾರೂ ಅಯೋಗ್ಯರಲ್ಲ. ಆದರೂ ಗೊಂದಲ ಹುಟ್ಟಿಕೊಂಡಿದ್ದು ಸೋಜಿಗ.

ಹಾಗೆ ನೋಡಿದರೆ ಕಾರಣವಿರಬೇಕಾಗೇ ಇಲ್ಲ. ಮನುಷ್ಯರ ಬಾಳುವೆಯೆಲ್ಲಾ ನಿಯಮಿತ ಕಾರಣದ ಪ್ರಕಾರವೇ ನಡೆಯುವಂತಿದ್ದರೆ ಪ್ರಪಂಚವು ಲೆಕ್ಕದ ಪುಸ್ತಕದ ಹಾಗಿರುತ್ತಿತ್ತು. ಸ್ವಲ್ಪ ಎಚ್ಚರಿಕೆಯಿಂದ ನಡೆದುಬಿಟ್ಟರೆ ಲೆಕ್ಕಾಚಾರದಲ್ಲಿ ಯಾವ ತಪ್ಪೂ ಇರುತ್ತಿರಲಿಲ್ಲ. ಒಮ್ಮೆ ತಪ್ಪಿದ್ದರೂ ರಬ್ಬರಿನಿಂದ ಉಜ್ಜಿ ಅಳಿಸಿಬಿಡಬಹುದಾಗಿತ್ತು.

ಆದರೆ ಮನುಜರ ಭಾಗ್ಯವಿಧಾತನೊಬ್ಬ ರಸಜ್ಞ, ಬರೇ ಲೆಕ್ಕಾಚಾರದವನಲ್ಲ ಆತನಿಗೆ ಗಣಿತದಲ್ಲಿ ಪಾಂಡಿತ್ಯವುಂಟೋ ಇಲ್ಲವೋ ಹೇಳಲಾಗದು, ಆದರೆ ಅದರಲ್ಲಿ ಅನುರಾಗವಂತೂ ಇಲ್ಲ. ಮನುಷ್ಯರ ಬಾಳುವೆಯಲ್ಲಿ ಯೋಗ, ವಿಯೋಗಗಳ ಮೊತ್ತವನ್ನು ಗುಣಾಕಾರ ಮಾಡುವಾಗ ಸರಿಯಾಗಿ ಚಾಚೂ ತಪ್ಪದಂತೆ ಮಾಡುವುದರಲ್ಲಾತನಿಗೆ ಅಷ್ಟು ಆಸಕ್ತಿಯಿಲ್ಲ. ಈ ಕಾರಣದಿಂದ ಆತ ತನ್ನ ಏರ್ಪಾಡಿನಲ್ಲಿ ಅಸಂಗತವೆಂಬುದೊಂದನ್ನು ಹೇಗೊ ಹೆಣೆದುಬಿಡುತ್ತಾನೆ. ಸರಿಯಾಗಿ ಆಗಲೇ ಬೇಕಾದ್ದನ್ನು ತಾನಾಗಿ ಹಠಾತ್ತಾಗಿ ಬಂದು ತಿರುವು ಮುರುವು ಮಾಡಿಬಿಡುತ್ತಾನೆ. ಇದರಿಂದ ನಾಟಕಕ್ಕೆ ಕಳೆಕಟ್ಟುವುದು, ರಸಪುಷ್ಟಿಯಾಗುವುದು. ಮನುಷ್ಯ ಸಂಸಾರದ ಎರಡೂ ದಡಗಳನ್ನು ಮುಳುಗಿಸಿಕೊಂಡು ನಗು, ರೋದನಗಳ ಬಿರುಗಾಳಿ, ಮಹಾಪೂರಗಳು ಹಾವಳಿ ಮಾಡುವುವು.

ಈ ರಂಗದಲ್ಲಿ ನಡೆದದ್ದೂ ಅದೇ. ಪದ್ಮವನವಿದ್ದ ಕಡೆ ಮದದಾನೆ ಬಂದು ತುಳಿದಾಡಿದಂತಾಯಿತು. ಕೆಸರಿನೊಂದಿಗೇ ಕಮಲದ ನಂಟಸ್ತನ ಬೆಳೆದು ಹೋಯಿತು. ಹಾಗಾಗದಿದ್ದಲ್ಲಿ ಈ ಕಥೆಯೇ ಹುಟ್ಟಿಕೊಳ್ಳುತ್ತಿರಲಿಲ್ಲ.

ಯಾವ ಕುಟುಂಬದ ಕಥೆ ಹೇಳುತ್ತಿದ್ದೇನೋ ಅದರಲ್ಲಿ ಎಲ್ಲರಿಗಿಂತಲೂ ಯೋಗ್ಯನಾದವನೆಂದರೆ ಬನ್ವಾರಿಲಾಲನೇ ಎಂಬುದರಲ್ಲಿ ಸಂಶಯವಿಲ್ಲ. ಇದು ಅವನಿಗೇ ಗೊತ್ತು. ಹಾಗೆ ಗೊತ್ತಿರುವುದರ ಸಲುವಾಗಿಯೇ ಅವನಿಗಷ್ಟು ಎಡವಟ್ಟು. ಸುಮ್ಮನೆ ಕೂಡುವ ಹಾಗಿಲ್ಲ. ಅವನ ಯೋಗ್ಯತೆ ಇಂಜನ್ನಿನ ಹಬೆಯಂತೆ ಅವನನ್ನು ಒಳಗಡೆಯಿಂದಲೇ ತಳ್ಳುವುದು. ಎದುರಾಗಿ ಯಾವುದಾದರೂ ಹಾದಿ ಸಿಕ್ಕರೆ ಸರಿ, ಸಿಕ್ಕದೆ ಹೋದರೆ ಎದುರಾಗಿ ಬಂದುದನ್ನೆಲ್ಲಾ ಢಿಕ್ಕಿ ಹೊಡೆದು ತಳ್ಳಿಹಾಕುವನು.

ಅವನ ತಂದೆ ಮನೋಹರಲಾಲನಿಗೆ ಹಿಂದಿನ ಕಾಲದ ದೊಡ್ಡಸ್ತಿಕೆಯ ನಡವಳಿಕೆಯಿತ್ತು. ತನ್ನದಾದ ಸಮಾಜದ "ತಲೆ"ಯನ್ನೇ ಆಶ್ರಯಿಸಿ ತಾನದರ ಕಿರೀಟದಂತೆ ಮೆರೆಯಬೇಕೆಂಬುದೇ ಅವನ ಆಸೆ. ಸಮಾಜದ "ಕೈಕಾಲು"ಗಳಾದ ಜುಜುಬಿ ಮನುಷ್ಯರ ಸಂಗಡ ಆತನಿಗೆ ಯಾವ ಸಂಪರ್ಕವಿಡಲೂ ಇಷ್ಟವಿಲ್ಲ. ಚಿಲ್ಲರೆ ಜನ ಅವರು. ಸುಮ್ಮನೆ ಆ ಕೆಲಸ, ಈ ಕೆಲಸ ಮಾಡಿಕೊಂಡು ತಿರುಗುತ್ತಾರೆ. ಆದರೆ ಮನೋಹರಲಾಲ ಮಾತ್ರ ಕೆಲಸವೂ ಮಾಡದೆ, ತಿರುಗಾಡದೆ ಇರಲು ಸಾಧ್ಯವಾಗುವಂತೆ ವ್ಯವಸ್ಥೆಮಾಡಿಕೊಂಡು ಅದರ ನಟ್ಟನಡುವೆ 'ಧ್ರುವ'ನಂತೆ ಸ್ಥಿರವಾಗಿ ವಿಜೃಂಭಿಸುತ್ತಾನೆ.

ಈ ಬಗೆಯ ಜನ ಹೆಚ್ಚು ಪ್ರಯಾಸವಿಲ್ಲದೆ ಒಂದೆರಡು ಗಟ್ಟಿಮುಟ್ಟಾದ ಸಾಮರ್ಥ್ಯಶಾಲಿಗಳನ್ನು Magnet (ಲೋಹ ಚುಂಬಕ)ದಂತೆ ತಮ್ಮ ಕಡೆ ಎಳೆದಿಟ್ಟುಕೊಂಡಿರುವುದು ಸಾಧಾರಣ ಸಂಗತಿ. ಅದರ ಕಾರಣ ಬೇರೇನೂ ಅಲ್ಲ– ಪ್ರಪಂಚದಲ್ಲಿ ಒಂದು ಬಗೆಯ ಜನ ಇರುತ್ತಾರೆ–ಸೇವೆ ಮಾಡುವುದೇ ಅವರ ಧರ್ಮ. ಅವರುಗಳು ತಮ್ಮ ಆತ್ಮತೃಪ್ತಿಗಾಗಿ ಇಂಥ ಒಬ್ಬ ಕೈಲಾಗದ ಪರಾವಲಂಬಿ ಮನುಷ್ಯನ ಸೇವೆಮಾಡಬೇಕು. ಆ ಮನುಷ್ಯ ತನ್ನ ಹದಿನಾರಾಣೆ ಭಾರವನ್ನೆಲ್ಲ ಇವರ ಹೆಗಲ ಮೇಲೆ ಹಾಕಿ ಇವರ ಆಶ್ರಯದ ಮೇಲೆ ಪೂರ್ತಿಯಾಗಿ ಕಳೆಯಬೇಕೆಂದೇ ಇವರುಗಳ ಗುರಿ. ಇಂತಹ ಹುಟ್ಟು ಸೇವಕರಿಗೆ ಸ್ವಂತ ಕೆಲಸಗಳಲ್ಲಿ ಸುಖವೇಯಿಲ್ಲ. ಆದರೆ ಬೇರೊಬ್ಬರನ್ನ ನಿಶ್ಚಿಂತೆಯಿಂದ ಹಾಯಾಗಿರುವಂತೆ ಮಾಡುವುದು, ಅವರನ್ನು ಎಲ್ಲ ವಿಧ ಸಂಕಟ, ತಾಪತ್ರಯಗಳಿಂದ ಕಾಪಾಡುವುದು, ಸಮಾಜದಲ್ಲಿ ಅವರ ಸನ್ಮಾನವನ್ನು ಹೆಚ್ಚು ಮಾಡುವುದು ಇವುಗಳಲ್ಲೇ ಇವರಿಗೆ ಅತಿ ಉತ್ಸಾಹ. ಇಂಥವರು ಒಂದು ಬಗೆಯಾಗಿ ಗಂಡು 'ತಾಯಿ'ಯಿದ್ದ ಹಾಗೆ. ಅದೂ ಸ್ವಂತ ಮಕ್ಕಳಿಗಲ್ಲ, ಬೇರೆಯವರ ಮಕ್ಕಳಿಗೆ.

ಮನೋಹರಲಾಲನ ಚಾಕರನೊಬ್ಬ ರಾಮಚರಣ, ಇಂತಹ ಜಾತಿಯವನು. ಅವನ ದೇಹಪಾಲನೆ, ರಕ್ಷಣೆಗಳಿಗೆ ಒಂದೇ ಗುರಿ–ಬಾಬುಗಳ ದೇಹರಕ್ಷಣೆ ಮಾಡುವುದೇ. ತಾನು ಉಸಿರಾಡಿದ ಮಾತ್ರಕ್ಕೆ ಬಾಬುಗಳ ಉಸಿರಾಡುವ ಶ್ರಮ ತಪ್ಪಿಹೋಗುವ ಹಾಗಿದ್ದರೆ, ಕಮ್ಮಾರನ ತಿದಿಯಂತೆ ಹಗಲು ರಾತ್ರಿ ಉಸಿರಾಡಲು ತಯಾರಾಗಿದ್ದ ಆತ. ಹೊರಗಿನ ಜನ ಬಹುಶಃ ಈ ಮನೋಹರಲಾಲ ಸುಮ್ಮ ಸುಮ್ಮನೆಯೇ ಆಳನ್ನು ಅನಾವಶ್ಯಕವಾಗಿ ದುಡಿಸುತ್ತ ಹಿಂಸಿಸುತ್ತಿದ್ದಾನೆಂದು ಆಗಾಗ ಅಂದುಕೊಳ್ಳುತ್ತಿದ್ದರು. ಏಕೆಂದರೆ ಬಾಬುಗಳ ಕೈಯಿಂದ ಹುಕ್ಕಾದನಳಿಗೆ ಕೆಳಗಡೆ ಬಿದ್ದರೂ ಅದನ್ನು ಕೈಗೆತ್ತಿಕೊಡಲು ಬೇರೆ ಯಾವುದೋ ಕೋಣೆಯಲ್ಲಿದ್ದ ರಾಮಚರಣನನ್ನು ಕೂಗುತ್ತಿದ್ದರು. ಇದನ್ನ ನೋಡಿದವರು ಏನು ಅನ್ಯಾಯವಪ್ಪ, ಏನು ವಿಚಿತ್ರ ಎಂದು ಅಂದುಕೊಳ್ಳುವುದರಲ್ಲಿ ಆಶ್ಚರ್ಯವೇನು? ಆದರೆ

ರಾಮಚರಣನಿಗೆ ಮಾತ್ರ ಇಂತಹ ಅತಿ ಅನಾವಶ್ಯಕ ಕೆಲಸಗಳಿಗೇ ತನ್ನನ್ನು ಅತ್ಯಾವಶ್ಯಕನನ್ನಾಗಿ ಮಾಡಿಕೊಳ್ಳುವುದರಲ್ಲಿ ಮಹಾ ಆನಂದ.

ಈ ರಾಮಚರಣನಂತೆಯೇ ಇನ್ನೊಬ್ಬ ಆಳಿದ್ದ; ಅವನು ನೀಲಕಂಠ. ಒಡೆಯನ ಸಾಮಾನು, ಸ್ವತ್ತುಗಳನ್ನು ಕಾಪಾಡುವ ಹೊಣೆ ಈ ನೀಲಕಂಠನದು. ಒಂದೇ ವ್ಯತ್ಯಾಸ ಇವರಿಬ್ಬರಲ್ಲಿ. ಬಾಬುಗಳ ಪ್ರಸಾದದಿಂದ ಪರಿಪುಷ್ಟನಾದ ರಾಮಚರಣನ ಮೈ ನುಣುಪು ನುಣುಪಾಗಿದ್ದರೆ, ನೀಲಕಂಠನ ಮೈಯೊಳಗಿನ ಎಲುಬುಗೂಡಿನ ಮೇಲೆ ಗೌರವಕ್ಕಾದರೂ ಮುಚ್ಚುವಂಥ ರಕ್ತ ಮಾಂಸಗಳಿಲ್ಲ–ಎಂದರೂ ಸರಿ. ನೀಲಕಂಠನು ತನ್ನ ಧಣಿಯ ಸಂಪತ್ತಿನ ಬೊಕ್ಕಸದ ಬಾಗಿಲಲ್ಲಿ ಮೈವೆತ್ತ ಬರಗಾಲದ ಹಾಗೆ ಕಾದುನಿಂತಿರುತ್ತಾನೆ. ಆಸ್ತಿ, ಒಡವೆ ಎಲ್ಲಾ ಮನೋಹರಲಾಲರದು. ಆದರೆ ಅದರ ಬಗ್ಗೆ ಮಮತೆ ಮಾತ್ರ ನೀಲಕಂಠನದು.

ನೀಲಕಂಠನೊಡನೆ ಬನ್ವಾರಿಲಾಲನ ತಿಕ್ಕಾಟ ಬಹಳ ದಿನಗಳಿಂದಲೂ ನಡೆದು ಬರುತ್ತಿತ್ತು. ಉದಾಹರಣೆಗೆ–ತಂದೆಯ ಬಳಿ ಅಹವಾಲು ಮಾಡಿ ಬನ್ವಾರಿಲಾಲನು ತನ್ನ ಹೆಂಡತಿಗೆಂದು ಹೊಸದೊಂದು ಒಡವೆ ತಯಾರು ಮಾಡಿಸಲು ಅನುಮತಿ ಪಡೆದಿದ್ದಾನೆಂದು ಇಟ್ಟುಕೊಳ್ಳಿ. ರೂಪಾಯಿ ಕೊಂಡು ಹೋಗಿ ತನ್ನ ಇಷ್ಟಕ್ಕೆ ಸರಿಹೋಗುವ ಹಾಗೆ ಆಭರಣವನ್ನು ತಯಾರು ಮಾಡಿಸಬೇಕೆಂದವನ ಆಸೆ. ಆದರೆ ಅದು ಆಗುವಂತಿಲ್ಲ. ಖರ್ಚು ಬಾಬುಯೆಲ್ಲ ನೀಲಕಂಠನ ಮೂಲಕವೇ ಆಗಬೇಕು. ಅದರ ಪರಿಣಾಮವೇನೆಂದರೆ ಆಭರಣವೇನೊ ತಯಾರಾಗಿ ಬಂತು. ಆದರೆ ಯಾರ ಮನಸ್ಸಿಗೂ ಒಪ್ಪುವ ಹಾಗಾಗಿರಲಿಲ್ಲ. ಇದರಿಂದ ಬನ್ವಾರಿಲಾಲನ ಮನಸ್ಸಿಗೆ–ಈ ನೀಲಕಂಠನಿಗೆ ಅಕ್ಕಸಾಲಿಗನ ಸಂಗಡ ಏನೋ ಪಾಲುಗಾರಿಕೆಯಿದ್ದೇಯಿದೆಯೆಂದು ಖಂಡಿತವಾಗಿ ಹೋಯಿತು. ಕಟ್ಟುನಿಟ್ಟಾಗಿರುವ ಮನುಷ್ಯರಿಗೆ ವೈರಿಗಳ ಅಭಾವವಿರುವುದಿಲ್ಲ. ಅನೇಕರ ಬಾಯಿಂದ ಬನ್ವಾರಿಲಾಲ ಈ ಮಾತನ್ನೇ ಕೇಳುತ್ತ ಬಂದಿದ್ದ–ಏನೆಂದರೆ ಈ ನೀಲಕಂಠ ಯಾವ ಪ್ರಮಾಣದಲ್ಲಿ ಅನ್ಯರನ್ನು ಲೂಟಿ ಮಾಡುತ್ತಾನೋ ಅದಕ್ಕಿಂತಲೂ ಹೆಚ್ಚಾಗಿ ಅವನ ಮನೆಯೊಳಗೆ ಆಸ್ತಿ ಶೇಖರಿಸಿಕೊಂಡು ಹೋಗಿದೆಯೆಂದು.

ಇಷ್ಟಾದರೂ ಇವರಿಬ್ಬರಲ್ಲಿ ಪರಸ್ಪರ ವಿರೋಧ ಬೆಳೆದು ಬಂದದ್ದು ಕೇವಲ ಐದೋ ಹತ್ತೋ ರೂಪಾಯಿಗಳ ಸಲುವಾಗಿ ಮಾತ್ರ, ನೀಲಕಂಠನಿಗೆ ವ್ಯವಹಾರ ಬುದ್ಧಿಗೆ ಕೊರತೆಯಿಲ್ಲ. ಬನ್ವಾರಿಲಾಲನ ಸಂಗಡ ಹೊಂದಿಕೊಂಡು ನಡೆಯಲಾಗದೆಹೋದರೆ ಎಂದೋ ಒಂದು ದಿನ ಅವನಿಗೆ ವಿಪತ್ತು ಬಾರದೇ ಇರದು ಎಂದು ಗೊತ್ತು ಅವನಿಗೆ. ಆದರೆ ಒಡೆಯನ ಹಣದ ಬಗ್ಗೆ

ನೀಲಕಂಠನಿಗೊಂದು ಜಿಪುಣತನದ ದೆವ್ವ ಹಿಡಿದಿದೆ. ಅವನು ಅನ್ಯಾಯವೆಂದು ತಿಳಿದಿರುವ ವಿಷಯದಲ್ಲಿ ಸ್ವಂತ ಧಣಿಯೇ ಅಪ್ಪಣೆ ಮಾಡಿದರೂ ನೀಲಕಂಠ ರೂಪಾಯಿ ಬಿಚ್ಚಲಾರ.

ಈ ಕಡೆ ಬನ್ವಾರಿಲಾಲನಿಗೂ ಅನಾವಶ್ಯಕ ವೆಚ್ಚದ ಅಗತ್ಯವೂ ಹೆಚ್ಚಾಗಿ ಬೀಳಲು ಕಾರಣವುಂಟು. ಗಂಡಸರ ವ್ಯರ್ಥ ಖರ್ಚಿಗೆ ಮೂಲಕಾರಣ ಸಾಮಾನ್ಯವಾಗಿ ಎಲ್ಲ ಕಡೆ ಇರುವಂತೆಯೇ ಇಲ್ಲಿಯೂ ಸ್ವಲ್ಪ ಪ್ರಬಲರೂಪವಾಗಿಯೇ ಇತ್ತೆಂದು ಹೇಳಬಹುದು. ಬನ್ವಾರೀಲಾಲನ ಹೆಂಡತಿ ಕಿರಣಲೇಖಳ ಚೆಲುವಿನ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳಿರಬಹುದು. ಅದನ್ನ ಕುರಿತು ಚರ್ಚೆಮಾಡುವುದು ಅನಾವಶ್ಯಕ. ಆದರೆ ಆ ಅಭಿಪ್ರಾಯಗಳಲ್ಲಿ ಬನ್ವಾರಿಲಾಲನ ಸ್ವಂತ ಅಭಿಪ್ರಾಯವೇ ಈಗ ಮುಖ್ಯ. ತನ್ನ ಅರ್ಧಾಂಗಿಯ ಬಗ್ಗೆ ಬನ್ವಾರಿಯ ಮನದ ಆಕರ್ಷಣೆಯನ್ನು ಕುರಿತು ಮನೆಯ ಬೇರೆ ಹೆಂಗಸರಂತೂ ಇದೆಲ್ಲ ಮಿತಿಮೀರಿದ ವ್ಯಾಮೋಹವೆಂದು ಟೀಕಿಸುತ್ತಿದ್ದರು. ಅಂದರೆ ಅರ್ಥ, ತಮ್ಮ ಯಜಮಾನರುಗಳ ಕಡೆಯಿಂದ ಅವರಿಗೆ ತಾವು ಅಪೇಕ್ಷಿಸುವಷ್ಟು ಆದರ, ಲಾಲನೆಗಳು ಸಿಗುತ್ತಿಲ್ಲ. ಅಷ್ಟೇ ಇದರ ಗುಟ್ಟು.

ಕಿರಣಬಾಲಳ ವಯಸ್ಸು ಎಷ್ಟೇ ಇರಲಿ, ಮುಖಚಹರೆ ನೋಡಿದರಂತು ಇನ್ನೂ ಎಳೆಯುವಳೆಂದೇ ಅನ್ನಿಸುವುದು. ಕುಟುಂಬದ ಹಿರಿಯ ಸೊಸೆಯೆನ್ನಿಸಿಕೊಳ್ಳಲು ಇರಬೇಕಾದ ಯಜಮಾನಿಕೆಯ ಗತ್ತೂ, ಗಾಂಭೀರ್ಯ, ಆಕಾರ, ಜರುಬು ಯಾವುದೂ ಅವಳಿಗಿಲ್ಲ. ಎಲ್ಲ ದೃಷ್ಟಿಯಿಂದಲೂ ಒಟ್ಟಿನಲ್ಲಿ ನೋಡಿದರೆ ಅವಳು ಬಹಳ 'ಸ್ವಲ್ಪ'ದವಳಾಗಿ ಕಾಣುತ್ತಾಳೆ.

ಬನ್ವಾರಿಯು ಅವಳನ್ನ ಮುದ್ದಿನಿಂದ "ಅಣೂ" ಎಂದು ಕರೆಯುತ್ತಿದ್ದ. ಅವನ ಮುದ್ದು ಅದರಲ್ಲೂ ತೃಪ್ತಿಯಾಗದಿದ್ರೆ "ಪರಮಾಣೂ" ಎಂದೂ ಕರೆಯುತ್ತಿದ್ದ. ಈ ವಿಶ್ವರಚನೆಯಲ್ಲಿ ಈ ಅಣು, ಪರಮಾಣುಗಳ ಶಕ್ತಿ, ಸಾಮರ್ಥ್ಯ ಕಡೆಗಣಿಸಲಾರದಂಥದಲ್ಲವೆಂದು ರಸಾಯನ ಶಾಸ್ತ್ರ ಓದಿರುವವರಿಗೆ ಚೆನ್ನಾಗಿ ಗೊತ್ತು.

ಕಿರಣಳು ಮಾತ್ರ ತನ್ನ ಇನಿಯನ ಬಳಿ ಎಂದೂ ಯಾವುದನ್ನೂ ಇಷ್ಟಪಟ್ಟು ಬೇಡಿದವಳಲ್ಲ. ಅವಳ ಪ್ರಕೃತಿಯಲ್ಲಿ ಹೀಗೊಂದು ಉದಾಸೀನತೆ ಸೇರಿತ್ತು. ಇದರ ಫಲವಾಗಿ ಅವಳಿಗೆ ಯಾವ ವಸ್ತುವಿನಲ್ಲೂ ಹೆಚ್ಚು ಪ್ರಯೋಜನ ಕಾಣುತ್ತಿರಲಿಲ್ಲ. ಅವಳಿಗೆ ಯಾವುದರಲ್ಲೂ ಆಸಕ್ತಿಯಿರುತ್ತಿರಲಿಲ್ಲ. ಮನೆಯೊಳಗೆ ಅವಳಿಗೆಷ್ಟೋ ಮಂದಿ ಅತ್ತಿಗೆ, ನಾದಿನಿಯರಿದ್ದರು. ಅನೇಕ ಓರಗಿತ್ತಿಯರೂ ಇದ್ದರು. ಸದಾ ಅವರುಗಳ ನಡುವೆಯೇ ಇದ್ದು ಅವರ ಬಗ್ಗೆಯೇ ಅವಳ ಮನಸ್ಸು ತುಂಬಿಹೋಗಿಬಿಡುತ್ತಿತ್ತು. ಹೊಸ ಹರೆಯ. ಹೊಸದಾಗಿ ಅಂಕುರಿಸಿದ ಪ್ರಣಯಕ್ಕೆ ಸಹಜವಾದ ಒಂದು ವಿಧವಾದ ಏಕಾಂತ ತಾಪಸ್ಯವೆಂಬುದೇನು ಇರುತ್ತದೋ

ಅದು ಅವಳ ಪಾಲಿಗೆ ಅಷ್ಟೇನೂ ಬೇಕಾಗಿರುವಂತೆನ್ನಿಸಲಿಲ್ಲ. ಬನ್ವಾರಿಯಿಂದ ಏನೇನು ಬರುವುದೋ ಎಲ್ಲವನ್ನೂ ಬೇಡವೆನ್ನದೆ ಸ್ವೀಕರಿಸುತ್ತಾಳೆ. ಆದರೆ ತನಗೇ ಇಂಥದು ಬೇಕೆಂದು ಒಮ್ಮೆಯೂ ಅವನ ಬಳಿ ಕೇಳಹೋಗುವುದಿಲ್ಲ. ಇದರ ಫಲವಾಗಿ ತನ್ನಿನಿಯಳಿಗೆ ಮನವೊಲಿಯಬೇಕಾದರೆ ಹೇಗೆ, ಏನು ಮಾಡಿದರೆ ಸಾಧ್ಯ ಎಂಬುದಾಗಿ ಬನ್ವಾರಿಯು ತಾನೇ ಚಿಂತಿಸಿ ಚಿಂತಿಸಿ ಹುಡುಕಬೇಕಾಗಿತ್ತು. ಮನದನ್ನೆ ತಾನಾಗಿ ಆಸೆಪಟ್ಟು ಇಂಥದು ಬೇಕೆಂದು ಕೇಳಿದಾಗ ಅವಳೊಡನೆ ತರ್ಕಮಾಡಿ 'ಅದು ಯಾಕೆ ಸುಮ್ಮನೆ?' ಎಂದು ಅವಳಾಸೆಯನ್ನು ಸ್ವಲ್ಪ ತಗ್ಗಿಸಲು ಸಾಧ್ಯವಾಗುವುದು. ಆದರೆ ತನ್ನೊಡನೆ ತಾನೇ ದರ–ಬೆಲೆಗಳ ಬಗ್ಗೆ ಚೌಕಾಶಿಮಾಡಲು ದಾರಿಯೆಲ್ಲಿ? ಇಂಥ ಸನ್ನಿವೇಶಗಳಲ್ಲಿ ತಾನಾಗಿ ಪುರಸ್ಕಾರ ಕೊಡಲು ಹೋಗಿ ಬಯಸಿದುದನ್ನು ಕೊಡುವುದಕ್ಕಿಂತ ಹೆಚ್ಚಾಗಿ ವೆಚ್ಚವಾಗಿಹೋಗುವುದು.

ಇದು ಸಾಲದೆ, ಗಂಡನಿಂದ ಉಡುಗೊರೆ ಪಡೆದು ಕಿರಣಲೇಖಾ ಎಷ್ಟು ಮಟ್ಟಿಗೆ ಸಂತಸಪಟ್ಟಳು ಎಂದು ತಿಳಿಯುವ ಹಾಗೇ ಇಲ್ಲ. ಹೇಗಿದೆ ಎಂದೇನಾದರೂ ಕೇಳಿದರೂ 'ಪರವಾಯಿಲ್ಲ, ಚೆನ್ನಾಗಿದೆ' ಎಂದು ಮಾತ್ರ ಉಸುರಿ ಸುಮ್ಮನಾಗುವಳು. ಆದರೆ ಬನ್ವಾರಿಯ ಮನದಲ್ಲಿ ಸುಮ್ಮನೆ ಪರದಾಟ, ಸಂಶಯಗಳು ಏತರಿಂದಲೂ ಕಡಿಮೆಯಾಗುವುದಿಲ್ಲ. ಗಳಿಗೆಗಳಿಗೆಗೂ ಅವನಿಗೆ "ಅವಳಿಗೆ ಬಹುಶಃ ಮೆಚ್ಚಿಲ್ಲ. ಯಾರಿಗೆ ಗೊತ್ತು?" ಎನ್ನಿಸುವುದು. ಅವಳು ಮಾತ್ರ ಗಂಡನಿಗೆ ಮೂಗು ಮುರಿದು "ಸುಮ್ಮನೆ ಯಾಕೆ ಹಾಗೆಲ್ಲ ಕಿರಿಕಿರಿ ಮಾಡಿಕೊಳ್ಳುವುದು? ಯಾಕೆ, ಇದೆಷ್ಟೋ ಚೆನ್ನಾಗಿದೆ" ಎನ್ನುವಳು.

ಬನ್ವಾರಿಯು ತನ್ನ ಬಾಲ್ಯಕಾಲದ ಪಾಠಪುಸ್ತಕದಲ್ಲಿ ಅಲ್ಪ ಸಂತುಷ್ಟತೆಯೇ ಮನುಷ್ಯನ ಮಹಾಗುಣ ಎಂದು ಓದಿದ್ದರೂ ಹೆಂಡತಿಯಲ್ಲಿ ಈ ಮಹಾಗುಣವಿರುವುದು ಅವನಿಗೆ ಸರಿಹೋಗಿಲ್ಲ. ಅವನ ಹೆಂಡತಿ ಅವನನ್ನು ಕೇವಲ ಸಂತುಷ್ಟನಾಗಿಯೇ ಅಲ್ಲ, ಮುಗ್ಧನನ್ನಾಗಿಯೂ ಮಾಡಿಬಿಟ್ಟಿದ್ದಾಳೆ. ಅವನಿಗೂ ಹೆಂಡತಿಯನ್ನು ಮುಗ್ಧಳನ್ನಾಗಿ ಮಾಡಿಬಿಡಬೇಕೆಂಬಾಸೆ. ಅವನ ಹೆಂಡತಿಯಾದರೆ ಅವನನ್ನು ಮುಗ್ಧಗೊಳಿಸಲು ಹೆಚ್ಚು ಪ್ರಯಾಸಪಡಬೇಕಾದ್ದಿಲ್ಲ. ಹರೆಯದ ಮೈ, ಕೈಗಳ ಲಾವಣ್ಯ ತನಗೆ ತಾನೇ ತುಂಬಿತುಳುಕುತ್ತಿದೆ. ಅದರಿಂದ ಅವಳ ಸೇವೆಯಲ್ಲಿ ಜಾಣತನವೂ ತಾನಾಗಿ ಹೊರಹೊಮ್ಮುತ್ತದೆ. ಆದರೆ ಗಂಡಸರಿಗೇನೋ ಹೀಗೆ ಸಹಜವಾಗಿ ಸುಯೋಗ ಬರುವುದಿಲ್ಲ. ತಮ್ಮ ಪೌರುಷದ ಪರಿಚಯ ಮಾಡಬೇಕಾಗಿ ಬಂದಾಗ ಏನಾದರೊಂದು ಅಸಾಧ್ಯ ಕೆಲಸಮಾಡಿ ತೋರಿಸಬೇಕು. ತನ್ನಲ್ಲಿರುವ ಒಂದು ವಿಶೇಷ ಶಕ್ತಿಯನ್ನು ಪ್ರಮಾಣಮಾಡಿ ತೋರಿಸಿಕೊಡಲಾಗದೆ ಹೋದರೆ ಗಂಡಸಿನ ಪ್ರೀತಿ, ಪ್ರಣಯಗಳು ಕಳೆಗುಂದುವುವು. ಬೇರೇನೂ ಇಲ್ಲದೆ ಹೋದರೂ, ಹಣವುಂಟಲ್ಲ. ಅದೇ ಸಾಕು, ಸಾಮರ್ಥ್ಯದ ನಿದರ್ಶನ. ಗಂಡು ನವಿಲುಗರಿಗಳನ್ನು

ಪಸರಿಸಿಕೊಂಡಂತೆ ಹೆಂಡತಿಯ ಮುಂದೆ ಆ ಹಣದ ಬಗೆಬಗೆಯ ಬಣ್ಣಗಳನ್ನ ವಿಸ್ತರಿಸಿ ಹರಡಿ ಪ್ರದರ್ಶಿಸಲಾಗುವ ಹಾಗಿದ್ದರೆ ಆಗ ಮನಕ್ಕೆ ಸಾಂತ್ವನವಾಗಬಹುದು. ನೀಲಕಂಠನು ಬನ್ವಾರಿಲಾಲನ ಪ್ರೇಮ ನಾಟ್ಯಲೀಲೆಯ ಈ ಹಂಚಿಕೆಗೆ ಆಗಾಗ ಪೆಟ್ಟುಕೊಟ್ಟು ಘಾಸಿಮಾಡಿದ್ದಾನೆ. ಬನ್ವಾರಿಯೇ ಮನೆಗೆ ಹಿರಿಯ ಮಗ. ಮುಂದಿನ ಮುಖ್ಯ ವಾರಸುದಾರ. ಆದರೂ ಏತರಲ್ಲೂ ಅವನಿಗೆ ಒಡೆತನವಿಲ್ಲ, ಯಜಮಾನಿಕೆಯೇ ಇಲ್ಲ ಎಂದರೆ ಹೇಗೆ ಸಾಧ್ಯ? ಧಣಿಯ ಬಳಿ ಸಲಿಗೆ ಪಡೆದು ಸೇವಕನಾಗಿ ಕೂಡ ಈ ನೀಲಕಂಠ ತನ್ನ ಮೇಲೆ ಅಧಿಕಾರ ಮಾಡುವುದೆಂದರೆ–ಇದರಿಂದ ಬನ್ವಾರಿಗೆ ಆಗುವ ಅಪಮಾನ, ಆತಂಕಗಳು ಬೇರೆ ಯಾವ ಕಾರಣಕ್ಕೂ ಅಷ್ಟಾಗಿ ಆಗದೆಹೋಗಬಹುದು. ಆದರೆ ಮನ್ಮಥನ ಬತ್ತಳಿಕೆಯಲ್ಲಿ ಮನಬಂದಂತೆ ಬಾಣಗಳನ್ನು ಹವಣಿಸಿಡಲು ಕೈಲಾಗದೆ ಹೋಗುವುದರಿಂದ ಆಗುವ ಅಪಮಾನ, ರೋಷಗಳು ಸಾಮಾನ್ಯವೆ?

ಒಂದು ದಿನ ಈ ಆಸ್ತಿ, ಸಂಪತ್ತೆಲ್ಲ ತನ್ನದೇ ಅಡ್ಡಿಯಿಲ್ಲದ ಒಡೆತನಕ್ಕೆ ಬರತಕ್ಕದ್ದು. ಆದರೇನು, ಪ್ರಾಯವೆನ್ನುವುದು ಶಾಶ್ವತವಾಗಿರುತ್ತದೆಯೆ? ವಸಂತಋತುವಿನ ರಂಗುರಂಗಾದ ಬಟ್ಟಲಲ್ಲಿ ಆಗ ಈ ಸುಧಾರಸವು ಹೀಗೆ ತನಗೆ ತಾನೇ ತುಂಬಿರುವುದಿಲ್ಲ. ಹಣವಾಗ ವ್ಯವಹಾರ ಬುದ್ಧಿಯವನ ಹಣವಾಗಿ ಅತಿ ದಟ್ಟವಾಗಿ ಶೇಖರವಾಗಿ ಏಳುವುದು; ಗಿರಿಶಿಖರದ ಮಂಜಿನ ಮುಸುಕಿನಂತೆ.–ಅದರಿಂದ ಮಾತುಮಾತಿಗೂ ಸಾವಧಾನವನ್ನ ಲೆಕ್ಕಿಸದ ಅಪವ್ಯಯದ ಅಲೆಗಳು ಎತ್ತಿ ಆಡುವ ಸಂಭವವಿರುವುದಿಲ್ಲ. ಹಣದ ಅಗತ್ಯವಂತೂ ಈ ಕಾಲದಲ್ಲಿ, ಈಗ!–ಆನಂದದಲ್ಲಿ ಅದನ್ನ ಎಸೆದು ಹರಡಿ ಭೋಗಿಸುವ ಶಕ್ತಿಯಿರುವಾಗಲ್ಲವೇ ಅದರ ಉಪಯೋಗ?

ಬನ್ವಾರಿಯ ಮುಖ್ಯವಾದ ಹಂಬಲಗಳು ಮೂರು. ಕುಸ್ತಿ, ಬೇಟೆ ಮತ್ತು ಸಂಸ್ಕೃತ ಕಾವ್ಯಚರ್ಚೆ. ಅವನ ಖಾಸಾಪುಸ್ತಕದಲ್ಲಿ ಉದ್ಭಟನ ಕವಿತೆಗಳು ಎಲ್ಲಾ ಕಡೆಯೂ ಹರಡಿಕೊಂಡಿರುತ್ತವೆ. ಮೋಡ ಮುಸುಗಿದ ದಿನ, ಬೆಳುದಿಂಗಳ ರಾತ್ರಿ, ದಕ್ಷಿಣ ದಿಕ್ಕಿನಿಂದ ತಂಪಾದ ಗಾಳಿ ಬೀಸುತ್ತಿರುವ ಸಂಜೆಯ ಸಮಯ, ಆ ಕವಿತೆಗಳು ಬಹಳಮಟ್ಟಿಗೆ ಕೆಲಸಕ್ಕೆ ಬರುವವು. ಇದರಲ್ಲಿರುವ ಸೌಕರ್ಯವೊಂದು–ನೀಲಕಂಠನೆಷ್ಟೇ ಪ್ರಬಲನಾಗಿರಲಿ, ಈ ಕವಿತೆಗಳ ಅಲಂಕಾರ ಸಂಪತ್ತನ್ನ ಸ್ವಲ್ಪವೂ ನಷ್ಟಮಾಡಲಾರ. ಅತಿಶಯೋಕ್ತಿಯೆಂಬುದು ಎಷ್ಟೇ ಅತಿಶಯವಾಗಿದ್ದರೂ ಯಾವ ಸರಾಫ, ಶಿರಸ್ತೇದಾರನೆದುರಿಗೂ ಅದಕ್ಕೆ ಜವಾಬು ಕೊಡಬೇಕಾಗಿಲ್ಲ. ಕಿರಣಳ ಕಿವಿಯೋಲೆಯ ಬಂಗಾರಕ್ಕೆ ಕಾರ್ಪಣ್ಯ ಬರಬಹುದು–ಆದರೆ ಅವಳ ಕಿವಿಯ ಬಳಿ ದನಿಗೈಯಲ್ಪಡುವ ಮಂದಾಕ್ರಾಂತ ರಗಳೆಯ ಛಂದಸ್ಸಿನಲ್ಲಿ ಒಂದು ಮಾತ್ರೆ

ಕೂಡ ಕಡಿಮೆಯಾಗುವುದಿಲ್ಲ. ಅದರ ಭಾವದಲ್ಲಿ ಮಾತ್ರ ಯಾವ ಮಾತ್ರೆಯೂ ಇರುವುದಿಲ್ಲವೆಂದರೂ ಅನ್ನಬಹುದು.

ಎತ್ತರದ ಕಟ್ಟುಮಸ್ತಾದ ಮಲ್ಲನ ಮೈಕಟ್ಟು ಬನ್ವಾರಿಲಾಲನದು. ಅವನಿಗೆ ಕೋಪವೇರಿದಾಗ ಜನ ಹೆದರಿ ನಡುಗುತ್ತಿದ್ದರು. ಆದರೆ ಈ ಪ್ರಾಯದ ಗಂಡಾಳಿನ ಹೃದಯವಂತೂ ಅತಿ ಮೆದುವಾದದ್ದು. ಅವನ ತಮ್ಮ ಬಂಶೀಲಾಲ ಎಳೆಯವನಿದ್ದಾಗ ಅವನನ್ನ ತಾಯಿಯ ಅಕ್ಕರೆ ತೋರಿ ಬೆಳೆಸಿದ್ದ. ಅವನ ಎದೆಯೊಳಗೆ ಮುದ್ದುಮಾಡುವ ಹಸಿವುಂಟು.

ಅವನು ಹೆಂಡತಿಯನ್ನ ಪ್ರೀತಿಸುವುದರಲ್ಲೂ ಈ ಲಾಲನೆಮಾಡುವ ಆಕಾಂಕ್ಷೆ ಸೇರಿಕೊಂಡಿತ್ತು. ಕಿರಣಲೇಖಳು ಮರದ ನೆರಳ ನಡುವೆ ನುಗ್ಗಿ ದಾರಿ ತಪ್ಪಿದ ಸೂರ್ಯರಶ್ಮಿಯೊಂದರಂತೆ ಕಂಡೂ ಕಾಣದಂಥ ಒಂದು ಸಣ್ಣ ಸಾಮಾನ್ಯ ಬೊಂಬೆ. ಸಣ್ಣವಳೆಂದೇ ಅವಳು ಗಂಡನ ಮನದಲ್ಲಿ ಗಾಢವಾದೊಂದು ಮರುಕ ಬೆರೆತ ವಾತ್ಸಲ್ಯವನ್ನಂಕುರಿಸಿದ್ದಳು. ಈ ಬಾಲೆಯನ್ನು ಉಡುಪು, ಒಡವೆಗಳಿಂದ ಬಗೆಬಗೆಯಾಗಿ ಅಲಂಕರಿಸಿ ನೋಡಬೇಕೆಂಬ ಪ್ರಬಲವಾದ ಆಸೆ ಅವನಿಗೆ. ಅವಳನ್ನ ಭೋಗಿಸುವ ಆನಂದವಲ್ಲ. ಅವಳನ್ನ ಸಿಂಗರಿಸುವ ಆನಂದ. ಅವಳ ಒಂದು ವ್ಯಕ್ತಿತ್ವವನ್ನು ಬಹುವಾಗಿ ಮಾಡಿನೋಡುವ ಆನಂದ. ಕಿರಣಲೇಖಳನ್ನು ನಾನಾ ಬಣ್ಣಗಳಲ್ಲಿ, ನಾನಾ ಆವರಣಗಳಲ್ಲಿ ರೂಪಿಸಿ ಅನುಭವಿಸುವ ಆನಂದ.

ಆದರೆ ಕೇವಲ ಸಂಸ್ಕೃತ ಶ್ಲೋಕಗಳನ್ನ ಗುನಗುನಿಸುವುದರಿಂದ ಬನ್ವಾರಿಯ ಈ ಹಂಬಲವು ಏನು ಮಾಡಿದರೂ ತೃಪ್ತಿಗೊಳ್ಳುತ್ತಿರಲಿಲ್ಲ. ಅವನ ಎದೆಯೊಳಗೆ ಗಂಡಸಿಗೆ ಸಹಜವಾದ ಒಡೆತನದ ಬಲವೊಂದುಂಟು. ಅದು ಕೂಡ ಹೊರಬರಲಾಗಲಿಲ್ಲ. ಅಲ್ಲದೆ ತನ್ನ ಒಲವಿನ ಹೆಂಡತಿಯನ್ನು ಬಗೆಬಗೆಯ ನಗನತ್ತುಗಳಿಂದ ಸಿಂಗರಿಸಿ ಸಂಪನ್ನ ಮಾಡಬೇಕೆಂಬಾಸೆಯೂ ಸಿದ್ಧಿಯಾಗುತ್ತಿಲ್ಲ.

ಈ ಬಗೆಯಾಗಿ ಈ ದೊಡ್ಡ ಮನೆತನದ ಹಿರೇಮಗ ತನ್ನ ಮಾನ, ಮರ್ಯಾದೆ, ಚೆಲುವೆಯಾದ ಹೆಂಡತಿ, ತನ್ನ ತುಂಬು ಹರೆಯ ಮುಂತಾದ ಸಾಧಾರಣ ಜನ ಬೇಡಿಕೊಳ್ಳುವಂಥದನ್ನೆಲ್ಲ ಪಡೆದಿದ್ದು ಕೂಡ ಅವನ ಕುಟುಂಬದಲ್ಲಿ ಒಂದು ದಿನ ಭೂಕಂಪದ ಹಾಗೆ ಗೊಂದಲ ಹುಟ್ಟಿಕೊಂಡಿತು.

ಈ ಜಮೀನ್ದಾರಿಯ ಪ್ರಜೆಯಾದ ಮಧು ಕೈವರ್ತನೆಂಬೊಬ್ಬ ಬೆಸ್ತನಿದ್ದ. ಅವನ ಹೆಂಡತಿ ಸುಖದಾ ಎಂಬವಳು, ಒಂದು ದಿನ ಅಂತಃಪುರಕ್ಕೆ ಬಂದು ಕಿರಣಲೇಖಳ ಕಾಲುಗಳನ್ನ ಬಲವಾಗಿ ಹಿಡಿದು ಬಿಕ್ಕಿಬಿಕ್ಕಿ ಅಳತೊಡಗಿದಳು. ವಿಷಯ ಹೀಗೆ–ಕೆಲವು ವರುಷಗಳ ಮುನ್ನ ಬೆಸ್ತರೆಲ್ಲ ಸೇರಿ ಒಟ್ಟಾಗಿ ನದೀ ವಲಯದಲ್ಲಿ ದೊಡ್ಡದಾಗಿ ಬಲೆ ಹರಡಬೇಕೆಂದು ಒಪ್ಪಂದ ಮಾಡಿಕೊಂಡಿದ್ದರು.

ಈ ಒಪ್ಪಂದದ ಪ್ರಕಾರ ಅವರೆಲ್ಲ ಬಂದು ಮನೋಹರಲಾಲರ ಕಛೇರಿಯಲ್ಲಿ ಪತ್ರ ಬರೆದು ಕೊಟ್ಟು ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದರು. ಎಂದುಕೊಂಡಿದ್ದ ಹಾಗೆ ಬಲೆಯಲ್ಲಿ ಮೀನು ಬಿದ್ದಿದ್ದರೆ ಬಡ್ಡಿಯನ್ನೂ ಬಂಡವಾಳವನ್ನೂ ತೀರಿಸಿಬಿಡಲು ಯಾವ ಅಡಚಣೆಯೂ ಇರುತ್ತಿರಲಿಲ್ಲ. ಆ ಅಪೇಕ್ಷೆಯಿಂದಲೇ ಅವರು ಹೆಚ್ಚು ದರದ ಬಡ್ಡಿಯ ಮೇಲೆ ಹಣ ಸಾಲ ಪಡೆಯಲು ಹಿಂದೆಗೆಯಲಿಲ್ಲ. ಆದರೆ ಅವರ ದುರದೃಷ್ಟ, ಈ ಸಲ ಅಂದುಕೊಂಡಿದ್ದಷ್ಟು ಮೀನು ಬೀಳಲಿಲ್ಲ. ಇಷ್ಟೇ ಅಲ್ಲದೆ ಕ್ರಮವಾಗಿ ಒಂದಾದ ಮೇಲೊಂದು ವರುಷ ಮೂರು ವರುಷ ನದಿಯ ತಿರುಗಣೆಯಲ್ಲಿ ಮೀನು ಎಷ್ಟು ಕಡಿಮೆ ಬೀಳಲಾರಂಭಿಸಿತೆಂದರೆ ಬಲೆ ಬೀಸಿದ ಬೆಸ್ತರ ಖರ್ಚು ಕೂಡ ಹುಟ್ಟಲಿಲ್ಲ. ಸಾಲದೆಂಬಂತೆ ಅವರೇ ಜಮೀನ್ದಾರರ ಬಳಿ ಸಾಲದ ಬಲೆಯಲ್ಲಿ ಚೆನ್ನಾಗಿ ಸಿಕ್ಕಿಹಾಕಿಕೊಂಡರು. ಬೇರೆ ಜಮೀನ್ದಾರರ ಪ್ರಜೆಗಳಾದ ಉಳಿದೆಲ್ಲ ಬೆಸ್ತರು ಅಲ್ಲಿಂದ ನಾಪತ್ತೆಯಾಗಿಬಿಟ್ಟರು. ಆದರೆ ಸ್ಥಳದವನಾದ ಮಧುಕೈವರ್ತನು ಮಾತ್ರ ಎಲ್ಲಿಯೂ ಓಡಿಹೋಗಲಾಗದೆ ಸಿಕ್ಕಿಹಾಕಿಕೊಂಡ. ಸಾಲದ ಭಾರವೆಲ್ಲ ಅವನೊಬ್ಬನ ಮೇಲೆ ಬಿತ್ತು. ಪೂರ್ತಿಯಾಗಿ ಮನೆಹಾಳಾಗುವ ವಿಪತ್ತಿನಿಂದ ಸಂರಕ್ಷಣೆ ಬೇಡಲು ಅವನ ಹೆಂಡತಿ ಸುಖದಾ ಈಗ ಕಿರಣಳಿಗೆ ಮೊರೆಹೊಕ್ಕಿದ್ದಾಳೆ. ಕಿರಣಳ ಅತ್ತೆಯ ಬಳಿ ಬೇಡಿದರೆ ಫಲವಿಲ್ಲವೆಂದು ಎಲ್ಲರಿಗೂ ಗೊತ್ತು. ಅಷ್ಟೇಕೆ, ನೀಲಕಂಠನ ವ್ಯವಸ್ಥೆಯಲ್ಲಿ ಯಾರೂ ಸ್ವಲ್ಪವಾದರೂ ಬಿರುಕು ಮಾಡಬಲ್ಲರೆಂಬುದಾಗಿ ಕಲ್ಪನೆ ಸಹ ಮಾಡಲಾಗದು. ಆದರೆ ನೀಲಕಂಠನ ವಿರುದ್ಧ ಬನ್ವಾರಿಗೆ ಅತಿಶಯವಾದ ಆಕ್ರೋಶವಿದೆಯೆಂದು ತಿಳಿದೇ ಮಧುಕೈವರ್ತನು ತನ್ನ ಹೆಂಡತಿಯನ್ನು ಕಿರಣಳ ಬಳಿಗೆ ಕಳುಹಿಸಿದ್ದ.

ಬನ್ವಾರಿಯು ಎಷ್ಟೇ ರೇಗಲಿ, ಎಷ್ಟೇ ಹಾರಾಡಲಿ, ನೀಲಕಂಠನ ಕೆಲಸದಲ್ಲಿ ಕೈಹಾಕಲು ಅವನಿಗಾವ ಅಧಿಕಾರವೂ ಇಲ್ಲವೆಂದು ಕಿರಣಳಿಗೆ ಚೆನ್ನಾಗಿ ಗೊತ್ತು. ಈ ಕಾರಣದಿಂದ ಕಿರಣಳು ಸುಖದಾಳಿಗೆ ಬಾರಿಬಾರಿಗೂ ಹೇಳಿ ತಿಳಿಯಿಸಲು ಪ್ರಯತ್ನಮಾಡಿದಳು.–"ನಾನೇನು ಮಾಡಲೇ, ಹುಡುಗೀ, ನಿನಗೆ ಗೊತ್ತಿಲ್ಲದೆ ಇಲ್ಲ. ಇದರಲ್ಲಿ ಕೈಹಾಕಲು ನಮಗೆ ಸಾಧ್ಯವೇ ಇಲ್ಲ. ದೊಡ್ಡ ಧಣಿ ಇದ್ದಾರೆ. ನಿನ್ನ ಗಂಡ ಮಧುಗೆ ಹೇಳು. ಹೋಗಿ ಅವರ ಕಾಲನ್ನೇ ಕಟ್ಟಿಕೊಳ್ಳಲಿ."

ಆ ಪ್ರಯತ್ನ ಆಗಲೇ ಮಾಡಿದ್ದಾಗಿದೆ. ಮನೋಹರಲಾಲರ ಬಳಿ ಯಾವ ವಿಷಯದ ಬಗ್ಗೆ ಅಹವಾಲು ಬಂದರೂ ಆತ ಅದರ ವಿಚಾರಣೆಯ ಭಾರವನ್ನು ನೀಲಕಂಠನ ಮೇಲೆ ಅರ್ಪಣೆಮಾಡಿಬಿಡುತ್ತಿದ್ದರು. ಎಂದೂ ಇದಕ್ಕೆ ಅನ್ಯಥಾ ಆಗುತ್ತಲೆ ಇರಲಿಲ್ಲ. ಇದರಿಂದ ವಿಚಾರಣೆಯನ್ನು ಕೇಳಿಕೊಂಡವನ ವಿಪತ್ತು ಇನ್ನೂ ಹೆಚ್ಚುವುದು. ಎರಡನೆಯ ಬಾರಿ ಯಾರಾದರೂ ಅವರ ಬಳಿ ಅಪೀಲು ಮಾಡಿದಾಗ ಅಂತಹ ಸಂದರ್ಭದಲ್ಲಿ ಧಣಿಗಳು ಸಿಟ್ಟಿಗೆದ್ದು ಬೆಂಕಿಯಾಗಿಬಿಡುವರು.

ವಿಷಯಸಂಪತ್ತಿನ ತಲೆನೋವನ್ನೆಲ್ಲಾ ತಾವೇ ವಹಿಸಿಕೊಳ್ಳಬೇಕಾದರೆ ಅಂತಹ ವಿಷಯಸಂಪತ್ತನ್ನು ಭೋಗಮಾಡುವುದರಿಂದಾಗುವ ಸುಖ ತಾನೇ ಎಲ್ಲಿಯದು?

ಸುಖದಾ ಕಿರಣಳ ಬಳಿ ಅತ್ತು ಗೋಳಾಡಿದಾಗ ಮಗ್ಗುಲ ಕೋಣೆಯಲ್ಲಿ ಕೂತು ಬನ್ವಾರಿಲಾಲನು ತನ್ನ ಕೋವಿಯ ಕೊಳವೆಗೆ ಎಣ್ಣೆ ತಿಕ್ಕುತ್ತಿದ್ದ. ಬನ್ವಾರಿಯು ಎಲ್ಲಾ ಸಂಗತಿಯನ್ನೂ ಕೇಳಿಸಿಕೊಂಡ. ಕಿರಣಳು ಮರುಕದ ದನಿಯಲ್ಲಿ ತಾವುಗಳು ಈ ವಿಷಯದಲ್ಲಿ ಏನು ಮಾಡಲಿಕ್ಕೂ ಅಶಕ್ತರೆಂದು ಬಾರಿಬಾರಿಗೂ ಹೇಳುತ್ತಿರುವುದನ್ನು ಕೇಳಿ ಅವನ ಎದೆಯಲ್ಲಿ ಶೂಲವಿರಿದಂತಾಯಿತು.

ಆ ದಿನ ಮಾಘಪೂರ್ಣಿಮೆ. ಫಾಲ್ಗುಣಮಾಸದ ಆರಂಭವಾಗಬೇಕು. ಹಗಲ ಸೆಕೆಯನ್ನು ಭೇದಿಸಿಕೊಂಡು ಸಂಜೆಯ ವೇಳೆ ಹಠಾತ್ತಾಗೊಂದು ಹುಚ್ಚು ತಂಗಾಳಿಯ ಅಲೆ ಬೀಸಿಕೊಂಡು ಬಂತು. ಕೋಗಿಲೆಯು ಕೂಗಿ ಕೂಗಿ ಬೇಸತ್ತುಹೋಯಿತು. ಬಾರಿಬಾರಿಗೂ ಆ ಹಕ್ಕಿ ಒಂದೇ ಸ್ವರದ ಆವರ್ತದಿಂದ ಎಲ್ಲಿಯ ಯಾವ ಉದಾಸೀನ ನಲ್ಲನ ಮನಸ್ಸನ್ನು ಕದಲಿಸಲು ಹವಣಿಸುತ್ತಿದೆ. ಮತ್ತು ಮುಗಿಲಿನಲ್ಲಿ ಹೂಗಂಪಿನ ಜಾತ್ರೆ ನಡೆದಿದೆ. ಬಗೆ ಬಗೆಯ ಸವಿಗಂಪುಗಳ ನೂಕುನುಗ್ಗಲಿನ ಜಮಾವಣೆ. ಕಿಟಕಿಯ ತೀರ ಪಕ್ಕದಲ್ಲೇ ಅಂತಃಪುರದ ಹೂತೋಟದಿಂದ ದುಂಡುಮಲ್ಲಿಗೆ ಹೂಗಳ ಕಂಪು ವಸಂತದ ಮುಗಿಲನ್ನು ನಿಬಿಡವಾದ ಮಾದಕತೆಯಲ್ಲಿ ತುಂಬಿಬಿಟ್ಟಿದೆ. ಕಿರಣಳು ಆ ದಿನ ತೆಳುವಾದ ಎಲೆ ಹಸುರಿನ ಪತ್ತಲವುಟ್ಟು ತುರುಬಿನಲ್ಲಿ ಮಲ್ಲಿಗೆ ಮಾಲೆಯನ್ನು ಮುಡಿದಿದ್ದಳು. ಈ ದಂಪತಿಯ ನಿತ್ಯದ ವಾಡಿಕೆಯಂತೆ ಆ ದಿನ ಬನ್ವಾರಿಲಾಲನ ಸಲುವಾಗಿಯೂ ವಸಂತಋತು ಕಳೆಯುವುದರ ನಿಮಿತ್ತ ಒಂದು ಎಲೆ ಹಸುರಿನ ಚಾದರ ಮತ್ತು ಬಿಲ್ವಪುಷ್ಪಗಳ ಹಾರವೂ ಸಿದ್ಧಮಾಡಲ್ಪಟ್ಟಿದ್ದುವು. ರಾತ್ರಿ ಮೊದಲನೆಯ ಝಾವ ಕಳೆದುಹೋಯಿತು. ಆದರೂ ಬನ್ವಾರಿಲಾಲನು ಕಂಡುಬರಲೇ ಇಲ್ಲ. ಯೌವನರಸ ತುಂಬಿದ ಪಾನೀಯ ಪಾತ್ರೆ ಇಂದೇಕೋ ಅವನಿಗೆ ರುಚಿಸದಾಯಿತು. ಅನುರಾಗದ ವೈಕುಂಠಲೋಕದಲ್ಲಿ ಇಷ್ಟು ದೊಡ್ಡ ಕುಂಠಿತಭಾವವನ್ನು ಸಂಕಟವನ್ನು ದೂರಮಾಡುವ ಸಾಮರ್ಥ್ಯ ಅವನಲ್ಲಿಲ್ಲ. ಆದರೆ ನೀಲಕಂಠನಲ್ಲುಂಟು... ತನ್ನಂಥ ಕಾಪುರುಷನ ಕೊರಳಲ್ಲಿ ಹಾಕುವುದಕ್ಕಾಗಿ ಮಾಲೆಯನ್ನಾರು ಹೆಣೆದಿರುತ್ತಾರೆ?

ಮೊದಲು ಅವನು ತನ್ನ ಹೊರಕೋಣೆಗೆ ನೀಲಕಂಠನನ್ನ ಕರೆಯಕಳಿಸಿದ. ಮತ್ತು ಋಣದ ಭಾರ ಹಾಕಿ ಮಧುಕೈವರ್ತನನ್ನು ಹಾಳುಮಾಡುವುದನ್ನು ನಿಷೇಧಮಾಡಿದ. ನೀಲಕಂಠನದಕ್ಕೆ ಮಧುವಿಗೆ ಸಲಿಗೆ ತೋರಿಸಿದ್ದಾದರೆ ಈ ಅವಧಿಯ ಕೊನೆಯಲ್ಲಿ ಬಹಳ ದುಡ್ಡು ಬಾಕಿ ಬಿದ್ದುಹೋಗುತ್ತದೆ. ಎಲ್ಲರೂ ನೆಪ ಹೇಳುವುದಕ್ಕೆ ಆರಂಭಿಸಿಬಿಡುತ್ತಾರೆ, ಎಂದು ಉತ್ತರಿಸಿದ.

ತರ್ಕದಿಂದ ಸಾಧ್ಯವಾಗದೇಹೋಗಲು ಆಗ ಬಾಯಿಗೇನು ಬಂತೋ ಅದನ್ನ ಆಡಿಬಿಟ್ಟ ಬನ್ವಾರಿ. ನೀನೊಬ್ಬ ನೀಚಮನುಷ್ಯ ಎಂದುಬಿಟ್ಟ, ನೀಲಕಂಠನದಕ್ಕೆ ನೀಚ ಮನುಷ್ಯನಾಗದೆ ಹೋದರೆ ದೊಡ್ಡ ಮನುಷ್ಯರ ಬಳಿ ಕೂಳಿಗಾಗಿ ಆಶ್ರಯವೇಕೆ ಪಡೆಯುತ್ತಿದ್ದೆ ಎಂದ. ನೀನು ಕಳ್ಳ ಎಂದ ಬನ್ವಾರಿ. ಅದೂ ಇರಬಹುದು. ಯಾರಿಗೆ ದೇವರು ಸ್ವಂತದ್ದೇನೂ ಕೊಡಲಿಲ್ಲವೋ ಬೇರೆಯವರ ಹಣದಿಂದಲಾದರೂ ಅವನು ಹೊಟ್ಟೆಹೊರೆಯಬೇಕಲ್ಲವೆ? ಎಂದ ನೀಲಕಂಠ. ಕಡೆಗೆ "ನೋಡಿ, ವಕೀಲಬಾಬುಗಳು ಬಂದು ಕೂತಿದ್ದಾರೆ, ಅವರ ಸಂಗಡ ಜರೂರಿ ಕೆಲಸದ ಮಾತುಕಥೆಯಾಗಬೇಕಾದ್ದಿದೆ; – ಅದನ್ನ ಪೂರೈಸಿಕೊಂಡು ಅಗತ್ಯ ಬಿದ್ದರೆ ಮತ್ತೆ ಬಂದು ಕಾಣಿಸಿಕೊಳ್ಳುತ್ತೇನೆ" ಎಂದು ಹೇಳಿ ನೀಲಕಂಠ ಅಲ್ಲಿಂದೆದ್ದು ಹೋದ.

ಏತರಿಂದಲೂ ಉಪಾಯಗಾಣದೆ ಬನ್ವಾರಿಯು ತಮ್ಮ ಬಂಶೀಲಾಲನನ್ನು ತನ್ನ ಕಡೆ ಎಳೆದುಕೊಂಡು ಆಕ್ಷಣವೇ ಅಪ್ಪನ ಮುಂದೆ ಹೋಗುವುದೆಂದು ತೀರ್ಮಾನಿಸಿದ. ಒಬ್ಬನೇ ಹೋದರೆ ಕೆಲಸ ಫಲಿಸುವುದಿಲ್ಲ. ಏಕೆಂದರೆ, ಇದೇ ನೀಲಕಂಠನನ್ನ ಕುರಿತು ಅವನಿಗೆ ತಂದೆಯೊಂದಿಗೆ ಕಿತ್ತಾಟವಾಗಿತ್ತು. ಅವನ ತಂದೆ ಅವನ ಮೇಲೆ ಸಿಟ್ಟುಗೊಂಡಿದ್ದರು. ಒಂದಾನೊಂದು ಕಾಲದಲ್ಲಿ ಬನ್ವಾರಿಯು ತಂದೆಗೆ ಮೆಚ್ಚಿನ ಮಗನಾಗಿದ್ದ. ಎಲ್ಲರೂ ಮನೋಹರಲಾಲರು ಹಿರೇಮಗನನ್ನೇ ಎಲ್ಲರಿಗಿಂತ ಹೆಚ್ಚಾಗಿ ಪ್ರೀತಿಸುತ್ತಾರೆಂದು ತಿಳಿದಿದ್ದರು. ಆದರೆ ಈಗಂತೂ ಬಂಶಿಯ ಮೇಲೆಯೇ ಅವರ ಪ್ರೀತಿ, ಮಮತೆಗಳೆಂದು ಅನ್ನಿಸುತ್ತದೆ. ಈ ಕಾರಣದಿಂದಲೇ ಬನ್ವಾರಿಯು ಬಂಶಿಯನ್ನು ತನ್ನ ಅಹವಾಲಿನ ವಿಷಯದಲ್ಲಿ ತನ್ನ ಪಕ್ಷಮಾಡಿಕೊಳ್ಳಲಿಚ್ಛಿಸಿದ್ದು.

ಯಾರನ್ನ ಬಹಳ ಒಳ್ಳೇ ಹುಡುಗ ಎಂದು ಹೇಳುತ್ತಾರೋ ಅಂಥವನು, ಈ ಬಂಶಿ. ಈ ಕುಟುಂಬದಲ್ಲಿ ಅವನೊಬ್ಬನೇ ಪರೀಕ್ಷೆಗಳನ್ನು ಪಾಸು ಮಾಡಿರುವಂಥವನು.

ಈ ಸಲ ಅವನು ಲಾ ಪರೀಕ್ಷೆಯ ವ್ಯಾಸಂಗ ಮಾಡುತ್ತಿದ್ದ. ಹಗಲು ರಾತ್ರಿ ಎಚ್ಚತ್ತು ಓದಿ ಓದಿ ನಿಜವಾಗಿಯೂ ಅವನೊಳಗಡೆ ಓದಿರುವುದೇನಾದರೂ ಜಮಾ ಆಗುತ್ತಿದೆಯೋ ಇಲ್ಲವೋ ದೇವರಿಗೇ ಗೊತ್ತು. ಆದರೆ ಮೈನೋಡಿದರೆ ಮಾತ್ರ ಖರ್ಚಿನ ಬಾಬತೇ ಎಂದು ಖಂಡಿತ ಹೇಳಬಹುದು.

ಈ ಫಾಲ್ಗುಣಮಾಸದ ಸಂಜೆಯ ವೇಳೆ ಬಂಶಿಯು ಕಿಟಕಿಗಳನ್ನು ಮುಚ್ಚಿ ಕೋಣೆಯೊಳಗಿದ್ದಾನೆ. ಋತು ಬದಲಾವಣೆಯ ಕಾಲವೆಂದರೆ ಅವನಿಗೆ ಬಹಳ ಭಯ. ಒಳ್ಳೆಯ ಗಾಳಿಯ ಆವಶ್ಯಕತೆಯ ಬಗ್ಗೆ ಅವನಿಗಷ್ಟು ಶ್ರದ್ಧೆಯಿಲ್ಲ. ಮೇಜಿನ ಮೇಲೆ ಒಂದು ಸೀಮೇಯೆಣ್ಣೆಯ ದೀಪ ಉರಿಯುತ್ತಿದೆ. ಪುಸ್ತಕಗಳು ಕೆಲವು

ಕುರ್ಚಿಯ ಬಳಿ ರಾಶಿಯಾಗಿ ಬಿದ್ದಿವೆ. ಇನ್ನು ಕೆಲವು ಮೇಜಿನ ಮೇಲಿವೆ. ಗೋಡೆಯ ಗೂಡಿನಲ್ಲಿ ಕೆಲವು ಔಷಧಿ, ಮಾತ್ರೆಗಳ ಶೀಸೆಗಳು ಇಡಲ್ಪಟ್ಟಿದ್ದುವು.

ಬನ್ವಾರಿಯು ಮಾಡಿದ ಸಲಹೆಗೆ ಅವನು ಎಷ್ಟು ಹೇಳಿದರೂ ಒಪ್ಪಲಾರದೆ ಹೋದ. ಬನ್ವಾರಿಗೆ ಸಿಟ್ಟು ನೆತ್ತಿಗೇರಿ ಗರ್ಜಿಸಿದ. "ಆ ನೀಲಕಂಠನಿಗೆ ಹೆದರುತ್ತೀಯಾ?" ಎಂದ. ಬಂಶಿಯದಕ್ಕೆ ಯಾವ ಜವಾಬೂ ಹೇಳದೆ ಸುಮ್ಮನಿದ್ದ. ನಿಜವಾಗಿ ನೀಲಕಂಠನ ಅನುಗ್ರಹದಲ್ಲಿರಬೇಕೆಂದೇ ಅವನ ಸತತವಾದ ಶ್ರಮ. ಅವನು ಸುಮಾರು ವರುಷವಿಡೀ ಕಲಿಕತ್ತೆಯಲ್ಲೇ ಕಾಲಕಳೆಯುತ್ತಿದ್ದ. ಅಲ್ಲಿ ಅವನಿಗೆ ಆಗಾಗ ಧಾರಾಳವಾಗಿ ಹಣದ ಅಗತ್ಯ ಬೀಳುತ್ತಿತ್ತು. ಈ ಕಾರಣದಿಂದ ನೀಲಕಂಠನನ್ನ ಪ್ರಸನ್ನನಾಗಿಟ್ಟಿರುವುದೇ ಅವನ ಅಭ್ಯಸ್ತಕ್ರಮವಾಗಿತ್ತು.

ಬಂಶಿಯನ್ನ ಹೇಡಿ, ಕೈಲಾಗದವನೆಂದು ಬೈದ ಬನ್ವಾರಿ. ನೀಲಕಂಠನ ಪಾದ ದಾಸ ಚಕ್ರವರ್ತಿ ಎಂದು ವ್ಯಂಗ್ಯವಾಗಿ ಧಿಕ್ಕರಿಸಿದ. ಅದಕ್ಕೂ ಬಂಶಿ ತುಟಿಪಿಟಕ್ಕೆನ್ನಲಿಲ್ಲ. ಆಗ ಬನ್ವಾರಿ ತಾನೊಬ್ಬನೇ ಹೋಗಲು ನಿರ್ಧರಿಸಿ ತಂದೆಯ ಮುಂದೆ ಬಂದು ನಿಂತ. ಮನೋಹರಲಾಲರಾಗ ತಮ್ಮ ಹೂದೋಟದ ಕೊಳದ ಸೋಪಾನಗಳ ಮೇಲೆ ತಮ್ಮ ದೀರ್ಘ ದೇಹವನ್ನು ಹರಡಿಕೊಂಡು ಆರಾಮವಾಗಿ ವಾಯುಸೇವನೆ ಮಾಡುತ್ತಿದ್ದರು. ಹೊಗಳುಭಟರ ತಂಡ ಅವರ ಸುತ್ತ ನೆರೆದು ಕಲಿಕತ್ತೆಯಲ್ಲಿ ತಮ್ಮ ಕಡೆಯ ಬ್ಯಾರಿಸ್ಟರುಗಳು ಹೂಡಿದ ಪಾಟೀ ಸವಾಲು (Cross examination)ಗಳ ಬಲೆಯಲ್ಲಿ ಸಿಲುಕಿ ಜಿಲ್ಲಾ ಕೋರ್ಟಿನಲ್ಲಿ ಪಕ್ಕದ ಗ್ರಾಮದ ಜಮೀನುದಾರ ಅಖಿಲ ಮಜುಮದಾರ ಹೇಗೆ ಕಕ್ಕಾಬಿಕ್ಕಿಯಾಗಿದ್ದನೆಂಬ ಕಥೆಯನ್ನು ಧಣಿಗಳ ಕಿವಿಗಿಂಪಾಗುವಂತೆ ಕಟ್ಟಿ ವರ್ಣಿಸುತ್ತಿದ್ದರು. ಆ ದಿನ ವಸಂತಕಾಲದ ಸಂಜೆಯ ವೇಳೆಯ ಹೂಗಳ ನರುಗಂಪಿನೊಂದಿಗೆ ಬೆರೆತು ಆ ವೃತ್ತಾಂತವು ಧಣಿಗಳ ಮನಸ್ಸಿಗೆ ಅತಿಹಿತ, ಅತಿ ಮಧುರವಾಗಿ ತೋರುತ್ತಿತ್ತು.

ಹಠಾತ್ತಾಗಿ ಬನ್ವಾರಿಯು ಅದರ ನಡುವೆ ಧುಮುಕಿ ಬಂದು ವಿರಸಮಾಡಿ ಬಿಟ್ಟ. ಪೀಠಿಕೆಯಿಂದ ಆರಂಭಿಸಿ ನಿಧಾನವಾಗಿ ತನ್ನ ಅರಿಕೆಯನ್ನು ತಿಳಿಸುವಷ್ಟು ತಾಳ್ಮೆಯೆಲ್ಲಿತ್ತು ಬನ್ವಾರಿಲಾಲನಿಗೆ?

ಮೊದಲಲ್ಲೇ ದೊಡ್ಡ ದನಿಯಲ್ಲಿ ಹೇಳುವುದಕ್ಕಾರಂಭಿಸಿಬಿಟ್ಟ. ನೀಲಕಂಠನಿಂದ ತಮ್ಮ ಕುಟುಂಬಕ್ಕೆ ದೊಡ್ಡ ಹಾನಿಯಾಗುತ್ತಿದೆ, ಅವನು ಕಳ್ಳ. ಧಣಿಗಳ ಹಣ ದೋಚಿ ಸ್ವಂತ ಹೊಟ್ಟೆ ಹೊರೆದುಕೊಳ್ಳುತ್ತಿದ್ದಾನೆ–ಹೀಗೆಲ್ಲ ಮನಸ್ಸಿಗೆ ಬಂದದ್ದನ್ನ ಒದರಿಬಿಟ್ಟ.

ಈ ಮಾತುಗಳಿಗಾವ ಪ್ರಮಾಣವೂ ಇಲ್ಲ. ಅವೂ ನಿಜವೂ ಅಲ್ಲ. ನೀಲ ಕಂಠನಿಂದ ಅವನ ಸಂಪತ್ತು ವೃದ್ಧಿಯಾಗುತ್ತಿದೆ, ಆಗಿದೆ. ಅವನು ಕಳ್ಳನಂತೂ

ಅಲ್ಲವೇ ಅಲ್ಲ. ಬನ್ವಾರಿಯು ಅಂದುಕೊಂಡಿದ್ದ, ನೀಲಕಂಠನ ಒಳ್ಳೆಯ ಸ್ವಭಾವದ ಬಗ್ಗೆ ದೃಢವಾದ ವಿಶ್ವಾಸವಿದೆಯೆಂದೇ ತಂದೆಯು ಎಲ್ಲ ವಿಷಯಗಳಲ್ಲೂ ಅವನ ಬಗ್ಗೆ ಹೀಗೆ ಕಣ್ಣು ಮುಚ್ಚಿಕೊಂಡು ನಿಶ್ಚಿಂತೆಯಿಂದಿದ್ದುಬಿಟ್ಟಿದ್ದಾರೆ. ಇದು ಅವನ ಬರೇ ಭ್ರಮೆ, ಮನೋಹರಲಾಲರಿಗೆ ಚೆನ್ನಾಗಿ ಗೊತ್ತಿಲ್ಲದೆ ಇಲ್ಲ. ಸುಯೋಗ ಬಂದರೆ ನೀಲಕಂಠ ಹಣ ದೋಚಬಲ್ಲ. ಆದರೆ ಆ ಕಾರಣಕ್ಕಾಗಿ ಅವನ ಬಗ್ಗೆ ಧಣಿಗಳಿಗೆ ಅಶ್ರದ್ಧೆ ಹುಟ್ಟಿಲ್ಲ. ಕಾರಣ, ಪರಂಪರೆಯಾಗಿ, ಪುರಾತನ ಕಾಲದಿಂದಲೂ ಹೀಗೆಯೇ ಪ್ರಪಂಚ ನಡೆದುಕೊಂಡು ಬರುತ್ತಿದೆ. ಅನುಚರ ವರ್ಗದವರು ದೋಚಿ ತಿಂದುಳಿದ ಎಂಜಲಿಂದಲೇ ಚಿರಕಾಲದಿಂದ ದೊಡ್ಡವರ ಮನೆತನಗಳು ಬಾಳಿ ಉಳಿಯುತ್ತಿರುವುದು. ದೋಚಿ ತಿನ್ನುವ ಚಾತುರ್ಯವಿಲ್ಲದವನು ಧಣಿಯ ಸಂಪತ್ತನ್ನು ಕಾಪಾಡುವ ಯೋಗ್ಯತೆ ಎಲ್ಲಿಂದ ಸಂಪಾದಿಸಬಲ್ಲ ? ಧರ್ಮಪುತ್ರ ಯುಧಿಷ್ಠಿರನಿಂದಲಂತೂ ಜಮೀನ್‌ದಾರಿಯ ಕಾರುಬಾರು ಸಾಗದು. ಮನೋಹರಲಾಲರು ಸಿಟ್ಟಿನಿಂದ "ಸರಿಸರಿ, ನೀಲಕಂಠ ಏನು ಮಾಡುತ್ತಾನೆ, ಏನುಮಾಡುವುದಿಲ್ಲ ಅನ್ನುವುದನ್ನ ನೀನು ಯೋಚಿಸಿ ತಲೆಕೆಡಿಸಿಕೊಳ್ಳಬೇಕಾಗಿಲ್ಲ" ಎಂದುಬಿಟ್ಟು "ನೋಡು ಹೋಗಿ, ಬಂಶಿಗೆ ಇಂಥವುಗಳ ಗೋಜೇ ಇಲ್ಲ. ಅವನು ಹೇಗೆ ಓದು, ಬರೆಹದಲ್ಲಿ ಮುಳುಗಿದ್ದಾನೆ. ಆ ಹುಡುಗ ನಿಜವಾಗಿ ಮಾದರಿ ಮನುಷ್ಯವಾಗುವಂಥವ" ಎಂದು ಚುಚ್ಚುವಂತೆ ಮಾತೂ ಆಡಿಬಿಟ್ಟರು.

ಇದಾದ ಮೇಲಂತೂ ಅಖಿಲ ಮಜುಮದಾರರ ದುರ್ಗತಿಯ ಕಥೆ ಅಷ್ಟುಮಟ್ಟಿಗೆ ರುಚಿಸದಾಯಿತು. ಈ ಕಾರಣದಿಂದ ಮನೋಹರಲಾಲರ ಮುಂದೆ ಅಂದಿನ ಸಂಜೆಯ ವಸಂತದ ತಂಗಾಳಿ ವ್ಯರ್ಥವಾಗಿ ಬೀಸಿತು. ಕೊಳದ ಕಡುಗಪ್ಪಾದ ನೀರಿನ ಮೇಲೆ ಬಿದ್ದ ಬೆಳುದಿಂಗಳು ಝುಗ ಝುಗಿಸಿ ಮೈಮರೆಯಿಸುವ ಸಂಭವವೂ ಇಲ್ಲ. ಅಂದು ಸಂಜೆಯು ಪೂರ್ತಿಯಾಗಿ ವ್ಯರ್ಥವಾಗದೆ ಹೋದದ್ದು ಕೇವಲ ಬಂಶಿ ಮತ್ತು ನೀಲಕಂಠರ ಪಾಲಿಗೆ. ಕಿಟಕಿಗಳನ್ನ ಮುಚ್ಚಿ ಬಂಶಿ ರಾತ್ರಿ ಬಹಳ ಹೊತ್ತಿನವರೆಗೂ ಓದಿದ ಮತ್ತು ವಕೀಲರೊಡನೆ ಸಲಹೆ ನಡೆಸಿ ನೀಲಕಂಠನು ರಾತ್ರಿಯರ್ಧವನ್ನೆಲ್ಲ ಕಳೆದ.

ಈ ಕಡೆ ಕಿರಣಳು ದೀಪ ಸಣ್ಣದಾಗಿ ಮಾಡಿ ಕಿಟಕಿಯ ಬಳಿ ಕೂತಳು. ಮಾಡಬೇಕಾದ ಕೆಲಸಗಳನ್ನೆಲ್ಲ ಇಂದವಳು ಬೇಗಲೇ ಮುಗಿಸಿಬಿಟ್ಟಿದ್ದಳು. ರಾತ್ರಿಯೂಟ ಇನ್ನೂ ಆಗಿಲ್ಲ. ಆದರೆ ಬನ್ವಾರಿಯೇಕೋ ಇನ್ನೂ ಬಂದಿಲ್ಲ. ಅವನ ಊಟವಾಗಿಲ್ಲ, ಅದಕ್ಕಾಗಿ ಕಾದು ಕೂತಿದ್ದಾಳೆ. ಮಧುಕೈವರ್ತನ ವಿಷಯ ಮರೆತೇಹೋಗಿದೆ. ಬನ್ವಾರಿಯು ಮಧುಕೈವರ್ತನನ್ನ ಸಂಕಟದಿಂದ ಪಾರುಮಾಡಲಾರನಲ್ಲ ಎಂಬುದನ್ನ ಕುರಿತು ಅವಳಿಗೆ ಸ್ವಲ್ಪವೂ ದುಃಖವಿಲ್ಲ. ಅವಳು ತನ್ನ ಗಂಡನಿಂದ ಎಂದೂ ವಿಶೇಷವಾದ ಸಾಮರ್ಥ್ಯವನ್ನಾಗಲಿ ಅಸಾಧಾರಣ ಪೌರುಷವನ್ನಾಗಲಿ ಕಾಣಲು

ತವಕಪಡುತ್ತಿಲ್ಲ. ಕುಟುಂಬದ ಗೌರವವೇ ತನ್ನ ಪತಿಯ ಗೌರವ ಅವಳಿಗೆ. ಅವಳ ಗಂಡ ಮಾವನವರಿಗೆ ಹಿರಿಯಮಗ. ಇದಕ್ಕಿಂತ ವಿಶೇಷವೇನು ಬೇಕವಳಿಗೆ? ಇದಕ್ಕೂ ಹೆಚ್ಚಿನದೇನಾದರೂ ನಡೆಯಬೇಕೆಂಬ ಬಯಕೆ ಅವಳ ಮನಸ್ಸಿನಲ್ಲೆಂದೂ ಹುಟ್ಟಿರಲಿಲ್ಲ. ಇವರ ಮನೆತನ ಸಾಮಾನ್ಯವಲ್ಲ–ಗೋಸಾಯಿಗಂಜಿನ ಪ್ರಖ್ಯಾತವಾದ ಹಲಧರವಂಶ!

ಬನ್ವಾರಿಯು ರಾತ್ರಿ ಬಹಳ ಹೊತ್ತಿನವರೆಗೆ ಹೊರ ವರಾಂಡದಲ್ಲಿ ಶತಪಥ ತಿರುಗುತ್ತ ಕಡೆಗೆ ತನ್ನ ಮಲಗುವ ಕೋಣೆಗೆ ಹೋದ. ತಾನಿನ್ನೂ ಉಂಡೇ ಇಲ್ಲವೆಂಬ ವಿಷಯ ಅವನಿಗೆ ನೆನಪೇ ಬರಲಿಲ್ಲ. ಕಿರಣಳು ತನಗಾಗಿ ಕಾದಿದ್ದು ಇನ್ನೂ ಊಟಮಾಡಿಲ್ಲವೆಂದು ತಿಳಿದು ಬಹಳ ನೊಂದುಕೊಂಡ. ತನ್ನ ಪ್ರೇಯಸಿ ಕಿರಣಳ ಈ ಕಷ್ಟ ಸ್ವೀಕಾರದೊಂದಿಗೆ ತನ್ನ ಕೈಲಾಗದಿರುವಿಕೆಯು ಹೊಂದಿಕೊಳ್ಳಲಿಲ್ಲ. ಅನ್ನದ ತುತ್ತು ಅವನ ಗಂಟಲಲ್ಲಿ ಇಳಿಯದೇ ಹೋಯಿತು. ಬನ್ವಾರಿಯಾಗ ಅತ್ಯಂತ ಉತ್ತೇಜಿತನಾಗಿ ಹೆಂಡತಿಯನ್ನು ಕುರಿತು "ಏನಾದರೂ ಆಗಲಿ ನೋಡುತ್ತಿರು, ಮಧುಕೈವರ್ತನನ್ನ ನಾನು ಈ ವಿಪತ್ತಿನಿಂದ ಬಿಡುಗಡೆ ಮಾಡೇಮಾಡುತ್ತೇನೆ" ಎಂದು ಪಣ ತೊಟ್ಟ. ಕಿರಣಳು ಗಂಡನ ಈ ಅನಾವಶ್ಯಕವಾದ ಉಗ್ರತೆಯನ್ನು ಕಂಡು ವಿಸ್ಮಿತಳಾಗಿ "ಅದು ಹೇಗೆ ಬಿಡಿಸುತ್ತೀರಿ, ಹೇಳಿ ನೋಡೋಣ ಸ್ವಲ್ಪ" ಎಂದಳು.

ಮಧುಕೈವರ್ತನ ಸಾಲವನ್ನು ತಾನೇ ತೀರಿಸಿಬಿಡುವೆನೆಂದು ಬನ್ವಾರಿಯ ತೀರ್ಮಾನ. ಆದರೆ, ಪಾಪ, ಎಂದೂ ಬನ್ವಾರಿಯ ಕೈಯಲ್ಲಿ ಅಷ್ಟೊಂದು ಹಣ ಸೇರುತ್ತಿರಲಿಲ್ಲ. ಆಗವನು ಮನಸ್ಸು ಮಾಡಿದ : ತನ್ನಲ್ಲಿದ್ದ ಮೂರು ಚಲೋ ಕೋವಿಗಳಲ್ಲಿ ಒಂದು ಕೋವಿಯನ್ನು ಮತ್ತು ಒಂದು ಬೆಲೆಬಾಳುವ ವಜ್ರದುಂಗುರವನ್ನೂ ಮಾರಿ ಆ ಹಣವನ್ನು ಕೂಡಿಸಬೇಕು. ಆದರೆ ಆ ಹಳ್ಳಿಗಾಡಿನಲ್ಲಿ ಅಂತಹ ವಸ್ತುಗಳಿಗೆ ಯೋಗ್ಯವಾದ ಬೆಲೆ ದೊರೆಯುವುದಿಲ್ಲ ಮತ್ತು ಮಾರಲು ಪ್ರಯತ್ನ ಮಾಡಿದರೆ ನಾಲ್ಕೂ ದಿಕ್ಕು ಜನರು ಗುಸಪಿಸ ಮಾತಾಡುವರು. ಈ ಕಾರಣದಿಂದ ಯಾವುದೋ ಒಂದು ನೆಪ ಮಾಡಿ ಬನ್ವಾರಿಯು ಕಲಿಕತ್ತೆಗೆ ಹೋದ. ಹೋಗುವ ಸಮಯದಲ್ಲಿ ಮಧುವನ್ನು ಕರೆದು ಏನೂ ಭಯಪಡಬೇಡ, ನಾನಿದ್ದೇನೆ ಎಂದು ಭರವಸೆ ಕೊಟ್ಟ.

ಈ ಕಡೆ ಬನ್ವಾರಿಗೆ ಹೋಗಿ ಮೊರೆಹೊಕ್ಕಿದಾನೆಂದು ತಿಳಿದು ನೀಲಕಂಠನು ಮಧುವಿನ ಮೇಲೆ ಬೆಂಕಿಯಾದ. ಅದರ ಫಲವಾಗಿ ಕಛೇರಿ ಪ್ಯಾದೆಗಳ ಪೀಡನೆಯಿಂದ ಬೆಸ್ತರ ಹಟ್ಟಿಯಲ್ಲಿ ಯಾರದೂ ಮಾನವುಳಿಯುವಂತಿರಲಿಲ್ಲ.

ಕಲಿಕತ್ತೆಯಿಂದ ಬನ್ವಾರಿ ಮರಳಿ ಬಂದ ದಿನವೇ ಮಧುವಿನ ಮಗ ಸ್ವರೂಪ, ಏದುತ್ತ ಏದುತ್ತ ಓಡಿಬಂದ. ಬಂದವನೇ ಬನ್ವಾರಿಯ ಕಾಲುಗಳನ್ನ ಗಟ್ಟಿಯಾಗಿ

ಹಿಡಿದು ಗೊಳೋ ಎಂದು ಅಳತೊಡಗಿದ. "ಯಾಕೋ, ಯಾಕೋ, ಏನಾಯಿತೋ" ಎಂದು ಬನ್ವಾರಿಯು ಕೇಳುತ್ತಲೇ ಸ್ವರೂಪನು ತನ್ನ ತಂದೆಯನ್ನು ನೀಲಕಂಠ ಹಿಂದಿನ ದಿನ ರಾತ್ರಿಯಿಂದ ಕಛೇರಿಯಲ್ಲಿ ಬಂಧಿಸಿ ಕೂಡಿಸಿದ್ದಾನೆಂದು ಹೇಳಿದ. ಕೇಳಿದೊಡನೆ ಬನ್ವಾರಿಯ ಮೈಯೆಲ್ಲ ರೋಷದಿಂದ ನಡುಗಿತು. ಕೂಡಲೇ "ಹೋಗು, ತತ್‌ಕ್ಷಣ ಹೋಗಿ ಪೊಲೀಸು ಸ್ಟೇಷನ್ನಿಗೆ ಕಂಪ್ಲೇಂಟು ಕೊಟ್ಟುಬಿಟ್ಟು ಬಾ" ಎಂದು ಅಪ್ಪಣೆ ಮಾಡಿದ ಬನ್ವಾರಿ.

ಸರ್ವನಾಶವೇ ಸರಿ! ಪೊಲೀಸಿಗೆ ದೂರುಕೊಡುವುದೇ? ನೀಲಕಂಠನ ವಿರೋಧವಾಗಿ? ಸ್ವರೂಪನಿಗೆ ಕಾಲೇ ಮುಂದೆ ಹೊರಡಲಿಲ್ಲ. ಕೊನೆಗೆ ಬನ್ವಾರಿಯ ಬಲವಂತಕ್ಕೆ ಬಗ್ಗಿ ಠಾಣೆಗೆ ಹೋಗಿ ದೂರು ಕೊಟ್ಟ. ಪೊಲೀಸರು ಕೂಡಲೇ ಕಛೇರಿಗೆ ಗುಂಪಾಗಿ ಬಂದು ಮಧುವನ್ನ ಬಿಡುಗಡೆ ಮಾಡಿದರು. ಮತ್ತು ನೀಲಕಂಠನನ್ನು, ಕಛೇರಿಯ ಇನ್ನು ಕೆಲಜನ ಪ್ಯಾದೆಗಳನ್ನೂ ದಸ್ತಗಿರಿಮಾಡಿ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಮಾಡಿ, ಛಾರ್ಜುಷೀಟು ಮಾಡಿದರು.

ಮನೋಹರಲಾಲರು ಅತ್ಯಂತ ವ್ಯಾಕುಲರಾಗಿಹೋದರು. ಅವರ ಮೊಕದ್ದಮೆಯ ಸಲಹೆಗಾರರು ಲಂಚದ ನೆಪದಿಂದ ಪೊಲೀಸರ ಸಂಗಡ ಪಾಲು ಒಪ್ಪಿಕೊಂಡು ಹಣ ದೋಚಲು ತೊಡಗಿದರು. ಕಲಿಕತ್ತೆಯಿಂದ ಬ್ಯಾರಿಸ್ಟರನೊಬ್ಬ ಬಂದ. ಅವನೋ ಇನ್ನೂ ಹಸಿಹಸಿ, ಹೊಸದಾಗಿ ಪಾಸು ಮಾಡಿದವನು. ಆದರೆ ಅವನಿಂದ ಒಂದು ಅನುಕೂಲ–ಅವನ ಹೆಸರಿನಲ್ಲಿ ಲೆಕ್ಕದ ಪುಸ್ತದಲ್ಲಿ ಎಷ್ಟರಮಟ್ಟಿಗೆ ಖರ್ಚನ್ನ ನಮೂದಿಸಿರುತ್ತೋ ಅಷ್ಟರಮಟ್ಟಿಗೆ ಅವನ ಜೇಬಿಗೆ ಸೇರಬೇಕಾಗಿಲ್ಲ. ಈ ಕಡೆ ಮಧುಕೈವರ್ತನ ಪಕ್ಷವಾಗಿಯೂ ಜಿಲ್ಲೆಯ ಕೋರ್ಟಿನ ಒಬ್ಬ ದಕ್ಷನಾದ ವಕೀಲನ ಏರ್ಪಾಡಾಯಿತು. ಆದರೆ ಅವನ ಖರ್ಚನ್ನ ಯಾರು ಒದಗಿಸುತ್ತಾರೋ ಎಂಬುದು ತಿಳಿಯುತ್ತಿರಲಿಲ್ಲ.

ನೀಲಕಂಠನಿಗಂತೂ ಆರು ತಿಂಗಳ ಸಜ ಆಗಿಹೋಯಿತು. ಹೈಕೋರ್ಟಿನಲ್ಲೂ ಅದು ಸ್ಥಿರವಾಗಿಹೋಯಿತು.

ಗಡಿಯಾರ ಮತ್ತು ಕೋವಿಗಳು ಯೋಗ್ಯ ಬೆಲೆಗೆ ಬಿಕರಿಯಾದದ್ದು ವ್ಯರ್ಥವೇನಾಗಲಿಲ್ಲ. ಮಧು ಪೂರ್ತಿಯಾಗಿ ಬಿಡುಗಡೆಯಾಗಿಹೋದ, ಮತ್ತು ನೀಲಕಂಠನಿಗೆ ಜೈಲುವಾಸವಾಯಿತು. ಆದರೆ ಈ ನಡೆವಳಿಕೆಯಾದ ಅನಂತರ ಮಧು ಮತ್ತೆ ತನ್ನ ಗುಡಿಸಲಿಗೆ ಹೇಗೆ ಕಾಲಿಟ್ಟಾನು? ಬನ್ವಾರಿಯೇನೋ ಅವನಿಗೆ ಭರವಸೆ ಕೊಟ್ಟು "ನೀನು ಹೋಗಿ ಇರೋ, ಭಯವೇನು?" ಎಂದು ಹೇಳಿದರೂ ಯಾವ ಬಲದಿಂದ ಅವನು ಈ ಧೈರ್ಯ ಕೊಟ್ಟನೋ ಅದು ಅವನಿಗೇ ಗೊತ್ತು, ಬಹುಶಃ ಕೇವಲ ತನ್ನ ಪೌರುಷದ ಅರಿವಿನಿಂದಲೇ ಇರಬೇಕು.

ಬನ್ವಾರಿಯೇ ಈ ಘಟನೆಗಳೆಲ್ಲದರ ಮೂಲದಲ್ಲಿದ್ದನೆಂಬ ವಿಷಯವನ್ನ ಮುಚ್ಚಿಡಲು ಅವನು ಹೆಚ್ಚು ಪ್ರಯತ್ನವನ್ನೂ ಮಾಡಲಿಲ್ಲ. ಅದೇನೋ ಬಹಿರಂಗಕ್ಕೆ ಬಂತು. ಅಷ್ಟೇಕೆ ದೊಡ್ಡ ಧಣಿಗಳ ಕಿವಿಗೂ ಬಿತ್ತು. ಅವರು ಆಗ ಚಾಕರನ ಸಂಗಡ ಬನ್ವಾರಿ ಇನ್ನುಮೇಲೆಂದಿಗೂ ತಮ್ಮ ಎದುರುಗಡೆ ಸುಳಿಯಕೂಡದೆಂದು ಆಜ್ಞೆಮಾಡಿ ಹೇಳಿ ಕಳುಹಿಸಿದರು. ಬನ್ವಾರಿಯು ಅಂತೆಯೇ ಅವರ ಆದೇಶವನ್ನು ಪಾಲಿಸಿದನು.

ಕಿರಣಳು ತನ್ನ ಗಂಡನ ವ್ಯವಹಾರವನ್ನ ಕಂಡು ಮಾತಿಲ್ಲದವಳಾದಳು. ಏನಿದು ಅನ್ಯಾಯ! ಮನೆಯ ದೊಡ್ಡ ಧಣಿ ! ತಂದೆಯ ಸಂಗಡವೇ ಮಾತು ಬಿಡುವುದೇ? ಅದು ಸಾಲದೆ ಸ್ವಂತ ಕಛೇರಿಯವನನ್ನು ಜೈಲಿಗೆ ಕಳುಹಿಸಿ ಸಮಾಜದ ಜನಗಳ ಮುಂದೆ ತನ್ನ ಕುಟುಂಬದವರು ತಲೆ ತಗ್ಗಿಸಿಕೊಳ್ಳುವಂತೆ ಮಾಡುವುದೆಂದರೇನು? ಅದೂ ಒಬ್ಬ ಸಾಧಾರಣ ಬೆಸ್ತ ಮಧುವಿಗಾಗಿ! ಇದು ನಿಜವಾಗಿಯೂ ಕೌತುಕವಾದದ್ದೇ! ಈ ವಂಶದಲ್ಲಿ ಎಷ್ಟು ಪುರಾತನ ಕಾಲದಿಂದ ಎಷ್ಟು ಹಿರಿಯ ಧಣಿಗಳು ಹುಟ್ಟಿ ಬಂದಿದ್ದಾರೆ, ಮತ್ತು ಎಂದೂ ನೀಲಕಂಠನಂಥ ಭೃತ್ಯರಿಗೂ ಕೊರತೆಯಿಲ್ಲ. ಈ ನೀಲಕಂಠನಂಥವರು ಆಸ್ತಿ, ಸಂಪತ್ತು, ಚರಾಚರ ಸ್ವತ್ತುಗಳೆಲ್ಲದರ ಮೇಲೂ ಹೊಣೆ ಹೊತ್ತಿದ್ದಾರೆ. ಮತ್ತು ಹಿರೇ ಧಣಿಗಳು ಸಂಪೂರ್ಣ ನಿಶ್ಚಿಂತೆಯಿಂದ ವಂಶ ಗೌರವವನ್ನು ಕಾಪಾಡಿಕೊಂಡು ಬಂದಿದ್ದಾರೆ. ಇಂತಹ ವಿಪರೀತ ವ್ಯಾಪಾರವಂತೂ ಎಂದೂ ನಡೆದಿರಲಿಲ್ಲ.

ಇಂದು ಈ ಕುಟುಂಬದ ಹಿರೇ ಧಣಿಯ ಪದವಿಗೆ ಧಕ್ಕೆ ಬರುವಂತಾಗಿರಲು ಹಿರಿಯ ಸೊಸೆಯ ಸ್ಥಾನಕ್ಕೆ, ಗೌರವಕ್ಕೆ ಕೂಡ ಪೆಟ್ಟಾಯಿತು. ಇದರ ಸಲುವಾಗಿ ಇಷ್ಟು ದಿನಗಳಾದ ಅನಂತರ ಕಿರಣಲೇಖೆಗೆ ತನ್ನ ಗಂಡನ ವಿಷಯವಾಗಿ ನಿಜವಾಗಿ ಅಶ್ರದ್ಧೆ ಉಂಟಾಯಿತು. ಇಷ್ಟು ದಿನಗಳಾದ ಮೇಲೆ ತನ್ನ ವಸಂತ ಋತುವಿಗೆ ಮೃದುವಾದ ಎಲೆ ಹಸಿರ ಪತ್ತಲವೂ ತುರುಬಿನ ಮಲ್ಲಿಗೆಯ ಮಾಲೆಯೂ ಲಜ್ಜೆಯಿಂದ ಕಳೆಗುಂದಿದುವು.

ಕಿರಣಲೇಖೆಗೆ ವಯಸ್ಸಾಗಿದೆ. ಆದರೆ ಇನ್ನೂ ಮಕ್ಕಳಾಗಿಲ್ಲ. ಈ ನೀಲಕಂಠನೇ ಒಂದು ದಿನ ಹಿರೇ ಧಣಿಯ ಮನವೊಪ್ಪಿಸಿ ಹೊಸ ವಧುವನ್ನು ನೋಡಿ ಬನ್ವಾರಿಗೆ ಇನ್ನೊಂದು ಲಗ್ನವನ್ನು ಹೆಚ್ಚು ಕಡಿಮೆ ಎಲ್ಲಾ ಒಪ್ಪಂದ ಮಾಡಿಸಿಬಿಟ್ಟಿದ್ದ. ಬನ್ವಾರಿಲಾಲ ಹಲಧರ ವಂಶದ ಹಿರೇ ಮಗ. ಎಲ್ಲ ಮಾತುಗಳ ಮುಂದೆ ಈ ಮಾತನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದುದು. ಅಂಥವನು ಗಂಡು ಸಂತಾನವಿಲ್ಲದೇ ಇರುವುದೆಂದರೆ ಆಗದ ಮಾತು. ಈ ವಿದ್ಯಮಾನದಲ್ಲಿ ಕಿರಣಳ ಎದೆ ಯಾವಾಗಲೂ ಢವ ಢವ ಹೊಡೆದುಕೊಳ್ಳಹತ್ತಿತ್ತು. ಆದರೆ ಇದರಲ್ಲೇನೂ ಅನ್ಯಾಯ,

ಅಸಂಗತವಿಲ್ಲವೆಂದು ತನ್ನ ಮನದಲ್ಲೇ ಒಪ್ಪಿಕೊಳ್ಳಲಾರದೆ ಇರಲಿಲ್ಲ. ಆಗಲೂ ಅವಳು ನೀಲಕಂಠನ ಮೇಲೆ ಈ ವಿಷಯದಲ್ಲಿ ಅಸಮಾಧಾನಗೊಳ್ಳಲಿಲ್ಲ. ತನ್ನ ಭಾಗ್ಯವನ್ನೇ ದೂಷಿಸಿಕೊಂಡಳು. ಅವಳ ಗಂಡ ನೀಲಕಂಠನ ಮೇಲೆ ರೇಗಿ ಅವನನ್ನು ಹೊಡೆಯಲು ಹೋಗದೆಯಿದ್ದರೆ, ಮತ್ತು ಮದುವೆ ಸಂಬಂಧವನ್ನು ಮುರಿದುಹಾಕಿ ತಂದೆ–ತಾಯಿಯರ ಮೇಲೆ ರೇಗಾಡದೆ ಹೋಗಿದ್ದರೆ ಕಿರಣಳು ಅವನ ವ್ಯವಹಾರವನ್ನು ಅನ್ಯಾಯವೆಂದುಕೊಳ್ಳುತ್ತಿರಲಿಲ್ಲ. ಅಷ್ಟೇಕೆ ಬನ್ವಾರಿಯು ವಂಶೋನ್ನತಿಯ ಕಡೆ ಗಮನ ಕೊಡದೇ ಇರುವುದೊಂದು ಕೊರತೆಯಿಂದ ಅವನ ಬಗ್ಗೆ, ಅವನ ಪೌರುಷದ ಬಗ್ಗೆ ಅವಳ ಮನದಲ್ಲಿ ಗೋಪ್ಯವಾಗಿ ಅಶ್ರದ್ಧೆ ಹುಟ್ಟಿಕೊಂಡಿತ್ತು. ದೊಡ್ಡ ಮನೆತನದ ಹಕ್ಕೆಂದರೆ ಸಾಮಾನ್ಯ ಹಕ್ಕುದಾರಿಕೆಯೆ? ಅದಕ್ಕೆ ನಿಷ್ಠುರವಾಗಿ, ನಿರ್ದಾಕ್ಷಿಣ್ಯವಾಗಿ ನಡೆದುಕೊಳ್ಳುವ ಅಧಿಕಾರವಿದೆ. ಅದರೆದುರಿಗೆ, ಅದರ ಹಕ್ಕಿನ ಎದುರಿಗೆ ಯಾವಳೋ ಒಬ್ಬ ಎಳೆ ವಯಸ್ಸಿನ ಹೆಂಡತಿಯ ಅಥವಾ ಯಾರೋ ಒಬ್ಬ ಸಂಕಟದಲ್ಲಿ ಸಿಲುಕಿನ ಬೆಸ್ತನ ಸುಖ ದುಃಖದ ಬೆಲೆ ಎಷ್ಟರದು?

ಸಾಮಾನ್ಯವಾಗಿ ಏನು ನಡೆಯಬೇಕಾಗಿದೆಯೋ ಒಮ್ಮೊಮ್ಮೆ ಹಾಗೆ ನಡೆಯದೆ ಹೋದರೆ ಯಾರೂ ಅದನ್ನು ಕ್ಷಮಿಸುವ ಹಾಗಿಲ್ಲ–ಈ ಮಾತನ್ನು ಬನ್ವಾರಿ ಏತರಿಂದಲೂ ಅರ್ಥಮಾಡಿಕೊಳ್ಳಲಾರ. ಸಂಪೂರ್ಣ ರೂಪದಲ್ಲಿ ಈ ಮನೆಯ ದೊಡ್ಡ ಬಾಬುವಾಗುವುದು ಅವನಿಗೆ ಉಚಿತವಾಗಿತ್ತು. ಬೇರೆ ಯಾವ ಪ್ರಕಾರದಲ್ಲಿ ಉಚಿತ–ಅನುಚಿತ ಚಿಂತೆಯನ್ನು ಮಾಡಿ ಈ ಸ್ಥಳದ ಧಾರಾವಾಹಿಕ ಪದ್ಧತಿಯನ್ನು ಭಂಗಮಾಡಿದುದು ಅವನ ಕರ್ತವ್ಯಹೀನತೆಯೆಂಬುದು ಅವನೊಬ್ಬನ ಹೊರತು ಬೇರೆಲ್ಲರಿಗೂ ಸುಸ್ಪಷ್ಟ.

ಇದನ್ನೇ ಕುರಿತು ಕಿರಣಳು ತನ್ನ ಮೈದುನನೊಂದಿಗೆ ಅದೆಷ್ಟು ಬಾರಿ ಹೇಳಿಕೊಂಡು ದುಃಖ ತೋಡಿಕೊಂಡಿದ್ದಾಳೋ. ಬಂಶಿಯು ಬುದ್ಧಿವಂತನಾದ ಹುಡುಗ. ಅವನಿಗೆ ತಿಂದದ್ದು ಸುಲಭವಾಗಿ ಅರಗುವುದಿಲ್ಲ. ಮತ್ತು ಸ್ವಲ್ಪ ಗಾಳಿ ತಗುಲಿದರೆ ಸಾಕು, ಸೀನುತ್ತ, ಕೆಮ್ಮುತ್ತ ಒದ್ದಾಡಿಬಿಡುವಂಥ ಪ್ರಕೃತಿ. ಆದರೆ ಗುಣದಲ್ಲಿ ಧೀರ, ಸ್ಥಿರವಾದ ಬುದ್ಧಿ, ವಿಚಕ್ಷಣ. ಅವನು ಓದುತ್ತಿದ್ದ ಲಾ ಪುಸ್ತಕದ ಅಧ್ಯಾಯವನ್ನು ಮೇಜಿನ ಮೇಲೆ ತೆರೆದ ಅವಸ್ಥೆಯಲ್ಲೇ ಬೋರಲುಮಾಡಿಟ್ಟು ಕಿರಣಳನ್ನ ಕುರಿತು "ಇದು ಹುಚ್ಚುತನವಲ್ಲದೆ ಬೇರೇನೂ ಅಲ್ಲ" ಎಂದು ಉದ್ಗರಿಸಿದ. ಕಿರಣಳು ಅತ್ಯಂತ ಉದ್ವೇಗಯುತಳಾಗಿ ತಲೆಯಲ್ಲಾಡಿಸುತ್ತ "ಗೊತ್ತೇ ನಿನಗೆ, ಬಂಶೀ, ನಿಮ್ಮಣ್ಣ ಚೆನ್ನಾಗಿರುವಾಗ ಎಲ್ಲ ಸರಿಯಾಗೇ ಇರುತ್ತಾರೆ. ಆದರೆ ಒಂದೊಂದು ಸಲ ತಲೆಗೆ ಏನೋ ಹೊಕ್ಕುಬಿಡುತ್ತೆ. ಆಗ ಅವರನ್ನು ಏನು ಮಾಡಿದರೂ ಹಿಡಿದಿಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ನಾನೇನು ತಾನೇ ಮಾಡಲಿ. ನೀನೇ ಹೇಳು" ಎಂದು ಗೋಳಾಡಿದಳು.

ಕುಟುಂಬದ ವ್ಯವಹಾರ ಬುದ್ಧಿಯುಳ್ಳ ಬೇರೆಲ್ಲ ಜನರ ಅಭಿಪ್ರಾಯವೂ ಕಿರಣಲೇಖೆಯ ಮತದೊಂದಿಗೆ ಹೊಂದಿಕೊಂಡು ಹೋಯಿತು. ಆಗ ಇದೊಂದು ವಿಶೇಷ ಮಾತ್ರ ಎಲ್ಲಕ್ಕಿಂತ ಮಿಗಿಲಾಗಿ ಬನ್ವಾರಿಯ ಎದೆಯನ್ನು ಇರಿಯಿತು. ಈ ಸಾಮಾನ್ಯ ಚೋಟುದ್ದ ಹೆಂಗಸು, ಅರೆಬಿರಿದ ಸಂಪಿಗೆಯ ಹೂವಿನಂತೆ ಎಳಸು, ಕೋಮಲ. ಇವಳ ಹೃದಯವನ್ನು ಕೂಡ ತನ್ನ ವೇದನೆಯ ಬಳಿ ಎಳೆದಿಟ್ಟುಕೊಳ್ಳಲು ಅವನ ಪೌರುಷದ ಶಕ್ತಿ ಸೋತುಹೋಯಿತು. ಇತ್ತೀಚಿನ ದಿನಗಳಲ್ಲಿ ಕಿರಣಳು ಮಾತ್ರ ಪೂರ್ತಿಯಾಗಿ ಗಂಡನೊಂದಿಗೆ ಒಮ್ಮತದಿಂದಿದ್ದುಬಿಟ್ಟಿದ್ದರೆ ಅವನ ಎದೆಯ ಉರಿ ನೋಡ ನೋಡುತ್ತ ಇರುವಂತೆ ಹೀಗೆ ಉಲ್ಬಣವಾಗುತ್ತಿರಲಿಲ್ಲ.

ಮಧುವನ್ನು ವಿಪತ್ತಿನಿಂದ ಕಾಪಾಡಬೇಕೆಂಬ ತನ್ನ ಈ ಸಹಜ, ಯುಕ್ತವಾದ ಕರ್ತವ್ಯಜ್ಞಾನಕ್ಕೆ ನಾಲ್ಕೂ ಕಡೆಯಿಂದೇಕೆ ಈ ಮೆಟ್ಟಿನೇಟು? ಇದರ ಫಲಿತವಾಗಿ ಬನ್ವಾರಿಯ ದೃಷ್ಟಿಯಲ್ಲಿ ಅದೊಂದು ಹುಚ್ಚುತನದ ವ್ಯಾಪಾರವಾಗಿ ಹೋಯಿತು. ಇದರ ಮುಂದೆ ಬೇರೆಲ್ಲ ಸಂಗತಿಗಳೂ ಹೀನವಾಗಿ ಹೋದುವು. ಈ ಕಡೆ ಜೈಲಿನಿಂದ ನೀಲಕಂಠನು ಬಿಡುಗಡೆಯಾಗಿ ಅತ್ತೆಯ ಮನೆಗೆ ದೀಪಾವಳಿಯ ಔತಣಕ್ಕೆ ಹೋಗಿಬಂದ ಅಳಿಯನಂತೆ ಮೈ ಕೈ ತುಂಬಿಕೊಂಡು ಬಂದ. ಬಂದವನೇ ಮತ್ತೆ ಎಂದಿನಂತೆ ಸ್ವಲ್ಪವೂ ಮುಖ ಕುಂದದೆ ಮೊದಲಿನ ತನ್ನ ಕೆಲಸ ಮಾಡಿಕೊಂಡು ಹೋದ.

ಮಧುವನ್ನು ಗುಡಿಸಿಲಿಂದ ಓಡಿಸದೆ ಹೋದರೆ ಬೇರೆ ನಿವಾಸಿಗಳ ಮುಂದೆ ನೀಲಕಂಠನ ಮಾನವುಳಿಯುವುದಿಲ್ಲ. ಮಾನದ ಬಗ್ಗೆ ಅವನು ಹೆಚ್ಚು ಚಿಂತಿಸದೆ ಹೋದರೂ, ಪ್ರಜೆಗಳು ಅವನನ್ನ ಕಂಡರೆ ಲಕ್ಷ್ಯವಿಡದೆ ಹೋದರೆ ಅವನ ಕೆಲಸವಾಗುವ ಹಾಗಿಲ್ಲ. ಈ ಕಾರಣದಿಂದ ಅವನು ಎಚ್ಚರಿಕೆ ತೆಗೆದುಕೊಳ್ಳಬೇಕಾಗಿತ್ತು. ಅದಕ್ಕೇ ಮಧುವನ್ನು ಕಳೆ ಕೀಳುವಂತೆ ಕಿತ್ತು ಎಸೆಯಲೋಸುಗ ಕುಡುಗೋಲನ್ನು ಮಸೆಯತೊಡಗಿದ.

ಈ ಸಲ ಬನ್ವಾರಿಯು ಮರೆಯಲ್ಲಿ ಕುಳಿತುಕೊಂಡಿರಲಿಲ್ಲ. ಈ ಸಲ ಅವನು ನೀಲಕಂಠನಿಗೆ ಸ್ಪಷ್ಟವಾಗಿ ತಿಳಿಸಿಬಿಟ್ಟ, ಏನಾದರೂ ಸರಿ, ಈ ಸಲ, ಮಧುವನ್ನು ಉಚ್ಚಾಟನೆ ಮಾಡುವುದನ್ನು ಅವನು ತಡೆದೇ ತಡೆಯುತ್ತಾನೆ. ಮೊದಲಲ್ಲಿ ಮಧುವಿಂದ ಬರಬೇಕಾದ ಬಾಕಿ ಹಣವನ್ನು ತಾನೇ ಕೈಯಾರೆ ತೀರಿಸಿಬಿಟ್ಟ, ಆಮೇಲೆ ಬೇರಾವ ಉಪಾಯವನ್ನೂ ಕಾಣದೆ ತಾನೇ ಖುದ್ದಾಗಿ ಮ್ಯಾಜಿಸ್ಟ್ರೇಟರ ಮುಂದೆ ಹೋಗಿ ನೀಲಕಂಠನು ಅನ್ಯಾಯವಾಗಿ ಮಧು ಬೆಸ್ತನನ್ನು ಹಾಳುಮಾಡಲಿದ್ದಾನೆಂದು ದೂರು ಕೊಟ್ಟು ಬಂದ. ಅವನ ಹಿತೈಷಿಗಳು ಅವನಿಗೆ ಬುದ್ಧಿ ಹೇಳತೊಡಗಿದರು. ಪರಿಸ್ಥಿತಿ

ಎಲ್ಲಿಯವರೆಗೆ ಹೋಗಿರುವುದೆಂದರೆ ಒಂದಲ್ಲ ಒಂದು ದಿನ, ಮನೋಹರಲಾಲರು ಅವನನ್ನ ಹೊರಗೆ ಹಾಕಬಹುದು. ಅವನನ್ನ ತ್ಯಾಗ ಮಾಡಿದರೆ ಏನೆಲ್ಲ ಪರಿಣಾಮಗಳು ಆಗಬಹುದೋ ಏನೋ ಎಂಬ ಹೆದರಿಕೆಯಿಲ್ಲದೆ ಹೋಗಿದ್ದರೆ ಈಗಾಗಲೇ ಹೊರಗೆ ಹಾಕಿಬಿಡುತ್ತಿದ್ದರು ಅವನ ತಂದೆ, ಆದರೆ ಬನ್ವಾರಿಯ ತಾಯಿಯಿದ್ದಾಳೆ-ಮತ್ತು ಬಂಧು ಬಳಗ, ಮಿತ್ರವೃಂದ-ಅವರೆಲ್ಲರಲ್ಲೂ ನಾನಾ ಮತ. ಅವರೆಲ್ಲರನ್ನೂ ಎದುರುಹಾಕಿಕೊಳ್ಳಲು ಇಷ್ಟವಿಲ್ಲದೆ ಮನೋಹರಲಾಲರು ಸುಮ್ಮನಿದ್ದರು.

ಹೀಗೇ ಇರುತ್ತ ಒಂದು ದಿನ ಬೆಳಗ್ಗೆ ಹಠಾತ್ತಾಗಿ ಕಂಡುಬಂತು-ಮಧುವಿನ ಗುಡಿಸಿಲಿನ ಬಾಗಿಲಿಗೆ ಬೀಗ ಬಿದ್ದಿದೆ. ರಾತ್ರೋರಾತ್ರಿ ಅವನೆದ್ದು ಎಲ್ಲಿಗೆ ಹೊರಟು ಹೋದನೋ ಸುದ್ದಿಯೇ ಇಲ್ಲ. ವಿದ್ಯಮಾನವು ಬರಬರುತ್ತ ಅಸಾಧ್ಯವಾಗುತ್ತ ಬರಲು ನೀಲಕಂಠನೇ ಜಮೀನ್ದಾರರ ಖಜಾನೆಯಿಂದ ಹಣ ತೆಗೆದು ಅವನ ಪರಿವಾರಸಮೇತ ಕಾಶಿಗೆ ಕಳುಹಿಸಿಬಿಟ್ಟಿದ್ದ. ಪೊಲೀಸರಿಗೆ ಅದು ಗೊತ್ತಿತ್ತು. ಆದ್ದರಿಂದ ಮುಂದೆ ಏನೂ ಗಲಾಟೆಯಾಗಲಿಲ್ಲ. ಇಷ್ಟಾದರೂ ನೀಲಕಂಠನೇ ತಂತ್ರಮಾಡಿ ಒಂದು ವದಂತಿಯನ್ನು ಹಬ್ಬಿಸಿಬಿಟ್ಟ-ಏನೆಂದರೆ ಮಧುವನ್ನು ಹೆಂಡಿರು ಮಕ್ಕಳು ಸಮೇತ ಅಮಾವಾಸ್ಯೆ ರಾತ್ರಿಯಲ್ಲಿ ಕಾಳಿಗೆ ಬಲಿಕೊಟ್ಟು ಶವಗಳನ್ನು ಗೋಣೀ ಚೀಲದಲ್ಲಿ ತುಂಬಿಸಿ ಗಂಗೆಯ ಮಧ್ಯೆ ಮುಳುಗಿಸಿಬಿಡಲಾಗಿದೆ ಎಂದು. ಭಯದಿಂದ ಎಲ್ಲರ ಮೈಗಳೂ ಗಡಗಡನೆ ನಡುಗಿಬಿಟ್ಟವು. ಮತ್ತು ನೀಲಕಂಠನ ಮೇಲೆ ಮೊದಲಿನಂತೆ ಜನರಿಗೆ ಭಯ ಭಕ್ತಿಗಳು ಹುಟ್ಟಿಕೊಂಡವು. ಕೆಲವರಿಗೆ ಮೊದಲಿಗಿಂತಲೂ ಭಯ, ಭಕ್ತಿಗಳು ಹೆಚ್ಚಾದುವು.

ಬನ್ವಾರಿಯು ಏತರ ಬಗ್ಗೆ ತಲೆಕೆಡಿಸಿಕೊಂಡಿದ್ದನೋ ಈಗದು ಮೊದಲಿನಂತೆ ಮಿತಕ್ಕೆ ಬಂದು ಅವನೂ ಶಾಂತನಾದ. ಆದರೆ ಮನೆಯೊಳಗಿನ ಸ್ಥಿತಿ ಮಾತ್ರ ಅವನ ದೃಷ್ಟಿಯಲ್ಲಿ ಮೊದಲಿನಂತಾಗಲಿಲ್ಲ.

ಬಂಶಿಯನ್ನು ಹಿಂದೆ ಅವನು ಗಾಢವಾಗಿ ಪ್ರೀತಿಸುತ್ತಿದ್ದ. ಇವತ್ತು ನೋಡಿದರೆ ಬಂಶಿ ಅವನಿಗೆ ಯಾರೂ ಅಲ್ಲ. ಕೇವಲ ಹಲಧರ ವಂಶದವನು. ಮತ್ತು ಅವನ ಹೆಂಡತಿ, ಅವನ ಸ್ವಂತ ಕಿರಣಳು, ಅವಳ ಧ್ಯಾನರೂಪವು ಪ್ರಾಯದ ಹೊಸದರಲ್ಲಿ ಆರಂಭವಾಗಿ ಕ್ರಮೇಣ ಅವನ ಹೃದಯದ ಬಳ್ಳಿ ಮಾಡವನ್ನು ಆವರಿಸಿ ಆವರಿಸಿ ಅದನ್ನು ಪೂರ್ತಿಯಾಗಿ ತನ್ನ ಮಾಯೆಯಲ್ಲಿ ಮುಳುಗಿಸಿಬಿಟ್ಟಿತ್ತು. ಅಂತಹ ಕಿರಣಳೂ ಈಗ ಸಂಪೂರ್ಣವಾಗಿ ಅವನವಳೇ ಎಂದೆನ್ನಲು ಸಾಹಸ ಬಾರದು-ಅವಳೂ ಹೆಚ್ಚುಮಟ್ಟಿಗೆ ಹಲಧರ ಕುಟುಂಬದವಳು. ಒಂದು ದಿನವಿತ್ತು, ಆಗ ನೀಲಕಂಠನ ಇಷ್ಟದಂತೆ ತಯಾರಾಗಿದ್ದ ಒಡವೆ, ಅಲಂಕಾರಗಳು ಅವಳ ಚೆಲುವಿಗೆ ಒಪ್ಪವಾಗಿಲ್ಲವೆಂದು ಅವನು ಗೊಣಗುತ್ತಿದ್ದ. ಕಾಳಿದಾಸನನ್ನು ಮೊದಲುಗೊಂಡು ಅಮರು ಮತ್ತು ಚೌರಕವಿಯ ಅನೇಕ ಕವಿತೆಗಳ ಶೃಂಗಾರಪಠಣದಿಂದ ಪೂಜಿಸಲ್ಪಟ್ಟ

ಅವನ ಪ್ರೇಯಸಿ! ಈಗಂಥವುಗಳೆಲ್ಲ ಈ ಹಲಧರವಂಶದ ದೊಡ್ಡ ಸೊಸೆಗೇಕೋ ಸ್ವಲ್ಪವೂ ಒಪ್ಪುವುದಿಲ್ಲ.

ಆಹಾ, ವಸಂತದ ತಂಗಾಳಿ ಈಗಲೂ ಬೀಸುತ್ತದೆ. ಶ್ರಾವಣದ ರಾತ್ರಿಯಲ್ಲಿ ಜೋರೋ ಎಂದು ಮಳೆ ಈಗಲೂ ಸುರಿಯುತ್ತಿರುತ್ತದೆ. ಆದರೇನು, ಅತೃಪ್ತ ಪ್ರೇಮದ ವೇದನೆ ಬರಿದಾದ ಹೃದಯದ ದಾರಿದಾರಿಗಳಲ್ಲಿ ಅಳುತ್ತಳುತ್ತ ಓಡಾಡುತ್ತಿದೆ. ಪ್ರೇಮದ ನಿಬಿಡತೆ ಎಲ್ಲರಿಗೂ ಅಷ್ಟು ಬೇಕಾಗಿರುವುದಿಲ್ಲ. ಸಂಸಾರದ ಅತಿ ಸಣ್ಣಳತೆಯ ಉದ್ಧರಣೆಯಲ್ಲಿ, ತೀರ್ಥದಂತೆ ಒಂದೆರಡು ತೊಟ್ಟುಗಳಷ್ಟು ಪ್ರೇಮವನ್ನು ದಯಪಾಲಿಸಿದರೆ ಸಾಕು, ಅದನ್ನೇ ಮಹಾಪ್ರಸಾದವೆಂದು ಸೇವಿಸಿ ತಲೆಗೊರಸಿಕೊಂಡು ತೃಪ್ತರಾಗುವರು, ಬಹಳ ಜನ. ಆದರೆ ಒಂದೆರಡು ಜನಕ್ಕೆ ಇದು ಏನೇನೂ ಸಾಲದು. ಅವರುಗಳು ಮೊಟ್ಟೆಯೊಳಗಣ ಹಕ್ಕಿಯ ಮರಿಗಳಂತೆ, ಮೊಟ್ಟೆಯೊಳಗಡೆ ಆ ಇಕ್ಕಟ್ಟಾದ ಆವರಣದಲ್ಲಿರುವ ಮಿತವಾದ ತಿಂಡಿಯ ಪದಾರ್ಥ ಅವರಿಗೆ ಸಾಲದು. ಅದಕ್ಕೆ ಮೊಟ್ಟೆಯೊಡೆದುಕೊಂಡು ಹೊರಕ್ಕೆ ಬರುತ್ತಾರೆ. ಸ್ವಂತ ಶಕ್ತಿಯಿಂದ ಯಥೇಚ್ಛವಾಗಿ ಆಹಾರ ಹುಡುಕಿಕೊಂಡು ತಿನ್ನುವುದಕ್ಕೆ ಅವಕ್ಕೆ ವಿಶಾಲ ಕ್ಷೇತ್ರ ಬೇಕು. ಬನ್ವಾರಿಯು ಅಂತಹ ಹಸಿವನ್ನು ಪಡೆದುಕೊಂಡು ಹುಟ್ಟಿದ್ದಾನೆ. ತನಗೆ ಬೇಕಾದ ಪ್ರೀತಿಯನ್ನು ಸ್ವಂತ ಪೌರುಷದಿಂದ ಸಾರ್ಥಕ ಮಾಡಿಕೊಳ್ಳಲು ಅವನ ಮನಸ್ಸು ಚಡಪಡಿಸುತ್ತದೆ. ಆದರೇನು, ಪಾಪ, ಅವನು ಯಾವ ಕಡೆ ಮೊಟ್ಟೆಯೊಡೆದುಕೊಂಡು ಬರಲು ಯತ್ನಿಸಿದರೂ ಅಲ್ಲಿ ಅವನಿಗೆದುರಾಗಿ ಹಾಲಧರವಂಶದ ದೊಡ್ಡ ಹಳೆಯ ಗೋಡೆಯು ಸುತ್ತುವರಿದಿದೆ. ಅದನ್ನಲುಗಿಸಲು ಹೋದರೆ ತಲೆ ಒಡೆಯುತ್ತದೆ.

ಮೊದಲಿನಂತೆಯೇ ದಿನಗಳುರುಳಿದುವು. ಆದರೆ ಬನ್ವಾರಿಯು ಮೊದಲಿಗಿಂತಲೂ ಹೆಚ್ಚಾಗಿ ಬೇಟೆಯಲ್ಲಿ ಮನ ಮುಳುಗಿಸಿದ. ಇದು ಬಿಟ್ಟು ಹೊರಗಡೆಯಿಂದ ನೋಡಿದರೆ ಅವನ ಜೀವನದಲ್ಲಿ ಅಷ್ಟಾಗಿ ಮಾರ್ಪಾಡೇನೂ ಕಂಡುಬರುವುದಿಲ್ಲ. ಹೆಂಡತಿಯಿರುವ ಒಳಮನೆಗೆ ಅವನು ಊಟಕ್ಕೆ ಮಾತ್ರ ಹೋಗುವನು. ಊಟವಾದ ಮೇಲೆ ಹೆಂಡತಿಯ ಸಂಗಡ ಎಷ್ಟು ಬೇಕೋ ಅಷ್ಟು ಹರಟೆಯೂ ಕೊಚ್ಚುವನು. ಮಧುಕೈವರ್ತನನ್ನು ಈಗಲೂ ಕಿರಣಳು ಕ್ಷಮಿಸಿಲ್ಲ. ಏಕೆಂದರೆ ಈ ಕುಟುಂಬದಲ್ಲಿ ಅವಳ ಗಂಡ ತನ್ನ ಹಕ್ಕು, ಪ್ರತಿಷ್ಠೆಗಳನ್ನು ಕಳೆದುಕೊಂಡದ್ದಕ್ಕೆ ಈ ಬೆಸ್ತನೇ ಕಾರಣ. ಇದರ ಫಲವಾಗಿ ಎಷ್ಟೋ ಸಲ ಅವಳು ಆಗಾಗ ಮಧುಕೈವರ್ತನ ಹೆಸರನ್ನುಚ್ಚರಿಸಿದಾಗೆಲ್ಲ ಅತಿ ಕಠಿಣವಾಗಿ ನುಡಿಯುವಳು. ಆ ಬೆಸ್ತನ ನಾಡಿನಾಡಿಗಳಲ್ಲಿ, ಎಲುಬಿನಲ್ಲಿ ಅವನ ಕೀಳು ಜಾತಿಯ ಮುದ್ರೆಯಿದೆ. ಅವನೊಬ್ಬ ಏಳನೇ ಮನೆ ಶನಿ. ಅವನ ಮೇಲೆ ಕರುಣೆ ತೋರುವುದು ಬರೇ

ಮೋಸ - ಹೀಗೆಲ್ಲ ಎಷ್ಟು ಬಾರಿ ಟೀಕೆಮಾಡಿ ಹೇಳಿದರೂ ಅವಳ ಮನಸ್ಸಿಗೆ ತೃಪ್ತಿಯಿಲ್ಲ. ಬನ್ವಾರಿಯು ಮೊದಲಲ್ಲಿ ಒಂದೆರಡು ಸಲ ಅವಳಿಗೆ ಎದುರು ವಾದಮಾಡಹೋಗಿ ಅವಳ ರೋಷವನ್ನು ಇನ್ನೂ ಹೆಚ್ಚಿಸುತ್ತಿದ್ದುದನ್ನು ಕಂಡು ಅಂದಿನಿಂದ ತೆಪ್ಪನಿದ್ದುಬಿಡುತ್ತಿದ್ದ. ಇದೇ ರೀತಿಯಾಗಿ ಅವನು ಸಂಸಾರದ ನಿಯಮಿತ ಧರ್ಮವನ್ನು ಪಾಲಿಸಿಕೊಂಡು ಬಂದಿದ್ದಾನೆ. ಕಿರಣಲೇಖೆಗೆ ಯಾವ ವಿಧವಾದ ಅಭಾವವೂ ಅಸಂಪೂರ್ಣತೆಯೂ ಅನುಭವವಾಗಲಿಲ್ಲ. ಆದರೆ ಒಳಗೊಳಗೇ ಬನ್ವಾರಿಯ ಬಾಳುವೆ ಬಣ್ಣಗೆಡುತ್ತಿದೆ. ವಿರಸ ಮತ್ತು ಶಾಶ್ವತ ಹಸಿವೆಯಿಂದ ತೊಳಲುತ್ತಿದೆ.

ಇಂತಹ ಸಮಯದಲ್ಲಿ ಒಮ್ಮೆಲೆ ತಿಳಿದುಬಂತು, ಮನೆಯ ಚಿಕ್ಕ ಸೊಸೆ, ಬಂಶಿಯ ಹೆಂಡತಿ ಗರ್ಭಿಣಿ. ಇಡೀ ಕುಟುಂಬವೇ ಉತ್ಸಾಹಭರಿತವಾಗಿಹೋಯಿತು. ಕಿರಣಳ ಕಡೆಯಿಂದ ಈ ಮಹಾವಂಶಕ್ಕೆ ಯಾವುದೊಂದು ಕೊರತೆಯಾಗಿತ್ತೋ ಇಷ್ಟು ದಿನಗಳಾದ ಮೇಲೆ ಅದು ಈಗ ಪೂರ್ಣವಾಗಲಿದೆ. ಈಗ ದೇವರ ಕೃಪೆಯಿಂದ ಹೆಣ್ಣಾಗದೆ ಗಂಡೇ ಹುಟ್ಟಿದರೆ ಎಲ್ಲ ಸರಿಹೋಗುವುದು.

ಆಸೆಪಟ್ಟದ್ದಂತೆ ಗಂಡು ಮಗುವೇ ಆಯಿತು. ಕಿರಿಯ ಬಾಬು ಪರೀಕ್ಷೆಯಲ್ಲಿ ತೇರ್ಗಡೆಯೂ ಆದ. ವಂಶದ ಪರೀಕ್ಷೆಯಲ್ಲೂ ಮೊದಲನೆ ರ್‍ಯಾಂಕನ್ನು ಪಡೆದ. ಅವನ ಮೇಲಿನ ಆದರ, ಗೌರವಗಳು ಕ್ರಮೇಣ ವೃದ್ಧಿಯಾಗುತ್ತ ಬಂದಿದ್ದುವು. ಈಗಂತೂ ಅವುಗಳಿಗೆ ಎಲ್ಲೆಯೇ ಇಲ್ಲ.

ಎಲ್ಲರೂ ಸೇರಿ ಮಗುವನ್ನು ಮುದ್ದುಮಾಡಲು ತೊಡಗಿದರು. ಕಿರಣಳಂತೂ ಅದನ್ನು ಒಂದು ಘಳಿಗೆ ಕೂಡ ಕೆಳಗಿಳಿಸಲು ಇಷ್ಟಪಡುತ್ತಿರಲಿಲ್ಲ. ಅವಳ ಮನಸ್ಸು ಎಷ್ಟು ಮುಗ್ಧವಾಗಿಹೋಯಿತೆಂದರೆ ಸದಾ ಶಾಪಗೊಡುತ್ತಿದ್ದ ಮಧುಕೈವರ್ತನ ಹೆಸರನ್ನು ಕೂಡ ಅವಳು ಮರೆತುಹೋದಳು.

ಬನ್ವಾರಿಗೆ ಮಕ್ಕಳೆಂದರೆ ಪ್ರಾಣ. ಅವು ಹೇಗಿದ್ದರೂ ಸರಿ–ಅತಿ ಎಳೆಯ ಕೂಸಿರಲಿ, ಬಲಹೀನವಾಗಿರಲಿ, ಸುಕುಮಾರವಾಗಿರಲಿ, ಅದರ ಮೇಲೆ ಅವನಿಗೆ ಪ್ರೀತಿಯ ಸಂಗಡ ಮರುಕ ಕೂಡ. ಒಂದು ವಿಚಿತ್ರ–ಎಲ್ಲ ಮನುಷ್ಯರ ಪ್ರಕೃತಿಯಲ್ಲೂ ದೇವರು ಆಯಾ ಪ್ರಕೃತಿಗೆ ವಿರುದ್ಧವಾದೊಂದು ಅಂಶವನ್ನು ಸೃಜಿಸಿರುತ್ತಾನೆಂಬುದು ನಿಜ. ಹಾಗಿಲ್ಲದೆ ಹೋದರೆ ಈ ಬನ್ವಾರಿಲಾಲನಿಗೆ ನಿರಪರಾಧಿ ಹಕ್ಕಿಗಳನ್ನು ಕೋವಿಯಿಂದ ಬೇಟೆಯಾಡಲು ಅದು ಹೇಗೆ ಮನಸ್ಸು ಬರುತ್ತಿತ್ತು? ಕಿರಣಳ ಕಂಕುಳಲ್ಲೊಂದು ಮಗು ಕಾಣುವ ಸ್ವಪ್ನ ಬನ್ವಾರಿಲಾಲನ ಮನದಲ್ಲಿ ಬಹಳ ಕಾಲದಿಂದ ಅತೃಪ್ತವಾಗಿ ಕಾಡುತ್ತಿತ್ತು. ಈ ಕಾರಣದಿಂದ ಬಂಶಿಗೆ ಮಗ ಹುಟ್ಟಿದಾಗ ಅವನಲ್ಲಿ ಮೊದಲ ಬಾರಿ ಜನಿಸಿದ ಈರ್ಷ್ಯೆಯ ವೇದನೆ ಬಹಳ ಕಾಲ ಇರಲಿಲ್ಲ. ಆದರೆ ಈ ಮಗುವನ್ನು ಅವನು ಇನ್ನೂ ಹೆಚ್ಚಾಗಿ ಪ್ರೀತಿಸದೆ ಇರುವುದಕ್ಕೆ ಕಾರಣ

ಅವನ ಹೆಂಡತಿ ಕಿರಣಳು. ಅವಳು ಬರಬರುತ್ತಾ ಮಗುವನ್ನು ಬಿಟ್ಟಿರಲಾರದೆ ಹೋದಳು. ಅಷ್ಟು ಮಿತಿ ಮೀರಿಹೋಗಿತ್ತು ಅದರ ಮೇಲೆ ಅವಳ ಹುಚ್ಚು ಮಮತೆ. ಅವಳಿಗೆ ಗಂಡನೂ ಅಷ್ಟಾಗಿ ಬೇಡವಾಗಿಹೋದ. ಅವಳ ಸಹವಾಸವೇ ದುರ್ಲಭವಾಗಿ ಹೋಯಿತು. ಈಗವನಿಗೆ ಗೊತ್ತಾಯಿತು. ಇಷ್ಟು ದಿನಗಳಾದ ಮೇಲೆ ಕಿರಣಳಿಗೆ ಅವಳ ಹೃದಯವನ್ನು ಪೂರ್ತಿಯಾಗಿ ತುಂಬಿಬಿಡುವಂತಹುದೊಂದು ಲಭಿಸಿಬಿಟ್ಟದೆ. ಬನ್ವಾರಿಯು ಈಗ ತನ್ನ ಹೆಂಡತಿಯ ಹೃದಯಮಂದಿರದಲ್ಲೊಬ್ಬ ಬಾಡಿಗೆ ವಾಸಸ್ಥ. ಮಂದಿರದ ಮಾಲಿಕನು ಇಲ್ಲದಿರುವವರೆಗೂ ಇಡೀ ಮನೆಯನ್ನು ಅವನು ಅನುಭೋಗಿಸಲು ಅವಕಾಶವಿತ್ತು. ಯಾರೂ ಅಡ್ಡಿ ಮಾಡುವಂತಿರಲಿಲ್ಲ. ಈಗ ಮನೆಯ ಯಜಮಾನ ಬಂದುಬಿಟ್ಟಿದ್ದಾನೆ. ಅದಕ್ಕಾಗಿ ಬಾಡಿಗೆದಾರನು ಬೇರೆಲ್ಲ ಭಾಗಗಳನ್ನೆಲ್ಲ ಖಾಲಿಮಾಡಿ ತನಗಾಗಿರುವ ಸಣ್ಣ ಕೋಣೆಯಲ್ಲಿ ಮಾತ್ರ ಇರಬೇಕು. ಅಷ್ಟೇ ಅವನಿಗೆ ಅಧಿಕಾರ. ಕಿರಣಳು ಮಾತೃಸ್ನೇಹದಲ್ಲಿ ಎಷ್ಟರಮಟ್ಟಿಗೆ ತನ್ಮಯಳಾಗಬಲ್ಲಳು, ಅವಳ ಆತ್ಮವಿಸರ್ಜನೆಯ ಶಕ್ತಿ ಎಷ್ಟು ಪ್ರಬಲವಾದದ್ದು ಎಂಬುದನ್ನು ಬನ್ವಾರಿಯು ಕಂಡುಕೊಂಡಾಗ ಅವನ ಮನಸ್ಸಿನ ಜೊತೆಗೆ ತಲೆಯನ್ನೂ ತೂಗುತ್ತಾ "ಈ ಹೃದಯವನ್ನು ನಾನಂತೂ ಜಾಗೃತಿಗೊಳಿಸಲಾರದಾದೆ. ಆದರೆ ನನಗೆ ಸಾಧ್ಯವಾದಷ್ಟು ನಾನು ಮಾಡಿಲ್ಲದಿಲ್ಲ" ಎಂದುಕೊಂಡ.

ಇದಿಷ್ಟೇ ಅಲ್ಲ. ಆ ಮಗುವಿನ ಸೂತ್ರದಿಂದಲೇ ಬಂಶಿಯ ಮನೆಯೂ ಕಿರಣಳ ಮನಸ್ಸಿಗೆ ತನ್ನದೆಂಬಂತಾಗಿಬಿಟ್ಟಿದೆ. ಅವಳ ಸಲಹೆ, ಆಲೋಚನೆ, ವಿಚಾರ ವಿನಿಮಯಗಳೆಲ್ಲಾ ಈಗ ಬಂಶಿಯೊಂದಿಗೇ. ಈ ಸೂಕ್ಷ್ಮಬುದ್ಧಿಯ, ಸೂಕ್ಷ್ಮ ಆರೋಗ್ಯದ, ರಸರಕ್ತರಹಿತನಾದ ಕ್ಷೀಣ ಜೀವಿ, ಭೀರುವಾದ ಮನುಷ್ಯನ ಬಗ್ಗೆ ಬನ್ವಾರಿಯ ನಿಕೃಷ್ಟಭಾವ ಬರುಬರುತ್ತಾ ಬೆಳೆದು ಬಂದಿತ್ತು. ಆದರೆ ಕುಟುಂಬದ ಎಲ್ಲ ಜನರೂ ಅವನನ್ನೇ ಬನ್ವಾರಿಗಿಂತಲೂ ಎಲ್ಲ ವಿಷಯಗಳಲ್ಲೂ ಹೆಚ್ಚು ಯೋಗ್ಯನೆಂದು ತಿಳಿದು ವರ್ತಿಸುತ್ತಿರುವುದನ್ನು ಬನ್ವಾರಿ ಹೇಗೋ ಸಹಿಸಿಕೊಂಡಿದ್ದ. ಆದರ ಇಂದು ಮನುಷ್ಯತ್ವದ ಲೆಕ್ಕದಲ್ಲಿ ತನ್ನ ಹೆಂಡತಿಯ ಮುಂದೆ ಬಂಶಿಯ ಬೆಲೆಯೇ ತನಗಿಂತಲೂ ಹೆಚ್ಚು ಎಂದು ಕಂಡುಕೊಂಡಾಗ ಅವನಿಗೆ ತನ್ನ ಭಾಗ್ಯದ ಬಗ್ಗೆಯೂ ಮತ್ತು ವಿಶ್ವ ಸಮಾಜದ ಬಗ್ಗೆಯೂ ಮನಸ್ಸು ಪ್ರಸನ್ನವಾಗದಿದ್ದಲ್ಲಿ ಆಶ್ಚರ್ಯವೇನು?

ಇಂತಹ ಸಮಯದಲ್ಲಿ ಪರೀಕ್ಷೆ ಸಮೀಪಿಸುತ್ತಲೂ ಕಲಿಕತ್ತೆಯ ವಸತಿಯಿಂದ ಸುದ್ದಿ ಬಂತು. ಬಂಶಿ ಕಾಯಿಲೆ ಬಿದ್ದಿದ್ದಾನೆ. ಡಾಕ್ಟರು ಪರೀಕ್ಷೆ ಮಾಡಿ ಪರಿಸ್ಥಿತಿ ಕೆಟ್ಟಿದೆಯೆಂದು ಗಾಬರಿಪಟ್ಟಿದ್ದಾರೆ. ಬನ್ವಾರಿ ಕಲಿಕತ್ತೆಗೆ ಆ ಕೂಡಲೆ ಹೊರಟು ಹಗಲು ರಾತ್ರಿ ಬಂಶಿಯ ಸೇವೆ ಮಾಡಿದ. ಆದರೇನು, ಬಂಶಿಯನ್ನು ಉಳಿಸಲಾಗಲಿಲ್ಲ.

ಮೃತ್ಯುವು ಬನ್ವಾರಿಯ ನೆನಹಿನಿಂದ ಮುಳ್ಳುಗಳೆಲ್ಲವನ್ನೂ ಬುಡಸಮೇತ ಕಿತ್ತುಹಾಕಿತು. ಬಂಶಿಯು ಅವನ ಏಕಮಾತ್ರ ತಮ್ಮ ಮತ್ತು ಎಳೆಯ ಕೂಸಾಗಿದ್ದಾಗ ಅಣ್ಣನ ತೊಡೆಯ ಮೇಲೆ ಸ್ನೇಹದ ಆಶ್ರಯ ಪಡೆದಿದ್ದ. ಈ ಸಂಗತಿಯ ನೆನಪಿನಿಂದ ಬನ್ವಾರಿಯ ಕಣ್ಣಿಂದ ನೀರನ್ನು ತಡೆಯಲಾಗಲಿಲ್ಲ.

ಈ ಬಾರಿ ಕಲಿಕತ್ತೆಯಿಂದ ಮರಳಿ ಬಂದವನು ತನ್ನಲ್ಲಿದ್ದ ವಾತ್ಸಲ್ಯವೆಲ್ಲವನ್ನೂ ಆ ತಂದೆಯಿಲ್ಲದ ಕೂಸಿನ ಮೇಲೆ ಹಾಕಿ ಅದನ್ನು ಬೆಳಸಿ ದೊಡ್ಡವನಾಗಿ ಮಾಡಬೇಕೆಂದು ನಿರ್ಧಾರ ಮಾಡಿದ. ಆದರೆ ಈ ಮಗುವಿನ ವಿಷಯದಲ್ಲಿ ಕಿರಣಳಿಗೆ ಗಂಡನ ಬಗ್ಗೆ ನಂಬಿಕೆ ಹೊರಟುಹೋಗಿದೆ. ಈ ಕೂಸಿನ ಮೇಲೆ ಗಂಡನಿಗಿದ್ದ ಬೇಸರ ಹಿಂದೆ ಇವಳು ಕಂಡಿದ್ದಾಳೆ. ತನ್ನ ಯಜಮಾನರ ಸಂಬಂಧವಾಗಿ ಕಿರಣಳ ಮನಸ್ಸಿನಲ್ಲಿ ಏನೋ ಒಂದು ವಿಚಿತ್ರ ಭಾವನೆ ಗಾಢವಾಗಿ ಬೇರೂರಿ ಬಿಟ್ಟಿದೆ, ಏನೆಂದರೆ ಬೇರೆಲ್ಲ ಜನರಿಗೆ ಯಾವುದು ಸ್ವಾಭಾವಿಕವೋ ಅವಳ ಗಂಡನಿಗೆ ಮಾತ್ರ ಅದಕ್ಕೆ ವಿರುದ್ಧ, ಎಲ್ಲಾ ತಾರುಮಾರು. ಅವರ ವಂಶಕ್ಕೆ ಈಗತಾನೇ ಕುಲ ಪ್ರದೀಪವೊಂದು ಹುಟ್ಟಿದೆ. ಇದರ ಬೆಲೆಯೆಷ್ಟೆಂದು ಬೇರೆಲ್ಲರಿಗೂ ಗೊತ್ತು. ಆದರೆ ಖಂಡಿತವಾಗಿಯೂ ಅವಳ ಗಂಡನು ಮಾತ್ರ ಹಾಗೆ ತಿಳಿದುಕೊಂಡಿಲ್ಲವೆಂದೇ ಅವಳ ನಂಬಿಕೆ. ಅವಳ ಮನಸ್ಸಿನಲ್ಲಿ ಸದಾ ಭಯ. ಗಂಡನ ವಿದ್ವೇಷ ದೃಷ್ಟಿಯು ಮಗುವಿಗೆಲ್ಲಾದರೂ ಅಮಂಗಳವುಂಟುಮಾಡೀತೇನೋ ಎಂದು. ಅವಳ ಮೈದುನ ಬದುಕಿಲ್ಲ. ಕಿರಣಳಿಗಂತೂ ಮಕ್ಕಳಾಗುವ ಸಂಭವವಿದೆಯೆಂದು ಯಾರೂ ಆಸೆ ಪಡುತ್ತಿಲ್ಲ. ಈ ಕಾರಣದಿಂದ ಈ ಮಗುವನ್ನು ಹೇಗಾದರೂ ಸರಿ, ಎಲ್ಲ ಪ್ರಕಾರಗಳಲ್ಲೂ ಅಮಂಗಳವಾಗದಿರುವಂತೆ ಕಾಪಾಡಿದರೆ ಬದುಕಿದ ಹಾಗೆ. ಪರಿಸ್ಥಿತಿ ಈ ರೀತಿಯಾಗಿರಲು ಬಂಶಿಯ ಮಗನನ್ನು ತನ್ನ ವಾತ್ಸಲ್ಯದಿಂದಲೂ ಆರೈಕೆಯಿಂದಲೂ ಬೆಳೆಸಬೇಕೆಂದು ಬನ್ವಾರಿ ಮಾಡಿದ್ದ ಸಂಕಲ್ಪಕ್ಕೆ ದಾರಿಯಿಲ್ಲದೆ ಹೋಯಿತು.

ಮನೆಯಲ್ಲಿ ಬೇರೆಲ್ಲರ ಆದರ, ಆರೈಕೆಗಳಿಂದ ಮಗು ದೊಡ್ಡವನಾಗುತ್ತ ಬಂದ. ಅವನಿಗೆ 'ಹರಿದಾಸ' ನೆಂದು ಹೆಸರಿಟ್ಟಿದ್ದರು. ಇಷ್ಟು ಬಗೆಯ ಅತಿಶಯ ಆದರ, ಪಾಲನೆಗಳ ಫಲ ವಿಪರೀತವಾದಂತೆ ಹುಡುಗನೇಕೋ ಅತಿ ಬಡಕಲಾಗೇ ಇದ್ದ. ಅವನ ಆರೋಗ್ಯವೂ ಅತಿ ಸೂಕ್ಷ್ಮವಾಗಿತ್ತು. ಅವನನ್ನು ಅಮಂಗಳದಿಂದ ಕಾಪಾಡಲು ಅವನ ಹಿತೈಷಿಗಳೆಲ್ಲ ಕಟ್ಟಿಸಿದ್ದ ಯಂತ್ರ, ತಾಯಿತಿ, ದೃಷ್ಟಿ ಕವಚ ಮುಂತಾದವುಗಳಿಂದ ಅವನ ಮೈಯೆಲ್ಲಾ ಮುಚ್ಚಿಹೋಗಿತ್ತು.

ಅವನನ್ನು ಲಾಲನೆ, ಪಾಲನೆ ಮಾಡುವವರ ಅತಿಶಯ ಮೇಲ್ವಿಚಾರಣೆಯ ಮಧ್ಯೆ ಮಧ್ಯೆ ಹೇಗೋ ಬಿಡಿಸಿಕೊಂಡು ಹುಡುಗ ದೊಡ್ಡಪ್ಪ ಬನ್ವಾರಿಯ ಬಳಿಗೆ ಓಡಿ ಬರುವುದುಂಟು. ದೊಡ್ಡಪ್ಪನು ಕುದುರೆ ಸವಾರಿಗೆ ಉಪಯೋಗಿಸುವ ಚಾಬೂಕನ್ನು ತೆಗೆದುಕೊಂಡು ಗಾಳಿಯಲ್ಲಿ ಬೀಸುವುದಕ್ಕೆ ಅವನಿಗೆ ಬಹಳ ಇಷ್ಟ.

ದೊಡ್ಡಪ್ಪನನ್ನ ಕಂಡೊಡನೆ "ಚಾಬು, ಚಾಬು" ಎಂದು ಕೂಗುತ್ತ ಚಾಬೂಕನ್ನು ಹೊರಗೆ ತೆಗೆದಲ್ಲದೆ ಬಿಡವೊಲ್ಲ. ಬನ್ವಾರಿಯು ಚಾಬೂಕನ್ನು ಗಾಳಿಯಲ್ಲಿ ಝಾಡಿಸಿ ಬೀಸಿ 'ಶೋಂಯ್...ಯ್....ಛಿಪ್...ಶೋಂಯ್....ಛಪ್...ಎಂಬ ಶಬ್ದವುಂಟುಮಾಡುವಾಗ ಹುಡುಗ ಕೇಕೆ ಹಾಕುತ್ತ ಕೈ ಚಪ್ಪಾಳೆ ಹೊಡೆಯುವನು. ಬನ್ವಾರಿಯು ಒಮ್ಮೊಮ್ಮೆ ಅವನನ್ನ ತನ್ನ ಕುದುರೆಯ ಮೇಲೆ ಕೂಡಿಸುತ್ತಿದ್ದ. ಆಗ ನಾಲ್ಕೂ ಕಡೆಯಿಂದ ಜನ ಓಡಿ ಬಂದು ಏನೋ ಅನಾಹುತ ಆದಹಾಗೆ ಕೂಗುತ್ತ ಹುಡುಗನನ್ನ ಕುದುರೆಯಿಂದಿಳಿಸಿ ಎತ್ತಿಕೊಂಡು ಹೋಗುವರು. ಬನ್ವಾರಿ ಯಾವಾಗಲಾದರೂ ತನ್ನ ಬಂದೂಕನ್ನು ಹಿಡಿದುಕೊಂಡು ಹುಡುಗನ ಸಂಗಡ ಆಡುವುದುಂಟು. ಅದನ್ನ ಕಂಡುಬಿಟ್ಟರೆ ಕಿರಣಲೇಖೆ ಏದುತ್ತ ಓಡಿಬಂದು ಹುಡುಗನನ್ನು ಕಂಕುಳಲೆತ್ತಿಕೊಂಡು ಗಂಡನ ಕಡೆ ಕೋಪದ ಕಟಾಕ್ಷವೆಸೆದು ಹೋಗುವಳು. ಆದರೇನು,.... ಇವೆಲ್ಲ ನಿಷೇಧಿಸಲ್ಪಟ್ಟ ಆಟಗಳಿಂದಲೇ ಹರಿದಾಸನಿಗೆ ಮಹದಾನಂದ. ಈ ಕಾರಣದಿಂದಲೇ ಎಲ್ಲ ವಿಧವಾದ ಅಡ್ಡಿ ಆತಂಕಗಳಿದ್ದರೂ ಯಾರಿಗೂ ಬೇಡದ ದೊಡ್ಡಪ್ಪನೊಂದಿಗೆ ಅವನಿಗೆ ಹೆಚ್ಚಾಗಿ ಸಲಿಗೆ ಬೆಳೆಯಿತು.

ಬಹಳ ಕಾಲದ ಅವಧಿಯಾದ ಅನಂತರ ಹಠಾತ್ತಾಗಿ ಒಂದು ಸಲ ಈ ಕುಟುಂಬದಲ್ಲಿ ಮೃತ್ಯುವಿನ ಆವಿರ್ಭಾವವಾಯಿತು. ಮೊದಲಲ್ಲಿ ಮನೋಹರ ಲಾಲರ ಹೆಂಡತಿಯ ಸಾವಾಯಿತು. ಅದಾದನಂತರ ನೀಲಕಂಠನು ಮುದಿವಿಧುರನಾದ ಧಣಿಗೆ ಎರಡನೇ ಸಂಬಂಧವನ್ನು ಕುದುರಿಸುತ್ತಿದ್ದಾಗ ಲಗ್ನದ ಪೂರ್ವವೇ ಮನೋಹರಲಾಲರು ಭಕ್ತ ಭೃತ್ಯನಿಗೆ ಮೋಸಮಾಡಿ 'ಹರ ಹರ' ಎಂದುಬಿಟ್ಟರು. ಆಗ ಹರಿದಾಸನ ವಯಸ್ಸು ಎಂಟು. ಸಾಯುವುದಕ್ಕೆ ಮೊದಲು ಮನೋಹರಲಾಲರು ಸೊಸೆ ಕಿರಣಳನ್ನೂ ಭಕ್ತ ನೀಲಕಂಠನನ್ನೂ ಕರೆಯಿಸಿ ಅವರ ಸುಪರ್ದಿನಲ್ಲಿ ವಂಶೋದ್ಧಾರಕನಾದ ಹರಿದಾಸನನ್ನು ಒಪ್ಪಿಸಿ ಕಣ್ಣು ಮುಚ್ಚಿದರು; – ಬನ್ವಾರಿಯನ್ನ ಕರೆಸಲೇ ಇಲ್ಲ.

ಕಬ್ಬಿಣದ ಪೆಟ್ಟಿಗೆಯಿಂದ ಉಯಿಲು (ಮರಣ ಪತ್ರ) ಹೊರಬಿದ್ದಾಗ, ಆಗ ತಿಳಿದುಬಂತು–ಮನೋಹರಲಾಲರು ತಮ್ಮ ಸಂಪತ್ತೆಲ್ಲವನ್ನೂ ಮೊಮ್ಮಗನಿಗೆ ಕೊಟ್ಟು ಹೋಗಿದ್ದರು. ಬನ್ವಾರಿಲಾಲನಿಗೆ ಜೀವವಿರುವನಕ ತಿಂಗಳಿಗೆ ಇನ್ನೂರು ರೂಪಾಯಿ ಮಾಸಾಶನ ಪಾವತಿಯಾಗತಕ್ಕದ್ದು. ನೀಲಕಂಠನೇ ಉಯಿಲಿಗೆ executive. ಅವನ ಮೇಲೆಯೇ ಭಾರವೆಲ್ಲ. ಅವನು ಬದುಕಿರುವವರೆಗೂ ಹಲಧರವಂಶದ ಯಾವತ್ತೂ ಆಸ್ತಿ–ಪಾಸ್ತಿ ಮತ್ತು ಕುಟುಂಬ ರಕ್ಷಣೆಯ ಜವಾಬುದಾರಿ ಆತನದೇ.

ಬನ್ವಾರಿಯು ತಿಳಿದುಕೊಂಡುಬಿಟ್ಟ. ಈ ಸಂಸಾರದಲ್ಲಿ ಯಾರೂ ತನ್ನನ್ನ ಹುಡುಗ ಹರಿದಾಸನ ವಿಷಯದಲ್ಲೂ ನಂಬುವುದಿಲ್ಲ. ಆಸ್ತಿ, ಪಾಸ್ತಿಯ ವಿಷಯದಲ್ಲೂ ನಂಬುವುದಿಲ್ಲ. ಅವನ ಕೈಯಲ್ಲೇನೂ ಆಗುವುದಿಲ್ಲ. ಎಲ್ಲ ಹಾಳುಮಾಡಿಬಿಡುತ್ತಾನೆ–

ಎಂಬುದರ ಬಗ್ಗೆ ಮನೆಯಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಈ ಕಾರಣದಿಂದ ಅವನು ಅಳತೆ ಪ್ರಕಾರವಾಗಿ ಆಹಾರವುಂಡು ಮೂಲೆಯ ಕೋಣೆಯಲ್ಲಿ ನಿದ್ದೆ ಮಾಡಬಹುದು. ಇಷ್ಟೇ ಅವನ ಸಂಬಂಧವಾದ ಮುಂದಿನ ವ್ಯವಸ್ಥೆ.

ಅವನು ಕಿರಣಳ ಬಳಿ ಹೋಗಿ "ನಾನಿನ್ನು ನೀಲಕಂಠನಿಂದ ಪರ್ಷ ಪಡೆದು ಉಣ್ಣುತ್ತಾ ಬದುಕಲಾರೆ. ಈ ಮನೆ ಬಿಟ್ಟು ನಡಿ ನನ್ನ ಜತೆಗೆ ಕಲಿಕತ್ತೆಗೆ" ಎಂದ.

"ಅಯ್ಯಮ್ಮಾ, ಏನು ಮಾತು ಇದು? ಇದು ನಿಮ್ಮ ತಂದೆಯದೇ ಅಲ್ಲವೇ ಆಸ್ತಿ. ಹರಿದಾಸನಂತೂ ನಿಮ್ಮ ಸ್ವಂತ ಮಗನ ಸಮಾನ. ಅವನ ಹೆಸರಿಗೆ ಆಸ್ತಿ ಬರೆದಿಟ್ಟು ಹೋಗಿದಾರೆ ಅಂದುಬಿಟ್ಟು ನೀವು ಸಿಟ್ಟು ಮಾಡುವುದೇಕೆ?" ಎಂದಳು ಆಕೆ.

ಹಾಯ್, ಹಾಯ್, ಆಕೆಯ ಗಂಡನ ಹೃದಯವೇಕೆ ಇಷ್ಟು ಕಠಿಣವಾಗಿ ಹೋಯಿತು! ಇಷ್ಟು ಎಳೆಯ ಕೂಸಿನ ಮೇಲೂ ಕೂಡ ಇವರಿಗೆ ಹೊಟ್ಟೆಯುರಿಯುವಂತಾಗಬೇಕೆ? ಅವಳ ಮಾವ ಹೇಗೆ ಉಯಿಲನ್ನು ಬರೆದಿಟ್ಟದಾರೊ ಅದನ್ನು ಕಿರಣಳು ಮನಃಪೂರ್ವಕವಾಗಿ ಸಮರ್ಥಿಸುವಳು. ಅವಳಿಗೆ ದೃಢವಾದ ವಿಶ್ವಾಸ – ಬನ್ವಾರಿಯ ಕೈಯಲ್ಲಿ ಆಸ್ತಿ ಬಿದ್ದಿದ್ದರೆ ದೇಶದಲ್ಲಿರುವ ಹೀನಜಾತಿಯ ಜನರೆಲ್ಲ, ಯದು, ಮಧು ಮುಂತಾದ ಬೆಸ್ತ ಮತ್ತು ಬೇಡರ ದಳಗಳು ಅವನನ್ನು ಮುತ್ತಿ ಮೋಸ ಮಾಡಿ ಒಂದು ಬಿಡಿಕಾಸನ್ನೂ ಬಿಡದೆ ದೋಚಿಕೊಂಡು ಹೋಗಿಬಿಡುತ್ತಿದ್ದರು. ಮತ್ತು ಹಲಧರ ವಂಶದ ಭಾವೀ ಆಶಾಸ್ವರೂಪನಾದ ಹರಿದಾಸ ಒಮ್ಮೆ ದಿಕ್ಕು ಕೆಟ್ಟು ಬೀದಿಯಲ್ಲಿ ನಿಲ್ಲಬೇಕಾಗಿರುತ್ತಿತ್ತು. ಮಾವನ ವಂಶದಲ್ಲಿ ದೀಪವುರಿಸುವಂಥವನಂತೂ ಜನಿಸಿದ್ದಾನೆ. ಈಗವನ ದೀಪಕ್ಕೆ ಎಣ್ಣೆಯೊದಗಿಸುತ್ತಿರಲು ನೀಲಕಂಠನೇ ಅಲ್ಲವೇ ತಕ್ಕ ಪ್ರಹರಿ ?

ಒಮ್ಮೆ ಬನ್ವಾರಿಯು ನೋಡಿದ – ನೀಲಕಂಠನು ಅಂತಃಪುರದೊಳಗೆ ಬಂದು ಕೋಣೆ ಕೋಣೆಯಲ್ಲಿರುವ ಸಾಮಾನುಗಳನ್ನೆಲ್ಲ ತನಿಖೆಮಾಡಿ ಪಟ್ಟಿ ಬರೆಯುತ್ತಿದ್ದಾನೆ. ಮತ್ತು ಕಬ್ಬಿಣದ ಪೆಟ್ಟಿಗೆ, ಸಂದೂಕಗಳು ಕಣ್ಣಿಗೆ ಬಿದ್ದೊಡನೆ ಅವುಗಳಿಗೆ ಬೀಗ ತಗುಲಿಸುತ್ತಾನೆ. ಕಡೆಗೆ ಕಿರಣಳ ಮಲಗುವ ಕೋಣೆಗೂ ಬಂದು ಅಲ್ಲಿ ಬನ್ವಾರಿಯ ನಿತ್ಯ ಬಳಸುವ ವಸ್ತುಗಳನ್ನೂ ಎಣಿಸಿ ಪಟ್ಟಿ ಮಾಡತೊಡಗಿದ. ನೀಲಕಂಠನು ಅಂತಃಪುರಕ್ಕೆ ಎಷ್ಟೋ ಸಲ ಕೆಲಸಕಾರ್ಯಗಳ ನಿಮಿತ್ತ ಇದಕ್ಕೆ ಮುಂದೆ ಬಂದಿದ್ದಾನೆ. ಆದ್ದರಿಂದ ಕಿರಣಳು ಸತ್ತುಹೋದ ಮಾವನನ್ನು ನೆನೆದುಕೊಂಡು ಕಂಬನಿ ತುಂಬಿದ ಕಣ್ಣೊರಸಿಕೊಂಡು ಗದ್ಗದ ಕಂಠದಿಂದ ಎಲ್ಲ ವಸ್ತುಗಳ ವಿವರವನ್ನೂ ತಿಳಿದು ಹೇಳತೊಡಗಿದಳು. ಬನ್ವಾರಿಗಾಗ ತಡೆಯಲಾಗದೆ ಸಿಂಹದಂತೆ ಗರ್ಜಿಸುತ್ತ ನೀಲಕಂಠನಿಗೆ "ಈ ತತ್‌ಕ್ಷಣ ಕೋಣೆ ಬಿಟ್ಟು ತೊಲಗು,

ಹೂಂ!" ಎಂದಾಗ ನೀಲಕಂಠನು ನಮ್ರನಾಗಿ "ದೊಡ್ಡ ಬಾಬುಗಳೆ, ನನ್ನದೇನೂ ತಪ್ಪಿಲ್ಲ. ಧಣಿಗಳ ಉಯಿಲಿನ ಅನುಸರವಾಗಿ ನಾನು ಇರುವ ಸಾಮಾನುಗಳನ್ನೆಲ್ಲ ತಿಳಿದುಕೊಂಡು ಪಟ್ಟಿ ಮಾಡಿಕೊಳ್ಳಬೇಕಾಗುತ್ತದೆ. ಸಾಮಾನೆಲ್ಲ ಹರಿದಾಸ ಬಾಬುಗಳಿಗೆ ಹೋಗಬೇಕಲ್ಲ" ಎಂದ.

ಕಿರಣಳೂ ನೊಂದು ಮನಸ್ಸಿನಲ್ಲೇ "ಛೇ...ಏನು ನಾಚುಗೇಡು... ಯಾಕಾದರೂ ಇವರು ಹೀಗೆ ಆಡುತ್ತಾರೋ ಗೊತ್ತಿಲ್ಲ. ಹರಿದಾಸನೇನು ನಮಗೆ ಹೊರಗಿನವನೇ? ನಮ್ಮ ಹುಡುಗನ ವಸ್ತುಗಳನ್ನ ನಾವೀಗ ಅನುಭವಿಸುತ್ತಿದ್ದರೆ ಅದರಲ್ಲೇನು? ಸಾಮ್ಹಾನು, ಸರಂಜಾಮುಗಳು ಮನುಷ್ಯರು ಹೋಗುತ್ತ ತೆಗೆದುಕೊಂಡು ಹೋಗುತ್ತಾರೆಯೇ? ಇಂದಲ್ಲ, ನಾಳೆ, ನಮ್ಮ ಮಕ್ಕಳು ಮೊಮ್ಮಕ್ಕಳು ಅವನ್ನ ಅನುಭವಿಸುವುದಿಲ್ಲವೇ?" ಎಂದು ಕೊರಗಿದಳು.

ಈ ಮನೆಯ ನೆಲವೇ ಬನ್ವಾರಿಯ ಹೆಜ್ಜೆಗಳಿಗೆ ಮುಳ್ಳಿನಂತೆ ಚುಚ್ಚತೊಡಗಿತು. ಈ ಮನೆಯ ಗೋಡೆಗಳು ಅವನ ಕಣ್ಣುಗಳೆರಡನ್ನು ಸುಡತೊಡಗಿದವು. ಅವನ ವೇದನೆಯೆಂತಹದೆಂದು ಹೇಳಿಕೊಳ್ಳುವುದಕ್ಕೆ ಈ ಬೃಹತ್ ಸಂಸಾರದಲ್ಲಿ ಅವನಿಗೆ ಒಬ್ಬರೂ ಇಲ್ಲ.

ಈ ಕ್ಷಣವೇ ಮನೆ, ಮಠ ಎಲ್ಲವನ್ನು ಬಿಸಾಟು ಹೊರಗೆ ಹೊರಟು ಹೋಗಬೇಕೆಂದು ವ್ಯಾಕುಲಪಟ್ಟಿತು ಅವನ ಮನಸ್ಸು. ಆದರೆ ಅವನ ರೋಷದ ಧಗೆ ಕಡಿಮೆಯಾಗಲು ತಯಾರಿಲ್ಲ. ತಾನು ಹೊರಟು ಹೋಗುವುದು, ಮತ್ತು ಈ ಕಡೆ ಈ ನೀಲಕಂಠನು ಆರಾಮವಾಗಿ ಏಕಾಧಿಪತ್ಯ ಮಾಡುತ್ತ ಮೆರೆಯಬೇಕು—ಛೇ! ಇಂತಹ ಕಲ್ಪನೆಯನ್ನವನು ಸಹಿಸಲು ಆಗದೆ ಹೋಯಿತು. ಈಗಲೇ, ಈ ಕ್ಷಣವೇ ಯಾವುದಾದರೊಂದು ಗುರುತರವಾದ ಅನಿಷ್ಟವನ್ನುಂಟು ಮಾಡದೆ ಹೋದರೆ ಅವನ ಮನಸ್ಸಿನ ಬೇಗುದಿ ತಣ್ಣಗಾಗಲಾರದು. "ನೀಲಕಂಠನು ಅದು ಹೇಗೆ ನಮ್ಮ ಆಸ್ತಿಯನ್ನು ದಕ್ಕಿಸಿಕೊಳ್ಳುತ್ತಾನೋ ನೋಡೇ ಬಿಡುತ್ತೇನೆ" ಎಂದು ಹಲ್ಲು ಕಡಿದ.

ಹೊರಗಡೆ ಬಂದು ತನ್ನ ತಂದೆಯಿರುತ್ತಿದ್ದ ಕೋಣೆಯೊಳಗೆ ಹೊಕ್ಕು ನೋಡಿದ—ಅಲ್ಲಿಯಾರೂ ಇಲ್ಲ. ಎಲ್ಲರೂ ಅಂತಃಪುರದ ಕಂಚು ಹಿತ್ತಾಳೆಯ ಪಾತ್ರೆ ಮತ್ತು ಒಡವೆ ವಸ್ತುಗಳನ್ನು ಪರಾಂಬರಿಸಲು ಹೋಗಿದ್ದಾರೆ. ಅತಿ ಎಚ್ಚರಿಕೆಯ ಮನುಷ್ಯರಿಗೂ ಒಮ್ಮೊಮ್ಮೆ ಮೈ ಮರೆಯುವುದುಂಟು. ತಂದೆಯ ಪೆಟ್ಟಿಗೆ ತೆರೆದು ಉಯಿಲನ್ನೂ ಇತರ ಕಾಗದಗಳನ್ನೂ ಹೊರತೆಗೆದ ಮೇಲೆ ಪೆಟ್ಟಿಗೆಗೆ ಬೀಗ ಹಾಕಿಲ್ಲವೆಂಬ ಜ್ಞಾನ ಬರಲೇ ಇಲ್ಲ ಬನ್ವಾರಿಗೆ. ಆ ಪೆಟ್ಟಿಗೆಯಲ್ಲೇ ಅತಿ ಬೆಲೆಯುಳ್ಳ ದಸ್ತಾವೇಜುಗಳು ಹುರಿಕಟ್ಟಿ ಇಡಲ್ಪಟ್ಟಿದ್ದವು. ಆ ದಸ್ತಾವೇಜುಗಳ ಆಧಾರದ ಮೇಲೇ ಈ ಹಲಧರ ವಂಶದ ಸಂಪತ್ತಿನ ಗೋಡೆ ಪ್ರತಿಷ್ಠಿತವಾಗಿದ್ದದ್ದು.

ಬನ್ವಾರಿಗೆ ಈ ದಸ್ತಾವೇಜುಗಳ ವಿವರ ಅಷ್ಟಾಗಿ ಗೊತ್ತಿಲ್ಲ. ಆದರೆ ಈ ದಸ್ತವೇಜುಗಳು ಬಹಳ ಬೆಲೆಯುಳ್ಳವು ಮತ್ತು ಇವುಗಳಿಲ್ಲದೆ ಹೋದರೆ ಮೊಕದ್ದಮೆ, ಲೇವಾದೇವಿಗಳಲ್ಲಿ ಹೆಜ್ಜೆ ಹೆಜ್ಜೆಗೆ ನಷ್ಟವಾಗುವುದುಂಟು ಎಂಬುದನ್ನ ಮಾತ್ರ ಬಲ್ಲನು. ಕಾಗದಗಳ ಗಂಟನ್ನು ಕೊಂಡು ಅವನು ತನ್ನ ಕರವಸ್ತ್ರದಲ್ಲಿ ಅವನ್ನು ಸುತ್ತಿ ಮನೆಯ ಹೊರಗಡೆಯ ತೋಟದಲ್ಲಿ ಒಂದು ದೊಡ್ಡ ಸಂಪಿಗೆ ಮರದ ಅಡಿಯಲ್ಲಿ ಚಚ್ಚೌಕವಾಗಿ ಕಟ್ಟಿದ್ದ ಜಗುಲಿಯ ಮೇಲೆ ಕೂತು ಬಹಳ ಹೊತ್ತು ಯೋಚಿಸುತ್ತ ಕೂತ.

ಮರುದಿನ ನಡೆಯಬೇಕಾಗಿದ್ದ ಶ್ರಾದ್ಧದ ಸಂಬಂಧವಾಗಿ ಮಾತಾಡಲು ನೀಲಕಂಠನು ಬನ್ವಾರಿಯ ಮುಂದೆ ಬಂದು ನಿಂತ. ನೀಲಕಂಠನ ಮೈ ಕಪಟ ವಿನಯದಿಂದ ಬಾಗಿತ್ತು. ಆದರೆ ಮುಖದ ಮೇಲೆ ಕಂಡುಬಂದದ್ದು ಅದಕ್ಕೆ ವಿರುದ್ಧ—ಆ ಮುಖದ ಮೇಲೆ ಕಂಡುಬಂದ, ಅಥವಾ ಕಂಡುಬರದೆ ಇದ್ದ, ಭಾವವನ್ನು ನೋಡಿ ಅಥವಾ ಕಲ್ಪಿಸಿಕೊಂಡು ಬನ್ವಾರಿಯ ಪಿತ್ಥ ಕೆರಳಿ ಬಂತು. ಈ ಬೊಡ್ಡೀಮಗ ನಮ್ರತೆಯ ವ್ಯಂಗ್ಯ ತೋರಿ ತನ್ನನ್ನು ಅಣಕಿಸುತ್ತಿದ್ದಾನೆ ಎಂದುಕೊಂಡ ಬನ್ವಾರಿ.

ನೀಲಕಂಠನು "ಧಣಿಗಳ ಶ್ರಾದ್ಧದ ಸಂಬಂಧವಾಗೀ—" ಎಂದ. ಬನ್ವಾರಿಯು ಅವನ ಮಾತು ಮುಗಿಯುವುದಕ್ಕೆ ಅವಕಾಶಕೊಡದೆ "ನನಗೇನು ಗೊತ್ತದು?" ಎಂದು ಗುಡುಗಿದ.

ನೀಲಕಂಠನು "ಏನು ಮಾತು ದೊಡ್ಡ ಬಾಬು? ತಾವೇ ಅಲ್ಲವೆ ಶ್ರಾದ್ಧಾಧಿಕಾರಿ?" ಎಂದ. 'ಆಹಾ ಬಲು ದೊಡ್ಡ ಅಧಿಕಾರವಲ್ಲವೇ ಅದು? ಶ್ರಾದ್ಧದ ಅಧಿಕಾರ ! ಈ ಸಂಸಾರದಲ್ಲಿ ಇಷ್ಟರಮಟ್ಟಿಗಾದರೂ ಅವನಿಗೆ ಪ್ರಯೋಜನವಿದೆಯಲ್ಲ. ಬೇರೆ ಯಾವ ಕೆಲಸಕ್ಕೂ ಅಪ್ರಯೋಜಕ.' ಬನ್ವಾರಿಯು ಗರ್ಜಿಸುತ್ತ "ಹೋಗ್ ! ಹೋಗ್ಗಾಚೆಗೆ...! ನನ್ನ ಕೆಣಕಿದರೆ ನೋಡ್ ಏನ್ ಮಾಡಿಬಿಡುತ್ತೇನೋ !" ನೀಲಕಂಠನು ಮಾತಾಡದೆ ಹೊರಟುಹೋದ. ಆದರೆ ಅವನ ಹಿಂದಿನಿಂದ ಬನ್ವಾರಿ ತಿಳಿದುಕೊಂಡ–ಅವನೆಲ್ಲ ಒಳಗೊಳಗೇ ನಗುತ್ತ ಹೋಗುತ್ತಿದ್ದಾನೆ. ಅಗವನಿಗೆನ್ನಿಸಿತು–ಮನೆಯವರೆಲ್ಲ, ಆಳು ಕಾಳುಗಳು ಕೂಡ, ಈ ಯಾರಿಗೂ ಬೇಡದ, ಅವಮಾನಿತ 'ದೊಡ್ಡ ಬಾಬು'ವನ್ನು ಕುರಿತು ತಂತಮ್ಮೊಳಗೇ ಮಾತಾಡಿಕೊಂಡು ನಗುತ್ತಿದ್ದಾರೆ–ಅವನೀಗ ಬೀದಿಯ ಭಿಕಾರಿಗಿಂತಲೂ ಕಡೆ!

ಬನ್ವಾರಿಯು ಆ ದಸ್ತಾವೇಜುಗಳ ಕಟ್ಟನ್ನು ತೆಗೆದುಕೊಂಡು ಹೊರಗೆ ಹೊರಟ. ಹಾಲದಾರ್ ಕುಟುಂಬದ ನೆರೆಯ ಜಮೀನ್ದಾರ್‌ರು ಮತ್ತು ಪ್ರತಿದ್ವಂದ್ವಿಗಳು ಪ್ರತಾಪಪುರದ ಬಡುಜ್ಯೆಯವರು (ಬ್ಯಾನರ್ಜಿ). ಬನ್ವಾರಿ ಸಂಕಲ್ಪ ಮಾಡಿದ. "ಈ

ಕಾಗದಪತ್ರಗಳನ್ನು ಅವರ ಕೈಯಲ್ಲಿ ಕೊಟ್ಟುಬಿಡುತ್ತೇನೆ. ಆಸ್ತಿ, ಪಾಸ್ತಿ ಎಲ್ಲಾ ಧೂಳೀಪಟವಾಗಲಿ!"

ಹೊರಗೆ ಹೊರಡುವ ಸಮಯದಲ್ಲಿ ಮೇಲು ಮಹಡಿಯಿಂದ ಸವಿಯಾದ ಎಳೆಗೊರಳಿನಿಂದ ಹರಿದಾಸ "ದೊಡ್ಡಪ್ಪಾ, ನೀವೆಲ್ಲಿ ಹೋಗುತ್ತೀರಿ? ನಾನೂ ಬರತೇನೆ ಹೊರಗಡೆ" ಎಂದು ಕೂಗಿದ.

ಬನ್ವಾರಿಯ ಮನಸ್ಸಿನಲ್ಲಿ ಅನ್ನಿಸಿತು–'ಹರಿದಾಸನ ಶನಿಗ್ರಹವೇ ಅವನ ಬಾಯಿಂದ ಈ ಮಾತನ್ನು ಆಡಿಸಿದೆ...ನಾನಂತೂ ಎಲ್ಲಾ ಬಿಟ್ಟು ಹೋಗುತ್ತಿದ್ದೇನೆ. ಇವನನ್ನೂ ಯಾಕೆ ಕರೆದುಕೊಂಡು ಹೊರಟುಹೋಗಬಾರದು? ಹೋದರೆ ಎಲ್ಲಾ ಚೂರುಮಾರಾಗಿ ಹೋಗಲಿ ಒಂದೇ ಏಟಿಗೆ!' ಎಂದುಕೊಂಡ.

ಹೊರಗಡೆಯ ತೋಟದ ಬಳಿ ಹೋಗುತ್ತಲೂ ಬನ್ವಾರಿಯ ಕಿವಿಗೆ ಏನೋ ಭಯಂಕರ ಗಲಾಟೆಯ ಶಬ್ದ ಕೇಳಬಂತು. ಸ್ವಲ್ಪ ದೂರದಲ್ಲಿದ್ದ ಸಂತೆ ಸೇರುವ ಕಡೆ ಒಬ್ಬ ಅನಾಥ ವಿಧವೆಯ ಗುಡಿಸಿಲಿಗೆ ಬೆಂಕಿ ಬಿದ್ದಿದೆ! ಬನ್ವಾರಿಯು ತನ್ನ ಚಿರಕಾಲದ ಅಭ್ಯಾಸ ಬಲದಿಂದ ಯೋಚನೆಯೇ ಇಲ್ಲದೆ ಆ ಕಡೆ ಓಡಿದ. ಹೋಗುವಾಗ ಆತುರದಲ್ಲಿ ಆ ದಸ್ತಾವೇಜುಗಳ ಕಟ್ಟನ್ನ ಸಂಪಿಗೆ ಮರದಡಿಯಲ್ಲಿ ಎಸೆದು ಹೋದ.

ಮರಳಿ ಬಂದು ನೋಡುತ್ತಾನೆ–ಆ ಕಾಗದದ ಕಟ್ಟಿಲ್ಲ ಅಲ್ಲಿ. ಒಂದೇ ಒಂದು ಕ್ಷಣದಲ್ಲಿ ಅವನ ಎದೆಯಲ್ಲಿ ಈಟಿ ಚುಚ್ಚಿ ಈ ಯೋಚನೆ ಮನದಲ್ಲಿ ಹೊಳೆಯಿತು– 'ನೀಲಕಂಠನ ಬಳಿ ಮತ್ತೆ ನನಗೇ ಸೋಲಾಗಿದೆ.'

ವಿಧವೆಯ ಗುಡಿಸಲು ಪೂರ್ತಿ ಸುಟ್ಟು ಬೂದಿಯಾಗಿಹೋಗಿದ್ದರೆ ನನಗೇನು ನಷ್ಟವಾಗುತಾಯಿತ್ತು? ಈ ಚತುರ ನೀಲಕಂಠನೇ ಆ ಕಾಗದಗಳ ಕಟ್ಟನ್ನು ಆರಿಸಿಕೊಂಡು ಹೋಗಿದ್ದಾನೆ, ಖಂಡಿತ–ಎಂದುಕೊಂಡ.

ಆ ಯೋಚನೆ ಬಂದದ್ದೇ ತಡ, ಬಿರುಗಾಳಿಯ ವೇಗದಲ್ಲಿ ಕಛೇರಿಯ ಕೊಠಡಿಗೆ ಓಡಿದ, ನೀಲಕಂಠನು ಬೇಗ ಬೇಗ ಪೆಟ್ಟಿಗೆ ಮುಚ್ಚಿ ಅತಿ ಸಂಭ್ರಮದಿಂದ ಎದ್ದು ನಿಂತು ಬನ್ವಾರಿಗೆ ನಮಸ್ಕಾರ ಮಾಡಿದ. ಬನ್ವಾರಿಯ ಮನಸ್ಸಿಗೆನ್ನಿಸಿತು–"ಈ ಪೆಟ್ಟಿಗೆಯೊಳಗಡೆಯೇ ಆ ಕಾಗದದ ಕಟ್ಟನ್ನು ಅಡಗಿಸಿಟ್ಟದಾನೆ–...ಗ್ಗಂಡ" ಹಾಗೆನ್ನಿಸಿದ್ದೇ ತಡ, ಕೂಡಲೆ ಏನೂ ಮಾತಾಡದೆ ಆ ಪೆಟ್ಟಿಗೆಯ ಮುಚ್ಚಳವನ್ನ ದಡಕ್ಕನೆ ತೆಗೆದುಬಿಟ್ಟ. ಒಳಗಡೆ ಕೆಲವು ಲೆಕ್ಕದ ಪುಸ್ತಕಗಳೂ, ಬೇರೆ ಕೆಲವು ಲೇವಾದೇವಿಯ ಕಾಗದಗಳು ಹೊರತು ಬೇರೇನೂ ಇಲ್ಲ. ದಸ್ತಾವೇಜಿನ ಕಟ್ಟು ಎಲ್ಲಿ ಹೋಯಿತು ಹಾಗಾದರೆ! ಪೆಟ್ಟಿಗೆಯನ್ನು ಎಳೆದು ಬೋರಲು ಮಾಡಿ ಚೆಲ್ಲಿದರೂ ಆ ಕಟ್ಟು ಕಾಣಲಿಲ್ಲ.

ಒಣಗಿದ ಕೊರಳಿನಿಂದ "ನೀನು ಸಂಪಿಗೆ ಮರದ ಹತ್ತಿರ ಹೋಗಿದ್ದೆಯಾ" ಎಂದು ಕೇಳಿದ.

ನೀಲಕಂಠನು "ಅಪ್ಪಣೇ...ಹಾಂ....ಹೋಗಿದ್ದೆ...ಏಕೆ ಇಲ್ಲ ಅನ್ನಲಿ... ನೋಡಿದೆ... ನೀವು ಗಾಬರಿ ಗಾಬರಿಯಾಗಿ ಎಲ್ಲೋ ಓಡಿಕೊಂಡು ಹೋಗುತಾಯಿದ್ದಿರಿ... ಏನಾಯಿತಪ್ಪಾ ನೋಡೋಣ ಅಂತ ಅಲ್ಲಿಯವರೆಗೆ ಓಡಿಕೊಂಡು ಬಂದೆ ನಾನೂ ಕೂಡ" ಎಂದ.

"ನನ್ನ ಕರ್ಚೀಫಿನಲ್ಲಿ ಕಟ್ಟಿದ್ದ ಕೆಲವು ಕಾಗದಗಳನ್ನು ನೀನು ತಗೊಂಡಿದ್ದೀಯಾ?"

"ಛೇ...ಇಲ್ಲವಲ್ಲ!"

"ಸುಳ್ಳು ಬೊಗಳಬೇಡ...ನೋಡು...ನಿನಗೆ ಒಳ್ಳೇದಾಗೋದಿಲ್ಲ... ಈಗಲೇ ವಾಪಸು ಕೊಟ್ಟುಬಿಡದನ್ನ, ಹೇಳ್ತೇನೆ." ಬನ್ವಾರಿಯು ವ್ಯರ್ಥವಾಗಿ ಅರಚಿ, ರೇಗಾಡಿದ. ಯಾವ ಸಾಮಾನನ್ನ ಅವನು ಕಳೆದುಕೊಂಡಿದ್ದಾನೆ ಅನ್ನುವುದನ್ನ ಹೇಳವೊಲ್ಲ....ಹೇಗೆ ಹೇಳುತ್ತಾನೆ? ಮತ್ತು ತಾನೇ ಕಳುವು ಮಾಡಿದ ಸಾಮಾನಿನ ಮೇಲೆ ತನ್ನದಾವ ಅಧಿಕಾರವೂ ಇಲ್ಲ.

ತಾನೊಬ್ಬ ಅವಿವೇಕಿ, ಎಚ್ಚರಿಕೆಯಿಲ್ಲದವ ಎಂಬ ಜ್ಞಾನವೂ ಹೊಳೆದು ಅವನ ಮನಸ್ಸು ಪುಡಿ ಪುಡಿಯಾಗುತ್ತಿತ್ತು.

ಕಛೇರಿಯಲ್ಲಿ ಹೀಗೆಲ್ಲ ಹುಚ್ಚುತನ ನಡೆಸಿ ಅವನು ಮತ್ತೆ ಸಂಪಿಗೆ ಮರದಡಿಗೆ ಹೋಗಿ ಹುಡುಕತೊಡಗಿದ. ಮನಸ್ಸಿನಲ್ಲೇ ತಾಯ ಮೇಲೆ ಆಣೆಯಿಟ್ಟು ಪ್ರತಿಜ್ಞೆ ಮಾಡಿದ–"ಏನಾದರೂ ಆಗಲಿ ಇವತ್ತು ಈ ಕಾಗದಗಳನ್ನ ಹುಡುಕಿ ಪಡೆಯಲೇಬೇಕು. ಬಿಡುವುದಿಲ್ಲ ನಾನು..." ಅದು ಹೇಗೆ ಪಡೆಯುವನೆಂದು ಗೊತ್ತಿಲ್ಲ. ಅದನ್ನ ಚಿಂತಿಸಲು ಕೂಡ ಮಾರ್ಗವಿಲ್ಲ. ಆದರೂ ನೊಂದ, ರೇಗಿದ ಹುಡುಗನಂತೆ ಬಾರಿ ಬಾರಿಗೂ ಮೇಲೆ ಕಾಲನ್ನು ಕುಟ್ಟುತ್ತ,

'ಸಿಕ್ಕತ್ತೆ...ಸಿಕ್ಕತ್ತೆ...ಸಿಕ್ಕೇ ಸಿಕ್ಕತ್ತೆ" ಎಂದುಕೊಳ್ಳತೊಡಗಿದ.

ಬಹಳ ಹೊತ್ತು ಹುಡುಕಿ ಬೇಸತ್ತು ಸ್ವಲ್ಪ ಹೊತ್ತು ಮರದ ತಳಗಡೆಯೇ ಕೂತ. ಯಾರೂ ಇಲ್ಲ, ಇಂದವನಿಗೆ ಯಾರೂ ಇಲ್ಲ. ಅವನ ಬಳಿ ಏನೂ ಇಲ್ಲ. ಇವತ್ತಿನಿಂದ ಬರಿಗೈಯಲ್ಲೇ ಅವನು ತನ್ನ ಅದೃಷ್ಟದ ಸಂಗಡ ಮತ್ತು ಹೊರ ಜಗತ್ತಿನ ಸಂಗಡ ಹೋರಾಡಬೇಕಾಗಿದೆ. ಅವನ ಪಾಲಿಗೀಗ ಮಾನಾವಮಾನಗಳಿಲ್ಲ. ಬಿಂಕಗೌರವಗಳಿಲ್ಲ, ಪ್ರೇಮವಿಲ್ಲ–ಸ್ನೇಹವಿಲ್ಲ, ಏನೂ ಇಲ್ಲ–ಇರುವುದು ಒಂದೇ– ಸಾಯುವ ಅಥವಾ ಸಾಯಬಡಿಯುವ ಹಾದಿ.

ಈ ರೀತಿಯಾಗಿ ಮನಸ್ಸಿನಲ್ಲೇ ಬೇಗುದಿಗೊಳ್ಳುತ್ತ ಅತ್ಯಂತ ಆಯಾಸದಿಂದ ಯಾವಾಗ ಅವನಿಗೆ ಕಣ್ಣೆಳೆದುಕೊಂಡು ಬಂದು ನಿದ್ದೆ ಹತ್ತಿತ್ತೋ ಗೊತ್ತಿಲ್ಲ. ಮತ್ತೆ ಎಚ್ಚೆತ್ತಾಗ ತತ್‌ಕ್ಷಣ ತಾನೆಲ್ಲಿದ್ದೇನೆಂದು ಅರಿವಾಯಿತು. ಆಮೇಲೆ ಚೆನ್ನಾಗಿ ಕಣ್ಣು

ತೆರೆದು ಎದ್ದು ಸುತ್ತ ನೋಡಿದರೆ ತಲೆದೆಸೆಯಲ್ಲಿ ಹರಿದಾಸ ಕೂತಿದ್ದನ್ನು ಕಂಡ. ದೊಡ್ಡಪ್ಪ ನಿದ್ದೆಯಿಂದೆದ್ದಿದ್ದನ್ನು ನೋಡಿ ಹರಿದಾಸನು "ದೊಡ್ಡಪ್ಪಾ, ನಿಮ್ಮದು ಏನು ಹೋಗಿದೆ ಹೇಳಿ ನೋಡೋಣ" ಎಂದ.

ಬನ್ವಾರಿಯು ಸ್ತಬ್ಧನಾಗಿಹೋದ. ಹರಿದಾಸನ ಮಾತಿಗುತ್ತರ ಹೇಳಲಾರದೆ ಹೋದ.

"ನಾನದನ್ನ ತಿರುಗಿ ಕೊಟ್ಟರೆ ನನಗೇನು ಕೊಡುತೀರಿ ನೀವು?" ಎಂದ ಹರಿದಾಸ.

ಬೇರೆ ಏನೋ ಸಾಮಾನಿರಬೇಕು ಎಂದುಕೊಂಡ ಬನ್ವಾರಿ.

"ನನ್ನದೇನಿದೆಯೋ ಅದೆಲ್ಲ ನಿನಗೇ ಕೊಡುತ್ತೇನೆ" ಎಂದ. ಹೀಗಂದದ್ದು ಕೇವಲ ಹುಡುಗಾಟಿಕೆಗೆ. ಅವನಲ್ಲಿ ಏನಿದೆ, ಕೊಡುವಂಥಾದ್ದು?

ಆಗ ಹರಿದಾಸನು ತನ್ನ ಅರಿವೆಯೊಳಗಿಂದ ಬನ್ವಾರಿಯ ಕರವಸ್ತ್ರದಲ್ಲಿ ಕಟ್ಟಿದ್ದ ದಸ್ತಾವೇಜುಗಳ ಕಟ್ಟನ್ನು ಹೊರತೆಗೆದ.

ಆ ಬಣ್ಣದ ಕರವಸ್ತ್ರದ ಮೇಲೆ ಹುಲಿಯ ಚಿತ್ರ ಹೆಣೆಯಲ್ಪಟ್ಟಿತ್ತು. ಆ ಚಿತ್ರವನ್ನೇ ದೊಡ್ಡಪ್ಪ ಅವನಿಗೆಷ್ಟೋ ಬಾರಿ ತೋರಿಸಿದ್ದ. ಆ ಕರವಸ್ತ್ರದ ಮೇಲೆ ಹರಿದಾಸನಿಗೆ ಬಹಳ ಆಸೆ. ಈ ಕಾರಣದಿಂದಲೇ ಬೆಂಕಿಯನಾಹುತದ ಗಲಾಟೆಯಲ್ಲಿ ಆಳುಗಳೆಲ್ಲ ಚದುರಿ ಓಡಿಹೋಗಿದ್ದಾಗ ಹರಿದಾಸ ಹೊರಗಡೆ ಓಡಿ ಬಂದು ತೋಟದಲ್ಲಿ ಸಂಪಿಗೆ ಮರದ ಕೆಳಗೆ ಬಿದ್ದಿದ್ದ ಕರವಸ್ತ್ರದ ಗಂಟನ್ನು ಕಂಡು ಕೂಡಲೇ ಗುರುತಿಸಿ ತೆಗೆದಿಟ್ಟುಕೊಂಡಿದ್ದ.

ಹರಿದಾಸನನ್ನ ಬನ್ವಾರಿಯು ಎದೆಗವಚಿಕೊಂಡು ಸ್ವಲ್ಪ ಹೊತ್ತು ಮಾತಿಲ್ಲದೆ ಇದ್ದ. ಕೆಲವು ಕ್ಷಣಗಳಾದ ಮೇಲೆ ಅವನ ಕಣ್ಣಿಂದ ಗಳಗಳನೆ ನೀರು ಸೋರತೊಡಗಿತು. ಅವನ ಮನಸ್ಸಿಗೆನ್ನಿಸಿತು–"ಅನೇಕ ದಿನಗಳ ಹಿಂದೆ ಅವನ ಹೊಸದಾಗಿ ಕೊಂಡುಕೊಂಡ ನಾಯನ್ನು ಪಳಗಿಸಲೋಸುಗ ಚಾಬೂಕೊಂದನ್ನು ತೆಗೆದುಕೊಂಡು ಅದರಿಂದ ಬಾರಿ ಬಾರಿಗೂ ನಾಯನ್ನು ಹೊಡೆಯುತ್ತಿದ್ದ. ಒಮ್ಮೆ ಹೇಗೋ ಚಾಬೂಕು ಕೈಗೆ ಸಿಗಲೇ ಇಲ್ಲ. ಎಲ್ಲೆಲ್ಲೂ ಹುಡುಕಿದ್ದಾಯಿತು. ಕಡೆಗೆ ಅದರ ಆಸೆಯನ್ನು ಬಿಟ್ಟು ಕೂತಿದ್ದಾಗ ಆ ನಾಯಿಯೇ ಚಾಬೂಕನ್ನು ಬಾಯಲ್ಲಿ ಕಚ್ಚಿಕೊಂಡು ಧಾವಿಸಿ ಅವನ ಬಳಿ ಮೌನವಾಗಿ ನಿಂತು ಪರಮಾನಂದದಿಂದ ಬಾರಿಬಾರಿಗೂ ಬಾಲವಲ್ಲಾಡಿಸಿತು. ಅವತ್ತಿನಿಂದ ಇನ್ನೆಂದೂ ಚಾಬೂಕನ್ನ ನಾಯ ಮೇಲೆ ಉಪಯೋಗಿಸಲೇ ಇಲ್ಲ ಬನ್ವಾರಿ.

ಬೇಗ ಬೇಗ ಕಣ್ಣೊರಸಿಕೊಂಡು ಬನ್ವಾರಿಯು "ಹರಿದಾಸೂ, ನಿನಗೇನು ಬೇಕು ಹೇಳು" ಎಂದ.

ಹರಿದಾಸನು ಒಡನೆಯೇ "ನನಗೆ ಆ ಕರ್‌ಚೀಫನ್ನು ಕೊಡಿ ದೊಡ್ಡಪ್ಪಾ" ಎಂದ. "ಬಾ, ನಿನ್ನನ್ನ ಹೆಗಲ ಮೇಲೆ ಹತ್ತಿಸುತ್ತೇನೆ" ಎಂದ ಬನ್ವಾರಿ. ಹರಿದಾಸನನ್ನ ಹೆಗಲ ಮೇಲೆ ಎತ್ತಿ ಕೂಡಿಸಿಕೊಂಡು ಬನ್ವಾರಿಯು ತತ್‌ಕ್ಷಣ ಅಂತಃಪುರದೊಳಗೆ ಹೋದ. ಮಲಗುವ ಕೋಣೆಗೆ ಹೋಗಿ ನೋಡಿದ. ಕಿರಣಳು ಇಡೀ ಹಗಲು ಜಮಖಾನೆಗಳನ್ನು ಹೊರಗಡೆ ಬಿಸಿಲಲ್ಲಿ ಹಾಕಿ ಈಗವುಗಳನ್ನು ಮತ್ತೆ ಒಳಗಡೆ ತಂದು ನೆಲದ ಮೇಲೆ ಹಾಸುತ್ತಿದ್ದಳು. ಬನ್ವಾರಿಯ ಹೆಗಲ ಮೇಲೆ ಹರಿದಾಸನನ್ನು ಕಂಡದ್ದೇ ಕಿರಣಳು ಗಾಬರಿಯಿಂದ ಗಟ್ಟಿಯಾಗಿ ಕೂಗುತ್ತ "ಅಯ್ಯೋ, ಬೀಳಿಸಿಬಿಟ್ಟೀರಿ ಅಂದ್ರೇ...ಇಳಿಸಿಬಿಡಿ ಕೂಸನ್ನ....ಇಳಿಸಿಬಿಡಿ ಹೇಳ್ತೀನೆ..." ಎಂದಳು.

ಬನ್ವಾರಿಯಾಗ ಕಿರಣಳ ಕಡೆ ಸ್ಥಿರದೃಷ್ಟಿಯಿಂದ ನೋಡುತ್ತ "ನನ್ನನ್ನ ಕಂಡರೆ ಹೆದರಬೇಡ ಇನ್ನು ಮೇಲೆ. ನಾನವನನ್ನ ಬೀಳಿಸುವುದಿಲ್ಲ" ಎಂದ.

ಹೀಗೆಂದು ಮೆಲ್ಲಗೆ ಹರಿದಾಸನನ್ನು ಕೆಳಗೆ ಇಳಿಸಿಬಿಟ್ಟು ಅವನನ್ನ ಕಿರಣಳ ತೊಡೆಯ ಮೇಲೆ ಕೂಡಿಸಲು ಕೈಚಾಚಿದ. ಆಮೇಲೆ ಆ ಕಾಗದಗಳ ಕಟ್ಟನ್ನು ಕಿರಣಳ ಕೈಯಲ್ಲಿ ಕೊಡುತ್ತ "ಇಕೋ, ಇದನ್ನ ಜೋಪಾನವಾಗಿಟ್ಟುಕೋ, ಇದು ಹರಿದಾಸನ ಆಸ್ತಿ ಪಾಸ್ತಿಯ ಸಂಬಂಧವಾದ ದಸ್ತಾವೇಜುಗಳು..." ಎಂದ.

ಕಿರಣಳು ಅಚ್ಚರಿಯಿಂದ 'ನಿಮಗೆಲ್ಲಿ ಸಿಕ್ಕಿತು ಇವು?" ಎಂದಳು.

"ನಾನವನ್ನು ಕದ್ದುಕೊಂಡು ಹೋಗಿದ್ದೆ." ಹೀಗೆಂದು ಹರಿದಾಸನನ್ನ ಮತ್ತೆ ತನ್ನ ಎದೆಯ ಮೇಲೆಳೆದುಕೊಂಡು "ತಗೋ, ಮಗೂ ತಗೊ, ನಿನಗೆ ನಿನ್ನ ದೊಡ್ಡಪ್ಪನ ಬೆಲೆಯಾದ ಆಸ್ತಿಯ ಮೇಲೆ ಆಸೆಯಾಯಿತಲ್ಲವೇ, ತಗೋ ಧಾರಾಳವಾಗಿ" ಎಂದು ಕರವಸ್ತ್ರವನ್ನು ಅವನ ಕೈಗೆ ಕೊಟ್ಟ.

ಆಮೇಲೆ ಇನ್ನೊಮ್ಮೆ ಕಿರಣಳ ಕಡೆ ಚೆನ್ನಾಗಿ ಕಣ್ಣಿಟ್ಟು ನೋಡಿದ.... ನೋಡಿದರೆ ಅಂದು ತೆಳ್ಳಗೆ ಬೆಳ್ಳಗೆ ಇದ್ದವಳು ಈಗ ಹಾಗಿಲ್ಲ. ಯಾವಾಗ ಅವಳು ದಪ್ಪವಾದಳೋ ಅವನ ಗಮನಕ್ಕೇ ಬಂದಿರಲಿಲ್ಲ. ಇಷ್ಟು ದಿನಗಳಾದ ಮೇಲೆ, ಹಾಲದಾರ ಕುಟುಂಬದ ದೊಡ್ಡ ಸೊಸೆಯಾಗುವುದಕ್ಕೆ ಯೋಗ್ಯತೆಯಾಗುವಂತೆ ತಕ್ಕ ಚಹರೆ, ಮೈಕಟ್ಟನ್ನು ಅವಳು ಪಡೆದಿದ್ದಾಳೆ. ಇನ್ನೇಕೆ, ಈಗ ಅಮರುಶತಕದ ಕವಿತೆಗಳು ? ಅವುಗಳನ್ನೂ ಬನ್ವಾರಿಯ ಬೇರೆಲ್ಲ ಸಂಪತ್ತಿನ ಜೊತೆಯಲ್ಲೇ ವಿಸರ್ಜನೆ ಮಾಡುವುದೇ ಒಳ್ಳೆಯದು.

ಅದೇ ರಾತ್ರಿ ಬನ್ವಾರಿಯು ಎಲ್ಲೂ ಕಂಡುಬರಲಿಲ್ಲ. ಕೇವಲ ಒಂದೇ ಒಂದು ಪಂಕ್ತಿ ಕಾಗದದಲ್ಲಿ ಬರೆದಿಟ್ಟು ಹೋಗಿದ್ದ – "ನೌಕರಿ ಹುಡುಕಿಕೊಂಡು ಹೊರಹೊರಟಿದ್ದೇನೆ" ಎಂದು.

ತಂದೆಯ ಶ್ರಾದ್ಧವಾಗುವವರೆಗೂ ಅವನು ಕಾಯಲೇ ಇಲ್ಲ. ಆ ಪ್ರಾಂತದ ಜನರೆಲ್ಲ ಇದರ ಬಗ್ಗೆ ಅವನನ್ನ ನಾನಾ ವಿಧವಾಗಿ ಹೀಯಾಳಿಸಿ ಆಡಿಕೊಳ್ಳತೊಡಗಿದರು.

೭. ಹೈಮಂತಿ

ಕನ್ಯೆಯ ತಂದೆ ಸ್ವಲ್ಪ ಕಾಲವಿಳಂಬವಾದರೂ ತಡೆಯಲು ಸಿದ್ಧವಾಗಿದ್ದ. ಆದರೆ ವರನ ತಂದೆ ತಡೆಯಲು ಇಷ್ಟಪಡಲಿಲ್ಲ. ಆತ ನೋಡಿದ. ಹುಡುಗಿಗೆ ಮದುವೆ ವಯಸ್ಸು ಮೀರಿಹೋಗಿದೆ, ಮತ್ತು ಇನ್ನು ಕೆಲವು ದಿನ ಕಳೆದರೆ, ಸಭ್ಯವಾಗಲಿ ಅಸಭ್ಯವಾಗಲಿ, ಯಾವುದೇ ರೀತಿಯಲ್ಲಿ ಮುಚ್ಚಿಡಲಾಗದ ಸಮಯವನ್ನು ಅದು ದಾಟಿಹೋಗುತ್ತದೆ. ಹುಡುಗಿಯ ವಯಸ್ಸು ಹೇಳದೆ ಕೇಳದೆ ಮುಂದಕ್ಕೆ ಹೋಗುತ್ತಲಿದ್ದರೂ ವರದಕ್ಷಿಣೆಯ ಮೊತ್ತ ಇನ್ನೂ ಆ ವಯಸ್ಸಿಗಿಂತಲೂ ಸ್ವಲ್ಪ ಮೇಲೆಯೇ ಇದೆ. ಆದರೆ ಹಾಗೆ ಹೆಚ್ಚುಕಾಲ ಇರಲು ಸಾಧ್ಯವಿಲ್ಲ. ಆದ್ದರಿಂದಲೇ ಅಷ್ಟು ಅವಸರ, ವರನ ಕಡೆಯವರಿಗೆ.

ಆ ವರ ಬೇರೆ ಯಾರೂ ಅಲ್ಲ, ನಾನೇ. ಆದರೆ ಮದುವೆ ವಿಷಯದಲ್ಲಿ ನನ್ನ ಬೇಕು, ಬೇಡಗಳನ್ನು ಕೇಳುವವರು ಯಾರು ? ನನ್ನ ಕೆಲಸ ನಾನು ಮಾಡಿದ್ದೇನೆ – ಎಫ್.ಎ. ಪಾಸು ಮಾಡಿ ವಿದ್ಯಾರ್ಥಿ ವೇತನವನ್ನು ಪಡೆದಿದ್ದೇನೆ. ಆದಕಾರಣ ಪ್ರಜಾಪತಿ ಬ್ರಹ್ಮನ ಎರಡು ಪಕ್ಷದವರೂ, ಕನ್ಯಾಪಕ್ಷ, ಮತ್ತು ವರಪಕ್ಷ ಆತುರಪಡಹತ್ತಿದರು.

ನಮ್ಮ ದೇಶದಲ್ಲಿ ಒಂದು ಸಲ ಮದುವೆ ಮಾಡಿಕೊಂಡವರು ಮತ್ತೆ ಲಗ್ನದ ವಿಷಯದಲ್ಲಿ ಯಾವ ವಿಧವಾದ ಉದ್ವೇಗವನ್ನೂ ಅನುಭವಿಸುವುದಿಲ್ಲ. ಯಾವ ಹೆದರಿಕೆಯೂ ಇಲ್ಲದೆ ಮುನ್ನುಗ್ಗುವರು. ಅಷ್ಟೇಕೆ ಇನ್ನೂ ಹೆಚ್ಚು ಆತುರಪಡುವರು. ನರಮಾಂಸದ ರುಚಿ ತಿಳಿದ ಹುಲಿಯಂತೆ ಹೆಣ್ಣೆಂದರೆ ನಾಲಗೆ ಚಪ್ಪರಿಸುತ್ತ ಇರುತ್ತಿದ್ದರು. ಅವಸ್ಥೆ ಹೇಗಾದರಿರಲಿ, ವಯಸ್ಸು ಎಷ್ಟೇ ಆಗಿರಲಿ, ಹೆಂಡತಿಯ ಅಭಾವವಾದ ಕೂಡಲೇ, ಆ ಅಭಾವವನ್ನು ನಿವಾರಣೆಮಾಡಲು ಯಾವ ಸಂಕೋಚವನ್ನೂ ಪಡುತ್ತಿರಲಿಲ್ಲ. ಈಗಿನ ಕಾಲದ ನವ ಯುವಕರು ತಮ್ಮ ಮದುವೆ ಪ್ರಸ್ತಾಪದಲ್ಲಿ ತೋರುತ್ತಾರಲ್ಲ ಆ ಸಂಕೋಚ, ಆ ಅನುಮಾನ ಇರುತ್ತಿರಲಿಲ್ಲ, ಆ ಹುಡುಗರ ಪಿತೃಪಕ್ಷದವರಿಗೂ ಮದುವೆಯ ಪ್ರಸ್ತಾಪ ಎಷ್ಟು ಬಾರಿ ಮಾಡಿದರೂ ಅಷ್ಟಕ್ಕಷ್ಟು ಅವರ ನರೆತ ಕೂದಲು ಮತ್ತೆ ಕರಿಗೂದಲಾಗುತ್ತ ಹೋಗುತ್ತಿತ್ತು –

(ಅಂದರೆ ಪೇಟೆಯಲ್ಲಿ ದೊರೆಯುವ ಬಣ್ಣದ ಆಶೀರ್ವಾದದಿಂದ). ಆದರೆ ಈಗಿನ ಹುಡುಗರದ್ದೋ, ಮದುವೆಯ ಮಧ್ಯಸ್ಥಗಾರರು ಹತ್ತಿರ ಬಂದೊಡನೆ – ಅವರ ಕರಿಗೂದಲು ನರೆಯಲು ತೊಡಗುತ್ತದೆ. ನನ್ನ ವಿಷಯವಾಗಿ ಸತ್ಯವಾಗಿ ಹೇಳುವುದಾದರೆ, ನನಗೆ ಆ ತರಹೆ ಉದ್ವೇಗವಾವುದೂ ಬರಲಿಲ್ಲ. ಅದಕ್ಕೆ ಬದಲಾಗಿ ಮದುವೆ ಪ್ರಸ್ತಾಪದಿಂದಲೇ ನನ್ನ ಹೃದಯದ ಮಧ್ಯೆ ವಸಂತದ ತಂಗಾಳಿ ಬೀಸತೊಡಗಿತು. ಕುತೂಹಲಾವಿಷ್ಟವಾದ ಕಲ್ಪನೆಯು ಸೃಷ್ಟಿಸಿದ ಕುಡಿಗಳ ನಡುವೆ ಸಂಭ್ರಮದ ಸೊಲ್ಲು ದನಿಸತೊಡಗಿತು. – ಆದರೆ ಎಂತಹ ನಗುಪಾಟಲು ! ಬರ್ಕನ ಫ್ರೆಂಚ್ ರೆವೊಲ್ಯೂಷನ್ (ಪಠ್ಯಪುಸ್ತಕ) ನೋಟ್ಸನ್ನು ಐದಾರು ಪುಟಗಳಷ್ಟು ಪೂರ್ತಿಯಾಗಿ ಬಾಯಿಪಾಠ ಮಾಡಬೇಕಾಗಿದ್ದವನಿಗೆ, ಇಂಥ ಭ್ರಮೆ ಬಂದರೆ ಅದು ಕ್ಷಮಿಸತಕ್ಕಂಥದಲ್ಲ.

ಇದಂತೂ ವಿದ್ಯಾರ್ಥಿಗಳಿಗೆ ಒಳ್ಳೆಯ ಮಾದರಿಯಲ್ಲ. ಸದ್ಯ, ನನ್ನ ಈ ಲೇಖನ ಟೆಕ್ಸ್ಟ್ ಬುಕ್ ಕಮಿಟಿಯವರ ಒಪ್ಪಿಗೆ ಪಡೆಯಬೇಕಾದ ಅಗತ್ಯವಿಲ್ಲ.... ಹಾಗಿದ್ದಿದ್ದರೆ ಸ್ವಲ್ಪ ಎಚ್ಚರಿಕೆ ವಹಿಸುತ್ತಿದ್ದೆ.

ಅರೆ, ಏನು ಮಾಡಲು ಹೊರಟು ಏನು ಮಾಡುತ್ತಿದ್ದೇನೆ ? ಕಥೆ ಹೇಳಲು ಹೊರಟವನು ಕಾದಂಬರಿಯನ್ನಾರಂಭಿಸಿಬಿಟ್ಟೆನಲ್ಲ ! ಈ ರಾಗದಲ್ಲಿ ನನ್ನ ಬರವಣಿಗೆ ಓಡುತ್ತದೆಂದು ನನಗೆ ಹೇಗೆ ಗೊತ್ತು ? ಈಚಿನ ಕೆಲವು ವರುಷಗಳಿಂದ ರಾಶಿಗೂಡಿದ್ದ ನೋವಿನ ಮೋಡಗಳನ್ನು ವೈಶಾಖದ ಸಂಜೆಯ ಬಿರುಗಾಳಿ, ಮಳೆಗಳಂತೆ ಲೇಖನದ ದೊಡ್ಡ ಮಳೆಗರೆಯಿಸಿ ಗುರುತಿಲ್ಲದ ಹಾಗೆ ಅಳಿಸಿಹಾಕಿಬಿಡಬೇಕೆಂದು ಅಂದುಕೊಂಡಿದ್ದೆ. ಆದರೆ ನನ್ನಲ್ಲೆಲ್ಲಿದೆ ಆ ಕೌಶಲ ? ಬಂಗಾಳಿಯ ಬಾಲಬೋಧೆಯನ್ನು ಬರೆಯುವಷ್ಟು ಕೂಡ ಇಲ್ಲ ಬುದ್ಧಿವಂತಿಕೆ – ಏಕೆಂದರೆ ಸಂಸ್ಕೃತದ ಮುಗ್ಧ ಬೋಧ ವ್ಯಾಕರಣ ನಾನು ಓದಿಲ್ಲ. ಇನ್ನು ಕಾವ್ಯರಚನೆ ನನ್ನ ಕೈಯಲ್ಲಿ ಹೇಗಾದೀತು ? ನನ್ನ ತಾಯ್ನುಡಿ ನನ್ನ ಒಣ ಎದೆಯಲ್ಲಿ ಮೊಳೆದು ಹೂ ಬಿಟ್ಟಿದ್ದರೆ ತಾನೇ ಆ ಜಾಣತನ ? ಆಗ ನಾನು ನನ್ನ ಒಳಗಣ ನೋವು, ಹಂಬಲುಗಳನ್ನೆಲ್ಲಾ ಹೊರಗೆಳೆದು ರೂಪಿಸಬಹುದಾಗಿತ್ತು. ಆದುದರಿಂದಲೇ ಇರಬಹುದು – ನನ್ನ ಅಂತರ್ಯದೊಳಗಣ ಸ್ಮಶಾನಚಾರಿಯಾದ ಸಂನ್ಯಾಸಿಯು ಅಟ್ಟಹಾಸ ಮಾಡುತ್ತ ತನ್ನನ್ನ ತಾನೇ ಅಣಕಿಸುತ್ತ ಕೂತಿದ್ದಾನೆ. ಅಣಕಿಸದೆ ಇದ್ದರೆ ವಿಧಿಯಿಲ್ಲ. ಅಳೋಣವೆಂದರೆ ಕಣ್ಣೀರೆಲ್ಲ ಬತ್ತಿಹೋಗಿದೆ. ಜ್ಯೇಷ್ಠ ಮಾಸದ ಉರಿಬಿಸಿಲೇ ಜ್ಯೇಷ್ಠದ ಕಂಬನಿಯಿಲ್ಲದ ರೋದನ !

ಯಾವುದೆಲ್ಲಾದರೂ ಹೋಗಲಿ, ಮುಖ್ಯ ವಿಷಯ ಹೇಳೋಣ. ನನ್ನ ಕೈ ಹಿಡಿದಿದ್ದವಳೊಬ್ಬಳಿದ್ದಳು. ಅವಳ ನಿಜವಾದ ಹೆಸರನ್ನು ಈಗ ಹೇಳಲಾರೆ. ಕಾರಣ, ಪೃಥಿವಿಯ ಇತಿಹಾಸ ಬರೆಯುವಾಗ ಅವಳ ಹೆಸರಿನ ಸಂಬಂಧವಾಗಿ ಯಾವ

ಪ್ರಾಕ್ತನ ತತ್ತ್ವ ವಿಮರ್ಶಕರೂ ಚರ್ಚಿಸುವ ಪ್ರಮೇಯ ಬರಲಿಕ್ಕಿಲ್ಲ. ಅವಳ ಹೆಸರು ಬೇರೆ ಯಾವ ತಾಮ್ರಶಾಸನದ ಮೇಲೆಯೂ ಕೆತ್ತಲ್ಪಟ್ಟಿಲ್ಲ ; ಕೇವಲ ನನ್ನ ಎದೆಯೊಳಗೆ ! ಯಾವ ಕಾಲದಲ್ಲಾದರೂ ಆ ಎದೆಯ ಪುಟವೂ, ಆ ಹೆಸರೂ ಅಳಿಸಿಹೋಗುವಂಥ ಸಂದರ್ಭ ಬರಬಹುದೆಂದು ನಾನು ಊಹಿಸಲೂ ಸಾಧ್ಯವಿಲ್ಲ. ಆದರೆ ಯಾವ ಸಾವರಿಯದ ಲೋಕದಲ್ಲಿ ಅದು ಅಕ್ಷಯವಾಗಿ ಉಳಿಯುತ್ತದೋ ಅಲ್ಲಿ ಐತಿಹಾಸಿಕ ಅನ್ವೇಷಕರಿಗೆ ಪ್ರವೇಶವಿಲ್ಲ.

ಎಷ್ಟಾದರೂ ನನ್ನ ಈ ಬರವಣಿಗೆಯಲ್ಲಿ ಅವಳಿಗೇನಾದರೊಂದು ಹೆಸರು ಬೇಕು. ಸರಿ, ಹಾಗಾದರೆ, ಅವಳನ್ನ ಶಿಶಿರ ಎಂದು ಕರೆಯೋಣ. ಶಿಶಿರ ಅಂತಲೇ ಏಕೆಂದರೆ, ಶಿಶಿರ ಋತುವಿನಲ್ಲಿ ನಗು, ಅಳುಗಳು ಒಂದಾಗಿ ಹೋಗುತ್ತವೆ. ಮತ್ತು ಶಿಶಿರದಲ್ಲಿ ಮುಂಜಾನೆ ವೇಳೆಯು ಮಾತು ಮುಗಿಯುವ ಹೊತ್ತಿಗೆ ಬೆಳಗಾಗಿರುವುದೆಂದೆನ್ನಿಸುವುದು.

ಶಿಶಿರಳು ನನಗಿಂತಲೂ ಕೇವಲ ಎರಡೇ ಎರಡು ವರುಷ ಕಿರಿಯಳು. ಹಾಗೆಂದರೆ ನಮ್ಮಪ್ಪನಿಗೆ ಬೆಳೆದ ಹುಡುಗಿಯರ ಬಗ್ಗೆ ಆಕ್ಷೇಪಣೆಯಿರಲಿಲ್ಲವೆಂದಲ್ಲ. ಆತನ ತಂದೆ ಅತಿ ಉಗ್ರ ಸಮಾಜ ವಿದ್ರೋಹಿಯಾಗಿದ್ದರಂತೆ. ದೇಶದಲ್ಲಿ ಪ್ರಚಲಿತವಾಗಿದ್ದ ಧರ್ಮ, ಕರ್ಮಗಳಲ್ಲಿ ಅವರಿಗೆ ಸ್ವಲ್ಪವೂ ಆಸ್ಥೆಯಿರಲಿಲ್ಲ. ಅವರು ಇಷ್ಟದಿಂದ ಇಂಗ್ಲಿಷನ್ನ ಓದಿಕೊಂಡಿದ್ದರು. ಆದರೆ ಅವರ ಮಗ, ನಮ್ಮಪ್ಪ ಮಾತ್ರ ಅವರಿಗೆ ಪ್ರತಿಯಾಗಿ ಉಗ್ರವಾದ ಸಮಾಜ ಅನುಯಾಯಿಗಳಾಗಿದ್ದರು. ನಮ್ಮ ಸಮಾಜದಲ್ಲಿ ಅವರು ಒಪ್ಪದಿರುವಂಥದನ್ನು ಕಣ್ಣಲ್ಲಿ ಕಣ್ಣಿಟ್ಟು ಹುಡುಕಬೇಕಾಗುವುದು. ಅವರೂ ಚೆನ್ನಾಗಿ ಇಂಗ್ಲಿಷ್ ಅಭ್ಯಾಸ ಮಾಡಿದ್ದವರೇ. ಆದರೆ ನಮ್ಮ ತಾತ ಯಾವುದನ್ನು ಪ್ರಬಲವಾಗಿ ವಿರೋಧಿಸುತ್ತಿದ್ದರೋ ನಮ್ಮ ತಂದೆ ಅದನ್ನಷ್ಟೇ ಪ್ರಬಲವಾಗಿ ಅನುಸರಿಸುತ್ತಿದ್ದರು. ಇಬ್ಬರ ಆಚರಣೆಯೂ ಸರಳವಲ್ಲ, ಸ್ವಾಭಾವಿಕವಲ್ಲ. ಬರೇ ಹಠಕ್ಕಾಗಿ ಮಾಡುವ ಆಟ. ಹೀಗಿದ್ದರೂ ಅಪ್ಪ ಬೆಳೆದ ಹುಡುಗಿಯನ್ನು ಮಗನಿಗೆ ತಂದುಕೊಳ್ಳುವುದಕ್ಕೆ ಮುಖ್ಯ ಕಾರಣ, ಹುಡುಗಿಯ ವಯಸ್ಸು ಜಾಸ್ತಿ ಎಂಬ ನೆಪದಲ್ಲಿ ವರದಕ್ಷಿಣೆ ಹಣವೂ ಹೆಚ್ಚು ಎಂಬ ಆಸೆ. ಶಿಶಿರಳು ನನ್ನ ಮಾವನಿಗೆ ಒಬ್ಬಳೇ ಮಗಳು. ಹುಡುಗಿಯ ತಂದೆಯ ಆಸ್ತಿ, ಸಂಪತ್ತೆಲ್ಲಾ ಅಳಿಯನ ಭವಿಷ್ಯತ್ತನ್ನು ಭದ್ರವಾಗಿ ಕಾಪಾಡುತ್ತದೆಂದು ನಮ್ಮಪ್ಪನ ನಂಬಿಕೆ.

ನಮ್ಮ ಮಾವನ ಪ್ರಕೃತಿಯೇ ಬೇರೆ. ಆತನಿಗೆ ಯಾವುದೊಂದು ವಿಶೇಷ ತತ್ತ್ವದ ಭೂತವೂ ಹಿಡಿದಿರಲಿಲ್ಲ. ಆತ ಪಶ್ಚಿಮ ಪ್ರಾಂತದ ಬೆಟ್ಟಗಾಡಿನ ಯಾವುದೋ ರಾಜನ ಸರ್ಕಾರದಲ್ಲಿ ದೊಡ್ಡದೊಂದು ಉದ್ಯೋಗ ನಡೆಸುತ್ತಿದ್ದರು. ಶಿಶಿರಳಿನ್ನೂ ತೊಡೆಯ ಮೇಲಿನ ಕೂಸಾಗಿದ್ದಾಗಲೇ ತಾಯಿ ತೀರಿಕೊಂಡಿದ್ದಳು. ಮಗಳು ವರುಷವಾದ ಮೇಲೆ ವರುಷ ಬೆಳೆಯುತ್ತ ದೊಡ್ಡವಳಾಗುತ್ತಿದ್ದಾಳೆಂಬ ಸಂಗತಿ

ನಮ್ಮ ಮಾವನ ಗೋಚರಕ್ಕೆ ಬರಲೇ ಇಲ್ಲ. ಅವರಿದ್ದ ಸ್ಥಳದಲ್ಲಿ ಆ ಸಂಗತಿಯನ್ನು ಬೆರಳು ತೋರಿಸಿ ಅವರ ದೃಷ್ಟಿಗೋಚರ ಮಾಡುವಂಥವರೂ ಇರಲಿಲ್ಲ.

ಶಿಶಿರಳಿಗೆ ಕ್ರಮೇಣ ಹದಿನಾರು ವರುಷಗಳಾದುವು. ಆದರೆ ಅದು ಪ್ರಕೃತಿಯ ಪ್ರಕಾರ ಹದಿನಾರು... ಸಮಾಜದ ಪ್ರಕಾರ ಹದಿನಾರಲ್ಲ. ಯಾರೂ ಅವಳ ಗಮನವನ್ನು ಅವಳ ವಯಸ್ಸಿನ ಕಡೆ ಸೆಳೆದು ಎಚ್ಚರಿಕೆ ಕೊಡುವವರು ಇಲ್ಲದಿದ್ದರಿಂದ ಅವಳಿಗೂ ಅದು ಗಮನಕ್ಕೆ ಬರಲಿಲ್ಲ.

ನಾನಾಗ ಕಾಲೇಜಿನಲ್ಲಿ ಎಫ್.ಎ. ಪಾಸ್ ಮಾಡಿ, ಮೊದಲನೆ ಬಿ.ಎ. ವರ್ಗಕ್ಕೆ ಭರ್ತಿಯಾಗಿದ್ದೆ. ವಯಸ್ಸು ಹತ್ತೊಂಬತ್ತು. ಇಂಥ ಸಮಯದಲ್ಲಿ ನನ್ನ ಮದುವೆ ಆಯಿತು. ನನ್ನ ವಯಸ್ಸು ಸಮಾಜದ ಅಭಿಪ್ರಾಯದಲ್ಲಿ ಅಥವಾ ಸಮಾಜ ಸುಧಾರಕರ ಅಭಿಪ್ರಾಯದಲ್ಲಿ ತಕ್ಕುದಲ್ಲವೇ ಹೌದೇ ಎಂಬುದರ ಬಗ್ಗೆ ಅವರುಗಳು ಎರಡು ಪಕ್ಷದವರೂ ವಾಗ್ವಾದ ಮಾಡಿಕೊಂಡು ಸಾಯಲಿ. ಆದರೆ ನಾನಿಷ್ಟು ಮಾತ್ರ ಹೇಳುತ್ತೇನೆ. ಪರೀಕ್ಷೆ ಪಾಸು ಮಾಡುವುದಕ್ಕೆ ಆ ವಯಸ್ಸು ಎಷ್ಟು ತಕ್ಕದಾಗಿದ್ದರೂ ಮದುವೆ ಮಾಡಿಕೊಳ್ಳುವುದಕ್ಕಂತೂ ಸ್ವಲ್ಪವೂ ಕಡಿಮೆ ಯೋಗ್ಯತೆಯುಳ್ಳದ್ದಲ್ಲ.

ಮದುವೆಯ ಅರುಣೋದಯವಾದುದು ಒಬ್ಬ ಫೋಟೋಗ್ರಾಫರಿನ ಬೆಳಕಿನ ನೆರವಿನಿಂದ. ಪುಸ್ತಕ ಬಾಯಿಪಾಠ ಮಾಡಿಕೊಳ್ಳುತ್ತಿದ್ದೆ. ಒಬ್ಬ ಹುಡುಗಾಟಿಕೆಯ ಗೆಳೆಯ ಬಂದು ನನ್ನ ಮೇಜಿನಮೇಲೊಂದು ತಸಬೀರನ್ನಿಟ್ಟು "ಇನ್ನು ಮೇಲೆ ಸರಿಯಾಗಿ ಓದಿ–ಸತ್ಯವಾದ ಓದನ್ನ. ಮೈ, ಮನಸ್ಸು ಎಲ್ಲಾ ಮುಳುಗಿಸಿ ಓದು." ಎಂದ.

ಆ ಫೋಟೋ–ಯಾರೋ ಪಳಗಿಲ್ಲದ ಕೆಲಸಗಾರರು ತೆಗೆದ ಚಿತ್ರ. ತಾಯಿಲ್ಲದ ಹುಡುಗಿ... ಯಾರೂ ಅವಳ ಕೂದಲನ್ನ ಬಾಚಿ ಎತ್ತಿ ತುರುಬು ಕಟ್ಟಿ ಜರಿ ತಗುಲಿಸಿ ಸಾಹಾ ಅಥವಾ ಮಲ್ಲಿಕ್ ಕಂಪೆನಿಯ ಫಳಫಳ ಹೊಳೆಯುವ ಜಾಕೆಟ್ಟು ತೊಡಿಸಿ ವರನ ಕಡೆಯವರಿಗೆ ಮಂಕುಬೂದಿಯೆರಚಲು ಪ್ರಯತ್ನ ಮಾಡಿದಂತಿಲ್ಲ. ಅತಿ ಸಾಮಾನ್ಯವಾದ ದೊಡ್ಡ ಮುಖ–ಸಾಧಾರಣವಾದ ದೊಡ್ಡ ಕಣ್ಣುಗಳು. ಉಟ್ಟಿದ್ದುದೂ ಸಾಧಾರಣವಾದೊಂದು ಸೀರೆ. ಆದರೆ ಎಲ್ಲ ಸೇರಿ ಯಾವುದೋ ಒಂದು ಆಕರ್ಷಣವಿತ್ತು. ಅದಾವುದೆಂದು ನಾನು ವರ್ಣಿಸಲಾರೆ, ಯಾವುದೋ ಒಂದು ನಮೂನೆ ಕುರ್ಚಿಯ ಮೇಲೆ ಕೂತುಕೊಂಡಿದ್ದಳು. ಅವಳ ಕುರ್ಚಿಯ ಹಿಂದೆ ಚಚ್ಚೌಕದ ಮನೆಗಳುಳ್ಳ ಪಟ್ಟೆ ಪಟ್ಟೆ ಬಣ್ಣದ ಪರದೆ ತೂಗಹಾಲ್ಪಟ್ಟಿತ್ತು. ಮಗ್ಗುಲಲ್ಲಿ ಪೀಪಾಯಿಯ ಮೇಲೊಂದು ಹೂದಾನಿಯಲ್ಲಿ ಹೂದಂಡೆಗಳ ತೋಡಾ. ಮತ್ತು ಕೆಳಗೆ ಹಾಸಿದ್ದ ಜಮಖಾನದ ಮೇಲೆ ಅವಳ ಸೀರೆಯ ಡೊಂಕು ಡೊಂಕಾದ ನಿರಿಗೆ ಹಾಕಿದ್ದ ಅಂಚಿನ ತಳಗಡೆ ಕಾಣುತ್ತಿದ್ದ ಅವಳ ತೆಳುವಾದ ಎಳೆಯ ಪಾದಗಳು.

ತಸಬೀರಿನ ಮುಖದ ಮೇಲೆ ನನ್ನ ಮನಸ್ಸಿನ ಬಂಗಾರದ ಕೋಲು ಸ್ಪರ್ಶ ಮಾಡಿದಾಗ ಅದು ನನ್ನ ಬಾಳುವೆಯ ನಡುವೆ ಜಾಗರಿತವಾಗೆದ್ದಿತು. ಅವೆರಡು ಕಪ್ಪನೆಯ ದೊಡ್ಡ ಕಣ್ಣುಗಳು ನನ್ನ ಭಾವನೆಗಳೆಲ್ಲದರ ನಡುವೆಯಿಂದ ಅದು ಹೇಗೋ ನನ್ನ ಕಡೆಯೇ ನೋಡಹತ್ತಿದುವು. ಮತ್ತು ಆ ಡೊಂಕಾದ ನಿರಿಗೆಯಂಚಿನ ತಳಗಡೆಯ ಆ ಸುಂದರವಾದ ಪಾದಗಳೆರಡೂ ನನ್ನ ಹೃದಯವನ್ನೇ ತಮ್ಮ ಪದ್ಮಾಸನವಾಗಿ ಮಾಡಿಕೊಂಡುವು.

ಜೋಯಿಸರು ಪಂಚಾಂಗ ತಿರುವಿಹಾಕತೊಡಗಿದರು. ಎರಡು, ಮೂರು, ಲಗ್ನಗಳು ಕಳೆದುಹೋಗಿದ್ದುವು. ಈ ಕಡೆ ಮಾವನಿಗೋ ರಜ ಸುಲಭವಾಗಿ ಸಿಕ್ಕುವಂತಿಲ್ಲ. ನನಗೋ, ಇನ್ನು ನಾಲ್ಕೈದು ತಿಂಗಳಾದರೆ ಹತ್ತೊಂಬತ್ತು ಹೋಗಿ ಇಪ್ಪತ್ತಾಗಿಬಿಡುತ್ತದೆ. ಅಲ್ಲಿಯವರೆಗೆ ನಾನು ಕಾಯುವುದು ಹೇಗೆ? ನನ್ನ ಮಾವನ ಮೇಲೂ ಆತನಿಗೆ ರಜ ಕೊಡಲಾಗದ ಅಧಿಕಾರಿಗಳ ಮೇಲೂ ನನ್ನ ಕೋಪ ತಿರುಗಿತು.

ಹೇಗೋ ಅಂತೂ ಅಪ್ರಶಸ್ತವಾದ ಸಮಯ ದಾಟಿದೊಡನೆ ಒಂದು ಹತ್ತಿರದ ಶುಭಲಗ್ನ ಗೊತ್ತಾಯಿತು. ಆ ಮಂಗಳ ದಿನದ ಮಂಗಳವಾದ್ಯದ ಪ್ರತ್ಯೇಕ ಸ್ವರ, ತಾನಗಳು ಈಗಲೂ ನನ್ನ ಮನಸ್ಸಿನಲ್ಲಿ ಮಾರ್ದನಿಗೈಯುತ್ತಿವೆ. ಆ ಶುಭದಿನದ ಪ್ರತ್ಯೇಕ ಗಳಿಗೆಯನ್ನೂ ನಾನು ನನ್ನ ಇಡೀ ಚೈತನ್ಯದಿಂದ ಸ್ಪರ್ಶಮಾಡಿದ್ದೇನೆ. ಆ ನನ್ನ ಹತ್ತೊಂಬತ್ತನೇ ವರುಷ ನನ್ನ ಬಾಳುವೆಯಲ್ಲಿ ಅಕ್ಷಯವಾಗಿರಲಿ.

ಮದುವೆಯಂಗಳದಲ್ಲಿ ನಾಲ್ಕೂ ಕಡೆ ಕೋಲಾಹಲ, ಆ ಕೋಲಾಹಲದಲ್ಲೇ ಕನ್ಯೆಯ ಕೋಮಲವಾದ ಕೈ ನನ್ನ ಕೈ ಮೇಲೆ ಇಡಲ್ಪಟ್ಟಿತು. ಇಂತಹ ಅಚ್ಚರಿ ಬೇರೆ ಯಾವುದಿದ್ದೀತು? ನನ್ನ ಮನಸ್ಸು ಬಾರಿ ಬಾರಿಗೂ "ಅಂತೂ ನಾನಿವಳನ್ನ ಪಡೆದೆ, ಪಡೆದೇಬಿಟ್ಟೆ" ಎಂದು ಹೇಳತೊಡಗಿತು.

ಯಾರನ್ನು ಪಡೆದದ್ದು? ಇವಳು ಇಷ್ಟು ದುರ್ಲಭಳು... ಇವಳೆಂತಹ ಮಹಾ ಮಾನವಿ.. ಇವಳ ರಹಸ್ಯಕ್ಕೇನಾದರೂ ಕೊನೆಯಿದೆಯೆ?

ನನ್ನ ಮಾವನ ಹೆಸರು ಗೌರೀಶಂಕರ. ಅವರು ಹಿಮಾಲಯದ ತಪ್ಪಲಲ್ಲಿ ವಾಸಮಾಡುತ್ತಿದ್ದುದು. ಆ ಹಿಮಾಲಯವೇ ಅವರ ಜೀವಂತ ಗೆಳೆಯ. ಆತನ ಗಾಂಭೀರ್ಯದ ಶಿಖರ ಪ್ರದೇಶದಲ್ಲಿ ಸ್ಥಿರ ಹಾಸ್ಯದ ಶುಭ್ರ ಲೇಪವೊಂದು ಸದಾ ಕಾಣುತ್ತಿತ್ತು. ಮತ್ತು ಆತನ ಹೃದಯದೊಳಗಡೆ ಸ್ನೇಹದ ಕಾರಂಜಿಯೊಂದು ಇತ್ತು. ಆ ಕಾರಂಜಿಯ ಪರಿಚಯವುಂಟಾದವರೆಂದೂ ಆತನನ್ನ ಬಿಟ್ಟಿರಲು ಆಶಿಸುತ್ತಿರಲಿಲ್ಲ.

ತಮ್ಮ ಕರ್ಮಸ್ಥಳಕ್ಕೆ ಮರಳುವ ಮುನ್ನ ನನ್ನ ಮಾವ ನನ್ನನ್ನ ಕರೆದು "ಅಪ್ಪಾ, ನನ್ನ ಮಗಳನ್ನ ನಾನು ಹದಿನೇಳು ವರುಷಗಳಿಂದಲೂ ಬಲ್ಲೆ. ನಿನ್ನನ್ನ ಈ ಕೆಲವು ದಿನಗಳಿಂದೀಚೆಗೆ ಮಾತ್ರ ಅರಿತಿರುವುದು. ಆದರೂ ನಾನಿವಳನ್ನ ನಿನ್ನ ಕೈಗಳಲ್ಲಿ ಬಿಟ್ಟುಹೋಗುತ್ತಿದ್ದೇನೆ. ನಾನು ನಿನಗೆ ಈಗ ಕೊಟ್ಟಿರುವ ಧನದ ಬೆಲೆಯನ್ನು ನೀನು ಬೇಗ ತಿಳಿದುಕೊಳ್ಳುವ ಹಾಗಾಗಲಿ–ಎಂಬುದೊಂದೇ ನನ್ನ ಆಶೀರ್ವಾದ. ಅದರ ಮೇಲೆ ಬೇರೇನೂ ಇಲ್ಲಪ್ಪಾ" ಎಂದರು.

ಆಗವರಿಗೆ ಬೀಗ, ಬೀಗಿತಿಯವರೆಲ್ಲ ಸೇರಿ ಆಶ್ವಾಸನೆ ಕೊಟ್ಟರು. "ನೀವು ಯಾವ ಚಿಂತೆಯನ್ನೂ ಇಟ್ಟುಕೊಳ್ಳಬೇಡಿ. ನಿಮ್ಮ ಮಗಳು ತಂದೆಯನ್ನು ಅಗಲಿ ಬಂದಿದ್ದರೂ ನಮ್ಮ ಮನೆಯಲ್ಲಿ ಅದಕ್ಕೆ ಬದಲಾಗಿ ಬೇರೆ ತಂದೆ, ತಾಯಿಯರನ್ನು ಪಡೆದಿರುತ್ತಾಳೆ," ಎಂದರು.

ಅದಾದ ಅನಂತರ ಮಾವನವರು ಮಗಳನ್ನು ಬೀಳ್ಕೊಟ್ಟು ಹೊರಡುವಾಗ ನಕ್ಕರು. "ಏ ಬೂಡಿ, (ಬೂಡಿ ಎಂದು ಮುದ್ದು ಹೆಸರು) ಹೊರಟೆನಮ್ಮಾ. ನಿನ್ನ ಈ ಏಕಮಾತ್ರ ಅಪ್ಪ, ಇನ್ನು ಮೇಲೆ ಇವನಿಗೇನಾದರೂ ಆದರೆ ನಾನು ಜವಾಬುದಾರನಲ್ಲ" ಎಂದರು.

ಅದಕ್ಕೆ ಅವಳು "ಹಾ...ಅದೆಲ್ಲಾ ಆಗೋದಿಲ್ಲ. ನಮ್ಮಪ್ಪನಿಗೆ ಏನಾದರೂ ಸ್ವಲ್ಪ ನಷ್ಟವಾದರೂ ನಾನು ಸುಮ್ಮನೆ ಬಿಡೋದೇ ಇಲ್ಲ...ನೀವೇ ಪೂರ್ತಿ ಜವಾಬುದಾರಿ...ಗೊತ್ತಾ?" ಎಂದು ನಗುತ್ತಲೇ ಉತ್ತರವಿತ್ತಳು. ಕಡೆಗೆ ನಿತ್ಯವೂ ತಂದೆಗೆ ದೈನಂದಿನ ವಿಷಯಗಳಲ್ಲಿ ಯಾವುಯಾವುದರಲ್ಲಿ ಮರೆವು, ಅಜಾಗರೂಕತೆಗಳಾಗುವ ಸಂಭವವಿರುತ್ತದೋ ಅಂತಹವುಗಳ ಬಗ್ಗೆ ಮಗಳು ಎಚ್ಚರಿಕೆ ಕೊಟ್ಟಳು.

ಆ ವಿಷಯಗಳಲ್ಲಿ ನನ್ನ ಮಾವನಿಗೆ ಬಹಳ ಮಟ್ಟಿಗೆ ಹಿಡಿತವಿಲ್ಲ, ಗಮನವೂ ಇಲ್ಲ. ಕೆಲವು ಅಪಥ್ಯ ತಿನಿಸುಗಳ ಬಗ್ಗೆ ವಿಶೇಷ ಆಸಕ್ತಿ. ಅಂಥವುಗಳಲ್ಲಿ ತಂದೆಯನ್ನು ಹದ್ದುಬಸ್ತಿನಲ್ಲಿಡುವುದೊಂದು ದೊಡ್ಡ ಕೆಲಸ, ಶಿಶಿರಳಿಗೆ. ಅದಕ್ಕೇ ಅಂದು ತಂದೆಯ ಕೈಯನ್ನು ತನ್ನ ಕೈಯಲ್ಲಿ ಹಿಡಿದು ಅವಳು ಬಾರಿಬಾರಿಗೂ ಮಾತುಕೊಡೆಂದು ಕೇಳಿದಳು–"ಅಪ್ಪಾ, ನನ್ನದೊಂದು ಮಾತು ನಡೆಸಬೇಕು, ನಡೆಸುತ್ತೀರೊ ಹೇಳಿ."

ಅವಳ ಅಪ್ಪ ನಗುತ್ತ "ಕೇಳಮ್ಮಾ ಇಲ್ಲಿ, ಮಾತುಕೊಡುವುದು ಸುಲಭ. ಅದನ್ನು ಮುರಿಯಬೇಕೆಂದೇ ಎಷ್ಟೋ ಜನ ಮಾತುಕೊಡುತ್ತಾರೆ. ಆದ್ದರಿಂದ ಮಾತು ಕೊಡದೇ ಇರುವುದೇ ಒಳ್ಳೆಯದಲ್ಲವೇ?" ಎಂದರು.

ಆಮೇಲೆ ನನ್ನ ಮಾವ ಹೊರಟುಹೋದ ಮೇಲೆ ಮನೆಯಲ್ಲಿ ನಮ್ಮ ಮನೆಯವರೆಲ್ಲ ಮೂಗಿನ ಮೇಲೆ ಬೆರಳಿಟ್ಟುಕೊಂಡರು.

ತಂದೆ, ಮಗಳು ಹೀಗೆ ಸ್ವಲ್ಪವೂ ಕಣ್ಣೀರು ಸುರಿಸದೆ ಪರಸ್ಪರ ಬೀಳ್ಕೊಡುವ ಅತಿಶಯ ನೋಟವನ್ನು ಕಂಡಿದ್ದ ಅವರೆಲ್ಲ "ಇದೇನಮ್ಮ ವಿಚಿತ್ರ, ನಾವೆಂದೂ ಕಂಡಿದ್ದಿಲ್ಲ" ಎಂದುಕೊಂಡರು.

"ಅಲ್ಲ,-ಬೆಟ್ಟಗಾಡಿನ ದೇಶದಲ್ಲಿದ್ದು ಇದ್ದೂ ಮನಸ್ಸೂ ಬೆಟ್ಟದಂತೆ ಕಲ್ಲಾಗಿ ಬಿಡಬೇಕೆ? ಮಾಯಾ, ಮಮತೆ...ಅಂತಃಕರಣ ಕೊಂಚವೂ ಬೇಡವೇ? ಚೆನ್ನಾಯಿತು ಬಿಡಿ...!"

ನಮ್ಮ ಮಾವನ ಆಪ್ತಮಿತ್ರರಾದ ವನಮಾಲಿಬಾಬುವೇ ಈ ಸಂಬಂಧವನ್ನು ಗೊತ್ತುಮಾಡಿದುದು. ನಮ್ಮ ಕುಟುಂಬಕ್ಕೂ ಬಹಳ ಬೇಕಾದವರು. ಅವರು ನನ್ನ ಮಾವನ ಬಳಿ "ನೋಡು, ನಿನಗಿರುವವಳು ಇವಳೊಬ್ಬಳೇ ಮಗಳು. ಇನ್ನು ಮೇಲೆ ಇವರ ಬಳಿಯೇ ಒಂದು ಮನೆಗಿನೆ ಮಾಡಿಕೊಂಡು ಹಾಯಾಗಿ ಇಲ್ಲೇ ಇದ್ದುಬಿಡು. ಏನು ನಾನು ಹೇಳೋದು?" ಎಂದರು.

ಆಗಾತನು "ನೋಡು, ವನಮಾಲಿ, ಯಾವುದನ್ನು ಕೊಟ್ಟೆನೋ ಅದನ್ನು ಪೂರ್ತಿ ಬುಡಸಮೇತ ಕಿತ್ತು ಕೊಟ್ಟುಬಿಟ್ಟಿದ್ದೇನೆ. ಈಗ ಪುನಃ ಅದನ್ನ ನನಗೆ ಸೇರಿದ್ದು ಅಂತ ನೋಡುತ್ತಾ ಹೋದರೆ ಸಂಕಟಕ್ಕೆ ಆಹ್ವಾನ ಕೊಟ್ಟ ಹಾಗಾಗುತ್ತದೆ. ಹಕ್ಕನ್ನು ಎಲ್ಲಾ ಬಿಟ್ಟುಕೊಟ್ಟ ಮೇಲೂ ಮತ್ತೆ ಹಕ್ಕನ್ನು ಸ್ಥಾಪಿಸುವುದಕ್ಕಿಂತ ಬೇರೆ ವಿಡಂಬನವಿಲ್ಲ," ಎಂದರು.

ಎಲ್ಲ ಮುಗಿದ ಮೇಲೆ ಆತನು ನನ್ನನ್ನು ಬೇರೆಯಾಗಿ ಕರೆದು ತಪ್ಪಿತಸ್ಥರಂತೆ ಅತಿ ಸಂಕೋಚದಿಂದ "ನೋಡಪ್ಪ, ನನ್ನ ಮಗಳಿಗೆ ಪುಸ್ತಕ ಓದುವ ಹುಚ್ಚಿದೆ ಬಹಳ ದಿನದಿಂದ. ಅಲ್ಲದೆ ಅವರಿವರನ್ನ ಕರೆದು ಚೆನ್ನಾಗಿ ತಿಂಡಿ, ತಿನಿಸು ಕೊಟ್ಟು ಆದರಿಸುವುದು ಇನ್ನೊಂದು ಹುಚ್ಚು. ಈ ವಿಷಯಗಳಲ್ಲಿ ನನ್ನ ಬೀಗನಾದ ನಿಮ್ಮ ತಂದೆಗೆ ತೊಂದರೆಯಾಗಕೂಡದು. ನಾನು ಆಗಾಗ ನಿನ್ನ ಹೆಸರಿಗೆ ಸ್ವಲ್ಪ ಹಣ ಕಳಿಸಿಕೊಡುತ್ತೇನೆ. ನಿಮ್ಮ ತಂದೆ ತಿಳಿದರೆ ಕೋಪಿಸಿಕೊಳ್ಳುತ್ತಾರಾ?" ಎಂದರು.

ಈ ಪ್ರಶ್ನೆ ಕೇಳಿ ನನಗೆ ಸ್ವಲ್ಪ ಅಚ್ಚರಿಯಾಯಿತು. ಸಂಸಾರದಲ್ಲಿ ಯಾವ ದಿಕ್ಕಿನಿಂದಾದರೂ ಹಣ, ಯಾವ ರೂಪದಿಂದಾರೂ ಬಂದ ಸಂದರ್ಭದಲ್ಲಿ ಅಪ್ಪ ಕೋಪಿಸಿಕೊಳ್ಳುವರೆ ಎಲ್ಲಾದರೂ? ಅವರ ಸ್ವಭಾವ ಅಷ್ಟು ಕೆಟ್ಟುದೆಂದು ನಾನೆಂದುಕೊಂಡಿರಲಿಲ್ಲ.

ಲಂಚ ಕೊಡುತ್ತಿರುವರ ಹಾಗೆ ನನ್ನ ಕೈಯಲ್ಲಿ ನೂರು ರೂಪಾಯಿಗಳ ನೋಟೊಂದನ್ನ ಇಟ್ಟು ನನ್ನ ಮಾವ ಬೇಗ ಬೇಗ ದಯಮಾಡಿಸಿದರು. ನನ್ನ ಸಾಷ್ಟಾಂಗ ನಮಸ್ಕಾರ ಅಂಗೀಕರಿಸುವುದಕ್ಕೂ ಕಾಯದೇ ಹೋದರು. ಹಿಂದಿನಿಂದ ನಾನು ನೋಡಿದೆ. ಜೇಬಿನಿಂದ ಕರವಸ್ತ್ರ ತೆಗೆದಿದ್ದರು.

ನಾನು ಸ್ತಬ್ಧನಾಗಿ ಕೂತು ಯೋಚಿಸಲಾರಂಭಿಸಿದೆ. 'ಈತನಂತೂ ಇತರರ ಹಾಗಲ್ಲ. ಬೇರೆ ಜಾತಿಯ ಮನುಷ್ಯ' ಅಂದುಕೊಂಡೆ.

ನನಗೆ ತಿಳಿದವರಲ್ಲನೇಕರು ಮದುವೆಯಾಗುವುದನ್ನು ಕಂಡಿದ್ದೇನೆ. ಮಂತ್ರವೋದಿದ ಸಂಗಡವೇ ಹೆಂಡತಿಯನ್ನು ಒಂದೇ ತುತ್ತಿನಲ್ಲಿ ನುಂಗಲು ಹಿಂಜರಿಯುವುದಿಲ್ಲ. ನುಂಗಿದ ಮೇಲೆ ಆ ಪದಾರ್ಥದ ನಾನಾ ಗುಣಾವಗುಣಗಳು ಹೋರಬೀಳಬಹುದು ಮತ್ತು ಗಳಿಗೆ ಗಳಿಗೆಗೂ ಅಡಚಣೆಗಳೂ, ಆತಂಕಗಳೂ ಅವುಗಳಿಂದ ಸಂಕಟಗಳೂ ಉದ್ಭವವಾಗಬಹುದು. ಅವಾವುದೂ ಅವರಿಗೆ ಲಕ್ಷ್ಯವಿಲ್ಲ. ಹೇಗೋ ನುಂಗಲು ಹೋಗುವರು.

ಮದುವೆಯಂಗಳದಲ್ಲಿ ನಾನು ತಿಳಿದುಕೊಂಡಿದ್ದೆ: ಕನ್ಯಾದಾನದ ಮಂತ್ರದಿಂದ ಹೆಂಡತಿಯನ್ನು ಎಷ್ಟು ಮಾತ್ರ ಪಡೆಯಬಹುದೋ ಅದರಿಂದ ಸಂಸಾರ ನಡೆಯಬಹುದು–ಆದರೆ ಹದಿನಾರಾಣೆಯಲ್ಲಿ ಇನ್ನೂ ಹದಿನೈದಾಣೆ ಪಡೆಯುವುದು ಬಾಕಿ ಇದ್ದೇಯಿರುತ್ತದೆ. ನನ್ನ ಸಂದೇಹವೇನೆಂದರೆ ಹೆಚ್ಚು ಜನ ಹೆಂಡತಿಯನ್ನು ಮದುವೆ ಮಾತ್ರ ಮಾಡಿಕೊಳ್ಳುವರೇ ವಿನಾ ಅವಳನ್ನ ಪಡೆಯುವುದಿಲ್ಲ. ಅವರುಗಳಿಗೆ ಹೆಂಡತಿಯ ಬಳಿ ಕೂಡ ಸಾಯುವವರೆಗೂ ಈ ವಿಷಯ ಗೋಚರವಾಗುವುದಿಲ್ಲ..

ಆದರೆ ನನ್ನ ವಿಷಯದಲ್ಲಿ ಬೇರೆ. ನಾನು ನನ್ನ ಹೆಂಡತಿಯನ್ನು ಸಾಧನೆಯ ಫಲವಾದ ಧನವೆಂದುಕೊಂಡಿದ್ದೆ. ಅವಳು ನನ್ನ ಸಂಪತ್ತಿಯಲ್ಲ, ಸಂಪದ!

ಶಿಶಿರಳು–ಇಲ್ಲ, ಈ ಹೆಸರಿನ್ನು ಬಳಕೆ ಮಾಡುವುದಕ್ಕೆ ತಕ್ಕುದಲ್ಲ. ಒಂದು, ಇದು ಅವಳ ನಿಜವಾದ ಹೆಸರಲ್ಲ. ಇದರಿಂದ ಅವಳ ನಿಜವಾದ ಪರಿಚಯವಾಗಲಿಕ್ಕಿಲ್ಲ. ಅವಳು ಸೂರ್ಯನಂತೆ ಧ್ರುವಳಾದವಳು. ಅವಳು ಕ್ಷಣಜೀವಿನಿಯಾದ ಉಷೆಯು ಬೀಳ್ಕೊಡುವಾಗ ಸುರಿಸುವ ಕಂಬನಿಯ ತೊಟ್ಟಿನಂತಲ್ಲ. ಇನ್ನು ಅಡಗಿಸಿಟ್ಟು ಫಲವೂ ಇಲ್ಲ. ಅವಳ ನಿಜವಾದ ಹೆಸರು ಹೈಮಂತಿ.

ನಾನು ನೋಡಿದೆ–ಈ ಹದಿನೇಳು ವರುಷದ ಹುಡುಗಿಯ ಮೇಲೆ ಯೌವನದ ಬೆಳಕೆಲ್ಲ ಬಂದು ತುಂಬಿಕೊಂಡಿದೆ. ಆದರೆ ಇನ್ನೂ ಕಿಶೋರಿ. ಆ ಅವಸ್ಥೆಯ ತೆಕ್ಕೆಯಿಂದ ಅವಳಿನ್ನೂ ಬಿಡಿಸಿಕೊಂಡು ಯೌವನಾವಸ್ಥೆಯಲ್ಲಿ ಅಡಿಯಿಡಲು ಎಚ್ಚರಗೊಂಡಿಲ್ಲ. ಹಿಮಾದ್ರಿಯ ಶಿಖರದ ಮೇಲೆ ಪ್ರಭಾತದ ಕಿರಣವೇನೋ ತಗುಲಿಬಿಟ್ಟಿದೆ. ಆದರೇಕೋ ಶಿಖರದ ಮಂಜು ಇನ್ನೂ ಕರಗಿಲ್ಲ, ನನಗೆ ಚೆನ್ನಾಗಿ ಗೊತ್ತು–ಅವಳೆಷ್ಟು ಕಳಂಕವಿಲ್ಲದ ಶುಭ್ರತೆಯುಳ್ಳವಳೆಂದು, ಎಂಥ ಕುಂದಿಲ್ಲದ ಪವಿತ್ರಳೆಂದು.

ಮನಸ್ಸಿನಲ್ಲಿ ಯೋಚಿಸಿದ್ದೆ–ಓದು ಬರೆಹ ಚೆನ್ನಾಗಿ ಬರುವ ಹುಡುಗಿ. ಬೆಳೆದವಳು. ಅವಳ ಮನಸ್ಸನ್ನು ಪಡೆಯುವ ಬಗೆ ಹೇಗೆ ಎಂಬುದು ನನಗೇನು ಗೊತ್ತು? ಆದರೆ ಕೆಲವೇ ದಿನಗಳಲ್ಲಿ ಕಂಡುಕೊಂಡೆ. ಮನಸ್ಸಿನ ದಾರಿಯ ಸಂಗಡ

ಪುಸ್ತಕ ಭಂಡಾರದ ರಸ್ತೆಯ ತಿಕ್ಕಾಟ ಸ್ವಲ್ಪವೂ ಇಲ್ಲ. ಯಾವಾಗ ಅವಳೂ ತನ್ನ ತಿಳಿಯಾದ ಮನಸ್ಸಿನ ಮೇಲೆ ಸ್ವಲ್ಪ ಬಣ್ಣವೇರಿಸಿಕೊಂಡಳೋ-ಯಾವಾಗ ಕಣ್ಣುಗಳಲ್ಲಿ ಸ್ವಲ್ಪವೇ ಸ್ವಲ್ಪ ಮಾಧಕತೆಯುಂಟಾಯಿತೋ, ಯಾವಾಗ ಅವಳ ಮೈ, ಮನಸ್ಸುಗಳೆರಡೂ ಚಂಚಲವಾಗಿ, ಪುಳಕಗೊಂಡುವೋ...ನನಗದು ಸರಿಯಾಗಿ ಗೊತ್ತಿಲ್ಲ. ನನಗೆ ಅರಿವಿಲ್ಲದಂತೆಯೇ ನಡೆದುಹೋಯಿತು.

ಇವೆಲ್ಲ ಒಂದು ದಿಕ್ಕಿನ ಪ್ರಸಂಗವಾಗಿ ಹೋಯಿತು. ಇದಲ್ಲದೆ ಇನ್ನೊಂದು ದಿಕ್ಕೂ ಇದೆ. ಅದರ ಕಥೆಯನ್ನು ವಿಸ್ತಾರವಾಗಿ ಹೇಳುವ ಸಮಯ ಬಂದಿದೆ.

ಯಾವುದೋ ರಾಜನ ಸಂಸ್ಥಾನದಲ್ಲಿ ನನ್ನ ಮಾವನಿಗೆ ನೌಕರಿಯಿತ್ತು. ಬ್ಯಾಂಕಿನಲ್ಲಿ ಆತನು ಎಷ್ಟು ಹಣ ಕೂಡಿಸಿಟ್ಟಿದ್ದಾರೆನ್ನುವ ವಿಷಯದಲ್ಲಿ ಜನವದಂತಿ ನಾನಾ ವಿಧದಲ್ಲಿ ಗುಣಾಕಾರ ಹಾಕಿ ನಿಷ್ಕರ್ಷಿಸಿದೆ. ಆದರೆ ಯಾವ ಮೊತ್ತವೂ ಲಕ್ಷಕ್ಕಿಂತ ಕಡಿಮೆಯಿಲ್ಲ. ಇದರ ಫಲಿತಾಂಶವಾಗಿ ಅವರಪ್ಪನ ದರ ಎಷ್ಟರ ಮಟ್ಟಿಗೆ ಹೆಚ್ಚುತ್ತಾ ಹೋಯಿತೋ ನಮ್ಮ ಮನೆಯೊಳಗೆ ಹೈಮಳ ಬೆಲೆ ಅಷ್ಟಕ್ಕಷ್ಟು ಏರುತ್ತಾ ಬಂತು. ನಮ್ಮ ಮನೆಯ ಕೆಲಸಪಲಸಗಳನ್ನು ಚೆನ್ನಾಗಿ ಕಲಿಯುವುದಕ್ಕೆ ಅವಳಿಗೆ ಆತುರ. ಆದರೆ ನಮ್ಮಮ್ಮ ಅವಳ ಮೇಲಿನ ಮಿತಿಮೀರಿದ ವಾತ್ಸಲ್ಯದಿಂದ ಅವಳು ಯಾವ ಕೆಲಸಕ್ಕೆ ಕೈಹಾಕುವುದನ್ನೂ ಸಹಿಸುತ್ತಿರಲಿಲ್ಲ. ಅಷ್ಟೇಕೆ, ಅವಳ ಸಂಗಡ ಅವಳ ದೇಶದ ಕಡೆಯಿಂದ ಬಂದಿದ್ದ ದಾಸಿಯೊಬ್ಬಳನ್ನು ಅಡಿಗೆಮನೆ, ದೇವರ ಮನೆಯೊಳಗೆ ಬರಮಾಡಿಕೊಳ್ಳದಿದ್ದರೂ ಅವಳ ಜಾತಿ, ಕುಲಗಳ ಬಗ್ಗೆ ಯಾವ ಪ್ರಶ್ನೆಯನ್ನೂ ಸೊಸೆಯ ಬಳಿ ಕೇಳುತ್ತಿರಲಿಲ್ಲ. ಕೇಳಿದರೆ ಸಹಿಸಿಕೊಳ್ಳಲಾಗದಂಥ ಯಾವ ಸಮಾಚಾರ ಹೊರಬೀಳಬಹುದೋ ಎಂಬ ಶಂಕೆಯೋ ಏನೋ!

ಇದೇ ರೀತಿಯಾಗಿ ದಿನಗಳು ಕಳೆಯಬಹುದಾಗಿತ್ತು. ಆದರೆ ಹಠಾತ್ತಾಗಿ ಒಂದು ದಿನ ಅಪ್ಪನ ಮುಖದ ಮೇಲೆ ಘೋರವಾದೊಂದು ಕತ್ತಲೆ ಮುಸುಗಿದ್ದನ್ನ ಎಲ್ಲರೂ ಕಂಡರು. ವಿಷಯ ಇಷ್ಟು-ನನ್ನ ಮದುವೆಯಲ್ಲಿ ಮಾವ ಹದಿನೈದು ಸಾವಿರ ರೂಪಾಯಿಗಳಷ್ಟು ನಗದು ಹಣ, ಐದುಸಾವಿರ ರೂಪಾಯಿಗಳಷ್ಟು ಒಡವೆಗಳನ್ನು ಕೊಟ್ಟಿದ್ದರು. ನಮ್ಮಪ್ಪ ನಂಬಲರ್ಹನಾದ ತನ್ನ ಪ್ರತಿನಿಧಿಯೊಬ್ಬನಿಂದ ಸಮಾಚಾರ ತಿಳಿದುಕೊಂಡದ್ದೇನೆಂದರೆ, ಆ ಹದಿನೈದು ಸಾವಿರ ರೂಪಾಯಿಗಳೂ ಸಾಲ ಮಾಡಿ ಕೊಟ್ಟದ್ದು-ಮತ್ತು ಅದರ ಬಡ್ಡಿಯೂ ಸಾಮಾನ್ಯವೇನಲ್ಲ. ಲಕ್ಷರೂಪಾಯಿಗಳ ಬ್ಯಾಂಕಿನ ಠೇವಣಾತಿಯ ಸುದ್ದಿಯಂತೂ ಭಾರೀ ಮೋಸ.

ಯಾವ ಸಮಯದಲ್ಲೂ ನಮ್ಮ ಮಾವ ತನ್ನ ಆಸ್ತಿ, ಸಂಪಾದನೆಗಳ ಬಗ್ಗೆ ತನ್ನ ಬೀಗನೊಂದಿಗೆ ಕೊಚ್ಚಿಕೊಳ್ಳದೆ ಇದ್ದಿದ್ದರೂ ಸಹ, ನಮ್ಮಪ್ಪ ಹೇಗೆ ಆತನು ಬೇಕಾಗಿ ತನಗೆ ದೊಡ್ಡ ಮೋಸಮಾಡಿದನೆಂದು ತರ್ಕಿಸಿದನೋ ಗೊತ್ತಿಲ್ಲ.

ಆಮೇಲೆ ಮತ್ತೊಂದೇನೆಂದರೆ, ನಮ್ಮ ತಂದೆಯ ಊಹೆಯ ಪ್ರಕಾರ ನನ್ನ ಮಾವ ರಾಜನ ಪ್ರಧಾನ ಮಂತ್ರಿಯ ಅಂತಸ್ತಿನಲ್ಲಿ ಯಾವುದೋ ಒಂದು ಪದವೀಧರನೆಂದು. ಆದರೆ ಅವನಿಗೆ ಕ್ರಮೇಣ ತಿಳಿದುಬಂದ ಪ್ರಕಾರ ನನ್ನ ಮಾವ ಮಂತ್ರಿಯೂ ಅಲ್ಲ, ಪ್ರಧಾನನೂ ಅಲ್ಲ, ಕೇವಲ ಶಿಕ್ಷಣ ಶಾಖೆಯ ಅಧ್ಯಕ್ಷ ಮಾತ್ರ. ಅಂದರೆ ಸ್ಕೂಲಿನ ಹೆಡ್‌ಮಾಸ್ಟರ್, ಎಂದರು, ನಮ್ಮಪ್ಪ. ಅದು ಸಮಾಜದಲ್ಲಿ ಗೌರವಯುತವಾದ ಪದವಿಗಳೆಷ್ಟಿವೆಯೋ ಅವುಗಳಲ್ಲೆಲ್ಲಾ ಅತಿ ಉನ್ನತ ಪದವಿ ಇರಬಹುದು ಬೇರೆಯವರ ದೃಷ್ಟಿಯಲ್ಲಿ. ಆದರೆ ನಮ್ಮಪ್ಪನ ದೃಷ್ಟಿಯಲ್ಲಿ ಹಾಗಲ್ಲ. ಪಾಪ, ಅವರು ಅಂದುಕೊಂಡಿದ್ದುದು ನನ್ನ ಮಾವ ಇವತ್ತಲ್ಲ, ನಾಳೆ ನಿವೃತ್ತಿಯಾದರೆ ಆಗ ನಾನೇ, ಅಂದರೆ ತಮ್ಮ ಮಗ, ರಾಜನ ಮಂತ್ರಿಯಾಗಬಹುದು, ಎಂದು.

ಇಂತಹ ಸಮಯದಲ್ಲಿ ರಾಸಲೀಲಾ ಉತ್ಸವ ನೋಡುವುದಕ್ಕೆಂದು ಗ್ರಾಮಾಂತರದ ನಮ್ಮ ಬಂಧು ಬಳಗಗಳು ಕೆಲವರು ನಮ್ಮ ಕಲಿಕತ್ತೆಯ ಮನೆಯಲ್ಲಿ ಬಂದು ಇಳಿದುಕೊಂಡರು. ಸೊಸೆಯನ್ನು ಕಂಡು ಅವರಲ್ಲಿ ಗುಸಪಿಸ ಮಾತು ಹುಟ್ಟಿಕೊಂಡಿತು. ಆ 'ಗುಸಪಿಸ' ಕ್ರಮೇಣ ಅಸ್ಪಷ್ಟತೆಯಿಂದ ಸ್ಪಷ್ಟವಾಗಲು ತೊಡಗಿತು. ದೂರ ಸಂಪರ್ಕದ ಯಾರೋ ಒಬ್ಬ ಅತ್ತೆಮ್ಮ ಕೆನ್ನೆಯ ಮೇಲೆ ಬೆರಳಿಟ್ಟುಕೊಂಡು "ಚೆನ್ನಾಯಿತು ಹಣೇಬರೆಹ, ಹೊಸ ಸೊಸೆಯಂತೂ ವಯಸ್ಸಲ್ಲಿ ನನ್ನನ್ನೂ ಮೀರಿಸಿದ ಹಾಗೆ ಕಾಣುತ್ತೆ" ಅಂದುಬಿಟ್ಟಳು. ಇನ್ನೊಬ್ಬ ಅತ್ತೆಮ್ಮ "ಸುಮ್ಮನಿರಮ್ಮಾ ಸಾಕು, ನಮ್ಮಗಳನ್ನೆಲ್ಲ ವಯಸ್ಸಲ್ಲಿ ಮೀರಿಸದೆ ಹೋದರೆ ನಮ್ಮ ಅಪೂ ಹೊರಗಣಿಂದಲೇ ಏಕೆ ಹೆಂಡತಿಯನ್ನು ತರಬೇಕಾಗಿತ್ತು?" ಎಂದು ಚುಚ್ಚುವ ದನಿಯಲ್ಲಿ ಮಾತು ಸೇರಿಸಿದಳು.

ಆಗ ನಮ್ಮಮ್ಮ ಇದನ್ನೆಲ್ಲ ಕೇಳಿಸಿಕೊಂಡು ಸುಮ್ಮನಿರಲಾಗದೆ "ಇದೇನಮ್ಮಾ ಹೀಗೆಲ್ಲ ಅಂತೀರಿ? ನನ್ನ ಸೊಸೆಯ ವಯಸ್ಸು ಇನ್ನೂ ಹನ್ನೊಂದನ್ನೇ ದಾಟಿಲ್ಲ. ಇಕೋ ಮುಂದಿನ ಫಾಲ್ಗುಣಕ್ಕಲ್ಲವೇ ಅವಳು ಹನ್ನೊಂದು ಪೂರೈಸಿ ಹನ್ನೆರಡನೇ ವರುಷದಲ್ಲಿ ಕಾಲಿಡುತಾಳೆ...ಬೆಟ್ಟಗಾಡಿನ ದೇಶದಲ್ಲಿ ಗೋಧಿ ರೊಟ್ಟಿ ತಿಂದು ಬೆಳೆದವಳು. ಸ್ವಲ್ಪ ಧಡೂತಿಯಾಗಿ ಆಗಿದ್ದಾಳೆ; ಅಷ್ಟೇ ಹೊರತೂನೂ..." ಎಂದು ಜವಾಬು ನುಡಿದಳು.

ಆಗ ಆ ಅತ್ತೆಮ್ಮ "ಇಲ್ಲಮ್ಮಾ, ನಮ್ಮ ಕಣ್ಣಿಗೆ ಹಾಗೇನೂ ಕಾಣೋದಿಲ್ಲ, ನೀನು ಏನಾದರೂ ಅನ್ನು. ನನ್ನ ಅಭಿಪ್ರಾಯದಲ್ಲಿ ನಿಮ್ಮ ಬೀಗರ ಕಡೆಯವರು ನಿಮಗೆ ಹುಡುಗಿಯ ವಯಸ್ಸನ್ನ ಸುಳ್ಳುಹೇಳಿದಾರೆ" ಎಂದಳು.

ಅದಕ್ಕೆ ಅಮ್ಮ ಸುಮ್ಮನಿರದೆ "ಅದು ಹ್ಯಾಗಾದೀತು? ನಾವು ಅವಳ ಜನ್ಮಕುಂಡಲಿ ನೋಡಿದೆವಲ್ಲ?" ಎಂದಳು.

ಆ ಮಾತು ನಿಜ. ಆದರೆ ಕುಂಡಲಿಯಲ್ಲಿ ಚೆನ್ನಾಗಿ ನಮೂದಿದೆ–ಹುಡುಗಿಯ ವಯಸ್ಸು ಹದಿನೇಳು ಎಂಬುದಾಗಿ.

ಆ ಮುದಿ ಮುತ್ತೈದೆಯರು ಅದಕ್ಕೂ ಬಿಡಬೇಕಲ್ಲ. "ಆಹಾ...ಅದೇನು ದೊಡ್ಡ ಸಾಕ್ಷ್ಯ? ಕುಂಡಲಿ ಇಷ್ಟ ಬಂದ ಹಾಗೆ ಬರೆಸೋದಕ್ಕೆ ಆಗೋದಿಲ್ಲವೆ?" ಎಂದರು. ಈ ವಿಷಯವಾಗಿ ದೊಡ್ಡದಾಗಿ ತರ್ಕ ಆರಂಭವಾಯಿತು, ಅಷ್ಟೇಕೆ, ವಾದ, ವಿವಾದಗಳೂ ಹುಟ್ಟಿಕೊಂಡುವು.

ಇಂತಹ ಸಮಯದಲ್ಲಿ ಅಲ್ಲಿಗೆ ಹೈಮಳು ಬಂದು ನಿಂತಳು.

ಆಗ ಬೇರೊಬ್ಬ ಅತ್ತಿಗೆಮ್ಮ ಮುಂದೆ ಬಂದು "ಅಮ್ಮಾ, ಮಗೂ, ಬಾ ಈ ಕಡೆ ಸ್ವಲ್ಪ" ಎಂದು ಅವಳನ್ನ ಹತ್ತಿರ ಕರೆದು "ಇಲ್ಲಿ ನೋಡು, ನಿನ್ನ ವಯಸ್ಸೆಷ್ಟು ಹೇಳು ನೋಡೋಣ" ಎಂದಳು.

ಅಮ್ಮನಾಗ ಅವಳ ಕಡೆ ಕಣ್ಣುಮಿಟುಕಿಸಿ ಸನ್ನೆಮಾಡಿದಳು. ಹೈಮಳು ಅದರ ಅರ್ಥ ತಿಳಿದುಕೊಳ್ಳಲಾರದೆ 'ಹದಿನೇಳು' ಎಂದು ನೇರವಾಗಿ ಹೇಳಿಬಿಟ್ಟಳು.

ಅಮ್ಮನಿಗೆ ಮುಖ ಕುಂದಿ "ಛೇ, ನಿನಗೇನು ಗೊತ್ತು ನಿನ್ನ ವಯಸ್ಸು?" ಎಂದಳು.

ಆಗ ಹೈಮ ದೃಢವಾಗಿ "ಇಲ್ಲ, ನನಗೆ ಗೊತ್ತಿದೆ, ನನ್ನ ವಯಸ್ಸು ಹದಿನೇಳು" ಎಂದಳು. ಅತ್ತೆಮ್ಮ, ಅತ್ತಿಗೆಮ್ಮಂದಿರು ಆಗ ಒಬ್ಬರಿಗೊಬ್ಬರು ಮೈಗೊತ್ತಿಕೊಂಡು ಕಣ್ಣುಗಳಲ್ಲಿ ಇಂಗಿತವಾಗಿ "ಕೇಳಿದಿರಾ ವಿಚಿತ್ರ?" ಎಂದು ಕೇಳಿಕೊಂಡರು.

ಸೊಸೆಯ ಮೊದ್ದುತನದಿಂದ ಕೋಪವೇರಿ ನಮ್ಮಮ್ಮ "ನಿನಗೆ ಬಹಾಳ ಗೊತ್ತು ಸುಮ್ಮನಿರೆ? ನಿಮ್ಮಪ್ಪ ನಮಗೆ ಹೇಳಿದ್ದಾರೆ ನಿನಗಿನ್ನೂ ಹನ್ನೊಂದು ವರುಷವಂತೆ" ಎಂದಳು, ಮೂಗು ಮುರಿಯುತ್ತಾ.

ಹೈಮಳು ಬೆರಗಾಗಿ "ಅಪ್ಪ ಹೇಳಿದ್ದಾರೆಯೇ? ಎಂದಿಗೂ ಸಾಧ್ಯವಿಲ್ಲ" ಎಂದು ಖಂಡಿತವಾಗಿ ನುಡಿದುಬಿಟ್ಟಳು.

ಅಮ್ಮನಿಗೆ ಸೈರಣೆ ಮುರಿಯುತ್ತ ಬಂತು. "ಅಹಾ! ನನಗೇ ಬಾಯಿ ಮುಚ್ಚಿಸುತ್ತೀಯಾ? ಚೆನ್ನಾಗಿದೆ ಬಿಡು. ನಿಮ್ಮ ತಂದೆಯವರೇ ಖುದ್ದಾಗಿ ನಿನ್ನ ವಯಸ್ಸು ಹನ್ನೊಂದು ಅಂತ ಹೇಳಿದ್ದರೂ ಮಗಳಾದವಳೇ ಎಂದಿಗೂ ಇಲ್ಲ ಅಂತ ಸಾಧಿಸುತ್ತಾಳೆ...!" ಹೀಗೆಂದು ಮತ್ತೊಮ್ಮೆ ಕಣ್ಣು ಮಿಟುಕಿಸಿದಳು.

ಈ ಬಾರಿ ಹೈಮಳು ಇಂಗಿತದ ಅರ್ಥವನ್ನು ತಿಳಿದುಕೊಂಡಳು. ಆದರೂ ತನ್ನ ಪಟ್ಟನ್ನು ಬಿಡದೆ ದೃಢ ದನಿಯಲ್ಲಿ "ಅಪ್ಪ ಎಂದಿಗೂ ಇಂಥ ಸುಳ್ಳು ಮಾತನ್ನು ಹೇಳುವಂಥವನಲ್ಲ" ಎಂದುಬಿಟ್ಟಳು.

ಆಗ ಅಮ್ಮನಿಗೆ ಪೂರ್ತಿಯಾಗಿ ಸ್ಥೈರಣೆ ಬಿಟ್ಟುಹೋಯಿತು. ಗಟ್ಟಿಯಾಗಿ ದನಿಯೇರಿಸಿ "ನೀನು ನನ್ನನ್ನ ಸುಳ್ಳು ಮಾತಿನವಳು ಅಂತೀಯಾ,...ಹಾ" ಎಂದು ಗದರಿಬಿಟ್ಟಳು.

ಹೈಮಳು ಸ್ವಲ್ಪವೂ ಕದಲದೆ ಅದೇ ದನಿಯಲ್ಲಿ "ನಮ್ಮಪ್ಪ ಎಂದಿಗೂ ಸುಳ್ಳು ಹೇಳುವವನಲ್ಲ" ಎಂದಳು.

ಇದಾದ ಅನಂತರ ನಮ್ಮಮ್ಮ ಇನ್ನಷ್ಟು ರೇಗಿ ಇನ್ನೂ ಮನಸ್ಸಿಗೆ ಬಂದಂತೆ ಸೊಸೆಯನ್ನು ಬೈಯಲು ತೊಡಗಿದರೂ ಕೂಡ ವಿಷಯದ ಕಳಂಕ ಅಷ್ಟಕ್ಕಷ್ಟು ಬೆಳೆದು ನಾಲ್ಕೂ ದಿಕ್ಕೂ ಹರಡಿಬಿಟ್ಟಿತು.

ಅಮ್ಮ ಕೋಪ ತಡೆಯಲಾರದೆ ಅಪ್ಪನ ಬಳಿ ಸೊಸೆಯ ಪೆದ್ದುತನ ಮತ್ತು ಅದಕ್ಕಿಂತಲೂ ಹೆಚ್ಚಾಗಿ ಹಠಮಾರಿತನದ ಬಗ್ಗೆ ದೂರು ಹೇಳಿದಳು. ಅಪ್ಪ ಹೈಮಳನ್ನು ಕರೆದು "ಮನೆಯ ಹೊಸ ಸೊಸೆಯ ವಯಸ್ಸು ಹದಿನೇಳು ಎಂಬುವುದೊಂದು ಗೌರವದ ಮಾತೇನಮ್ಮಾ? ಅದನ್ನ ಹೋಗಿ ಡಂಗುರ ಸಾರಬೇಕೇ ಊರಲ್ಲೆಲ್ಲಾ? ನಮ್ಮ ಮನೆಯಲ್ಲಿ ಇಂಥದೆಲ್ಲಾ ನಡೆಯೋದಿಲ್ಲ, ತಿಳಿಮಕೋ, ಈಗಲೇ ಹೇಳಿದ್ದೇನೆ" ಎಂದು ಮುಖ ಗಂಟು ಹಾಕಿಕೊಂಡು ಕಟುವಾಗಿ ಹೇಳಿಬಿಟ್ಟರು.

ಹಾಯ್! ತನ್ನ ಸೊಸೆಯ ಬಗ್ಗೆ ಅಪ್ಪನ ಮೊದಲ ಮೊದಲ ಮಧು ತುಂಬಿದ ಪಂಚಮ ಸ್ವರ ಇಂದೇಕೆ ಈ ಕರ್ಕಶದ ತಾರಸ್ವರಕ್ಕೇರಿಬಿಟ್ಟಿತು?

ಹೈಮಳು ವ್ಯಥಿತಳಾಗಿ ನಮ್ರವಾದ ದನಿಯಲ್ಲಿ "ಯಾರಾದರೂ ವಯಸ್ಸು ಕೇಳಿದರೆ ನಾನೇನೆಂದು ಉತ್ತರ ಕೊಡಲಿ?" ಎಂದು ಕೇಳಿದಳು.

ಅಪ್ಪನದಕ್ಕೆ "ಸುಳ್ಳೇನೂ ಹೇಳಬೇಕಾದ ಆವಶ್ಯಕತೆಯಿಲ್ಲ. ನನಗೆ ಗೊತ್ತಿಲ್ಲ. ನಮ್ಮತ್ತೆಮ್ಮನನ್ನು ಕೇಳಿ ಎಂದು ಹೇಳಿಬಿಡು" ಎಂದು ಸಮಾಧಾನ ಹೇಳಿದರು.

ಅದು ಹೇಗೆ ಸುಳ್ಳು ಹೇಳದೆ ಇದ್ದ ಹಾಗಾಯಿತು?...ಸುಳ್ಳಿನಿಂದಂತೂ ತಪ್ಪಿಸಿಕೊಳ್ಳುವಹಾಗಿಲ್ಲ. ಅಂತು ಇಂಥ ಉಪದೇಶವನ್ನು ಕೇಳಿ ಹೈಮಳು ಏನೂ ಹೇಳದೆ ಸುಮ್ಮನಿದ್ದ ಭಾವವನ್ನು ಕಂಡು ಅಪ್ಪ ತನ್ನ ಸದುಪದೇಶವು ವ್ಯರ್ಥವಾಯಿತೆಂದುಕೊಂಡುಬಿಟ್ಟ.

ಹೈಮಳ ಈ ದುರ್ಗತಿಯನ್ನು ಕಂಡು ನಾನು ದುಃಖಿತನಾಗಿ ಏನು ಮಾಡಲೂ ತೋಚದೆ ತಲೆ ತಗ್ಗಿಸಿಕೊಂಡೆ.

ಆ ದಿನ ನಾನು ನೋಡಿದೆ, ಶರತ್ಕಾಲದ ಮುಂಜಾನೆಯ ಮುಗಿಲಿನಂತೆ ಅವಳ ಕಂಗಳ ಆ ಸರಳ ಉದಾಸ ದೃಷ್ಟಿಯು ಯಾವುದೋ ಒಂದು ಸಂಶಯದಿಂದ ಮ್ಲಾನವಾಗಿ ಹೋಯಿತು. ಹೆದರಿದ ಹರಿಣಿಯಂತೆ ಅವಳು ನನ್ನ ಕಡೆ ನೋಡತೊಡಗಿದಳು. ಬಹುಶಃ "ನಾನಿವರನ್ನು ಅರಿಯೆ" ಎಂದು ಭಾವಿಸಿದಳೋ ಏನೋ!

ಆ ದಿನ ಅಂದವಾದ ಹೊದಿಕೆಯುಳ್ಳ ಇಂಗ್ಲಿಷ್ ಕವಿತೆಗಳ ಪುಸ್ತಕವೊಂದನ್ನು ಅವಳಿಗಾಗಿ ಕೊಂಡು ತಂದಿದ್ದೆ. ಪುಸ್ತಕವನ್ನವಳು ಕೈಯಲ್ಲಿ ತೆಗೆದುಕೊಂಡಳು. ಮತ್ತು ನಿಧಾನವಾಗಿ ತೊಡೆಯ ಮೇಲಿಟ್ಟುಕೊಂಡಳು. ಆದರೆ ಒಮ್ಮೆಯೂ ಅದನ್ನು ತೆಗೆದುನೋಡಲಿಲ್ಲ. ನಾನವಳ ಕೈಯನ್ನೆತ್ತಿ ಹಿಡಿದು "ಹೈಮ, ನನ್ನ ಮೇಲೆ ಕೋಪ ಮಾಡಬೇಡ, ನಾನು ನಿನ್ನ ಸತ್ಯದ ಮೇಲೆಂದಿಗೂ ಪೆಟ್ಟು ಕೊಡುವುದಿಲ್ಲ. ನಾನೂ ನಿನ್ನ ಸತ್ಯದ ಬಂಧನದಲ್ಲೇ ಕಟ್ಟಲ್ಪಟ್ಟಿರುವವನು" ಎಂದೆ.

ಹೈಮಳು ಏನೂ ಹೇಳದೆ ಸ್ವಲ್ಪ ಮೃದುವಾಗಿ ನಕ್ಕಳು. ಅಂತಹ ನಗುವನ್ನು ವಿಧಾತನು ಯಾರಿಗೆ ಕೊಟ್ಟಿದ್ದಾನೋ ಅಂಥವರು ಬೇರೆ ಏನೂ ಹೇಳಬೇಕಾಗಿಲ್ಲ.

ನಮ್ಮ ತಂದೆಯ ಆರ್ಥಿಕ ಉನ್ನತಿಯ ಮೇಲೆ ದೇವರ ಅನುಗ್ರಹವು ಸ್ಥಾಯಿಯಾಗಿ ಇರಲೆಂದು ಹಾರೈಸಲು ಅತಿ ಸಂಭ್ರಮದಿಂದ ನಮ್ಮ ಮನೆಯಲ್ಲಿ ಪೂಜಾರ್ಚನೆಗಳು ನಡೆಯುತ್ತಿವೆ. ಇದುವರೆಗೆ ನಡೆದ ಕ್ರಿಯಾಕರ್ಮಗಳಿಗೆ ಯಾವುದಕ್ಕೂ ಮನೆಯ ದೊಡ್ಡ ಸೊಸೆಗೆ ಕರೆ ಬಂದಿಲ್ಲ. ಹೊಸ ಸೊಸೆಯನ್ನು ಒಂದು ದಿನ ಪೂಜೆಗೆ ಅಣಿಮಾಡೆಂದು ಹೇಳಲಾಯಿತು. ಅವಳು "ಅಮ್ಮ, ನನಗೆ ಹೇಳಿಕೊಡಿ, ಏನೇನು ಮಾಡಬೇಕು?" ಎಂದು ಕೇಳಿದಳು.

ಹೀಗೆ ಕೇಳಿದ್ದರಿಂದ ಯಾರ ತಲೆಯ ಮೇಲೂ ಆಕಾಶವೇನು ಬಿದ್ದು ಹೋಗುವುದಿಲ್ಲ. ಎಲ್ಲರಿಗೂ ಗೊತ್ತಿದೆ. ಅವಳು ತಾಯನ್ನ ಚಿಕ್ಕ ವಯಸ್ಸಲ್ಲೇ ಕಳೆದುಕೊಂಡ ಹುಡುಗಿ. ಆದರೆ ಹೈಮಳನ್ನು ನಾಚುವಂತೆ ಮಾಡಬೇಕೆಂದೇ ಅವಳನ್ನ ಪೂಜೆಗೆ ಅಣಿಮಾಡೆಂದು ಆಜ್ಞೆಮಾಡಿದುದರ ಉದ್ದೇಶ್ಯ. ಎಲ್ಲರೂ ಗಲ್ಲದ ಮೇಲೆ ಬೆರಳಿಟ್ಟುಕೊಂಡು "ಅಯ್ಯಮ್ಮ, ಇದೇನು ವಿಚಿತ್ರವಮ್ಮಾ? ಈ ಹುಡುಗಿ ಯಾವ ನಾಸ್ತಿಕರ ಮನೆಯ ಹುಡುಗಿ ಹಾಗಾದರೆ? ಇನ್ನಾಯಿತು ಬಿಡಿ. ಈ ಮನೆಯಲ್ಲಿ ಇನ್ನೆಷ್ಟು ದಿನ ಇದ್ದಾಳು ಲಕ್ಷ್ಮಿ? ಇನ್ನು ನಿಧಾನವಿಲ್ಲ ಬಿಡಿ ಅವಳು ಹೋಗುವುದಕ್ಕೆ!" ಎಂದು ಪಿಸುಗುಟ್ಟಿದರು.

ಈ ನೆಪದಿಂದ ಹೈಮಳ ತಂದೆಯನ್ನು ಕುರಿತು ಆಡಬಾರದ ಮಾತುಗಳನ್ನೆಲ್ಲ ಆಡಿದ್ದಾಯಿತು. ಎಂದಿನಿಂದ ಕಟುವಾದ ಮಾತುಗಳನ್ನ ಕೇಳುವುದಕ್ಕೆ ಆರಂಭವಾಯಿತೋ ಅಂದಿನಿಂದ ಹೈಮಳು ಪೂರ್ತಿಯಾಗಿ ಬಾಯಿ ಮುಚ್ಚಿಕೊಂಡು ಸಹಿಸಿಕೊಳ್ಳುವುದನ್ನು ಆಚರಣೆಗೆ ತಂದಿದ್ದಾಳೆ. ಒಂದು ದಿನವೂ ಯಾರ ಮುಂದೆಯೂ ಕಣ್ಣೀರು ಕೂಡ ಹರಿಸಿಲ್ಲ. ಇಂದು ಮಾತ್ರ ಅವಳ ದೊಡ್ಡ ದೊಡ್ಡ ಕಣ್ಣುಗಳಿಂದ ಕಂಬನಿ ಹರಿಯತೊಡಗಿತು. ಅವಳು ತತ್‌ಕ್ಷಣ ಎದ್ದು ನಿಂತು "ನಿಮಗೆ ಗೊತ್ತೇನು, ನಮ್ಮಪ್ಪನನ್ನು ಆ ದೇಶದವರೆಲ್ಲ ಋಷಿಯೆಂದು ಕರೆಯುತ್ತಾರೆ...." ಎಂದು ಹೇಳಿ ಅಲ್ಲಿಂದ ಹೊರಟುಹೋದಳು.

ಋಷಿಯೆಂದೇ? ಆಹಾಹಾಹಾ! –ದೊಡ್ಡದೊಂದು ನಗುವಿನ ಅಲೆಯೇ ಎದ್ದು ಬಂತು.

ಇದಾದನಂತರ ಅವಳ ತಂದೆಯ ಹೆಸರೆತ್ತುವಾಗೆಲ್ಲ ಸಾಮಾನ್ಯವಾಗಿ 'ನಿಮ್ಮ ಋಷಿಯಂಥ ತಂದೆ...' ಹೀಗೆಲ್ಲ ಕುಹಕವಾಡಿ ಆ ಹುಡುಗಿಯ ಅತ್ಯಂತ ನೋವು ತೋಚುವ ಜಾಗವಾವುದೆಂದು ನಮ್ಮ ಮನೆಯವರೆಲ್ಲ ತಿಳಿದುಕೊಂಡುಬಿಟ್ಟಿದ್ದರು.

ವಾಸ್ತವವಾಗಿ ನನ್ನ ಮಾವ ನಾಸ್ತಿಕನೂ ಅಲ್ಲ, ಬ್ರಾಹ್ಮೋ ಕೂಡ ಅಲ್ಲ. ಕ್ರಿಶ್ಚಿಯನ್ ಅಂತೂ ಅಲ್ಲವೇ ಅಲ್ಲ. ಆದರೆ ದೇವತಾರ್ಚನೆಯ ಬಗ್ಗೆ ಯಾವ ದಿನವೂ ಯೋಚಿಸಿರಲಿಲ್ಲ. ಮಗಳಿಗೆ ಆತ ಚೆನ್ನಾಗಿ ಓದು ಬರೆಹ ಕಲಿಸಿದ್ದ, ಎಷ್ಟೋ ವಿಷಯಗಳನ್ನು ತಿಳಿಯ ಹೇಳಿದ್ದ. ಆದರೆ ದೇವರ ಬಗ್ಗೆ ಅವಳಿಗೆ ಯಾವತ್ತೂ ಏನೂ ಹೇಳಿರಲಿಲ್ಲ. ಯಾವ ಉಪದೇಶವನ್ನೂ ಕೊಟ್ಟಿರಲಿಲ್ಲ. ವನಮಾಲಿ ಬಾಬು ಇದರ ಬಗ್ಗೆ ಆತನನ್ನು ಒಮ್ಮೆ ಪ್ರಶ್ನೆ ಮಾಡಿದಾಗ ಆತ "ನನಗೇ ಅರ್ಥವಾಗದೇ ಇದ್ದದ್ದನ್ನು ಕಲಿಸಿಕೊಡಲು ಹೋದರೆ ನಾನು ಕಪಟವನ್ನು ಹೇಳಿಕೊಟ್ಟಂತೆ ಆಗುವುದಿಲ್ಲವೇ?" ಎಂದರು.

ಅಂತಃಪುರದಲ್ಲಿ ಹೈಮಳಿಗೊಬ್ಬಳೇ ಒಬ್ಬ ಭಕ್ತಳಿದ್ದಳು. ಅವಳು ನನ್ನ ತಂಗಿ ನಾರಾಯಣಿ. ಅತ್ತಿಗೆಯನ್ನು ಅಷ್ಟು ಅನುಸರಿಸುತ್ತಿದ್ದುದರಿಂದ ಅವಳು ನಾನಾ ಮಾತುಗಳನ್ನು ಕೇಳಬೇಕಾಗಿತ್ತು. ಕುಟುಂಬದಲ್ಲಿ ಹೈಮಳ ಪಾಲಿಗೆ ಬರುತ್ತಿದ್ದ ಅನೇಕ ಅಪಮಾನಗಳ ವರದಿಯನ್ನು ಈ ತಂಗಿ ಒದಗಿಸುತ್ತಿದ್ದಳು ನನಗೆ. ಆದರೆ ಒಂದು ದಿನವೂ ಹೈಮಳಿಂದ ಇಂಥ ವರದಿಯನ್ನು ಕೇಳಿಲ್ಲ ನಾನು. ಇಂಥ ವಿಷಯಗಳಲ್ಲಿ ಅವಳು ಬಾಯಿ ಬಿಡುವುದಕ್ಕೇ ಸಂಕೋಚಪಡುತ್ತಿದ್ದಳು. ಆ ಸಂಕೋಚವು ತನ್ನ ಬಗ್ಗೆ ಅಂತೂ ಅಲ್ಲ.

ಹೈಮಳು ತನ್ನ ತಂದೆಯ ಕಡೆಯಿಂದ ಪಡೆಯುತ್ತಿದ್ದ ಕಾಗದಗಳನ್ನೆಲ್ಲ ನನಗೆ ಓದಲು ಕೊಡುತ್ತಿದ್ದಳು. ಕಾಗದಗಳು ಸಂಕ್ಷೇಪವಾಗಿದ್ದರೂ ರಸಮಯವಾಗಿರುತ್ತಿದ್ದುವು. ಅವಳು ತಂದೆಗೆ ಬರೆದ ಕಾಗದಗಳನ್ನು ಟಪಾಲಿಗೆ ಹಾಕುವ ಮೊದಲು ನನಗೆ ಓದಲು ಕೊಡುತ್ತಿದ್ದಳು. ತಂದೆಯೊಡನೆ ತನ್ನ ಸಂಬಂಧವನ್ನು ನನ್ನೊಂದಿಗೆ ಭಾಗಮಾಡಿಕೊಳ್ಳದೆ ಹೋಗಿದ್ದರೆ ಅವಳ ಅಭಿಪ್ರಾಯದಲ್ಲಿ ಅವಳ ದಾಂಪತ್ಯ ಪೂರ್ಣವಾದಂತೆ ಅನ್ನಿಸುತ್ತಿರಲಿಲ್ಲ. ಅವಳ ಕಾಗದಗಳಲ್ಲಿ ಅತ್ತೆಯ ಮನೆಯ ವಿಷಯವಾಗಿ ಯಾವ ವಿಧವಾದ ದೂರು ಆಕ್ಷೇಪಣೆಗಳ ವಾಸನೆಯೂ ಇರುತ್ತಿರಲಿಲ್ಲ. ಇದ್ದಿದ್ದರೆ ಕಷ್ಟವಾಗುತ್ತಿತ್ತು.

ನಾರಾಯಣಿಯ ಬಾಯಿಂದ ಕೇಳಿದ್ದೆ – ಅತ್ತೆಯ ಮನೆಯ ಬಗ್ಗೆ ಸೊಸೆಯೇನು ಬರೆಯುತ್ತಿದ್ದಾಳೆಂದು ತಿಳಿದುಕೊಳ್ಳಲು ಆಗಾಗ ಆ ಕಾಗದಗಳನ್ನ ಒಡೆದು ನೋಡುವ ಒತ್ತಾಯ ಬರುತ್ತಿತ್ತು ಅವಳ ಮೇಲೆ.

ಕಾಗದಗಳಲ್ಲಿ ದೂರುಗಳ ಯಾವ ಸುಳಿವನ್ನೂ ಕಾಣದೆ ನಮ್ಮ ಮನೆಯವರ ಮನಸ್ಸು ಶಾಂತವಾಯಿತೆಂದು ಖಂಡಿತವಾಗಿ ಹೇಳಲಾರೆ. ಅದಕ್ಕೆ ಬದಲಾಗಿ ಅವರಿಗೆ ಆಶಾಭಂಗವಾಗಿ ದುಃಖವಾಗಿರುವುದಕ್ಕೂ ಸಾಕು. ಅತ್ಯಂತ ಬೇಸರದಿಂದಲೇ ಅವರು "ಅಷ್ಟೊಂದು ದೊಡ್ಡ ದೊಡ್ಡ ಕಾಗದಗಳನ್ನ ಯಾಕೆ ಮತ್ತೆ ಬರೆಯೋದು ಅವಳು? ಇವಳೊಬ್ಬಳೇ ಅಪ್ಪನನ್ನ ಕಂಡಿರೋವಳು! ನಿರ್ವಾಕವಿಲ್ಲ! ನಾವೆಲ್ಲ ಯಾರೋ ಇವಳ ಲೆಕ್ಕದಲ್ಲಿ?" ಎಂದುಕೊಂಡಿರಬೇಕು. ಬಹಿರಂಗವಾಗಿ ಇನ್ನೂ ಏನೇನೋ ಕೆಟ್ಟ ಮಾತುಗಳನ್ನೂ ಆಡಿದ್ದರು. ನಾನು ಬಹಳ ಅಸಮಾಧಾನದಿಂದ ಹೈಮಳಿಗೆ "ನಿಮ್ಮ ತಂದೆಗೆ ಬರೆಯುವ ಕಾಗದಗಳನ್ನು ಬೇರೆ ಯಾರ ಕೈಗೂ ಕೊಡಬೇಡ ಇನ್ನು ಮೇಲೆ, ನನ್ನ ಕೈಯಲ್ಲಿ ಕೊಡು, ಕಾಲೇಜಿಗೆ ಹೋಗುವಾಗ ನಾನು ಪೋಸ್ಟ್ ಮಾಡುತ್ತೇನೆ" ಎಂದೆ.

ಹೈಮಳು ಬೆರಗಾಗಿ "ಯಾಕೆ?" ಎಂದು ಕೇಳಿದಳು.

ನಾನು ಸಂಕೋಚಪಟ್ಟು ಜವಾಬೇನೂ ಹೇಳಲಿಲ್ಲ.

ಮನೆಯಲ್ಲಿ ಈಗ ಎಲ್ಲರೂ ಹೇಳುವುದಕ್ಕೆ ಶುರುಮಾಡಿದರು "ಇನ್ನು ಆಯಿತು, ಅಪೂ ತಲೆಯನ್ನು ತಿನ್ನಲಿಕ್ಕೆ ಶುರುಮಾಡಿದಳು. ಬಿ.ಎ. ಡಿಗ್ರಿ ಆದ ಹಾಗೇ ಇನ್ನು. ಆದರೆ ಹುಡುಗನದು ತಾನೇ ಏನು ತಪ್ಪು?.... ಮಂಕುಬೂದಿ ಎರಚುವವಳು ಇರುವಾಗ" ಹೀಗೆಲ್ಲಾ.

ನಿಜವೇ. ತಪ್ಪೆಲ್ಲಾ ಹೈಮಳದೇ, ಅವಳ ದೊಡ್ಡ ತಪ್ಪೆಂದರೆ ಅವಳ ವಯಸ್ಸು ಹದಿನೇಳು, ಇನ್ನೊಂದು ತಪ್ಪು ನಾನವಳನ್ನ ಪ್ರೀತಿಸುವಂತೆ ಮಂಕುಬೂದಿ ಎರಚಿದ್ದಾಳೆ. ಅವಳ ಇನ್ನೊಂದು ದೋಷವೇನೆಂದರೆ ವಿಧಾತನ ವಿಧಿ-ಅದರ ದೆಸೆಯಿಂದ ನನ್ನ ಹೃದಯದ ರಂಧ್ರ ರಂಧ್ರಗಳಲ್ಲೂ ಇಡೀ ಆಕಾಶವೇ ಇಂದು ವೇಣುಗಾನ ಮಾಡುತ್ತಿದೆ.

ಬಿ.ಎ. ಡಿಗ್ರಿಯನ್ನು ನಾನು ತಿಪ್ಪೆಗೆಸೆಯಲು ಕೂಡ ಸಿದ್ಧ. ಆದರೆ ಕೇವಲ ಹೈಮಳ ಒಳ್ಳೆಯದಕ್ಕಾಗಿ ಪ್ರತಿಜ್ಞೆ ಮಾಡಿದೆ-ನಾನು ಪಾಸುಮಾಡುವುದೊಂದೇ ಅಲ್ಲ, ಒಳ್ಳೇ ಪದವಿಯಲ್ಲೇ ಪಾಸು ಮಾಡುತ್ತೇನೆ. ಈ ಪ್ರತಿಜ್ಞೆಯನ್ನು ಪಾಲಿಸಲು ನನ್ನ ಅಂದಿನ ಅವಸ್ಥೆಯಲ್ಲೂ ಕೆಲವು ಅನುಕೂಲತೆಗಳ ಬೆಂಬಲ ನನಗಿದ್ದಿತೆಂಬ ಭರವಸೆಯಿತ್ತು : ಅವು ಯಾವುವೆಂದರೆ-ಒಂದು, ಹೈಮಳ ಪ್ರೇಮದ ನಡುವೆ ಆಕಾಶದಷ್ಟು ಎಷ್ಟು ವಿಸ್ತಾರವಿತ್ತೆಂದರೆ ಸಂಕೀರ್ಣವಾದ ಆಸಕ್ತಿಗಳ ಮಧ್ಯೆ ಅದು ಮನಸ್ಸನ್ನ ಹಿಡಿದು ಇಡುತ್ತಿರಲಿಲ್ಲ. ಆ ಪ್ರೇಮದ ನಾಲ್ಕು ದಿಕ್ಕೂ ದೊಡ್ಡದೊಂದು ಸ್ವಾಸ್ಥ್ಯಕರವಾದ ಸುಳಿಗಾಳಿ ಬೀಸುತ್ತಿತ್ತು. ಎರಡನೆಯದು, ಪರೀಕ್ಷೆಗಾಗಿ ಯಾವ ಪಠ್ಯಪುಸ್ತಕಗಳನ್ನೋದಬೇಕಾಗಿತ್ತೋ ಅವುಗಳನ್ನು ಹೈಮಳ ಸಂಗಡ ಕೂತು ಒಟ್ಟಿಗೇ ಓದುವುದು ಕಷ್ಟವಾಗಿರಲಿಲ್ಲ.

ಪರೀಕ್ಷೆಯನ್ನು ಪಾಸುಮಾಡುವ ಉದ್ಯೋಗದಲ್ಲಿ ನಡುಕಟ್ಟು ಕಟ್ಟಿ ಸಿದ್ಧವಾದೆ. ಒಂದು ದಿನ ಭಾನುವಾರ ಮಧ್ಯಾಹ್ನ ಹೊರಗಣ ಕೋಣೆಯಲ್ಲಿ ಕೂತು ಮಾರ್ಟಿನ್ನ್ ಎಂಬ ಲೇಖಕ ಬರೆದಿದ್ದ ಚರಿತ್ರೆ ತತ್ತ್ವದ ಗ್ರಂಥವನ್ನು ಓದುತ್ತಿದ್ದೆ. ಅದರ ಪುಟಗಳಲ್ಲಿನ ವಿಶೇಷ ಪಂಕ್ತಿಗಳನ್ನು ನೀಲಿ ಪೆನ್ಸಿಲಿನಿಂದ ಗುರುತು ಹಾಕುತ್ತ ಹೋದೆ. ಇಂತಹ ಸಮಯದಲ್ಲಿ ಹಾಗೇ ಒಮ್ಮೆ ಹೊರಗಡೆ ನನ್ನ ದೃಷ್ಟಿ ಹೋಯಿತು.

ನನ್ನ ಕೋಣೆಯ ಎದುರುಗಡೆಯ ಅಂಗಳದ ಉತ್ತರ ದಿಕ್ಕಿನಲ್ಲಿ ಮೇಲು ಮಹಡಿಯ ಹೆಂಗಸರ ಕೋಣೆಗಳಿಗೆ ಹೋಗಲು ಮೆಟ್ಟಲುಗಳಿದ್ದುವು. ಅದಕ್ಕೆ ಸೇರಿಕೊಂಡಂತೆ ಮಧ್ಯೆ ಕೆಲವು ಸಣ್ಣ ಸಣ್ಣ ಕಿಟಕಿಗಳಿದ್ದವು. ನಾನಾಗ ನೋಡಿದೆ– ಅಂತಹ ಕಿಟಕಿಯೊಂದರ ಪಕ್ಕದಲ್ಲಿ ಹೈಮಳು ಮೌನವಾಗಿ ಕೂತು ಪಶ್ಚಿಮ ದಿಕ್ಕಿನ ಕಡೆ ಏನೋ ನೋಡುತ್ತಿದ್ದಾಳೆ. ಆ ದಿಕ್ಕಿನಲ್ಲಿ ಮಲ್ಲಿಕರ ಮನೆಯ ಹೂದೋಟದಲ್ಲಿ ಬಂಗಾರ ಬಣ್ಣದ ಗುಲಾಬಿ ಗಿಡ ಹೂಗಳಿಂದ ತುಂಬಿಹೋಗಿದೆ.

ನೋಡಿದೊಡನೆ ನನ್ನ ಎದೆ ಧಸಕ್ಕೆಂದಿತು. ಮನಸ್ಸಿನ ಮಧ್ಯೆ ನಿರ್ಲಕ್ಷ್ಯತೆಯ ಪರದೆ ಯಾವುದೊಂದಿತ್ತೋ ಅದು ಹರಿದುಹೋಯಿತು – ಆ ನಿಶ್ಶಬ್ದಗಭೀರವಾದ ವೇದನೆಯ ರೂಪವನ್ನು ಇಷ್ಟು ದಿನ ನಾನೆಂದೂ ಇಷ್ಟು ಸ್ಪಷ್ಟವಾಗಿ ಕಂಡಿದ್ದಿಲ್ಲ.

ಬೇರೇನೂ ಇಲ್ಲ. ನಾನವಳು ಕೂತಿದ್ದ ಭಂಗಿಯನ್ನು ಮಾತ್ರ ನೋಡಬಲ್ಲೆನಾದೆ. ತೊಡೆಯ ಮೇಲೆ ಒಂದು ಕೈಯ ಮೇಲೆ ಇನ್ನೊಂದು ಕೈ ಸ್ಥಿರವಾಗಿ ಬಿದ್ದಿದೆ. ತಲೆ ಗೋಡೆಗೊರಗಿಸಿಕೊಂಡಿದ್ದಾಳೆ. ಬಿಚ್ಚಿದ ತಲೆಗೂದಲು ಎಡ ಹೆಗಲಿನಿಂದ ಚಾಚಿ ಎದೆಯ ಮೇಲೆ ತೂಗುತ್ತ ಬಿದ್ದಿದೆ. ನನ್ನ ಎದೆಯ ಒಳಗಡೆ ತಳಮಳ ಹುಟ್ಟಿಕೊಂಡಿತು.

ನನ್ನ ಬಾಳುವೆಯಂತೂ ಎಷ್ಟು ಕಿಕ್ಕಿರಿ ತುಂಬಿದೆಯೆಂದರೆ ನಾನೆಲ್ಲೂ ಯಾವ ಶೂನ್ಯತೆಯನ್ನೂ ಗಮನಿಸಲಾಗಲಿಲ್ಲ. ಇಂದು ಹಠಾತ್ತಾಗಿ ನನ್ನ ಅತ್ಯಂತ ಸನಿಯದಲ್ಲೇ ಅತಿ ದೊಡ್ಡದಾದ ಗಹ್ವರವನ್ನು ಕಂಡೆ. ಏನು ಮಾಡಿದರೆ, ಏತರ ಸಹಾಯದಿಂದ ನಾನು ಆ ಗಹ್ವರವನ್ನು ತುಂಬಿಸಲು ಸಾಧ್ಯವಾದೀತು ?

ನನಗಂತೂ ಯಾರನ್ನೂ ಯಾವುದನ್ನೂ ಬಿಡಬೇಕಾದ ಅಗತ್ಯ ಬಿದ್ದಿರಲಿಲ್ಲ – ಆತ್ಮೀಯರನ್ನಾಗಲಿ, ಅಭ್ಯಾಸಗಳನ್ನಾಗಲಿ, ಬೇರೆ ಯಾವುದನ್ನೇ ಆಗಲಿ. ಹೈಮಳಾದರೂ ಎಲ್ಲವನ್ನೂ ಬಿಟ್ಟು ನನ್ನ ಬಳಿಗೆ ಬಂದಿದ್ದಾಳೆ. ಅದು ಎಷ್ಟು ಮಾತ್ರದ್ದೆಂದು ನಾನೆಂದೂ ಸರಿಯಾಗಿ ಯೋಚಿಸಿರಲಿಲ್ಲ. ನಮ್ಮ ಕುಟುಂಬದಲ್ಲಿ ಅವಳು ಅಪಮಾನದ ಮುಳ್ಳಿನ ಹಾಸಿನ ಮೇಲೇ ಕೂಡಬೇಕಾದರೆ ಅಥವಾ ಓಡಾಡಬೇಕಾದರೆ ! ಆ ಹಾಸಿನಲ್ಲಿ ಸ್ವಲ್ಪ ಭಾಗವನ್ನು ನನಗೂ ಅನುಭವಿಸಿಯಾಗಿದೆ. ಆ ದುಃಖದಲ್ಲಿ ಹೈಮಳೊಂದಿಗೆ ನನ್ನ ಸೇರುವಿಕೆಯಿತ್ತು. ಆದ್ದರಿಂದ ನಾವಿಬ್ಬರೂ ಬೇರೆಯಾಗಲಿಲ್ಲ. ಆದರೆ ಈ ಗಿರಿಬಾಲೆಯು ಹದಿನೇಳು ವರುಷಗಳ ಕಾಲ ಒಳಗಣಿಂದಲೂ, ಹೊರಗಣಿಂದಲೂ ಎಷ್ಟು ವಿಸ್ತಾರವಾದ ಸ್ವಾತಂತ್ರ್ಯ, ಸ್ವಾಚ್ಛಂದ್ಯಗಳ

ನಡುವೆ ಬೆಳೆದು ದೊಡ್ಡವಳಾಗಿದ್ದಾಳೆ ; ಅದಾವ ನಿರ್ಮಲ ಸತ್ಯದಿಂದ ಮತ್ತು ಉದಾರವಾದ ಪ್ರಭೆಯಿಂದ ಅವಳ ಪ್ರಕೃತಿಯು ಇಷ್ಟು ಋಜು, ಶುಭ್ರ ಮತ್ತು ಬಲಯುತವಾಗಿ ಬೆಳೆದಿತ್ತು. ಅವುಗಳಿಂದ ಹೈಮಳು ಯಾವ ರೀತಿಯಲ್ಲಿ ನಿರತಿಶಯ, ನಿಷ್ಠುರರೂಪದಲ್ಲಿ ಬೇರ್ಪಡಿಸಲ್ಪಟ್ಟು ಇದ್ದಾಳೆಂಬ ವಿಷಯವನ್ನು ಇಷ್ಟು ದಿನ ನಾನು ಪೂರ್ತಿಯಾಗಿ ಅನುಭವ ಮಾಡಲಾಗಲಿಲ್ಲ. ಏಕೆಂದರೆ ಆ ಸ್ಥಳದಲ್ಲಿ ಅವಳ ಸಂಗಡ ನನಗೆ ಸಮಾನವಾದ ಆಸನವಿರಲಿಲ್ಲ.

ಹೈಮಳು ಒಳಗೊಳಗೇ, ಗಳಿಗೆ ಗಳಿಗೆಯೂ ಸಾಯುತ್ತಲಿದ್ದಾಳೆ. ಅವಳಿಗೆ ನಾನು ಏನೆಲ್ಲ ಕೊಡಲು ಸಿದ್ಧ. ಆದರೆ ಬಿಡುಗಡೆಯನ್ನು ಕೊಡಲಾರೆ. ನನ್ನ ಬಾಳುವೆಯೆಲ್ಲಿ ಅವಳೆಲ್ಲಿ ? ಆ ಕಾರಣದಿಂದಲೇ ಕಲಿಕತ್ತೆಯ ಗಲ್ಲಿಯಲ್ಲಿ ಈ ಕಿಟಕಿಯ ಸಲಾಕೆಗಳ ಸಂದಿಯಿಂದ ಮೌನವಾದ ಆಕಾಶದೊಡನೆ ಅವಳ ಮೌನವಾದ ಮನದ ಮಾತುಗಳನ್ನಾಡುತ್ತಿದ್ದಾಳೆ. ಮತ್ತು ಒಂದೊಂದು ದಿನ ರಾತ್ರಿ ಹಠಾತ್ತಾಗಿ ಎಚ್ಚೆತ್ತು ಎದ್ದು ನೋಡಿದರೆ ಅವಳು ಹಾಸುಗೆಯ ಮೇಲಿಲ್ಲ. ಕೈಮೇಲೆ ತಲೆಯಿಟ್ಟುಕೊಂಡು ಆಕಾಶ ತುಂಬಿದ ತಾರೆಗಳ ಕಡೆ ಮುಖವೆತ್ತಿ ಮಾಳಿಗೆಯ ಮೇಲೆ ಮಲಗಿದ್ದಾಳೆ !

ಮಾರ್ಟಿನೋ ಚರಿತ್ರಗ್ರಂಥ ಓದದೆ ಹಾಗೆ ಬಿದ್ದುಕೊಂಡಿದೆ. ಯೋಚಿಸಲು ತೊಡಗಿದೆ – ಏನುಮಾಡಲಿ ? ಎಳೆತನದಿಂದಲೂ ಅಪ್ಪನ ಬಳಿ ನನಗೆ ಸಂಕೋಚಕ್ಕೆ ಮಿತಿಯಿರಲಿಲ್ಲ. ಎಂದೂ ಅವರೊಂದಿಗೆ ಮುಖಕ್ಕೆದುರಾಗಿ ಆಲೋಚನೆ ನಡೆಸುವಷ್ಟು ಸಾಹಸ ಮತ್ತು ವಾಡಿಕೆ ನನಗಿರಲೇ ಇಲ್ಲ. ಆ ದಿನ ತಡೆಯಲಾರದೆ ಹೋದೆ. ಸಂಕೋಚದಿಂದ ತಲೆ ಗುಂಯಿಗುಡುತ್ತ ಇರಲು “ಅಪ್ಪ, ನನ್ನ ಹೆಂಡತಿಗೆ ಮೈಯೇಕೋ ಚೆನ್ನಾಗಿಲ್ಲ. ಅವಳನ್ನ ಒಂದು ಸಲ ಅವಳ ತಂದೆಯ ಊರಿಗೆ ಕಳುಹಿಸಿದರೆ ಒಳ್ಳೆಯದು” ಎಂದು ಹೇಳಿಬಿಟ್ಟೆ.

ಅಪ್ಪ ಇದನ್ನು ಕೇಳಿದೊಡನೆ ಬೆಚ್ಚಿ ಬೆರಗಾಗಿಬಿಟ್ಟರು. ಅವರ ಊಹೆಯಲ್ಲಿ ಬಹುಶಃ ಸಂದೇಹವಿಲ್ಲದೆ ಈ ಹೈಮಳೇ ನನ್ನನ್ನು ಹೀಗೆ ಪ್ರೇರೇಪಿಸಿ ಎಂದೂ ಮಾಡದಿದ್ದ ವರ್ತನೆಯನ್ನು ಆಚರಿಸುವಂತೆ ಮಾಡಿದ್ದುದು. ಆಗಲೇ ಅವರೆದ್ದು ಅಂತಃಪುರಕ್ಕೆ ಹೋಗಿ ಹೈಮಳನ್ನು “ನೋಡು, ಹೈಮಾ, ನಿನಗೇತರ ಕಾಯಿಲೆ ?” ಎಂದು ಕೇಳಿಬಿಟ್ಟರು.

ಹೈಮಳು “ಕಾಯಿಲೆಯೇನೂ ಇಲ್ಲವಲ್ಲ” ಎಂದಳು.

ಅಪ್ಪನು ಈ ಉತ್ತರವನ್ನು ತಪ್ಪರ್ಥ ಮಾಡಿಕೊಂಡರು – ಇದು ಬರೇ ರೋಷ ತೋರುವುದಕ್ಕೇ ಹೀಗೆ ಎಂಬುದಾಗಿ.

ಆದರೆ ಹೈಮಳ ಮೈ ದಿನೇ ದಿನೇ ಒಣಗಿ ಕಡ್ಡಿಯಾಗುತ್ತಿದ್ದುದನ್ನು ನಾವಾರೂ ಪ್ರತಿದಿನದ ಅಭ್ಯಾಸವೇಶದ ದೆಸೆಯಿಂದ ನೋಡಲಾಗಲಿಲ್ಲ. ಒಂದು ದಿನ

ವನಮಾಲಿಬಾಬು ಅವಳನ್ನು ಕಂಡು ಬೆರಗಾಗಿ "ಲೇ ... ಹೈಮೀ...ಇದೇಕೆ ಹೀಗಾಗಿದ್ದೀಯು? ನಿನ್ನ ಮುಖ ಮೈ ಹೀಗೇಕೆ ಸೊರಗಿಹೋಗಿವೆ? ಕಾಯಿಲೆಯೇನೂ ಇಲ್ಲವಲ್ಲ?" ಎಂದರು. ಹೈಮಳು "ಇಲ್ಲ" ಎಂದಳು.

ಇದಾದ ಹತ್ತು ದಿನಗಳಾದ ಅನಂತರ ಇದ್ದಕ್ಕಿದ್ದ ಹಾಗೆ, ಹೇಳಲಿಲ್ಲ ಕೇಳಲಿಲ್ಲ, ನಮ್ಮ ಮಾವ ಬಂದು ಹಾಜರಾದರು. ಹೈಮಳ ಅವಸ್ಥೆಯ ಬಗ್ಗೆ ಖಂಡಿತವಾಗಿಯೂ ವನಮಾಲಿ ಬಾಬುಗಳೇ ಆತನಿಗೆ ಬರೆದು ಅಲ್ಲಿಗೆ ಕರೆಯಿಸಿಕೊಂಡಿದ್ದರು.

ಮದುವೆಯಾದ ಮೇಲೆ ಅಪ್ಪನನ್ನ ಬೀಳ್ಕೊಡುವಾಗ ಮಗಳು ತನ್ನ ಕಂಬನಿಯನ್ನು ಅದುಮಿಟ್ಟುಕೊಂಡಿದ್ದಳು. ಈ ಬಾರಿ ಮತ್ತೆ ಭೆಟ್ಟಿಯಾದಾಗ ಅಪ್ಪನು ಎಂದಿನಂತೆ ಅವಳ ಗಲ್ಲ ಹಿಡಿದು ಮುಖವೆತ್ತಿ ಹಿಡಿದಾಗ ಹಾಗೇ ಹೈಮಳ ಕಣ್ಣುಗಳು ತುಂಬಿ ಹರಿಯಿತು. ಅಪ್ಪನು ಒಂದು ಮಾತನ್ನೂ ಆಡಲಿಲ್ಲ. "ಹೇಗಿದ್ದೀಯಾ?" ಎಂದು ಪ್ರಶ್ನೆಯನ್ನೂ ಕೇಳಲಾಗಲಿಲ್ಲ. ನನ್ನ ಮಾವ ತನ್ನ ಮಗಳ ಮುಖದಲ್ಲಿ ಏನನ್ನ ನೋಡಿದ್ದನೋ ಅದರಿಂದ ಆತನ ಎದೆಯೊಡೆಯುವಂತಿತ್ತು, ಖಂಡಿತ. ಹೈಮಳು ಆತನ ಕೈಹಿಡಿದು ತನ್ನ ಕೋಣೆಗೆ ಕರೆದುಕೊಂಡು ಹೋದಳು. ಎಷ್ಟೋ ಮಾತಾಡುವ, ಕೇಳುವ ಅಗತ್ಯವಿದೆ. ಅವಳ ತಂದೆಯ ಆರೋಗ್ಯವೂ ಅಷ್ಟು ಚೆನ್ನಾಗಿರುವಂತೆ ಕಾಣುತ್ತಿಲ್ಲ.

ಅಪ್ಪ ಕೇಳಿದರು "ಬೂಡಿ, ನನ್ನ ಸಂಗಡ ಬರುತ್ತೀಯಾ ಊರಿಗೆ ?"

ಹೈಮಳು ಅದಕ್ಕೆ ಕಾದಿದ್ದವಳಂತೆ ಒಡನೆಯೇ "ಹೂಂ, ಬರುತ್ತೀನಿ" ಎಂದಳು.

"ಸರಿ, ಹಾಗಾದರೆ...ಎಲ್ಲಾ ಬಂದೋಬಸ್ತು ಮಾಡುತ್ತೇನೆ" ಎಂದು ಎದ್ದರು ಆತ. ನನ್ನ ಮಾವ ಬರುವಾಗ ಅತ್ಯಂತ ಕಳವಳದಿಂದ ಕೂಡಿಲ್ಲದೆ ಇದ್ದಿದ್ದರೆ ಹೊಸಿಲು ದಾಟಿದೊಡನೆಯೇ ಅವರಿಗೆ ಗೊತ್ತಾಗುತ್ತಿತ್ತು – ಈ ಮನೆಯಲ್ಲಿ ತನಗೆ ಆ ಮೊದಲಿನ ಆದರವಿಲ್ಲವೆಂದು. ಹಠಾತ್ತಾಗಿ ಆದ ಅವರ ಆಗಮನವನ್ನೊಂದು ಉಪದ್ರವವೆಂದು ಭಾವಿಸಿ ನಮ್ಮಪ್ಪ ಅವರೊಡನೆ ಸರಿಯಾಗಿ ಮಾತು ಕೂಡ ಆಡಲಿಲ್ಲ. ನನ್ನ ಮಾವ ಮೊದಲು ಅಂದುಕೊಂಡಿದ್ದರು. ಬೀಗರು ಒಮ್ಮೆ ಬಾರಿಬಾರಿಗೂ ಅವರಿಗೆ ಆಶ್ವಾಸನೆ ಕೊಟ್ಟದ್ದರು–ಮಗಳನ್ನು ಯಾವಾಗ ಬೇಕಾದರೂ ಕರೆದುಕೊಂಡು ಹೋಗಬಹುದು, ಎಂದು. ಈ ಮಾತು ತಪ್ಪಿಸಬಹುದೆಂಬ ಅನುಮಾನ ಅವರೆಂದೂ ಮಾಡಿರಲಿಲ್ಲ.

ಅಪ್ಪ ತಂಬಾಕಿನ ಹೊಗೆಯೆಳೆಯುತ್ತಲೇ "ನೋಡಿ ಸ್ವಾಮಿ, ನಾನಂತೂ ಏನೂ ಹೇಳಲೂ ಸಾಧ್ಯವಿಲ್ಲ. ಒಂದು ಸಲ ಒಳಗಡೆ ವಿಚಾರಿಸಿಕೊಂಡು ಬಂದು ಆಮೇಲೆ ಹೇಳುತ್ತೇನೆ" ಎಂದರು.

'ಒಳಗಡೆ' ಯ ಮೇಲೆ ನೆಪಹಾಕುವುದರ ಅರ್ಥ ನನಗೆ ಗೊತ್ತಿಲ್ಲದೆ ಇಲ್ಲ. ಚೆನ್ನಾಗಿ ತಿಳಿದುಕೊಂಡೆ. ಕೆಲಸ ನಡೆಯುವ ಹಾಗೆ ಇಲ್ಲ – ನಡೆಯಲೂ ಇಲ್ಲ.

'ಸೊಸೆಯ ಮೈ ಆರೋಗ್ಯವಿಲ್ಲ' ಎಂಥ ದೊಡ್ಡ ಅಪವಾದ ! ಏನು ಅನ್ಯಾಯ ?

ನಮ್ಮ ಮಾವ ತಾನೇ ಒಬ್ಬ ದೊಡ್ಡ ಡಾಕ್ಟರನ್ನ ಕರೆದುಕೊಂಡು ಬಂದು ತೋರಿಸಿದರು. ಡಾಕ್ಟರು "ಹವಾ ಬದಲಾವಣೆ ಆವಶ್ಯಕವಿದೆ. ಇಲ್ಲದೆಹೋದರೆ ಹಠಾತ್ತಾಗಿ ಏನಾದರೂ ಕೆಟ್ಟ ಕಾಯಿಲೆ ಆಗುವ ಸಂಭವವಿದೆ" ಎಂದರು. ಅದನ್ನ ಕೇಳಿ ಅಪ್ಪ ನಗುತ್ತ "ಹಠಾತ್ತಾಗಿ ಒಂದು ಕೆಟ್ಟ ಕಾಯಿಲೆ ಅವಳೊಬ್ಬಳಿಗೇ ಅಲ್ಲ. ಯಾರಿಗಾದರೂ ಬರಬಹುದು, ಅದೊಂದು ದೊಡ್ಡ ಸಂಗತಿಯೆ ?" ಎಂದುಬಿಟ್ಟರು.

ನನ್ನ ಮಾವ ಅದಕ್ಕೆ "ಗೊತ್ತೇ, ಇವರು ಪ್ರಸಿದ್ಧ ಡಾಕ್ಟರು ... ಅವರು ಹೇಳುವುದೇನೆಂದರೆ" ... ಎನ್ನುತ್ತಿರುವಾಗ ನಡುವೆ ಬಾಯಿಹಾಕಿ ಅಪ್ಪ "ಇಂಥಾ ಪ್ರಸಿದ್ಧ ಡಾಕ್ಟರುಗಳನ್ನು ನಾನು ಬಹಳ ನೋಡಿದ್ದೇನೆ. ದಕ್ಷಿಣೆ ಆಸೆ ತೋರಿಸಿದರೆ ಶಾಸ್ತ್ರಿಗಳ ಹತ್ತಿರ ಎಲ್ಲ ವಿಧಾನಗಳೂ ದೊರೆಯುತ್ತವೆ. ಹಾಗೇ ಎಲ್ಲ ಡಾಕ್ಟರುಗಳ ಹತ್ತಿರವೂ ಯಾವ ರೋಗಕ್ಕೆ ಬೇಕಾದರೂ ಸರ್ಟಿಫಿಕೇಟ್ ಸಿಗತ್ತೆ ಬಿಡಿ" ಎಂದುಬಿಟ್ಟರು.

ಈ ಮಾತನ್ನು ಕೇಳಿ ನನ್ನ ಮಾವ ಒಂದೇ ಏಟಿಗೆ ಮೂಕರಾಗಿಬಿಟ್ಟರು. ಹೈಮಳು ತಿಳಿದುಕೊಂಡಳು – ಅವಳ ತಂದೆಯ ಪ್ರಸ್ತಾಪವು ಅಪಮಾನ ಸಹಿತ ಅಗ್ರಾಹ್ಯವಾಯಿತೆಂದು. ಅವಳ ಮನಸ್ಸು ಪೂರ್ತಿಯಾಗಿ ಕಲ್ಲಿನಂತಾಗಿಬಿಟ್ಟಿತು. ನಾನಿನ್ನು ಸೈರಿಸಲಾರದೆ ಹೋದೆ. ತಂದೆಯ ಬಳಿ ಹೋಗಿದ್ದೇ "ಅಪ್ಪಾ, ನಾನೇ ಹೈಮಳನ್ನು ಕರೆದುಕೊಂಡು ಹೋಗುತ್ತೇನೆ ಎಲ್ಲಾದರೂ ಹೊರಗೆ" ಎಂದೆ.

ಅಪ್ಪ ಹುಲಿಯಂತೆ ಗರ್ಜಿಸುತ್ತ "ಎಲಾ ನಿನ್ನ ಅಹಂಕಾರವೇ ...!" ಎಂದು ಮನಸ್ಸಿಗೆ ಬಂದಂತೆ ಬೈಯತೊಡಗಿದರು.

ನನ್ನ ಗೆಳೆಯರಲ್ಲನೇಕರು ಯಾರು ಯಾರೋ ನನ್ನನ್ನ ಕೇಳಿದ್ದಾರೆ – ನಾನು ಏನು ಹೇಳಿದೆನೋ ಅದನ್ನೇಕೆ ಮಾಡಲಿಲ್ಲ ಎಂಬುದಾಗಿ, ಹೆಂಡತಿಯನ್ನು ಕರೆದುಕೊಂಡು ತಂದೆಗೆ ಪ್ರತಿಭಟಿಸಿ ಹೊರಗಡೆ ಹೊರಟುಹೋಗಿದ್ದರೆ ಏನಾಗುತ್ತಿತ್ತು? ಏಕೆ ಹೋಗಲಿಲ್ಲ? ಏಕೆ? ಸಮಾಜಧರ್ಮಕ್ಕೆ ಎದುರಾಗಿ ಸತ್ಯಧರ್ಮವನ್ನು ಎಳೆದಿಡಬಲ್ಲೆನಾಗಿದ್ದರೆ, ಮನೆಯ ಮುಂದೆ ಮನೆಯ ಮನುಷ್ಯನನ್ನ ಬಲಿಕೊಡಲು ನಿರಾಕರಿಸಬಲ್ಲೆನಾಗಿದ್ದರೆ ನನ್ನ ನಾಡಿಗಳ ರಕ್ತದಲ್ಲಿ ಯುಗಯುಗಾಂತರದ "ಸಂಸ್ಕೃತಿ"ಯು ಯಾವುದಿತ್ತೋ ಅದೇನು ಮಾಡಬೇಕಾಗಿತ್ತು? ನಿಮಗಿದು ಗೊತ್ತೇ? ಯಾವ ದಿನ ಅಯೋಧ್ಯೆಯ ಜನರು ಸೀತೆಯನ್ನು ಪರಿತ್ಯಾಗ ಮಾಡೆಂದು ರಾಮನಿಗೆ ಒತ್ತಾಯ ಮಾಡಿದರಲ್ಲ, ಅವರ ನಡುವೆ ನಾನೂ ಒಬ್ಬನಿದ್ದೆನಲ್ಲ! ಅಲ್ಲದೆ ಆ ಪರಿತ್ಯಾಗದ ಗೌರವದ ಕಥೆಯನ್ನು ಯುಗ ಯುಗಗಳಲ್ಲೂ ಗಾನ ಮಾಡುತ್ತ ಬಂದಿದ್ದಾರಲ್ಲ, ಅವರ ನಡುವೆಯೂ ನಾನೊಬ್ಬನಲ್ಲವೆ? ಮತ್ತು ನಾನೇ ಅಲ್ಲವೇ ಆ ದಿನ ಜನಾದರಣೆಗೆಂದು ಸ್ತ್ರೀಪರಿತ್ಯಾಗದ ಗುಣವರ್ಣನೆ ಮಾಡಿ ಲೇಖನ

ಬರೆದು ಮಾಸಪತ್ರಿಕೆಯಲ್ಲಿ ಪ್ರಕಟ ಮಾಡಿಸಿದ್ದು ? ಎದೆಯ ರಕ್ತದಲ್ಲಿ ಲೇಖನಿಯನ್ನದ್ದಿ ನಾನೂ ಒಂದು ದಿನ ಎರಡನೇ ಸೀತಾಪರಿತ್ಯಾಗದ ಕಥೆಯನ್ನು ಬರೆಯಬೇಕಾಗುತ್ತದಲ್ಲ....ಅದನ್ನು ಕೂಡ ಯಾರು ಬಲ್ಲರು ?

ತಂದೆ, ಮಗಳ ಎರಡನೇ ಸಲದ ಪರಸ್ಪರ ಬೀಳ್ಕೊಡುವಿಕೆಯ ಗಳಿಗೆ ಬಂತು. ಈ ಬಾರಿಯೂ ಇಬ್ಬರ ಮುಖಗಳಲ್ಲೂ ನಗೆ. ಮಗಳು ನಗುನಗುತ್ತಲೇ "ಅಪ್ಪಾ, ಮತ್ತೆ ನೀವು ಎಂದಾದರೂ ನನ್ನನ್ನ ನೋಡಬೇಕೆಂದು ಹೀಗೆ ಇದ್ದಕ್ಕಿದ್ದಹಾಗೆ ಈ ಮನೆಗೆ ಓಡಿಬಂದಲ್ಲಿ ನಾನೇನು ಮಾಡುತ್ತೇನೆ ಗೊತ್ತಾ ? ಮನೆಯ ಬಾಗಿಲು ಮುಚ್ಚಿ ನಿಮ್ಮನ್ನ ಒಳಗೆ ಬಿಡುವುದೇ ಇಲ್ಲ" ಎಂದಳು.

ಅವಳಪ್ಪನೂ ನಗುನಗುತ್ತಲೇ "ನಾನು ಮತ್ತೆ ಬಂದಾಗ ಜೊತೆಯಲ್ಲಿ ಕನ್ನ ಕೊರೆಯುವವನೊಬ್ಬನನ್ನ ಕರೆದುಕೊಂಡೇ ಬರುತೇನೆ ಹಾಗಾದರೆ" ಎಂದು ಉತ್ತರವಿತ್ತ.

ಇದಾದ ಅನಂತರ ಹೈಮಳ ಮುಖದ ಮೇಲಿನ ಆ ಚಿರದಿನದ ಸ್ನಿಗ್ಧಹಾಸವು ಅಳಿಸಿಹೋಯಿತು. ಬೇರೊಂದು ದಿನವೂ ಕಾಣಿಸಿಕೊಳ್ಳಲಿಲ್ಲ...

ಆಮೇಲೆ ಏನೇನಾಯಿತೋ ಅದನ್ನೆಲ್ಲ ನಾನು ಹೇಳಲಾರೆ.

ಈಗ ನನ್ನ ಕಿವಿಗೆ ಬಿದ್ದಿದೆ – ಅಮ್ಮ ನನಗೆ ಹುಡುಗಿ ಹುಡುಕುತ್ತಿದ್ದಾಳೆ. ಬಹುಶಃ ಒಂದು ದಿನ ಅಮ್ಮನ ಮಾತನ್ನು ಕೇಳದೆ ಇರುವುದಕ್ಕಾಗುವುದಿಲ್ಲ. ಅದೂ ಸಂಭವ ; ಕಾರಣ ಇರಲಿ ಬಿಡಿ. ಇನ್ನದರಿಂದೇನು ಪ್ರಯೋಜನ ?

೮. (ಬೋಷ್ಟಮಿ) ವೈಷ್ಣವಿಯ ಕಥೆ

ನನಗೆ ಬರೆಯುವ ಹವ್ಯಾಸವಿರುವುದು ನಿಜ, ಆದರೂ ಮನುಷ್ಯರ ಮನೋರಂಜನೆಯೇ ನನ್ನ ಲೇಖನಿಯ ಧರ್ಮವಲ್ಲ – ಈ ಕಾರಣದಿಂದ ಜನರು ಕೂಡ ನನ್ನನ್ನ ಸರ್ವದಾ ಬೇರೆ ಬೇರೆ ವರ್ಣನೆ, ಅಲಂಕಾರಗಳಿಂದ 'ಉಲ್ಲಾಸ'ಗೊಳಿಸುತ್ತ ಇರುತ್ತಾರೆ. ಅವರು ಉಪಯೋಗಿಸುವ ಬಣ್ಣಗಳಲ್ಲಿ ಹೆಚ್ಚು ಭಾಗ ಕಪ್ಪುಬಣ್ಣವೇ. ನನ್ನ ಬಗ್ಗೆ ನಾನಾ ಬಗೆಯ ಮಾತುಕಥೆಗಳನ್ನು ಕೇಳಬೇಕಾಗಿ ಬರುತ್ತದೆ. ನನ್ನ ದುರದೃಷ್ಟದಿಂದ ಆ ಮಾತುಕಥೆಗಳೆಲ್ಲ ನನಗೆ ಹಿತವಾದುವಲ್ಲ. ಮನೋರಂಜಕವಂತೂ ಅಲ್ಲವೇ ಅಲ್ಲ.

ಮೈಮೇಲೆ ಯಾವ ಭಾಗದಲ್ಲಾದರೂ ನೋವು ಕೊಡುವ ಪೆಟ್ಟು ಬೀಳುತ್ತಿದ್ದರೆ, ಆ ಭಾಗ ಎಷ್ಟು ಸಣ್ಣ, ಎಷ್ಟು ತುಚ್ಛವಾದುದಾದರೂ ಇಡೀ ಮೈಯನ್ನು ನೋವಿನ ಜೋರಿನಿಂದ ಅಲ್ಲಾಡಿಸಿಬಿಡುತ್ತದೆ. ಬೈಗಳನ್ನು ತಿಂದುಕೊಂಡೇ ಬೆಳೆದು ದೊಡ್ಡವರಾಗಿರುವವರು ತಮ್ಮ ಸ್ವಭಾವವನ್ನು ಪ್ರಯತ್ನಪೂರ್ವಕವಾಗಿ ಸೂಕ್ಷ್ಮ ಮಾಡಿಕೊಂಡುಬಿಡುವರು. ಅಲ್ಲದೆ ತಮ್ಮ ಸುತ್ತ-ಮುತ್ತಲದನ್ನೆಲ್ಲಾ ನಿರ್ಲಕ್ಷಿಸಿ ಯಾವಾಗಲೂ ತಮ್ಮ ಬಗ್ಗೆಯೇ ಯೋಚಿಸುತ್ತಿರುವರು. ಅದರಿಂದೇನು ಅವರಿಗೆ ಆರಾಮವಿಲ್ಲ, ಹಿತವೂ ಅಲ್ಲ. ತಮ್ಮನ್ನ ತಾವೇ ಮರೆಯುವುದರಲ್ಲೇ ನಿಜವಾದ ನೆಮ್ಮದಿ.

ಈ ಕಾರಣದಿಂದ ನಾನು ಆಗಾಗ ನಿರ್ಜನತೆಯನ್ನು ಅರಸಿಕೊಂಡು ಹೋಗಬೇಕಾಗಿರುತ್ತದೆ. ಮನುಷ್ಯರ ಏಟುಗಳನ್ನು ತಿಂದು ತಿಂದು ಮನಸ್ಸಿನ ಎಲ್ಲಾ ಕಡೆಗಳಲ್ಲೂ ಗುಳಿಗಳು ಬಿದ್ದುಹೋಗಿರುತ್ತವೆ. ಅವುಗಳು ಮತ್ತೆ ತುಂಬಬೇಕಾದರೆ ಪ್ರಕೃತಿದೇವಿಯ ನಿಪುಣ ಹಸ್ತದ ಸೇವೆಯ ಗುಣದಿಂದಲೇ ಸಾಧ್ಯ.

ಕಲಿಕತ್ತೆಯಿಂದ ದೂರವಾಗಿ ಏಕಾಂತವಾಗಿ ನನ್ನದೊಂದು ಅಜ್ಞಾತವಾಸದ ಏರ್ಪಾಡೊಂದನ್ನು ಮಾಡಿಕೊಂಡಿದ್ದೆ. 'ಸ್ವಚರ್ಚೆ'ಯ ದುಂಡಾವರ್ತಿಯಿಂದ ತಪ್ಪಿಸಿಕೊಳ್ಳಲು ಆ ಸ್ಥಳದಲ್ಲಿ ಆ 'ನಾನು' ಎಂಬುದನ್ನು ಮರೆತುಕೊಂಡಿರುತ್ತೇನೆ. ಅಲ್ಲಿನ ಜನರು ಇನ್ನೂ ನನ್ನ ಸಂಬಂಧವಾಗಿ ಯಾವುದೊಂದು ನಿರ್ಣಯಕ್ಕೂ ಬಂದಿರಲಿಲ್ಲ. ಅವರ ಕಣ್ಣಿಗೆ ಕಾಣಬಂದಿರುವಂತೆ ನಾನು ಭೋಗಿಯಲ್ಲ – ಕಲಿಕತ್ತೆಯ ಕಲ್ಮಷವನ್ನು ತಂದು ಹಳ್ಳಿಯ ರಾತ್ರಿಯನ್ನು ಮಲಿನ ಮಾಡುತ್ತಿಲ್ಲ. ಮತ್ತೆ ಯೋಗಿಯೂ

ಅಲ್ಲ. ಅವರಿಗೆ ಕಾಣುವ ಹಾಗೆ ಅಲ್ಪಸ್ವಲ್ಪ ಹಣದ ಲಕ್ಷಣಗಳೂ ಇವೆ. ಬರೇ ದಾರಿ ಹೋಕನೂ ಅಲ್ಲ. ಹಳ್ಳಿಯ ರಸ್ತೆಗಳಲ್ಲಿ ಓಡಾಡಿದರೂ ಯಾವುದೊಂದು ಗುರಿ, ಗಮ್ಯಸ್ಥಾನಗಳನ್ನು ತಲಪುವುದಕ್ಕಲ್ಲ. ನನ್ನನ್ನ ಗೃಹಸ್ಥ ಎಂದೆನ್ನುವುದಕ್ಕೂ ಆಗದು. ಏಕೆಂದರೆ ಮನೆಯೊಳಗೆ ಹೆಂಗಸರು, ಮಕ್ಕಳು ಯಾರೂ ಇಲ್ಲ. ಇವೆಲ್ಲ ಕಾರಣಗಳಿಂದ ಪರಿಚಿತ ಜನರ ಶ್ರೇಣಿಗಳಲ್ಲಿ ನನ್ನನ್ನು ಯಾವುದೊಂದು ಗೊತ್ತಾದ ಗೂಡಿನಲ್ಲಿ ಇಡಲಾರದೆ ಗ್ರಾಮದ ಜನ ನನ್ನ ಬಗ್ಗೆ ಯೋಚನೆ ಮಾಡುವುದನ್ನು ಒಂದು ವಿಧವಾಗಿ ಬಿಟ್ಟುಬಿಟ್ಟಿದ್ದಾರೆ. ನಾನೂ ನಿಶ್ಚಿಂತೆಯಿಂದ ಇದ್ದೇನೆ.

ಈಚೆಗೆ ಕೆಲವೇ ದಿನಗಳಾಯಿತು. ನನಗೊಂದು ಸಮಾಚಾರ ಬಂತು. ಏನೆಂದರೆ ಈ ಗ್ರಾಮದಲ್ಲಿ ನನ್ನ ಸಂಬಂಧವಾಗಿ ಏನೋ ಗೌರವಭಾವವಿಟ್ಟು ಕೊಂಡಿರುವ ವ್ಯಕ್ತಿಯೊಬ್ಬರಿದಾರೆ–ಆದರೆ ಮೌಢ್ಯದಿಂದ ಇಟ್ಟಿರುವ ಗೌರವವಲ್ಲ.

ಆ ವ್ಯಕ್ತಿಯ ಸಂಗಡ ಮೊದಲ ಭೇಟಿಯಾದುದು ಆಷಾಢ ಮಾಸದ ಒಂದು ದಿನ, ಮಧ್ಯಾಹ್ನದ ವೇಳೆ. ಅಳುವುದನ್ನು ನಿಲ್ಲಿಸಿಬಿಟ್ಟ ಮೇಲೂ ಕಣ್ಣು ರೆಪ್ಪೆಗಳು ಇನ್ನೂ ಒದ್ದೆಯಾಗಿದ್ದರೆ ಯಾವ ಭಾವ ಇರುವುದೋ ಬೆಳಗ್ಗೆಯ ಮಳೆ ಬಿದ್ದು ನಿಂತ ಮೇಲೆ ಮರಗಿಡಗಳ ಎಲೆ, ರೆಂಬೆಗಳ, ಆಕಾಶ, ಮತ್ತು ಬೀಸುವ ಗಾಳಿಯ ಮಧ್ಯೆ ಆ ಭಾವವಿತ್ತು. ಗ್ರಾಮದ ಕೊಳದ ಸ್ವಲ್ಪ ಎತ್ತರವಾದ ದಿಂಡಿನ ಮೇಲೆ ನಿಂತು ನಾನು ಮೈ ತುಂಬಿಕೊಂಡಿದ್ದ ಶ್ಯಾಮಲ ವರ್ಣದ ಹಸುವೊಂದು ನೆಮ್ಮದಿಯಾಗಿ ಹುಲ್ಲು ಮೇಯುತ್ತಿದ್ದುದನ್ನು ನೋಡುತ್ತಿದ್ದೆ. ಅದರ ನುಣುಪಾದ ಹೊಳೆಯುವ ಮೈಮೇಲೆ ಬೆಳಗಿನ ಮೃದುವಾದ ಬಿಸಿಲು ಬಿದ್ದು ಅದರ ಅಂದವನ್ನು ಇಮ್ಮಡಿಗೊಳಿಸಿದ್ದುದನ್ನು ಕಂಡು ಏನು ಯೋಚಿಸುತ್ತಿದ್ದೆನೆಂದರೆ–ಮುಗಿಲ ಬೆಳಕಿನಿಂದ 'ಸಭ್ಯತೆ'ಯೆನ್ನುವುದು ತನ್ನ ಮೈಯನ್ನು ದೂರವಿಡುವ ಸಲುವಾಗಿಯೇ ಇಷ್ಟೊಂದು ದರ್ಜಿಗಳಂಗಡಿಗಳನ್ನು ಸ್ಥಾಪಿಸಿದೆಯಲ್ಲಾ. ಇದರಷ್ಟು ಅಪವ್ಯಯ ಬೇರೊಂದಿಲ್ಲ ಎಂಬುದಾಗಿ.

ಇಂತಹ ಸಮಯದಲ್ಲಿ ಹಠಾತ್ತಾಗಿ ನೋಡಿದೆ–ಪ್ರೌಢಳಾದ ಹೆಂಗಸೊಬ್ಬಳು ನನ್ನ ಮುಂದೆ ನೆಲದ ಮೇಲೆ ಸಾಷ್ಟಾಂಗ ನಮಿಸಿ ಪ್ರಣಾಮ ಮಾಡುತ್ತಿದ್ದಾಳೆ. ಆಕೆಯ ಸಡುವಿನಲ್ಲಿ, ಸೆರಗಿನಲ್ಲಿ ಸೇವಂತಿಗೆ, ಸಂಪಿಗೆ, ಕರ್ಣಕುಂಡಲ ಮುಂತಾದ ಬೇರೆ ಬೇರೆ ಹೂಗಳು ಕೆಲವಿದ್ದುವು. ಅವುಗಳಲ್ಲಿ ಸೇವಂತಿಗೆ ಹೂವೊಂದನ್ನು ತೆಗೆದು ನನ್ನ ಕೈಯಲ್ಲಿಟ್ಟು ಭಕ್ತಿಯಿಂದ ಕೈ ಜೋಡಿಸಿ "ನನ್ನ ದೇವರಿಗೆ ಅರ್ಪಣೆ" ಎಂದಳು.

ಹಾಗೆ ಹೇಳಿ ಹೊರಟುಹೋದಳು. ನಾನು ಹಾಗೇ ಅಚ್ಚರಿಗೊಂಡು ನಿಂತಿದ್ದೆ. ಅವಳನ್ನ ಸರಿಯಾಗಿ ನೋಡುವುದಕ್ಕೂ ಆಗಲಿಲ್ಲ.

ಈ ಸಂಗತಿ ಅತ್ಯಂತ ಸಾಧಾರಣವೆಂದು ಅನ್ನಿಸಿತೇ ಅಲ್ಲದೆ ಅದರ ಮುಂದೆ ನನ್ನೆದುರಿನಲ್ಲಿದ್ದ ಹಿಂದೆ ನಮೂದಿಸಿದ ಆ ಹಸು ಆ ಮಧ್ಯಾಹ್ನದ ಧೂಳು ಮಿಶ್ರವಾದ ಬಿಸಿಲಿನಲ್ಲಿ ಬಾಲದಿಂದ ಬೆನ್ನ ಮೇಲಿನ ಸೊಳ್ಳೆ, ನೊಣಗಳನ್ನು ಹೊಡೆದೋಡಿಸುತ್ತ, ಹೊಸ ವರ್ಷದ ಹಸನಾದ ಹುಲ್ಲನ್ನು, ದೊಡ್ಡದಾಗಿ ಉಸಿರು ಬಿಡುತ್ತ ಬಿಡುತ್ತ ನೆಮ್ಮದಿಯಾದ ಹಿಗ್ಗಿನಿಂದ ಮೇಯುತ್ತ ಓಡಾಡುತ್ತಲಿರುವುದೂ ಅದರ ಚೆನ್ನಾದ ಬಾಳುವೆಯ ಕ್ರೀಡೆಯೂ ನನ್ನ ಕಣ್ಣಿಗೆ ಅತಿಶಯವಾದ ನೋಟದಂತೆ ಕಂಡುಬಂತು. ಈ ಮಾತನ್ನ ಹೇಳಿದರೆ ಜನ ನಕ್ಕರೂ ನಗಬಹುದು. ಆದರೆ ನನ್ನ ಮನವಾಗ ಭಕ್ತಿಯಿಂದ ತುಂಬಿಹೋಯಿತು. ನಾನು ಸಹಜವಾದ ಆನಂದದಿಂದ ಜೀವನದ ಒಡೆಯನಿಗೆ ಮನದಲ್ಲೇ ನಮಿಸಿದೆ. ತೋಟದ ಮಾವಿನ ಮರವೊಂದರಿಂದ ಎಲೆಯ ಸಮೇತವಾಗೊಂದು ಎಳೆಯ ಮಾವಿನ ರೆಂಬೆಯನ್ನು ಕಿತ್ತು ಅದನ್ನು ಆ ಹಸುವಿಗೆ ತಿನ್ನಿಸಿದೆ. ಈ ರೀತಿಯಿಂದ ದೇವರನ್ನು ಒಲಿಸಿದೆನೆಂದು ನನಗನ್ನಿಸಿತು.

ಇದಾದ ಮರುವರುಷ ನಾನು ಮತ್ತೆ ಅಲ್ಲಿಗೆ ಹೋದಾಗ ಮಾಘಮಾಸದ ಕೊನೆಯ ದಿನಗಳು. ಆ ಬಾರಿ ಇನ್ನೂ ಚಳಿ ಹೆಚ್ಚಾಗೇ ಇತ್ತು. ಬೆಳಗಿನ ಬಿಸಿಲು ಪೂರ್ವ ದಿಕ್ಕಿನ ಕಿಟಕಿಯ ಕಡೆಯಿಂದ ನನ್ನ ಬೆನ್ನ ಮೇಲೆ ಬೀಳುತ್ತಿತ್ತು. ಅದನ್ನ ತಡೆಯದೆ ನಾನು ಎರಡನೇ ಮಹಡಿಯ ಕೋಣೆಯೊಂದರಲ್ಲಿ ಕೂತು ಬರೆಯುತ್ತಲಿದ್ದೆ. ಆಳು ಬಂದು ಆನಂದಿ ವೈಷ್ಣವಿಯು ನನ್ನೊಡನೆ ಭೆಟ್ಟಿಯಾಗಲು ಬಂದಿದ್ದಾಳೆಂದು ಹೇಳಿದ. ಯಾರೋ ಈ ವೈಷ್ಣವಿ, ಆನಂದಿಯೆಂಬವಳು, ನನಗಂತೂ ಗೊತ್ತಿಲ್ಲ. ಅನ್ಯಮನಸ್ಕನಾಗಿ "ಒಳ್ಳೇದು, ಇಲ್ಲೇ ಬರಹೇಳು" ಎಂದೆ.

ವೈಷ್ಣವಿಯು ಬಂದು ನನ್ನ ಕಾಲಧೂಳನ್ನು ತಲೆಗೊತ್ತಿಕೊಂಡು ನನಗೆ ಸಾಷ್ಟಾಂಗ ಪ್ರಣಾಮ ಮಾಡಿದಳು. ಕಣ್ಣೆತ್ತಿ ನೋಡಿದರೆ, ಬೇರೆ ಯಾರೂ ಅಲ್ಲ. ಆಕೆ, ಅದೇ ಹಿಂದೆ ಒಮ್ಮೆ, ಹೇಳದೆ ಕೇಳದೆ ನನ್ನ ಕಾಲಿಗೆರಗಿ ನನಗೆ ಹೂವರ್ಪಿಸಿದ ಪ್ರೌಢ ವಯಸ್ಸಿನ ಹೆಂಗಸು! ಅವಳು ಚೆಲುವೆಯೇ ಅಲ್ಲವೇ ಅದನ್ನು ಗಮನಿಸುವಂಥ ವಯಸ್ಸು ಮೀರಿಹೋಗಿತ್ತು ಆಕೆಗೆ. ನೀಳವಾದ ಮೈಕಟ್ಟು. ಸಾಧಾರಣ ಹೆಂಗಸರಿಗಿಂತಲೂ ಸ್ವಲ್ಪ ಎತ್ತರ. ಯಾವುದೋ ಒಂದು ನಿಯತವಾದ ಭಕ್ತಿಯಿಂದ ಆಕೆಯ ಶರೀರವು ನಮ್ರವಾಗಿ ಬಾಗಿತ್ತು. ಆದರೂ ಆಕೆಯ ನಡೆವಳಿಕೆಯ ಭಂಗಿ ಬಲಿಷ್ಠ ಮತ್ತು ನಿಸ್ಸಂಕೋಚವಾಗಿತ್ತು. ಬೇರೆಲ್ಲದಕ್ಕಿಂತಲೂ ಹೆಚ್ಚಾಗಿ ಕಣ್ಣಿಗೆ ಬೀಳುವುದು ಆಕೆಯ ಅತಿ ದೊಡ್ಡ ಕಣ್ಣುಗಳು. ಒಳಗಡೆಯಿದ್ದ ಯಾವುದೋ ಒಂದು ಶಕ್ತಿಯಿಂದ ಆ ದೊಡ್ಡ ಕಣ್ಣುಗಳೆರಡೂ ಯಾವುದೋ ದೂರದ ವಸ್ತುವನ್ನು ಹತ್ತಿರವೆಳೆದುಕೊಂಡು ನೋಡುತ್ತಿರುವಂತಿತ್ತು.

ಅದೇ ಬಲಯುತವಾದ ದೃಷ್ಟಿಯಿಂದ ನನ್ನನ್ನು ತನ್ನ ಕಡೆ ಗಮನವಿಡುವಂತೆ ಸೆಳೆದು ಆಕೆ "ಇದೇನು ವಿಚಿತ್ರ, ದೇವರೆ, ನನ್ನನ್ನ ನಿಮ್ಮ ಈ ರಾಜ

ಸಿಂಹಾಸನದಡಿಯಲ್ಲಿ ಕರೆದು ಹಾಜರಾಗುವಂತೆ ಮಾಡಿದುದೇಕೆ? ನಿಮ್ಮನ್ನ ಎಂದಿನಂತೆ ಮರದ ಕೆಳಗೆ ನೋಡಿದ್ದರೆ ಹಿತವೆನ್ನಿಸುತ್ತಿತ್ತು" ಎಂದಳು.

ಆಗರ್ಥವಾಯಿತು. ಈಕೆ ಬಹುಶಃ ನಾನು ನಿತ್ಯವೂ ನನ್ನ ಮನೆಯ ತೋಟದ ಮರದ ಕೆಳಗೆ ಹೋಗಿ ಕೂತಿರುವುದನ್ನು ನೋಡಿದ್ದಾಳೆ. ನಾನು ಆಕೆಯನ್ನು ನೋಡಿರದಿದ್ದರೂ ಆಕೆ ನನ್ನನ್ನು ನೋಡಿದ್ದಾಳೆ. ಚಳಿಗಾಲ ಆರಂಭವಾಗುತ್ತಲೂ ಕೆಲದಿನಗಳಿಂದ ನಾನು ಬೀದಿಯಲ್ಲಿ ಮತ್ತು ತೋಟದಲ್ಲಿ ಓಡಾಡುವುದನ್ನು ನಿಲ್ಲಿಸಿ ಬಿಸಿಲು ಮಾಳಿಗೆಯ ಮೇಲೆ ಸಂಜೆಯ ಮುಗಿಲಿನೊಂದಿಗೆ ಪರಿಚಯಮಾಡಿಕೊಳ್ಳುತ್ತ ಇರುತ್ತೇನೆ. ಅದಕ್ಕೇ ಬಹುಶಃ ಆಕೆ ನನ್ನನ್ನು ಹೊರಗಡೆಯೆಲ್ಲೂ ನೋಡಲಾಗಲಿಲ್ಲ.

ಒಂದೆರಡು ಗಳಿಗೆಯಾದ ಮೇಲೆ ಆಕೆ "ಪ್ರಭುವೇ, ನನಗೆ ಯಾವುದಾದರೊಂದು ಉಪದೇಶ ಮಾಡಿ" ಎಂದಳು.

ನಾನು ಕಷ್ಟದಲ್ಲಿ ಬಿದ್ದೆ. "ಉಪದೇಶ ಕೊಡುವುದಕ್ಕೂ ನನಗೆ ಯೋಗ್ಯತೆಯಿಲ್ಲ, ತೆಗೆದುಕೊಳ್ಳುವುದಕ್ಕೂ ಯೋಗ್ಯತೆಯಿಲ್ಲ. ಕಣ್ಣು ಮುಚ್ಚಿಕೊಂಡು ಮೌನವಾಗಿ ಯಾವುದು ಸುಲಭವಾಗಿ ಲಭ್ಯವೋ ಅದರಿಂದಲೇ ನನ್ನ ಉದ್ಯೋಗ ಸಾಗುತ್ತದೆ. ಈಗ ನಿನ್ನನ್ನು ನೋಡಿದೆ. ನನಗೆ ನೋಡಿದಂತೆಯೂ ಆಯಿತು. ಕೇಳಿದಂತೆಯ ಆಯಿತು," ಎಂದೆ.

ವೈಷ್ಣವಿಯು ಅತ್ಯಂತ ಹಿಗ್ಗಿನಿಂದ "ಪ್ರಭೂ, ಪ್ರಭೂ" ಎಂದುಕೊಂಡು ಮೇಲೆದ್ದಳು. ಆಮೇಲೆ "ನನ್ನ ಭಗವಂತನು ಕೇವಲ ನಾಲಗೆಯಿಂದಲೇ ಅಲ್ಲ, ಸರ್ವಾಂಗದಿಂದಲೂ ಮಾತನಾಡಬಲ್ಲ" ಎಂದಳು.

ನಾನೆಂದೆ–"ಮೌನವಾಗಿದ್ದುಬಿಟ್ಟರೆ ಸರ್ವಾಂಗದಿಂದಲೂ ಆ ಸರ್ವಾಂಗಗಳ ಮಾತನ್ನು ಕೇಳಬಹುದು. ಹಾಗೆ ಕೇಳುವ ಇಚ್ಛೆಯಿಂದಲೇ ಪಟ್ಟಣವನ್ನು ಬಿಟ್ಟು ಇಲ್ಲಿಗೆ ಬಂದಿದ್ದೇನೆ."

ಅದಕ್ಕೆ ವೈಷ್ಣವಿಯು "ಅದು ನನಗೆ ಗೊತ್ತಾಯಿತು. ಅದಕ್ಕೇ ತಾನೇ ನಾನು ತಮ್ಮ ಬಳಿಗೆ ಬಂದದ್ದು" ಎಂದಳು.

ಹೋಗುವ ಸಮಯ ಆಕೆ ನನ್ನ ಪಾದಧೂಳಿಯನ್ನು ತೆಗೆದುಕೊಳ್ಳಲು ಹೋಗಿ ನನ್ನ ಕಾಲು ಚೀಲಗಳು ಕೈಗೆ ತಗುಲಿ ಆಕೆ ಬಹಳ ನೊಂದುದನ್ನು ನಾನು ಗಮನಿಸಿದೆ.

ಮರುದಿನ ಮುಂಜಾನೆಯಲ್ಲಿ ಸೂರ್ಯ ಹುಟ್ಟುವುದಕ್ಕೆ ಮುಂಚೆಯೇ ನಾನು ಹೋಗಿ ಬಿಸಿಲು ಮಾಳಿಗೆಯ ಮೇಲೆ ಕೂತೆ. ದಕ್ಷಿಣ ದಿಕ್ಕಿನ ತೋಟದ ಹೊಂಗೆಯ ಮರಗಳ ಮೇಲಿನಿಂದ ಆಚೆಗೆ ದಿಗಂತದವರೆಗೂ ಬಯಲು ವಿಸ್ತಾರವಾಗಿ ಹರಡಿದೆ. ಪೂರ್ವ ದಿಕ್ಕಿನಲ್ಲಿದ್ದ ಬಿದಿರು ವನದಿಂದ ಸುತ್ತುವರಿದ ಗ್ರಾಮದ ಮಗ್ಗುಲ ಕಬ್ಬಿನ ಗದ್ದೆಯ ಅಂಚಿನಲ್ಲಿ ಪ್ರತಿದಿನವೂ ನನ್ನ ಕಣ್ಮುಂದೆಯೇ ಸೂರ್ಯ ಹುಟ್ಟುತ್ತಾನೆ.

ಗ್ರಾಮದ ಕಿರುಹಾದಿಯು ಮರಗಿಡಗಳ ನಿಬಿಡವಾದ ನೆರಳಿನೊಳಗಡೆಯಿಂದ ಹಠಾತ್ತಾಗಿ ಹೊರಬಿದ್ದು ಬಿಡು ಬಿಚ್ಚಾದ ಬಯಲಿನ ನಡುವೆ ಹೊಕ್ಕು ಅಲ್ಲಿಂದ ಡೊಂಕು ಡೊಂಕಾಗಿ ಬಾಗುತ್ತ ಬಹು ದೂರದ ಗ್ರಾಮಗಳ ಕೆಲಸವನ್ನು ಸಾಂಗಮಾಡಲು ಹೊರಟಿರುತ್ತದೆ.

ಸೂರ್ಯ ಹುಟ್ಟಿದ್ದಾನೆಯೋ ಇಲ್ಲವೋ ಇನ್ನೂ ಸರಿಯಾಗಿ ಹೇಳಲಾಗದು. ಶುಭ್ರವಾದೊಂದು ಇಬ್ಬನಿಯ ಮೇಲುಹೊದಿಕೆಯು ವಿಧವೆಯ ತಲೆಯ ಮುಸುಕಿನಂತೆ ಗ್ರಾಮದ ಮರಗಿಡಗಳ ಮೇಲೆ ಎಳೆಯಲ್ಪಟ್ಟಿದೆ. ಆಗ ನನ್ನ ಕಣ್ಣಿಗೆ ಬಿತ್ತು, ವೈಷ್ಣವಿಯು ಅದೇ ಮುಂಜಾನೆಯ ಮಸುಕು ಬೆಳಕಿನೊಳಗಿಂದ ಚಲಿಸುವ ಇಬ್ಬನಿಯ ಪ್ರತಿಯೊಂದರಂತೆ ಕೈಯಲ್ಲಿ ತಾಳ ಹಾಕುತ್ತ ಹರಿನಾಮ ಹಾಡಿಕೊಂಡು ಆ ಪೂರ್ವದಿಕ್ಕಿನ ಗ್ರಾಮಗಳ ಕಡೆಯಿಂದ ಹೊರಟಿದ್ದಾಳೆ.

ಮಂಪರು ಬಿಟ್ಟುಹೋದ ಕಂಗಳ ರೆಪ್ಪೆಗಳಂತೆ ಒಂದು ಸಮಯದಲ್ಲಿ ಇಬ್ಬನಿಯ ತೆರೆಯ ಮೇಲೆತ್ತಲ್ಪಟ್ಟು ಎದುರು ಬದಿಯ ಬಯಲ ಮೇಲೂ, ಗ್ರಾಮದ ಮನೆಗಳ ಮೇಲೂ ಶೀತದ ಬಿಸಿಲು ಹರಡಿ ಗ್ರಾಮದ ಮುದಿಯಜ್ಜಂದಿರಂತೆ ಬಂದು ಕಾಲುಚಾಚಿ ಹಾಯಾಗಿ ಕೂತುಕೊಂಡಿತು.

ನಾನಾಗ ಪತ್ರಿಕಾ ಸಂಪಾದಕರೊಬ್ಬರ ಒತ್ತಾಯಕ್ಕೆ ಬಿದ್ದು ಯಾವುದೋ ಒಂದು ಜರೂರಾದ ಲೇಖನ ಬರೆಯುತ್ತಿದ್ದ. ಇಂತಹ ಸಮಯದಲ್ಲಿ ಮಹಡಿ ಮೆಟ್ಟಲು ಮೇಲೆ ಕಾಲ ಸಪ್ಪುಳದೊಂದಿಗೆ ಒಂದು ಹಾಡಿನ ದನಿಯೂ ಕೇಳಬಂತು. ವೈಷ್ಣವಿಯು ಹಾಡನ್ನು ಗುನಗುನಿಸುತ್ತಲೇ ಬಂದು ನನಗೆ ಎರಗಿ ಸ್ವಲ್ಪ ದೂರದಲ್ಲಿ ನೆಲದ ಮೇಲೆ ಕೂತಳು. ನಾನು ಬರೆವಣಿಗೆಯಿಂದ ತಲೆಯನ್ನೆತ್ತಿ ನೋಡಿದೆ.

ಆಕೆಯೆಂದಳು "ನಿನ್ನೆ ನಾನು ತಮ್ಮ ಪ್ರಸಾದವುಂಡೆ ಪ್ರಭುವೇ."

"ಏನು ಹಾಗೆಂದರೆ?" ಎಂದೆ ನಾನು, ಅಚ್ಚರಿಗೊಂಡು.

"ನಿನ್ನೆ ಸಂಜೆಯ ವೇಳೆ. ನಿಮ್ಮ ಊಟವಾಗುವಾಗ ನಾನು ಅದೇ ಆಸೆಯಿಂದ ಬಾಗಿಲ ಹೊರಗಡೆ ಕೂತಿದ್ದೆ. ಊಟವಾದ ಮೇಲೆ ನಿಮ್ಮ ಆಳು ಎಲೆಯನ್ನ ಮಡಿಸಿ ಹೊರಗೆಸೆಯಲು ಬಂದಾಗ ಅದನ್ನ ನಾನು ಕೈಗೆ ತೆಗೆದುಕೊಂಡು, ಅದರಲ್ಲೇನು ಉಳಿದಿತ್ತೋ ಗೊತ್ತಿಲ್ಲ, ತಿಂದುಬಿಟ್ಟೆ." ನನಗೆ ಅಚ್ಚರಿಯಾಗಿಹೋಯಿತು. ಏನು ಹೇಳಲೂ ತೋಚದೆ ಸ್ವಲ್ಪ ಸುಮ್ಮನಿದ್ದೆ.

ನಾನು ವಿಲಾಯಿತಿಗೆ ಹೋಗಿ ಬಂದಿರುವ ವಿಷಯ ಎಲ್ಲರಿಗೂ ಗೊತ್ತು. ಅಲ್ಲೇನೇನು ತಿಂದೆನೋ ತಿನ್ನಲಿಲ್ಲವೋ ಎಂಬುದನ್ನ ಊಹಿಸುವುದು ಕಷ್ಟವೇನಲ್ಲ. ಆದರೆ ಸಗಣಿಯಂತೂ ತಿಂದು ಪವಿತ್ರ ಮಾಡಿಕೊಳ್ಳಲಿಲ್ಲ. ಬಹುಕಾಲದಿಂದ ಮೀನು, ಮಾಂಸಗಳಲ್ಲಿ ನನಗೆ ರುಚಿಯಿಲ್ಲ ನಿಜ. ಆದರೆ ನನ್ನ ಅಡಿಗೆಯವನ ಜಾತಿಯ ವಿಷಯದಲ್ಲಂತೂ ಆಲೋಚನೆ ಮಾಡುವುದು ಸಂಗತವಲ್ಲ. ನನ್ನ ಮುಖದ

ಮೇಲೆ ಅಚ್ಚರಿಯ ಸೂಚನೆಯನ್ನು ಕಂಡು ವೈಷ್ಣವಿಯು "ನಿಮ್ಮ ಪ್ರಸಾದವನ್ನು ತಿನ್ನಲು ಸಾಧ್ಯವಾಗದೆ ಹೋಗಿದ್ದಿದ್ದರೆ ನಾನು ಪ್ರತಿ ನಿತ್ಯ ನಿಮ್ಮ ಬಳಿ ಬಂದು ಹೋಗುವುದಕ್ಕೆ ಅಗತ್ಯವೇ ಇಲ್ಲ" ಎಂದಳು.

ಆಗ ನಾನು "ಜನಕ್ಕೆ ತಿಳಿದರೆ ನಿನ್ನ ಮೇಲೆ ಅವರಿಗೆ ಗೌರವವಿರುವುದಿಲ್ಲ" ಎಂದೆ. ಅದಕ್ಕೆ ಆಕೆ "ನಾನಂತೂ ಎಲ್ಲರಿಗೂ ಹೇಳಿಕೊಂಡು ತಿರುಗುತ್ತಿದ್ದೇನೆ. ಅವರೆಲ್ಲ ನನ್ನ ಅವಸ್ಥೆಯೇ ಅದು ಎಂದು ತಿಳಿದುಕೊಂಡಿದ್ದಾರೆ" ಎಂದಳು.

ವೈಷ್ಣವಿಯ ಅವಸ್ಥೆ ಎಂಥದೆಂದು ಆಕೆಯ ಕಡೆಯಿಂದ ನಾನೇನೂ ಹೆಚ್ಚಾಗಿ ತಿಳಿದುಕೊಳ್ಳಲಾಗಿರಲಿಲ್ಲ. ಇಷ್ಟು ಮಾತ್ರ ಗೊತ್ತಾಗಿತ್ತು, ಏನೆಂದರೆ ಆಕೆಯ ತಾಯಿಯಿನ್ನೂ ಇದ್ದಾಳೆ. ಆಕೆಯ ಅವಸ್ಥೆ ಚೆನ್ನಾಗೇಯಿದೆ. ಮಗಳನ್ನು ಸಾಧಾರಣ ಜನರನೇಕರು ಭಕ್ತಿಯಿಂದ ಕಾಣುತ್ತಿದ್ದಾರೆಂಬ ವಿಷಯ ಆಕೆಗೆ ಗೊತ್ತು. ಮಗಳು ತನ್ನ ಬಳಿ ಬಂದಿರಬೇಕೆಂದು ಆಕೆಯ ಆಸೆ. ಆದರೆ ಆನಂದಿಯ ಮನಸ್ಸಿಗೆ ಅದು ಇಷ್ಟವಾಗಿಲ್ಲ.

"ನಿನಗೆ ಹೇಗೆ ನಡೆಯುತ್ತದೆ?" ಎಂದು ಕೇಳಿದೆ ನಾನು. ಅವಳ ಭಕ್ತನೊಬ್ಬ ಸ್ಥಿತಿವಂತ, ಆಕೆಯ ಉಪಯೋಗಕ್ಕೆಂದು ಸ್ವಲ್ಪ ಜಮೀನು ಕೊಟ್ಟಿದ್ದಾನೆ. ಅದರಲ್ಲಿ ಬೆಳೆಯುವ ಧಾನ್ಯದಿಂದ ಅವಳೂ ತಿನ್ನುತ್ತಾಳೆ, ಇನ್ನೂ ನಾಲ್ಕೈದು ಜನ ತಿನ್ನುತ್ತಾರೆ. ಅದೇ ಯಥೇಚ್ಛವೆಂದು ಹೇಳಿದಳು ಆಕೆ. ಆಮೇಲೆ ಸ್ವಲ್ಪ ನಕ್ಕು "ನನಗಂತೂ ಎಲ್ಲ ಇತ್ತು. ಎಲ್ಲ ಬಿಟ್ಟು ಬಂದಿದ್ದೇನೆ. ಮತ್ತೆ ಬೇರೆಯವರ ಬಳಿ ಬೇಡಿ ತಿನ್ನುತ್ತಿದ್ದೇನೆ. ಇದರ ಅಗತ್ಯವೇನಿತ್ತು, ಹೇಳಿ ಮತ್ತೆ?" ಎಂದಳು.

ಪಟ್ಟಣದಲ್ಲಿದ್ದಾಗ ಈ ಪ್ರಶ್ನೆಯೆದ್ದಿದ್ದರೆ ಸುಲಭವಾಗಿ ಬಿಡುತ್ತಿರಲಿಲ್ಲ. ಭಿಕ್ಷಾವೃತ್ತಿಯೆನ್ನುವುದು ಎಷ್ಟು ಕೆಟ್ಟದ್ದು, ಅದರಿಂದ ಸಮಾಜಕ್ಕೆ ಎಷ್ಟು ಕೆಟ್ಟದ್ದಾಗುತ್ತಿದೆ ಎಂಬುದನ್ನು ತಿಳಿಯಹೇಳುತ್ತಿದ್ದೆ. ಆದರೆ ಈ ಸ್ಥಳದಲ್ಲಿ ಬಂದು ನಾನು ಪುಸ್ತಕಗಳಲ್ಲಿ ಓದಿ ತಿಳಿದಿದ್ದ ವಿದ್ಯೆಯೆಲ್ಲ ಕಳೆಗೆಟ್ಟು ಹೋಗಿ ಮೂಕವಾಗಿಬಿಡುತ್ತದೆ. ವೈಷ್ಣವಿಯ ಎದುರಿಗೆ ಯಾವ ತರ್ಕವೂ ನನ್ನ ಬಾಯಿಂದ ಹೊರಬರಲಿಷ್ಟಪಡಲಿಲ್ಲ. ನಾನು ಸುಮ್ಮನಿದ್ದೆ. ನನ್ನಿಂದ ಉತ್ತರವನ್ನಪೇಕ್ಷಿಸದೆ ಆಕೆಯೇ "ಇಲ್ಲ, ಇಲ್ಲ, ಅದೇ ನನಗೊಳ್ಳೆಯದು. ನಾನು ಬೇಡಿ ತಿನ್ನುವ ಅನ್ನವೇ ನನಗೆ ಅಮೃತದ ಸಮಾನ," ಎಂದಳು.

ಆಕೆಯ ಮಾತಿನರ್ಥವನ್ನು ನಾನು ತಿಳಿದುಕೊಂಡೆ. ಪ್ರತಿದಿನವೂ ಯಾರು ತಾನಾಗಿ ಅನ್ನ ಒದಗಿಸಿಕೊಡುತ್ತಾನೋ ಭಿಕ್ಷೆಯ ಅನ್ನದಲ್ಲಿ ಅವನ ನೆನಪೇ ಬರುತ್ತದೆ. ಮತ್ತು ಮನೆಯಲ್ಲಿ ತಿನ್ನವವರಿಗೆ ಮಾತ್ರ ನನ್ನ ಶಕ್ತಿಯಿಂದ ನಾನೇ ಅನ್ನ ಸಂಪಾದಿಸಿದೆ ಎಂಬ ಭಾವನೆ ಬರುತ್ತದೆ.

ಆಕೆಯ ಗಂಡನ ಬಗ್ಗೆ ಸಮಾಚಾರ ತಿಳಿದುಕೊಳ್ಳೋಣವೆಂದೊಮ್ಮೆ ಅನ್ನಿಸಿತು. ಆದರೆ ಆಕೆ ತಾನಾಗಿ ಹೇಳದಿದ್ದಾಗ ನಾನು ಕೇಳುವುದು ಸರಿಯಲ್ಲವೆನ್ನಿಸಿತು.

ಈ ಊರಿನ ಅಗ್ರಹಾರದಲ್ಲಿರುವ ಉಚ್ಚವರ್ಗದ ದೊಡ್ಡ ಮನುಷ್ಯರನ್ನು ಕಂಡರೆ ಆಕೆಗೆ ಅಷ್ಟಾಗಿ ಗೌರವವಿಲ್ಲ. ಆಕೆ ಹೇಳುವುದೇನೆಂದರೆ, ದೇವರಿಗೆ ಇವರುಗಳೇನೂ ಅರ್ಪಿಸುವುದೇ ಇಲ್ಲ. ಹಾಗೆ ನೋಡಿದರೆ ದೇವರು ಕೊಟ್ಟ ಭಾಗ್ಯದಲ್ಲಿ ಇವರಿಗೇ ಹೆಚ್ಚು ಭಾಗ ದೊರೆತಿರುವುದು. ಬಡವರೇ ನಿಜವಾಗಿ ಭಕ್ತಿಯಿಡುವುದು ದೇವರ ಮೇಲೆ ಮತ್ತು ಉಪವಾಸ ಸಾಯುವುದೂ ಅವರೇ.

ಈ ಪಾಳೆಯದ ದುಷ್ಕೃತ್ಯಗಳ ಬಗ್ಗೆ ಎಷ್ಟೋ ಕೇಳಿದ್ದೆ. ಅದಕ್ಕೆ ಹೇಳಿದೆ–"ಈ ಕೆಟ್ಟ ಮನಸ್ಸಿನವರ ಮಧ್ಯೆ ಇದ್ದುಕೊಂಡು ಇವರುಗಳಿಗೆ ಸರಿಯಾಗಿ ಬುದ್ಧಿ ಬರುವಂತೆ ಮಾಡು. ಆಗ ಭಗವಂತನಿಗೆ ನಿಜವಾದ ಸೇವೆ ಮಾಡಿದಂತಾಗುವುದು."

ಈ ಬಗೆಯ ದೊಡ್ಡತರದ ಉಪದೇಶಗಳನೇಕವನ್ನು ನಾನೇ ಕೇಳಿದ್ದೇನೆ. ಮತ್ತು ನಾನೇ ಅನೇಕವನ್ನು ಇತರರಿಗೆ ಹೇಳುವುದಕ್ಕೂ ಇಷ್ಟ. ಆದರೆ ವೈಷ್ಣವಿಗೆ ಇದರಿಂದ ಅಚ್ಚರಿಯಾಗಲಿಲ್ಲ. ನನ್ನ ಮುಖದ ಕಡೆ ತನ್ನ ಉಜ್ವಲವಾದ ಕಂಗಳ ದೃಷ್ಟಿನೆಟ್ಟು ಅವಳೆಂದಳು–"ನೀವು ಹೇಳುತ್ತೀರಲ್ಲವೆ? ಭಗವಂತನು ಪಾಪಿಗಳ ಮಧ್ಯೆಯೂ ಇರುತ್ತಾನೆ. ಆದ್ದರಿಂದ ಇವರುಗಳ ಸಹವಾಸ ಮಾಡಿದರೂ ಆ ಭಗವಂತನ ಪೂಜೆಯನ್ನು ಮಾಡಿದ ಹಾಗೇ– ಅದೇ ತಾನೆ?"

ನಾನು ಬೇರೇನೂ ಹೇಳಲಾಗದೆ "ಹೂಂ" ಎಂದೆ.

ಆಗವಳು "ಇವರುಗಳೆಲ್ಲ ಜೀವಿಸಿರಬೇಕಾದರೆ ಅವನೂ ಇವರುಗಳಲ್ಲಿ ಇರದೆ ಇರುತ್ತಾನೆಯೆ? ಆದರೆ ಅದರಿಂದ ನನಗೇನು? ನನ್ನ ಪೂಜೆಯೇನೋ ಈ ಸ್ಥಳದಲ್ಲಿ ಆಗುವುದಿಲ್ಲ. ನನ್ನ ಭಗವಂತನು ಇವರುಗಳ ಮಧ್ಯೆ ಇಲ್ಲ. ಅವನೆಲ್ಲಿದ್ದಾನೋ ನಾನೂ ಅಲ್ಲೇ ಅವನನ್ನರಸಿಕೊಂಡು ಅಲೆದಾಡುತ್ತೇನೆ" ಎಂದಳು. ಹೀಗೆ ಹೇಳಿ ನನಗೆ ಪ್ರಣಾಮಮಾಡಿದಳು. ಅವಳ ಮಾತಿಷ್ಟು– ಬರೇ ಮತವಿದ್ದು ಫಲವೇನು, ಸತ್ಯ ಬೇಕು ಮುಖ್ಯವಾಗಿ. ಭಗವಂತನು ಸರ್ವವ್ಯಾಪಿ. ಇದೊಂದು ಮಾತು. ಆದರೆ ನಾನೆಲ್ಲಿ ಅವನನ್ನು ಕಾಣುತ್ತೇನೋ ಅಲ್ಲೇ ಅವನು ನನ್ನ ಸತ್ಯ.

ಇನ್ನೊಂದು ದೊಡ್ಡ ವಿಶೇಷವನ್ನು ನಾನು ಸ್ಪಷ್ಟವಾಗಿ ಯಾರು ಯಾರ ಮುಂದೆಲ್ಲ ಹೇಳಲೇಬೇಕಾಗುತ್ತದೆಂದರೆ – ಆಕೆಯು ನನ್ನನ್ನು ಲಕ್ಷ್ಯವಿಟ್ಟುಕೊಂಡು ಅರ್ಪಿಸಿದ ಭಕ್ತಿಯನ್ನು ನಾನು ಗ್ರಹಣ ಮಾಡಿಯೂ ಇಲ್ಲ, ಮತ್ತು ನಿರಾಕರಿಸಿಯೂ ಇಲ್ಲ.

ಈಗಿನ ಕಾಲದ ಜಾಡ್ಯ ನನಗೂ ಹಿಡಿದಿದೆ, ನಾನೂ ಗೀತೆಯೋದುತ್ತಲೇ ಇರುತ್ತೇನೆ. ಮತ್ತು ವಿದ್ವಾಂಸರುಗಳನೇಕರ ಸಂಗಡ ಸೇರಿ ಅವರಿಂದ ಅನೇಕ

ಧರ್ಮ ತತ್ತ್ವ ಸೂಕ್ಷ್ಮಗಳ ವ್ಯಾಖ್ಯಾನಗಳನ್ನು ಕೇಳಿದ್ದೇನೆ. ಹೀಗೆ ಕೇಳುತ್ತ ಕೇಳುತ್ತಲೇ ವಯಸ್ಸು ದಾಟಿಕೊಂಡು ಹೋಗುತ್ತಿದೆ. ಆದರೆಲ್ಲೂ ಯಾವುದನ್ನೂ ಪ್ರತ್ಯಕ್ಷವಾಗಿ ಕಂಡಿಲ್ಲ. ಇಷ್ಟು ದಿನಗಳಾದ ಮೇಲೆ ನನ್ನ ದೃಷ್ಟಿಯ ಅಹಂಕಾರವನ್ನು ಪರಿತ್ಯಾಗ ಮಾಡಿ ಈ ಶಾಸ್ತ್ರಗಳರಿಯದ ಹೆಂಗಸಿನ ಎರಡು ಕಂಗಳೊಳಗಡೆಯಿಂದ ಸತ್ಯವನ್ನು ನೋಡಲಾದೆ. ಭಕ್ತಿಯನ್ನು ತೋರುತ್ತ ಅದರ ನೆಪದಲ್ಲಿ ಶಿಕ್ಷಣವನ್ನೂ ಕೊಡುವಂಥ ಎಂಥ ಪ್ರಣಾಲಿಯಿದು!

ಮರುದಿನ ಬೆಳಗ್ಗೆ ವೈಷ್ಣವಿಯು ಬಂದು ನನಗೆ ಪ್ರಣಾಮ ಮಾಡಿ ನೋಡಿದಳು. ನಾನಿನ್ನೂ ಬರೆಯುತ್ತಲೇ ಇದ್ದೆ. ಆಕೆಗೆ ರೇಗಿ "ನಿಮ್ಮನ್ನೇಕೆ ನಮ್ಮ ದೇವರು ಹೀಗೆ ವ್ಯರ್ಥವಾಗಿ ದುಡಿಸುತ್ತಿದ್ದಾನೆ. ನಾನು ಯಾವಾಗ ನೋಡಲು ಬಂದರೂ ಬರೆಯುತ್ತಲೇ ಇರುತ್ತೀರಲ್ಲ" ಎಂದಳು. ನಾನೆಂದೆ "ಯಾವ ಜನರು ಬೇರೆ ಯಾವ ಕೆಲಸಕ್ಕೂ, ಉಪಯೋಗವಿಲ್ಲವೋ ಅಂಥವರನ್ನು ದೇವರು ಸುಮ್ಮನೆ ಕೂಡಲು ಬಿಡುವುದಿಲ್ಲ, ಇಲ್ಲವಾದರೆ ಅವರು ಮಣ್ಣಾಗಿಬಿಡುತ್ತಾರೆಂಬ ಭಯದಿಂದ. ಎಲ್ಲ ವಿಧವಾದ ಕೆಲಸಕ್ಕೆ ಬಾರದ ಕೆಲಸಗಳನ್ನು ಮಾಡುವ ಭಾರ ಅವರ ಮೇಲೆ ಹಾಕುತ್ತಾನೆ."

ನಾನೆಷ್ಟು ಆವರಣಗಳಿಂದ ಮುಚ್ಚಲ್ಪಟ್ಟಿದ್ದೇನೆಂದು ಕಂಡು ಆಕೆಗೇನೋ ಒಂದು ಬಗೆಯ ಅಧೈರ್ಯವುಂಟಾಯಿತು. ನನ್ನ ಸಂಗಡ ಭೇಟಿಯಾಗಬೇಕಾದರೆ ಹೊರಗಡೆ ಆಳುಗಳ ಅನುಮತಿ ತೆಗೆದುಕೊಂಡು ಎರಡು ಮಹಡಿ ಹತ್ತಿ ಬರಬೇಕು. ಪ್ರಣಾಮ ಮಾಡಲು ಬರುವಾಗ ಹಾಳು ಆ ಉಣ್ಣೆಯ ಕಾಲುಚೀಲಗಳನ್ನು ಮುಟ್ಟಿಸಿಕೊಳ್ಳಬೇಕು. ಹೋಗಲಿ, ಇಷ್ಟೆಲ್ಲಾ ಆದಮೇಲೂ ಸಹಜವಾಗಿ ಒಂದೆರಡು ಮಾತು, ಕಥೆಯಾಡೋಣವೆಂದರೆ ನನ್ನ ಮನಸ್ಸು ಯಾವುದೋ ಲೇಖನದಲ್ಲಿ ಮಗ್ನವಾಗಿರುತ್ತದೆ.

ಕೈಗಳನ್ನ ಜೋಡಿಸಿಕೊಂಡು ಆಕೆ ನುಡಿದಳು "ಪ್ರಭೂ, ಇವತ್ತು ಬೆಳಗ್ಗೆ ಹಾಸುಗೆಯಿಂದೆದ್ದೊಡನೆಯೇ ಹಾಗೇ ನಿಮ್ಮ ಚರಣಗಳ ದರ್ಶನವಾಯಿತು. ಆಹಾ, ನಿಮ್ಮ ಪಾದಗಳೆರಡು–ಯಾವ ಹೊದಿಕೆಯೂ ಇರಲಿಲ್ಲ ಅವುಗಳ ಮೇಲೆ, ಅವೆಷ್ಟು ತಣ್ಣಗಿದ್ದುವೋ! ಎಷ್ಟು ಕೋಮಲ! ಅದೆಷ್ಟು ಕಾಲ ಅವನ್ನ ತಲೆಯ ಮೇಲಿಟ್ಟುಕೊಂಡಿದ್ದೇನೋ! ಇದು ನಿಜವಾಗಿ ನಡೆಯಿತು. ಇನ್ನು ನಾನಿಲ್ಲಿಗೆ ಬರಬೇಕಾದ ಅಗತ್ಯವೇನು ಹೇಳಿ. ಪ್ರಭೂ, ಇದು ನನ್ನ ಭ್ರಾಂತಿಯಲ್ಲವಲ್ಲ. ದಯವಿಟ್ಟು ಸರಿಯಾಗಿ ಹೇಳಿ."

ಬರೆಯುವ ಮೇಜಿನ ಮೇಲೆ ಹೂದಾನಿಯಲ್ಲಿ ಹಿಂದಿನ ದಿನದ ಹೂಗಳಿದ್ದುವು. ತೋಟದ ಮಾಲಿಯು ಬಂದು ಅವುಗಳನ್ನು ತೆಗೆದು ಹೊಸ ಹೂಗಳನ್ನು ಜೋಡಿಸಲು ತೊಡಗಿದ.

ವೈಷ್ಣವಿಯು ವ್ಯಥಿತಳಾಗಿ "ಆಗಿಹೋಯಿತೇ? ಆ ಹೂಗಳಿಂದಿನ್ನೇನೂ ಬೇಕಾಗಿಲ್ಲವೇ? ಹಾಗಾದರೆ ಇತ್ತ ಕೊಡಿ...ನನಗೆ ಕೊಡಿ" ಎಂದಳು.

ಹೀಗೆ ಹೇಳಿ ಆ ಹೂಗಳನ್ನು ತನ್ನ ಎರಡೂ ಕೈಗಳಲ್ಲಿಟ್ಟುಕೊಂಡು ಅದೆಷ್ಟು ಹೊತ್ತು ತಲೆಯನ್ನು ತಗ್ಗಿಸಿ ಏಕದೃಷ್ಟಿಯಿಂದ ಅತ್ಯಂತ ಸ್ನೇಹದಿಂದ ಅವುಗಳ ಕಡೆ ನೋಡುತ್ತಾಯಿದ್ದಳು!

ಕೆಲ ಗಳಿಗೆಗಳಾದ ಅನಂತರ ಮುಖವನ್ನೆತ್ತಿ "ನೀವು ಇವುಗಳ ಕಡೆ ನೋಡುವುದಿಲ್ಲವೆಂದೇ ಈ ಹೂಗಳು ನಿಮ್ಮ ಮುಂದೆ ಬಾಡಿಹೋಗುತ್ತವೆ. ಆದರೆ ನೀವೊಮ್ಮೆ ನೋಡಿದಲ್ಲಿ ಆಗ ನಿಮ್ಮ ಓದುಬರೆಹವೆಲ್ಲ ನಿಂತುಹೋಗುತ್ತದೆ" ಎಂದಳು.

ಹೀಗೆ ಹೇಳಿದ್ದೇ ಆ ಹೂಗಳನ್ನು ಸೆರಗಿನಲ್ಲಿ ಕಟ್ಟಿಕೊಂಡು ತನ್ನ ತಲೆಯನ್ನು ಮುಟ್ಟಿ "ನನ್ನ ದೇವರನ್ನು ನಾನು ಕೊಂಡು ಹೋಗುತ್ತೇನೆ" ಎಂದಳು.

ಕೇವಲ ಹೂದಾನಿಯಲ್ಲಿ ಜೋಡಿಸಿಟ್ಟರೆ ಆ ಹೂಗಳನ್ನು ಆದರಿಸಿದಂತಾಗಲಿಲ್ಲ–ಎಂಬುದನ್ನು ನಾನು ತಿಳಿದುಕೊಳ್ಳಲು ತಡವಾಗಲಿಲ್ಲ. ನಾನಾಗ ಈ ಹೂಗಳನ್ನು ನಿತ್ಯವೂ ವ್ಯರ್ಥವಾಗಿ ಸ್ಕೂಲಿನಲ್ಲಿ ಚೆನ್ನಾಗಿ ಓದಿಕೊಂಡು ಬರದ ಹುಡುಗರನ್ನು ಬೆಂಚಿನಮೇಲೆ ನಿಲ್ಲಿಸಿದಂತೆ ನಿಲ್ಲಿಸುತ್ತಿದ್ದೆನಲ್ಲ, ಎಂದುಕೊಂಡೆ.

ಆ ದಿನ ಸಂಜೆಯ ವೇಳೆ ಮಾಳಿಗೆಯ ಮೇಲೆ ಕೂತಿದ್ದಾಗ ವೈಷ್ಣವಿಯು ಮತ್ತೆ ಬಂದು ನನ್ನ ಕಾಲ ಬಳಿ ಕೂತಳು. ನನ್ನನ್ನು ಕುರಿತು "ಇವತ್ತು ಬೆಳಗ್ಗೆ ಹರಿನಾಮ ಹೇಳುವಾಗ ನಿಮ್ಮ ಹೂಗಳನ್ನು ಮನೆ ಮನೆಗೂ ಹೋಗಿ ಕೊಟ್ಟೆ. ನನ್ನ ಭಕ್ತಿಯನ್ನು ಕಂಡು ವೇಣೀ ಚಕ್ರವರ್ತಿಯೆಂಬವರೊಬ್ಬರು ನಗುತ್ತ "ಅಯ್ಯೊ, ಹುಚ್ಚಿ, ಯಾರ ಮೇಲೆ ತೋರುತ್ತಿದ್ದೀಯೆ ನಿನ್ನ ಭಕ್ತಿ? ಪ್ರಪಂಚದಲ್ಲಿ ಎಲ್ಲರ ದೃಷ್ಟಿಯಲ್ಲೂ ಕೆಟ್ಟವನೆನ್ನಿಸಿಕೊಂಡವನ ಮೇಲೆಯೆ?" ಎಂದುಬಿಟ್ಟರು. "ಹೌದೇ ಪ್ರಭುವೆ, ಎಲ್ಲರೂ ಹಾಗೆ ಕೆಟ್ಟವರೆಂದು ನಿಮ್ಮನ್ನು ಬೈಯುತ್ತಾರೆಯೆ?" ಎಂದಳು.

ಒಂದೇ ಒಂದು ಗಳಿಗೆಯಷ್ಟು ಹೊತ್ತು ನನ್ನ ಮನಸ್ಸು ಅತ್ಯಂತ ಸಂಕುಚಿತವಾಗಿ ಹೋಯಿತು. ನಿಂದೆಯ ಕೊಚ್ಚೆಯು ಇಷ್ಟು ದೂರದವರೆಗೂ ಎರಚಲ್ಪಟ್ಟಿದೆಯೆ?

ವೈಷ್ಣವಿಯು ಹೇಳತೊಡಗಿದಳು. "ವೇಣಿ ತಿಳಿದುಕೊಂಡಿದ್ದಾನೆ. ನನ್ನ ಭಕ್ತಿಯನ್ನೆಲ್ಲ ವ್ಯರ್ಥವಾಗಿ ಒಂದೇ ಒಂದು ಉಸಿರಿನಲ್ಲಿ ವೆಚ್ಚಮಾಡಿಬಿಡುತ್ತಿದ್ದೇನೆ ಎಂದು. ಆದರೆ ಇದೇನು ಎಣ್ಣೆಯ ಬತ್ತಿಯೇನಲ್ಲ. ಇದು ಬೆಂಕಿಯ ಜ್ವಾಲೆ. ಅದಿರಲಿ, ನನ್ನ ಪ್ರಭುವೆ, ನಿಮ್ಮನ್ನೇಕೆ ಜನ ಬಯ್ಯುವುದು?"

ನಾನಂದೆ "ನನಗೆ ಅದು ಸಲ್ಲತಕ್ಕದ್ದೆಂದಿರಬೇಕು, ಬಹುಶಃ ನಾನು ಒಮ್ಮೆ ಒಳಗೊಳಗೇ ಇವರ ಮನಸ್ಸನ್ನು ಕದಿಯಬೇಕೆಂದು ಲೋಭ ತೋರಿರಬೇಕು."

ಆಗ ವೈಷ್ಣವಿಯು "ಮನುಷ್ಯರ ಮನಸ್ಸಿನಲ್ಲಿ ವಿಷವೆಷ್ಟಿರುತ್ತದೆಂದು ನೋಡಿದಿರಲ್ಲ? ಅಂತಹ ವಿಷದ ಮನಸ್ಸನ್ನ ಕದಿಯುವುದರಲ್ಲಿ ನಿಮಗೆ ಲೋಭವೇಕೆ? ಆ ಲೋಭದಿಂದ ಫಲವಿಲ್ಲ" ಎಂದಳು.

ನಾನೆಂದೆ "ಇರಬಹುದು. ಮನದಲ್ಲಿ ಲೋಭವಿಲ್ಲದಿದ್ದರೂ ಹೊಡೆದು ನೋಯಿಸುವ ಲೋಭ ಬಾಯಲ್ಲಿರಬೇಕು. ಆಗ ಒಮ್ಮೊಮ್ಮೆ ಬೇರಾರೂ ಸಿಗದಿದ್ದರೂ ತಮ್ಮನ್ನು ತಾವೇ ನೋಯಿಸಿಕೊಳ್ಳಲು ತಮ್ಮ ಮನದಲ್ಲೇ ಸಾಕಷ್ಟು ವಿಷ ಒದಗುವುದು. ಅದಕ್ಕೆಂದೇ ಏನೋ ನನ್ನ ಮಂತ್ರವಾದಿ ನನ್ನ ಮನಸ್ಸಿನಿಂದ ವಿಷವನ್ನು ಗುಡಿಸಿಹಾಕಬೇಕೆಂದು ಇಷ್ಟು ಕಠಿಣವಾದ ಪರಕೆಯಿಂದ ಗುಡಿಸುತ್ತಿದ್ದಾನೆ." ಆಗ ವೈಷ್ಣವಿಯು "ಸರಿಯಾಗಿ ಹೇಳಿದಿರಿ. ದಯಾಮಯನಾದ ದೇವರು ಹಿಂಸೆ ಕೊಟ್ಟು ಕೊಟ್ಟೇ ಮನಸ್ಸಿನಲ್ಲಿರುವ ಹಿಂಸೆಯನ್ನು ಕಿತ್ತಿ ಹೊರಗೆಹಾಕುತ್ತಾನೆ. ಕಡೆಯವರೆಗೂ ಆ ಬಗೆಯಾಗಿ ದೇವರ ಹಿಂಸೆಯನ್ನು ಯಾರು ತಡೆದುಕೊಳ್ಳುತ್ತಾರೋ ಅವರೇ ಹಿಂಸೆಯಿಂದ ಪಾರಾಗಿ ಮುಕ್ತಿ ಪಡೆಯುವರು" ಎಂದಳು.

ಆ ದಿನ ಸಂಜೆಯ ವೇಳೆ ಕತ್ತಲು ತುಂಬಿದ ಮಾಳಿಗೆಯ ಮೇಲೆ ಸಂಜೆಯ ತಾರೆ ಉದಯವಾಗಿ ಸ್ವಲ್ಪ ಹೊತ್ತಿನೊಳಗಾಗಿ ಅಸ್ತವಾಗಿಹೋಯಿತು. ವೈಷ್ಣವಿಯು ತನ್ನ ಜೀವನದ ಕಥೆಯನ್ನು ನನಗೆ ಹೇಳಿದಳು.

–"ನನ್ನ ಗಂಡ ಬಹಳ ಸಾಧು, ಸರಳ ಸ್ವಭಾವದವರು. ಎಷ್ಟೋ ಜನ ಅವರನ್ನು ಪೆದ್ದರೆಂದು ತಿಳಿದುಕೊಂಡಿದ್ದರು. ಆದರೆ ನನಗೆ ಗೊತ್ತು. ಯಾರು ಸರಳ ದಾರಿಯಲ್ಲಿ ಅರ್ಥಮಾಡಿಕೊಳ್ಳುವರೋ ಅವರೇ ಸರಿಯಾಗಿ ಅರ್ಥಮಾಡಿಕೊಳ್ಳುವರು. ಇದನ್ನೂ ನೋಡಿದ್ದೇನೆ. ಅವರು ತಮ್ಮ ಜಮೀನು ಸಾಗುವಳಿ, ಉಸ್ತುವಾರಿಯ ಕೆಲಸದಲ್ಲಿ ಮೋಸ ಹೋಗುತ್ತಲೇ ಇರಲಿಲ್ಲ. ಆಸ್ತಿಯ ಕೆಲಸದಲ್ಲೂ ಮನೆಗೆ ಸಂಬಂಧಪಟ್ಟ ಕೆಲಸದಲ್ಲೂ ಅವರು ಕಟ್ಟುನಿಟ್ಟಾಗಿ ಮಾಡುತ್ತಿದ್ದರು. ಅಕ್ಕಿ, ಧಾನ್ಯ, ಸಣಬು ಇಂಥ ಏನೇ ಬೆಳೆಯಲಿ ನಷ್ಟವಾಗುವಂತೆ ಎಂದೂ ಮಾಡಿರಲಿಲ್ಲ. ಅವರಿಗೆ ಲಾಭದ ಆಸೆಯೂ ಇರಲಿಲ್ಲ. ಆವಶ್ಯಕತೆಯೆಷ್ಟೆಂದು ತಿಳಿದು ಲೆಕ್ಕಾಚಾರಮಾಡಿ ಅಷ್ಟು ಮಾತ್ರ ದುಡಿಯುತ್ತಿದ್ದರು. ಅದಕ್ಕಿಂತಲೂ ಹೆಚ್ಚು ಲಾಭ ಯಾವುದೆಂದು ಅವರಿಗೆ ಗೊತ್ತಾಗುತ್ತಲೂ ಇರಲಿಲ್ಲ. ಅದರಲ್ಲಿ ಕೈಹಾಕುವುದಕ್ಕೂ ಹೋಗುತ್ತಿರಲಿಲ್ಲ.

"ನನ್ನ ಮದುವೆಯ ಮುನ್ನವೇ ನನ್ನ ಮಾವ ಸತ್ತುಹೋಗಿದ್ದರು. ಮತ್ತು ನನ್ನ ಮದುವೆಯಾದ ಕೆಲವೇ ದಿನಗಳಾದ ಮೇಲೆ ನನ್ನ ಅತ್ತೆಯೂ ಹೋಗಿ ಬಿಟ್ಟರು. ಸಂಸಾರದಲ್ಲಿ ನಮ್ಮ ತಲೆಯ ಮೇಲೆ ನನ್ನ ಕೂತು ಆಳುವವರು ಯಾರೂ ಇರಲಿಲ್ಲ. ಆದರೆ ನನ್ನ ಗಂಡನಿಗೆ ತಲೆಯ ಮೇಲೆ ಕೂತು ಆಳುವಂಥವರೊಬ್ಬರು

ಬೇಕಾಗಿತ್ತೇನೋ. ಅಂಥವರೊಬ್ಬರು ಸಿಕ್ಕಿದ್ದರೆ ಅವರನ್ನ ಮೇಲೆ ಕೂಡಿಸದೆ ಬಿಡುತ್ತಿರಲಿಲ್ಲ. ಅಷ್ಟೇಕೆ, ನನ್ನನ್ನ ಕಂಡರೆ ಒಂದು ವಿಧವಾಗಿ ಭಯ, ಭಕ್ತಿಯಿಟ್ಟಿದ್ದರು– ಇದನ್ನ ಹೇಳುವುದಕ್ಕೆ ನಾಚುಗೆಯಾಗುತ್ತದೆ. ಆದರೂ ನನಗೆ ಖಂಡಿತ ಗೊತ್ತು– ಆತನಿಗೇ ನನಗಿಂತಲೂ ಹೆಚ್ಚಾಗಿ ತಿಳುವಳಿಕೆಯಿತ್ತು. ಆದರೆ ಆತನಿಗಿಂತ ಹೆಚ್ಚಾಗಿ ನಾನು ಮಾತು ಮಾತ್ರ ಆಡುತ್ತಿದ್ದೆ.

"ಆತನು ಬೇರೆಲ್ಲರಿಗಿಂತಲೂ ಹೆಚ್ಚಾಗಿ ತನ್ನ ಗುರುದೇವನ ಮೇಲೆ ಭಕ್ತಿಯಿಟ್ಟಿದ್ದರು. ಅದು ಭಕ್ತಿ ಮಾತ್ರವಲ್ಲ, ಅದು ಪ್ರೀತಿ. ಅಂತಹ ಪ್ರೀತಿ ಬೇರೆಲ್ಲೂ ಕಾಣತಕ್ಕಂಥದಲ್ಲ.

"ಗುರುದೇವನು ಆತನಿಗಿಂತಲೂ ವಯಸ್ಸಲ್ಲಿ ಸ್ವಲ್ಪ ಚಿಕ್ಕವರು. ಆದರೆ ಏನು ಚೆಲುವು ಆತನದು."

ಹೇಳುತ್ತ ಹೇಳುತ್ತ ವೈಷ್ಣವಿಯು ಕ್ಷಣಕಾಲ ತಡೆದು ತನ್ನ ದೂರವಿಹಾರಿಯಾದ ಕಣ್ಣುಗಳನ್ನು ಅತಿ ದೂರ ಕಳುಹಿಸಿಬಿಟ್ಟು ಗುನಗುನವೆಂದು ತನ್ನಲ್ಲೇ ಹಾಡಿಕೊಳ್ಳತೊಡಗಿದಳು.

"ಅರುಣ ಕಿರಣವು ತರುಣ ಸುಧೆಯಲಿ ಮಿಂದಿದೆಯೇನು?

ಆಹಾ! ಆ ಮೈಯ ಸೊಬಗನೆಂತು ಬಣ್ಣಿಸಲಿ ನಾನು!

"ಈ ಗುರುದೇವನ ಸಂಗಡ ಆತ ಎಳೆತನದಲ್ಲಿ ಆಟವಾಡಿದ್ದರು. ಆಗಲಿಂದಲೇ ಅವರಿಗೆ ತಮ್ಮ ಮನ, ಪ್ರಾಣಗಳನ್ನು ಅರ್ಪಿಸಿಬಿಟ್ಟಿದ್ದರು.

"ಎಳೆತನದಲ್ಲಿ ನಮ್ಮ ಯಜಮಾನರನ್ನು ಸಂಗಡಿಗರೆಲ್ಲ ಮಂಕು ಎಂದು ಕೂಗುತ್ತಿದ್ದರಂತೆ. ಗುರುದೇವನೂ ಆತನನ್ನೊಬ್ಬ ಮಂಕೆಂದು ತಿಳಿದು ಆತನಿಗೆಷ್ಟೋ ಹಿಂಸೆಯನ್ನೂ ಕೊಟ್ಟಿದ್ದನಂತೆ. ಸಂಗಡಿಗರೆಲ್ಲ ಸೇರಿ ನಮ್ಮ ಯಜಮಾನರನ್ನ ಅದೆಷ್ಟು ಆಡಿಕೊಂಡು, ಹಾಸ್ಯ ಮಾಡುತ್ತ ಎಷ್ಟು ಉಪದ್ರವ ಕೊಟ್ಟಿದ್ದರೋ!

"ಮದುವೆ ಮಾಡಿಕೊಂಡು ನಾನು ಸಂಸಾರ ಮಾಡಲು ಬಂದಾಗ ಈ ಗುರುದೇವನನ್ನು ನೋಡಿರಲಿಲ್ಲ. ಆಗಾತನು ಕಾಶಿಯಲ್ಲಿ ವ್ಯಾಸಂಗಕ್ಕಾಗಿ ಹೋಗಿದ್ದ. ನಮ್ಮ ಯಜಮಾನರೇ ಅವನ ವ್ಯಾಸಂಗಕ್ಕೆ ಖರ್ಚನ್ನು ಒದಗಿಸುತ್ತಿದ್ದುದು.

ಗುರುದೇವನು ಸ್ವಸ್ಥಳಕ್ಕೆ ಮರಳಿ ಬಂದಾಗ ನನ್ನ ವಯಸ್ಸು ಹದಿನೆಂಟು ಮಾತ್ರ.

"ನನಗೆ ಹದಿನೈದೇ ವರುಷವಿದ್ದಾಗ ಒಂದು ಮಗುವಾಗಿತ್ತು. ನನ್ನ ವಯಸ್ಸು ಇನ್ನೂ ಎಳೆಯದಾಗಿದ್ದಾಗ ಮಗುವಾದದ್ದರಿಂದ ಅದನ್ನ ತಕ್ಕ ಆರೈಕೆಯಿಂದ ಸಾಕುವುದನ್ನ ನಾನು ಕಲಿಯಲಿಲ್ಲ. ಆ ಪಾಳೆಯದ ನನ್ನ ಸಂಗಿನಿಯರೊಂದಿಗೆ ಆಟ ಪಾಟಗಳಾಡುತ್ತ ಕಾಲ ಕಳೆಯುತ್ತಿದ್ದೆ. ಸದಾ ನನ್ನ ಗೆಳತಿಯರೊಂದಿಗೆ ಕಾಲ

ಕಳೆಯಲು ಮನಸ್ಸು ಎಳೆಯುತ್ತಿತ್ತಾದ್ದರಿಂದ ಈ ಮಗು ನನ್ನನ್ನು ಮನೆಯಲ್ಲಿ ಕಟ್ಟುಹಾಕಿದೆಯಲ್ಲ ಎಂದು ಅದರ ಮೇಲೆ ಒಮ್ಮೊಮ್ಮೆ ಕೋಪವೂ ಬರುತ್ತಿತ್ತು.

"ಹಾಯ್, ಮಗು ಜನನ ತಾಳಿ ಮುಂದೆ ಬಂದಿದೆ. ಈ ಕಡೆ ತಾಯಿಯು ತಾಯಿಯೆಂಬ ಅರಿವಿಲ್ಲದೆ ಹಿಂದೆ ಹಿಂದೆ ಹೆಜ್ಜೆ ಹಾಕುತ್ತಿದ್ದಾಳೆ. ಇಂತಹ ಸಂಕಟವೆಂದಾದರೂ ಸಂಭವಿಸಿದ್ದೀತೆ? ನನ್ನ ಗೋಪಾಲನು ಬಂದು ನೋಡಿದರೆ ಅವನಿಗಿನ್ನೂ ಬೆಣ್ಣೆಯೇ ತಯಾರಾಗಿಲ್ಲ. ಆದ್ದರಿಂದಲೇ ಅವನು ನನ್ನ ಮೇಲೆ ಕೋಪಗೊಂಡು ಹೊರಟು ಹೋಗಿದ್ದಾನೆ. ನಾನಿವತ್ತಿಗೂ ಊರೆನ್ನದೆ, ಬಯಲೆನ್ನದೆ ಅವನನ್ನ ಹುಡುಕಿಕೊಂಡು ಅಲೆಯುತ್ತಿದ್ದೇನೆ.

"ಆ ಮಗು ತಂದೆಯ ಕಣ್ಣಿಗೊಂದು ರತ್ನವಾಗಿದ್ದನಲ್ಲ. ನಾನು ಅಂಥ ಮುದ್ದಾದ ಕೂಸನ್ನು ಆರೈಕೆ ಮಾಡಲು ಕಲಿತಿಲ್ಲವಲ್ಲ. ಅದರ ತಂದೆಗೆ ಬಹಳ ನೋವಾಗುತ್ತಿತ್ತು. ಆದರೆ ಆತನ ಹೃದಯವೇಕೋ ಮೂಕವಾಗಿತ್ತು. ಇಂದಿನವರೆಗೆ ತನ್ನ ದುಃಖದ ಮಾತನ್ನು ಯಾರಿಗೂ ಹೇಳಿಕೊಂಡಿಲ್ಲ.

"ತಾವೇ ಹೆಂಗಸಂತೆ ಮಗುವನ್ನು ಆರೈಕೆ ಮಾಡುತ್ತಿದ್ದರು. ರಾತ್ರಿ ಮಗು ಅತ್ತರೆ ನನ್ನ ಆ ಎಳೆ ವಯಸ್ಸಿನ ಗಾಢನಿದ್ದೆಯನ್ನು ಭಂಗಮಾಡಲು ಮನಸ್ಸು ಬರುತ್ತಿರಲಿಲ್ಲ ಆತನಿಗೆ. ತಾವೇ ಎದ್ದು ಹಾಲನ್ನ ಬಿಸಿ ಮಾಡಿ ಮಗುವಿಗೆ ಕುಡಿಸಿ ಅದೆಷ್ಟು ರಾತ್ರಿಗಳು ಅದನ್ನು ತೊಡೆಯ ಮೇಲಿಟ್ಟುಕೊಂಡು ನಿದ್ದೆ ಮಾಡಿಸಿದ್ದಾರೋ, ನನಗದು ಗೊತ್ತಾಗುತ್ತಲೇ ಇರಲಿಲ್ಲ. ಅವರ ಕೆಲಸಗಳೆಲ್ಲ ಇದೇ ನಮೂನೆ, ಎಲ್ಲಾ ನಿಶ್ಶಬ್ದ. ಪೂಜೆ, ಉತ್ಸವದ ದಿನಗಳಲ್ಲಿ ಊರಿನ ಜಮೀನ್ದಾರರ ಮನೆಯಲ್ಲಿ ನಾಟಕವೋ, ಹರಿಕಥೆಯೋ ಆದಾಗ ಆತ 'ನಾನು ನಿದ್ದೆಗೆಟ್ಟು ಅವೆಲ್ಲ ನೋಡಲಾರೆ. ನೀನು ಬೇಕಾದರೆ ಹೋಗಿ ನೋಡಿಕೊಂಡು ಬಾ. ನಾನಿಲ್ಲಿಯೇ ಇರುತ್ತೇನೆ' ಎಂದು ಹೇಳುತ್ತಿದ್ದರು. ಅವರು ಮಗುವನ್ನು ನೋಡಿಕೊಳ್ಳಲು ಮನೆಯಲ್ಲಿ ಇರದಿದ್ದರೆ ನನಗೆ ಹೋಗಿ ನೋಡುವುದಕ್ಕಾಗುವುದಿಲ್ಲವೆಂದೇ ಅವರು ಈ ನೆಪ ಹೇಳುತ್ತಿದ್ದುದು.

"ಆಶ್ಚರ್ಯವೇನೆಂದರೆ, ಇಷ್ಟಾದರೂ ಕೂಸು ನನ್ನನ್ನೇ ಹೆಚ್ಚಾಗಿ ಪ್ರೀತಿಸುತ್ತಿದ್ದುದು. ಅದಕ್ಕೆ ಬಹುಶಃ ಅನ್ನಿಸಿತ್ತೇನೋ, ಅವಕಾಶವೊದಗಿದರೆ ನಾನದನ್ನ ತೊರೆದು ಎಲ್ಲಾದರೂ ಹೊರಟುಹೋಗಬಹುದೆಂದು. ಅದಕ್ಕೇ ನನ್ನೊಡನೆ ಇದ್ದಾಗ ಕೂಡ ಅದು ಏನೋ ದಿಗಿಲಿನಿಂದ ಇರುತ್ತಿತ್ತು. ಅದು ನನ್ನಲ್ಲಿ ಬಹಳ ಅಲ್ಪ ಭಾಗವನ್ನು ಮಾತ್ರ ಪಡೆದಿತ್ತೆಂದೇ ನನ್ನನ್ನು ಇನ್ನೂ ಸಾಕಷ್ಟು ಪಡೆಯಬೇಕೆಂಬ ಅದರ ಹಂಬಲ ಏನು ಮಾಡಿದರೂ ತೃಪ್ತಿಯಾಗುವಂತಿರಲಿಲ್ಲ.

"ನಾನು ಸ್ನಾನ ಮಾಡುವುದಕ್ಕೆ ಕೊಳಕ್ಕೆ ಹೋಗುತ್ತಿದ್ದೆ. ತನ್ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗಲು ನಿತ್ಯವೂ ಸುಮ್ಮನೆ ಹಟ ಹಿಡಿಯುತ್ತಿತ್ತು. ಸ್ನಾನಘಟ್ಟದಲ್ಲಿ ನಾನು ನನ್ನ ಗೆಳತಿಯರೊಂದಿಗೆ ಕಲೆಯುತ್ತಿದ್ದೆ. ಅಲ್ಲಿಗೆ ಮಗುವನ್ನು ಕರೆದುಕೊಂಡು

ಹೋದರೆ ಅದರ ಉಸ್ತುವಾರಿಯಲ್ಲೇ ಇದ್ದು ಬಿಡಬೇಕಾಗುತ್ತಿತ್ತು. ಅದು ನನಗೆ ಇಷ್ಟವಿಲ್ಲ. ಆದ್ದರಿಂದಲೇ ಆದಷ್ಟುಮಟ್ಟಿಗೆ ಅದನ್ನ ತಪ್ಪಿಸಿಬಿಟ್ಟೇ ಹೋಗುತ್ತಿದ್ದೆ.

"ಶ್ರಾವಣ ಮಾಸದಲ್ಲಿ ಒಂದು ದಿನ. ನೋಡನೋಡುತ್ತ ಕರಿ ಮೋಡಗಳು ಮಧ್ಯಾಹ್ನವನ್ನು ಪೂರ್ತಿಯಾಗಿ ಎಲ್ಲಾ ಕಡೆಯೂ ಕರಿಮುಸುಗು ಹಾಕಿಬಿಟ್ಟವೆ. ಸ್ನಾನಕ್ಕೆ ಹೋಗುವ ಸಮಯದಲ್ಲಿ ಮಗು ಗಟ್ಟಿಯಾಗಿ ಅಳುವುದಕ್ಕೆ ತೊಡಗಿತು. ನಿಸ್ತಾರಿಣಿ ಎಂಬ ಹೆಂಗಸು ನಮ್ಮ ಮನೆಯ ಅಡಿಗೆ ಕೆಲಸ ಮಾಡುತ್ತಿದ್ದಳು. ಅವಳಿಗೆ ನಾನು ಕೊಳಕ್ಕೆ ಹೋಗಿ ಒಂದು ಮುಳುಗು ಹಾಕಿಬಿಟ್ಟು ಬರುತ್ತೇನೆ. ಅಲ್ಲಿಯವರೆಗೆ ಮಗುವನ್ನು ನೋಡಿಕೊಂಡಿರು ಎಂದು ಹೇಳಿಬಿಟ್ಟು ಹೋದೆ. ಸ್ನಾನಘಟ್ಟದಲ್ಲಿ ಆಗ ಯಾರೂ ಇರಲಿಲ್ಲ. ಗೆಳತಿಯರು ಇಷ್ಟರಲ್ಲೇ ಬರುತ್ತಾರೆ ಎಂಬ ನಿರೀಕ್ಷೆಯಲ್ಲಿ ನಾನು ಅಲ್ಲಲ್ಲೇ ಈಜಾಡುತ್ತಿದ್ದೆ. ಆ ಕೊಳ ಹಳೆಯ ಕಾಲದ್ದು. ಯಾವುದೋ ರಾಣಿಯು ಯಾವ ಕಾಲದಲ್ಲೋ ಅದನ್ನ ತೋಡಿಸಿದ್ದಳು. ಅದಕ್ಕೇ ಅದನ್ನ ರಾಣೀಸಾಗರವೆನ್ನುತ್ತಿದ್ದರು. ಆ ಕೊಳದ ಈ ದಡದಿಂದ ಆ ದಡಕ್ಕೆ ಈಜುವುದು ನನಗೊಬ್ಬಳಿಗೇ ಆಗುತ್ತಿದ್ದುದು. ಮಳೆಗಾಲವಾದ್ದರಿಂದ ಕೊಳ ನೀರಿನಿಂದ ತುಂಬಿಬಿಟ್ಟಿತ್ತು. ನಾನು ಅರ್ಧ ದೂರ ಈಜಿಕೊಂಡು ಹೊರಟಿದ್ದೇನೆ. ಆ ಸಮಯದಲ್ಲಿ ಹಿಂದಿನಿಂದ ಕೂಗು ಕೇಳಿಸಿತು. 'ಅಮ್ಮಾ'–ಹಿಂದೆ ತಿರುಗಿ ನೋಡಿದರೆ ಕೂಸು ಕೊಳದ ಮೆಟ್ಟಿಲುಗಳನ್ನು ಇಳಿಯುತ್ತ ಇಳಿಯುತ್ತ ನನ್ನನ್ನ ಕೂಗುತ್ತಿದ್ದಾನೆ. ನಾನು ಗಟ್ಟಿಯುಗಿ 'ಅಲ್ಲೇ ಇರು. ನಾನು ಬಂದುಬಿಡುತ್ತೇನೆ' ಎಂದು ಕೂಗಿದೆ. ನನ್ನ ನಿಷೇಧವನ್ನು ಕೇಳಿಯೂ ಅವನು ನಗುತ್ತ ನಗುತ್ತ ಇನ್ನೂ ಕೆಳಗೆ ಇಳಿಯಲು ತೊಡಗಿದ. ನನ್ನ ಎದೆ ಹೊಡೆದುಕೊಳ್ಳ ಹತ್ತಿತು. ಇನ್ನೇನು ಗತಿಯಮ್ಮಾ ಎಂದು ನನ್ನ ಕೈಕಾಲುಗಳು ಬೇಡಿಹಾಕಿ ಕಟ್ಟಿರುವಂತೆ ಚಲಿಸಲಾರದಾದುವು. ಮುಂದೆ ಈಜುವುದಕ್ಕೆ ಆಗಲಿಲ್ಲ. ಕಣ್ಣು ಮುಚ್ಚಿಕೊಂಡೆ– ಏನು ನೋಡಬೇಕಾಗುತ್ತದೋ ಎಂಬ ಭಯದಿಂದ. ಆಗಲೇ ಹಿಂದಿನ ಮೆಟ್ಟಲುಗಳ ತಳಗಡೆಯ ಕೊಳದ ನೀರಿನಲ್ಲಿ ಮಗುವಿನ ನಗು ಶಾಶ್ವತವಾಗಿ ಮುಳುಗಿಹೋಯಿತು. ನಾನು ಹೇಗೋ ಈಜಿಕೊಂಡು ಬಂದು ನೀರಿನ ಕೆಳಗಡೆಯಿಂದ ಆ ನಿರ್ಜೀವ ಕೂಸನ್ನು ಎತ್ತಿ ಕಂಕುಳಲ್ಲಿ ಇಟ್ಟುಕೊಂಡೆ. ಎದ್ದು ಬಂದು ತೊಡೆಯ ಮೇಲೆ ಮಲಗಿಸಿಕೊಂಡು ಅದರ ಹೆಸರು ಕೂಗಿದೆ ಏನೋ ಆಸೆಯಿಂದ. ಅದು ಮತ್ತೆ 'ಅಮ್ಮಾ' ಎಂದು ಅನ್ನಲೇ ಇಲ್ಲ.

"ನನ್ನ ಗೋಪಾಲನನ್ನು ನಾನೆಷ್ಟು ದಿನ ಅಳಿಸಿದ್ದೇನೆ. ಆ ಅನಾದರವೆಲ್ಲ ಇಂದು ನನ್ನ ಮೇಲೆ ತಿರುಗಿ ಬಿದ್ದು ನನ್ನನ್ನ ಹೊಡೆಯಲು ತೊಡಗಿತು. ಬದುಕಿದ್ದಾಗ ನಾನು ಸಂದರ್ಭ ಬಂದಾಗೆಲ್ಲ ಅದನ್ನು ತೊರೆದು ಹೋಗುವುದಕ್ಕೆ ಉದ್ಯುಕ್ತಳಾಗಿರುತ್ತಿದ್ದೆ. ಅದಕ್ಕೇ ಅದು ಈಗ ಹಗಲು ರಾತ್ರಿ ನನ್ನ ಮನಸ್ಸನ್ನು ಎಳೆದು ಹಿಡಿದಿಟ್ಟುಕೊಂಡಿದೆ.

"ನನ್ನ ಗಂಡನ ಎದೆಯಲ್ಲಿ ಎಷ್ಟರಮಟ್ಟಿಗೆ ಗಾಯವಾಯಿತೋ ಅದು ಅವನ ಅಂತರ್ಯಾಮಿಗೇ ಗೊತ್ತು. ನನ್ನನ್ನಾತ ದೂಷಿಸಿ ಬೈದಿದ್ದರೆ ನನಗೆಷ್ಟೋ ಒಳ್ಳೆಯದೆನ್ನಿಸುತ್ತಿತ್ತು. ಆದರೆ ಆತನಿಗೆ ಕೇವಲ ಸಹಿಸುವುದು ಗೊತ್ತು. ದೂರುವುದು ಗೊತ್ತಿಲ್ಲ. ಈ ರೀತಿಯಾಗೇ ನಾನು ಒಂದು ನಮೂನೆ ಹುಚ್ಚಿಯಾಗಿಬಿಟ್ಟಿದ್ದೆ. ಇಂಥ ಸಮಯದಲ್ಲಿ ಗುರುದೇವ ಊರಿಗೆ ಬಂದರು.

"ಎಳೆತನದಲ್ಲಿ ಅವನೊಂದಿಗೆ ಆಟವಾಡುತ್ತಿದ್ದಾಗ ಅವನ ಮೇಲೆ ನನ್ನ ಗಂಡನ ಸ್ನೇಹ ಒಂದು ಬಗೆಯಾಗಿತ್ತು. ಈಗ ಇಷ್ಟು ವರುಷಗಳ ಅಗಲಿಕೆಯ ಅನಂತರ ದೊಡ್ಡವನಾಗಿ ವಿದ್ವಾಂಸನಾಗಿ ಮರಳಿಬಂದಾಗ ಆ ಬಾಲ್ಯದ ಗೆಳೆಯನ ಮೇಲೆ ಅಪೂರ್ವ ಭಕ್ತಿ ಹುಟ್ಟಿತು ನನ್ನ ಗಂಡನಿಗೆ. ಯಾರು ಹೇಳಬಲ್ಲರಾಗಿದ್ದರು ಅವರಿಬ್ಬರೂ ಎಳೆತನದ ಗೆಳೆಯರೆಂದು–ಗುರುದೇವನೆದುರಿಗೆ ನನ್ನ ಗಂಡನಿಗೆ ಮಾತಾಡಲು ಕೂಡ ಆಗುತ್ತಿರಲಿಲ್ಲ.

"ನನ್ನನ್ನ ಸಾಂತ್ವನಗೊಳಿಸಬೇಕೆಂದು ನನ್ನ ಗಂಡ ಗುರುವನ್ನು ಕೇಳಿಕೊಂಡರು. ಗುರುವು ನನಗೆ ಶಾಸ್ತ್ರಬೋಧನೆ ಮಾಡಲು ಆರಂಭಿಸಿದರು. ಶಾಸ್ತ್ರಗಳ ಮಾತುಗಳಿಂದ ನನ್ನ ಮನಸ್ಸಿಗೆ ಹೆಚ್ಚು ಲಾಭವಾಯಿತೆಂದು ಹೇಳಲಾರೆ. ನನ್ನ ಮುಂದೆ ಆ ಮಾತುಗಳಿಗೆ ಯಾವ ಬೆಲೆಯಿದ್ದರೂ ಅದು ಆತನ ಬಾಯಿಂದ ಅವು ಬಂದವಲ್ಲ ಎಂದು ಮಾತ್ರ.

"ಮನುಷ್ಯರ ಕಂಠದಿಂದಲೇ ಭಗವಂತನು ತನ್ನ ಅಮೃತವನ್ನು ಬೇರೆ ಮನುಷ್ಯರಿಗೆ ಪಾನಮಾಡಿಸುತ್ತಾನೆ. ಈ ಗುರುದೇವನ ಕಂಠದಂಥ ಸುಧಾ ಪಾತ್ರೆ ಬೇರೊಂದಿರುವುದಿಲ್ಲ. ಅಲ್ಲದೆ ಈ ಮನುಷ್ಯನ ಕಂಠದಿಂದ ಬರುತ್ತಿದ್ದ ಸುಧೆಯನ್ನು ಭಗವಂತನೆ ಪಾನಮಾಡುತ್ತಿದ್ದ.

"ಗುರುವಿನ ಬಗ್ಗೆ ಇದ್ದ ನನ್ನ ಯಜಮಾನರ ಅಜಸ್ರಭಕ್ತಿಯು ನಮ್ಮ ಸಂಸಾರದ ಜೇನುಗೂಡನ್ನು ಪೂರ್ತಿಯಾಗಿ ಜೇನಿಂದ ತುಂಬಿಬಿಟ್ಟಿತ್ತು. ನಮ್ಮೆಲ್ಲರ ಆಹಾರ, ವಿಹಾರ, ಧನ, ಜನ–ಸಮಸ್ತವೂ ಈ ಭಕ್ತಿಯಿಂದ ಎಳೆಯಲ್ಪಡುತ್ತಿತ್ತು. ಎಲ್ಲೂ ಯಾವ ಬಗೆಯ ಛಿದ್ರವೂ ಇರಲಿಲ್ಲ.

"ನಾನು ಅದೇ ರಸದಲ್ಲಿ ನನ್ನ ಮನವನ್ನೆಲ್ಲ ಮುಳುಗಿಸಿ ಸಾಂತ್ವನ ಪಡೆಯುತ್ತಿದ್ದೆ. ಆ ಕಾರಣದಿಂದಲೇ ನನ್ನ ಭಗವಂತನನ್ನ ಈ ಗುರುವಿನ ರೂಪದಲ್ಲಿ ನೋಡಲಾದೆ.

"ಆತನು ಬಂದು ಮೊದಲು ಊಟ ಮಾಡುತ್ತಿದ್ದರು. ಮತ್ತು ಆಮೇಲೆ ಆತನ ಪ್ರಸಾದವನ್ನು ಪಡೆಯುತ್ತಿದ್ದೆವು. ಪ್ರತಿ ದಿನ ಬೆಳಗ್ಗೆ ನಿದ್ದೆಯಿಂದೆದ್ದು ಇದೇ ವಿಷಯ ಮನಸ್ಸಿಗೆ ಬರುತ್ತಿತ್ತು. ಮತ್ತು ಅದೇ ಏರ್ಪಾಡನ್ನು ನಡೆಸುವಂತೆ ಮಾಡುತ್ತಿದ್ದೆ. ಆತನ ಸಲುವಾಗಿ ಕಾಯಿಪಲ್ಲೆಯ ಕುಯ್ಯುತ್ತಿದ್ದೆ, ಆಗ ನನ್ನ ಬೆರಳುಗಳ ಮಧ್ಯೆ ಆನಂದದ ದನಿ ಕೇಳ ಬರುತ್ತಿತ್ತು. ನಮ್ಮಲ್ಲಿ ಬ್ರಾಹ್ಮಣನಿರಲಿಲ್ಲ. ಮತ್ತು ನನ್ನ ದೆಸೆಯಿಂದ

ನನ್ನ ಹೃದಯದ ಹಸಿವು ಪೂರ್ಣವಾಗಿ ತಣಿಯಲ್ಪಡಲಿಲ್ಲ. ಆತನು ತಿಳಿವಳಿಕೆಯ ಕಡಲು, ಆ ವಿಷಯದಲ್ಲಿ ಆತನಿಗೆ ಯಾವ ಅಭಾವವೂ ಇಲ್ಲ. ನಾನೊಬ್ಬ ಸಾಧಾರಣ ಹೆಂಗಸು, ನಾನು ಆತನಿಗೆ ಕೇವಲ ಒಂದಿಷ್ಟು ಊಟ, ಉಪಚಾರಗಳಲ್ಲಿ ಮಾತ್ರ ಸಂತುಷ್ಟಿಗೊಳಿಸಲು ಸಾಧ್ಯ. ಅದರಲ್ಲೂ ಇಷ್ಟುಮಟ್ಟಿಗೆ ಕೊರತೆಯಿತ್ತು.

"ನನ್ನ ಗುರುಸೇವೆಯನ್ನು ಕಂಡು ನನ್ನ ಗಂಡನ ಮನವು ಪ್ರಸನ್ನವಾಗಿತ್ತು ಮತ್ತು ನನ್ನ ಮೇಲೆ ಆತನ ಗೌರವ ಇನ್ನೂ ಬೆಳೆಯಿತು. ಗುರುವು ನನಗೆ ಶಾಸ್ತ್ರ ಹೇಳುವುದರಲ್ಲಿ ಹೆಚ್ಚು ಉತ್ಸಾಹ ತೋರುವುದನ್ನ ಕಂಡು ನನ್ನ ಗಂಡ, ತನ್ನ ಮೂರ್ಖತೆಯಿಂದ ಗುರುವಿಗೆ ಅಶ್ರದ್ಧೆಯುಂಟಾದರೂ, ತನ್ನ ಹೆಂಡತಿಯಾದರೂ ತನ್ನ ಬುದ್ಧಿಬಲದಿಂದ ಗುರುವನ್ನು ಸಂತುಷ್ಟಿಗೊಳಿಸಲಾದುದೇ ತನಗೊಂದು ದೊಡ್ಡ ಸೌಭಾಗ್ಯವೆಂದು ಭಾವಿಸಿದರು.

"ಹೀಗೆ ಐದಾರು ವರುಷಗಳು ಹೇಗೋ ಕಳೆದುಹೋದುವು–ನಮಗೆ ಅದು ತೋಚಲೆ ಇಲ್ಲ.

"ಇಡೀ ಜೀವನವೇ ಈ ಬಗೆಯಾಗಿ ಕಳೆಯಬಹುದಾಗಿತ್ತು. ಆದರೆ ಗೋಪ್ಯವಾಗಿ ಎಲ್ಲೋ ಒಂದು ಚೌರ್ಯ ನಡೆಯುತ್ತಿತ್ತು. ಅದು ನನ್ನ ಮುಂದೆ ಕಂಡುಹಿಡಿಯಲ್ಪಡಲಿಲ್ಲ. ಆದರೆ ನನ್ನ ಅಂತರ್ಯಾಮಿಯ ಮುಂದೆ ಕಂಡುಹಿಡಿಯಲ್ಪಟ್ಟಿತು. ಆಮೇಲೆ ಒಂದು ದಿನ ಒಂದು ಗಳಿಗೆಯಲ್ಲಿ ಎಲ್ಲಾ ತಾರುಮಾರಾಗಿ ಹೋಯಿತು.

"ಅಂದು ಫಾಲ್ಗುಣಮಾಸದ ದಿನ ಬೆಳಗ್ಗೆ ನಾನು ಸ್ನಾನಘಟ್ಟಕ್ಕೆ ಹೋಗುವ ನೆರಳು ತುಂಬಿದ ದಾರಿಯಲ್ಲಿ ಸ್ನಾನ ಮುಗಿಸಿ ಒದ್ದೆ ಬಟ್ಟೆಯಲ್ಲಿ ಮನೆಗೆ ಮರಳುತ್ತಿದ್ದೆ. ದಾರಿಯಲ್ಲೊಂದು ಕಡೆ ಸ್ವಲ್ಪ ದೂರದಲ್ಲಿ ಮಾವಿನ ಮರದಡಿಯಲ್ಲಿ ಗುರುದೇವನನ್ನು ಕಂಡೆ, ಆತನು ಸೊಂಟಕ್ಕೆ ವಸ್ತ್ರವನ್ನು ಸುತ್ತಿಕೊಂಡು ಯಾವುದೋ ಸಂಸ್ಕೃತ ಶ್ಲೋಕವನ್ನು ಹೇಳುತ್ತ ಸ್ನಾನಕ್ಕೆಂದು ಹೊರಟಿದ್ದರು. ಒದ್ದೆ ಬಟ್ಟೆಯಲ್ಲಿ ಆತನೊಡನೆ ಭೆಟ್ಟಿಯಾದುದಕ್ಕೆ ನಾಚಿಗೆಪಟ್ಟು ಸ್ವಲ್ಪ ಪಕ್ಕಕ್ಕೆ ಸರಿದು ಹೊರಟು ಬಂದುಬಿಡಬೇಕೆಂದು ಯತ್ನಿಸಿದೆ. ಇಂಥ ಸಮಯದಲ್ಲಿ ಆತನು ನನ್ನ ಹೆಸರನ್ನು ಹಿಡಿದು ಕೂಗಿದರು. ನಾನು ಲಜ್ಜೆಯಿಂದ ಹಿಡಿಯಷ್ಟಾಗಲು ಯತ್ನಿಸಲು ತಲೆ ತಗ್ಗಿಸಿಕೊಂಡು ನಿಂತಿದ್ದೆ. ಆತನು ನನ್ನ ಮುಖದ ಕಡೆ ನೇರವಾಗಿ ನೋಡುತ್ತ 'ನಿನ್ನ ಮೈ ಬಹಳ ಚೆಲುವಾಗಿದೆ' ಎಂದರು.

"ಆಗ ರೆಂಬೆ ರೆಂಬೆಗಳಲ್ಲಿ ವಿಶ್ವದ ಹಕ್ಕಿಗಳೆಲ್ಲ ಹಾಡುತ್ತಿದ್ದುವು. ದಾರಿಯ ಅಕ್ಕಪಕ್ಕಗಳಲ್ಲಿ ಯಾವ ಗಿಡ, ಯಾವ ಬಳ್ಳಿ ನೋಡಿದರೆ ಹೂತುಂಬಿ ಕಿಕ್ಕಿರಿಸುತ್ತಿದೆ. ಮನದಲ್ಲಿ ಇಡೀ ಆಕಾಶ–ಪಾತಾಳಗಳೆಲ್ಲ ಹುಚ್ಚಿನಿಂದ ಕುಣಿಯುತ್ತಿರುವಂತೆ ಅನ್ನಿಸಿತು. ಇಂತಹ ಸಂದರ್ಭದಲ್ಲಿ ಹೇಗೆ ಮನೆಗೆ ಬಂದು ಸೇರಿದೆನೋ ನನಗೆ ಸ್ವಲ್ಪವೂ

ಅರಿವಿಲ್ಲ. ನೇರವಾಗಿ ಅದೇ ಒದ್ದೆ ಬಟ್ಟೆಯಲ್ಲೇ ದೇವರ ಮನೆಗೆ ಹೋದೆ, ಕಣ್ಣಲ್ಲಿ ದೇವರ ಮೂರ್ತಿಯು ಬೀಳಲಿಲ್ಲ. ಆ ಸ್ನಾನಘಟ್ಟದ ಹಾದಿಯ ನೆರಳಿನ ಮೇಲುಗಡೆಯ ಬೆಳಕಿನ ಕಿರಣಗಳು ನನ್ನ ಕಣ್ಮುಂದೆ ಕುಣಿಯತೊಡಗಿದುವು.

"ಆ ದಿನ ಗುರುವು ಊಟ ಮಾಡಲು ಬಂದರು. ಬಂದವರೇ 'ಆನಂದಿ ಎಲ್ಲಿ? ಯಾಕೆ ಇಲ್ಲಿಲ್ಲ?' ಎಂದು ಕೂಗಿದರು. ನನ್ನ ಗಂಡ ನನ್ನನ್ನ ಹುಡುಕಿಕೊಂಡು ಹೊರಟರು. ಅವರ ಕಣ್ಣಿಗೆ ಬೀಳಲಿಲ್ಲ ನಾನು.

"ಪ್ರಭುವೇ, ನನ್ನ ಆ ಪೃಥಿವಿ ಇನ್ನಿಲ್ಲ. ನಾನು ಆ ಸೂರ್ಯನ ಬೆಳಕನ್ನು ಎಷ್ಟು ಅರಸಿದರೂ ಇನ್ನೂ ಕಂಡಿಲ್ಲ. ದೇವರ ಮನೆಯಲ್ಲಿ ನನ್ನ ದೇವರಿಗೆ ಸುಮ್ಮನೆ ಮೊರೆಯಿಟ್ಟೆ, ಆ ದೇವರು ನನ್ನ ಕಡೆ ತಿರುಗಿ ನೋಡಲಿಲ್ಲ.

"ಆ ದಿನ ಹೇಗೆ ಯಾವ ರೀತಿಯಲ್ಲಿ ಕಳೆಯಿತೋ ಗೊತ್ತಿಲ್ಲ. ರಾತ್ರಿಯಲ್ಲಿ ಗಂಡನ ಬಳಿ ಹೋಗಬೇಕಾಗುತ್ತದೆ, ಆತನನ್ನ ಭೆಟ್ಟಿಯಾಗಬೇಕಾಗುತ್ತದೆ. ಆಗೆಲ್ಲ ಕಡೆಯೂ ನಿಶ್ಶಬ್ದ, ಕತ್ತಲು. ಆಗಲೇ ನನ್ನ ಗಂಡನ ಮನಸ್ಸು ಮೊದಲಿನಂತೆಯೇ ಅರಳಿ ನಲಿಯುತ್ತದೆ. ಆ ಕತ್ತಲಿನ ಭೇಟಿಯಲ್ಲೇ ಎಷ್ಟೋ ದಿನ ಆತನ ಬಾಯಿಂದ ತಾನಾಗಿ ಹೊರಟ ಒಂದೆರಡು ಮಾತುಗಳಿಂದ ನನಗೆ ಅರಿವಾಗಿತ್ತು–ಈತನಿಗೆ ಏನು ಗೊತ್ತಿರುವುದೋ ಅದನ್ನೆಲ್ಲ ಸುಲಭವಾಗಿ ಸಹಜವಾಗಿ ತಿಳಿದುಕೊಳ್ಳಬಲ್ಲರು.

"ಮನೆಗೆಲಸಗಳನ್ನೆಲ್ಲ ಮುಗಿಸಿ ಬರುವುದಕ್ಕೆ ನನಗೆ ವಿಳಂಬವಾಗುವುದು. ಆತನು ನನಗಾಗಿ ಹಾಸುಗೆಯ ಹೊರಗಡೆ ನಿರೀಕ್ಷೆಮಾಡುವರು. ಆಗಲೇ ಸಾಧಾರಣವಾಗಿ ನಮ್ಮಿಬ್ಬರ ನಡುವೆ ಗುರುದೇವನನ್ನ ಕುರಿತು ವಿಚಾರ ವಿನಿಮಯವಾಗುವುದು. ಅಂದು ರಾತ್ರಿ ಎಂದಿಗಿಂತಲೂ ಹೆಚ್ಚು ವಿಳಂಬ ಮಾಡಿದೆ, ಆಗಲೇ ಮೂರು ಝಾವಗಳಾಗಿ ಹೋಗಿದ್ದುವೇನೋ. ಕೋಣೆಯೊಳಗೆ ಬಂದು ನೋಡುತ್ತೇನೆ. ನನ್ನ ಗಂಡ ಇನ್ನೂ ಮಂಚದ ಮೇಲೆ ಮಲಗಿಲ್ಲ. ನೆಲದ ಮೇಲೆ ಮಲಗಿ ನಿದ್ದೆ ಮಾಡುತ್ತಿದ್ದಾರೆ. ನಾನು ಅತಿ ಸಾವಧಾನದಿಂದ ಸ್ವಲ್ಪವೂ ಸದ್ದು ಮಾಡದೆ ಆತನ ಕಾಲುದೆಸೆಯಲ್ಲಿ ಬಿದ್ದುಕೊಂಡು ಮಲಗಿದೆ. ನಿದ್ದೆಯಲ್ಲೇ ಆತ ಒಮ್ಮೆ ತನ್ನ ಕಾಲನ್ನು ಚಾಚಿದರು. ಅದು ಬಂದು ನನ್ನ ಎದೆಯನ್ನು ತಾಕಿತು. ಅದನ್ನೇ ನಾನು ಆತನ ಕಡಯ ದಾನವೆಂದು ಅಂಗೀಕರಿಸಿದೆ.

"ಮರುದಿನ ಮುಂಜಾನೆಯೇ ಆತನ ನಿದ್ದೆಯೊಡೆದಾಗ ನಾನಾಗಲೆ ಎಚ್ಚತ್ತು ಎದ್ದುಕೂತಿದ್ದೆ. ಕಿಟಕಿಯಾಚೆಕಡೆ ಹಲಸಿನ ಮರದ ನೆತ್ತಿಯ ಮೇಲುಗಡೆ ಕಾಣಬರುತ್ತಿದ್ದ ಆಕಾಶದ ತುಣುಕು ಸ್ವಲ್ಪ ರಂಗಾಗಿದೆ. ಇನ್ನೂ ಕಾಗೆಗಳು ಕೂಗುವುದಕ್ಕಾರಂಭಿಸಿಲ್ಲ.

"ನಾನು ಯಜಮಾನರ ಕಾಲುದೆಸೆಯಲ್ಲಿ ತಲೆಯಿಟ್ಟು ಪ್ರಣಾಮ ಮಾಡಿದೆ. ಆತನು ಬೇಗ ಬೇಗ ಎದ್ದು ಕೂತರು. ಎದ್ದು ನನ್ನ ಮುಖದ ಕಡೆ ಅಚ್ಚರಿಯಿಂದ ನೋಡತೊಡಗಿದರು.

"ನಾನೆಂದೆ, 'ನಾನಿನ್ನು ನಿಮ್ಮೊಂದಿಗೆ ಸಂಸಾರ ಮಾಡಲಾರೆ.'

"ನನ್ನ ಗಂಡ ಇದೇನು ಕನಸೇ ಎಂದುಕೊಂಡಿರಬೇಕು...ಅವರ ಮುಖಭಾವ ಹಾಗಿತ್ತು. ಏನೂ ಮಾತಾಡದೆ ಸುಮ್ಮನಿದ್ದರು. ನಾನು ಮತ್ತೆ ಹೇಳಿದೆ–

'ನನ್ನ ಮೇಲಿನಾಣೆ...ನೀವು ಬೇರೊಂದು ಮದುವೆ ಮಾಡಿಕೊಳ್ಳಿ. ನನ್ನನ್ನ ಬೀಳ್ಕೊಡಿ, ಹೋಗುತ್ತೇನೆ.'

"ಆಗ ನನ್ನ ಗಂಡ ಅಂದರು–

'ನೀನು ಏನು ಹೇಳುತ್ತಿರುವುದು, ನಿನ್ನನ್ನ ಸಂಸಾರ ಬಿಡೆಂದು ಯಾರು ಹೇಳಿದರು?'

'ಗುರುದೇವ' ಎಂದೆ. ಯಜಮಾನರು ದಿಕ್ಕೆಟ್ಟವರಂತೆ ನೋಡುತ್ತ 'ಗುರುದೇವನೇ? ಇಂಥ ಮಾತನ್ನು ಅವರು ಯಾವಾಗ ಹೇಳಿದರು' ಎಂದರು. ನಾನಂದೆ 'ಇಂದು ಬೆಳಗ್ಗೆ ನಾನು ಸ್ನಾನ ಮಾಡಿ ಬರುತ್ತಿದ್ದಾಗ ಅವರೊಡನೆ ಭೆಟ್ಟಿಯಾಯಿತು. ಆಗ ಹೇಳಿದರು.'

"ಯಜಮಾನರ ದನಿ ನಡುಗಿತು. 'ಇಂಥ ಆದೇಶವನ್ನೇಕೆ ಹೇಳಿದರು?' 'ನನಗೆ ಗೊತ್ತಿಲ್ಲ. ಅವರನ್ನೇ ಕೇಳಿದರೆ ಬಹುಶಃ ಅವರು ನಿಮಗೆ ತಿಳಿಯ ಹೇಳುತ್ತಾರೆ'

'ಸಂಸಾರದಲ್ಲಿದ್ದುಕೊಂಡೇ ಸಂಸಾರವನ್ನು ತ್ಯಜಿಸಿರಬಹುದು. ನಾನೀ ಮಾತನ್ನ ಗುರುವಿಗೆ ಹೇಳುತ್ತೇನೆ ಇಂದೆ' ಎಂದರು ಅವರು. ಆಗ ನಾನು ಸ್ವಲ್ಪ ಸುಮ್ಮನಿದ್ದು ಆಮೇಲೆ 'ನಿಮ್ಮ ಗುರು ನಿಮ್ಮ ಮಾತಿಗೊಪ್ಪಿದರೂ ಒಪ್ಪಬಹುದು. ಆದರೆ ನನ್ನ ಮನಸ್ಸೊಪ್ಪುವುದಿಲ್ಲ. ನನಗೂ ನನ್ನ ಸಂಸಾರಕ್ಕೂ ಇವತ್ತೇ ಕೊನೆಯ ಸಂಪರ್ಕ' ಎಂದೆ.

"ಯಜಮಾನರು ಸುಮ್ಮನೆ ಕೂತುಬಿಟ್ಟರು. ಆಕಾಶವು ಬೆಳಕಿನಿಂದ ತುಂಬುತ್ತಲೂ ಅವರು ಮತ್ತೆ 'ನಡಿ ಹಾಗಾದರೆ, ಇಬ್ಬರೂ ಹೋಗಿ ಗುರುದೇವನನ್ನು ಕಂಡು ಮಾತಾಡೋಣ' ಎಂದರು.

"ನಾನು ಆಗ ಕೈಜೋಡಿಸಿ 'ಬೇಡ, ಅವರ ಸಂಗಡ ನಾನಿನ್ನು ಭೆಟ್ಟಿಯಾಗಲಾರೆ' ಎಂದೆ.

"ಆತನಾಗ ನನ್ನ ಮುಖದ ಕಡೆ ನೋಡಿದರು. ನಾನು ತಲೆ ತಗ್ಗಿಸಿಕೊಂಡೆ. ಆತನು ಬೇರೆ ಏನೂ ಮಾತನಾಡಲಿಲ್ಲ.

"ನನಗೆ ಗೊತ್ತು. ನನ್ನ ಮನಸ್ಸನ್ನು ಆತನು ಒಂದು ಬಗೆಯಾಗಿ ಹೇಗೋ ತಿಳಿದುಕೊಂಡಿದ್ದರು.

"ಪೃಥಿವಿಯಲ್ಲಿ ಎರಡು ವಸ್ತುಗಳು ನನ್ನನ್ನ ಎಲ್ಲರಿಗಿಂತಲೂ ಹೆಚ್ಚಾಗಿ ಪ್ರೀತಿಸಿದ್ದರು. ನನ್ನ ಮಗು ಮತ್ತು ನನ್ನ ಗಂಡ. ಆ ಪ್ರೀತಿಯೇ ನನ್ನ ನಾರಾಯಣ.

ಆದುದರಿಂದಲೇ ನನ್ನ ಭಗವಂತನು ಆ ಮಿಥ್ಯೆಯನ್ನು ಸಹಿಸಲಾರದೆ ಹೋದ. ಒಂದು ವ್ಯಕ್ತಿ ನನ್ನನ್ನ ಬಿಟ್ಟುಹೋದ. ಇನ್ನೊಬ್ಬ ವ್ಯಕ್ತಿಯನ್ನು ನಾನು ಬಿಟ್ಟು ಬಂದೆ. ಈಗ ನಾನು ಸತ್ಯವನ್ನು ಹುಡುಕುತ್ತಿದ್ದೇನೆ. ಇನ್ನು ಯಾವ ಅಡ್ಡಿಯೂ ಇಲ್ಲ" ಎಂದು ಹೇಳಿ ಆಕೆ ಧಡಕ್ಕನೆ ಎದ್ದು ನನಗೆ ಪ್ರಣಾಮಮಾಡಿದಳು.

೯. ಹೆಂಡತಿಯ ಕಾಗದ

ಶ್ರೀಚರಣ ಕಮಲೇಷು,

ನನ್ನ ನಿಮ್ಮ ಮದುವೆಯಾಗಿ ಇವತ್ತಿಗೆ ಹದಿನೈದು ವರುಷಗಳಾದುವು. ಇದುವರೆಗೆ ನಾನು ನಿಮಗೆಂದೂ ಕಾಗದ ಬರೆದಿರಲಿಲ್ಲ. ಏಕೆಂದರೆ ಸದಾ ನಾನು ನಿಮ್ಮ ಸನಿಯದಲ್ಲೇ ಇರುತ್ತಿದ್ದೆ. ಬಾಯಿಂದ ಆಡುವ ಮಾತನ್ನು ಬೇಕಾದಷ್ಟು ಕೇಳಿಬಿಟ್ಟಿರುವಿರಿ. ನಾನೂ ಕೇಳಿಬಿಟ್ಟಿದ್ದೇನೆ. ಕಾಗದ ಬರೆಯಬೇಕಾದ ಅಗತ್ಯ, ಅವಕಾಶ ನಮಗೆ ಬರಲಿಲ್ಲ.

ಈಗ ನಾನು ಶ್ರೀಕ್ಷೇತ್ರದ ತೀರ್ಥ ಯಾತ್ರೆಗೆ ಬಂದಿದ್ದೇನೆ. ನೀವು ನಿಮ್ಮ ಆಫೀಸಿನಲ್ಲಿ ಕೆಲಸದಲ್ಲಿ ಮಗ್ನರಾಗಿದ್ದೀರಿ. ಶಂಖದ ಹುಳು ಚಿಪ್ಪಿಗೆ ಅಂಟಿಕೊಂಡಂತೆ ನೀವೂ ನಿಮ್ಮ ಕಲಿಕತ್ತೆಯ ವಾಸವೂ. ಅದು ನಿಮ್ಮ ಮೈ, ಮನಗಳೆರಡಕ್ಕೂ ಅಂಟಿಕೊಂಡುಬಿಟ್ಟಿದೆ.

ಅದಕ್ಕಾಗಿಯೇ ನೀವು ಆಫೀಸಿನಿಂದ ರಜೆಗೆ ಬರೆದುಕೊಳ್ಳಲಿಲ್ಲ. ವಿಧಾತನದೂ ಅದೇ ಅಭಿಪ್ರಾಯ. ಆದರೆ ನನ್ನ ರಜೆಯ ದರಖಾಸ್ತನ್ನು ಆತನು ಮಂಜೂರು ಮಾಡಿದ್ದಾನೆ.

ನಾನು ನಿಮ್ಮ ಮನೆಯ ಎರಡನೆಯ ಸೊಸೆ. ಇಂದಿಗೆ ಹದಿನೈದು ವರುಷಗಳ ಅನಂತರ ಈ ಸಮುದ್ರತೀರದಲ್ಲಿ ಬಂದು ನಿಂತು ನಾನು ಒಂದು ವಿಷಯವನ್ನು ತಿಳಿಯಬಲ್ಲವಳಾದೆ. ಜಗತ್ತಿನ ಮತ್ತು ಜಗದೀಶ್ವರನ ಸಂಗಡ ನನಗೆ ಬೇರೆ ಬಗೆಯಾದ ಸಂಬಂಧವೂ ಇದೆ. ಅದಕ್ಕೇ ಇಂದು ಸಾಹಸಮಾಡಿ ಈ ಕಾಗದ ನಿಮಗೆ ಬರೆಯುತ್ತಿದ್ದೇನೆ. ಇದನ್ನ ನಿಮ್ಮ ಮನೆಯ ಎರಡನೆಯ ಸೊಸೆಯ ಪತ್ರವೆಂದು ತಿಳಿಯಬೇಡಿ.

ನಿಮ್ಮೊಡನೆ ನನ ಸಂಬಂಧವನ್ನು ಯಾವಾತ ಬರೆದಿಟ್ಟಿದ್ದನೋ ಆತನು ಹೊರತಾಗಿ ಬೇರೆ ಯಾರೂ ಅದರ ಸಂಭವವನ್ನು ಅರಿತಿರಲಿಲ್ಲ. ಆ ಎಳೆಯ ವಯಸ್ಸಿನಲ್ಲಿ ನಾನೂ ನನ್ನಣ್ಣನೂ ಸನ್ನಿಪಾತಜ್ವರದಲ್ಲಿ ಬಿದ್ದೆವು. ಅಣ್ಣನಂತೂ ಸತ್ತುಹೋದ. ನಾನು ಉಳಿದುಕೊಂಡೆ. ಊರಿನ ಹೆಂಗಸರೆಲ್ಲ ಮೃಣಾಲಳು ಹೆಣ್ಣುಮಗುವೆಂದೇ ಬದುಕಿಕೊಂಡಳು. ಗಂಡುಮಗುವಾಗಿದ್ದರೆ ಉಳಿಯುತ್ತಿದ್ದಳೇ? ಎಂದು ಮಾತಾಡಿಕೊಂಡರು.

ಕಳ್ಳತನದ ವಿದ್ಯೆಯಲ್ಲಿ ಯಮ ಪಳಗಿದವ, ಬೆಲೆಯ ವಸ್ತುವಿನ ಮೇಲೇ ಅವನ ಲೋಭ.

ನನಗಂತೂ ಸಾವಿಲ್ಲ. ಆ ವಿಷಯವನ್ನೇ ಚೆನ್ನಾಗಿ ಮುಂದಟ್ಟು ಮಾಡುವುದಕ್ಕಾಗಿಯೇ ಈ ಕಾಗದ ಬರೆಯಲು ಕೂತಿದ್ದೇನೆ.

ನಿಮ್ಮ ದೂರಸಂಪರ್ಕದ ಮಾವನು ನಿಮ್ಮ ಗೆಳೆಯ ನೀರದನ ಸಂಗಡ ಕನ್ಯೆಯನ್ನು ನೋಡಲು ಬಂದಾಗ ನನ್ನ ವಯಸ್ಸು ಹನ್ನೆರಡು. ದುರ್ಗಮವಾದ ಹಳ್ಳಿಗಾಡಿನಲ್ಲಿ ನಮ್ಮ ಮನೆ. ಅಲ್ಲಿ ಹಗಲು ಹೊತ್ತೇ ನರಿಗಳು ಕೂಗುತ್ತವೆ. ಸ್ಟೇಷನ್ನಿನಿಂದ ಹದಿನೈದು ಮೈಲಿ ಎತ್ತಿನ ಬಂಡಿಯಲ್ಲಿ ಬಂದು ಉಳಿದ ಮೂರು ಮೈಲಿ ಕಚ್ಚಾ ರಸ್ತೆಯ ಮೇಲೆ ಮೇನೆಯಲ್ಲಿ ಕುಳಿತು ಹೊರಟರೆ ನಮ್ಮ ಊರನ್ನ ಸೇರುವುದು. ಆ ದಿನ ನಿಮ್ಮವರಿಗೆಷ್ಟು ಆಯಾಸವಾಗಿತ್ತೋ! ಸಾಲದೆ ಹಳ್ಳಿಕೊಂಪೆಯವರ ಅಡಿಗೆ. ಆ ಅಡಿಗೆಯ ನಗುಪಾಟಲಾದ ಅನುಭವವನ್ನು ನಿಮ್ಮ ಮಾವನು ಇಂದಿಗೂ ಮರೆತಿರಲಿಕ್ಕಿಲ್ಲ.

ನಿಮ್ಮ ಮನೆಯ ದೊಡ್ಡ ಸೊಸೆಗೆ ಇಲ್ಲದಿದ್ದ ಚೆಲುವನ್ನು ಎರಡನೆಯ ಸೊಸೆಯಲ್ಲಾದರೂ ಕಾಣಬೇಕೆಂದು ನಿಮ್ಮ ತಾಯಿಯ ಹಠವಿರಬೇಕು. ಇಲ್ಲದಿದ್ದರೆ ಅಷ್ಟು ಕಷ್ಟಪಟ್ಟು ನೀವೇಕೆ ಆ ಹಳ್ಳಿಕೊಂಪೆಯವರೆಗೆ ಬರುತಿದ್ದಿರಿ? ವಂಗದೇಶದಲ್ಲಿ ಪ್ಲೀಹ, ಯಕೃತ್ (ಹೊಟ್ಟೆಯಲ್ಲಿ ಗಡ್ಡೆ) ರೋಗ, ವಾಯುಬೇನೆ ಮತ್ತು ಕನ್ಯೆ- ಇವುಗಳೀಗಾಗಿ ಯಾರೂ ಹುಡುಕಿಕೊಂಡು ಹೋಗಬೇಕಾಗಿಲ್ಲ. ಅವೇ ಬಂದು ಹೇಗೋ ಅಂಟಿಕೊಳ್ಳುತ್ತವೆ. ಆಮೇಲೆ ಏನು ಮಾಡಿದರೂ ಬಿಡುವುದಿಲ್ಲ.

ನಿಮ್ಮ ಕಡೆಯವರು ಬಂದಾಗ ಅಪ್ಪನ ಎದೆ ಡವಡವ ಹೊಡೆದುಕೊಂಡಿತು. ಅಮ್ಮ ದುರ್ಗಾನಾಮ ಜಪಿಸಲು ತೊಡಗಿದಳು.

ಪಟ್ಟಣದ ದೇವತೆಯನ್ನು ಹಳ್ಳಿಗಾಡಿನ ಅರ್ಚಕನು ಹೇಗೆ ತಾನೇ ತೃಪ್ತಿಗೊಳಿಸಬಲ್ಲ? ಮಗಳ ರೂಪದ ಮೇಲೆ ಭರವಸೆ. ಆದರೆ ಆ ರೂಪದ ಹೆಮ್ಮೆ ಹೆಣ್ಣಲ್ಲಿಲ್ಲವೇ ಇಲ್ಲ. ಯಾವ ವ್ಯಕ್ತಿ ನೋಡಲು ಬಂದಿದ್ದಾರೋ ಆತನು ಅದಕ್ಕೆ ಯಾವ ಬೆಲೆ ಕೊಡುತ್ತಾನೋ ಅದೇ ಆ ರೂಪದ ಬೆಲೆ. ಇದರ ಸಲುವಾಗೇ ಎಷ್ಟೇ ರೂಪ, ಎಷ್ಟೇ ಗುಣ ಇದ್ದರೂ ಹೆಣ್ಣು ಮಕ್ಕಳ ಸಂಕೋಚ ತೀರುವುದೇ ಇಲ್ಲ.

ಮನೆಯವರೆಲ್ಲರ, ಅಷ್ಟೇಕೆ ಆ ಪಾಳೆಯದವರೆಲ್ಲರ ಈ ಸಂಕೋಚ, ಈ ಭಯ ನನ್ನ ಎದೆಯೊಳಗೊಂದು ಚಪ್ಪಡಿಕಲ್ಲಿನಂತೆ ಅದುಮಿ ಕೂತುಕೊಂಡಿತು. ಆ ದಿನದ ಆಕಾಶದಲ್ಲಿನ ಬೆಳಕೆಲ್ಲ, ಜಗತ್ತಿನ ಶಕ್ತಿಯೆಲ್ಲ ಸೇರಿ ಈ ಹನ್ನೆರಡು ವರುಷ ವಯಸ್ಸಿನ ಹಳ್ಳಿಯ ಹುಡುಗಿಯನ್ನು ಇಬ್ಬರು ಪರೀಕ್ಷಕರ ಎರಡು ಜೋಡಿ ಕಣ್ಣುಗಳೆದುರಿಗೆ ಬಲವಂತವಾಗಿ ಹಿಡಿದೆತ್ತಿ ನಿಲ್ಲಿಸಲು ಶ್ರಮಪಡುತ್ತಿರುವಂತೆನ್ನಿಸಿತು. ನನಗೆಲ್ಲಿಯೂ ಅಡಗಿಕೊಳ್ಳುವುದಕ್ಕೆ ಎಡೆಯಿರಲಿಲ್ಲ.

ಇಡೀ ಮುಗಿಲನ್ನೇ ಅಳುವಂತೆ ಮಾಡುವ ಹಾಗೆ ಓಲಗ ಊದಲಾಯಿತು. ನಾನು ನಿಮ್ಮ ಮನೆಗೆ ಬಂದು ಸೇರಿದೆ. ನನ್ನ ಕುಂದುಕೊರತೆಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಕೆದಕಿ ನೋಡಿದ ಮೇಲೂ ನಿಮ್ಮ ಮನೆಯ ಗೃಹಿಣಿಯರ ಗುಂಪಿನವರೆಲ್ಲ ನನ್ನನ್ನ ಎಲ್ಲರಿಗಿಂತ ಚೆಲುವೆಯೆಂದು ಒಪ್ಪಿಕೊಂಡರು. ಆ ಮಾತನ್ನ ಕೇಳಿ ನನ್ನ ದೊಡ್ಡ ಓರಗಿತ್ತಿಯ ಮುಖ ಗಂಭೀರವಾಗಿಹೋಯಿತು. ಆದರೆ ನನ್ನ ಚೆಲುವಿಗೆ ಅಗತ್ಯವೇನಿತ್ತು ಎಂದೇ ಈಗಲೂ ನನ್ನ ಯೋಚನೆ. ಚೆಲುವೆಂಬ ವಸ್ತುವನ್ನು ಒಂದು ಪಕ್ಷ ಯಾವುದಾದರೂ ಹಿಂದಿನ ಕಾಲದ ಪಂಡಿತನು ಗಂಗೆಯ ಮಣ್ಣಿನಿಂದ ನಿರ್ಮಿಸಿದ್ದಿದ್ದರೆ ಅದಕ್ಕೊಂದು ಬೆಲೆಯಿರುತ್ತಿತ್ತು ನಿಮ್ಮಲ್ಲಿ. ಆದರೆ ನನ್ನ ಈ ರೂಪವನ್ನು ಬ್ರಹ್ಮ ಕೇವಲ ತನ್ನ ಆನಂದಕ್ಕಾಗಿ ನಿರ್ಮಿಸಿದ್ದ. ಅದಕ್ಕೇ ನಿಮ್ಮ 'ಧರ್ಮ' ತುಂಬಿದ ಕುಟುಂಬದಲ್ಲಿ ಅದಕ್ಕೆ ಬೆಲೆಯಿಲ್ಲ.

ನನಗೆ ರೂಪವಿದೆಯೆಂಬ ವಿಷಯವನ್ನು ಮರೆತುಬಿಡಲು ನಿಮಗೆ ಬಹಳ ದಿನ ಹಿಡಿಯಲಿಲ್ಲ. ಆದರೆ ನನಗೆ ಬುದ್ಧಿ ಇರುವುದೆಂಬ ಸಂಗತಿ ನಿಮ್ಮಗಳ ಗಮನಕ್ಕೆ ಪದೇ ಪದೇ ಬರಲಾರಂಭಿಸಿತು. ಈ ನನ್ನ ಬುದ್ಧಿ ಅದೆಷ್ಟು ಸಹಜವೆಂದರೆ ನಿಮ್ಮ ಮನೆಗೆಲಸಗಳ ನಡುವೆ ಇಷ್ಟು ಕಾಲ ಕಳೆದರೂ ಇವತ್ತಿಗೂ ಅದು ಉಳಿದುಕೊಂಡಿದೆ. ನಮ್ಮಮ್ಮ ಈ ನನ್ನ ಬುದ್ಧಿಯ ಬಗ್ಗೆ ಬಹಳ ದುಗುಡದಿಂದ ಇದ್ದಳು. ಹೆಣ್ಣು ಮಕ್ಕಳಿಗೆ ಇದೊಂದು ಪೀಡೆ, ಆಕೆಯ ಅಭಿಪ್ರಾಯದಲ್ಲಿ. ಕಟ್ಟು ನಿಟ್ಟು, ಅಡ್ಡಿ ಆತಂಕಗಳನ್ನ ಮನ್ನಿಸಿ ನಡೆಯಬೇಕಾಗಿದ್ದವಳು ಬುದ್ಧಿಯ ಪ್ರಕಾರ ನಡೆಯಲು ಹೋದರೆ ಮಾತು ಮಾತಿಗೆ ಡಿಕ್ಕಿ ಹೊಡೆದು ಏಟು ತಿಂದು ತಿಂದು ಅವಳ ಹಣೆ ಒಡೆದು ಹೋಗಲೇಬೇಕು. ಆದರೆ ಏನು ಮಾಡಲಿ, ಹೇಳಿ. ನಿಮ್ಮ ಮನೆಯ ಸೊಸೆಯರಿಗೆಲ್ಲ ಎಷ್ಟು ಬುದ್ಧಿ ಆವಶ್ಯಕವೋ, ಅದಕ್ಕಿಂತ ಬಹಳ ಹೆಚ್ಚಾಗಿ ವಿಧಾತನು ಮೈಮರೆತು ನನಗೆ ಕೊಟ್ಟುಬಿಟ್ಟಿದ್ದ. ಅದನ್ನು ಈಗ ಯಾರಿಗೆ ವಾಪಸು ಕೊಡಲಿ, ಹೇಳಿ. ನೀವೆಲ್ಲ ನನಗೆ ಗಂಡುಬೀರಿಯೆಂದು ಮೂರುಹೊತ್ತೂ ದದ್ದುಂಟು. ಕೈಲಾಗದವರಿಗೆ ಬೈಗಳೇ ಸಮಾಧಾನ ಕೊಡುವ ಆಯುಧ. ಆದರೂ ನಾನು ಅದನ್ನ ಕ್ಷಮಿಸಿದೆ.

ನನ್ನಲ್ಲಿದ್ದ ಒಂದು ವಸ್ತು ನಿಮ್ಮ ಮನೆವಾಳ್ತೆಯ ಹೊರಗಡೆ ಇತ್ತು. ಅದು ನಿಮಗಾರಿಗೂ ಗೊತ್ತಿರಲಿಲ್ಲ. ನಾನು ಮರೆಯಲ್ಲೇ ಕವಿತೆ ಬರೆಯುತ್ತಿದ್ದೆ. ಅದೆಷ್ಟೇ ಕೆಲಸಕ್ಕೆ ಬಾರದವುಗಳಾಗಿರಲಿ, ಅದರ ನಡುವೆ ನಿಮ್ಮ ಒಳಮನೆಯ ಅಡ್ಡಗೋಡೆ ಬಂದು ನಿಲ್ಲಲು ಸಾಧ್ಯವಿರಲಿಲ್ಲ. ಅಲ್ಲೇ ನನ್ನ ಮುಕ್ತಿ. ಅಲ್ಲೇ ನಾನು ನಿಜವಾದ 'ನಾನು'. ನನ್ನಲ್ಲಿ ಯಾವುದೆಲ್ಲವೂ ನಿಮ್ಮ ಮನೆಯ ಎರಡನೆಯ ಸೊಸೆಯನ್ನು ಮೀರಿ ನಿಂತಿತ್ತೋ ಅದನ್ನ ನೀವಾರೂ ಇಷ್ಟಪಡಲಿಲ್ಲ, ನೀವದನ್ನ ಗುರುತಿಸಲೂ

ಆಗಲಿಲ್ಲ. ನಾನೊಬ್ಬ ಕವಯಿತ್ರಿ ಎಂಬ ವಿಷಯ ಈ ಹದಿನೈದು ವರುಷಗಳಲ್ಲಿ ನಿಮಗಾರಿಗೂ ತಿಳಿದುಬರಲಿಲ್ಲ.

ನಿಮ್ಮ ಮನೆಯ ಮೊಟ್ಟಮೊದಲಿನ ನೆನಪುಗಳಲ್ಲಿ ಎಲ್ಲಕ್ಕಿಂತ ಮಿಗಿಲಾಗಿ ನನ್ನ ಮನಸ್ಸಿಗೆ ಬರುವುದೆಂದರೆ ನಿಮ್ಮ ದನಗಳ ಕೊಟ್ಟಿಗೆ. ಒಳಗಡೆಯ ಮಹಡಿಗೆ ಹತ್ತಿಹೋಗಲಿರುವ ಮೆಟ್ಟಲುಗಳ ಬದಿಯಲ್ಲೇ ನಿಮ್ಮ ದನಗಳ ಕೊಟ್ಟಿಗೆ. ಎದುರುಬದಿಯ ಅಂಗಳವನ್ನು ಬಿಟ್ಟರೆ ಅವಕ್ಕೆ ಅಲುಗಾಡಲು ಎಡೆಯಿಲ್ಲ. ಆ ಅಂಗಳದ ಮೂಲೆಯಲ್ಲಿ ಅವಕ್ಕೆ ಮೇವು ಹಾಕುವ ಮರದ ಡಬರಿ. ಬೆಳಗ್ಗೆ ಆಳಿಗೆ ಏನೇನೋ ಕೆಲಸ. ಅವನು ಬಂದು ತಿಂಡಿ ಹಾಕುವವರೆಗೂ ಆ ದನಗಳು, ಪಾಪ, ಉಪವಾಸದಿಂದ ಕಂಗೆಟ್ಟು ಆ ಡಬರಿಯ ಅಂಚನ್ನೇ ನೆಕ್ಕಿ ನೆಕ್ಕಿ ಅದನ್ನ ಕಿತ್ತು ಕಿತ್ತು ಅಗಿಯುತ್ತಿರುತ್ತವೆ. ಇದನ್ನು ಕಂಡು ನನ್ನ ಜೀವವೇ ಅಳುತ್ತಿತ್ತು. ನಾನು ಹಳ್ಳಿಗಾಡಿನ ಹುಡುಗಿ. ನಿಮ್ಮ ಮನೆಯಲ್ಲಿ ಅವತ್ತು ಹೊಸದಾಗಿ ಕಾಲಿಟ್ಟಾಗ ಆ ದನಗಳೆರಡೂ, ಅವುಗಳ ಮೂರು ಕರುಗಳೂ, ಮಾತ್ರ ಇಡೀ ಶಹರಿನಲ್ಲೆಲ್ಲಾ ನನ್ನ ಏಕ ಮಾತ್ರ ಮತ್ತು ಚಿರಪರಿಚಿತ ಆತ್ಮೀಯರಂತೆ ಅನ್ನಿಸಿತು. ನಾನು ಹೊಸ ಸೊಸೆಯಾಗಿದ್ದಷ್ಟು ದಿನಗಳೂ ನನ್ನ ಹೊಟ್ಟೆಗೂ ಹಾಕಿಕೊಳ್ಳದೆ ಆ ಮೂಕ ಜಂತುಗಳಿಗೆ ನನ್ನ ತಿನಿಸನ್ನು ತಿನ್ನಿಸುತ್ತಿದ್ದೆ. ದೊಡ್ಡವಳಾದ ಮೇಲೆ ನನ್ನ ಈ ಬಹಿರಂಗವಾದ ದನಗಳ ಮೇಲಿನ ಮಮತೆಯನ್ನ ಗಮನಿಸಿ ಆ ಮನೆಯ ನನ್ನ ಸಲಿಗೆಯ ಸಂಬಂಧಿಕರನೇಕರು ತಮಾಷೆಮಾಡುತ್ತ ನನ್ನ ಗೋತ್ರದ ಸಂಬಂಧವಾಗಿ ಸಂಶಯಪಡುತ್ತಿದ್ದರು.

ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳು ಪ್ರಸವವಾದೊಡನೆಯೇ ಕಣ್ಮುಚ್ಚಿದಳು. ನನ್ನನ್ನೂ ಸಂಗಡ ಬರಲು ಕರೆಕೊಟ್ಟು ಹೋದಳು. ಅವಳೇನಾದರೂ ಬದುಕಿದ್ದ ಪಕ್ಷದಲ್ಲಿ ಅವಳೇ ನನ್ನ ಬಾಳುವೆಯಲ್ಲಿ ಯಾವುದೆಲ್ಲ ಅತಿಶಯವೋ ಯಾವುದೆಲ್ಲ ಸತ್ಯವೋ ಅದೆಲ್ಲವನ್ನೂ ತಂದು ಕೊಡುತ್ತಿದ್ದಳೇನೋ. ಆಗ ನಾನು ಕೇವಲ ಎರಡನೆಯ ಸೊಸೆಯಾಗಿರದೆ ಕೂಡಲೇ ತಾಯಿಯಾಗಿಬಿಡುತ್ತಿದ್ದೆ. ತಾಯಿಯಾದವಳು ಒಂದು ಕುಟುಂಬದ ನಡುವೆಯಿದ್ದುಕೊಂಡು ವಿಶ್ವಸಂಸಾರಕ್ಕೆ ಸೇರಿದವಳಾಗಿ ಬಿಡುವಳು. ನಾನೋ ತಾಯಿಯಾಗುವ ನೋವನ್ನೇನೋ ಅನುಭವಿಸಿದೆ. ಆದರೆ ತಾಯಿಯಾಗುವ ಮುಕ್ತಿಯನ್ನು ಮಾತ್ರ ಪಡೆಯಲಿಲ್ಲ.

ನನಗೆ ನೆನಪಿದೆ, ಆಂಗ್ಲೇಯ–ಡಾಕ್ಟರು ಬಂದು ನಮ್ಮ ಮನೆಯ ಒಳಗಣ ಸ್ಥಿತಿಯನ್ನು ಕಂಡು ಅಚ್ಚರಿಪಟ್ಟುಬಿಟ್ಟಿದ್ದ. ಮತ್ತು ಬಾಣಂತಿಯ ಕೋಣೆಯನ್ನು ನೋಡಿಯಂತೂ ಅವನಿಗೆ ಕೋಪ ತಡೆಯಲಾರದೆ ಚೆನ್ನಾಗಿ ಬೈದುಬಿಟ್ಟಿದ್ದ. ಮನೆಯ ಆಚೆ ಕಡೆ ನಿಮ್ಮದೊಂದು ಹೂದೋಟವಿದೆ. ಮನೆಯ ಹೊರಕೋಣೆಯನ್ನ ಅಚ್ಚುಕಟ್ಟಾಗಿಡಲು ನಿಮಗೆ ಸಾಮಾನುಗಳ ಅಭಾವವಿಲ್ಲ. ಆದರೆ ಒಳಗಡೆ ಮಾತ್ರ ಕಸೂತಿ ಹೆಣಿಗೆಯ ಹಿಂಭಾಗದಂತೆ. ಅಲ್ಲಂತೂ ನಾಚುಗೆಯಿಲ್ಲ ಅಚ್ಚುಕಟ್ಟಿಲ್ಲ.

ಚೆಲುವಿನ ಸೋಂಕು ಕೂಡ ಇಲ್ಲ. ಅಲ್ಲಿ ಬೆಳಕು ಬೇಕೋ ಬೇಡವೋ ಎಂದು ಮಿಕಮಿಕನೆ ಉರಿಯುತ್ತದೆ. ಗಾಳಿಯೂ ಬರಲೋ ಬೇಡವೋ ಎಂದು ಕಳ್ಳನ ಹಾಗೆ ಪ್ರವೇಶಿಸುತ್ತದೆ. ಅಂಗಳದಲ್ಲಂತೂ ಹೊಲಸಿನ ಬಚ್ಚಲು. ಅಲ್ಲಿನ ಕಸ, ಕಡ್ಡಿಗಳ ರಾಶಿ ಅಲ್ಲಿಂದ ಕದಲಲು ಆತುರಪಡುವುದಿಲ್ಲ. ಅಲ್ಲಿ ಗೋಡೆಯ ಮೇಲೆ, ನೆಲದ ಮೇಲೆ ಇರುವ ಕೊಳೆ, ಕಳಂಕ ಅಕ್ಷಯವಾಗಿ ವಿರಾಜಿಸುತ್ತಿರುತ್ತದೆ. ಆದರೆ ಡಾಕ್ಟರನೊಂದು ತಪ್ಪುಮಾಡಿದ್ದ. ಈ ಪರಿಸ್ಥಿತಿ ನಮಗೆ, ಅಂದರೆ ಒಳಗಡೆ ಅನುಭವಿಸುವ ಹೆಣ್ಣು ಜೀವಿಗಳಿಗೆ ದುಃಖಕರವೇನೋ ಎಂದು. ಆದರೆ ಸಂಗತಿಯು ಅದಕ್ಕೆ ವಿರುದ್ಧ. ಅನಾದರವೆಂಬುದು ಬೂದಿಯಂತೆ. ಆ ಬೂದಿ ಕೆಂಡವನ್ನು ಒಳಗೊಳಗೇ ಕೂಡಿಸಿಟ್ಟುಕೊಂಡು ಹೊರಗಡೆ ಮಾತ್ರ ಅದರ ತಾಪವನ್ನು ತೋರಗೊಡುವುದಿಲ್ಲ. ಆತ್ಮ ಸನ್ಮಾನವು ಯಾವಾಗ ಕಡಿಮೆಯಾಗುತ್ತ ಬರುತ್ತದೋ ಅಗ ಅನಾದರವನ್ನು ಅನ್ಯಾಯವೆನ್ನಲಾಗುವುದಿಲ್ಲ. ಆ ಕಾರಣದಿಂದ ಅದಕ್ಕೆ ವೇದನೆಯಿಲ್ಲ. ಇದಕ್ಕೇ ಹೆಂಗಸರಿಗೆ ಸಂಕಟತೋರಲು ಲಜ್ಜೆಯಾಗುವುದು. ನಾನದಕ್ಕೇ ಹೇಳುತ್ತೇನೆ. ಹೆಂಗಸರು ಸಂಕಟಪಡಲೇಬೇಕೆಂದು ನಿಮ್ಮ ವ್ಯವಸ್ಥೆಯಾದಲ್ಲಿ ಅವರನ್ನ ಎಷ್ಟುಮಟ್ಟಿಗಾದರೆ ಅಷ್ಟು ಅನಾದರದಲ್ಲಿಟ್ಟಿರುವುದೇ ಒಳ್ಳೆಯದು. ಆದರದಲ್ಲಿ ದುಃಖದ ವೇದನೆ ಜಾಸ್ತಿಯಾಗುತ್ತ ಹೋಗುವುದು.

ನೀವು ಹೇಗಾದರೂ ಇಟ್ಟಿರಿ, ದುಃಖವೆನ್ನುವುದೊಂದಿದೆಯೆಂಬ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದನ್ನೂ ಮರೆತುಬಿಟ್ಟಿದ್ದೆ. ಹೆರಿಗೆಯ ಕೊಠಡಿಯಲ್ಲಿ ಸಾವು ತಲೆಯ ಬಳಿ ಬಂದು ನಿಂತಿತ್ತು. ಮನಸ್ಸಿನಲ್ಲಿ ಭಯವಾಗಲಿಲ್ಲ. ಬಾಳುವೆಯೆಂಬುದೇನು ಅಷ್ಟು ಬೆಲೆಯೇ ನಮಗೆ, ಸಾಯಲು ಹೆದರುವುದಕ್ಕೆ? ಆದರದಿಂದ, ಉಪಚಾರದಿಂದ ಯಾವ ಜೀವನದ ಬಂಧನ ಗಟ್ಟಿಯಾಗಿ ಹೆಣೆಯಲ್ಪಟ್ಟಿದೆಯೋ ಅವರಿಗೆ ತಾನೇ ಸಾಯಲು ಹೆದರಿಕೆ! ಯಮನು ಬಂದು ನನ್ನನ್ನ ಹಿಡಿದು ಎಳೆದಿದ್ದಿದ್ದರೆ ನಾನಾಗಿಯೇ ಮಣ್ಣು ಹೆಂಟೆಯೊಂದಿಗೇ ಹುಲ್ಲು ಗಡ್ಡೆ ಎದ್ದು ಬರುವಹಾಗೆ ಬೇರು ಬುಡಸಮೇತ ನಾನು ಹಾಗೇ ಎದ್ದು ಬಂದು ಬಿಡುತ್ತಿದ್ದೆ. ಬಂಗಾಳಿ ಹೆಂಗಸಂತೂ ಮಾತು ಮಾತಿಗೆ ಸಾಯಲು ಹೋಗುತ್ತಾಳೆ. ಆದರೆ ಹೀಗೆ ಸಾಯುವುದರಲ್ಲಿ ಶೌರ್ಯವೆಂಥದು? ಸಾಯವುದಕ್ಕೆ ಲಜ್ಜೆಯಾಗುತ್ತದೆ, ಏಕೆಂದರೆ ಅದು ನಮಗೆ ಅಷ್ಟು ಸಹಜ.

ನನ್ನ ಮಗಳಂತೂ ಸಂಜೆಯ ತಾರೆಯಂತೆ ಕ್ಷಣಕಾಲಕ್ಕಾಗಿ ಉದಯಿಸಿ ಮುಳುಗಿಹೋಗಿದ್ದಳು. ಮತ್ತೆ ಎಂದಿನಂತೆ ನನ್ನ ನಿತ್ಯದ ಮನೆಗೆಲಸ ಮತ್ತು ದನ, ಕರುಗಳನ್ನ ನೋಡಿಕೊಳ್ಳುವುದರಲ್ಲಿ ಮನ ಮುಳುಗಿಸಿದೆ. ಜೀವನವು ಹೀಗೇ

ಉರುಳಿಕೊಂಡು ಉರುಳಿಕೊಂಡು ಕಡೆಯವರೆಗೂ ಸವೆದುಹೋಗಬಹುದಾಗಿತ್ತು. ಇವತ್ತು ಹೀಗೆ ಕೂತು ನಿಮಗೆ ಕಾಗದ ಬರೆಯುವ ಅಗತ್ಯವೇ ಬರುತ್ತಿರಲಿಲ್ಲ. ಆದರೆ ಗಾಳಿಯು ಎಲ್ಲಿಂದಲೋ ಒಂದು ಬೀಜವನ್ನು ಹಾರಿಸಿಕೊಂಡು ಬಂದು ಅಂಗಳದ ಮಧ್ಯೆ ಅರಳಿಮರ ಅಂಕುರವಾಗುವಂತೆ ಮಾಡಿ ಹೋಗುವುದು. ಕೊನೆಗೆ ಆ ಸಸಿ ಬೆಳೆದು ದೊಡ್ಡದಾಗಿ ಗೋಡೆಯ ಇಟ್ಟಿಗೆಗಳೊಡೆದು ಅದರ ಎದೆಯ ಪಂಜರ ಸೀಳಿ ಒಡೆಯುವುದು. ನನ್ನ ಸಂಸಾರದ ಅಚ್ಚುಕಟ್ಟಾದ ಬಂದೋಬಸ್ತಿನ ನಡುವೆ ಸಣ್ಣದೊಂದು ಜೀವನದ ಕಣವು ಎಲ್ಲಿಂದಲೋ ಹಾರಿಕೊಂಡು ಬಂದು ಬಿತ್ತು. ಆಗಲಿಂದ ಅದರಲ್ಲಿ ಒಡಕು ಆರಂಭವಾಯಿತು.

ವಿಧವೆಯಾದ ತಾಯಿಯ ಮರಣವಾದ ಅನಂತರ ನನ್ನ ಹಿರಿಯ ಓರಗಿತ್ತಿಯ ತಂಗಿ ಬಿಂದು ತನ್ನ ದಾಯಾದರ ಅತ್ಯಾಚಾರದಿಂದ ತಪ್ಪಿಸಿಕೊಂಡು ನಮ್ಮ ಮನೆಯಲ್ಲಿ ತನ್ನ ಅಕ್ಕನ ಬಳಿ ಬಂದು ಆಶ್ರಯ ಪಡೆದಳು. ಅವಳು ಬಂದ ದಿನ ನೀವೆಲ್ಲ ಇದೆಲ್ಲಿಂದ ಬಂತಪ್ಪಾ ಹೊಸ ಪೀಡೆ ಎಂದುಕೊಂಡಿದ್ದನ್ನು ನಾನು ಕೇಳಿದೆ. ನನ್ನದೊಂದು ಸುಟ್ಟ ಸ್ವಭಾವ. ಏನುಮಾಡಲಿ ಹೇಳಿ. ನೋಡಿದೆ, ನೀವೆಲ್ಲ ಮನಸ್ಸಿನಲ್ಲೇ ಬೈದುಕೊಳ್ಳುತ್ತಿದ್ದುದನ್ನು. ಅದಕ್ಕಾಗಿಯೇ ಆ ನಿರಾಶ್ರಿತಳಾದ ಹುಡುಗಿಯ ಕಡೆ ನನ್ನ ಮನಸ್ಸೆಲ್ಲಾ ಉದ್ರೇಕವಾಗಿ ಅವಳ ಬೆಂಬಲವಾಗಿ ನಿಲ್ಲಬೇಕೆಂದು ಹುರಿಕಟ್ಟಿ ನಿಂತುಕೊಂಡಿತು. ಬೇರೆಯವರು ಮನೆಯಲ್ಲಿ ಪರರ ಇಚ್ಛೆಗೆ ವಿರುದ್ಧವಾಗಿ ಬಂದು ಆಶ್ರಯ ಪಡೆಯುವುದೆಂದರೆ ಎಷ್ಟು ನಾಚುಗೆಗೇಡಾದ ವಿಷಯ! ಆದರೆ ಸಂದರ್ಭಗಳಿಂದ ತಳ್ಳಲ್ಪಟ್ಟು ಅದನ್ನೇ ವಿಧಿಯಿಲ್ಲದೆ ಅರಸಿಕೊಂಡು ಬಂದು ಮೊರೆಹೊಕ್ಕವಳನ್ನು ಒತ್ತಟ್ಟಿಗೆ ತಳ್ಳಿಹಾಕಿಬಿಡಲಾದೀತೆ?

ಆಮೇಲೆ ನೋಡಿದೆ, ನನ್ನ ಓರಗಿತ್ತಿಯ ಅವಸ್ಥೆ. ಆಕೆ ಅತ್ಯಂತ ಅನುಕಂಪದಿಂದ ತಂಗಿಯನ್ನ ತನ್ನ ಬಳಿಗೆ ಬರಮಾಡಿಕೊಂಡಿದ್ದಳು. ಆದರೆ ಅದು ತನ್ನ ಯಜಮಾನರ ಒಪ್ಪಿಗೆಯಾಗಲಿಲ್ಲವೆಂದು ತಿಳಿದೊಡನೆ ಆಕೆ ತನ್ನ ಭಾವವನ್ನೇ ಬದಲಾಯಿಸಿಬಿಟ್ಟಳು. ಅವಳು ತನಗೊಂದು ಭಯಂಕರ ಪೀಡೆಯೆಂಬಂತೆ ಆಚರಿಸತೊಡಗಿದಳು. ಇವಳನ್ನ ಹೇಗಾದರೂ ಮಾಡಿ ದೂರಮಾಡಿದರೆ ಬದುಕಿದಹಾಗೆ ಎನ್ನುವಂತೆ ಭಾವ ತೋರಿದಳು. ಈ ಅನಾಥಳಾದ ತಂಗಿಯನ್ನು ಮನಬಿಚ್ಚಿ ವಾತ್ಸಲ್ಯ ತೋರಿ ಹತ್ತಿರ ಕರೆದುಕೊಳ್ಳುವ ಸಾಹಸ ಅವಳಿಗೆ ಬರಲಿಲ್ಲ. ಪಾಪ, ಅವಳೇನು ಮಾಡಿಯಾಳು? ಅವಳು ಪತಿವ್ರತೆ!

ಅವಳ ಈ ಸಂಕಟವನ್ನು ಕಂಡು ನನ್ನ ಮನಸ್ಸು ಇನ್ನೂ ವ್ಯಥೆಗೊಂಡಿತು. ನಾನಿದನ್ನೂ ನೋಡಿದೆ, ನನ್ನ ಓರಗಿತ್ತಿಯು ಎಲ್ಲರಿಗೂ ವಿಶೇಷವಾಗಿ ಕಾಣುವ ಹಾಗೆ ತನ್ನ ತಂಗಿಯ ಊಟ, ಉಪಚಾರಗಳ ಬಗ್ಗೆ ಒರಟಾದ ವ್ಯವಸ್ಥೆಯನ್ನು ಮಾಡಿದ್ದಳು. ಮತ್ತು ಮನೆಯ ಎಲ್ಲ ವಿಧವಾದ ಕೀಳು ಕೆಲಸಗಳನ್ನು ಅವಳಿಂದ

ಮಾಡಿಸುತ್ತಿದ್ದಳು. ಇದನ್ನು ಕಂಡು ನನಗೆ ದುಃಖವೊಂದೇ ಅಲ್ಲದೆ ನಾಚುಗೆಯೂ ಆಯಿತು. ನನ್ನ ಓರಗಿತ್ತಿಗೆ ಎಲ್ಲರ ಮುಂದೆಯೂ ತೋರಿಕೊಳ್ಳಬೇಕೆಂಬ ವ್ಯಗ್ರತೆಯೇನೆಂದರೆ ನಮ್ಮ ಕುಟುಂಬಕ್ಕೆ ಬಿಂದು ಎಷ್ಟು ಅಗ್ಗವಾದ ದಾಸಿಯಾಗಿ ದೊರಕಿದ್ದಾಳೆ ಎಂಬುದಾಗಿ, ಅವಳಿಗೆ ಕೊಡುವ ಕೆಲಸ ಅಪಾರ, ಆದರೆ ಖರ್ಚಿನ ಬಾಬತ್ತಿನಲ್ಲಿ ಅವಳು ಬಹಳ ಅಗ್ಗ!

ನನ್ನ ಓರಗಿತ್ತಿಯ ತಂದೆಯ ಮನೆತನದಲ್ಲಿ ಕುಲವೆಂಬುದರ ಮುಂದೆ ಬೇರೊಂದು ದೊಡ್ಡದಿಲ್ಲ. ರೂಪವೂ ಬೇಕಿಲ್ಲ, ಹಣವೂ ಬೇಕಿಲ್ಲ. ನಮ್ಮ ಮಾವನವರ ಕೈಕಾಲು ಕಟ್ಟಿಕೊಂಡು ಹೇಗೆ ತಮ್ಮ ಮಗಳನ್ನು ನಿಮ್ಮ ಮನೆಗೆ ಸೊಸೆಯಾಗುವಂತೆ ಮಾಡಿದರು ಆಕೆಯ ತಂದೆ ಎಂಬುದು ನಿಮಗೆ ತಿಳಿಯದೆಯಿಲ್ಲ. ಆಕೆಯು ತಾನು ಈ ಮನೆಯ ಸೊಸೆಯಾಗಿ ಬಂದುದೇ ನಿಮ್ಮ ವಂಶಕ್ಕೆ ಅವಳಿಂದಾದ ಭಾರೀ ಅಪರಾಧವೆಂಬಂತೆ ತಿಳಿದುಕೊಂಡಿದ್ದಾಳೆ. ಆ ಕಾರಣದಿಂದ ಆಕೆ ಎಲ್ಲ ವಿಷಯಗಳಲ್ಲೂ ತನ್ನನ್ನ ಎಷ್ಟರವರೆಗೆ ಸಾಧ್ಯವೋ ಅಷ್ಟು ಸಂಕುಚಿತ ಮಾಡಿಕೊಂಡು ನಿಮ್ಮ ಮನೆಯಲ್ಲಿ ಅತಿ ಸ್ವಲ್ಪ ಜಾಗವನ್ನು ಮಾತ್ರ ಒದಗಿಸಿಕೊಂಡಿದ್ದಾಳೆ.

ಆದರೆ ಅವಳ ಈ ಸಾಧುವಾದ ಮೇಲ್ಪಂಕ್ತಿ ನಮಗೆಲ್ಲ ಬಹಳ ಕಷ್ಟಕ್ಕಿಟ್ಟುಕೊಂಡಿತು. ನಾನು ಎಲ್ಲ ಕಡೆಗಳಲ್ಲೂ ನನ್ನನ್ನೇ ಅಷ್ಟೊಂದು ಹೀನವಾಗಿ ಮಾಡಿಕೊಳ್ಳಲು ತಯಾರಿಲ್ಲ. ನಾನು ಯಾವುದನ್ನ ಒಳ್ಳೆಯದೆಂದು ತಿಳಿದಿದ್ದೇನೋ ಬೇರೆ ಯಾರನ್ನ ಸಂತುಷ್ಟಿಗೊಳಿಸಲಿಕ್ಕೂ ಅದನ್ನ ಕೆಟ್ಟುದೆಂದು ದೂರವಿಡಲು ಸಾಧ್ಯವಿಲ್ಲ. ಇದರ ಪ್ರಮಾಣವು ನಿಮಗೀಗಾಗಲೇ ಬೇಕಾದಷ್ಟು ಸಿಕ್ಕಿದೆ.

ಬಿಂದುವನ್ನು ನಾನು ನನ್ನ ಹತ್ತಿರ ಕರೆದುಕೊಂಡೆ. ಆಗ ನನ್ನ ಓರಗಿತ್ತಿ "ಮೃಣಾಲಳು ಬಡವರ ಮನೆಯ ಹುಡುಗಿಯನ್ನ ಹಾಳುಮಾಡುವುದಕ್ಕೆ ತೊಡಗಿದ್ದಾಳೆ" ಎಂದು ಗೊಣಗಿದಳು. ನಾನೇನೋ ಭಯಂಕರವಾದೊಂದು ವಿಪತ್ತನ್ನುಂಟುಮಾಡುತ್ತಿರುವೆನೆನ್ನುವಂತೆ ಆಕೆ ನನ್ನನ್ನ ಎಲ್ಲರ ಮುಂದೆಯೂ ದೂರಲು ತೊಡಗಿದಳು. ಆದರೂ ನನಗಿದು ಚೆನ್ನಾಗಿ ಗೊತ್ತು. ಆಕೆ ಒಳಗೊಳಗೇ ನಿಸೂರಾಯಿತು, ಬದುಕಿದೆ ಎಂದುಕೊಂಡಿದ್ದಳು. ಇನ್ನು ಮೇಲೆ ದೋಷದ ಭಾರ ನನ್ನ ಹೆಗಲ ಮೇಲೇ ಬೀಳುವುದು. ಆಕೆಯು ತಂಗಿಯ ಬಗ್ಗೆ ತಾನೇ ಆದರ ತೋರಲಾರಳಾದರೂ ನನ್ನಿಂದಲಾದರೂ ಆ ಹುಡುಗಿಗೆ ಆದರ ದೊರೆಯುವುದಲ್ಲ, ಸದ್ಯ, ಎಂದು ತನ್ನ ಮನವನ್ನು ಆದಷ್ಟು ಹಗುರಮಾಡಿಕೊಂಡಳು. ಆಕೆ ತನ್ನ ತಂಗಿಯ ವಯಸ್ಸಿನಿಂದ ಒಂದೆರಡು ಅಂಕಿಗಳನ್ನು ಕಳೆದುಬಿಡಲು ಉತ್ಸುಕತೆ ತೋರುತ್ತಿದ್ದಳು. ಆದರೆ ಹುಡುಗಿಯ ವಯಸ್ಸು ಹದಿನಾಲ್ಕಕ್ಕಿಂತಲೂ ಕಡ್ಮೆಯಾಗಿರಲಿಲ್ಲವೆಂಬುದನ್ನು ಗುಟ್ಟಾಗಿ ಹೇಳಿದರೆ ಅನ್ಯಾಯ ಮಾಡಿದಂತಾಗುತ್ತಿರಲಿಲ್ಲ. ನಿಮಗೆ ಗೊತ್ತೇಯಿದೆ, ಬಿಂದು ನೋಡಲಿಕ್ಕೆ ಎಷ್ಟು

ಕುರೂಪಿಯಾಗಿದ್ದಳೆಂದರೆ ಅವಳೊಮ್ಮೆ ನೆಲದ ಮೇಲೆ ಬಿದ್ದು ತಲೆಯೊಡೆದುಕೊಂಡಿದ್ದರೂ ನೆಲಕ್ಕೇನೋ ಆಗಿಹೋಯಿತಲ್ಲ ಎಂದು ಎಲ್ಲರೂ ಉದ್ವಿಗ್ನರಾಗುವಂತಿದ್ದರು. ಒಟ್ಟಿನಲ್ಲಿ ತಂದೆ, ತಾಯಿಗಳಿಲ್ಲದ ಅವಳನ್ನು ಮದುವೆಮಾಡಿಕೊಡುವಂಥವರು ಯಾರೂ ಇರಲಿಲ್ಲ. ಅಲ್ಲದೆ ಅವಳನ್ನು ಮದುವೆಯಾಗಲು ತಾನೇ ಯಾರು ಸಿದ್ಧರಿದ್ದರು?

ಬಿಂದು ಹೆದರುತ್ತ ಹೆದರುತ್ತಲೇ ನನ್ನ ಬಳಿಗೆ ಬಂದಳು. ಅವಳ ಸೋಂಕು ನನಗೆಲ್ಲಾದರೂ ತಗುಲಿ ನನಗೆ ಸೈರಿಸದೆ ಹೋಗುತ್ತೇನೋ ಎಂಬ ಹೆದರಿಕೆಯಿರಬೇಕು, ಪಾಪ. ಇಡೀ ವಿಶ್ವದಲ್ಲಿ ತಾನು ಜನ್ಮ ತಾಳುವುದರ ಯಾವ ಅಗತ್ಯವೂ ಇರಲಿಲ್ಲವೆಂದೇ ಬಹುಶಃ ಅವಳ ಎಣಿಕೆ. ಅದಕ್ಕೇ ಅವಳು ಜನರ ಎದುರಿಗೆ ಬರದೆ ಮಗ್ಗುಲಿಗೆ ಹಾದು ಎಲ್ಲರ ದೃಷ್ಟಿಯನ್ನೂ ತಪ್ಪಿಸಿಕೊಂಡೇ ಓಡಾಡುತ್ತಿದ್ದಳು. ಅವಳ ತಂದೆಯ ಮನೆಯಲ್ಲಿ ಅವಳ ಚಿಕ್ಕಪ್ಪನ ಮಕ್ಕಳು ಅವಳಿಗಾಗಿ ಒಂದು ನಿಷ್ಪ್ರಯೋಜಕ ಅಲ್ಪವಸ್ತುವಿಗೆ ಬೇಕಾಗುವಷ್ಟು ಜಾಗವನ್ನು ಕೂಡ ಬಿಟ್ಟು ಕೊಡಲು ತಯಾರಿರಲಿಲ್ಲ. ಅನಾವಶ್ಯಕವಾದ ಕಸವೆಷ್ಟೋ ಮನೆಯ ಆಸುಪಾಸುಗಳಲ್ಲಿ ಅನಾಯಾಸವಾಗಿ ಸ್ಥಳವನ್ನು ಪಡೆಯುತ್ತದೆ–ಅಷ್ಟೇಕೆ ಮನುಷ್ಯರು ಅದನ್ನು ಮರೆತೂ ಹೋಗುತ್ತಾರೆ. ಆದರೆ ಅನಾವಶ್ಯಕಳಾದ ಹೆಂಗಸು ಬರೇ ಅನಾವಶ್ಯಕಳೊಂದೇ ಅಲ್ಲ. ಅವಳನ್ನು ಮರೆಯುವುದೂ ಕಷ್ಟ. ಆ ಕಾರಣದಿಂದ ಕೆಲಸಕ್ಕೆ ಬಾರದ ವಸ್ತುಗಳನ್ನ ಬಿಸಾಡುವ ಕೋಣೆಯಲ್ಲಿ ಕೂಡ ಅವಳಿಗೆ ಸ್ಥಳವಿಲ್ಲ.

ಆದ್ದರಿಂದ ಬಿಂದುವನ್ನು ನನ್ನ ಕೋಣೆಗೆ ಕರೆತಂದಾಗ ಅವಳ ಎದೆಯೊಳಗೇ ನಡುಗಲು ಆರಂಭಿಸಿತು. ಅವಳ ಭಯುವನ್ನ ಕಂಡು ನನಗೆ ಬಹಳ ಯೋಚನೆಯಾಯಿತು. ನನ್ನ ಕೋಣೆಯಲ್ಲಿ ಅವಳಿಗಾಗಿ ಸ್ವಲ್ಪ ಸ್ಥಳವುಂಟೆಂದು ನಾನವಳಿಗೆ ಅತಿ ವಾತ್ಸಲ್ಯದಿಂದ ಅನುಕಂಪದಿಂದ ತಿಳಿಯಹೇಳಿದೆ.

ಆದರೆ ನನ್ನ ಕೋಣೆ ಕೇವಲ ನನ್ನ ಕೋಣೆಯೇ ಅಲ್ಲವಲ್ಲ. ಈ ಕಾರಣದಿಂದ ನನ್ನ ಕೆಲಸ ಸುಗಮವಾಗಲಿಲ್ಲ. ಎರಡು ಮೂರು ದಿನ ನನ್ನ ಬಳಿ ಇದ್ದಮೇಲೆ ಅವಳ ಮೈಮೇಲೆ ಕೆಂಪು ಕೆಂಪಾಗಿ ಏನೋ ಎದ್ದುಕೊಂಡವು. ಬಹುಶಃ ಅದು ಬೆವರುಗುಳ್ಳೆಗಳಿರಬಹುದು. ಅಲ್ಲದೆ ಮತ್ತೇನಾದರೂ ಆಗಿರಬಹುದು. ಆದರೆ ನೀವೆಲ್ಲ ಅದು ಸಿಡುಬುರೋಗ ಎಂದಿರಿ. ಏಕೆಂದರೆ ಅವಳು ಬಿಂದು ಅಲ್ಲವೆ, ಅದಕ್ಕೆ. ನಿಮ್ಮ ಓಣಿಯ ಅನನುಭವಸ್ಥ ಡಾಕ್ಟರನೊಬ್ಬ ಬಂದು ಇನ್ನು ಮೂರು ನಾಲ್ಕು ದಿನಗಳಾದ ಹೊರತು ಸರಿಯಾಗಿ ಹೇಳಲಾಗುವುದಿಲ್ಲ ಎಂದ. ಆದರೆ ಈ ಮೂರುನಾಲ್ಕು ದಿನಗಳವರೆಗೆ ಕಾದಿರುವವರು ಯಾರು? ಬಿಂದುವಾದರೋ ತನ್ನ ಕಾಯಿಲೆಯ ಬಗ್ಗೆ ಲಜ್ಜೆಯಿಂದ ಸಾಯಲು ತಯಾರಿದ್ದಳು. ಆಗ ನಾನು ಈ ಕಾಯಿಲೆ ಸಿಡುಬಿದ್ದರೂ ಇರಲಿ, ನಾನು ನನ್ನ ಬಾಣಂತಿಯ ಕೋಣೆಯಲ್ಲಿ

ಅವಳನ್ನಿಟ್ಟುಕೊಂಡಿರುತ್ತೇನೆ. ಬೇರೆ ಯಾರೂ ಅವಳಿಗಾಗಿ ಏನೂ ಮಾಡಬೇಕಾಗಿಲ್ಲ ಎಂದೆ. ಅದಕ್ಕಾಗಿ ನೀವೆಲ್ಲರೂ ನನ್ನ ಮೇಲೆ ರೋಷತೋರಿ ದುರ್ಗೆಯ ರೂಪ ತಾಳಿದಿರಿ. ಅದು ಸಾಲದೆ, ಸ್ವತಃ ಬಿಂದುವಿನ ಅಕ್ಕ ಸಹ, ಕೋಪಗೊಂಡಂತೆ ನಟಿಸಿ ಆ ನತದೃಷ್ಟಳನ್ನು ಆಸ್ಪತ್ರೆಗೆ ಸೇರಿಸುವಂತೆ ಸಲಹೆ ಮಾಡಿದಳು. ಅಷ್ಟರಲ್ಲಿ ಆ ಹುಡುಗಿಯ ಮೈ ಮೇಲಿನ ಕೆಂಪು ಕಲೆಗಳೆಲ್ಲ ಇದ್ದಕ್ಕಿದ್ದಹಾಗೆ ಮಾಯವಾಗಿ ಹೋದುವು. ಆಗ ನೀವೆಲ್ಲ ಮತ್ತಷ್ಟು ಕಳವಳಗೊಂಡುಬಿಟ್ಟಿರಿ. ಅದು ಖಂಡಿತವಾಗಿ ಸಿಡುಬೇ, ಒಳಗೇ ಅಡಗಿಹೋಗಿದೆ ಎಂದು ಹೇಳತೊಡಗಿದಿರಿ. ಏಕೆಂದರೆ ಅವಳು ಬಿಂದು ಅಲ್ಲವೆ, ಅದಕ್ಕೇ!

ಅನಾದರವಿದ್ದೂ ಬೆಳೆದು ಮನುಷ್ಯರಾಗುವುದು ಒಂದು ದೊಡ್ಡ ಗುಣವೇ. ಶರೀರವನ್ನು ಅದು ಒಟ್ಟಿಗೇ ಅಜರವಾಗಿ, ಅಮರವಾಗಿ ಮಾಡಿಬಿಡುವುದು. ಅಂಥವರಿಗೆ ಕಾಯಿಲೆ ಸುಲಭವಾಗಿ ಬರುವುದಿಲ್ಲ. ಅಲ್ಲದೆ ಸಾಯುವ ರಾಜ ಮಾರ್ಗಗಳೆಲ್ಲ ಒಂದೇ ಸಲ ಮುಚ್ಚಿಹೋಗುವುದು. ಅದರಿಂದಲೇ ರೋಗವು ಅವಳನ್ನು ಅಣಕಿಸಿ ಚೇಷ್ಟೆ ಮಾಡಿಹೋಯಿತು. ಅದರಿಂದ ಅವಳಿಗೆ ಹಾನಿಯೇನೂ ಆಗಲಿಲ್ಲ. ಆದರೆ ಒಂದು ವಿಷಯ ಮಾತ್ರ ಚೆನ್ನಾಗಿ ತಿಳಿದಂತಾಯಿತು. ಲೋಕದಲ್ಲಿ ಎಲ್ಲರಿಗಿಂತ ಅಲ್ಪವಾದ, ತುಚ್ಛವಾದ ಮನುಷ್ಯ ಪ್ರಾಣಿಗೆ ಆಶ್ರಯ ಕೊಡುವುದೇ ಎಲ್ಲಕ್ಕೂ ಹೆಚ್ಚು ಕಷ್ಟವೆಂದು. ಆಶ್ರಯದ ಅಗತ್ಯವು ಹೆಚ್ಚಾಗಿದ್ದಂತೆಲ್ಲ ಆ ಆಶ್ರಯಕ್ಕೆ ಅಡ್ಡಿ, ಆತಂಕಗಳೂ ಹೆಚ್ಚು ಹೆಚ್ಚು ಹಾನಿಕಾರಕಗಳಾಗಿ ಪರಿಣಮಿಸುವುವು.

ನನ್ನ ವಿಷಯದಲ್ಲಿ ಬಿಂದುವಿನ ಹೆದರಿಕೆ ಬಿಟ್ಟುಹೋಯಿತು ಎನ್ನುವಷ್ಟರಲ್ಲಿ ಅದಕ್ಕೆ ಬದಲು ಅವಳಿಗೆ ಇನ್ನೊಂದು ಗಾಳಿ ಬಂದು ಹಿಡಿಯಿತು. ನನ್ನನ್ನು ಮಿತಿಮೀರಿ ಪ್ರೀತಿಸತೊಡಗಿದಳು. ಇದರ ದೆಸೆಯಿಂದ ನನ್ನಲ್ಲಿ ಅವಳು ಒಂದು ರೀತಿಯಾಗಿ ಹೆದರಿಕೆಕೂಡ ಹುಟ್ಟುವಂತೆ ಮಾಡಿಬಿಟ್ಟಳು. ಪ್ರೀತಿಯ ಈ ಬಗೆಯ ರೂಪವನ್ನು ನಾನು ಬೇರೆಲ್ಲೂ ನೋಡಿಲ್ಲ. ಪುಸ್ತಕಗಳಲ್ಲಿ ಮಾತ್ರ ಓದಿದ್ದೇನೆ. ಆದರೂ ಅದು ಗಂಡು, ಹೆಣ್ಣಿನ ನಡುವೆ ನನಗೆ ರೂಪವಿದೆಯೆಂಬುದರ ವಿಷಯವನ್ನು ನೆನೆದುಕೊಳ್ಳುವಂಥ ಸಂದರ್ಭ ಯಾವುದೂ ಬಹಳ ಕಾಲ ಬಂದಿರಲಿಲ್ಲ. ಇಷ್ಟು ದಿನಗಳಾದ ಮೇಲೆ ನನ್ನ ರೂಪವನ್ನು ಹಚ್ಚಿಕೊಂಡು ಕೂತಳು ಈ ರೂಪವಿಲ್ಲದ ಅಭಾಗಿನಿ ಹುಡುಗಿ. ನನ್ನ ಮುಖವನ್ನು ಎಷ್ಟು ನೋಡಿದರೂ ಅವಳ ಕಣ್ಣಿನ ಹಸಿವು ಇಂಗುತ್ತಿರಲಿಲ್ಲ. ಅವಳು ಒಮ್ಮೊಮ್ಮೆ "ಅಕ್ಕಾ, ಈ ನಿನ್ನ ಚಂದ್ರಬಿಂಬದಂಥ ಮುಖ ನನ್ನ ಹೊರತು ಬೇರಾರಿಗೂ ನೋಡುವ ಪುಣ್ಯ ದೊರಕಿಲ್ಲ" ಎನ್ನುತ್ತಿದ್ದಳು. ನನ್ನ ಹೆರಳು ನಾನೇ ಹಾಕಿಕೊಂಡ ದಿನ ಅವಳಿಗೆ ಬಹಳ ಅಸಮಾಧಾನ. ನನ್ನ ಕೂದಲ ರಾಶಿಯನ್ನು ಎರಡೂ ಕೈಗಳಿಂದ ಎತ್ತಿ ಅಲ್ಲಾಡಿಸಲು ಅವಳಿಗೆ ಬಹಳ ಆಸೆ. ಎಲ್ಲಿಯಾದರೂ ಔತಣಕ್ಕೆ ಹೋಗುವಾಗ ಬಿಟ್ಟರೆ ನನಗೆ ಶಿಸ್ತು, ಅಲಂಕಾರಗಳ

ಆವಶ್ಯಕತೆ ತೋರುತ್ತಲೇ ಇರಲಿಲ್ಲ. ಆದರೆ ಬಿಂದುವು ನನ್ನನ್ನು ಒಂದು ಕಡೆ ಇರಗೊಡದೆ ನಿತ್ಯವೂ ಒಂದಿಲ್ಲೊಂದು ಬಗೆಯಾಗಿ ಸಿಂಗರಿಸುತ್ತಿದ್ದಳು. ಆ ಹುಡುಗಿ ನನ್ನ ಬಗ್ಗೆ ಒಂದು ಬಗೆಯಾಗಿ ಹುಚ್ಚು ಹಿಡಿದವಳಾಗಿ ಹೋದಳು.

ನಿಮ್ಮ ಮನೆಯ ಒಳ ವರಾಂಡದಲ್ಲಿ ಎಲ್ಲಿಯೂ ಒಂದು ಗೇಣಷ್ಟು ಸಹ ಬಿಡುವಾದ ನೆಲವಿಲ್ಲ. ಉತ್ತರ ದಿಕ್ಕಿನ ದೊಡ್ಡ ಗೋಡೆಯ ಮೈಗೆ ಸೇರಿದ ಮೋರಿಯ ಅಂಚಿನಲ್ಲಿ ಯಾವುದೋ ಕಂತ್ರಿ ಮಾವಿನ ಗಿಡವೊಂದು ಹುಟ್ಟಿಕೊಂಡಿದೆ. ಆ ಗಿಡಕ್ಕೆ ಹೊಸ ಚಿಗುರೆಲೆ ಬೆಳೆದು ಬಣ್ಣ ಬಣ್ಣವಾಗಿ ಮಿಂಚಲು ತೊಡಗಿದಾಗ ಭೂಮಿಯ ಮೇಲೆ ವಸಂತದ ಆಗಮನವಾಗಿದೆ ಎಂದುಕೊಂಡೆ. ನನ್ನ ಕೆಲಸಪಲಸಗಳ ಮಧ್ಯೆ ಸೇರಿಕೊಂಡ ಈ ಯಾರಿಗೂ ಬೇಡದ ಹುಡುಗಿಯ ಚಿತ್ತವು ಅದಾವ ದಿನ ಮೊದಲಿಂದ ಕೊನೆಯವರೆಗೂ ಬಣ್ಣಗಳಿಂದ ಮೆರುಗು ಪಡೆಯಿತೋ ಆ ದಿನ ನಾನರಿತೆ–ಹೃದಯದ ಲೋಕದಲ್ಲೂ ಒಂದು ಸುಗ್ಗಿಯ ತಂಗಾಳಿ ಬೀಸುವುದೆಂದು. ಅದು ಬರುವುದು ಯಾವುದೋ ದೂರದ ಸಗ್ಗದಿಂದ–ಗಲ್ಲಿಯ ಹೊಲಸು ಸಂದಿಯಿಂದ ಹಾದು ಬರುವುದಿಲ್ಲ.

ಬಿಂದುವಿನ ಪ್ರಿತಿಯ ದುಸ್ಸಹ ವೇಗವು ನನ್ನನ್ನು ತಬ್ಬಿಬ್ಬು ಮಾಡಿತ್ತು. ಒಂದೊಂದು ಸಲವಂತು ನನಗೆ ಅವಳ ಮೇಲೆ ವಿಪರೀತ ಕೋಪ ಬರುತ್ತಿತ್ತು. ಈ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ–ಅವಳ ಈ ಪ್ರೇಮದ ಮೂಲಕವಾಗಿಯೇ ನಾನು ನನ್ನ ಹೊಸದೊಂದು ಸ್ವರೂಪವನ್ನೇ ಕಾಣಬಲ್ಲೆನಾದೆ. ಅದನ್ನು ನಾನು ಬಾಳುವೆಯಲ್ಲಿ ಇದಕ್ಕೆ ಮೊದಲೆಂದೂ ಕಂಡಿರಲಿಲ್ಲ. ಅದು ಯಾವುದೆಂದರೆ ನನ್ನ ಮುಕ್ತಸ್ವರೂಪ.

ಈ ಕಡೆ ಬಿಂದುವಿನಂಥ ದುರ್ಬಲ ಬಾಲೆಯ ಬಗ್ಗೆ ನಾನು ತೋರುತ್ತಿದ್ದ ಆದರ, ವಾತ್ಸಲ್ಯ ನಿಮಗೆಲ್ಲಾ ಇದೆಲ್ಲಾ ಬೂಟಾಟಿಕೆ, ತೋರಿಕೆ ಅಥವಾ 'ಅತಿ'ಯೆಂದು ಅನ್ನಿಸಿರಬೇಕು. ಇದನ್ನು ತೋರಗೊಡುವ ನಿಮ್ಮ ಹಗರಣ, ಕಿರಿಕಿರಿಗೆ ಮಿತಿಯೇ ಇರಲಿಲ್ಲ. ಅಂದು ನನ್ನ ಕೋಣೆಯೊಳಗಿಂದ ತೋಳಬಂದಿಯೊಂದು ಕಳುವಾಯಿತು. ಆಗ ಆ ಕಳುವಿನಲ್ಲಿ ಬಿಂದುವಿನ ಕೈಯಿದ್ದಿರಲೇ ಬೇಕು ಎಂಬ ಸಂಶಯದ ಸುಳಿವನ್ನು ತೋರಿಸಲು ನಿಮಗೆ ನಾಚುಗೆಯಾಗಲಿಲ್ಲ. ಸ್ವದೇಶೀ ಚಳವಳಿಯ ಸಮಯದಲ್ಲಿ ಮನೆ ಮನೆಗಳಲ್ಲಿ ಪೊಲೀಸರು ಶೋಧನೆ ನಡೆಸಿದಾಗ ಕೂಡ ಇವಳೊಬ್ಬ ಪೊಲೀಸರ ವೇತನದಲ್ಲಿರುವ ಗೂಢಚಾರಳೆಂದು ಕೂಡ ಸುಲಭವಾಗಿ ಅನುಮಾನಪಟ್ಟುಬಿಟ್ಟಿರಿ. ಇದಕ್ಕೆ ನಿಮಗೆ ಯಾವ ಆಧಾರವೂ ಬೇಕಿಲ್ಲ, ಯಾವ ಪ್ರಮಾಣವೂ ಬೇಕಿಲ್ಲ. ಅವಳು ಬಿಂದುವಲ್ಲವೇ, ಅಷ್ಟೆ ಸಾಕು.

ನಿಮ್ಮ ಮನೆಯ ಒಕ್ಕಲಗಿತ್ತಿಯರು ಆ ಹುಡುಗಿಯ ಯಾವ ಕೆಲಸವನ್ನೂ ಮಾಡಲು ಹಿಂದೆಗೆಯುತ್ತಿದ್ದರು. ಅವರಲ್ಲಿ ಯಾರನ್ನಾದರೂ ಅವಳ ಕೆಲಸವನ್ನು

ಮಾಡೆಂದು ಹೇಳಿದರೆ ಆ ಹುಡುಗಿಯೇ ಅತ್ಯಂತ ಸಂಕೋಚಗೊಂಡು ಕಲ್ಲಿನಂತಾಗಿ ಹೋಗುತ್ತಿದ್ದಳು. ಈ ಕಾರಣಗಳೆಲ್ಲದರಿಂದಲೂ ಅವಳಿಗಾಗಿ ನನ್ನ ಖರ್ಚು ಹೆಚ್ಚಾಗಿಹೋಯಿತು. ನಾನು ಅವಳಿಗಾಗಿ ಬೇರೆ ದಾಸಿಯನ್ನೆ ಇಡಬೇಕಾಯಿತು. ಅದು ನಿಮಗೆಲ್ಲ ಇಷ್ಟವಾಗಲಿಲ್ಲ. ಬಿಂದುವಿಗೆ ನಾನು ಕೊಡುತ್ತಿದ್ದ ಉಡಿಗೆ ತೊಡಿಗೆಗಳನ್ನು ಕಂಡು ನೀವಂತೂ ರೇಗಿ ಕಿಡಿಯಾಗಿ ನನ್ನ ಕೈವೆಚ್ಚಕ್ಕೆಂದು ಕೊಡುತ್ತಿದ್ದ ಹಣವನ್ನು ನಿಲ್ಲಿಸಿಬಿಟ್ಟಿರಿ.

ಅದರ ಮರುದಿನದಿಂದ ನಾನೂ ಒಂದೂಕಾಲು ರೂಪಾಯಿ ಬೆಲೆ ಬಾಳುವ ಗಿರಣಿಯ ಒರಟು ಪಂಚೆಯನ್ನೇ ಸೀರೆಯಂತೆ ಉಡಲು ತೊಡಗಿದೆ. ಮತ್ತು ಮುಸುರೆ ತಿಕ್ಕುವ ಮತಿಯಮ್ಮ ನನ್ನ ಎಂಜಲು ತಟ್ಟೆಯನ್ನು ತೆಗೆದುಕೊಂಡು ಹೋಗಲು ಬಂದಾಗ ನಾನವಳನ್ನು ತಡೆದೆ. ನಾನೇ ಅದನ್ನು ಅಂಗಳದ ಕೊಳಾಯಿಯ ಬಳಿ ಕೊಂಡುಹೋಗಿ, ಮುಸುರೆಯಲ್ಲಿ ಉಳಿದ ಅನ್ನವನ್ನು ಕರುವಿಗೆ ತಿನ್ನಿಸಿ ಪಾತ್ರೆಗಳನ್ನು ತೊಳೆದಿದ್ದೇನೆ. ಒಂದು ದಿನ ಆ ದೃಶ್ಯ ಹಠಾತ್ತಾಗಿ ನಿಮ್ಮ ಕಣ್ಣಿಗೆ ಬಿದ್ದು ನಿಮಗೇನು ಹರುಷವಾದಂತೆನ್ನಿಸಲಿಲ್ಲ. ನನಗೆ ಸಂತೋಷವಾಗದಿದ್ದರೂ ನಡೆಯುವುದು. ಆದರೆ ನಿಮಗೆ ಸಂತೋಷವಾಗಗೊಡದಿರುವುದಂತೂ ಎಂದಿಗೂ ಕೂಡದು ಎಂಬ ಒಳ್ಳೆಯ ಬುದ್ಧಿ ಏಕೋ ಇದುವರೆಗೆ ನನಗೆ ತೋಚಿಲ್ಲ.

ಈ ಕಡೆ ನಿಮ್ಮ ಸಿಟ್ಟೂ ಏರುತ್ತ ಹೋದಂತೆಲ್ಲ ಬಿಂದುವಿನ ವಯಸ್ಸೂ ಹಾಗೇ ಬೆಳೆಯುತ್ತ ಹೋಯಿತು. ಆ ಸ್ವಾಭಾವಿಕವಾದ ನಡೆವಳಿಕೆಯಂತೂ ನಿಮ್ಮನ್ನು ಅಸ್ವಾಭಾವಿಕ ರೀತಿಯಲ್ಲಿ ತಬ್ಬಿಬ್ಬು ಮಾಡಿಬಿಟ್ಟಿತು. ಒಂದು ವಿಷಯವನ್ನು ನೆನೆದುಕೊಂಡರೆ ಈಗಲೂ ಅಚ್ಚರಿಯೆನಿಸುತ್ತದೆ. ನೀವೇಕೆ ಬಿಂದುವನ್ನು ಬಲಾತ್ಕಾರದಿಂದ ನಿಮ್ಮ ಮನೆಯಿಂದ ಹೊರಗೆ ದಬ್ಬಿಬಿಡಲಿಲ್ಲ? ಆದರೆ ನನಗೆ ಚೆನ್ನಾಗಿ ಗೊತ್ತು, ಒಳಗೊಳಗೇ ನೀವು ನನಗೆ ಹೆದರಿದ್ದಿರಿ. ವಿಧಾತನು ನನಗೆ ಸ್ವಲ್ಪ ಹೆಚ್ಚಾಗೇ ಬುದ್ಧಿಯನ್ನು ಕೊಟ್ಟಿದ್ದ. ಇದನ್ನು ನೀವು ಒಳಗೊಳಗೇ ಒಪ್ಪಿಕೊಳ್ಳದೆ ವಿಧಿಯಿರಲಿಲ್ಲ.

ಕಡೆಗೆ ಬಿಂದುವನ್ನು ನೀವು ನಿಮ್ಮ ಸ್ವಂತ ಬಲದಿಂದ ಹೊರಗೋಡಿಸಲು ಕೈಲಾಗದೆ ಪ್ರಜಾಪತಿ ಬ್ರಹ್ಮನ ಶರಣುಹೊಕ್ಕಿರಿ. ಬಿಂದುವಿಗೆ ಮದುವೆ ಮಾಡಲು ಅಸಾಧಾರಣ ಆಸಕ್ತಿವಹಿಸಿ ಅವಳಿಗೊಂದು ಗಂಡು ಹುಡುಕಿಕೊಂಡು ಬಂದಿರಿ. ಆಗ ನನ್ನ ಓರಗಿತ್ತಿ "ಸದ್ಯ, ಬದುಕಿದೆನಮ್ಮಾ, ನಮ್ಮ ದುರ್ಗಾಮಾತೆ ನಮ್ಮ ವಂಶವನ್ನ ಕಾಪಾಡಿದಳು," ಎಂದಳು.

ಗಂಡು ಹೇಗಿದ್ದನೋ ನನಗೆ ಗೊತ್ತಿಲ್ಲ. ಆದರೆ ನೀವುಗಳೆಲ್ಲ ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿದೆ–ಅವನೆಲ್ಲ ವಿಷಯಗಳಲ್ಲೂ ತಕ್ಕವನೆಂದು. ಆದರೆ

ಈ ಬಡಪಾಯಿ ಬಿಂದುವಂತೂ ನನ್ನ ಕಾಲು ಹಿಡಿದುಕೊಂಡು "ಅಕ್ಕ, ಇನ್ನು ನನಗೆ ಮದುವೆಯೊಂದು ಕೇಡೇಕೆ?" ಎಂದು ಅತ್ತಳು.

ನಾನವಳನ್ನು ಹತ್ತಿರ ಕೂಡಿಸಿಕೊಂಡು "ಬಿಂದೂ, ನೀನು ಹೆದರಬೇಡ. ನಾನು ಕೇಳಿದ ಹಾಗೆ ನಿನ್ನ ವರ ಚೆನ್ನಾಗಿದಾನಂತೆ" ಎಂದೆ. "ಚೆನ್ನಾಗಿದ್ದರೆ, ನನ್ನಲ್ಲೇನಿದೆ ಅಂತ ಮೆಚ್ಚುತ್ತಾನೆ ಹೇಳು" ಎಂದಳು.

ಗಂಡಿನ ಕಡೆಯವರು ಬಿಂದುವನ್ನು ನೋಡುವ ಮಾತೇ ಎತ್ತಲಿಲ್ಲ. ನನ್ನ ಓರಗಿತ್ತಿ ಅದರಿಂದ ನಿಶ್ಚಿಂತಳಾದಳು.

ಆದರೆ ಬಿಂದು ಹಗಲು ರಾತ್ರಿ ಅಳುವುದನ್ನ ಮಾತ್ರ ನಿಲ್ಲಿಸಲಿಲ್ಲ. ಅವಳಿಗೇಕೆ ಅಷ್ಟು ಸಂಕಟ ಎಂಬುದನ್ನ ನಾನು ಬಲ್ಲೆ. ಬಿಂದುವಿನ ಸಲುವಾಗಿ ನಾನು ನನ್ನ ಅತ್ತೆಯ ಮನೆಯವರೊಂದಿಗೆ ಬೇಕಾದಷ್ಟು ಹೋರಾಡಿದ್ದೇನೆ. ಆದರೆ ಅವಳಿಗೆ ಮದುವೆ ಬೇಡ, ನಿಂತುಹೋಗಲಿ ಎಂದು ಹೇಳುವ ಸಾಹಸ ನನ್ನಿಂದ ಆಗಲಿಲ್ಲ. ಯಾವ ಬೆಂಬಲದಿಂದ ನಾನು ಹೇಗೆ ಹೇಳಲಿ? ನಾನು ಇದ್ದಕ್ಕಿದ್ದ ಹಾಗೆ ಒಂದು ದಿನ ಕಣ್ಮರೆಯಾದರೆ ಅವಳ ಗತಿ?

ಮೊದಲೇ ಹುಡುಗಿ. ಅದರಲ್ಲೂ ಕರಿಯ ಹುಡುಗಿ. ಯಾರ ಮನೆಗೆ ಸೇರುತ್ತಾಳೋ? ಅಲ್ಲಿ ಅವಳ ಅವಸ್ಥೆ ಹೇಗಿರುತ್ತದೋ? ಆ ಮಾತನ್ನು ಜ್ಞಾಪಿಸಿಕೊಳ್ಳದಿದ್ದರೇ ಒಳ್ಳೆಯದು. ಜ್ಞಾಪಿಸಿಕೊಂಡರಂತೂ ಜೀವ ತಟಗುಟ್ಟುವುದು. ಬಿಂದು ಮತ್ತೆ ನನ್ನ ಬಳಿ ಬಂದು "ಅಕ್ಕ, ಇನ್ನು ಐದೇ ದಿನ ಮದುವೆಗೆ. ಅಷ್ಟರಲ್ಲಿ ನನಗೆ ಸಾವಾಗಲಾರದೆ?" ಎಂದಳು. ನಾನವಳನ್ನ ಗದರಿಬಿಟ್ಟೆ. ಆದರೆ ನನ್ನ ಅಂತರ್ಯಾಮಿಗೆ ಗೊತ್ತು. ಯಾವ ಸಹಜಭಾವದಿಂದಾದರೂ ಬಿಂದುವಿಗೆ ಸಾವಾಗುವ ಸಂಭವವಿದ್ದಲ್ಲಿ ನನಗೆಷ್ಟು ಹಾಯೆನ್ನಿಸುತ್ತಿತ್ತೋ!

ಮದುವೆಯ ಮೊದಲನೇ ದಿನ ಬಿಂದು ತನ್ನಕ್ಕನ ಬಳಿ ಹೋಗಿ "ಅಕ್ಕ, ನಾನು ನಿಮ್ಮ ದನದ ಕೊಟ್ಟಿಗೆಯ ಮೂಲೆಯೊಂದರಲ್ಲಿ ಹುದುಗಿಕೊಂಡಿರುತ್ತೇನೆ. ನೀವು ಹೇಳಿದ ಹಾಗೆ ಮಾಡಿಕೊಂಡಿರುತ್ತೇನೆ. ನಿನ್ನ ಕಾಲ ಮೇಲೆ ಬೀಳುತ್ತೇನೆ. ನನ್ನನ್ನ ಈ ರೀತಿ ಎಸೆದುಬಿಡಬೇಡಿ" ಎಂದು ಮೊರೆಯಿಟ್ಟಳು.

ಕೆಲವು ದಿನಗಳಿಂದಲೂ ಅವಳಕ್ಕನ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಆ ದಿನವೂ ಸುರಿಯಿತು. ಆದರೆ ಏನು ಮಾಡುವುದು. ಬರೇ ಹೃದಯವೊಂದೇ ಅಲ್ಲ ಇರುವುದು. ಶಾಸ್ತ್ರವಿದೆಯಲ್ಲ? ಆಗವಳು ಕಣ್ಣೊರಸಿಕೊಂಡು "ಬಿಂದೀ, ಗೊತ್ತೇ ನಿನಗೆ, ಪತಿಯೇ ಹೆಂಗಸಿಗೆ ಗತಿ, ಮುಕ್ತಿ, ಸಕಲವೂ. ಹಣೆಯಲ್ಲಿ ದುಃಖ ಬರೆದಿದ್ದರೆ ಏನುಮಾಡಿದರೂ ಅದನ್ನು ಅಳಿಸಲಾಗುವುದಿಲ್ಲ?" ಎಂದಳು.

ನಿಜವಾದ ವಿಷಯವೇನೆಂದರೆ, ಯಾವ ಕಡೆಯಲ್ಲೂ ಯಾವ ದಾರಿಯೂ ಇಲ್ಲ. ಬಿಂದು ಲಗ್ನವಾಗಲೇ ಬೇಕು. ಆಮೇಲೆ ಏನಾಗುವುದೋ ಆಗಿಹೋಗಲಿ.

ಮದುವೆಯು ನಮ್ಮ ಮನೆಯಲ್ಲಿ ಆದರೆ ಒಳ್ಳೆಯದು ಎಂದು ಇಷ್ಟಪಟ್ಟಿದ್ದೆ. ಆದರೆ ನೀವುಗಳೆಲ್ಲ 'ಅದು ಸಾಧ್ಯವಿಲ್ಲ, ಲಗ್ನ ಗಂಡಿನ ಮನೆಯಲ್ಲೇ ಆಗಬೇಕು. ಅದು ಅವರ ಮನೆತನದ ಪದ್ಧತಿ' ಎಂದು ಪಟ್ಟು ಹಿಡಿದು ಕೂತಿರಿ.

ಆಗ ನನಗರ್ಥವಾಯಿತು. ಬಿಂದುವಿನ ಮದುವೆಗೂ ನಿಮ್ಮಿಂದ ಒಂದು ಬಿಡಿಕಾಡು ಖರ್ಚಾದರೆ ನಿಮ್ಮ ಕುಲದೇವತೆಗೆಂದಿಗೂ ಅದು ಸಹನೆಯಾಗದು. ಅದಕ್ಕೇ ನಾನು ಸುಮ್ಮನಿರಬೇಕಾಗಿ ಬಂತು.

ಆದರೆ ಒಂದು ವಿಷಯವನ್ನು ನೀವಾರೂ ತಿಳಿದಿರಲಿಲ್ಲ. ಅಕ್ಕನಿಗೆ ಅದನ್ನ ತಿಳಿಸಬೇಕೆಂದುಕೊಂಡಿದ್ದೆ. ಆಗಲಿಲ್ಲ. ಏಕೆಂದರೆ ತಿಳಿದಿದ್ದರೆ ಅವಳು ಭಯದಿಂದ ಪ್ರಾಣಬಿಡುತ್ತಿದ್ದಳು–ಆ ಸಂಗತಿಯೇನೆಂದರೆ ನನ್ನ ಕೆಲವು ನಗಗಳಿಂದ ಗುಟ್ಟಾಗಿ ಬಿಂದುವನ್ನು ಸಿಂಗಾರಮಾಡಿದೆ. ಅದೊಂದು ಪಕ್ಷ ಬಿಂದುವಿನ ಅಕ್ಕನ ಕಣ್ಣಿಗೆ ಬಿದ್ದಿದ್ದರೂ ಬಿದ್ದಿರಬಹುದು. ಆದರೆ ಆಕೆ ಅದನ್ನು ನೋಡಿಯೂ ನೋಡದವಳ ಹಾಗೆ ಇದ್ದುಬಿಟ್ಟಳು. ದೇವರ ಮೇಲಿನಾಣೆ, ನೀವು ಅಕ್ಕನ ಮೇಲೆ ಸಿಟ್ಟಾಗಬಾರದು. ಅವಳ ತಪ್ಪೇನಿಲ್ಲ.

ಹೋಗುವ ಮೊದಲು ಬಿಂದು ನನ್ನನ್ನ ಗಟ್ಟಿಯಾಗಿ ಅಪ್ಪಿಕೊಂಡು "ಅಕ್ಕ, ನನ್ನನ್ನ ನೀವು ಪೂರ್ತಿಯಾಗಿ ಕೈಬಿಟ್ಟು ಬಿಟ್ಟರಿ ಹಾಗಾದರೆ?" ಎಂದು ಅತ್ತಳು.

ನಾನು "ಇಲ್ಲ ಬಿಂದಿ, ನಿನಗೆ ಯಾವ ಅವಸ್ಥೆ ಬಂದರೂ ಕಡೆಯವರೆಗೂ ನಾನು ನಿನ್ನನ್ನ ಕೈಬಿಡುವುದೇ ಇಲ್ಲ" ಎಂದು ಭರವಸೆ ಕೊಟ್ಟೆ.

ಮೂರು ದಿನಗಳು ಕಳೆದು ಹೋದುವು. ನಿಮ್ಮ ಜಮೀನುದಾರಿಯ ರೈತನೊಬ್ಬ ನಿಮಗೆ ತಿನ್ನುವ ಸಲುವಾಗಿ ಕೊಟ್ಟಿದ್ದ ಮೇಕೆಯೊಂದನ್ನು ನಾನು ನಿಮ್ಮಗಳ ಜಠರಾಗ್ನಿಯಿಂದ ತಪ್ಪಿಸಿ ನಮ್ಮ ಮೊದಲನೇ ಅಂತಸ್ತಿನಲ್ಲಿ ಕಲ್ಲಿದ್ದಲು ಇಡುವ ಸ್ಥಳದಲ್ಲಿ ಒಂದು ಕಡೆ ಕಟ್ಟಿಹಾಕಿ ಸುರಕ್ಷಿತವಾಗಿಟ್ಟಿದ್ದೆ. ಬೆಳಗ್ಗೆ ಎದ್ದು ನಾನು ಸ್ವತಃ ಅದಕ್ಕೆ ಕಾಳು ತಿನ್ನಿಸುತ್ತಿದ್ದೆ. ಒಂದೆರಡು ದಿನ ನಿಮ್ಮ ಆಳುಗಳ ಮೇಲೆ ಆ ಕೆಲಸದ ಪ್ರಯುಕ್ತ ನಿರ್ಭರಳಾಗಿ ನೋಡಿದ್ದೆ. ಅದಕ್ಕೆ ಕಾಳು ತಿನ್ನಿಸುವುದಕ್ಕೆ ಬದಲು ಅವರೇ ಅದನ್ನು ತಿನ್ನಲು ಉತ್ಸುಕರಾಗಿದ್ದರು.

ಆ ದಿನ ಬೆಳಗ್ಗೆ ಎದ್ದು ಆ ಕಡೆ ಹೋದರೆ ಅಲ್ಲಿ ಬಿಂದು ಒಂದು ಮೂಲೆಯಲ್ಲಿ ಮಿಸುಗಾಡದೆ ಕಲ್ಲಿನಂತೆ ಕೂತಿದ್ದಾಳೆ. ನನ್ನನ್ನ ಕಂಡೊಡನೆ ನನ್ನ ಕಾಲನ್ನ ಬಲವಾಗಿ ಹಿಡಿದುಕೊಂಡು ನೆಲದ ಮೇಲೆ ಹೊರಳಾಡುತ್ತಾ ಅಳತೊಡಗಿದಳು. ಬಿಂದುವಿನ ಗಂಡ ಹುಚ್ಚನಂತೆ!

"ಇದು ಸತ್ಯವೇನೆ, ಬಿಂದಿ?"

"ಇಷ್ಟು ದೊಡ್ಡ ಸುಳ್ಳು ನಿಮ್ಮ ಮುಂದೆ ಹೇಳುತ್ತೇನೇ ಅಕ್ಕಾ? ಅವರು ಹುಚ್ಚರು. ಮಾವನಿಗೆ ಈ ಮದುವೆ ಇಷ್ಟವೇ ಇರಲಿಲ್ಲ, ನಮ್ಮತ್ತೆಯನ್ನು ಕಂಡರೆ

ಯಮನನ್ನ ನೋಡಿದಂತೆ ಹೆದರುತ್ತಾರೆ. ಅವರು ಮದುವೆಗೆ ಮೊದಲೇ ಕಾಶಿಗೆ ಹೊರಟುಹೋಗಿದ್ದರು. ಅತ್ತೆಯೇ ಹಠಹಿಡಿದು ಈ ಮದುವೆ ಮಾಡಿಸಿದ್ದು."

ನಾನಿದನ್ನ ಕೇಳಿ ಆ ಕಲ್ಲಿದ್ದಲಿನ ರಾಶಿಯ ಮೇಲೆ ಕೂತುಬಿಟ್ಟೆ. ಹೆಂಗಸಿನ ಬಗ್ಗೆ ಹೆಂಗಸಿಗೇ ದಯೆಯಿಲ್ಲ. "ಅವಳಂತೂ ಬರೇ ಹೆಣ್ಣುಪಿಂಡ. ಗಂಡ ಹುಚ್ಚನಾದರೇನು ಅವನು ಗಂಡಸಲ್ಲವೇ" ಎಂದು ಹೇಳುವವಳು.

ಬಿಂದುವಿನ ಗಂಡನನ್ನ ಕಂಡರೆ ಅವನನ್ನು ತತ್‌ಕ್ಷಣ ಹುಚ್ಚನೆಂದು ಹೇಳಲಾಗುವುದಿಲ್ಲ. ಆದರೆ ಒಂದೊಂದು ದಿನ ಅವನು ಹೇಗೆ ಹುಚ್ಚನಾಗಿ ಆಡುವನೆಂದರೆ ಅವನನ್ನು ಕೂಡಲೇ ಕೋಣೆಯಲ್ಲಿ ಕೂಡಿಹಾಕಿ ಚಿಲಕಕ್ಕೆ ಬೀಗ ಬಡಿದಿರಬೇಕಾಗುತ್ತದೆ. ಮದುವೆಯ ದಿನ ರಾತ್ರಿ ಅವನು ಚೆನ್ನಾಗೇ ಇದ್ದ. ಆದರೆ ರಾತ್ರಿ ಜಾಗರಣೆಮಾಡಿದುದು, ಇತ್ಯಾದಿ ಒತ್ತಡಗಳಿಂದ ಮರುದಿನ ಬೆಳಗ್ಗೆ ಅವನ ತಲೆ ಪೂರ್ತಿಯಾಗಿ ಕೆಟ್ಟುಹೋಯಿತು. ಬಿಂದು ಮಧ್ಯಾಹ್ನ ಹಿತ್ತಾಳೆಯ ತಟ್ಟೆಯ ಮುಂದೆ ಊಟಕ್ಕೆ ಕೂತಿದ್ದಳು. ಹಠಾತ್ತಾಗಿ ಅವಳ ಗಂಡ ಅಲ್ಲಿಗೆ ಬಂದು ಅನ್ನದ ಸಮೇತ ಆ ತಟ್ಟೆಯನ್ನು ಎಳೆದು ಅಂಗಳದೊಳಗೆ ಎಸೆದುಬಿಟ್ಟ. ಅವನ ಮನಸ್ಸಿಗೆ ಹೇಗೋ ಇದ್ದಕ್ಕಿದ್ದಂತೆ ಅನ್ನಿಸಿಬಿಟ್ಟಿದೆ. ತನ್ನ ಹೊಸ ಹೆಂಡತಿ ಬಿಂದು ಸ್ವಯಂರಾಣೀ ರಾಸಮಣೀ ಎಂದು. ಪರಿಚಾರಕನು ಬಂಗಾರದ ತಟ್ಟೆ ಕದ್ದುಬಿಟ್ಟು ರಾಣಿಗೆ ಹಿತ್ತಾಳೆ ತಟ್ಟೆ ಹಾಕಿಬಿಟ್ಟಿದಾನಲ್ಲ ಎಂದು ಅವನ ಕೋಪ. ಬಿಂದುವಂತೂ ಭಯದಿಂದ ಸಾಯುವಂತಾದಳು. ಮೂರನೇ ದಿನ ರಾತ್ರಿ ಅತ್ತೆಯು ಅವಳನ್ನು ಗಂಡನ ಕೋಣೆಯೊಳಗೆ ಮಲಗೆಂದು ಹೇಳಿದಾಗ ಅವಳ ಜೀವ ಒಣಗಿಹೋಯಿತು. ಅವಳ ಅತ್ತೆ ಕೇವಲ ಪ್ರಚಂಡಳು. ಅವಳಿಗೆ ರೇಗಿದರೆ ಮೈ ಮೇಲೆ ಜ್ಞಾನವಿರುವುದಿಲ್ಲ. ಅವಳೂ ಹುಚ್ಚಿ. ಆದರೆ ಪೂರ್ತಿಯಾಗಲ್ಲವೆಂದೇ ಇನ್ನೂ ಭಯಾನಕ. ಬಿಂದುವು ಮಲಗುವ ಮನೆಯೊಳಗೆ ಹೋಗಲೇಬೇಕಾಯಿತು. ಗಂಡನು ಆ ರಾತ್ರಿ ತಣ್ಣಗೇ ಇದ್ದ. ಆದರೆ ಭಯದಿಂದ ಬಿಂದುವಿನ ಮೈಯೆಲ್ಲಾ ಕಟ್ಟಿಗೆಯಾಗಿ ಹೋಗಿತ್ತು. ಗಂಡನು ಗಾಢನಿದ್ದೆಯಲ್ಲಿ ಮುಳುಗಿದ್ದಾಗ ಅರ್ಧ ರಾತ್ರಿಯಲ್ಲಿ ಅವಳು ಎಷ್ಟು ಕೌಶಲದಿಂದ ಹೊರಗೆ ಓಡಿ ಬಂದುಬಿಟ್ಟಳೆಂಬುದರ ವಿಸ್ತಾರವಾದ ವಿವರ ಇಲ್ಲಿ ಆವಶ್ಯಕವಿಲ್ಲ.

ಹೇಸುಗೆಯಿಂದ, ರೋಷದಿಂದ ನನ್ನ ಮೈಯೆಲ್ಲ ಉರಿಯತೊಡಗಿತು. ನಾನಂದೆ "ಈ ಬಗೆಯ ಮೋಸದ ಮದುವೆ ಮದುವೆಯೇ ಅಲ್ಲ. ಬಿಂದೀ, ನೀನು ಮೊದಲು ಹೇಗಿದ್ದೆಯೋ ಹಾಗೇ ನನ್ನ ಜತೆಯಲ್ಲಿದ್ದುಬಿಡು. ನಿನ್ನನ್ನ ಯಾರು ಎಳೆದುಕೊಂಡು ಹೋಗುತ್ತಾರೋ ನೋಡುತ್ತೇನೆ."

ನೀವುಗಳೆಲ್ಲ ಸುದ್ದಿಯೆಲ್ಲ ಕೇಳಿ "ಬಿಂದು ಸುಳ್ಳು ಹೇಳುತ್ತಾಳೆ" ಎಂದಿರಿ. ನಾನು ಅವಳೆಂದಿಗೂ ಸುಳ್ಳು ಹೇಳುವುದಿಲ್ಲ ಎಂದೆ. ನಿನಗೆ ಹೇಗೆ ಗೊತ್ತು

ಅಂದಿರಿ. ನನಗೆ ಚೆನ್ನಾಗಿ ಗೊತ್ತು ಅಂದೆ. ನೀವುಗಳು ಹೆದರಿಸಲಿಕ್ಕೆ ಬಂದಿರಿ. ಬಿಂದುವಿನ ಅತ್ತೆಯ ಮನೆಯವರು ಪೊಲೀಸ್ ಕೇಸ್ ದಾಖಲೆ ಮಾಡಿದರೆ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳಬೇಕಾಗುವುದು ಎಂದಿರಿ. ನಾನು ಹಾಗಾದರೆ ಮೋಸ ಮಾಡಿ ಹುಚ್ಚು ವರನ ಸಂಗಡ ಅವಳನ್ನ ಬಲವಂತವಾಗಿ ಮದುವೆ ಮಾಡಿಸಿದಾರೆ ಅನ್ನುವ ವಿಷಯ ಕೋರ್ಟಿನಲ್ಲಿ ಕೇಳುವುದಿಲ್ಲವೇ ಎಂದೆ. ನೀವು ಹಾಗಾದರೆ ಇದಕ್ಕೋಸ್ಕರ ಕೋರ್ಟು ಕಛೇರಿಗೆ ಹೋಗಬೇಕಾದ ಯಾವ ಅಗತ್ಯ ನಮಗೆ ಅಂದಿರಿ. ನನ್ನ ನಗಗಳನ್ನ ಮಾರಿ ಕೇಸಿಗೆ ಏನೇನು ಮಾಡಬೇಕೋ ಅದನ್ನ ಮಾಡುತ್ತೇನೆ ಅಂದೆ.

ಆಗ ನೀವು ಮೂರುಹೊತ್ತೂ ವಕೀಲರ ಮನೆಗೆ ಓಡಾಡುತ್ತೀಯಾ ಅಂದಿರಿ.

ನಾನು ಹಣೆಯ ಮೇಲೆ ಕೈಹೊಡೆದುಕೊಳ್ಳಬಲ್ಲೆ. ಅದಕ್ಕೆ ಮೇಲೆ ಏನು ಮಾಡಲಿ?

ಆ ಕಡೆ ಬಿಂದುವಿನ ಮಾವನ ಮನೆಯ ಕಡೆಯಿಂದ ಅವಳ ಭಾವ ಬಂದು ಹೊರಗಡೆ ಭಯಂಕರ ಗಲಭೆ ಎಬ್ಬಿಸಿಬಿಟ್ಟಿದ್ದಾನೆ. ಅವನು ಪೊಲೀಸು ಠಾಣೆಗೆ ಸುದ್ದಿ ಕೊಡುತ್ತೇನೆಂದು ಹೆದರಿಸುತ್ತಿದ್ದಾನೆ.

ನನ್ನಲ್ಲಿ ಏನು ಜೋರಿತ್ತೋ ನನಗೆ ಗೊತ್ತಿಲ್ಲ. ಆದರೆ ಕಟುಕನ ಕೈಯಿಂದ ದನ ಪ್ರಾಣ ಬಚಾಯಿಸಿಕೊಳ್ಳಲು ಓಡಿ ಬಂದು ನನ್ನ ಆಶ್ರಯ ಪಡೆದಿರುವಾಗ ಅದನ್ನ ನಾನು ಪೊಲೀಸರ ಭಯದಿಂದ ಮತ್ತೆ ಆ ಕಟುಕನ ಕೈಯಲ್ಲೇ ವಾಪಸು ಒಪ್ಪಿಸಬೇಕಾಗುತ್ತೆಂಬುದನ್ನು ಏನುಮಾಡಿದರೂ ನನ್ನ ಮನಸ್ಸು ಒಪ್ಪಿಕೊಳ್ಳಲಾಗಲಿಲ್ಲ.

ನಾನೂ ಹಠದಿಂದ "ಹಾಗೇನು, ಕೊಡಲಿ ಹೋಗಿ ಪೊಲೀಸರಿಗೆ ಸುದ್ದಿ!" ಎಂದು ಕೂಗಿ ಕೂತುಕೊಂಡೆ.

ಹೀಗೆಂದುಬಿಟ್ಟು ಮನದಲ್ಲಿ ಸ್ಥಿರಮಾಡಿಕೊಂಡೆ. ಬಿಂದುವನ್ನು ಈ ವೇಳೆ ನನ್ನ ಮಲಗುವ ಮನೆಯಲ್ಲಿ ತಂದು ಇಟ್ಟುಕೊಂಡು ಒಳಗಡೆ ಚಿಲಕ, ಬೀಗ ಹಾಕಿ ಕೂತಿರುತ್ತೇನೆ, ಯಾರು ಬರುತ್ತಾರೋ ನೋಡೋಣ, ಎಂದು. ಹುಡುಕಿನೋಡಿದರೆ ಬಿಂದು ಇಲ್ಲ ಎಲ್ಲೂ. ನಿಮ್ಮೆಲ್ಲರೊಂದಿಗೆ ನನ್ನ ವಾದ, ಪ್ರತಿವಾದಗಳಾಗುತ್ತಿದ್ದಾಗ ಬಿಂದು ತಾನಾಗಿ ಹೊರಗಡೆ ಬಂದು ತನ್ನ ಭಾವನ ಕೈಯಲ್ಲಿ ಸಿಕ್ಕಿಬಿದ್ದಿದ್ದಳು. ಈ ಮನೆಯಲ್ಲಿ ಅವಳೇನಾದರೂ ಇದ್ದರೆ ಆಗ ಅವಳಿಂದ ನನಗೇನಾದರೂ ಭೀಕರ ವಿಪತ್ತು ಬರಬಹುದೆಂದು ಅವಳು ಹೆದರಿ ಹೀಗೆ ಮಾಡಿದ್ದಳು.

ಮಧ್ಯದಲ್ಲಿ ಓಡಿ ಬಂದು ಬಿಂದು ತನ್ನ ದುಃಖವನ್ನು ಇಮ್ಮಡಿಯಾಗಿ ಮಾಡಿಕೊಂಡಿದ್ದಳು. ಅವಳ ಅತ್ತೆಯ ವಾದವೇನೆಂದರೆ ತನ್ನ ಮಗ ಅವಳನ್ನೇನು ತಿಂದುಬಿಡುತ್ತಿರಲಿಲ್ಲ. ಹತಭಾಗ್ಯರಾದ ಗಂಡಂದಿರ ಉದಾಹರಣೆಗಳೇನು ಪ್ರಪಂಚದಲ್ಲಿ ಅಷ್ಟು ಅಪೂರ್ವವಲ್ಲ. ಅಂಥವರೊಡನೆ ಹೋಲಿಸಿದರೆ ತನ್ನ ಮಗ ಚಿನ್ನದ ಚಂದಿರ!

ನನ್ನ ಓರಗಿತ್ತಿ ಅದನ್ನ ಕೇಳಿ "ಅವಳ ಸುಟ್ಟ ಹಣೇಬರೆಹ. ಅದನ್ನ ಕಟ್ಟಿಕೊಂಡು ಅತ್ತರೆ ಏನು ಬರುತ್ತದೆ. ಹುಚ್ಚನಾಗಲಿ, ಹೋತನಾಗಲಿ, ಅವನು ಪತಿಯಂತೂ ಹೌದೋ ಅಲ್ಲವೋ?" ಎಂದುಬಿಟ್ಟಳು.

ಕುಷ್ಠರೋಗಿಯನ್ನು ಹೆಗಲ ಮೇಲೆ ಎತ್ತಿಕೊಂಡು ಅವನ ಹೆಂಡತಿಯಾದವಳು ವೇಶ್ಯೆಯ ಮನೆಗೆ ತಾನಾಗಿ ಹೋಗಿ ತಲಪಿಸಿ ಬಂದಂಥ ಸತೀಮಣಿಯರ ದೃಷ್ಟಾಂತಗಳು ನಿಮ್ಮಗಳ ಮನದಲ್ಲಿ ಬಂದು ನಿಲ್ಲುತ್ತಿದ್ದುವು. ಜಗತ್ತಿನಲ್ಲಿ ಅತ್ಯಂತ ಅಧಮಾಧಮವಾದ ಈ ಹೀನತೆ, ಈ ಕಾಪುರುಷತೆಯ ಕಥೆಯನ್ನು ಪ್ರಚಾರಗೊಳಿಸುತ್ತ ಬರಲು ನಿಮ್ಮ ಪುರುಷ ಜಾತಿಯ ಮನಸ್ಸಿನಲ್ಲಿ ಇಂದಿನವರೆಗೂ ಒಂದಿಷ್ಟು ಕೂಡ ಸಂಕೋಚವೆನಿಸಿಲ್ಲ. ಆ ಕಾರಣದಿಂದಲೇ ಮನುಷ್ಯ ಜನ್ಮ ತಾಳಿದರೂ ಬಿಂದುವಿನ ನಡೆವಳಿಕೆಯು ನಿಮ್ಮನ್ನು ಸಿಟ್ಟಿಗೇಳುವಂತೆ ಮಾಡಿದೆ. ನಿಮ್ಮಗಳ ತಲೆ ತಗ್ಗದಾಯಿತು. ಆದರೆ ಬಿಂದುವಿಗಾಗಿ ನನ್ನ ಎದೆ ಒಡೆದುಹೋಯಿತು. ಆದರೆ ನಿಮ್ಮ ಸಲುವಾಗಿ ಮಾತ್ರ ನನ್ನ ಲಜ್ಜೆಗೆ ಪಾರವೇ ಇಲ್ಲದಾಯಿತು. ನಾನಂತೂ ಹಳ್ಳಿಕೊಂಪೆಯವಳು, ಅದರ ಮೇಲೆ ನಿಮ್ಮ ಮನೆಗೆ ಬಂದು ಬಿದ್ದಿದ್ದೇನೆ. ದೇವರು ಅದಾವ ಸುಯೋಗ ನೋಡಿ ನನ್ನಲ್ಲಿ ಇಂಥ ಬುದ್ಧಿ ಇಟ್ಟನೋ, ನಿಮ್ಮ ಈ ಧರ್ಮದ ಕಥೆಗಳನ್ನೆಲ್ಲ ಕೇಳಿ ಏನುಮಾಡಿದರೂ ಸಹಿಸಲಾರದೆ ಹೋದೆ.

ನನಗೆ ನಿಶ್ಚಯವಾಗಿ ಗೊತ್ತು. ಸಾಯುವಂತಾದರೂ ಬಿಂದು ಇನ್ನು ನಮ್ಮ ಮನೆಗೆ ಬರುವುದಿಲ್ಲವೆಂದು. ಆದರೆ ನಾನು ಅವಳಿಗೆ ಮದುವೆಯ ಹಿಂದಿನ ದಿನ ಅವಳನ್ನು ಏನು ಮಾಡಿದರೂ ಕೈಬಿಡುವುದಿಲ್ಲವೆಂದು ಭರವಸೆ ಕೊಟ್ಟಿದ್ದೆ.

ನನ್ನ ತಮ್ಮ ಶರತ್ ಕಲಿಕತ್ತೆಯ ಕಾಲೇಜಿನಲ್ಲಿ ಓದುತ್ತಿದ್ದ. ನಿಮಗೆಲ್ಲ ಗೊತ್ತು– ಅವನು ಎಷ್ಟು ಬಗೆಯ ವಾಲಂಟಿಯರ್ ಕೆಲಸಗಳನ್ನು ವಹಿಸಿಕೊಳ್ಳುವುದು. ಪ್ಲೇಗು ಹರಡಿದ್ದ ಗಲ್ಲಿಗಳಲ್ಲಿ ಇಲಿ ಕೊಲ್ಲುವುದು, ದಾಮೋದರ ನದಿಯ ಪ್ರವಾಹದ ಹಾವಳಿಯಲ್ಲಿ ಸಿಕ್ಕಿದವರನ್ನ ಕಾಪಾಡಲು ಹೋಗುವುದು–ಇಂಥವುಗಳಲ್ಲೇ ಅವನಿಗೆ ಎಡೆಬಿಡದ ಉತ್ಸಾಹ. ಈ ಕಾರಣದಿಂದಲೇ ಅವನು ಎಫ್.ಎ. ಪರೀಕ್ಷೆಯಲ್ಲಿ ಒಂದೆರಡು ಬಾರಿ ಫೇಲಾಗಿದ್ದರೂ ಎಳ್ಳಷ್ಟೂ ಸಹ ಉತ್ಸಾಹ ಕುಂದಲಿಲ್ಲ. ಅವನನ್ನು ಕರೆದು ನಾನು "ಬಿಂದುವಿನ ಸುದ್ದಿಯನ್ನು ನಾನು ತಿಳಿದುಕೊಳ್ಳಬೇಕು. ನೀನೇನಾದರೂ ಏರ್ಪಾಡು ಮಾಡಬೇಕು, ಶರತ್. ಬಿಂದು ನನಗೆ ಕಾಗದ ಬರೆಯುವಷ್ಟು ಸಾಹಸಕ್ಕೆ ಹೋಗುವುದಿಲ್ಲ. ಒಂದು ಪಕ್ಷ ಬರೆದರೂ ಅದು ನನಗೆ ಮುಟ್ಟಲಾರದು" ಎಂದೆ.

ಇಂತಹ ಕೆಲಸಕ್ಕಿಂತ ಅವನಿಗೆ ಒಂದು ಪಕ್ಷ ಬಿಂದುವನ್ನು ಕಳುವುಮಾಡಿ ತರಲು ಅಥವಾ ಅವಳ ಹುಚ್ಚು ಗಂಡನ ತಲೆ ಒಡೆದು ಬರಲು ಹೇಳಿದ್ದರೆ ಅವನು ಹೆಚ್ಚು ಉತ್ಸಾಹ ತೋರುತ್ತಿದ್ದ.

ನನ್ನ ತಮ್ಮನೊಡನೆ ನಾನು ಈ ಬಗೆಯಾದ ಆಲೋಚನೆಯಲ್ಲಿರಲು ನೀವು ಕೋಣೆಗೆ ಬಂದು "ಮತ್ತೆ ಏನು ಹೊಸ ಉಪದ್ರವಕ್ಕೆ ಕೈಹಚ್ಚಿದ್ದೀಯೆ?" ಎಂದಿರಿ.

ಅದಕ್ಕೆ ನಾನೆಂದೆ "ಬೇರೆ ಏನು? ಮೊದಲಿಂದ ಯಾವುದನ್ನು ಎಬ್ಬಿಸಿದ್ದೇನೋ ಅದೆ ಉಪದ್ರವವೇ. ನಾನು ನಿಮ್ಮ ಮನೆಯೊಳಗೆ ಕಾಲಿಟ್ಟು ಬರಲಿಲ್ಲವೇ? ಅದೇ ಇಷ್ಟಕ್ಕೂ ಮೂಲ. ಆದರೆ, ಅದೂ ನಿಮ್ಮದೇ ಕೀರ್ತಿ."

"ಮತ್ತೆ ಬಿಂದುವನ್ನ ಕರೆತಂದು ಎಲ್ಲಾದರೂ ಅಡಗಿಸಿಟ್ಟಿದ್ದೀಯಾ?" ಎಂದಿರಿ.

"ಬಿಂದು ಬಂದಿದ್ದರೆ ಖಂಡಿತವಾಗಿ ಅಡಗಿಸಿಡುತ್ತಿದ್ದೆ. ಆದರೆ ಅವಳು ಬರುವುದಿಲ್ಲ. ನೀವೇನು ಹೆದರಬೇಡಿ" ಎಂದೆ.

ನನ್ನ ತಮ್ಮನು ನನ್ನೊಡನೆ ಇದ್ದದ್ದನ್ನು ಕಂಡು ನಿಮ್ಮ ಸಂಶಯ ಇನ್ನೂ ಬಲವಾಯಿತು. ನನಗೆ ಗೊತ್ತು. ನಮ್ಮ ಶರತ್ ನಿಮ್ಮ ಮನೆಗೆ ಬಂದು ಹೋಗುವುದು ನಿಮಗಾರಿಗೂ ಸರಿಹೋಗುತ್ತಿರಲಿಲ್ಲ. ನಿಮಗೇನೋ ಭಯ–ಅವನ ಮೇಲೆ ಪೊಲೀಸರ ಕಣ್ಣುಂಟು. ಅವನು ಯಾವುದಾದರು ರಾಜಕೀಯ ಚಳವಳಿಯಲ್ಲಿ ಕೈಹಾಕಿ ನಿಮ್ಮನ್ನೂ ಅದರಲ್ಲಿ ಸಿಕ್ಕಿ ಹಾಕಿಕೊಳ್ಳುವಂತೆಲ್ಲಿ ಮಾಡಿಬಿಡುವನೋ ಎಂಬ ಹೆದರಿಕೆ. ಆದ್ದರಿಂದ ನಾನು ಅವನಿಗೆ ಭಾಯ್ ಫೋಂಟಾ ದಿನ (ಸೋದರರ ಹಬ್ಬ) ಬಂಧು ತಿಲಕವನ್ನು ಬೇರೆಯವರ ಜೊತೆಯಲ್ಲಿ ಕಳಿಸುತ್ತಿದ್ದೆ. ಅವನನ್ನ ಎಂದೂ ಮನೆಗೆ ಬರಮಾಡಿಕೊಳ್ಳುತ್ತಿದ್ದಿಲ್ಲ.

ನೀವು ಬಿಂದು ಮತ್ತೆ ಮನೆ ಬಿಟ್ಟು ಓಡಿಹೋಗಿದ್ದಾಳೆಂದು ಹೇಳಿದಿರಿ. ಅದಕ್ಕಾಗೇ ಅವಳ ಭಾವ ಅವಳನ್ನರಸಿಕೊಂಡು ನಿಮ್ಮ ಮನೆಗೆ ಬಂದಿದ್ದನೆಂದಿರಿ. ಕೇಳಿ ನನ್ನ ಎದೆಯೊಳಗೆ ಶೂಲವಿರಿದಂತಾಯಿತು. ಆ ಮಂದಭಾಗ್ಯಳ ಸಂಕಟ ಎಷ್ಟು ಅಸಹನೀಯ ಎಂದು ಚಿಂತಿಸಿ ದುಃಖಿಸಿದೆ. ಆದರೆ ಏನು ಮಾಡುವುದಕ್ಕೂ ದಾರಿಯಿಲ್ಲ. ಶರತ್ ಸುದ್ದಿ ತಿಳಿದುಕೊಂಡು ಬರಲು ಓಡಿದ. ಸಂಜೆಯ ವೇಳೆ ವಾಪಸು ಬಂದು ನನಗೆ "ಬಿಂದು ತನ್ನ ಚಿಕ್ಕಪ್ಪನ ಮನೆಗೆ ಓಡಿಹೋಗಿದ್ದಳು. ಆದರೆ ಅವಳ ದಾಯಾದರು ದೊಡ್ಡ ಗಲಾಟೆಯೆಬ್ಬಿಸಿ ಕೂಡಲೇ ಅವಳನ್ನು ಗಂಡನ ಮನೆಗೆ ಮತ್ತೆ ಕಳುಹಿಸಿಬಿಟ್ಟರು. ಇದರಿಂದ ಅವರಿಗಾದ ಖರ್ಚು, ವೆಚ್ಚ, ಗಾಡಿ ಬಾಡಿಗೆಯ ಸಮೇತ ದಂಡ ಯಾರಿಂದ ವಸೂಲು ಮಾಡುವುದು ಎಂಬ ಚಿಂತೆ ಅವರನ್ನಿನ್ನೂ ಬಿಟ್ಟಿಲ್ಲ" ಎಂದು ವರದಿಕೊಟ್ಟ.

ನಿಮ್ಮ ಚಿಕ್ಕ ತಾಯಿ ಶ್ರೀ ಕ್ಷೇತ್ರಕ್ಕೆ ತೀರ್ಥಯಾತ್ರೆಗೆ ಹೊರಡಲಿದ್ದಾರೆಂದು ಗೊತ್ತಾಯಿತು. ಆಕೆ ಮಾರ್ಗದಲ್ಲಿ ನಿಮ್ಮ ಮನೆಗೆ ಬಂದು ಇಳಿದುಕೊಂಡಿದ್ದರು. ನಾನೂ ಅವರ ಸಂಗಡ ಹೋಗುತ್ತೇನೆಂದೆ. ನನ್ನ ಮನಸ್ಸು ಹಠಾತ್ತಾಗಿ ಹೀಗೆ ಧರ್ಮದಲ್ಲಿ ಆಸಕ್ತಿವಹಿಸಿರುವುದನ್ನು ಕಂಡು ನಿಮಗೆ ಅದೆಷ್ಟು ಸಂತೋಷವಾಗಿ

ಹೋಯಿತೋ...ನೀವು ನನಗೆಷ್ಟು ಮಾತ್ರವೂ ಅಡ್ಡಿಮಾಡಲಿಲ್ಲ. ಬಹುಶಃ ಈ ಕಾರಣವೂ ಇತ್ತು. ಏನೆಂದರೆ ಈಗ ನಾನು ಕಲಿಕತ್ತೆಯಲ್ಲೇ ಇದ್ದರೆ ಆಗ ಮತ್ತೆ ಯಾವ ದಿನ ಬಿಂದು ಬಗ್ಗೆ ಇನ್ನಾವ ಉಪದ್ರವಕ್ಕೆ ಕೈ ಹಾಕುವೆನೋ ಎಂಬ ಶಂಕೆಯೂ ಇತ್ತು. ನನ್ನಿಂದ ನಿಮಗೆ ಅದೆಷ್ಟು ಉಪದ್ರವವೋ, ಪಾಪ!

ಬುಧವಾರ ನಾನು ಹೊರಡುವ ದಿನ. ಭಾನುವಾರ ಎಲ್ಲಾ ವ್ಯವಸ್ಥೆಯಾಯಿತು. ನಾನು ಶರತ್‌ನನ್ನ ಕರೆದು "ನೋಡು, ಶರತ್, ಹೇಗೆ ಮಾಡಿದರೂ ಸರಿ, ಬಿಂದುವನ್ನು ಬುಧವಾರ ಪುರಿ (ಜಗನ್ನಾಥ)ಗೆ ಹೋಗುವ ಗಾಡಿಯಲ್ಲಿ ಹತ್ತಿಸಿಬಿಡಬೇಕಾಗುತ್ತದೆ." ಎಂದು ಕೇಳಿಕೊಂಡೆ.

ಶರತ್ ಉತ್ಸಾಹಗೊಂಡು "ಹೆದರಬೇಡಕ್ಕ, ನಾನವಳನ್ನ ಗಾಡಿಯಲ್ಲಿ ಹತ್ತಿಸಿಕೊಂಡು ಪುರಿಯವರೆಗೂ ಬರುತ್ತೇನೆ. ಈ ನೆಪದಲ್ಲಿ ಜಗನ್ನಾಥದ ಗುಡಿಯನ್ನು ನೋಡಿದ ಹಾಗೂ ಆಗುತ್ತದೆ" ಎಂದ.

ಆ ದಿನ ಸಂಜೆಯೇ ಶರತ್ ಮತ್ತೆ ಬಂದ. ಅವನ ಮುಖ ನೋಡಿ ನನ್ನ ಎದೆ ಹೊಡೆದುಕೊಂಡಿತು. "ಏನೋ ಶರತ್, ಅನುಕೂಲವಾಗಲಿಲ್ಲವೇ, ಏನು ಕಥೆ?" ಎಂದು ಆತುರಾತುರವಾಗಿ ಕೇಳಿದೆ.

"ಇಲ್ಲ" ಎಂದ.

"ಅವಳನ್ನ ಒಪ್ಪಿಸಲಿಕ್ಕಾಗಲಿಲ್ಲವೆ?"

"ಇನ್ನದರ ಆವಶ್ಯಕತೆಯೇ ಇಲ್ಲ. ನಿನ್ನೆ ರಾತ್ರಿ ಅವಳು ಸೀರೆಗೆ ಬೆಂಕಿ ಹೊತ್ತಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಳು. ನಾನು ಸಲಿಗೆ ಮಾಡಿಕೊಂಡಿದ್ದ ಅವಳ ಗಂಡನ ಅಣ್ಣನ ಮಗನ ಮೂಲಕ ಸಮಾಚಾರ ತಿಳಿದುಕೊಂಡೆ. ನಿನ್ನ ಹೆಸರಿನಲ್ಲಿ ಒಂದು ಕಾಗದ ಬಿಟ್ಟುಹೋಗಿದ್ದಳಂತೆ. ಅದನ್ನ ಅವರು ಹರಿದು ಬಿಸಾಟರಂತೆ."

ಹೋಗಲಿ, ಹೀಗಾದರೂ ತಪ್ಪಿಸಿಕೊಂಡಳು, ಹತಭಾಗ್ಯಳು–ಎಂದು ನಿಟ್ಟುಸಿರು ಬಿಟ್ಟೆ.

ದೇಶದಲ್ಲೆಲ್ಲಾ ಗುಲ್ಲೋ ಗುಲ್ಲಾಯಿತು. ಹೆಣ್ಣುಮಕ್ಕಳೀ ನಡುವೆ ಸೀರೆಗೆ ಬೆಂಕಿ ಹೊತ್ತಿಸಿಕೊಂಡು ಸಾಯುವುದೊಂದು ಫ್ಯಾಷನ್ ಆಗಿಹೋಗಿದೆ ಎಂದು ಜನರು ಆಡಿಕೊಂಡರು.

ನೀವೆಲ್ಲ ಇದೆಲ್ಲ ಒಂದು ನಾಟಕ ಅಂದುಬಿಟ್ಟರಿ. ಅಲ್ಲವೆ ಮತ್ತೆ ? ಆದರೆ ನಾಟಕದ ತಮಾಷೆ ಕೇವಲ ಬಂಗಾಳಿ ಹೆಣ್ಣು ಮಕ್ಕಳ ಸೀರೆಗೆ ಬೆಂಕಿ ಬಿದ್ದೇಕೆ ಆಗಬೇಕು–ಬಂಗಾಳಿ ವೀರ ಪುರುಷರ ಗಂಡುಗಚ್ಚೆಯ ಮೇಲೆ ಅದೇ ನಾಟಕವಾಗಬಾರದೇಕೆ? ಇದನ್ನೂ ಯೋಚಿಸಿನೋಡುವುದು ಉಚಿತವಲ್ಲವೇ?

ಬಿಂದಿಯದು ಎಂತಹ ಸುಟ್ಟ ಹಣೆಯಬರೆಹ! ಬದುಕಿದ್ದಷ್ಟು ದಿನವೂ ರೂಪದಲ್ಲಾಗಲಿ, ಗುಣದಲ್ಲಾಗಲಿ ಯಾವ ಯಶಸ್ಸನ್ನೂ ಪಡೆಯಲಿಲ್ಲ.

ಸಾಯುವ ಸಮಯದಲ್ಲೂ ಚಿಂತಿಸಿ ವಿಚಾರಮಾಡಿ ಯಾವುದಾದರೂ ಹೊಸ ನಮೂನೆಯ ಸಾವನ್ನು ಪಡೆಯಬಾರದಾಗಿತ್ತೇ? ಆಗ ದೇಶದ ಗಂಡಸರೆಲ್ಲ ಸಂತುಷ್ಟರಾಗಿ ಕೈಚಪ್ಪಾಳೆ ಹೊಡೆಯುತ್ತಿದ್ದರು. ಅದು ಕೂಡ ಅವಳ ಭಾಗ್ಯದಲ್ಲಿ ಬರೆದಿರಲಿಲ್ಲ. ಸತ್ತೂ ಅವಳು ಜನರನ್ನು ರೇಗಿಸಿದ್ದಳು.

ಅವಳಕ್ಕ ತನ್ನ ಕೋಣೆಯ ಮೂಲೆಯೊಂದರಲ್ಲಿ ಒಬ್ಬಳೇ ಕೂತು ಅತ್ತು ಕಣ್ಣೀರು ಸುರಿಸಿದಳು. ಆದರೆ ಆ ಅಳುವಿನ ಮಧ್ಯೆಯೂ ಸ್ವಲ್ಪ ಸಮಾಧಾನವಿತ್ತು. ಏನಾದರೇನು, ಅಂತೂ ಬಿಡುಗಡೆ ಹೊಂದಿದಳು. ಎಲ್ಲಾ ತಪ್ಪಿಸಿಕೊಂಡು ಹೋದಳು. ಬದುಕಿದ್ದರೆ ಇನ್ನೂ ಏನೇನು ಅನುಭವಿಸಬೇಕಾಗಿತ್ತೋ?

ನಾನೀಗ ತೀರ್ಥಯಾತ್ರೆಗೆ ಬಂದಿದ್ದೇನೆ. ಬಿಂದು ತಿರುಗಿ ಬರುವ ಆವಶ್ಯಕತೆಯಿಲ್ಲ ಇನ್ನು, ಆದರೆ ನನ್ನ ಆವಶ್ಯಕತೆಯಿತ್ತು.

ದುಃಖವೆಂದರೆ ಏನೆಂದು ಜನ ತಿಳಿದುಕೊಂಡಿದ್ದಾರೋ ನಿಮ್ಮ ಕುಟುಂಬದಲ್ಲಿ ಅದು ನನಗಿರಲಿಲ್ಲ. ನಿಮ್ಮ ಮನೆಯಲ್ಲಿ ಊಟ, ಉಡಿಗೆಗಳಿಗೇನು ಕೊರತೆಯಿಲ್ಲ. ನಿಮ್ಮಣ್ಣನ ಚಾರಿತ್ರ್ಯ ಏನೇ ಇರಲಿ, ನಿಮ್ಮ ಚಾರಿತ್ರ್ಯದಲ್ಲಿ ಅಂಥ ದೋಷವೇನೂ ಇಲ್ಲ...ನಾನು ಆ ವಿಷಯದಲ್ಲಿ ವಿಧಾತನನ್ನ ದೂರುವಂಥದೇನೂ ಇಲ್ಲ. ಒಂದು ವೇಳೆ ನಿಮ್ಮ ಚಾರಿತ್ರ್ಯದಲ್ಲಿ ನಿಮ್ಮಣ್ಣನಂಥ ದೋಷವಿದ್ದಿದ್ದರೂ ಒಟ್ಟಿನಲ್ಲಿ ನನ್ನ ದಿನ ಯಾಪನ ಹೇಗೋ ಕಳೆಯುತ್ತಿತ್ತು. ಮತ್ತು ಪತಿವ್ರತೆಯಾದ ನನ್ನ ಓರಗಿತ್ತಿಯಂತೆ ನಾನೂ ಪತಿದೇವನ ಬಗ್ಗೆ ದೋಷಾರೋಪ ಮಾಡದೆ ದೇವದೇವನ ಮೇಲ್ಲೇ ದೋಷ ಹೊರಿಸುತ್ತಿದ್ದೆ. ಆದ್ದರಿಂದ ನಿಮ್ಮಗಳ ಮೇಲೆ ನಾನು ಯಾವ ದೂರನ್ನೂ ಹೊರಿಸಲು ಹೋಗುತ್ತಿಲ್ಲ. ನನ್ನ ಈ ಕಾಗದ ಅದಕ್ಕೋಸ್ಕರವಲ್ಲ.

ಆದರೆ ನಾನಿನ್ನು ನಿಮ್ಮ ಆ ಇಪ್ಪತ್ತೇಳನೆಯ ನಂಬರಿನ ಮಾಖನ್ ಬಿಡಾಲ್ ಗಲ್ಲಿಗೆ ಹಿಂದಿರುಗುವುದಿಲ್ಲ. ನಾನು ಬಿಂದುವನ್ನು ನೋಡಿದ್ದೇನೆ. ಅವಳು ಹೆಂಗಸು ನಿಜ, ಆದರೂ ದೇವರು ಅವಳನ್ನು ಕೈಬಿಡಲಿಲ್ಲ. ಅವಳ ಮೇಲೆ ನಿಮ್ಮದೆಷ್ಟೇ ಜೋರಿದ್ದರೂ ಆ ಜೋರಿಗೂ ಕೊನೆಯೆಂಬುದಿದೆ. ಅವಳು ತನ್ನ ದುರದೃಷ್ಟ ಹೆಣ್ಣು ಜನ್ಮಕ್ಕಿಂತ ದೊಡ್ಡವಳು. ನೀವೆಷ್ಟೇ ನಿಮ್ಮ ಇಚ್ಛೆಯಂತೆ ನಿಮ್ಮ ನಿಯಮಕ್ಕೆ ಅನುಸಾರವಾಗಿ ಅವಳ ಹೀನ ಬಾಳುವೆಯನ್ನು ಶಾಶ್ವತವಾಗಿ ನಿಮ್ಮ ಕಾಲಡಿಯಲ್ಲಿ ಹಾಕಿ ತುಳಿದಿಟ್ಟುಕೊಂಡಿರಲು ಸಿದ್ಧರಿದ್ದರೂ ನಿಮ್ಮ ಕಾಲು ಅಷ್ಟು ಉದ್ದವಾಗಿಲ್ಲವಲ್ಲ. ಮೃತ್ಯು ನಿಮಗಿಂತಲೂ ದೊಡ್ಡದಾದ್ದು. ಆ ಮೃತ್ಯುವಿನ ಮಧ್ಯೆ ಅವಳು ಮಹಾವಸ್ತು!

ಅಲ್ಲಿ ಬಿಂದು ಕೇವಲ ಬಂಗಾಳಿ ಮನೆಯ ಹೆಣ್ಣು ಮಗಳಲ್ಲ. ಕೇವಲ ದಾಯಾದರ ತಂಗಿಯಲ್ಲ. ಕೇವಲ ಒಬ್ಬ ಗುರುತಿಲ್ಲದ ಹುಚ್ಚುಗಂಡನ ಮೋಸಹೋದ ಹೆಂಡತಿಯಲ್ಲ. ಅಲ್ಲಿ ಅವಳು ಅನಂತದಲ್ಲಿ ಒಂದಾಗಿ ಹೋಗಿದ್ದಾಳೆ.

ಆ ಸಾವಿನ ವೇಣುನಾದ ಈ ಬಾಲಿಕೆಯ ಒಡೆದ ಎದೆಯ ಒಳಗಡೆಯಿಂದ ನನ್ನ ಬಾಳುವೆಯ ಯಮುನಾ ತೀರಕ್ಕೆ ಬಂದು ದನಿಗೈದಾಗ ಮೊದಮೊದಲಲ್ಲಿ ನನ್ನ ಎದೆಯಲ್ಲಿ ಈಟಿ ಇರಿದಂತಾಯಿತು. ವಿಧಾತನಿಗೆ ನಾನು ಪ್ರಶ್ನೆಮಾಡಿದೆ– ಜಗತ್ತಿನ ನಡುವೆ ಯಾವುದು ಎಲ್ಲಕ್ಕಿಂತ ತುಚ್ಛವು? ಅದೇ ಎಲ್ಲಕ್ಕಿಂತ ಕಠಿಣವೇಕೆ ಎಂದು. ಆ ಗಲ್ಲಿಯ ಮಧ್ಯೆ ನಾಲ್ಕೂ ಕಡೆಯಿಂದ ಸುತ್ತುವರಿದ ಗೋಡೆಗಳ ನಡುವೆ ಎದ್ದ ನಿರಾನಂದವಾದ ಅತಿ ಸಾಮಾನ್ಯ ನೀರಿನ ಗುಳ್ಳೆಯೇ ಇಷ್ಟು ಭಯಂಕರ ತಡೆಯೇಕಾಗಬೇಕು?

ಹೇ ವಿಧಾತನೇ, ಈ ನಿನ್ನ ವಿಶ್ವಸೃಷ್ಟಿಯು ತನ್ನ ಆರು ಋತುಗಳ ಅಮೃತ ಕಲಶವನ್ನು ಕೈಯಲ್ಲಿ ಹಿಡಿದು ಹೇಗೆ ಕೂಗಿ ಕೂಗಿ ಕರೆದರೂ ನಾನೇಕೆ ಈ ಅಂತಃಪುರದ ಸೆರೆಮನೆಯನ್ನು ಒಂದು ನಿಮಿಷವಾದರೂ ಸಹ ದಾಟಿ ಬರಲಾಗಲಿಲ್ಲ? ನಿನ್ನ ಇಂಥ ಸುಂದರ ಸೃಷ್ಟಿಯಲ್ಲಿ ಕೂಡ ನನ್ನ ಇಂಥ ಬಾಳುವೆಯನ್ನೇಕೆ ಈ ತುಚ್ಛ ಇಟ್ಟಿಗೆ, ಮರಗಳ ಮರೆಯಲ್ಲಿ ಹೀಗಿಟ್ಟುಕೊಂಡು ಸ್ವಲ್ಪ ಸ್ವಲ್ಪವಾಗಿ ಸವೆದು ಸಾಯಬೇಕು? ಎಷ್ಟು ತುಚ್ಛ, ನನ್ನ ಈ ದಿನ ದಿನದ ಬಾಳುವೆಯ ಯಾತ್ರೆ? ಎಷ್ಟು ತುಚ್ಛ ಇದರ ಸಮಸ್ತ ಕಟ್ಟುನಿಟ್ಟಾದ ನಿಯಮಗಳು, ಕಟ್ಟುನಿಟ್ಟಾದ ಅಭ್ಯಾಸಗಳು, ಕಟ್ಟುನಿಟ್ಟಾದ ಮಾತು, ಕಟ್ಟುನಿಟ್ಟಾದ ಪೆಟ್ಟುಗಳು, ಬೈಗಳು ಕೂಡ? ಆದರೆ ಕಟ್ಟ ಕಡೆಯಲ್ಲಿ ಆ ದೀನತೆಯ ನಾಗಪಾಶ ಬಂಧನಕ್ಕೇ ಆಗತ್ತೆ ಜಯ–ಮತ್ತು ಸೋಲಾಗುವುದು, ನಿನ್ನ ಸ್ವಂತ ಸೃಷ್ಟಿಯಾದ ಈ ಆನಂದ ಲೋಕಕ್ಕೆ!

ಆದರೆ ಸಾವಿನ ವೇಣುಗಾನ ದನಿಗೈಯ ಹತ್ತಿತು. ಎಲ್ಲಿ ನಿನ್ನ ಆ ಸರ್ಕಾರದ ಮೇಸ್ತ್ರಿ ನಿರ್ಮಿಸಿದ ಕಠಿಣವಾದ ಪೌಳಿ? ಎಲ್ಲಿ ನಿನ್ನ ಕಟ್ಟಳೆ ಕಾನೂನುಗಳಿಂದ ರಚಿತವಾದ ಸದಾ ಸುತ್ತುವರಿದಿದ್ದ ಮುಳ್ಳುಬೇಲಿ? ಯಾವ ದುಃಖದಲ್ಲಿ ತಾನೇ, ಯಾವ ಅಪಮಾನದಲ್ಲಿ ತಾನೇ ಮನುಷ್ಯನನ್ನು ಸರ್ವದಾ ಬಂದಿಯಾಗಿ ಇಡಬಲ್ಲೆ? ನೋಡಿಲ್ಲಿ, ಸಾವಿನ ಕೈಯಲ್ಲಿ ಜಯ ಪತಾಕೆಯು ಹಾರಾಡುತ್ತಿದೆ. ಎಲೈ, ಎರಡನೇ ಸೊಸೆಯೇ, ಭಯವಿಲ್ಲ ನಿನಗೆ. ನಿನ್ನ ಎರಡನೆಯ ಸೊಸೆತನದ ಮೇಲು ಹೊದಿಕೆ ಕಳಚಿ ಬೀಳಲು ಒಂದು ನಿಮಿಷ ಕೂಡ ಬೇಕಾಗಿಲ್ಲ.

ನಿಮ್ಮ ಆ ಗಲ್ಲಿಗೆ ನಾನಿನ್ನು ಹೆದರುವುದಿಲ್ಲ. ನನ್ನ ಎದುರಿನಲ್ಲಿ ಇಂದು ನೀಲಿಯ ಕಡಲಿದೆ, ನನ್ನ ನೆತ್ತಿಯ ಮೇಲೆ ಆಷಾಢದ ಮೋಡದ ರಾಶಿ!

ನಿಮ್ಮ ಅಭ್ಯಾಸದ ಮಬ್ಬಿನಲ್ಲಿ ನನ್ನನ್ನು ಅಡಗಿಸಿಟ್ಟಿದ್ದಿರಿ. ಕ್ಷಣಕಾಲ ಮಾತ್ರ ಬಿಂದುವು ಬಂದು ಆ ಮಬ್ಬಿನ ಹೊದಿಕೆಯ ಹರಕಿನಿಂದ ನನ್ನನ್ನು ಕಂಡುಕೊಂಡಿದ್ದಳು.

ಆ ಹುಡುಗಿಯೇ ತನ್ನ ಕೈಯಲ್ಲಾದ ಸಾವಿನ ಮೂಲಕ ನನ್ನ ಹೊದಿಕೆಯನ್ನು ಪೂರ್ತಿಯಾಗಿ ಹರಿದು ಹಾಕಿ ಹೋದಳು. ಇಂದು ಹೊರಗೆ ಬಂದು ನೋಡುತ್ತೇನೆ. ನನ್ನ ಅಂತಸ್ತಿನ ಗೌರವವನ್ನು ಕಾಪಾಡಿಡಲು ಎಲ್ಲೂ ಜಾಗವಿಲ್ಲ. ನನ್ನ ಈ ಅಸಡ್ಡೆ ಮಾಡಲ್ಪಟ್ಟ ರೂಪವು ಯಾರ ಕಣ್ಣಿಗೆ ಚೆನ್ನೆನಿಸುವುದೋ ಅವನೇ ಬಿಡುಬಿಚ್ಚಾದ ಇಡೀ ಆಕಾಶದಿಂದ ನನ್ನನ್ನ ನಿಟ್ಟಿಸುತ್ತಿದ್ದಾನೆ. ಈ ಬಾರಿ ಸತ್ತುಹೋಗಿದ್ದಾಳೆ ನಿಮ್ಮ ಎರಡನೆಯ ಸೊಸೆ.

ನೀವು ಅಂದುಕೊಳ್ಳಬಹುದು–ನಾನು ಸಾಯಲು ಹೊರಟಿರುವೆನೆಂದು— ಭಯಪಡಬೇಡಿ. ಈ ಬಗೆಯ ಹಳೆಯ ಕಾಲ ಪರಿಹಾಸವನ್ನು ನಿಮ್ಮ ಮುಂದೆ ಮಾಡೆನು. ಮೀರಾಬಾಯಿಯೂ ಕೂಡ ನನ್ನಂತೆಯೇ ಹೆಂಗಸಾಗಿದ್ದಳು. ಅವಳ ಬೇಡಿ, ಬಂಧನಗಳೂ ಕಡಿಮೆ ಕಠಿಣವಾಗಿರಲಿಲ್ಲ. ಅವಳು ಸ್ವೇಚ್ಛೆಯಾಗಿ ಬದುಕಲು ಸಾಯಬೇಕಾಗಿ ಬರಲಿಲ್ಲ. ಮೀರಾಬಾಯಿಯು ತನ್ನ ಹಾಡಿನಲ್ಲಿ ಹೇಳಿದ್ದಳು– "ಬಿಡಲಿ ತಂದೆ, ಬಿಡಲಿ ತಾಯಿ, ಬಿಡಲಿ ಯಾರೆಲ್ಲ ಇರಲಿ, ಮೀರೆಯಂತು, ಪ್ರಭು, ನಿನ್ನನೆ ಅಂಟಿಕೊಂಡಿಹಳು, ಏನೇ ಇರಲಿ, ಏನೇ ಬರಲಿ."

ಹೀಗೆ ಅಂಟಿಕೊಂಡಿರುವುದೇ ಅಲ್ಲವೇ ನಿಜವಾಗಿ ಬದುಕಿರುವುದು!

ನಾನೂ ಬದುಕುವೆನು–ಬದುಕಿದೆ. ಇಂತಿ ನಿಮ್ಮ ಚರಣತಲಾಶ್ರಯಾಚ್ಛನ್ನ ಮೃಣಾಲ.

೧೦. ಸೋದರ ತಿಲಕ
(ಭಾಯಿ ಫೋಂಟಾ)

ಶ್ರಾವಣಮಾಸ ಇಂದೇಕೋ ಒಂದೇ ರಾತ್ರಿಯಲ್ಲಿ ಪೂರ್ತಿಯಾಗಿ ದಿವಾಳಿಯಾಗಿ ಹೋಗಿರುವಂತಾಗಿದೆ. ಇಡೀ ಆಕಾಶದಲ್ಲಿ ಎಲ್ಲೂ ಒಂದು ಹರಕು ಮೋಡದ ತುಣುಕೂ ಕಾಣಬರುವುದಿಲ್ಲ.

ಆಶ್ಚರ್ಯ, ನನ್ನ ಪ್ರಾತಃಕಾಲವಿಂದೇಕೆ ಈ ರೀತಿಯಾಗಿ ಕಳೆಯುತ್ತಿದೆ? ನನ್ನ ಮನೆಯ ಮುಂದಿನ ಹೂದೋಟದ ಬೇಲಿಯಂಚಿನ ಪಾದರೀ ಗಿಡದ ಎಲೆಗಳು ಅದೆಷ್ಟು ಚೆಲುವಾಗಿ ಬೆಳಗ್ಗೆಯ ಎಳೆ ಬೆಳಕಿನಲ್ಲಿ ಜಗಜಗಿಸುತ್ತಿವೆ...ನನ್ನ ನೋಟ ಅದರ ಮೇಲೆ ನಟ್ಟಿದೆ. ಸರ್ವನಾಶದ ನಡುಕಡಲಲ್ಲಿ ಬಂದು ಸೇರಿದ್ದೇನೆ ನಾನು...ಇದರ ಸಂಭವವು ದೂರವಾಗಿದ್ದಾಗ ನಾನಿದರ ಕಲ್ಪನೆ ಮಾಡಿಕೊಂಡು ಎಷ್ಟು ಚಳಿ ರಾತ್ರಿಗಳಲ್ಲೂ ಬೆವತಿದ್ದೇನೆ, ಎಷ್ಟು ಬೇಸಗೆಯ ಸೆಕೆಯ ದಿನಗಳಲ್ಲೂ ಅಂಗೈ, ಅಂಗಾಲುಗಳು ಹಿಮವಾಗಿ ಮೈಯೆಲ್ಲ ಥರಥರ ನಡುಗಿದ್ದೇನೆ! ಆದರೆ ಇಂದು ಎಲ್ಲ ವಿಧವಾದ ಭಯ, ಭಾವನೆಗಳಿಂದ ಎಷ್ಟರಮಟ್ಟಿಗೆ ಬಿಡುಗಡೆ ಹೊಂದಿದ್ದೇನೆಂದರೆ, ಅಗೋ, ಆ ದೂರದ ಎಕ್ಕದ ಗಿಡದ ಎಲೆಯ ಮೇಲೊಂದು ಹಲ್ಲಿ ಕೂತು ಬೇಟೆಗಾಗಿ ಎದುರುನೋಡುತ್ತಿರುವುದರ ಕಡೆ ಕೂಡ ನನ್ನ ಗಮನ ಹೋಗುತ್ತದೆ.

ಎಲ್ಲವನ್ನೂ ಕಳೆದುಕೊಂಡು ಬೀದಿಗೆ ಬಂದಿರುವುದು ನನಗೆ ಅಷ್ಟು ದೊಡ್ಡ ಸಂಕಟವಾಗಿ ತೋಚಲಿಲ್ಲ. ಆದರೆ ನಮ್ಮ ಮನೆತನದ ಸತ್ಯಸಂಧತೆಯ ಖ್ಯಾತಿ, ಮೂರು ತಲೆಮಾರುಗಳಿಂದ ಬೆಳೆಸಿಕೊಂಡು ಬಂದಿದ್ದುದು ಈಗ ನನ್ನ ಈ ಹಾಳು ಬಾಳುವೆಯ ಧಕ್ಕೆಯಿಂದ ಚೂರು ಚೂರಾಗಿ ಒಡೆದುಹೋಯಿತಲ್ಲ ಎಂಬ ಲಜ್ಜೆಯಿಂದ ನನಗೆ ಹಗಲು ರಾತ್ರಿ ಮನಶ್ಶಾಂತಿ ಇಲ್ಲದೆ ಹೋಗಿತ್ತು. ಒಮ್ಮೊಮ್ಮೆ ಆತ್ಮಹತ್ಯೆಯ ಯೋಚನೆಯೂ ಬಂದಿತ್ತು.

ಆದರೆ ಈಗ ಪರದೆ ಕಳಚಿ ಬಿದ್ದಿದೆ. ಕಾಗದ ಪತ್ರಗಳ ಗುಹೆ, ಗಹ್ವರಗಳಿಂದ ಕಳಂಕವು ಕರಿ ಕ್ರಿಮಿಗಳ ಹಿಂಡಿನಂತೆ ತೆವಳಿಕೊಂಡು ಈಚೆಗೆ ಬಂದು ಕೋರ್ಟಿನಿಂದ ವೃತ್ತ ಪತ್ರಿಕೆಗಳ ಪುಟಗಳ ಮೇಲೆಲ್ಲಾ ಹರಡಿ ಬಿದ್ದ ಮೇಲೆ, ಆಗ ನನ್ನ ಹೃದಯದ ಮೇಲಿಂದ ದೊಡ್ಡ ಹೊರೆ ಇಳಿಸಲ್ಪಟ್ಟಂತಾಯಿತು. ಪಿತೃ ವಂಶದ ಒಳ್ಳೆಯ ಹೆಸರನ್ನು

ತಲೆಯ ಮೇಲೆ ಹೇರಿಕೊಂಡು ಓಡಾಡಬೇಕಾಗಿಲ್ಲ ಇನ್ನು ಮೇಲೆ. ಎಲ್ಲರಿಗೂ ಗೊತ್ತಾಗಿಹೋಗಿದೆ–ನಾನೊಬ್ಬ ಜೂಜುಕೋರ. ಬದುಕಿದೆ.

ವಕೀಲರು ವಕೀಲರೊಂದಿಗೆ ಕಚ್ಚಾಡಿಕೊಂಡು ಎಲ್ಲ ಸಂಗತಿಗಳನ್ನೂ ಹೊರಗೆಳೆಯುತ್ತಾರೆ–ಎಳೆದುಕೊಳ್ಳಲಿ. ಆದರೆ ಎಲ್ಲಕ್ಕಿಂತಲೂ ದೊಡ್ಡದಾದ ಕಳಂಕ ಮಾತ್ರ ಹೊರಗೆ ಬರುವ ಸಂಭವವಿಲ್ಲ. ಕಾರಣ, ಸ್ವಯಂ ಧರ್ಮವನ್ನು ಬಿಟ್ಟರೆ ಬೇರಾವ ಫಿರ್ಯಾದಿಯೂ ಇರುವುದಿಲ್ಲ. ಆದ್ದರಿಂದಲೇ ಅದನ್ನ ನಾನೇ ಹೊರಗೆಳೆದು ಲೋಕದ ಮುಂದೆ ಇಡೋಣವೆಂದು ಲೇಖನಿ ಹಿಡಿದಿದ್ದೇನೆ.

ನನ್ನ ಅಜ್ಜನಾದ ಉದ್ಧವದತ್ತನು ವಿಪತ್ತಿನ ಸಮಯದಲ್ಲಿ ಸ್ವಂತ ಸಂಪತ್ತನ್ನ ವ್ಯಯಮಾಡಿ ತನ್ನ ಪ್ರಭುವಂಶವನ್ನ ಕಾಪಾಡಿದ್ದ. ಆ ದಿನಗಳಿಂದ ನಮ್ಮ ಮನೆತನದ ಬಡತನವೇ ಬೇರೆಯವರ ಸಿರಿತನಕ್ಕಿಂತ ಹೆಮ್ಮೆಯಿಂದ ತಲೆಯೆತ್ತಿಕೊಂಡು ತಿರುಗುವಂತೆ ಮಾಡಿತ್ತು. ನಮ್ಮ ತಂದೆ ಸನಾತನದತ್ತ ಡಿರೋಜಿಯಾನ ಶಿಷ್ಯ ಪರಂಪರೆಯವರು. ಮದ್ಯದ ಬಗ್ಗೆ ಅವರಿಗೆಷ್ಟುಮಟ್ಟಿಗೆ ಗೀಳಿತ್ತೋ ಅದರ ಇಮ್ಮಡಿಯಷ್ಟು ಗೀಳು ಸತ್ಯದ ಬಗ್ಗೆ. ಅವರೊಮ್ಮೆ ನಮ್ಮಮ್ಮ ನಮಗೆ ನಾಪಿತನ ಕಥೆಯನ್ನು ಹೇಳಿದಳೆಂದು ಕೇಳಿ ಮರುದಿನದಿಂದ ಸಂಜೆಯಾದ ಮೇಲೆ ನಮ್ಮನ್ನೆಲ್ಲ ಮನೆಯೊಳಗಡೆ ಬರಲು ಪೂರ್ತಿಯಾಗಿ ನಿಷೇಧ ಮಾಡಿಬಿಟ್ಟಿದ್ದರು. ಹೊರಗಡೆಯ ಓದುವ ಕೋಣೆಯಲ್ಲೇ ಮಲಗುವಂತೆ ಮಾಡಿದರು. ಕಟ್ಟುಕಥೆ ಮಕ್ಕಳಿಗೆ ಒಳ್ಳೆಯದಲ್ಲವೆಂದು ಅವರ ಮತ. ಹೊರಗಡೆ ಓದುವ ಕೋಣೆಯಲ್ಲಿ ಗೋಡೆಗೆ ತಗುಲಿಹಾಕಿದ್ದ ಭೂಪಟಗಳು ಬರೇ ಕಟುವಾದ ಸತ್ಯವನ್ನೇ ಹೇಳುತ್ತಿದ್ದುವು,— ಬಟ್ಟ ಬಯಲಿನ ಕಥೆ, ಏಳುಸಮುದ್ರ, ಹದಿಮೂರು ನದಿಗಳ ಯಕ್ಷಿಣೀ ಕಥೆಗಳನ್ನು ಹೇಳುತ್ತಿರಲಿಲ್ಲ. ಸತ್ಯಸಂಧತೆಯ ಬಗ್ಗೆಯೂ ಅವರ ಕಟ್ಟುನಿಟ್ಟು ಪ್ರಬಲವಾಗಿತ್ತು. ನಮಗೆ ಆ ವಿಷಯದಲ್ಲಿ ಎಳ್ಳಷ್ಟೂ ತಪ್ಪುವುದಕ್ಕಾಸ್ಪದವಿರಲಿಲ್ಲ.

ಬೀದಿಯ ಮಾರಾಟಗಾರನೊಮ್ಮೆ ಯಾವುದೋ ಸಾಮಾನು ಮಾರಿದ್ದ. ಅದನ್ನು ಕಟ್ಟಿದ್ದ ಪೊಟ್ಟಣದ ದಾರವೊಂದರಿಂದ ನಮ್ಮಣ್ಣ ಏನೋ ಆಟವಾಡುತ್ತಿದ್ದ. ಅಪ್ಪ ಅದನ್ನ ನೋಡಿದೊಡನೆ ಕೆಂಗಣ್ಣು ಮಾಡಿಕೊಂಡು "ತತ್‌ಕ್ಷಣ ಹೋಗಿ ಕೊಟ್ಟು ಬಾ ಅವನಿಗೆ!" ಎಂದು ಗದರಿದೊಡನೆ ನಾನು ಆ ಮಾರಾಟಗಾರನನ್ನ ಅರಸಿಕೊಂಡು ಬೀದಿಯಲ್ಲಿ ಓಡಬೇಕಾಯಿತು.

ನಾವೆಲ್ಲ ಸಾಧುತ್ವದ ಬಂದೀಖಾನೆಯಲ್ಲಿ ಸತ್ಯಸಂಧತೆಯ ಬೇಡಿಗಳನ್ನು ತೊಟ್ಟುಕೊಂಡು ಮನುಷ್ಯರಾಗಿದ್ದೆವು.

ಮನುಷ್ಯರೆಂದುಬಿಟ್ಟರೆ ಸಾಲದು. ನಮ್ಮನ್ನು ಬಿಟ್ಟು ಬೇರೆಲ್ಲರೂ ಮನುಷ್ಯರು. ನಾವು ಮಾತ್ರ ಆ ಮನುಷ್ಯರಿಗೆಲ್ಲ ಮಾದರಿಗಳು. ನಮ್ಮ ಆಟಪಾಟಗಳಲ್ಲಿ ಕೂಡ

ಕಠಿಣವಾದ ಕಟ್ಟುನಿಟ್ಟು, ಬೋಧನೆ, ನಗು, ತಮಾಷೆ, ನಿಷೇಧ. ಮಾತು ನೀರಸ. ವಾಕ್ಯ ಸ್ವಲ್ಪ. ಹಾಸ್ಯ ಸೊನ್ನೆ. ವ್ಯವಹಾರವಂತೂ ಅತ್ಯಂತ ಅಪ್ಪಟ. ಇವುಗಳಲ್ಲಿ ನಮಗೆಷ್ಟೇ ಹುಡುಗಾಟಿಕೆಯ ಆನಂದ ನಷ್ಟವಾಗಿದ್ದರೂ ಬೇರೆ ಜನರ ಪ್ರಶಂಸೆಗಳಿಂದ ಆ ಲೋಪ ಮುಚ್ಚಿಹೋಗುತ್ತಿತ್ತು. ನಮ್ಮ ಮಾಸ್ತರಿಂದ ಮೊದಲುಗೊಂಡು ದಿನಸಿ ಅಂಗಡಿಯವನವರೆಗೂ ನಾವೆಲ್ಲ ಸತ್ಯಯುಗದವರು, ಹಠಾತ್ತಾಗಿ ತಪ್ಪಿ ಕಲಿಯುಗದಲ್ಲಿ ಹುಟ್ಟಿದ್ದೇವೆ ಎಂಬುದಾಗಿ ಹೇಳುತ್ತಿದ್ದರು.

ಜಲ್ಲೀಕಲ್ಲು ಹಾಕಿ ದಮ್ಮಸು ಮಾಡಿದ ರಸ್ತೆಯಲ್ಲೂ ಒಂದಿಷ್ಟು ಬಿರುಕು ಕಂಡರೆ ಸಾಕು, ಆ ಮೂಲಕ ಪ್ರಕೃತಿಯು ತನ್ನ ಪ್ರಾಣಶಕ್ತಿಯ ಹಸುರು ಬಾವುಟವನ್ನು ಎತ್ತಿ ವಿಜೃಂಭಿಸುವುದು. ನಮ್ಮ ಬಾಳುವೆಯಲ್ಲಿ ಪ್ರತಿ ತಿಥಿಯೂ ಏಕಾದಶಿಯಾಗಿತ್ತು, ನಿಜ–ಆದರೆ ಆ ಉಪವಾಸಗಳ ಮಧ್ಯೆ ಯಾವುದೋ ಒಂದು ಬಿರುಕನ್ನ ಅವಕಾಶಮಾಡಿಕೊಂಡು ನಾನು ಅಮೃತದ ಸವಿಯುಂಡಿದ್ದೆ.

ನಾವು ನಿಷೇಧವಿಲ್ಲದೆ ಹೋಗಿ ಬರಬಹುದಾಗಿದ್ದ ಕೆಲವೇ ಮನೆಗಳಲ್ಲಿ ಒಬ್ಬರ ಮನೆ, ನಿಖಿಲಬಾಬುಗಳದು. ಆತ ಬ್ರಹ್ಮ ಸಮಾಜದವರು. ಅಪ್ಪ ಅವರನ್ನ ಕಂಡರೆ ಗೌರವಿಸುತ್ತಿದ್ದರು. ಅವರ ಮಗಳು ಅನಸೂಯಾ ನನಗಿಂತಲೂ ಆರುವರುಷ ಕಿರಿಯಳು. ನಾನು ಅವಳಿಗೆ ಶಾಸನಕರ್ತನಾದ ಗುರುವಿನ ಪದವಿ ಪಡೆದಿದ್ದೆ.

ಅವಳ ಎಳೆಯ ಮುಖದ ಆ ನಿಬಿಡವಾದ ಕಪ್ಪು ಕಣ್ಣುರೆಪ್ಪೆಗಳು ನನ್ನ ಮನಸ್ಸಿಗೆ ಬರುತ್ತವೆ. ಆ ರೆಪ್ಪೆಗಳ ನೆರಳಿನಲ್ಲಿ ಈ ಪೃಥಿವಿಯೆಲ್ಲದರ ಬೆಳಕಿನ ಪ್ರಖರತೆಯು ಅವಳ ಕಂಗಳಲ್ಲಿ ಅತಿ ಕೋಮಲವಾಗಿ ಬಂದು ಸೇರಿತ್ತು. ಅದೆಷ್ಟು ಸ್ನಿಗ್ಧವಾದ ನೋಟದಿಂದ ನನ್ನ ಕಡೆ ನೋಡುತ್ತಿದ್ದಳೋ! ಬೆನ್ನ ಮೇಲೆ ಹಾವಿನಂತೆ ತೂಗಾಡುತ್ತಿದ್ದ ಅವಳ ಉದ್ದನೆಯ ಜಡೆಯೂ ಮನಸ್ಸಿಗೆ ಬರುತ್ತದೆ. ಅಲ್ಲದೆ ಅವಳೆರಡು ಸುಂದರವಾದ ಕೈಗಳು! ಅದೇಕೋ ಗೊತ್ತಿಲ್ಲ, ಅವುಗಳಲ್ಲಿ ಏನೋ ಒಂದು ವಿಧವಾದ ಕರುಣೆಯಿತ್ತು. ಅವಳು ದಾರಿಯಲ್ಲಿ ಹೋಗುತ್ತ ಯಾರದೋ ಕೈಯನ್ನ ಹಿಡಿಯಲು ಹಾತೊರೆಯುತ್ತಿರುವಂತೆ, ಅವಳ ಆ ಎಳೆಯ ಕೈ ಬೆರಳುಗಳು ಸಂಪೂರ್ಣ ವಿಶ್ವಾಸದಿಂದ ಅದಾರ ಮುಷ್ಟಿಯ ನಡುವೆ ಹಿಡಿದಿಡಲ್ಪಡುವುದಕ್ಕೋ ದಾರಿಗಾಯುತ್ತ ಇರುವಂತೆ ಅನ್ನಿಸುತ್ತಿತ್ತು.

ಸರಿಯಾಗಿ ಆ ದಿನಗಳಲ್ಲೇ ಅವಳನ್ನು ಈ ಬಗೆಯಾಗಿ ನೋಡಲಾದೆನೆಂದು ಹೇಳಿದರೆ ಉತ್ಪ್ರೇಕ್ಷೆಯಾಗುತ್ತದೆ. ಆದರೆ ಈಗಿನ ನನ್ನ ನೆನಪಿನಲ್ಲಿ ಬರುವ ಅಂದಿನ ಚಿತ್ರಗಳು ಅವೇ. ವಾಸ್ತವವಾಗಿ ನಾವು ಪೂರ್ತಿಯಾಗಿ ತಿಳಿದುಕೊಳ್ಳುವ ವಯಸ್ಸು ಬರುವುದಕ್ಕೆ ಮುಂಚೆಯೇ ಎಷ್ಟೋ ತಿಳಿದುಕೊಂಡುಬಿಟ್ಟಿರುತ್ತೇವೆ. ಅಗೋಚರ ಮನಸ್ಸಿನ ಮಧ್ಯೆ ಎಷ್ಟೋ ಚಿತ್ರಗಳು ಅಚ್ಚಾಗಿಹೋಗಿರುತ್ತವೆ. ಹಠಾತ್ತಾಗಿ ಒಂದು

ದಿನ ಯಾವುದೋ ಒಂದು ದಿಕ್ಕಿನ ಕಡೆಯಿಂದ ಬೆಳಕು ಬಿದ್ದೊಡನೆ ಅವುಗಳೆಲ್ಲ ಕಣ್ಣಿಗೆ ಬೀಳುತ್ತವೆ.

ಅನುವಿನ ಮನಸ್ಸಿನ ಬಾಗಿಲಿಗೆ ಕಠಿಣವಾದ ಕಾವಲೇನೂ ಇರಲಿಲ್ಲ. ಅದಕ್ಕೇ ಅವಳು ಏನು ಬೇಕಾಗಿದ್ದರೆ ಅದನ್ನ ನಂಬುತ್ತಿದ್ದಳು. ಒಂದು, ಅವಳು ತನ್ನ ಮುದಿದಾದಿಯ ಬಾಯಿಂದ ವಿಶ್ವತತ್ತ್ವಸಂಬಂಧವಾಗಿ ಏನೇನು ತಿಳಿದುಕೊಂಡಿದ್ದಳೋ ಅವು ನಮ್ಮ ಭೂಪಟ ಗೋಡೆಗೆ ತಗುಲಿಹಾಕಿದ ಓದುವ ಕೋಣೆಯ ಜ್ಞಾನ ಭಾಂಡಾರದ ಕಸದಲ್ಲಿ ಕೂಡ ಜಾಗ ಪಡೆಯುವುದಕ್ಕೆ ಯೋಗ್ಯತೆಯಿರುವಂಥವಲ್ಲ. ಅವು ಸಾಲದೆ ಅವಳು ಮತ್ತೆ ಸ್ವಂತ ಕಲ್ಪನೆಯ ಸಹಾಯದಿಂದ ಅದೇನೇನೆಲ್ಲ ಸೃಷ್ಟಿ ಮಾಡುತ್ತಿದ್ದಳೋ ಅವಕ್ಕೆ ಮಿತಿಯೇ ಇಲ್ಲ. ಈ ವಿಷಯದಲ್ಲೇ ನಾನವಳನ್ನು ಹೆಚ್ಚಾಗಿ ಶಾಸನ ಮಾಡಬೇಕಾಗಿ ಬಂದದ್ದು. "ಅನೂ, ಅದೆಲ್ಲ ಕಂತೆ ಪುರಾಣ. ಅವೆಲ್ಲಾದರೂ ಸಾಧ್ಯವೇ? ಅಂಥವೆಲ್ಲ ನಂಬುವುದು ಕೂಡ ಪಾಪವೇ!" ಎಂದು ಹೇಳಬೇಕಾಗುತ್ತಿತ್ತು. ಕೇಳಿ ಅನುವಿನ ಕಂಗಳ ಕರಿಯ ಹುಬ್ಬುಗಳ ನೆರಳಿನ ಮೇಲೆ ಮತ್ತೆ ಯಾವುದೋ ಒಂದು ಹೆದರಿಕೆಯ ನೆರಳು ಬೀಳುತ್ತಿತ್ತು. ಅನು ಒಮ್ಮೊಮ್ಮೆ ತನ್ನ ಅಳುತ್ತಿದ್ದ ತಂಗಿಯನ್ನು ಸಂತೈಸಲೆಂದು ಏನೇನೋ ಹುಚ್ಚು ಮಾತುಗಳನ್ನ ಆಡುತ್ತಿದ್ದಳು. ಮಗುವಿಗೆ ಹಾಲು ಕುಡಿಸುವಾಗ "ಅಗೋ, ಕಾಗೆ ಬಂತು...ಹುಷ್...ಕಾಗೆ" ಎಂದು ಅಲ್ಲಿ ಕಾಗೆಯಿಲ್ಲದಿದ್ದರೂ ಇರುವಂತೆ ನಟಿಸಿ ಅವನ್ನ ಓಡಿಸುವ ಅಭಿನಯ ಮಾಡುತ್ತಿದ್ದಳು. ಆಗ ನಾನವಳನ್ನು ಗಂಭೀರವಾಗಿ ಟೀಕಿಸಿ "ನೀನು ಆ ಮಗುವಿಗೆ ಸುಳ್ಳು ಹೇಳುತ್ತಿದ್ದೀಯೆ, ದೇವರು ಎಲ್ಲಾ ಕೇಳುತ್ತಿರುತ್ತಾನೆ. ಈ ಕ್ಷಣವೇ ನೀನು ದೇವರ ಕ್ಷಮೆ ಬೇಡುವುದು ಉಚಿತ" ಎಂದು ಎಚ್ಚರಿಕೆ ಕೊಡುತ್ತಿದ್ದೆ.

ಹೀಗೆ ನಾನೆಷ್ಟು ಶಾಸನ ಮಾಡಿದರೂ ಆ ಹುಡುಗಿ ಅದೆಲ್ಲಕ್ಕೂ ಒಪ್ಪುತ್ತಿದ್ದಳು. ಅವಳು ತನ್ನನ್ನು ತಪ್ಪಿತಸ್ಥಳೆಂದುಕೊಂಡಷ್ಟೂ ನನಗೆ ಅಷ್ಟು ಸಂತೋಷವಾಗುತ್ತಿತ್ತು. ಕಠಿಣ ಶಾಸನದಿಂದ ಮನುಷ್ಯರನ್ನು ಒಳ್ಳೆಯವರಾಗಿ ಮಾಡುವ ಸುಯೋಗ ಒದಗಿದಾಗ, ನಾವೇ ಅಂಥ ಶಾಸನಗಳಿಂದ ಒಳ್ಳೆಯವರಾಗಿರುವುದರ ಬೆಲೆ ಮತ್ತೆ ನಮಗೆ ಬರುತ್ತದೆ. ಅನುವೂ ನನ್ನನ್ನು ತನಗೂ ಮತ್ತು ಪ್ರಪಂಚದ ಇತರ ಜನರಿಗೂ ಹೋಲಿಸಿ ನಾನು ಅತ್ಯಂತ ಉತ್ತಮವೆಂದು ತಿಳಿದುಕೊಂಡಿದ್ದಳು.

ಕ್ರಮೇಣ ವಯಸ್ಸು ಬೆಳೆಯಿತು. ಸ್ಕೂಲನ್ನು ಬಿಟ್ಟು ಕಾಲೇಜಿಗೆ ಸೇರಿದ್ದೂ ಆಯಿತು. ಅಖಿಲಬಾಬುಗಳ ಹೆಂಡತಿಯ ಮನಸಿಗೆ, ನನ್ನಂಥ ಯೋಗ್ಯನಾದ ಹುಡುಗನೊಂದಿಗೆ ಅನುವಿನ ಮದುವೆಯಾಗಬೇಕೆಂದು ಇಷ್ಟವಾಗಿತ್ತು. ನನಗೂ ಅದೇ ಇಷ್ಟವಾಗಿತ್ತು. ಯಾವ ಕನ್ಯಾ ಪಿತೃವಿನ ದೃಷ್ಟಿಯನ್ನೂ ತಪ್ಪಿಸಿಕೊಳ್ಳುವಂಥ ಆಳಲ್ಲ ನಾನು.

ಆದರೆ ಒಂದು ದಿನ ಕೇಳಿದೆ-ಬಿ.ಎಲ್. ಪಾಸುಮಾಡಿದ ಒಬ್ಬ ಹೊಸದಾದ ಮುರ್ಸಿಫನೊಡನೆ ಅನುವಿನ ಲಗ್ನ ನಿಷ್ಕರ್ಷೆಯಾಗಿರುವುದೆಂದು. ನಾವಂತೂ ಬಡವರು. ಆ ಬಡತನದಿಂದಲೇ ನಮ್ಮ ಬೆಲೆ ಬೆಳೆದಿತ್ತೆಂದು ನಾನೇನೋ ತಿಳಿದಿದ್ದೆ. ಆದರೆ ಹೆಣ್ಣಿನ ತಂದೆಯ ಲೆಕ್ಕಾಚಾರದ ಕ್ರಮವೇ ಬೇರೆ ನಮೂನೆ.

ಪೂಜೆಮಾಡಿ ಮುಗಿದ ಪ್ರತಿಮೆಯನ್ನು ವಿಸರ್ಜನೆ ಮಾಡಬೇಕಾಗಿ ಬಂತು. ಆ ಪ್ರತಿಮೆಯೂ ಮುಳುಗಿತು. ಒಂದೇ ಏಟಿಗೆ ಬಾಳುವೆಯ ಯಾವುದೋ ಒಂದು ಮರೆಯಲ್ಲಿ ಅದು ಬಿದ್ದುಹೋಯಿತು. ಎಳೆತನದಿಂದಲೂ ನನಗೆ ಎಲ್ಲಕ್ಕಿಂತಲೂ ಪರಿಚಿತವಾಗಿದ್ದವಳು ಒಂದು ದಿನದೊಳಗೆ ಬೇರೆ ಸಾವಿರಾರು, ಲಕ್ಷಾಂತರ ಅಪರಿಚಿತ ಮನುಷ್ಯರ ಸಮುದ್ರದಲ್ಲಿ ಸೇರಿಹೋದಳು. ಆ ದಿನ ಮನಸ್ಸಿನಲ್ಲಿ ಏನೇನು ಅನ್ನಿಸಿತೋ ಆ ಮನಸ್ಸಿಗೇ ಗೊತ್ತು. ಆದರೆ ವಿಸರ್ಜನೆ ಆದಮೇಲೂ ನಾನು ಯಾವುದನ್ನು ಗುರುತುಹಿಡಿದೆನೋ ಅದು ನನ್ನ ದೇವಿಯ ಪ್ರತಿಮೆಯೆ? ಹಾಗಲ್ಲ. ಅಭಿಮಾನವು ಪೆಟ್ಟುತಿಂದಿದ್ದರೂ ಸುಮ್ಮನಿರದೆ ಇನ್ನೂ ಹೋರಾಡುತ್ತ ಅಸ್ವಸ್ಥತೆಯ ಅಲೆಗಳನ್ನು ಎಬ್ಬಿಸುತ್ತಿತ್ತು. ಅನುವನ್ನು ಮೊದಲಿಂದಲೂ ನನಗಿಂತಲೂ ಕೀಳೆಂದು ನೋಡುತ್ತಿದ್ದೆ. ಆ ದಿನ ನನ್ನ ಯೋಗ್ಯತೆಗೆ ಹೋಲಿಸಿಕೊಂಡು ಅವಳನ್ನು ಮತ್ತೂ ಕೀಳಾದವಳೆಂದು ಗಣಿಸಿದೆ. ನನ್ನ ಶ್ರೇಷ್ಠತೆಗೆ ಪೂಜೆಯಾಗದಿದ್ದುದೇ ಆ ದಿನ ಪ್ರಪಂಚದಲ್ಲಿ ಎಲ್ಲಕ್ಕಿಂತಲೂ ದೊಡ್ಡ ಅಮಂಗಳವೆಂದುಕೊಂಡೆ.

ಹೋಗಲಿ, ಒಂದಂತೂ ತಿಳಿದುಹೋಯಿತು. ಪ್ರಪಂಚದಲ್ಲಿ ಬರೇ ಸತ್ಯತೆಯಿಂದಲೇ ಏನೂ ಲಾಭವಿಲ್ಲ. ಆಗ ಮನಸ್ಸು ಮಾಡಿದೆ, ಹಣ ಎಷ್ಟು ಸಂಪಾದನೆ ಮಾಡಬೇಕೆಂದರೆ ಒಂದಲ್ಲ, ಒಂದು ದಿನ ಅಖಿಲಬಾಬುವೇ "ಛೆ, ಮೋಸಹೋದೆ" ಎಂದುಕೊಳ್ಳಬೇಕು. ಚೆನ್ನಾಗಿ ದುಡಿದು ಸಂಪಾದನೆ ಮಾಡುವ ಆಳಾಗಬೇಕೆಂದು ಎಲ್ಲ ಸನ್ನಾಹವನ್ನೂ ಮಾಡಿದೆ.

ಉದ್ಯಮಗಾರನಾಗಬೇಕಾದರೆ ಎಲ್ಲಕ್ಕಿಂತಲೂ ಹೆಚ್ಚಾದ ಸರಂಜಾಮು-ಅಗಾಧವಾದ ಆತ್ಮ ವಿಶ್ವಾಸ. ಆ ವಿಷಯದಲ್ಲಿ ನನಗೆ ಎಂದೂ ಯಾವ ಕೊರತೆಯೂ ಇರಲಿಲ್ಲ. ಈ ಗುಣ ಅಂಟುಜಾಡ್ಯವಿದ್ದಂತೆ, ಒಂದು ರೀತಿಯಲ್ಲಿ. ಯಾರು ತಮ್ಮಲ್ಲಿ ತಾವೇ ಹೆಚ್ಚು ವಿಶ್ವಾಸವಿಡುತ್ತಾರೋ ಅವರಲ್ಲಿ ಬೇರೊಬ್ಬರೂ ವಿಶ್ವಾಸವಿಡುತ್ತಾರೆ. ಉದ್ಯಮ ಬುದ್ಧಿಯು ನನಗೆ ಸ್ವಾಭಾವಿಕವೆಂದೂ ಅಸಾಧಾರಣವೆಂದೂ ಎಲ್ಲರೂ ಒಪ್ಪಿಕೊಂಡುಬಿಟ್ಟರು.

ಉದ್ಯೋಗ ಸಾಹಿತ್ಯದ ಪುಸ್ತಕಗಳೂ, ಕಾಗದಗಳೂ ನನ್ನ ಶೆಲ್ಫ್ ಮತ್ತು ಮೇಜಿನ ಮೇಲೆ ಭರ್ತಿಯಾಗುತ್ತ ಬಂದುವು. ಮನೆ ರಿಪೇರಿ, ಇಲೆಕ್ಟ್ರಿಕ್ ದೀಪ ಮತ್ತು ಫ್ಯಾನಿನ ಕುಶಲತೆ, ಯಾವ ಪದಾರ್ಥಕ್ಕೆ ಎಷ್ಟು ಬೆಲೆ, ಬಜಾರಿನಲ್ಲಿ ದರಗಳ ಏರಿಳಿತಗಳ ಗೂಢತತ್ತ್ವ, ಸ್ಟಾಕ್ ಎಕ್ಸ್‌ಛೇಂಜಿನ ರಹಸ್ಯ, ಪ್ಲ್ಯಾನ್, ಎಸ್ಟಿಮೇಟ್

ಮುಂತಾದುವುಗಳ ವಿದ್ಯೆಯಲ್ಲಿ, ಹತ್ತು ಜನಗಳ ಮುಂದೆ ವಿವಾದಕ್ಕಾಸ್ಪದವಿಲ್ಲದೆ ಮಾತಾಡುವಷ್ಟು ಪಾಂಡಿತ್ಯ ಗಳಿಸಿಬಿಟ್ಟಿದ್ದೆ.

ಆದರೆ ಪ್ರತಿ ಕ್ಷಣವೂ ಉದ್ಯೋಗದ ವಿಷಯವಾಗಿ ಮಾತಾಡುತ್ತಿದ್ದರೂ ಯಾವುದೇ ಉದ್ಯೋಗದಲ್ಲಿ ಇಳಿಯದೆಯೇ ಕಾಲ ಕಳೆದುಬಿಟ್ಟೆ. ನನ್ನ 'ಭಕ್ತ'ರಲ್ಲಿ ಅನೇಕರು ಯಾವುದಾದರೊಂದು ಸ್ವದೇಶೀ ಕಂಪೆನಿಯಲ್ಲಿ ಸೇರಿಕೊಳ್ಳುವ ಪ್ರಸ್ತಾಪ ಮಾಡಿದಾಗ ನಾನವರಿಗೆ ಏನು ಹೇಳುತ್ತಿದ್ದೆನೆಂದರೆ–ಈಗ ನಡೆಯುತ್ತಿರುವ ಉದ್ಯಮಗಳಷ್ಟರಲ್ಲೂ ಶುದ್ಧವಾದ ಕಾರುಬಾರೊಂದೂ ಇಲ್ಲ, ಎಲ್ಲದರಲ್ಲೂ ಯಾವುದಾದರೊಂದು ಮೋಸವಿದ್ದೇ ಇರುತ್ತದೆ–ಅದೊಂದೇ ಅಲ್ಲದೆ ಪ್ರಾಮಾಣಿಕತೆಯನ್ನು ಕಾಪಾಡಿಕೊಂಡು ನಡೆಯಬೇಕಾದರೆ ಅಂಥವರೊಂದಿಗೆ ಕಲೆಯುವುದು ಸಾಧ್ಯವಿಲ್ಲ. ಪ್ರಾಮಾಣಿಕತೆಯ ಲಗಾಮನ್ನು ಒಂದಿಷ್ಟು ಸಡಿಲ ಬಿಡದೆ ಹೋದರೆ ಲಾಭ ಹೆಚ್ಚು ದೊರಕುವುದಿಲ್ಲ.

ಇಂಥ ಮಾತನ್ನು ನನ್ನ ಸ್ನೇಹಿತನಾರಾದರೂ ಹೇಳಿದರೆ ಅಂಥವನ ಸಂಗವನ್ನೇ ತೊರೆದುಬಿಡುತ್ತಿದ್ದೆ.

ಸಾಯುವ ಪರ್ಯಂತ ಸರ್ವೋತ್ಕೃಷ್ಟವಾದ ಪ್ಲಾನ್, ಎಸ್ಟಿಮೇಟ್ ಮತ್ತು ಪ್ರಾಸ್ಪೆಕ್ಟಸ್ ಬರೆದುಕೊಂಡೇ ನನ್ನ ಯಶಸ್ಸನ್ನು ಅಕ್ಷಯವಾಗಿಟ್ಟುಕೊಳ್ಳಬಲ್ಲವನಾಗಿದ್ದೆ. ಆದರೆ ವಿಧಿವಶದಿಂದ ಪ್ಲಾನ್ ಬರೆಯುವುದನ್ನು ನಿಲ್ಲಿಸಿಬಿಟ್ಟು ಕೆಲಸಕ್ಕೆ ತೊಡಗಬೇಕಾಯಿತು. ಒಂದು ಕಾರಣ, ತಂದೆಯ ಸಾವಿನಿಂದ ನನ್ನ ಕುತ್ತಿಗೆಯ ಮೇಲೆ ಸಂಸಾರದ ಭಾರ ಬಿತ್ತು. ಆಮೇಲೆ ಮತ್ತೊಂದು ಉಪಸರ್ಗವೂ ಒದಗಿಬಂತು. ಆ ಮಾತನ್ನೂ ಹೇಳುತ್ತೇನೆ.

ಪ್ರಸನ್ನನೆಂಬ ಹುಡುಗನೊಬ್ಬ ಹಿಂದೆ ನನ್ನ ಜೊತೆಯಲ್ಲಿ ಓದುತ್ತಿದ್ದ, ಅವನೆಷ್ಟು ಹರಟೇ ಮಲ್ಲನೋ ಅಷ್ಟೇ ಚುಚ್ಚುಮಾತಾಡುವವನೂ ಆಗಿದ್ದ. ನಮ್ಮ ಮನೆತನದ ಸತ್ಯಸಂಧತೆಯ ಖ್ಯಾತಿಯ ಬಗ್ಗೆ ಕುಚೇಷ್ಟೆಯ ಮಾತಾಡುವುದಕ್ಕೇನಾದರೂ ಒಂದು ಅವಕಾಶ ಹುಡುಕುತ್ತಿದ್ದ. ನಮ್ಮಪ್ಪ ನನಗೆ ಸತ್ಯಧನ ಎಂಬ ಹೆಸರಿಟ್ಟಿದ್ದ. ಪ್ರಸನ್ನನು ನಮ್ಮ ಮನೆಯ ಬಡತನವನ್ನು ಲಕ್ಷ್ಯದಲ್ಲಿಟ್ಟು ತಂದೆಯಾದವನು ಕೊಡುವಾಗ ಮಿಥ್ಯಾಧನ ಕೊಟ್ಟ, ಆದರೆ ನಾಮಕರಣಮಾಡುವಾಗ ಸತ್ಯಧನ ಕೊಟ್ಟ. ಅದರ ಬದಲು ಹೆಸರು ಮಿಥ್ಯಾಧನವೆಂದಿಟ್ಟು ಕೊಡುವಾಗ ಸತ್ಯಧನ ಕೊಟ್ಟಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು ಎಂದು ಟೀಕೆಮಾಡಿ ನಗುತ್ತಿದ್ದ. ನನಗಂತೂ ಅವನನ್ನ ನೋಡುವುದಕ್ಕೇ ಹೆದರಿಕೆಯಾಗುತ್ತಿತ್ತು.

ಎಷ್ಟೋ ಕಾಲದಿಂದ ಅವನನ್ನು ನೋಡಿರಲಿಲ್ಲ. ಈ ಮಧ್ಯೆ ಅವನು ಬರ್ಮಾ, ಲೂಧಿಯಾನಾ, ಶ್ರೀರಂಗಪಟ್ಟಣ ಮುಂತಾದ ಸ್ಥಳಗಳಲ್ಲಿ ಯಾವ ಯಾವ ನಮೂನೆಯ ಕೆಲಸಗಳನ್ನೆಲ್ಲಾ ಮಾಡಿ ಬಂದಿದ್ದ.

ಅವನು ಹಠಾತ್ತಾಗಿ ಕಲಿಕತ್ತೆಗೆ ಬಂದದ್ದೇ ನನ್ನನ್ನು ಹಿಡಿದುಬಿಟ್ಟ. ಯಾರ ಕುಚೇಷ್ಟೆಯನ್ನು ಕಂಡರೆ ಹೆದರುತ್ತಿದ್ದೆನೋ ಅಂಥವನ ಕಡೆಯಿಂದ ಗೌರವ ಪಡೆಯುವುದೆಂದರೆ ಸಾಮಾನ್ಯವೆ?

ಪ್ರಸನ್ನನು ಬಂದು ನನ್ನನ್ನು ಉಬ್ಬಿಸಲು ತೊಡಗಿದ. "ನೋಡಣ್ಣ, ಬೇಕಾದರೆ, ಇವತ್ತು ನಾನು ಹೇಳಿರುತ್ತೇನೆ, ನೋಡಿಕೊಂಡಿರು. ಒಂದಲ್ಲ ಒಂದು ದಿನ ನೀನು ಎರಡನೆ ಮತಿಶೀಲನೋ ಅಥವಾ ದುರ್ಗಾಚರಣಲಾ ಅಂಥ ವಾಣಿಜ್ಯಶ್ರೇಷ್ಠನೋ ಆಗದೆ ಹೋದರೆ ಆಗ ನಾನು ಬವು ಬಜಾರಿನ ಒಂದು ಮೂಲೆಯಿಂದ ಬಾಗ್ ಬಜಾರಿನ ಮೂಲೆಯವರೆಗೂ ನೆಲಕ್ಕೆ ಮೂಗುಜ್ಜಿಕೊಂಡು ಹೋಗಲಿಕ್ಕೆ ಸಿದ್ಧ" ಎಂದು ಹೀಗೆಲ್ಲಾ ನನ್ನನ್ನ ಪ್ರಶಂಸೆ ಮಾಡತೊಡಗಿದ.

ಪ್ರಸನ್ನನ ಬಾಯಿಂದ ಇಷ್ಟು ದೊಡ್ಡ ಮಾತು ಬರುವುದು ಎಷ್ಟು ದೊಡ್ಡ ವಿಷಯವೆಂಬುದನ್ನು ಪ್ರಸನ್ನನೊಂದಿಗೆ ಒಂದೇ ವರ್ಗದಲ್ಲಿ ಓದದೇ ಇದ್ದವರು ಅರ್ಥಮಾಡಿಕೊಳ್ಳಲಾರರು. ಅದರ ಮೇಲೆ ಪ್ರಸನ್ನನು ಪ್ರಪಂಚವೆಲ್ಲ ಸುತ್ತಿ ತಿಳಿದುಕೊಂಡು ಬಂದಿದ್ದಾನೆ. ಅವನ ಮಾತಿಗೆ ಬೆಲೆಯಿಲ್ಲವೆ?

ಅವನು ಇನ್ನೂ ಹೇಳಿದ "ಕೆಲಸ ತಿಳಿದಿರುವ ಎಷ್ಟೋ ಜನವನ್ನು ನಾನು ನೋಡಿದ್ದೇನೆ, ಅಣ್ಣಯ್ಯಾ, ಆದರೆ ನೋಡು, ಅಂಥವರೇ ಬೀಳುವುದು ಕಡೆಗೆ ಹಳ್ಳಕ್ಕೆ. ಅವರು ತಮಗೇ ಬುದ್ಧಿ ಇರೋದು ಎನ್ನುವ ಕುರುಡು ಅಹಂಕಾರದಿಂದ ಸುಮ್ಮನೆ ನುಗ್ಗುತಾ ಇರುತಾರೆ. ಅವರಿಗೆ ಎಷ್ಟೋ ಸಲ ಧರ್ಮ ಅಂತ ಒಂದಿದೆ ಅಂತ ಕೂಡ ಗೊತ್ತಾಗುವುದಿಲ್ಲ. ಆದರೆ ನಿನ್ನ ವಿಷಯವೇ ಬೇರೆ. ರನ್ನ, ಚಿನ್ನಗಳಿಗೆ ಇರುವ ಸಂಬಂಧ–ಈ ಕಡೆ ಧರ್ಮವನ್ನೂ ಬಿಟ್ಟುಕೊಡುವುದಿಲ್ಲ, ಮತ್ತೆ ಕರ್ಮದಲ್ಲಿ ಯಾರಿಗೂ ಕಡಿಮೆಯಿಲ್ಲ."

ಈಗ ಸಾಲದುದಕ್ಕೆ ಎಲ್ಲೆಲ್ಲೂ ಉದ್ಯಮಗಳ ಹುಚ್ಚು ಹರಡಿದ್ದ ಕಾಲ. ಎಲ್ಲರೂ ವಾಣಿಜ್ಯ ಬಿಟ್ಟರೆ ದೇಶಕ್ಕೆ ಬೇರೆ ದಾರಿಯಿಲ್ಲ ಎಂದು ಭಾವಿಸಿದ್ದರು. ಅಲ್ಲದೆ ಇನ್ನೂ ಒಂದು ಭಾವನೆ–ಕೇವಲ ಬಂಡವಾಳ ಒಂದು ಹೇಗೋ ಒದಗಿಸಿಕೊಂಡು ಬಿಟ್ಟರೆ ಸಾಕು–ಯಾದಾದರೂ ಆಗಲಿ–ವಕೀಲ, ಮೊಖ್ತ್ಯಾರ, ಡಾಕ್ಟರು, ಮೇಸ್ಟರು, ವಿದ್ಯಾರ್ಥಿಗಳ ಅಪ್ಪ, ಅಣ್ಣ, ಎಲ್ಲರೂ ಒಂದೇ ದಿನದಲ್ಲಿ ಎಲ್ಲ ವಿಧವಾದ ಉದ್ಯೋಗಗಳನ್ನು ಒಂದೇ ಉಸಿರಿನಲ್ಲಿ ನಡೆಸಿಕೊಂಡು ಹೋಗಬಹುದು.

"ನನ್ನ ಹತ್ತಿರ ಬಂಡವಾಳವಿಲ್ಲವಲ್ಲೋ" ಎಂದೆ ನಾನು.

ಆಗ ಪ್ರಸನ್ನ "ಛೇ, ಏನು ಮಾತು, ನಿನಗೆ ಪಿತ್ರಾರ್ಜಿತ ಆಸ್ತಿಯಿದೆಯಲ್ಲ" ಎಂದ.

ಆಗ ಹಠಾತ್ತಾಗಿ ನನಗೆನ್ನಿಸಿತು. ಪ್ರಸನ್ನನು ಹಾಗಾದರೆ ಇಷ್ಟು ದಿನಗಳಿಂದ ನನ್ನೊಡನೆ ಬರೇ ಹುಡುಗಾಟಿಕೆಯ ಚೇಷ್ಟೆ ಮಾಡುತ್ತಿದ್ದಾನೆಯೆ? ಆಸ್ತಿ...? ನನಗೆ?

ಆಗ ಪ್ರಸನ್ನ "ಇಲ್ಲ, ಅಣ್ಣಯ್ಯಾ, ತಮಾಷೆ ಮಾಡುತಾಯಿಲ್ಲ, ನಾನು. ಸತ್ಯಸಂಧತೆ ಅನ್ನು, ಪ್ರಾಮಾಣಿಕತೆ ಅನ್ನು–ಅದೇ ಲಕ್ಷ್ಮಿ–ಅದೇ ಲಕ್ಷ್ಮಿಯ ಚೆನ್ನದ ಕಮಲ. ಜನಗಳ ವಿಶ್ವಾಸ ನಂಬಿಕೆಗಳಿಂದ ಕಾರುಬಾರು ನಡೆಯುವುದು–ರೂಪಾಯಿಯಿಂದ ಅಲ್ಲ" ಎಂದ.

ತಂದೆಯ ಕಾಲದಿಂದಲೂ ಆ ಓಣಿಯ ವಿಧವೆ ಹೆಂಗಸರಲ್ಲಿ ಕೆಲವರು ತಮ್ಮಲ್ಲಿದ್ದ ಅಲ್ಪಸ್ವಲ್ಪ ಹಣವನ್ನು ನಮ್ಮ ಮನೆಯಲ್ಲಿಟ್ಟಿರುತ್ತಿದ್ದರು. ಅವರಿಗೆ ಬಡ್ಡಿಯಾಸೆಯಿರಲಿಲ್ಲ. ಅವರಿಗೊಂದೇ ನಿಶ್ಚಿಂತೆ–ಹೆಂಗಸರು ಎಂಥವರನ್ನೂ ದುಡ್ಡಿನ ವಿಷಯದಲ್ಲಿ ನಂಬುವುದು ಕಷ್ಟ. ಆದರೆ ನಮ್ಮ ಮನೆಯನ್ನು ಮಾತ್ರ ಸ್ವಲ್ಪವೂ ಭಯವಿಲ್ಲದೆ ನಂಬಬಹುದು. ಹಾಗೆ ಅವರುಗಳು ಠೇವಣಾತಿ ಇಟ್ಟಿದ್ದ ಹಣವನ್ನು ಉಪಯೋಗಿಸಿ ಒಂದು ಸ್ವದೇಶೀ ಏಜೆನ್ಸಿ ಉದ್ಯೋಗವನ್ನು ಆರಂಭಿಸಿದೆ. ಬಟ್ಟೆ, ಕಾಗದ, ಮಸಿ, ಗುಂಡಿ, ಸಾಬೂನು ಇತ್ಯಾದಿಗಳನ್ನು ತರಿಸಿಕೊಂಡು ಮಾರುವುದು. ಮಿಡತೆಗಳ ಹಾಗೆ ಗಿರಾಕಿಗಳು ಹಿಂಡು ಹಿಂಡಾಗಿ ಬರತೊಡಗಿದರು.

ಒಂದು ನಾಣ್ಣುಡಿಯಿದೆ–ವಿದ್ಯೆ ಎಷ್ಟು ಬೆಳೆದರೂ ಏನೂ ಗೊತ್ತಿಲ್ಲವಲ್ಲ ಅನ್ನಿಸುತ್ತ ಇರುತ್ತೆ. ಹಣದ ವಿಷಯದಲ್ಲೂ ಅಷ್ಟೇ. ಹಣ ಎಷ್ಟೇ ಬೆಳೆಯಲಿ, ಕೈಯಲ್ಲಿ ಕಾಸೇ ಇಲ್ಲವಲ್ಲ ಎಂದು ಅನ್ನಿಸುತ್ತ ಇರುತ್ತದೆ. ನನ್ನ ಮನಸ್ಸಿನಲ್ಲೂ ಅಂಥ ಅವಸ್ಥೆ ಇದ್ದುದನ್ನು ಕಂಡು ಪ್ರಸನ್ನನು ನನಗೆ ಏನು ಹೇಳಿದನೆಂದರೆ–ಹೇಳಿದ ಅಂದರೆ ಬಾಯಿ ಬಿಟ್ಟು ಹೇಳಿದ ಎಂದಲ್ಲ–ನನಗೇ ಆ ಯೋಚನೆ ಬರುವ ಹಾಗೆ ಮಾಡಿ ನನ್ನಿಂದ ಹೇಳಿಸಿದ ಎಂದರೂ ಸರಿ! ಚಿಲ್ಲರೆ ವ್ಯಾಪಾರ ಒಂದು ವ್ಯಾಪಾರವೇ? ಅದು ಸುಮ್ಮನೆ ವ್ಯರ್ಥವಾಗಿ ಜೀವನ ಕಳೆದ ಹಾಗೆ. ಪ್ರಪಂಚದಲ್ಲೆಲ್ಲಾ ವ್ಯಾಪಿಸಿಕೊಂಡಿದೆಯಲ್ಲ ವ್ಯಾಪಾರ, ಅದೇ ನಿಜವಾದ ವ್ಯಾಪಾರ.

ಸ್ವದೇಶದೊಳಗಿರುವ ಹಣವನ್ನೇ ದುಡಿಯುತ್ತ ಹೋದರೆ ಗಾಣದ ಎತ್ತಿನಂತೆ ಸುತ್ತ ಸುತ್ತಿಕೊಂಡು ಸತ್ತಹಾಗೆ, ಮುಂದೆ ಹೆಜ್ಜೆಯಿಟ್ಟಹಾಗಲ್ಲ!

ನನ್ನ ಬಾಯಿಂದ ಈ ಮಾತು ಕೇಳಿ ಪ್ರಸನ್ನನು ಇಂಥ ಹೊಸ ಮತ್ತು ಗಂಭೀರವಾದ ಜ್ಞಾನದ ಮಾತನ್ನ ಅವನೆಂದೂ ಎಲ್ಲೂ ಕೇಳಿರಲಿಲ್ಲ ಎನ್ನುವಂತೆ ಭಕ್ತಿಯಿಂದ ಗದ್ಗದನಾಗಿಬಿಟ್ಟ. ಆಮೇಲೆ ನಾನವನಿಗೆ ಭರತವರ್ಷದಲ್ಲಿ ಹುಚ್ಚೆಳ್ಳಿನ ಉತ್ಪತ್ತಿ ಮತ್ತು ವ್ಯಾಪಾರದ ಬಗ್ಗೆ ಏಳುವರುಷಗಳ ಲೆಕ್ಕಾಚಾರ ತಿಳಿಸಿದೆ. ಎಲ್ಲಿಗೆ ಎಷ್ಟು ಪರಿಮಾಣದಲ್ಲಿ ಹುಚ್ಚೆಳ್ಳು ರಫ್ತಾಗುತ್ತದೆ, ಎಲ್ಲಿ ಯಾವ ದರ, ದರವು ಎಷ್ಟರ ಮಟ್ಟಿಗೆ ಏರುತ್ತದೆ, ಎಷ್ಟರಮಟ್ಟಿಗೆ ಇಳಿಯುತ್ತದೆ–ಬೆಳೆಯ ಸ್ಥಳದಲ್ಲಿ ಅದರ ದರವೇನು, ರೇವು ಪಟ್ಟಣದಲ್ಲಿ ಜಹಜಿನ ಮೇಲೆ ಹೇರುವಾಗ ಎಷ್ಟು ದರ, ರೈತರ ಮನೆಯಲ್ಲಿ ಕೊಂಡು ನೇರವಾಗಿ ರೇವು ಪಟ್ಟಣಕ್ಕೆ ತಂದು ಜಹಜಿನ ಮೇಲೆ ಹೇರಿ ವಿದೇಶಕ್ಕೆ ರವಾನೆ ಮಾಡಿದರೆ ಒಂದೇ ಹೊಡೆತದಲ್ಲಿ ಎಷ್ಟು ನಫೆ ದಕ್ಕತಕ್ಕದ್ದು–ಈ

ಲೆಕ್ಕಾಚಾರವನ್ನೆಲ್ಲ, ಅಲ್ಲಲ್ಲಿ ಗೆರೆಗಳೆಳೆದು, ಅಲ್ಲಲ್ಲಿ ಗುಣಾಕಾರ, ಭಾಗಾಕಾರ, ದಶಮಾಂಶ ಶೇಕಡಗಳ ಲೆಕ್ಕಮಾಡಿ, ಅಲ್ಲಲ್ಲಿ ಅನುಲೋಮ ಪ್ರಣಾಳಿಯಲ್ಲಿ, ಅಲ್ಲಲ್ಲಿ ಪ್ರತಿಲೋಮ ಪದ್ಧತಿಯಲ್ಲಿ, ಕೆಂಪು ಮತ್ತು ಕರಿಯ ಮಸಿಯಲ್ಲಿ ಅತಿ ಸ್ಪಷ್ಟವಾದ ಅಂಕಿ, ಅಕ್ಷರಗಳಲ್ಲಿ ಐದಾರು ಉದ್ದನೆಯ ಕಾಗದಗಳನ್ನು ಭರ್ತಿಮಾಡಿ ಪ್ರಸನ್ನನ ಕೈಯಲ್ಲಿಟ್ಟಾಗ ನೋಡಬೇಕು ಅವನ ಮುಖಭಾವ! ಮಿಕಿ ಮಿಕಿ ಕಣ್ಣು ಬಿಡುತ್ತಾ ಮುಗ್ಧವಾಗಿ ನನ್ನ ಕಾಲಿನ ಧೂಳಿಯನ್ನ ಕೈಯಲ್ಲಿ ತೆಗೆದುಕೊಂಡು ತಲೆಗೆ ಮುಟ್ಟಿಸಿಕೊಳ್ಳುವುದಕ್ಕೂ ತಯಾರಾಗಿದ್ದ.

ನನ್ನ ಕಡೆ ಮೆಚ್ಚುಗೆಯಿಂದ ನೋಡುತ್ತ "ಇದುವರೆಗೆ ನನಗೆ ಇದೆಲ್ಲ ತಿಳಿದಿದೆ ಅಂತ ಅಂದುಕೊಂಡಿದ್ದೆ...ಆದರೆ, ಅಣ್ಣಯ್ಯಾ, ನಿನ್ನ ಮುಂದೆ ನಾನೆಷ್ಟರವನು? ಇನ್ನು ಮೇಲಿಂದ ನಾನು ನಿನ್ನ ಶಿಷ್ಯ ಅಂದುಕೊಂಡುಬಿಡು" ಎಂದ. ಆಮೇಲೆ ಸ್ವಲ್ಪ ಪ್ರತಿವಾದವನ್ನೂ ಮಾಡಿದ..."ಯೋ ಧ್ರುವಾಣಿ ಪರಿತ್ಯಜ್ಯ-ಜ್ಞಾಪಕವಿದೆಯಾ? ಹೇಗೆ ಗೊತ್ತು-ಲೆಕ್ಕಾಚಾರದಲ್ಲಿ ತಪ್ಪಿದ್ದರೂ ಇದ್ದೀತು!" ಎಂದು ಅನುಮಾನಿಸಿದ.

ಆಗ ನನ್ನ ಹಠ ಇನ್ನೂ ಮೇಲಕ್ಕೇರಿತು. ತಪ್ಪು ಹೇಗಾದೀತು ಎಂದು ಅವನಿಗೆ ಮಂದಟ್ಟು ಮಾಡಲು ಮತ್ತೆ ಕಾಗದದ ಮೇಲೆ ಲೇಖನಿಯನ್ನು ಓಡಾಡಿಸಿದ್ದಾಯಿತು. ಲೆಕ್ಕಾಚಾರದ ಮೇಲೆ ಲೆಕ್ಕಾಚಾರ. ಎಲ್ಲೆಲ್ಲಿ ನಷ್ಟವಾಗುವ ಸಂಭವಗಳಿವೆಯೋ ಅವೆಲ್ಲ ಲೆಕ್ಕಕ್ಕೆ ತೆಗೆದುಕೊಂಡ ಮೇಲೂ ಏನಿಲ್ಲವೆಂದರೂ ಲಾಭ ಶೇಕಡ ಇಪ್ಪತ್ತು-ಇಪ್ಪತ್ತೈದಕ್ಕಿಂತ ಕೆಳಗೆ ಹೋಗಲಾರದೆಂದು ಗುಣಾಕಾರ ಹಾಕಿ ತೋರಿಸಿದೆ.

ಈ ರೀತಿಯಾಗಿ ಸಣ್ಣ ಅಂಗಡಿಯ ವ್ಯಾಪಾರದ ಕಿರು ಖಾರಿಯಿಂದ ಭಾರಿ ಭಾರಿ ಕಾರುಬಾರುಗಳ ವಿಶಾಲ ಸಮುದ್ರಕ್ಕೆ ಹೋಗಿ ಬಿದ್ದ ಮೇಲೆ ನನ್ನ ಉದ್ಯಮವು ಬರೇ ನನ್ನ ಛಲದ ಜೋರಿನಿಂದಲೇ ನಡೆಯುತ್ತಿದ್ದೆಯೇ ಹೊರತು ಬೇರೆ ಏತರಿಂದಲೂ ಅಲ್ಲ ಎನ್ನುವ ಭಾವನೆಯುಂಟಾಯಿತು. ಸಂಪೂರ್ಣ ಹೊಣೆ ನನ್ನದೇ ಆಯಿತು.

ದತ್ತ ವಂಶದವರ ಸತ್ಯಸಂಧತೆಯ ಖ್ಯಾತಿಯ ಮೇಲೆ ನಂಬಿಕೆ-ಮತ್ತು ಬಡ್ಡಿಯ ಮೇಲಿನ ಆಸೆ. ಎರಡೂ ಸೇರಿ ಬೇರೆ ಬೇರೆ ಕಡೆಯಿಂದ ಠೇವಣಾತಿಗಳನ್ನು ತಂದುವು. ಹೆಂಗಸರು ನಗಗಳನ್ನ ಮಾರಿ ಹಣ ಪಾವತಿ ಮಾಡಿದರು-ಹೀಗೆ ಬಂಡವಾಳದ ಮೊತ್ತ ಸುಮ್ಮನೆ ಉಬ್ಬುತ್ತ ಬಂತು.

ಆದರೆ ಉದ್ಯಮಕ್ಕೆ ಇಳಿದ ಮೇಲೆ ನನಗೆ ದಿಕ್ಕು ತೋಚದಂತಾಯಿತು. ನಾನು ಮೊದಲು ಹಾಕಿದ್ದ ಪ್ಲ್ಯಾನಿನಲ್ಲಿ ಒಂದು ಕಡೆ ಸೊಗಸಾದ ಕೆಂಪು ಗೆರೆ, ಇನ್ನೊಂದು ಕಡೆ ಅಚ್ಚುಕಪ್ಪಾದ ಗೆರೆಗಳನ್ನೆಳೆದು ಪ್ರತ್ಯೇಕವಾಗಿಟ್ಟಿದ್ದ ಭಾಗಗಳೀಗ ಎಲ್ಲಾ ಒಂದೇ ನಮೂನೆಯಾಗಿ ಕಾಣುತ್ತಿವೆ. ಆ ಗೆರೆಗಳೆಲ್ಲಿ ಹೋದುವೋ ಪತ್ತೆಯಿಲ್ಲ.

ಎಷ್ಟೋ ಆಸ್ಥೆಯಿಂದ ರಚಿಸಿದ್ದ ನನ್ನ ಪ್ಲ್ಯಾನು ಹೀಗೆ ರಸಭಂಗವಾದದ್ದರಿಂದ ನನ್ನ ಮನಶ್ಶಾಂತಿ ಹೋಯಿತು. ನನ್ನ ಅಂತರಾತ್ಮನಿಗೆ, ಉದ್ಯಮದಲ್ಲಿ ಕೈಹಾಕಲು ನನಗೆ ಯೋಗ್ಯತೆಯಿಲ್ಲವೆಂದು ಸ್ಪಷ್ಟವಾಗಿ ತಿಳಿದುಹೋಯಿತು. ಅಷ್ಟಾದರೂ ಅದನ್ನ ಒಪ್ಪಿಕೊಳ್ಳುವಷ್ಟು ಸಾಹಸವೂ ನನ್ನಲ್ಲಿಲ್ಲ. ಉದ್ಯಮವೆಲ್ಲ ಕ್ರಮೇಣ ಪ್ರಸನ್ನನ ಹೆಗಲ ಮೇಲೆ ಬಿತ್ತು. ಆದರೂ ನಾನೇ ಅದರ ಧಣಿ, ಯಜಮಾನ, ಪ್ರಭು, ಒಡೆಯ ಇತ್ಯಾದಿಯಾಗಿ ಪ್ರಸನ್ನ ಹೇಳುವುದು ಬಿಡಲಿಲ್ಲ. ಅವನ ಹಂಚಿಕೆ, ನನ್ನ ಕೈರುಜು, ಅವನ ನಿಪುಣತೆ ಮತ್ತು ನನ್ನ ಪಿತ್ರಾರ್ಜಿತ ಖ್ಯಾತಿ ಇವೆಲ್ಲ ಸೇರಿ ನಮ್ಮ ಉದ್ಯಮವು ನಾಗಾಲೋಟದಿಂದ ಅದಾವ ಕಡೆ ಓಡುತ್ತಿತ್ತೋ ಅರಿಯಲಾಗಲಿಲ್ಲ.

ನೋಡ ನೋಡುತ್ತ ಎಲ್ಲಿಗೆ ಬಂದು ಸೇರಿದೆನೆಂದರೆ, ತಳವೂ ಸಿಗುತ್ತಿಲ್ಲ, ದಡವೂ ಕಾಣಬರುತ್ತಿಲ್ಲ!

ಆಗ ಕೈಲಿ ಹಿಡಿದಿದ್ದ ಚುಕ್ಕಾಣಿಯನ್ನ ಒತ್ತೊಟ್ಟಿಗೊಗೆದು ಇದ್ದ ಸಂಗತಿಯನ್ನ ಹೊರಗೆಡವಿ ಒಪ್ಪಿಕೊಂಡರೆ ಮಾತ್ರ ನಮ್ಮ ಆಸ್ತಿಯಾದ 'ಸತ್ಯಸಂಧತೆ'ಯನ್ನ ಕಾಪಾಡಿಕೊಂಡ ಹಾಗೆ. ಆದರೆ ಸತ್ಯಸಂಧತೆಯ ಖ್ಯಾತಿಯನ್ನು ಉಳಿಸಿಕೊಳ್ಳಲಾಗಲಿಲ್ಲ. ಠೇವಣಾತಿಯ ಹಣಕ್ಕೆ ಬಡ್ಡಿಯನ್ನ ಶೇಖರಿಸತೊಡಗಿದೆ. ಎಲ್ಲಿಂದ ಬರಬೇಕು? ಲಾಭವಂತೂ ಇಲ್ಲ. ಒಂದೇ ಉಪಾಯ ಬಡ್ಡಿಯ ದರ ಏರಿಸುವುದು. ಠೇವಣಾತಿಯೂ ಏರುತ್ತ ಹೋಗುತ್ತದೆ. ಬಡ್ಡಿ ಹೆಚ್ಚು ದರದಲ್ಲಿ ಪಾವತಿ ಮಾಡುತ್ತ ಹೋದಂತೆಲ್ಲ ಬಂಡವಾಳವೂ ಏರುತ್ತ ಬಂತು.

ಈ ಮಧ್ಯೆ ಎಂದೋ ಒಂದು ದಿನ ನನ್ನ ಮದುವೆಯೂ ಆಗಿಹೋಗಿತ್ತು. ನನ್ನ ಕೈಹಿಡಿದವಳಿಗೆ ಮನೆಗೆಲಸ ಒಂದು ಬಿಟ್ಟರೆ ಬೇರೇನೂ ಬೇಕಿಲ್ಲ. ಬೇರೇನೂ ಗೊತ್ತಿಲ್ಲ–ಹಾಗೆಂದು ತಿಳಿದಿದ್ದೆ ನಾನು. ಹಠಾತ್ತಾಗಿ ಒಮ್ಮೆ ನನಗೆ ಗೊತ್ತಾಯಿತು. ಅಗಸ್ತ್ಯ ಋಷಿಯಂತೆ ಒಂದೇ ಬೊಗಸೆಯಲ್ಲಿ ಸಮುದ್ರವನ್ನು ಹೀರಿಬಿಡುವ ಲೋಭವು ಅವಳಿಗೂ ಇದೆ. ಆಶ್ಚರ್ಯ, ಅದು ಯಾವಾಗ ನನ್ನ ಮನಸ್ಸಿನಲ್ಲಿದ್ದ ಈ ಹಣ ಸಂಪಾದನೆಯ ಗಾಳಿ ಮನೆಯವರ ಮೇಲೆಲ್ಲ ಬೀಸಿತೋ ನನಗೆ ಗೊತ್ತೇ ಆಗಲಿಲ್ಲ. ನಮ್ಮ ಮನೆಯ ಮುಸುರೆ ತಿಕ್ಕುವವಳೂ, ಕೆಲಸದಾಳೂ, ಬಾಗಿಲು ಕಾಯುವ ದರವಾನನೂ ಕೂಡ ನಮ್ಮ ಕಾರುಬಾರಿನಲ್ಲಿ ಹಣ ಸೇರಿಸಲು ಮುಂದೆ ಬಂದರು.

ನನ್ನ ಹೆಂಡತಿ ತನ್ನ ಹಲಕೆಲವು ಒಡವೆಗಳನ್ನು ಮಾರಿ ನನ್ನ ಉದ್ಯಮದಲ್ಲಿ ಹಣ ಹಾಕುವೆನೆಂದು ನನ್ನನ್ನ ಒತ್ತಾಯ ಮಾಡಿದಳು. ನಾನವಳನ್ನು ದಂಡಿಸಿದೆ. ಛೆ, ಎಲ್ಲಾದರೂ ಉಂಟೆ–ಲೋಭದ ಸಮಾನ ಬೇರೆ ಶತ್ರುವಿಲ್ಲ. ಹೆಂಡತಿಯ ಹಣ ತೆಗೆದುಕೊಳ್ಳುವುದೇ? ಎಂದು ಬೋಧಿಸಿದೆ.

ಹೀಗೇ ಇನ್ನೊಬ್ಬ ವ್ಯಕ್ತಿಯ ಹಣವನ್ನೂ ನಾನು ತೆಗೆದುಕೊಳ್ಳಲಾರದೆ ಹೋದೆ.

ಅನಸೂಯ ಒಂದು ಗಂಡು ಮಗುವಿನ ತಾಯಿಯಾದ ಮೇಲೆ ವಿಧವೆಯಾಗಿ ಹೋಗಿದ್ದಳು. ಅವಳ ಗಂಡ ಎಷ್ಟು ಜಿಪುಣನೋ ಅಷ್ಟೇ ಹಣವಂತನೆಂದು ಹೆಸರು ಪಡೆದಿದ್ದ. ಅವಳ ಬಳಿ ಎರಡು ಲಕ್ಷದವರೆಗೂ ಇತ್ತೆಂದು ಜನ ಹೇಳುತ್ತಿದ್ದರು. ಮತ್ತು ಜಿಪುಣತನದಲ್ಲಿ ಹೆಂಡತಿ ಗಂಡನಿಗೆ ತಕ್ಕವಳೆಂದೂ ಹೇಳುತ್ತಿದ್ದರು. ಇರಬಹುದು ಎಂದುಕೊಂಡೆ. ಅವಳಿಗಾದ ಶಿಕ್ಷಣ, ಇದ್ದ ಸಂಪರ್ಕ ಹಾಗಿದ್ದಾಗ ಆಶ್ಚರ್ಯವೇನು?

ತನ್ನ ಹಣದಲ್ಲಿ ಸ್ವಲ್ಪವನ್ನು ನನ್ನ ಕಾರುಬಾರಿನಲ್ಲಿ ಹಾಕಲುದ್ದೇಶಿಸಿ ಅನೂ ನನಗೆ ಹೇಳಿ ಕಳುಹಿಸಿದಳು. ನನಗೆ ಸ್ವಲ್ಪ ಆಸೆಯಾಯಿತು. ಅಗತ್ಯವೂ ಇಲ್ಲದಿರಲಿಲ್ಲ. ಆದರೆ ಏನೋ ಹೆದರಿಕೆ. ಕಡೆಗೆ ಅವಳನ್ನು ನೋಡುವುದಕ್ಕೂ ಹೋಗಲಿಲ್ಲ.

ಒಮ್ಮೆ ಯಾವುದೋ ಒಂದು ಭಾರಿ ಮೊಬಲಗಿನ ಹುಂಡಿ ನನ್ನ ಬಳಿಗೆ ಬಂದು ಅದರ ಹಣ ಪಾವತಿ ಮಾಡಬೇಕಾಗಿ ಬಂತು. ಆಗ ಪ್ರಸನ್ನನು ಬಂದು "ಅಖಿಲ ಬಾಬುಗಳ ಮಗಳ ಹಣವನ್ನು ಈಗ ತೆಗೆದುಕೊಳ್ಳದೆ ಸಾಧ್ಯವಿಲ್ಲ" ಎಂದ.

ಆಗ ನಾನು "ಯಾರ ಮನೆಗಾದರೂ ಕನ್ನವಾದರೂ ಕೊರೆದೇನು. ಆದರೆ ಅವಳ ದುಡ್ಡು ನಾನು ಮುಟ್ಟೋದಿಲ್ಲ" ಎಂದುಬಿಟ್ಟೆ ಒಂದೇ ಮಾತಿನಲ್ಲಿ.

ಪ್ರಸನ್ನನು ಅಲ್ಲಿಗೆ ಬಿಡದೆ "ನೋಡಣ್ಣ, ಯಾವತ್ತಿನಿಂದ ನೀನು ಇದರ ತಲೆನೋವನ್ನು ಹಚ್ಚಿಕೊಳ್ಳುವುದು ಬಿಟ್ಟೆಯೋ ಆಗಲಿಂದ ಒಂದೇಸಮನಾಗಿ ನಷ್ಟ ಏರುತ್ತಾ ಇದೆ. ಹಣೆಯ ಮೇಲೆ ಸುಮ್ಮನೆ ಹೊಡೆದುಕೊಳ್ಳುತ್ತಾ ಹೋದರೆ ಏನಾಗುತ್ತೆ? ಹಣೆ ಜಡ್ಡುಕಟ್ಟುತ್ತೆ ಅಷ್ಟೆ" ಎಂದ.

ಏನು ಮಾಡಿದರೂ ಒಪ್ಪಲಿಲ್ಲ ನಾನು. ಮರುದಿನ ಪ್ರಸನ್ನನು ಬಂದು "ದಕ್ಷಿಣ ದೇಶದಿಂದ ಯಾವನೋ ಒಬ್ಬ ಪ್ರಖ್ಯಾತ ಜ್ಯೋತಿಷ್ಕ ಬಂದಿದ್ದಾನೆ. ಮರಾಠಿಯವನು. ಅವನ ಹತ್ತಿರ ಜಾತಕ ತೋರಿಸೋಣ, ನಡಿ" ಎಂದ.

ಸನಾತನ ದತ್ತನ ವಂಶದಲ್ಲಿ ಹುಟ್ಟಿದವನಿಗೆ ಈಗ ಜಾತಕ ನೋಡಿಸಿ ಅದೃಷ್ಟ ಪರೀಕ್ಷೆ ಮಾಡುವ ಪ್ರಮೇಯ! ದುರ್ಬಲತೆಯ ದಿನಗಳಲ್ಲಿ ಮಾನವ ಪ್ರಕೃತಿಯೊಳಗಡೆ ಸುಪ್ತವಾಗಿರುವ ಪ್ರಾಚೀನ ಕಾಲದ ಬರ್ಬರತೆಯು ಈಚೆಗೆ ಬರುತ್ತದಂತೆ. ದೃಷ್ಟವಾಗಿರುವುದೆಲ್ಲ ಭಯಂಕರವೆನ್ನಿಸಿದಾಗ ಅದೃಷ್ಟವೆನ್ನಿಸಿರುವುದು ಬಂದು ಅದನ್ನು ಎದೆಯಲ್ಲಿ ಅದುಮಿಟ್ಟುಕೊಳ್ಳಲು ಆಶಿಸುತ್ತದೆ. ಬುದ್ಧಿಯನ್ನೇ ನಂಬಿಕೊಂಡಿದ್ದು ಯಾವ ನೆಮ್ಮದಿಯೂ ಸಿಗದೆ ಹೋದಾಗ ನಿರ್ಬುದ್ಧಿಯ ಶರಣು ಹೋಗಬೇಕಾಗಿ ಬಂತು. ಜನ್ಮ ತಿಥಿ, ನಕ್ಷತ್ರ, ಲಗ್ನ ರಾಶಿಗಳನ್ನು ಗುಣಾಕಾರ ಮಾಡಿಸಲಿಕ್ಕೆ ಹೋದೆ.

ನಾನಾಗ ಸರ್ವನಾಶದ ಕಡೆಯ ಹಂತದವರೆಗೆ ಬಂದಿಳಿದಿದ್ದೇನೆಂಬುದಾಗಿ ತಿಳಿದುಬಂತು. ಆದರೆ ಈ ಬಾರಿ ಗುರು ಅನುಕೂಲನಾಗಿದ್ದಾನೆ. ಈಗ ಆತನು ನನ್ನನ್ನು ಯಾವುದೋ ಒಬ್ಬ ಹೆಂಗಸಿನ ಕಡೆಯ ಹಣದ ಸಹಾಯದಿಂದ

ಉದ್ಧರಮಾಡಿ ಅಷ್ಟೈಶ್ವರ್ಯ ಸಿಗುವಹಾಗೆ ಮಾಡುತ್ತಾನೆ ಇತ್ಯಾದಿಯಾಗಿ ನನ್ನ ಕುಂಡಲಿ ಹೇಳುತ್ತಿತ್ತಂತೆ!

ಇದರ ಮಧ್ಯೆ ಪ್ರಸನ್ನನ ಜಾಣತನವಿತ್ತೆಂಬುದಾಗಿ ನನಗೆ ಸಂದೇಹವಾಗದಿರಲಿಲ್ಲ. ಆದರೆ ಸಂದೇಹಪಡುವುದಕ್ಕೆ ಏಕೋ ಇಷ್ಟವಾಗಲೇ ಇಲ್ಲ. ಮನೆಗೆ ಹಿಂದಿರುಗಿದೊಡನೆ ಪ್ರಸನ್ನನು ನನ್ನ ಕೈಯಲ್ಲಿ ಒಂದು ಪುಸ್ತಕ ಕೊಟ್ಟು "ಅದನ್ನ ತೆಗಿ ನೋಡೋಣ" ಎಂದ. ಅದನ್ನ ತೆಗೆದೊಡನೆ ಯಾವ ಪುಟ ಹೊರಗೆ ಬಂತೋ ಅದರಲ್ಲಿ ಇಂಗ್ಲಿಷಿನಲ್ಲಿ "ವ್ಯಾಪಾರದಲ್ಲಿ ಆಶ್ಚರ್ಯಕರವಾದ ಸಫಲತೆ" ಎಂದಿತ್ತು.

ಆ ದಿನವೇ ಅನುವನ್ನು ನೋಡಲು ಹೋದೆ.

ಗಂಡನ ಸಂಗಡ ಊರೂರು ತಿರುಗುತ್ತಿದ್ದಾಗ ಬಾರಿಬಾರಿಗೂ ಮಲೇರಿಯಾ ಜ್ವರದಲ್ಲಿ ನರಳಿ ನರಳಿ ಅನಸೂಯ ಈಗ ಎಂತಹ ದೆಸೆಯಲ್ಲಿದ್ದಾಳೆಂದರೆ ಡಾಕ್ಟರರೇ ಅವಳ ಬಗ್ಗೆ ಹೆದರುತ್ತಾರೆ, ಅವಳಿಗೆ ಕ್ಷಯರೋಗವಂಟಿಕೊಂಡಿರುವುದಾಗಿ ಅವಮಾನಿಸುತ್ತಾರೆ. ಯಾವುದಾದರೂ ಒಳ್ಳೆಯ ಸ್ಥಳಕ್ಕೆ ಹೋಗಿ ಇರಲು ಹೇಳಿದರೆ ಅವಳು "ನಾನಿವತ್ತೋ ನಾಳೆಯೋ ಹೋಗಿಬಿಡುತ್ತೇನೆ. ಆದರೆ ನನ್ನ ಸುಬೋಧನ ಹಣವನ್ನು ವ್ಯರ್ಥವಾಗಿ ಖರ್ಚು ಮಾಡುವುದೇಕೆ?" ಎನ್ನುವಳು.

ಹೀಗೇ ಹೇಳುತ್ತ ಅವಳು ಮಗ ಸುಬೋಧನನ್ನೂ ಅವನ ಆಸ್ತಿಯನ್ನೂ ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಜೋಪಾನವಾಗಿ ಕಾಪಾಡಿಕೊಂಡು ಬಂದಳು.

ನಾನು ಹೋಗಿದ್ದೇ ನೋಡಿದೆ. ಅನುವಿನ ರೋಗ ಅವಳನ್ನಾಗಲೇ ಈ ಪ್ರಪಂಚದಿಂದ ದೂರ ಮಾಡಿಬಿಟ್ಟಿತ್ತು. ತಾನವಳನ್ನು ಅತಿ ದೂರದಿಂದ ನೋಡುತ್ತಿರುವಂತಿತ್ತು. ಅವಳ ಮೈಯಂತೂ ಅತ್ಯಂತ ಸ್ವಚ್ಛವಾಗಿ ಒಳಗಡೆಯಿಂದ ಯಾವುದೋ ಒಂದು ಕಾಂತಿ ಹೊರಗೆ ಬಂದು ಅವಳ ಮುಖ, ಮೈಗಳ ಮೇಲೆ ಹರಡಿಕೊಂಡಂತಿತ್ತು. ಸ್ಥೂಲವಾದದ್ದೇನಿತ್ತೋ ಅದನ್ನೆಲ್ಲ ಕ್ಷಯವಾಗುವಂತೆ ಮಾಡಿ ಅವಳ ಪ್ರಾಣ ಮಾತ್ರ ಸಾವಿನ ಹೊರ ಬಾಗಿಲಲ್ಲಿ ಸ್ವರ್ಗದ ಬೆಳಕಿನ ಮಧ್ಯೆ ಬಂದು ನಿಂತಿತ್ತು. ಮತ್ತು ಅವಳ ಅದೇ ಎರಡು ಕರುಣೆ ತುಂಬಿದ ಕಪ್ಪಾದ ಕಣ್ಣುಗಳ ರೆಪ್ಪೆಗಳೋ! ಕಂಗಳ ತಳಗಡೆ ಕಪ್ಪು ಮುಸುಗಿ ಹೇಗೆ ಕಂಡುಬರುತ್ತಿತ್ತೆಂದರೆ, ಅವಳ ದೃಷ್ಟಿಯಮೇಲೆ ಜೀವನಾಸ್ತಕಾಲದ ಸಂಜೆಯ ಛಾಯೆ ಇಳಿದು ಬಂದಿರುವಂತೆ ಅನ್ನಿಸುತ್ತಿತ್ತು.

ನೋಡಿದೊಡನೆ ನನ್ನ ಮನಸ್ಸೆಲ್ಲ ಸ್ತಬ್ಧವಾಗಿಹೋಯಿತು. ಇಂದವಳನ್ನು ಕಂಡು ಇವಳೊಬ್ಬ ದೇವಿಯೆಂದುಕೊಂಡೆ.

ನನ್ನನ್ನು ನೋಡಿದೊಡನೆ ಅನುವಿನ ಮುಖದ ಮೇಲೆ ಶಾಂತವಾದೊಂದು ಪ್ರಸನ್ನತೆಯು ಮೂಡಿತು.

ಅವಳು "ನಿನ್ನೆ ರಾತ್ರಿ ಖಾಯಿಲೆ ಸ್ವಲ್ಪ ಜಾಸ್ತಿಯಾದಾಗಲಿಂದ ನಿಮ್ಮ ವಿಷಯವನ್ನೇ ಯೋಚಿಸುತ್ತಿದ್ದೆ. ನನಗೆ ಗೊತ್ತು, ನನಗಿನ್ನು ಹೆಚ್ಚು ದಿನಗಳಿಲ್ಲ. ನಾಳಿದ್ದು ಅಣ್ಣ ತಮ್ಮಂದಿರ ಹಬ್ಬ–ರಕ್ಷಾಬಂಧ. ಅವತ್ತು ನಾನೂ ನಿಮಗೆ ಕಡೆಯ ಅಕ್ಷತೆ ಹಚ್ಚಿ ಹೋಗಬೇಕೆಂದುಕೊಂಡೆ" ಎಂದಳು.

ಅವಳೊಡನೆ ಹಣದ ಸಂಬಂಧವಾಗಿ ಏನೂ ಹೇಳಲಿಲ್ಲ. ಸುಬೋಧನಿಗೆ ಹೇಳಿಕಳುಹಿಸಿದೆ. ಅವನಿಗಾಗಿನ್ನೂ ಏಳೇ ವರುಷ. ತಾಯಿಯ ಕಣ್ಣುಗಳೇ. ಅವನನ್ನು ನೋಡಿದರೆ ಏನೋ ಒಂದು ಬಗೆಯ ಕ್ಷಣಿಕತೆಯ ಭಾವ. ಪೃಥಿವಿಯು ಅವನಿಗೆ ಪೂರ್ತಿಯಾಗಿ ಸ್ತನ್ಯ ಕೊಡುವುದನ್ನು ಮರೆತುಬಿಟ್ಟಿರುವ ಹಾಗೆ ತೋರುತ್ತಿತ್ತು. ಅವನನ್ನು ತೊಡೆಯ ಮೇಲೆ ಕೂಡಿಸಿಕೊಂಡು ಅವನ ಹಣೆಯ ಮೇಲೆ ಮುತ್ತಿಟ್ಟೆ. ಅವನು ಸುಮ್ಮನೆ ನನ್ನ ಮುಖದ ಕಡೆ ನೋಡುತ್ತ ಇದ್ದ.

ಮನೆಗೆ ಬಂದಮೇಲೆ ಪ್ರಸನ್ನನು "ಏನಾಯಿತು?" ಎಂದು ಕೇಳಿದ.

"ಇವತ್ತೇಕೋ ಸಮಯವಾಗಲಿಲ್ಲ" ಎಂದುಬಿಟ್ಟೆ.

ಅದಕ್ಕವನು "ಹುಂಡಿಯ ಅವಧಿ ಇನ್ನು ಎಂಟು ದಿನ ಮಾತ್ರ ಬಾಕಿ" ಎಂದ.

ಅನುವಿನ ಆ ಮುಖ, ಆ ಮೃತ್ಯುಸರೋವರದ ತಾವರೆ,–ಅದನ್ನು ನೋಡಿದ್ದು ನೆನಪಿಗೆ ಬಂದು ಈ ಹುಂಡಿಯ ಅವಧಿಯು ನನಗೇಕೋ ಅಷ್ಟು ಭಯಂಕರವೆಂದೆನ್ನಿಸಲಿಲ್ಲ.

ಹಲವು ದಿನಗಳಿಂದ ಲೆಕ್ಕ, ಪತ್ರಗಳನ್ನು ನೋಡುವುದು ಬಿಟ್ಟುಬಿಟ್ಟಿದ್ದೆ. ನೋಡಿದರೆ ಎಲ್ಲಿ ವಿಪತ್ತಿನ ಅಗಾಧತೆ ಕಣ್ಣಿಗೆ ಬೀಳುವುದೋ ಎಂಬ ಹೆದರಿಕೆಯಿಂದ ಕಣ್ಣು ಮುಚ್ಚಿಕೊಂಡಿದ್ದುಬಿಟ್ಟಿದ್ದೆ. ಕಣ್ಣು ಮುಚ್ಚಿಕೊಂಡೇ ಪತ್ರಗಳಿಗೆ ಸಹಿ ಮಾಡುತ್ತಿದ್ದೆ. ತಿಳಿದುಕೊಳ್ಳಲು ಪ್ರಯತ್ನಪಡುತ್ತಿರಲಿಲ್ಲ.

ಅಣ್ಣನ ಅಕ್ಷತೆಯ ಹಬ್ಬದ ದಿನ ಬೆಳಗ್ಗೆ ಪ್ರಸನ್ನನು ಕಾರುಬಾರಿನ ಜಮಾ ಖರ್ಚಿನ ಪಟ್ಟಿಯೊಂದನ್ನು ತಂದು ಬಲಾತ್ಕಾರವಾಗಿ ನನ್ನ ಮುಂದಿಟ್ಟು ಅವಸ್ಥೆ ಯಾವ ಗತಿಗೆ ಬಂದಿದೆಯೆಂಬುದನ್ನ ತೋರಿಸಿದ. ನೋಡಿದರೆ ಮೂಲಧನದ ಪೂರ್ತಿ ತಳಪಾಯವೆಲ್ಲ ಪೂರ್ತಿ ಕುಸಿದುಹೋಗಿದೆ. ಈಗ ಸಾಲದ ಹಣದಿಂದ ನೀರನ್ನೊದಗಿಸದೆ ಹೋದರೆ ದೋಣಿ ಪೂರ್ತಿ ಮುಳುಗುತ್ತದೆ.

ಯಾವ ನೆಪ ಮಾಡಿಕೊಂಡು ಹಣದ ಪ್ರಸ್ತಾಪವೆತ್ತುವುದು ಎಂದು ಯೋಚಿಸುತ್ತಲೇ ಅನುವಿನ ಮನೆಯ ಔತಣಕ್ಕೆ ಹೋದೆ. ಅಂದು ಬೃಹಸ್ಪತಿವಾರ. ಈಗಂತೂ ಹತಾಶ ಸ್ಥಿತಿಗೆ ಬಂದು ಬೃಹಸ್ಪತಿವಾರದ ಬಗ್ಗೆಯೂ ಭಯಪಡದೆ

ಇರಲಾರೆ. ಭಾಗ್ಯಹಾನಿಯಾದ ಮನುಷ್ಯ ಸ್ವಂತ ಬುದ್ಧಿಯ ಹೊರತು ಬೇರೆ ಯಾವುದರ ಮೇಲೆ ಭರವಸೆಯಿಡುವುದಕ್ಕೂ ಸಿದ್ಧನಿರುವುದಿಲ್ಲ. ಅವಳ ಮನೆಗೆ ಹೋಗುವ ಸಮಯದಲ್ಲಿ ನನ್ನ ಮನಸ್ಸಂತೂ ಕೆಟ್ಟುಹೋಗಿತ್ತು.

ಅನುವಿನ ಜ್ವರ ಹೆಚ್ಚಾಗಿತ್ತು. ಮಂಚದ ಹಾಸುಗೆ ಮೇಲೆ ಮಲಗಿದ್ದಳು. ಕೆಳಗಡೆ ನೆಲದ ಮೇಲೆ ಸುಬೋಧನು ಸುಮ್ಮನೆ ಕೂತು ಒಂದು ಇಂಗ್ಲಿಷಿನ ಚಿತ್ರದ ಪುಸ್ತಕದಿಂದ ಚಿತ್ರಗಳನ್ನು ಕತ್ತರಿಸಿ ಬೇರೊಂದು ಪುಸ್ತಕದಲ್ಲಿ ಗೋಂದಿನಿಂದ ಅಂಟಿಸುತ್ತಿದ್ದ. ಆದಷ್ಟು ಸಮಯವನ್ನು ಉಳಿಸಿಕೊಳ್ಳುವ ಉದ್ದೇಶ್ಯದಿಂದ ಬಹಳ ಹೊತ್ತಿಗೆ ಮುಂಚೆಯೇ ಬಂದುಬಿಟ್ಟಿದ್ದೆ. ಮೊದಲು ಗೊತ್ತಾಗಿದ್ದಂತೆ ನನ್ನ ಹೆಂಡತಿಯನ್ನೂ ಸಂಗಡ ಕರೆದುಕೊಂಡು ಹೋಗಬೇಕೆಂದಿತ್ತು. ಆದರೆ ಅನೂವಿನ ಸಂಬಂಧವಾಗಿ ನನ್ನ ಹೆಂಡತಿಯ ಮನಸ್ಸಿನ ಮೂಲೆಯಲ್ಲಿ ಸ್ವಲ್ಪ ಅಸೂಯೆ ಮನೆ ಮಾಡಿಕೊಂಡಿತ್ತು. ಆದ್ದರಿಂದ ಬರುವ ಸಮಯದಲ್ಲಿ ಏನೋ ನೆಪ ಹೇಳಿದಳು. ನಾನೂ ಬಲವಂತ ಮಾಡಲಿಲ್ಲ.

"ಅತ್ತಿಗೆ ಬರಲಿಲ್ಲ?" ಎಂದು ಕೇಳಿದಳು ಅನೂ.

"ಮೈ ಚೆನ್ನಾಗಿಲ್ಲ" ಎಂದೆ. ಅನೂ ನಿಟ್ಟುಸಿರು ಬಿಟ್ಟಳು. ಬೇರೇನೂ ಅನ್ನಲಿಲ್ಲ.

ನನ್ನಲ್ಲಿ ಒಂದು ದಿನ ಎಷ್ಟು ಮಾತ್ರ ಮಾಧುರ್ಯವನ್ನು ಕಾಣಿಸಿತ್ತೋ ಅದನ್ನು ತನ್ನ ಹೊಂಬೆಳಗಿನಲ್ಲಿ ಹುದುಗಿಸಿ ಆ ಶರತ್ಕಾಲದ ಸೂರ್ಯನ ತೇಜಸ್ಸು ಆ ರೋಗಿಯ ಹಾಸುಗೆಯ ಮೇಲೆ ಪಸರಿಸಿತ್ತು. ಎಷ್ಟು ಮಾತುಕಥೆ ಎಲ್ಲ ನೆನಪಿಗೆ ಬಂತು. ಆ ಹಿಂದಿನ ದಿನಗಳ ಸಣ್ಣ, ಪುಟ್ಟ ಅತಿ ಸಾಮಾನ್ಯವಾದ ವಿಷಯಗಳು ಕೂಡ ನನ್ನ ವ್ಯಾಪಾರಕ್ಕೆ ಸನ್ನಿಹಿತವಾಗಿದ್ದ ಸರ್ವನಾಶದ ಯೋಚನೆಯನ್ನೂ ಮರೆಯಿಸಿಬಿಟ್ಟು ಅದೆಷ್ಟು ಮಹತ್ವದ ವಿಷಯಗಳಾಗಿ ತೋರಿಬಂದುವೋ! ಕಾರುಬಾರಿನ ಲೆಕ್ಕಾಚಾರವೆಲ್ಲ ಎಲ್ಲೋ ಮಾಯವಾಗಿ ಹೋಯಿತು.

ಭಾಯಿಫೋಂಟಾ (ರಕ್ಷಾಬಂಧನ)ದ ಹಬ್ಬದೂಟ ಉಂಡದ್ದಾಯಿತು. ನನ್ನ ಹಣೆಯ ಮೇಲೆ ಆ ಮರಣಯಾತ್ರೆಗೆ ಹೊರಟಿದ್ದ ಹೆಂಗಸು ದೀರ್ಘಾಯುವಾಗಲೆಂದು ಹಾರೈಸಿ ತಿಲಕವನ್ನು ಹಚ್ಚಿ ನನ್ನ ಕಾಲಿನ ದೂಳನ್ನು ತೆಗೆದುಕೊಂಡಳು. ನಾನು ಮುಖ ಮರೆಮಾಡಿಕೊಂಡು ಕಣ್ಣೊರೆಸಿಕೊಂಡೆ.

ಕೋಣೆಗೆ ಬಂದು ಕೂತಾಗ ಅವಳೊಂದು ಟಿನ್ನಿನ ಪೆಟ್ಟಿಗೆಯನ್ನು ನನ್ನ ಮುಂದೆ ತಂದಿಟ್ಟಳು. ಆಮೇಲೆ "ಸುಬೋಧನಿಗೋಸ್ಕರ ಈ ಕೆಲವು ಕಂಪೆನಿ ಕಾಗದಗಳು ಇಷ್ಟು ದಿನದಿಂದ ಬೇರೆಯಾಗಿ ತೆಗೆದಿಟ್ಟಿದ್ದೆ. ಇವನ್ನು ನಿಮ್ಮ ಕೈಯಲ್ಲಿ ಕೊಡುತ್ತೇನೆ, ಇವುಗಳ ಜೊತೆಯಲ್ಲೇ ಸುಬೋಧನನ್ನೂ ನಿಮ್ಮ ಕೈಯಲ್ಲಿ ಒಪ್ಪಿಸುತ್ತೇನೆ. ಇನ್ನು ಮೇಲೆ ನಾನು ನಿಶ್ಚಿಂತೆಯಿಂದ ಸಾಯಬಲ್ಲೆ" ಎಂದಳು.

ನಾನಾಗ "ನಿನ್ನ ದಮ್ಮಯ್ಯ, ಅನೂ, ಹಣ ನಾನು ತೆಗೆದುಕೊಳ್ಳಲಾರೆ. ಸುಬೋಧನನ್ನು ನೋಡಿಕೊಳ್ಳುವ ವಿಷಯದಲ್ಲಿ ಯಾವುದೊಂದು ಕೊರತೆಯೂ ಇರದ ಹಾಗೆ ನಾನು ಮುತುವರ್ಜಿ ವಹಿಸುತ್ತೇನೆ. ಆ ವಿಷಯ ಭಾಷೆ ಕೊಡಬಲ್ಲೆ. ಆದರೆ ಹಣ ಮಾತ್ರ ಬೇರೆ ಯಾರ ಕೈಯಲ್ಲಾದರೂ ಕೊಡು" ಎಂದೆ.

ಅನು ತಲೆಯಲ್ಲಾಡಿಸುತ್ತ "ಊಹೂಂ, ಈ ಹಣ ವಶಪಡಿಸಿಕೊಳ್ಳಬೇಕೆಂದು ಅದೆಷ್ಟು ಜನ ಕೈಚಾಚಿಕೊಂಡು ಕೂತಿದ್ದಾರೋ ಗೊತ್ತೇ? ಅಂಥವರ ಕೈಯಲ್ಲಿ ಹಾಕಬೇಕು ಅಂತೀರೇನು?" ಎಂದಳು.

ನಾನು ಉತ್ತರ ಹೇಳದೆ ಸುಮ್ಮನಿದ್ದೆ. ಅನು ಆಗ "ಒಂದು ದಿನ ಮರೆಯಿಂದ ನಾನು ಕೇಳಿಸಿಕೊಂಡೆ. ಏನು ಗೊತ್ತೆ? ಡಾಕ್ಟರು ಹೇಳುತ್ತಾಯಿದ್ದರು-ಸುಬೋಧನ ದೇಹಸ್ಥಿತಿ ಎಷ್ಟರಮಟ್ಟಿಗೆ ಕೆಟ್ಟಿದೆಯೆಂದರೆ ಅವನು ಬಹಳ ದಿನ ಬದುಕುವ ಆಸೆಯೇ ಇಲ್ಲ ಅಂತ. ಅದನ್ನ ಕೇಳಿದಾರಭ್ಯ ಸುಮ್ಮನೆ ದಿಗಿಲುಪಡುತಾಯಿದ್ದೀನಿ-ನನ್ನ ಸಾವೆಲ್ಲಿ ನಿಧಾನವಾದೀತೋ ಅಂತ. ಈಗ ಸ್ವಲ್ಪವಾದರೂ ಆಸೆ ಇಟ್ಟುಕೊಂಡು ಸಾಯಬಹುದು, ಡಾಕ್ಟರರ ಮಾತು ಸುಳ್ಳಾದರೂ ಆಗಬಹುದು ಎಂಬುದಾಗಿ. ನಲವತ್ತೇಳು ಸಾವಿರ ರೂಪಾಯಿಗಳಷ್ಟು ಕಂಪೆನಿ ಷೇರುಗಳಿವೆ. ಇನ್ನೂ ಸ್ವಲ್ಪ ಹಣ ಅಲ್ಲಿಂದ ಇಲ್ಲಿಂದ ಬರಬೇಕಾಗಿದೆ. ಈ ಹಣದ ಸಹಾಯದಿಂದ ಸುಬೋಧನ ಪಥ್ಯ ಮತ್ತು ಚಿಕಿತ್ಸೆ ಚೆನ್ನಾಗಿ ನಡೆಯಬಹುದು. ಒಂದುಪಕ್ಷ ದೇವರಿಚ್ಛೆಯಿಂದ ಅವನನ್ನ ಅಲ್ಪ ವಯಸ್ಸಿನಲ್ಲೇ ಹತ್ತಿರ ಕರೆದುಕೊಂಡರೆ ಆಗ ಇವನ ಹೆಸರಿನಲ್ಲೇ ಈ ಹಣವನ್ನು ಯಾವುದಾದರೂ ಒಂದು ಒಳ್ಳೆಯ ಕೆಲಸಕ್ಕೆ ಉಪಯೋಗಿಸಬಹುದು" ಎಂದಳು.

ನಾನಾಗ "ನೋಡು, ಅನೂ ನೀನು ನನ್ನ ಮೇಲೆ ಎಷ್ಟರಮಟ್ಟಿಗೆ ವಿಶ್ವಾಸವಿಟ್ಟಿದ್ದೀಯೋ ಅಷ್ಟರಮಟ್ಟಿಗೆ ನಾನೇ ನನ್ನ ಮೇಲೆ ವಿಶ್ವಾಸವಿಡಲಾರೆ" ಎಂದೆ.

ಕೇಳಿ ಅನೂ ಸ್ವಲ್ಪ ನಕ್ಕಳು. ನನ್ನ ಬಾಯಲ್ಲಿ ಇಂತಹ ಮಾತು ಕಪಟವಿನಯದಂತೆ ಕೇಳಿಸಿರಬೇಕು ಅವಳಿಗೆ. ಜೀಳ್ಕೊಡುವಾಗ ಅನೂ ಪೆಟ್ಟಿಗೆಯನ್ನು ತೆಗೆದು ಕಂಪನಿಯ ಆ ಕಾಗದಗಳನ್ನೂ ಮತ್ತು ಕೆಲವು ನೋಟುಗಳ ಕಂತೆಗಳನ್ನೂ ನನಗೆ ಲೆಕ್ಕಮಾಡಿ ಕೊಟ್ಟಳು. ಅವಳು ಬರೆಸಿದ್ದ ಮರಣ ಪತ್ರದಲ್ಲಿ ನಮೂದಿಸಿದ್ದನ್ನು ನಾನು ನೋಡಿದೆ-ಸುಬೋಧನು ಮಕ್ಕಳಿಲ್ಲದೆ ಅಥವಾ ಅದಕ್ಕೆ ಮೊದಲು ಪ್ರಾಪ್ತ ವಯಸ್ಕನಾಗುವುದಕ್ಕೆ ಮುಂಚೆಯೇ ಮೃತನಾದರೆ ಸಂಪತ್ತಿಗೆಲ್ಲ ನಾನೆ ಉತ್ತರಾಧಿಕಾರಿ!

ನಾನಾಗ ಹೇಳದೆ ಇರದಾದೆ-"ಅನೂ, ಹೀಗೆ ಮಾಡಬಹುದೆ ನೀನು? ನನ್ನ ಸ್ವಾರ್ಥದ ಸಂಗಡ ಈ ಸಂಪತ್ತನ್ನೇಕೆ ಹೆಣೆದು ಹಾಕಿದೆ?"

ಅನೂ ಹೇಳಿದಳು "ನನಗೆ ಚೆನ್ನಾಗಿ ಗೊತ್ತು. ನನ್ನ ಮಗನ ಸ್ವಾರ್ಥದ ಮುಂದೆ ನಿಮ್ಮ ಸ್ವಾರ್ಥವೆಂದಿಗೂ ಅಡ್ಡ ಬರುವುದಿಲ್ಲ."

ಆಗ ನಾನು "ಯಾವ ಮನುಷ್ಯನನ್ನೂ ಇಷ್ಟರಮಟ್ಟಿಗೆ ನಂಬಬಾರದು. ಅದು ವ್ಯಾಪಾರದ ಲಕ್ಷಣವಲ್ಲ" ಎಂದೆ.

ಅನು ನಗುತ್ತ "ನನಗೆ ನೀವು ಗೊತ್ತು, ನಿಮ್ಮ ಧರ್ಮ ಗೊತ್ತು, ವ್ಯಾಪಾರದ ವಿಷಯ ನನಗೇನು ಗೊತ್ತು, ಗೊಡ್ಡು ಹೆಂಗಸಿಗೆ?" ಎಂದಳು.

ಪೆಟ್ಟಿಗೆಯೊಳಗೆ ಕಾಗದ, ನೋಟುಗಳಲ್ಲದೆ ಕೆಲವು ಒಡವೆಗಳೂ ಇದ್ದುವು. ಅವುಗಳನ್ನು ತೋರಿಸುತ್ತ ಅನೂ "ಸುಬೋಧನು ಬದುಕಿದ್ದು ಮದುವೆ ಮಾಡಿಕೊಂಡಾಗ ಈ ಒಡವೆಗಳನ್ನು ಸೊಸೆಗೆ ನನ್ನ ಆಶೀರ್ವಾದಗಳ ಸಮೇತ ಕೊಡುವುದು. ಮತ್ತು ಈ ಕಂಠೀಸರ ನನ್ನ ಅತ್ತಿಗೆಗೆ ಕೊಟ್ಟ ಕಾಣಿಕೆ. ನನ್ನ ಮೇಲಿನ ಆಣೆ, ಇದನ್ನು ಬೇಡ ಅನ್ನದೆ ತೊಟ್ಟುಕೊಳ್ಳಬೇಕು ಅಂತ ಹೇಳಿ," ಎಂದಳು. ಹೀಗೆಲ್ಲ ಹೇಳಿ ಅನೂ ಇದ್ದಕ್ಕಿದ್ದಹಾಗೆ ನೆಲದ ಮೇಲೆ ಸಾಷ್ಟಾಂಗವಾಗಿ ಎರಗಿ ನನ್ನ ಕಾಲಿಗೆ ನಮಸ್ಕಾರ ಮಾಡಿದಳು. ಹಾಗೆ ಮಾಡುವಾಗ ಅವಳ ಕಂಗಳೆರಡೂ ತುಂಬಿ ಬಂದುವು. ಎದ್ದು ನಿಂತು ಬೇಗ ಮುಖವನ್ನು ಒಂದು ಕಡೆಗೆ ತಿರುಗಿಸಿಕೊಂಡು ಹೊರಟುಹೋದಳು. ಇದೇ ನನಗೆ ಅವಳು ಅರ್ಪಿಸಿದ ಕಡೆಯ ಪ್ರಣಾಮ.

ಇದಾದ ಎರಡು ದಿನಗಳಾದ ಮೇಲೆ ಸಂಜೆಯ ವೇಳೆ ಹಠಾತ್ತಾಗಿ ಶ್ವಾಸ ನಿಂತುಹೋಗಿ ಅವಳು ಈ ಪ್ರಪಂಚ ಬಿಟ್ಟುಹೋದಳು. ನನಗೆ ಹೇಳಿಕಳುಹಿಸುವುದಕ್ಕೂ ಅವಕಾಶವಾಗಲಿಲ್ಲ.

ಅಣ್ಣನ ಹಬ್ಬದ ಊಟ ಉಂಡು, ಟಿನ್ನಿನ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಗಾಡಿಯಲ್ಲಿ ಕೂತು ಹೊರಟು ಮನೆಯ ಮುಂದೆ ಇಳಿದೆನೋ ಇಲ್ಲವೋ ಪ್ರಸನ್ನ ನನಗಾಗಿ ದಾರಿಗಾಯುತ್ತ ಕೂತಿದ್ದನ್ನು ಕಂಡೆ. "ಅಣ್ಣಾ ಹೋದ ಕೆಲಸ ಹಣ್ಣು ತಾನೆ?" ಎಂದ. ನಾನು ತಟಕ್ಕನೆ "ಇಲ್ಲ, ಈ ಹಣದ ಮೇಲೆ ಯಾರೂ ಕೈಹಾಕುವ ಹಾಗಿಲ್ಲ" ಎಂದುಬಿಟ್ಟೆ.

"ಆದರೆ...?"

"ಆದರೆ ಗೀದರೆ ಇಲ್ಲ...ಏನಾದರೂ ಸರಿಯೇ. ಈ ಹಣ ಮಾತ್ರ ನಮ್ಮ ಕಾರುಬಾರಿಗೆ ಆಗುವುದಿಲ್ಲ."

"ಹಾಗಾದರೆ ನಿನ್ನ ಅಂತ್ಯಸಂಸ್ಕಾರಕ್ಕೆ ಆಗತ್ತೆ ಬಿಡು." ಎಂದು ಗುಡುಗಿದ ಪ್ರಸನ್ನ.

ಅನೂವಿನ ಸಾವಿನ ಅನಂತರ ಸುಬೋಧನು ನಮ್ಮ ಮನೆಗೆ ಬಂದು ನನ್ನ ಮಗ ನಿತ್ಯಧನನನ್ನು ಸಂಗಾತಿಯಾಗಿ ಪಡೆದ.

ಕಥೆಪುಸ್ತಕಗಳನ್ನೋದಿದವರು ತಿಳಿದಿರಬಹುದು-ಏನೆಂದರೆ, ಮನುಷ್ಯರ ಮನಸ್ಸಿನಲ್ಲಿ ದೊಡ್ಡ ಪರಿವರ್ತನೆಯಾದರೆ ಅದು ನಿಧಾನವಾಗಿ, ಕ್ರಮೇಣ ಆಗುತ್ತದೆ ಎಂಬುದಾಗಿ. ನಿಜವಾಗಿ ಅದಕ್ಕೆ ವಿರುದ್ಧವೇ! ಇದ್ದಲಿಗೆ ಉರಿ ಹತ್ತಬೇಕಾದರೆ ನಿಧಾನವಾಗಿ ಹತ್ತತ್ತೆ. ಆದರೆ ದೊಡ್ಡ ದೊಡ್ಡ ಬೆಂಕಿ ಹು ಹು ಎಂದು ಕಣ್ಣು ಮುಚ್ಚಿ ತೆಗೆಯುವುದರೊಳಗಾಗಿ ಹತ್ತಿಕೊಂಡುಬಿಡುತ್ತದೆ. ಅತಿ ಸ್ವಲ್ಪ ಸಮಯದಲ್ಲೇ ಸುಬೋಧನ ಮೇಲೆ ನನ್ನ ಮನಸ್ಸಿನಲ್ಲೊಂದು ವಿದ್ವೇಷವು ನೋಡ ನೋಡುತ್ತ ಬೆಳೆದುಕೊಂಡು ಬಂತೆಂದು ನಾನೇನಾದರೂ ಒಪ್ಪಿಕೊಂಡರೆ ಎಲ್ಲರೂ ಅದನ್ನು ನಂಬದೆ ಅದಕ್ಕೆ ವಿಸ್ತಾರವಾದ ನಿದರ್ಶನಗಳನ್ನು ಕೇಳಬಹುದು-ಸುಬೋಧನು ಅನಾಥನಿರಬಹುದು. ಅತಿ ಕ್ಷೀಣ ಪ್ರಾಣನಿರಬಹುದು, ನೋಡಲಿಕ್ಕೆ ಸುಂದರನೂ ಇರಬಹುದು, ಎಲ್ಲದಕ್ಕಿಂತಲೂ ಮುಖ್ಯವಾಗಿ ಅವನ ತಾಯಿ ಅನೂ, ಬೇರೆ ಯಾರೂ ಅಲ್ಲ. ಆದರೆ ಅವನ ಮಾತು, ಕಥೆ ಅವನ ಓಡಾಟ, ಆಟ ಪಾಟಗಳು, ಎಲ್ಲವೂ ಅದೇಕೋ ಹಗಲು ರಾತ್ರಿ ನನ್ನ ಮನಸ್ಸನ್ನು ಚುಚ್ಚಲು ತೊಡಗಿದುವು.

ಒಟ್ಟಿನಲ್ಲಿ, ಯಾವಾಗಲೂ ನನ್ನ ದೃಷ್ಟಿಯಲ್ಲಿ ಸಮಯವೇ ಕೆಟ್ಟುಹೋಗಿರುವಂತೆ ಅನ್ನಿಸಹತ್ತಿತ್ತು. ಸುಬೋಧನ ಹಣದಲ್ಲಿ ಒಂದು ಬಿಡಿಗಾಸನ್ನು ಕೂಡ ಮುಟ್ಟುವುದಿಲ್ಲವೆಂದು ಹಠಮಾಡಿದ್ದೆ-ಆದರೂ ಆ ಹಣವನ್ನು ಉಪಯೋಗಿಸದೆ ಹೋದರೆ ವಿಧಿಯೇ ಇಲ್ಲ, ಎಂಬಂಥ ಅವಸ್ಥೆ. ಕಟ್ಟಕಡೆಗೆ ಒಂದು ದಿನ ಮಹಾವಿಪತ್ತಿನಲ್ಲಿ ಬಿದ್ದು ಸ್ವಲ್ಪ ಹಣ ಉಪಯೋಗಿಸಿದೆ. ಇಷ್ಟರಿಂದಲೇ ನನ್ನ ಮನೋಯಂತ್ರವು ಬಿಗಡಾಯಿಸಿಬಿಟ್ಟಿತು. ಸುಬೋಧನ ಮುಂದೆ ಮುಖ ತೋರಿಸಲಿಕ್ಕೇ ನಾಚುಗೆಯಾಗಹತ್ತಿತು. ಮೊದಲು ಮೊದಲು ಅವನ ದೃಷ್ಟಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದೆ. ಆಮೇಲೆ ಅವನು ಕಣ್ಣಿಗೆ ಬಿದ್ದಾಗಲೆಲ್ಲ ಅವನ ಮೇಲೆ ಸುಮ್ಮನೆ ಉರಿದುಬೀಳುತ್ತಿದ್ದೆ.

ಉರಿದುಬೀಳುವುದಕ್ಕೆ ಮುಖ್ಯ ನೆಪ, ಅವನ ಸ್ವಭಾವ. ನಾನೋ ಕೆಲಸದಾಳು. ಯಾವ ಕೆಲಸವನ್ನಾಗಲೀ ಬೇಗ ಬೇಗ ಮುಗಿಸಿಬಿಡುವುದು ನನ್ನ ಅಭ್ಯಾಸ. ಆದರೆ ಈ ಸುಬೋಧನ ವಿಚಿತ್ರ ಸ್ವಭಾವ ಒಂದೇನೆಂದರೆ ಏನಾದರೂ ಕೇಳಿದರೆ ತತ್‌ಕ್ಷಣ ಉತ್ತರ ಕೊಡಲಾಗುತ್ತಿರಲಿಲ್ಲ ಅವನಿಗೆ. ಅವನೆಲ್ಲಿದ್ದಾನೋ ಅಲ್ಲಿ ಅವನಿಲ್ಲ, ಬೇರೆಲ್ಲೋ ಇರುವಹಾಗೆ ರಸ್ತೆಯ ಪಕ್ಕದಲ್ಲಿ ನಿಂತು, ಕಿಟಕಿಯ ಪಕ್ಕದಲ್ಲಿ ಸಲಾಕೆಗಳನ್ನು ಹಿಡಿದುಕೊಂಡು ಘಂಟೆಯಾದ ಮೇಲೆ ಘಂಟೆ ಕಾಲ ಕಳೆಯುತ್ತಾನೆ.ಏನು ನೋಡುತ್ತಾನೆ, ಏನು ಯೋಚನೆ ಮಾಡುತ್ತಾನೆ, ಅದು ಅವನಿಗೇ ಗೊತ್ತು. ನನಗಂತೂ ಅದು ಸಹಿಸದು. ಸುಬೋಧನು ಬಹುಕಾಲದಿಂದ ರೋಗಿಷ್ಠ ತಾಯ ಕೈಯಲ್ಲಿ ಬೆಳೆದವನು. ಆಡುವುದಕ್ಕೆ ಸಮ ವಯಸ್ಸಿನ ಹುಡುಗರಾರೂ ಇರಲಿಲ್ಲ. ಆದ್ದರಿಂದಲೇ ಅವನು ತನ್ನ ಮನಸ್ಸನ್ನೇ ಸಂಗಾತಿಯಾಗಿ ಮಾಡಿಕೊಂಡು, ಆಟವಾಡುತ್ತಿದ್ದ.

ಇಂಥ ನಮೂನೆ ಹುಡುಗರಲ್ಲಿ ಒಂದು ವಿಚಿತ್ರವೇನೆಂದರೆ, ಅವರಿಗೆ ದುಃಖವಾದಾಗ ಚೆನ್ನಾಗಿ ಅಳುವುದಕ್ಕೂ ಬರುವುದಿಲ್ಲ. ದುಃಖ ಮರೆಯುವುದಕ್ಕೂ ಬರುವುದಿಲ್ಲ. ಈ ಕಾರಣದಿಂದ ಸುಬೋಧನನ್ನು ಕರೆದರೂ ತತ್ಕ್ಷಣ ಜವಾಬು ಬರುವುದಿಲ್ಲ. ಏನಾದರೂ ಕೆಲಸ ಹೇಳಿದರೂ ಅದನ್ನು ಮರೆತುಬಿಡುವನು. ತನ್ನ ಸಾಮಾನುಗಳನ್ನು ಸುಮ್ಮನೆ ಕಳೆದುಕೊಳ್ಳುತ್ತಿದ್ದ. ಆಗೇನಾದರೂ ಬೈದರೆ ಏನೂ ಹೇಳದೆ ಸುಮ್ಮನೆ ಮುಖ ನೋಡುವನು; ಹಾಗೆ ನೋಡುತ್ತಾ ಇರುವುದೇ ಅವನ ದುಃಖವೆಂಬಂತೆ. ಅವನ ದೃಷ್ಟಾಂತ ನನ್ನ ಮಗನ ಸ್ವಾಭಾವಿಕ ಬೆಳವಣಿಗೆಗೆ ಬಹಳ ಕೆಟ್ಟದೆಂದು ನಾನು ಹೇಳತೊಡಗಿದೆ. ಇನ್ನೊಂದು ನನಗೆ ಬಂದಿದ್ದ ಕಷ್ಟ- ಅವನನ್ನು ನೋಡಿದಲಾಗಾಯಿತು ನನ್ನಲ್ಲಿ ಅವನ ಬಗ್ಗೆ ಏನೋ ಒಂದು ಆಂತರಿಕವಾದ ಇಷ್ಟ ಹುಟ್ಟಿಕೊಂಡಿತ್ತು. ಮತ್ತು ಅವನ ಪ್ರಕೃತಿಯು ಪೂರ್ತಿಯಾಗಿ ಅನ್ಯ ರೀತಿಯಾಗಿದ್ದುದರಿಂದ ಅವನ ಕಡೆ ನನ್ನ ಹೃದಯದ ಎಳೆತ ಇನ್ನೂ ಹೆಚ್ಚಾಯಿತು.

ಬೇರೆಯವರ ಸ್ವಭಾವ ಸಂಶೋಧನೆ ಮಾಡುವುದು ನಮ್ಮ ಮನೆತನದವರ ಸಂಪ್ರದಾಯ. ಇದರಲ್ಲಿ ನಮಗೆಷ್ಟು ಪಟುತ್ವವೋ ಉತ್ಸಾಹವೂ ಅಷ್ಟೆ. ಸುಬೋಧನ ಸ್ವಭಾವವು ಕರ್ಮವರ್ಗದ್ದಲ್ಲವೆಂಬುದಾಗಿ ಅವನನ್ನು ಚೆನ್ನಾಗಿ ಗದರಿಸಿ ಅವನಿಂದ ಕೆಲಸ ಮಾಡಿಸಿಕೊಳ್ಳತೊಡಗಿದೆ. ಅವನೆಷ್ಟು ಸಲ ತಪ್ಪು ಮಾಡಿದರೂ ನಾನೆದುರಿಗೆ ನಿಂತು ಅವನ್ನೆಲ್ಲ ಪುನಃ ಸರಿಯಾಗಿ ಮಾಡುವವರೆಗೂ ಬಿಡುತ್ತಿರಲಿಲ್ಲ.

ಅವನಿಗೆ ಇನ್ನೂ ಒಂದು ಅಭ್ಯಾಸವಿತ್ತು. ಅದು ಅವಳ ತಾಯಿಗೂ ಇತ್ತು. ಅದು ಹಗಲು-ಕನಸು ಕಾಣುವ ಸ್ವಭಾವ. ತನ್ನ ಬಗ್ಗೆ ತನ್ನ ಸುತ್ತಲ ಆವರಣದ ಬಗ್ಗೆ ನಾನಾ ವಿಧವಾಗಿ ಕಲ್ಪನೆ ಕಟ್ಟುವುದು. ಕಿಟಕಿಯ ಹೊರಗಡೆ ಕಾಣುತ್ತಿದ್ದ ಸೀಬೆಯ ಗಿಡಕ್ಕೆ ಅವನೊಂದು ಅದ್ಭುತವಾದ ಬೇರೊಂದು ಹೆಸರಿಟ್ಟಿದ್ದ. ನನ್ನ ಹೆಂಡತಿ ಕೂಡ ಹೇಳಿದಳು. ಒಬ್ಬನೇ ನಿಂತುಕೊಂಡು ಆ ಗಿಡದ ಜೊತೆಯಲ್ಲಿ ಏನೇನೋ ಹುಚ್ಚು ಹುಚ್ಚಾಗಿ ಮಾತಾಡುತ್ತಿದ್ದನಂತೆ. ಹಾಸುಗೆಯನ್ನು ಆಟದ ಬಯಲು ಎಂದು ಕಲ್ಪಿಸಿಕೊಳ್ಳುತ್ತಿದ್ದ. ತಲೆದಿಂಬುಗಳನ್ನು ದನ ಕರುಗಳು ಎಂದು ಭಾವಿಸಿ ತಾನು ಅವುಗಳನ್ನು ಕಾಯುವ ಗೊಲ್ಲ ಎಂಬ ಭ್ರಮೆಯಲ್ಲಿ ಮಲಗುವ ಕೋಣೆಯಲ್ಲಿ ಆಟವಾಡುವುದು ಎಷ್ಟು ಮೊದ್ದುತನ, ಅಪ್ರಯೋಜಕ ಎಂಬುದನ್ನು ಅವನ ಬಾಯಿಂದ ಒಪ್ಪಿಸಬೇಕಾದರೆ ನನಗೆಷ್ಟು ಪ್ರಯಸವಾಗುತ್ತಿತ್ತೋ! ಅವನು ಮಾತಾಡಿದರೆ ತಾನೆ! ನಾನವನನ್ನು ಶಿಕ್ಷೆ ಮಾಡಿದಷ್ಟೂ ಅವನ ತಪ್ಪುಗಳು ಇನ್ನೂ ಹೆಚ್ಚಾಗುತ್ತಿದ್ದುವು. ನನ್ನನ್ನು ನೋಡಿದೊಡನೆ ಅವನು ಗಾಬರಿಬೀಳುತ್ತಿದ್ದ. ನನ್ನ ಬಾಯಿಂದ ಬರುವ ಸಾಧಾರಣ ಮಾತನ್ನೂ ಅವನು ಅರ್ಥ ಮಾಡಿಕೊಳ್ಳಲಾಗುತ್ತಿರಲಿಲ್ಲ.

ಬೇರೇನೂ ಇಲ್ಲ, ಒಮ್ಮೆ ಹೃದಯು ರೇಗಲಿಕ್ಕೆ ಆರಂಭಿಸಿದರೆ, ತಡೆದಿಟ್ಟುಕೊಳ್ಳಲು ಹೊರಗಿನಿಂದ ಯಾವ ಪ್ರೇರಣೆಯೂ ಇಲ್ಲದೆ ಹೋದರೆ ಆಗ ಆ ಕೋಪ ಅಷ್ಟಕ್ಕಷ್ಟು ವೃದ್ಧಿಯಾಗುತ್ತದೆ. ಅದಕ್ಕೆ ಹೊಸ ಕಾರಣ ಬೇಕೆಂದೂ ಇರುವುದಿಲ್ಲ. ಯಾವ ಮನುಷ್ಯನನ್ನಾದರೂ ಮೂರು ನಾಲ್ಕು ಬಾರಿ ಮೂರ್ಖನೆಂದ ಮೇಲೂ ಅವನದಕ್ಕೆ ಪ್ರತಿಮಾಡದಿದ್ದರೆ ಆಗ ಆ ಮೂರು ನಾಲ್ಕು ಬಾರಿ ಅಂದುದೇ ಐದನೇ ಬಾರಿ ಅನ್ನುವುದಕ್ಕೆ ಅವಕಾಶ ಸೃಷ್ಟಿಮಾಡುತ್ತದೆ. ಬೇರೆ ಉಪಕರಣದ ಆವಶ್ಯಕತೆಯೇ ಇಲ್ಲ. ಸುಬೋಧನ ಮೇಲೆ ಸುಮ್ಮನೆ ಉರಿದುಬೀಳುವುದೇ ನನಗೆ ಅಭ್ಯಾಸವಾಗಿಹೋಗಿ ಅದನ್ನ ಬಿಡುವುದೇ ಅಸಾಧ್ಯವಾಗಿಹೋಯಿತು.

ಇದೇ ರೀತಿಯಾಗಿ ಐದು ವರುಷಗಳು ಕಳೆದುವು. ಸುಬೋಧನ ವಯಸ್ಸು ಹನ್ನೆರಡು ವರುಷಗಳಾದಾಗ ಅವನ ಕಂಪೆನಿಯ ಕಾಗದಗಳೂ ಮತ್ತು ಅವನ ತಾಯಿಯ ಒಡವೆಗಳೂ ಕರಗಿಹೋಗಿ ನನ್ನ ಲೆಕ್ಕದ ಪುಸ್ತಕದಲ್ಲಿ ಹಲಕೆಲವು ಮಸಿಯ ಅಂಕಿಗಳಾಗಿ ಮಾರ್ಪಾಡಾಗಿದ್ದುವು.

ಅನೂ ಇವನ್ನೆಲ್ಲ ಉಯಿಲಿನಲ್ಲಿ ನನಗೇ ಬಿಟ್ಟುಕೊಟ್ಟಿದ್ದಾಳೆ ಎಂದು ನನ್ನ ಮನಸ್ಸಿಗೇ ಹೇಳಿಕೊಂಡೆ. ನಡುವೆ ಸುಬೋಧನಿರುವುದು ನಿಜ, ಆದರೆ ಅವನೊಂದು ಬರೇ ನೆರಳು ಮಾತ್ರ–ಇದ್ದರೂ ಒಂದೆ, ಇಲ್ಲದಿದ್ದರೂ ಒಂದೇ. ಎಂದೋ ನಾನೇ ಪಡೆಯಬೇಕಾಗಿದ್ದ ಹಣವನ್ನು ಮೊದಲಲ್ಲೇ ಸ್ವಲ್ಪ ಖರ್ಚು ಮಾಡಿದರೆ ಪಾಪವೆಲ್ಲಿಯದು? ಎಳೆಯ ವಯಸ್ಸಿನಿಂದಲೂ ನನಗೆ ವಾತರೋಗವಿತ್ತು. ಈಚೆಗೆ ಕೆಲವು ದಿನಗಳಿಂದ ಅದು ಸ್ವಲ್ಪ ಉಲ್ಬಣಾವಸ್ಥೆಗೆ ತಿರುಗಿತ್ತು. ಕೆಲಸದ ಆಳಾಗಿರುವಂಥವನನ್ನು ಸ್ಥಿರನಾಗಿರುವ ಹಾಗೆ ಕೂಡಿಸಿಟ್ಟುಬಿಟ್ಟರೆ ಅವನು ಸುತ್ತಮುತ್ತಲಿರುವವದನ್ನೆಲ್ಲ ಅಸ್ಥಿರಮಾಡಿ ಬಿಡುವನು. ಆ ಕೆಲವು ದಿನಗಳು ನನ್ನ ಹೆಂಡತಿ, ನನ್ನ ಮಗ, ಸುಬೋಧ, ಮನೆಯ ಆಳುಕಾಳುಗಳು ಯಾರಿಗೂ ಮನಶ್ಶಾಂತಿಯಿರಲಿಲ್ಲ.

ಈ ಕಡೆ ನನ್ನ ಗುರುತಿರುವ ಕೆಲವು ಜನ ವಿಧವೆಯರು ನನ್ನ ಬಳಿ ಠೇವಣಾತಿಯಿಟ್ಟಿದ್ದ ಹಣದ ಮೇಲೆ ಕೆಲವು ತಿಂಗಳುಗಳಿಂದ ಬಡ್ಡಿ ಪಾವತಿ ಮಾಡುವುದನ್ನು ನಿಲ್ಲಿಸಲಾಗಿತ್ತು. ಹೀಗೆ ಹಿಂದೆಂದೂ ಆಗಲು ಬಿಟ್ಟಿರಲಿಲ್ಲ. ಈ ಕಾರಣದಿಂದ ಅವರೆಲ್ಲ ಉದ್ವಿಗ್ನರಾಗಿ ನನ್ನನ್ನು ತಗಾದೆ ಮಾಡತೊಡಗಿದರು. ನಾನು ಪ್ರಸನ್ನನನ್ನು ತಗಾದೆ ಮಾಡಿದೆ. ಅವನು ಸುಮ್ಮನೆ ನಾಳೆ, ನಾಳಿದ್ದು ಎಂದು ದಿನ ತಳ್ಳಿಹಾಕಲು ತೊಡಗಿದ. ಕಡೆಗೆ ಕೊಡುವೆನೆಂದು ನಿಶ್ಚಯಮಾಡಿದ್ದ ದಿನ ಬೆಳಗ್ಗೆಯಿಂದ ಸಾಲಗಾರರು ಕಾಯುತ್ತ ಕೂತಿದ್ದರು. ಆದರೆ ಪ್ರಸನ್ನ ಬರಲೇ ಇಲ್ಲ.

ನಾನು ನನ್ನ ಮಗ ನಿತ್ಯನನ್ನು ಕುರಿತು "ಹೋಗೋ, ಸುಬೋಧನನ್ನು ಕರೆಯೋ" ಎಂದೆ.

"ಸುಬೋಧ ಮಲಗಿದ್ದಾನೆ" ಎಂದ ಅವನು.

ನನಗೆ ರೇಗಿತು. "ಮಲಗಿದ್ದಾನೇ? ಈಗಾಗಲೇ ಹನ್ನೊಂದು ಗಂಟೆ, ಇನ್ನೂ ಮಲಗೇ ಇದ್ದಾನೆ?" ಎಂದು ಕೂಗಿದೆ.

ಸುಬೋಧನು ಹೆದರಿಕೊಂಡು ಹೆದರಿಕೊಂಡೇ ನನ್ನ ಮುಂದೆ ಬಂದು ನಿಂತ.

"ಹೋಗೋ, ಈ ತತ್‌ಕ್ಷಣ ಪ್ರಸನ್ನನು ಎಲ್ಲಿದ್ದರೂ ಸರಿ ಹೋಗಿ ಕರೆದುಕೊಂಡು ಬಾ" ಎಂದು ಅಪ್ಪಣೆ ಮಾಡಿದೆ.

ಸದಾ ನನ್ನ ಆಜ್ಞೆಗಳನ್ನು ನಡೆಸಿ ಅಭ್ಯಾಸವಾಗಿದ್ದ ಸುಬೋಧ ಇಂಥ ಕೆಲಸಗಳಲ್ಲಿ ಪಳಗಿಬಿಟ್ಟಿದ್ದ. ಯಾರನ್ನು ಎಲ್ಲಿ, ಯಾವ ಸ್ಥಳದಲ್ಲಿ ಹುಡುಕಬೇಕಾಗುತ್ತೆ ಇಂಥವೆಲ್ಲ ಅವನಿಗೆ ಗೊತ್ತು.

ಹೊತ್ತು ಒಂದು ಘಂಟೆ ಹೊಡೆಯಿತು. ಎರಡು ಹೊಡೆಯಿತು. ಮೂರೂ ಹೊಡೆಯಿತು. ಸುಬೋಧ ಬರಲೇ ಇಲ್ಲ, ಯಾಕೋ. ಈ ಕಡೆ ಹಣಕ್ಕಾಗಿ ಕಾದು ಕೂತಿದ್ದವರೆಲ್ಲ ತಾಳ್ಮೆ ಕಳೆದುಕೊಳ್ಳುತ್ತ ಬಂದರು. ಏನುಮಾಡಲಿ. ಏನು ಮಾಡಿದರೂ ಈ ಸುಬೋಧನ ಮೈಗಳ್ಳತನ, ಉದಾಸೀನತೆಗಳನ್ನು ಹೋಗಲಾಡಿಸಲಾಗಿಲ್ಲ. ಬರಬರುತ್ತಾ ಅವನ ಜಡತ್ವ ಮಿತಿಮೀರುತ್ತ ಹೋಗುತ್ತಲಿದೆ. ಕೂತ ಅಂದರೆ ಏಳವೊಲ್ಲ. ಆ ಸ್ಥಳ ಬಿಟ್ಟು ಕದಲಬೇಕಾದರೆ ಘಂಟೆಗಳಾಗಬೇಕು. ಒಂದೊಂದು ದಿನ ನೋಡಿದರೆ ಸಂಜೆ ಐದು ಘಂಟೆ ಹೊತ್ತಿನಲ್ಲೂ ಅವನು ಹಾಸುಗೆಯ ಮೇಲಿರುತ್ತಾನೆ. ಬೆಳಗ್ಗೆಯಂತೂ ಅವನನ್ನು ಹಾಸುಗೆಯಿಂದ ಬಲವಂತವಾಗಿ ಎಬ್ಬಿಸಬೇಕಾಗುತ್ತದೆ. ಅವನು ನಡೆಯುವಾಗ ಕೂಡ ನೆಲಕ್ಕೆ ಕಾಲು ಅಂಟಿಕೊಂಡಿರುವ ಹಾಗೆ, ಎಳೆದುಕೊಂಡು ಎಳೆದುಕೊಂಡು ನಡೆಯುತ್ತಾನೆ. ನಾನು ಸುಬೋಧನನ್ನು ಸೋಮಾರಿ, ಹುಟ್ಟು ಮೈಗಳ್ಳ, ಜಡಭರತ ಮಹಾ ಮಹೋಪಾಧ್ಯಾಯ ಎಂದೆಲ್ಲ ಬೈಯುತ್ತಿದ್ದೆ. ಅವನು ನಾಚುಗೆಯಿಂದ ತಲೆ ತಗ್ಗಿಸಿಕೊಳ್ಳುತಿದ್ದ. ಒಂದು ದಿನ ಅವನನ್ನು ಕುರಿತು "ಹೇಳೋ ನೋಡೋಣ, ಪ್ರಶಾಂತ ಮಹಾ ಸಾಗರವಾದ ಮೇಲೆ ಯಾವ ಮಹಾಸಾಗರವಿದೆ ಹೇಳು..." ಎಂದಾಗ ಅವನು ಜವಾಬು ಕೊಡಲಾಗದೆ ಸುಮ್ಮನಿದ್ದರೆ ನಾನು ಕೂಡಲೆ "ಗೊತ್ತಿಲ್ಲವೇನೋ, ಅದು ನೀನೇ...ಆಲಸ್ಯ ಮಹಾಸಾಗರ" ಎಂದೆ. ಸಾಧಾರಣವಾಗಿ ಸುಬೋಧನು ನನ್ನೆದುರಿನಲ್ಲಿ ಎಂದೂ ಅತ್ತದ್ದಿಲ್ಲ. ಆದರೆ ಆ ದಿನ ಅವನ ಕಣ್ಣಿಂದ ಗಳಗಳ ನೀರು ಸುರಿಯತೊಡಗಿತು. ಅವನು ಏಟು, ಬೈಗಳು ಏನನ್ನಾದರೂ ತಡೆದುಕೊಳ್ಳುತ್ತಿದ್ದ – ಆದರೆ ಅಣಕ, ಅವಹೇಳನ ಮಾತ್ರ ಅವನ ಮರ್ಮಕ್ಕೆ ಹೋಗಿ ತಗುಲಿ ನೋಯಿಸುತ್ತಿತ್ತು.

ಹೊತ್ತು ಇನ್ನೂ ಕಳೆಯಿತು. ಮನೆಯಲ್ಲಿ ಯಾರೂ ದೀಪ ಹೊತ್ತಿಸಲಿಲ್ಲ. ನಾನು ಕೂಗಾಡುತ್ತಲೇ ಇದ್ದೆ. ಯಾರೂ ಕಿವಿಗೊಡಲಿಲ್ಲ. ಮನೆಯವರೆಲ್ಲರ ಮೇಲೂ

ನನ್ನ ಕೋಪವೇರಿತು. ಆಮೇಲೆ ಹಠಾತ್ತಾಗಿ ನನಗೊಂದು ಸಂದೇಹವಾಯಿತು. ಬಹುಶಃ ಬಡ್ಡಿಯ ಹಣವನ್ನು ಪ್ರಸನ್ನನು ಸುಬೋಧನ ಕೈಯಲ್ಲಿ ಕೊಟ್ಟಿದ್ದಾನೇನೋ. ಸುಬೋಧನದನ್ನು ತೆಗೆದುಕೊಂಡೆಲ್ಲೋ ಓಡಿ ಹೋಗಿದ್ದಾನೆ. ನಮ್ಮ ಮನೆಯಲ್ಲಿ ಸುಬೋಧನಿಗೆ ಅಷ್ಟು ಆರಾಮವಿರಲಿಲ್ಲ ಎನ್ನುವುದು ನನಗೆ ಗೊತ್ತು.

ಎಳೆತನದಿಂದಲೂ ನೆಮ್ಮದಿ, ಆರಾಮ ಎಂಬ ವಸ್ತುವನ್ನ ಉಪೇಕ್ಷಿಮಾಡುವುದು ನನ್ನ ಸಂಪ್ರದಾಯ. ಅದೂ ಸಣ್ಣ ಹುಡುಗರ ಬಗ್ಗೆಯಂತೂ ಹೆಚ್ಚು ನಿಷೇಧ. ಆದ್ದರಿಂದ ಈ ವಿಷಯದಲ್ಲಿ ನನ್ನ ಮನಸ್ಸಿಗೆ ಯಾವ ಪರಿತಾಪವೂ ಆಗಲಿಲ್ಲ. ಆದರೆ ಈ ಕಾರಣದಿಂದಾಗಿ ಸುಬೋಧನು ಬಡ್ಡಿ ಹಣವನ್ನು ತೆಗೆದುಕೊಂಡು ಓಡಿಹೋಗುವಂತಾದುದು ನನಗೆ ತಡೆಯಲಾಗದ ಸಿಟ್ಟು ಬರಲವಕಾಶವಾಯಿತು. ಎಷ್ಟು ಕಪಟಿ, ಕೃತಘ್ನ ಎಂದೆಲ್ಲ, ಅವನನ್ನು ಬೈದುಕೊಂಡೆ, ಮನಸ್ಸಿನಲ್ಲೇ. ಈ ವಯಸ್ಸಿನಲ್ಲೇ ಕಳ್ಳತನ ಶುರುಮಾಡಿದ ಅಂದರೆ ಇವನ ಗತಿಯೇನಾಗುತ್ತದೆ ಇನ್ನು ಮುಂದೆ ? ನನ್ನ ಹತ್ತಿರ ಇದ್ದುಕೊಂಡು, ನನ್ನ ಮನೆಯಲ್ಲಿ ವಾಸಮಾಡಿಕೊಂಡಿದ್ದೂ ಕೂಡ ಈ ಹುಡುಗನಿಗೆ ಇಂಥ ದುರ್ವಿದ್ಯೆ ಬಂದದ್ದು ಹೇಗೆ ? ಸುಬೋಧನು ಹಣ ತೆಗೆದುಕೊಂಡು ಪರಾರಿಯಾಗಿದ್ದಾನೆಂಬ ವಿಷಯದಲ್ಲಿ ನನಗೆ ಯಾವ ಸಂದೇಹನೂ ಇರಲಿಲ್ಲ.

ಈಗಲೇ ಅವನ ಹಿಂದೆ ಬೆನ್ನಟ್ಟಿ ಹೋಗಿ ಅವನನ್ನೆಲ್ಲಿದ್ದರೂ ಹಿಡಿದು ತರಬೇಕು, ಚೆನ್ನಾಗಿ ಮೈ ಮುರಿಯುವ ಹಾಗೆ ಅವನಿಗೆ ಹೊಡೆದು, ಒದ್ದುಹಾಕದೆ ಹೋದರೆ ಉಳಿಗಾಲವಿಲ್ಲ ಎಂದೆನ್ನಿಸಿತು.

ಇಂಥ ಸಮಯದಲ್ಲಿ ನನ್ನ ಕತ್ತಲ ಮನೆಯೊಳಗೆ ಸುಬೋಧನು ಬಂದು ನಿಂತ. ಅವನನ್ನು ನೋಡಿದೊಡನೆ ನನಗೆ ಸಿಟ್ಟು ಎಷ್ಟು ಮೇಲೇರಿತೆಂದರೆ ಏನು ಮಾಡಿದರೂ ನನ್ನ ಬಾಯಿಂದ ಮಾತೇ ಹೊರಡಲಿಲ್ಲ.

"ದುಡ್ಡು ಸಿಕ್ಕಲಿಲ್ಲ" ಎಂದ ಸುಬೋಧ.

ನಾನೇನವನಿಗೆ ದುಡ್ಡು ತಾರೆಂದು ಹೇಳಿರಲಿಲ್ಲ. ಹಾಗಾದರೆ ಅವನೇಕೆ ದುಡ್ಡು ಸಿಕ್ಕಲಿಲ್ಲ ಎಂದು ಹೇಳಿದುದು ? ಖಂಡಿತ ಅವನಿಗೆ ದುಡ್ಡು ಸಿಕ್ಕಿದೆ, ಅದನ್ನು ಕದ್ದೇ ಇದಾನೆ ಅವನು. ಎಲ್ಲೋ ಬಚ್ಚಿಟ್ಟಿದ್ದಾನೆ. ಇವನಂಥ 'ಒಳ್ಳೇ ಸಾಧು' ಪ್ರಾಣಿಗಳೇ ಗೋಮುಖವ್ಯಾಘ್ರಗಳು!

ನಾನು ಬಲು ಕಷ್ಟದಿಂದ ಗಂಟಲು ಸರಿಮಾಡಿಕೊಂಡು ಗಂಭೀರವಾಗಿ "ಎಲ್ಲೀ ....ಒಳ್ಳೇ ಮಾತಲ್ಲಿ ದುಡ್ಡು ತೆಗೆ ಈಚೆ!" ಎಂದೆ.

ಅವನೂ ಅಧಟುತನ ತೋರುತ್ತ ಗಂಟಲು ಸರಿಮಾಡಿಕೊಂಡು "ಇಲ್ಲ, ಕೊಡೋದಿಲ್ಲ, ನೀವೇನು ಮಾಡುತ್ತೀರೋ ಮಾಡಿಕೊಳ್ಳಿ" ಎಂದುಬಿಟ್ಟ.

ನನ್ನ ಸಹನೆಯ ಕಟ್ಟೆ ಒಡೆದುಹೋಯಿತು ಆಗ. ಹತ್ತಿರದಲ್ಲೊಂದು ದೊಣ್ಣೆಯಿತ್ತು. ಸ್ವಲ್ಪವೂ ಹಿಂಜರಿಯದೆ ಅದನ್ನೆತ್ತಿ ಅವನ ತಲೆಯ ಕಡೆ ಗುರಿಯಿಟ್ಟು ಬಲವಾಗಿ ಬೀಸಿದೆ. ದೊಡ್ಡದಾಗಿ ಏಟು ಬಿದ್ದು ಅವನು ನೆಲದ ಮೇಲೆ ತತ್‌ಕ್ಷಣ ಬಿದ್ದುಬಿಟ್ಟ. ನನ್ನ ಎದೆ ಧಸಕ್ಕೆಂದಿತು. ಹೆಸರು ಹಿಡಿದು ಕೂಗಿದೆ. ದನಿಯೇ ಇಲ್ಲ. ಹತ್ತಿರ ಹೋಗಿ ಏನಾಗಿದೆಯೆಂದು ನೋಡಲು ನನ್ನ ಧೈರ್ಯವೇ ಅಲ್ಲದೆ ಶಕ್ತಿ ಕೂಡ ಉಡುಗಿ ಹೋಗಿತ್ತು. ಏನುಮಾಡಿದರೂ ಕದಲುವುದಕ್ಕೇ ಆಗಲಿಲ್ಲ. ಮೆಲ್ಲಗೆ ಕೈಚಾಚಿ ಮೈಯನ್ನು ಅಲುಗಾಡಿಸಲು ಹೋದೆ. ದುಪ್ಪಟಿಯೆಲ್ಲಾ ಒದ್ದೆ. ಅಯ್ಯೊ, ಇದು ರಕ್ತ! ಕ್ರಮೇಣ ರಕ್ತ ಸುತ್ತ ಹರಡುತ್ತ ಬಂತು. ಕ್ರಮೇಣ ನಾನಿದ್ದ ಕಡೆ ನಾಲ್ಕೂದಿಕ್ಕು ರಕ್ತದಿಂದ ತುಂಬಿಹೋಯಿತು. ನನ್ನ ಕೋಣೆಯ ತೆರೆದ ಕಿಟಕಿಯ ಕಡೆಯಿಂದ ನೋಡಿದರೆ ಸಂಜೆಯ ತಾರೆ ಕಾಣಬರುತ್ತಿತ್ತು. ನಾನು ಅದನ್ನು ನೋಡಲಾಗದೆ ಕಣ್ಣನ್ನು ಅಲ್ಲಿಂದ ತಿರುಗಿಸಿದೆ. ನನಗೆ ಹಠಾತ್ತಾಗಿ ಅನ್ನಿಸಿದ್ದೇನೆಂದರೆ ಆ ಸಂಜೆಯ ತಾರೆಯೇ ಸೋದರ ತಿಲಕದ ಹಬ್ಬದ ದಿನ ನನ್ನ ಹಣೆಗೆ ಹಚ್ಚಿದ್ದ ಚಂದನದ ತಿಲಕ! ಸುಬೋಧನ ಮೇಲೆ ನನಗೆ ಇಷ್ಟು ದಿನ ಇದ್ದ ಅನ್ಯಾಯವಾದ ಆಕ್ರೋಶ, ದುರ್ಭಾವನೆಗಳೆಲ್ಲ ಒಂದು ಗಳಿಗೆಯೊಳಗಾಗಿ ಎಲ್ಲಿ ಮಾಯವಾದುವೋ! ಅವನು ಅನೂವಿನ ಹೃದಯದಲ್ಲಿ ಒಂದಿಷ್ಟು ತಾಣ ಪಡೆಯಲು ಆಶಿಸಿ ದಾರಿಯರಸುತ್ತಿದ್ದ. ಅಂಥವನನ್ನು ನಾನೇನು ಮಾಡಿಬಿಟ್ಟೆ! ನಾನೆಂಥ ಕಟುಕ! ಅಯ್ಯೊ, ಏನು ಮಾಡಿಬಿಟ್ಟೆ! ನಾನೇನು ಮಾಡಿಬಿಟ್ಟೆ! ಭಗವಂತ! ನೀನೆಂಥ ದುರ್ಬುದ್ಧಿ ಕೊಟ್ಟೆ ನನಗೆ! ನನಗೇನು ಅಷ್ಟು ಹಣ ಅಗತ್ಯವಿದ್ದುದು? ನನ್ನ ಇಡೀ ಕಾರುಬಾರನ್ನೆಲ್ಲ ಬಿಸಾಟು ಸಂಸಾರದಲ್ಲಿ ಕೇವಲ ಈ ರೋಗಿಷ್ಠನಾದ, ಕೃಶನಾದ ಹುಡುಗನ ಬಳಿ ನನ್ನ ಧರ್ಮ, ಕರ್ತವ್ಯಗಳನ್ನು ಕಾಪಾಡಿಕೊಳ್ಳಬಲ್ಲವನಾಗಿದ್ದರೆ ಧನ್ಯನಾಗಿರಬಹುದಾಗಿತ್ತು!

ಕ್ರಮೇಣ ಭಯವಾಗುತ್ತ ಬಂತು. ಯಾರಾದರೂ ಬಂದುಬಿಟ್ಟರೆ ಏನು ಗತಿ! ನಾನು ಮಾಡಿದ್ದ ಈ ಘೋರವನ್ನು ನೋಡಿಬಿಟ್ಟರೆ ನಾನು ಸತ್ತ ಹಾಗೇ ! ಸದ್ಯ, ಯಾರೂ ಬರದೇ ಇರಲಿ, ದೇವರೆ ; ಬಂದರೂ ಕೈಯಲ್ಲಿ ದೀಪ ಹಿಡಿದು ಬರದಿರಲಿ ! ಈ ಕತ್ತಲು ಹೀಗೇ ಇರಲಿ ! ಒಂದುಗಳಿಗೆಯಷ್ಟು ಕೂಡ ಕತ್ತಲು ಕಳೆಯದೆ ಇರಲಿ ! ಸದಾ ಇದ್ದುಕೊಂಡು ಹೋಗಲಿ, ಹೀಗೇ ! ನಾಳೆ ಬೆಳಗ್ಗೆಯೂ ಸೂರ್ಯ ಹುಟ್ಟದಿರಲಿ ! ಇಡೀ ಈ ಜಗತ್ತೇ, ಈ ಸೃಷ್ಟಿಯೇ ಸುಳ್ಳಾದರೂ ಸರಿ, ಈ ಕತ್ತಲು ಹೀಗೇ ನಿಬಿಡವಾಗಿ ಹರಡಿಕೊಂಡು ನನ್ನನ್ನೂ, ಇಲ್ಲಿ ಜ್ಞಾನವಿಲ್ಲದೇ ಬಿದ್ದಿರುವ ಹುಡುಗನನ್ನೂ ಶಾಶ್ವತವಾಗಿ ಅಡಗಿಸಿರಲಿ !

ಯಾರದೋ ಕಾಲುಸಪ್ಪಳ ! ಪೋಲೀಸಿರಬಹುದೇ ! ಹೇಗೆ ತಿಳಿಯಿತು ಸುದ್ದಿ ಇವರಿಗೆ ! ಇವರು ಕೇಳಿದರೆ ಏನು ಹೇಳಲಿ – ಯಾವ ಸುಳ್ಳನ್ನು ಸೃಷ್ಟಿಮಾಡಿಕೊಂಡು ವಿವರ ಕೊಡಲಿ ? ಏನೂ ತೋಚುವುದೇ ಇಲ್ಲವಲ್ಲ !

ಧಡಾರೆಂದು ಬಾಗಿಲು ತೆಗೆಯಲ್ಪಟ್ಟಿತು ! ಯಾರೋ ಬಂದೇಬಿಟ್ಟರು ! ನಾನು ತಲೆಯಿಂದ ಕಾಲಿನವರೆಗೂ ನಡುಗಿಬಿಟ್ಟೆ ! ಅಯ್ಯೊ, ಇದೇನಿದು ! ಕಣ್ಣು ಬಿಚ್ಚಿ ನೋಡುತ್ತೇನೆ, ಕತ್ತಲಿಲ್ಲವೇ ಇಲ್ಲ...ಬಿಸಿಲು...ಬಿಸಿಲಿನ್ನೂ ಇದೆ. ಕತ್ತಲಾಗೇ ಇರಲಿಲ್ಲ....ನಾನು ನಿದ್ದೆಮಾಡಿದ್ದೆ ಇದುವರೆಗೆ !

ಬಾಗಿಲು ತೆಗೆದುಕೊಂಡು ಬಂದವನು ಬೇರಾರೂ ಅಲ್ಲ, ಸುಬೋಧ ! ಅವನು ಬಂದದ್ದರಿಂದಲೇ ನನಗೆ ಎಚ್ಚರವಾದುದು !

ಸುಬೋಧನು ಹಾಟ್‌ಖೋಲಾ, ಬಡಾಬಜಾರ್, ಬೇಲಿಯಾಘಾಟಾ ಮುಂತಾದ ಮೊಹಲ್ಲೆಗಳಲ್ಲೆಲ್ಲ, ಎಲ್ಲೆಲ್ಲಿ ಪ್ರಸನ್ನನನ್ನ ಹುಡುಕಿ ಕಾಣುವ ಸಂಭವವಿತ್ತೋ ಅಲ್ಲೆಲ್ಲ, ಇಡೀ ದಿನ ಅಲೆದಿದ್ದ. ಏನಾದರೂ ಮಾಡಿ, ಹೇಗಾದರೂ ಸರಿ, ಅವನನ್ನ ಹುಡುಕಿಕೊಂಡು ಬರಲಾಗದೆ ಹೋದೆನಲ್ಲ, ಎಂಬ ಭಯದಿಂದಲೋ ಏನೋ ಅವನ ಮುಖ ಬಣ್ಣಗೆಟ್ಟುಹೋಗಿತ್ತು.

ಇಷ್ಟು ದಿನಗಳಾದ ಮೇಲೆ ನೋಡಿದೆ...ಎಷ್ಟು ಚೆನ್ನಾಗಿದೆ ಇವನ ಮುಖ! ಎಷ್ಟು ಮರುಕದಿಂದ ತುಂಬಿವೆ, ಇವನ ಕಣ್ಣುಗಳು !

ನಾನವನನ್ನ ನೋಡಿದ್ದೇ, ಎರಡು ಕೈಗಳನ್ನೂ ಚಾಚಿ "ಬಾ, ಬಾಪ್ಪ ಸುಬೋಧ, ಬಾ ನನ್ನ ಹತ್ತಿರ" ಎಂದು ಗದ್ಗದನಾಗಿ ಕರೆದೆ.

ಅವನು ನನ್ನ ಮಾತನ್ನ ಅರ್ಥಮಾಡಿಕೊಳ್ಳಲಾಗದವನಂತೆ ನೋಡಿದ. ಅವನು ಬಹುಶಃ ನಾನು ವ್ಯಂಗ್ಯವಾಗಿ ಮಾತಾಡುತ್ತಿದ್ದೇನೆಂದುಕೊಂಡಿರಬಹುದು.

ನನ್ನ ಕಡೆ ಕಣ್ಣರಳಿಸಿ ಮಿಕಮಿಕ ನೋಡತೊಡಗಿದ. ಸ್ವಲ್ಪ ಹೊತ್ತು ಹಾಗೇ ನಿಂತಿದ್ದು ಆಮೇಲೆ ಹಠಾತ್ತಾಗಿ ಮೂರ್ಛಿತನಾಗಿ ನೆಲದ ಮೇಲೆ ಬಿದ್ದುಬಿಟ್ಟ.

ಒಂದು ಕ್ಷಣದಲ್ಲಿ ನನ್ನ ವಾತ ರೋಗದ ಬಲಹೀನತೆ ಎಲ್ಲಿ ಮಾಯವಾಯಿತೋ ! ನಾನವನ ಕಡೆ ಮಿಂಚಿನ ವೇಗದಲ್ಲಿ ಓಡಿ ಎರಡೂ ಕೈಗಳಿಂದ ಅವನನ್ನೆತ್ತಿಕೊಂಡು ಬಂದು ಮಂಚದ ಹಾಸುಗೆಯ ಮೇಲೆ ಮಲಗಿಸಿದೆ. ಕೋಣೆಯ ಮೂಲೆಯೊಂದರಲ್ಲಿದ್ದ ಹೂಜಿಯಲ್ಲಿ ತಣ್ಣೀರಿತ್ತು. ಆ ನೀರನ್ನು ಅವನ ಮುಖದ ಮೇಲೂ, ತಲೆಯ ಮೇಲೂ ಚಿಮುಕಿಸಿದೆ. ಏನು ಮಾಡಿದರೂ ಅವನಿಗೆ ಜ್ಞಾನ ಬರಲಿಲ್ಲ.

ಡಾಕ್ಟರನ್ನು ಕರೆದುಕೊಂಡು ಬಾರೆಂದು ಹೇಳಿ ಕಳುಹಿಸಿದೆ. ಡಾಕ್ಟರು ಬಂದು ಅವನ ಅವಸ್ಥೆಯನ್ನು ಕಂಡು ವಿಸ್ಮಿತರಾದರು. "ಈ ಹುಡುಗ ಮಿತಿಮೀರಿದ ದೇಹ

ಶ್ರಮದಿಂದ ಜೀವಬಿಡುವ ಸ್ಥಿತಿಗೆ ಬಂದುಬಿಟ್ಟಿದ್ದಾನೆ. ಅದ್ಯಾವಕಾರಣದಿಂದ ಹೀಗಾಗಲು ಸಾಧ್ಯವಾಯಿತು ?" ಎಂದು ಪ್ರಶ್ನಿಸಿದರು.

ನಾನು ಹೇಳಿಬಿಟ್ಟೆ "ಇವತ್ತು ಯಾವುದೋ ಕಾರಣಕ್ಕಾಗಿ ಇವನಿಗೆ ಇಡೀ ದಿವಸ ಅಲೆದು ಆಯಾಸಪಡುವಹಾಗಾಯಿತು."

ಅದಕ್ಕೆ ಡಾಕ್ಟರು "ಇದು ಒಂದು ದಿನದ ಕೆಲಸವಲ್ಲ. ತಿಳಿದಮಟ್ಟಿಗೆ ಬಹಳ ಕಾಲದಿಂದಲೂ ಇವನಿಗೆ ಕ್ಷಯವಿದ್ದ ಹಾಗೆ ಕಾಣುತ್ತದೆ, ಯಾರೂ ಲಕ್ಷ್ಯಕೊಟ್ಟ ಹಾಗೆ ತೋರುವುದಿಲ್ಲ" ಎಂದರು.

ಕೂಡಲೆ ಇಂಜಕ್ಷನ್ ಕೊಟ್ಟು ಶಕ್ತಿವರ್ಧಕ ಔಷಧಿಯನ್ನು ಕುಡಿಸಿ ಡಾಕ್ಟರು ಸುಬೋಧನಿಗೆ ಮತ್ತೆ ಚೈತನ್ಯ ಬರುವ ಹಾಗೆ ಮಾಡಿ ಹೊರಟುಹೋದರು. ಹೋಗುವಾಗ "ಬಹಳ ಶುಶ್ರೂಷೆಮಾಡಿ ಅತಿ ಜಾಗರೂಕತೆಯಿಂದ ನೋಡಿಕೊಂಡರೆ ಹುಡುಗ ಬದುಕಿದರೂ ಬದುಕಬಹುದು. ಆದರೆ ಇವನ ಶರೀರದೊಳಗಣ ಪ್ರಾಣಶಕ್ತಿಯೇ ನಿಶ್ಶೇಷವಾಗಿ ಹೋಗಿದೆ. ನನಗನ್ನಿಸುತ್ತದೆ – ಕೊನೆಯ ಕೆಲದಿನಗಳಿಂದ ಈ ಹುಡುಗ ಬರೇ ಮನಸ್ಸಿನ ಬಲದಿಂದಲೇ ಓಡಾಟ ಮಾಡುತ್ತಿದ್ದ ಅಂತ..." ಎಂದರು.

ನಾನು ನನ್ನ ರೋಗವನ್ನು ಮರೆತುಹೋದೆ. ಸುಬೋಧನನ್ನು ನನ್ನ ಹಾಸುಗೆಯ ಮೇಲೆ ಮಲಗಿಸಿ ಹಗಲು ರಾತ್ರಿ ಶುಶ್ರೂಷೆಮಾಡಿದೆ. ಡಾಕ್ಟರಿಗೆ ಫೀಜು ಕೊಡಬೇಕಲ್ಲ – ಎಲ್ಲಿ ತರಲಿ ? ಮನೆಯಲ್ಲಿ ಬಿಡಿಕಾಸಿಲ್ಲ. ಹೆಂಡತಿಯ ಒಡವೆಗಳ ಸಂದೂಕವನ್ನು ತೆಗೆದೆ, ಅನಸೂಯ ನನ್ನವಳಿಗೆ ಉಪಹಾರವಾಗಿ ಕೊಟ್ಟಿದ್ದ ಚಂದ್ರಹಾರವನ್ನು ಬೇರೆ ತೆಗೆದು ಅವಳ ಕೈಯಲ್ಲಿಟ್ಟು ಉಳಿದ ಒಡವೆಗಳನ್ನೆಲ್ಲ ಮಾರವಾಡಿಯ ಬಳಿ ಅಡವಿಟ್ಟು ಹಣ ಸಾಲವಾಗಿ ತಂದೆ.

ಆದರೇನು ? ಹಣವೊಂದರಿಂದ ಮನುಷ್ಯ ಜೀವವನ್ನ ಉಳಿಸಿಕೊಳ್ಳಲಾದೀತೆ? ಇವನ ಪ್ರಾಣವನ್ನು ನಾನಿದುವರೆಗೆ ತುಳಿದು ತುಳಿದು ನಿಶ್ಶೇಷಮಾಡಿಬಿಟ್ಟಿದ್ದೆ. ಯಾವ ಸ್ನೇಹವೆಂಬ ಅನ್ನದಿಂದ ಇವನನ್ನು ದಿನ ದಿನವೂ ವಂಚಿತನಾಗಿ ಮಾಡಿದ್ದೆನೋ, ಇಂದು ಅದನ್ನು ಹೃದಯದ ತುಂಬ ತುಂಬಿಸಿ ತಂದಿಟ್ಟೆ ಅವನ ಮುಂದೆ, ಆದರೇನು ! ಅವನದನ್ನು ತೆಗೆದುಕೊಳ್ಳಲಾಗದೆ ಹೋದ, ಬರಿಗೈಯಲ್ಲೇ ತನ್ನ ತಾಯ ಬಳಿಗೆ ಹೊರಟುಹೋದ.

೧೧. ಕಡೆಯ ಇರುಳು

೧

"ಅತ್ತೇ ?"

"ಮಲಗಿಕೊಳ್ಳೋ ಯತೀನ್, ರಾತ್ರಿ ಬಹಳ ಹೊತ್ತು ಆಗಿದೆ."

"ರಾತ್ರಿಯಾಗಲಿ ಬಿಡು. ನನಗೆ ದಿನ ಇರುವುದು ಅಷ್ಟರಲ್ಲೇ ಇದೆ. ನಾನು ಹೇಳುತ್ತಾ ಇದ್ದೆನಲ್ಲ ? ಮಣಿಯನ್ನ ಅವಳ ತಂದೆಯ ಮನೆಗೆ ... ಅಯ್ಯೋ, ಮರತೇಹೋದೆ, ಅವಳ ತಂದೆ ಈಗೆಲ್ಲಿ-?"

"ಸೀತಾರಾಮಪುರದಲ್ಲಿ."

"ಹ್ಹಾ...ಸೀತಾರಾಮಪುರದಲ್ಲಿ ! ಅಲ್ಲಿಗೆ ಮಣಿಯನ್ನು ಕಳುಹಿಸಿಬಿಡು. ಇನ್ನೂ ಎಷ್ಟು ದಿನ ಅಂತ ಮಾಡಿಯಾಳು ರೋಗಿಯ ಸೇವೆ ? ಅವಳ ಮೈಯಲ್ಲಿ ಕೂಡ ಅಂಥ ಶಕ್ತಿಯಿಲ್ಲ."

"ನೀನು ಹೇಳೋದೂ ಚೆನ್ನಾಯಿತು ಬಿಡು. ಅಲ್ಲಾ, ನಿನ್ನನ್ನ ಈ ಅವಸ್ಥೆಯಲ್ಲಿ ಬಿಟ್ಟುಬಿಟ್ಟು ಅವಳು ತಾನೇ ಹೇಗೆ ಹೋದಾಳು ಹೇಳು ?"

"ಡಾಕ್ಟರು ಹೇಳಿದ ವಿಷಯ ಅವಳೇನಾದರೂ ಕೇಳಿಸಿಕೊಂಡುಬಿಟ್ಟಳಾ?"

"ಕೇಳಿಸಿಕೊಳ್ಳಲೇಬೇಕೆ ? ಕಣ್ಣಲ್ಲಿ ಕಾಣುವುದಿಲ್ಲವೇ, ಏನು ಸಮಾಚಾರ ! ಅವತ್ತಿನ ದಿನ ತವರುಮನೆಗೆ ಹೋಗುವ ಮಾತೆತ್ತಿದ ಮಾತ್ರಕ್ಕೆ ಗೊಳೋ ಅಂತ ಅಳೋದಕ್ಕೆ ಶುರುಮಾಡಿದಳು. ಸಮಾಧಾನ ಮಾಡಲಿಕ್ಕೆ ಎಷ್ಟು ಕಷ್ಟವಾಯಿತೋ !"

ಅತ್ತೆಯು ಹೇಳಿದ ಈ ಮಾತಿನಲ್ಲಿ ಎಷ್ಟು ನಿಜವೋ, ಎಷ್ಟು ಸುಳ್ಳೋ ಅವಳಿಗೇ ಗೊತ್ತು.

ಮಣಿಯ ಜೊತೆಯಲ್ಲಿ ಅವಳಿಗೆ ಅಂದು ನಡೆದ ಮಾತುಕಥೆಯ ಧಾಟಿ ಈ ರೀತಿ —

"ಅಲ್ಲವೇ, ಮಣೀ, ನಿಮ್ಮ ತಂದೇ ಮನೆಯಲ್ಲಿ ಏನಾದರೂ ವಿಶೇಷವೇನೆ? ನಿಮ್ಮ ದೊಡ್ಡಪ್ಪನ ಮಗ, ಅನಾಥಬಂಧು ಬಂದಿದ್ದನಲ್ಲ ಬೆಳಗ್ಗೆ?"

"ಹೌದತ್ತೆ, ನಮ್ಮಮ್ಮ ಹೇಳಿಕಳುಹಿಸಿದಾಳೆ. ಬರುವ ಶುಕ್ರವಾರ ನನ್ನ ತಂಗಿಗೆ ಅನ್ನಪ್ರಾಶನ ಮಾಡಿಸುತ್ತಾರೆ. ಅದಕ್ಕಾಗೇ ನನ್ನನ್ನ..."

"ಸಂತೋಷವಮ್ಮ...ಆಗಲಿಬಿಡು. ಒಂದು ಎರಡೆಳೆ ಚಿನ್ನದ ಸರ ಮಾಡಿಸಿ ಕಳುಹಿಸಿಬಿಡು. ನಿಮ್ಮಮ್ಮನಿಗೆ ಸಂತೋಷವಾಗುತ್ತೆ."

"ಇಲ್ಲ, ನಾನೇ ಹೋಗಬೇಕು ಅಂತ ಅಂದುಕೊಂಡಿದ್ದೇನೆ. ನನ್ನ ತಂಗಿಯನ್ನ ನಾನು ನೋಡೇ ಇಲ್ಲ ಇದುವರೆಗೆ ; – ನೋಡಬೇಕು ಅಂತ ಅನ್ನಿಸುತ್ತೆ."

"ಇದೇನೇ ಹೀಗಂತೀ ? ಚೆನ್ನಾಯಿತು ಬಿಡು, ಯತೀನನ್ನ ಈ ಅವಸ್ಥೆಯಲ್ಲಿ ಬಿಟ್ಟುಹೋಗುತ್ತೀಯೇನೆ ? ಡಾಕ್ಟರು ಏನು ಹೇಳಿದರು ಗೊತ್ತಾ ನಿನಗೆ ?"

"ಡಾಕ್ಟರು ಹೇಳಿದ ಪ್ರಕಾರ – ಇನ್ನೂ ಅಂಥ ಗಾಬರಿಯಾಗುವ ಹಾಗೆ ಏನೂ –"

"ಅವರು ಏನು ಹೇಳಿದರೇನೆ ? ಅವನ ಅವಸ್ಥೆ ಹೀಗಿರುವುದನ್ನು ಕಣ್ಣಾರೆ ನೋಡೀ ಕೂಡ ಅದು ಹ್ಯಾಗೇ ಹೋಗಲಿಕ್ಕೆ ಮನಸ್ಸು ಬರುತ್ತೆ ?"

"ಅತ್ತೇ, ನನ್ನ ಮೂರು ಜನ ತಮ್ಮಂದಿರಾದ ಮೇಲೆ ನಮ್ಮಮ್ಮನಿಗೆ ಈಗ ಅತಿಶಯದ ಹೆಣ್ಣುಮಗು ಆಗಿದೆ. – ಚೆನ್ನಾಗಿ, ಅದ್ದೂರಿಯಾಗಿ ಅನ್ನಪ್ರಾಶನ ಮಾಡುತ್ತಾರಂತೆ, ನಾನು ಹೋಗದೇ ಹೋದರೆ ಅಮ್ಮ ಏನೆಂದುಕೊಂಡಾಳು. ನೀವೇ ಹೇಳಿ...."

"ನಿಮ್ಮಮ್ಮ ಏನೆಂದುಕೊಳ್ಳುತಾಳೋ ನನಗೆ ಗೊತ್ತಿಲ್ಲ. ಆದರೆ ನಿನ್ನ ಗಂಡನನ್ನ ಈ ಅವಸ್ಥೆಯಲ್ಲಿ ಬಿಟ್ಟು ಬಿಟ್ಟು ನೀನೇನಾದರೂ ಹೋದೆ ನೋಡು, ನಿಮ್ಮಪ್ಪನಂತೂ ಚೆನ್ನಾಗಿ ರೇಗುತಾರೆ ನಿನ್ನ ಮೇಲೆ...ನೋಡಿಕೊಂಡಿರು."

"ಅದು ಗೊತ್ತು ಅತ್ತೆ, ಅದಕ್ಕೇ ನೀವು ಒಂದು ಪಂಕ್ತಿ ಬರೆದುಬಿಟ್ಟರೆ ನಮ್ಮಪ್ಪನಿಗೆ....ಹೀಗೇ ನನ್ನನ್ನ ಕಳುಹಿಸುವುದರಿಂದ ಹೆಚ್ಚೇನೂ..."

"ನಿನ್ನನ್ನ ಕಳುಹಿಸುವುದರಿಂದ ಕೊರತೆಯೇನೂ ಆಗುವುದಿಲ್ಲ ಅಂತ ನನಗೆ ಗೊತ್ತಿಲ್ಲವೇನೆ ? ಅದಲ್ಲ, ಇನ್ನೂ ನಿಮ್ಮಪ್ಪನಿಗೆ ನಾನು ಬರೆಯುವಹಾಗಿದ್ದರೆ ನನ್ನ ಮನಸ್ಸಿನಲ್ಲಿ ಏನೇನಿದೆಯೋ ಎಲ್ಲಾ ಬಿಚ್ಚಿ ಬರೆದುಬಿಟ್ಟೇನು...ನಿನ್ನ ವಿಷಯವಾಗಿ...!"

"ಭೇಷ್ !–ಬರೆಯಿರಿ ಬೇಕಾಗಿದ್ದರೆ,–ಏನು ಬೇಕಾದರೂ. ನಾನು ಅವರಿಗೆ ಹೋಗಿ ಹೇಳಿದರೆ ಅವರಾಗ..."

"ನೋಡೇ ಹುಡುಗಿ, ಬೇರೆಲ್ಲ ಸಹಿಸಬಲ್ಲೆ ...ಆದರೆ ಈ ವಿಷಯವಾಗಿ ನೀನು ಯತೀನನ ಹತ್ತಿರ ಹೋದರೆ ನಿನ್ನನ್ನ ಸುಮ್ಮನೆ ಬಿಡೋದಿಲ್ಲ, ನಾನು...ನಿಮ್ಮಪ್ಪನಿಗೆ ನಿನ್ನ ವಿಷಯ ಗೊತ್ತಿಲ್ಲದೆ ಇಲ್ಲ. ಅವರಿಗೆ ನೀನು ಮಂಕುಬೂದಿ ಹಾಕಲಾರೆ."

ಹೀಗೆ ಹೇಳಿದ್ದೇ ಅತ್ತೆ ಅಲ್ಲಿಂದ ಹೊರಟು ಬಂದುಬಿಟ್ಟಳು. ಮಣಿ ಮುಖ ಗಂಟು ಹಾಕಿಕೊಂಡು ಸ್ವಲ್ಪ ಹೊತ್ತು ಹಾಸುಗೆ ಮೇಲೆ ಹಾಗೇ ಮಲಗಿದ್ದಳು.

ಪಕ್ಕದ ಮನೆಯ ಅವಳ ಗೆಳತಿಯೊಬ್ಬಳು ಬಂದು "ಇದೇನೇ ಇದು ? ಯಾರ ಮೇಲೆ ಕೋಪ ?" ಎಂದಳು.

"ನೋಡೇ ಮತ್ತೆ....ನನಗೆ ಇರುವವಳು ಒಬ್ಬಳೇ ತಂಗಿ, ಮನ್ನೆ ಹುಟ್ಟಿದವಳು. ಅವಳ ಅನ್ನಪ್ರಾಶನಕ್ಕೆ ನಾನು ಹೋಗಕೂಡದಂತೆ !"

"ಅಯ್ಯೊ, ಇದೇನೆ ಹೀಗಂತೀ ? ಯಜಮಾನರ ಅವಸ್ಥೆ ಹೀಗಿರುವಾಗ ಅದು ಹ್ಯಾಗೇ ಹೋಗುತ್ತಿ ?"

"ನಾನಿದ್ದುಕೊಂಡು ಏನು ಮಾಡುತೀನಿ ಇಲ್ಲಿ –? ಮಾಡೋಕ್ಕೆ ಬರುವುದೂ ಇಲ್ಲ, ನನಗೆ ಬಿಡುವುದೂ ಇಲ್ಲ. ಯಾರೂ ಮಾತಾಡುವುದಿಲ್ಲ. ಗಪ್ಚಿಪ್ಪಾಗಿರುತಾರೆ, ನನಗಂತೂ ಉಸಿರು ಕಟ್ಟಿದಹಾಗಿರುತ್ತೆ. ನನಗೆ ಹೀಗೆ ಇರೋದಕ್ಕೆ ಸಾಧ್ಯವಿಲ್ಲಮ್ಮ– ಅದೇ ಹೇಳುವುದು."

"ಅಂತೂ ವಿಚಿತ್ರ ಹೆಂಗಸು ಕಣೆ ನೀನು...ನಿನ್ನದೇ ಒಂದು ಮಾದರಿ."

"ಇರಬಹುದು ಬಿಡು, ನಿಮ್ಮಗಳ ಹಾಗೆ ಬೂಟಾಟಿಕೆ ಮಾಡುವುದು ಬರುವುದಿಲ್ಲ ನನಗೆ, ಯಾರಾದರೂ ಏನಾದರೂ ಅಂದುಕೊಂಡಾರು ಅನ್ನುವ ಹೆದರಿಕೆಗೆ ಮುಖ ಭಾರ ಮಾಡಿಕೊಂಡು ಮೂಲೆಯಲ್ಲಿ ಮುದುರಿಕೊಂಡು ಬಿದ್ದಿರುವುದು ನನ್ನ ಕೈಯಲ್ಲಿ ಆಗದ ಕೆಲಸ."

"ಹಾಗಾದರೆ ಏನು ಮಾಡಬೇಕು ಅಂತ ಇದ್ದೀಯ ? ಹೇಳು ನೋಡೋಣ."

"ನಾನು ಹೋಗ್ತೇನೆ. ಹೋಗೇ ಹೋಗ್ತೇನೆ, ಯಾರು ತಡೆಯುತ್ತಾರೋ ನೋಡ್ತೇನೆ."

"ಅಬ್ಬ! ಏನು ಜೋರೇ ನಿನ್ನದು ? ಏನಾದರೂ ಮಾಡಿಕೊಳ್ಳಮ್ಮ, ನನಗೇನು, ನಾನು ಹೊರಟೆ, ರಾಶಿ ಕೆಲಸ ಇದೆ."

ತಂದೆಯ ಮನೆಗೆ ಹೋಗುವ ಪ್ರಸಂಗದಲ್ಲಿ ಮಣಿಯು ಅತ್ತಳೆಂದು ಕೇಳಿ ಯತೀನನು ಮನ ಕದಡಿದವನಾಗಿ ತಲೆದಿಂಬನ್ನು ಬೆನ್ನಿನ ಬಳಿ ಎಳೆದುಕೊಂಡು ಸ್ವಲ್ಪ ಮೇಲೆದ್ದು ಒರಗಿಕೊಂಡು ಕೂತ.

"ಅತ್ತೇ, ಆ ಕಿಟಕಿಯನ್ನು ಇನ್ನೂ ಸ್ವಲ್ಪ ತೆಗೆದುಬಿಡು, ಆ ದೀಪ ಬೇಕಾಗಿಲ್ಲ. ತೆಗೆದುಕೊಂಡು ಹೋಗು" ಎಂದ.

ಕಿಟಕಿಯನ್ನು ತೆಗೆದೊಡನೆ ಸದ್ದಡಗಿದ ಇರುಳು ಕೊನೆಯಿಲ್ಲದ ತೀರ್ಥಯಾತ್ರೆಗೆ ಹೊರಟ ದಾರಿಗನಂತೆ ರೋಗಿಯ ಕೋಣೆಯೊಳಗೆ ಬಂದು ನಿಂತುಕೊಂಡಿತು.

ಎಷ್ಟೋ ಯುಗಗಳ ಎಷ್ಟೋ ಸಾವುಗಳನ್ನು ಕಂಡಿರುವ ದೂರದ ತಾರೆಗಳು ಈಗ ಸಾಯುತ್ತಿರುವ ಯತೀನನ ಕಡೆ ನೋಡುತ್ತಿದ್ದುವು.

ಯತೀನನು ಈ ವಿಶಾಲವಾದ ಮಬ್ಬಿನ ರಾಶಿಯ ತೆರೆಯ ಮೇಲೆ ತನ್ನ ಮಡದಿ ಮಣಿಯ ಮೋರೆಯನ್ನು ನೋಡಲಾದ. ಆ ಮುಖದ ಅಗಲವಾದ ಕಣ್ಣುಗಳು ನೀರಿನ ಹನಿಗಳಿಂದ ತುಂಬಿರುವುದನ್ನು ಕಂಡ. ಆ ಕಂಬನಿಗೆ ಕೊನೆಯಿಲ್ಲ, ಚಿರಕಾಲವೂ ತುಂಬೇ ಇರುವುದು...!

ಎಷ್ಟೋ ಹೊತ್ತು ಅವನು ಹೀಗೆ ತೆಪ್ಪಗಿರುವುದನ್ನು ಕಂಡು ಅತ್ತೆ ನಿಶ್ಚಿಂತಳಾದಳು. ಯತೀನನಿಗೆ 'ಸದ್ಯ, ನಿದ್ದೆ ಬಂದಿದೆ'ಯೆಂದುಕೊಂಡಳು.

ಅವಳು ಹಾಗೆಂದುಕೊಂಡಿದ್ದೇ ಆ ಗಳಿಗೆಯೇ ಅವನ ದನಿ ಕೇಳಿಸಿತು.

"ಅತ್ತೇ, ನಿಮಗೆಲ್ಲ ಮಣಿಯ ಮನಸ್ಸು ಚಂಚಲ, ನಮ್ಮ ಮನೆಯೊಳಗೆ ಅವಳ ಮನಸ್ಸು ಹೊಂದಿಕೊಂಡಿಲ್ಲ ಅಂತ ಅನ್ನಿಸಿರಬಹುದು. ಆದರೆ ನೋಡು, ನನಗಂತೂ–"

"ಇಲ್ಲ ಕಣೋ, ಹಾಗೆ ನಾನು ಹೇಳಿದ್ದು ತಪ್ಪು, ಆಗ ಸರಿಯಾಗಿ ತಿಳಿದಿರಲಿಲ್ಲ...ಮನುಷ್ಯರನ್ನ ಅರ್ಥಮಾಡಿಕೊಳ್ಳಬೇಕಾದರೆ ಸಮಯ ಬೇಕಾಗತ್ತೆ ನೋಡು."

"ಅತ್ತೇ!"

"ಇನ್ನು ಮಲಗೋ, ಯತೀನ. ನಿದ್ದೆಮಾಡಪ್ಪ !"

"ಇಲ್ಲ ಅತ್ತೆ, ಈಗ ಸ್ವಲ್ಪ ನಾನು ಯೋಚಿಸುವುದಕ್ಕೆ ಅವಕಾಶ ಕೊಡು. ಸ್ವಲ್ಪ ಹೇಳೋದೂ ಇದೆ ನಿನಗೆ...ಬೇಸರ ಮಾಡಿಕೋಬೇಡ ಅತ್ತೇ !"

"ಹೂಂ, ಸರಿ, ಹೇಳು ಏನು ಹೇಳ್ತೀಯೋ !"

"ನಾನು ಹೇಳಬೇಕು ಅಂತ ಇದ್ದದ್ದು–ಮನುಷ್ಯರು ತಂತಮ್ಮ ಮನಸ್ಸನ್ನು ತಿಳಿದುಕೊಳ್ಳುವುದಕ್ಕೇ ಎಷ್ಟೋ ಸಮಯವಾಗತ್ತೆ. ನಾನೂ ಒಂದು ಸಲ ಅಂದುಕೊಂಡಿದ್ದೆ, ಮಣಿಯ ಮನಸ್ಸು ನನ್ನಿಂದ ದೂರ ಅಂತ. ನನಗೊಬ್ಬನಿಗೇ ಅಲ್ಲ, ಎಲ್ಲರಿಗೂ, ಹಾಗೆ ಅನ್ನಿಸಿತ್ತು. ಆಗ ತೆಪ್ಪನೆ ಸೈರಿಸಿಕೊಂಡಿದ್ದೆ. ನೀವೆಲ್ಲ ಮಾತ್ರ..."

"ಇಲ್ಲ, ಕಣೋ, ಹಾಗೆ ಹೇಳಬೇಡ. ನಾನೂ ಕೂಡ ಸೈರಿಸಿಕೊಂಡಿದ್ದೇನೆ."

"ಅತ್ತೇ, ಮನಸ್ಸು ಅಂಬೋದು ಮಣ್ಣಿನ ಹೆಂಟೆ ಅಲ್ಲ, ಇಷ್ಟ ಬಂದಾಗ ಆರಿಸಿ ಕೈಲೆತ್ತಿಕೊಳ್ಳುವುದಕ್ಕೆ. ನನಗೆ ಗೊತ್ತಿತ್ತು, ತನ್ನ ಮನಸ್ಸನ್ನ ಮಣಿಯೇ ಅರ್ಥಮಾಡಿಕೊಂಡಿಲ್ಲ ಇನ್ನೂ. ಎಂದೋ ಒಂದು ದಿನ ಯಾವುದೋ ಒಂದು ದೊಡ್ಡ ಪೆಟ್ಟು ಬಿದ್ದಾಗ ಅವಳಿಗೆ...ಆಗ"

"ಹೌದು ಕಣೋ, ನೀನು ಹೇಳಿದ್ದು ನಿಜ."

"ಈ ಕಾರಣದಿಂದಲೇ ಅವಳ ಹುಡುಗುತನವನ್ನು ನಾನೆಂದೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ."

ಅತ್ತೆಯು ಈ ಮಾತಿಗೆ ಉತ್ತರವೇನೂ ಕೊಡಲಿಲ್ಲ. ಒಳಗೊಳಗೇ ನಿಟ್ಟುಸಿರು ಬಿಟ್ಟಳು. ಎಷ್ಟು ದಿನ ಅವಳು ಗಮನಿಸಿದ್ದಳೋ ! ಯತೀನನು ಮಲಗಲಾರದೆ ವರಾಂಡದೊಳಗೆ ಬಂದು ಎಷ್ಟು ರಾತ್ರಿಗಳನ್ನು ಕಳೆದಿದ್ದಾನೋ ! ಮಳೆಗಾಲದಲ್ಲಿ

ಮಳೆಯ ಇರಿಚಲು ಮುಖದ ಮೇಲೆ ಬೀಳುತ್ತಿದ್ದಾಗಲೂ ಒಳಗೆ ಹೋಗಿ ಮಲಗಲಿಲ್ಲ. ಎಷ್ಟು ದಿನ ಅವನು ತಲೆನೋವಿನಿಂದ ನರಳುತ್ತಾ, ಹಾಸಿಗೆಯ ಮೇಲೆ ಮಲಗಿ 'ಮಣಿ ಬರುತ್ತಾಳೆ, ನೆತ್ತಿ ನೀವುತ್ತಾಳೆ ತನ್ನ ಮೃದುವಾದ ಬೆರಳುಗಳಿಂದ,' ಎಂದು ಆಸೆಯಿಂದ ಕಾದಿದ್ದನೋ ! ಮಣಿ ಆ ಸಮಯದಲ್ಲಿ ತನ್ನ ಗೆಳತಿಯರೊಂದಿಗೆ ಗುಂಪುಗೂಡಿ ನಾಟಕ ನೋಡಿಕೊಂಡು ಬರುವ ಸನ್ನಾಹದಲ್ಲಿದ್ದಳು. ಅವಳು ಅದಕ್ಕೆ ಮೊದಲು ಯತೀನನಿಗೆ ಬೀಸಣಿಗೆಯಿಂದ ಗಾಳಿ ಬೀಸಲು ಬಂದಿದ್ದಳು. ಅತ್ತೆಯು ಬೇಸರದಿಂದ 'ಬೇಡ ಹೋಗು' ಎಂದು ಕಳುಹಿಸಿಬಿಟ್ಟಿದ್ದಳು. ಆ ಬೇಸರದ ಮಧ್ಯೆ ಎಷ್ಟು ನೋವನ್ನನುಭವಿಸಿದ್ದಳೋ ಅವಳಿಗೇ ಗೊತ್ತು. ಎಷ್ಟು ಬಾರಿ ಆಕೆ 'ನೋಡೋ, ಯತೀನ, ನೀನು ಈ ಹುಡುಗಿಯ ಮೇಲೆ ಅಷ್ಟು ಮನಸ್ಸಿಡಬೇಡ, ಅವಳು ಸ್ವಲ್ಪ ಕಲಿಯಲಿ – ನಿನ್ನ ಮೇಲೆ ಆಕಾಂಕ್ಷೆ ಬರಲಿ ಅವಳಿಗೆ. ಮನುಷ್ಯರು ಸ್ವಲ್ಪ ಅಳುವುದನ್ನೂ ಕಲಿಯಬೇಕು' ಎಂದು ಹೇಳಬೇಕೆಂದಿದ್ದಳು. ಆದರೆ ಈ ಮಾತೆಲ್ಲ ಹೇಳುವಂಥದಲ್ಲ, ಹೇಳಿದರೂ ಯಾರಿಗೂ ಅರ್ಥವಾಗುವುದಿಲ್ಲ. ಯತೀನನ ಮನದಲ್ಲಿ ನಾರೀದೇವತೆಗಾಗಿ ಒಂದು ಪೀಠಸ್ಥಾನವಿತ್ತು. ಅಲ್ಲಿ ಅವನು ಮಣಿಯ ಪ್ರತಿಮೆಯನ್ನು ಕೂಡಿಸಿಟ್ಟಿದ್ದ. ಆ ತೀರ್ಥಕ್ಷೇತ್ರದಲ್ಲಿ ಆ ನಾರಿಯ ಸುಧಾಪಾತ್ರೆಯು ಚಿರದಿನವೂ ಅವನ ಪಾಲಿಗೆ ಶೂನ್ಯವಾಗೇ ಇರಬಹುದೆಂಬ ಯೋಚನೆಯನ್ನು ನೆನೆಯುವುದವನಿಗೆ ಸುಲಭವಲ್ಲ. ಆದುದರಿಂದಲೇ ಪೂಜೆ ನಡೆಯುತ್ತಿತ್ತು. ಅರ್ಘ್ಯ ತುಂಬಿ ಬರುತ್ತಿತ್ತು, ವರ ಲಾಭವಾಗುವ ಆಸೆಯು ಸೋಲನ್ನೊಪ್ಪಿಕೊಳ್ಳುತ್ತಿರಲಿಲ್ಲ.

ಯತೀನನು ಈಗ ನಿದ್ದೆಮಾಡುತ್ತಿದ್ದಾನೆ ಎಂದು ಅತ್ತೆಗೆ ಅನ್ನಿಸಿತು. ಆ ಕೂಡಲೆ ಅದನ್ನು ಸುಳ್ಳುಮಾಡಿ ಯತೀನನ ದನಿ ಕೇಳಬಂತು.

"ನನಗೆ ಗೊತ್ತಿದೆ ಅತ್ತೇ. ನೀನು ಅಂದುಕೊಂಡಿದ್ದೆ–ನನಗೆ ಮಣಿಯಿಂದ ಸುಖವಾಗಲಿಕ್ಕಿಲ್ಲ ಎಂದು. ಅದಕ್ಕೇ ನೀನು ಅವಳ ಮೇಲೆ ರೇಗುತ್ತಿದ್ದೆ. ಆದರೆ ಗೊತ್ತೇ, ಅತ್ತೆ, ಯಾವುದನ್ನ ಸುಖ ಅಂತೇವೋ ಅದು, ಅಗೋ, ಆ ನಕ್ಷತ್ರಗಳಿವೆಯಲ್ಲ ಅವುಗಳ ಹಾಗೆ. ಕತ್ತಲ ರಾಶಿ ಎಷ್ಟೇ ಇರಲಿ, ಅವುಗಳನ್ನು ಪೂರ್ತಿಯಾಗಿ ಮರೆ ಮಾಡಲಿಕ್ಕಾಗುತ್ತೇನು, ಹೇಳು. ಆಗಾಗ ಫಳಕ್ಕೆಂದು ಹೊರಗೆ ಬಂದು ಮಿನುಗುತ್ತ ಇರುತ್ತವೆ. ಬದುಕಿನಲ್ಲಿ ನಾವೆಷ್ಟೇ ತಪ್ಪು ಮಾಡಿರಲಿ, ತಪ್ಪು ತಿಳಿದುಕೊಂಡಿರಲಿ, ಆದರೂ ಅದರ ಬಿರುಕು ಸಂದಿಗಳೊಳಗಿಂದ ಸ್ವರ್ಗದ ಬೆಳಕು ಹೊಳೆದಿಲ್ಲವೇ ಎಷ್ಟೋ ಸಲ ? ಈಗ ನೋಡು, ನನ್ನ ಮನಸ್ಸೇಕೆ ಇವತ್ತು ಅದ್ಯಾವುದೋ ಒಂದು ಸಂತೋಷದಿಂದ ತುಂಬಿದೆ. ಎಲ್ಲಿಂದ ಬಂತು ಆ ಸಂತೋಷ ? ಹೇಳು ನೋಡೋಣ."

ಅತ್ತೆ ಏನೂ ಹೇಳಲಿಲ್ಲ. ಸುಮ್ಮನೆ ನಿಧಾನವಾಗಿ ಅವನ ಹಣೆಯ ಮೇಲೆ ಕೈಯಿಂದ ಮೃದುವಾಗಿ ನೇವರಿಸಿದಳು. ಅವಳ ಕಣ್ಣುಗಳು ನೀರು ತುಂಬಿ ಹರಿಯುತ್ತಿದ್ದದನ್ನು ಆ ಕತ್ತಲಲ್ಲಿ ಯಾರೂ ನೋಡಲಾಗಲಿಲ್ಲ.

"ಅತ್ತೆ, ಅವಳ ವಯಸ್ಸಿನ್ನೂ ಚಿಕ್ಕದು. ಅವಳ ಮನಸ್ಸು ಹೇಗಿದ್ದೀತು ಹೇಳು."

"ಸುಮ್ಮನಿರೋ ಸಾಕು, ಯತೀನ, ಚಿಕ್ಕ ವಯಸ್ಸು ಎಂಥಾದ್ದು...? ಚಿಕ್ಕದೂ ಅಲ್ಲ, ಏನೂ ಅಲ್ಲ. ಸರಿಯಾದ ವಯಸ್ಸೇ. ನಿನಗೆ ತಿಳೀದು ಕಣೋ, ನಾವೂ ಕೂಡ ಇಂಥ ಚಿಕ್ಕವಯಸ್ಸಿನಲ್ಲೇ ದೇವತೆಯನ್ನು ಸಂಸಾರದ ಕಡೆಯಿಂದ ತಿರುಗಿಸಿ ನಮ್ಮ ನಮ್ಮ ಹೃದಯದೊಳಗಡೆ ಕೂಡಿಸಿಕೊಂಡು ಪೂಜಿಸುತ್ತಾ ಇದ್ದೆವು. ಅದರಿಂದ ಹಾನಿಯಾದದ್ದೇನು, ಹೇಳು ನೋಡೋಣ. ಆದರೂ ಕೇಳುತ್ತೇನೆ, ಸುಖದ ಅಗತ್ಯವಾದರೂ ಅಷ್ಟೊಂದೇಕೆ ಅಂತ ?"

"ಅತ್ತೇ, ಮಣಿಯ ಮನಸ್ಸೂ ಎಚ್ಚರವೇಳುವ ಸಮಯ ಆಗಿದೆ ಅಂತ ನನಗೇನೋ ..."

"ಅನ್ನಿಸತ್ತೇನು ? ಅನ್ನಿಸುವುದೊಂದೇನೆ ? ಮನಸ್ಸು ನಿಜವಾಗಿಯೂ ಎಚ್ಚರವಾದರೆ ಅದೇನು ಸಾಮಾನ್ಯ ಭಾಗ್ಯ ಅಂದುಕೊಂಡಿದ್ದೀಯಾ ?"

ಹಠಾತ್ತಾಗಿ ಯತೀನನ ಮನಸ್ಸಿಗೆ ಹಿಂದೆ ಎಂದೋ ಕೇಳಿದ್ದ ಒಬ್ಬ ಜೋಗಿಯ ಹಾಡು ನೆನಪಿಗೆ ಬಂತು.

"ಎಲೆ ಮನವೆ, ನೀನಂದು ಮೈ
ಮರೆತಿರಲು ಬಂದನಾಗ ಬಾಗಿಲಲಿ
ಮತ್ತವನು ಹೋಗುತಿರುವ ಸೊಲ್ಲು
ಕೇಳಿ ನಿದ್ದೆಯೊಡೆಯಿತು ನಿನಗೆ,
ನಿದ್ದೆಯೊಡೆಯಿತೋ, ಮರುಳೆ,
ಬರಿ ಮಬ್ಬಿನೊಳಗೆ !"

"ಅತ್ತೇ, ಘಂಟೆ ಎಷ್ಟಾಗಿದೆ ಈಗ ?"

"ಒಂಬತ್ತಾಗುವ ಸಮಯ."

"ಇನ್ನೂ ಒಂಬತ್ತೇ ? ನಾನಂದುಕೊಂಡಿದ್ದೆ–ಮೂರೋ, ನಾಲಕ್ಕೋ ಘಂಟೆ ಅಂತ. ಸಂಜೆಯಾಗಿ ನಾಲ್ಕೈದು ಘಂಟೆಗಳಾದ ಮೇಲೇ ನನಗೆ ಸರಿಯಾಗಿ ರಾತ್ರಿಯಾಗುವುದು, ಹಾಗಾದರೆ ನೀನೇಕೆ ನನ್ನ ನಿದ್ದೆಯ ಬಗ್ಗೆ ಅಷ್ಟು ಅವಸರ ಮಾಡುತ್ತಿರುವುದು ?"

"ಹಾಗಲ್ಲ ಕಣೋ, ನಿನ್ನೆ ಕೂಡ ಸಂಜೆಯಾದ ಮೇಲೆ ಇದೇ ರೀತಿ ಮಾತಾಡುತ್ತ ಆಡುತ್ತ ರಾತ್ರಿ ಎಷ್ಟು ಹೊತ್ತಾಗಿಹೋಗಿತ್ತು ಗೊತ್ತೇ ! ಅದಾದ ಮೇಲೆ

ಎಷ್ಟು ಹೊತ್ತಾದರೂ ನಿನಗೆ ನಿದ್ದೆ ಬರಲೇ ಇಲ್ಲ. ಅದಕ್ಕೇ ನಿನ್ನನ್ನ ಇವತ್ತು ಸ್ವಲ್ಪ ಬೇಗಲೇ ನಿದ್ದೆ ಮಾಡೋ ಅಂತ ಹೇಳುತ್ತಾ ಇರೋದು."

"ಮಣಿ ನಿದ್ದೆಮಾಡಿಬಿಟ್ಟಳೇ ?"

"ಇಲ್ಲ, ಅವಳು ನಿನಗಾಗಿ ಹೆಸರುಬೇಳೆ ತೊವ್ವೆ ಮಾಡುತ್ತಾ ಇದ್ದಾಳೆ, ಅದು ಮುಗಿದ ಮೇಲೇ ಅವಳು ಮಲಗೋಕ್ಕೆ ಹೋಗುತ್ತಾಳೆ."

"ಹ್ಞಾಂ, ಏನತ್ತೆ ಹಾಗಾದರೆ...ಮಣಿಯೇ ಇವೆಲ್ಲ–?"

"ಹೌದು ಕಣೋ, ಏನೆಂದುಕೊಂಡೆ. ಮಣಿಯೇ ನಿತ್ಯ ನಿನಗೆ ಪಥ್ಯ ತಯಾರು ಮಾಡುವುದು. ಅವಳಿಗೆ ಬಿಡುವೆಲ್ಲಿದೆ ?"

"ನಾನಂದುಕೊಂಡಿದ್ದೆ ಮಣಿ ಬಹುಶಃ..."

"ಛೇ, ಏನು ನೀನು ಹೇಳೋದು ? ಹೆಣ್ಣು ಮಕ್ಕಳಿಗೆ ಇವೆಲ್ಲ ಕಲಿಯುವುದು ಎಷ್ಟು ಹೊತ್ತು ಬೇಕು ?"

"ಇವತ್ತು ಮಧ್ಯಾಹ್ನ ಮೌರಲಾಮೀನಿನ ಹುಳಿ ಮಾಡಿತ್ತಲ್ಲ, ಅದರಲ್ಲಿ ಏನೋ ಒಂದು ಸೊಗಸು ಇತ್ತು. ನಾನಂದುಕೊಂಡಿದ್ದೆ ಅದು ನಿನ್ನ ಕೈಗುಣ ಅಂತ."

"ನನ್ನ ತಲೆ ನಾನೇನು ಮಾಡೋದು ? ಬಿಟ್ಟರೆ ತಾನೇ ಅವಳು ? ನಿನ್ನ ಸ್ನಾನದ ಚೌಕ, ಟವಲು ಒಗೆಯುವುದು ಕೂಡ ತಾನೇ ಮಾಡಬೇಕು. ಬೇರೆ ಯಾರಿಗೂ ಬಿಟ್ಟರೆ ತಾನೆ ? ನಿನಗೆ ಪ್ರತಿಯೊಂದೂ ಚೊಕ್ಕಟವಾಗಿರಬೇಕು ಅಂದುಬಿಟ್ಟು ಅವಳಿಗೆ ಗೊತ್ತು. ನಿನ್ನ ಹೊರಗಡೆಯ ಆಫೀಸು ರೂಮನ್ನ ಒಂದು ಸಲ ಹೋಗಿ ನೋಡಿಕೊಂಡು ಬಾ, ಗೊತ್ತಾಗತ್ತೆ ಆಗ. ಮಣಿ ಎರಡು ಹೊತ್ತೂ ಎಲ್ಲ ಗುಡಿಸಿ, ಸ್ವಚ್ಛವಾಗಿ ತೊಳೆದು ಅಚ್ಚುಕಟ್ಟಾಗಿ ಸಾಮಾನೆಲ್ಲ ಜೋಡಿಸಿ ಹ್ಯಾಗಿಟ್ಟಿರುತ್ತಾಳೋ, ಎಲ್ಲ ಫಳ ಫಳ ಅಂತ ಹೊಳೀತಾ ಇರುತ್ತೆ. ನಾನೇನಾದರೂ ಅವಳನ್ನು ನಿನ್ನ ಈ ಮಲಗುವ ಮನೆಗೆ ಬಿಟ್ಟಿದ್ದಿದ್ದರೆ ನೋಡುತ್ತಾಯಿದ್ದೆ, ಒಂದು ಕ್ಷಣ ಸುಮ್ಮನಿರದೆ ಎಲ್ಲ ತೊಳೆದು ಒಪ್ಪ ಇಡುತ್ತಾ ಇರುತ್ತಿದ್ದಳು. ಅವಳಿಗೇನೋ ಬರೋದಕ್ಕೆ ಬಹಳ ಇಷ್ಟ. ಆದರೆ..."

"ಮಣಿ ಇಷ್ಟೆಲ್ಲ ಮಾಡಿದರೆ ಅವಳ ದೇಹ ?"

"ಡಾಕ್ಟರೇನು ಹೇಳಿದರು ಗೊತ್ತೆ ? ರೋಗಿಯ ಕೋಣೆಯಲ್ಲಿ ಅವಳು ಹೋಗಿಬರುವುದು ತಪ್ಪಿಸಬೇಕು ಅಂತ. ಅವಳ ಮನಸ್ಸು ಬಹಳ ಮೆತು, ನೋಡು, ನಿನ್ನ ಯಾತನೆ ನೋಡಿದರೆ ಅವಳ ಮೈ ಕೂಡ ಎರಡು ದಿನದಲ್ಲಿ ಕೆಟ್ಟುಹೋಗಿಬಿಡುತ್ತೆ. ಅದಕ್ಕೇ...!"

"ಅತ್ತೇ...ಅದು ಹೇಗೆ ನೀನು ಮಣಿಯನ್ನು ಇಲ್ಲಿಗೆ ಬರದೇ ಇರುವ ಹಾಗೆ ತಪ್ಪಿಸಿಟ್ಟಿದ್ದೀ ?"

"ಅದೇನು ಅಷ್ಟು ಸುಲಭವೇನೋ. ನನ್ನ ಮನಸ್ಸಿಗೆ 'ಅಯ್ಯೋ, ಪಾಪ !' ಅನ್ನಿಸುವುದಿಲ್ಲವೇ. ಆದರೆ ಹಾಗೆಂದುಬಿಟ್ಟು ಬಿಡುವುದಕ್ಕೂ ಆಗೋದಿಲ್ಲ ನೋಡು. ನನ್ನನ್ನ ಕಂಡರೆ ಅವಳಿಗೆ ಅಷ್ಟು ಗೌರವ, ಆದ್ದರಿಂದ ನನ್ನ ಮಾತು ಕೂಡ ಕೇಳುತ್ತಾಳೆ ಅವಳು."

* * *

ಮುಗಿಲಿನ ತಾರೆಗಳು ಮರುಕದಿಂದ ಕಣ್ಣೀರು ತುಂಬಿದಂತೆ ಮಿಣಮಿಣ ಗುಟ್ಟಿದುವು. ತನ್ನ ಜೀವವಿಂದು ಅವನ್ನೆಲ್ಲ ಬೀಳ್ಕೊಡುವ ದಾರಿಯಲ್ಲಿ ಬಂದು ನಿಂತಿರುವುದೆಂದು ತಿಳಿದು ಯತೀನನು ಮನದಲ್ಲೇ ಅವುಗಳನ್ನೆಲ್ಲ ಕೃತಜ್ಞತೆಯಿಂದ ವಂದಿಸಿದ. ಮತ್ತು ಎದುರಿಗೆ ಮೃತ್ಯುವು ಬಂದು ಕತ್ತಲ ಬಸುರಿನೊಳಗಿಂದ ತನ್ನ ಬಲಗೈಯನ್ನು ನೀಡಿದೆ, ಯತೀನನು ಸ್ನಿಗ್ಧ ವಿಶ್ವಾಸದಿಂದದರ ಮೇಲೆ ತನ್ನ ರೋಗದಿಂದ ಕೃಶವಾದ ಕೈಯನ್ನಿಟ್ಟ.

ಒಮ್ಮೆ ನಿಟ್ಟುಸಿರು ಬಿಡುತ್ತ ಸ್ವಲ್ಪ ಚಡಪಡಿಸಿ "ಅತ್ತೆ, ಮಣಿಯೇನಾದರೂ ಎಚ್ಚರವಾಗಿದ್ದರೆ ಸ್ವಲ್ಪ ಅವಳನ್ನ – " ಎಂದ.

"ಇಗೋ, ಹೇಳಿಕಳುಹಿಸುತ್ತೇನೆ ಕಣೋ."

"ನಾನು ಹೆಚ್ಚು ಹೊತ್ತು ಅವಳನ್ನ ಇಲ್ಲಿ ಇರಿಸಿಕೊಳ್ಳಲಿಷ್ಟವಿಲ್ಲ.....ಕೇವಲ ಐದು ನಿಮಿಷ....ಐದೇ ಐದು ನಿಮಿಷ, ಒಂದೆರಡು ಮಾತುಗಳನ್ನ ಹೇಳಬೇಕಾಗಿದೆ, ಅದಕ್ಕೆ...."

ಅತ್ತೆ ದೊಡ್ಡದಾಗಿ ನಿಟ್ಟುಸಿರು ಬಿಟ್ಟು ಮಣಿಯನ್ನು ಕರೆಯಲು ಬಂದಳು. ಈ ಕಡೆ ಯತೀನನ ನಾಡಿ ಅತಿ ವೇಗವಾಗಿ ಚಲಿಸಲು ತೊಡಗಿತು. ಯತೀನನಿಗೆ ಗೊತ್ತು – ಅದೇಕೋ ಇದುವರೆಗೆ ಅವನು ಮಣಿಯ ಸಂಗಡ ಚೆನ್ನಾಗಿ ಮಾತು, ಕಥೆಯಾಡುವಂತೆ ಸಲಿಗೆಯೇ ಮಾಡಿಕೊಂಡಿಲ್ಲ. ಎರಡು ವಾದ್ಯಗಳೂ ಎರಡು ಬೇರೆ ಬೇರೆ ಶ್ರುತಿಗಳಲ್ಲಿ ರಚಿಸಲ್ಪಟ್ಟಿವೆ. ಮೇಳೈಸುವುದು ಬಹಳ ಕಠಿಣ. ಮಣಿ ತನ್ನ ಗೆಳತಿಯರೊಡನೆ ಎಡೆಬಿಡದೆ ಹರಟುತ್ತಾಳೆ, ನಗುತ್ತಾಳೆ. ದೂರದಿಂದದನ್ನು ಕೇಳಿ ಯತೀನನ ಮನಸ್ಸು ಎಷ್ಟು ಬಾರಿ ಈರ್ಷ್ಯೆಯಿಂದ ಪೀಡಿತವಾಗಿತ್ತೋ! ಯತೀನನದಕ್ಕೆ ತನ್ನನ್ನೇ ನಿಂದಿಸಿಕೊಳ್ಳುತ್ತಾನೆ. ಅವನು ಹೀಗೆಲ್ಲ ಸಾಮಾನ್ಯವಾದ ಯಾವುದೆಂದರೆ ಆ ವಿಷಯವಾಗೆಲ್ಲ ಆಸಕ್ತಿವಹಿಸಿ ಮಾತಾಡಲಾರ. ತನ್ನ ಬಂಧು, ಬಾಂಧವರೊಂದಿಗೂ ಸಾಮಾನ್ಯ ವಿಷಯಗಳ ಬಗ್ಗೆ ಪ್ರಸ್ತಾಪಮಾಡುವುದೇ ಇಲ್ಲ. ಆದರೂ ಗಂಡಸರು ಯಾವುದನ್ನ 'ಆ ಮಾತು, ಈ ಮಾತು' ಅನ್ನುತ್ತಾರೋ ಅದು ಹೆಂಗಸರ 'ಆ ಮಾತು, ಈ ಮಾತು'ಗಳೊಂದಿಗೆ ಹೊಂದುವುದಿಲ್ಲ. ದೊಡ್ಡ ವಿಷಯದ ಮೇಲೆ ಒಬ್ಬರೇ ಒಂದೇಸಮನಾಗಿ ಮಾತಾಡುತ್ತ ಹೋಗಬಹುದು. ಪಕ್ಕದಲ್ಲಿರುವವರು ಅದಕ್ಕೆ ಹೂಗುಟ್ಟಲಿ, ಇಲ್ಲದಿರಲಿ, ಬಾಧಕವಿಲ್ಲ. ಆದರೆ ಸಣ್ಣ,

ತುಚ್ಛವಾದ ವಿಷಯದ ಮೇಲೆ ನಿಯತವಾಗಿ ಎರಡು ಪಕ್ಷದವರೂ ಮಾತಿನಲ್ಲಿ ಭಾಗವಹಿಸಬೇಕಾಗುತ್ತದೆ. ಕೊಳಲನ್ನ ಒಬ್ಬರೇ ಊದಬಹುದು. ಆದರೆ ಇಬ್ಬರಿಲ್ಲದೆ ಹೋದರೆ ತಾಳ ಕಳೆಕಟ್ಟುವುದಿಲ್ಲ. ಈ ಕಾರಣದಿಂದ ಎಷ್ಟೋ ದಿನ ಸಂಜೆಯ ವೇಳೆ ಯತೀನನು ಮಣಿಯ ಸಂಗಡ ಹೊರಗಡೆ ವರಾಂಡದಲ್ಲಿ ಚಾಪೆ ಹರಡಿಕೊಂಡು ಕೂತಿದ್ದಾಗ ಮೂರು, ನಾಲ್ಕು ಮಾತು ಎಳೆದೆಳೆದು ಆಡಲಾರದೆ ಆಡಿ ಕಡೆಗೆ ಸಂಭಾಷಣೆಯ ಸೂತ್ರ ಪೂರ್ತಿಯಾಗಿ ಕಿತ್ತುಹೋಗಿ ಇಬ್ಬರೂ ಶೂನ್ಯ ಮುಖದಿಂದ ಒಬ್ಬರನ್ನೊಬ್ಬರು ನೋಡುತ್ತ ಇರಬೇಕಾಗಿರುತ್ತಿತ್ತು. ಆಮೇಲೆ ಸಂಜೆಯ ನೀರವತೆಯು ಲಜ್ಜೆಯಿಂದ ಸತ್ತುಹೋಗಲು ಆತುರವಾಗಿರುವಂತಿರುತ್ತಿತ್ತು. ಆಗ ಯತೀನನಿಗೆ ಗೊತ್ತಾಗುತ್ತಿತ್ತು. ಮಣಿಯು ಏನಾದರೂ ಮಾಡಿ ಅಲ್ಲಿಂದ ಓಡಿಹೋದರೆ ಬದುಕುತ್ತೇನೆ ಎಂದು ಚಡಪಡಿಸುತ್ತಿದ್ದಾಳೆಂದು. ಆಗವನು ಮನದಲ್ಲೇ ಬಯಸಿದ್ದಾನೆ ಸದ್ಯ ಯಾರಾದರೂ ಮೂರನೆಯವರು ಬಂದು ಕೂಡಬಾರದೆ? ಬಂದರೆ–ಮಾತು, ಕಥೆ ಬೆಳೆಯಬಹುದು. ಇಬ್ಬರಲ್ಲೇ ಮಾತಿನ್ನು ಸಾಧ್ಯವಿಲ್ಲ.

ಇವತ್ತು ಮಣಿಯು ಬಂದರೆ ಅವಳೊಡನೆ ಮಾತನ್ನ ಹೇಗೆ ಆರಂಭ ಮಾಡುವುದು ? ಯೋಚಿಸುತ್ತ ಹೋದರೆ ಮಾತೂ ವಿಪರೀತ ಅಸ್ವಾಭಾವಿಕವಾಗಿ ಬಿಡಬಹುದು. ಅಂತಹ ಮಾತುಗಳಾಡಿ ಪ್ರಯೋಜನವೇನು ? ಯತೀನನಿಗೆ ಸಂದೇಹವಾಯಿತು. ಇವತ್ತು ಕೂಡ, ಈ ಐದು ನಿಮಿಷಗಳ ಅವಧಿಕೂಡ, ವ್ಯರ್ಥವಾದರೂ ಆಗಬಹುದು. ಅದರಲ್ಲೂ ಅವನಿಗಿರುವ ಜೀವನದ ಅವಧಿಯಲ್ಲಿ ಇಂತಹ ಐದು ನಿಮಿಷಗಳು ಇನ್ನೆಷ್ಟು ತಾನೇ ಇರುವುವು ?

೩

"ಇದೇನೆ ಮಣೀ, ಎಲ್ಲಿ ಹೊರಟಿರುವುದು ?"

"ಸೀತಾರಾಮಪುರಕ್ಕೆ ಹೊರಟಿದ್ದೇನೆ."

"ಏನೇ ಇದು ನಾಚುಗೆಗೇಡು ! ಯಾರ ಜೊತೆಯಲ್ಲಿ ಹೋಗ್ತೀಯೆ ?"

"ನಮ್ಮ ಅನಾಥ ಬಂದಿದ್ದಾನಲ್ಲ. ಅವನೇ ಕರೆದುಕೊಂಡು ಹೋಗುತ್ತಾನೆ."

"ಲೇ ನನ್ನ ಮಾತು ಕೇಳು, ನೀನು ಒಳ್ಳೇ ಹುಡುಗಿ, ನನ್ನ ಲಕ್ಷ್ಮಿ ನೀನು. ನೀನು ಹೋಗುವಿಯಂತೆ, ನಾನು ಬೇಡ ಅನ್ನುವುದಿಲ್ಲ. ಆದರೆ ಇವತ್ತು ಮಾತ್ರ..."

"ಅಯ್ಯೊ, ಟಿಕೆಟ್ಟು ರಿಜರ್ವ್ ಮಾಡ್ಸಿ ಆಗಿಹೋಗಿದೆಯಲ್ಲ !"

"ಆಗಿರಲೇಳು, ಆ ನಷ್ಟ ಹೇಗಾದರೂ ಸಹಿಸೋಣ. ನೀನು ನಾಳೆ ಬೆಳಗ್ಗೆ ಎದ್ದದ್ದೇ ಹೋಗುವಿಯಂತೆ. ಇವತ್ತಂತೂ ಬೇಡ."

"ಅತ್ತೇ, ನಾನು ನಿಮ್ಮ ತಿಥಿ, ವಾರಗಳನ್ನು ನಂಬುವುದಿಲ್ಲ. ಇವತ್ತೇ ಹೋದರೆ ದೋಷವೇನು ?"

"ಇಲ್ಲ, ಯತೀನ ನಿನ್ನನ್ನ ನೋಡಬೇಕು ಅಂತ ಕರೀತಾ ಇದ್ದಾನೆ. ಏನೋ ಮಾತಾಡಬೇಕಂತೆ..."

"ಹಾಗೇನು ? ಈಗಿನ್ನೂ ಸಮಯ ಇದೆ. ನಾನು ಹೋಗಿ ಅವರಿಗೆ ಹೇಳಿಬಿಟ್ಟು ಬರುತ್ತೇನೆ."

"ಇಲ್ಲ, ನೀನು ಹೀಗೆ ಹೋಗ್ತೇನೆ ಅಂತ ಹೇಳುವುದಕ್ಕೆ ಮಾತ್ರ ಎಂದಿಗೂ ಹೋಗಕೂಡದು."

"ಇಲ್ಲ, ಹಾಗಾದರೆ ಹೋಗುವ ವಿಷಯ ಹೇಳೋದೇ ಇಲ್ಲ. ಆದರೆ ಇನ್ನು ಹೆಚ್ಚು ನಿಧಾನ ಮಾಡೋ ಹಾಗಿಲ್ಲ. ನಾಳೆಯೇ ಅನ್ನಪ್ರಾಶನ, ಇವತ್ತು ಹೋಗದೆ ಹೋದರೆ ಆಗುವುದೇ ಇಲ್ಲ."

"ಬೇಡ್ವೇ, ನಾನು ನಿನಗೆ ಕೈ ಮುಗಿಯುತ್ತೇನೆ, ಇವತ್ತೊಂದು ದಿನ ನನ್ನ ಮಾತು ಕೇಳು. ಇವತ್ತು ಮನಸ್ಸನ್ನ ಸ್ವಲ್ಪ ಶಾಂತವಾಗಿಟ್ಟುಕೊಂಡು ಯತೀನನ ಹತ್ತಿರ ಬಂದು ಸ್ವಲ್ಪ ಹೊತ್ತು ಕೂತುಕೋ, ಬಾ, ಹೀಗೆ ಆತುರ ಮಾಡಿಕೊಳ್ಳಬೇಡ."

"ಮತ್ತೆ, ಏನು ಮಾಡು ಅಂತೀರಿ. ಗಾಡಿ ನನಗೋಸ್ಕರ ಕಾದುಕೊಂಡು ಕೂತಿರೋದಿಲ್ಲ. ಅನಾಥ ಆಗಲೇ ಹೋಗಿದ್ದಾನೆ. ಇನ್ನು ಹತ್ತು ನಿಮಿಷಕ್ಕೆ ಬಂದು ನನ್ನನ್ನ ಕರೆದುಕೊಂಡು ಹೋಗ್ತಾನೆ. ಅಷ್ಟರಲ್ಲಿ ಅವರನ್ನ ನೋಡಿ ಒಂದು ಮಾತು ಆಡಿ ಮುಗಿಸಿ ಬರುತ್ತೇನೆ."

"ಬೇಡ, ಹಾಗೆ ಬೇಡ, ಬೇಡವೇ ಬೇಡ. ನೀನು ಹೋಗು ಊರಿಗೆ. ಈ ರೀತಿಯಾಗಿ ನೀನು ಅವನ ಮುಂದೆ ಹೋಗದೆ ಹೋದರೇನೆ ಒಳ್ಳೇದು. ನಾನು ಬಿಡೋದಿಲ್ಲ. ಅಯ್ಯೋ, ನತದೃಷ್ಟಳೆ...ನೀನು ಅವನಿಗೆ ಎಷ್ಟು ಸಂಕಟವುಂಟುಮಾಡಿದ್ದೀಯೆ. ಅವನೋ ಎಲ್ಲಾ ಬಿಟ್ಟು, ಎಲ್ಲಾ ವಿಸರ್ಜನೆಮಾಡಿ, ಇವತ್ತೋ, ನಾಳೆಯೋ ಹೊರಟುಹೋಗುತ್ತಾ ಇದ್ದಾನೆ ದೇವರ ಸನ್ನಿಧಾನಕ್ಕೆ. ಆದರೆ ನೀನು ? ನೀನು ಬದುಕಿರುವಷ್ಟು ದಿನವೂ ಇವತ್ತು ನೀನು ಮಾಡಿರುವುದನ್ನು ಜ್ಞಾಪಕ ಇಟ್ಟುಕೊಂಡಿರಬೇಕಾಗತ್ತೆ. ಬೇಡ ಬೇಡ ಅಂದರೂ ಆ ನೆನಪು ನಿನ್ನ ಪ್ರಾಣ ಹಿಂಡದೇ ಬಿಡುವುದಿಲ್ಲ, ನೋಡುತ್ತಾಯಿರು. ದೇವರಿದ್ದಾನೆ. ದೇವರಿದ್ದಾನೆ, ದೇವರಿದ್ದಾನೆ. ಒಂದು ದಿನ ಗೊತ್ತಾಗತ್ತೆ ನಿನಗೆ ಅದು."

"ಅತ್ತೇ, ಏನಿದು, ಹಾಗೆಲ್ಲ ಶಾಪಗೀಪ ಕೊಡಬೇಡಿ, ಹೇಳಿದ್ದೀನಿ."

"ಅಯ್ಯೋ, ಯತೀನಾ, ನೀನು ಯಾಕೋ ಇನ್ನೂ ಬದುಕಿದ್ದೀಯಾ ನನ್ನಪ್ಪಾ, ಎಂಥ ನಿರ್ಭಾಗ್ಯನೋ ನೀನು ! ಈ ಪಾಪಕ್ಕೆ ಕೊನೆಯೇ ಇಲ್ಲ....ಇನ್ನು ನಾನು ಅವನ ಮುಂದೆ ಮರೆಮಾಚುವ ಹಾಗಿಲ್ಲ."

* * *

ಆಮೇಲೆ ಅತ್ತೆ ಸ್ವಲ್ಪ ತಡಮಾಡಿಕೊಂಡು ರೋಗಿಯ ಕೋಣೆಗೆ ಬಂದಳು. ಅಷ್ಟುಹೊತ್ತಿಗೆ ಯತೀನನು ಮಲಗಿರುತ್ತಾನೆಂದು ಆಶಿಸಿದ್ದಳು. ಆದರೆ ಕೋಣೆಯನ್ನು ಹೊಕ್ಕೊಡನೆ ಅವನು ಹಾಸಿಗೆಯ ಮೇಲೆ ಅತ್ತಿತ್ತ ಹೊರಳಿ ಮೇಲಕ್ಕೆದ್ದು ಕೂತ. ಆಗ ಅತ್ತೆ ಅವನ ಕಡೆ ನೋಡದೆ "ನೋಡು ಮತ್ತೀಗ, ಇವಳು ಮಾಡಿರುವ ಕೆಲಸ" ಅಂದಳು.

"ಏನಾಯಿತು. ಮಣಿ ಬರಲಿಲ್ಲವೇ ? ಯಾಕೆ ಇಷ್ಟು ತಡವಾಯಿತು ಅತ್ತೆ?"

"ಹೋಗಿ ನೋಡುತ್ತೇನೆ, ನಿನಗೋಸ್ಕರ ಹಾಲು ಕಾಸುವುದಕ್ಕೆ ಹೋಗಿ ಎಲ್ಲ ಉಕ್ಕಿಸಿಬಿಟ್ಟಳು. ಅದಕ್ಕೆ ಅಳುತ್ತಾ ಕೂತಿದ್ದಾಳೆ. ನಾನು ಹೇಳಿದೆ, ಹೋದರೆ ಹೋಯಿತು, ಏನೀಗ, ಇನ್ನೂ ಹಾಲಿದೆಯಲ್ಲ, ಅಂತ. ಕೇಳಬೇಕಲ್ಲ. ತನ್ನ ಅಜಾಗರೂಕತೆಯಿಂದ ನೀನು ಕುಡಿಯುವ ಹಾಲನ್ನ ಉಕ್ಕಿಸಿ ಹಾಳು ಮಾಡಿಬಿಟ್ಟೆನಲ್ಲ, ಅಂತ ಅವಳಿಗೆ ವಿಪರೀತ ಸಂಕಟ, ನಾಚುಗೆ, ಏನು ಮಾಡಿದರೂ ಸಮಾಧಾನವಿಲ್ಲ. ಕಡೆಗೆ ಎಷ್ಟೋ ಹೇಳಿ ಸಂತೈಸಿದ ಮೇಲೆ ತಣ್ಣಗಾಗಿ ಸ್ವಲ್ಪ ಮಲಗಿದ್ದಾಳೆ. ಇವತ್ತು ಅವಳು ಇನ್ನು ಬರುವಹಾಗಿಲ್ಲ. ಮಲಗಿ ನಿದ್ದೆಮಾಡಲಿ ಬಿಡು."

ಮಣಿ ಬರಲಿಲ್ಲವೆಂದು ಯತೀನನ ಎದೆಯೊಳಗೆ ಎಷ್ಟು ಚುಚ್ಚಿತೋ ಅಷ್ಟೇ ಸಮಾಧಾನವೂ ಆಯಿತು ಆಮೇಲೆ. ಅವನ ಮನಸ್ಸಿನಲ್ಲಿ ಒಂದು ಶಂಕೆಯಿತ್ತು. ಮಣಿ ಸಶರೀರಳಾಗಿ ಬಂದು ಅವನ ಧ್ಯಾನದಲ್ಲಿದ್ದ ಅವಳ ಮಧುರ ಕಲ್ಪನಾಮೂರ್ತಿಯನ್ನು ಒಡೆದುಹಾಕಿಬಿಡುವಳೇನೋ ಎಂಬುದಾಗಿ. ಹೀಗೆ ಎಷ್ಟೋ ಬಾರಿ ಆಗಿತ್ತು. ಹಾಲು ಉಕ್ಕಿಸಿದೆನಲ್ಲ ಎಂಬ ಅನುತಾಪದಿಂದ ಮಣಿಯ ಕೋಮಲ ಹೃದಯ ನೋವನುಭವಿಸುತ್ತಿದೆಯೆಂಬ ಸುದ್ದಿಯ ಮಧುರ ರಸವೇ ಅವನ ಹೃದಯವನ್ನೀಗ ತುಂಬಿ ತೃಪ್ತಿಗೊಳಿಸಿತು.

"ಅತ್ತೇ ?"

"ಏನಪ್ಪ ?"

"ನನಗೆ ಚೆನ್ನಾಗಿ ಗೊತ್ತಾಗಿಹೋಗಿದೆ. ನನ್ನ ದಿನಗಳು ಮುಗಿಯುತ್ತ ಬಂದಿವೆ. ಆದರೆ, ನನ್ನ ಮನಸ್ಸಿನಲ್ಲಿ ಖೇದವೇನೂ ಇಲ್ಲ. ನೀನು ನನಗಾಗಿ ಶೋಕಪಡಬೇಡ."

"ಇಲ್ಲಪ್ಪ, ನಾನು ಶೋಕಪಡುವುದಿಲ್ಲ. ಬದುಕಿನಲ್ಲಿರುವ ಮಂಗಳ, ಮರಣದಲ್ಲಿ ಇಲ್ಲವಲ್ಲ ಎಂದು ನಾನು ಯೋಚನೆ ಮಾಡುವುದಿಲ್ಲ ಕಣೋ."

"ಅತ್ತೆ, ನಿನಗೆ ಸತ್ಯವಾಗಿ ಹೇಳುತ್ತೇನೆ. ನನಗೆ ಸಾವೆಂದರೆ ಅತಿ ಸವಿಯಾಗಿ ತೋರುತ್ತದೆ."

ಕತ್ತಲು ತುಂಬಿದ ಮುಗಿಲ ಕಡೆ ದಿಟ್ಟಿಸಿ ನೋಡುತ್ತಿದ್ದ ಯತೀನ. ಅವನ ಮಣಿಯೇ ಇಂದು ಮೃತ್ಯುವಿನ ವೇಷ ಧರಿಸಿ ನಿಂತಿದ್ದಾಳೆನ್ನಿಸಿತು. ಅವಳಿಂದು

ಅಕ್ಷಯ ಯೌವನದಿಂದ ಪೂರ್ಣಳಾಗಿದ್ದಾಳೆ. ಅವಳು ಗೃಹಿಣಿ, ಜನನಿ, ಅವಳು ರೂಪಸಿ. ಅವಳು ಕಲ್ಯಾಣಿ. ಅವಳ ಮನಮೋಹಕವಾದ ಕೆದರಿದ ಗುಂಗುರು ಕೂದಲಿನ ಮೇಲೆ ಈ ಆಕಾಶದ ನಕ್ಷತ್ರ ಮಂಡಲವು ಲಕ್ಷ್ಮಿಯು ಕೈಯಾರೆ ಹಾಕಿದ ಆಶೀರ್ವಾದದ ಮಾಲೆಯಂತೆ. ಅವರಿಬ್ಬರ ತಲೆಗಳ ಮೇಲೆ ಈ ಅಂಧಕಾರದ ಮಂಗಲವಸ್ತ್ರ ಪಸರಿಸಲ್ಪಟ್ಟು ಮತ್ತೆ ಹೊಸದಾಗಿ ಶುಭ ದೃಷ್ಟಿಯಾದಂತಾಯಿತು. ರಾತ್ರಿಯ ಈ ವಿಪುಲ ಅಂಧಕಾರವು ಕೂಡ ಮಣಿಯ ಎವೆಯಿಕ್ಕದ ಪ್ರೇಮದ ನೋಟದಲ್ಲಿ ಹರಿದು ಕೊಚ್ಚಿಹೋಯಿತು.

ಈ ಮನೆಯ ಸೊಸೆ ಮಣಿ, ಮೊನ್ನೆ ಮೊನ್ನೆ ಇಷ್ಟೇ ಚೋಟುದ್ದ ಇದ್ದವಳು ಇಂದು ವಿಶ್ವರೂಪ ಧರಿಸಿಬಿಟ್ಟಿದ್ದಾಳೆ. ಜೀವನ, ಮರಣಗಳ ಸಂಗಮ ತೀರ್ಥದಲ್ಲಿ ಈ ನಕ್ಷತ್ರ ವೇದಿಕೆಯ ಮೇಲೆ ಅವಳೀಗ ಕೂತಿದ್ದಾಳೆ. ನಿಸ್ತಬ್ಧ ರಾತ್ರಿಯು ಮಂಗಳ ಘಟದಂತೆ ಪುಣ್ಯಧಾರೆಯಿಂದ ತುಂಬಿ ಹರಿಯಿತು. ಯತೀನನು ಕೈ ಜೋಡಿಸಿ ಮನದಲ್ಲೇ "ಇಷ್ಟು ದಿನಗಳಾದ ಮೇಲೆ ಮುಖ ಪರದೆ ತೆರೆಯಲ್ಪಟ್ಟಿತು. ಈ ಗಾಢವಾದ ಕತ್ತಲ ನಡುವೆ ಅವಳ ಮುಸುಕು ಕಳಚಿಬಿತ್ತು.

–"ಎಷ್ಟು ಗೋಳಾಡಿಸಿದ್ದೀಯೆ, ಸುಂದರಿ, ಹೇ ಸುಂದರಿ, ನೀನಿನ್ನುಮೇಲೆ ನನ್ನನ್ನು ವಂಚಿಸಿಡಲಾರೆ."

೪

"ನನಗೆ ಕಷ್ಟವೇನೋ ಆಗುತ್ತಿದೆ, ಅತ್ತೆ. ಆದರೆ ನೀನಂದುಕೊಂಡಿರುವಷ್ಟಲ್ಲ. ನನ್ನ ಸಂಗಡ ನನ್ನ ಕಷ್ಟವೂ ಕ್ರಮೇಣ ಅಗಲಿ ಹೋಗುತ್ತಿರುವಂತಿದೆ. ಸರಕು ಹೇರಿರುವ ದೋಣಿಯಂತೆ ಸಂಕಟವು ನನ್ನ ಬದುಕಿನ ದೋಣಿಯೊಂದಿಗೆ ಕಟ್ಟಿಹಾಕಲ್ಪಟ್ಟಿತ್ತು. ಇವತ್ತು ಒಮ್ಮೆಗೇ ಆ ಬಂಧನ ಕಿತ್ತುಹಾಕಲ್ಪಟ್ಟಿದೆಯೆನ್ನಿಸುತ್ತಿದೆ. ನನ್ನ ಸಂಕಟದ ಹೊರೆ ಈಗ ನನ್ನಿಂದ ದೂರವಾಗುತ್ತಿರುವ ಹಾಗಿದೆ. ನನ್ನ ಕಣ್ಣಿಗೇನೋ ಕಾಣಬರುತ್ತಿದೆ. ಆದರೆ ಅದನ್ನು ಇನ್ನುಮೇಲೆ ನನ್ನದು ಎನ್ನುವ ಹಾಗಿಲ್ಲ.–ಈ ಎರಡು ದಿನಗಳಿಂದಲೂ ಏಕೋ ಮಣಿಯೇ ಕಣ್ಣಿಗೆ ಬೀಳುತ್ತಿಲ್ಲವಲ್ಲ, ಅತ್ತೆ ?"

"ಬೆನ್ನ ಹಿಂದೆ ಇನ್ನೊಂದು ದಿಂಬು ಕೊಡಲೇನೋ ಒರಗಿಕೊಳ್ಳಲಿಕ್ಕೆ ?"

"ನನಗೇನೊ ಅನ್ನಿಸುತ್ತಿದೆ, ಅತ್ತೆ, ಮಣಿಯೂ ನನ್ನಿಂದ ದೂರವಾಗುತ್ತಿದ್ದಾಳೆ ಅಂತ, ನನ್ನ ಬದುಕಿನ ದೋಣಿಯ ಸರಕಿನಂತೆ..."

"ಲೋ, ಯತೀನ ಸ್ವಲ್ಪ ದಾಳಿಂಬೆ ರಸ ಕೊಡಲೇನೋ? ನಿನ್ನ ಗಂಟಲು ಒಣಗಿಕೊಂಡು ಬರುತ್ತಿದೆ."

"ಅತ್ತೆ ನನ್ನ ಉಯಿಲನ್ನು ನಿನ್ನೆ ಬರೆಯಿಸಲಾಯಿತು. ಅದನ್ನ ನಾನು ನಿನಗೆ ತೋರಿಸಿದೆನೆ ? ನನಗೆ ನೆನಪಿಲ್ಲ."

"ನಾನು ನೋಡಬೇಕಾದ ಅಗತ್ಯವಿಲ್ಲವೋ, ಯತೀನ."

"ಅತ್ತೇ, ಅಮ್ಮ ಸಾಯುವಾಗ ನಿನ್ನ ಹತ್ತಿರ ಏನೂ ಇರಲಿಲ್ಲ. ನೀನು ನನಗೆ ಆಶ್ರಯ ಕೊಟ್ಟೆ, ನಿನ್ನ ಅನ್ನ ತಿಂದೆ ನಾನು. ನಿನ್ನಿಂದಲೇ ನಾನು ಮನುಷ್ಯನಾದದ್ದು. ಅದಕ್ಕೇ ಹೇಳುತ್ತಾಯಿದ್ದೆ."

"ಅದೆಲ್ಲಾ ಈಗೇಕೋ ಯತೀನ. ನನಗಿದ್ದದ್ದು ಇದೊಂದು ಮನೆ ಅಷ್ಟೇ, ಜೊತೆಗೊಂದಿಷ್ಟು ಸಾಮಾನ್ಯ ಹಣ. ಉಳಿದಿದ್ದೆಲ್ಲಾ ನಿನ್ನ ಸ್ವಂತ ಸಂಪಾದನೆಯಲ್ಲವೇನೋ ?"

"ಆದರೆ ಈ ಮನೆ ?"

"ಈ ಮನೆ ನನ್ನದು ಹೇಗಾಯಿತು ? ಎಷ್ಟು ಹೊಸದಾಗಿ ಸೇರಿಸಿ ಕಟ್ಟಿಸಿದ್ದೀಯ ನೀನು, ಏನು ಕಥೆ. ನನ್ನ ಮನೆ ಅಂತ ಯಾವುದಿತ್ತೋ ಅದೆಲ್ಲಿದೆ, ಹುಡುಕಿದರೂ ಕಾಣುವುದಿಲ್ಲ."

"ಅತ್ತೇ, ಮಣಿ ನಿನ್ನನ್ನು ತನ್ನ ಮನಸ್ಸಿನೊಳಗೇ..."?

"ನನಗೇನು ಗೊತ್ತಪ್ಪಾ ಯತೀನ ? ನೀನಿನ್ನು ಮಲಗು, ಹೋಗಲಿ."

"ಅತ್ತೇ, ನಾನು ಮಣಿಗೆ ಎಲ್ಲಾ ಬರೆದಿಟ್ಟು ಹೋಗಿದೇನೆ ನಿಜ. ಆದರೆ ನಿನ್ನದೇ ಉಳಿದಿದೆ ಎಲ್ಲಾ. ಅವಳು ನಿನ್ನನ್ನ ಎಂದಿಗೂ ನಿರ್ಲಕ್ಷ್ಯ ಮಾಡಲಾರಳು."

"ಅದೆಲ್ಲ ಕಟ್ಟಿಕೊಂಡು ಈಗ್ಯಾಕೋ ಅಪ್ಪ ?"

"ಏನತ್ತೆ, ನಿನ್ನ ಆಶೀರ್ವಾದದಿಂದಲೇ ಅಲ್ಲವೆ, ನನಗಿರುವುದೆಲ್ಲ? ನೀನು ನನ್ನ ಉಯಿಲು ನೋಡಿಬಿಟ್ಟು ಎಂದಿಗೂ ಏನೂ ತಪ್ಪು ತಿಳಿದುಕೋಬೇಡ."

"ಇದೇನೋ ಹುಚ್ಚು, ಯತೀನ? ನಿನ್ನ ಸ್ವತ್ತನ್ನ ನೀನು ನಿನ್ನ ಹೆಂಡತಿಗೆ ಬಿಟ್ಟುಹೋದರೆ ನಾನು ತಪ್ಪು ತಿಳಿದುಕೊಳ್ಳಲೇ? ಚೆನ್ನಾಯಿತಪ್ಪ. ನನ್ನ ಬುದ್ಧಿ ಅಷ್ಟು ಹಾಳೇನೋ ಹಾಗಾದರೆ? ನಿನ್ನ ಆಸ್ತಿಯನ್ನ ಅವಳ ಹೆಸರಿಗೆ ಬರೆದಿಟ್ಟು ಹೋಗಲಾಯಿತಲ್ಲ ಅನ್ನುವ ಸುಖ ನಿನಗೆ ತೋಚಿದರೆ, ಅದು ನನ್ನ ಎಲ್ಲ ಸುಖಕ್ಕಿಂತಲೂ ದೊಡ್ಡದು, ಗೊತ್ತೇನೋ ನಿನಗೆ ಮಗೂ?"

"ಇಲ್ಲ, ಅತ್ತೆ, ಎಲ್ಲ ಅವಳಿಗೇ ಅಲ್ಲ. ನಿನಗೂನೂ ಸ್ವಲ್ಪ?"

"ನೋಡು, ಯತೀನ, ಇನ್ನು ನನಗೆ ರೇಗತ್ತೆ ನೋಡುತಾಯಿರು. ನೀನು ನನ್ನನ್ನು ಬಿಟ್ಟು ಹೊರಟುಹೋಗಿ, ಆಮೇಲೆ ಒಂದಿಷ್ಟು ಹಣ ನನ್ನ ಹೆಸರಿಗೆ ಬರೆದುಬಿಟ್ಟು ತೃಪ್ತಿಪಡಿಸಬೇಕು ಅಂತ ಇದ್ದೀಯಾ?"

"ಅತ್ತೆ, ಹಣಕ್ಕಿಂತಲೂ ದೊಡ್ಡದು ಯಾವುದಾದರೂ ಇದ್ದಿದ್ದರೆ ನಿನಗೆ ಕೊಡುವಂಥಾದ್ದು...."

"ಕೊಟ್ಟಿದ್ದೀಯಲ್ಲೋ ಯತೀನ, ಬೇಕಾದಷ್ಟು ಕೊಟ್ಟಿದ್ದೀಯೆ. ನನ್ನ ಬರಿದಾದ ಮನೆಯನ್ನು ತುಂಬಿಸಿಟ್ಟಿದ್ದೆಯಲ್ಲೋ, ಸಾಲದೆ? ಅದು ನನ್ನ ಅನೇಕ ಜನ್ಮಗಳ ಭಾಗ್ಯ ಕಣೋ. ಇಷ್ಟು ದಿನ ನನ್ನ ಹೃದಯ ತುಂಬುವಷ್ಟು ಪಡೆದಿದ್ದೇನೆ ಕಣೋ ನಿನ್ನ ವಿಶ್ವಾಸವನ್ನ. ನಿನ್ನಿಂದ ಪಡೆಯುವುದು ಇಂದೇ ನಿಂತುಹೋದರೂ ನಾನು ದೂರುವುದಿಲ್ಲ. ಕೊಡು, ಕೊಡಪ್ಪ–ಎಲ್ಲಾ ಅವಳಿಗೇ ಬರೆದು ಕೊಡು, ಮನೆ, ಜಮೀನು, ಸಾಮಾನು ಸರಂಜಾಮು, ಕುದುರೆ ಗಾಡಿ, ಆಕಳು–ಏನೇನಿದೆಯೋ ಎಲ್ಲಾ ಮಣಿಯ ಹೆಸರಿಗೇ ಬರೆಸಿಡೋ, ನನ್ನದೇನೂ ಅಡ್ಡಿಯಿಲ್ಲ. ಅವೆಲ್ಲ ಭಾರ ನನ್ನ ಕೈಲಿ ತಡೆಯುವುದಕ್ಕೆ ಆಗೋದಿಲ್ಲಪ್ಪ."

"ನಿನಗೆ ಭೋಗದಲ್ಲಿ ರುಚಿ ಇಲ್ಲ. ಆದರೆ ಮಣಿಯ ವಯಸ್ಸು ಚಿಕ್ಕದು, ಅದಕ್ಕೇ."

"ಆ ಮಾತು ತಿರುಗಿ ಆಡಬೇಡ, ಆಡಬೇಡ. ಧನ, ಸಂಪತ್ತು ಕೊಡುವುದೇನೋ ಕೊಡುತ್ತೀಯೆ ಕೊಡು. ಆದರೆ ಭೋಗಿಸುವ ಯೋಗ್ಯತೆ?"

"ಯಾಕತ್ತೆ, ಅವಳಿಗೆ ಅದನ್ನ ಭೋಗಿಸುವುದಕ್ಕೆ ಆಗುವುದಿಲ್ಲವೆ?"

"ಅದೇ ನಾ ಹೇಳೋದು, ಕಣೋ. ಅವಳಿಗೆ ಭೋಗಿಸುವುದಕ್ಕೆ ಬರೋದಿಲ್ಲ, ನಾನು ಹೇಳುತ್ತೇನೆ. ಅದು ಅವಳಿಗೆ ರುಚಿಸುವುದಿಲ್ಲ. ಗಂಟಲು ಒಣಗಿಕೊಂಡು ಕಟ್ಟಿಗೆಯಾಗಿ ಹೋಗತ್ತೆ. ಯಾವುದರಿಂದಲೂ ಯಾವ ರಸವೂ ಸಿಗುವುದಿಲ್ಲ ಅವಳಿಗೆ."

ಯತೀನನು ಸುಮ್ಮನಾದ. ತಾನಿಲ್ಲದಿರುವ ಸಂಸಾರ ಮಣಿಯ ಪಾಲಿಗೆ ನೀರಸವಾಗಿಹೋಗುತ್ತದೆ ಎನ್ನುವ ಮಾತು ನಿಜವೋ, ಸುಳ್ಳೋ, ಅದು ಸುಖವೋ, ದುಃಖವೋ ಎಂಬುದಾಗಿ ಅವನು ಎಷ್ಟು ಯೋಚಿಸಿದರೂ ನಿಷ್ಕರ್ಷಿಸಲಾರ. ಆಕಾಶದ ತಾರೆಗಳೆಲ್ಲ ಅವನ ಹೃದಯದ ನಡುವೆ ಬಂದು ಅವನ ಕಿವಿಯಲ್ಲಿ ಹೇಳಿದುವು–

"ನಿಜ, ಅದೇ ನಿಜ. ನಾವುಗಳು ಸಹಸ್ರಾರು ವರುಷಗಳಿಂದ ಇದನ್ನೇ ನೋಡುತ್ತ ಬರುತ್ತಿದ್ದೇನೆ. ಸಂಸಾರ ಜೋಡಿಸುವುದು ಮುಂತಾದ ಹವಣಿಕೆಗಳೆಲ್ಲ ಬರೇ ಮೋಸ–ಮೋಸ."

ಯತೀನನು ಗಂಭೀರವಾದ ನಿಟ್ಟುಸಿರು ಬಿಟ್ಟು "ಕೊಡತಕ್ಕಂಥ ವಸ್ತು ಯಾವುದಿದೆ, ನಾವು ಬಿಟ್ಟು ಹೋಗೋಣವೆಂದರೆ? ಯಾವುದೂ ಇಲ್ಲ" ಎಂದ.

"ಏನೋ ಹಾಗೆಂದರೆ, ನೀನು ಬಿಟ್ಟು ಹೋಗುವುದೇನು ಕಡಿಮೆ ವಸ್ತುವೇ? ಈ ಮನೆ, ಬಾಗಿಲು, ಹಣ, ಒಡವೆ, ಎಲ್ಲಾ ಅವಳಿಗೆ ವಿಶ್ವಾಸದಿಂದ ಬಿಟ್ಟು ಹೋದರೆ ಅದರ ಬೆಲೆಯನ್ನ ಅವಳೆಂದೂ ತಿಳಿದುಕೊಳ್ಳದೇ ಹೋಗುತ್ತಾಳೇ?

ನೀನು ಕೊಟ್ಟಿರುವ ಸಂಪತ್ತನ್ನೆಲ್ಲ ತಲೆಬಾಗಿ ತೆಗೆದುಕೊಂಡು ಅನುಭವಿಸುವ ಶಕ್ತಿಯನ್ನು ಅವಳಿಗೆ ದೇವರು ಕೊಡಬೇಕು. ಅದೇ ನನ್ನ ಹಾರೈಕೆ."

"ಇನ್ನು ಸ್ವಲ್ಪ ದಾಳಿಂಬೆ ರಸ ಕೊಡು ಅತ್ತೆ. ನನ್ನ ಗಂಟಲೇಕೋ ಒಣಗಿಕೊಂಡು ಬರುತ್ತಿದೆ. ಮಣಿ ಹಾಗಾದರೆ ನಿನ್ನೆ ಬಂದಿದ್ದಳಾ? ಇಲ್ಲಿಗೆ? ನನಗೆ ಸರಿಯಾಗಿ ನೆನಪಿಲ್ಲ."

"ಹೂಂ, ಬಂದಿದ್ದಳು. ಆ ಸಮಯಕ್ಕೆ ಸರಿಯಾಗಿ ನೀನು ನಿದ್ದೆ ಮಾಡಿ ಬಿಟ್ಟಿದ್ದೆ. ನಿನ್ನ ತಲೆದೆಸೆಯಲ್ಲಿ ಕೂತುಕೊಂಡು ಸ್ವಲ್ಪ ಹೊತ್ತು ಗಾಳಿ ಬೀಸುತ್ತ ಇದ್ದು ಆಮೇಲೆ ಅಗಸನಿಗೆ ನಿನ್ನ ಬಟ್ಟೆಗಳನ್ನು ಹಾಕುವುದಕ್ಕೆಂದು ಎದ್ದು ಹೋದಳು."

"ಆಶ್ಚರ್ಯ, ಅತ್ತೆ, ಬಹುಶಃ ಅದೇ ಸಮಯದಲ್ಲಿ ನಾನೊಂದು ಕನಸು ಕಂಡಿದ್ದೆ. ಏನೆಂದರೆ ಮಣಿ ನನ್ನ ಬಳಿ ಬರಬೇಕೆಂದು ಇದ್ದಾಳೆ. ಬಾಗಿಲು ಸ್ವಲ್ಪವೇ ಸ್ವಲ್ಪ ತೆಗೆದಿದೆ. ಪೂರ್ತಿ ತೆಗೆಯಲು ಸುಮ್ಮನೆ ಎಳೆದಾಡುತ್ತಾಳೆ. ಆದರೆ ಏನು ಮಾಡಿದರೂ ಅದನ್ನು ಇನ್ನೂ ಸ್ವಲ್ಪ ಹೆಚ್ಚಾಗಿ ತೆಗೆಯುವುದಕ್ಕೆ ಆಗುವುದೇ ಇಲ್ಲ. ನನಗನ್ನಿಸುತ್ತೆ, ಅತ್ತೆ, ನೀವೆಲ್ಲ ಅವಳನ್ನು ಅನ್ಯಾಯವಾಗಿ ತಡೆಯುತ್ತಾ ಇದ್ದೀರಿ. ನಾನು ಸಾಯುತ್ತಾ ಇರುವುದನ್ನು ಅವಳು ನೋಡಲಿ, ಬಿಡಿ. ಇಲ್ಲದೆ ಹೋದರೆ ಆಮೇಲೆ ಸಾವಿನ ಸುದ್ದಿ ಅವಳಿಗೆ ಹಠಾತ್ತಾಗಿ ತಿಳಿದರೆ ಸಹಿಸುವುದಕ್ಕೆ ಆಗದೆ ಹೋದೀತು."

"ಲೋ, ಯತೀನ, ಎಲ್ಲೀ ನಿನ್ನ ಕಾಲ ಮೇಲೆ ಈ ಮೆತ್ತಗಿನ ಶಾಲು ಹೊದಿಸುತ್ತೇನೆ. ನಿನ್ನ ಹಿಮ್ಮಡಿಗೆ ಥಂಡಿಯಾದೀತು."

"ಇಲ್ಲ ಅತ್ತೆ, ಬೇಡ ಬಿಡು. ಮೈಮೇಲೆ ಏನೂ ಹೊದಿಸುವುದು ಬೇಡ ಅನ್ನಿಸತ್ತೆ ನನಗೆ."

"ಗೊತ್ತೇನೋ ಯತೀನ, ಈ ಶಾಲು ಯಾರು ಹೆಣೆಗೆ ಹಾಕಿದ್ದು,–ಮಣಿಯ ಕೈಕೆಲಸ ಅದು. ಇಷ್ಟು ದಿನ ರಾತ್ರಿ ಹೊತ್ತೆಲ್ಲ ಜಾಗರಣೆ ಮಾಡಿ ಇದನ್ನ ನಿನಗೋಸ್ಕರವಾಗಿ ತಯಾರು ಮಾಡುತ್ತಿದ್ದಳು. ನಿನ್ನೆ ಪೂರೈಸಿತು."

ಯತೀನನು ಶಾಲನ್ನು ತೆಗೆದುಕೊಂಡು ಅದರ ಮೇಲೆ ಕೈಯಾಡಿಸಿದ. 'ಆಹಾ, ಈ ಕಾಶ್ಮೀರದ ಉಣ್ಣೆ ಎಷ್ಟು ಮೃದು! ಮಣಿಯ ಮೃದುವಾದ ಮನಸ್ಸಿನಲ್ಲೇ ಮಾಡಿದ್ದೇನೋ! ಅವಳಿದನ್ನು ರಾತ್ರಿಯೆಲ್ಲ ನಿದ್ದೆಗೆಟ್ಟು ತನಗಾಗಿ ತಯಾರು ಮಾಡಿದ್ದಳೇ, ಪಾಪ! ಅದಕ್ಕೇ ಇದು ಇಷ್ಟು ಮೃದುವಾಗಿದೆ. ಅವಳ ಪ್ರೀತಿಯ ಭಾವನೆಗಳೂ ಇದರ ಹೆಣಿಗೆಯಲ್ಲಿ ಸೇರಿಕೊಂಡು ಹೋಗಿವೆ. ಅವಳ ಕೋಮಲ ಕೈ ಬೆರಳುಗಳ ಮೃದುತ್ವವೇ ಇದರಲ್ಲಿರುವುದು' ಎಂದುಕೊಂಡ. ಅತ್ತೆಯು ಶಾಲನ್ನು ಅವನ ಕಾಲಮೇಲೆ ಎಳೆದಾಗ ಅವನಿಗೆನ್ನಿಸಿತು–'ಮಣಿಯು ರಾತ್ರಿಯಾದ ಮೇಲೆ ರಾತ್ರಿ ನಿದ್ದೆಗೆಟ್ಟು ನನ್ನ ಪಾದ ಸೇವೆ ಮಾಡಿದ್ದಾಳೆ.'

"ಆದರೆ, ಅತ್ತೆ, ಮಣಿಗೆ ಹೊಲಿಗೆ, ಕಸೂತಿ ಯಾವುದೂ ಬರುತ್ತಾ ಇರಲಿಲ್ಲವಲ್ಲ ನನಗೆ ತಿಳಿದ ಹಾಗೆ. ಅದೆಲ್ಲ ಮಾಡುವುದಕ್ಕೆ ಅವಳಿಗೆ ಇಷ್ಟವೇ ಇರಲಿಲ್ಲ."

"ಅಯ್ಯೊ, ಹೆಣ್ಣು ಮಕ್ಕಳಿಗೆ ಇದೆಲ್ಲ ಕಲಿಯುವುದು ಎಷ್ಟು ಹೊತ್ತು ಅಂದುಕೊಂಡಿದ್ದೀಯೆ, ಮನಸ್ಸು ಮಾಡಿದರೆ! ಅದರಲ್ಲಿ ಎಷ್ಟೊ ತಪ್ಪು ಹೊಲಿಗೆ ಹಾಕಿದ್ದಾಳೆ. ನಾನು ತೋರಿಸಿಕೊಟ್ಟೆ."

"ಏನತ್ತೆ, ಇದ್ದರೆ ಇರಲೇಳು, ತಪ್ಪು ಹೊಲಿಗೆ! ಇದನ್ನೇನು ಪ್ಯಾರಿಸ್ಸಿನ ಎಕ್ಸಿಬಿಷನ್ನಿಗೆ ಕಳುಹಿಸಬೇಕಾಗಿಲ್ಲವಲ್ಲ! ತಪ್ಪು ಹೊಲಿಗೆ ಹಾಕಿರುವ ಶಾಲಿನಿಂದಲೇ ನನ್ನ ಕಾಲುಗಳಿಗೆ ಹಾಯಾಗಿರುತ್ತದೆ."

ಶಾಲಿನ ಹೆಣಿಗೆಯಲ್ಲಿ ಅನೇಕ ತಪ್ಪುಗಳಿವೆಯೆಂದು ತಿಳಿದು ಯತೀನನಿಗೆ ಇನ್ನೂ ಆನಂದವಾಯಿತು. ಪಾಪ, ಅವಳಿದನ್ನು ಚೆನ್ನಾಗಿ ಕಲಿತಿಲ್ಲ. ಆದರೂ ಉತ್ಸಾಹ. ತಪ್ಪುಗಳು ಮಾಡಿದರೂ ಪರವಾಯಿಲ್ಲ. ಮಾಡಲೇಬೇಕೆಂಬ ಹಠ. ನಿದ್ದೆಗೆಟ್ಟರೂ ಚಿಂತೆ ಇಲ್ಲ. ಅಹಾ ಏನು ವಿಶ್ವಾಸ! ಇದರ ಕಲ್ಪನೆಯಿಂದಲೇ ಅವನ ಮನದಲ್ಲಿ ಮರುಕದ, ಮಾಧುರ್ಯದ ರಸ ತುಂಬಿಕೊಂಡಿತು.

ಆ ತಪ್ಪು ಹೊಲಿಗೆಯ ಶಾಲನ್ನೇ ಮತ್ತೆ ಮತ್ತೆ ಕೈಯಲ್ಲಿ ನೇವರಿಸಿ ಅದರ ಮೃದುತ್ವವನ್ನನುಭವಿಸಿದ.

* * *

"ಅತ್ತೇ, ಡಾಕ್ಟರೆಲ್ಲಿ, ಕೆಳಗಡೆಯ ಕೋಣೆಯಲ್ಲಿದ್ದಾರಾ?"

"ಹೌದು ಕಣೋ, ಇವತ್ತು ರಾತ್ರಿಯೆಲ್ಲ ಇಲ್ಲೇ ತಂಗುತ್ತಾರೆ."

"ಆಮೇಲೆ, ನೋಡತ್ತೆ, ನನಗೆ ಆ ಹಾಳು ನಿದ್ದೆಮಾತ್ರೆ ಕೊಡಬೇಡ ಅಂತ ಹೇಳು. ನೀನೇ ನೋಡಿದೆ, ಅದರಿಂದ ನನಗೆ ಸ್ವಲ್ಪವೂ ನಿದ್ದೆಬರುವುದಿಲ್ಲ. ಸಂಕಟ ಮಾತ್ರ ಜಾಸ್ತಿಯಾಗತ್ತೆ. ಅದರ ಬದಲು ಸ್ವೇಚ್ಛೆಯಾಗಿ ಎಚ್ಚರವಾಗೇ ಇದ್ದುಬಿಡುತ್ತೇನೆ, ಬಿಡು. ಗೊತ್ತೇ ನಿನಗೆ ಅತ್ತೆ? ವೈಶಾಖಮಾಸದ ದ್ವಾದಶಿಯಲ್ಲಿ ತಾನೇ ನನಗೆ ಮದುವೆ ಆದದ್ದು! ನಾಳೆ ಆ ದ್ವಾದಶಿಯೇ! ನಾಳೆ ಆ ದಿನದ ರಾತ್ರಿಯಲ್ಲಿ ಹುಟ್ಟಬೇಕಾದ ನಕ್ಷತ್ರಗಳೆಲ್ಲ ಆಕಾಶದಲ್ಲಿ ಮಿನುಗುಟ್ಟುತ್ತಾ ಇರುತ್ತವೆ. ಮಣಿಗೆ ಬಹುಶಃ ನೆನಪಿರಲಿಕ್ಕಿಲ್ಲ. ಇವತ್ತು ನಾನವಳಿಗೆ ಅದನ್ನೇ ನೆನಪು ಮಾಡಿಕೊಡಬೇಕೆಂದಿದ್ದೇನೆ. ಅದಕ್ಕೇ ಅವಳನ್ನು ನೀನು ಎರಡೇ ಎರಡು ನಿಮಿಷಕ್ಕಾಗಿ ಇಲ್ಲಿ ಬಾ ಅಂತ ಕರಿ. ಯಾಕೆ ಸುಮ್ಮನಿದ್ದೀ? ಡಾಕ್ಟರೇನಾದರೂ ಹೇಳಿದ್ದಾರಾ? ನನಗೆ ಮೈ ಹೆಚ್ಚು ನಿಶ್ಶಕ್ತಿ. ಅದಕ್ಕೇ ನನ್ನ ಮನಸ್ಸಿಗೇನೂ. ಆದರೆ, ಅತ್ತೆ, ನಾನು ನಿನಗೆ ಖಂಡಿತವಾಗೂ ಹೇಳುತ್ತೇನೆ. ಇವತ್ತು ರಾತ್ರಿ ನಾನವಳ ಜೊತೆಯಲ್ಲಿ ಎರಡು ಮಾತು ಆಡುವ ಹಾಗಿದ್ದರೆ ನನ್ನ

ಜೀವಕ್ಕೆ ಎಷ್ಟೋ ತೃಪ್ತಿಯಾಗುತ್ತೆ, ಗೊತ್ತಾ? ಅದೊಂದು ಆಗುವ ಹಾಗಿದ್ದರೆ ನನಗಿನ್ನು ನಿದ್ದೆ ಮಾತ್ರೆಯೇ ಕೊಡಬೇಕಾಗಿಲ್ಲ. ಅವಳಿಗೆ ಆವಶ್ಯಕವಾದ ಒಂದೆರಡು ಮಾತುಗಳನ್ನ ಹೇಳಬೇಕು ಅಂತ ನನ್ನ ಮನಸ್ಸು ಚಡಪಡಿಸುತ್ತಾ ಇದೆ, ಅದಕ್ಕಾಗೇ ನನಗೆ ನಿದ್ದೆ ಬರದೇ ಇದ್ದದ್ದು, ಈ ಎರಡು ರಾತ್ರಿಗಳಿಂದ. ಅತ್ತೇ, ನೀನು ಯಾಕೆ ಹಾಗೆ ಅಳುತ್ತಿರುವುದು? ಬೇಡ, ಅಳಬೇಡ, ನನಗೇನಾಗಿದೆ, ಚೆನ್ನಾಗೇ ಇದ್ದೇನಲ್ಲ! ಇವತ್ತು ನನ್ನ ಮನಸ್ಸು ಹೇಗೆ ತುಂಬಿಕೊಂಡಿದೆ ಗೊತ್ತಾ? ನಾನು ಹುಟ್ಟಿದಾಗಲಿಂದ ಎಂದೂ ಹೀಗೆ ಆಗಿಲ್ಲ. ಅದಕ್ಕಾಗೇ ನಾನು ಮಣಿಯನ್ನು ಕರೆಯುತ್ತಿರುವುದು. ನನಗನ್ನಿಸುತ್ತಾ ಇದೆ, ಏನು ಗೊತ್ತೇ, ನನ್ನ ಈ ತುಂಬಿದ ಹೃದಯವನ್ನು ಇವತ್ತು ಅವಳ ಕೈಯಲ್ಲಿಟ್ಟರೆ ಸುಖವಾಗಿ ಸಾಯಬಲ್ಲೆ ಅಂತ. ನಾನವಳಿಗೆ ಎಷ್ಟು ದಿನದಿಂದ ಅದೆಷ್ಟು ಮಾತುಗಳನ್ನ ಹೇಳಬೇಕು ಅಂತ ಇದ್ದೇನೋ, ಹೇಳುವುದಕ್ಕೆ ಆಗಲೇ ಇಲ್ಲ. ಆದರೆ ಇನ್ನು ಒಂದು ಕ್ಷಣ ಕೂಡ ತಡಮಾಡುವುದಕ್ಕಾಗದು, ಅವಳನ್ನು ಈಗಲೇ ಕರೆದುಬಿಡು, ಆಮೇಲೆ ಸಮಯ ಸಿಕ್ಕುವುದಿಲ್ಲ ಇನ್ನು. ನೋಡು, ಅತ್ತೇ, ತಿರುಗೀ ಅಳುತ್ತಾ ಇದ್ದೀಯ! ಇಲ್ಲ, ನನಗಿನ್ನದನ್ನ ಸಹಿಸುವುದಕ್ಕಾಗುವುದಿಲ್ಲ. ನಿಲ್ಲಿಸು, ಹೇಳ್ತೀನೆ. ಅಳಬೇಡ. ಇಷ್ಟು ದಿನ ಶಾಂತವಾಗಿದ್ದೆಯಲ್ಲ. ಇವತ್ತೇಕೆ ಇದ್ದಕ್ಕಿದ್ದ ಹಾಗೆ ಹೀಗಾಯಿತು ನಿನಗೆ?"

"ಏನು ಮಾಡಲೋ, ಮಗು, ಅಳುವುದೆಲ್ಲ ಪೂರೈಸಿಬಿಟ್ಟಿದೆ ಅಂದುಕೊಂಡಿದ್ದೆ, ಈಗ ನೋಡಿದರೆ ಇಲ್ಲ, ಇನ್ನೂ ಎಷ್ಟೋ ಬಾಕಿ ಇದೆ. ಇನ್ನು ನನಗೆ ತಡೆಯುವುದಕ್ಕೆ ಆಗುವುದಿಲ್ಲವೋ, ತಡೆಯುವುದಕ್ಕೆ ಆಗುವುದಿಲ್ಲ."

"ಬೇಡ ಅಳಬೇಡ. ಮಣಿಯನ್ನು ಕರೆದುಬಿಡು, ನಾನವಳಿಗೆ ಹೇಳಬೇಕು. ನಾಳೆ ರಾತ್ರಿಗೆ...ಸ್ವಲ್ಪ..."

"ಹೋಗ್ತೇನೆ ಕಣೋ, ಹೋಗ್ತೇನೆ. ಕರೆಯುತ್ತೇನೆ. ಶಂಭು ಬಾಗಿಲ ಹತ್ತಿರ ಇದ್ದಾನೆ. ಏನಾದರೂ ಬೇಕಿದ್ದರೆ ಅವನನ್ನ ಕರಿ."

* * *

ಅತ್ತೆ ಮಣಿಯು ಮಲಗುವ ಕೋಣೆಗೆ ಹೋಗಿ ನೆಲದ ಮೇಲೆ ಕೂತು ಹುಚ್ಚಳಂತೆ ಮೆಲ್ಲಗೆ ಕೂಗಲು ತೊಡಗಿದಳು. ಕಣ್ಣೀರು ಸುರಿಯುತ್ತಲೇ ಇತ್ತು. ಬಿಕ್ಕಳಿಸುತ್ತ ಬಿಕ್ಕಳಿಸುತ್ತಲೇ "ಲೇ, ಬಾರೇ, ಒಂದೇ ಒಂದು ಘಳಿಗೆ ಬಾರೇ, ರಾಕ್ಷಸೀ! ನಿನಗೆ ತನ್ನದೆಲ್ಲ ಕೊಟ್ಟುಹೋಗುತ್ತಾ ಇದ್ದಾನೆ. ಅವನ ಕಡೆಯ ಮಾತನ್ನ ಕೇಳಿ ಹೋಗೇ, ಕಲ್ಲೆದೆಯವಳೇ, ಅವನೀಗ ಸಾಯುತ್ತಾ ಇದ್ದಾನೆ ಕಣೇ, ಈಗಲೂ ಅವನನ್ನ ಹಿಂಸೆ ಮಾಡಬೇಡವೇ!"

* * *

ಯತೀನನು ಯಾವುದೋ ಕಾಲುಸಪ್ಪಳ ಕೇಳಿದಂತೆನ್ನಿಸಿ ಚಕಿತನಾಗಿ "ಯಾರದು? ಮಣೀ!" ಎಂದು ಕೂಗಿ ಎದ್ದು ಕೂತ.

"ಇಲ್ಲ, ನಾನು ಬುದ್ದೀ, ಶಂಭು. ನನ್ನ ಕರೆದಿರಾ?"

"ಇಲ್ಲ...ಹ್ಞ...ಹೋಗಿ ಒಂದು ಸಲ ಚಿಕ್ಕಮ್ಮಾವರನ್ನ ಕರಿ ಇಲ್ಲಿ."

"ಯಾರಿಗೆ ಬುದ್ದೀ?"

"ಚಿಕ್ಕಮ್ಮಾವರನ್ನ ಕಣೋ."

"ಅರೇ, ಅವರಿನ್ನೂ ಬಂದಿಲ್ಲ ಬುದ್ದೀ!"

"ಎಲ್ಲಿಗೆ ಹೋಗಿದಾರೆ?"

"ತೌರೂರಿಗೆ–ಸೀತಾರಾಮಪುರಕ್ಕೆ!"

"ಇವತ್ತು ಹೋದಳೇ?"

"ಇಲ್ಲ ಬುದ್ದೀ, ಮೂರು ದಿನ ಆಗಿಹೋಯಿತು."

ಕ್ಷಣಕಾಲದ ಹೊತ್ತು ಯತೀನನ ಮೈಯೆಲ್ಲ, ಸರ್ವಾಂಗವೂ, ಕತ್ತರಿಸಿ ಬಿಟ್ಟಿತು. ಅವನ ಕಣ್ಣ ಸುತ್ತ ಕತ್ತಲು ಕವಿಯಿತು. ಇದುವರೆಗೆ ದಿಂಬಿಗೊರಗಿಕೊಂಡು ಕೂತಿದ್ದವನು ತತ್‌ಕ್ಷಣ ಕುಸಿದು ಹಾಸಿಗೆ ಮೇಲೆ ನೀಳವಾಗಿ ಕಾಲು ಚಾಚಿ ಬಿದ್ದುಕೊಂಡ. ಕಾಲ ಮೇಲೆ ಆ ಕಾಶ್ಮೀರದ ಶಾಲು ಹೊದಿಸಲ್ಪಟ್ಟಿತ್ತು. ಕಾಲು ಝಾಡಿಸಿ ಅದನ್ನ ಒದ್ದುಹಾಕಿದ.

* * *

ಎಷ್ಟೋ ಗಳಿಗೆಗಳಾದ ಮೇಲೆ ಅತ್ತೆ ಬಂದಾಗ ಯತೀನನು ಮಣಿಯ ಹೆಸರನ್ನೆತ್ತಲಿಲ್ಲ. "ಮರೆತುಬಿಟ್ಟಿದ್ದಾನೆ ಸದ್ಯ" ಎಂದುಕೊಂಡಳು ಅತ್ತೆ.

ಹಠಾತ್ತಾಗಿ ಯತೀನನೊಮ್ಮೆ ಮಾತಾಡಿದ, "ಅತ್ತೇ, ಅವತ್ತು ನನಗಾದ ಕನಸಿನ ವಿಷಯ ಹೇಳಿದೆನೆ ನಿನಗೆ?"

"ಯಾವ ಕನಸೋ ಅದು?"

"ಅದೇ, ಮಣಿ ನನ್ನ ಕೋಣೆಯೊಳಗೆ ಬರಬೇಕೆಂದು ಬಾಗಿಲನ್ನ ಎಳೆಯುತ್ತಿದ್ದಳು. ಏನು ಮಾಡಿದರೂ ಒಂದಿಷ್ಟು ಜಾಗಬಿಟ್ಟು ಕದಲಲಿಲ್ಲ, ಬಾಗಿಲು. ಅವಳು ಹೊರಗಡೆಯೇ ನಿಂತು ನೋಡುತ್ತಾಯಿದ್ದಳು. ಆದರೆ ಎಷ್ಟು ಪ್ರಯತ್ನಿಸಿದರೂ ಒಳಗೆ ಹೋಗುವುದಕ್ಕೆ ಆಗಲಿಲ್ಲ. ಮಣಿ ಹಾಗೇ ಎಷ್ಟು ಹೊತ್ತಾದರೂ ಹೊರಗಡೆಯೇ ನಿಂತುಕೊಂಡಿದ್ದಳು. ನಾನವಳನ್ನ ಎಷ್ಟೋ ಕರೆದೆ. ಆದರೆ ಅವಳಿಗೆ ಬರುವುದಕ್ಕೆ ಸ್ವಲ್ಪವೂ ಆಸ್ಪದವಾಗಲಿಲ್ಲ. ಅವಳಿಗೆ ದಾರಿ ಸ್ವಲ್ಪವೂ ತೆರೆಯಲಿಲ್ಲ."

ಅತ್ತೆಯು ಯಾವ ಮಾತನ್ನೂ ಆಡದೆ ಸುಮ್ಮನೆ ಇದ್ದಳು. ಅವಳೆಂದು ಕೊಂಡಳು–ಇದುವರೆಗೆ ಅವನಿಗೆ ಬರೇ ಸುಳ್ಳಿನ ಮೂಲಕ ಒಂದು ಕೃತಕ ಸ್ವರ್ಗ ಕಟ್ಟಿಕೊಟ್ಟದ್ದೆ. ಇವತ್ತು ಅದು ಕುಸಿದು ಬಿದ್ದುಹೋಯಿತು. ಸಂಕಟ ಬಂದಾಗ

ಅದನ್ನ ಅಂಗೀಕರಿಸುವುದೇ ಒಳ್ಳೆಯದು. ಆತ್ಮವಂಚನೆಯಿಂದ ದೇವರು ಕೊಟ್ಟ ಪೆಟ್ಟನ್ನ ತಪ್ಪಿಸಿಕೊಳ್ಳಲಿಕ್ಕೆ ಹೋಗುವುದು ಮೂರ್ಖತನ, ಅಷ್ಟೇ!

"ಅತ್ತೆ, ನಿನ್ನಿಂದ ನನಗೆ ಸಿಕ್ಕಿರುವ ಪ್ರೀತಿ, ವಿಶ್ವಾಸ–ಅದು ನನ್ನ ಜನ್ಮ, ಜನ್ಮಾಂತರಗಳವರೆಗೂ ಅಕ್ಷಯವಾಗಿರುವ ಭಂಡಾರ. ಅದರಿಂದಲೇ ನನ್ನ ಇಡೀ ಬದುಕು ತುಂಬಿಸಿಕೊಂಡು ಹೋಗುತ್ತಾಯಿದ್ದೇನೆ. ಮುಂದಿನ ಜನ್ಮಕ್ಕೆ ನೀನು ಖಂಡಿತವಾಗೂ ನನ್ನ ಮಗಳಾಗಿ ಹುಟ್ಟುತ್ತಿ, ನೋಡುತ್ತಿರು. ನಾನಾಗ ನಿನ್ನನ್ನ ನನ್ನ ಹೃದಯಪೂರ್ವಕವಾಗಿ ಪ್ರೀತಿಸಿ, ಆರೈಕೆಮಾಡಿ, ಬೆಳೆಸುತ್ತೇನೆ."

"ಇದೇನೋ ನೀನು ಹೇಳುತ್ತಿರುವುದು, ಯತೀನ? ಮತ್ತೆ ಹೆಣ್ಣಾಗಿ ಹುಟ್ಟಬೇಕೇನೋ, ಸಾಕಪ್ಪ ಸಾಕು...ಅದರ ಬದಲು ನಿನ್ನ ಮಗನಾಗಿ ಹುಟ್ಟುತ್ತೇನೆ ಕಣೋ, ಹಾಗಂತಲೇ ಪ್ರಾರ್ಥನೆ ಮಾಡಿಕೋ."

"ಇಲ್ಲ, ಇಲ್ಲ, ಮಗನಾಗಿ ಬೇಡ. ಚಿಕ್ಕವಯಸ್ಸಿನಲ್ಲಿ ನೀನೆಷ್ಟು ಸುಂದರಿಯಾಗಿದ್ದೆ. ಅದೇ ಅಪೂರ್ವ ಸುಂದರಿಯಾಗಿ ನನ್ನ ಮನೆ ಬೆಳಗಿಸಲು ಬರುತ್ತಿ. ಆಗ ನೋಡು, ಆಗ ನಿನ್ನನ್ನ ಹೇಗೆ ಶಿಸ್ತು ಮಾಡಿ ಅಲಂಕಾರ ಮಾಡುತ್ತೇನೋ! ನಾನು ಮನಸ್ಸು ಮಾಡಿಬಿಟ್ಟಿದ್ದೇನೆ ಆಗಲೇ."

"ಇನ್ನು ಸಾಕಪ್ಪ...ಇನ್ನು ಮಾತಾಡಿ ಸುಸ್ತುಮಾಡಿಕೊಳ್ಳಬೇಡ, ಸ್ವಲ್ಪ ನಿದ್ದೆಮಾಡು."

"ನಿನ್ನ ಹೆಸರೇನಿಡುತ್ತೇನೆ ಗೊತ್ತಾ–ಲಕ್ಷ್ಮೀರಾಣಿ."

"ಚೆನ್ನಾಯಿತು ಬಿಡು. ಅದು ಹಳೇ ಕಾಲದ ಹೆಸರಲ್ಲವೇನೋ?"

"ಇರಬಹುದು. ಅದು ಈಗಿನ ಕಾಲದ್ದಲ್ಲ. ಹಳೇಕಾಲದ್ದೇ ಇರಲಿ. ಅದೇ ಚೆನ್ನ. ನೀನು ನನಗೆ ಹಳೇ ಕಾಲದವಳೇ, ಹಳೇ ಕಾಲದವಳಾಗೇ ನನ್ನ ಮನೆಯಲ್ಲಿ ಹುಟ್ಟಿಬಾ!"

"ನಿನ್ನ ಮನೆಯಲ್ಲಿ ನಾನು ಹುಟ್ಟಿ ಕನ್ಯಾಭಾರ ಹೊರಿಸಲೇನೋ ನಿನ್ನ ಮೇಲೆ, ಚೆನ್ನಾಗಿ ಹೇಳಿದೆ ಬಿಡು. ನಾನಂತೂ ಇಂಥ ಪ್ರಾರ್ಥನೆ ಕೇಳಿಕೊಳ್ಳುವುದಿಲ್ಲಪ್ಪ!"

"ಅತ್ತೇ, ನೀನು ನನ್ನನ್ನು ಅಷ್ಟು ದುರ್ಬಲ ಅಂತ ಅಂದುಕೊಂಡಿದ್ದೀಯಾ? ಅದಕ್ಕೇ ನನ್ನನ್ನ ದುಃಖದಿಂದ ಪಾರುಮಾಡಬೇಕೆಂದಿದ್ದೀಯಾ?"

"ಅಲ್ಲ ಕಣೋ, ನನ್ನದಂತೂ ಹೆಣ್ಣುಜೀವ. ನನ್ನ ಮನಸ್ಸೂ ಹೆಣ್ಣು ಮನಸ್ಸು. ನಾನೇ ದುರ್ಬಲಳು, ಅದಕ್ಕೇ ನಾನು ನಿನ್ನ ಬಗ್ಗೆ ಅಷ್ಟು ಭಯಪಡುವುದು, ನಿನ್ನನ್ನ ಎಲ್ಲ ದುಃಖಗಳಿಂದಲೂ ಸದಾ ದೂರವಿಡಬೇಕೆಂದು ಇಷ್ಟಪಡುವುದು! ಆದರೆ ನನ್ನಿಂದ ಎಷ್ಟುತಾನೇ ಸಾಧ್ಯ? ನಾನೇನು ಮಾಡುವುದಕ್ಕೂ ಆಗಲಿಲ್ಲ."

"ಅತ್ತೇ, ನಾನೀ ಜೀವನದ ಶಿಕ್ಷಣವನ್ನು ಈ ಜೀವನದಲ್ಲೇ ಪಡೆಯಲಾಗಲಿಲ್ಲ. ಅದೆಲ್ಲ ಶೇಖರಿಸಿಕೊಂಡಿದೆ. ಮುಂದಿನ ಜನ್ಮದಲ್ಲಿ ಮನುಷ್ಯನಾಗಿರುವವನು ಏನೇನು ಮಾಡಬಲ್ಲ ಎಂಬುದನ್ನ ತೋರಿಸಿಕೊಡುತ್ತೇನೆ, ನೋಡುತ್ತಾಯಿರು. ಸದಾ ತನ್ನ

ಕಡೆಯೇ ದೃಷ್ಟಿಯಿಟ್ಟು ಬದುಕು ಕಳೆಯುವುದು ಎಷ್ಟು ವ್ಯರ್ಥವಾದ ಕೆಲಸ ಅಂತ ಈಗರ್ಥ ಮಾಡಿಕೊಂಡಿದ್ದೇನೆ."

"ಅದೇನೋ ಅಪ್ಪ. ನಾನು ತಿಳಿದ ಹಾಗೆ ನೀನು ಸ್ವಂತಕ್ಕೆ ಏನೂ ಮಾಡಿಕೊಳ್ಳಲಿಲ್ಲ. ಬೇರೆಯವರಿಗೆ ಎಲ್ಲಾ ಕೊಟ್ಟಿದ್ದೀಯೆ."

"ಅತ್ತೆ, ಒಂದು ವಿಷಯದಲ್ಲಿ ನನಗೆ ಹೆಮ್ಮೆಯಿದೆ ನಿಜ. ನಾನು ಸುಖದ ಮೇಲೆ ಜೋರುಮಾಡಿ ಹಕ್ಕು ಸ್ಥಾಪಿಸಲು ಹೋಗಲಿಲ್ಲ. ನನ್ನ ಹಕ್ಕು ನಿಜವಾಗಿಯೂ ಇರುವ ಕಡೆಯೂ, ಜೋರುಮಾಡಿ ಕಸಿದುಕೊಳ್ಳುವೆನೆಂದು ಎಂದೂ ಹೇಳಲಿಲ್ಲ. ಪಡೆಯಲಾಗದೆ ಇದ್ದುದನ್ನು ಕಿತ್ತಾಡಿ ತೆಗೆದುಕೊಳ್ಳಲು ಹೋಗಿಲ್ಲ. ಬೇರೆ ಯಾರಿಗೂ ಬೇಡವಾದಂಥ ವಸ್ತುವನ್ನು ಮಾತ್ರ ನಾನು ಬಯಸುತ್ತಿದ್ದೆ. ಇಡೀ ಬದುಕೆಲ್ಲ ಕೈ ಜೋಡಿಸಿಕೊಂಡೇ ನನಗೆ ಬರಬೇಕಾದುದನ್ನ ಅಪೇಕ್ಷಿಸಿಕೊಂಡಿದ್ದೆ. ಸುಳ್ಳಾದುದನ್ನು ಅರಸಿಕೊಂಡು ಅಲೆಯಲಿಲ್ಲ ನಾನು–ಅದಕ್ಕೇ ಇಷ್ಟು ದಿನ ಹೀಗೆ ಕೂತಿರಬೇಕಾಯಿತು. ಈ ಬಾರಿ ಸತ್ಯವೇ ತಾನಾಗಿ ನನ್ನ ಮೇಲೆ ದಯೆ ತೋರುತ್ತದೆ, ಬಹುಶಃ–ಅದೇನದು, ಅತ್ತೇ...ಅದು ಯಾರು?"

"ಎಲ್ಲಿ, ಯಾರೂ ಇಲ್ಲವಲ್ಲೋ."

"ಅತ್ತೇ, ನೀನೊಂದು ಸಲ ಆ ಕೋಣೆಯನ್ನು ಸ್ವಲ್ಪ ನೋಡಿಕೊಂಡು ಬಾ...ನನಗೇನೋ..."

"ಇಲ್ಲ ಕಣೋ, ನನಗೆ ಯಾರೂ ಕಾಣಬರಲಿಲ್ಲ."

"ನನಗೆ ಸ್ಪಷ್ಟವಾಗೇನೋ..."

"ಯಾರೂ ಅಲ್ಲ ಕಣೋ, ಬೇರೆ ಯಾರೂ ಅಲ್ಲ; ಇಗೋ, ಡಾಕ್ಟರು ಬಂದಿದ್ದು."

"ನೋಡೀ ಅಮ್ಮ, ನೀವು ಆತನ ಹತ್ತಿರ ಸದಾ ಕೂತಿದ್ದರೆ, ಆತ ಸುಮ್ಮನೆ ಮಾತಾಡಿ ಸುಸ್ತು ಮಾಡಿಕೊಳ್ಳುತ್ತಾರೆ. ಎಷ್ಟೋ ರಾತ್ರಿ ಇದೇ ರೀತಿ ನಿದ್ದೆ ಮಾಡದೆ ಕಳೆದಿದ್ದಾರೆ. ನೀವು ಹೋಗಿ ಮಲಗಿ. ನನ್ನ ಆಳು ಇಲ್ಲಿ ಇದ್ದು ನೋಡಿಕೊಳ್ಳುತ್ತಾನೆ."

"ಇಲ್ಲ, ಅತ್ತೆ, ಇಲ್ಲ. ನೀನು ಹೋಗಕೂಡದು ಇಲ್ಲಿಂದ."

"ಇಲ್ಲ ಕಣೋ, ಹೋಗುವುದಿಲ್ಲ. ನಾನು ಹಾಗಾದರೆ ಸ್ವಲ್ಪ ದೂರದಲ್ಲಿ ಈ ಮೂಲೆಯಲ್ಲಿ ಹೋಗಿ ಕೂಡುತ್ತೇನೆ."

"ಊಹೂಂ, ಬೇಡ, ನೀನು ಇಲ್ಲೇ ನನ್ನ ಪಕ್ಕದಲ್ಲೇ ಕೂತುಕೊಂಡಿರು. ನಾನು ನಿನ್ನ ಕೈ ಹಿಡಿದಿಟ್ಟುಕೊಳ್ಳುತ್ತೇನೆ. ಎಂದಿಗೂ ಬಿಡೋದಿಲ್ಲ ಹೋಗುವುದಕ್ಕೆ. ಕಡೆಯವರೆಗೂ ನಾನು ನಿನ್ನ ಕೈಯಲ್ಲಿ ಬೆಳೆದು ದೊಡ್ಡವನಾಗಿರುವುದು. ದೇವರು ನನ್ನನ್ನು ಕರೆದುಕೊಂಡು ಹೋದರೂ ನಿನ್ನ ಕೈಯಿಂದಲೇ ತೆಗೆದುಕೊಂಡು ಹೋಗಲಿ."

"ಭೇಷ್, ಹಾಗಾದರೆ, ಯತೀನ್‌ಬಾಬು, ಹಾಗೇ ಆಗಲಿ. ಆದರೆ ನೀವು ಮಾತ್ರ ಹೆಚ್ಚಾಗಿ ಮಾತಾಡಬೇಡಿ. ಆ ಔಷಧಿ ತೆಗೆದುಕೊಳ್ಳುವ ವೇಳೆ ಆಯಿತೀಗ."

"ವೇಳೆ ಆಯಿತೇ? ಸುಳ್ಳು! ವೇಳೆ ಕಳೆದುಹೋಗಿ ಎಷ್ಟೋ ಕಾಲವಾಯಿತು. ಈಗ ಔಷಧಿ ಕುಡಿಸುವುದು ಕೇವಲ ನಟನೆಯಿಂದ ಸಮಾಧಾನ ಮಾಡುವ ಪ್ರಯತ್ನ. ನನಗದರ ಅಗತ್ಯವಿಲ್ಲ ಈಗ, ಡಾಕ್ಟರೇ, ನನಗೆ ಸಾಯಲು ಹೆದರಿಕೆಯಿಲ್ಲ. ಅತ್ತೇ, ಯಮನ ಚಿಕಿತ್ಸೆ ನಡೆಯುತ್ತಾ ಇದೆ. ಅದರ ಮೇಲೆ ಬೇರೆಲ್ಲಾ ಡಾಕ್ಟರುಗಳ ಚಿಕಿತ್ಸೆಯನ್ನೇಕೆ ಹೇರುತ್ತಾ ಇದ್ದೀಯ? ಕಳುಹಿಸಿಕೊಟ್ಟುಬಿಡು, ಎಲ್ಲರನ್ನೂ ಕಳುಹಿಸಿಕೊಟ್ಟುಬಿಡು. ಈಗ ನನಗೆ ನೀನೊಬ್ಬಳು ಸಾಕು. ಬೇರೆ ಯಾರ ಆವಶ್ಯಕತೆಯೂ ಇಲ್ಲ ನನಗೆ. ಯಾರೂ ಬೇಡ. ಯಾವ ಸುಳ್ಳೂ, ನಟನೆಯೂ ಬೇಡ."

"ನಿಮ್ಮ ಈ ಉದ್ರೇಕ ಒಳ್ಳೆಯದಲ್ಲ."

"ಹಾಗಾದರೆ ತಾವು ದಯಮಾಡಿಸಿ, ನನ್ನನ್ನು ಇನ್ನೂ ಉದ್ರೇಕಗೊಳಿಸಬೇಡಿ– ಅತ್ತೇ, ಡಾಕ್ಟರು ಹೋದರೆ–? ಸರಿ, ಹಾಗಾದರೆ, ನೀನೀಗ ಈ ಹಾಸಿಗೆಮೇಲೆ ಹತ್ತಿ ಕೂತುಕೋ. ನಾನು ನಿನ್ನ ತೊಡೆಯಮೇಲೆ ತಲೆ ಇಟ್ಟುಕೊಂಡು ಸ್ವಲ್ಪ ಮಲಗುತ್ತೇನೆ."

"ಹಾಗೇ ಆಗಲಿ ಕಣೋ, ಈಗ ಕೂತುಕೊಂಡೆ. ಮಲಗಪ್ಪಾ, ನನ್ನ ದೇವರು, ಮಲಗಿ ಸ್ವಲ್ಪ ನಿದ್ದೆ ಮಾಡು."

"ಇಲ್ಲ, ಅತ್ತೆ, ನಿದ್ದೆ ಮಾಡು ಅಂತ ಅನ್ನಬೇಡ. ನಿದ್ದೆ ಮಾಡುತ್ತಾ ಮಾಡುತ್ತಾ ಆಮೇಲೆ ನಿದ್ದೆ ಎಚ್ಚರವಾಗುವುದೇ ಇಲ್ಲ. ಇನ್ನೂ ಸ್ವಲ್ಪ ಹೊತ್ತು ನಾನು ಎಚ್ಚತ್ತೇ ಇರಬೇಕಾದ ಅಗತ್ಯವಿದೆ. ನಿನಗೆ ಸದ್ದು ಕೇಳಿಸುತ್ತಾ ಇಲ್ಲವಾ? ಅಗೋ ಬಂದ ಹಾಗಿದೆ. ಈಗಲೇ ಬರುತ್ತಾಳೆ, ನೋಡು."

೫

"ಲೋ, ಯತೀನ, ನೋಡಪ್ಪ, ಸ್ವಲ್ಪ ಕಣ್ಣು ತೆಗೆದುನೋಡು, ಯಾರು ಬಂದಿದ್ದಾರೆ ಒಂದು ಸಲ ನೋಡು."

"ಯಾರು? ಯಾರು ಬಂದಿರುವುದು? ಕನಸೇ?"

"ಕನಸಲ್ಲ ಕಣೋ, ಕನಸಲ್ಲ. ಮಣಿ ಬಂದಿದ್ದಾಳೋ, ನಿನ್ನ ಮಣಿ. ಇಗೋ ನಿನ್ನ ಮಾವನವರೂ ಬಂದಿದ್ದಾರೆ."

"ನೀನು ಯಾರು?"

"ಗುರುತು ಸಿಗಲಿಲ್ಲವೇನೋ? ಅದು ಮಣಿಯೋ, ನನ್ನಪ್ಪಾ! ನಿನ್ನ ಹೆಂಡತಿ ಮಣಿ ಕಣೋ."

"ಮಣೀ? ಆ ಬಾಗಿಲು ಪೂರ್ತಿಯಾಗಿ ತೆಗೆಯಿತೇ ಈಗ?"

"ಹೂಂ ಕಣೋ, ಪೂರ್ತಿ ತೆಗೆದುಬಿಟ್ಟಿದೆ. ಅದಕ್ಕೇ ಬಂದಿದ್ದಾಳೋ, ನನ್ನಪ್ಪಾ, ನನ್ನ ದೇವರೇ!"

"ಬೇಡ, ಅತ್ತೆ, ತಿರುಗಿ ಆ ಶಾಲು ಹೊದಿಸಬೇಡ ಕಾಲ ಮೇಲೆ, ಆ ಶಾಲು ಬೇಡ. ಆ ಶಾಲು ಮೋಸ–ಬರೇ ಮೋಸ!"

"ಶಾಲಲ್ಲವೋ ಅದು, ಶಾಲಲ್ಲವೋ ಯತೀನ. ನಿನ್ನ ಹೆಂಡತಿ ಕಣಪ್ಪಾ. ನಿನ್ನ ಹೆಂಡತಿ ನಿನ್ನ ಕಾಲ ಮೇಲೆ ಬಿದ್ದುಕೊಂಡಿದ್ದಾಳೆ. ಅವಳ ತಲೆಯ ಮೇಲೆ ಕೈಯಿಟ್ಟು ಆಶೀರ್ವಾದ ಮಾಡೋ. ಹಾಗೆ ಅಳಬೇಡವೇ, ಮಣಿ, ಈಗ ಬೇಡ. ಅಳಬೇಕಾದ ಸಮಯ ಬರತ್ತೆ ಆಮೇಲೆ. ಈಗ ಸ್ವಲ್ಪ ಗಂಭೀರವಾಗಿರು. ಒಳ್ಳೇದಾಗತ್ತೆ..."

ಅಪರಿಚಿತಾ

೧

ಈಗ ನನ್ನ ವಯಸ್ಸು ಕೇವಲ ಇಪ್ಪತ್ತೇಳು. ನನ್ನ ಈ ಜೀವನವು ದೀರ್ಘಾಯುಸ್ಸಿನ ದೃಷ್ಟಿಯಿಂದಲೂ ದೊಡ್ಡದಲ್ಲ, ಗುಣದ ಲೆಕ್ಕಾಚಾರದಿಂದಲೂ ಗಮನಾರ್ಹವಲ್ಲ. ಆದರೂ ಇದಕ್ಕೊಂದು ವಿಶೇಷವಾದ ಬೆಲೆಯಿದೆ.

ಇದೊಂದು ಹೂವಿನಂತೆ–ಆ ಹೂವಿನ ಎದೆಯ ಮೇಲೆ ದುಂಬಿಯೊಂದು ಬಂದು ಕೂತಿತ್ತು. ಮತ್ತು ಆ ದುಂಬಿಯು ಹೆಜ್ಜೆಯಿಟ್ಟು ರಚಿಸಿದ ಒಂದು ಇತಿಹಾಸವು, ಈ ಹೂವಿನ ಬಾಳ ಮಧ್ಯೆ ಫಲಸ್ವರೂಪವಾಗಿ ಮೈತಾಳಿ ನಿಂತಿದೆ.

ಆ ಇತಿಹಾಸದ ಗಾತ್ರವೇನೋ ಚಿಕ್ಕದು. ಅದನ್ನು ಚಿಕ್ಕದಾಗಿಯೇ ಬರೆಯುತ್ತೇನೆ. ಚಿಕ್ಕದನ್ನು ಸಾಮಾನ್ಯವೆಂದು ತಪ್ಪು ತಿಳಿಯದವರು ಮಾತ್ರ ಇದರ ರಸವನ್ನು ಗ್ರಹಿಸುವರು.

ಕಾಲೇಜಿನಲ್ಲಿ ಎಷ್ಟು ಪರೀಕ್ಷೆಗಳಿತ್ತೋ ಅವೆಲ್ಲವನ್ನೂ ನಾನು ತೇರ್ಗಡೆಯಾಗಿ ದಾಟಿಬಿಟ್ಟಿದ್ದೇನೆ. ಚಿಕ್ಕವನಿದ್ದಾಗ ನಾನು ಚೆಲುವನೆಂದೆನ್ನಿಸಿಕೊಂಡಿದ್ದೆ. ನನ್ನ ರೂಪವನ್ನು ಕುರಿತು ನನ್ನ ಗುರುಗಳು ನನ್ನನ್ನು ಬೂರುಗದ ಹೂವಿಗೂ, ಗೇರುಹಣ್ಣಿಗೂ ಹೋಲಿಸಿ ಪರಿಹಾಸ ಮಾಡಿದ್ದರು. ಅವರ ದೃಷ್ಟಿಯಲ್ಲಿ ನಾನೂ ಹಾಗೆ ನಿರ್ಗಂಧ ಕುಸುಮ, ನೀರಸ ಫಲ. ಇದರಿಂದ ನನಗೆ ಬಹಳ ನಾಚಿಗೆಯಾಗುತ್ತಿತ್ತು. ದೊಡ್ಡವನಾದ ಮೇಲೂ ಇದನ್ನು ಕುರಿತು ಚಿಂತಿಸಿದ್ದೇನೆ. ಒಂದು ಪಕ್ಷ ಜನ್ಮಾಂತರವಿದ್ದುದಾದರೆ ನನ್ನ ಮುಖದಲ್ಲಿ ಮೊದಲಿನಂತೆಯೇ ಸುರೂಪವೂ, ನನ್ನ ಗುರುಗಳ ಮುಖದಲ್ಲಿ ವಿರೂಪವು ಕಾಣಿಸಿಕೊಳ್ಳಲಿ ಎಂದು ಹಾರೈಸಿದ್ದೇನೆ.

ನಮ್ಮ ತಂದೆ ಒಂದು ಕಾಲದಲ್ಲಿ ಬಡತನವನುಭವಿಸಿದ್ದರು. ಆಮೇಲೆ ವಕಾಲತಿಮಾಡಿ ಅವರು ಬಹಳ ಹಣ ಗಳಿಸಿದರು. ಆದರೆ ಅದನ್ನು ಉಪಭೋಗಿಸುವುದಕ್ಕೆ ನಿಮಿಷ ಕಾಲ ಕೂಡ ಅವಧಿ ಪಡೆಯಲಿಲ್ಲ. ಸಾಯುವಾಗ ಉಸಿರುಬಿಟ್ಟರಲ್ಲ, ಅದೇ ಅವರ ಮೊದಲ ವಿಶ್ರಾಂತಿ.

ಆಗ ನನ್ನ ವಯಸ್ಸೋ ಅತಿ ಸ್ವಲ್ಪ. ತಾಯಿಯ ಕೈಯಲ್ಲೇ ನಾನು ಬೆಳೆದು ದೊಡ್ಡವನಾದದ್ದು. ಆಕೆಯೂ ಬಡವರ ಮನೆಯ ಹೆಣ್ಣು, ಅದಕ್ಕೇ, ನಾವು ಧನಿಕರೆಂಬ ಸಂಗತಿಯನ್ನು ಆಕೆಯೂ ಮರೆಯಲಿಲ್ಲ. ನನ್ನನ್ನೂ ಮರೆಯಗೊಡಲಿಲ್ಲ.

ಕಿರಿತನದಲ್ಲಿ ನಾನು ಒಬ್ಬರ ಕಂಕುಳಿಂದ ಮತ್ತೊಬ್ಬರ ಕಂಕುಳಿಗೆ ಸಾಗಿಸಲ್ಪಡುತ್ತಲೇ ಬೆಳೆದೆ. ಯಾರೂ ನನ್ನನ್ನು ಕೆಳಗೆ ಬಿಡವೊಲ್ಲರು. ಈ ಕಾರಣದಿಂದ ಕಡೆಯವರೆಗೂ ನನಗೆ ಪೂರ್ತಿಯಾಗಿ ವಯಸ್ಸೇ ಆಗಲಿಲ್ಲ. ಇವತ್ತಿಗೂ ನನ್ನನ್ನ ನೋಡಿದವರಿಗೆ ನಾನು ಪಾರ್ವತಿಯ ತೊಡೆಯ ಮೇಲೆ ಕೂತಿರುವ ಗಣಪತಿಯ ತಮ್ಮನೆಂದು ಅನ್ನಿಸದೆ ಇರದು.

ನನ್ನ ನಿಜವಾದ ಸಾಕುತಂದೆಯಾಗಿದ್ದವರು ನನ್ನ ಸೋದರಮಾವ. ಅವರು ನನಗಿಂತಲೂ ಹೆಚ್ಚೆಂದರೆ ಆರೇ ವರುಷ ಹಿರಿಯರು. ಆದರೆ ಗುಪ್ತವಾಗಿ ಹರಿಯುವ ಫಲ್ಗು ನದಿಯ ಮರಳಿನಂತೆ ಆತನು ನಮ್ಮ ಕುಟುಂಬದ ವ್ಯವಹಾರಗಳನ್ನೆಲ್ಲ ತಮ್ಮ ಅಂತರಂಗದೊಳಗೆ ಹೀರಿಕೊಂಡುಬಿಟ್ಟಿದ್ದರು. ಅವರನ್ನು ಅಗೆದು ತೆಗೆಯದೆ ಹೋದರೆ ನಮ್ಮ ಮನೆಗೆ ಒಂದು ತೊಟ್ಟು ರಸ ಕೂಡ ದೊರೆಯುವಂತಿರಲಿಲ್ಲ. ಈ ಕಾರಣದಿಂದ ಯಾವುದೇ ವಿಷಯವನ್ನ ಕುರಿತು ನಾನು ಯಾವ ಚಿಂತೆಯನ್ನೂ ಮಾಡಬೇಕಾಗಿರಲಿಲ್ಲ.

ನಾನೊಬ್ಬ ಸತ್ಪಾತ್ರನೆಂದು ಹೆಣ್ಣು ಹೆತ್ತವರು ಮಾತ್ರ ಒಪ್ಪಿಕೊಳ್ಳುತ್ತಾರೆ. ತಂಬಾಕು ಕೂಡ ಸೇವಿಸುವವನಲ್ಲ. ಒಳ್ಳೆಯ ಮನುಷ್ಯನಾಗಬೇಕಾದರೆ ಯಾವ ತಾಪತ್ರಯವೂ ಇಲ್ಲ. ಆದ್ದರಿಂದ ನಾನು ಸುಲಭವಾಗಿ ಒಳ್ಳೆಯ ಮನುಷ್ಯನಾಗಿಬಿಟ್ಟಿದ್ದೆ. ತಾಯಿಯ ಆಣತಿಯನ್ನು ತಲೆಬಾಗಿ ನಡೆಸುವ ಸಾಮರ್ಥ್ಯ ನನಗಿದೆ. ಅಂದರೆ ನಿಜವಾಗಿ, ವಿರೋಧಿಸುವ ಸಾಮರ್ಥ್ಯವೇ ನನಗಿಲ್ಲ. ಅಂತಃಪುರದ ಶಾಸನದಂತೆ ಆಚರಿಸುವ ಹಾಗೆಯೇ ನನ್ನನ್ನ ತಯಾರು ಮಾಡಿರುವುದು. ಒಂದು ವೇಳೆ ಸ್ವಯಂವರ ಮಾಡಿಕೊಳ್ಳುವ ಯಾವ ಹುಡುಗಿಯಾದರೂ ನನ್ನ ಈ ಸದ್ಗುಣವನ್ನು ನೆನಪಿನಲ್ಲಿಡಬೇಕು.

ಎಷ್ಟೋ ದೊಡ್ಡ ವಂಶಸ್ಥರ ಕಡೆಯಿಂದ ನನಗೆ ಹೆಣ್ಣುಗಳು ಬಂದಿದ್ದುವು. ಆದರೆ ಪೃಥಿವಿಯಲ್ಲಿ ನನ್ನ ಅದೃಷ್ಟ ದೇವತೆಯ ಮುಖ್ಯ ಏಜಂಟನಾಗಿದ್ದ ನನ್ನ ಸೋದರಮಾವನಿಗೆ ನನ್ನ ಲಗ್ನದ ಬಗ್ಗೆ ಒಂದು ವಿಶೇಷ ಅಭಿಪ್ರಾಯವಿತ್ತು. ಶ್ರೀಮಂತರ ಮನೆ ಹೆಣ್ಣು ಅವರಿಗೆ ಇಷ್ಟವಿಲ್ಲ. ಏಕೆಂದರೆ ನಮ್ಮ ಮನೆಯೊಳಗೆ ಬರಬೇಕಾದ ಹೆಣ್ಣುಮಗಳು ತಲೆಬಾಗಿಸಿಕೊಂಡೇ ಬರಬೇಕೆಂದು ಅವರ ಮತ, ಆದರೂ ದುಡ್ಡಿನ ವಿಷಯದಲ್ಲಿ ಅವರಿಗೆ ಆಸಕ್ತಿಯಿಲ್ಲದೆ ಇಲ್ಲ. ಅದು ಅವರ ನರ, ನಾಡಿ, ಮಜ್ಜಗಳಲ್ಲಿ ಕೂಡ ಸೇರಿಕೊಂಡುಬಿಟ್ಟಿದೆ. ಅವರಿಗೆ ಎಂಥವರ ಸಂಬಂಧ ಬೇಕು ಅಂದರೆ, ಹಣವಿಲ್ಲದೆ ಇದ್ದರೂ ಪರವಾಇಲ್ಲ, ಹಣ ಕೊಡಲು ಹಿಂದೆ ಮುಂದೆ ನೋಡಕೂಡದು, ಅಂಥವರು. ಅವರು ಶೋಷಿಸಿಕೊಳ್ಳಲು ತಯಾರಾಗಿರಬೇಕು, ಆದರೆ ಅವರು ಮನೆಗೆ ಬಂದಾಗ ಗುಡಗುಡಿಯ ಬದಲಾಗಿ

ಮಣ್ಣಿನ ಕೊಳವೆಯ ಹುಕ್ಕಾದಲ್ಲಿ ತಂಬಾಕು ಕೊಟ್ಟರೂ ಆಕ್ಷೇಪಣೆ ಮಾಡಕೂಡದು. ಅಂಥವರ ಸಂಬಂಧ ಬೇಕು.

ನನ್ನ ಗೆಳೆಯ ಹರೀಶನು ಕಾನ್‌ಪುರದಲ್ಲಿ ನೌಕರಿ ಮಾಡುತ್ತಿದ್ದ. ಅವನು ರಜೆಯಲ್ಲಿ ಕಲಿಕತ್ತೆಗೆ ಬಂದಿದ್ದವನು ನನ್ನ ಮನಸ್ಸನ್ನು ಕಲಕಿಹಾಕಿಬಿಟ್ಟ. "ಲೋ, ನಿನಗೆ ಹೆಣ್ಣು ಬೇಕಾದರೆ ಹೇಳು...ಒಂದು ಚಲೋ ಹುಡುಗಿಯಿದಾಳೆ. First class..." ಎಂದ.

ಕೆಲದಿನಗಳ ಹಿಂದೆಯೇ ಎಂ.ಎ. ಪಾಸುಮಾಡಿದ್ದೆ. ಎದುರಿಗೆ ಎಷ್ಟು ದೂರದವರೆಗೆ ದೃಷ್ಟಿ ಹಾಯುವುದೋ ಅಲ್ಲಿಯವರೆಗೂ ವಿರಾಮ ತಾನೇ ತಾನಾಗಿ ಹರಡಿದೆ. ಪರೀಕ್ಷೆಯಿಲ್ಲ, ಇನ್ನು ಪಾಸುಮಾಡುವುದಕ್ಕೆ. ಯಾವುದಕ್ಕೂ ಉಮೇದುವಾರಿ ಮಾಡಬೇಕಾಗಿಲ್ಲ. ನೌಕರಿ ಬೇಕಾಗಿಲ್ಲ. ಸ್ವಂತ ಆಸ್ತಿಪಾಸ್ತಿ ನೋಡಿಕೊಳ್ಳಬೇಕಾದ ಯೋಚನೆಯೂ ಇಲ್ಲ–ಇಷ್ಟವೂ ಇಲ್ಲ. ಇರುವ ಸ್ಥಳದಲ್ಲಿ ನೋಡಿಕೊಳ್ಳುವುದಕ್ಕೆ ಒಳಗೆ ಅಮ್ಮ ಇದಾಳೆ, ಹೊರಗೆ ಮಾವ ಇದಾನೆ.

ಇಂತಹ ಅವಕಾಶಗಳ ಮರುಭೂಮಿಯಲ್ಲಿ ನನ್ನ ಹೃದಯವು ವಿಶ್ವವ್ಯಾಪಿಯಾದ ನಾರೀರೂಪದ ಮರೀಚಿಕೆಯನ್ನು ಕಾಣುತ್ತಿತ್ತು. ಮುಗಿಲಿನಲ್ಲಿ ಅದರದೇ ದೃಷ್ಟಿ–ಗಾಳಿಯಲ್ಲಿ ಅದರದೇ ಉಸಿರು, ಮರಗಿಡಗಳ ಮರ್ಮರದಲ್ಲಿ ಅದರದೇ ಗೋಪ್ಯವಾದ ನುಡಿ.

ಇಂಥ ಸಮಯದಲ್ಲಿ ಹರೀಶನು ಬಂದದ್ದೇ "ಹೆಣ್ಣು ಬೇಕಾದರೆ ಹೇಳು" ಎಂದು ಮಾತು ಮುಗಿಸುವುದಕ್ಕೆ ಮೊದಲೇ ನನ್ನ ಮೈ, ಮನ, ಎರಡೂ ವಸಂತದ ಮಲಯ ಮಾರುತಕ್ಕೆ ಪುಳಕಗೊಳ್ಳುವ ಬಕುಳವನದ ಹೊಸ ಚಿಗುರ ರಾಶಿಯಂತೆ ನಡುಗಿನಡುಗಿ ಅಲ್ಲಾಡಿಹೋಯಿತು. ಒಳಗೊಳಗೇ ನಾನು ಬೆಳಕು ನೆರಳಿನ ಕಸೂತಿಯನ್ನು ಹೆಣೆಯತೊಡಗಿದೆ. ಹರೀಶನು ರಸಿಕ. ರಸಭರಿತವಾಗಿ ಬಣ್ಣಿಸುವ ಶಕ್ತಿಯೂ ಇತ್ತು ಅವನಿಗೆ. ಸಾಲದುದಕ್ಕೆ ನನ್ನ ಮನಸ್ಸಿಗೂ ಬಾಯಾರಿಕೆಯಾಗಿತ್ತು.

ನಾನು ಹರೀಶನಿಗೆ "ಒಂದು ಸಲ ನಮ್ಮ ಮಾವನ ಬಳಿ ಪ್ರಸ್ತಾಪಮಾಡು" ಎಂದೆ.

ಹರೀಶನು ಮಾತಿನ ಮಲ್ಲ. ಅದಕ್ಕೇ ಅವನಿಗೆ ಹೋದಲ್ಲೆಲ್ಲ ಮನ್ನಣೆ. ಅವನು ಕಣ್ಣಿಗೆ ಬಿದ್ದರೆ ಮಾವನಂಥವನೂ ಬಿಡುವುದಿಲ್ಲ. ಸರಿ, ಈ ಪ್ರಸ್ತಾಪ ಮಾವನ ಸನ್ನಿಧಾನದಲ್ಲಿ ಎತ್ತಲಾಯಿತು. ಹೆಣ್ಣಿಗಿಂತಲೂ, ಹೆಣ್ಣಿನ ತಂದೆಯ ಸ್ಥಿತಿಗತಿಗಳ ವಿವರವೇ ಮಾವನಿಗೆ ಹಿರಿದು. ಅದಂತೂ ಅವರ ಇಷ್ಟಕ್ಕೆ ಅನುಗುಣವಾಗೇ ಇತ್ತು. ಒಂದು ಕಾಲದಲ್ಲಿ ಹೆಣ್ಣಿನ ತಂದೆಯ ವಂಶದಲ್ಲಿ ಲಕ್ಷ್ಮಿಯ ಮಂಗಳ ಕಲಶ ಕಿಕ್ಕಿರಿದು ತುಂಬಿತ್ತು. ಈಗದು ಬರಿದಾಗಿದೆಯೆಂತಲೇ ಅನ್ನಬಹುದು. ಆದರೂ

ತಳಭಾಗದಲ್ಲಿ ಅಲ್ಪಸ್ವಲ್ಪ ಉಳಿದುಕೊಂಡಿರದೆ ಇಲ್ಲ. ಸ್ಥಳದಲ್ಲಿ ಕುಲಗೌರವವನ್ನು ಕಾಯ್ದಿಟ್ಟುಕೊಳ್ಳುವುದು ಸುಲಭವಲ್ಲವೆಂದು ಆತನು ಪಶ್ಚಿಮ ಪ್ರಾಂತದಲ್ಲಿ ಹೋಗಿ ನೆಲಸಿದ್ದ. ಆ ಸ್ಥಳದಲ್ಲಿ ಸಾಮಾನ್ಯ ಗೃಹಸ್ಥನಂತೆ ಇದ್ದುಕೊಂಡಿರುತ್ತಿದ್ದ. ಒಬ್ಬ ಮಗಳಲ್ಲದೆ ಆತನಿಗೆ ಬೇರೆ ಯಾರೂ ಇಲ್ಲ. ಹೀಗಿರುವಾಗ ಅವಳ ಹಿಂದೆಯೇ ತಮಗಿದ್ದ ಲಕ್ಷ್ಮಿಯ ಕಲಶವನ್ನು ಒಂದೇ ಬಾರಿಗೆ ಬೋರಲು ಮಾಡಿಬಿಡಲು ಯಾವ ಆತಂಕವೂ ಆಗದು.

ಇದೆಲ್ಲ ಒಳ್ಳೆಯದೇ. ಆದರೆ ಹುಡುಗಿಯ ವಯಸ್ಸು ಹದಿನೈದು. ಈ ಸುದ್ದಿ ಕೇಳೀ ನಮ್ಮ ಮಾವನ ಮನಸ್ಸು ಸ್ವಲ್ಪ ಭಾರವಾಯಿತು. ವಂಶದಲ್ಲಂತೂ ಯಾವ ದೋಷವೂ ಇಲ್ಲವಲ್ಲ? ಇಲ್ಲ, ದೋಷವಿಲ್ಲ. ಮಗಳಿಗೆ ಬೇರೆಲ್ಲೂ ಗಂಡು ಹುಡುಕಿದರೂ ಸಿಗಲಿಲ್ಲ. ಒಂದು ಕಾರಣ, ಆಗ ಮದುವೆ ಗಂಡುಗಳ ಸಂತೆ ಅಗ್ಗವಾಗಿರಲಿಲ್ಲ. ಅದರ ಮೇಲೆ ಗಂಡಿನ ಯೋಗ್ಯತೆಯನ್ನು ಕುರಿತು ಕದಲಿಸಲಾಗದ ಹಠ. ಇದರ ಫಲವಾಗಿ ಆತ ಸುಮ್ಮನೆ ಕಾಯಬೇಕಾಯಿತು. ಆದರೆ ಮಗಳ ವಯಸ್ಸು ಕಾದಿರುತ್ತದೆಯೆ?

ಏನಾದರಾಗಲಿ, ಹರೀಶನ ರಸಿಕತೆಯ ನಾಲಗೆಯಲ್ಲಿ ಗುಣವಿದೆ. ಮಾವನ ಮನಸ್ಸು ಮೆತ್ತಗಾಯಿತು. ಮದುವೆಯ ಪೀಠಿಕೆಯ ಭಾಗವು ವಿಘ್ನವಿಲ್ಲದೆ ಪೂರೈಸಿತು. ನಮ್ಮ ಮಾವನ ದೃಷ್ಟಿಯಲ್ಲಿ ಕಲಿಕತ್ತೆಯ ಹೊರಗಿರುವ ಭೂಮಿಯ ಅಂಶವೆಲ್ಲ ಅಂಡಮಾನ್ ದ್ವೀಪದೊಳಗೆ ಸೇರಿರುವಂತೆ. ಬದುಕಿನಲ್ಲಿ ಒಂದೇ ಒಂದು ಸಲ ಅವರು ಮೂವತ್ತು ಮೈಲಿ ದೂರವಿರುವ ಕೋನ್ನಾಗರ್ ಎಂಬ ಊರಿನವರೆಗೂ ಹೋಗಿದ್ದರು, ಅದೂ ಅನಿವಾರ್ಯದ ನಿಮಿತ್ತ; ಮಾವ ಒಂದು ವೇಳೆ ಮನು ಮಹಾರಾಜನಾಗಿದ್ದಿದ್ದರೆ ತಮ್ಮ ಸಂಹಿತೆಯಲ್ಲಿ ಹೌರಾ ಸೇತುವೆಯನ್ನು ದಾಟಿ ಹೋಗುವುದನ್ನೇ ಪೂರ್ತಿಯಾಗಿ ನಿಷೇಧ ಮಾಡಿಬಿಡುತ್ತಿದ್ದರು. ನನ್ನ ಮನದಲ್ಲಿ ನಾನೇ ಹೋಗಿ ಕಣ್ಣಾರೆ ಹುಡುಗಿಯನ್ನ ನೋಡಿಕೊಂಡು ಬರಬೇಕೆಂದು ಇಷ್ಟವಾಯಿತು. ಆದರೆ ಆ ಇಷ್ಟವನ್ನು ಪ್ರಸ್ತಾಪ ಮಾಡಲು ಧೈರ್ಯಬರಲಿಲ್ಲ.

ಹೆಣ್ಣು ಗೊತ್ತಾದ ಮೇಲೆ ಹೆಣ್ಣನ್ನ ಆಶೀರ್ವಾದ ಮಾಡಿ ಬರಲು ನಮ್ಮ ದೊಡ್ಡಪ್ಪನ ಮಗ ವಿನೂದಾದನನ್ನು ಕಳುಹಿಸಲಾಯಿತು. ಆತನ ಅಭಿಪ್ರಾಯ, ಅಭಿರುಚಿಗಳ ಮೇಲೆ ನನಗೆ ಹದಿನಾರಾಣೆ ನಂಬಿಕೆಯಿತ್ತು. ವಿನೂದಾದನು ಮರಳಿ ಬಂದು "ಪರವಾಯಿಲ್ಲವೋ, ಅಪರಂಜಿ ಚಿನ್ನ, ಥೇಟ್!" ಎಂದ.

ವಿನೂದಾದನ ಭಾಷೆ ಅತಿ ಬಿಗಿಯಾದದ್ದು. ಇತರರು "ಅದ್ಭುತ", ಅನ್ನುವ ಕಡೆ ಅವನು "ನಡೆಯುತ್ತೆ" ಎನ್ನುತ್ತಾನೆ. ಆದ್ದರಿಂದ ನನಗೆ ಚೆನ್ನಾಗಿ ಮಂದಟ್ಟಾಯಿತು– ನನ್ನ ಅದೃಷ್ಟದಲ್ಲಿ ಬ್ರಹ್ಮನ ಸಂಗಡ ಮನ್ಮಥನ ವಿರೋಧ ಸ್ವಲ್ಪವೂ ಇಲ್ಲ ಎಂಬುದಾಗಿ.

೨

ಹೆಣ್ಣಿನ ಕಡೆಯವರೇ ಲಗ್ನದ ಸಲುವಾಗಿ ಕಲಿಕತ್ತೆಗೆ ಬರಬೇಕಾಗಿ ಬಂತೆಂದು ಬೇರೆ ಹೇಳಬೇಕಾಗಿಲ್ಲ. ಹೆಣ್ಣಿನ ತಂದೆ ಶಂಭುನಾಥಬಾಬು ನಮ್ಮ ಹರೀಶನ ಮೇಲೆ ಎಷ್ಟರಮಟ್ಟಿಗೆ ನಂಬಿಕೆ ಇಟ್ಟಿದ್ದರೆಂದರೆ, ಮದುವೆಗೆ ಮೂರೇ ದಿನಗಳ ಮುಂಚೆ ಅವರು ನನ್ನನ್ನ ಮೊದಲ ಬಾರಿ ಕಂಡುದು, ಮತ್ತು ಆಶೀರ್ವಾದ ಮಾಡಿ ಹೋದುದು. ಅವರ ವಯಸ್ಸು ನಲವತ್ತರ ಈಚೆಗೋ ಆಚೆಗೋ ಇರಬೇಕು. ಕೂದಲಿನ್ನೂ ಕಪ್ಪಗೇ ಇತ್ತು. ಮೀಸೆ ಮಾತ್ರ ಅಲ್ಲಲ್ಲಿ ನರೆಯಲು ತೊಡಗಿತ್ತು. ಸುಂದರ ಪುರುಷನೆ. ಗುಂಪಿನ ನಡುವೆ ಕೂಡ ಎಲ್ಲರಿಗಿಂತ ಮುಂಚೆ ನೋಟವನ್ನಾಕರ್ಷಿಸುವಂತಹ ಮುಖಚಹರೆ.

ನನ್ನನ್ನು ಕಂಡು ಆತನು ತೃಪ್ತಿಪಟ್ಟಿರಬೇಕೆಂದು ನನ್ನ ಊಹೆ. ತಿಳಿಯುವುದು ಕಷ್ಟ, ಏಕೆಂದರೆ ಆತನು ಅತ್ಯಂತ ಗಂಭೀರ ಪ್ರಕೃತಿಯುಳ್ಳವರು. ಮಾತು ಕಡಮೆ, ಒಂದೆರಡು ಮಾತುಗಳಾಡಿದರೂ ಅವನ್ನು ಒತ್ತಿ, ಜೋರಾಗಿ ಹೇಳುವುದಿಲ್ಲ. ನನ್ನ ಸೋದರಮಾವನ ನಾಲಗೆಯೋ ಆಗ ತಡೆಯಿಲ್ಲದೆ ಓಡುತ್ತಿತ್ತು. ಧನದಲ್ಲಿ, ಮಾನದಲ್ಲಿ, ನಮ್ಮ ಅಂತಸ್ತು ಇಡೀ ಕಲಿಕತ್ತೆಯ ಶಹರಿನಲ್ಲಿ ಬೇರೆ ಯಾರಿಗೂ ಕಡಮೆ ಇಲ್ಲ ಎಂಬುದನ್ನೇ ಅವರು ನಾನಾ ಪ್ರಸಂಗಗಳ ದ್ವಾರಾ ಪ್ರಚಾರ ಮಾಡತೊಡಗಿದರು. ಶಂಭುನಾಥಬಾಬು ಈ ಮಾತಿನಲ್ಲಿ ಸ್ವಲ್ಪವೂ ಹೊಂದಿಕೊಳ್ಳಲಿಲ್ಲ. ಹೌದು, ಇಲ್ಲ ಎಂದು ಕೂಡ ಅನ್ನಲಿಲ್ಲ. ಇಂತಹವರ ಮುಂದೆ ನಾನಾಗಿದ್ದರೆ ಸುಸ್ತಾಗಿಬಿಡುತ್ತಿದ್ದೆ. ಆದರೆ ನಮ್ಮ ಮಾವನ ನಾಲಗೆಯನ್ನು ಸುಸ್ತುಮಾಡುವುದು ಸುಲಭವಲ್ಲ. ಆತ ಶಂಭುನಾಥಬಾಬುಗಳ ಮೌನಭಾವವನ್ನು ಕಂಡು 'ಮನುಷ್ಯ ಪೂರ್ತಿಯಾಗಿ ಜೀವವಿಲ್ಲದವನು, ಸ್ವಲ್ಪವೂ ಜೋರೇ ಇಲ್ಲ' ಎಂದುಕೊಂಡಿರಬೇಕು. ಆದರೇನು? ಬೀಗರಾಗಬೇಕಾದವರಿಗೆ ಏನಿದ್ದರೂ, ಜೋರಂತೂ ಇರಲೇಕೂಡದು. ಇದ್ದರೆ ಅದು ದೋಷವೇ. ಆದ್ದರಿಂದ ಮಾವನಿಗೆ ಒಳಗೊಳಗೇ ತೃಪ್ತಿಯಾಯಿತು. ಶಂಭುನಾಥಬಾಬು ಹೊರಡಲು ಎದ್ದಾಗ ನಮ್ಮ ಮಾವ ಒಳಗಿನಿಂದಲೇ, ಹೆಚ್ಚು ಮರ್ಯಾದೆ ತೋರದೆ, ಬೀಳ್ಕೊಟ್ಟರು. ಗಾಡಿಯೊಳಗೆ ಕೂಡಿಸಿ ಬರಲು ಹೊರಗಡೆ ಹೋಗಲಿಲ್ಲ.

ವರದಕ್ಷಿಣೆಯನ್ನು ಕುರಿತು ಎರಡು ಕಡೆಯವರಲ್ಲೂ ಮಾತು ತೀರ್ಮಾನಕ್ಕೆ ಬಂದಿತ್ತು. ಇದರ ಫಲಿತಾಂಶವಾಗಿ ನನ್ನ ಮಾವ ತಾನೊಬ್ಬ ಬಲು ಚತುರನೆಂದು ಹೆಮ್ಮೆಪಟ್ಟುಕೊಂಡಿದ್ದ. ಮಾತುಕಥೆಗಳಲ್ಲಿ ಅವನು ಎಲ್ಲೂ ಒಂದಿಷ್ಟು ಅನುಮಾನಕ್ಕೂ ಅವಕಾಶ ಕೊಟ್ಟಿರಲಿಲ್ಲ. ಹಣವೆಷ್ಟೆಂಬುದಾಗಿ ಸಂಖ್ಯೆ ಸ್ಥಿರವಾಗಿಹೋಗಿತ್ತು. ಆಮೇಲೆ ನಗ ಎಷ್ಟು ಭಾರಿಯಾದದ್ದು, ಚಿನ್ನ ಎಷ್ಟು ಬೆಲೆಯದಾಗಬೇಕು ಇಂಥವೆಲ್ಲ ಒಟ್ಟಿಗೇ ನಿಷ್ಕರ್ಷೆಯಾಗಿಹೋಯಿತು. ಈ ಮಾತುಕಥೆಗಳಲ್ಲಿ ನಾನು ಭಾಗವಹಿಸಲೇ ಇಲ್ಲ.

ಈ ಸ್ಥೂಲವಾದ ಅಂಶಗಳು ಸಹ ಮದುವೆಯ ಪ್ರಧಾನವಾದ ಅಂಶಗಳೆಂದೂ, ಮತ್ತು ಈ ಅಂಶಗಳನ್ನು ನಿರ್ವಹಿಸುವ ಭಾರ ಯಾರದೋ ಅವರು ಒಂದು ಕವಡೆಯಷ್ಟು ಮೋಸಹೋಗುವುದಿಲ್ಲ ಎಂದೂ ನನಗೆ ಗೊತ್ತಿತ್ತು. ಅದರಲ್ಲೂ ನಮ್ಮ ಮಾವ ಇಂಥ ವಿಷಯಗಳಲ್ಲಿ ಒಳ್ಳೇ ಪಕ್ವಬುದ್ಧಿಯುಳ್ಳವನೆಂದು ಹೆಸರು ಪಡೆದಿದ್ದ. ನಮ್ಮ ಕುಟುಂಬದಲ್ಲೆಲ್ಲ ಒಬ್ಬ ಹೆಮ್ಮೆಪಡತಕ್ಕಂಥ ಸಾಮಗ್ರಿ, ಎಲ್ಲೆಲ್ಲಿ ನಮ್ಮ ಸಂಬಂಧವಾಗಬೇಕಾಗಿತ್ತೋ ಅಲ್ಲೆಲ್ಲ ಅವನೇ ಬುದ್ಧಿಯ ಲಡಾಯಿಯಲ್ಲಿ ಸದಾ ಗೆಲ್ಲುವವನು ಎಂಬುದು ಎಲ್ಲರಿಗೂ ಖಂಡಿತ. ಇದರಿಂದ ನಮಗೆ ಯಾವ ಅಭಾವವೂ ಇಲ್ಲದಿದ್ದರೂ ಎದುರು ಪಕ್ಷಕ್ಕೆ ಎಷ್ಟೇ ಅಭಾವವಿದ್ದರೂ ಅವನೇ ಗೆಲ್ಲಬೇಕು, ಇದೇ ನಮ್ಮ ಕುಟುಂಬದವರ ಹಠ–ಇದರಲ್ಲಿ ಯಾರು ಬದುಕಲಿ, ಯಾರು ಸಾಯಲಿ!

ಅರಿಶಿನ, ಕುಂಕುಮದ ಸಮಾರಂಭ ಬಹಳ ಅದ್ದೂರಿಯಾಗಿ ನಡೆಯಿತು. ಅದರ ಸಂಭ್ರಮ, ಕೋಲಾಹಲ ಕೂಡ ನಮ್ಮ ದರ್ಜೆಗೆ ತಕ್ಕಂತೆಯೇ. ಹೆಣ್ಣಿನ ಕಡೆಯವರನ್ನು ಕರೆಯಲು ಹೋದವರ ಸಂಖ್ಯೆಯನ್ನು ಲೆಕ್ಕ ಮಾಡಲು ಒಬ್ಬ ಗುಮಾಸ್ತನನ್ನೆ ನೇಮಿಸಬೇಕಾಯಿತು. ಹೀಗೆ ಕರೆಯಲು ಹೋದವರನ್ನು ಯಥಾರೀತಿ ಉಪಚಾರ ಮಾಡುವುದಕ್ಕೆ ಬೀಗರ ಮನೆಯವರಿಗೆ 'ಅಬ್ಬಾ, ಸಾಕಪ್ಪ' ಎನ್ನಿಸಿರಬೇಕು. ಹೀಗೆ ಅವರು ಪಟ್ಟ ಅವಸ್ಥೆಯನ್ನು ನೆನೆದು ಮಾವನ ಸಂಗಡ ನನ್ನ ತಾಯಿಯೂ ಸೇರಿಕೊಂಡು ನಕ್ಕಿದ್ದೂ ನಕ್ಕಿದ್ದೇ.

ವರಪೂಜೆಯ ದಿನ ಓಲಗ, ಇಂಗ್ಲಿಷ್ ಬ್ಯಾಂಡು, ಡೋಲು, ಡಮರುಗ ಮುಂತಾದ ದೊಡ್ಡ ದನಿಯ, ಸದ್ದುಮಾಡುವ ವಾದ್ಯಗಳನ್ನೆಲ್ಲ ಒಂದೇ ಸಲ ಮೇಳವಾಗಿಸಿ ದಾರಿಗರ ಕಿವಿ ಚಿಟ್ಟೆನ್ನಿಸುವಂತೆ ಶಬ್ದದ ಮದದಾನೆಯನ್ನೇ ತಳ್ಳಿಬಿಟ್ಟು ಸಂಗೀತ ಶಾರದೆಯ ಕಮಲದುದ್ಯಾನವನ್ನು ಹೊಸಕಿಹಾಕಿಸಿ ನಾನೊಂದು ಸಲ ಲಗ್ನದ ಮನೆಗೆ ಹೋಗಿ ಸೇರಿದೆ. ಆಗಿನ ನನ್ನ ವೇಷವೋ! ಉಂಗುರಗಳು, ಮುತ್ತು ಚಿನ್ನದ ಹಾರಗಳು, ಸರಿಗೆ ರೇಶಿಮೆ ವಸ್ತ್ರಗಳು, ಇಂಥವೆಲ್ಲ ಭಾರ ಹೊತ್ತು ನನ್ನ ಮೈ ಒಂದು ಓಡಾಡುವ ಅಲಂಕಾರದ ಒಡವೆಗಳ ಅಂಗಡಿಯಾಗಿ ಮಾಡಲ್ಪಟ್ಟು ಅಲ್ಲಿ ನೆರೆದವರ ಮುಂದೆ ಹರಾಜಿಗೆ ನಿಲ್ಲಿಸಿದಂತೆ ಕಾಣುತ್ತಿದೆ.

ನಾಳೆ ಅವರ ಅಳಿಯನಾಗುವವನ ಬೆಲೆಯೆಷ್ಟೆಂಬುದರ ಸ್ಥೂಲವಾದ ಅಂದಾಜನ್ನು ನನ್ನ ಅಂಗಾಂಗಗಳಲ್ಲೂ ಪ್ರದರ್ಶನ ಮಾಡುತ್ತ ನಾಳೆ ನನ್ನ ಮಾವನಾಗಬೇಕಾದವರನ್ನು ಭೆಟ್ಟಿಯಾಗಲು ಹೊರಟಿದ್ದೆ.

ನನ್ನ ಸೋದರಮಾವನಿಗೆ ಮದುವೆಯ ಮನೆಯನ್ನು ಹೊಕ್ಕು ಸಂತಸವಾಗಲಿಲ್ಲ. ಮೊದಲನೇ ಕಾರಣ, ಲಗ್ನ ಮಂಟಪದ ಅಂಗಳ, ಹಜಾರ, ಗಂಡಿನ ಕಡೆಯವರಿಗೆಲ್ಲ

ಸರಿಯಾಗಿ ಕೂಡುವಷ್ಟು ವಿಶಾಲವಾಗಿರಲಿಲ್ಲ. ಮತ್ತು ಮಾಡಿದ್ದ ವ್ಯವಸ್ಥೆಯೆಲ್ಲ ಅತಿ ಮಧ್ಯಮ ರೀತಿಯದು. ಇಷ್ಟೂ ಸಾಲದೆ, ಶಂಭುನಾಥಬಾಬುಗಳ ಮಾತು, ಕಥೆ, ವ್ಯವಹಾರ ಅತ್ಯಂತ ಗಡಸು, ಥಂಡಿ ಮತ್ತು ಸಾಕಷ್ಟು ವಿನಯವಿಲ್ಲದ್ದು. ಅವರ ಬಾಯಿಂದ ಮಾತು ಹೊರಡುವುದೇ ಕಷ್ಟ. ಆದರೆ ಸೊಂಟಕ್ಕೆ ವಲ್ಲಿ ಸುತ್ತಿದ, ಒಡಕು ಗಂಟಲಿನ, ಬಟ್ಟ ತಲೆಯ, ಸಾದುಗಪ್ಪು ಬಣ್ಣದ, ಸ್ತೋಮಕಾಯನಾದ ಅವರ ವಕೀಲಮಿತ್ರ ಒಬ್ಬಾತ, ಸದಾ ಅಂಟಸಿದ್ದಂತೆ ಕೈಗಳನ್ನು ಜೋಡಿಸಿಕೊಂಡು, ತಲೆಯನ್ನು ವಾಲಾಡಿಸುತ್ತ, ನಮ್ರತೆ ಸುರಿಸುವ ದೇಶಾವರಿ ನಗೆತೋರುತ್ತಾ, ಗದ್ಗದವಾದ ಮಾತನಿಂದ, ಬ್ಯಾಂಡಿನವರ ದಳಕ್ಕೆ ಕರತಾಳದಿಂಗಿತದಿಂದ ಆರಂಭವಾಗಲಿ ಎಂದು ಸೂಚಿಸುತ್ತ, ಗಂಡಿನ ಕಡೆಯ ಪ್ರತಿ ಆಳಿಗೂ ಪ್ರತ್ಯೇಕವಾಗಿ ಬಾರಿ ಬಾರಿಗೂ ಅತಿ ವಿನಯ, ಅತಿ ಮರ್ಯಾದೆ ತೋರುತ್ತ ಅವರನ್ನು ಸವಿನುಡಿಗಳಿಂದ ಅಭಿಷೇಕ ಮಾಡದೆ ಹೋಗದಿದ್ದಿದ್ದರೆ ಮೊದಲಿನಲ್ಲೇ ದೊಡ್ಡ ಗದ್ದಲ, ರಂಪಗಳಾಗಿ ವರಪೂಜೆ ತಾರುಮಾರಾಗಿ ಹೋಗುತ್ತಿತ್ತು.

ನಾನು ಹಸೆಮಣೆಯ ಮೇಲೆ ಕೂತುಕೊಂಡು ಸ್ವಲ್ಪ ಹೊತ್ತಾದ ಮೇಲೆ ನನ್ನ ಸೋದರಮಾವನು, ಬೀಗ ಶಂಭುನಾಥಬಾಬುವನ್ನು ಕರೆದುಕೊಂಡು ಪಕ್ಕದ ಕೋಣೆಗೆ ಹೋದ. ಅಲ್ಲೇನು ಮಾತು ಕಥೆಯಾಯಿತೋ ಗೊತ್ತಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಶಂಭುನಾಥಬಾಬು ನನ್ನ ಬಳಿ ಬಂದು "ನೀನು ಸ್ವಲ್ಪ ಈ ಕಡೆ ಬಾ, ತಮ್ಮಯ್ಯಾ" ಎಂದು ಕೂಗಿದರು.

ನಡೆದದ್ದಿಷ್ಟು, ಎಲ್ಲರಿಗೂ ಇರುತ್ತೋ ಇಲ್ಲವೋ, ಆದರೆ ಕೆಲಜನರಿಗೆ ಬದುಕಿಗೆ ಒಂದು ಗುರಿ ಇರುತ್ತದೆ. ನನ್ನ ಸೋದರಮಾವನ ಏಕಮಾತ್ರ ಗುರಿ ಏನೆಂದರೆ, ತಾನು ಯಾವ ಕಾಲದಲ್ಲೂ ಯಾರ ಕೈಯಿಂದಲೂ ಟೋಪಿ ಹಾಕಿಸಿಕೊಳ್ಳಲೇಬಾರದು ಎಂದು. ಈಗ ಅವನ ಭಯವೇನೆಂದರೆ, ತನ್ನ ಬೀಗನಾಗುವವನು ಒಡವೆ, ವಸ್ತ್ರಗಳ ಬಗ್ಗೆ ತನ್ನನ್ನು ಬಲೆಗೆ ಹಾಕಿಬಿಟ್ಟರೆ ಏನು ಮಾಡುವುದು? ಲಗ್ನದ ಮುಹೂರ್ತ ಆಗಿ ಹೋಗಿಬಿಟ್ಟ ಮೇಲೆ ಅದು ಪತ್ತೆಯಾದರೂ ಕೈಮೀರಿ ಹೋಗಿಬಿಟ್ಟಿರುತ್ತದೆ. ಏನು ಮಾಡುವ ಹಾಗೂ ಇರುವುದಿಲ್ಲ. ಮದುವೆ ಮನೆಯ ಬಾಡಿಗೆ ಬಗ್ಗೆ, ಸಾಮಾನು ಸರಬರಾಜು ಮಾಡಿದ ಜನರಿಗೆ ಸತ್ಕಾರ ಮಾಡುವ ಬಗ್ಗೆ ಈಗಾಗಲೇ ಸ್ವಲ್ಪ ತಿಕ್ಕಾಟವಾದ ಅನುಭವದ ಫಲವಾಗಿ ನನ್ನ ಸೋದರಮಾವ ನಿರ್ಧರಿಸಿ ಬಿಟ್ಟ–ಕೊಡುಕೊಳುಗಳ ಸಂಬಂಧವಾಗಿ ಈ ಮನುಷ್ಯನ ಬಾಯ ಮಾತನ್ನೇ ನಂಬಿಕೂತರೆ ಕೆಟ್ಟಹಾಗೇ. ಆ ಕಾರಣದಿಂದ ನಮ್ಮ ಮನೆತನದ ಅಕ್ಕಸಾಲೆಯನ್ನು, ಅವನ ಸಾಣೆಕಲ್ಲು, ತಕ್ಕಡಿಗಳ ಸಮೇತ ಬರಹೇಳಿದ್ದ. ಪಕ್ಕದ ಕೋಣೆಯಲ್ಲಿ ಹೋಗಿ ನೋಡಿದರೆ ನನ್ನ ಸೋದರಮಾವ ಮಂಚದ ಮೇಲೆ ಕೂತಿದ್ದಾನೆ; ಸ್ವಲ್ಪ

ಹತ್ತಿರದಲ್ಲೇ ಅಕ್ಕಸಾಲಿಗ ತನ್ನ ತ್ರಾಸು, ತೂಕದ ಬಿಲ್ಲೆಗಳು ಮತ್ತು ಸಾಣೆಕಲ್ಲು ಮುಂತಾದ ಸಾಮಾನುಗಳೊಂದಿಗೆ ನೆಲದ ಮೇಲೆ ಕೂತಿದ್ದಾನೆ.

ಶಂಭುನಾಥಬಾಬು ನನ್ನನ್ನು ಕುರಿತು "ನಿಮ್ಮ ಸೋದರಮಾವ ಏನು ಹೇಳುತ್ತಾರೆ ಗೊತ್ತಾ? ಲಗ್ನದ ಕರ್ಮ ಆರಂಭವಾಗುವುದಕ್ಕೆ ಮೊದಲೇ ಮದುವೆ ಹೆಣ್ಣಿನ ನಗ, ಒಡವೆಗಳನ್ನೆಲ್ಲ ಪರೀಕ್ಷೆಮಾಡಿ, ತೂಕ ಮಾಡಿ, ಲೆಕ್ಕಹಾಕಿ ನೋಡಬೇಕಂತೆ. ಇದಕ್ಕೆ ನಿನ್ನ ಅಭಿಪ್ರಾಯವೇನು?" ಎಂದರು.

ನಾನು ತಲೆ ತಗ್ಗಿಸಿಕೊಂಡು ಸುಮ್ಮನೆ ನಿಂತಿದ್ದೆ. ಮಾವ "ಅವನದೇನು ಅಭಿಪ್ರಾಯ ಇದರಲ್ಲಿ? ನಾನು ಹೇಳುವ ಹಾಗೇ ಆಗಬೇಕು ಈಗ" ಎಂದರು.

ಶಂಭುನಾಥಬಾಬು ನನ್ನ ಕಡೆ ತಿರುಗಿ ಮತ್ತೆ "ಈ ಮಾತೇ ಖಂಡಿತವೇ ಹಾಗಾದರೆ? ಇವರು ಏನು ಹೇಳುತ್ತಾರೋ ಹಾಗೆ ಆಗಬೇಕಾ? ಇದರ ಸಂಬಂಧವಾಗಿ ನೀನು ಏನೂ ಹೇಳತಕ್ಕದ್ದಿಲ್ಲವೇ?" ಎಂದು ಕೇಳಿದರು.

ನಾನು ಸ್ವಲ್ಪ ಕತ್ತನ್ನು ಅಲ್ಲಾಡಿಸಿ ಇಂಗಿತದಿಂದ ಈ ಮಾತುಗಳಲ್ಲೆಲ್ಲ ನಾನು ಸ್ವಲ್ಪವೂ ಅಧಿಕಾರವಿಲ್ಲದವ ಎಂಬುದಾಗಿ ಸೂಚಿಸಿದೆ.

"ಒಳ್ಳೇದು ಹಾಗಾದರೆ, ಕೂತುಕೋ ಸ್ವಲ್ಪ. ವಧುವಿನ ಮೈ ಮೇಲೆ ಇರುವ ಒಡವೆಗಳನ್ನೆಲ್ಲ ಬಿಚ್ಚಿ ತರುತ್ತೇನೆ" ಎಂದು ಎದ್ದರು.

ಆಗ ನನ್ನ ಮಾವ "ಅನುಪಮ ಇಲ್ಲಿ ಕೂತು ಏನುಮಾಡಬೇಕಾಗಿದೆ. ಅವನು ಹೋಗಿ ಹಸೆಯ ಮೇಲೆ ಕೂಡಲಿ" ಎಂದರು.

ಶಂಭುನಾಥರಾಗ ಗಂಭೀರವಾಗಿ "ಇಲ್ಲ, ಹಸೆಯ ಮೇಲೆ ಬೇಡ, ಇಲ್ಲೇ ಕೂಡಬೇಕು" ಎಂದರು. ಒಂದೆರಡು ನಿಮಿಷಗಳಾದ ಮೇಲೆ ಆತ ಟವಲಿನಲ್ಲಿ ಕಟ್ಟಿಕೊಂಡು ಬಂದ ಬೇರೆ ಬೇರೆ ಒಡವೆಗಳನ್ನ ಮಂಚದ ಮೇಲೆ ಹರವಿದರು. ಎಲ್ಲವೂ ಆತನ ಅಜ್ಜಿ, ಮುತ್ತಜ್ಜಿಯರ ಕಾಲದ ಭಾರಿ ಒಡವೆಗಳು. ಈಗಿನ ಕಾಲದ ನಾಜೂಕಿನ ನಗಗಳಲ್ಲ. ಆಕಾರದಲ್ಲೇ ಅಲ್ಲದೆ ತೂಕದಲ್ಲೂ ಭಾರಿ.

ಅಕ್ಕಸಾಲಿಗ ನಗಗಳನ್ನು ಕೈಯಲ್ಲಿ ಒಂದೊಂದಾಗಿ ಎತ್ತಿ "ಆಹಾ... ಏನು ಒಡವೆಗಳು! ಏನು ಕೆಲಸಗಾರಿಕೆ? ಇದನ್ನು ನೋಡುವುದೇಕೆ? ಇಂಥವೆಲ್ಲ ಈಗಿನ ಕಾಲದಲ್ಲೆಲ್ಲಿ ನೋಡುವುದಕ್ಕಾಗುತ್ತೆ? ಇದರಲ್ಲಿ ಗುಲಗುಂಜಿಯಷ್ಟೂ ಮಿಶ್ರವಿಲ್ಲ. ಇಂಥ ಒಳ್ಳೇ ಚಿನ್ನವನ್ನು ಈಗಿನ ಕಾಲದಲ್ಲಿ ವ್ಯವಹಾರವೇ ಮಾಡುವುದಿಲ್ಲ" ಎಂದ.

ಹೀಗೆ ಹೇಳಿ ಅವನು ಮಕರ ಮುಖದ ಗಾತ್ರವಾದೊಂದು ಬಳೆಯನ್ನು ಅದುಮಿ ಅದು ಸ್ವಲ್ಪವೂ ಬಾಗದೆ ಇರುವುದನ್ನು ತೋರಿಸಿದ. ಸೋದರಮಾವನಾಗ ತನ್ನ ನೋಟ್ ಪುಸ್ತಕದಲ್ಲಿ ಬರೆದಿದ್ದ ಒಡವೆಗಳ ಪಟ್ಟಿಯನ್ನು ಹೊರಗೆ ತೆಗೆದರು.

ಆಮೇಲೆ ಏನೇನಾಯಿತೋ ಅದೆಲ್ಲವನ್ನೂ ಇಲ್ಲಿ ಬರೆಯಲಿಷ್ಟವಿಲ್ಲ ನನಗೆ. ಚಪ್ಪರ, ತೋರಣಗಳನ್ನು ಕಿತ್ತು ಹಾಕಿ, ಸಾಲುದೀಪಗಳನ್ನು ಒಡೆದು ಸುತ್ತಮುತ್ತಲಿನ ಸಾಮಾನುಗಳನ್ನೆಲ್ಲ ಕೆಡವಿ ಧ್ವಂಸಮಾಡಿ ವರಪೂಜೆಗೆ ಬಂದಿದ್ದ ಗಂಡಿನ ಕಡೆಯವರು ವರಪೂಜೆಗೆ ಬದಲು ಇನ್ನೊಂದು ದಕ್ಷಯಜ್ಞವನ್ನೇ ಅಭಿನಯಿಸಿ ಹಿಂದಿರುಗಿ ಬಂದರು.

ಮನೆಗೆ ಮರಳುವಾಗ ಆ ಬ್ಯಾಂಡು, ಓಲಗ, ಬಾಜಾ, ಬಜಂತ್ರಿಗಳ ಮೇಳದ ಸಂತೆಯಿಲ್ಲ. ಎಲ್ಲ ಮೌನ. ದೀವಟಿಗೆಗಳ ಸಾಲುಗಳೆಲ್ಲ ಆಕಾಶದ ತಾರೆಗಳಿಗೆ ತಮ್ಮ ಕೆಲಸವನ್ನೊಪ್ಪಿಸಿ ಎಲ್ಲೋ ಆರಿ ಸ್ತಬ್ಧವಾಗಿದ್ದುವು.

* * *

ಮನೆಯವರೆಲ್ಲ ಕೋಪದಿಂದ ಬೆಂಕಿಯಾಗಿಬಿಟ್ಟಿದ್ದರು. ಹೆಣ್ಣಿನ ತಂದೆ ಯಾದವನಿಗೆ ಇಷ್ಟು ಅಹಂಕಾರವೇ? ಕಲಿಗಾಲ ನಾಗಾಲೋಟದಿಂದ ಬಂದ ಹಾಗೇ ಇನ್ನು ! ಎಲ್ಲರೂ “ನೋಡೋಣ, ಇವನು ಮಗಳಿಗೆ ಮದುವೆ ಹೇಗೆ ತಾನೇ ಮಾಡುತ್ತಾನೋ !” ಎಂದರು. ಆದರೆ ಮಗಳಿಗೆ ಮದುವೆಯಾಗುವುದಿಲ್ಲವಲ್ಲ, ಏನು ಗತಿ ಎಂಬ ಭಯವೇ ಇಲ್ಲದಿರುವಂಥವರಿಗೆ ಬುದ್ಧಿ ಕಲಿಸುವುದಾದರೂ ಹೇಗೆ?

ಹೆಣ್ಣಿನ ತಂದೆಯ ಕೈಯಿಂದಲೇ ಮದುವೆ ಮಂಟಪದಿಂದ ದಬ್ಬಲ್ಪಟ್ಟಂಥ ಗಂಡು ಇಡೀ ಬಂಗಾಳ ದೇಶದಲ್ಲಿ ನಾನೊಬ್ಬನೇ. ಇಷ್ಟು ದೊಡ್ಡ ಸತ್ಪಾತ್ರನ ಹಣೆಯಲ್ಲಿ ಇಷ್ಟು ದೊಡ್ಡ ಕಳಂಕದ ಬರೆಯನ್ನು ಅದಾವ ದುಷ್ಟಗ್ರಹ ಇಷ್ಟೊಂದು ದೀಪಗಳನ್ನುರಿಸಿ, ವಾದ್ಯಗಳನ್ನು ಬಾಜಿಸಿ, ವಿಜೃಂಭಣೆ ಮಾಡಿ ಕೆತ್ತಿಬಿಟ್ಟು ಹೋಯಿತೋ! ಛೆ! – ಎಂದೆಲ್ಲ ಗಂಡಿನ ಕಡೆಯ ಜನರೆಲ್ಲ ಹೇಳಿಕೊಂಡು ಗೋಳಾಡಿದರು. ಮದುವೆಯಂತೂ ಆಗಲಿಲ್ಲ. ಆದರೂ ಮೋಸದಿಂದ ಊಟ ಮಾಡಿಸಿಕೊಂಡು ಬಂದೆವಲ್ಲ. ಅಡಿಗೆ ಮಾಡಿದ್ದನ್ನು, ಭಕ್ಷ್ಯ ಭೋಜ್ಯಗಳನ್ನೆಲ್ಲ, ಅನ್ನದ ಸಮೇತ ಚೆಲ್ಲಾಪಿಲ್ಲಿಯಾಗಿ ಎಸೆದು ದಾಂಧಲೆ ಮಾಡಿ ಬಂದಿದ್ದರೆ ಸ್ವಲ್ಪವಾದರೂ ಅವಮಾನಕ್ಕೆ ಪ್ರತಿಯಾಗಿ ಸೇಡು ತೀರಿಸಿಕೊಂಡಂತಾಗುತ್ತಿತ್ತು. ಎಲ್ಲ ಮುಗಿದ ಮೇಲೆ ಈಗೇನು ಪ್ರಯೋಜನ !

ಮದುವೆಯ ವಚನಭಂಗ ಮತ್ತು ಮಾನನಷ್ಟ ಈ ಆಪಾದನೆಗಳ ಮೇಲೆ ಕೋರ್ಟಿನಲ್ಲಿ ದಾವ ಹೂಡುತ್ತೇನೆಂದು ನಮ್ಮ ಸೋದರಮಾವ ಎಲ್ಲರ ಮುಂದೆಯೂ ಕೂಗಾಡುತ್ತಾ ಹೋದರು. ಆದರೆ ಹಿತೈಷಿಗಳನೇಕರು ಹೀಗೆಲ್ಲ ಮಾಡ ಹೋದರೆ ಅಪಮಾನದಲ್ಲಿ ಇನ್ನೂ ಯಾವುದು ಬಾಕಿ ಇದೆಯೋ ಅದನ್ನೂ ಆಹ್ವಾನ ಮಾಡಿದಂತಾಗುತ್ತದೆ ಎಂದರು.

ಈ ಪ್ರಸಂಗದಲ್ಲಿ ನನಗೂ ಬಹಳ ರೇಗಿಹೋಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಎಂದೋ ಒಂದು ದಿನ ಯಾವುದೋ ಅವಸ್ಥೆಗಿಳಿದು ಇದೇ ಶಂಭುನಾಥ ಅತಿ ವಿಷಮವಾದ ಸಂದರ್ಭದಲ್ಲಿ ಬದುಕಿಸೆಂದು ನನ್ನ ಕಾಲು ಹಿಡಿಯಬೇಕಾಗುತ್ತದೆ- ಎಂದುಕೊಂಡು ಮೀಸೆಯ ಗೆರೆಯ ಮೇಲೆ ಬೆರಳು ತಿರುವುತ್ತ ಇಂಥ ಸನ್ನಿವೇಶ ಬೇಗ ಬರಲೆಂದು ಹಾರೈಸತೊಡಗಿದೆ. ಆದರೆ ಈ ಆಕ್ರೋಶದ ಕಪ್ಪಾದ ನೀರಿನ ಪ್ರವಾಹದೊತ್ತಿನಲ್ಲೇ ಬೇರೊಂದು ಪ್ರವಾಹವೂ ಹರಿಯುತ್ತಿತ್ತು-ಅದರ ಬಣ್ಣವಂತೂ ಕಪ್ಪಲ್ಲವೇ ಅಲ್ಲ. ಮನಸ್ಸೆಲ್ಲ ನಾನಿನ್ನೂ ಕಾಣದೆಯೇ ಇದ್ದ ಆ ಅಪರಿಚಿತ ಹೆಣ್ಣಿನ ಕಡೆಯೇ ಓಡುತಿತ್ತು. ಏನು ಮಾಡಿದರೂ ಅದನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗದೆ ಹೋಯಿತು. ಗೋಡೆಯ ಹಿಂದೆ ಮರೆಯಲ್ಲೇ ಇದ್ದು ಹೋದಳಲ್ಲ. ಏನನ್ಯಾಯ! ಹಣೆಯಲ್ಲಿ ಶ್ರೀಗಂಧದ ಲೇಪ. ಉಟ್ಟಿದ್ದುದು ಕೆಂಪು ರೇಶಿಮೆ ಸೀರೆ. ಮುಖದ ಮೇಲೆ ಲಜ್ಜೆಯ ನಸುಗೆಂಪು. ಅವಳ ಹೃದಯದ ಮಧ್ಯೆ ಅದಾವ ಹೊಸ ಸೊಬಗಿತ್ತೋ ನಾನು ಹೇಗೆ ಹೇಳಲಿ? ನನ್ನ ಕಲ್ಪನಾಲೋಕದ ಕಲ್ಪಲತೆಯು ವಸಂತದ ಹೂರಾಶಿಯನ್ನೆಲ್ಲ ನನಗೆ ನೈವೇದ್ಯ ಮಾಡಲು ಶಿರಬಾಗಿ ನಿಂತಿತ್ತು.

ಗಾಳಿ ಬೀಸುತ್ತಿದೆ. ನರುಗಂಪು ತೇಲಿಬರುತ್ತಿದೆ. ಎಲೆಗಳ ಮರ್ಮರ ದನಿ ಕೇಳಬರುತ್ತಿದೆ. ಇನ್ನು ಒಂದೇ ಒಂದು ಹೆಜ್ಜೆ ಮುಂದಿಡುವ ನಿರೀಕ್ಷೆ. ಅಷ್ಟರಲ್ಲಿ ಒಂದು ಹೆಜ್ಜೆಯಿಡುವಷ್ಟು ದೂರತ್ವವೇ ಒಂದೇ ಒಂದು ಗಳಿಗೆಯಲ್ಲಿ ಸೀಮೆಯಿಂದಾಚೆಗೆಲ್ಲೋ ಹೋಗಿಬಿಟ್ಟಿತ್ತು.

ಇಷ್ಟು ದಿನ ಪ್ರತಿ ಸಂಜೆಯಲ್ಲೂ ನಾನು ವಿನೂದಾದನ ಮನೆಗೆ ಹೋಗಿ ಅಲ್ಲಿ ಅವನನ್ನು ಬೇಜಾರು ಮಾಡಿಬಿಟ್ಟಿದ್ದೆ. ಅವನು ಬಣ್ಣಿಸುತ್ತಿದ್ದ ನುಡಿಯೇ ಅತ್ಯಂತ ಇಕ್ಕಟ್ಟು, ಅದಕ್ಕಾಗೇ ಅವನ ಪ್ರತಿಯೊಂದು ಮಾತೂ ಬೆಂಕಿಯ ಕಿಡಿಯಂತೆ ನನ್ನ ಮನದ ಮಧ್ಯೆ ಹೊಕ್ಕು ಉರಿ ಹೊತ್ತಿಸಿಬಿಟ್ಟಿತು... ಹುಡುಗಿಯ ಚೆಲುವು ಮನ ಸೋಲಿಸುವಂಥಹುದೆಂದು ತಿಳಿದುಬಂದಿತ್ತು. ಆದರೆ ಅವಳ ಚಹರೆಯನ್ನು ಕಣ್ಣಾರೆಯಂತೂ ನೋಡಲಿಲ್ಲ. ಎಲ್ಲ ಅಸ್ಪಷ್ಟವಾಗಿಯೇ ಉಳಿದುಹೋಯಿತು. ಹೊರಗಿನಿಂದಂತೂ ಅವಳು ಹಿಡಿತಕ್ಕೆ ಸಿಕ್ಕದೆ ಹೋದಳು. ಅವಳನ್ನು ಮನಸ್ಸಿನಲ್ಲಾದರೂ ಹಿಡಿದಿಟ್ಟುಕೊಳ್ಳೋಣವೆಂದರೆ ಅದೂ ಸಾಧ್ಯವಾಗಲಿಲ್ಲ. ಈ ಕಾರಣದಿಂದ ಮನಸ್ಸು ಆ ಮದುವೆಯ ದಿನದ ಲಗ್ನದ ಮಂಟಪದ ಗೋಡೆಯ ಹೊರಪ್ರಾಂತದಲ್ಲಿ ಭೂತದಂತೆ ನಿಟ್ಟುಸಿರು ಬಿಡುತ್ತ ಸುತ್ತಾಡಹತ್ತಿತು.

ಹರೀಶನ ಬಾಯಿಂದ ಕೇಳಿದ್ದೆ-ಹುಡುಗಿಗೆ ನನ್ನ ತಸಬೀರನ್ನು ತೋರಿಸಲಾಗಿತ್ತೆಂದು. ಮೆಚ್ಚದೆ ಇರುತ್ತಾಳೆಯೆ? ಮೆಚ್ಚದೆ ಇರಲು ಕಾರಣವೇನಿತ್ತು? ನನ್ನ ಮನಸ್ಸೇನೋ ಈಗಲೂ ಹೇಳುತ್ತದೆ-ನನ್ನ ತಸಬೀರು ಅವಳ ಪೆಟ್ಟಿಗೆಯಲ್ಲೆಲ್ಲೋ

ಅಡಗಿಸಲ್ಪಟ್ಟಿದೆ. ಒಬ್ಬಳೇ ಕೋಣೆಯಲ್ಲಿ ಬಾಗಿಲೆಲ್ಲ ಭದ್ರವಾಗಿ ಮುಚ್ಚಿ ಒಂದೊಂದು ದಿನ ನಿರ್ಜನವಾದ ಮಧ್ಯಾಹ್ನದ ವೇಳೆಯಲ್ಲಿ ಅವಳದನ್ನು ಹೊರಗೆ ತೆಗೆದು ನೋಡದೆಯೇ ಇರುತ್ತಾಳೆಯೇ? ಬೋರಲಾಗಿ ನೆಲದ ಮೇಲೆ ಬಿದ್ದು ಕೊಂಡು ನೆಟ್ಟ ನೋಟದಿಂದ ನೋಡುತ್ತಿರುವಾಗ ಇದ್ದಕ್ಕಿದ್ದಹಾಗೆ ಅವಳ ಕೆದರಿದ ಕೂದಲು ತಸಬೀರಿನ ಮೇಲೆ ಬೀಳದೆ ಇರುತ್ತದೆಯೇ? ಹಠಾತ್ತಾಗಿ ಹೊರಗಡೆ ಯಾರದೋ ಹೆಜ್ಜೆಯ ಸಪ್ಪಳ ಕೇಳಬಂದೊಡನೆ ಅವಳಾಗ ತಟಕ್ಕನೆ ಆ ತಸಬೀರನ್ನು ತನ್ನ ಸುವಾಸನೆಯಾದ ಸೆರಗಿನಲ್ಲಿ ಮುಚ್ಚಿಟ್ಟುಕೊಳ್ಳುವುದಿಲ್ಲವೆ?

ದಿನಗಳು ಹೇಗೋ ಉರುಳಿದುವು. ಒಂದು ವರುಷವೂ ಮುಗಿದು ಹೋಯಿತು. ನನ್ನ ಸೋದರಮಾವನಂತೂ ನಾಚುಗೆಯಿಂದ ನನ್ನ ಮುಂದೆ ಮತ್ತೆಂದೂ ಮದುವೆಯ ವಿಷಯವಾಗಿ ಮಾತೇ ಎತ್ತಲಾರ. ಅಮ್ಮನ ಆಸೆಯೇನೆಂದರೆ– ಯಾವತ್ತೋ ಒಂದು ದಿನ ಸಮಾಜದ ಜನರೆಲ್ಲ ನಮ್ಮ ಅಪಮಾನದ ಕಥೆಯನ್ನು ಪೂರ್ತಿಯಾಗಿ ಮರೆತೇ ಮರೆಯುತ್ತಾರೆ. ಆಗಲಾದರೂ ನನಗೆ ಮದುವೆಗೆ ಪ್ರಯತ್ನ ಮಾಡಬೇಕೆಂದು ಅಭಿಪ್ರಾಯ.

ಈ ಕಡೆ, ಹುಡುಗಿಗೆ ಒಳ್ಳೆಯ ವರ ಸಿಕ್ಕಿದ್ದನೆಂದೂ, ಆದರೆ ಹುಡುಗಿ ತಾನು ಮದುವೆಯೇ ಮಾಡಿಕೊಳ್ಳುವುದಿಲ್ಲವೆಂದು ಹಠ ಹಿಡಿದಳೆಂದೂ ನನಗೆ ತಿಳಿದುಬಂತು. ಕೇಳಿ ನನ್ನ ಮನಸ್ಸು ಪುಳಕಿತವಾಗಿ ಹೋಯಿತು. ನಾನು ಕಲ್ಪನೆಯಲ್ಲೇ ನೋಡತೊಡಗಿದೆ. ಅವಳು ಸರಿಯಾಗಿ ಊಟವೇ ಮಾಡುವುದಿಲ್ಲ. ಸಂಜೆಯಾಗುತ್ತಾ ಬಂದರೂ ಅವಳು ತಲೆ ಬಾಚಿಕೊಳ್ಳುವುದನ್ನೇ ಮರೆತುಬಿಡುತ್ತಾಳೆ. ಅವಳ ತಂದೆ ಅವಳ ಮುಖದ ಕಡೆಯೆ ನೋಡುತ್ತ ಭಾವಿಸತೊಡಗುವನು–ನನ್ನ ಮಗಳೇಕೆ ದಿನೇ ದಿನೇ ಹೀಗಾಗುತ್ತಿದ್ದಾಳೆ? ಹಠಾತ್ತಾಗಿ ಅವಳ ಕೋಣೆಗೆ ಯಾವತ್ತೋ ಬಂದು ನೋಡಿದರೆ ಅವಳ ಕಣ್ಣುಗಳಲ್ಲಿ ನೀರು ತುಂಬಿರುತ್ತದೆ. ವ್ಯಾಕುಲದಿಂದ ಮಗಳನ್ನು ಕೇಳುತ್ತಾನೆ– "ಏನೋ ಆಗಿದೆ ಮಗು ನಿನಗೆ? ಹೇಳಮ್ಮಾ, ನನ್ನ ಹತ್ತಿರ ಹೇಳು ತಾಯಿ." ಮಗಳು ಬೇಗ ಬೇಗ ಬೆರಳುಗಳಿಂದ ಕಣ್ಣನ್ನು ಒರೆಸಿಕೊಂಡು ಬಿಟ್ಟು "ಇಲ್ಲವಲ್ಲ, ಏನಾಗಿದೆ ನನಗೆ? ಏನೂ ಇಲ್ಲಪ್ಪ." ಎನ್ನುವಳು. ಒಬ್ಬಳೇ ಮಗಳು, ಪಾಪ! ಅತಿ ಆದರದಲ್ಲಿ ಬೆಳಸಿದ ಮಗಳಲ್ಲವೆ! ಒಮ್ಮೆ ಅನಾವೃಷ್ಟಿಯಲ್ಲಿ ಹೂ ಬಳ್ಳಿ ಒಣಗಿದಂತೆ ಮಗಳ ಮುಖ ಒಣಗಿ ನೀರಸವಾಗಿರುವುದನ್ನು ಕಂಡು ತಂದೆಯ ಹೃದಯ ತಡೆಯುವುದಿಲ್ಲ. ಆಗ ಅಭಿಮಾನವನ್ನೊತ್ತಟ್ಟಿಗೆಸೆದು ಓಡಿ ಬರುತ್ತಾನೆ ನನ್ನ ಹತ್ತಿರ. ಆಮೇಲೆ? ಮನಸ್ಸಿನೊಳಗೆ ಪ್ರವಹಿಸುತ್ತಿದ್ದ ಕರಿ ವಿಷದಧಾರೆ ಕಾಳನಾಗನ ವೇಷತಾಳಿ ಹೆಡೆಯೆತ್ತಿ ಬುಸುಗುಟ್ಟುತ್ತ ಹೇಳುತ್ತದೆ "ಒಳ್ಳೆಯದು, ಮತ್ತೊಮ್ಮೆ ಲಗ್ನ ಮಂಟಪವನ್ನು ಸಿಂಗರಿಸುವುದಾಗಲಿ. ದೀಪಗಳನ್ನು ಬೆಳಗಿಸಲಿ. ದೇಶವಿದೇಶಗಳ ಜನರಿಗೆಲ್ಲ ಔತಣದೋಲೆ ಹೋಗಲಿ. ಆಮೇಲೆ ನೀನು ಕಟ್ಟಿದ್ದ

ಬಾಷಿಂಗ ಮುಂತಾದ ಮದುವೆಗಂಡಿನ ಅಲಂಕಾರಗಳನ್ನೆಲ್ಲ ಕಿತ್ತೊಗೆದು ನಿನ್ನ ಪರಿವಾರ, ಬಂಧು ಬಾಂಧವರ ಸಮೇತ ಮದುವೆಯ ಚಪ್ಪರವನ್ನು ತೊರೆದು ಬಂದುಬಿಡು. ಆಗ ಸೇಡು ಮುಗಿಯುತ್ತದೆ."

ಆದರೆ ಕಣ್ಣೀರಿನಂತೆ ತಿಳಿಯಾದ, ಕರಗಿದ ಬೆಳ್ಳಿಯಂತೆ ಹರಿಯುವ ಧಾರೆಯು ಮಾತ್ರ ರಾಜಹಂಸದ ರೂಪತಾಳಿ ಹೇಳುತ್ತದೆ–"ಕೇಳಿಲ್ಲಿ. ನಾನೊಮ್ಮೆ ದಮಯಂತಿಯ ಹೂದೋಟವನ್ನು ಹೇಗೆ ಹೊಕ್ಕಿದ್ದೆನೋ ಹಾಗೆ ನಿನ್ನ ಮನದನ್ನೆಯ ಬಳಿ ಹಾರಿಹೋಗಲು ಬಿಡು, ನಾನು ವಿರಹಿಣಿಯ ಕಿವಿಯಲ್ಲಿ ಇನಿದಾದ ಸುದ್ದಿ ತಿಳಿಸಿ ಬರುತ್ತೇನೆ. ಅನಂತರ? ಅನಂತರ ದುಃಖದ ಇರುಳು ಪಾರಾಗಿಹೋಯಿತು. ಹೊಸ ಮಳೆಯ ನೀರು ಸುರಿಯಿತು. ಬಾಡಿದ ಹೂ ಮತ್ತೆ ತಲೆಯೆತ್ತಿ ನಗುಬೀರಿತು. ಈ ಬಾರಿ ಆ ಗೋಡೆಯಿಂದಾಚೆಗೆ ಪ್ರಪಂಚದ ಬೇರೆ ಜನರೆಲ್ಲ; ಮತ್ತು ಒಳಗಡೆ ಪ್ರವೇಶ ಮಾಡಿದವನು ಒಬ್ಬ ಗಂಡಸು ಮಾತ್ರ...ಆಮೇಲೆ....ಆಮೇಲೆ ನನ್ನ ಕಥೆ ಮುಗಿಯಿತು.

೪

ಆದರೆ ನಿಜವಾಗಿಯೂ ಅಲ್ಲ. ನಿಜವಾಗಿ ಮುಗಿದಿದ್ದು ಈ ರೀತಿಯಲ್ಲ. ಅದೆಲ್ಲಿ ಬಂದು ಅಪೂರ್ಣವಾಗಿ ನಿಂತಿದೆಯೋ ಅದರ ವಿವರ ಸ್ವಲ್ಪ ಹೇಳಿ ನನ್ನ ಈ ಬರವಣಿಗೆಯನ್ನು ಮುಗಿಸಿಬಿಡುತ್ತೇನೆ.

ತಾಯಿಯನ್ನು ಕರೆದುಕೊಂಡು ತೀರ್ಥಯಾತ್ರೆಗೆ ಹೊರಟಿದ್ದೆ. ನನ್ನ ಮೇಲೇ ಬಿದ್ದಿತ್ತು ಆ ಭಾರ. ಏಕೆಂದರೆ ಈ ಸಲವೂ ನನ್ನ ಸೋದರಮಾವ ಹೌರಾ ಸೇತುವೆಯನ್ನು ದಾಟಲು ತಯಾರಿಲ್ಲ. ರೈಲಿನಲ್ಲಿ ಪ್ರಯಾಣ ಮಾಡುತ್ತ ಇದ್ದಾಗ ಹಾಗೇ ನಿದ್ದೆ ಬಂತು. ಗಾಡಿಯ ಓಲಾಡುವಿಕೆಯಿಂದ ನನ್ನ ತಲೆಯಲ್ಲಿ ನಾನಾ ಬಗೆಯ ಹರುಕು ಮುರುಕು ಕನಸುಗಳು ಗುಂಯಿಗುಡುತ್ತಿದ್ದುವು. ಹಠಾತ್ತಾಗಿ ರೈಲು ಯಾವುದೋ ಒಂದು ಸ್ಟೇಷನ್ನಿನಲ್ಲಿ ಬಂದು ನಿಂತಾಗ ಎಚ್ಚರವಾಗೆದ್ದೆ. ಬೆಳಕು, ಕತ್ತಲೆಗಳ ಹಾಸುಹೊಕ್ಕಿನಲ್ಲಿ ಅದೂ ಒಂದು ಕನಸಿನಂತೆ ತೋರಿತು. ಕೇವಲ ಮುಗಿಲಿನಲ್ಲಿ ಮಿನುಗುತ್ತಿದ್ದ ತಾರೆಗಳು ಮಾತ್ರ ಚಿರಪರಿಚಿತ. ಉಳಿದದ್ದೆಲ್ಲ ಗುರುತಿಲ್ಲದವು, ಅಸ್ಪಷ್ಟ. ನಿಲ್ದಾಣದ ದೀಪಗಳು ಕೆಲವು ಬೆಳಕು ಹೊತ್ತು ನಿಂತು ಈ ಲೋಕವು ಎಷ್ಟು ಅಪರಿಚಿತವಾದದ್ದು, ಮತ್ತು ನಾಲ್ಕು ದಿಶೆಗಳಲ್ಲೂ ಕಾಣುತ್ತಿದ್ದುವೆಲ್ಲ ಎಷ್ಟು ದೂರ ಎಂಬುದನ್ನು ಸ್ಪಷ್ಟಮಾಡುತ್ತಿದ್ದುವು. ಗಾಡಿಯೊಳಗೆ ಅಮ್ಮ ನಿದ್ದೆ ಮಾಡುತ್ತಿದ್ದಾಳೆ. ಗಾಡಿಯ ದೀಪ ಹಸಿರು ಮುಸುಕಿನಿಂದ ಯಾರ್‍ಯಾರ ಹೆಗಲ ಮೇಲೋ ಅಸ್ತವ್ಯಸ್ತವಾಗಿ ಬಿದ್ದುಕೊಂಡಿವೆ. ಅವೆಲ್ಲ ಯಾವುದೋ ಕನಸಿನ ರಾಜ್ಯದ ತಿರುಗು ಮುರುಗಾದ ಸಾಮಾನುಗಳು, ಹಸಿರು ಮುಸುಕಿನ ಮಿಣ ಮಿಣ ಬೆಳಕಿನಲ್ಲಿ

ಇರುವಿಕೆ ಮತ್ತು ಇಲ್ಲದಿರುವಿಕೆಗಳ ಮಧ್ಯ ಪ್ರಾಂತದಲ್ಲೆಲ್ಲೋ ಏನೋ ಒಂದು ಬಗೆಯಾಗಿ ಬಿದ್ದುಕೊಂಡಿವೆ ಎನಿಸಿತು.

ಇಂತಹ ವೇಳೆಯಲ್ಲಿ ಅದ್ಭುತ ಲೋಕದ ಅದ್ಭುತ ರಾತ್ರಿಯಲ್ಲಿ ಯಾರೋ ಕೂಗಿದರು. "ಬೇಗ ನಡೆದು ಬನ್ನಿ, ಈ ಗಾಡಿಯಲ್ಲಿ ಸ್ಥಳವಿದೆ" ಎಂದು.

ಹಾಡು ಕೇಳಿದೆನೇ, ಎನ್ನಿಸಿತು. ಬಂಗಾಳಿ ಹುಡುಗಿಯ ಕೊರಳಲ್ಲಿ ಬಂಗಾಳಿ ಭಾಷೆ ಅದೆಷ್ಟು ಸವಿ ಎಂಬುದನ್ನು ಈ ಬಗೆಯಾದ, ಅಸಮಯದಲ್ಲಿ, ಸ್ಥಳವಲ್ಲದ ಸ್ಥಳದಲ್ಲಿ ಅಕಸ್ಮಾತ್ತಾಗಿ ಕೇಳಿದಾಗ ಚೆನ್ನಾಗಿ ತಿಳಿದುಕೊಳ್ಳಬಹುದು. ಆದರೆ ಈ ಕಂಠವನ್ನು ಒಬ್ಬ ಹುಡುಗಿಯ ದನಿಯೆಂದು ಒಂದು ಗುಣದ ಗುಂಪಿಗೆ ಸೇರಿಸಿಬಿಟ್ಟರೆ ನಡೆಯದು. ಇದು ಕೇವಲ ಒಬ್ಬ ಪ್ರತ್ಯೇಕ ಹುಡುಗಿಯ ಕೊರಳು. ಕೇಳಿದೊಡನೆ "ಆಹಾ; ಇಂಥ ದನಿ ಎಂದೂ ಕೇಳಿಲ್ಲ" ಎಂದು ಎನ್ನಿಸುವುದು.

ಬಹಳ ಕಾಲದಿಂದಲೂ ನನ್ನ ದೃಷ್ಟಿಯಲ್ಲಿ ಕೊರಳ ದನಿಗೇ ಹೆಚ್ಚು ಪ್ರಾಧಾನ್ಯವಿದೆ. ಅದೇ ನನಗೆ ದೊಡ್ಡ ಸತ್ಯ. ರೂಪವೆಂಬ ವಸ್ತು ಅಷ್ಟೇನೂ ಕಡಿಮೆಯೆಂದಲ್ಲ. ಆದರೆ ಮನುಷ್ಯರೊಳಗೆ ಆಂತರಿಕವಾದ, ಅನಿರ್ವಚನೀಯವಾದುದೇನಿದೆಯೋ, ಅದರ ನಿಜವಾದ ಮರುಬಿಂಬವೇ ಈ ಕೊರಳ ದನಿ ಎಂದು ನನ್ನ ಭಾವನೆ. ನಾನು ಬೇಗಬೇಗ ಗಾಡಿಯ ಕಿಟಕಿಯನ್ನು ತೆರೆದು ಹೊರಗೆ ತಲೆಬಾಗಿಸಿ ಅತ್ತಿತ್ತ ನೋಡಿದೆ. ಯಾರೂ ಕಾಣಬರಲಿಲ್ಲ. ಕತ್ತಲು ತುಂಬಿದ ನಿಲ್ದಾಣದಲ್ಲಿ ನಿಂತು ಗಾರ್ಡನು ತನ್ನ ಒಕ್ಕಣ್ಣಿನ ಹಸಿರುಬಣ್ಣದ ಲ್ಯಾಂಟರ್ನನ್ನು ಅಲ್ಲಾಡಿಸಿ ತೋರಿಸಿದ, ಗಾಡಿ ಮುಂದೆ ಹೊರಟಿತು. ನಾನು ಗಾಡಿಯೊಳಗೆ ಕಿಟಕಿಯ ಮಗ್ಗುಲಲ್ಲೇ ಕೂತಿದ್ದೆ. ನನ್ನ ಕಣ್ಣಿಗೆ ಕಾಣುವಂತೆ ಎದುರಿಗೆ ಯಾವ ವ್ಯಕ್ತಿಯೂ ಕಾಣಬರಲಿಲ್ಲ. ಆದರೆ ಹೃದಯದ ಮಧ್ಯೆ ಹೃದಯದ ಮೂರ್ತಿಯೊಂದನ್ನು ನೋಡತೊಡಗಿದೆ. ಆ ಮೂರ್ತಿಯು ಈ ತಾರಾಮಯಿಯಾದ ರಾತ್ರಿಯಂತೆ. ಮುಸುಗಿಹಿಡಿಯುತ್ತದೆ. ಆದರೆ ಅದನ್ನ ಮಾತ್ರ ಹಿಡಿದಿಡಲು ಸಾಧ್ಯವಿಲ್ಲ.

ಎಲೈ, ಕೊರಳ ದನಿಯೇ! ಗುರುತಿಲ್ಲದ ದನಿಯೇ! ಒಂದೇ ನಿಮಿಷದಲ್ಲಿ ನೀನು ನನ್ನ ಚಿರಪರಿಚಿತವಾದ ಹೃದಯದಾಸನದಲ್ಲಿ ಬಂದು ಕುಳಿತೆ. ಅದೆಷ್ಟು ಆಶ್ಚರ್ಯದ ಪರಿಪೂರ್ಣತೆ ನಿನ್ನದು ! ಚಂಚಲ ಕಾಲದ ಕ್ಷುಬ್ಧಹೃದಯದ ಮೇಲೆ ಹೂವಿನಂತೆ ಅರಳಿ ಬಂದಿರುವೆ. ಆದರೂ ಅದರ ತೆರೆಗಳ ಹೊಡೆತಕ್ಕೆ ನಿನ್ನದೊಂದು ಎಸಳು ಸಹ ಅಲುಗಿಲ್ಲ. ಅಪರಿಮೇಯವಾದ ನಿನ್ನ ಕೋಮಲತೆ ಸ್ವಲ್ಪವೂ ಬಾಡಿಲ್ಲ. ಸ್ವಲ್ಪವೂ ಕಳೆಗುಂದಿಲ್ಲ.

ಹೊಗೆಬಂಡಿಯು ತನ್ನ ಉಕ್ಕಿನ ಮೃದಂಗದಿಂದ ತಾಳ ಬಡಿಯುತ್ತ ಬಡಿಯುತ್ತ ಸಾಗಿತ್ತು. ನಾನು ಮನದೊಳಗೇ ಸಂಗೀತವನ್ನು ಕೇಳುತ್ತ ಕೇಳುತ್ತ ಹೊರಟಿದ್ದೆ. ಆ ಹಾಡಿನ ಪಲ್ಲವಿ ಒಂದೇ ಒಂದು – "ಗಾಡಿಯೊಳಗೆ ಸ್ಥಳ ಇದೆ" – ಇದೆಯೆ?

ಸ್ಥಳ ಇದೆಯೆ? ಯಾರೂ ಬೇರೆ ಯಾರನ್ನೂ ಗುರುತಿಸಲಾರದೆಡೆಯಲ್ಲಿ ಸ್ಥಳವೆಲ್ಲಿ ದೊರಕೀತು? ಆದರೂ ಹಾಗೆ ಗುರುತಿಸಲಾರದಿರುವಿಕೆಯು ಕೂಡ ಒಂದು ಮಂಜಿನ ಮುಸುಕು. ಮಾಯೆಯ ಹೊದಿಕೆ. ಅದನ್ನು ಕಳಚಿದೊಡನೆ ಗುರುತು, ಗೆಳೆತನಕ್ಕೆ ಕೊನೆಯೇ ಇಲ್ಲ. ಹೇ ಸುಧಾಮಯವಾದ ಸ್ವರವೆ, ನಿನ್ನ ಹೃದಯದ ಅಪೂರ್ವವಾದ ರೂಪ ನಿನ್ನದು–ಆ ರೂಪ ನನ್ನ ಚಿರಕಾಲದಿಂದಲೂ ಪರಿಚಿತವಾದುದಲ್ಲವೆ?

ಸ್ಥಳ ಇದೆ–ಇದೆ! ಬೇಗ ಬನ್ನಿರೆಂದು ಕರೆದಿದ್ದೀಯೆ. ಬೇಗಲೇ ಬಂದಿದ್ದೇನೆ. ಒಂದು ನಿಮಿಷವೂ ತಡಮಾಡಿಲ್ಲ.

ರಾತ್ರಿ ಚೆನ್ನಾಗಿ ನಿದ್ದೆ ಬರಲಿಲ್ಲ. ಪ್ರತಿ ಸ್ಟೇಷನ್ನಿನಲ್ಲೂ ಒಮ್ಮೆ ಮುಖವನ್ನು ಕಿಟಕಿಯಾಚೆ ಚಾಚಿ ನೋಡಿದೆ. ಭಯವಾಗಲು ತೊಡಗಿತು. ಯಾರು ಕಣ್ಣಿಗೆ ಬೀಳಲಿಲ್ಲವೋ ಅವಳು ಎಲ್ಲೋ ರಾತ್ರಿಯೇ ಇಳಿದು ಹೊರಟು ಹೋಗಿಬಿಡುವಳೇನೋ!

ಮರುದಿನ ಬೆಳಗ್ಗೆ ಯಾವುದೋ ದೊಡ್ಡದೊಂದು ನಿಲ್ದಾಣದಲ್ಲಿ ಗಾಡಿಯನ್ನು ಬದಲಾಯಿಸಬೇಕು. ನಮ್ಮದು ಫಸ್ಟ್‌ಕ್ಲಾಸ್ ಟಿಕೀಟು. ನಾವು ಅಂದುಕೊಂಡಿದ್ದದ್ದು ಹೆಚ್ಚು ಗುಂಪು ಇರುವುದಿಲ್ಲವೆಂದು. ಇಳಿದು ನೋಡುತ್ತೇವೆ–ನಿಲ್ದಾಣದಲ್ಲಿ ಸಾಹೇಬರುಗಳ ದೊಡ್ಡ ಆರ್ಡರ್ಲಿಗಳ ತಂಡ ಸಾಮಾನುಗಳ ರಾಶಿಯನ್ನು ಮುಂದಿಟ್ಟುಕೊಂಡು ಗಾಡಿಗಾಗಿ ಕಾಯುತ್ತಿದ್ದಾರೆ. ಯಾವುದೋ ಒಂದು ಸೈನ್ಯದ ದೊಡ್ಡ ಜನರಲ್ ಸಾಹೇಬನು ದೇಶಪರ್ಯಟನೆಗೆಂದು ಹೊರಟಿದ್ದಾನೆ. ಎರಡು, ಮೂರು ನಿಮಿಷಗಳಾದ ಮೇಲೆ ಗಾಡಿ ಬಂತು. ಗಲಾಟೆ ನೋಡಿದ ಮೇಲೆ ಇನ್ನು ಫಸ್ಟ್‌ಕ್ಲಾಸಿನ ಆಸೆ ಬಿಡಬೇಕೆಂದುಕೊಂಡೆ. ಒಬ್ಬನೇ ಅಲ್ಲ. ಮುದಿ ತಾಯಿಯನ್ನು ಜತೆಯಲ್ಲಿ ಕರೆದುಕೊಂಡು ಯಾವ ಗಾಡಿಯಲ್ಲಿ ಹೇಗಪ್ಪಾ ಹತ್ತಿ ಕೂಡುವುದು–ಎಂಬ ಪೇಚಿನಲ್ಲಿದ್ದೆ. ಎಲ್ಲ ಗಾಡಿಗಳೂ ಭರ್ತಿ. ಪ್ರತಿ ಗಾಡಿಯ ಬಾಗಿಲಲ್ಲೂ ಹಣಿಕಿ ಹಣಿಕಿ ನೋಡುತ್ತ ಓಡಾಡತೊಡಗಿದೆ. ಇಂಥ ವೇಳೆಯಲ್ಲಿ ಸೆಕೆಂಡ್‌ಕ್ಲಾಸ್ ಗಾಡಿಯೊಂದರೊಳಗಿಂದ ಒಬ್ಬ ಹುಡುಗಿ ನನ್ನ ತಾಯಿಯನ್ನುದ್ದೇಶಿಸಿ "ನೀವೆಲ್ಲ ನಮ್ಮ ಗಾಡಿಯಲ್ಲಿ ಹತ್ತಿ ಬನ್ನಿ. ಇಲ್ಲಿ ಸ್ಥಳ ಇದೆ" ಎಂದು ಕೂಗಿದಳು.

ನಾನಂತೂ ಬೆಚ್ಚಿಬಿದ್ದೆ. ಅದೇ ಅಚ್ಚರಿಯಾದ ಸವಿಗೊರಲು, ಅದೇ ಹಾಡಿನ ಪಲ್ಲವಿ – "ಗಾಡಿಯಲ್ಲಿ ಸ್ಥಳ ಇದೆ". ಒಂದು ಕ್ಷಣ ಕೂಡ ತಡಮಾಡದೆ ತಾಯಿಯನ್ನು ಕರೆದುಕೊಂಡು ಆ ಗಾಡಿಯನ್ನು ಹೋಗಿ ಹತ್ತಿದೆ. ಸಾಮಾನನ್ನೆಲ್ಲ ಎತ್ತಿಡಲು ಹೆಚ್ಚು ಸಮಯವಿಲ್ಲ. ಅದರಲ್ಲೂ ನನ್ನಂತಹ ಕೆಲಸಕ್ಕೆ ಬಾರದ ಮನುಷ್ಯ ಬೇರೊಬ್ಬನಿಲ್ಲ. ಆಗ ಆ ಹುಡುಗಿಯೇ ಕೂಲಿಗಳ ಕೈಯಿಂದ ಬೇಗ ಬೇಗ ಹಾಸಿಗೆ ಮುಂತಾದ

ಸಾಮಾನುಗಳನ್ನು ಚಲಿಸುತ್ತಿರುವ ಗಾಡಿಯೊಳಗೆ ಎಳೆದು ತೆಗೆದುಕೊಂಡಳು. ನನ್ನದೊಂದು ಕ್ಯಾಮರಾ ಮಾತ್ರ, ಬಡಪಾಯಿ, ನಿಲ್ದಾಣದಲ್ಲೇ ಉಳಿದುಕೊಂಡಿತು.

ಆಮೇಲೆ–ಏನು ಬರೆಯಬೇಕೆಂದೇ ತೋಚುವುದಿಲ್ಲ. ನನ್ನ ಮನದೊಳಗೆ ಅಖಂಡವಾದೊಂದು ಆನಂದದ ಚಿತ್ರವಿದೆ. ಅದನ್ನೆಲ್ಲಿ ಆರಂಭಿಸಲಿ...ಎಲ್ಲಿ ಮುಕ್ತಾಯ ಮಾಡಲಿ? ಕೂತು ಕೂತು ವಾಕ್ಯಗಳಾದ ಮೇಲೆ ವಾಕ್ಯಗಳನ್ನು ಹೆಣೆಯಲು ಇಷ್ಟವಾಗುವುದಿಲ್ಲ.

ಈಗಲಂತೂ ಆ ಸವಿದನಿಯ ರೂಪವನ್ನು ಕಣ್ಣಾರೆ ನೋಡಲಾದೆ. ಆಗಲೂ ಅವಳೊಂದು ಗಾನಲಹರಿಯೆಂದೇ ಅನ್ನಿಸಿತು. ನಮ್ಮ ತಾಯಿಯ ಕಡೆ ನೋಡಿದೆ. ಆಕೆಯಂತೂ ಕಣ್ಣೆವೆಗಳನ್ನೇ ಅಲುಗಾಡಿಸಲಿಲ್ಲ. ಹುಡುಗಿಯ ವಯಸ್ಸು ಹದಿನಾರೋ, ಹದಿನೇಳೋ ಇರಬೇಕು. ಆದರೆ ಹೊಸ ಹರೆಯವು ಅವಳ ಮೈ, ಮನಗಳ ಮೇಲೆಲ್ಲೂ ಸ್ವಲ್ಪವೂ ತನ್ನ ಭಾರ ಹಾಕಿರಲಿಲ್ಲ. ಅವಳ ಗತಿ ಸರಳ, ಅವಳ ಕಣ್ಣ ಬೆಳಕು ಅತಿ ಸ್ವಚ್ಛ, ಅವಳ ಚೆಲುವೋ, ಅತಿ ಅಪೂರ್ವ ಪವಿತ್ರತೆಯುಳ್ಳದ್ದು, ಅವಳ ಯಾವ ಕಡೆಯಲ್ಲೂ ಜಡತೆಯ ಸೋಂಕು ಸಹ ಇಲ್ಲ.

ನನಗೆ ಅವಳ ಬಗ್ಗೆ ಯಾವುದನ್ನೂ ವಿಸ್ತರಿಸಿ ಹೇಳಲು ಅಸಂಭವ, ಅಷ್ಟೇಕೆ, ಅವಳು ಯಾವ ಬಣ್ಣದ ಬಟ್ಟೆಯನ್ನು ಯಾವ ರೀತಿಯಾಗಿ ತೊಟ್ಟಿದ್ದಳು, ಎಂಬುದನ್ನೂ ಸರಿಯಾಗಿ ಹೇಳಲಾರೆ. ಒಂದು ವಿಷಯ ಮಾತ್ರ ಸತ್ಯ. ಏನೆಂದರೆ ಅವಳ ವೇಷ, ಭೂಷಣಗಳಲ್ಲಿ ಯಾವುದೂ ಸಹ ಅವಳನ್ನು ಮರೆಸಿ ಕಣ್ಣಿಗೆ ಕಟ್ಟುವ ಹಾಗೆ ಇರಲಿಲ್ಲ. ಅವಳೇ ತನ್ನ ನಾಲ್ಕು ದಿಕ್ಕುಗಳಲ್ಲೂ ಇದ್ದ ಬೇರೆಲ್ಲ ವಸ್ತುಗಳಿಗಿಂತಲೂ ಅಧಿಕಳೆಂದು ತೋರುತ್ತಿದ್ದಳು. 'ರಾತ್ರಿ ರಾಣಿ' ಹೂ ದಿಟ್ಟತನದಿಂದ ಶುಭ್ರ ತೊಟ್ಟಿನ ಮೇಲೆ ನಿಂತು ಯಾವ ಗಿಡದ ಮೇಲೆ ಅರಳಿದೆಯೋ ಆ ಗಿಡವನ್ನೇ ಪೂರ್ತಿಯಾಗಿ ಅತಿಕ್ರಮಿಸಿ ನಿಂತಿರುವಂತೆ ಕಾಣುತ್ತಿದ್ದಳು. ಅವಳ ಜೊತೆಯಲ್ಲಿ ಇನ್ನಿಬ್ಬರು ಸಣ್ಣ ಹುಡುಗಿಯರಿದ್ದರು. ಅವರೊಡನೆ ಸೇರಿಕೊಂಡು ಅವಳು ಆಡುತ್ತಿದ್ದ ಹರಟೆ, ನಗು, ಹಾಸ್ಯಾಲಾಪಗಳಿಗೆ ಕೊನೆಮೊದಲಿರಲಿಲ್ಲ. ನಾನು ಕೈಯಲ್ಲಿ ಒಂದು ಪುಸ್ತಕವನ್ನು ಹಿಡಿದು ಅವರ ಕಡೆ ಕಿವಿಯಾನಿಸಿ ಕೂತಿದ್ದೆ. ಕಿವಿಯ ಮೇಲೆ ಬೀಳುತ್ತಿದ್ದಷ್ಟು ಮಾತೆಲ್ಲ ಎಳೆ ಮಕ್ಕಳ ಜೊತೆಯಲ್ಲಿ ಎಳೆ ಮಕ್ಕಳಾಡುವಂಥವು. – ಎಲ್ಲ ಹುಡುಗಾಟಿಕೆ. ಆ ಮಾತಿನ ವಿಶೇಷವೇನೆಂದರೆ, ಅವಳಿಗೂ ಆ ಸಣ್ಣ ಹುಡುಗಿಯರಿಗೂ ನಡುವೆ ಯಾವ ವಯಸ್ಸಿನಂತರವೂ ಇಲ್ಲವೆನ್ನುವಂತೆ ಇತ್ತು. ಅವಳು ಆ ಸಣ್ಣ ಹುಡುಗಿಯರ ಸಂಗಡ ಚೆಲ್ಲಾಟವಾಡುತ್ತ ಅನಾಯಾಸವಾಗಿ ಮತ್ತು ಆನಂದದಿಂದ ತಾನೂ ಸಣ್ಣ ಹುಡುಗಿಯಾಗಿಬಿಟ್ಟಿದ್ದಳು. ಅವಳ ಕೈಯಲ್ಲಿ ಕೆಲವು ಮಕ್ಕಳ ಚಿತ್ರಕಥೆಗಳ ಪುಸ್ತಕಗಳು. ಅವುಗಳಲ್ಲಿ ಯಾವುದೋ ಒಂದು ಕಥೆಯನ್ನು ವಿವರಿಸಿ ಹೇಳೆಂದು ಅವರು ಅವಳನ್ನು ಒತ್ತಾಯಪಡಿಸುತ್ತಿದ್ದರು. ಆ ಕಥೆಯನ್ನವರು ಖಂಡಿತವಾಗಿ ಇಪ್ಪತ್ತು

ಮೂವತ್ತು ಬಾರಿ ಕೇಳಿಯೇ ಇದ್ದರು. ಆದರೂ ಆ ಹುಡುಗಿಯರಿಗೆ ಮತ್ತೆ ಮತ್ತೆ ಅದನ್ನು ಅವಳ ಬಾಯಿಂದ ಕೇಳುವ ಉತ್ಸಾಹ....! ನಾನರ್ಥ ಮಾಡಿಕೊಂಡೆ. ಆ ಅಮೃತ ಕಂಠದ ಚಿನ್ನದ ಬೆತ್ತದ ಸ್ಪರ್ಶದಿಂದ ಆ ಕಥೆಗಳೆಲ್ಲ ಬಂಗಾರದ ಲೇಪ ಪಡೆದುಬಿಡುತ್ತವೆ. ಆ ಹುಡುಗಿಯ ಮೈ, ಮನಗಳೆಲ್ಲ ಪೂರ್ತಿಯಾಗಿ ಜೀವದಿಂದ ತುಂಬಿತುಳುಕುತ್ತಿದ್ದುವು. ಅವಳ ಚಲನವಲನದಲ್ಲಿ ಸ್ಪರ್ಶದಲ್ಲಿ ಮಾತಿನಲ್ಲಿ ಜೀವಸುಧೆ ಜಿನುಗಿ ಸೂಸುತ್ತದೆ. ಅದಕ್ಕೇ ಆ ಸಣ್ಣ ಹುಡುಗಿಯರು ಅವಳ ಬಾಯಿಂದ ಕಥೆ ಕೇಳುತ್ತಿರುವಾಗ, ಅವರು ಕೇಳುತ್ತಿರುವುದು ಕಥೆಯನ್ನಲ್ಲ, ಅವಳನ್ನೇ! ಕೇಳುವಾಗ ಅವರ ಪುಟ್ಟ ಹೃದಯಗಳ ಮೇಲೆ ಜೀವಸುಧೆಯ ತೊರೆಯೇ ಪುಟನೆಗೆದು ಬೀಳುತ್ತದೆ. ಆ ತರುಣಿಯ ಆ ಪ್ರಕಾಶಮಾನ ಜೀವವೇ ನನ್ನ ಅಂದಿನ ಸೂರ್ಯಕಿರಣಗಳನ್ನೂ ಇಮ್ಮಡಿಯಾಗಿ ಜೀವಂತಗೊಳಿಸಿಬಿಟ್ಟಿತ್ತು. ನನ್ನ ಮನಸ್ಸಿಗೆನ್ನಿಸಿತು–ನನ್ನನ್ನು ತನ್ನ ಆಕಾಶದಿಂದ ಸುತ್ತುಹಾಕಿದ್ದ ಪ್ರಕೃತಿದೇವಿಯು ಆ ರೂಪಸಿಯ ಕ್ಲಾಂತಹೀನ, ಮ್ಲಾನರಹಿತ ವಿಪುಲಜೀವದ ವಿಶ್ವವ್ಯಾಪಿಯಾದ ವಿಸ್ತಾರ ರೂಪವೆಂದು.

ಗಾಡಿಯು ಇನ್ನೊಂದು ಸ್ಟೇಷನನ್ನು ತಲಪುತ್ತಲೇ, ತಿಂಡಿಮಾರುವವನನ್ನು ಕೂಗಿ ಕರೆದು ಅವಳು ಸಾಕಷ್ಟು ಮಸಾಲೆ ಕಡಲೆಯನ್ನು ಕೊಂಡು ಆ ಸಣ್ಣ ಹುಡುಗಿಯರೊಂದಿಗೆ ಸೇರಿ ತಾನೂ ಅತಿ ಸಣ್ಣ ಹುಡುಗಿಯಂತೆಯೇ ನಗುತ್ತ, ಕೇಕೆ ಹಾಕುತ್ತ ಅದನ್ನ ಸ್ವಲ್ಪವೂ ಸಂಕೋಚವಿಲ್ಲದೆ ಮೆಲ್ಲುತ್ತ ಇದ್ದಳು. ನನ್ನ ಹಾಳು ಸ್ವಭಾವವಾದರೋ ಬಲೆ, ಬೇಲಿಗಳಿಂದ ಕಟ್ಟಿಹಾಕಿರುವಂಥದು–ಸಹಜವಾಗಿ, ನಗುಮುಖದಿಂದ ಯುವತಿಯ ಮುಂದೆ ಒಂದು ಹಿಡಿ ಕಡಲೆಕಾಳನ್ನೇಕೆ ಕೇಳಲಾಗಲಿಲ್ಲ ನನಗೆ? ಕೈ ನೀಡಿ ನನ್ನ ಲೋಭವನ್ನೇಕೆ ಒಪ್ಪಿಕೊಳ್ಳಲಾಗಲಿಲ್ಲ?

ಅಮ್ಮನಂತೂ ಒಂದು ಬಗೆಯ ಮಧ್ಯಸ್ಥಭಾವದಲ್ಲಿದ್ದಳು–ಅವಳಿಗಿದೆಲ್ಲ ಚೆನ್ನಾಗಿ ಕಾಣುವುದೂ ಇಲ್ಲ, ಚೆನ್ನಾಗಿ ಕಾಣದೆಯೂ ಇಲ್ಲ ಎನ್ನುವಂತೆ. ಆ ಗಾಡಿಯಲ್ಲಿ ನಾನೊಬ್ಬನೇ ಗಂಡಸು, ಆದರೂ ಈ ಹುಡುಗಿಗೆ ಸ್ವಲ್ಪವೂ ಸಂಕೋಚವಿಲ್ಲ...ಅದರಲ್ಲೂ ತಿಂಡಿಪೋತಳಂತೆ ಹಾಗೆ ಕಟುಂ ಕಟುಂ ಎಂದು ಕಡಲೆ ತಿನ್ನುತ್ತಿರುವುದಂತೂ ಅಮ್ಮನಿಗೆ ಸರಿಹೋಗುತ್ತಿಲ್ಲ. ಆದರೂ ಆ ಹುಡುಗಿ–ಗಂಡುಬೀರಿ, ನಾಚಿಗೆಯಿಲ್ಲದವಳು ಎಂದೆನ್ನುವುದಕ್ಕೂ ಆಗುವುದಿಲ್ಲ. ಆಕೆಗೆನ್ನಿಸಿರಬೇಕು–ಈ ಹುಡುಗಿಗೇನೋ ವಯಸ್ಸಾಗಿದೆ, ಆದರೆ ಸರಿಯಾದ ತರಬೇತಿಲ್ಲ. ಅಮ್ಮನು ಹಠಾತ್ತಾಗಿ ಬೇರೆ ಯಾರ ಸಂಗಡಲಾದರೂ ಮಾತು ಬೆಳೆಸಲಾರಳು. ಮನುಷ್ಯರಿಂದ ದೂರ ದೂರವಾಗಿರುವುದೇ ಆಕೆಯ ಅಭ್ಯಾಸ. ಈ ಹುಡುಗಿಯ ಗುರುತು ಮಾಡಿಕೊಳ್ಳಬೇಕೆಂದು ಇಷ್ಟ, ಆದರೆ ಅಭ್ಯಾಸ ಬಲದಿಂದ ಬಂದ ಸಂಕೋಚದ ಬಲೆಯನ್ನು ಕಿತ್ತುಹಾಕಿ ಬರಲಾಗಲಿಲ್ಲ.

ಇಂಥ ವೇಳೆಯಲ್ಲಿ ಗಾಡಿಯು ಒಂದು ದೊಡ್ಡ ಸ್ಟೇಷನ್ನಿಗೆ ಬಂದು ನಿಂತಿತು. ಹಿಂದೆ ನೋಡಿದ್ದ ಆ ಜನರಲ್ ಸಾಹೇಬರ ಬೇರೊಂದು ದಳವೊಂದು ಈ ಸ್ಟೇಷನ್ನಿನಿಂದ ಗಾಡಿ ಹತ್ತಲು ಪ್ರಯತ್ನಿಸುತ್ತಿದ್ದರು. ಟ್ರೈನಿನಲ್ಲಿ ಎಲ್ಲೂ ಸ್ಥಳವಿಲ್ಲ. ಬಾರಿಬಾರಿಗೂ ಆ ಜನ ನಮ್ಮ ಗಾಡಿಯ ಮುಂದೆಯೆ ಹಾದು ಹೋಗಹತ್ತಿದರು. ಅಮ್ಮನಂತೂ ಬಹಳವಾಗಿ ಹೆದರಿ ಒಂದು ಕಡೆ ಮುದುರಿಕೊಂಡು ಕೂತಿದ್ದಳು. ನಾನೂ ಒಳಗೊಳಗೇ ಕಳವಳಪಟ್ಟೆ.

ಗಾಡಿಯು ಹೊರಡುವ ಸ್ವಲ್ಪ ಹೊತ್ತಿಗೆ ಮೊದಲು ಒಬ್ಬ ನಮ್ಮ ದೇಶೀಯನೇ ಆದ ರೈಲ್ವೆ ನೌಕರನೊಬ್ಬ ಬಂದು ಹೆಸರುಗಳನ್ನು ಬರೆದಿದ್ದ. ಎರಡು ಚೀಟಿಗಳನ್ನು ಗಾಡಿಯ ಎರಡು ಬೆಂಚುಗಳ ಮೇಲುಭಾಗದಲ್ಲಿ ಅಂಟಿಸಿ ನಮ್ಮ ಕಡೆ ನೋಡಿ "ಈ ಗಾಡಿಯ ಎರಡು ಬೆಂಚುಗಳನ್ನು ಇದಕ್ಕೆ ಮುಂಚೆಯೇ ಇಬ್ಬರು ಸಾಹೇಬರು ರಿಜರ್ವ್ ಮಾಡಿಸಿದ್ದಾರೆ. ನೀವು ಇನ್ನೊಂದು ಕಂಪಾರ್ಟ್‌ಮೆಂಟಿಗೆ ಹೋಗಬೇಕಾಗುತ್ತದೆ" ಎಂದ.

ನಾನಂತೂ ಕೋಪದಿಂದ ನಡುಗುತ್ತ ಮೇಲೆದ್ದೆ. ಆ ಹುಡುಗಿ ಹಿಂದಿ ಭಾಷೆಯಲ್ಲಿ "ಇಲ್ಲ, ನಾವು ಈ ಸ್ಥಳ ಬಿಡುವುದಿಲ್ಲ" ಎಂದು ಗಡುಸಾಗಿ ಹೇಳಿ ಬಿಟ್ಟಳು.

ಆ ನೌಕರನೂ ಜೋರಿನಿಂದ ಗದರುತ್ತ "ಬಿಡಲೇಬೇಕು, ಬಿಡದೆ ಆಗುವುದಿಲ್ಲ" ಎಂದು ಜವಾಬು ಹೇಳಿದ.

ಆದರೆ ಆ ಹುಡುಗಿಯು ಅಲುಗಾಡುವ ಯಾವ ಲಕ್ಷಣವನ್ನೂ ತೋರ ಗೊಡದಿರಲು ಆ ಮನುಷ್ಯ ಗಾಡಿಯಿಂದಿಳಿದು ಆಂಗ್ಲ ಸ್ಟೇಷನ್ ಮಾಸ್ಟರನನ್ನು ಕರೆದುಕೊಂಡು ಬಂದ. ಆತನು ಬಂದು "I am sorry, but you have to....." (ವ್ಯವಧಾನವಿಲ್ಲ....ಆದರೆ....) ಎಂದು ಹೇಳುತ್ತಿರುವಾಗ ಇನ್ನು ಪ್ರಯೋಜನವಿಲ್ಲೆಂದು ತಿಳಿದು ನಾನು "ಕೂಲಿ, ಕೂಲಿ" ಎಂದು ಕೂಗು ಹಾಕಲು ತೊಡಗಿದೆ. ಆ ಹುಡುಗಿ ತಟಕ್ಕನೆ ಎದ್ದು ಕಣ್ಣುಗಳಿಂದ ಬೆಂಕಿ ಕಾರುತ್ತ "ಇಲ್ಲ, ನೀವು ಹೋಗಲು ಸಾಧ್ಯವಿಲ್ಲ. ಇರುವ ಕಡೆ ಹಾಗೇ ಕೂತಿರಿ" ಎಂದು ಗುಡುಗಿದಳು. ಹೀಗೆ ಹೇಳಿದ್ದೇ ಬಾಗಿಲ ಬಳಿ ಬಂದು ನಿಂತು ಸ್ಟೇಷನ್ ಮಾಸ್ಟರನ್ನ ಕುರಿತು ಇಂಗ್ಲಿಷ್ ಭಾಷೆಯಲ್ಲೇ "ಇಲ್ಲ, ಈ ಡಬ್ಬಿ ಮೊದಲೇ ರಿಜರ್ವ್ ಆಗಿರುವ ಮಾತು ಸುಳ್ಳು" ಎಂದದ್ದೇ ಬೆಂಚಿನ ಮೇಲೆ ಅಂಟಿಸಿದ್ದ ಚೀಟಿಗಳನ್ನು ಕಿತ್ತು ತೆಗೆದು ನಿಲ್ದಾಣದ ಮೇಲೆ ಬೀಸಿ ಎಸೆದುಬಿಟ್ಟಳು.

ಇಷ್ಟರಲ್ಲಿ ತನ್ನ ಆರ್ಡರ್ಲಿಯನ್ನೂ ಕರೆದುಕೊಂಡು ಯೂನಿಫಾರಂ ಧರಿಸಿದ್ದ ಸಾಹೇಬನು ಗಾಡಿಯ ದ್ವಾರದಲ್ಲಿ ಬಂದು ನಿಂತ. ಡಬ್ಬಿಯೊಳಗೆ ತನ್ನ ಸಾಮಾನುಗಳನ್ನು ಎತ್ತಿ ಇರಿಸಲು ಇದಕ್ಕೆ ಮೊದಲೇ ಅವನು ಆರ್ಡರ್ಲಿಗೆ ಸೂಚನೆ

ಮಾಡಿದ್ದ. ಆಮೇಲೆ ಆ ಹುಡುಗಿಯ ಮುಖ ನೋಡಿದವನೇ, ಅವಳ ಮಾತುಗಳನ್ನು ಕೇಳಿದವನೇ, ಅವಳ ಭಾವವರಿತುಕೊಂಡು ಸ್ಟೇಷನ್ ಮಾಸ್ಟರನ ಬೆನ್ನ ಮೇಲೆ ತಟ್ಟಿ ಅವನನ್ನ ಮರೆಯಲ್ಲಿ ಕರೆದುಕೊಂಡು ಹೋಗಿ ಏನೇನು ಹೇಳಿದನೋ ತಿಳಿಯದು. ಗಾಡಿ ಬಿಡುವ ಸಮಯ ಆಗಿಹೋಗಿದ್ದರೂ ಬೇರೊಂದು ಡಬ್ಬಿಯನ್ನು ತರಿಸಿ ಅದಕ್ಕೆ ಸೇರಿಸಿದ ಮೇಲೆಯೇ ಗಾಡಿ ಹೊರಡಲಾಯಿತು. ಆಮೇಲೆ ಆ ಹುಡುಗಿ ಯಥಾಪ್ರಕಾರ ತನ್ನ ಸಣ್ಣ ಗೆಳತಿಯರೊಂದಿಗೆ ಮತ್ತೆ ಉಲ್ಲಾಸದಿಂದ ಹುರಿಗಡಲೆ ತಿನ್ನಲು ಆರಂಭಿಸಿದಳು, ಮತ್ತು ನಾನು ನಾಚಿಗೆಯಿಂದ ಕಿಟಕಿಯಾಚೆಗೆ ಮುಖವನ್ನು ಚಾಚಿ ನಿಸರ್ಗದ ಶೋಭೆಯನ್ನು ನೋಡತೊಡಗಿದೆ. ಕಾನ್‌ಪುರದಲ್ಲಿ ಗಾಡಿ ಬಂದು ನಿಂತುಕೊಂಡಿತು. ಆ ಹುಡುಗಿಯಾಗ ತನ್ನ ಹಾಸಿಗೆ, ಸಾಮಾನುಗಳನ್ನು ಕಟ್ಟಿಟ್ಟು ಸಿದ್ಧಳಾಗಿದ್ದಳು. ಸ್ಟೇಷನ್ನಿನಲ್ಲಿ ಹಿಂದೂಸ್ಥಾನಿ ಆಳೊಬ್ಬ ಓಡಿಬಂದು ಅವರನ್ನೆಲ್ಲ ಇಳಿಸಿಕೊಳ್ಳುವುದರಲ್ಲಿ ತೊಡಗಿದ.

ಅಮ್ಮನಿಗಾಗಿನ್ನು ತಡೆದಿಟ್ಟುಕೊಳ್ಳಲಾಗಲಿಲ್ಲ. "ನಿನ್ನ ಹೆಸರೇನಮ್ಮ?" ಎಂದು ಕೇಳಿಬಿಟ್ಟಳು.

"ನನ್ನ ಹೆಸರು ಕಲ್ಯಾಣಿ" ಎಂದಳು ಆ ಹುಡುಗಿ.

ಕೇಳಿ ನಮ್ಮ ತಾಯಿಯೂ ನಾನೂ ಇಬ್ಬರೂ ಬೆಚ್ಚಿಬಿದ್ದೆವು.

"ನಿನ್ನ ತಂದೆಯವರು....?"

"ಅವರು ಇಲ್ಲಿಯ ಡಾಕ್ಟರು, ಅವರ ಹೆಸರು ಶಂಭುನಾಥ ಸೇನ್......!"

ಆಮೇಲೆ ಮರುಗಳಿಗೆಯಲ್ಲಿ ಅವರೆಲ್ಲ ಇಳಿದು ಹೊರಟುಹೋದರು.

ಉಪಸಂಹಾರ

ಸೋದರಮಾವನ ನಿಷೇಧವನ್ನು ಅಲ್ಲಗಳೆದು ತಾಯಿಯಾಣತಿಯನ್ನು ತಳ್ಳಿಹಾಕಿ ಇದಾದ ಅನಂತರ ನಾನು ಕಾನ್‌ಪುರಕ್ಕೆ ಬಂದಿದ್ದೇನೆ. ಕಲ್ಯಾಣಿಯ ತಂದೆಯೊಡನೆ, ಕಲ್ಯಾಣಿಯೊಡನೆ ಸಂದರ್ಶನ ಕೂಡ ಆಗಿದೆ. ಕೈ ಜೋಡಿಸಿದೆ. ತಲೆ ಬಾಗಿಸಿಯೂ ಆಯಿತು.

ಶಂಭುನಾಥಬಾಬುವಿನ ಹೃದಯವೇನೋ ಕರಗಿದೆ. ಆದರೆ ಕಲ್ಯಾಣಿಯದು ಒಂದೇ ಉತ್ತರ–"ನಾನು ಮದುವೆಯೇ ಮಾಡಿಕೊಳ್ಳುವುದಿಲ್ಲ."

"ಯಾಕೆ?" ಎಂದು ವಿಚಾರಿಸಿದೆ.

ಮನೆ ಹಾಳಾದ ಹಾಗೇ! ಈ ಕಡೆಯಲ್ಲೂ ಒಬ್ಬ ಸೋದರಮಾವನಿದ್ದಾನೆಯೇ ಹಾಗಾದರೆ?

ಆಮೇಲೆ ತಿಳಿದುಬಂತು – ತಾಯಿಯೆಂದರೆ ಮಾತೃಭೂಮಿ–ಬೇರೆ ಯಾರೂ ಅಲ್ಲ. ಮದುವೆ ಒಡೆದ ಕಾಲದಿಂದ ಕಲ್ಯಾಣಿಯು ಹೆಣ್ಣು ಮಕ್ಕಳ ವಿದ್ಯಾಭ್ಯಾಸದ

ವ್ರತವನ್ನು ಗ್ರಹಣ ಮಾಡಿದ್ದಾಳೆ. ಆದರೆ ನಾನು ಮಾತ್ರ ಆಸೆ ಬಿಡಲಾಗದೆ ಹೋದೆ. ಅದೇ ಸ್ವರದ ಸುಧೆ ಈಗಲೂ ನನ್ನ ಹೃದಯದ ಮಧ್ಯೆ ದನಿಮಾಡುತ್ತಿದೆ, ಅದಾವುದೋ ಆಚೆಯ ದಡದ ಕೊಳಲ ದನಿಯಂತೆ; ನನ್ನ ಬದುಕಿನ ಹೊರ ಪ್ರಾಂತದಿಂದ ಬಂದಿರುವಂತೆ. ಇಡೀ ಸಂಸಾರದ ಹೊರಗಡೆಯೂ ಕೂಗು ಹಾಕಿದಂತೆ ಮತ್ತು ಅಂದು ಆ ರಾತ್ರಿಯ ಮಬ್ಬಿನ ಮಧ್ಯೆ ನನ್ನ ಕಿವಿಗೆ ಬಿದ್ದ "ಇಲ್ಲಿ ಸ್ಥಳ ಇದೆ" ಎಂಬ ಮಾತು ನನ್ನ ಇಡೀ ಬಾಳುವೆಯ ಹಾಡಿನ ಪಲ್ಲವಿಯಾಗಿ ಹೋಗಿತ್ತು. ಆಗ ನನ್ನ ವಯಸ್ಸು ಇಪ್ಪತ್ತುಮೂರು. ಈಗ ಇಪ್ಪತ್ತೇಳು. ಇನ್ನೂ ನಾನು ಆಸೆ ತ್ಯಜಿಸಿಲ್ಲ. ಆದರೆ ಸೋದರಮಾವನನ್ನ ತ್ಯಜಿಸಿಬಿಟ್ಟಿದ್ದೇನೆ. ಎಷ್ಟಾದರೂ ಹೆತ್ತ ಮಗನೆಂದು ಮಾತ್ರ ನನ್ನ ತಾಯಿ ನನ್ನನ್ನ ತ್ಯಜಿಸದೆ ಇದ್ದಾಳೆ.

ನಾನು ಇನ್ನೂ ಮದುವೆಯ ಆಸೆಯನ್ನು ಹಿಡಿದಿದ್ದೇನೆಂದು ನೀವು ತಿಳಿದಿರುವಿರಾ? ಇಲ್ಲ, ಎಂದಿಗೂ ಇಲ್ಲ, ನನ್ನ ಮನಸ್ಸಿನಲ್ಲಿರುವುದು, ಕೇವಲ ಆ ಒಂದು ರಾತ್ರಿಯ ಗುರುತಿಲ್ಲದ ಮಧುರವಾದ ಕೊರಳ ದನಿಯ ಆಸೆ. "ಇಲ್ಲಿ ಸ್ಥಳ ಇದೆ", ನಿಶ್ಚಯವಾಗೂ ಇದೆ ಸ್ಥಳ, ಇಲ್ಲವಾದರೆ ನಿಲ್ಲುವುದೆಲ್ಲಿ? ಅದಕ್ಕೆಂದೇ ವರುಷದ ಮೇಲೆ ವರುಷ ಸಾಗಿದೆ. ನಾನಂತೂ ಇದ್ದಲ್ಲೇ ಇದ್ದೇನೆ, ಕಣ್ಣಾರೆ ಕಾಣುತ್ತೇನೆ. ಅದೇ ಕೊರಳ ದನಿಯನ್ನು ಕೇಳುತ್ತೇನೆ, ಅವಕಾಶ ದೊರಕಿದಾಗೆಲ್ಲ ಅವಳಿಗೇನಾದರೂ ಕೆಲಸ ಮಾಡಿಕೊಡುತ್ತೇನೆ. ಆಗ ಮನಸ್ಸು ಹೇಳುತ್ತದೆ-ಇಗೋ ಸ್ಥಳ ದೊರಕಿದೆಯಲ್ಲ ಈಗ? ಹೇ ಅಪರಿಚಿತಳೇ, ನಿನ್ನ ಪರಿಚಯದ ಮುಕ್ತಾಯವಾಗಲೇ ಇಲ್ಲ. ಆಗುವುದೂ ಇಲ್ಲ. ಆದರೆ ನನ್ನ ಅದೃಷ್ಟ ಒಳ್ಳೆಯದೇ- ಏಕೆಂದರೆ, ಇಗೋ, ನನಗೆ ಸ್ಥಳ ದೊರಕಿಬಿಟ್ಟಿದೆ.

೧೩. ತಪಸ್ವಿನಿ

ವೈಶಾಖಮಾಸ, ಇನ್ನೇನು ಮುಗಿಯುತ್ತ ಬಂದಿದೆ. ಮೊದಲ ರಾತ್ರಿ ಸೆಖೆ ಎಷ್ಟೋ ಕಡಿಮೆಯಾಗಿತ್ತು. ಆದರೆ ಬಿದಿರು ಗಿಡಗಳ ಎಲೆಗಳು ಕೂಡ ಅಲ್ಲಾಡುವಷ್ಟು ಗಾಳಿಯಿಲ್ಲ ಇನ್ನೂ. ಮುಗಿಲಿನ ತಾರೆಗಳು ತಲೆನೋವಿನ ವೇದನೆಯಿಂದೇನೋ ಎನ್ನುವಂತೆ ದುಮ ದುಮವೆಂದು ಹೊಳೆಯುತ್ತಿವೆ. ರಾತ್ರಿ ಮೂರು ಘಂಟೆಯ ವೇಳೆಯಲ್ಲಿ ಝುರ್ ಎಂದು ಸಣ್ಣದಾಗೊಂದು ಗಾಳಿಯಲೆ ಬೀಸಿತು. ಷೋಡಶಿಯು ಬರಿ ನೆಲದ ಮೇಲೆ, ತೆರೆದ ಕಿಟಕಿಯ ತಳಗಡೆ ಮಲಗಿದ್ದಾಳೆ. ಒಂದು ಬಟ್ಟೆಯಲ್ಲಿ ಸುತ್ತಿದ ಟಿನ್ನಿನ ಪೆಟ್ಟಿಗೆ ಅವಳ ತಲೆದಿಂಬು. ಅತಿ ಉತ್ಸಾಹದಿಂದಲೇ ಅವಳು ತನ್ನ ವ್ರತ ಸಾಧನೆ ನಡೆಸಿದ್ದಾಳೆಂದು ಗೊತ್ತಾಗಿಹೋಗುತ್ತದೆ.

ಪ್ರತಿ ದಿನ ಮುಂಜಾನೆ ನಾಲಕ್ಕು ಹೊಡೆಯುವಷ್ಟರಲ್ಲಿ ಎದ್ದು ಸ್ನಾನ ಮುಗಿಸಿ ಷೋಡಶಿಯು ದೇವರ ಮನೆಯಲ್ಲಿ ಹೋಗಿ ಕೂಡುವಳು. ಆಹ್ನಿಕ ಮುಗಿಸುವುದರಲ್ಲಿ ಹೊತ್ತು ಬಹಳವಾಗಿಬಿಟ್ಟಿರುತ್ತದೆ. ಆಮೇಲೆ ವಿದ್ಯಾರತ್ನ ಮಹಾಶಯರು ಬರುತ್ತಾರೆ. ಆ ಕೋಣೆಯಲ್ಲೇ ಕೂತು ಆತನ ಮುಂದೆ ಗೀತೆಯೋದುವಳು. ಸಂಸ್ಕೃತವನ್ನು ಅವಳು ಸ್ವಲ್ಪ ಸ್ವಲ್ಪ ಕಲಿತಿದ್ದಾಳೆ. ಶಂಕರರ ವೇದಾಂತ ಭಾಷ್ಯ ಮತ್ತು ಪತಂಜಲಿಯ ದರ್ಶನಗಳನ್ನು ಮೂಲ ಗ್ರಂಥಗಳಿಂದಲೇ ಓದಬೇಕೆಂದು ಅವಳ ಹಠ. ಅವಳ ವಯಸ್ಸೀಗ ಇಪ್ಪತ್ತುಮೂರು ಇರಬಹುದು.

ಮನೆಗೆಲಸಗಳಿಂದ ಷೋಡಶಿ ಎಷ್ಟೋ ದೂರ. ಅದೇಕೆ ಹಾಗಾಯಿತೆಂದು ಕಾರಣ ಹೇಳುವುದಕ್ಕೇ ಈ ಕಥೆ.

ಮಾಖನ್ ಬಾಬುಗಳ ಸ್ವಭಾವ ಅವರ ಹೆಸರಿನೊಂದಿಗೆ ಸ್ವಲ್ಪವೂ ಹೊಂದಿಕೊಳ್ಳುವುದಿಲ್ಲ (ಮಾಖನ್ ಅಂದರೆ ಬೆಣ್ಣೆ). ಅವರ ಮನಸ್ಸು ಕರಗಿಸುವುದು ಸಾಮಾನ್ಯರ ಕೈಯಲ್ಲಿ ಸಾಧ್ಯವಿಲ್ಲ. ಅವರು ಮನಸ್ಸು ಮಾಡಿದ್ದರು – ಎಲ್ಲಿಯವರೆಗೆ ಅವರ ಮಗ ವರದನು ಕನಿಷ್ಠಪಕ್ಷ ಬಿ.ಎ. ಪರೀಕ್ಷೆಯಾದರೂ ಪಾಸ್ ಮಾಡದೆ ಇರುವನೋ ಅಲ್ಲಿಯವರೆಗೆ ಅವನು ತನ್ನ ಹೆಂಡತಿಯಿಂದ ದೂರವಾಗಿಯೇ ಇರಬೇಕು ಎಂದು. ಏಕೆಂದರೆ ಓದು, ಬರೆಹವೆಂದರೆ ವರದನ ಪ್ರಕೃತಿಗೆ ಅಷ್ಟು ಆಕರ್ಷಣವಿಲ್ಲ. ಅವನ ಆಸಕ್ತಿ ಹೆಚ್ಚು ವಿಲಾಸದಲ್ಲಿ. ಬಾಳುವೆಯ ಹೂದೋಟದ

ಮಧುಸಂಚಯದ ಕ್ಷೇತ್ರದಲ್ಲಿ ಜೀರುದುಂಬಿಗಳ ಜೊತೆಗೆ ಅವನನ್ನು ಹೋಲಿಸಬಹುದು. ಆದರೆ ಜೇನುತುಪ್ಪ ಜಿನುಗುವಾಗ ಆಗುವ ಅಲ್ಪ ಶ್ರಮ ಕೂಡ ಆವಶ್ಯಕವೆಂದು ಅವನಿಗನ್ನಿಸುವುದಿಲ್ಲ. ಮದುವೆಯಾದರೆ ಸಾಕು, ಆಮೇಲೆ ಮೀಸೆಯನ್ನು ತೀಡಿಕೊಂಡು ಸ್ವಲ್ಪ ಆರಾಮವಾಗಿ ಕಳೆಯಬಹುದೆಂದು ಬಹಳ ಆಸೆಯಿಂದಿದ್ದ. ಅದರ ಜೊತೆಯಲ್ಲೇ ಧೈರ್ಯವಾಗಿ ಮನೆಯ ಮುಂಬಾಗಿಲಲ್ಲೇ ಸಿಗರೇಟು ಸೇದುವ ಹಕ್ಕೂ ಬರುತ್ತದೆಂದುಕೊಂಡಿದ್ದ. ಆದರೆ ಅವನ ದುರದೃಷ್ಟ, ಮದುವೆಯಾದ ಮೇಲೆ ಅವನ ಭವಿಷ್ಯ ಸಾಧನೆಯ ಬಗ್ಗೆ ಅವರಪ್ಪನ ಮನದಲ್ಲಿ ಹಠ ಇನ್ನೂ ಪ್ರಬಲವಾಗಿಹೋಯಿತು.

ಶಾಲೆಯ ಸಂಸ್ಕೃತ ಪಂಡಿತರು ವರದನನ್ನು ಗೋತಮ ಮುನಿಯೆಂದು ಕರೆಯುತ್ತಿದ್ದರು–ಅಂದರೆ ಅವನ ಬ್ರಹ್ಮತೇಜಸ್ಸನ್ನು ನೋಡಿ ಅಲ್ಲ. ಯಾವ ಪ್ರಶ್ನೆಗೂ ಅವನು ಉತ್ತರ ಹೇಳುತ್ತಲೇ ಇರಲಿಲ್ಲವಾದ್ದರಿಂದ 'ಮುನಿ'ಯೆಂದರು. ಮತ್ತು ಒಮ್ಮೆ ಉತ್ತರ ಕೊಟ್ಟರೂ ಅದು ಗೋವಿಗೆ ಸಂಬಂಧಪಟ್ಟ ಯಾವುದಾದರೂ ತುಚ್ಛವಸ್ತು (ಸಗಣಿ)ವಿನ ಜ್ಞಾಪಕ ತರುವಂಥದಾಗಿತ್ತಾದುದರಿಂದ "ಗೋ"ತಮನೆಂಬ ಹೆಸರೂ ಬಂತು.

ಮಾಖನರು ಹೆಡ್‌ಮಾಸ್ಟರ ಬಳಿ ವಿಚಾರಿಸಿ ತಿಳಿದುಕೊಂಡ ಪ್ರಕಾರ, ಸ್ಕೂಲಿನಲ್ಲಿ ಮತ್ತು ಮನೆಯಲ್ಲಿ ಕೂಡ ಎರಡು ಬೇರೆ ಬೇರೆ ಶಿಕ್ಷಕರೆಂಬ ಇಂಜನ್ನುಗಳಿಂದ ಒಟ್ಟಿಗೇ ದಬ್ಬಲ್ಪಟ್ಟರೆ ಮಾತ್ರ ವರದನು ವಿದ್ಯೆಯಲ್ಲಿ ಮುಂದೆಹೋಗಲು ಸಾಧ್ಯ ಎಂದು. ಎಂಥೆಂಥ ಶುದ್ಧ ಮೂರ್ಖ ಶುಂಠಿಗಳೆನ್ನಿಸಿ ಕೊಂಡವರನ್ನೂ ಪರೀಕ್ಷಾ ಸಾಗರವನ್ನು ದಾಟುವಂತೆ ಮಾಡಿದ ಘಟಾನುಘಟಿಗರಾದ ಮಾಸ್ಟರು ನೇಮಿಸಲ್ಪಟ್ಟು ಸಂಜೆ ಮನೆಗೆ ಬಂದು ರಾತ್ರಿ ಹತ್ತು ಹತ್ತೂವರೆ ಘಂಟೆಗಳ ವರೆಗೂ ವರದನಿಗೆ ಪಾಠ ಹೇಳಿಕೊಡಹತ್ತಿದರು. ಸತ್ಯ ಯುಗದಲ್ಲಿ ಸಿದ್ಧಿ ಲಾಭಕ್ಕೋಸುಗ ದೊಡ್ಡ ದೊಡ್ಡ ತಪಸ್ವಿಗಳು ತಪಸ್ಸನ್ನಾಚರಿಸಿದವರು ಏಕಾಂಗಿಗಳಾಗಿಯೇ ಮಾಡಿದರು. ಆದರೆ ಮಾಸ್ಟರನ್ನು ಜೊತೆಯಲ್ಲಿರಿಸಿಕೊಂಡು ನಮ್ಮ ವರದ ಮಾಡಿದ ಮಹಾ ತಪಸ್ಯವಂತೂ ಅವರೆಲ್ಲರು ಮಾಡಿದುದಕ್ಕಿಂತಲೂ ಅತ್ಯಂತ ದುಸ್ಸಹವಾದದ್ದು. ಆ ಕಾಲದ ಮುನಿಗಳ ತಪಸ್ಯದ ಪ್ರಧಾನ ಉತ್ತಾಪವಾಗಿದ್ದುದು ಅಗ್ನಿಯ ಮೂಲಕ. ಈ ಕಾಲದ ಈ ಪರೀಕ್ಷಾ ತಪಸ್ಯದ ತಾಪದ ಪ್ರಧಾನ ಕಾರಣ ಅಗ್ನಿ ಶರ್ಮರು. ಅವರು ವರದನನ್ನು ಬಹಳವಾಗಿ ಪೀಡಿಸಿದರು. ಅದಕ್ಕೆಂದೇ ಇಷ್ಟು ಕ್ಲೇಶದ ಅನಂತರವೂ ಪರೀಕ್ಷೆಯಲ್ಲಿ ಯಾವಾಗ ಫೇಲಾದನೋ ಆಗ ಅವನಿಗಾದ ಒಂದೇ ಒಂದು ಸಮಾಧಾನವೆಂದರೆ ಆ ಘಟಾನುಘಟಿಗ ಮಾಸ್ಟರಾದವನು ಸೋಲೊಪ್ಪಿಕೊಂಡು ತಲೆ ತಗ್ಗಿಸಬೇಕಾಯಿತು.

ತಮ್ಮ ಹಠ ಬಿಡಲಿಲ್ಲ. ಎರಡನೇ ವರ್ಷ ಇನ್ನೊಂದು ತಂಡ ಮಾಸ್ಟರುಗಳನ್ನು ನೇಮಿಸಿದರು. ಅವರುಗಳಿಗೆ ವೇತನವಲ್ಲದೆ ವರದನು ಫಸ್ಟ್ ಕ್ಲಾಸಿನಲ್ಲಿ ತೇರ್ಗಡೆಯಾದರೆ ಬಕ್ಷೀಸು ಸಹ ದೊರೆಯುವುದೆಂದು ಆಶ್ವಾಸನೆ ಕೊಡಲಾಯಿತು. ಈ ಬಾರಿಯೂ ವರದನು ಯಥಾಪ್ರಕಾರ ಫೇಲಾಗಬೇಕಾಗಿತ್ತು. ಆದರೆ ಈ ಆಸನ್ನವಾದ ದುರ್ಘಟನೆಯನ್ನು ಒಂದು ವಿಚಿತ್ರ ರೀತಿಯಿಂದ ನಿವಾರಿಸುವ ಪ್ರಯತ್ನ ಮಾಡಿದ, ವರದ. ಪರೀಕ್ಷೆಯ ಹಿಂದಿನ ದಿನವೇ ಆ ಪಾಳೆಯದ ಆಯುರ್ವೇದ ಪಂಡಿತರ ಬಳಿ ಹೋಗಿ ಅವರಿಂದ ಅತಿ ಬಲವಾದ ಭೇದಿಯ ಮಾತ್ರೆಯನ್ನು ಕೊಂಡು ಸೇವಿಸಿಬಿಟ್ಟ. ಇದರ ಫಲವಾಗಿ ಧನ್ವಂತರಿಯ ಕೃಪೆಯಿಂದ ಪರೀಕ್ಷೆಯಲ್ಲಿ ಫೇಲಾಗಲು ಸೆನೆಟ್ ಹಾಲಿನವರೆಗೂ ಹೋಗಬೇಕಾದ ಪ್ರಮೇಯವೇ ಇಲ್ಲದೆ ಮನೆಯಲ್ಲೇ ಕೂತು ಆ ಕಾರ್ಯಸಿದ್ಧಿಯನ್ನು ಪೂರ್ತಿ ಮಾಡಿಕೊಳ್ಳಬಲ್ಲವನಾದ. ಈ ಬಗೆಯಾಗಿ ಅವನು ಮಾಡಿದ ಹಂಚಿಕೆಯಿಂದ ಅವನಿಗೆ ತಾತ್ಕಾಲಿಕ ಜಯವಾದರೂ ಪರೀಕ್ಷೆಯ ಪೀಡೆಯಿಂದ ಶಾಶ್ವತವಾಗಿ ತಪ್ಪಿಸಿಕೊಳ್ಳಲು ಅದು ಸಾಲದಾಯಿತು. ಅವರಪ್ಪ, ಈ ರೋಗವು ಅವನಿಗೆ ಪರೀಕ್ಷೆಯ ಸಮಯಕ್ಕೇ ಬರುವ ಹಾಗೆ ಆದುದರಲ್ಲಿ ಅವನ ಕೈವಾಡವಿಲ್ಲದೇ ಇಲ್ಲ ಎಂದು ಖಂಡಿತ ಮಾಡಿಕೊಂಡು 'ಆದರೇನೀಗ, ಇನ್ನೊಂದು ವರುಷ ಓದಿ ಪರೀಕ್ಷೆ ಪಾಸು ಮಾಡು' ಎಂದರು. ಅಂದರೆ ಕಠಿಣ ಸಜಾ ಇನ್ನೂ ಒಂದು ವರುಷ ಮುಂದುವರಿಸಿದಂತಾಯಿತು.

ಇದರಿಂದ ಮುನಿಸಿಕೊಂಡು ವರದನು ಒಂದು ದಿನ ಬೆಳಗ್ಗೆ ಅಭಿಮಾನದಿಂದ ನಾನು ಊಟವೇ ಮಾಡುವುದಿಲ್ಲ ಎಂದುಬಿಟ್ಟ. ಆದರೇನು ಸಂಜೆ ಅದಕ್ಕೆ ಎರಡರಷ್ಟು ಊಟಮಾಡಿದ. ತಂದೆಯನ್ನು ಕಂಡರೆ ಹುಲಿಯನ್ನು ಕಂಡಂತೆ ಭಯ. ಆದರೂ ಹೇಗೋ ಧೈರ್ಯಮಾಡಿಕೊಂಡು ಅಪ್ಪನ ಬಳಿ ಹೋಗಿ "ನಾನಿಲ್ಲಿದ್ದುಕೊಂಡು ಓದಲು ಸಾಧ್ಯವಿಲ್ಲ" ಎಂದ.

ಅಪ್ಪ "ಬೇರೆಲ್ಲಿ ಹೋದರೆ ಆ ಅಸಂಭವ ಕಾರ್ಯ ಸಂಭವವಾಗಬಹುದು?" ಎಂದ.

"ವಿಲಾಯಿತಿಯಲ್ಲಿ" ಎಂದ ಮಗ. ಅಪ್ಪನೆಂದ "ಈ ಹುಚ್ಚು ಮಾತೆಲ್ಲ ಬಿಡು. ನಿನಗೆ ಈ ಓದು ಬರೆಹದ ಸಂಬಂಧದಲ್ಲಿ ಯಾವ ಗೋಳ ಬೇಕೆನ್ನುತ್ತೀಯೋ ಅದು ಭೂಗೋಳವಲ್ಲ. ಅದು ನಿನ್ನ ಮೆದುಳಿನಲ್ಲಿ." ತನ್ನ ಮಾತು ಅಷ್ಟು ಅಲ್ಲಗಳೆಯತಕ್ಕದ್ದಲ್ಲ, ಎಂದು ಸಮರ್ಥಿಸಲು ವರದ ತನ್ನ ಗೆಳೆಯನೊಬ್ಬ, ಸತೀರ್ಥನೆಂಬುವನು ಎರ್ಟ್ರೆಸ್ ಸ್ಕೂಲಿನ ಮೂರನೇ ಶ್ರೇಣಿಯ ಕಡೆಯ ಬೆಂಚಿನಿಂದ ಒಂದೇ ನೆಗೆತದಲ್ಲಿ ವಿಲಾಯಿತಿಯ ದೊಡ್ಡ ಪರೀಕ್ಷೆಯೊಂದನ್ನು ಗೆದ್ದುಕೊಂಡು ಬಂದಿದ್ದಾನೆ ಎಂದ. ಅದಕ್ಕೆ ಮಾಖನರು "ಇರಬಹುದು. ನೀನು

ವಿಲಾಯಿತಿಗೆ ಹೋಗುವೆಯಂತೆ ಅಡ್ಡಿಯಿಲ್ಲದೆ. ಆದರೆ ಮೊದಲು ಬಿ.ಎ. ಪಾಸು ಮಾಡಲೇಬೇಕು" ಎಂದರು.

ಇದೊಂದು ದೊಡ್ಡ ತಾಪತ್ರಯ. ಬಿ.ಎ. ಪಾಸುಮಾಡದೆ ಇದ್ದರೂ ಅವನು ಹುಟ್ಟಿದ್ದಾನೆ. ಬಿ.ಎ. ಪಾಸು ಮಾಡದೆ ಇದ್ದರೂ ಅವನು ಸಾಯುವುದೂ ಖಂಡಿತ. ಇಷ್ಟಾದರೂ ಹುಟ್ಟು ಸಾವುಗಳ ಮಧ್ಯೆಯಲ್ಲಿ ಇದೆಲ್ಲಿಯದಪ್ಪಾ ಈ ಬಿ.ಎ. ಪರೀಕ್ಷೆ ಎಂಬುದೊಂದು ವಿಂಧ್ಯಪರ್ವತದಂತೆ ಎದ್ದು ನಿಂತುಕೊಂಡಿದೆಯಲ್ಲಾ? ಎದ್ದರೆ, ಓಡಾಡಿದರೆ ಈ ಹಾಳು ಬಿ.ಎ. ಪಾಸಿನೊಂದಿಗೆ ಢಿಕ್ಕಿ ಹೊಡೆಯಬೇಕೆ? ಕಲಿಗಾಲದಲ್ಲಿ ಅಗಸ್ತ್ಯ ಮುನಿಯಿದ್ದಿದ್ದರೆ ಅವನೂ ಜಟೆ ಮುದುರಿಕೊಂಡು ಬಿ.ಎ. ಪಾಸ್ ಮಾಡಬೇಕಾಗುತ್ತಿತ್ತೇನೋ?

ನಿಟ್ಟುಸಿರು ಬಿಡುತ್ತಾ ವರದನು ಅಂದುಕೊಂಡ "ಮಾತಿಗೆ ಮೂರು ಸಲ ಅನ್ನುವಂತೆ ಈ ಮೂರನೇ ಸಲವೇ ಕೊನೆ." ಮತ್ತೊಮ್ಮೆ ಪೆನ್‌ಸಿಲಿನ ಗುರುತುಗಳು ತುಂಬಿದ ಪುಸ್ತಕಗಳ ರಾಶಿಯನ್ನು ಅಲಮಾರಿನಿಂದ ತೆಗೆದು ಕಟ್ಟಿಕೊಂಡು ವರದನು ಕಾಲೇಜಿಗೆ ಹೋಗಲು ಸಿದ್ಧಮಾಡಿಕೊಳ್ಳತೊಡಗಿದ. ಈ ವೇಳೆಯಲ್ಲೊಂದು ಆತಂಕವೆದ್ದುಕೊಂಡಿತು. ಇದನ್ನು ಅವನಿಗೆ ಸಹಿಸಲಾಗಲಿಲ್ಲ. ಕಾಲೇಜಿಗೆ ಹೋಗುವ ಮೊದಲು ಗಾಡಿಯು ಸಿದ್ಧವಾಗಿದೆಯೋ ತಿಳಿದುಬರಲು ಹೋದಾಗ ತಿಳಿದುಬಂತು– ಕಾಲೇಜಿಗೆ ಹೋಗಿರಬರಲೆಂದೇ ಅವನಿಗೆ ತೆಗೆಸಿಕೊಟ್ಟಿದ್ದ ಗಾಡಿ ಕುದುರೆಗಳನ್ನು ಅವರಪ್ಪ ಮಾರಿಬಿಟ್ಟಿದ್ದರು. "ಎರಡು ವರ್ಷಗಳನ್ನು ನಷ್ಟ ಮಾಡಿಕೊಂಡದ್ದಾಯಿತು. ಇನ್ನೆಷ್ಟು ಅಂತ ವೃಥಾ ಖರ್ಚು ಮಾಡುವುದು?" ಎಂದರಂತೆ. ಕಾಲೇಜಿಗೆ ನಡೆದುಕೊಂಡು ಹೋಗುವುದಂತೂ ವರದನಿಂದ ಸಾಧ್ಯವಿಲ್ಲ. ಆದರೆ ಜನಗಳ ಮುಂದೆ ಈ ಅಪಮಾನಕ್ಕೆ ಯಾವ ಸಮಾಧಾನ ಹೇಳುವುದು?

ಕಡೆಗೆ ಎಷ್ಟೋ ಯೋಚಿಸಿ ಯೋಚಿಸಿ ಆದ ಮೇಲೆ ಒಂದು ದಿನ ಬೆಳಗ್ಗೆ ಅವನ ತಲೆಯಲ್ಲಿ ಹೊಳೆಯಿತು–ಈ ಸಂಸಾರದಲ್ಲಿ ಸಾವೊಂದು ಹೊರತಾಗಿ ಈ ಬಿ.ಎ. ಪಾಸು ಮಾಡುವುದರ ಉಪದ್ರವದಿಂದ ತಪ್ಪಿಸಿಕೊಳ್ಳುವುದಕ್ಕೆ ಬೇರೆ ಒಂದೇ ಒಂದು ಮಾರ್ಗವಿರುವುದು–ಅದನ್ನು ಹಿಡಿದರೆ ಸಾಕು, ದಾರಾಸುತಧನಜನಗಳಾವುದೂ ಬೇಕಾಗುವುದಿಲ್ಲ. ಸಂನ್ಯಾಸಿಯಾಗಿ ಹೋದರೆ ಆಯಿತು. ಈ ಗಂಭೀರವಾದ ಯೋಚನೆಯ ಬಗ್ಗೆ ಅವನು ಈ ಕೆಲವು ದಿನಗಳಿಂದ ಅದೆಷ್ಟು ಸಿಗರೇಟುಗಳ ಹೊಗೆಯನ್ನು ಬಿಟ್ಟಿದ್ದಾನೋ. ಆಮೇಲೆ ಹಠಾತ್ತಾಗಿ ಒಂದು ದಿನ ನೋಡಿದರೆ ಅವನು ಓದುವ ಕೋಣೆಯ ನೆಲದ ಮೇಲೆ ಅವನ ಕಾಲೇಜಿನ ಪುಸ್ತಕಗಳು, ನೋಟ್ಸುಗಳು ಎಲ್ಲವನ್ನೂ ಹರಿದು ಚಿಂದಿಮಾಡಿ ಬಿಸಾಡಲಾಗಿದೆ–ಪರೀಕ್ಷಾದುರ್ಗದ ಭಗ್ನಾವಶೇಷವೆಂಬಂತೆ. ಪರೀಕ್ಷಾರ್ಥಿ ಮಾತ್ರ ಕಾಣಬರುತ್ತಿಲ್ಲ. ಮೇಜಿನ ಮೇಲೆ

ಒಂದು ಚೂರು ಕಾಗದದ ಮೇಲೆ ಹಿಡಿಮುರಿದು ಹೋದ ಒಂದು ಕುಡಿಯುವ ಗಳಾಸನ್ನ ಭಾರವಾಗಿ ಇರಿಸಿದೆ. ಆ ಕಾಗದದ ಮೇಲೆ ಹೀಗೆ ಬರೆದಿದೆ:

"ನಾನು ಸಂನ್ಯಾಸಿಯಾಗಿದ್ದೇನೆ. ನನಗಿನ್ನು ಗಾಡಿಯ ಆವಶ್ಯಕತೆ ಇರುವುದಿಲ್ಲ."

ಶ್ರೀಯುತ ವರದಾನಂದಸ್ವಾಮಿ

ಮಾಖನ್‌ಬಾಬುಗಳು ಕೆಲವು ದಿನ ಅವನನ್ನು ಹುಡುಕಲು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಅವರು ಅಂದುಕೊಂಡರು–"ಹೋಗಲಿ, ಎಷ್ಟು ದಿವಸ ಹೋಗುತಾನೋ! ಅವನಾಗವನೇ ದರದಿದ್ದರೆ ಬರುತ್ತಾನೆ–ಪಂಜರದ ಬಾಗಿಲು ತೆರೆದಿಟ್ಟಿದ್ದರೆ ಸಾಕು. ಬೇರೇನೂ ಮಾಡಬೇಕಾಗಿಲ್ಲ."

ಪಂಜರದ ಬಾಗಿಲೇನೋ ತೆರೆದೇ ಇತ್ತು. ಆ ಹರಿದು ಬಿಸಾಡಿದ ಪುಸ್ತಕಗಳ ಚೂರುಗಳ ರಾಶಿಯನ್ನೆಲ್ಲ ಗುಡಿಸಿ ಎಸೆದು ಶುಭ್ರ ಮಾಡಲಾಗಿತ್ತು ಕೋಣೆಯನ್ನು. ಬೇರೆಲ್ಲ ಹಾಗೇ ಇದೆ. ಮೂಲೆಯಲ್ಲಿರಿಸಿದ್ದ ಕುಡಿಯುವ ನೀರಿನ ಮೇಲೆ ಆ ಹಿಡಿ ಮುರಿದ ಗಳಾಸನ್ನು ಬೋರಲಾಗಿ ಮುಚ್ಚಿದೆ. ಎಣ್ಣೆಯ ಗುರುತುಗಳಿಂದ ಮಾಸಿರುವ ಕುರ್ಚಿಯ ಮೇಲೆಲ್ಲಾ ಜಿರಲೆಗಳ ಉತ್ಪಾತ–ಜೀರ್ಣಾವಸ್ಥೆಯಲ್ಲಿರುವ ಅಟ್ಲಾಸೊಂದರ ರಟ್ಟನ್ನು ಕುರ್ಚಿಯ ಮೇಲೆ ಹರಡಲಾಗಿದೆ. ಇನ್ನೊಂದು ಕಡೆ ಖಾಲಿಯಿರುವ ರಟ್ಟಿನ ಪೆಟ್ಟಿಗೆ, ಒಂದು ಟಿನ್ನಿನ ಟ್ರಂಕಿನ ಮೇಲೆ ವರದನ ಹೆಸರು ಬರೆದಿದೆ. ಭಾರತೀಯ ಇತಿಹಾಸದ ಪುಸ್ತಕದ ಹರಿದ ಕೆಲವು ಪುಟಗಳು, ಮತ್ತು ರಟ್ಟಿನ ಮೇಲೆ ವಿಕ್ಟೋರಿಯಾ ರಾಣಿಯ ಚಿತ್ರವಿರುವ ಕೆಲವು ಎಕ್ಸ್‌ರ್‌ಸೈಜ್ ಪುಸ್ತಕಗಳು, ಈ ಪುಸ್ತಕಗಳನ್ನು ಝಾಡಿಸಿದರೆ ಅವುಗಳೊಳಗಿಂದ Ogden Companyಯ ಸಿಗರೇಟು ಪ್ಯಾಕುಗಳೊಳಗಿರುತ್ತಿದ್ದ ವಿಲಾಯಿತಿ ನಟಿಯರ ಚಿತ್ರಗಳು ಬೀಳುತ್ತಿದ್ದುವು. ಸಂನ್ಯಾಸ ತೆಗೆದುಕೊಳ್ಳುವ ಸಮಯದಲ್ಲಿ ದಾರಿಯಲ್ಲಿ ಉಪಶಮನಾರ್ಥವಾಗಿ ಇವುಗಳನ್ನು ವರದ ತೆಗೆದುಕೊಂಡು ಹೋಗದಿರುವುದನ್ನು ಗಮನಿಸಿದರೆ ಅವನ ಬುದ್ಧಿ ಸ್ವಾಧೀನದಲ್ಲಿರಲ್ಲವೆಂದು ಹೇಳಬಹುದು.

ಕಥಾನಾಯಕನ ಅವಸ್ಥೆ ಹೀಗಾಯಿತು. ನಾಯಕಿ ಷೋಡಶಿಗೆ ಆಗತಾನೇ ವಯಸ್ಸು ತ್ರಯೋದಶಿ (ಹದಿಮೂರು). ತಾಯಿಯ ಮನೆಯವರೆಲ್ಲ ಅವಳನ್ನು ಇನ್ನೂ 'ಕೂಸು' ಎಂದು ಕರೆಯುತ್ತಿದ್ದರು. ಅತ್ತೆ ಮನೆಗೆ ಬಂದ ಮೇಲೂ ಅವಳು ತನ್ನ ಈ ಚಿರಶೈಶವದ ಖ್ಯಾತಿಯನ್ನು ಸಂಗಡ ತಂದಿದ್ದಳು. ಈ ಕಾರಣದಿಂದ ಅವಳ ಮುಂದೆ ಅವಳ ಗಂಡನ ಚಾರಿತ್ರ್ಯ, ಗುಣ ದೋಷಗಳ ವಿಮರ್ಶೆಯನ್ನು ದಾಸಿಯರು ಕೂಡ ಮಾಡುತ್ತಿರಲಿಲ್ಲ. ಅತ್ತೆಯೋ ಸದಾ ರೋಗಿಯಾದುದರಿಂದ ಹಾಸಿಗೆಯ ಮೇಲೇ ಇರುತ್ತಿದ್ದಳು. ಯಜಮಾನರ ಯಾವ ಆಚರಣೆ, ವ್ಯವಹಾರಗಳ ಬಗ್ಗೆಯೂ ಯಾವ ಅಡ್ಡಿ, ಆಕ್ಷೇಪಣೆಗಳನ್ನು ಮಾಡುವವರು ಬೇರೆ ಯಾರು?

ಆಕ್ಷೇಪಣೆ ಮಾಡುವುದಿರಲಿ ಆ ಬಗ್ಗೆ ಯೋಚನೆ ಮಾಡುವುದಕ್ಕೇ ಹೆದರಿಕೆ ಆಕೆಗೆ. ವರದನ ಸೋದರತ್ತೆಯೊಬ್ಬಳಿದ್ದಳು. ಆಕೆಯ ಬಾಯಿಂದ ಬರುವ ಮಾತೆಲ್ಲ ಚೂರಿಯಲಗಿನಷ್ಟು ಹರಿತ. ಸೋದರಳಿಯನನ್ನು ಕುರಿತಂತೂ ಯಾವ ದಾಕ್ಷಿಣ್ಯವೂ ಇಲ್ಲದೆ ಅತ್ಯಂತ ಕ್ರೂರವಾಗಿ ಅವನೆದುರಿಗೆ ಬೈಯುತ್ತಿದ್ದಳು. ಅದಕ್ಕೆ ಕಾರಣವಿಲ್ಲದೆಯಿಲ್ಲ. ಆ ಮನೆಯ ಪರಂಪರೆಗೇ ಬಂದ ಒಂದು ಪದ್ಧತಿಯೇನೆಂದರೆ, ಕೌಲೀನ್ಯದ ಅಪದೇವತೆಗೊಬ್ಬ ಹೆಣ್ಣು ಮಗಳನ್ನು ಬಲಿಯಾಗಿ ಅರ್ಪಿಸುವುದು. ಅದರಂತೆ ಈ ಸೋದರತ್ತೆಯನ್ನೂ ಯಾರೋ ಒಬ್ಬ "ಸದ್ವಂಶಸ್ಥ" ಗಾಂಜಾಖೋರನಿಗೆ ಬಲಿಯಾಗಿ ಅರ್ಪಿಸಿದ್ದರು. ಆದರೆ ಅವಳ ಪುಣ್ಯ, ಅವನು ಹೆಚ್ಚು ದಿನ ಬದುಕಲಿಲ್ಲ–ಇರುವಷ್ಟು ದಿನ ಅವಳು ಬಹಳ ಹಿಂಸೆಯನ್ನನುಭವಿಸಿರಬೇಕು. ಅದಕ್ಕೆಂದೇ ಅವಳು ಷೋಡಶಿಯ ಮೇಲೆ ಅಷ್ಟು ಸಹಾನುಭೂತಿ ತೋರಿಸಿ ಆದರಿಸುತ್ತಿದ್ದುದು. ರತ್ನ, ಮುಕ್ತಾಹಾರ ಎಂದೆಲ್ಲ ಅವಳನ್ನು ಮುದ್ದುಮಾಡಿ ಕರೆಯುವಾಗ ತನಗೆ ಪ್ರಾಪ್ತಿಯಾಗದ "ಮುಕ್ತಾಹಾರ"ವನ್ನೇ ಅವಳು ನೆನೆಯುತ್ತಿದ್ದುದು. ಈ "ಮುಕ್ತಾಹಾರ'ದ ಬಗ್ಗೆ ಅವಳಲ್ಲಿ ಯಾವ ವೇದನೆಯ ಇಂಗಿತ ಅಡಗಿದೆ ಎಂಬುದನ್ನು ಯಾರೂ ಗಮನಿಸುತ್ತಿರಲಿಲ್ಲ.

ಒಮ್ಮೊಮ್ಮೆ ಆಕೆ ಹೇಳುತ್ತಿದ್ದುದುಂಟು "ಅಣ್ಣ ಯಾಕೆ ಹೀಗೆಲ್ಲ ಮನೆಯಲ್ಲಿ ಮಾಸ್ಟರುಗಳನ್ನಿಟ್ಟು ಸುಮ್ಮನೆ ಖರ್ಚುಮಾಡುತ್ತಾನೋ ಗೊತ್ತಿಲ್ಲ. ನಾನು ಬೇಕಾದರೆ ಬರೆದುಕೊಡುತ್ತೇನೆ–ವರದನು ಎಂದಿಗೂ ಪಾಸುಮಾಡಲಾರ"–ಎಂದು. 'ಪಾಸು ಮಾಡಲಾರ' ಎಂಬ ಸಂಶಯ ಷೋಡಶಿಗೂ ಇತ್ತು. ಆದರೆ ಅವಳು ಹೇಗಾದರೂ ಮಾಡಿ ತನ್ನ ಗಂಡ ಯಾವ ರೀತಿಯಲ್ಲಾದರೂ ಪಾಸುಮಾಡಿ ಸೋದರತ್ತೆಯ ವಿರಕ್ತಿಯನ್ನು ಹೋಗಲಾಡಿಸಲೆಂದು ಒಂದೇ ಮನದಿಂದ ಪ್ರಾರ್ಥಿಸತೊಡಗಿದಳು. ವರದನು ಮೊದಲನೇ ಸಲ ಫೇಲಾದುದನ್ನು ಕಂಡು, ಅವರಪ್ಪ ಎರಡನೇ ಬಾರಿ ಮನೆ ಮಾಸ್ಟರುಗಳ ವ್ಯೂಹವನ್ನು ರಚಿಸುವ ಸನ್ನಾಹದಲ್ಲಿದ್ದಾಗ ಅತ್ತೆಯು "ಅಬ್ಬಾ, ಈ ಅಣ್ಣನದು ಅಂತೂ ಒಂದು ವಿಚಿತ್ರ ಹಠ! ಬೇರೆ ಜನರಾಗಿದ್ದರೆ ಒಂದು ಸಲ ಸೋತರೆ ಬುದ್ಧಿ ಕಲೀತಾ ಇದ್ದರು" ಎಂದಳು. ಆಗ ಷೋಡಶಿಯು ಹಗಲು ರಾತ್ರಿ ಕೇವಲ ಎಂತಹ ಅಸಂಭವ ಭಾವನೆಯನ್ನು ಭಾವಿಸಲಾರಂಭಿಸಿದಳೆಂದರೆ–ತನ್ನ ಗಂಡ ಈ ಸಲ ಹೇಗಾದರೂ ಮಾಡಿ ತನ್ನ ಆಶ್ಚರ್ಯಕರವಾದ ಗುಪ್ತ ಪ್ರತಿಭೆಯನ್ನು ಹೊರಗೆ ತಂದು ಈ ಅವಿಶ್ವಾಸಿಯಾದ ಜಗತ್ತನ್ನು ಸ್ತಂಭಿತ ಮಾಡಿಬಿಡುತ್ತಾನೆ. ಅವನು ಪರೀಕ್ಷೆಯಲ್ಲಿ ಮೊದಲ ಶ್ರೇಣಿಯಲ್ಲಿ ಮೊದಲಿನವನಿಗಿಂತ ಇನ್ನೂ, ಇನ್ನೂ, ಇನ್ನೂ...ಮೇಲಿನ ದರ್ಜೆಯಲ್ಲಿ ಪಾಸಾಗುವನು. ಎಷ್ಟು ದೊಡ್ಡ ದರ್ಜೆಯಲ್ಲೆಂದರೆ ಸ್ವಯಂ ಲಾಟ್ (Lt. Governor) ಸಾಹೇಬರೇ ತಮ್ಮ ಸವಾರನ ಮೂಲಕ

ತಮ್ಮನ್ನು ಭೆಟ್ಟಿಯಾಗಬೇಕೆಂದು ಹೇಳಿಕಳುಹಿಸುವರು. ಅವಳು ಹೀಗೆ ಕಲ್ಪನೆಯ ಸ್ವರ್ಗದಲ್ಲಿರಬೇಕಾದರೆ ಆ ಸಮಯಕ್ಕೆ ಸರಿಯಾಗಿ ಆಯುರ್ವೇದ ಪಂಡಿತರ ಭೇದಿಯ ಮಾತ್ರೆ ಪರೀಕ್ಷೆಯ ದಿನವೇ ತಲೆಯ ಮೇಲೆ ಬಾಂಬು ಬಿದ್ದಂತೆ ಬಂದು ಬಿದ್ದಿತು. ಅದರಿಂದಲೂ ಕೆಡುಕಾಗದೆ ಒಳ್ಳೆಯದೇ ಆಗಬಹುದಾಗಿತ್ತು–ಈ ಜನ ಸಂದೇಹಪಡದೇ ಹೋಗಿದ್ದಿದ್ದರೆ! ಅತ್ತೆ ತಟಕ್ಕನೆ ಅಂದುಬಿಟ್ಟಳು "ಹುಡುಗನಿಗೆ ಈ ಕಡೆ ಬುದ್ಧಿ ಇಲ್ಲದಿದ್ದರೂ ಇನ್ನೊಂದು ಕಡೆ ಬೇಕಾದಷ್ಟು ಇದೆ" ಎಂದು. ಅನ್ಯಾಯ, ಪಾಪ! ಲಾಟ್ ಸಾಹೇಬನ ನಿರೂಪ ಬರಲೇ ಇಲ್ಲ ಕಡೆಗೂ. ಷೋಡಶಿಯು ತಲೆಬಾಗಿಸಿಕೊಂಡು ಜನರ ಅಪಹಾಸ್ಯವನ್ನು ಸೈರಿಸಿಕೊಳ್ಳಬೇಕಾಯಿತು. ಸಮಯಕ್ಕೆ ಸರಿಯಾಗಿ ಸನ್ನಿಹಿತವಾದ ಹೊಟ್ಟೆಯ ಬೇನೆ ಅವಳ ಮನಸ್ಸಿನಲ್ಲೂ ಸಂದೇಹ ಹುಟ್ಟಿಸಲಿಲ್ಲ ಎಂದು ಹೇಳಲು ಸಾಧ್ಯವಿಲ್ಲ.

ಇಂತಹ ಸಮಯದಲ್ಲಿ ವರದನು ಪರಾರಿಯಾಗಿಬಿಟ್ಟ. ಈಗಲಾದರೂ ಇದೊಂದು ದುರ್ಘಟನೆಯೆಂದು ತಿಳಿದು ಮನೆಯ ಜನವೆಲ್ಲ ಅವನ ಬಗ್ಗೆ ಅನುತಾಪಪಡುತ್ತಾರೆಂದು ಷೋಡಶಿಗೇನೋ ಭರವಸೆ. ಆದರೆ ಆ ಮನೆಯ ಜನ ವರದನು ಮನೆ ತ್ಯಜಿಸಿಹೋದುದಕ್ಕೂ ಯೋಗ್ಯವಾದ ಬೆಲೆಯನ್ನು ಕೊಡಲಿಲ್ಲ. ಎಲ್ಲರೂ "ಎಷ್ಟು ದಿವಸ ತಾನೆ ಹೋಗುತ್ತಾನೆ...ಇವತ್ತೋ ನಾಳೆಯೋ, ನೋಡುತ್ತಾಯಿರಿ, ಹಾಜರಾಗುತ್ತಾನೆ ಊಟದ ಹೊತ್ತಿಗೆ..." ಎನ್ನತೊಡಗಿದರು.

ಷೋಡಶಿಯಾದರೋ ಮನಸ್ಸಿನಲ್ಲೇ "ಎಂದಿಗೂ ಇಲ್ಲ. ಅವರೆಂದಿಗೂ ವಾಪಸು ಬರುವುದಿಲ್ಲ. ದೇವರೆ, ಜನರ ಮಾತು ಸುಳ್ಳಾಗಲಿ. ಮನೆಯವರೆಲ್ಲ ಎದೆ ಹೊಡೆದುಕೊಂಡು ಅಳುವ ಹಾಗಾಗಲಿ" ಎಂದುಕೊಳ್ಳತೊಡಗಿದಳು.

ಈ ಬಾರಿಯಂತೂ ವಿಧಾತನು ಷೋಡಶಿಗೆ ವರ ಕೊಟ್ಟ. ಅವಳ ಪ್ರಾರ್ಥನೆ ಸಫಲವಾಯಿತು. ಒಂದು ತಿಂಗಳು ಕಳೆಯಿತು, ವರದನು ಕಾಣಬರಲಿಲ್ಲ. ಆದರೆ, ಇಷ್ಟಾದರೂ ಯಾರ ಮುಖದಲ್ಲೂ ಯಾವ ದುಗುಡದ ಗುರುತೂ ಇಲ್ಲ. ಎರಡು ತಿಂಗಳು ಕಳೆದುವು. ಆಗ ಮಾಖನನ ಮನಸ್ಸಿನಲ್ಲಿ ಸ್ವಲ್ಪ ಕಳವಳವುಂಟಾಯಿತು. ಆದರೆ ಹೊರಗಡೆ ತೋರಗೊಡಲಿಲ್ಲ, ಸೊಸೆಯನ್ನು ಕಂಡೊಡನೆ ಅವನ ಮುಖದ ಮೇಲೆ ವಿಷಾದದ ಮೋಡ ಸುಳಿದಾಡುವುದು ಕಾಣಬಹುದು. ಆದರೆ ಅತ್ತೆಯ ಮುಖವಂತೂ ಪೂರ್ತಿಯಾಗಿ ಜ್ಯೇಷ್ಠ ಮಾಸದ ಅನಾವೃಷ್ಟಿಯ ಆಕಾಶದಂತಿರುವುದು. ಇದ್ದಕ್ಕಿದ್ದಹಾಗೆ ಹೊರಬಾಗಿಲಲ್ಲಿ ಯಾರಾದರೂ ಬಂದದ್ದು ನೋಡಿದೊಡನೆ ಷೋಡಶಿಯ ಎದೆ ಡವಡವಗುಟ್ಟುವುದು–ಎಲ್ಲಾದರೂ ತನ್ನ ಗಂಡ ಮರಳಿ ಬಂದಿದ್ದರೆ ಏನು ಗತಿ! ಹೀಗೇ ಮೂರು ತಿಂಗಳು ಕಳೆದ ಮೇಲೆ ಅತ್ತೆಯು ಈ ಹುಡುಗ ಸುಮ್ಮಸುಮ್ಮನೆ ಎಲ್ಲರ ಮನಸ್ಸನ್ನೂ ಕೆಡಿಸುತ್ತ ಇದಾನೆ ಎಂದು ದೂರತೊಡಗಿದಳು.

ಇದೂ ಒಳ್ಳೆಯದೇ, ನಿಕೃಷ್ಟ ಮಾಡುವುದಕ್ಕಿಂತ ವಾಸಿ. ಕುಟುಂಬದವರ ಮನಸ್ಸಿನಲ್ಲಿ ಕ್ರಮೇಣ ಭಯ, ದುಃಖಗಳು ಹೆಪ್ಪುಗಟ್ಟಿಕೊಳ್ಳಲು ಆರಂಭವಾಯಿತು. ಅವನ ಬರುವಿಕೆಯನ್ನು ನಿರೀಕ್ಷಿಸುತ್ತ, ಅಲ್ಲಿಲ್ಲಿ ಹುಡುಕಾಡಿಸುತ್ತ ಒಂದು ವರ್ಷ ಹೇಗೋ ಕಳೆದುಹೋಯಿತು. ಆಗ ಮಾಖನನು ಅನಾವಶ್ಯಕವಾಗಿ ಮಗನನ್ನು ತಿರುಗಿಹಾಕಿಕೊಂಡನೆಂದು ಅತ್ತೆಯೂ ಅನ್ನಲು ಶುರು ಮಾಡಿದಳು. ಎರಡು ವರ್ಷ ಕಳೆದ ಮೇಲೆ ಅಕ್ಕ ಪಕ್ಕದ ಮನೆಯವರೂ ಕೂಡ ವರದನು ಓದು ಬರೆಹದಲ್ಲಿ ಎಷ್ಟೋ ಹಿಂದಾದರೂ ಗುಣದಲ್ಲಂತೂ ಬಹಳ ಒಳ್ಳೆಯವನೆಂದು ಕಂಡುಹಿಡಿದು ಅವನನ್ನು ಕೊಂಡಾಡಹತ್ತಿದರು. ವರದನು ಕಾಣಬರದೆ ಇರುವ ಕಾಲ ಬೆಳೆಯುತ್ತ ಹೋದಷ್ಟೂ ಅವನ ಸ್ವಭಾವ ಎಷ್ಟು ನಿರ್ಮಲ, ನಡತೆ ಎಷ್ಟು ಸ್ವಚ್ಛ–ಅಷ್ಟೇಕೆ, ಅವನು ತಂಬಾಕು ಕೂಡ ಸೇವಿಸುತ್ತಿರಲಿಲ್ಲ.–ಮುಂತಾದ ಕುರುಡು ನಂಬಿಕೆಗಳು ಆ ಕೇರಿಯಲ್ಲಿ ಕೇಳಿಬರತೊಡಗಿದುವು. ಕಾಲೇಜಿನ ಪಂಡಿತರು ಕೂಡ ಬಂದು ಹೇಳಿದರು ಅವನನ್ನು ಗೋತಮ ಮುನಿಯೆಂದು ಹೆಸರಿಟ್ಟುದು ಇದಕ್ಕಾಗೇ ಎಂದೂ, ಅವನಲ್ಲಿ ಇದಕ್ಕೆ ಮೊದಲೇ ವೈರಾಗ್ಯ ಕಂಡುಬಂದಿತ್ತೆಂದೂ ಹೇಳತೊಡಗಿದರು. ಅತ್ತೆಯಂತೂ ಪ್ರತಿನಿತ್ಯ ಒಂದು ಬಾರಿಯಾದರೂ ಅಣ್ಣನ ಕಠಿಣ ಸ್ವಭಾವದ ಮೇಲೆ ತಪ್ಪು ಹೊರಿಸದೆ ಇರುತ್ತಿರಲಿಲ್ಲ. ವರದನು ಇಷ್ಟು ಕಷ್ಟಪಟ್ಟಾದರೂ ಓದು ಬರಹವೇಕೆ ಕಲಿಯಬೇಕಾಗಿತ್ತು? ಅಂಥ ಆವಶ್ಯಕತೆಯೇನು? ಹಣಕ್ಕಂತೂ ಅಭಾವವಿಲ್ಲ. ಏನಾದರೂ ಹೇಳಿ, ಅವನ ಮೈಯಲ್ಲಿ ಒಂದಿಷ್ಟೂ ದೋಷವಿರಲಿಲ್ಲ! ಆಹಾ ಹೇಗಿದ್ದ ಅಂತೀರಿ...ಚಿನ್ನದಲ್ಲಿ ಮಾಡಿದ ಪ್ರತಿಮೆಯೇ!

ಎಲ್ಲಾ ಕೇಳಿದಳು ಷೋಡಶಿ. ತನ್ನ ಗಂಡ ಎಂಥ ಪವಿತ್ರತೆಯ ಆದರ್ಶವಾಗಿದ್ದ, ಆದರೂ ಮನೆಯವರೆಲ್ಲ ಅವನ ಬಗ್ಗೆ ಅದೆಷ್ಟು ಅನ್ಯಾಯ ಮಾಡಿದ್ದಾರೆ. ಈಗ ಸುಮ್ಮನೆ ಹೊಗಳಲು ಆರಂಭಿಸಿದ್ದಾರೆ...ಈಗ ಅವರ ಯೋಗ್ಯತೆ ಏನು ಅಂತ ಎಲ್ಲರಿಗೂ ಗೊತ್ತಾಗಿದೆ...ಹೋಗಲಿ! ಬೇರೆಲ್ಲ ದುಃಖಗಳ ಮಧ್ಯೆ ಇದೇ ಸಮಾಧಾನ. ಇದೇ ಗೌರವ...!

ಈ ಕಡೆ ಮಾಖನನು ತಂದೆಯ ವ್ಯಥಿತ ಹೃದಯದ ಸ್ನೇಹವನ್ನೆಲ್ಲ ಇಮ್ಮಡಿಸಿ ಷೋಡಶಿಯ ಮೇಲೆ ತೋರತೊಡಗಿದ. ಏನಾದರೂ ಮಾಡಿ ಸೊಸೆಯನ್ನು ಸುಖದಲ್ಲಿಟ್ಟಿದ್ದರೆ ಸಾಕು, ಅದೊಂದೇ ಚಿಂತೆ ಮಾಖನನಿಗೀಗ. ಅವನಿಗೊಮ್ಮೆ ಆಸೆಯಾಗುವುದುಂಟು, ಅವಳು ಯಾವುದಾದರೂ, ದುರ್ಲಭವಾದದ್ದನ್ನಾದರೂ, ಬೇಕೆಂದು ಕೇಳಲಿ. ತಾನು ಭೂಮಿಯಂಚಿನಲ್ಲಿದ್ದರೂ ಅದನ್ನು ತಂದುಕೊಡಲು ಹೋಗುವನು. ಎಷ್ಟೇ ಕಷ್ಟವಾಗಲಿ, ನಷ್ಟವಾಗಲಿ, ಅವಳನ್ನು ಮಾತ್ರ ಸಂತುಷ್ಟಗೊಳಿಸಿದರೆ ಸಾಕು. ಮಾಖನನು ಈ ಬಗೆಯಾಗಿ ತ್ಯಾಗವನ್ನು ಸ್ವೀಕಾರ ಮಾಡಲು ಆಶಿಸುವುದೇ ಅವನ ಪರವಾಗಿ ಸಾಕಷ್ಟು ಪ್ರಾಯಶ್ಚಿತ್ತವಾದಂತೆ.

೨

ಷೋಡಶಿಗೀಗ ಹದಿನೈದು ತುಂಬಿತು. ಕೋಣೆಯೊಳಗೆ ಕೂತು ಕೂತು ಆಗಾಗ ಅವಳ ಕಣ್ಣು ಸುಮ್ಮನೆ ನೀರು ತುಂಬುವುದು. ಚಿರಪರಿಚಿತವಾದ ಸಂಸಾರವು ನಾಲ್ಕೂ ಕಡೆಯಿಂದ ಸುತ್ತುಹಾಕಿಕೊಂಡಿರುವುದು, ಅವಳನ್ನು ಅಂಟಿಕೊಂಡಿರುವುದು, ಅವಳಿಗೆ ತಡೆಯಲಾಗುವುದಿಲ್ಲ. ಅವಳ ಉಸಿರು ಹೊಡೆದುಕೊಳ್ಳಲಾರಂಭಿಸುವುದು, ಅವಳ ಕೋಣೆಯೊಳಗಿನ ಪ್ರತಿಯೊಂದು ವಸ್ತುವೂ, ಬಾಲ್ಕೊನಿಯ ಪ್ರತಿಯೊಂದು ಕಟಕಟೆಯೂ, ಮೂಲೆಯಲ್ಲಿದ್ದ ಹೂಗಿಡದ (Tub) ಟಬ್ಬು ಕೂಡ–ಎಲ್ಲ ಸೇರಿ ಅವಳಿಗೆ ತಡೆಯಲಾರದ ಜುಗುಪ್ಸೆಯುಂಟುಮಾಡುತ್ತಿದೆ. ಮಲಗುವ ಮಂಚ, ಸೀರೆಗಳನ್ನು ತೂಗಹಾಕುವ ಗೂಟ, ಅಲಮಾರು ಇವೆಲ್ಲ ಅವಳ ಬಾಳುವೆಯ ಶೂನ್ಯತೆಯನ್ನು ವಿಸ್ತಾರಮಾಡಿ ತೋರುತ್ತ ಅಣಕಿಸುತ್ತವೆ. ಅವುಗಳ ಮೇಲೆಲ್ಲ ಅವಳಿಗೆ ಕೋಪ ಬರುತ್ತದೆ.

ಆ ಮನೆಯಲ್ಲೆಲ್ಲ ಅವಳಿಗೆ ಅತ್ಯಂತ ಆರಾಮ ಕೊಡುವ ಸ್ಥಳವೆಂದರೆ ಆ ಕಿಟಕಿಯ ಬಳಿ. ಅದರ ಹೊರಗಿರುವ ಪ್ರಪಂಚವೇ ಅವಳಿಗೆ ಪ್ರತ್ಯೇಕವಾಗಿ ಸೇರಿದುದಾಗಿತ್ತು. ಏಕೆಂದರೆ ಅವಳಿಗೆ ಹೊರಗಿನದೇ ಮನೆಯಾಗಿತ್ತು. ಮನೆ ಹೊರಗಿನದಾಗಿತ್ತು.

ಒಂದು ದಿನ ಬೆಳಗ್ಗೆ ಹತ್ತು ಘಂಟೆ ಸಮಯ. ಒಳಗಡೆ ಅಂತಃಪುರದಲ್ಲಿ ತಟ್ಟೆ, ಹರಿವಾಣ, ಮೊರ, ತಪ್ಪಲೆ, ಕೊಳತಪ್ಪಲೆಗಳು ಜಮಾಯಿಸಿ ಮನೆಗೆಲಸಗಳು ಎಡೆಬಿಡದೆ ವೇಗವಾಗಿ ನಡೆಯುತ್ತಿರುವಾಗ, ಷೋಡಶಿಯು ಸಂಸಾರದ ಕೆಲಸಗಳೆಲ್ಲದರಿಂದಲೂ ಬೇರೆಯಾಗಿ ಕಿಟಕಿಯ ಬಳಿ ಕೂತು ತನ್ನ ಬೇಸತ್ತ ಮನವನ್ನು ಹೊರಗಡೆಯ ಶೂನ್ಯ ಆಕಾಶದ ಕಡೆ ತಿರುಗಿಸಿ ಅದರಲ್ಲಿ ಮಗ್ನವಾಗಿದ್ದಾಳೆ. ಹಠಾತ್ತಾಗಿ 'ಜಯವಿಶ್ವಂಭರ' ಎಂದು ಕೂಗುತ್ತ ಸಂನ್ಯಾಸಿಯೊಬ್ಬ ಅವರ ಮನೆಯ ಮುಂದಿದ್ದ ಅರಳೀಮರದಡಿಯಿಂದೀಚೆಗೆ ಬಂದ. ಷೋಡಶಿಯ ಮೈಯೊಳಗಿನ ನರನಾಡಿಗಳೆಲ್ಲ ಮೀಟಿದ ವೀಣೆಯ ತಂತಿಗಳಂತೆ ಚರಮ ವ್ಯಾಕುಲತೆಯಿಂದ ದನಿಮಾಡತೊಡಗಿದುವು. ಅವಳು ಓಡಿ ಬಂದದ್ದೇ ಗಂಡಿನ ಅತ್ತೆಗೆ "ಅತ್ತೇ, ಆ ಸಂನ್ಯಾಸಿಗೆ ತತ್‌ಕ್ಷಣ ಶುಶ್ರೂಷೆಗೆ ಏರ್ಪಾಡುಮಾಡಿ" ಎಂದಳು.

ಅದೇ ಆರಂಭ, ಸಂನ್ಯಾಸಿಗಳ ಸೇವೆಯೇ ಷೋಡಶಿಯ ಜೀವನದ ಲಕ್ಷ್ಯವಾಗಿ ಹೋಯಿತು. ಇಷ್ಟು ದಿನಗಳಾದ ಮೇಲೆ ಮಾವನಿಗೆ ಸೊಸೆಯು ಕೇಳಿದ ಇಷ್ಟಾರ್ಥಗಳನ್ನು ನೆರವೇರಿಸಲು ಸುಯೋಗ ಬಂತು. ಮಾಖನನು ಉತ್ಸಾಹದಿಂದ "ಮನೆಯೊಳಗೆ ಒಳ್ಳೇ ಸುಸಜ್ಜಿತವಾದ ಅತಿಥಿಶಾಲೆಯೊಂದು ತಯಾರಾಗಲಿ" ಎಂದ. ಆತನಿಗೆ ಈಚೆಗೆ ಕೆಲವು ದಿನಗಳಿಂದ ವರಮಾನ ಕಡಿಮೆಯಾಗುತ್ತ ಬಂದಿತ್ತು.

ಆದರೂ ಆ ರೂಪಾಯಿಗೆ ಹನ್ನೆರಡಾಣೆಯಂತೆ ಬಡ್ಡಿ ದರದ ಮೇಲೆ ಸಾಲ ಮಾಡಿಯಾದರೂ ಸೊಸೆಯ ಆಸೆಯನ್ನು ಈಡೇರಿಸಲು ತೊಡಗಿದ.

ಸಂನ್ಯಾಸಿಗಳೂ ಯಥೇಷ್ಟವಾಗಿ ಬಂದುಹೋಗಲು ತೊಡಗಿದರು. ಅವರಲ್ಲಿ ಎಷ್ಟೋ ಮಂದಿ ಕಪಟಿಗಳೆನ್ನುವುದರಲ್ಲಿ ಸಂದೇಹವೇ ಇಲ್ಲ. ಆದರೆ ಸೊಸೆಯ ಮುಂದೆ ಅವರನ್ನು ಯಾರಿಗೂ ಆಡಿಕೊಳ್ಳುವ ಧೈರ್ಯವಿಲ್ಲ. ಒಮ್ಮೊಮ್ಮೆ ಊಟ, ಉಪಚಾರಗಳನ್ನು ಅನಿವಾರ್ಯದಿಂದ ಕೊರತೆ ಕಂಡುಬಂದಾಗ ಅವರಲ್ಲಿ ಕೆಲವರು ರೇಗಿ, ಶಪಿಸುವಾಗ, ಅವರುಗಳನ್ನ ಕತ್ತು ಹಿಡಿದು ದಬ್ಬಬೇಕೆನ್ನುವಷ್ಟು ರೋಷ ಬರುತ್ತಿತ್ತು ಮನೆಯ ನೌಕರರಿಗೆ. ಆದರೆ ಷೋಡಶಿಯ ಮುಖ ನೋಡಿದೊಡನೆ ಆ ಭಂಡ ಸಂನ್ಯಾಸಿಗಳ ಕಾಲನ್ನು ಕೂಡ ಹಿಡಿಯಬೇಕಾಗಿರುತ್ತಿತ್ತು. ಇದು ಅವರಿಗೆ ಕಠೋರ ಶಿಕ್ಷೆ.

ಸಂನ್ಯಾಸಿಗಳು ಬಂದರೆ ಮೊದಲು ಅಂತಃಪುರದಿಂದ ಅವರಿಗೆ ಕರೆ ಬರುತ್ತಿತ್ತು. ಅತ್ತೆಯು ಅವರೊಂದಿಗೆ ಮಾತುಕಥೆಯಾಡುತ್ತಿರುವಾಗ ಷೋಡಶಿಯು ಮರೆಯಲ್ಲಿ ನಿಂತು ನೋಡುತ್ತಿದ್ದಳು. ಈ ಎಚ್ಚರಿಕೆಗೆ ಕಾರಣವೇನೆಂದರೆ, ಸಂನ್ಯಾಸಿಯು ಇದ್ದಕ್ಕಿದ್ದ ಹಾಗೆ ಮೊದಲಲ್ಲೇ 'ಅಮ್ಮಾ', ಎಂದು ಕರೆದುಬಿಡದಿರಲಿ ಎಂದು. ಅದೇಕೋ ಯಾರಿಗೆ ಗೊತ್ತು. ಷೋಡಶಿಯ ಬಳಿ ಇದ್ದ ವರದನ ಫೋಟೋ ಚಿತ್ರ ಅವನ ಕಿರಿತನದಲ್ಲಿ ತೆಗೆಸಿದ್ದು. ಆ ಎಳೆತನದ ಮುಖವನ್ನು ಮೀಸೆ, ದಾಡಿ, ಜಟಾ, ಬೂದಿ ಮುಂತಾದುವೆಲ್ಲ ಸೇರಿ ಮುಚ್ಚಿಬಿಟ್ಟಿದ್ದರೆ ಆಗವನು ಹೇಗೆ ಕಾಣಬಲ್ಲ ಎಂದು ಹೇಳಲಸಾಧ್ಯ. ಎಷ್ಟು ಬಾರಿ ಎಷ್ಟು ಮುಖಗಳನ್ನು ನೋಡಿ ಅನ್ನಿಸಿದೆ–ಬಹುಶಃ ಸ್ವಲ್ಪ ಸ್ವಲ್ಪ ಹೋಲಿಕೆ ಇದ್ದಹಾಗೆ ಕಾಣುತ್ತದೆ ಎಂದು. ಆಗ ಎದೆಯೊಳಗೆ ರಕ್ತ ವೇಗವಾಗಿ ಹರಿದಿದೆ. ಆಮೇಲೆ ತಿಳಿದುಬರುತ್ತದೆ–ಕೊರಳ ದನಿಯೇಕೆ ಸ್ವಲ್ಪವೂ ಹೊಂದಿಕೊಳ್ಳುವುದಿಲ್ಲ? ಮೂಗಿನ ತುದಿಯಂತೂ ಬೇರೆ ವಿಧವೇ!

ಈ ರೀತಿಯಾಗಿ ಮನೆಯಲ್ಲಿ ಒಂದು ಮೂಲೆಯಲ್ಲಿ ಕೂತಿದ್ದರೂ ನಿತ್ಯ ಹೀಗೆ ಹೋಗಿಬರುವ ಹೊಸ ಹೊಸ ಸಂನ್ಯಾಸಿಗಳನ್ನು ನೊಡುವುದರ ಮೂಲಕ ಷೋಡಶಿಯು ವಿಶ್ವ ಜಗತ್ತನ್ನೇ ಸಂಧಾನ ಮಾಡುವುದನ್ನ ಕಲಿತಿದ್ದಾಳೆ. ಈ ಸಂಧಾನವೇ ಅವಳ ಸುಖ, ನೆಮ್ಮದಿ. ಈ ಸಂಧಾನವೇ ಅವಳ ಸ್ವಾಮಿ, ಅವಳ ಬಾಳುವೆಯ ಯೌವನದ ಪರಿಪೂರ್ಣತೆ. ಈ ಸಂಧಾನವನ್ನ ಸುತ್ತುವರಿದೇ ಅವಳ ಸಂಸಾರದ ವಹಿವಾಟೆಲ್ಲ. ಬೆಳಗ್ಗೆ ಎದ್ದು ಇದರ ಸಲುವಾಗೇ ಅವಳ ಸೇವೆಯ ಕೆಲಸವೆಲ್ಲ ಆರಂಭವಾಗುವುದು. ಇದಕ್ಕೆ ಮೊದಲು ಮನೆಗೆಲಸವನ್ನು ಅವಳೆಂದೂ ಮಾಡಿಲ್ಲ. ಈಗ ಈ ಕೆಲಸವೇ ಅವಳ ವಿಲಾಸ. ಎಲ್ಲಾ ಸಮಯವೂ ಅವಳ ಮನದೊಳಗೆ ಆಸೆಯ ಕಿಡಿ ಉರಿಯುತ್ತಲೇ ಇರುತ್ತದೆ. ರಾತ್ರಿ ಮಲಗಲು ಹೋಗುವಾಗ ಕೂಡ "ಬಹುಶಃ ನಾಳೆ ನಾನು ಯಾರಿಗಾಗಿ ಕಾಯುತ್ತಿದ್ದೇನೋ ಆ ಅತಿಥಿ ಬಂದರೂ

ಬರಬಹುದು" ಎಂದುಕೊಂಡೇ ಆ ದಿನದ ಯೋಚನೆಗಳನ್ನು ಮುಕ್ತಾಯ ಮಾಡುವುದು. ಸಂಧಾನ ಹೀಗೆ ನಡೆಯುತ್ತಿರುವಾಗಲೇ, ಅದರ ಜೊತೆಯಲ್ಲೇ ಅವಳು ಮನದಲ್ಲಿ, ಬ್ರಹ್ಮನು ಆದಿಯಲ್ಲಿ ಹೇಗೆ ತಿಲೋತ್ತಮೆಯನ್ನು ಸೃಷ್ಟಿಸಿದನೋ ಹಾಗೆ ಆ ಸಂನ್ಯಾಸಿಗಳ ಬೇರೆ ಬೇರೆ ಉತ್ತಮ ಲಕ್ಷಣಗಳನ್ನೆಲ್ಲ ಸೇರಿಸಿ ತನ್ನ ಗಂಡ ವರದನ ಮೂರ್ತಿಯನ್ನು ಉಜ್ವಲವಾಗಿ ಸೃಷ್ಟಿಸುವಳು. ಅದರ ಇರುವಿಕೆಯೇ ಪವಿತ್ರ, ಅದರ ಮೈ ತೇಜಸ್ಸಿನಿಂದ ತುಂಬಿದೆ, ಅದರ ಜ್ಞಾನವೋ ಗಾಢವಾದುದು, ಅದರ ಸಾಧನೆ ಕಠೋರ. ಇಂತಹ ಸಂನ್ಯಾಸಿಯನ್ನು ನಿಕೃಷ್ಟ ಮಾಡುವುದಾರಿಗೆ ಸಾಧ್ಯ? ಸಂನ್ಯಾಸಿಗಳೆಲ್ಲರ ನಡುವೆಯೂ ಈ ಒಬ್ಬ ಸಂನ್ಯಾಸಿಗೇ ನಡೆಯುತ್ತಿರುವುದು ಪೂಜೆ, ಸತ್ಕಾರಗಳು.

ಸ್ವಯಂ ಅವಳ ಮಾವನೇ ಈ ಪೂಜೆಯ ಮುಖ್ಯ ಅರ್ಚಕ. ಷೋಡಶಿಯ ಮುಂದೆ ಇದನ್ನು ಬಿಟ್ಟರೆ ಬೇರೆ ಯಾವ ಗೌರವವೂಇಲ್ಲ.

ಆದರೆ ಸಂನ್ಯಾಸಿಗಳು ಪ್ರತಿದಿನ ಬರುವುದಿಲ್ಲ. ಹಾಗೆ ಯಾರೂ ಬರದೆ ಇರುವ ಖಾಲಿ ದಿನಗಳನ್ನ ಕಳೆಯುವುದು ಕಷ್ಟ. ಕ್ರಮೇಣ ಅದಕ್ಕೂ ಪರಿಹಾರ ತೋರಿಬಂತು. ಷೋಡಶಿಯೇ ತನ್ನ ಕೋಣೆಯಲ್ಲಿ ಕೂತು ಸಂನ್ಯಾಸತ್ವದ ಸಾಧನೆ ಮೊದಲು ಮಾಡಿದಳು. ಅವಳು ನೆಲದ ಮೇಲೆ ಚಾಪೆ ಹಾಸಿ ಮಲಗುವಳು. ಒಪ್ಪೊತ್ತೇ ಊಟ–ಅದರಲ್ಲೂ ಫಲ, ಮೂಲಗಳೇ ಹೆಚ್ಚು. ಮೈಮೇಲೆ ಲಕ್ಷಣ ದೊಡ್ಡದಾಗಿ ತೋರುವುದಕ್ಕೆಂದು ಆ ಸೀರೆ ಅಗಲವಾದ ಕೆಂಪಂಚು ಉಳ್ಳದ್ದು, ಮತ್ತು ಬೈತಲೆಯಲ್ಲಿ ದೊಡ್ಡದಾಗಿ ಸಿಂಧೂರದ ರೇಖೆ. ಇದರ ಮೇಲೆ ಮಾವನಿಗೆ ಹೇಳಿ ಸಂಸ್ಕೃತ ಕಲಿಯಲು ತೊಡಗಿದಳು. ಮುಗ್ಧಬೋಧವನ್ನು ಬಾಯಿಪಾಠ ಮಾಡಿ ಮುಗಿಸಲು ಹೆಚ್ಚು ದಿನವಾಗಲಿಲ್ಲ ಅವಳಿಗೆ. ಗಂಡನಿಗೆ ಸಂಸ್ಕೃತ ಹೇಳಿಕೊಟ್ಟ ಪಂಡಿತರೇ ಅವಳಿಗೂ ಗುರುಗಳು; ಅವರು ಅಚ್ಚರಿಯಿಂದ "ಇದನ್ನೇ ಪೂರ್ವಜನ್ಮದಲ್ಲಿ ಪಡೆದ ಸಂಸ್ಕೃತಿ ಎನ್ನುವುದು" ಎಂದರು.

ಪವಿತ್ರತೆಯಲ್ಲಿ ಅವಳೆಷ್ಟು ಮುಂದುವರಿಯುವಳೋ ಆ ಕಲ್ಪಿತ ಸಂನ್ಯಾಸಿಯೊಂದಿಗೆ ಮನದಾಂತರ್ಯದೊಳಗೆ ಮಿಲನವಾಗುವುದು ಅಷ್ಟಕ್ಕಷ್ಟು ಪೂರ್ಣವಾಗಲು ಸಹಾಯವಾಗುವುದು. ಹೀಗೆಂದೇ ಅವಳು ಅದನ್ನ ನಿರ್ಧರಿಸಿ ಸಾಧನೆ ಮಾಡುತ್ತಿದ್ದುದು. ಹೊರಗಿನ ಜನರೆಲ್ಲ ಇದನ್ನ ನೋಡಿ ಬೆರಗಾಗಿ "ಧನ್ಯ, ಧನ್ಯ"ರೆನ್ನಲು ತೊಡಗಿದರು. ಈ ಸಂನ್ಯಾಸಿಯಾದ ಸಾಧು ಸಾಧ್ವಿಯ ಪಾದಧೂಳಿ ಮತ್ತು ಆಶೀರ್ವಾದಗಳನ್ನು ಪಡೆಯಲು ಜನ ಹಿಂಡು ಹಿಂಡಾಗಿ ಬರತೊಡಗಿದರು. ಅಷ್ಟೇಕೆ, ವಯೋವೃದ್ಧಳಾದ ಅತ್ತೆಯಾದಂಥವಳೇ ಅವಳ ಮುಂದೆ ಭಯ, ಭಕ್ತಿಗಳಿಂದ ನಮ್ರಳಾಗಿ ನಿಲ್ಲುತ್ತಿದ್ದಳು.

ಆದರೆ ಷೋಡಶಿ ತನ್ನ ನಿಜವಾದ ಮನವನ್ನು ಅರಿತವಳಾಗಿದ್ದಳು. ಅವಳಿಗೆ ಗೊತ್ತು, ತನ್ನ ಮನಸ್ಸಿನ ಬಣ್ಣ ತಾನುಟ್ಟಿರುವ ಸೀರೆಯ ಬಣ್ಣದಂತೆ ಪೂರ್ತಿಯಾಗಿ ಕಾವಿ ಬಣ್ಣಕ್ಕೆ ತಿರುಗಲು ಸಾಧ್ಯವಾಗಿಲ್ಲ. ಇಂದು ಮುಂಜಾನೆ ಹಾಸಿಗೆಯಿಂದೇಳುವುದಕ್ಕೆ ಮೊದಲು ಹೊರಗಡೆ ಚಳಿಗಾಳಿ ಝಿರ್ ಝಿರ್ ಎಂದು ಬೀಸುತ್ತಿರಲು ಅದು ಅವಳ ಮೈ, ಮನಗಳ ಮೇಲೆಲ್ಲ ಯಾರದೋ ಒಬ್ಬರು ಕಿವಿಯಲ್ಲಿ ಹೇಳಿದ ಪಿಸುಮಾತೆಂಬುವಂತೆ ತೋರಿತು. ಏಳುವುದಕ್ಕೇ ಮನಸ್ಸಾಗುತ್ತಿರಲಿಲ್ಲ. ಬಲವಂತವಾಗಿ ಎದ್ದು ಕೆಲಸ ಮಾಡಲು ಹೋದಳು. ಕಿಟಕಿಯ ಬಳಿ ಕೂತು ತನ್ನ ಮನದ ದೂರ ದಿಗಂತದಿಂದ ಬರುತ್ತಿರುವ ವೇಣುಗಾನವನ್ನು ಸುಮ್ಮನೆ ಕೇಳುತ್ತಿರೋಣವೆನ್ನಿಸಿತು. ಒಂದೊಂದು ದಿನ ಅವಳ ಮೈ, ಮನಗಳೆರಡು ಅತಿ ಚೇತನವಾಗಿಬಿಡುವುದು– ಬಿಸಿಲಲ್ಲಿ ತೆಂಗಿನ ಗಿಡದ ಗರಿಗಳು ಝಿಲ್ ಝಿಲ್ ಎಂದು ಗಾಳಿಯಲ್ಲಿ ಶಬ್ದ ಮಾಡುತ್ತಿರಲು ಅವು ಅವಳ ಹೃದಯ ಮಧ್ಯೆಯಲ್ಲಿ ಮಾತಾಡುತ್ತಿರುವಂತಿರುವುದು. ಪಂಡಿತರು ಗೀತಾಪಾಠವನ್ನು ವ್ಯಾಖ್ಯಾನ ಮಾಡಿ ಹೇಳುತ್ತಿರುವುದು ಕಿವಿಯ ಮೇಲೆ ಬೀಳುವುದೇ ಇಲ್ಲ. ಆದರೂ ಅವಳ ಕಿಟಕಿಯ ಹೊರಗಡೆಯ ತೋಟದಲ್ಲಿ ನೆಲದಮೇಲೆ ಬಿದ್ದಿರುವ ಒಣಗಿದೆಲೆಗಳ ಮೇಲೆ ಅಳಿಲು ಖಸ್, ಖಸ್ ಎಂದು ಶಬ್ದಮಾಡುತ್ತ ಓಡಾಡಲು, ಬಹುದೂರದ ಆಕಾಶದ ಬಸಿರನ್ನು ಭೇದಿಸಿಕೊಂಡು ಬರುವ ಮೈನಾಹಕ್ಕಿಯ ಕೂಗು ಬಂದು ಕಿವಿಗೆ ಬೀಳುವಾಗ, ಗಳಿಗೆ ಗಳಿಗೆಗೂ ದೂರದ ಕೊಳದಂಚಿನ ರಸ್ತೆಯಲ್ಲಿ ಎತ್ತಿನ ಗಾಡಿಯು ನಿಧಾನವಾಗಿ ಹೋಗುತ್ತಿರುವಾಗ ಆಗುವ ಕ್ಲಾಂತವಾದೊಂದು ಶಬ್ದ ಗಾಳಿಯಲ್ಲೆಲ್ಲ ವ್ಯಾಪಿಸಲು, ಇವೆಲ್ಲವೂ ಅವಳ ಮನವನ್ನು ತಾಕಿ ಅಕಾರಣವಾಗಿ ವ್ಯಾಕುಲವಾಗುವಂತೆ ಮಾಡುವುವು. ಇದೆಲ್ಲವನ್ನೂ ವೈರಾಗ್ಯದ ಲಕ್ಷಣವೆಂದು ಹೇಗೆ ಹೇಳುವುದು? ವಿಸ್ತಾರವಾದ ವಿಶ್ವವೆಲ್ಲ ಅವಳ ತಪ್ತಪ್ರಾಣದ ಜಗತ್ತು. ಪಿತಾಮಹ ಬ್ರಹ್ಮನು ತನ್ನ ರಕ್ತದ ಉತ್ತಾಪದ ಮೂಲಕ ತನ್ನ ಆದಿಕಾಲದ ಯಾವ ಆವಿಯಿಂದ ಆಕಾಶವನ್ನೆಲ್ಲ ಮುಚ್ಚಿದ್ದನೋ, ಯಾವುದೆಲ್ಲ ಚತುರ್ಮುಖನ ವೇದ ವೇದಾಂತಗಳ ಉಚ್ಚಾರಣಕ್ಕೂ ಅನೇಕ ಪೂರ್ವದಲ್ಲಿ ಸೃಷ್ಟಿಯಾಗಿತ್ತೋ, ಯಾವ ವರ್ಣದ ಸಂಗಡ, ಧ್ವನಿಯ ಸಂಗಡ, ಗಂಧದ ಸಂಗಡ ಸಮಸ್ತಜೀವಿಗಳ ನರನಾಡಿಗಳೆಲ್ಲ ಸೇರಿಕೊಂಡು ಹೋಗಿದೆಯೋ, ಮಹಲಿನಲ್ಲಿ ಹೋಗಿಬರುವುದಕ್ಕೆ ಯಾವ ಗೋಪ್ಯವಾದ ದಾರಿಗಳನ್ನೆಲ್ಲ ಚೆನ್ನಾಗಿ ಅರಿತುಕೊಂಡಿವೆಯೋ, ಆ ದಾರಿಗಳನ್ನು ಅವಳು ಈ ಬಗೆಯಾಗಿ ಮಾಡಿದರೂ ಮುಚ್ಚಲಾಗುತ್ತದೆಯೇ? ಅದು ಸಾಧ್ಯವೇ ಇಲ್ಲ.

ಈ ಕಾರಣದಿಂದ ಅವಳು ಕಾವಿಯ ಬಣ್ಣವನ್ನು ಇನ್ನೂ ಒತ್ತಾಗಿ ಉಪಯೋಗಿಸಬೇಕಾಗುತ್ತದೆ. ಷೋಡಶಿಯು ಪಂಡಿತರನ್ನು ಹಿಡಿದು ಒತ್ತಾಯ

ಮಾಡತೊಡಗಿದಳು. "ನನಗೆ ಯೋಗಸಾಧನೆಯ ಪ್ರಣಾಲಿಯ ಅದೆಷ್ಟು ಕಠೋರ ಸಾಧನೆಗಳನ್ನು ಹೇಳಿಕೊಡೋಣವಾಗಬೇಕು, ಗುರುಗಳೆ" ಎಂದಳು.

ಪಂಡಿತರು "ಅಮ್ಮಾ, ನಿನಗಂತೂ ಇವೆಲ್ಲ ಪಂಥಗಳಿಂದ ಯಾವ ಪ್ರಯೋಜನವೂ ಇಲ್ಲ. ಸಿದ್ಧಿಯಂತೂ ಅತಿ ಉಚ್ಚ ಶ್ರೇಣಿಯದಾಗಿ ತಾನಾಗಿ ತಾನೇ ನಿನಗೆ ಲಭಿಸಿಬಿಟ್ಟಿದೆ" ಎಂದರು.

ಅವಳ ಪುಣ್ಯ ಪ್ರಭಾವವನ್ನು ಕಂಡು ನಾಲ್ಕೂ ಕಡೆ ಜನಗಳು ಬೆರಗಾಗಿ ನೋಡುತ್ತಿರುವರು. ಇದರಿಂದ ಷೋಡಶಿಯ ಮನದಲ್ಲಿ ಒಂದು ಸ್ತುತಿಗಾನದ ಅಮಲು ವ್ಯಾಪಿಸಿಬಿಟ್ಟಿತ್ತು. ಒಂದು ಕಾಲವಿತ್ತು. ಮನೆಯ ನೌಕರರು, ಪರಿಚಾರಿಕೆಯರೆಲ್ಲರೂ ಷೋಡಶಿಯನ್ನು ಕೃಪಾಪಾತ್ರಳೆಂಬ ದೃಷ್ಟಿಯಿಂದ ನೋಡುತ್ತಿದ್ದರು, ಅದೇ ಜನ ಅವಳನ್ನು ಪುಣ್ಯವತಿ ಎಂದು ತಿಳಿದು ಧನ್ಯ, ಧನ್ಯ ಎನ್ನುತ್ತಿರುವಾಗ ಅವಳಿಗೆ ಬಹಳ ದಿನದಿಂದ ಇದ್ದ ಆತ್ಮಗೌರವದ ತೃಷ್ಣೆಯಿಂದ ತೃಪ್ತಿಯಾಗುವ ಸುಯೋಗವೊದಗಿತು. ಹೀಗಿರಲು ಪಂಡಿತರು ನಿನಗೆ ಸಿದ್ಧಿ ಲಭಿಸಿದೆ ಎಂದು ಹೇಳಿದರೆ ಅವಳು ಸುಲಭವಾಗಿ ಇಲ್ಲ, ಪಂಡಿತರೆ, ನನಗೆ ಇನ್ನೂ ಸಿದ್ಧಿ ಲಭಿಸಿಲ್ಲ ಎಂದು ಹೇಳಲು ಹಿಂಜರಿದಳು. ಮಾತಾಡದೆ ಸುಮ್ಮನಿದ್ದುಬಿಟ್ಟಳು.

ಆಮೇಲೆ ಮಾವನ ಬಳಿ ಬಂದು ಷೋಡಶಿಯು "ಅಪ್ಪಾ, ನಾನು ಯಾರ ಬಳಿಯಲ್ಲಿ ಪ್ರಾಣಾಯಾಮ ಅಭ್ಯಾಸವನ್ನು ಕಲಿಯಲಿ, ಹೇಳಿ" ಎಂದಳು.

ಮಾಖನನು "ಅಮ್ಮಾ, ಅದನ್ನು ನೀನು ಕಲಿಯದೆ ಹೋದರೂ ಅಂಥ ನಷ್ಟವೇನು ಇಲ್ಲ. ನೀನು ಎಷ್ಟು ಮೇಲಕ್ಕೆ ಹೋಗಿದ್ದೀಯೋ ಆ ಸ್ಥಾನವನ್ನು ಎಟುಕಿಸಿಕೊಳ್ಳುವುದಕ್ಕೆ ಎಷ್ಟು ಜನರ ಕೈಯಲ್ಲಿ ಸಾಧ್ಯ? ಹೇಳು ಮತ್ತೆ" ಎಂದ.

ಏನಾದರಾಗಲಿ, ಪ್ರಾಣಾಯಾಮದ ಅಭ್ಯಾಸವನ್ನಂತೂ ಕಲಿಯಲೇಬೇಕು. ದುರ್ದೈವಕ್ಕೆ ಸರಿಯಾಗಿ ತಕ್ಕ ಮನುಷ್ಯನೂ ದೊರಕಿದ. ಮಾಖನನು ನಂಬಿಕೊಂಡಿದ್ದಂತೆ, ಈಗಿನ ಕಾಲದಲ್ಲಿನ ಬಂಗಾಳಿಗಳೆಲ್ಲ ತನ್ನಂತೆ ಹದಿನಾರಾಣೆ ಲೌಕಿಕರೇ–ಊಟ, ಉಡಿಗೆ, ನಿದ್ದೆ, ಹಣದ ವಹಿವಾಟು, ಮತ್ತು ಪರನಿಂದನೆ–ಇವುಗಳನ್ನು ಬಿಟ್ಟರೆ ಹವ್ಯಾಸವೇ ಇರುವುದಿಲ್ಲ ಅವರುಗಳಿಗೆ. ಲೌಕಿಕ ವ್ಯಾಪಾರಗಳಾಚೆಗಿರುವ ಪ್ರಪಂಚವೇ ಅವರಿಗೆ ಹೊರಗು ಎಂದು. ಆದರೆ ಅಗತ್ಯ ಬಿದ್ದು ಹುಡುಕಲು ಹೊರಟಾಗ ನೊಡಿದರೆ, ವಂಗದೇಶದಲ್ಲಿ ಅಂಥವರಲ್ಲದ ಜನರೂ ಇದಾರೆ ಎಂದು ತಿಳಿದುಬಂತು. ಖುಲನಾ ಜಿಲ್ಲೆಯ ಭೈರವನದಿಯ ತೀರದಲ್ಲಿ ನೈಜವಾದ ನೈಮಿಷಾರಣ್ಯವನ್ನೇ ಕಂಡುಹಿಡಿದ, ಮಾಖನ. ಈ ಆವಿಷ್ಕಾರವು ಸತ್ಯವಾದುದೆಂಬುದಕ್ಕೆ ಪ್ರಮಾಣವೇನೆಂದರೆ–ಇಲ್ಲಿನ ವ್ಯವಸ್ಥಾಪಕರು ಒಂದು ದಿನ ಮುಂಜಾನೆ ಕೃಷ್ಣ ದ್ವೈಪಾಯನರನ್ನು ಸ್ವಪ್ನದಲ್ಲಿ ಕಂಡಿದ್ದರಂತೆ. ಸ್ವಯಂ ಸರಸ್ವತಿಯೇ ಇದರ ಮಹಿಮೆಯನ್ನು ಬಯಲು ಮಾಡಿದ್ದಳಂತೆ. ಆಕೆ ಸ್ವಯಂ ನಿಜವೇಷದಲ್ಲಿ

ಬಂದು ಆವಿರ್ಭೂತಳಾಗಿದ್ದರೆ ಸಂದೇಹಕ್ಕೆ ಕಾರಣವಾಗುತ್ತಿತ್ತೇನೋ. ಆದರೆ ಆಕೆ ತನ್ನ ಆಶ್ಚರ್ಯ ದೇವೀಲೀಲೆಯಲ್ಲಿ ಚಕ್ರವಾಕ ಪಕ್ಷಿಯ ರೂಪದಲ್ಲಿ ಕಾಣಿಸಿಕೊಂಡಳು. ಪಕ್ಷಿಯ ರೆಕ್ಕೆಯಲ್ಲಿ ಮೂರೇಮೂರು ಪುಕ್ಕಗಳಿದ್ದುವು-ಒಂದು ಬಿಳಿಯದು, ಒಂದು ಎಲೆ ಹಸಿರು, ಮಧ್ಯೆ ಇದ್ದುದು ಕಂದು ಬಣ್ಣದ್ದು-ಈ ಮೂರು ಪುಕ್ಕಗಳು ಕೂಡ ಬೇರೇನೂ ಅಲ್ಲ-ಅವು ಸತ್ತ್ವ, ರಜ, ತಮೋ ಗುಣಗಳ ಸಂಕೇತ. ಅಲ್ಲದೆ, ಋಕ್, ಯಜು, ಸಾಮವೇದಗಳ ಪ್ರತೀಕ; ಅಥವಾ ಸೃಷ್ಟಿ, ಸ್ಥಿತಿ, ಲಯ,-ಮತ್ತು ನಿನ್ನೆ, ಇವತ್ತು, ನಾಳೆ-ಹೀಗೆ ಮೂರು ಸಂಖ್ಯೆಗಳ ಸಂಕೇತವಾಗಿ ಇದ್ದುದರಿಂದ ಈ ಜಗತ್ತೇ ಅದರ ನಿದರ್ಶನವೆಂಬುದರಲ್ಲಿ ಸಂದೇಹವೇ ಇಲ್ಲ-ಅಂದಿನಿಂದಲೇ ಈ ನೈಮಿಷಾರಣ್ಯದಲ್ಲಿ ಯೋಗಿಗಳು ತಯಾರಾಗುತ್ತಿದ್ದಾರೆ. ಇಬ್ಬರು ಎಮ್.ಎಸ್‌ಸಿ. ಕ್ಲಾಸಿನಲ್ಲಿ ಓದುವ ಹುಡುಗರು ಕಾಲೇಜನ್ನು ತೊರೆದು ಇಲ್ಲಿಗೆ ಬಂದು ಯೋಗಾಭ್ಯಾಸ ಕಲಿಯುತ್ತಿರುವರು. ಒಬ್ಬ ನಿವೃತ್ತ ಸಬ್‌ಜಜ್ ತನ್ನ ಇಡೀ ಪೆನ್ಶನ್ ಹಣವನ್ನು ಈ ನೈಮಿಷಾರಣ್ಯ ಫಂಡಿಗೆ ಬರೆದುಕೊಟ್ಟುಬಿಟ್ಟಿದ್ದಾನೆ. ಮತ್ತು ತನ್ನ ತಂದೆ ತಾಯಿಲ್ಲದ ಸೋದರಳಿಯನೊಬ್ಬನನ್ನು ಇಲ್ಲಿನ ಯೋಗಿ ಬ್ರಹ್ಮಚಾರಿಗಳ ಸೇವೆಯಲ್ಲಿ ನಿಯುಕ್ತಗೊಳಿಸಿಬಿಟ್ಟು ಮನಸ್ಸಿನಲ್ಲಿ ಆಶ್ಚರ್ಯಕರವಾದ ಶಾಂತಿ ಲಾಭ ಪಡೆದಿದ್ದಾನೆ.

ಈ ನೈಮಿಷಾರಣ್ಯದಿಂದ ಷೋಡಶಿಯ ಸಲುವಾಗಿ ಯೋಗಾಭ್ಯಾಸದ ಶಿಕ್ಷಕನೊಬ್ಬ ದೊರೆತ. ಅದಕ್ಕೆ ಪ್ರತಿಯಾಗಿ ಮಾಖನನು ನೈಮಿಷಾರಣ್ಯ ಕಮಿಟಿಗೆ (ಗೃಹ ಸದಸ್ಯ) Home Secretary ಆಗಬೇಕಾಗಿ ಬಂತು. ಈ ಹುದ್ದೆಯ ಮುಖ್ಯ ಜವಾಬುದಾರಿ, ಬರುವ ಆದಾಯದಲ್ಲಿ ಎಂಟನೇ ಒಂದು ಭಾಗವನ್ನು ಸಂನ್ಯಾಸಿ ಸದಸ್ಯರ ಉದರ ಪೋಷಣೆಯ ಸಲುವಾಗಿ ಕೊಡತಕ್ಕದ್ದು. ಗೃಹೀ ಸದಸ್ಯರ ಶ್ರದ್ಧೆಯ ಪರಿಮಾಣಾನುಸಾರವಾಗಿ ಈ ಎಂಟನೇ ಒಂದರ ಅಂಶವು ಎಷ್ಟೋ ಸಮಯ ಥರ್ಮಾಮೀಟರಿನ ಪಾದರಸದಂತೆ ನಿಜವಾದ ಅಂಕಿಯ ಮೇಲೆ, ಕೆಳಗೆ ಏರುವುದು ಅಥವಾ ಇಳಿಯುವುದು. ಅಂಕಿಯನ್ನು ಲೆಕ್ಕಾಚಾರ ಮಾಡುವಾಗ ಮಾಖನನಿಗೂ ಒಮ್ಮೊಮ್ಮೆ ತಪ್ಪಾಗಲಾರಂಭಿಸಿತು. ಆ ತಪ್ಪು ಅಂಕಿಯ ತಳಭಾಗದ ಕಡೆಗೇ ಹೆಚ್ಚು. ಆದರೆ ನೈಮಿಷಾರಣ್ಯಕ್ಕೆ ಇದರಿಂದ ಆದ ನಷ್ಟಕ್ಕೆ ಷೋಡಶಿಯು ಸಾಕಾದಷ್ಟು ಪರಿಹಾರ ಮಾಡಿದ್ದಳು. ಅವಳ ಒಡವೆಗಳಲ್ಲಿ ಹೆಚ್ಚು ಭಾಗವೆಲ್ಲ ಇಷ್ಟರೊಳಗೆ ವಿಕ್ರಯವಾಗಿ ಹೋಗಿದ್ದುವು. ಬಾಕಿಯಿರುವುದು ಅಂತಹ ಬೆಲೆಬಾಳುವುದೇನಲ್ಲ. ಅದು ಸಾಲದೆ ಅವಳ ಮಾಸಾಶನವೆಂದು ಮಾವ ಕೊಡುತ್ತಿದ್ದ ಹಣ ಕೂಡ ಆ ಒಡವೆಗಳ ಮಾರ್ಗವನ್ನನುಸರಿಸಿತು.

ಆ ಮನೆಯ ಡಾಕ್ಟರು ಬಂದು ಮಾಖನನನ್ನು ಕಂಡು "ಏನಣ್ಣಾ ಇದು, ವಿಪರೀತವಾಗುತ್ತ ಇದೆ. ಸೊಸೆ ಸಾವಿನ ದಾರಿ ಹಿಡಿದಿದಾಳೆ-ನೋಡುತ್ತಾ ಇದ್ದೀರಲ್ಲ ಮತ್ತೆ?" ಎಂದ.

ಮಾಖನನು ಉದ್ವಿಗ್ನತೆಯಿಂದ "ಹಾಗೇನು? ಏನು ಮಾಡು ಅಂತೀರಿ?" ಎಂದ, ಕೈಕೈ ಹಿಸುಕಿಕೊಳ್ಳುತ್ತ.

ಷೋಡಶಿಯ ಮುಂದೆ ಹೋಗಿ ಏನಾದರೂ ಮಾತಾಡಲು ಅವನಿಗೀಗ ಧೈರ್ಯವೇ ಸಾಲದು.

ಒಮ್ಮೆ ಹೇಗೋ ಸಾಹಸ ಮಾಡಿಕೊಂಡು ಅವಳ ಬಳಿ ಬಂದು ಅತ್ಯಂತ ಮೃದುವಾದ ದನಿಯಲ್ಲಿ "ಅಮ್ಮಾ, ಇಷ್ಟು ಅನಿಯಮ ಮಾಡುತ್ತಿದ್ದೀಯಲ್ಲ? ಮೈ ಉಳಿಯುತ್ತೇನಮ್ಮಾ?" ಎಂದ. ಷೋಡಶಿ ಸ್ವಲ್ಪ ನಕ್ಕಳು. ಅದರ ಮರ್ಮಾರ್ಥವಿದು–ಇಂಥ ವ್ಯರ್ಥ ಉದ್ವಿಗ್ನತೆಯೆಲ್ಲ ಸಂಸಾರದ ವಿಷಯ ಸುಖಗಳಲ್ಲಿ ಮುಳುಗಿರುವವರಿಗೆ ಸಹಜವೇ–ಎಂಬುದಾಗಿ.

೩

ವರದನು ಹೊರಟುಹೋದಾಗಿನಿಂದ ಹನ್ನೆರಡು ವರ್ಷಗಳು ಕಳೆದು ಹೋಗಿವೆ. ಈಗ ಷೋಡಶಿಯ ವಯಸ್ಸು ಇಪ್ಪತ್ತೈದು. ಒಂದು ದಿನ ಅವಳು ತನ್ನ ಯೋಗಾಭ್ಯಾಸದ ಗುರುವನ್ನು ಕುರಿತು "ಗುರುಗಳೇ, ನನ್ನ ಪತಿದೇವನು ಇಂದು ಜೀವಂತನಾಗಿರುವನೋ ಇಲ್ಲವೋ ಎಂಬುದನ್ನ ನಾನು ತಿಳಿಯುವುದು ಹೇಗೆ?" ಎಂದು ಕೇಳಿದಳು.

ಗುರುವು ಸುಮಾರು ಹತ್ತು ನಿಮಿಷ ಕಾಲ ಕಣ್ಣುಮುಚ್ಚಿಕೊಂಡು ಸ್ತಬ್ಧನಾಗಿ ಕೂತು ಆಮೇಲೆ ಕಣ್ಣು ತೆರೆದು "ಜೀವಂತನಾಗಿದ್ದಾನೆ" ಎಂದರು.

"ನಿಮಗೆ ಹೇಗೆ ಗೊತ್ತಾಯಿತು?"

"ಅದು ಈಗ ನಿನಗೆ ಗೊತ್ತಾಗುವುದಿಲ್ಲ. ಆದರೆ ಇದು ಖಂಡಿತ, ತಿಳಿದು ಕೊಂಡುಬಿಡು–ಹೆಂಗಸಾಗಿ ಕೂಡ ಈ ಪಥದಲ್ಲಿ ಎಷ್ಟು ದೂರ ಮುಂದುವರಿದಿದ್ದೀಯೋ ಅದು ಕೇವಲ ನಿನ್ನ ಪತಿದೇವನ ತಪೋಬಲದಿಂದಲೇ. ಆತ ದೂರದಲ್ಲಿದ್ದು ನಿನ್ನನ್ನು ಸಹಧರ್ಮಿಣಿಯಾಗಿ ಅಂಗೀಕರಿಸಿದ್ದಾನೆ."

ಷೋಡಶಿಯ ಮೈ, ಮನಸ್ಸೆಲ್ಲ ಪುಳಕಿತವಾಗಿಹೋಯಿತು. ತನ್ನ ಬಗ್ಗೆಯೇ ಅವಳಿಗೆನ್ನಿಸಿತು–ಪರಮಶಿವನು ಘೋರ ತಪಸ್ಸಿನಲ್ಲಿ ಮುಳುಗಿದ್ದಾನೆ. ಮತ್ತು ಪಾರ್ವತಿಯು ಪದ್ಮಬೀಜಗಳ ಮಾಲೆಯನ್ನು ಜಪಿಸುತ್ತ ಅವನಿಗಾಗಿ ನಿರೀಕ್ಷೆ ಮಾಡುತ್ತ ಕೂತಿದ್ದಾಳೆ.

ಷೋಡಶಿಯು ಮತ್ತೆ ಪ್ರಶ್ನೆಮಾಡಿದಳು. "ಆತ ಎಲ್ಲಿದ್ದಾರೆ ಎನ್ನುವುದು ಹೇಳಲಾಗುತ್ತದೆಯೆ?"

ಗುರುವು ಸ್ವಲ್ಪ ನಕ್ಕು "ಒಂದು ಕನ್ನಡಿಯನ್ನ ತೆಗೆದುಕೊಂಡು ಬಾ" ಎಂದ.

ಷೋಡಶಿಯು ಕನ್ನಡಿಯನ್ನು ತಂದು ಯೋಗಿಯ ನಿರ್ದೇಶಾನುಸಾರವಾಗಿ ತದೇಕಚಿತ್ತದಿಂದ ಅದರ ಕಡೆ ನೋಡುತ್ತಿದ್ದಳು. ಅರ್ಧ ತಾಸಾದ ಮೇಲೆ ಯೋಗಿಯು "ಏನಾದರೂ ಕಾಣಬರುತ್ತದೆಯೇ!" ಎಂದ.

ಷೋಡಶಿಯು ಸ್ವಲ್ಪ ಸಂದೇಹದ ದನಿಯಲ್ಲಿ "ಹಾ...ಏನೊ ಅಸ್ಪಷ್ಟವಾಗಿ ಕಾಣುತ್ತದೆ-ದೂರದಲ್ಲಿ. ಅದೇನು ಎಂದು ಹೇಳಲಾಗುವುದಿಲ್ಲ" ಎಂದಳು.

"ಬೆಳ್ಳಗಿರುವುದೇನಾದರೂ ಕಾಣಬರುತ್ತದೇನು?"

"ಹೂಂ...ಬೆಳ್ಳಗೇ ಇದೆ."

"ಹೇಗೆ? ಪರ್ವತ ಶಿಖರದ ಮೇಲಿರುವ ಹಿಮದಂತೆ?"

"ಹೌದು, ಖಂಡಿತ...ಹಿಮವೇ! ಇದುವರೆಗೆಂದೂ ಪರ್ವತವನ್ನೇ ನೋಡಿಲ್ಲ. ಅದಕ್ಕೇ ಮಸಕು ಮಸಕಾಗಿ ಕಾಣುತ್ತಿತ್ತು."

ಹೀಗೆ ಆಶ್ಚರ್ಯಕರವಾದ ರೀತಿಯಲ್ಲಿ ಕ್ರಮವಾಗಿ ಅವಳಿಗೆ ಕಂಡು ಬಂತು- ಅವಳ ಗಂಡ, ವರದನು, ಹಿಮಾಲಯದ ಅತಿ ದುರ್ಗಮವಾದ ಸ್ಥಳವಾದ ಲಾಂಗ್‌ಚೂ ಪರ್ವತದ ಶಿಖರದಲ್ಲಿ ಹಿಮದ ಮೇಲೆ ನಗ್ನ ದೇಹನಾಗಿ ಕೂತಿದ್ದಾನೆ. ಆ ಸ್ಥಳದಿಂದ ಆತನ ತಪಸ್ಸಿನ ತೇಜಸ್ಸು ಬಂದು ಷೋಡಶಿಯನ್ನು ಸ್ಪರ್ಶಮಾಡುತ್ತಿದೆ- ಇದೇ ಅತ್ಯಂತ ಆಶ್ಚರ್ಯವಾದ ಕಾಂಡ!

ಆ ದಿನ ಕೋಣೆಯ ನಡುವೆ ಒಬ್ಬಳೇ ಕೂತ ಷೋಡಶಿಯ ಮೈಯೆಲ್ಲ ಸುಮ್ಮನೆ ನಡುಗಲಾರಂಭವಾಯಿತು. ತನ್ನ ಪತಿದೇವನ ತಪಸ್ಸಿನ ತೇಜಸ್ಸು ಅವಳನ್ನು ಹಗಲು, ರಾತ್ರಿ ಸುತ್ತುವರಿದಿದೆ. ಗಂಡ ಸಮೀಪದಲ್ಲಿದ್ದಿದ್ದರೆ ಆಗಾಗ ಅಗಲಿಕೆಯಾಗುವ ಸಂದರ್ಭಗಳು ಬರುತ್ತಿದ್ದುವು. ಅಂತಹ ಅಗಲಿಕೆಯೇ ಇಲ್ಲ ಈಗ-ಎಂಬ ಆನಂದದಿಂದ ಅವಳ ಮನಸ್ಸು, ಆತ್ಮ ಪುಳಕಿತವಾಗಿಹೋಗಿವೆ. ಆಗವಳಿಗೆನ್ನಿಸಿತು- ನನ್ನ ಸಾಧನೆಯು ಇನ್ನೂ ಹೆಚ್ಚು ಕಠೋರವಾಗಬೇಕು. ಇಷ್ಟು ದಿನ ಮತ್ತು ಪುಷ್ಯಮಾಸದಲ್ಲಿ ಮೈತುಂಬ ಕಂಬಳಿಯಿಂದ ಹೊದ್ದುಕೊಳ್ಳುತ್ತಿದ್ದಳು. ಈಗ ಆ ಕಂಬಳಿಯನ್ನೂ ತೆಗೆದೆಸೆದು ಉಟ್ಟ ಬಟ್ಟೆಯಲ್ಲೇ ಕೂತಾಗ ಚಳಿಯಿಂದ ಅವಳ ಮೈಯಲ್ಲೆಲ್ಲಾ ಮುಳ್ಳು ಚುಚ್ಚಿದಂತಾಯಿತು. ಆಗವಳಿಗೆ, ಲಾಂಗ್‌ಚೂ ಪರ್ವತದ ಹಿಮದ ಗಾಳಿ ತನ್ನ ಮೇಲೆ ಬೀಸುತ್ತಿದೆಯೆನ್ನಿಸಿತು. ಕೈಗಳನ್ನು ಜೋಡಿಸಿಕೊಂಡು ಕಣ್ಣು ಮುಚ್ಚಿ ಅವಳು ಹಾಗೇ ಕೂತಿದ್ದಳು. ಕಣ್ಣುಗಳ ಅಂಚಿನಿಂದ ಸುಮ್ಮನೆ ನೀರು ಸೋರತೊಡಗಿತು.

ಆ ದಿನವೇ ಮಧ್ಯಾಹ್ನ ಆಹಾರವಾದ ಮೇಲೆ ಅವಳ ಮಾವ ಮಾಖನನು ಷೋಡಶಿಯನ್ನು ತನ್ನ ಕೋಣೆಗೆ ಕರೆದು ಬಹಳ ಸಂಕೋಚದ ದನಿಯಲ್ಲಿ "ಅಮ್ಮಾ, ಇಷ್ಟು ದಿನ ನಿನ್ನ ಹತ್ತಿರ ಏನೂ ಹೇಳಲಿಲ್ಲ. ಹೇಳುವ ಆವಶ್ಯಕತೆ

ಇರುವುದಿಲ್ಲ ಎಂದುಕೊಂಡಿದ್ದೆ. ಆದರೆ ಇನ್ನು ನಡೆಯುವುದು ಕಷ್ಟ. ನನ್ನ ಸಂಪತ್ತಿಗಿಂತಲೂ ನನ್ನ ಸಾಲ ಬಹಳ ಮಟ್ಟಿಗೆ ಏರಿಬಿಟ್ಟಿದೆ, ಯಾವತ್ತು ನನ್ನ ಆಸ್ತಿಪಾಸ್ತಿಯೆಲ್ಲ ಹರಾಜಿಗೆ ಬರುತ್ತದೋ ಹೇಳುವುದು ಸಾಧ್ಯವಿಲ್ಲ" ಎಂದ.

ಕೇಳಿ ಷೋಡಶಿಯ ಮನಸ್ಸು ಆನಂದದಿಂದ ತುಂಬಿಹೋಯಿತು. ಮುಖ ಫಳಫಳನೆ ಹೊಳೆಯಲಾರಂಭಿಸಿತು. ಇದೆಲ್ಲ ನನ್ನ ಸ್ವಾಮಿಯ ಮಹಿಮೆಯೇ, ಸಂದೇಹವಿಲ್ಲ ಎಂದುಕೊಂಡಳು. ತನ್ನ ಸ್ವಾಮಿಯು ತನ್ನನ್ನ ಸಂಪೂರ್ಣ ಭಾವದಲ್ಲಿ ತನ್ನ ಸಹಧರ್ಮಿಣಿಯಾಗಿ ಮಾಡಿಕೊಂಡಿದ್ದಾನೆ. ವಿಷಯ ಸಂಪತ್ತಿನ ಅಡ್ಡಗೋಡೆ ಇದುವರೆಗೆ ಯಾವುದಿತ್ತೋ ಅದು ಕೂಡ ಈಗ ಒಡೆದುಬಿದ್ದಿದೆ. ಕೇವಲ ಉತ್ತರದ ಹಿಮಗಾಳಿಯೊಂದೇ ಅಲ್ಲಿ. ಈ ಬೆಳೆಯುತ್ತಿರುವ ಸಾಲ ಕೂಡ ಆ ಲಾಂಗ್‌ಚೂ ಪರ್ವತದ ಕಡೆಯಿಂದಲೇ ಫಲಿಸಿರುವುದು. ಇದು ತನ್ನ ಸ್ವಾಮಿಯದೇ ಬಲಗೈಯ ಸ್ಪರ್ಶ!

ಆಗವಳು ನಗುಮುಖದಿಂದ "ಅಪ್ಪಾ, ಹೆದರಿಕೆಯೇನು?" ಎಂದಳು.

"ನಾವು ನಿಲ್ಲುವುದೆಲ್ಲಮ್ಮ" ಎಂದ ಮಾಖನ, ಹತಾಶನಾಗಿ.

ಷೋಡಶಿಯು ಅದೇ ನಗುಮುಖದಿಂದ "ನೈಮಿಷಾರಣ್ಯದಲ್ಲಿ ನಮ್ಮ ಬಿಡಾರವಾಗುತ್ತದೆ" ಎಂದಳು.

ಆಗ ಮಾಖನನು ನಿಟ್ಟುಸಿರು ಬಿಡುತ್ತ ಇನ್ನು ಇವಳ ಸಂಗಡ ಸಂಸಾರದ ವಿಷಯ ಮಾತಾಡುವುದು ವ್ಯರ್ಥ ಎಂದುಕೊಂಡು ಹೊರಗಡೆಯ ಕೋಣೆಯಲ್ಲಿ ಹೋಗಿ ಸುಮ್ಮನೆ ತಂಬಾಕು ಸೇದುತ್ತ ಕೂತ.

ಇಂಥ ವೇಳೆಯಲ್ಲಿ ಮೋಟರ್‌ಗಾಡಿಯೊಂದು ಬಾಗಿಲೆದುರಿಗೆ ಬಂದು ನಿಂತುಕೊಂಡಿತು. ಸಾಹೇಬರಂತೆ ಪೋಷಾಕು ಹಾಕಿದ್ದ ಯುವಕನೊಬ್ಬ ಟಪ್ಪೆಂದು ಅದರಿಂದ ನೆಗೆದು ಹೊರಗೆ ಬಂದು ಮಾಖನನ ಕೋಣೆಯೊಳಗೆ ಹೊಕ್ಕು ಅರ್ಧಮರ್ಧ ನಮಸ್ಕಾರ ಮಾಡುವ ಪ್ರಯತ್ನ ಮಾಡಿ "ಗುರುತು ಸಿಗಲಿಲ್ಲವೇ?" ಎಂದ.

"ಇದೇನು? ನಮ್ಮ ವರದನಲ್ಲವೇ?"

ವರದನು ಜಹಜಿನ "ಲಸ್ಕರ್" (ಕೀಳುದರ್ಜೆಯ ನಾವಿಕ)ನಾಗಿ ಅಮೆರಿಕ ದೇಶಕ್ಕೆ ಹೋಗಿದ್ದ. ಹನ್ನೆರಡು ವರ್ಷಗಳಾದ ಮೇಲೆ ಅವನಿಂದು ಯಾವುದೋ ಒಂದು ಬಟ್ಟೆಯೊಗೆಯುವ ಯಂತ್ರದ ಕಂಪೆನಿಯ ಓಡಾಡುವ (Travelling Agent) ಏಜಂಟನಾಗಿ ತಾಯ್ನಾಡಿಗೆ ಮರಳಿ ಬಂದಿದ್ದ. ತಂದೆಯನ್ನು ಕಂಡು "ನಿಮಗೇನಾದರೂ ಬಟ್ಟೆಯೊಗೆಯುವ ಯಂತ್ರ ಬೇಕಿದ್ದರೆ ಹೇಳಿ. ಬಹಳ ಅಗ್ಗದ ದರದಲ್ಲಿ ಕೊಡಿಸುತ್ತೇನೆ" ಎಂದ. ಹೀಗೆ ಹೇಳಿ ಚಿತ್ರ ಮುದ್ರಿಸಿರುವ ಕ್ಯಾಟಲಾಗೊಂದನ್ನು ಪಾಕೆಟ್ಟಿನಿಂದ ಹೊರಗೆ ತೆಗೆದ.

೧೪. ಒಂದನೇ ನಂಬರು

ನಾನು ತಂಬಾಕನ್ನೂ ಕೂಡ ಸೇದುವವನಲ್ಲ. ಆದರೆ ಮುಗಿಲು ಮುಟ್ಟುವಂಥ ಬೇರೆ ಒಂದು ಚಟ ನನ್ನನ್ನು ಹಿಡಿದುಬಿಟ್ಟಿದೆ. ಅದರ ಜೋರಿನಿಂದ ಬೇರೆಲ್ಲ ಚಟಗಳು ಒಟ್ಟಿಗೆ ಬುಡಸಹಿತ ಒಣಗಿ ಸತ್ತಿವೆ.

ಚಟ ಏನೆಂದರೆ ಪುಸ್ತಕಗಳೋದುವುದು. ನನ್ನ ಬಾಳುವೆಯ ಬೀಜ ಮಂತ್ರವೇನೆಂದರೆ–

ಯಾವಜ್ಜೀವೇತ್ ನಾಯಿಬಾ
ಜೀವೇತ್
ಋಣಂ ಕೃತ್ವಾ ಬಹಿಂ ಪಠೇತ್

[ಯಾವಜ್ಜೀವವು ಜೀವಿಸದಿದ್ದರೂ ಸರಿ, ಸಾಲ ಮಾಡಿಯಾದರೂ ಪುಸ್ತಕ ಓದಬೇಕು.]

ಹಣದ ಅಭಾವವಿದ್ದೂ ಪ್ರಯಾಣದ ಆಸೆಯಿರುವವರು ಟೈಂಟೇಬಲನ್ನು ಓದಿ ತಮ್ಮ ಹಂಬಲವನ್ನು ತೀರಿಸಿಕೊಳ್ಳುವಂತೆ ನನ್ನ ಪ್ರಾಯದಲ್ಲಿ ಪುಸ್ತಕ ಕೊಳ್ಳಲು ದುಡ್ಡಿಲ್ಲದೆ ಬರೇ ಕ್ಯಾಟಲಾಗನ್ನೋದಿ ತೃಪ್ತಿ ಪಡೆಯುತ್ತಿದ್ದೆ; ನಮ್ಮ ಅಣ್ಣನ ಚಿಕ್ಕಮಾವನೊಬ್ಬನಿದ್ದ. ಆತ ಯಾವ ಬಂಗಾಳಿ ಪುಸ್ತಕವನ್ನಾದರೂ ಮುದ್ರಣವಾದೊಡನೆ ಕೊಂಡುಬಿಡುತ್ತಿದ್ದ ಮತ್ತು ಅದರಲ್ಲಿ ಒಂದು ಪುಸ್ತಕ ಕೂಡ ಕಳೆದುಹೋಗಿಲ್ಲ ಎಂಬುದೊಂದು ಹೆಮ್ಮೆಯ ವಿಷಯ ಆತನಿಗೆ. ಇಂತಹ ಸೌಭಾಗ್ಯ, ಬಹುಶಃ ವಂಗದೇಶದಲ್ಲಿ ಬೇರೊಬ್ಬರಿಗೆ ಲಭಿಸುತ್ತೋ ಇಲ್ಲವೋ ಹೇಳಲಸಾಧ್ಯ. ಎಕೆಂದರೆ, ಹಣವೆನ್ನಿ, ಆಯುಸ್ಸೆನ್ನಿ, ಅನ್ಯಮನಸ್ಕರಾದವರ ಛತ್ರಿಯೆನ್ನಿ, ಸಂಸಾರದಲ್ಲಿ ಅದೆಷ್ಟು ಸುಲಭವಾಗಿ ಕಳೆದುಹೋಗುವ ವಸ್ತುಗಳಿವೆಯೋ ಅವುಗಳಲ್ಲೆಲ್ಲ ಮೊದಲನೆಯದೆಂದರೆ ಬಂಗಾಳೀ ಪುಸ್ತಕ. ಅಣ್ಣನ ಚಿಕ್ಕ ಮಾವನೊಬ್ಬನಿಗೆ ತನ್ನ ಪುಸ್ತಕಗಳ ಅಲಮಾರಿನ ಬೀಗದ ಕೈಯನ್ನು ತನ್ನ ಹೆಂಡತಿಯ ಕೈಯಲ್ಲಿ ಕೂಡ ಕೊಡುವಷ್ಟು ನಂಬಿಕೆಯಿರಲಿಲ್ಲವೆಂದರೆ ಗೊತ್ತಾಗುತ್ತದೆ, ಈ ಮಾತಿನ ಸತ್ಯ. ದೀನನಾದವನು ಮಹಾರಾಜನ ಸನ್ನಿಧಿಯಲ್ಲಿ ಹೋಗುವಂತೆ ನಾನು ಚಿಕ್ಕವಯಸ್ಸಿನಲ್ಲಿ ಅಣ್ಣನ ಸಂಗಡ ಅವರ ಮಾವನ ಮನೆಗೆ ಹೋಗುವಾಗಲೆಲ್ಲ ಈ ಬಾಗಿಲು ಮುಚ್ಚಿದ ಅಲಮಾರಿಗಳನ್ನು ಸುಮ್ಮನೆ ಹೊರಗಿನಿಂದ ನೋಡುತ್ತಲೇ ಕಾಲ ಕಳೆಯುತ್ತಿದ್ದೆ. ಆಗ ನನ್ನ ದೃಷ್ಟಿಯ 'ನಾಲಗೆ'ಯಲ್ಲಿ ನೀರೂರುತ್ತಿತ್ತು. ಇಷ್ಟು ಹೇಳಿದರೆ ಯಥೇಷ್ಟವಾದೀತು. ಚಿಕ್ಕ ವಯಸ್ಸಿನಿಂದಲೂ ಅದೆಷ್ಟು ಲೆಕ್ಕವಿಲ್ಲದಂತೆ

ಪುಸ್ತಕಗಳೋದಿದ್ದೆನೋ! ಅದಕ್ಕೇ ಬಹುಶಃ ನನಗೆ ಯಾವ ಪರೀಕ್ಷೆಯಲ್ಲೂ ತೇರ್ಗಡೆಯಾಗಲು ಅಸಾಧ್ಯವಾಗಿರಬೇಕು. ತೇರ್ಗಡೆಯಾಗುವುದಕ್ಕೆ ಅದೆಷ್ಟು ಮಟ್ಟಿಗೆ ಕಡಿಮೆ ಪುಸ್ತಕಗಳನ್ನೋದುವುದು ಅಗತ್ಯವೋ ಅದಕ್ಕು ನನಗೆ ಸಮಯವಾಗುತ್ತಿರಲಿಲ್ಲ.

ನಾನು ಫೇಲಾದ ಹುಡುಗನಾದುದರಲ್ಲಿ ಒಂದು ದೊಡ್ಡ ಅನುಕೂಲವಿತ್ತು. ಏನೆಂದರೆ ವಿಶ್ವವಿದ್ಯಾಲಯದ ಹಂಡೆಯಲ್ಲಿ ತುಂಬಿದ ವಿದ್ಯೆಯಿಂದ ಅಳೆದಳೆದು ಕೊಡುವ ಅಲ್ಪವಾದ ನೀರಿನಲ್ಲಲ್ಲ ನನ್ನ ಸ್ನಾನ. ನಿರರ್ಗಳವಾಗಿ ಹರಿಯುವ ಹೊಳೆಯ ನೆರೆಯಲ್ಲಿ ಮನಬಂದಷ್ಟು ಮುಳುಗು ಹಾಕುವುದು ನನ್ನ ಅಭ್ಯಾಸವಾಗಿ ಹೋಗಿತ್ತು. ಈ ನಡುವೆ ನನ್ನ ಬಳಿಗೆ ಎಷ್ಟೋ ಬಿ.ಎ., ಎಂ.ಎ.ಗಳು ಬಂದು ಹೋಗಿದ್ದಾರೆ. ಅವರು ಎಷ್ಟೇ ಆಧುನಿಕರಾಗಲಿ, ಇವತ್ತಿನವರೆಗೂ ಅವರು ವಿಕ್ಟೋರಿಯಾ ರಾಣಿಯ ಯುಗದ ನಜರಿನಿಂದ ಬಿಗಿಯಾಗಿ ಕಟ್ಟಲ್ಪಟ್ಟಿದ್ದಾರೆ. ಅವರ ವಿದ್ಯೆಯ ಜಗತ್ತು ಟೋಲೆಮಿ (Ptolemy)ಯ ಪೃಥಿವಿಯಂತೆ ಹದಿನೆಂಟನೇ, ಹತ್ತೊಂಬತ್ತನೇ ಶತಮಾನಗಳೊಂದಿಗೆ "ಸ್ಕ್ರೂ" ತಿರುವಿ ಅಂಟಿಸಿರುವಂತೆ. ವಂಗದೇಶದ ವಿದ್ಯಾರ್ಥಿಗಳ ತಂಡ, ಪುತ್ರ ಪೌತ್ರಾದಿಗಳವರೆಗೂ ಆ ಯುಗವನ್ನೇ ಚಿರಕಾಲವೂ ಪ್ರದಕ್ಷಿಣೆ ಮಾಡುತ್ತಿರುತ್ತದೆ. ಅವರುಗಳ ಮಾನಸ ಯಾತ್ರೆಯ ರಥವು ಬಹು ಕಷ್ಟದಿಂದ ಮಿಲ್, ಬೆಂಥಾಮ್ (Mill and Bentham)ರನ್ನು ದಾಟಿ ಕಾರ್ಲೈಲ್, ರಸ್ಕಿನ್ (Carlyle and Ruskin)ರವರೆಗೆ ಹೇಗೋ ಉಸಿರುಸಿರು ಬಿಡುತ್ತ ತಲಪಿದರೆ ದೊಡ್ಡ ಸಾಧನೆ ಮಾಡಿದಂತೆ. ಅವರ ಪ್ರೊಫೆಸರುಗಳ ಬಾಯಿಂದ ಬಂದ ವೇದ ವಾಕ್ಕುಗಳ ಬೇಲಿಯಾಚೆಗೆ ಹೋಗುವ ಸಾಹಸವನ್ನು ಅವರಾರೂ ಕೈಗೊಳ್ಳುವುದಿಲ್ಲ.

ಆದರೆ ನಾವು ಯಾವ ದೇಶದ ಸಾಹಿತ್ಯವನ್ನು ದನ ಕಟ್ಟುವ ಗೊಟ್ಟದಂತೆ ಮಾಡಿ ಅದಕ್ಕೆ ನಮ್ಮ ಮನಸ್ಸನ್ನು ಕಟ್ಟಿಹಾಕಿ ಮೆಲುಕು ಹಾಕುತ್ತಿದ್ದೇವೋ ಆ ದೇಶದ ಸಾಹಿತ್ಯವು ಸ್ಥಾಣುವಲ್ಲ. ಅದು ಅಲ್ಲಿಯ 'ಆತ್ಮ'ದ ಜೊತೆಯಲ್ಲೇ ಮುಂದು ಮುಂದಕ್ಕೆ ಹೋಗುತ್ತಿರುತ್ತದೆ. ನನ್ನ ಆತ್ಮವು ಅಂಥದಿಲ್ಲದಿರಬಹುದು–

ಆದರೆ ಅಂತಹ ಪ್ರಗತಿಯನ್ನು ನಾನು ಅನುಸರಣ ಮಾಡಲು ಪ್ರಯತ್ನಿಸಿದ್ದೇನೆ. ಸ್ವಂತ ಯತ್ನದಿಂದ ಪರ್ಶಿಯನ್, ಜರ್ಮನ್ ಮತ್ತು ಇಟಾಲಿಯನ್ ಭಾಷೆಗಳನ್ನು ಕಲಿತುಬಿಟ್ಟಿದ್ದೇನೆ. ರಶಿಯನ್ ಭಾಷೆ ಕಲಿಯಲು ಆರಂಭಿಸಿ ಕೆಲವು ದಿನಗಳಾದುವು. ಆಧುನಿಕತೆಯೆಂಬ ಎಕ್ಸ್‌ಪ್ರೆಸ್ ಗಾಡಿಯು ಘಂಟೆಗೆ ಎಂಬತ್ತು ಮೈಲಿಗಿಂತಲೂ ವೇಗವಾಗಿ ಓಡಿಕೊಂಡು ಹೊರಟಿದೆ. ನಾನು ಅದರಲ್ಲೇ ಪ್ರಯಾಣಮಾಡಲು ಟಿಕೆಟ್ ತೆಗೆದುಕೊಂಡಿದ್ದೇನೆ. ಅದಕ್ಕೇ ನಾನು ಹಕ್ಸ್‌ಲಿ, ಡಾರ್ವಿನ್‌ರು ಬಂದರೂ ಧಿಕ್ಕಿ ಹೊಡೆದು ತಡೆಯಲ್ಪಡಲಿಲ್ಲ. ಟೆನಿಸನ್ನನ್ನೂ ಟೀಕೆ ಮಾಡುವುದಕ್ಕೆ ಹೆದರಲಿಲ್ಲ. ಅಷ್ಟೇಕೆ ಇಬ್ಸೆ–ಮೆಟರ್‌ಲಿಂಕ್‌ರ ಹೆಸರಿನ ನಾವೆಯನ್ನು ಹತ್ತಿ ನಮ್ಮ ಮಾನಸಿಕ

ಸಾಹಿತ್ಯದಲ್ಲಿ ಅಗ್ಗದ ಖ್ಯಾತಿ ಗಳಿಸಲು ಸಾಧ್ಯವಾಗುವ ಇಕ್ಕಟ್ಟಿನ ಕಾರುಬಾರನ್ನು ನಡೆಸಲು ನನಗೆ ಸಂಕೋಚವಾಗುತ್ತದೆ.

ನನ್ನನ್ನೂ ಎಂದೋ ಒಂದು ದಿನ ರಸಿಕ ಜನರು ಸಂಧಾನ ಮಾಡಿ ಗುರುತಿಸಿ ನನ್ನ ಯೋಗ್ಯತೆಗೆ ಸರಿಯಾಗಿ ಬೆಲೆ ಕೊಡುವರು ಎಂಬ ಆಸೆಯೇನೋ ನನಗಿಲ್ಲ. ಆದರೂ ನಾನು ನೋಡಿರುವ ಪ್ರಕಾರ ಬಂಗಾಳದಲ್ಲಿ ಇನ್ನೂ ಅಲ್ಪಸ್ವಲ್ಪ ಮಂದಿ ಹುಡುಗರು ಸಿಗುತ್ತಾರೆ–ಅವರು ಕಾಲೇಜು ಬಿಡದೆ ಕಾಲೇಜಿನ ಹೊರಗಡೆ ಸತ್ಯವಾದ ಸರಸ್ವತಿಯ ವೀಣಾವಾದನವಾಗುವ ಸ್ಥಳದಲ್ಲೂ ನೆರೆದು ರಸಾಸ್ವಾದನ ಮಾಡುವರು. ಅಂಥವರೇ ನಾಲ್ಕಾರು ಮಂದಿ ಕ್ರಮೇಣ ನನ್ನ ಮನೆಗೆ ಬಂದು ನನ್ನ ಸುತ್ತ ನೆರೆಯಲು ತೊಡಗಿದರು.

ಇಲ್ಲಿ ನನ್ನ ಇನ್ನೊಂದು ಚಟಕ್ಕೆ ಅವಕಾಶವಾಯಿತು–ಹರಟೆ; ಗೌರವವಾದ ಭಾಷೆಯಲ್ಲಿ 'ಸಲ್ಲಾಪ', 'ಆಲೋಚನೆ' ಎಂದೂ ಅನ್ನಬಹುದು. ದೇಶದಲ್ಲಿ ಎಲ್ಲಿ ನೋಡಿದರೂ ತಾತ್ಕಾಲಿಕ, ಪ್ರಾಚೀನ ಸಾಹಿತ್ಯ ಅನ್ನಿಸಿ ಕೊಂಡಿರುವ ಕ್ಷೇತ್ರದಲ್ಲಿ ಬರೇ ಹಸಿ ಹಸಿ ಭಾವನೆಗಳೊಂದು ಕಡೆಯಾದರೆ ಇನ್ನೊಂದು ಕಡೆ ಹಳಸಿ ಮುಗ್ಗಿಹೋಗಿರುವಂಥ ಕಲ್ಪನೆಗಳು. ಇವುಗಳ ಇಬ್ಬಂದಿಯಲ್ಲಿ ಸಿಕ್ಕಿ ಎಲ್ಲಾದರು ಬಟ್ಟಬಯಲಾಗಿರುವ ಕಡೆ ಹೋಗಿ ಉಸಿರಾಡಿದರೆ ಸಾಕು ಎನ್ನಿಸುವುದು. ನಾನೇ ಬರೆಯೋಣವೆಂದರೆ ಹಾಳು ಸೋಮಾರಿತನ ಮೈಹಿಡಿದಿದೆ. ಅದಕ್ಕಾಗಿಯೇ ಬಿಚ್ಚುಮನಸ್ಸಿನಿಂದ ಮಾತು ಕೇಳುವ ನಾಲ್ಕಾರು ಮಂದಿ ಸಿಕ್ಕಿದರೆ ಸ್ವಲ್ಪ ಹಾಯಿ ಎನಿಸುತ್ತದೆ.

ನನ್ನ ಶಿಷ್ಯರ ತಂಡ ಕ್ರಮೇಣ ದೊಡ್ಡದಾಗಲು ತೊಡಗಿತು. ನಾನು ವಾಸವಾಗಿದ್ದುದು ಒಂದು ಗಲ್ಲಿಯ ಎರಡನೇ ನಂಬರಿನ ಮನೆಯಲ್ಲಿ. ನನ್ನ ಹೆಸರು ಅದ್ವೈತಚರಣನೆಂಬುದಾಗಿದ್ದುದರಿಂದ ನನ್ನ ತಂಡಕ್ಕೂ ದ್ವೈತಾದ್ವೈತ ಸಂಪ್ರದಾಯ ಸಂಘವೆಂಬ ಹೆಸರು ಬಂದುಬಿಟ್ಟಿತ್ತು. ನಮ್ಮ ಈ ಸಂಪ್ರದಾಯದ ಸದಸ್ಯರಿಗೆ ಸಮಯ, ಅಸಮಯ ಎಂಬ ಜ್ಞಾನವಿರಲಿಲ್ಲ. ಇದ್ದಕ್ಕಿದ್ದಹಾಗೆ ಒಬ್ಬ ಹುಡುಗ ಪಂಚ್‌ಮಾಡಿದ ಟ್ರಾಂ ಟಿಕೆಟ್ಟನ್ನು ಹಾಳೆಯ ಗುರುತಾಗಿ ಇಟ್ಟು ಹೊಸದಾಗಿ ಪ್ರಕಟವಾದ ಇಂಗ್ಲಿಷ್ ಪುಸ್ತಕವೊಂದನ್ನು ಕೈಯಲ್ಲಿ ಹಿಡಿದುಕೊಂಡು ಬೆಳಗ್ಗೆ ಅಷ್ಟು ಹೊತ್ತಿಗೇ ಬಂದು ಹಾಜರಾಗಿಬಿಡುತ್ತಿದ್ದ. ಅವನೊಂದಿಗೆ ತರ್ಕ ಮಾಡುತ್ತ ಮಾಡುತ್ತ ಒಂದು ಘಂಟೆ ಹೊಡೆದು ಹೋಗುವುದು. ಆದರೂ ತರ್ಕ ಮುಗಿಯುವುದೇ ಇಲ್ಲ. ಇನ್ನೊಬ್ಬ ಸದಸ್ಯ ಕಾಲೇಜಿನ ನೋಟ್ ಪುಸ್ತಕ ಕೈಯಲ್ಲಿ ಹಿಡಿದುಕೊಂಡು ಮಧ್ಯಾಹ್ನ ಬರುವನು. ರಾತ್ರಿಯವರೆಗೂ ಅವನೊಂದಿಗೆ ಮಾತುಕಥೆ, ಚರ್ಚೆ–ರಾತ್ರಿ ಎರಡು ಘಂಟೆ ಹೊಡೆಯುವವರೆಗೂ. ಆಗಲೂ ಏಳುವ ಮಾತೇ ಇಲ್ಲ. ನಾನು ಸಾಧಾರಣವಾಗಿ ಅವರನ್ನು ಅಲ್ಲೇ ಊಟಕ್ಕೆ ಎಬ್ಬಿಸುತ್ತಿದ್ದೆ. ಏಕೆಂದರೆ,

ನಾನು ಕಂಡಿರುವಹಾಗೆ ಯಾರು ಸಾಹಿತ್ಯ ಚರ್ಚೆ ಮಾಡುತ್ತಾರೋ ಅವರಿಗೆ ರಸಿಕತೆಯೆನ್ನುವುದು ಕೇವಲ ಮೆದುಳಿನಲ್ಲೊಂದೇ ಅಲ್ಲ, ರಸನೆಯಲ್ಲೂ (ನಾಲಗೆ) ಅತಿ ಪ್ರಬಲ. ಆದರೆ ನಾನು ಯಾರ ಭರವಸೆಯ ಮೇಲೆ ಇವರೆಲ್ಲ ಹಸಿದವರನ್ನು ಯಾವಾಗ ಎಂದರೆ ಆಗ ಊಟ ಮಾಡೆಂದು ಹೇಳುತ್ತಿದ್ದೆನೋ ಅವಳ ಅವಸ್ಥೆ ಏನು ಎಂಬ ಯೋಚನೆ ಅನಾವಶ್ಯಕವೆಂದೇ ನಂಬಿಕೊಂಡು ಬಂದಿದ್ದೆ. ಸಂಸಾರದಲ್ಲಿ ಭಾವನೆಗಳ ಮತ್ತು ಜ್ಞಾನಕ್ಕೆ ಸಂಬಂಧಪಟ್ಟ ಬೇರೆ ಎಲ್ಲದರ ಯಾವುದೊಂದು ಅತಿ ದೊಡ್ಡ ಕುಲಾಲಚಕ್ರ ಸುತ್ತುತ್ತಿದೆಯೋ ಯಾವುದರಿಂದ ಮಾವನ ಸಭ್ಯತೆ ಎನ್ನುವುದು ಅದೆಷ್ಟು ತಯಾರಾಗಿ ಬೆಂಕಿಯ ಘರ್ಷಣೆ ಪಡೆದು ಅತ್ಯಂತ ಶಕ್ತಿವಂತವಾಗಿದೆಯೋ, ಅದೆಷ್ಟು ಹಸಿ ಹಸಿಯದಾಗಿರುವಾಗಲೇ ಒಡೆದುಬಿದ್ದಿದೆಯೋ, ಅಂತಹುದರ ಮುಂದೆ ಮನೆಗೆಲಸದ ಆಗುಹೋಗುಗಳೂ, ಮತ್ತು ಅಡಿಗೆ ಮನೆ ಒಲೆಯ ಬೆಂಕಿ ಬೂದಿಗಳೂ ಗಮನಕ್ಕೆ ಬರುತ್ತವೆಯೇ?

ಭವಾನಿಯ ಭ್ರುಕುಟಿ ಭಂಗಿಯನ್ನು ಭವ (ಈಶ್ವರ)ನೇ ಬಲ್ಲ, ಎಂಬ ಮಾತನ್ನು ಕಾವ್ಯದಲ್ಲಿ ಓದಿದ್ದೇನೆ. ಆದರೆ ಭವನಿಗೆ ಮೂರು ಕಣ್ಣು, ನನಗೋ ಎರಡೇ. ಆದರದೂ ಪುಸ್ತಕಗಳೋದಿ ಓದಿ ದೃಷ್ಟಿ ಮಂದವಾಗಿ ಹೋಗಿದೆ. ಅದರಲ್ಲೂ ಅಸಮಯದಲ್ಲಿ ಊಟದ ಏರ್ಪಾಡು ಮಾಡು ಎಂದು ಹೇಳಿದರೆ ನನ್ನ ಹೆಂಡತಿಯ ಹುಬ್ಬಿನ ಬಿಲ್ಲು ಯಾವ ಬಗೆಯ ವಕ್ರತೆಯನ್ನು ತಾಳುವುದೆಂದು ನನ್ನ ದೃಷ್ಟಿಗೆ ಬೀಳುತ್ತಲೇ ಇರಲಿಲ್ಲ. ನನ್ನ ಮನೆಯಲ್ಲಿ ಅಸಮಯವೇ ಸಮಯ, ಮತ್ತು ಅನಿಯಮವೇ ನಿಯಮ ಎಂಬುದಾಗಿ ಬರುತಾ ಬರುತಾ ಆಕೆ ತಿಳಿದುಕೊಂಡುಬಿಟ್ಟಿದ್ದಳೆಂದು ತೋರುತ್ತದೆ. ನನ್ನ ಸಂಸಾರದ ಗಡಿಯಾರಕ್ಕೆ ಅಂತಹ ವಿವೇಚನಾ ಜ್ಞಾನ ಯಾವುದೂ ಇಲ್ಲ. ಮತ್ತು ನನ್ನ ಮನೆವಾಳ್ತೆಯ ರಂಧ್ರ ರಂಧ್ರಗಳಲ್ಲೂ ನಲವತ್ತೊಂಬತ್ತು ಪವನಗಳ ವಾಸ. ನನ್ನ ಹತ್ತಿರ ಇದ್ದಂಥ ಅಲ್ಪ ಸ್ವಲ್ಪ ಹಣದ ಮೊತ್ತಕ್ಕೆ ಇದ್ದುದು ಒಂದೇ ಒಂದು ಸದಾ ತೆರೆದ ಮೋರಿ (drain)–ಅದು ಪುಸ್ತಕಗಳನ್ನು ಕೊಳ್ಳುವ ದಿಕ್ಕಿನಲ್ಲಿ. ಸಂಸಾರದ ಬೇರೆಲ್ಲ ಆವಶ್ಯಕತೆಗಳು ಕಂಗಾಲಿ ನಾಯಿಗಳಂತೆ ಈ ನನ್ನ ಮೆಚ್ಚಿನ ಚಟವೆಂಬ ವಿಲಾಯಿತಿ ನಾಯಿಯ ಎಂಜಲನ್ನು ನೆಕ್ಕುತ್ತ ಹೀರುತ್ತ ಹೇಗೆ ತಾನೆ ಉಳಿದುಕೊಂಡಿದ್ದುವೋ ಆ ರಹಸ್ಯ ನನಗಿಂತಲೂ ನನ್ನ ಹೆಂಡತಿಗೇ ಹೆಚ್ಚು ಗೊತ್ತು.

ನಾನಾ ಜ್ಞಾನದ ಬಗ್ಗೆ ಮಾತಾಡಬೇಕಾಗುವುದು ನನ್ನಂಥವರಿಗೆ ಹೆಚ್ಚು ಅಗತ್ಯ. ವಿದ್ಯೆ ಪ್ರಕಟಿಸುವುದಕ್ಕಾಗಿ ಅಲ್ಲ ಇರುವುದು, ಪರರಿಗೆ ಉಪಕಾರ ಮಾಡುವುದಕ್ಕಾಗಿಯೂ ಅಲ್ಲ. ಅದಿರುವುದು ಮಾತಾಡುತ್ತ ಯೋಚನೆ ಮಾಡುವುದಕ್ಕಾಗಿ, ಜ್ಞಾನವನ್ನು ಜೀರ್ಣ ಮಾಡಿಕೊಳ್ಳುವುದಕ್ಕಾಗಿರುವ ಒಂದು ವ್ಯಾಯಾಮ ಪ್ರಣಾಲಿ. ನಾನೇನಾದರೂ ಲೇಖಕನಾಗಿದ್ದಿದ್ದರೆ ಅಥವಾ

ಅಧ್ಯಾಪಕನಾಗಿದ್ದಿದ್ದರೆ, ಆಗ ಹರಟೆ ನನ್ನ ಪಕ್ಷಕ್ಕೆ ಅನಾವಶ್ಯಕವಾಗುತ್ತಿತ್ತು. ಯಾರಿಗೆ ಕಟ್ಟಿಟ್ಟಂಥ ದುಡಿತವಿದೆಯೋ, ಅಂಥವರು ಉಂಡದ್ದನ್ನು ಜೀರ್ಣಮಾಡಿಕೊಳ್ಳುವ ಮಾರ್ಗವನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ಮನೆಯಲ್ಲೇ ಮೂರು ಹೊತ್ತೂ ಕೂತು ಉಣ್ಣುವವರು ಬೇರೆಲ್ಲಿಯಾಗದಿದ್ದರೂ ಅವರ ಮನೆ ಮಾಳಿಗೆಯ ಮೇಲಾದರೂ ಶತಪಥ ಓಡಾಡಲೇ ಬೇಕಾಗುತ್ತದೆ. ನನ್ನ ಅವಸ್ಥೆಯೂ ಇದೇ. ಅದಕ್ಕಾಗೇ ನನ್ನ ದ್ವೈತ ದಳ ಇನ್ನೂ ಕೂಡದೇ ಇದ್ದಾಗ ನನ್ನ ಏಕ ಮಾತ್ರ 'ದ್ವೈತ'ವಾಗಿದ್ದವಳು ನನ್ನ ಹೆಂಡತಿ. ಆಕೆ ನನ್ನ ಈ ಮಾನಸಿಕ ಪರಿಪಾಕದ ಶಬ್ದರೂಪವಾದ ಪ್ರಕ್ರಿಯೆಯನ್ನು ದೀರ್ಘಕಾಲದಿಂದಲೂ ಸದ್ದಿಲ್ಲದೆ ಸೈರಿಸಿಕೊಂಡಿದ್ದಳು. ಅವಳು ಉಡುವುದು ಸಾದಾ ಹತ್ತಿಯ ಮಿಲ್ ಸೀರೆಯೇ ಆದರೂ, ತೊಟ್ಟಿರುವ ಒಡವೆಗಳ ಬಂಗಾರ ಅಷ್ಟು ಚೊಕ್ಕವಲ್ಲದೆ, ಕಡಿಮೆ ಬೆಲೆಯದಾದರೂ, ಗಂಡನಾದವನ ಬಾಯಿಂದ ಕೇಳುತ್ತಿದ್ದ ಮಾತುಗಳಲ್ಲಿ–ಅದು (Eugenics) ಜನನಶಾಸ್ತ್ರದ ಮೇಲಾಗಲಿ, ಮೆಂಡಲ್ (Mendel) ತತ್ತ್ವದ ಮೇಲಾಗಲಿ, ಅಥವಾ ಗಣಿತಶಾಸ್ತ್ರದ ಮೇಲಾಗಲಿ, ಅಥವಾ ಬೇರೇನೇ ಆಗಲಿ, ಅದರ ಮಧ್ಯೆ ನಕಲು ಅಥವಾ ಕೀಳು ದರ್ಜೆಯದು, ಯಾವುದೂ ಇರುತ್ತಿರಲಿಲ್ಲ. ಆದರೂ ನನ್ನ ಶಿಷ್ಯರ ತಂಡ ಸೇರಿದ ಮೇಲೆ ಇಂಥವೆಲ್ಲ ಬೆಲೆಯಾದ ಮಾತುಗಳಿಂದ ಅವಳು ವಂಚಿತಳಾಗಿದ್ದರೂ ಅದರ ಬಗ್ಗೆ ಯಾವ ದೂರೂ ಮಾಡುತ್ತಿರಲಿಲ್ಲ ಆಕೆ.

ನನ್ನ ಹೆಂಡತಿಯ ಹೆಸರು ಅನಿಲಾ. ಈ ಶಬ್ದದ ಅರ್ಥ ಏನು ಎಂಬುದು ನನಗೆ ತಿಳಿಯದು. ನನ್ನ ಮಾವನಿಗಾದರೂ ಗೊತ್ತಿತ್ತೋ ಇಲ್ಲವೋ ಅದೂ ನನಗೆ ಅರಿಯದ ವಿಷಯ. ಆದರೆ ಹೆಸರಂತೂ ಕೇಳಲು ಬಲು ಇಂಪು, ಮತ್ತು ಕೇಳಿದೊಡನೆಯೇ ಇದರಲ್ಲೇನೋ ಅರ್ಥವಿರಬಹುದು ಎಂದೆನ್ನಿಸದೆ ಇರದು. ನನ್ನ ಹೆಂಡತಿಯು ತನ್ನ ತಂದೆಗೆ ಮೆಚ್ಚಿಗೆ ಮಗಳು. ನನ್ನ ಅತ್ತೆ ಒಂದು ಮಗನನ್ನು ಹೆತ್ತು ಕೂಸು ಎರಡೂವರೆ ವರುಷಗಳಾಗಿರುವಾಗಲೇ ಸತ್ತುಹೋದಾಗ ನನ್ನ ಮಾವನವರು ಮಗುವನ್ನು ಸಾಕುವವರು ಯಾರು ಇಲ್ಲವೆಂದು ಬೇರೊಂದು ಮದುವೆ ಮಾಡಿಕೊಂಡರು. ಅವರ ಉದ್ದೇಶವು ಎಷ್ಟರಮಟ್ಟಿಗೆ ಸಫಲವಾಯಿತು ಅನ್ನುವುದಕ್ಕೆ ಇಷ್ಟು ಮಾತ್ರ ಹೇಳಿದರೆ ಸಾಕು–ತಾವೇ ಸಾಯುವುದಕ್ಕೆ ಕೆಲವು ದಿನಗಳ ಮೊದಲು ಆತ ಅನಿಲಳ ಕೈಹಿಡಿದುಕೊಂಡು "ಅಮ್ಮಾ, ಅನಿಲ, ನಾನಂತೂ ಇನ್ನು ಹೊರಟೆ. ಇನ್ನು ಮೇಲೆ ಸರೋಜನ ಸರ್ವಸ್ವವೂ ನೀನೇ. ಅವನ ಭಾರ ನಿನ್ನ ಮೇಲೇ ಇದೆ" ಎಂದು ಹೇಳಿದರು. ಅವರ ಎರಡನೇ ಹೆಂಡತಿ ಮತ್ತು ಆಕೆಯ ಮಕ್ಕಳ ಬಗ್ಗೆ ಬೇರೆ ಏನು ವ್ಯವಸ್ಥೆ ಮಾಡಿದರೊ ನನಗೆ ಗೊತ್ತಿಲ್ಲ. ಆದರೆ ಅನಿಲಳ ಕೈಯಲ್ಲಿ ಗೋಪ್ಯವಾಗಿ ತಾವು ಅದುವರೆಗೆ ಕೂಡಿಟ್ಟಿದ್ದ ಸುಮಾರು ಏಳೂವರೆ ಸಾವಿರ ರೂಪಾಯಿಗಳನ್ನು ಕೊಟ್ಟು "ಈ ಹಣವನ್ನು ಬಡ್ಡಿಗಾಗಿ

ಬ್ಯಾಂಕಿನಲ್ಲಿಡಬೇಕಾಗಿಲ್ಲ. ನಗದಾಗಿಯೇ ಖರ್ಚುಮಾಡಿ ನೀನು ಸರೋಜನ ಓದುಬರೆಹದ ಏರ್ಪಾಡು ಮಾಡಿಬಿಡು" ಎಂದಿದ್ದರು.

ಈ ನಡೆವಳಿಕೆಯಿಂದ ನನಗೆ ಆಶ್ಚರ್ಯವಾಗದೇ ಇರಲಿಲ್ಲ. ನನ್ನ ಮಾವ ಬರೇ ಬುದ್ಧಿವಂತನೇ ಅಲ್ಲದೆ ವಿವೇಚನಾ ಜ್ಞಾನವುಳ್ಳವನೆಂದೂ ಅನ್ನಿಸಿಕೊಂಡಿದ್ದರು. ಆ ಕ್ಷಣದ ಉದ್ರೇಕದಲ್ಲಿ ಯಾವುದನ್ನೂ ಮಾಡುತ್ತಿರಲಿಲ್ಲ. ಎಲ್ಲ ವಿಷಯಗಳಲ್ಲೂ ಲೆಕ್ಕಾಚಾರ ಮಾಡಿ, ಪೂರ್ವಾಪರ ಯೋಚಿಸಿಯೇ ಕೆಲಸ ಮಾಡುತ್ತಿದ್ದರು. ಅದಕ್ಕಾಗಿಯೇ ಅವರ ಮಗನಿಗೆ ವಿದ್ಯೆ ಕಲಿಸಿ ಮುಂದಕ್ಕೆ ತರುವ ಭಾರ ನನ್ನ ಮೇಲೆ ವಹಿಸುವುದು ಉಚಿತವಾಗಿತ್ತು. ಇದರಲ್ಲಿ ನನಗೆ ಸಂದೇಹವಿಲ್ಲ. ಆದರೆ ತಮ್ಮ ಮಗಳೇ ತಮ್ಮ ಅಳಿಯನಿಗಿಂತಲು ಹೆಚ್ಚು ಯೋಗ್ಯಳೆಂಬುದಾಗಿ ಹೇಗೆ ನಿರ್ಧಾರಕ್ಕೆ ಬಂದರೋ ಹೇಳಲಸಾಧ್ಯ. ಅದರಲ್ಲು ದುಡ್ಡು ಕಾಸಿನ ಸಂಬಂಧದಲ್ಲಿ ನಾನು ಅಪಕ್ವವಾದವನೆಂದು ತಿಳಿದುಕೊಂಡಿರದಿದ್ದರೆ ನನ್ನ ಹೆಂಡತಿಯ ಕೈಯಲ್ಲಿ ಇಷ್ಟೊಂದು ಹಣವನ್ನು ಕೊಟ್ಟು ಹೋಗುತ್ತಿರಲಿಲ್ಲ. ಮುಖ್ಯವಾಗಿ, ಅವರು ವಿಕ್ಟೋರಿಯಾ ರಾಣಿಯ ಯುಗಧರ್ಮದವರಾದುದರಿಂದಲೇ ನನ್ನನ್ನ ಅರ್ಥಮಾಡಿಕೊಳ್ಳಲು ಆಗಲಿಲ್ಲ. ನನಗೆ ಒಳಗೊಳಗೇ ಕೋಪವೇರಿ ಈ ವಿಷಯದಲ್ಲಿ ಹೆಂಡತಿಯೊಡನೆ ನಾನು ಯಾವ ಮಾತೂ ಆಡಕೂಡದೆಂದು ಮನಸ್ಸು ಮಾಡಿದ್ದೆ. ಮಾತನ್ನಾಡಲೂ ಇಲ್ಲ. ನಾನು ಮನಸ್ಸಿನಲ್ಲಿ ಖಂಡಿತ ಮಾಡಿಕೊಂಡಿದ್ದೆ. ಅವಳಾಗವಳೇ ನನ್ನ ಬಳಿ ಬಂದು ಅದರ ಬಗ್ಗೆ ಸಲಹೆ ಕೇಳಬೇಕಾಗುತ್ತದೆ. ಬಂದು ನನ್ನ ಕಾಲನ್ನು ಹಿಡಿದುಕೊಳ್ಳದೆ ಹೋದರೆ ವಿಧಿಯಿರುವುದಿಲ್ಲ ಎಂಬುದಾಗಿ. ಆದರೆ ಎಷ್ಟು ದಿನವಾದರೂ ಅವಳು ನನ್ನ ಹತ್ತಿರ ಸಲಹೆ ಕೇಳಲು ಬರದೆ ಇದ್ದುದನ್ನು ಕಂಡು ಅವಳಿಗೆ ಧೈರ್ಯವಿಲ್ಲ ಅಂದುಕೊಂಡೆ. ಕಡೆಗೆ ಯಾವುದೋ ಮಾತಿನ ವರಸೆಯಲ್ಲಿ "ಅಂದಹಾಗೆ ಸರೋಜನ ವಿದ್ಯಾಭ್ಯಾಸದ ವಿಷಯದಲ್ಲಿ ಏನು ಮಾಡಬೇಕು ಎಂದಿದ್ದೀಯೆ?" ಎಂದು ಕೇಳಿಬಿಟ್ಟೆ. ಅನಿಲ "ಅವನಿಗೆ ಪ್ರೈವೇಟ್ ಟ್ಯೂಷನ್ ಏರ್ಪಾಡು ಮಾಡಿದ್ದೇನೆ. ಸ್ಕೂಲಿಗೂ ಹೋಗುತ್ತಾನೆ" ಎಂದಳು. ಆಗ ನಾನು ಸರೋಜಿಗೆ ಪಾಠ ಹೇಳುವ ಕೆಲಸವನ್ನು ನಾನೇ ವಹಿಸಿಕೊಳ್ಳಬಲ್ಲೆ ಎಂಬುದಾಗಿ ಸೂಚಿಸಿದೆ. ಇತ್ತೀಚೆಗೆ ವಿದ್ಯಾ ಶಿಕ್ಷಣದ ಕ್ಷೇತ್ರದಲ್ಲಿ ಬಂದಿರುವ ಹೊಸ ಹೊಸ ಪ್ರಯೋಗ, ಪ್ರಣಾಲಿಗಳ ಬಗ್ಗೆ ಅವಳಿಗೆ ತಿಳಿವಳಿಕೆ ಕೊಡಲು ಯತ್ನಿಸಿದೆ. ಅನಿಲ ಎಲ್ಲವನ್ನೂ ಕೇಳಿ "ಹೌದು" ಅನ್ನಲಿಲ್ಲ. "ಇಲ್ಲ" ಎನ್ನಲಿಲ್ಲ. ಇಷ್ಟು ದಿನಗಳಾದ ಮೇಲೆ ನನಗೆ ಈ ಅನಿಲ ನನ್ನಲ್ಲಿ ನಂಬಿಕೆಯಿಟ್ಟಿಲ್ಲ, ಏಕೋ ಎನ್ನಿಸಿತು. ನಾನು ಕಾಲೇಜು ಪರೀಕ್ಷೆಗಳನ್ನು ಪಾಸು ಮಾಡದೆ ಇರಬಹುದು. ಅದು ಕಾರಣವೇ ಓದು, ಬರೆಹದ ಸಂಬಂಧದಲ್ಲಿ ಸಲಹೆ ಕೊಡಲು ನನಗೆ ಯೋಗ್ಯತೆಯೂ ಇಲ್ಲ, ಎಂದು ತಿಳಿದುಕೊಂಡುಬಿಡುವುದೇ? ಇಷ್ಟು ದಿನ ಅವಳಿಗೆ Inheritance of

personality ಬಗ್ಗೆ ಮತ್ತು ರೇಡಿಯೋ ಚಾಂಚಲ್ಯದ ಬಗ್ಗೆ ಏನೇನು ಉಪದೇಶ ಮಾಡಿದ್ದೆನೋ ಅವಂತೂ ಖಂಡಿತ ಅವಳ ಮನಸ್ಸಿಗೆ ಮುಟ್ಟಿಲ್ಲ. ಅವಳು ಬಹುಶಃ ಎರಡನೇ ಇಯುತ್ತೆಯು ವಿದ್ಯಾರ್ಥಿ ಕೂಡ ಇದಕ್ಕಿಂತಲೂ ಹೆಚ್ಚಾಗಿ ತಿಳಿದುಕೊಂಡಿರುತ್ತಾನೆಂದು ತಿಳಿದುಕೊಂಡಿರಬಹುದು. ಏಕಿರಕೂಡದು? ಉಪಾಧ್ಯಾಯರ ಕೈಲಿ ಕಿವಿ ಹಿಂಡಿಸಿಕೊಂಡು ಹಿಂಡಿಸಿಕೊಂಡೇ ಅಳುತ್ತಾ ಚೀರುತ್ತಲೇ ಅಂತಹ ಘನವಾದ ವಿದ್ಯೆಯನ್ನು ಅವರು ಅರಗಿಸಿಕೊಂಡಿರುತ್ತಾರಲ್ಲವೆ? ನನಗೆ ಕೋಪವೇರಿ ಈ ಹೆಂಗಸರ ಮುಂದೆ ಯೋಗ್ಯತೆಯನ್ನು ಪ್ರಮಾಣ ಮಾಡಿಕೊಳ್ಳುವುದೇ ಹುಚ್ಚುಮುಂಡೆತನ ಎಂದುಕೊಂಡೆ.

ಸಂಸಾರದಲ್ಲಿ ಅತಿ ದೊಡ್ಡದಾದ ಜೀವನ ನಾಟಕವು ತೆರೆಯ ಹಿಂದೆಯೇ ಶೇಖರವಾಗುತ್ತಿರುತ್ತದೆ. ಐದನೇ ಅಂಕದ ಕಡೆಯಲ್ಲಿಯೇ ಆ ತೆರೆ ಹಠಾತ್ತಾಗಿ ಮೇಲೇಳುವುದು. ನಾನು ನನ್ನ ಶಿಷ್ಯರ ಮುಂದೆ ಬರ್ಗ್‌ಸನ್ನಿನ ತತ್ತ್ವಜ್ಞಾನ ಮತ್ತು ಇಬ್ಸನ್ನಿನ ಮನಸ್ತತ್ತ್ವ ಆಲೋಚನೆಯನ್ನು ಮಾಡುತ್ತಿದ್ದಾಗ, ಅನಿಲಳ ಜೀವನ ಯಜ್ಞವೇದಿಕೆಯ ಮೇಲೆ ಯಾವ ಅಗ್ನಿಕುಂಡವೂ ಉರಿಯುತ್ತಿಲ್ಲವೆಂದುಕೊಂಡಿದ್ದೆ. ಆದರೆ ಇದು ಇಷ್ಟು ದಿನಗಳಾದ ಮೇಲೆ ಹಿಂದೆ ಆಗಿ ಹೋದುದರ ಕಡೆ ತಿರುಗಿ ನೋಡಿ ಗಮನಿಸಿದಾಗ ಸ್ಪಷ್ಟವಾಗಿ ಕಂಡುಬಂತು-ಯಾವ ಸೃಷ್ಟಿಕರ್ತ ಬೆಂಕಿಯಲ್ಲಿ ಸುಟ್ಟು, ಸುತ್ತಿಗೆಯಲ್ಲಿ, ಉಳಿಯಲ್ಲಿ ಬಡಿದು ಕೆರೆದು ಮನುಷ್ಯ ಪ್ರತಿಮೆಯನ್ನು ತಯಾರು ಮಾಡುತ್ತಾನೋ ಅವನು ಅನಿಲಳ ಮರ್ಮಸ್ಥಾನದಲ್ಲಿ ಜಾಗರಿತನಾಗಿಯೇ ಇದ್ದ. ಆ ಸ್ಥಳದಲ್ಲಿ ಒಬ್ಬನೇ ತಮ್ಮ, ಒಬ್ಬಳೇ ಅಕ್ಕ, ಒಬ್ಬಳೇ ಮಲತಾಯಿಯರ ಸಮಾವೇಶವಾಗಿ ನಿಯತವಾದ ಘಾತ, ಪ್ರತಿಘಾತಗಳ ಲೀಲೆ ನಡೆಯುತ್ತಲೇ ಇತ್ತು. ಪುರಾಣಗಳ ವಾಸುಕಿಯು ಯಾವ ಪೌರಾಣಿಕ ಪೃಥಿವಿಯನ್ನು ಹಿಡಿದಿಟ್ಟಿತ್ತೋ ಆ ಪೃಥಿವಿ ಸ್ಥಿರವಾದುದು. ಆದರೆ ಸಂಸಾರದಲ್ಲಿ ವೇದನೆಯ ಪೃಥಿವಿಯನ್ನು ಹೊತ್ತುಕೊಂಡಂಥ ಹೆಂಗಸಿನ ಪಾಲಿಗೆ ಆ ಪೃಥಿವಿಯು ಗಳಿಗೆ ಗಳಿಗೆಗೂ ಹೊಸ ಹೊಸ ಆಘಾತಗಳಿಂದ ರೂಪಿತವಾಗುತ್ತಿರುತ್ತದೆ. ಅಂತಹ ಸದಾ ನಡೆಯುತ್ತಿರುವ ವ್ಯಥೆಯ ಭಾರವನ್ನು ಎದೆಯಲ್ಲಿ ಹೊತ್ತುಕೊಂಡು ಕೂಡ ಯಾವುದನ್ನೂ ತೋರಿಸಿ ಕೊಡದೆ ಮನೆವಾಳ್ತೆಯ ಸಣ್ಣ, ಪುಟ್ಟ ಕೆಲಸ ಪಲಸಗಳ ನಡುವೆ ಓಡಾಡುತ್ತಿರುವ ಹೆಂಗಸಿನ ಆಂತರ್ಯದ ಕಥೆಯನ್ನು ಆ ಅಂತರ್ಯಾಮಿಯ ಹೊರತು ಬೇರೊಬ್ಬರು ಅರಿಯರು. ನನಗಂತೂ ಸ್ವಲ್ಪವೂ ತಿಳಿಯಲಿಲ್ಲ. ಎಷ್ಟು ಉದ್ವೇಗ, ಎಷ್ಟು ಅಪಮಾನಿತ ಪ್ರಯಾಸ, ಪೀಡಿತ ಸ್ನೇಹದ ಎಷ್ಟು ಒಳಗೆ ಉಡುಗಿಹೋದ ವ್ಯಾಕುಲತೆ ನನ್ನ ಹತ್ತಿರದಲ್ಲೇ ನಿಶ್ಶಬ್ದವಾಗಿ ಅಂತರಾಳದಲ್ಲಿ ತಡೆಯಲ್ಪಟ್ಟು ಮೇಲೇಳುತ್ತಿತ್ತೋ ನನಗೆ ಅರಿವಾಗಲೇ ಇಲ್ಲ. ನನಗೆ ತಿಳಿದಿದ್ದಂತೆ, ನನ್ನ ಶಿಷ್ಯಂದರಿಗೆಲ್ಲ ಎಂದು ಒಟ್ಟಿಗೆ ಊಟದ ಏರ್ಪಾಡು ಮಾಡುತ್ತೇನೊ ಆ ದಿನದ ಉದ್ಯೋಗಪರ್ವವೇ ಅವಳ

ಜೀವನದ ಪ್ರಧಾನ ಪರ್ವ. ಈಗ ಚೆನ್ನಾಗಿ ಗೊತ್ತಾಗುತ್ತಿದೆ, ಗಾಢವಾದ ವೇದನೆಯೊಳಗಿಂದ ಈ ಅನಾಥ ತಮ್ಮನೇ ಅಕ್ಕನ ಅತ್ಯಂತ ಅಂತರತಮವಾಗಿಬಿಟ್ಟಿದ್ದ. ಸರೋಜನನ್ನು ಬೆಳೆಸಿ ಮುಂದಕ್ಕೆ ತರುವ ವಿಷಯದಲ್ಲಿ ನನ್ನ ಸಲಹೆ, ನೆರವುಗಳನ್ನು ಇವಳು ಪೂರ್ತಿಯಾಗಿ ಉಪೇಕ್ಷೆ ಮಾಡಿ ನಿರಾಕರಿಸಿದ ಮೇಲೆ ನಾನು ಆ ಕಡೆ ಒಂದು ಸಲ ಕೂಡ ನೋಡದೆ ಇದ್ದೆ. ಅವರಿಗೆ ಯಾವ ರೀತಿ ನಡೆದುಕೊಂಡು ಹೋಗುತ್ತಿದೆ ಎಂದು ಒಮ್ಮೆಯೂ ವಿಚಾರಿಸಲೂ ಇಲ್ಲ.

ಈ ಮಧ್ಯೆ ನಮ್ಮ ಓಣಿಯ ಮೊದಲನೇ ನಂಬರಿನ ಮನೆಗೆ ಜನ ಬಂದರು. ಈ ಸೌಧ ಹಿಂದಿನ ಕಾಲದ ಹೆಸರಾಂತ ಧನಿಕ ವರ್ತಕನಾದ ಉದ್ಧವ ಬೋರಾಲನ ಸಮಯದಲ್ಲಿ ನಿರ್ಮಿತವಾದದ್ದು. ಅವನಾದ ಮೇಲೆ ಎರಡು ತಲೆಮಾರುಗಳೊಳಗೆ ಆ ವಂಶದ ಧನ, ಜನ ಎಷ್ಟೋ ನಿಶ್ಶೇಷವಾಗುತ್ತ ಬಂದಿತ್ತು. ಅಲ್ಲಲ್ಲಿ ಒಬ್ಬಿಬ್ಬ ವಿಧವೆಯರು ಮಾತ್ರ ಉಳಿದುಕೊಂಡಿದ್ದರು. ಆದರೆ ಅವರು ಇಲ್ಲಿ ವಾಸವಾಗಿರುವುದಿಲ್ಲ. ಆ ಕಾರಣದಿಂದ ಅಷ್ಟು ದೊಡ್ಡ ಮನೆ ಹಾಳುಬಿದ್ದಿರುವ ಹಾಗೆ ಕಾಣುತ್ತದೆ. ಆದರೆ ಮಧ್ಯೆ ಮಧ್ಯೆ ಯಾರಾದರೂ ಮದುವೆ ಮುಂತಾದ ಸಮಾರಂಭಗಳಿಗೋಸ್ಕರ ಕೆಲವು ದಿನಗಳ ಮಟ್ಟಿಗೆ ಇದನ್ನು ಬಾಡಿಗೆ ತೆಗೆದುಕೊಂಡು ತಾತ್ಕಾಲಿಕ ರಿಪೇರಿ, ಅಲಂಕಾರಗಳನ್ನು ಮಾಡಿ ಅದಕ್ಕೊಂದು ಕ್ಷಣಿಕವಾದ ವೈಭವದ ವೇಷ ತೊಡಿಸುವರು. ಉಳಿದ ದಿವಸಗಳಲ್ಲಿ ಈ ಮನೆಯಲ್ಲಿ ವಾಸಮಾಡಲು ಜನ ದೊರೆಯುವುದಿಲ್ಲ. ಆದರೆ ಈ ಬಾರಿ ಬಂದವರು ಸಾಮಾನ್ಯರಲ್ಲ. ರಾಜಾ ಸೀತಾಂಶುಮೌಲಿ ಅವರ ಹೆಸರು! ನರೋತ್ತಮ ಪುರದ ಜಮೀನ್ದಾರರು–ಬೇರೆ ಯಾರೂ ಅಲ್ಲ.

ನನ್ನ ಮನೆಗೆ ಅತಿ ಸನಿಯದಲ್ಲೇ ಅಕಸ್ಮಾತ್ತಾಗಿ ಇಷ್ಟು ದೊಡ್ಡದಾದುದೊಂದು ಹುಟ್ಟಿಕೊಂಡುದು ಬಹುಶಃ ನನ್ನ ಗಮನಕ್ಕೆ ಬರುತ್ತಲೇ ಇರಲಿಲ್ಲ.–ಕಾರಣ, ಮಹಾಭಾರತದ ಕರ್ಣನು ಹುಟ್ಟಿನಿಂದಲೇ ಸಹಜವಾದ ಕವಚವನ್ನು ಮೈಮೇಲೆ ಹೊದಿಕೆಯಾಗಿ ಪಡೆದು ಬಂದಿದ್ದ. ಹಾಗೆ ನನಗೂ ಅಂತಹುದೇ ವಿಧಿದತ್ತವಾದ ಕವಚವೊಂದಿತ್ತು. ಅದು ವಿಶೇಷವೇನೂ ಅಲ್ಲ–ನನ್ನ ಸ್ವಾಭಾವಿಕ ಅನ್ಯಮನಸ್ಕತೆ. ಈ ನನ್ನ ಹೊರಚರ್ಮ ಅತಿ ದಪ್ಪ ಮತ್ತು ಬಲವಾದುದು. ಇದರ ಫಲವಾಗಿ, ಸಚರಾಚರ ಪೃಥಿವಿಯಲ್ಲಿ ಸದಾ ನಡೆಯುವ ಎಳೆದಾಟ, ಪರದಾಟಗಳು, ಬಡಿದಾಟ, ತಿಕ್ಕಾಟಗಳು–ಇವೆಲ್ಲದರಿಂದಲೂ ನನ್ನನ್ನು ಕಾಪಾಡಿಕೊಳ್ಳಲು ಇದೊಂದು ಬಹಳ ಒಳ್ಳೆಯ ಉಪಕರಣ.

ಆದರೆ ಈ ಆಧುನಿಕ ಕಾಲದ ದೊಡ್ಡ ಮನುಷ್ಯರು ಸ್ವಾಭಾವಿಕ ಉತ್ಪಾತಗಳಿಗಿಂತಲೂ ಹೆಚ್ಚು ಜೋರು. ಅವರದು ಅಸ್ವಾಭಾವಿಕವಾದ ಉತ್ಪಾತ. ಕೈಕಾಲುಗಳೆರಡೆರಡು, ಒಂದು ರುಂಡ, ಒಂದು ಮುಂಡ ಇರುವವರು ಮನುಷ್ಯರಾದರೂ, ಯಾರಿಗೆ ಅಂತಹ ಕೈಕಾಲುಗಳು, ರುಂಡ, ಮುಂಡ ಹಠಾತ್ತಾಗಿ

ಎಷ್ಟೋ ಹೆಚ್ಚಾಗಿ ಬೆಳೆದುಬಿಟ್ಟಿವೆಯೋ ಅವರು ದೈತ್ಯರೇ, ಅಹರಹವೂ ಅಂತಹವರು ಧಾಂ, ಧೂಂ ಎನ್ನುತ್ತ ತಮ್ಮ ಸೀಮೆಯನ್ನು ಲಂಘಿಸುತ್ತಲೇ ಇರುವರು. ಮತ್ತು ತಮ್ಮ ದೊಡ್ಡಸ್ತಿಕೆಯನ್ನು ಪ್ರದರ್ಶನ ಮಾಡುತ್ತ ಸ್ವರ್ಗ ಮರ್ತ್ಯಗಳನ್ನೂ ತಬ್ಬಿಬ್ಬುಮಾಡಿಬಿಡುವರು. ಅವರ ಕಡೆ ಗಮನ ಕೊಡದಿರುವುದು ಅಸಾಧ್ಯ. ಯಾರ ಕಡೆ ಗಮನ ಕೊಡುವುದರಿಂದ ಯಾವ ಪ್ರಯೋಜನವೂ ಇಲ್ಲದಿದ್ದರೂ ಗಮನ ಕೊಡದೇ ಇರುವುದಕ್ಕೆ ಸಾಧ್ಯವೇ ಇಲ್ಲವೋ ಅಂಥವರೇ ಜಗತ್ತಿನ ಜಾಡ್ಯ. ಸ್ವಯಂ ಇಂದ್ರನೂ ಅಂಥವರಿಗೆ ಭಯಪಡುವನು.

ಈ ಸೀತಾಂಶುಮೌಲಿ ಈ ಪಂಗಡದ ಮನುಷ್ಯನೆಂದು ನನಗೆ ತಿಳಿದು ಬಂತು. ಒಬ್ಬನೇ ಒಬ್ಬ ಮನುಷ್ಯ ಇಷ್ಟು ಮಿತಿಮೀರಿ ಉದ್ದಂಡತನ ಮಾಡಬಲ್ಲನೆಂದು ನನಗೆ ಮೊದಲು ಅರಿವಿರಲಿಲ್ಲ. ಕುದುರೆಗಾಡಿ, ಜನ, ಸಿಬ್ಬಂದಿಗಳನ್ನು ಇಟ್ಟುಕೊಂಡು ಈ ಮನುಷ್ಯ ಹತ್ತು ತಲೆಯ ರಾವಣನ ಹಾಗೆ ವೇಷತಾಳಿ ಕುಣಿಯುತ್ತಿದ್ದಾನೆ. ಇದರ ಫಲವಾಗಿ ನಮ್ಮ ಮನೆಯಲ್ಲಿ ಸೇರುವ ಸಾಹಿತ್ಯ ಚರ್ಚಾಕೂಟವು ದಿನ ದಿನಕ್ಕೂ ಸ್ವಲ್ಪವಾಗಿ ಮುರಿಯಲು ತೊಡಗಿತು.

ಈ ಸೀತಾಂಶುವಿನ ಸಂಗಡ ನನ್ನ ಮೊದಲನೇ ಪರಿಚಯ ನಮ್ಮ ಓಣಿಯ ತಿರುಗಣೆಯಲ್ಲಿ. ನಮ್ಮ ಓಣಿಯ ವೈಶಿಷ್ಟ್ಯವೇನೆಂದರೆ ನನ್ನಂತಹ ಅನ್ಯಮನಸ್ಕನಾದವನು ಸಹ ಹಿಂದೆ ಮುಂದೆ ಗಮನವಿಡದೆ, ಅಕ್ಕಪಕ್ಕ ನೋಡದೆ ಹಾಯಾಗಿ ನಡೆದುಕೊಂಡು ಹೋಗಬಹುದು. ಅಷ್ಟೇಕೆ, ಇಲ್ಲಿ ಹಾಗೇ ನಡೆದುಕೊಂಡು ಹೋಗುತ್ತಲೇ ಮೆರಿಡಿತ್ತನ ಕಾದಂಬರಿಗಳು, ಬ್ರೌನಿಂಗನ ಕಾವ್ಯ, ಅಥವಾ ನಮ್ಮ ಆಧುನಿಕ ಬಂಗಾಳಿ ಕವಿಗಳಲ್ಲಿ ಯಾರಾದರೊಬ್ಬರ ರಚನೆಗಳ ಬಗ್ಗೆ ಮನಸ್ಸಿನಲ್ಲೇ ತರ್ಕವಿತರ್ಕ ಮಾಡಿಕೊಂಡು ಹೋಗುತ್ತಿದ್ದರೂ ಯಾವ ಅಪಾಯವು ಆಗಲಿಕ್ಕಿಲ್ಲ. ಆದರೆ ಆ ದಿನ ಹಠಾತ್ತಾಗಿ ಹಿಂದಿನಿಂದ ಅತಿ ಬಿರುಸಾದ 'ಹೈಯೋ' ಎಂಬ ಗರ್ಜನೆಯನ್ನು ಕೇಳಿದವನೇ ಹಿಂದೆ ತಿರುಗಿ ನೋಡಿದರೆ, ಒಂದು ಛಾವಣಿಯಿಲ್ಲದ ಬ್ರುಹಾಂ (Brougham coach) ಗಾಡಿಯನ್ನು ಎಳೆಯುತ್ತ ಎರಡು ದೊಡ್ಡ ಕೆಂಬಣ್ಣದ ಕುದುರೆಗಳು ನನ್ನ ಬೆನ್ನ ಮೇಲೆ ಬೀಳುವಂತೆ ಇದ್ದುವು! ಗಾಡಿ ಯಾರದೋ ಆತನೇ ಅರಚುತ್ತಿದ್ದಾನೆ. ಮಗ್ಗುಲಲ್ಲಿ ಅವನ ಕೋಚಮ್ಯಾನನು ಮಂಡಿಸಿದ್ದಾನೆ. ಆ ಬಾಬುವು ಎರಡು ಕೈಗಳಿಂದಲೂ ಅತಿ ಬಲವಾಗಿ ಲಗಾಮನ್ನು ಹಿಡಿದೆಳೆದುಕೊಂಡಿದ್ದಾನೆ. ನಾನು ಹೇಗೋ ಆ ಇಕ್ಕಟ್ಟಾದ ಓಣಿಯ ಮಗ್ಗುಲಲ್ಲಿದ್ದ ಒಂದು ತಂಬಾಕಿನ ಅಂಗಡಿಯ ಬಾಗಿಲನ್ನು ಹಿಡಿದುಕೊಂಡು ಆತ್ಮರಕ್ಷಣೆ ಮಾಡಿಕೊಂಡೆ. ನೋಡಿದರೆ ಮೇಲುಗಡೆ ಗಾಡಿಯಲ್ಲಿ ಕೂತಿದ್ದ ಬಾಬುಸಾಹೇಬರು ಕೆಂಡವಾಗಿದ್ದಾರೆ. ಆಶ್ಚರ್ಯವೇನು, ಗೊತ್ತು, ಗುರಿಯಿಲ್ಲದೆ ಗಾಡಿ ನಡೆಸುವವರೇ ದಾರಿಯಲ್ಲಿ ನಡೆಯುವವರನ್ನು ಸುಮ್ಮನೆ ಮನ್ನಿಸುವುದಿಲ್ಲ. ಇದಕ್ಕೆ ಕಾರಣ ಮೊದಲೇ ಹೇಳಿದ್ದಾಗಿದೆ. ಕಾಲ್ನಡೆಯವರಿಗೆ

ಎರಡೇ ಕಾಲು, ಅವರು ಸ್ವಾಭಾವಿಕರಾದ ಮನುಷ್ಯರು. ಆದರೆ ಜೋಡು ಕುದುರೆಗಾಡಿಯಲ್ಲಿ ಸವಾರಿ ಮಾಡುವವರಿಗೆ ಎಂಟು ಕಾಲು. ಅವರು ದೈತ್ಯರು. ಅವರ ಈ ಅಸಹಜವಾದ ಹೆಚ್ಚುಗಟ್ಟಲೆಯಿಂದಲೇ ಅವರು ಲೋಕದಲ್ಲಿ ಉತ್ಪಾತವುಂಟುಮಾಡುವರು. ಎರಡುಕಾಲಿನ ಮನುಷ್ಯರ ವಿಧಾತನು ಈ ಎಂಟು ಕಾಲಿನ ಆಕಸ್ಮಿಕ ಆವಿರ್ಭಾವವನ್ನು ಎದುರುನೋಡಿರಲಿಲ್ಲ...ನನ್ನ ಸ್ವಭಾವದ ಸ್ವಾಸ್ಥ್ಯಕರ ನಿಯಮದಂತೆ ಈ ಅಶ್ವರಥ ಮತ್ತು ಅದರ ಸಾರಥಿಗಳನ್ನು ಯಥಾ ಸಮಯದಲ್ಲಿ ಮರೆತುಬಿಡುತ್ತಿದ್ದೆ. ಕಾರಣ, ಈ ಪರಮಾಶ್ಚರ್ಯವಾದ ಜಗತ್ತಿನಲ್ಲಿ ಇವರಾರೂ ಮನಸ್ಸಿನಲ್ಲಿಡಬೇಕಾದ ವಸ್ತುವಲ್ಲ. ಆದರೆ ಪ್ರತ್ಯೇಕ ಮನುಷ್ಯರಲ್ಲಿಯೂ ಇರುವ ಗಲಭೆ ಮಾಡುವ ಅಧಿಕಾರದ ಪರಿಮಾಣಕ್ಕಿಂತ ಹೆಚ್ಚಾಗಿ ಹಕ್ಕನ್ನು ಕಸಿದಿಟ್ಟು ಕೊಂಡಿರುವವರು ಇವರು. ಈ ಕಾರಣದಿಂದ, ನನ್ನ ಮೂರನೇ ನಂಬರಿನ ನೆರೆಮನೆಯವರನ್ನು ಎಷ್ಟೇ ದಿನವಾಗಲಿ, ಎಷ್ಟೇ ತಿಂಗಳಾಗಲಿ ಮರೆಯಬಲ್ಲೆನಾದರೂ, ಮೊದಲನೇ ನಂಬರು ಮನೆಯವರನ್ನು ಒಂದು ಘಳಿಗೆ ಮರೆಯುವುದಕ್ಕೂ ಸಾಧ್ಯವಿಲ್ಲ. ರಾತ್ರಿ ಅವನ ಲಾಯದಲ್ಲಿ ಕಟ್ಟಿಹಾಕಿರುವ ಎಂಟು, ಹತ್ತು ಕುದುರೆಗಳು ನೆಲದ ಮೇಲೆ ತಮ್ಮ ಕಾಲುಗಳಿಂದ ದಮ್ಮಸುಮಾಡುವ ಕಠೋರ ಶಬ್ದ ನನ್ನ ನಿದ್ದೆಯನ್ನು ಪೂರ್ತಿಯಾಗಿ ಹಾಳುಮಾಡಿಬಿಡುತ್ತದೆ. ಅದು ಸಾಲದೆ ಬೆಳಗಿನ ಜಾವದಲ್ಲಿ ಈ ಎಂಟು ಹತ್ತು ಕುದುರೆಗಳನ್ನು, ಎಂಟು ಹತ್ತು 'ಸಾಯಿಸ್'ಗಳು (ಮಾಲೀಸು ಮಾಡುವ ನೌಕರರು) ಭೀಕರ ಶಬ್ದಮಾಡುತ್ತ ಮಾಲೀಸು ಮಾಡುತ್ತಿದ್ದರೆ ಅದನ್ನ ತಡೆಯುವಷ್ಟು ತಾಳ್ಮೆ ಇಟ್ಟುಕೊಂಡಿರಲು ಅಸಾಧ್ಯವಾಗಿ ಹೋಗುತ್ತದೆ. ಅದಾದ ಮೇಲೆ ಅವರ ಉಡಿಯಾ (ಒರಿಸ್ಸಾ ದೇಶಸ್ಥ) ಬೇಹಾರನೂ (ಸುದ್ದಿ ತಿಳಿಸುವ ಚಾಕರ) ಮತ್ತು ಭೋಜ್‌ಪುರಿ ಬೇಹಾರನೂ ಮತ್ತು ಬಾಗಿಲು ಕಾಯುವ ತಿವಾರಿ (ಸಂಯುಕ್ತ ಪ್ರಾಂತದವ)ಯೂ ಒಟ್ಟಿಗೇ ಸೇರಿ ಸ್ವಲ್ಪವು ಸಂಯಮವಿಲ್ಲದೆ ದೊಡ್ಡ ಕರ್ಕಶದನಿಯಲ್ಲಿ ಅವಾಚ್ಯ ಶಬ್ದಗಳಲ್ಲಿ ಹರಟೆ ಕೊಚ್ಚುವುದಂತೂ ಕೇಳಿಬಿಟ್ಟರೆ ಹುಚ್ಚುಹಿಡಿದಂತಾಗುತ್ತದೆ. ಅದಕ್ಕೇ ಹೇಳಿದುದು. ಮನುಷ್ಯ ಒಬ್ಬನೇ ಆದರೂ ಅವನ ಗಲಭೆಮಾಡುವ ಯಂತ್ರ ಮಾತ್ರ ವಿಸ್ತಾರವಾದುದು. ಇದೇ ಅಲ್ಲವೇ ದೈತ್ಯನ ಲಕ್ಷಣ! ಅದರಿಂದ ಅವನಿಗೇ ಸಂಕಟವಾಗದಿದ್ದರೆ ಸರಿ. ತನ್ನ ಇಪ್ಪತ್ತು ಮೂಗಿನ ರಂಧ್ರಗಳಿಂದ ಬರುವ ಗೊರಕೆ ಶಬ್ದ ರಾವಣನ ನಿದ್ದೆಗೆಡಿಸದಿದ್ದರೂ ಅವನ ಮಗ್ಗುಲಲ್ಲಿರುವವರ ದಿಸೆ ಹೇಗಿರಬೇಕು? ಸ್ವರ್ಗದ ಪ್ರಧಾನ ಲಕ್ಷಣವೇನೆಂದರೆ ಪರಿಮಾಣದಲ್ಲೊಂದು ಸೂಕ್ತವಾದ ನಿಯಮ. ಇನ್ನೊಂದು ಕಡೆ ಯಾವ ದಾನವನ ಮೂಲಕ ಸ್ವರ್ಗದ ನಂದನವನ ನಾಶವಾಗುತ್ತಿತ್ತೋ ಅದು ಅಪರಿಮಿತಿಯ ಅನುಷ್ಠಾನದಿಂದ, ಆ ಅಪರಿಮಿತಿಯ ದಾನವನೇ ಇಂದು ಹಣದ ಥೈಲಿಗಳ ಮೇಲೆ ಸವಾರಿ ಮಾಡುತ್ತ ಮನುಷ್ಯರ ಸುಖದ ಬೀಡುಗಳನ್ನು ಆಕ್ರಮಣ ಮಾಡಿದ್ದಾನೆ.

ಅಂಥವನನ್ನು ತಪ್ಪಿಸಿಕೊಂಡು ಮುಂದಕ್ಕೆ ಹೋಗಲು ಯತ್ನಿಸುವವರ ಎದೆಯ ಮೇಲೆ ನಾಲ್ಕು ಕುದುರೆಗಳ ಕಾಲುಗಳು ತುಳಿಯಲು ಬರುತ್ತವೆ-ಅಲ್ಲದೆ ಮೇಲೆ ಕೂತಿರುವವನ ಕೆಂಡದ ಕಣ್ಣುಗಳಿಂದ ಬೆಂಕಿ ಕಾರುವುದು, ಸಾಲದ್ದಕ್ಕೆ!

ಆ ದಿನ ಸಂಜೆ ನನ್ನ ಶಿಷ್ಯರ ಸಭೆಗೆ ಇನ್ನೂ ಯಾರೂ ಬಂದಿಲ್ಲ. ನಾನಾಗ ಸಮುದ್ರದ ಏರಿಳಿತಗಳ ಸಂಬಂಧವಾದ ತತ್ತ್ವದ ಮೇಲೆ ಬರೆದಿರುವ ಪುಸ್ತಕವೊಂದನ್ನು ಓದುತ್ತಿದ್ದೆ. ಇಂಥ ಸಮಯದಲ್ಲಿ ನಮ್ಮ ಮನೆಯ ಹೊರಗೋಡೆಯ ಮೇಲೆ ಹಾರಿಕೊಂಡು ಬಂದು ಬಿತ್ತು, ಒಂದು ಟೆನ್ನಿಸ್ ಚೆಂಡು. ಚಂದ್ರನ ಆಕರ್ಷಣೆ, ಪೃಥಿವಿಯ ನಾಡಿಯ ಚಾಂಚಲ್ಯ, ವಿಶ್ವಗೀತ ಕಾವ್ಯದ ಚಿರಂತನ ಛಂದೋತತ್ತ್ವ ಮುಂತಾದುವನ್ನೆಲ್ಲ ಮರೆಸಿ ಆ ಕ್ಷಣ ನನ್ನ ಮನಸ್ಸಿಗೆ ಬಂದದ್ದೇನೆಂದರೆ-ನನ್ನೊಬ್ಬ ನೆರೆಯವನಿದ್ದಾನೆ, ಬಹಳ ಲಕ್ಷಣವಾಗಿ ಆರಾಮವಾಗೇ ಇದ್ದಾನೆ. ನನ್ನ ಪಕ್ಷಕ್ಕೆ ಮಾತ್ರ ಅವನು ಪೂರ್ತಿಯಾಗಿ ಅನಾವಶ್ಯಕನಾದರೂ ನಿರತಿಶಯವಾಗಿ ಅವಶ್ಯನೆಂದೇ ಬಂದು ಮೇಲೆ ಬೀಳುತ್ತಾನೆ. ಮರುಕ್ಷಣದಲ್ಲಿ ನೋಡಿದರೆ ನಮ್ಮ ಮನೆಯ ಏಕಮಾತ್ರ ನೌಕರ, ಅಯೋಧ್ಯಾ ಪ್ರಾಂತದವನಾದ ಬೇಹಾರನು ಏದುತ್ತ ಏದುತ್ತ ಓಡಿಕೊಂಡು ಬಂದು ಆ ಚೆಂಡನ್ನು ಎತ್ತಿಕೊಂಡು ಪಕ್ಕದ ಮನೆಯ ಕಡೆ ಓಡಿದ. ನನಗಿರುವ ಈ ಒಬ್ಬನೇ ಆಳು ನಾನು ಹೇಳುವ ಎಷ್ಟೋ ಕೆಲಸಗಳನ್ನು ಮಾಡಲು "ಒಬ್ಬನೇ ನಾನು ಎಷ್ಟು ಅಂತ ಮಾಡುವುದು ಬುದ್ಧೀ?" ಎಂದು ನೆಪಹೇಳಿ ಕಳ್ಳತಪ್ಪಿಸಿಕೊಳ್ಳುತ್ತಾನೆ. ಇಂಥವನೀಗ ಯಾವ ದರದಿನಿಂದ ಆ ಚೆಂಡನ್ನೆತ್ತಿಕೊಂಡು ಅಷ್ಟು ಸಂಭ್ರಮದಿಂದ, ಆತುರದಿಂದ ಏದುತ್ತ ಪಕ್ಕದ ಮನೆ ಕಡೆ ಓಡುತ್ತಿರುವುದು? ನನಗೆ ಆಮೇಲೆ ತಿಳಿದುಬಂತು, ಒಂದೊಂದು ಸಲ ಚೆಂಡನ್ನೆತ್ತಿ ಎಸೆಯಲು ಅವನಿಗೆ ನಾಲಕ್ಕು ಕಾಸು ದೊರೆಯುವುದೆಂಬ ಕರಾರಾಗಿತ್ತಂತೆ!

ಆಗ ಕಂಡುಬಂತು-ಈ ನೆರೆಮನೆಯ ದೈತ್ಯನು ನನ್ನ ಶಾಂತಿಯನ್ನೊಂದೇ ಅಲ್ಲ ಮುರಿದಿರುವುದು. ನನ್ನ ಶಾಸ್ತಿ, ನನ್ನ ನಿಯಮಗಳಷ್ಟೇ ಅಲ್ಲ ಮುರಿದಿರುವುದು; ನನ್ನ ಅನುಚರ, ಪರಿವಾರದವರ ಮನಸ್ಸನ್ನೂ ಮುರಿದಿದ್ದಾನೆ. ನನ್ನ ಕೀಳ್ತನದ ಭಾವನೆ ಈ ಅಯೋಧ್ಯಾ ಬೇಹಾರನ ಉದಾಸೀನತೆಯಿಂದ ದಿನ ದಿನಕ್ಕೂ ಹೆಚ್ಚಾಗುತ್ತಿರುವುದು ಆಶ್ಚರ್ಯವಲ್ಲ. ಆದರೆ ನನ್ನ ಶಿಷ್ಯ ದಳದ ಮುಖ್ಯ ಅಂಗವಾದ ಕಾನಾಯಿಲಾಲನೇ ಆ ಪಕ್ಕದ ಮನೆಯ ಆಕರ್ಷಣಕ್ಕೆ ಸಿಕ್ಕಿಹಾಕಿಕೊಂಡುದಂತೂ ಅತ್ಯಂತ ಅಸಹನೀಯ! ನನ್ನ ಬಗ್ಗೆ ಅವನಿಗಿದ್ದ ನಿಷ್ಠೆ, ಕೇವಲ ನಾನು ಅವನಿಗೊಬ್ಬ ಉಪಕರಣವೆಂದಲ್ಲ, ಅಂತಃಕರಣದ ಎಳೆತವೆಂದು. ಈ ಭಾವನೆಯಿಂದ ನಾನು ನಿಶ್ಚಿಂತನಾಗಿದ್ದೆ. ಇಂತಹ ಸಮಯದಲ್ಲಿ ನಾನು ಒಮ್ಮೆ ಲಕ್ಷ್ಯವಿಟ್ಟು ನೋಡಿದರೆ,

ಈ ಕಾನಾಯಿಲಾಲನು ನನ್ನ ಅಯೋಧ್ಯಾ ಬೇಹಾರನಿಗಿಂತಲೂ ವೇಗವಾಗಿ ಓಡಿ ಆ ಚೆಂಡನ್ನೆತ್ತಿಕೊಂಡು ಪಕ್ಕದ ಮನೆ ಕಡೆ ಓಡಿದ. ನನಗಾಗ ತಿಳಿದುಬಂತು-ಈ ನೆಪದಿಂದ ನಮ್ಮ ನೆರೆಯುವನಾದ ಆ ಧನಿಕನ ಸಂಗಡ ಪರಿಚಯ ಮಾಡಿಕೊಳ್ಳೋಣವೆಂದು ಅವನ ಅಭಿಲಾಷೆ. ಆಗ ನನಗೆ ಸಂದೇಹವಾಯಿತು-ಇವನ ಮನಸ್ಸಿನ ಭಾವವಂತೂ ಮೈತ್ರೇಯಿಯ ಮನಸ್ಸಿನಂತಲ್ಲ-ಬರೇ ಅಮೃತದಿಂದ ಅವನ ಹೊಟ್ಟೆ ತುಂಬುವುದಿಲ್ಲ.

ನಾನು ಮೊದಲನೇ ನಂಬರವನ ಬಾಬುಗಿರಿಯನ್ನು ಅತಿ ತೀಕ್ಷ್ಣವಾಗಿ ನಿಂದಿಸಲು ಯತ್ನಿಸಿದೆ. ಅದನ್ನು ಆದಷ್ಟು ಮಟ್ಟಿಗೆ ವಿದ್ರೂಪಗೊಳಿಸಲು ತೊಡಗಿದೆ. ಬರೇ ವೇಷ, ಭೂಷಣಗಳಿಂದಲೇ ಮನದ ಶೂನ್ಯತೆಯನ್ನು ಮುಚ್ಚಿಕೊಳ್ಳಹೋಗುವುದು ಬಣ್ಣದ ಮೋಡಗಳಿಂದಲೇ ಆಕಾಶವನ್ನು ಮುಚ್ಚಲು ಯತ್ನಿಸಿದಂತೆ. ಒಂದು ಸಲ ಗಾಳಿ ಬೀಸಿದರೆ ಸಾಕು, ಎಲ್ಲಿರುತ್ತವೆ ಮೋಡಗಳು? ಆಕಾಶದ ಶೂನ್ಯತೆ ಹೊರಗೆ ಕಾಣಬರುತ್ತದೆ. ಕಾನಾಯಿಲಾಲನು ಒಂದು ದಿನ ಪ್ರತಿವಾದ ಮಾಡುತ್ತ, ಆಳನ್ನ ಹಾಗೆ ಒಂದೇಸಲ ಕಡೆಗಣಿಸುವ ಹಾಗಿಲ್ಲ, ಬಿ.ಎ. ಪಾಸು ಮಾಡಿದ್ದಾನೆ, ಗೊತ್ತೇ? ಅಂದ. ಗೊತ್ತಾಯಿತು. ಕಾನಾಯಿಯೂ ಕೂಡ ಬಿ.ಎ. ಪಾಸು ಮಾಡಿದ್ದಾನೆ. ಆ ಕಾರಣದಿಂದ ಆ ಡಿಗ್ರಿಯ ಬಗ್ಗೆ ನಾನೇನೂ ಹೇಳಲಾಗದೆ ಸುಮ್ಮನಿದ್ದೆ.

ಮೊದಲನೇ ನಂಬರಿನವನ ಪ್ರಧಾನ ಗುಣ ವಿಶೇಷಗಳು ಶಬ್ದರೂಪಿನವು. ಆತನು ಮೂರು ವಾದ್ಯಗಳನ್ನು ಬಾರಿಸುವುದನ್ನ ಕಲಿತಿದ್ದಾನೆ. ಕಾರ್ನೆಟ್, ಏಸ್‌ರಾಜ್ ಮತ್ತು ಪಿಟೀಲು. ಮನಸ್ಸಿಗೆ ಬಂದಾಗೆಲ್ಲ ಬಾರಿಸುತ್ತಿರುತ್ತಾನೆ. ಆಗಾಗ ನನಗೆ ಅದರ ಪರಿಚಯವಾಗುತ್ತಿರುತ್ತದೆ. ಸಂಗೀತದ ದನಿಯ ಬಗ್ಗೆ ನನ್ನನ್ನೇ ಸುರಾಚಾರ್ಯನೆಂದುಕೊಂಡು ಗರ್ವಿಸುವುದಿಲ್ಲ. ಆದರೆ ನನ್ನ ಅಭಿಪ್ರಾಯದಲ್ಲಿ ಹಾಡು ಉಚ್ಚದರ್ಜೆಯ ವಿದ್ಯೆಯಲ್ಲ. ಭಾಷೆಯ ಅಭಾವದಿಂದ ಮನುಷ್ಯ ಮೂಕನಾಗಿದ್ದಾಗಲೇ ಗಾನದ ಆವಿರ್ಭಾವವಾದದ್ದು. ಯೋಚನೆಮಾಡಲಿಕ್ಕಾಗದಿದ್ದಾಗ ಚೀತ್ಕಾರಮಾಡುತ್ತಿದ್ದ. ಇವತ್ತಿಗೂ ಅಂದಿನ ಆದಿಮ ಅವಸ್ಥೆಯಲ್ಲಿರುವ ಮನುಷ್ಯರು ಸುಮ್ಮಸುಮ್ಮನೆ ಶಬ್ದ ಮಾಡಲು ಇಷ್ಟಪಡುತ್ತಾರೆ. ಆದರೆ ಒಂದು ವಿಷಯ ಕಂಡುಬಂತು. ಪಕ್ಕದ ಮನೆಯಿಂದ ಪಿಟೀಲೋ, ಏಸ್‌ರಾಜಿನದೋ ತಾನದ ಶಬ್ದ ಕಿವಿಗೆ ಬಿದ್ದೊಡನೆ ನನ್ನ ಶಿಷ್ಯಮಂಡಲಿಯಲ್ಲಿರುವವರಲ್ಲಿ ಗಣಿತ ಅಥವಾ ನ್ಯಾಯಶಾಸ್ತ್ರದ ಅತ್ಯಂತ ಸ್ವಾರಸ್ಯವಾದ ಅಧ್ಯಾಯದಲ್ಲೂ ಮನಸ್ಸಿಡಲು ಆಗದಂಥವರು ನಾಲ್ಕೈದು ಜನ ಹುಡುಗರಿದ್ದಾರೆ.

ನನ್ನ ತಂಡದವರಲ್ಲೆಷ್ಟೋ ಜನ ಈ ರೀತಿಯಾಗಿ ಪಕ್ಕದ ಮನೆಯ ಆಕರ್ಷಣೆಯ ಕಡೆ ವಾಲುವುದಕ್ಕೆ ಆರಂಭವಾದಾಗ ಒಂದು ದಿನ ನನ್ನ ಹೆಂಡತಿ

ಅನಿಲ ಬಂದು "ಮಗ್ಗುಲ ಮನೆಯವರ ಗಲಭೆ ಸಹಿಸಲಾರದಷ್ಟು ಹೆಚ್ಚಾಗುತ್ತಿದೆ. ಈಗ ನಾವು ಬೇರೆ ಯಾವುದಾದರೂ ಮನೆ ಹುಡುಕಿಕೊಂಡು ಹೋದರೆ ಒಳ್ಳೆಯದು" ಎಂದಳು.

ನನಗೆ ಬಹಳ ಆನಂದವಾಗಿ ಹೋಯಿತು. ಆಗ ನನ್ನ ಶಿಷ್ಯರನ್ನ ಕುರಿತು "ನೋಡ್ರೋ, ನೋಡಿ, ನೀವು ಇದ್ದೀರಿ ಗಂಡಸರು! ಹೆಂಗಸಿಗೆ ಎಂತಹ ಸಹಜವಾದ ತಿಳುವಳಿಕೆ ಇದೆ ನೋಡಿ. ಪ್ರಮಾಣಗಳಿದ್ದು ನಂಬತಕ್ಕಂಥ ವಿಷಯಗಳನ್ನು ಅವರು ನಂಬದಿರಬಹುದು. ಆದರೆ ಪ್ರಮಾಣಗಳಿಲ್ಲದೆಯೇ ತಿಳಿದುಕೊಳ್ಳಬಹುದಾದಂಥ ವಿಷಯಗಳು ಅವರಿಗೆ ಸಹಜವಾಗಿ ಗೊತ್ತಾಗುವಷ್ಟು ಗಂಡಸರಿಗೆ ಸಾಧ್ಯವಿಲ್ಲ" ಎಂದೆ.

ಕಾನಾಯಿಲಾಲನದಕ್ಕೆ ನಗುತ್ತ "ಅಲ್ಲ, ಸಾರ್, ದೆವ್ವ, ಬ್ರಹ್ಮರಾಕ್ಷಸರಂಥವರೂ ಬ್ರಾಹ್ಮಣರ ಪಾದ ಧೂಳಿಗೆ ಬಾಗಿ ಬಲಿಷ್ಠವಾಗುತ್ತಾರಂತೆ... ಇನ್ನು ಹೆಂಡತಿಯಾದವಳು ಪತಿದೇವತೆಯ ಪಾದಪೂಜೆಯ ಪುಣ್ಯ ಫಲ ಪಡೆಯುವುದಿಲ್ಲವೇ" ಹೀಗೆಲ್ಲಾ ವ್ಯಾಖ್ಯಾನಮಾಡಿ ಉಳಿದವರನ್ನೆಲ್ಲ ನಗಿಸಿಬಿಟ್ಟ.

ಅನಿಲ ಮೂರುನಾಲ್ಕು ಬಾರಿ ಮನೆ ಬದಲಾಯಿಸುವ ಮಾತನ್ನೆತ್ತಿದಳು, ನನಗೂ ಅದು ಇಷ್ಟವಾಗಿತ್ತು. ಆದರೆ ಕಲಿಕತ್ತೆಯ ಓಣಿ, ಓಣಿಗಳಲ್ಲಿ ಬಾಡಿಗೆಮನೆಯನ್ನು ಹುಡುಕಿಕೊಂಡು ಅಲೆಯುವುದಕ್ಕೆ ಸಮಯವೆಲ್ಲಿಂದ ತರಲಿ? ಅದಂತೂ ನನ್ನ ಕೈಲಾಗುವ ಕೆಲಸವಲ್ಲ. ಹೀಗೆ ತಳ್ಳಿಕೊಂಡು ಹೋಗುತ್ತಿರುವಾಗ ಒಂದು ದಿನ ಸಂಜೆ ಕಂಡುಬಂತು–ಕಾನಾಯಿಲಾಲನೂ ಮತ್ತು ಸತೀಶನೂ ಮೊದಲನೆ ನಂಬರಿನಲ್ಲಿ ಟೆನ್ನಿಸ್ ಆಡತೊಡಗಿದ್ದರು. ಆಮೇಲೆ ಸುದ್ದಿ ಕೇಳಬಂತು. ಯತೀಲಾಲನೂ ಹರೇನನೂ ಮೊದಲನೇ ನಂಬರಿನ ಸಂಗೀತ ಸಭೆಯಲ್ಲಿ ಭಾಗವಹಿಸುತ್ತಿದ್ದಾರಂತೆ. ಒಬ್ಬ ಬಾಕ್ಸ್ ಹಾರ್‌ಮೋನಿಯಮ್ ನುಡಿಸುತ್ತಾನೆ. ಇನ್ನೊಬ್ಬ ತಬಲಾ ಬಾರಿಸುತ್ತಾನೆ. ಅಲ್ಲದೆ ಅರುಣನು ಅಲ್ಲಿ ಹೋಗಿ ಕಾಮಿಕ್ (ನಕಲಿ) ಹಾಡುಗಳನ್ನು ಹಾಡಿ ಬಹಳ ಹೊಗಳಿಕೆ ಗಳಿಸಿದ್ದಾನೆ. ಇವರನ್ನು ನಾನು ಐದಾರು ವರುಷಗಳಿಂದ ಬಲ್ಲೆ. ಆದರೆ ಇವರ ನಡುವೆ ಇವೆಲ್ಲ ಗುಣಗಳಿದ್ದುವೆಂಬುದು ನನ್ನ ಗಮನಕ್ಕೇ ಬಂದಿರಲಿಲ್ಲ. ನನಗೆ ಆ ಸಂದೇಹ ಕೂಡ ಇರಲಿಲ್ಲ. ವಿಶೇಷವಾಗಿ ನಾನಂದುಕೊಂಡಿದ್ದುದು ಅರುಣನಿಗೆ ಹೆಚ್ಚು ಇಷ್ಟವಾದ ವಿದ್ಯೆ, ತುಲನಾತ್ಮಕವಾದ ಧರ್ಮತತ್ತ್ವ ಜಿಜ್ಞಾಸೆ. ಅವನು ನಕಲಿಶಾಮನೆಂದು ನನಗೆ ಹೇಗೆ ಗೊತ್ತಾಗಬೇಕು?

ನಿಜವಾದ ಮಾತು ಹೇಳಬೇಕೆಂದರೆ, ನಾನು ಈ ಮೊದಲನೇ ನಂಬರಿನವನನ್ನು ಎಷ್ಟು ತಿರಸ್ಕರಿಸುತ್ತಿದ್ದೆನೋ ಅಷ್ಟೇ, ಒಳಗೊಳಗೇ, ಅವನನ್ನ ಕಂಡರೆ ಅಸೂಯೆಯೂ ಪಡುತ್ತಿದ್ದೆ. ನಾನು ಯೋಚನೆ ಮಾಡಬಲ್ಲವನು, ವಿಚಾರ ಮಾಡಬಲ್ಲವನು, ದೊಡ್ಡ ದೊಡ್ಡ ಸಮಸ್ಯೆಗಳನ್ನು ಕೂಲಂಕಷವಾಗಿ ಪರೀಕ್ಷಿಸಿ ಸಮಾಧಾನ ಹೇಳಬಲ್ಲೆ.

ಮಾನಸಿಕ ಸಂಪತ್ತಿನಲ್ಲಿ ಸೀತಾಂಶುಮೌಲಿಯನ್ನು ನನಗೆ ಸರಿಸಮಾನನೆಂದು ಎಣಿಸುವುದಂತೂ ಅಸಂಭವ. ಇಷ್ಟಾದರೂ ಈ ಮನುಷ್ಯನನ್ನು ನಾನು ಈರ್ಷ್ಯೆಯಿಂದ ಕಾಣಲು ತೊಡಗಿದೆ. ಅದು ಹೇಗೆ ಸಾಧ್ಯವಾಯಿತು ಎಂದು ಬಿಚ್ಚಿ ಹೇಳಿದ ಪಕ್ಷದಲ್ಲಿ ಜನ ನಗಬಹುದು. ಬೆಳಗ್ಗೆ ಹೊತ್ತು ಈ ಸೀತಾಂಶುವು ಒಂದು ಹಿಡಿತಕ್ಕೆ ಸಿಗದಂಥ ಮೊಂಡುಕುದುರೆಯನ್ನು ಏರಿ ಸವಾರಿ ಹೊರಡುತ್ತಿದ್ದ. ಅದೆಂಥ ಆಶ್ಚರ್ಯದ ನಿಪುಣತೆಯಿಂದ ಅವನು ಕಡಿವಾಣವನ್ನು ಹಿಡಿದೆಳೆದುಕೊಂಡು ಕುದುರೆಯನ್ನು ತನ್ನ ಇಷ್ಟಾನುಸಾರ ವರ್ತಿಸುವಂತೆ ಮಾಡುತ್ತಿದ್ದನೋ! ಈ ನೋಟವನ್ನು ನಾನು ನಿತ್ಯವೂ ನೋಡುತ್ತ ಭಾವಿಸುತ್ತಿದ್ದೆ–ಆಹಾ, ನಾನೂ ಈ ರೀತಿಯಾಗಿ ಅನಾಯಾಸದಿಂದ ಕುದುರೆ ಸವಾರಿ ಮಾಡಬಲ್ಲವನಾದರೆ! ನನ್ನಲ್ಲಿ ಅಭಾವವಿರುವ ಪಟುತ್ವವೆಂಬ ವಸ್ತುವಿನ ಮೇಲೆ ನನ್ನೊಳಗೊಳಗೇ ತಡೆಯಲಾರದ ಲೋಭವಿತ್ತು. ನನಗೆ ಗಾನದ ಸ್ವರ ಸರಿಯಾಗಿ ತಿಳಿಯುತ್ತಿರಲಿಲ್ಲ. ಆದರೂ ಎಷ್ಟು ದಿನ ಕಿಟಕಿಯ ಬಳಿ ನಿಂತು ಸೀತಾಂಶು ಏಸ್‌ರಾಜ್ ನುಡಿಸುವುದನ್ನು ಕೇಳಿದ್ದೇನೆ. ಈ ವಾದ್ಯದ್ದೊಂದು ತಡೆಯಿಲ್ಲದ ಸೌಂದರ್ಯಮಯವಾದ ಪ್ರಭಾವವು ನನ್ನ ಮನಸ್ಸಿಗೆ ಅತ್ಯಂತ ಮನೋಹರವೆಂದು ತೋರಿತು. ಆ ವಾದ್ಯ ಹೇಗೆ ಪ್ರೇಯಸಿಯಾದ ಹೆಣ್ಣಿನಂತೆ ಅವನಿಗೆ ಮನಸೋತು ಪೂರ್ತಿಯಾಗಿ ವಶವಾಗಿ ಹೋಗಿಬಿಟ್ಟಿದೆ ಎನ್ನಿಸುತ್ತಿತ್ತು. ಅದು ತನ್ನ ಸ್ವರಸಂಪತ್ತನ್ನೆಲ್ಲ ಇಷ್ಟದಿಂದ ಅವನಿಗೆ ಮಾರಿಕೊಂಡುಬಿಟ್ಟಿದೆಯೆಂದು ತೋರಿತು. ವಸ್ತು ಸಾಮಗ್ರಿ, ಮನೆ, ಭೂಮಿ, ಜನ, ಜಂತುಗಳೆಲ್ಲದರ ಮೇಲೂ ಈ ಸೀತಾಂಶುವಿನ ಸಹಜ ಪ್ರಭಾವವು ಮಹತ್ತಾದೊಂದು ಸೊಬಗನ್ನು ಹರವುತ್ತಿತ್ತು. ಈ ವಸ್ತು ಯಾವುದೋ ಗೊತ್ತಿಲ್ಲ–ಅನಿರ್ವಚನೀಯ! ಇದು ನನ್ನಂಥವರಿಗಂತೂ ಅತ್ಯಂತ ದುರ್ಲಭ ವಸ್ತುವೆಂದು ನನ್ನ ಮನಸ್ಸಿನಲ್ಲಿ ಅಂದುಕೊಳ್ಳದೆ ಇರಲಾಗುತ್ತಿರಲಿಲ್ಲ. ನನಗೆ ಅನ್ನಿಸುತ್ತಿತ್ತು, ಪೃಥಿವಿಯಲ್ಲಿ ಯಾವುದನ್ನೂ ಏತಕ್ಕಾಗಿಯೂ ಬೇಡಿಕೊಳ್ಳುವುದು ಈ ಮನುಷ್ಯನಿಗೆ ಅಗತ್ಯವಿಲ್ಲ. ಎಲ್ಲ ತಾವಾಗಿಯೇ ಅವನ ಕಾಲ ಬಳಿ ಬಂದು ಬೀಳುತ್ತವೆ. ಅವನು ಬೇಕೆಂತಲೇ ತನ್ನಿಷ್ಟ ಬಂದ ಕಡೆ ಹೋಗಿ ಕೂತರೂ ಅವುಗಳು ಅಲ್ಲೇ ಬಂದು ಅವನಿಗೆ ಆಸನ ಹರವುತ್ತವೆ.

ಅದಕ್ಕಾಗೇ ನನ್ನ ಶಿಷ್ಯ ಮಂಡಲಿಯವರಲ್ಲಿ ಒಬ್ಬೊಬ್ಬರಾಗಿ ಹೊರಟು ಅನೇಕರು ಮೊದಲನೇ ನಂಬರಿನಲ್ಲಿ ಟೆನ್ನಿಸ್ ಆಡುವಿಕೆ, ಕನ್ಸರ್ಟ್ (ಸಂಗೀತ ಮೇಳ)ದಲ್ಲಿ ಭಾಗವಹಿಸುವಿಕೆ–ಹೀಗೆಲ್ಲ ಮಾಡಲು ಶುರುಮಾಡಿದಾಗ ಈ ಸ್ಥಳ ಬಿಟ್ಟಹೊರತು ಈ ಬಡಪಾಯಿಗಳನ್ನು ಉದ್ಧಾರಮಾಡಲು ಬೇರೆ ಉಪಾಯವಿಲ್ಲವೆಂದುಕೊಂಡೆ. ದಳ್ಳಾಳಿಯೊಬ್ಬ ಬಂದು–ನಮಗೆ ಅನುಕೂಲವಾಗುವಂಥ ಅಚ್ಚುಕಟ್ಟಾದ ಮನೆ ಬರಾನಗರ–ಕಾಶೀಪುರಗಳಿಗೆ ಸಮೀಪವಾಗಿ ಒಂದು ಕಡೆ ಸಿಗುವ ಹಾಗಿದೆಯೆಂದು ಸುದ್ದಿ ಕೊಟ್ಟ. ನಾನು

ಒಪ್ಪಿಕೊಂಡೆ. ಆಗ ಬೆಳಗ್ಗೆ ಒಂಬತ್ತೂವರೆ ಘಂಟೆ. ಹೆಂಡತಿಯನ್ನು ಸಿದ್ಧಮಾಡಿಕೊಳ್ಳೆಂದು ಹೇಳಲು ಹೋದೆ. ಅವಳನ್ನು ಉಗ್ರಾಣದಲ್ಲೂ ಕಾಣಲಿಲ್ಲ, ಅಡಿಗೆ ಮನೆಯಲ್ಲೂ ಇಲ್ಲ. ಆಮೇಲೆ ನೋಡಿದರೆ, ಮಲಗುವ ಮನೆಯಲ್ಲಿ ಕಿಟಕಿಯ ಸಲಾಕೆಗಳ ಮೇಲೆ ತಲೆ ವಾಲಿಸಿಕೊಂಡು ಮೌನವಾಗಿ ನಿಂತಿದ್ದಳು. ನನ್ನನ್ನ ನೋಡಿದ್ದೇ ಸರಿಯಾಗಿ ನೇರವಾಗಿ ನಿಂತುಕೊಂಡಳು. "ಮನೆ ಸಿಕ್ಕಿದೆ. ನಾಳಿದ್ದೇ ಮನೆ ಖಾಲಿಮಾಡಿ ಹೊರಡೋಣ" ಎಂದೆ.

"ಬೇಡ, ಇನ್ನು ಹದಿನೈದು ದಿನ ಮಾತ್ರ ತಡೆದುಕೊಳ್ಳಿ" ಎಂದಳು.

"ಯಾಕೆ?"

"ಸರೋಜನ ಪರೀಕ್ಷೆಯ ಫಲಿತಾಂಶ ಇನ್ನು ಕೆಲವು ದಿನಗಳೊಳಗಾಗೇ ಹೊರಗೆ ಬರುತ್ತೆ. ಅದರ ಬಗ್ಗೆ ಮನಸ್ಸು ಉದ್ವಿಗ್ನವಾಗಿದೆ. ಈ ಕೆಲವು ದಿನಗಳ ಮಧ್ಯೆ ಮನೆ ಬದಲಾಯಿಸುವುದಕ್ಕೆ ನನಗೆ ಮನಸ್ಸು ಬರುವುದಿಲ್ಲ."

ನನಗೆ ಏನು ಹೇಳಲೂ ತೋಚಲಿಲ್ಲ. ಬೇರೆಲ್ಲ ವಿವಿಧ ಸಂಗತಿಗಳ ಮಧ್ಯೆ ನನ್ನ ಹೆಂಡತಿಯೊಂದಿಗೆ ನಾನು ಪ್ರಸ್ತಾಪ ಮಾಡದಿದ್ದ ವಿಷಯವಿದೊಂದೇ... ಹೇಗೋ ಸವರಿಸಿಕೊಂಡು ಮನೆ ಬದಲಾಯಿಸುವ ನಿರ್ಧಾರವನ್ನು ಕೆಲವು ದಿನಗಳ ಮಟ್ಟಿಗೆ ಮುಂದೆ ಹಾಕಿದೆ. ಈ ಮಧ್ಯೆ ಇದ್ದಕ್ಕಿದಂತ ಸುದ್ದಿ ಬಂತು: ಸೀತಾಂಶು ಕ್ಷಿಪ್ರದಲ್ಲೇ ದಕ್ಷಿಣ ಭಾರತದ ಕಡೆ ಪ್ರವಾಸ ಹೊರಡುತ್ತಾನೆ. ಇನ್ನು ಮೇಲಿಂದ ಎರಡನೇ ನಂಬರು ಮನೆಯ ಮೇಲೆ ಹಿಡಿದಿದ್ದ ದೊಡ್ಡ ಗ್ರಹಣ ಬಿಟ್ಟುಹೋಗುತ್ತದೆ.

ಅದೃಷ್ಟನಾಟಕದ ಐದನೇ ಅಂಕದ ಕಡೆಯ ಭಾಗ ಹಠಾತ್ತಾಗಿ ದೃಷ್ಟವಾಗಿ ಮೇಲೆ ಬರುತ್ತಿರುವಂತಿತ್ತು. ಹಿಂದಿನ ದಿನ ನನ್ನ ಹೆಂಡತಿ ತನ್ನ ಮಲತಾಯಿಯ ಮನೆಗೆ ಹೋಗಿದ್ದಳು. ಇವತ್ತು ಮನೆಗೆ ಮರಳಿ ಬಂದು ತನ್ನ ಕೋಣೆಯ ಬಾಗಿಲನ್ನು ಮುಚ್ಚಿಕೊಂಡಳು. ಅವಳಿಗೆ ಗೊತ್ತಿಲ್ಲದೆ ಇಲ್ಲ. ಇಂದು ರಾತ್ರಿ ನಮ್ಮ ದಳಕ್ಕೆ ಬೆಳದಿಂಗಳೂಟ. ಅದರ ಬಗ್ಗೆ ಅವಳೊಡನೆ ಮಾತಾಡಬೇಕೆಂದು ಬಾಗಿಲನ್ನ ಬಡಿದೆ. ಮೊದಲು ಶಬ್ದವೇನೂ ಬರಲಿಲ್ಲ. ಆಗ "ಅನೂ" ಎಂದು ಕೂಗಿದೆ. ಒಂದೆರಡು ಘಳಿಗೆಗಳಾದ ಮೇಲೆ ಬಾಗಿಲು ತೆಗೆದಳು. ನಾನು "ಇವತ್ತು ರಾತ್ರಿ ಅಡಿಗೆ ಏನೇನು ಮಾಡಬೇಕು ಎನ್ನುವುದೆಲ್ಲ ನಿಶ್ಚಯ ಮಾಡಿದ್ದೀ ತಾನೆ?" ಎಂದೆ.

ಅವಳು ಜವಾಬೇನೂ ಕೊಡದೆ ತಲೆಯನ್ನು ತೂಗಿ ನಿಶ್ಚಯವಾಗಿದೆ ಎಂಬ ಸೂಚನೆ ಕೊಟ್ಟಳು.

ನಾನಾಗ "ನೋಡು, ನೀನು ಕೈಯಾರೆ ಮಾಡಿದ ಮೀನಿನ ಕಚೋರಿ ಮತ್ತು ವಿಲಾಯಿತಿ ನೆಲ್ಲಿಕಾಯಿಯ ಚಟ್ನಿ ಅವರಿಗೆಲ್ಲ ತುಂಬ ಇಷ್ಟ. ಮರೀ ಬೇಡ"–ಎಂದೆ. ಹೀಗೆ ಹೇಳಿದ್ದೇ ಹೊರಗೆ ಬಂದೆ. ಅಲ್ಲಿ ಕಾನಾಯಿ ಬಂದಿದ್ದ.

"ಕಾನಾಯಿ, ಇವತ್ತು ರಾತ್ರಿ ಬೆಳದಿಂಗಳೂಟ. ನೀವೆಲ್ಲ ಸ್ವಲ್ಪ ಮುಂಚಿತವಾಗಿಯೇ ಬಂದುಬಿಡಿ" ಎಂದೆ.

ಕಾನಾಯಿಯು ಅಚ್ಚರಿ ತೋರುತ್ತ ಮೆಲ್ಲಗೆ "ಏನು ಮಾತಿದು! ಇವತ್ತೂ ಕೂಡ ನಿಮ್ಮ ಸಭೆ ಸೇರಬೇಕೆ?" ಎಂದ.

"ಯಾಕೆ ಸೇರಕೂಡದು? ಇವತ್ತೇನು ವಿಶೇಷ? ಎಲ್ಲ ನಿಶ್ಚಿತವಾಗಿದೆ. ಮ್ಯಾಕ್ಸಿಂಗಾರ್ಕಿಯ ಹೊಸ ಕಥೆಯ ಮೇಲೆ ವಿಮರ್ಶೆ, ಬರ್ಗ್‌ಸನ್ನ್ ಮೇಲೆ ಬರ್‌ಟ್ರನ್ಡ್ ರಸೆಲ್ಲನ ಟೀಕೆ, ಮತ್ತು ಊಟಕ್ಕೆ ಮೀನಿನ ಕಚೋರಿ, ವಿಲಾಯಿತಿ ನೆಲ್ಲೀಕಾಯಿಯ ಚಟ್ನಿ ಕೂಡ–ನಿಮ್ಮತ್ತಿಗೆ ಕೈ ತಯಾರಿ!" ಎಂದೆ.

ಕಾನಾಯಿ ಮೂಕನಾದವನಂತೆ ನನ್ನ ಕಡೆ ಸುಮ್ಮನೆ ಎವೆಯಿಕ್ಕದೆ ನೋಡ ತೊಡಗಿದ. ಸ್ವಲ್ಪ ಹೊತ್ತಾದ ಮೇಲೆ "ಅದ್ವೈತಬಾಬು, ನನ್ನ ಮಾತು ಕೇಳಿ, ಇವತ್ತು ಬೇಡ" ಎಂದ.

ಕಡೆಗೆ ಪ್ರಶ್ನೆಮಾಡಿದ್ದರ ಮೇಲೆ ತಿಳಿದುಬಂದುದರ ಪ್ರಕಾರ ನನ್ನ ಭಾವಮೈದುನ ಸರೋಜನು ಹಿಂದಿನ ದಿನ ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದನಂತೆ. ಪರೀಕ್ಷೆಯಲ್ಲಿ ಫೇಲಾಗಿ ಮಲತಾಯಿಯ ಬಾಯಿಂದ ಅವಮಾನಕರವಾಗಿ ಬೈಸಿಕೊಂಡು ಸಹಿಸಲಾಗದೆ ಕೊರಳಿಗೆ ಚಾದರದಿಂದ ಉರುಲು ಹಾಕಿಕೊಂಡಿದ್ದ.

"ನಿನಗೆ ಹೇಗೆ ಗೊತ್ತಾಯಿತು ಇದು?" ಎಂದು ಕೇಳಿದೆ.

"ಮೊದಲನೇ ನಂಬರು ಮನೆಯಲ್ಲಿ ಗೊತ್ತಾಯಿತು" ಎಂದ ಕಾನಾಯಿ. ಮೊದಲನೆ ನಂಬರ ಮನೆ? ವಿವರವಿಷ್ಟು–ಸಂಜೆಯ ವೇಳೆ ಅನಿಲಳಿಗೆ ಸುದ್ದಿ ತಿಳಿದಾಗ ಅವಳು ಗಾಡಿಯನ್ನು ಕರೆಸುವುದಕ್ಕೆ ಕಾಯದೆ ತಾನೇ ಅಯೋಧ್ಯನನ್ನು ಸಂಗಡ ಕರೆದುಕೊಂಡು ರಸ್ತೆಯ ನಡುವೆಯಿಂದಲೇ ಗಾಡಿಯನ್ನು ಬಾಡಿಗೆ ತೆಗೆದುಕೊಂಡು ಮಲತಾಯಿಯ ಮನೆಗೆ ಹೋಗಿದ್ದಳು. ಅಯೋಧ್ಯನ ಮೂಲಕ ಆ ರಾತ್ರಿ ಸೀತಾಂಶುವು ಈ ಸುದ್ದಿ ತಿಳಿದುಕೊಂಡು ಆ ಕ್ಷಣ ಅಲ್ಲಿಗೆ ಹೋಗಿ ಪೊಲೀಸಿನವರನ್ನು ತಣ್ಣಗೆ ಮಾಡಿ ಸ್ವತಃ ಹೋಗಿ ಸ್ಮಶಾನದಲ್ಲಿ ಕಡೆಯವರೆಗೂ ನಿಂತಿದ್ದು ಶವಸಂಸ್ಕಾರ ಮಾಡಿಸಿಬಿಟ್ಟು ಬಂದಿದ್ದನಂತೆ!

ನಾನಾ ಚಿಂತೆಗಳಿಂದ ಕಂಗೆಟ್ಟು ನಾನು ನನ್ನ ಹೆಂಡತಿಯ ಕೋಣೆಗೆ ಹೋದೆ. ನಾನಂದುಕೊಂಡಿದ್ದೆ, ಈಗಲೂ ಅವಳು ತನ್ನ ಮಲಗುವ ಮನೆಯಲ್ಲೇ ಬಾಗಿಲು ಹಾಕಿಕೊಂಡು ಇದ್ದಾಳೆಂಬುದಾಗಿ. ಆದರೆ ಇಲ್ಲ. ಅವಳಾಗ ಉಗ್ರಾಣದಲ್ಲಿ ನೆಲ್ಲೀಕಾಯಿ ಚಟ್ನಿಗಾಗಿ ಸನ್ನಾಹ ಮಾಡಿಕೊಳ್ಳುತ್ತಿದ್ದಳು. ಆಗ ಅವಳ ಮುಖವನ್ನು ಗಮನಿಸಿ ನೋಡಿದಾಗ ಒಂದೇ ಒಂದು ರಾತ್ರಿಯಲ್ಲಿ ಅವಳ ಬಾಳುವೆಯ ರಸವೆಲ್ಲ ಹೀರಿಹೋದಂತೆ ಭಾವನೆಯಾಯಿತು. ನಾನು ದೂರುವ ದನಿಯಲ್ಲಿ "ನನಗೇಕೆ

ವಿಚಾರವೇ ತಿಳಿಸಲಿಲ್ಲ?" ಎಂದೆ. ಅವಳು ಒಮ್ಮೆ ತನ್ನ ವಿಶಾಲವಾದ ಕಣ್ಣುಗಳನ್ನೆತ್ತಿ ನನ್ನ ಕಡೆ ಸುಮ್ಮನೆ ನೋಡಿದಳು. ಮಾತೇನೂ ಆಡಲಿಲ್ಲ. ನಾನು ನಾಚಿಗೆಯಿಂದ ಅತ್ಯಂತ ಕೀಳಾಗಿಹೋದೆ. ಅನಿಲಳೇನಾದರೂ "ನಿಮಗೆ ತಿಳಿಸಿದ್ದರೆ ಲಾಭವೇನಾಗುತ್ತಿತ್ತು?" ಎಂದು ಕೇಳಿಬಿಟ್ಟಿದ್ದರೆ ನನಗೇನು ಜವಾಬು ಕೊಡುವುದೆಂದೇ ತೋಚುತ್ತಿರಲಿಲ್ಲ. ಬಾಳುವೆಯ ಈ ಝಂಝಾಟ, ಈ ಬಂಡುತನ, ಸಂಸಾರದ ಸುಖ-ದುಃಖಗಳ ಬಗ್ಗೆ ಹೇಗೆ ವ್ಯವಹರಿಸಬೇಕು ಎಂಬ ವಿಷಯದಲ್ಲಿ ನನಗೇನು ತಾನೇ ಗೊತ್ತು?

ನಾನು ಇಷ್ಟು ಮಾತ್ರ ಹೇಳಲಾದೆ-

"ಅನಿಲ, ಅದೆಲ್ಲ ಬೇಡ, ಅಲ್ಲೇ ಇಟ್ಟುಬಿಡು. ಇವತ್ತು ಊಟದ ಏರ್ಪಾಡಿಲ್ಲ" ಎಂದೆ. ಆಗ ಅನಿಲಳು ನೆಲ್ಲೀಕಾಯಿಯನ್ನು ಹೆಚ್ಚುವುದರ ಕಡೆಗೇ ಗಮನವಿಟ್ಟು "ಯಾಕೆ ಏರ್ಪಾಡಿಲ್ಲ? ಇವೆಲ್ಲ ಮಾಡಿರುವುದನ್ನ ಯಾರಿಗಿಡಲಿ? ಮಾಡುವುದೆಲ್ಲ ಎಷ್ಟೊ ಮಾಡಿ ಆಗಿಹೋಗಿದೆ. ನಾನು ಯಾವುದನ್ನೂ ಬಿಸಾಡುವುದಕ್ಕಲ್ಲ ಮಾಡಿದ್ದು, ಊಟ ಆಗಲೇಬೇಕು," ಎಂದಳು. ನಾನು ದೃಢಸ್ವರದಲ್ಲಿ "ಇವತ್ತು ನಮ್ಮ ಸಭೆ ಸೇರುವುದು ಅಸಂಭವ" ಎಂದೆ. ಆಗ ಅವಳು "ನಿಮ್ಮ ಸಭೆ ಆಗಲಿ, ಆಗದಿರಲಿ... ಇವತ್ತು ನನ್ನ ನಿಮಂತ್ರಣ" ಎಂದಳು. ನನಗೆ ಮನಸ್ಸಿನಲ್ಲೇನೋ ಎಷ್ಟೊ ಆರಾಮವೆನ್ನಿಸಿತು. ಅನಿಲಳ ಶೋಕವು ಅಷ್ಟು ತೀವ್ರವಾಗೇನಿಲ್ಲ ಎನ್ನಿಸಿತು. ಆಗೆಂದುಕೊಂಡೆ- ಅದೇ ಇದುವರೆಗೆ ಎಷ್ಟೋ ಬಾರಿ ನಾನವಳ ಮುಂದೆ ದೊಡ್ಡ ದೊಡ್ಡ ವೇದಾಂತ ತತ್ತ್ವಗಳ ಬಗ್ಗೆ ಮಾತಾಡಿದ್ದುದರ ಫಲವೇ ಈ ನಿರಾಸಕ್ತಿಯಾಗಿ ಗ್ರಹಿಸಲು ಶಕ್ತಿಯೂ ಶಿಕ್ಷಣವು ಇಲ್ಲದಿದ್ದರೂ ಕೂಡ. ಆದರೆ personal magnetism ಎಂಬುದೊಂದು ವಸ್ತುವಿದೆಯಲ್ಲ...ಅದೇನು ಸುಮ್ಮನೆಯೇ?

ಸಂಜೆಯ ವೇಳೆ ನಮ್ಮ ದ್ವೈತ ಸಭೆಯಲ್ಲಿ ಎರಡು ಮೂರು ಜನ ಕಡಿಮೆ ಯಾದರು. ಕಾನಾಯಿಯಂತೂ ಬರಲೇ ಇಲ್ಲ. ಮೊದಲನೇ ನಂಬರಿನ ಮನೆಯ ಟೆನ್ನಿಸ್ ಆಟದಲ್ಲಿ ಯಾರ್‍ಯಾರು ಸೇರಿದ್ದರೋ ಅವರು ಸಹ ಬರಲಿಲ್ಲ. ನನಗೆ ತಿಳಿದುಬಂತು-ಸೀತಾಂಶುಮೌಲಿ ಮಾರನೇ ದಿನ ಬೆಳಗಿನ ಗಾಡಿಯಲ್ಲಿ ಊರು ಬಿಟ್ಟು ಹೊರಡುವವನಿದ್ದಾನಾದ್ದರಿಂದ ಇವರೆಲ್ಲ ಅವನಿಗೆ farewell dinner-party ಏರ್ಪಾಡು ಮಾಡಿದ್ದಾರೆ. ಈ ಕಡೆ ಅನಿಲ ಮಾಡಿದ್ದ ಅಡಿಗೆಯಂತೂ ಎಷ್ಟು ರುಚಿಕರವಾಗಿತ್ತೋ! ಹಿಂದೆ ಎಂದೂ ಅಷ್ಟು ಚೆನ್ನಾಗಿರಲಿಲ್ಲ. ತಿಂಡಿಯ ಸಾಮಾನು ಕೂಡ ಅನೇಕವಿದ್ದುವು. ಅಷ್ಟೇಕೆ, ಖರ್ಚಿನ ಕಡೆ ಗಮನವೇ ಕೊಡದ ನಾನು ಕೂಡ ಅದೆಲ್ಲವನ್ನೂ ನೋಡಿ ಇಷ್ಟೊಂದು ಏಕೆ ಆಗಬೇಕಾಗಿತ್ತು ಎಂದುಕೊಂಡೆ. ಆ ರಾತ್ರಿ ಊಟ, ಹರಟೆಗಳೆಲ್ಲ ಮುಗಿಯುವ ಹೊತ್ತಿಗೆ ಒಂದು, ಒಂದೂವರೆ ಗಂಟೆ ಆಗಿಹೋಗಿತ್ತು. ನಾನು ಬಹಳ ಆಯಾಸದಿಂದ ಕೂಡಲೇ ಮಲಗಲು

ಹೋದೆ. ಅನಿಲಳನ್ನು "ನೀನು ಮಲಗುವುದಿಲ್ಲವೆ?" ಎಂದು ಕೇಳಿದೆ. ಅವಳು "ಇನ್ನೂ ಪಾತ್ರೆಗಳನ್ನೆಲ್ಲ ಎತ್ತಿಡಬೇಕಾಗಿದೆ" ಎಂದಳು.

ಮರುದಿನ ಬೆಳಗ್ಗೆ ನಾನು ಏಳುವ ಹೊತ್ತಿಗಾಗಲೇ ಎಂಟು ಘಂಟೆ ಹೊಡೆದು ಹೋಗಿತ್ತು. ಮಲಗುವ ಕೋಣೆಯಲ್ಲಿ ಟೀಪಾಯಿಯ ಮೇಲೆ ನಾನು ಸಾಮಾನ್ಯವಾಗಿ ನನ್ನ ಕನ್ನಡಕ ತೆಗೆದಿಟ್ಟಿರುವ ಜಾಗದಲ್ಲಿ, ಆ ಕನ್ನಡಕ ಒತ್ತಿಗಿಟ್ಟಿರುವ ಒಂದು ಸಣ್ಣ ಕಾಗದದ ತುಕಡ ಕಣ್ಣಿಗೆ ಬಿತ್ತು. ಅದು ಮಡಿಸಿಟ್ಟಿತ್ತು. ಅದನ್ನು ತೆಗೆದು ನೋಡಿದರೆ ಅದರಲ್ಲಿ ಅನಿಲಳ ಕೈ ಬರಹದಲ್ಲಿ ಏನೋ ಬರೆದಿದೆ. ಕನ್ನಡಕ ಕಣ್ಣಿಗೆ ತಗುಲಿಸಿ ಓದಿನೋಡಿ ಹಾಗೆ ನನ್ನ ಕಣ್ಣನ್ನು ನಾನೇ ನಂಬಲಾರದೆ ಹೋದೆ. ಏನಿದರ ಅರ್ಥ?

"ನಾನು ಹೊರಟೆ. ನನ್ನನ್ನು ಹುಡುಕುವ ಪ್ರಯತ್ನ ಮಾಡಬೇಡಿ. ಹುಡುಕಿದರೂ ನಿಮಗೆ ಸಿಗುವುದಿಲ್ಲ" ಎಂದು ಬರೆದಿದ್ದಾಳೆ.

ನನಗೇನೂ ಅರ್ಥವಾಗಲಿಲ್ಲ. ಟೀಪಾಯಿಯ ಮೇಲೆ ಒಂದು ಟಿನ್ನಿನ ಪೆಟ್ಟಿಗೆಯಿತ್ತು. ಅದನ್ನು ತೆಗೆದು ನೋಡುತ್ತೇನೆ. ಅದರೊಳಗೆ ಅನಿಲಳ ಒಡವೆಗಳೆಲ್ಲ ಇವೆ: ಅವಳು ಕೈಗೆ ಹಾಕಿಕೊಳ್ಳುತ್ತಿದ್ದ ಬಳೆಗಳು, ಉಂಗುರ ಪರ್ಯಂತ. ಕೇವಲ ಅವಳು ಧರಿಸಿದ್ದ ಶಂಖದ ಬಳೆ, ಕಬ್ಬಿಣದ ಕಂಕಣ (ಅವು ಮುತ್ತೈದೆತನದ ಗುರುತು) ಮಾತ್ರ ಇಲ್ಲ. ಅದರಲ್ಲಿ ಒಂದು ಸಣ್ಣ ಡಬ್ಬಿಯೊಳಗೆ ಬೀಗದಕೈ ಗೊಂಚಲು. ಬೇರೆ ಬೇರೆ ಡಬ್ಬಿಗಳಲ್ಲಿ ಕಾಗದದಲ್ಲಿ ಸುತ್ತಿಟ್ಟಿದ್ದ ಚಿಲ್ಲರೆ ದುಡ್ಡು–ನಾಲ್ಕಾಣೆ, ಎರಡಾಣೆ ನಾಣ್ಯಗಳು. ಕೆಲವು ರೂಪಾಯಿಗಳು. ತಿಂಗಳು ತಿಂಗಳು ನಾನು ಖರ್ಚಿಗೆ ಕೊಡುತ್ತಿದ್ದ ಹಣದಲ್ಲಿ ಉಳಿಸಿದ್ದ ದುಡ್ಡೆಲ್ಲವನ್ನೂ ಕಡೆಯ ಕಾಸಿನವರೆಗೂ ಅಲ್ಲಿಟ್ಟಿದ್ದಾಳೆ. ಒಂದು ಕಾಗದದಲ್ಲಿ ಪಾತ್ರೆ, ಸೌಟು ಮತ್ತಿತರ ಅಡಿಗೆ ಮನೆಯ ಸಾಮಾನುಗಳ ಪಟ್ಟಿ ಮತ್ತು ಅಗಸನಿಗೆ ಹಾಕಿರುವ ಬಟ್ಟೆಗಳ ಪಟ್ಟಿ. ಇದರೊಡನೆ ಹಾಲಿನವಳಿಗೆ ಕೊಡಬೇಕಾದ ಹಣದ ಲೆಕ್ಕ, ದಿನಸಿ ಅಂಗಡಿಯವನಿಗೆ ಕೊಡಬೇಕಾದ ಬಾಕಿ...ಎಲ್ಲ ಬರೆದಿಟ್ಟಿರುವ ಕಾಗದವೂ ಇದೆ. ಎಲ್ಲವೂ ಇದೆ. ಅವಳ ಪತ್ತೆ ಮಾತ್ರ ಇಲ್ಲ.

ಅನಿಲಳು ಎಲ್ಲೋ ಹೊರಟುಹೋಗಿದ್ದಾಳೆ ಎಂಬುದಿಷ್ಟು ಹೇಗೋ ಅರ್ಥವಾಯಿತು. ಮನೆಯೊಳಗೆಲ್ಲ ಹುಡುಕಿ ನೋಡಿದೆ. ನಮ್ಮ ಮಾವನ ಮನೆಗೆ ಹೇಳಿಕಳುಹಿಸಿದೆ. ಎಲ್ಲೂ ಇಲ್ಲ. ಎಂದಾದರೂ ಏನಾದರೂ ವಿಶೇಷ ಘಟನೆ ನಡೆದರೆ ಆಗ ನಾನೇನು ಮಾಡಬೇಕು ಎಂಬ ಯೋಚನೆಯೇ ನನಗಿರಲಿಲ್ಲ. ಎದೆಯೊಳಗಂತೂ ಸುಮ್ಮನೆ ಧಡ ಧಡ ಎಂದು ಹೊಡೆದುಕೊಳ್ಳ ಹತ್ತಿತು. ಹಠಾತ್ತಾಗಿ ಮೊದಲನೇ ನಂಬರಿನ ಮನೆ ಕಡೆ ದೃಷ್ಟಿ ಹಾಯಿಸಿ ನೋಡಿದೆ. ಆ ಮನೆಯ ಬಾಗಿಲು, ಕಿಟಕಿಗಳೆಲ್ಲ ಮುಚ್ಚಿವೆ. ಅಂಗಳದ ದೇವರ ಮಂಟಪದ ಬಳಿ ದರವಾನನು ಕಾಲು ಚಾಚಿ ಆರಾಮವಾಗಿ ಕೂತು ತಂಬಾಕು ಸೇವನೆ ಮಾಡುತ್ತಿದ್ದಾನೆ. ರಾಜಾ

ಬಾಬುಗಳು ಬೆಳಗಿನ ಜಾವದಲ್ಲೇ ಹೊರಟುಹೋಗಿದ್ದಾರೆ. ತತ್‌ಕ್ಷಣ ನನ್ನ ಎದೆಯಲ್ಲೇನೋ ಝುಮಕ್ ಎಂದಿತು. ಹಠಾತ್ತಾಗಿ ನನಗೆ ಮಿಂಚಿನಂತೆ ಯೋಚನೆಯೊಂದು ಹೊಳೆಯಿತು. ಮೈ ರೋಮಾಂಚನವಾಯಿತು. ಎಂತಹ ಸರ್ವನಾಶ! ನಾನಿಲ್ಲಿ ಒಂದೇ ಮನಸ್ಸಿನಿಂದ ದೊಡ್ಡ ದೊಡ್ಡ ತತ್ತ್ವ, ಧರ್ಮ, ನ್ಯಾಯ, ಸಿದ್ಧಾಂತಗಳ ಬಗ್ಗೆ ಆಲೋಚನೆ ನಡೆಸುತ್ತಿರುವಾಗ ಮಾನವ ಸಮಾಜದ ಅತಿ ಪುರಾತನತಮವಾದ ಅನ್ಯಾಯವೊಂದು ನನ್ನ ಮನೆಯೊಳಗಡೆ ತನ್ನ ಬಲೆಯನ್ನು ಹರವಿತ್ತು. ಫ್ಲೋಬೇರ್ (Flaubert), ಟಾಲ್‌ಸ್ಟಾಯ್, ಟರ್ಗನೆವ್ ಪ್ರಭೃತಿಗಳು ಬರೆದಿರುವ ಕಾದಂಬರಿಗಳಲ್ಲಿ ಈ ಬಗೆಯ ಘಟನೆಗಳ ವರ್ಣನೆಗಳನ್ನು ಓದಿದ್ದೆ. ಹಾಗೆ ಓದಿದ ಮೇಲೆ ಅತಿ ಆನಂದದಿಂದ ಅತ್ಯಂತ ಸೂಕ್ಷ್ಮವಾಗಿ ಅವುಗಳ ತತ್ತ್ವಕಥೆಗಳನ್ನು ವಿಶ್ಲೇಷಣ ಮಾಡಿ ನೋಡುತ್ತಿದ್ದೆ. ಆದರೆ ನನ್ನ ಮನೆಯಲ್ಲಿ ಅಂಥ ಸಂಗತಿಯೊಂದು ಇಷ್ಟು ಸುನಿಶ್ಚಿತ ರೀತಿಯಲ್ಲಿ ನಡೆಯಬಹುದೆಂದು ನಾನೆಂದೂ ಕನಸಿನಲ್ಲೂ ಕಲ್ಪನೆ ಮಾಡಿರಲಿಲ್ಲ.

ಮೊದಲನೇ ಹೃತ್ಕಂಪವನ್ನು ಹೇಗೋ ಸೈರಿಸಿಕೊಂಡು ಸಮಾಧಾನ ತಂದುಕೊಂಡೆ. ಪ್ರವೀಣನಾದ ತತ್ತ್ವಜ್ಞಾನಿಯಂತೆ ವ್ಯಾಪಾರವೆಲ್ಲವನ್ನೂ ಯಥೋಚಿತವಾಗಿ ಕೀಳಾಗಿ ಎಣಿಸಿ, ಸಾಮಾನ್ಯವೆಂದು ಗಣಿಸಿ, ನೋಡಲು ಯತ್ನಿಸಿದೆ. ಯಾವ ದಿನ ನನ್ನ ಮದುವೆಯಾಗಿತ್ತೋ ಆ ದಿನದ ಸಂಗತಿಯನ್ನು ನೆನೆಸಿಕೊಂಡು ಒಣನಗೆ ನಕ್ಕೆ...ಮನುಷ್ಯ ಎಷ್ಟು ಆಸೆ, ಎಷ್ಟು ಆಕಾಂಕ್ಷೆ, ಎಷ್ಟು ಹವಣಿಕೆ, ಎಷ್ಟು ಆವೇಗಗಳ ಅಪವ್ಯಯ ಮಾಡುತ್ತಿರುತ್ತಾನೆ. ಎಷ್ಟು ದಿನ, ಎಷ್ಟು ರಾತ್ರಿ, ಎಷ್ಟು ವರುಷಗಳು, ನಿಶ್ಚಿಂತೆಯಾಗಿ ಕಳೆದುಹೋದುವು! ಹೆಂಡತಿಯೆಂಬ ಜೀವಂತ ವಸ್ತುವೊಂದು ನಿಶ್ಚಯವಾಗಿ ಇದೆ ಎಂದುಕೊಂಡು ಕಣ್ಣುಮುಚ್ಚಿಕೊಂಡೇ ಇದ್ದೆ. ಇಂತಹ ಸಮಯದಲ್ಲಿ ಇಂದು ಹಠಾತ್ ಕಣ್ಣು ತೆಗೆದು ನೋಡುತ್ತೇನೆ. ನೀರಿನ ಗುಳ್ಳೆ ಒಡೆದುಹೋಗಿದೆ. ಹೋಗಲಿ ಬಿಡು–ಆದರೆ ಜಗತ್ತಿನಲ್ಲಿ ಎಲ್ಲವೂ ನೀರಿನ ಗುಳ್ಳೆಗಳಲ್ಲವಲ್ಲ. ಯುಗ ಯುಗಾಂತರ ಹುಟ್ಟು ಸಾವುಗಳನ್ನು ಅತಿಕ್ರಮಿಸಿಕೊಂಡು ಇನ್ನು ಉಳಿದಿರುವಂಥ ವಸ್ತುಗಳನ್ನು ನನಗಿನ್ನೂ ಗುರುತಿಸಲಾಗಲಿಲ್ಲವೆ?

ಆದರೆ ನೋಡಿದೆ–ಹಠಾತ್ತಾಗಿ ಈ ಪೆಟ್ಟಿನಿಂದ ನನ್ನೊಳಗಿದ್ದ ನವ್ಯಕಾಲದ ಜ್ಞಾನಿಯು ಮೂರ್ಛೆ ಬಿದ್ದುಬಿಟ್ಟಿದ್ದಾನೆ. ಮತ್ತಾರೊ ಆದಿಕಾಲದ ಪ್ರಾಣಿಯೊಂದು ಎಚ್ಚರವಾಗಿ ಹಸಿವಿನಿಂದ ಅಳುತ್ತ ಅಲೆದಾಡಲು ತೊಡಗಿತು. ವರಾಂಡಾದಲ್ಲಿ, ಮಾಳಿಗೆಯ ಮೇಲೆ ಸುತ್ತಾಡುತ್ತಾ ಸುತ್ತಾಡುತ್ತ ಶೂನ್ಯವಾದ ಮನೆಯೊಳಗೆಲ್ಲ ಸುಮ್ಮನೆ ಓಡಾಡುತ್ತ ಕಟ್ಟಕಡೆಗೆ ಎಲ್ಲಿ ಕಿಟಕಿಯ ಬಳಿ ನನ್ನ ಹೆಂಡತಿ ಒಂದು ಸಲ ಒಬ್ಬಳೇ ಸುಮ್ಮನೆ ನಿಂತಿದ್ದನ್ನು ನೋಡಿದ್ದೆನೋ ಆ ಮಲಗುವ ಕೋಣೆಗೆ ಒಂದು

ದಿನ ಹೋದವನೇ ಹುಚ್ಚನಂತೆ ಅಲ್ಲಿನ ಸಾಮಾನುಗಳನ್ನೆಲ್ಲ ಹೊರಗೆಳೆದು ನೋಡಲಾರಂಭಿಸಿದೆ. ಅನಿಲಳು ಹೆರಳು ಹಾಕಿಕೊಳ್ಳಲೆಂದು ಉಪಯೋಗಿಸುತ್ತಿದ್ದ ಕನ್ನಡಿಯ (dressing mirror) ಕೆಳಗಿನ ಡ್ರಾಯರನ್ನು ಎಳೆದು ತೆಗೆದೆ. ಅದರೊಳಗೆ ರೇಶಿಮೆಯ ಕೆಂಪು ರಿಬ್ಬನ್ನಿನಲ್ಲಿ ಕಟ್ಟಿದ್ದ ಒಂದು ಕಟ್ಟು ಕಾಗದಗಳು ಕಾಣಬಂತು. ಎದೆ ಡವ ಡವ ಹೊಡೆದುಕೊಳ್ಳುತ್ತಿರಲು ಅವನ್ನು ತೆಗೆದು ಒಂದೊಂದಾಗಿ ನೋಡಿದೆ. ಆ ಕಾಗದಗಳೆಲ್ಲ ಮೊದಲನೇ ನಂಬರಿನ ಮನೆಯಿಂದ ಬಂದವುಗಳು. ಎದೆಯೊಳಗೆ ಧಗ್ ಎಂದು ಉರಿ ಹೊತ್ತಿಕೊಂಡಿತು. ಒಮ್ಮೆ ಅನ್ನಿಸಿತು. ಎಲ್ಲ ಸುಟ್ಟು ಬೂದಿ ಮಾಡಿಬಿಡಲೇ ಎಂದು. ಆದರೆ ವೇದನೆ ಎಲ್ಲಿ ಅಗಾಧವೋ ಅಲ್ಲೇ ಹಾಳಾದ ಆಕರ್ಷಣೆ. ಈ ಕಾಗದಗಳೆಲ್ಲವನ್ನೂ ಓದದೇ ಇರಲು ಸಾಧ್ಯವಿಲ್ಲ.

ಈ ಕಾಗದಗಳನ್ನು ಐವತ್ತು ಬಾರಿ ಓದಿದ್ದೇನೆ. ಮೊದಲ ಕಾಗದ ಮೂರು ನಾಲ್ಕು ಚೂರುಗಳಾಗಿ ಹರಿಯಲ್ಪಟ್ಟಿತ್ತು. ಬಹುಶಃ ಅನಿಲಳು ಅದನ್ನು ಮೊದಲ ಬಾರಿ ಓದಿ ಕ್ರೋಧಾವೇಶದಿಂದ ತತ್‌ಕ್ಷಣ ಹರಿದುಹಾಕಿ ಆಮೇಲೆ ಬೇರೆ ಯೋಚನೆಯಿಂದ ಅದನ್ನು ಜಾಗರೂಕತೆಯಿಂದ ಗೋಂದು ಬಳಿದು ಬೇರೊಂದು ಖಾಲಿ ಕಾಗದದ ಮೇಲೆ ಅಂಟಿಸಿರುವುದು ಕಾಣಬಂತು. ಆ ಕಾಗದದ ಒಕ್ಕಣೆ ಹೀಗೆ–

"ನನ್ನ ಈ ಕಾಗದ ಓದದೆಯೇ ನೀನು ಹರಿದುಹಾಕಿದರೂ ನನಗೆ ದುಃಖವಿಲ್ಲ. ನಾನೇನು ಹೇಳಬೇಕೆಂದಿರುವೆನೋ ಆ ಮಾತುಗಳೆಲ್ಲವನ್ನೂ ಹೇಳಲೇ ಬೇಕು.

"ನಾನು ನಿನ್ನನ್ನು ನೋಡಿದ್ದೇನೆ. ಇಷ್ಟು ದಿನ ಇದೇ ಪೃಥಿವಿಯ ಮೇಲೆ ಕಣ್ಣು ತೆಗೆದುಕೊಂಡೇ ಅಲೆದಾಡಿದ್ದೇನೆ, ಆದರೆ ನೋಡುವಂಥದೊಂದು ನೋಟ ನನ್ನ ಬಾಳುವೆಯಲ್ಲಿ ಈ ಮೂವತ್ತೆರಡು ವರುಷ ವಯಸ್ಸಿನಲ್ಲಿ ಮೊದಲ ಬಾರಿ ದೊರಕಿತು. ಕಂಗಳ ಮೇಲೆ ನಿದ್ದೆಯ ಮುಸುಕು ಹರಡಿತ್ತು. ನೀನು ಅದಕ್ಕೆ ನಿನ್ನ ಚಿನ್ನದ ಕೋಲನ್ನು ತಾಕಿಸಿಬಿಟ್ಟೆ. ಇಂದು ನಾನು ಹೊಸ ಜಾಗರಣದೊಳಗಣಿಂದ ನಿನ್ನನ್ನು ನೋಡಲಾದೆ. ನನಗೇನು ಲಭ್ಯವೋ ಅದು ಲಭಿಸಿಬಿಟ್ಟಿದೆ. ಬೇರೇನೂ ಬೇಕಿಲ್ಲ ನನಗೆ. ಕೇವಲ ನಿನ್ನ ಈ ಸ್ತವವನ್ನು ನಿನ್ನ ಕಿವಿಯಲ್ಲಿ ಹಾಕಬೇಕೆಂದಿಚ್ಛೆ– ಅಷ್ಟೆ ನಾನು ಕವಿಯಾಗಿದ್ದಿದ್ದ ಪಕ್ಷದಲ್ಲಿ ಆಗ ಈ ಸ್ತವವನ್ನು ಕಾಗದದಲ್ಲಿ ಬರೆಯುವ ಅಗತ್ಯವಿರುತ್ತಿರಲಿಲ್ಲ. ಛಂದಸ್ಸಿನೊಳಗಿಂದ ಇಡೀ ಲೋಕದ ಕಂಠದಲ್ಲಿ ಪ್ರತಿಷ್ಠಿತಮಾಡಿಬಿಡುತ್ತಿದ್ದೆ. ನನ್ನ ಈ ಕಾಗದಕ್ಕೆ ನೀನಾವ ಉತ್ತರವನ್ನು ಕೊಡುವುದಿಲ್ಲ, ಗೊತ್ತು. ಆದರೆ, ನನ್ನನ್ನ ತಪ್ಪಾಗಿ ತಿಳಿದುಕೊಳ್ಳಬೇಡ. ನಾನು ನಿನಗಾವ ಹಾನಿಯನ್ನಾದರೂ ಮಾಡಬಲ್ಲೆನೆಂಬ ಸಂದೇಹ ಮಾತ್ರ ಮನದಲ್ಲಿರಿಸಿಕೊಳ್ಳದೆ ನನ್ನ ಈ ಪೂಜೆಯನ್ನು ದಯಮಾಡಿ ಗ್ರಹಣಮಾಡು. ನನ್ನ ಈ ಆರಾಧನೆಯನ್ನು

ನೀನೇನಾದರೂ ಗೌರಿವಿಸಲಾದಲ್ಲಿ ಅದರಿಂದ ನಿನಗೂ ಒಳ್ಳೆಯದಾಗುತ್ತದೆ. ನಾನು ಯಾರು ಎಂಬುದನ್ನು ಇಲ್ಲಿ ಬರೆಯಬೇಕಾದ ಅಗತ್ಯವಿಲ್ಲ. ಆದರೆ ನಿಶ್ಚಯವಾಗಿಯೂ ಅದು ನಿನ್ನ ಮನಸ್ಸಿನ ಬಳಿ ಗೋಪ್ಯವಾಗಿರುವುದಿಲ್ಲ."

ಇಂತಹುದೇ ಇಪ್ಪತ್ತೈದು ಕಾಗದಗಳು. ಇದರಲ್ಲಿ ಯಾವ ಕಾಗದದ ಉತ್ತರವು ಅನಿಲಳ ಬಳಿಯಿಂದ ಹೋಗಿತ್ತು ಎಂಬುದಕ್ಕೆ ಈ ಕಾಗದಗಳಲ್ಲಿ ಒಂದರಲ್ಲೂ ನಿದರ್ಶನವಿಲ್ಲ. ಹಾಗೇನಾದರೂ ಹೋಗಿದ್ದಿದ್ದರೆ ಆಗ ಅಪಸ್ವರ ಹುಟ್ಟಿಕೊಂಡು ಬಿಡುತ್ತಿತ್ತು. ಅಥವಾ ಹಾಗಾಗಿದ್ದರೆ, ಆ ಚಿನ್ನದ ಕೋಲಿನ ಯಕ್ಷಿಣಿ, ಮಂತ್ರ ಮುರಿದು ಬಿದ್ದು ಸ್ತವಗಾನವು ನೀರವವಾಗುತ್ತಿತ್ತು.

ಆದರೆ ಇದೇನಿದು ಆಶ್ಚರ್ಯ! ಸೀತಾಂಶು ಯಾರನ್ನು ಕ್ಷಣಕಾಲದ ಅವಧಿಯಲ್ಲಿ ನೋಡಿದ್ದನೋ ಇಂದು ಎಂಟು ವರುಷಗಳಾದ ಮೇಲೆ, ಎಂಟು ವರುಷಗಳ ಆತ್ಮೀಯ ನಿಕಟತೆಯಾದ ಮೇಲೆ ಈ ಬೇರೊಬ್ಬರ ಕಾಗದಗಳೊಳಗಣಿಂದ ಅವಳನ್ನು ಮೊದಲ ಬಾರಿ ನೋಡಲಾದೆ. ನನ್ನ ಕಂಗಳ ಮೇಲಿನ ನಿದ್ದೆಯ ಮುಸುಕು ಅದೆಷ್ಟು ದಪ್ಪನಾದ ಮುಸುಕೋ ಗೊತ್ತಿಲ್ಲ. ಪುರೋಹಿತರ ಕೈಯಿಂದ ಅನಿಲಳನ್ನು ಪಡೆದಿದ್ದೆ ನಿಜ, ಆದರೆ ಅವಳ ವಿಧಾತನ ಕೈಯಿಂದ ಅವಳನ್ನು ಗ್ರಹಣಮಾಡುವಷ್ಟು ಬೆಲೆಯನ್ನು ನಾನು ಸ್ವಲ್ಪವೂ ಕೊಡಲಿಲ್ಲ. ನಾನು ನನ್ನ ದ್ವೈತದಳ ಮತ್ತು ನವ್ಯನ್ಯಾಯ ಶಾಸ್ತ್ರಗಳನ್ನು ಅವಳಿಗಿಂತಲೂ ಹೆಚ್ಚು ಯೋಗ್ಯತೆಯುಳ್ಳದೆಂದು ಭಾವಿಸಿದ್ದೆ. ಸುತರಾಂ ನಾನು ಯೋಗ್ಯ ರೀತಿಯಲ್ಲಿ ಒಂದು ಸಲವೂ ನೋಡದಿದ್ದವಳನ್ನು, ಒಂದು ನಿಮಿಷ ಕೂಡ ನನ್ನವಳಾಗಿ ಪಡೆಯದಿದ್ದವಳನ್ನು ಬೇರೊಬ್ಬನು ತನ್ನ ಬಾಳುವೆಯ ಉತ್ಸರ್ಗವೆಂಬುದಾಗಿ ಪರಿಗಣಿಸಿ ಗ್ರಹಣಮಾಡಿದಲ್ಲಿ ಆಗ ಯಾರ ಬಳಿ ಏನೆಂಬುದಾಗಿ ನನ್ನ ನಷ್ಟದ ಬಗ್ಗೆ ದೂರು ಹೇಳಿಕೊಳ್ಳುವುದು? ಕಡೆಯ ಕಾಗದದ ಒಕ್ಕಣೆ ಹೀಗಿತ್ತು–

"ಹೊರಗಡೆಯಿಂದ ನಾನು ನಿನ್ನನ್ನು ಸ್ವಲ್ಪವೂ ಅರಿತಿಲ್ಲ. ಆದರೆ ಒಳಗಡೆಯಿಂದಲೇ ನಾನು ನಿನ್ನ ವೇದನೆಯನ್ನು ತಿಳಿದುಕೊಂಡಿದ್ದೇನೆ. ಇಲ್ಲೇ ನನ್ನ ಪರೀಕ್ಷೆ ಅತ್ಯಂತ ಕಠಿಣ. ನನ್ನ ಈ ಗಂಡು ಕೈಗಳು ಜಡವಾಗಿರಲು ಒಲ್ಲೆನೆನ್ನುತ್ತವೆ. ಸ್ವರ್ಗ ಮರ್ತ್ಯಗಳ ಶಾಸನ, ಅಡ್ಡಿ ಆತಂಕಗಳೆಲ್ಲವನ್ನೂ ಚೂರು ಮಾರು ಮಾಡಿ ನಿನ್ನನ್ನು ನಿನ್ನ ಬಾಳುವೆಯ ವ್ಯರ್ಥತೆಯಿಂದ ಉದ್ಧಾರ ಮಾಡಬೇಕೆಂದು ತವಕಗೊಳ್ಳುತ್ತಿವೆ. ಆಮೇಲೆ ಇದೂ ಮನಸ್ಸಿಗೆನ್ನಿಸುತ್ತದೆ.–ನಿನ್ನ ದುಃಖವೇ ನಿನ್ನ ಅಂತರ್ಯಾಮಿಯ ಆಸನ. ಅದನ್ನು ಹರಣಮಾಡುವ ಅಧಿಕಾರ ನನ್ನದಲ್ಲ. ನಾಳೆ ಮುಂಜಾನೆಯ ವೇಳೆಯವರೆಗೂ ಅವಧಿ ಪಡೆದಿದ್ದೇನೆ. ಇಷ್ಟರೊಳಗೆ ಯಾವುದಾದರೂ ದೈವವಾಣಿಯು ನನ್ನ ಈ ಆತಂಕವನ್ನು ದೂರ ಮಾಡಿಬಿಟ್ಟರೆ

ಆಗೇನಾದರೂ ಆಗಿಬಿಡಬಹುದು. ವಾಸನೆಗಳ ಪ್ರಬಲ ಬಿರುಗಾಳಿಯಲ್ಲಿ ನಮಗೆ ದಾರಿ ತೋರುವ ದೀವಿಗೆ ಆರಿಹೋಗಿಬಿಡಬಹುದು. ಅದಕ್ಕಾಗೇ ನಾನು ಮನಸ್ಸನ್ನು ಶಾಂತವಾಗಿಟ್ಟುಕೊಳ್ಳುತ್ತೇನೆ. ಒಂದೇ ಮನಸ್ಸಿನಿಂದ ಈ ಮಂತ್ರವನ್ನು ಜಪಿಸುತ್ತಿರುತ್ತೇನೆ– ನಿನಗೆ ಮಂಗಳವಾಗಲಿ ಎಂದು."

ಈಗರ್ಥವಾಯಿತು. ಇಬ್ಬರ ಮಧ್ಯೆಯ ಆತಂಕ ಸರಿದು ಹೋಯಿತು. ಇಬ್ಬರ ದಾರಿಯೂ ಒಂದೇ ಆಗಿಹೋಯಿತು.

ಸೀತಾಂಶು ಬರೆದ ಕಾಗದಗಳಲ್ಲೆಲ್ಲ ಇದೊಂದು ನನ್ನ ಪತ್ರದಂತೆಯೇ ಆಗಿಹೋಯಿತು. ಆ ಪತ್ರದ ಪದಗಳು ಇಂದಿಗೂ ನನ್ನ ಪ್ರಾಣದ ಸ್ತವ ಮಂತ್ರವೇ ಆಗಿಹೋಗಿವೆ.

* * *

ಎಷ್ಟು ಕಾಲ ಕಳೆದುಹೋಯಿತು. ಪುಸ್ತಕಗಳೋದಲು ಇನ್ನು ಮನಸ್ಸಾಗುವುದಿಲ್ಲ. ಅನಿಲಳನ್ನು ಒಮ್ಮೆಯಾದರೂ ಹೇಗಾದರೂ ಮಾಡಿ ನೋಡಬೇಕೆಂದು ಮನಸ್ಸಿನೊಳಗೆ ತಡೆಯಲಾರದ ವೇದನೆ ಸ್ಥಿರವಾಗಿ ನಿಂತುಕೊಂಡಿತು. ಏನು ಮಾಡಿದರೂ ಸಮಾಧಾನವಾಗಿರಲು ಆಗಲಿಲ್ಲ. ಆಮೇಲೆ ಹೇಗೋ ವಿಚಾರಿಸಿ ತಿಳಿದುಕೊಂಡೆ– ಸೀತಾಂಶು ಆಗ ಮಸ್ಸೂರಿ hill stationನಲ್ಲಿ ಇರುವನೆಂದು.

ಅಲ್ಲಿಗೆ ಹೋಗಿ ಸೀತಾಂಶು ಎಷ್ಟೋ ಬಾರಿ ದಾರಿಯಲ್ಲಿ ಅಡ್ಡಾಡುವುದನ್ನು ಕಂಡೆ–ಆದರೆ ಅವನ ಜೊತೆಯಲ್ಲಿ ಅನಿಲಳನ್ನು ನೋಡಲಿಲ್ಲ. ತತ್‌ಕ್ಷಣ ಭಯವಾಯಿತು–ಇವನೇನಾದರೂ ಅವಳನ್ನು ಅಪಮಾನಮಾಡಿ ಪರಿತ್ಯಾಗ ಮಾಡಿಬಿಟ್ಟಿದ್ದಾನೇನೊ! ಏನು ಗತಿ! ನಾನಾಗ ತಡೆಯಲಾಗದೆ ಆ ಕೂಡಲೇ ಅವನ ಬಳಿ ಹೋಗಿ ಭೆಟ್ಟಿಯಾದೆ. ಎಲ್ಲ ವಿಷಯಗಳನ್ನೂ ವಿಶದವಾಗಿ ಬರೆಯುವ ಆವಶ್ಯಕವಿಲ್ಲ. ಸೀತಾಂಶು ಇಷ್ಟು ಹೇಳಿದ–"ನಾನು ಆಕೆಯಿಂದ ಬಾಳುವೆಯಲ್ಲಿ ಇದೊಂದೇ ಪತ್ರ ಪಡೆದಿರುವುದು. ಅದು ಇದೇ ನೋಡಿ" ಹೀಗೆಂದು ಸೀತಾಂಶು ತನ್ನ ಪಾಕೆಟ್ಟಿನಿಂದ ಒಂದು ಸಣ್ಣ ಎನಾಮಲ್ ಮಾಡಿದ ಚಿನ್ನದ ಕಾರ್ಡ್ ಕೇಸ್ ತೆಗೆದು ಅದರೊಳಗಿಂದ ಒಂದು ಕಾಗದದ ಚೂರನ್ನು ಹೊರಗೆ ತೆಗೆದು ಕೊಟ್ಟ. ಅದರಲ್ಲಿ ಹೀಗೆ ಬರೆದಿತ್ತು "ನಾನು ಹೊರಟೆ. ನನ್ನನ್ನು ಹುಡುಕಲು ಪ್ರಯತ್ನ ಮಾಡಬೇಡಿ. ಹುಡುಕಿದರೂ ಸಿಗುವುದಿಲ್ಲ." ಅದೇ ಅಕ್ಷರ, ಅದೇ ಕೈ ಬರಹ, ಅದೇ ತಾರೀಖು, ಮತ್ತು ನೀಲಿ ಬಣ್ಣದ ಕಾಗದದ ಅರ್ಧ ನನ್ನ ಬಳಿ, ಇನ್ನೊಂದರ್ಧವೇ ಈ ಕಾಗದದ ತುಂಡು!

೧೫. ವರ ಮತ್ತು ವಧು

೧

ಇದಕ್ಕೆ ಮೊದಲು ಪ್ರಜಾಪತಿಯಾದ ಬ್ರಹ್ಮನು ನನ್ನ ಹಣೆಯಲ್ಲಿ ಬಂದು ಕುಳಿತಿರಲಿಲ್ಲವಾದರೂ ಒಮ್ಮೆ ನನ್ನ ಮನಸ್ಸೆಂಬ ತಾವರೆ ಹೂವಿನಲ್ಲಿ ಮಂಡಿಸಿದ್ದ. ಆಗ ನನ್ನ ವಯಸ್ಸು ಹದಿನಾರು. ಅದಾದನಂತರ ಒಮ್ಮೆ ನಿದ್ದೆಯಿಂದ ಅಕಸ್ಮಾತ್ ಎಚ್ಚರವಾಗಿಬಿಟ್ಟ ಮೇಲೆ ಮತ್ತೆ ನಿದ್ದೆ ಮಾಡುವುದು ಹೇಗೆ ಅಸಾಧ್ಯವೋ ಹಾಗಾಯಿತು ನನ್ನ ಸ್ಥಿತಿ. ನನ್ನ ಬಂಧು, ಬಾಂಧವರಲ್ಲಿ ಎಷ್ಟೋ ಜನ ಹೆಂಡಿರನ್ನು ಪಡೆಯುವ ವ್ಯವಹಾರದಲ್ಲಿ ಎರಡನೆಯ ಸಂಬಂಧ, ಅಷ್ಟೇಕೆ ಮೂರನೆಯ ಸಂಬಂಧದವರೆಗೂ ಪ್ರಮೋಷನ್ ಪಡೆದಿದ್ದರು. ನಾನೋ ಬ್ರಹ್ಮಚಾರಿತ್ವದ ಕಡೆಯ ಬೆಂಚಿನ ಮೇಲೆ ಕೂತು ಶೂನ್ಯ ಜಗತ್ತಿನ ಹಲಗೆಗಳನ್ನು ಎಣಿಸುತ್ತ ಕಾಲ ಕಳೆದಿದ್ದೇನೆ.

ನಾನು ಹದಿನಾಲ್ಕನೆಯ ವಯಸ್ಸಿನಲ್ಲಿ ಎಂಟ್ರೆನ್ಸ್ ಪರೀಕ್ಷೆಯನ್ನು ತೇರ್ಗಡೆಯಾಗಿದ್ದೆ. ಆಗಿನ ಕಾಲದಲ್ಲಿ ಮದುವೆಗಾಗಲಿ, ಎಂಟ್ರೆನ್ಸ್ ಪರೀಕ್ಷೆಗಾಗಲಿ ವಯೋನಿರ್ಬಂಧವಿರಲಿಲ್ಲ. ನಾನೆಂದೂ ಓದಬೇಕಾದಂಥ ಪುಸ್ತಕಗಳನ್ನು ಬಾಯಲ್ಲಿ ತುರುಕಿಕೊಂಡಿಲ್ಲ. ಆ ಕಾರಣದಿಂದಲೇ ಹೊಟ್ಟೆಯಲ್ಲಾಗಲಿ, ಮನಸ್ಸಿನಲ್ಲಾಗಲಿ ನನ್ನನ್ನು ಅಜೀರ್ಣರೋಗ ಪೀಡಿಸಲಿಲ್ಲ. ಇಲಿಯು ಹಲ್ಲಲ್ಲಿ ಕಡಿಯುವ ಪದಾರ್ಥವೇನು ಸಿಕ್ಕಿದರೂ ಹೇಗೆ ಕಡಿದು ಚೆಲ್ಲುವುದೋ ನಾನು ಎಳೆಯ ವಯಸ್ಸಿನಿಂದಲೂ ಅಚ್ಚಾದ ಪುಸ್ತಕ ನೋಡಿದೊಡನೆ ಹಾಗೆ ಗಬಕ್ಕನೆ ತೆಗೆದು ಓದಿ ಮುಗಿಸಿಬಿಡುತ್ತಿದ್ದೆ. ಅದು ಓದತಕ್ಕದ್ದಾಗಲಿ, ಆಗದಿರಲಿ, ನನಗೆ ಲಕ್ಷ್ಯವಿಲ್ಲ. ಪ್ರಪಂಚದಲ್ಲಿ ಓದತಕ್ಕಂಥ ಪುಸ್ತಕಗಳಿಗಿಂತ ಓದಬಾರದ ಪುಸ್ತಕಗಳೇ ಬಹಳ ಹೆಚ್ಚು–ಆದ್ದರಿಂದಲೇ ನನ್ನ ಪುಸ್ತಕಗಳ ಭೂಮಂಡಲಕ್ಕಿಂತ ಅಪಥ್ಯ ಪುಸ್ತಕಗಳ ಸೂರ್ಯನೇ ಹದಿನಾಲ್ಕು ಲಕ್ಷಗಳಷ್ಟು ದೊಡ್ಡವನಾಗಿದ್ದ. ಇಷ್ಟಾದರೂ ನಮ್ಮ ಸಂಸ್ಕೃತ ಪಂಡಿತರ ಕಠಿಣವಾದ ಭವಿಷ್ಯವಾಣಿಯನ್ನು ಸುಳ್ಳು ಮಾಡಿ ನಾನು ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದೆ.

ನನ್ನ ತಂದೆ ಡೆಪ್ಯುಟಿ ಮ್ಯಾಜಿಸ್ಟ್ರೇಟರಾಗಿದ್ದರು. ಆಗ ನಾವು ಸಾತ್‌ಕ್ಷೀರದಲ್ಲೋ, ಜಾಹಾನಾಬಾದಿನಲ್ಲೋ ಅಥವಾ ಅಂಥದೇ ಯಾವುದೋ ಊರಲ್ಲಿದ್ದೆವು.

ಊರಿನ ಹೆಸರು ಯಾವುದಾದರೇನು? ಆದರೆ ನಾನು ಮೊದಲೇ ಹೇಳಿಬಿಡುತ್ತೇನೆ–ಈ ನನ್ನ ಕಥೆಯಲ್ಲಿ ದೇಶ, ಕಾಲ ಮತ್ತು ಪಾತ್ರಗಳ ಬಗ್ಗೆ ಯಾವ ಹೆಸರುಗಳೇ ಆಗಲಿ ಸ್ಪಷ್ಟವಾಗಿ ನಮೂದಿಸಿದಂತಿದ್ದರೆ ಅವೆಲ್ಲ ಒಟ್ಟಿನಲ್ಲಿ ಸುಸ್ಪಷ್ಟವಾಗಿ

ಸುಳ್ಳಾಗಿರುತ್ತವೆ. ರಸಾನುಭವಕ್ಕಿಂತ ಯಾರಿಗೆ ಇಂತಹ ಜುಜುಬಿ ವಿಷಯಗಳ ಬಗ್ಗೆ ಕುತೂಹಲವಿರುತ್ತದೋ ಅಂಥವರು ಕಡೆಯಲ್ಲಿ ಮೋಸಹೋಗಬೇಕಾಗುತ್ತದೆ.

...ಅದು ಹಾಗಿರಲಿ. ಇಂಥ ಒಂದು ಊರಿನಲ್ಲಿದ್ದಾಗ ನಮ್ಮ ತಂದೆ ಒಮ್ಮೆ ಯಾವುದೋ ಒಂದು ವಿಶೇಷ ಮೊಕದ್ದಮೆಯ ತನಿಖೆಯ ಬಗ್ಗೆ 'ಸರ್ಕೀಟು' ಹೋಗಿದ್ದರು. ಅಮ್ಮ ಯಾವುದೋ ಒಂದು ವ್ರತವನ್ನು ಕೈಕೊಂಡಿದ್ದಳು. ಭೋಜನಕ್ಕೂ ದಕ್ಷಿಣೆ ಸ್ವೀಕಾರಕ್ಕೂ ಅಮ್ಮನಿಗೆ ಬ್ರಾಹ್ಮಣರು ಬೇಕಾಗಿದ್ದರು. ಇಂತಹ ಪಾರಮಾರ್ಥಿಕವಾದ ಕೆಲಸಗಳಲ್ಲಿ ಅಮ್ಮನಿಗೆ ಮುಖ್ಯ ಸಹಾಯಕರಾಗಿದ್ದವರು ನಮ್ಮ ಸಂಸ್ಕೃತ ಪಂಡಿತರು. ಇದಕ್ಕೆ ಅಮ್ಮ ಅವರಿಗೆ ಬಹಳ ಕೃತಜ್ಞಳಾಗಿದ್ದಳು. ಅಪ್ಪನ ಮನೋಭಾವವಂತು ಅದಕ್ಕೆ ವಿಪರೀತವಾಗಿತ್ತೆಂದೇ ಹೇಳಬೇಕು.

ಅಂದು ಬ್ರಾಹ್ಮಣ ಭೋಜನವಾದನಂತರ ದಾನ ದಕ್ಷಿಣೆಯು ಏರ್ಪಾಡಾಗುತ್ತಿದ್ದಾಗ ಜೊತೆಯಲ್ಲೇ ನಾನೂ ಒಂದು ಅಂತಹ ಕಾರ್ಯದಲ್ಲೊಬ್ಬ ಗಣನೆ ಮಾಡತಕ್ಕ ಸಾಮಗ್ರಿಯಾಗಿಬಿಟ್ಟೆ. ಆಗ ನಡೆದ ಆಲೋಚನೆಯ ಮರ್ಮವಿದು. ನಾನಂತೂ ರಜೆ ಮುಗಿದೊಡನೆ ಕಾಲೇಜಿನ ವ್ಯಾಸಂಗಕ್ಕೆ ಕಾಲೇಜಿಗೆ ಹೋಗುವವನಿದ್ದೆ. ಇಂಥ ಸಂದರ್ಭದಲ್ಲಿ ಪುತ್ರವಿಯೋಗದ ಸಂಕಟವನ್ನು ದೂರಮಾಡಲು ಒಂದು ಒಳ್ಳೆಯ ಉಪಾಯವನ್ನು ಅವಲಂಬಿಸುವುದು ಕರ್ತವ್ಯ. ಯಾವುದಾದರೊಂದು ಇನ್ನೂ ತಾಯಿಯ ತೊಡೆಯ ಮೇಲೇ ಇರುವಂಥ ಬಾಲವಧುವನ್ನು ಮನೆಗೆ ಕರೆತಂದು ಸಾಕಿ ದೊಡ್ಡವಳಾಗಿ ಮಾಡಿದರೆ ಅಮ್ಮ ಹೇಗೋ ಕಾಲ ತಳ್ಳಬಲ್ಲಳು. ಅದಕ್ಕೆ ತಕ್ಕಂತೆ ನಮ್ಮ ಪಂಡಿತರ ಮಗಳು ಕಾಶೀಶ್ವರಿ, ಈ ಅವಕಾಶಕ್ಕೆ ಯೋಗ್ಯಳಾದ ಪಾತ್ರಳು. ಏಕೆಂದರೆ ಅವಳು ವಯಸ್ಸಿನಲ್ಲಿ ಎಳೆಯವಳು, ಗುಣದಲ್ಲಿ ಸುಶೀಲಳೂ ಹೌದು. ಅಲ್ಲದೆ ಕುಲಧರ್ಮದ ಗಣಿತದ ಪ್ರಕಾರ ಕೂಡ ಅವಳೊಡನೆ ನನಗೆ ಅಂಕ ಅಂಕವಾಗಿ ಹೊಂದಿಕೆಯಾಗುತ್ತಿತ್ತು. ಹೆಚ್ಚಾಗಿ ಬ್ರಾಹ್ಮಣನ ಕನ್ಯಾಭಾರವನ್ನು ಇಳಿಸುವ ಪುಣ್ಯವೂ ಲೋಭನೀಯವಲ್ಲವೆ?

ಅಮ್ಮನ ಮನಸ್ಸಂತೂ ಚೆನ್ನಾಗಿ ಕದಲಿಬಿಟ್ಟಿತು. ಹುಡುಗಿಯನ್ನು ಒಮ್ಮೆ ನೋಡುವುದು ಎಂಬ ಸೂಚನೆ ವ್ಯಕ್ತವಾದೊಡನೆ ಪಂಡಿತರು ತಮ್ಮ 'ಕುಟುಂಬ' ಹಿಂದಿನ ರಾತ್ರಿಯೇ ಹುಡುಗಿಯೊಂದಿಗೆ ಊರಿಗೆ ಬಂದು ಸೇರಿದ್ದಾರೆ ಎಂದು ಉತ್ಸಾಹದಿಂದ ಹೇಳಿದರು. ಹುಡುಗಿಯೂ ಅಮ್ಮನ ಮನಸ್ಸಿಗೆ ಒಪ್ಪಿಗೆಯಾಗಲು ತಡವಾಗಲಿಲ್ಲ. ಏಕೆಂದರೆ, ಅಭಿರುಚಿಯ ಸಂಗಡವೇ ಪುಣ್ಯವೆಂಬ ಗುಲಗಂಜಿಯ ತೂಕವೂ ಸೇರಿಕೊಂಡು ಸಹಜವಾಗಿ ಭಾರ ಏರಿಹೋಯಿತು. ಆಹಾ, ಹುಡುಗಿಯಂತು ಲಕ್ಷಣವಂತೆ, ಅಂದುಬಿಟ್ಟಳು ಅಮ್ಮ. ಅಂದರೆ ಅರ್ಥ ಅಂಥ ಸುಂದರಿಯೇನು ಅಲ್ಲದಿದ್ದರೂ, ತೆಗೆದುಹಾಕುವ ಹಾಗಿಲ್ಲ, ಸಮಾಧಾನಕ್ಕೆ ಕಾರಣವಿದೆ ಎಂದು.

ಈ ಪ್ರಸ್ತಾಪ ಕ್ರಮೇಣ ಪದ್ಧತಿಯಂತೆ ನನ್ನ ಕಿವಿಗೂ ಬಿತ್ತು. ಯಾವ ಪಂಡಿತರ 'ಧಾತುರೂಪ'ದ ಬಗ್ಗೆ ನಾನು ನಡು ನಡುಗುತ್ತಲೆ ಬೆಳೆದೆನೋ ಅಂಥವರ ಮಗಳ ಜೊತೆಯಲ್ಲೇ ನನ್ನ ಮದುವೆಯ ಸಂಬಂಧ–? ಇದರ ವಿಸದೃಶತೆಯೇ ನನ್ನ ಮನಸ್ಸನ್ನು ಪ್ರಬಲವಾಗಿ ಸೆಳೆಯಿತು. ಅಡುಗೂಲಜ್ಜಿಯ ಕಥೆಯಲ್ಲಿ ಆದಂತೆ ಸಂಸ್ಕೃತ ಪಾಠದ ಸುಬಂತ ಪ್ರಕರಣವು ತನ್ನ ಅನುಸ್ವಾರ, ವಿಸರ್ಗಗಳನ್ನೆಲ್ಲಾ ಕಳಚಿಹಾಕಿ ಹಠಾತ್ತಾಗಿ ರಾಜಗುವರಿಯಾಗಿ ಮಾರ್ಪಟ್ಟಂತೆ ಅನ್ನಿಸಿತು.

ಒಂದು ದಿನ ಮಧ್ಯಾಹ್ನವಾದ ಮೇಲೆ ಅಮ್ಮನು ನನ್ನನ್ನು ತನ್ನ ಕೋಣೆಗೆ ಕರೆದು "ಸನೂ, ಪಂಡಿತ ಮಹಾಶಯರ ಮನೆಯಿಂದ ಮಾವಿನ ಹಣ್ಣು ಮತ್ತು ಮಿಠಾಯಿ ಬಂದಿದೆ, ತಿಂದು ನೊಡು" ಎಂದಳು.–ಅಮ್ಮನಿಗೆ ಗೊತ್ತು. ನನಗೆ ಇಪ್ಪತ್ತೈದು ಮಾವಿನ ಹಣ್ಣುಗಳನ್ನು ತಿನ್ನಿಸಿ ಇನ್ನೂ ಇಪ್ಪತ್ತೈದು ಹಣ್ಣುಗಳನ್ನು ತೆಗೆದಿರಿಸಿ ಪಾದ ಪೂರಣ ಮಾಡಿದರೆ ಆಗ ನನ್ನ ಛಂದಸ್ಸು ಸರಿಹೋಗುವುದು ಎಂದು.

ಅದಕ್ಕೇ ಅಮ್ಮ ರಸನೆ (ನಾಲಗೆ)ಯ ಸರಸ ಮಾರ್ಗದ ದ್ವಾರಾ ನನ್ನ ಹೃದಯಕ್ಕೆ ಆಹ್ವಾನ ಕೊಟ್ಟಳು. ಕಾಶೀಶ್ವರಿಯು ಆಕೆಯ ತೊಡೆಯ ಮೇಲೆ ಕೂತಿದ್ದಳು..ಇಷ್ಟು ದಿನಗಳಾದ ಮೇಲೆ ನನ್ನ ನೆನಹು ಅಸ್ಪಷ್ಟವಾಗುತ್ತ ಬರುತ್ತಿದೆ. ಆದರೂ ಜ್ಞಾಪಕವಿದೆ...ಸತು (Tin) ವಿನ ತಂತಿಯಿಂದ ಅವಳ ತಲೆಗೂದಲ ಮುಡಿ ಭದ್ರವಾಗಿ ಬಿಗಿಸಲ್ಪಟ್ಟಿತ್ತು. ಮೈಮೇಲೆ ತೊಟ್ಟಿದ್ದುದು ಕಲಿಕತ್ತೆಯ ಷಾಪಿನಿಂದ ತಂದ ಸ್ಯಾಟಿನ್ ಜಾಕೆಟ್. ಅದೋ ಒಂದು ನೀಲಿ ಮತ್ತು ಕೆಂಪು ರಂಗುಗಳ ಲೇಸು ಮತ್ತು ಟೇಪಿನ ಪ್ರತ್ಯಕ್ಷ ಪ್ರಲಾಪದಂತಿತ್ತು. ನೆನಪಿರುವ ಮಟ್ಟಿಗೆ–ಅವಳ ಬಣ್ಣ ಎಣ್ಣೆಗೆಂಪು (ಶ್ಯಾಮಲ). ಹುಬ್ಬುಗಳೆರಡೂ ಅತ್ಯಂತ ಒತ್ತಾದುವು ಮತ್ತು ಕಣ್ಣುಗಳಂತೂ ಯಾವುದೋ ಸಾಕುಪ್ರಾಣಿಯ ಕಣ್ಣುಗಳಂತೆ ಸ್ವಲ್ಪವೂ ಸಂಕೋಚವಿಲ್ಲದೆ ದುರುದುರನೆ ನೋಡುತ್ತಿದ್ದುವು. ಅವಳ ಮುಖದ ಉಳಿದ ಅಂಶಗಳಷ್ಟಾಗಿ ನೆನಪಿಗೆ ಬರುವುದಿಲ್ಲ. ಬಹುಶಃ ವಿಧಾತನ ಕಾರ್ಖಾನೆಯಲ್ಲಿ ಅವಳ ರೂಪನಿರ್ಮಾಣವಿನ್ನೂ ಪೂರೈಸಿಲ್ಲ. ಕೇವಲ ಆಕಾರಕ್ಕೊಂದು ವಿಗ್ರಹವಿರಲಿ ಎಂದು ತಂದು ಕೂರಿಸಿದಂತಿತ್ತು. ಯಾವುದೇನೇ ಇರಲಿ, ಅವಳನ್ನು ನೋಡಿದೊಡನೆ, ಅತ್ಯಂತ ಒಳ್ಳೆಯ ಹುಡುಗಿ, ಸಾಧು ಎಂದು ಹೇಳಬಹುದು.

ನನ್ನ ಎದೆಯೊಳಭಾಗ ಉಬ್ಬಿಹೋಯಿತು. ಮನಸ್ಸಿನೊಳಗೆ ಈ ಸತುವಿನ ತಂತಿಯಿಂದ ಬಿಗಿಸಲ್ಪಟ್ಟ ಜಡೆಮುಡಿಯ, ಸ್ಯಾಟೀನಿನಲ್ಲಿ ಹುದುಗಿಟ್ಟ ಈ ವಸ್ತು ಹದಿನಾರಾಣೆ ನನ್ನ ಒಡವೆಯೇ. ನಾನೇ ಅವಳ ಒಡೆಯ, ಅವಳ ದೈವ. ಬೇರೆ ಯಾವ ದುರ್ಲಭ ವಸ್ತುವಿಗಾದರೂ ಸಾಧನೆ ಮಾಡಬೇಕಾಗುತ್ತದೆ. ಆದರೆ ನನ್ನ

ಕಿರುಬೆರಳು ಅಲುಗಿಸಿದರೆ ಸಾಕು, ವಿಧಾತನು ನನಗೆ ಈ ವರವನ್ನು ಒಪ್ಪಿಸಲು ನನ್ನ ಮನವೊಲಿಸಲು ಬೆನ್ನ ಹಿಂದೆಯೇ ತಿರುಗುತ್ತಿರುತ್ತಾನೆ. ನಮ್ಮಮ್ಮನನ್ನು ನಾನು ಒಂದೇ ಸಮನೆ ಬಹಳ ದಿನಗಳಿಂದಲೂ ಗಮನಿಸುತ್ತ ಬಂದಿದ್ದೇನೆ. ಅದರಂತೆ ಹೆಣ್ಣು ಅಂದರೆ, ಹೆಚ್ಚಾಗಿ ಹೆಂಡತಿಯೆಂದರೆ ಏನು ಎಂಬುದನ್ನು ಸಾಕಷ್ಟು ತಿಳಿದುಕೊಂಡಿದ್ದೆ. ಅಪ್ಪನಿಗೆ ಅಮ್ಮ ಮಾಡುವ ಬೇರೆಲ್ಲ ವ್ರತ, ನೇಮಗಳನ್ನು ಕಂಡರೆ ಬೆಂಕಿ. ಆದರೆ ಸಾವಿತ್ರಿ ವ್ರತ ಒಂದರ ಬಗ್ಗೆ ಮಾತ್ರ, ಹೊರಗೆ ಬಾಯಲ್ಲಿ ಏನೆಂದರೂ, ಮನಸ್ಸಿನೊಳಗೆ ಬೇಕಾದಷ್ಟು ತೃಪ್ತಿ ಆನಂದಗಳನ್ನನುಭವಿಸುತ್ತಿದ್ದರು. ಅಮ್ಮನಿಗೆ ನಮ್ಮಪ್ಪನ ಮೇಲೆ ಬಹಳ ಪ್ರೀತಿ–ಅದೇನೋ ಗೊತ್ತು. ಆದರೆ ಅದೇಕೆ ಅಪ್ಪ ಮಾತು ಮಾತಿಗೆ ರೇಗುತ್ತಿದ್ದುದು, ಏತರಿಂದ ಅವರಿಗೆ ಬೇಸರವಾಗುತ್ತಿದ್ದುದು– ಎಂದು ಚಿಂತಿಸುತ್ತ ಅಮ್ಮ ಮನಸ್ಸಿನೊಳಗೆ ಸುಮ್ಮನೆ ಬೇಗುದಿಗೊಳ್ಳುತ್ತಿದ್ದಳು. ಇದರ ರಸಭೋಗವನ್ನು ಅಪ್ಪ ಒಳಗೊಳಗೇ ಅನುಭವಿಸಿ ತಮ್ಮ ಪೌರುಷಭಾವವನ್ನು ತೃಪ್ತಿಗೊಳಿಸಿಕೊಳ್ಳುತ್ತಿದ್ದರು. ದೇವತೆಗಳಿಗೆ ಪೂಜೆಯಿಂದಷ್ಟೇನು ದೊಡ್ಡ ಲಾಭವಾಗಲಿಕ್ಕಿಲ್ಲ. ಏಕೆಂದರೆ ಅದು ಅವರಿಗೆ ವಿಧ್ಯುಕ್ತವಾಗಿ ಸಲ್ಲತಕ್ಕದ್ದೇ. ಆದರೆ ಮನುಷ್ಯರಿಗೆ ಮಾತ್ರ ಅದು ವಿಧ್ಯುಕ್ತವಾಗಿ ಸಲ್ಲತಕ್ಕದಲ್ಲವಾದರೂ ತಾನಾಗಿ ಬರುವ ಸಂಪಾದನೆ. ಆದ್ದರಿಂದಲೇ ಅದರ ಬಗ್ಗೆ ಅವರಿಗೆ ತಡೆಯಲಾರದ ಲೋಭ...ಈ ಹುಡುಗಿಯ ರೂಪ, ಗುಣಗಳು ಆ ದಿನ ನನ್ನನ್ನು ಆಕರ್ಷಣ ಮಾಡಲಿಲ್ಲ. ಆದರೆ ನಾನು ಇವಳಿಗೆ ಪೂಜನೀಯ ವ್ಯಕ್ತಿ ಎಂಬ ಯೋಚನೆ ಮಾತ್ರ ಆ ನನ್ನ ಹದಿನಾಲ್ಕು ವರ್ಷ ವಯಸ್ಸಿನ ಪುರುಷರಕ್ತದಲ್ಲಿ ಸುಳಿದು ಹರಿಯಿತು. ಆ ದಿನ ಅತ್ಯಂತ ಸಂಭ್ರಮದಿಂದ ಮಾವಿನ ಹಣ್ಣುಗಳನ್ನು ತಿಂದೆ, ಅಷ್ಟೇ ಅಲ್ಲ, ಬಿಂಕದಿಂದ ಮೂರು ಮಾವಿನ ಹಣ್ಣುಗಳನ್ನು ಹಾಗೇ ಉಳಿಸಿದೆ; ಹಾಗೆಂದೂ ನನ್ನ ಜೀವನದಲ್ಲಿ ಮಾಡಿರಲಿಲ್ಲ. ಅದರ ಬಗ್ಗೆ ಆ ದಿನ ಇಡೀ ಸಂಜೆ ಪಶ್ಚಾತ್ತಾಪಪಟ್ಟದ್ದೂ ಆಯಿತು.

ಆ ದಿನ ನನ್ನ ಸಂಗಡ ತನ್ನ ಸಂಬಂಧ ಯಾವ ಬಗೆಯದು ಎಂಬುದು ಕಾಶೀಶ್ವರಿಗೆ ಇನ್ನೂ ಗೊತ್ತಿರಲಿಲ್ಲ. ಆದರೆ ಬಹುಶಃ ಅವಳು ಮನೆಗೆ ಹಿಂದಿರುಗಿದ ಮೇಲೆ ತಿಳಿದುಕೊಂಡಿರಬಹುದು. ಅದಾದ ಅನಂತರ ಅವಳು ನನ್ನನ್ನು ಕಂಡೊಡನೆ ಹೆದರಿಕೊಂಡು ಅಡಗುತ್ತಿದ್ದಳು. ಹೀಗೆ ನನ್ನನ್ನು ನೋಡಿ ಅವಳು ಕಕ್ಕಾಬಿಕ್ಕಿಯಾಗುವುದು ನನಗೆ ಬಹಳ ಇಷ್ಟವಾಗುತ್ತಿತ್ತು. ನನ್ನ ಆವಿರ್ಭಾವವು ವಿಶ್ವದ ಯಾವುದೋ ಒಂದು ಜಾಗದಲ್ಲಿ ಯಾವುದೋ ಒಂದು ಆಕಾರದಲ್ಲಿ ಅತಿ ಪ್ರಬಲವಾದೊಂದು ಪ್ರಭಾವ ಸಂಚಾರವಾಗುವಂತೆ ಮಾಡಬಲ್ಲುದು ಎಂಬ ಜೀವ ರಾಸಾಯನಿಕ (biochemical) ತಥ್ಯವು ನನ್ನ ಮನಸ್ಸಿಗೆ ಹೊಳೆದು ಬಹಳ ಹಿತವಾಗಿತ್ತು. ನನ್ನನ್ನು ನೋಡಿದೊಡನೆ ಯಾರಾದರೂ ಹೆದರುತ್ತಾರೆ, ಅಥವಾ

ನಾಚಿಕೊಳ್ಳುತ್ತಾರೆ, ಅಥವಾ ಇನ್ನೇನೋ ಮಾಡಿಬಿಡುತ್ತಾರೆ–ಎಂಬ ಸಂಗತಿಯಂತೂ ನನಗೆ ಬಹಳ ಅಪೂರ್ವವೆನ್ನಿಸಿತು. ಕಾಶೀಶ್ವರಿಯು ತಾನು ಪೂರ್ತಿಯಾಗಿ ನನಗೆ ಸೇರಿದ ಒಡವೆಯೇ ಎಂಬುದನ್ನು ಹೀಗೆ ಕಂಡೊಡನೆ ಓಡಿಹೋಗುವ ಮೂಲಕವೇ ವ್ಯಕ್ತಪಡಿಸಿಬಿಟ್ಟಿದ್ದಳು.

ಇಷ್ಟರವರೆಗೆ ಯಃಕಶ್ಚಿತನಾಗಿದ್ದವನು ಹಠಾತ್ತಾಗಿ ಒಂದು ಕ್ಷಣದಲ್ಲಿ ಇಂತಹ ದೊಡ್ಡ ಏಕಾಂತ ಗೌರವದ ಸ್ಥಾನ ಲಭಿಸಿ ನನ್ನ ತಲೆಯ ರಕ್ತ ಬಿಸಿಯಾಗಿಬಿಟ್ಟಿತ್ತು. ನಮ್ಮಪ್ಪನು ಅಮ್ಮನನ್ನು ಯಾವ ರೀತಿ ಮನೆವಾಳ್ತೆಯ ಯಾವುದೋ ಕರ್ತವ್ಯದ ಬಗ್ಗೆಯೋ, ಅಡಿಗೆಯ ಬಗ್ಗೆಯೋ, ಯಾವುದೋ ಏರ್ಪಾಡಿನ ಕೊರತೆಯನ್ನು ಕುರಿತೋ ಸದಾ ದೂರುತ್ತ ವ್ಯಾಕುಲಗೊಳಿಸುತ್ತ ಇರುತ್ತಿದ್ದರೋ ನಾನೂ ಹಾಗೇ ಮನದೊಳಗೇ ಅವರ ಮೇಲ್ಪಂಕ್ತಿಯಂತೆ ಮಾಡತೊಡಗಿದೆ. ಅಪ್ಪನಿಗೆ ಗೋಚರಿಸದೆ ಇದ್ದ ಯಾವುದೋ ಒಂದು ಗುರಿಯನ್ನು ಸಾಧಿಸಲೋಸುಗ ಅಮ್ಮ ಒಮ್ಮೊಮ್ಮೆ ಯಾವ ರೀತಿ ಸಾವಧಾನದಿಂದ ಮತ್ತು ನಾನಾ ಬಗೆಯ ಮನೋಹರವಾದ ಜಾಣತನದಿಂದ ತನ್ನ ಇಷ್ಟವನ್ನು ಕೈಗೂಡಿಸಿಕೊಳ್ಳುತ್ತಿದ್ದಳೋ, ನಾನೂ, ನನ್ನ ಕಲ್ಪನೆಯ ಚಿತ್ರದಲ್ಲಿ ಕಾಶೀಶ್ವರಿಯೂ ಅದೇ ರೀತಿಯಾಗಿ ಪ್ರವೃತ್ತಳಾಗಿರುವುದನ್ನು ಕಂಡೆ. ಆಗಾಗ ಮನಸ್ಸಿನಲ್ಲೇ ಅಕಸ್ಮಾತ್ತಾಗಿ ನಾನವಳಿಗೆ ಸ್ವಲ್ಪವೂ ಸಂಕೋಚವಿಲ್ಲದೆ ಅತಿ ಧಾರಾಳವಾಗಿ ದೊಡ್ಡ ಮೊತ್ತದ ಬ್ಯಾಂಕು ಚೆಕ್ಕಿನಿಂದ ಮೊದಲುಗೊಂಡು ವಜ್ರದ ಒಡವೆಗಳವರೆಗೂ ಉಪಹಾರ ಕೊಡತೊಡಗಿದೆ. ಒಂದೊಂದು ದಿನ ಊಟಕ್ಕೆ ಕೂತು, ಅವಳು ಮಾತ್ರ ಊಟ ಮಾಡದೆ ಕಿಟಕಿಯ ಬಳಿ ಕೂತು ಸೆರಗಿನಿಂದ ಕಂಬನಿಯನ್ನೊರಸಿಕೊಳ್ಳುತ್ತಿರುವ ಮರುಕ ತರುವ ನೋಟವನ್ನೂ ನನ್ನ ಮನಸ್ಸಿನ ಕಣ್ಣುಗಳಿಂದ ನೋಡಬಲ್ಲವನಾದೆ. ಆದರೆ ಅದು ನನಗೆ ಅತ್ಯಂತ ಶೋಚನೀಯವೆನ್ನಿಸಿತು ಎಂಬುದನ್ನು ಮಾತ್ರ ಹೇಳಲಾರೆ. ಸಣ್ಣ ಮಕ್ಕಳ ಸ್ವಾವಲಂಬನದ ಬಗ್ಗೆ ನಮ್ಮಪ್ಪ ಬಹಳ ಕಟ್ಟುನಿಟ್ಟು ಮಾಡಿದ್ದರು. ನನ್ನ ಕೋಣೆಯನ್ನು ನಾನೇ ಚೊಕ್ಕ ಮಾಡಿಕೊಳ್ಳುವುದು, ಬಟ್ಟೆ ಬರೆಗಳನ್ನು ಒಗೆದು ಮಡಿಸಿಟ್ಟುಕೊಳ್ಳುವುದು ಇಂಥವುಗಳನ್ನು ನಾನೇ ಕೈಯ್ಯಾರೆ ಮಾಡಬೇಕಾಗಿತ್ತು. ಆದರೆ, ನನ್ನ ಮನಸ್ಸಿನೊಳಗಡೆ ಸ್ಪಷ್ಟವಾದ ರೇಖೆಗಳಲ್ಲಿ ಎಚ್ಚರಗೊಂಡೆದ್ದಿರುವ ಮನೆವಾಳ್ತೆಯ ಕೆಲವು ಚಿತ್ರಗಳಲ್ಲಿ ಒಂದನ್ನು ಕೆಳಗೆ ಬರೆದಿದ್ದೇನೆ–ನನ್ನ ತಂದೆಯ ಇತಿಹಾಸದಲ್ಲೂ ಸರಿಯಾಗಿ ಇದೇ ರೀತಿಯ ಘಟನೆಯೇ ಹಿಂದೆ ಒಂದು ದಿನ ನಡೆದಿತ್ತೆಂದು ಹೇಳುವುದನವಶ್ಯಕ. ಈ ಕಲ್ಪನೆಯ ನಡುವೆ ನನ್ನ ಒರಿಜಿನಾಲಿಟಿ (originality) ಸ್ವಲ್ಪವೂ ಇಲ್ಲ... ಆ ಚಿತ್ರ ಹೀಗೆ...ಒಂದು ಭಾನುವಾರ ಮಧ್ಯಾಹ್ನ ಊಟವಾದ ಮೇಲೆ ನಾನು ಮಂಚದ ಮೇಲೆ ದಿಂಬಿಗೊರಗಿಕೊಂಡು ಕಾಲು ಚಾಚಿ ಅರ್ಧ ಮಲಗಿರುವ ಅವಸ್ಥೆಯಲ್ಲಿ ವೃತ್ತಪತ್ರಿಕೆ ಓದುತ್ತಿದ್ದೇನೆ. ಕೈಯಲ್ಲಿ ಗುಡು ಗುಡಿಯ ನಳಿಗೆ. ಸ್ವಲ್ಪ ನಿದ್ದೆಯ

ಜೋಂಪು ಹತ್ತುತ್ತಲೂ ಕೈಯಿಂದ ನಳಿಗೆ ಜಾರಿ ಬೀಳುತ್ತದೆ. ವರಾಂಡದಲ್ಲಿ ಕೂತು ಕಾಶೀಶ್ವರಿಯು ಅಗಸನಿಗೆ ಬಟ್ಟೆಗಳನ್ನು ಹಾಕುತ್ತಿದ್ದಾಳೆ. ನಾನವಳನ್ನು ಕೂಗುತ್ತೇನೆ. ಅವಳು ಅವಸರವಸರವಾಗಿ ಓಡಿ ಬರುತ್ತಾಳೆ. ಬಂದು ನಳಿಗೆಯನ್ನು ಎತ್ತಿ ನನ್ನ ಕೈಯಲ್ಲಿಡುತ್ತಾಳೆ. ನಾನವಳನ್ನು ಕುರಿತು "ನೋಡು, ನನ್ನ ದಿವಾನ್‌ಖಾನೆಯಲ್ಲಿ ಎಡಗಡೆಯ ಅಲಮಾರಿನಲ್ಲಿ ಮೂರನೆಯ ಷೆಲ್ಫಿನಲ್ಲಿ ನೀಲಿಯ ರಂಗಿನ ರಟ್ಟು ಹಾಕಿರುವ ದಪ್ಪನೆಯ ಇಂಗ್ಲಿಷ್ ಪುಸ್ತಕವೊಂದಿದೆ. ಅದನ್ನ ತೆಗೆದುಕೊಂಡು ಬಾ, ಮತ್ತೆ" ಎನ್ನುತ್ತೇನೆ. ಒಂದೆರಡು ಗಳಿಗೆಗಳಲ್ಲಿ ಕಾಶೀಶ್ವರಿ ಒಂದು ನೀಲಿ ರಂಗಿನ ಪುಸ್ತಕ ತಂದು ಕೊಡುತ್ತಾಳೆ. ನಾನಾಗ "ಛೆ, ಇದಲ್ಲವೇ, ಅದು ಇದಕ್ಕಿಂತಲೂ ದಪ್ಪನಾಗಿದೆ. ಅದರ ಹಿಂದಿನ ರಟ್ಟಿನ ಮೇಲೆ ಚಿನ್ನದ ಗಿಲೀಟು ಅಕ್ಷರಗಳಲ್ಲಿ ಹೆಸರು ಬರೆದಿದೆ," ಅನ್ನುತ್ತೇನೆ. ಈ ಸಲ ಅವಳು ಹಸಿರು ರಂಗಿನ ಬೇರೊಂದು ಪುಸ್ತಕವನ್ನು ತರುತ್ತಾಳೆ. ನಾನು ಅದನ್ನು ಧಡಾರೆಂದು ನೆಲದ ಮೇಲೆ ಒಗೆದು ರೇಗಿ ಗಟ್ಟಿಯಾಗಿ ಗದರುತ್ತೇನೆ. ಆಗವಳ ಮುಖವು ಹಿಡಿಯಷ್ಟಾಗಿಬಿಡುತ್ತದೆ. ಕಂಗಳಿಂದ ನೀರು ಹರಿಯುತ್ತದೆ. ನಾನೇ ಎದ್ದು ಹೋಗಿ ನೋಡುತ್ತೇನೆ. ಮೂರನೇ ಷೆಲ್ಫಿನಲ್ಲಿ ಪುಸ್ತಕಗಳು ಯಾವುವೂ ಇರುವುದಿಲ್ಲ. ಆ ಪುಸ್ತಕ ಐದನೇ ಷೆಲ್ಫಿನಲ್ಲಿರುತ್ತದೆ. ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ಬಂದು ನಿಶ್ಶಬ್ದವಾಗಿ ಹಾಸಿಗೆ ಮೇಲೆ ಮಲಗುತ್ತೇನೆ. ಆದರೆ ನನ್ನ ತಪ್ಪಿನ ವಿಷಯವಾಗಿ ಕಾಶೀಶ್ವರಿಗೆ ಏನೂ ಹೇಳುವುದಿಲ್ಲ. ಅವಳು ತಲೆ ತಗ್ಗಿಸಿಕೊಂಡು ಖಿನ್ನಳಾಗಿ ಅಗಸನಿಗೆ ಬಟ್ಟೆಗಳನ್ನು ಹಾಕುವುದರಲ್ಲಿ ಮತ್ತೆ ವ್ಯಸ್ತಳಾಗುತ್ತಾಳೆ. ಮತ್ತು ತನ್ನ ಬುದ್ಧಿಹೀನತೆಯಿಂದ ಗಂಡನ ವಿಶ್ರಾಂತಿಯನ್ನು ಭಂಗಗೊಳಿಸಿದುದಕ್ಕಾಗಿ ತನ್ನನ್ನೇ ದೂಷಿಸಿಕೊಳ್ಳುತ್ತಾ ಇರುತ್ತಾಳೆ.

ಅಪ್ಪ ಮೊಕದ್ದಮೆಯ ತನಿಖೆಯನ್ನು ನಡೆಸಿಕೊಂಡೇ ಇದ್ದರು. ಇಲ್ಲಿ ಈ ಕಡೆ ನನ್ನ ದಿನಗಳು ಈ ರೀತಿಯಾಗಿ ನಡೆದುಕೊಂಡು ಹೋಗುತ್ತಿದ್ದುವು. ನಮ್ಮ ಪಂಡಿತ ಮಹಾಶಯರ ವ್ಯವಹಾರ ಮತ್ತು ಭಾಷೆ ನನ್ನ ಬಗ್ಗೆ ಅಸಾಧಾರಣವಾಗಿ ಬದಲಾಯಿಸಿಹೋದುದರಲ್ಲಿ ಆಶ್ಚರ್ಯವಿಲ್ಲ. ಭಾಷೆಯಂತು ಒಮ್ಮೆಗೇ ಕರ್ತೃವಾಚ್ಯದಿಂದ ಭಾವವಾಚ್ಯಕ್ಕೆ ಬಂದು ತಲಪಿ ಬರಬರುತ್ತ ನಿರತಿಶಯ ಸದ್ಭಾವ ವಾಚ್ಯಕ್ಕೆ ಬಂದು ನಿಂತುಕೊಂಡಿತು.

ಇಂಥ ವೇಳೆಯಲ್ಲಿ ಮೊಕದ್ದಮೆಯ ವಿಚಾರಣೆಯನ್ನು ಮುಗಿಸಿಕೊಂಡು ಅಪ್ಪ ಮನೆಗೆ ಮರಳಿದರು. ನನಗೆ ಗೊತ್ತಿತ್ತು. ಅಮ್ಮ ಮೆಲ್ಲಮೆಲ್ಲಗೆ ಸಮಯ ಕಾದು ಆ ಮಾತು, ಈ ಮಾತು ಆಡುತ್ತ, ಬಳಸಿ ಅಪ್ಪನಿಗೆ ಹೆಚ್ಚು ಇಷ್ಟವಾಗಿರುವ ಪಲ್ಯ, ಪಳದ್ಯಗಳನ್ನು ತಯಾರು ಮಾಡುತ್ತ ನಿಧಾನವಾಗಿ ಸ್ವಲ್ಪ ಸ್ವಲ್ಪವಾಗಿ ಪ್ರಸ್ತಾಪವೆತ್ತುವ ಹವಣಿಕೆ ನೊಡುತ್ತಿದ್ದಳು. ಅಪ್ಪನೋ ಈ ಪಂಡಿತ ಮಹಾಶಯರನ್ನು ಕಂಡರೆ ಹಣಕ್ಕಾಗಿ ಬಾಯಿ ಬಿಡುತ್ತಿರುವನೆಂದು ತಾತ್ಸಾರ ಮಾಡುತ್ತಿದ್ದರು. ಅಮ್ಮನು ಅದನ್ನು

ತಿಳಿದೇ ಮೊದಲು ಮೊದಲು ಆತನನ್ನು ಆಡಿಕೊಳ್ಳುವಂತೆ ನಟಿಸಿ ಅದೇ ಸಂದರ್ಭದಲ್ಲಿ ಆತನ ಹೆಂಡತಿಯನ್ನೂ, ಮಗಳನ್ನೂ ಸ್ವಲ್ಪ ಹೆಚ್ಚಾಗಿಯೇ ಸ್ತೋತ್ರಮಾಡುತ್ತ ಆಮೇಲೆ ತಟಕ್ಕೆಂದು ಸೂಚನೆ ಕೊಡಬೇಕೆಂದು ಮೊದಲಿನಿಂದಲೇ ಹಂಚಿಕೆ ಮಾಡಿದ್ದಳು.

ಆದರೆ ದೌರ್ಭಾಗ್ಯವಶಾತ್ ನಮ್ಮ ಪಂಡಿತ ಮಹಾಶಯರ ಆನಂದೋದ್ರೇಕದ ಪ್ರತಿಫಲವಾಗಿ ಸುದ್ದಿ ಊರಲ್ಲೆಲ್ಲ ಹರಡಿಬಿಟ್ಟಿತ್ತು. ಮದುವೆಂಯು ನಿಷ್ಕರ್ಷೆಯಾಗಿಹೋಗಿದೆಯೆಂದೂ, ಲಗ್ನ, ನಕ್ಷತ್ರಗಳನ್ನು ನೋಡುವುದು ಮಾತ್ರ ನಡೆಯುತ್ತಿದೆ ಎಂಬುದಾಗಿ ಊರಲ್ಲಿ ಯಾರಿಗೂ ಹೇಳದೆ ಬಿಡಲಿಲ್ಲ ಆತ. ಅಷ್ಟೇ ಅಲ್ಲ, ಮದುವೆ ಜಗುಲಿಗಾಗಿ ಸಿರಸ್ತೇದಾರರ ತಾರಸಿ ಮನೆಯ ಅಂಗಳವನ್ನು ಗೊತ್ತುಮಾಡಲು ಅವರು ಯಥಾಸ್ಥಾನದಲ್ಲಿ ಮಾತುಕತೆ ಮಾಡುವುದನ್ನು ಬಿಡಲಿಲ್ಲ. ಶುಭಕರ್ಮದಲ್ಲಿ ಊರಿನ ಜನರೆಲ್ಲ ಅವರಿಗೆ ಯಥಾಸಾಧ್ಯ ನೆರವು ನೀಡುವುದಾಗಿ ಭರವಸೆಯನ್ನೂ ಪಡೆದದ್ದಾಗಿದೆ. ಅಪ್ಪನ ಕೋರ್ಟಿನ ವಕೀಲರ ತಂಡ ಚಂದಾ ಹಣ ಸಂಗ್ರಹಿಸಿ ಮದುವೆಯ ಖರ್ಚನ್ನೆಲ್ಲ ವಹಿಸಲು ತಯಾರಾಗಿದೆಯೆಂದೂ ಅವರು ಹರಡಿಬಿಟ್ಟರು. ಸ್ಥಳೀಯ ಎಂಟ್ರೆನ್ಸ್ ಸ್ಕೂಲಿನ ಸೆಕ್ರೆಟರಿಯಾದ ಬೀರೇಶ್ವರಬಾಬುಗಳ ಮೂರನೆಯ ಮಗ ಮೂರನೆಯ ಕ್ಲಾಸಿನಲ್ಲಿ ಓದುತ್ತಿದ್ದವನು, ಚಂದ್ರ ಮತ್ತು ಕುಮುದ ಪುಷ್ಪಗಳ ರೂಪಕವನ್ನು ಅವಲಂಬಿಸಿ ಇಷ್ಟರಲ್ಲೇ ಲಗ್ನದ ಸಮಯದಲ್ಲಿ ಓದುವುದಕ್ಕೆಂದು ತ್ರಿಪದಿ ಛಂದಸ್ಸಿನಲ್ಲಿ ಕವಿತೆಯೊಂದನ್ನು ಬರೆದುಬಿಟ್ಟಿದ್ದಾಗಿದೆ. ಸೆಕ್ರೆಟರಿ ಬಾಬುಗಳು ಆ ಕವಿತೆಯ ಬಗ್ಗೆ ಬೀದಿ ಬೀದಿಗಳಲ್ಲೂ ನದೀ ಘಟ್ಟದಲ್ಲೂ, ಯಾರು ಸಿಕ್ಕಿದರೆ ಅವರನ್ನು ಹಿಡಿದು ಓದಿ ಹೇಳುತ್ತಿರುತ್ತಾರೆ. ಆ ಹುಡುಗನ ಭವಿಷ್ಯದ ಬಗ್ಗೆ ಗ್ರಾಮದ ಜನರೆಲ್ಲ ಅತ್ಯಂತ ಆಶಾನ್ವಿತರಾಗಿಬಿಟ್ಟಿದ್ದಾರೆ.

ಇದೆಲ್ಲದರ ಫಲಿತಾಂಶ ಊರಿಗೆ ಮರಳಿ ಬಂದೊಡನೆ ಹೊರಗಡೆಯಿಂದಲೇ ಅಪ್ಪ ಈ ಶುಭ ಸಂವಾದವನ್ನು ಕೇಳಿ ತಿಳಿದುಕೊಂಡುಬಿಟ್ಟಿದ್ದರು. ಅದಾದ ಅನಂತರ ಅಮ್ಮನ ಕಣ್ಣೀರು, ಮತ್ತು ಅಭಿಮಾನದಿಂದ ಮಾಡಿದ ಉಪವಾಸ, ಮನೆಯವರೆಲ್ಲರ ಭೀತಿವಿಹ್ವಲತೆ, ಚಾಕರರ ಮೇಲೆ ವಿನಾಕಾರಣ ಜುಲ್ಮಾನೆ, ಕಛೇರಿಯಲ್ಲಿ ವಿಚಾರಣೆ ಮಾಡುವ ಮೊಕದ್ದಮೆಗಳನ್ನು ನಿರ್ದಾಕ್ಷಿಣ್ಯವಾಗಿ ಡಿಸ್‌ಮಿಸ್ ಮಾಡುವಿಕೆ, ಇತರ ಕೇಸುಗಳಲ್ಲಿ ಅಷ್ಟೇ ನಿರ್ದಾಕ್ಷಿಣ್ಯವಾಗಿ ಕಠಿಣ ಶಿಕ್ಷೆ, ಪಂಡಿತ ಮಹಾಶಯರನ್ನು ಕೆಲಸದಿಂದ ವಜಾ ಮಾಡುವಿಕೆ ಮತ್ತು ಆತನು ತನ್ನ ಟಿನ್ಸ್‌ತಂತಿ, ಜಾಕೆಟ್ಟುಗಳಿಂದ ಅಲಂಕೃತಳಾದ ಮಗಳೊಂದಿಗೆ ಅಂತರ್ಧಾನನಾಗುವಿಕೆ ಮತ್ತು ಬೇಸಿಗೆ ರಜ ಮುಗಿಯುವುದಕ್ಕೆ ಮುಂಚೆಯೇ ಅಮ್ಮನ ಸಾನ್ನಿಧ್ಯದಿಂದ ತೊಲಗಿಸಿ ನನ್ನನ್ನು ಬಲಾತ್ಕಾರವಾಗಿ ಬೈಗಳೊಡನೆ ಕಲಿಕತ್ತೆಗೆ ಗಡೀಪಾರು ಮಾಡುವಿಕೆ–ಇಷ್ಟೆಲ್ಲಾ ಒಂದರ ಜೊತೆಗೊಂದರಂತೆ ವಿರಾಮವಿಲ್ಲದೆ ನಡೆದುಹೋಯಿತು. ನನ್ನ ಮನಸ್ಸು ಫುಟ್‌ಬಾಲಿನ

ಬ್ಲಾಡರಂತೆ ಫಟ್ ಎಂದು ಒಡೆದುಹೋಯಿತು. ಇನ್ನದರ ಆಕಾಶದಲ್ಲಿ, ವಾಯುಮಂಡಲದಲ್ಲಿ ಹಾರಾಡಿ ವಿಹರಿಸುವಿಕೆ ನಿಂತುಹೋಯಿತು.

೨

ನನ್ನ ಪರಿಣಯದ ಪಥದಲ್ಲಿ ಮೊದಲಿಂದಲೇ ಈ ವಿಘ್ನ. ಇದಾದಮೇಲೂ ನನ್ನ ವಿರೋಧವಾಗಿ ಪ್ರಜಾಪತಿ ಬ್ರಹ್ಮನು ಮಾಡಿದ ವ್ಯರ್ಥ ಪಕ್ಷಪಾತ ಎಷ್ಟೋ ನಡೆದಿವೆ. ಅದರ ವಿಸ್ತಾರವಾದ ವಿವರವನ್ನು ಕೊಡಲಿಷ್ಟವಿಲ್ಲ ನನಗೆ. ನನ್ನ ಈ ವಿಫಲತೆಯ ಇತಿಹಾಸದ ಒಂದೆರಡು ಸಂಕ್ಷೇಪವಾದ ಟಿಪ್ಪಣಿಗಳನ್ನು ಮಾತ್ರ ಬರೆಯುತ್ತೇನೆ. ಇಪ್ಪತ್ತು ವರ್ಷ ವಯಸ್ಸಾಗುವುದಕ್ಕೆ ಮೊದಲೇ ನಾನು ಪೂರ್ತಿಯಾಗಿ ಎಂ.ಎ. ಪರೀಕ್ಷೆಯಲ್ಲಿ ಪಾಸಾಗಿ ಕಣ್ಣಿಗೆ ಕನ್ನಡಕವೇರಿಸಿ ಮೀಸೆಯ ಮೇಲೆ ಕೈಯಾಡಿಸುವಷ್ಟು ಯೋಗ್ಯತೆಯನ್ನು ಪಡೆದುಬಿಟ್ಟೆ. ಅಪ್ಪನಾಗ ರಾಮ್‌ಪುರ್‌ಹಾಟ್ ಅಥವಾ ನವಾಖಾಲಿ ಅಥವಾ ಬಾರಾಸಾತ್ ಅಥವಾ ಇನ್ನಾವುದೋ ಇಂತಹುದೇ ಒಂದು ಸ್ಥಳದಲ್ಲಿ ಇದ್ದರು. ಇಷ್ಟು ದಿನಗಳವರೆಗೂ ಶಬ್ದಸಾಗರವನ್ನು ಕಡೆದು ಡಿಗ್ರಿಗಳನ್ನು ಪಡೆದುದಾಯಿತು. ಈ ಬಾರಿ ಅರ್ಥಸಾಗರನ್ನು ಕಡೆಯುವ ಸರದಿ ಬಂತು. ಅಪ್ಪನು ತನ್ನ ದೊಡ್ಡ ದೊಡ್ಡ ಪೇಟ್ರನ್ ಸಾಹೇಬರುಗಳನ್ನ ಆಶ್ರಯಿಸಲು ಹೋದಾಗ ತಿಳಿಯಲಾಯಿತು. –ಆತನ ಅತ್ಯಂತ ದೊಡ್ಡ ಪ್ರೋತ್ಸಾಹಕಾರಿಯಾದ ಸಾಹೇಬನು ಆಗಲೇ ಪರಲೋಕಕ್ಕೆ ಹೋಗಿಬಿಟ್ಟಿದ್ದ. ಅವನಿಗಿಂತಲೂ ಸ್ವಲ್ಪ ಕೆಳಗಿದ್ದವನು ಪಂಜಾಬಿಗೆ ವರ್ಗವಾಗಿ ಹೋಗಿದ್ದ. ಬಂಗಾಳ ದೇಶದಲ್ಲಿ ಇನ್ನು ಉಳಿದಿದ್ದ ಒಬ್ಬ ಸಾಹೇಬನೆಂತಹನೆಂದರೆ ಉಮೇದುವಾರರಿಗೆ ಮೊದಮೊದಲು ಆಶ್ವಾಸನೆ ಕೊಟ್ಟು, ನೌಕರಿಗಳ ನೇಮಕ ಮಾಡುವಾಗ ಆ ಆಶ್ವಾಸನೆಗಳನ್ನೆಲ್ಲ ಸುಲಭವಾಗಿ ಮರೆತುಬಿಡುವಂತಹವನು. ನನ್ನ ಅಜ್ಜನು ಡೆಪ್ಯುಟಿ ಮ್ಯಾಜಿಸ್ಟ್ರೇಟರಾಗಿದ್ದಾಗ ಶಿಫಾರಸ್ ಬೇಡುವ ವೃತ್ತಿ ಈಗಿನಷ್ಟು ಕಠಿಣವಾಗಿರಲಿಲ್ಲ.

ಆದ್ದರಿಂದಲೇ ಆಗಿನ ಕಾಲದಲ್ಲಿ ನೌಕರಿಯಿಂದ ಪೆನ್‌ಶನ್ನು, ಮತ್ತು ಪೆನ್‌ಶನ್ನಿನಿಂದ ಮತ್ತೆ ನೌಕರಿ ಹೀಗೆ ಒಂದೇ ವಂಶದಲ್ಲಿ ಎಡೆಬಿಡದೆ ದೋಣಿ ಈ ದಡದಿಂದ ಆ ದಡಕ್ಕೆ, ಮತ್ತೆ ಆ ದಡದಿಂದ ಈ ದಡಕ್ಕೆ ತೇಲಿಕೊಂಡು ಹೋಗುತ್ತಿತ್ತು. ಈಗ ದಿನಗಳೂ ಕೆಟ್ಟುಹೋಗಿವೆ. ಅದಕ್ಕೆ ಅಪ್ಪ ಉದ್ವಿಗ್ನರಾಗಿ ತನ್ನ ವಂಶಧರನಾದ ನಾನು ಸರ್ಕಾರಿಯ ಉಚ್ಚ ಉದ್ಯೋಗಸ್ಥನಾಗುವ ಬದಲಾಗಿ ಯಾವುದಾದರೂ ವಾಣಿಜ್ಯ ಕಂಪೆನಿಯ ಗುಮಾಸ್ತೆಯ ಪದವಿಗೆಲ್ಲಿ ಇಳಿದುಬಿಡುತ್ತೇನೋ ಎಂದು ಯೋಚನೆ ಮಾಡುತ್ತಿದ್ದಾಗ, ಆ ಸಮಯಕ್ಕೆ ಸರಿಯಾಗಿ ಒಬ್ಬ ಧನಿಕನಾದ ಬ್ರಾಹ್ಮಣನ ಒಬ್ಬಳೇ ಮಗಳೂ ಅವರ ಗಮನಕ್ಕೆ ಬಂದಳು. ಆ ಬ್ರಾಹ್ಮಣ ಕಂಟ್ರಾಕ್ಟರು, ಆತನ

ಹಣದ ಸಂಚಾರದ ದಾರಿ ಬಹಿರಂಗವಾಗಿ ಭೂತಳದ ಮೇಲಿರುವುದಕ್ಕಿಂತಲೂ ಅದೃಶ್ಯವಾಗಿ ಪಾತಾಳದ ದಿಕ್ಕಿನಿಂದಲೇ ಪ್ರಶಸ್ತವಾಗಿತ್ತು. ಆತನು ಆ ಸಮಯದಲ್ಲಿ ಯಾವುದೋ ದೊಡ್ಡ ಪ್ರಸಂಗದ ಉಪಲಕ್ಷ್ಯವಾಗಿ ಕಿತ್ತಿಲೆ ಹಣ್ಣು ಮತ್ತು ಬೇರೆ ಬೇರೆ ಉಪಹಾರ ಸಾಮಗ್ರಿಗಳನ್ನು ಹಂಚಲು ಯೋಗ್ಯರಾದ ಪಾತ್ರಗಳನ್ನು ಹುಡುಕುವುದರಲ್ಲಿ ವ್ಯಸ್ತವಾಗಿರಲು ಆಗ ಆತನ ಓಣಿಯಲ್ಲಿ ನಮ್ಮಗಳ ಆವಿರ್ಭಾವವಾಯಿತು, ನಮ್ಮ ಮನೆ ಅವರ ಮನೆಯ ಎದುರಿಗೇ ಇತ್ತು. ಮಧ್ಯೆ ಇದ್ದುದು ಒಂದು ರಸ್ತೆ ಮಾತ್ರ. ಡೆಪ್ಯುಟಿ ಮ್ಯಾಜಿಸ್ಟ್ರೇಟರ ಎಂ.ಎ. ಪಾಸು ಮಾಡಿದ ಮಗನೆಂದರೆ ಹೆಣ್ಣು ಹೆತ್ತವರ ದೃಷ್ಟಿಯಲ್ಲಿ ಅತಿ ತುದಿಯ ರೆಂಬೆಯಲ್ಲಿರುವ ಫಲದಂತೆ – ಎಂದು ಹೇಳಬೇಕಾಗಿಲ್ಲ. ಈ ಕಾರಣದಿಂದ ಕಂಟ್ರಾಕ್ಟರ್ ಮಹಾಶಯರು ನನ್ನ ಕಡೆ ಬಾಹುಗಳನ್ನು ಚಾಚಿ ನಿಂತಿದ್ದರು. ಆತನ ಬಾಹುಗಳಂತೂ ಸದಾ ಬೆಳ್ಳಿ ನಾಣ್ಯಗಳನ್ನು ಹಿಡಿಯಲ್ಲಿಟ್ಟುಕೊಂಡು ಇರುವಂಥವೆಂದು ಮೊದಲೇ ಪರಿಚಯ ಕೊಟ್ಟದ್ದಾಗಿದೆ. ಈಗಂತೂ ಅವು ಯಾವ ಕಡೆಯೂ ಇಲ್ಲದೆ ಡೆಪ್ಯುಟಿ ಸಾಹೇಬರ ಹೃದಯದವರೆಗೂ ಅನಾಯಾಸವಾಗಿ ಮುಟ್ಟಿಬಿಟ್ಟಿದ್ದುವು. ಆದರೆ ನನ್ನ ಹೃದಯವಿನ್ನೂ ಅವಕ್ಕೆ ಎಟುಕಲಾರದಷ್ಟು ಮೇಲಕ್ಕಿತ್ತು.

ಕಾರಣ ಇಷ್ಟೆ. ನನ್ನ ವಯಸ್ಸು ಆಗಿನ್ನೂ ಇಪ್ಪತ್ತು ದಾಟಲೇ ದಾಟಲೇ ಎನ್ನುತ್ತಿತ್ತು. ಆಗ ಅತಿ 'ಅಪರಂಜಿ' ಸ್ತ್ರೀರತ್ನದ ಹೊರತು ಬೇರಾವ ರತ್ನದ ಕಡೆಗೂ ಲಕ್ಷ್ಯ ಹೋಗುತ್ತಿರಲಿಲ್ಲ. ಅಷ್ಟೇ ಅಲ್ಲ. ಭಾವುಕತೆಯ ಕಾವು ನನ್ನ ಮನದಲ್ಲಿನ್ನೂ ಉಜ್ವಲವಾಗೇ ಇತ್ತು. ಅಂದರೆ, ಸಹಧರ್ಮಿಣಿಯೆಂಬ ಶಬ್ದದ ಅರ್ಥ ನನ್ನ ಮನದಲ್ಲೇನಿತ್ತೋ ಆ ಅರ್ಥ ಹೊರಗಡೆಯ ಬಜಾರಿನಲ್ಲಿ ಚಲಾವಣೆಯಲ್ಲಿರಲಿಲ್ಲ. ಆಧುನಿಕ ಕಾಲದಲ್ಲಿ ನಮ್ಮ ದೇಶದ ಸಮಾಜ ನಾಲ್ಕು ದಿಕ್ಕುಗಳಲ್ಲೂ ಅತ್ಯಂತ ಇಕ್ಕಟ್ಟಾದುದು. ಮನನ, ಸಾಧನಗಳ ವೇಳೆ ಮನಸ್ಸನ್ನು ಜ್ಞಾನ ಮತ್ತು ಭಾವಗಳ ಉದಾರ ಕ್ಷೇತ್ರದಲ್ಲಿ ಮುಳುಗಿಸಿಡುವುದು. ಮತ್ತು ವ್ಯವಹಾರದ ವೇಳೆ ಅದನ್ನು ಅದೇ ಸಂಸಾರದ ಅತಿ ಕೀಳು, ಅತಿ ಸಣ್ಣ ಅಳತೆಯಲ್ಲಿ ಕೃಶ ಮಾಡಿಬಿಡುವುದು – ಇದು ನನಗಂತೂ ತಡೆಯಲಸಾಧ್ಯವಾಗಿತ್ತು. ಹೆಂಡತಿಯನ್ನು ಐಡಿಯಲ್ (ಆದರ್ಶ) ದಾರಿಯಲ್ಲಿ ಸಂಗಿನಿಯಾಗಿ ಮಾಡಿಕೊಳ್ಳುವುದು ನನ್ನ ಗುರಿ. ಅಂಥವಳು ಮನೆಗೆಲಸಗಳ ಸೆರೆಮನೆಯಲ್ಲಿ ಕಾಲ್ಬೇಡಿಯಾಗಿಯೇ ಉಳಿಯಬೇಕು – ಮತ್ತು ಹೆಜ್ಜೆ ಹೆಜ್ಜೆಗೂ ಝಣತ್ಕಾರ ಮಾಡುತ್ತ ಅಡಿ ಮುಂದಿಡದಂತೆ ಎಳೆದು ಹಿಂದಕ್ಕೆ ಜಗ್ಗುತ್ತಿರಬೇಕು. ಇಂಥ ಹಣೆಬರಹವನ್ನು ಒಪ್ಪಿಕೊಳ್ಳಲು ನನ್ನ ಮನಸ್ಸೆಂದಿಗೂ ಸಿದ್ಧವಿರಲಿಲ್ಲ. ಒಟ್ಟಿನಲ್ಲಿ ನಮ್ಮ ನಾಡಿನ ನಗೆ ನಾಟಕಗಳಲ್ಲಿ ಯಾರನ್ನು ಆಧುನಿಕರೆಂದು ಅಣಕವಾಡುವರೋ, ಕಾಲೇಜಿನಿಂದ ಆಗತಾನೇ ಹೊರಬಂದ ನಾನು ಅದೇ ರೀತಿ ಅಪ್ಪಟ ಆಧುನಿಕನಾಗಿ ಹೋಗಿದ್ದೆ. ನಮ್ಮ ಕಾಲದಲ್ಲಿ ಅಂತಹ ಆಧುನಿಕರ

ತಂಡ ಈಗಿನ ಕಾಲದಲ್ಲಿರುವುದಕ್ಕಿಂತ ದೊಡ್ಡದಾಗಿತ್ತು. ಆಶ್ಚರ್ಯವೇನೆಂದರೆ ಅವರುಗಳು ನಿಜವಾಗಿ, ಸಮಾಜಕ್ಕೆ ಬಾಗಿ ನಡೆಯುವುದೇ ದುರ್ಗತಿಯೆಂದೂ, ಅದರ ಬದಲು ಅದನ್ನು ತಮ್ಮ ಇಷ್ಟದಂತೆ ಎಳೆದುಕೊಂಡು ಹೋಗುವುದೇ ಉನ್ನತಿಯೆಂದೂ ದೃಢವಾಗಿ ನಂಬಿದ್ದರು.

ಅಂತೂ ಆಗ ನಾನು, ಶ್ರೀಯುತ ಸನತ್ ಕುಮಾರ, ಒಬ್ಬ ಬಲಾಢ್ಯ ಕನ್ಯಾದಾಯಿಕನ ಹಣದ ಥೈಲಿಯ 'ಆ' ಎಂದು ಬಾಯಿ ಬಿಟ್ಟುಕೊಂಡಿರುವ ಮುಖದ ಮುಂದೆ ಕಾಣಿಸಿಕೊಂಡೆ. ಅಪ್ಪನಂತೂ "ಶುಭಸ್ಯ ಶೀಘ್ರಂ" ಎಂದರು. ನಾನೇನೂ ಹೇಳದೆ ಸುಮ್ಮನಿದ್ದೆ. ಮನದಲ್ಲೇ ಸ್ವಲ್ಪ ನೋಡಿ, ಕೇಳಿ ವಿಚಾರಿಸಿ ತಿಳಿದುಕೊಂಡು ನಿರ್ಣಯಿಸಿದರೆ ಒಳ್ಳೆಯದು ಎಂದು ತೀರ್ಮಾನಿಸಿದೆ. ಕಣ್ಣು, ಕಿವಿ ಅಗಲವಾಗಿ ತೆರೆದಿಟ್ಟುಕೊಂಡು ಕೂತೆ. ಬೇಕಾದಷ್ಟು ತಿಳಿದುಬಂತು–ಸ್ವಲ್ಪ ಮಟ್ಟಿಗೆ ನೋಡಿ ತಿಳಿದುಕೊಂಡೆ. ಹೆಚ್ಚು ಭಾಗ ಅವರಿವರಿಂದ ಕೇಳಿ ಮಂದಟ್ಟಾಯಿತು. ಹುಡುಗಿಯಂತೂ ಬೊಂಬೆಯ ಹಾಗೆ ಚಿಕ್ಕವಳು, ಅಲ್ಲದೆ ಚೆಲುವೆ. ಅವಳನ್ನು ಕಂಡರೆ ಪ್ರಕೃತಿಯ ನಿಯಮದಂತೆ ಸೃಷ್ಟಿ ಮಾಡಲ್ಪಟ್ಟವಳು ಎಂದೆನ್ನಿಸದು. ಯಾರೋ ಒಬ್ಬರು ಅವಳ ಪ್ರತಿಯೊಂದು ಕೂದಲ ಎಳೆಯನ್ನೂ ನಿಧಾನವಾಗಿ ತಯಾರುಮಾಡಿ ಕೂಡಿಸಿ, ಅವಳ ಹುಬ್ಬನ್ನೂ ಜೋಕೆಯಿಂದ ತಿದ್ದಿ, ಕೈಕಾಲುಗಳೆಲ್ಲವನ್ನೂ, ಆಸ್ಥೆಯಿಂದ, ನಿಪುಣತೆಯಿಂದ ಕಡೆದು ನಿರ್ಮಿಸಿದ ಪ್ರತಿಮೆಯಂತಿದ್ದಳು. ಅವಳು ಸಂಸ್ಕೃತ ಭಾಷೆಯಲ್ಲಿ ಇಡೀ ಗಂಗಾಸ್ತವವನ್ನು ಬಾಯಿಯಲ್ಲಿ ಹೇಳಬಲ್ಲಳು. ಅವಳ ತಾಯಿ ಕಲ್ಲಿದ್ದಲನ್ನು ಕೂಡ ಗಂಗೆಯಲ್ಲಿ ತೊಳೆದ ಮೇಲೇ ಅಡಿಗೆಗೆ ಸುರು ಮಾಡುವುದು. ಜೀವಧಾತ್ರಿಯಾದ ಭೂಮಿತಾಯಿ ನಾನಾ ಜಾತಿ ಜಂತುಗಳನ್ನು ಹೊತ್ತು ಹೆರುವಳೆಂದು ಮಣ್ಣಿನ ಸ್ಪರ್ಶದ ಸಂಬಂಧವಾಗಿ ಆಕೆ ಸರ್ವದಾ ಸಂಕೋಚಪಟ್ಟುಕೊಳ್ಳುತ್ತಿದ್ದಳು. ಆಕೆಯ ಹೆಚ್ಚುಭಾಗ ವ್ಯವಹಾರವೆಲ್ಲ ನೀರಿನೊಂದಿಗೇ. ಏಕೆಂದರೆ ಜಲಚರಗಳಾದ ಮೀನು ಮುಂತಾದುವೆಲ್ಲ ಮುಸಲ್ಮಾನ ಜಾತಿಯವಲ್ಲ. ಮತ್ತು ನೀರಿನಲ್ಲಿ ನೀರುಳ್ಳಿ ಹುಟ್ಟುವುದಿಲ್ಲವಲ್ಲ. ಆಕೆಯ ಬಾಳುವೆಯ ಪ್ರಧಾನ ಕರ್ಮವೆಂದರೆ, ತನ್ನ ಮೈ ಅರಿವೆಗಳೇ ಅಲ್ಲದೆ ಪಾತ್ರೆ ಪದಾರ್ಥ, ಮಂಚ, ಮೇಜುಗಳನ್ನು ಕೂಡ ತಿಕ್ಕಿ ತೊಳೆದು, ಮೈಲಿಗೆಯಾಗದಂತೆ ಚೊಕ್ಕಟವಾಗಿಡುವುದೇ. ಈ ಕೆಲಸಗಳೆಲ್ಲ ಮುಗಿಯುವ ಹೊತ್ತಿಗೆ ಮಧ್ಯಾಹ್ನ ಎರಡೂವರೆ ಘಂಟೆಯಾಗಿ ಹೋಗಿರುತ್ತದೆ. ಮಗಳನ್ನು ಕೂಡ ಆಕೆ ಎಲ್ಲ ವಿಷಯಗಳಲ್ಲೂ ತನ್ನಂತೆಯೇ ಕೈಯಾರೆ ಪರಿಶುದ್ಧಗೊಳಿಸಿ ಬೆಳಸಿದ್ದಳಾದುದರಿಂದ ಆ ಹುಡುಗಿಗೆ ಸ್ವಂತ ಇಷ್ಟ, ಅಭಿಪ್ರಾಯಗಳೆಂಬ ಯಾವ ತಾಪತ್ರಯವೂ ಇರಲಿಲ್ಲ. ಯಾವ ಏರ್ಪಾಡಿನಲ್ಲೂ ಅದೆಷ್ಟು ಅನನುಕೂಲವೇ ಆದರೂ ಅದನ್ನು ನೆರವೇರಿಸುವುದು ಅವಳಿಗೆ ಅಷ್ಟು ಸಹಜವಾಗಿತ್ತು – ಆ ಕೆಲಸದ ಉದ್ದೇಶ್ಯ, ಕಾರಣಗಳನ್ನು ತಿಳಿಯಬೇಕಾದ್ದೇ

ಇರಲಿಲ್ಲ. ಊಟ ಮಾಡುವಾಗ ಆ ಹುಡುಗಿ ಒಳ್ಳೇ ಬಟ್ಟೆ ಉಡುತ್ತಿರಲಿಲ್ಲ. ಏಕೆಂದರೆ ಅದೆಲ್ಲಾದರೂ ಎಂಜಲು, ಮುಸುರೆಯಾಗಿಬಿಡುವುದೋ ಎಂಬ ಭಯ. ಅವಳು ತನ್ನ ನೆರಳಿನ ಮಡಿ, ಮೈಲಿಗೆಗಳ ಬಗ್ಗೆ ಕೂಡ ಯೋಚನೆ ಮಾಡುವುದನ್ನು ಕಲಿತಿದ್ದಾಳೆ. ಅವಳು ಹೇಗೆ ಮೇನೆಯಲ್ಲಿ ಕೂತುಕೊಂಡೇ ಗಂಗಾಸ್ನಾನ ಮಾಡುತ್ತಿದ್ದಳೋ ಹಾಗೆಯೇ ಹದಿನೆಂಟು ಪುರಾಣಗಳ ಮಧ್ಯೆ ಹುದುಗಿಕೊಂಡೇ ಸಂಸಾರದಲ್ಲಿ ಓಡಾಡುತ್ತಿದ್ದಳು. ಮಡಿ, ಮೈಲಿಗೆ, ವ್ರತ, ಪೂಜೆಗಳ ಬಗ್ಗೆ ನಮ್ಮಮ್ಮನಿಗೂ ಬೇಕಾದಷ್ಟು ಶ್ರದ್ಧೆಯಿತ್ತು. ಆದರೆ ತನಗಿಂತಲೂ ಹೆಚ್ಚಾಗಿ ಶ್ರದ್ಧೆ ಇರುವವರು ಇರುತ್ತಾರೆ, ಮತ್ತು ಅದರ ಬಗ್ಗೆ ಮನಸ್ಸಿನಲ್ಲಿ ಗರ್ವಪಡುತ್ತಾರೆ ಎಂಬ ಸಂಗತಿ ಆಕೆಗೆ ಸೈರಿಸದು. ಈ ಕಾರಣದಿಂದ ನಾನು ಹೋಗಿ "ಅಮ್ಮ, ಈ ಹುಡುಗಿಗೆ ತಕ್ಕ ವರ ನಾನಲ್ಲ" ಎಂದಾಗ ಆಕೆ ನಗುತ್ತ "ಹೌದು ಕಣೋ, ಕಲಿಯುಗದಲ್ಲಿ ಅಂಥ ಯೋಗ್ಯ ವರ ಇದ್ದಾನೋ ಇಲ್ಲವೋ ಅನ್ನಿಸುತ್ತದೆ" ಎಂದಳು. ಆಗ ನಾನು "ಹಾಗಾದರೆ ನಾನವರಿಗೆ ನಮಸ್ಕಾರ ಹೇಳಿಬಿಡುವುದೇ ?" ಎಂದೆ. ಅಮ್ಮ "ಇದೇನೋ ಹೀಗಂತಿ, ಸುನೂ? ನಿನಗೆ ಹುಡುಗಿ ಇಷ್ಟವಾಗಿಲ್ಲವೇ ? ಯಾಕೆ, ನೋಡುವುದಕ್ಕಂತೂ ಚೆನ್ನಾಗಿದ್ದಾಳೆ" ಎಂದಳು.

"ಅಮ್ಮ, ಹೆಂಡತಿ ಅಂದಮೇಲೆ ಸುಮ್ಮನೆ ಕಣ್ಣು ಬಿಟ್ಟುಕೊಂಡು ನೋಡುತ್ತಾ ಕೂತಿರುವುದಕ್ಕೇ ಅಲ್ಲ. ಅವಳಿಗೆ ಬುದ್ಧಿ ಅನ್ನುವುದೂ ಇರಬೇಕು" ಎಂದೆ ನಾನು.

ಅದಕ್ಕೆ ಅಮ್ಮ "ಆಹಾ, ಸುಮ್ಮನಿರೋ ಸಾಕು, ಇಷ್ಟು ಬೇಗ ನಿನಗಾಗಲೇ ಅವಳಿಗೆ ಬುದ್ಧಿ ಕಡಮೆ ಅಂಬೋದು ಗೊತ್ತಾಗಿಹೋಯಿತೇನೋ ?" ಎಂದು ಮೂಗು ಮುರಿದಳು.

ಆಗ ನಾನು "ಅಲ್ಲದೆ ಮತ್ತೆ ? ಅಲ್ಲಮ್ಮ, ಬುದ್ಧಿಯಿರುವ ಯಾವ ಹುಡುಗಿಯಾದರೂ ಹಗಲು ರಾತ್ರಿ ಇಂಥ ಅರ್ಥವಿಲ್ಲದ ಕೆಲಸಗಳಲ್ಲಿ ಮುಳುಗಿ ಬದುಕುತ್ತಾ ಇರಲಿಲ್ಲ. ಹಾಗೇ ಉಸಿರು ಕಟ್ಟಿಕೊಂಡು ಸಾಯುತ್ತಿದ್ದಳು" ಎಂದೆ.

ಅಮ್ಮನ ಮುಖ ಒಣಗಿ ಹೋಯಿತು. ಆಕೆಗೆ ಈ ಮದುವೆಯ ಸಂಬಂಧವಾಗಿ ಅಪ್ಪ ವಧುವಿನ ತಂದೆಗಾಗಲೇ ಮಾತು ಕೊಟ್ಟುಬಿಟ್ಟಿದ್ದಾರೆಂದು ಗೊತ್ತು. ಅಲ್ಲದೆ ನಮ್ಮಪ್ಪನು ಬೇರೇ ಮನುಷ್ಯರಿಗೂ ಸ್ವಂತ ಇಚ್ಛೆ ಎಂಬೊಂದು ಪೀಡೆಯೂ ಇರುತ್ತದೆ ಎಂಬುದನ್ನು ಪೂರ್ತಿಯಾಗಿ ಮರೆತುಬಿಟ್ಟಿದ್ದಾರೆಂದೂ ಗೊತ್ತು. ಬಹುಶಃ ಅಪ್ಪ ಒಂದುವೇಳೆ ರೇಗಿ ಹಾರಾಡಿ ಜೋರು ಮಾಡದೆ ಸುಮ್ಮನೆ ಇದ್ದುಬಿಟ್ಟಿದ್ದರೆ, ಯಾರಿಗೆ ಗೊತ್ತು, ಕಾಲಕ್ರಮದಲ್ಲಿ ಈ ಪೌರಾಣಿಕ ಬೊಂಬೆಯೊಡನೆ ನನ್ನ ಲಗ್ನವಾಗಿ, ನಾನೂ ಕೂಡ ಒಂದು ದಿನ ಪ್ರಬಲ ನಿಷ್ಠೆಯಿಂದ ಸ್ನಾನ ಆಹ್ನಿಕ ಮಾಡಿಕೊಂಡು ವ್ರತ ಉಪವಾಸಗಳಲ್ಲಿ ಮುಳುಗಿ ಗಂಗಾತೀರದಲ್ಲಿ ಸದ್ಗತಿಯನ್ನು ಪಡೆಯುತ್ತಿದ್ದೆನೋ ಏನೋ ! ಅಂದರೆ, ಅಮ್ಮನ ಮೇಲೇ ಈ ಮದುವೆಯ ಭಾರ ಹಾಕಿಬಿಟ್ಟಿದ್ದರೆ, ಆಕೆ

ಸಮಯ ನೋಡಿಕೊಂಡು ಅತಿ ಗಂಭೀರವಾಗಿ, ನಿಶ್ಯಬ್ದವಾಗಿ ಸುಯೋಗ ಸಾಧಿಸಿ ಗಳಿಗೆಗಳಿಗೆಗೂ ಕಿವಿಯಲ್ಲಿ ಮಂತ್ರದಂತೆ ಊದುತ್ತ ಮಾತು ಮಾತಿಗೆ ಕಣ್ಣೀರು ಸುರಿಸುತ್ತ, ನಿಟ್ಟುಸಿರು ಬಿಡುತ್ತ ಹೇಗೋ ಕೆಲಸವನ್ನು ಸಾಧಿಸಿಕೊಂಡುಬಿಡುತ್ತಿದ್ದರು.. ಆದರೆ ಅಪ್ಪ ಇದರ ವಿಷಯದಲ್ಲಿ ತಮ್ಮ ಹಠವನ್ನು ಸಾಧಿಸಲು ರೇಗಾಡಿ ಹಾರಾಡಿಬಿಟ್ಟರು. ಆಗ ನಾನು ಕೂಡ ಹತಾಶನಾಗಿ "ಏನಪ್ಪ ಇದು, ಚಿಕ್ಕ ವಯಸ್ಸಿನಿಂದಲೂ ನೀವು ನನಗೆ ಊಟ, ಉಡಿಗೆ, ಹೋಗುವುದು ಬರುವುದು ಎಲ್ಲದರಲ್ಲೂ ಸ್ವಾವಲಂಬನವೇ ಉತ್ತಮ ಎಂಬ ಉಪದೇಶ ಮಾಡುತ್ತ ಬಂದಿದ್ದೀರಿ. ಆದರೆ ಕೇವಲ ಈ ಮದುವೆಯ ವಿಷಯಕ್ಕೆ ಮಾತ್ರ ಸ್ವಾವಲಂಬನ ಏಕೆ ಬೇಡವಾಗುತ್ತೆ ಹೇಳಿ ಮತ್ತೆ" ಎಂದು ಕೇಳಿಬಿಟ್ಟೆ. ಕಾಲೇಜಿನಲ್ಲಿ ಲಾಜಿಕ್ ಪರೀಕ್ಷೆ ಪಾಸುಮಾಡುವುದಕ್ಕೊಂದರ ಹೊರತಾಗಿ ಪ್ರಪಂಚದಲ್ಲಿ ಯಾರೂ ತರ್ಕ, ನ್ಯಾಯಗಳಿಂದ ಯಾವ ಕಾಲದಲ್ಲೂ ಲಾಭ ಹೊಂದಿದ್ದನ್ನು ನಾನು ನೋಡಿಲ್ಲ. ಸುಸಂಗತವಾದ ಉಪಾಯವಾವುದೂ ಕುತರ್ಕದ ಬೆಂಕಿಯಲ್ಲಿ ಎಂದಿಗೂ ನೀರಿನಂತೆ ಕೆಲಸ ಮಾಡುವುದಿಲ್ಲ. ಅದಕ್ಕೆ ಬದಲಾಗಿ ಎಣ್ಣೆಯಂತೆಯೇ ವ್ಯವಹರಿಸುವುದು. ಅಪ್ಪ ಚೆನ್ನಾಗಿ ವಿಚಾರಮಾಡಿ ನಿರ್ಧರಿಸಿದ್ದಾರೆ. ಹುಡುಗಿಯ ತಂದೆಗೆ ಮಾತು ಕೂಡ ಕೊಟ್ಟುಬಿಟ್ಟಿದ್ದಾರೆ. ಮದುವೆಯ ಔಚಿತ್ಯಕ್ಕೆ ಇದಕ್ಕಿಂತಲೂ ಹೆಚ್ಚು ಆಧಾರವೇಕೆ ಬೇಕು ? ಆದರೂ ಕೂಡ ನಾನು ಒಂದು ವೇಳೆ ಅವರಿಗೆ ಹಿಂದೆ ನಡೆದಿದ್ದ ಸಂಗತಿಯನ್ನು ಜ್ಞಾಪಿಸಿ "ನಮ್ಮ ಸಂಸ್ಕೃತ ಪಂಡಿತರಿಗೂ ಅಮ್ಮ ಮಾತು ಕೊಟ್ಟಿದ್ದಳಲ್ಲ ? ಆದರೂ ಆ ಮಾತಿನಿಂದ ನನ್ನ ಮದುವೆ ನಡೆಯದೆ ಇರುವುದೊಂದೇ ಅಲ್ಲದೆ ಅದರ ಜೊತೆಗೇ ಪಂಡಿತರ ಉಪಜೀವನವೂ ಸಹಗಮನವಾಗಿ ಹೋಯಿತಲ್ಲ ?" ಎಂದೆಲ್ಲ ತರ್ಕ ಮಾಡಿಬಿಟ್ಟಿದ್ದರೆ ಈ ನೆಪದಲ್ಲಿ ಮನೆಯಲ್ಲೊಂದು ದೊಡ್ಡ ರಂಪವಾಗಿ ಹೋಗುತ್ತಿತ್ತು. ಸದ್ಯ ಹಾಗೆ ನಾನು ಹೇಳಲಿಲ್ಲ. ಬುದ್ಧಿ, ವಿಚಾರ ಮತ್ತು ಅಭಿರುಚಿಗಳಿಗಿಂತ ಶುಚಿತ್ವ, ಮಂತ್ರ–ತಂತ್ರ, ಕ್ರಿಯಾಕರ್ಮಗಳೇ ಎಷ್ಟೋ ಉತ್ತಮ–ಅವುಗಳ ಕವಿತ್ವ ಎಷ್ಟು ಸುಗಭೀರವೋ, ಅಷ್ಟೇ ಮಧುರ, ಅವುಗಳ ನಿಷ್ಠೆ ಅತಿ ಮಹತ್ವವಾದ್ದು, ಅವುಗಳ ಫಲ ಅತಿ ಉತ್ತಮ–ಸಿಂಬಾಲಿಜಂ (ಸಂಕೇತವಾದ)ವೇ ಐಡಿಯಲಿಜಂ (ಆದರ್ಶವಾದ)....ಹೀಗೆಲ್ಲ ಅಪ್ಪ ಈಚೀಚೆಗೆ, ಹೊತ್ತು ಗೊತ್ತಿಲ್ಲದಾಗ ಕೂಡ ಮನಸ್ಸಿಗೆ ಬಂದಾಗೆಲ್ಲ ನನ್ನ ಕಿವಿಯಲ್ಲಿ ಊದುತ್ತ ಬಂದಿದಾರೆ. ನಾನಿದೆಲ್ಲ ಕೇಳಿ ನಾಲಗೆಯನ್ನೇನೋ ಹಿಡಿದಿಟ್ಟುಕೊಂಡೆ. ಆದರೆ ಮನಸ್ಸನ್ನು ಸುಮ್ಮನಿರಿಸಲಾಗಲಿಲ್ಲ. ಬಾಯಿಯವರೆಗೂ ಒಂದು ಮಾತಾಡಲಾಗದೆ ಹೋದೆ. ಆಕ್ಷೇಪಣೆ ಹೀಗಿತ್ತು –"ಇವೆಲ್ಲವನ್ನೂ ನೀವು ನಂಬುವುದೇ ನಿಜವಾಗಿದ್ದರೆ ಪ್ರಾಣಿಗಳನ್ನು ಸಾಕುವ ನೆಪದಲ್ಲಿ ಕೋಳಿಯನ್ನೇ ಏಕೆ ಸಾಕುವುದು?"–ಇನ್ನೂ ಒಂದು ಮಾತು ಮನಸ್ಸಿಗೆ ಬಂದಿತ್ತು. ಅಪ್ಪನೇ ಒಂದು ಕಾಲದಲ್ಲಿ ದಿನ, ನಕ್ಷತ್ರ,

ಹಬ್ಬ, ಹುಣ್ಣಿಮೆ, ವ್ರತಪೂಜೆ, ದಾನ ದಕ್ಷಿಣೆ ಇಂಥವುಗಳಿಂದಾಗುವ ಅನನುಕೂಲತೆ, ವೃಥಾ ಖರ್ಚುಗಳಿಂದ ರೇಗಿ ಅಮ್ಮನನ್ನು ಕ್ರೂರವಾದ ಭಾಷೆಯಲ್ಲಿ ಈ ನಂಬಿಕೆಗಳ ಮೌಢ್ಯತೆಯ ಬಗ್ಗೆ ಅಣಕವಾಡಿ, ಹೀಯಾಳಿಸಿದ್ದರು. ಅಮ್ಮನೂ ಆಗ ದೀನತೆಯನ್ನು ಒಪ್ಪಿಕೊಂಡು ಅಬಲಾ ಜಾತಿಯೇ ಸ್ವಭಾವವಾಗಿ ತಿಳಿವಳಿಕೆ ಇಲ್ಲದುದೆಂದು ತಲೆಬಾಗಿ ಅಪ್ಪನ ರೋಷದ ಕಾವನ್ನು ಹೇಗೋ ಮರೆತು ಬ್ರಾಹ್ಮಣ ಭೋಜನದ ಏರ್ಪಾಡನ್ನು ಇನ್ನೂ ಹೆಚ್ಚು ಅದ್ದೂರಿಯಿಂದ ಮಾಡುವುದರಲ್ಲಿ ಪ್ರವೃತ್ತಳಾಗುತ್ತಿದ್ದಳು. ಆದರೆ ವಿಶ್ವಕರ್ಮನು ತರ್ಕಶಾಸ್ತ್ರದ ಬಲವಾದ ಪಡಿಯಚ್ಚಿನಲ್ಲಲ್ಲ ಜೀವಸೃಷ್ಟಿ ಮಾಡಿರುವುದು. ಆದ್ದರಿಂದ ಯಾವುದೇ ಮನುಷ್ಯನ ಮಾತಿನಲ್ಲಾಗಲಿ, ಕೆಲಸದಲ್ಲಾಗಲಿ ಸುಸಂಗತವಿರುವುದಿಲ್ಲ – ಹೀಗೆಂಬುದಾಗಿ ಅವನೆದುರಿಗೆ ಹೇಳಿ ಅವನನ್ನು ಬಾಗಿಸಲಾಗುವುದಿಲ್ಲ. ಅದಕ್ಕೆ ಬದಲಾಗಿ ರೇಗಿಸಬಹುದು. ನ್ಯಾಯಶಾಸ್ತ್ರದ ಶರಣು ಹಿಡಿಯಲು ಹೋದರೆ ಕೇವಲ ಅನ್ಯಾಯದ ಪ್ರಚಂಡತೆಯನ್ನು ಹೆಚ್ಚಿಸಿದಂತಾಗುತ್ತದೆ, ಅಷ್ಟೇ. ರಾಜಕೀಯದಲ್ಲಿ ಅಥವಾ ಮನೆಯ ಕುಟುಂಬದಲ್ಲಿ (Agitation) ಚಳವಳಿ ನಡೆಸುವ ಹವ್ಯಾಸವಿರುವವರು ಈ ಮಾತಿನ ಸತ್ಯವನ್ನು ತಿಳಿದುಕೊಳ್ಳುವುದು ಒಳ್ಳೆಯದು. ಕುದುರೆಯು ತಾನು ಎಳೆಯುತ್ತಿರುವ ಗಾಡಿ ಅನ್ಯಾಯ ಮಾಡುತ್ತಿದೆಯೆಂದು ತಿಳಿದು ಹಿಂದಿನಿಂದ ಒದೆಯತೊಡಗಿದರೆ ಅನ್ಯಾಯವೇನೋ ಇದ್ದಹಾಗೇ ಇರುತ್ತದೆ. ಆದರೆ ಅದರ ಕಾಲು ಮಾತ್ರ ಪೆಟ್ಟು ತಿಂದು ನೋವನುಭವಿಸಬೇಕಾಗುತ್ತದೆ. ಪ್ರಾಯದ ಕಾವಿನಲ್ಲಿ ಅಲ್ಪಸ್ವಲ್ಪ ಹೀಗೆ ತರ್ಕಮಾಡಲು ಹೋಗಿ ನನಗೂ ಅಂಥ ದೆಸೆಯೇ ಒದಗಿತು. ಪೌರಾಣಿಕ ಬೊಂಬೆಯಾದ ಆ ಹುಡುಗಿಯ ಕೈಯಿಂದೇನೋ ಪಾರಾಗಿಬಿಟ್ಟೆ. ಆದರೆ ಅಪ್ಪನ ಆಧುನಿಕ ಯುಗದ ಹಣದ ಆಶ್ರಯವನ್ನೂ ಕಳೆದುಕೊಂಡೆ–ಏಕೆಂದರೆ ನನ್ನ ಮಾತಿನಂತೆಯೇ ಅಪ್ಪ "ಹೋಗೋ, ಹಾಗಾದರೆ, ಪೂರ್ತಿಯಾಗಿ ಸ್ವಾವಲಂಬಿಯಾಗಿ ಇದ್ದುಬಿಡು" ಎಂದುಬಿಟ್ಟರು.

ನಾನು ಪ್ರಣಾಮ ಮಾಡಿ "ಅಪ್ಪಣೆ, ಹಾಗೇ ಆಗಲಿ" ಎಂದುಬಿಟ್ಟೆ. ಈ ಕಡೆ ಅಮ್ಮ ಸಂಗತಿ ಇಷ್ಟು ವಿಪರೀತಕ್ಕೆ ತಿರುಗಿದ್ದನ್ನು ನೋಡಿ ಸುಮ್ಮನೆ ಅತ್ತು ಕಣ್ಣೀರು ಸುರಿಸತೊಡಗಿದಳು.

ಅಪ್ಪನ 'ದಕ್ಷಿಣೆ' ಕೊಡುವ ಬಲಗೈಯಿಂದ ನನಗೆ ವಿಮುಕ್ತಿಯಾಯಿತು, ಹೇಗೋ. ಆದರೆ ಮಧ್ಯೆ ಮಧ್ಯೆ ಅಮ್ಮನಿಂದ ಬರುತ್ತಿದ್ದ ಮನಿಯಾರ್ಡರ್ ಪ್ಯಾದೆಯ ದರ್ಶನ ಲಭಿಸುತ್ತಿತ್ತು. ಮೋಡದಿಂದ ಮಳೆ ಸುರಿಯುವುದು ನಿಂತುಹೋಯಿತಾದರೂ, ಗೋಪನವಾಗಿ ಸ್ನಿಗ್ಧ ರಾತ್ರಿಯಲ್ಲಿ ಇಬ್ಬನಿಯ ಅಭಿಷೇಕವಾಗುವುದು ನಡೆದುಕೊಂಡು ಹೋಯಿತು. ಅದರ ಒತ್ತಾಸೆಯಿಂದಲೇ ವ್ಯಾಪಾರವನ್ನು ಕೂಡ ಆರಂಭಿಸಿಬಿಟ್ಟೆ. ಸರಿಯಾಗಿ ಎಪ್ಪತ್ತೊಂಬತ್ತು ರೂಪಾಯಿಗಳ

ಬಂಡವಾಳವೇ ಅದರ ತಳಹದಿಯಾಯಿತು. ಇವತ್ತು ಅದೇ ಕಾರುಬಾರು ಯಾವ ಮೂಲಧನದ ಮೇಲೆ ನಿಲ್ಲುವಂತಾಯಿತೋ ಅದು ಅಸೂಯೆಯ ಜನ ಹೇಳುವಷ್ಟಕ್ಕಿಂತಲೂ ಎಷ್ಟೋವುಟ್ಟಿಗೆ ಕಡಿಮೆಯಿದ್ದರೂ ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆಯೇನಿಲ್ಲ.

ಈ ಸಲ ಪ್ರಜಾಪತಿ ಬ್ರಹ್ಮನ ಪ್ಯಾದೆ ನನ್ನ ಹಿಂದೆ ತಿರುಗಾಡಲಾರಂಭಿಸಿದ. ಮೊದಲು ಮೊದಲು ನನ್ನ ಪ್ರವೇಶಕ್ಕೆ ಅಡ್ಡಿಯಾಗಿ ಮುಚ್ಚಿದ್ದ ಬಾಗಿಲುಗಳೆಲ್ಲ ಈಗ ಸದಾ ತೆರೆದಿರುತ್ತವೆ. ಈಗಲೂ ನೆನಪಿದೆ. ಮೊದಲ ಪ್ರಾಯದ ದುರ್ನಿವಾರ್ಯ ದುರಾಸೆಯಿಂದ ಹದಿನಾರು ವರುಷಳ ಕನ್ನೆ (ಈಗಿನ ಕಾಲದ ನಿಷ್ಠಾವಂತ ಪಾಠಕರ ಆಕ್ಷೇಪಣೆಗೆ ಹೆದರಿ ವಯಸ್ಸನ್ನು ಸ್ವಲ್ಪ ಸಹನೀಯವಾಗುವಷ್ಟು ಕಡಿಮೆಯಿಟ್ಟದೇನೆ)ಯನ್ನು ಅಪೇಕ್ಷಿಸಿ ನನ್ನ ಹೃದಯವನ್ನು ಆಕೆಯ ಕಡೆ ತಿರುಗಿಸಿದ್ದೆ. ಆದರೆ ಹುಡುಗಿಯ ತಾಯಿಯ ಗುರಿಯಿದ್ದುದು ಸಿವಿಲಿಯರ್ (I.C.S.) ಪದವೀಧರನ ಕಡೆ ; ಏನಿಲ್ಲವೆಂದರೂ ಬ್ಯಾರಿಸ್ಟರಿಗೆ ಕೆಳಗೆ ಬೇರೆ ಯಾರ ಕಡೆಗೂ ಲಕ್ಷ್ಯ ಹೋಗುತ್ತಿರಲಿಲ್ಲ ಆಕೆಗೆ – ಎಂದು ತಿಳಿದುಬಂತು. ನಾನಂತೂ ಆಕೆಯ ಮನೋಯೋಗದ ಮೀಟರಿನಲ್ಲಿ ಝೀರೋ (ಸೊನ್ನೆ) ಪಾಯಿಂಟಿನ ತಳಭಾಗದಲ್ಲೇ ಇರುವಂಥವನು. ಆದರೇನಾಯಿತು ? ಕಡೆಗೆ ಈಗ ಅದೇ ಮನೆಯಲ್ಲಿ ಬೇರೊಂದು ದಿನ ಬರೆ ಚಹಾ ಒಂದೇ ಅಲ್ಲ, ಲಂಚ್ (ಮಧ್ಯಾಹ್ನ ಭೋಜನ) ಕೂಡ ಸೇವಿಸಿದ್ದೇನೆ. ರಾತ್ರಿ ಡಿನ್ನರಾದ ಮೇಲೆ ಆ ಮನೆಯ ಹುಡುಗಿಯರೊಂದಿಗೆ Whist (ಇಸ್ಪೇಟಿನಾಟ) ಕೂಡ ಆಡಿದ್ದೇನೆ. ಅವರುಗಳ ಬಾಯಲ್ಲಿ ವಿಲಾಯಿತಿಯ ಅತಿ ಭಾರಿ ಶ್ರೀಮಂತರ ಮನೆಯ ಒಳಮಹಲಿನಲ್ಲಿ ಚಲಾವಣೆಯಲ್ಲಿರುವಂಥ ಅಪ್ಪಟ ಆಂಗ್ಲಭಾಷೆಯ ಉಚ್ಚಾರಣೆ ಕೇಳಿದ್ದೇನೆ. ನನ್ನ ತೊಂದರೆಯೇನೆಂದರೆ– ಡಾ. ಜಾನ್ಸನ್ನರ ರ್‍ಯಾಸೆಲಾಸ್ (Rasselas) ಕಾದಂಬರಿ, ಗೋಲ್ಡ್‌ಸ್ಮಿತ್ತನ ಡೆಸರ್ಟೆಡ್ ವಿಲೇಜ್ ಅಲ್ಲದೆ, ಎಡಿಸನ್, ಸ್ಟೀಲ್‌ರ ಲಘು ಬರೆಹಗಳು–ಮುಂತಾದುವನ್ನು ಓದಿ ಒಂದು ಬಗೆಯ ಇಂಗ್ಲಿಷ್ ಭಾಷೆಯನ್ನು ಕಲಿತುಕೊಂಡಿದ್ದೇನೆ. ಆದರೆ ಈ ಹುಡುಗಿಯರ ಸಂಗಡ ಮಾತಿನಲ್ಲಿ ಕಲೆಯುವುದು ನನ್ನಿಂದ ಸಾಧ್ಯವಿಲ್ಲ. ಮಾತೆತ್ತಿದರೆ Oh ! My, O dear O dear, ಮುಂತಾದ ಉದ್ಗಾರಗಳು ನನ್ನ ಬಾಯಿಂದ ಸರಿಯಾದ ಸ್ವರದಲ್ಲಿ ಬರಲೊಲ್ಲೆನೆನ್ನುತ್ತವೆ. ನನ್ನಲ್ಲಿ ಎಷ್ಟರಮಟ್ಟಿಗೆ ವಿದ್ಯೆಯಿತ್ತೋ ಅದರಿಂದ ನಾನು ತೀರ ಹೊಸ ಚಲಾವಣೆಯಲ್ಲಿರುವ ಭಾಷೆಯಲ್ಲಿ ಅತಿ ದಾಷ್ಟೀಕವಾಗಿ ಬಜಾರಿನಲ್ಲಿ ಕೊಳ್ಳಾಟ, ಮಾರಾಟ ಮಾಡಬಲ್ಲೆ. ಆದರೆ ಇಪ್ಪತ್ತನೇ ಶತಮಾನದ ಆಂಗ್ಲ ಭಾಷೆಯಲ್ಲಿ ಪ್ರೇಮಸಲ್ಲಾಪ ಮಾಡಬೇಕೆಂದರೆ ನನ್ನ ಪ್ರೇಮವೇ ಪಲಾಯನ ಮಾಡಿಬಿಡುತ್ತದೆ. ಅಲ್ಲದೆ ಇವರುಗಳ ಬಾಯಲ್ಲಿ ವಂಗಭಾಷೆಯ ಕ್ಷಾಮವನ್ನು ಕಂಡಾಗ ಇವರ ಜೊತೆಯಲ್ಲಿ ಹಸನಾದ ಬಂಕಿಮೀ (ಬಂಕಿಮಚಂದ್ರರ) ಬಂಗಾಳಿಯ ಸ್ವರ ತೆಗೆದು

ಸವಿಮಾತುಗಳನ್ನಾಡೋಣವೆಂದರೆ ಕೆಲಸ ಕೆಡುತ್ತದೆ. ಅದರಿಂದ ಏನೂ ಗಿಟ್ಟುವುದಿಲ್ಲ. ಅದೆಲ್ಲಾ ಹೇಗೇ ಇರಲಿ, ಈ ಬಗೆಯ ವಿಲಾಯಿತಿ ಗಿಲೀಟು ಬಳಿದುಕೊಂಡಂಥ ಹುಡುಗಿ ಒಂದು ದಿನ ನನ್ನ ಕೈಗೆ ಎಟುಕುವಂಥವಳಾಗಿದ್ದಳು. ಆದರೆ ಹಿಂದೆ ಮುಚ್ಚಿದ್ದ ಬಾಗಿಲ ಕಂಡಿಯಿಂದ ನನ್ನ ಕಣ್ಣಿಗೊಂದು ಮಾಯಾನಗರಿಯೇ ಕಂಡುಬಂದದ್ದು ಈಗ ಬಾಗಿಲು ತೆಗೆದು ಒಳಹೊಕ್ಕು ನೋಡಿದರೆ ಅದರ ಸುಳಿವೇ ಇಲ್ಲ ! ಆಗ ನನಗೆ ಬಾರಿ ಬಾರಿಗೂ ಅನ್ನಿಸತೊಡಗಿದುದು, ಆ ವ್ರತದ ಹುಚ್ಚು ಹಿಡಿದಿದ್ದ ಹುಡುಗಿ ಅರ್ಥಹೀನ ನೇಮ, ಪೂಜೆಗಳಲ್ಲಿ ಮುಳುಗಿ ಹಗಲು ರಾತ್ರಿ ಅವುಗಳಲ್ಲೇ ತನ್ನ ಜಡಬುದ್ಧಿಯನ್ನು ತೃಪ್ತಿಗೊಳಿಸುತ್ತಿದ್ದವಳಾಗಿದ್ದರೆ, ಈ ಕಡೆ ಈ ಆಧುನಿಕ ಹಡುಗಿಯಾದರೋ, ಪೂರ್ತಿಯಾಗಿ ಅಷ್ಟೇ ಜಡಬುದ್ಧಿಯವಳಾಗಿ ವಿಲಾಯಿತಿಯ ನಡೆ, ನುಡಿ, ಪದ್ಧತಿ, ಆಚರಣೆ, ಮುಂತಾದ ನೀರಸ ಪ್ರಪಂಚದಲ್ಲಿ ಸ್ವೇಚ್ಛೆಯಾಗಿ ಮುಳುಗಿ ವರುಷವಾದ ಮೇಲೆ ವರುಷ ನಿರ್ವಿಕಾರಚಿತ್ತದಿಂದ ಕಾಲಕಳೆಯುವಂಥವಳು. ಆ ಕಾಲದ ಹುಡುಗಿಯು ಮಡಿ, ಮೈಲಿಗೆ, ಎಂಜಲು, ಮುಸುರೆ, ಸ್ನಾನ, ಪುಣ್ಯಾಹಗಳಲ್ಲಿ ಅಲ್ಪಸ್ವಲ್ಪ ಹೆಚ್ಚು ಕಡಿಮೆಯಾದದ್ದು ಕಂಡರೆ ಹೇಗೆ ಅಬ್ಬರಮಾಡುತ್ತಿದ್ದಳೋ ಅದೇ ರೀತಿ ಈ ಹುಡುಗಿಯಂಥವರು, Accent (ಉಚ್ಚಾರಣೆ) ಸ್ವಲ್ಪ ತಪ್ಪಿದರೂ, ಅಥವಾ ಫೋರ್ಕು, ಸ್ಪೂನುಗಳ ಕಿತ್ತಾಟದಲ್ಲಿ ಸ್ವಲ್ಪ ಎಡವಟ್ಟಾದರೂ ತಪ್ಪು ಮಾಡಿದ ವ್ಯಕ್ತಿಯ ಮನುಷ್ಯತ್ವದ ಬಗ್ಗೆಯೇ ಸಂಶಯ ಪಡುವವರು. ಅವಳು ದೇಶೀಯ ಬೊಂಬೆಯಾದರೆ ಇವಳು ವಿದೇಶದ ಬೊಂಬೆ, ಇಬ್ಬರೂ ಸ್ವಂತ ಮನದ ಇಚ್ಛೆಯಿಂದ ಓಡಾಡುವುದಿಲ್ಲ. ಪದ್ಧತಿ, ಅಭ್ಯಾಸಗಳ ಯಂತ್ರದ ಕೀಲಿಯೇ ಇವರನ್ನು ಓಡಾಡಿಸುವುದು. ಇವೆಲ್ಲ ನೋಡಿ ನನಗೆ ಹೆಣ್ಣು ಜಾತಿಯ ಮೇಲೇ ಅಶ್ರದ್ಧೆ ಹುಟ್ಟಿಕೊಂಡಿತು. ಆಗ ಹೊಳೆಯಿತು. ಅವರಿಗೆ ಬುದ್ಧಿಯೇ ಕಡಮೆಯಾಗಿರುವಾಗ ಸ್ನಾನ, ವ್ರತ, ಪೂಜೆಗಳ ಅಕರ್ಮಕಾಂಡವು ಪ್ರಕಾಂಡವಾಗಿ ಬೆಳೆಯದಿದ್ದರೆ ಅವರು ಜೀವಿಸುವುದು ಹೇಗೆ? ಒಂದು ಬಗೆಯ ಜೀವಾಣುವಿನ ವಿಷಯವಾಗಿ ಪುಸ್ತಕದಲ್ಲಿ ಓದಿದ್ದೆ. ಅದು ಒಂದೇ ಸಮನೆ ಸುಮ್ಮನೆ ಗಿರ್ರೆಂದು ತಿರುಗುತ್ತಿರುತ್ತದಂತೆ. ಬೇರೇನೂ ಕೆಲಸವಿಲ್ಲ. ಆದರೆ ಮನುಷ್ಯ ಹಾಗೇ ಸುಮ್ಮನೆ ತಿರುಗುತ್ತಿರುವುದಿಲ್ಲ–ನಡೆದುಕೊಂಡು ಹೋಗುತ್ತಾನೆ. ಆ ಜೀವಾಣುವಿನ ಪರಿವರ್ಧಿತ ಸಂಸ್ಕರಣ (Evolved edition)ದ ಸಂಗಡವೇ ವಿಧಾತನು ಇಂತಹ ಮನುಷ್ಯರ ವಿವಾಹ ಸಂಬಂಧವನ್ನು ಜೋಡಿಸಿಬಿಟ್ಟಿದ್ದಾನೆಂದು ಕಾಣುತ್ತದೆ.

ಈ ಕಡೆ ನನಗೆ ವಯಸ್ಸು ಬೆಳೆಯುತ್ತ ಬಂದಂತೆಲ್ಲ ಮದುವೆಯ ಬಗ್ಗೆ ಕಳವಳವೂ ಏರುತ್ತ ಬಂತು. ಒಂದು ವಯಸ್ಸಿನಲ್ಲಿ ಯೋಚನೆಯೇ ಇಲ್ಲದೆ ಮದುವೆಯಾಗಿ ಹೋಗುತ್ತದೆ. ಆ ವಯಸ್ಸು ಮೀರಿಹೋಯಿತೆಂದರೆ ಮದುವೆ ಮಾಡಿಕೊಳ್ಳುವುದು ಒಂದು ಕಷ್ಟ ಸಾಹಸದ ಕೆಲಸ. ನಾನು ಅಂತಹ ಸಾಹಸಿಯಾದ

ಆಳಲ್ಲ. ಅದೂ ಅಲ್ಲದೆ ಬುದ್ಧಿ ಸರಿಯಾಗಿರುವ ಯಾವ ಹುಡುಗಿ ತಾನೆ ಕಾರಣವಿಲ್ಲದೆಯೇ ಒಂದೇ ಉಸಿರಿನಲ್ಲಿ ನನ್ನನ್ನು ಲಗ್ನಮಾಡಿಕೊಳ್ಳಲು ತಯಾರಾಗಬಲ್ಲಳು?–ನನಗಂತೂ ಅದು ಸಂಭವವೆನ್ನಿಸದು. ಪ್ರೇಮ ಕುರುಡು ಎಂದು ಕೇಳಿದ್ದೇನೆ. ಆದರೆ ಇಲ್ಲಿ ಆ ಕುರುಡುತನದ ಬಗ್ಗೆ ನನಗೆ ಭರವಸೆಯಿಲ್ಲ. ಸಂಸಾರ ಬುದ್ಧಿಯಿರುವವಳಿಗೆ ಎರಡು ಕಣ್ಣುಗಳು ಸಾಲದೆ ಇನ್ನೂ ಬೇರೆ ಕಣ್ಣುಗಳಿವೆ. ಆ ಕಣ್ಣುಗಳು ಯಾವ ಅಮಲಿನಲ್ಲೂ ಬೀಳದೆ ಇರುವಾಗ ನನ್ನ ಕಡೆ ನೋಡಿದರೆ ನನ್ನಲ್ಲಿ ಏನನ್ನು ತಾನೇ ಕಾಣಬಲ್ಲುವು–ಎಂಬುದನ್ನ ನಾನು ಯೋಚಿಸುತ್ತೇನೆ. ನನ್ನಲ್ಲಿ ಗುಣಗಳೇನೋ ನಿಶ್ಚಯವಾಗಿವೆ ಎಷ್ಟೋ. ಆದರೆ ಅವುಗಳನ್ನು ಕಂಡುಹಿಡಿಯುವುದಕ್ಕೆ ಎಷ್ಟೋ ನಿಧಾನವಾಗುತ್ತದೆ. ಒಂದೇ ನೋಟದಲ್ಲಿ ಅವು ಗೋಚರವಾಗುವುದಿಲ್ಲ. ನನಗೆ ಮೊಂಡುಮೂಗಿರಬಹುದು, ಆದರೆ ಬುದ್ಧಿಯ ಚುರುಕು ಆ ಕೊರತೆಯನ್ನು ಮರೆಯಿಸುತ್ತದೆ, ನನಗೆ ಗೊತ್ತು. ಆದರೆ ಕಣ್ಣಿಗೆ ಮೊದಲು ಬೀಳುವುದು ಮೂಗು, ಬುದ್ಧಿಯಲ್ಲ. ಹಾಳು ದೇವರು ಬುದ್ಧಿಯನ್ನೇಕೆ ನಿರಾಕಾರ ಮಾಡಿದ್ದಾನೆ? ಏನಾದರಾಗಲಿ, ವಯಸ್ಸು ಬಂದ ಹುಡುಗಿ ಅತ್ಯಲ್ಪಕಾಲದ ನೋಟೀಸಿ (ಸೂಚನೆ) ನೊಳಗೆ ನನ್ನನ್ನು ಲಗ್ನವಾಗಲು ಅತ್ಯಲ್ಪ ಆಕ್ಷೇಪಣೆಯನ್ನೂ ಮಾಡದೆ ಸಿದ್ಧವಾಗಿರುವುದನ್ನು ಕಂಡಾಗ ಹುಡುಗಿಯರ ವಿಷಯದಲ್ಲಿ ನನ್ನ ಗೌರವವೇ ಕಡಿಮೆಯಾಗುತ್ತದೆ. ನಾನೇ ಹುಡುಗಿಯಾಗಿದ್ದಿದ್ದರೆ, ಆಗ ಶ್ರೀಯುತ ಸನತ್ಕುಮಾರರ ಮೊಂಡು ಮೂಗಿನ ಒಂದು ನಿಟ್ಟುಸಿರಿನಿಂದಲೇ ಆತನ ಆಸೆ ಮತ್ತು ಅಹಂಕಾರಗಳು ಮಣ್ಣಾಗುವಂತೆ ಮಾಡುತ್ತಿದ್ದೆ. ಈ ರೀತಿಯಾಗಿ ನನ್ನ ಮದುವೆಯ ಸರಕು ಹೇರದ ನೌಕೆ ನಡುನಡುವೆ ಹೊಳೆಯೊಳಗೆ ಹೇಗೋ ಹೊರಟಿತ್ತು. ಆದರೆ ಯಾವ ದಡಕ್ಕೂ ಇನ್ನೂ ತಲಪಿರಲಿಲ್ಲ. ಹೆಂಡತಿಯೊಂದು ಬಿಟ್ಟು ಸಂಸಾರದ ಉಳಿದೆಲ್ಲ ಉಪಕರಣಗಳು ನನ್ನ ವ್ಯಾಪಾರದ ಉನ್ನತಿಯ ಸಂಗಡವೇ ಬೆಳೆಯಲು ತೊಡಗಿದುವು. ಒಂದು ವಿಷಯ ಮರೆತುಬಿಟ್ಟಿದ್ದೆ. ವಯಸ್ಸೂ ಬೆಳೆಯುತ್ತಿತ್ತು. ಹಠಾತ್ತಾಗಿ ನಡೆದ ಒಂದು ಸಂಗತಿ ಆ ಮಾತನ್ನು ನೆನಪು ಮಾಡಿಕೊಟ್ಟಿತು.

ಅಭ್ರ (ಕಾಗೆ ಬಂಗಾರ)ದ ಗಣಿಯ ಸಂಶೋಧನೆ ಮಾಡುತ್ತ ಛೋಟಾನಾಗಪುರದ ಪ್ರಾಂತಕ್ಕೆ ಹೋಗಿದ್ದೆ ಒಮ್ಮೆ. ಅಲ್ಲಿ ಯಾವುದೋ ಒಂದು ದೊಡ್ಡ ಊರಲ್ಲಿ ನನ್ನ ಹಳೆಯ ಪಂಡಿತ ಮಹಾಶಯರು ಸಾಲವನದ ನೆರಳಲ್ಲಿ ನದೀತೀರದಲ್ಲಿ ಸುಂದರವಾದ ಸಣ್ಣದೊಂದು ಮನೆ ಕಟ್ಟಿಕೊಂಡು ನೆಲೆಸಿದ್ದದ್ದನ್ನು ಕಂಡೆ. ಅವರ ಮಗ ಅಲ್ಲಿ ನೌಕರಿ ಮಾಡುತ್ತಿದ್ದ. ಆ ಸಾಲವನದ ಪ್ರಾಂತದಲ್ಲೇ ನನ್ನ

ಟೆಂಟ್ (ಡೇರಾ) ಹೊಡೆಯಲ್ಪಟ್ಟಿತ್ತು. ಈಗಂತೂ ಇಡೀ ದೇಶದಲ್ಲೆಲ್ಲ ನನ್ನ ಐಶ್ವರ್ಯದ-ಖ್ಯಾತಿ ಹರಡಿತ್ತು. ಪಂಡಿತ ಮಹಾಶಯರು ನಾನು ದೊಡ್ಡವನಾದ ಮೇಲೆ ಕಾಲಕ್ರಮೇಣ ಅಸಾಧಾರಣ ವ್ಯಕ್ತಿಯಾಗುವುದಾಗಿ ತಮಗೆ ಮೊದಲೇ ಗೊತ್ತಿತ್ತು ಎಂದು ಹೇಳಿದರು. ಇರಬಹುದು. ಆದರೆ ಇದನ್ನೇಕೆ ಅಷ್ಟು ರಹಸ್ಯವಾಗಿಟ್ಟಿದ್ದರು?–ಅದೇ ಆಶ್ಚರ್ಯ! ಅಲ್ಲದೆ ಅದಾವ ಸೂಚನೆ, ಲಕ್ಷಣಗಳಿಂದ ಈ ಭವಿಷ್ಯ ಅವರಿಗೆ ತಿಳಿದು ಬಂತು. ಅದೂ ಹೇಳಲಾರೆ. ಬಹುಶಃ ಅಸಾಧಾರಣ ವ್ಯಕ್ತಿಗಳಿಗೆ ವಿದ್ಯಾರ್ಥಿಗಳಾಗಿದ್ದ ಸಮಯದಲ್ಲಿ ಕೊಂಬು, ಒತ್ತುಗಳ ಜ್ಞಾನವೇ ಇರುವುದಿಲ್ಲ ಎಂದು ತೋರುತ್ತದೆ–ಅದೇ ಇರಬಹುದು ಕಾರಣ!

ಕಾಶೀಶ್ವರಿಯು ಆಗ ಅತ್ತೆಯ ಮನೆಯಲ್ಲಿದ್ದಳು. ತತ್ಫಲವಾಗಿ ಯಾವುದೊಂದು ಸಂಕೋಚವೂ ಇಲ್ಲದೆ ನಾನು ಪಂಡಿತ ಮಹಾಶಯರ ಮನೆಯವರಲ್ಲೊಬ್ಬನಾಗಿಬಿಟ್ಟೆ. ಕೆಲವು ವರುಷಗಳ ಹಿಂದೆ ಅವರಿಗೆ ಪತ್ನೀವಿಯೋಗವಾಗಿತ್ತು. ಆದರೆ ಮನೆ ಮೊಮ್ಮಕ್ಕಳಿಂದ ತುಂಬಿಹೋಗಿತ್ತು. ಎಲ್ಲರೂ ಸ್ವಂತ ಮೊಮ್ಮಕ್ಕಳಲ್ಲ, ಅವರಲ್ಲಿಬ್ಬರು ಆತನ ಗತಿಸಿಹೋದ ಅಣ್ಣನ ಮೊಮ್ಮಕ್ಕಳು. ಮುದುಕನು ಇವರುಗಳ ಸಹಾಯದಿಂದ ತನ್ನ ವೃದ್ಧಾಪ್ಯದ ಅಪರಾಹ್ನವನ್ನು ಬಗೆ ಬಗೆಯ ಬಣ್ಣಗಳಿಂದ ಅಲಂಕರಿಸಿಕೊಂಡಿದ್ದಾನೆ. ಆತನ ಅಮರುಶತಕ, ಆರ್ಯಾ ಸಪ್ತಶತಿ, ಹಂಸದೂತ, ಪದಾಂಕ ದೂತ ಮುಂತಾದ ಗ್ರಂಥಗಳ ಶ್ಲೋಕಧಾರೆ ನಾಲ್ಕು ದಿಕ್ಕೂ ನುಣುಪಾದ ಬೆಣಚುಕಲ್ಲುಗಳ ಮೇಲೆ ಹರಿದುಹೋಗುವ ಗಿರಿ ನದಿಯ ನೊರೆ ತುಂಬಿದ ಪ್ರವಾಹದಂತೆ ಈ ಹೆಣ್ಣು ಮೊಮ್ಮಕ್ಕಳನ್ನು ಸುತ್ತುವರಿದು ತಿಳಿನಗುವಿನ ಬುಗ್ಗೆಗಳನ್ನು ಹರಿಸುತ್ತ ದನಿಯೆಬ್ಬಿಸುತ್ತ ಇರುತ್ತದೆ.

ಒಮ್ಮೆ ನಾನು ನಗುತ್ತ "ಪಂಡಿತರೇ, ಏನು ಅಷ್ಟೊಂದು ಮಜಾ ?" ಎಂದು ಕೇಳಿದೆ. ಅದಕ್ಕೆ ಅವರು "ಅಪ್ಪಾ, ನಿಮ್ಮ ಇಂಗ್ಲಿಷು ಶಾಸ್ತ್ರದಲ್ಲಿ ಹೇಳಿದೆಯಲ್ಲ, ಶನಿಗ್ರಹದ ಸುತ್ತಲೂ (ಉಪಗ್ರಹ) ಚಂದ್ರಗ್ರಹಗಳ ಮಾಲೆಯಿರುತ್ತೆ ಅಂತ – ಇಗೋ ಇವೇ ನನ್ನ ಚಂದ್ರಗ್ರಹಗಳ ಮಾಲೆ" ಎಂದರು.

ಆ ಬಡತನದ ಮನೆಯಲ್ಲಿ ಈ ನೋಟವನ್ನು ಕಂಡೊಡನೆ ನನಗೆ ತತ್ಕ್ಷಣ ನಾನೆಷ್ಟು ಏಕಾಂಗಿ – ಎಂದೆನ್ನಿಸಿಬಿಟ್ಟಿತು. ನನ್ನ ಭಾರದಿಂದಲೇ ನಾನೆಷ್ಟು ಶ್ರಮಪಟ್ಟಿದ್ದೇನೆ ಎಂದು ಆಗ ತಿಳಿದುಕೊಂಡೆ. ಈ ಪಂಡಿತ ಮಹಾಶಯರೋ ತಮಗೆ ವಯಸ್ಸಾಗಿದೆ ಎಂಬುದನ್ನೇ ಮರೆತುಬಿಟ್ಟಿದ್ದಾರೆ. ಆದರೆ ನನಗೆ ವಯಸ್ಸಾಗುತ್ತಿದೆ ಎಂಬುದನ್ನು ನಾನು ಆಗ ಸ್ಪಷ್ಟವಾಗಿ ತಿಳಿದುಕೊಂಡೆ. ಯಾವುದರಿಂದ ತಿಳಿದುಕೊಂಡೆನೆಂದರೆ–ನನ್ನ ಸುತ್ತುಮುತ್ತಲಿರುವುದನ್ನೆಲ್ಲ–ನನ್ನ ಆತ್ಮೀಯರನ್ನೆಲ್ಲ–ತೊರೆದು ಬಂದಿದ್ದೆ. ನನ್ನ ಸುತ್ತಲ ನೆಲ ನಾಲ್ಕೂ ಕಡೆ ಸಡಿಲವಾಗುತ್ತ ಬಂದು ಬರಬರುತ್ತ ದೊಡ್ಡ ಬಿರುಕು ಕಾಣಬರುತ್ತಿದೆ. ಆ ಬಿರುಕನ್ನು ಹಣ ಸುರಿದಾಗಲಿ, ಖ್ಯಾತಿ ಗಳಿಸಿಯಾಗಲಿ

ತುಂಬಿಸಲಾಗದು. ಈ ಭೂಮಿಯಿಂದ ನನಗೆ ರಸ ದೊರೆಯುತ್ತಿಲ್ಲ. ಕೇವಲ ಒಣ ವಸ್ತುಗಳನ್ನು ಅಗೆದು ತೆಗೆದುಕೊಳ್ಳುತ್ತಿದ್ದೇನೆ. ಇದು ಎಷ್ಟು ವ್ಯರ್ಥವೆಂಬುದನ್ನು ಅಭ್ಯಾಸಬಲದಿಂದ ಮರೆತುಹೋಗಬಹುದು. ಆದರೆ ಪಂಡಿತ ಮಹಾಶಯರ ನಗು ತುಂಬಿದ ಮನೆಯನ್ನು ಯಾವಾಗ ನೋಡಿದೆನೋ ಆಗ ನನಗೆ ನನ್ನ ಹಗಲೆಷ್ಟು ಒಣಗಿ ಹೋಗಿದೆಯೋ ನನ್ನ ಇರುಳೂ ಅಷ್ಟೇ ಶೂನ್ಯವಾಗಿದೆ ಎನ್ನಿಸಿತು. ಪಂಡಿತ ಮಹಾಶಯರೇನೋ ನಾನು ತಮಗಿಂತ ಎಷ್ಟೋ ಭಾಗ್ಯಶಾಲಿ ಎಂದು ತಿಳಿದುಕೊಂಡಿದ್ದಾರೆ. ಇದನ್ನ ನೆನೆದು ನನಗೆ ನಗು ಬಂತು. ಈ ವಸ್ತು ತುಂಬಿದ ಜಗತ್ತನ್ನು ಸುತ್ತುವರಿದ ಕಣ್ಣಿಗೆ ಕಾಣದ ಆನಂದಲೋಕವೊಂದಿದೆ. ಆ ಆನಂದಲೋಕದ ಸಂಗಡ ನಮ್ಮ ಬಾಳುವೆಗೆ ಯೋಗಸೂತ್ರದ ಗಂಟಿಲ್ಲದೆ ಹೋದರೆ ನಾವು ನಾವು ತ್ರಿಶಂಕುವಿನಂತೆ ಶೂನ್ಯತೆಯಲ್ಲಿ ಓಲಾಡುತ್ತಿರುತ್ತೇವೆ. ಪಂಡಿತ ಮಹಾಶಯರಿಗೆ ಹಾಗೆ ಸಂಬಂಧವುಂಟು. ನನಗೆ ಇಲ್ಲ. ಇದೇ ವ್ಯತ್ಯಾಸ. ನಾನು ಆರಾಮ ಕುರ್ಚಿಯ ಮೇಲೆ ಕೂತು ಅದರ ಎರಡೂ ಭುಜಗಳ ಮೇಲೆ ಕಾಲುನೀಡಿ ಸಿಗರೇಟು ಸೇದುತ್ತ ಯೋಚನೆ ಮಾಡತೊಡಗಿದೆ. ಪುರುಷರ ಬಾಳುವೆಯಲ್ಲಿ ನಾಲ್ಕು ಅಧಿದೇವತೆಗಳು–ಬಾಲ್ಯದಲ್ಲಿ ತಾಯಿ, ಪ್ರಾಯದಲ್ಲಿ ಹೆಂಡತಿ, ಮಧ್ಯವಯಸ್ಸಿನಲ್ಲಿ ಮಗಳು–ಸೊಸೆ. ಮುದಿವಯಸ್ಸಿನಲ್ಲಿ ಮೊಮ್ಮಗಳು–ಮೊಮ್ಮಗನ ಹೆಂಡತಿ. ಹೀಗೆ ಹೆಣ್ಣುಮಕ್ಕಳ ನಡುವೆ ಇದ್ದರೆ ಮಾತ್ರ ಪುರುಷನಿಗೆ ನಿಜವಾದ ಪೂರ್ಣತೆ ದೊರೆಯುವುದು. ಈ ತತ್ತ್ವವು ನನಗೆ ಮರ್ಮರ ದನಿ ಮಾಡುವ ಆ ಸಾಲವನದಲ್ಲಿ ಹೊಳೆದು ನನ್ನ ಮನವನ್ನು ಪೂರ್ತಿಯಾಗಿ ಆವರಿಸಿಬಿಟ್ಟಿತು. ಮನದೊಳಗೇ ನನ್ನ ಮುಂದಿನ ಮುದಿತನದ ಕಡೆಯ ಸೀಮೆಯವರೆಗೂ ದೃಷ್ಟಿ ಹಾಯಿಸಿ ನೋಡಿದೆ. ನೋಡಿದೊಡನೆ ಅದರ ನಿರತಿಶಯವಾದ ನೀರಸತೆಯಿಂದ ನನ್ನ ಹೃದಯವು ಹಾಹಾಕಾರ ಮಾಡತೊಡಗಿತು – ಈ ಮರುಭೂಮಿಯ ದಾರಿಯನ್ನು ಹೇಗೋ ಪಾರಾಗಿ ಸಂಪಾದನೆಯ ಭಾರವನ್ನು ಹೆಗಲ ಮೇಲೆ ಹೇರಿಕೊಂಡು ಹೋಗಿ ಮುಖ ಬೋರಲಾಗಿ ಮುಚ್ಚಿಕೊಂಡು ಸಾಯಬೇಕು, ಅಷ್ಟೆ. ಇನ್ನಂತೂ ತಡ ಮಾಡಿದರೆ ಸಾಧ್ಯವಿಲ್ಲ. ಸದ್ಯಕ್ಕೆ ನಲವತ್ತು ದಾಟಿದ್ದೇನೆ. ಯೌವನದ ಕಡೆಯ ಪಾತ್ರವನ್ನು ಕಸಿದುಕೊಳ್ಳಲು ಐವತ್ತು ಹಾದಿಯಂಚಿನಲ್ಲಿ ಕಾದು ಕೂತಿದೆ. ಅದರ ದೊಣ್ಣೆಯ ನೆರಳು ಈಗಾಗಲೇ ಕಾಣುತ್ತಿದೆ. ಈಗ ಪಾಕೆಟ್ (ಜೇಬು) ವಿಷಯವನ್ನು ಕಟ್ಟಿಟ್ಟು ಬಾಳುವೆಯ ಬಗ್ಗೆ ಸ್ವಲ್ಪ ಯೋಚನೆ ಮಾಡೋಣ. ಆದರೆ ಬಾಳುವೆಯ ಯಾವ ಮುಖ್ಯ ಅಂಶವು ಮರಳಿ ಮರಳಿ ತಳ್ಳಿಹಾಕಲ್ಪಟ್ಟು ಬಂದಿದೆಯೋ ಆ ಅಂಶವನ್ನು ಮತ್ತೆ ಹಿಂದಿರುಗಿಸಲಾಗುವುದಿಲ್ಲವಲ್ಲ ? ಆದರೂ ಅದರ ಹರಕನ್ನು ತೇಪೆಹಾಕಿ ಮುಚ್ಚುವ ಕಾಲವಿನ್ನೂ, ಪೂರ್ತಿಯಾಗಿ ಕಳೆದುಹೋಗಿಲ್ಲ.

ಈ ಸ್ಥಳದಿಂದ ಕೆಲಸದ ನಿಮಿತ್ತ ಪಶ್ಚಿಮಪ್ರಾಂತದಲ್ಲಿ ಯಾವುದೋ ಷಹರಿಗೆ ಹೋಗಬೇಕಾಗಿ ಬಂತು. ಅಲ್ಲಿ ವಿಶ್ವಪತಿ ಎಂಬೊಬ್ಬ ಹಣವಂತನಾದ ಬಂಗಾಳಿ ವರ್ತಕ. ಅವರ ಬಳಿ ನನ್ನದೊಂದು ವ್ಯವಹಾರವಿತ್ತು. ಮನುಷ್ಯ ಅತ್ಯಂತ ಜಾಗರೂಕನಾದ ಮನುಷ್ಯ, ಅವನೊಡವೆ ವ್ಯವಹಾರ ಮಾಡುವುದು ಸುಲಭವಲ್ಲ. ಯಾವುದೇ ಮಾತು ನಿಷ್ಕರ್ಷೆಗೆ ಬರಲು ಬಹಳ ವಿಳಂಬವಾಗುತ್ತದೆ. ಒಮ್ಮೆ ವಿಪರೀತ ಬೇಸರಗೊಂಡು ಇವನಿಂದ ನನ್ನ ಕೆಲಸವಾಗುವ ಹಾಗಿಲ್ಲ ಎಂದುಕೊಂಡು ಆಳಿಗೆ ನನ್ನ ಸಾಮಾನೆಲ್ಲ ಕಟ್ಟಿಡು, ಎಂದು ಹೇಳಿದೆ. ಆಗ ವಿಶ್ವಪತಿಬಾಬು ಸಂಜೆಯ ವೇಳೆ ನನ್ನನ್ನು ಭೇಟಿಯಾಗಿ "ನಿಮ್ಮ ಬಳಿ ಬೇರೊಂದು ಮಾತಿದೆ. ನಿಮಗೆ ಅನೇಕ ಜನರ ಪರಿಚಯವಿದೆ. ತಾವು ಸ್ವಲ್ಪ ಶ್ರಮವಹಿಸಿದರೆ ಒಬ್ಬ ವಿಧವೆ ಬದುಕಿಕೊಳ್ಳುತ್ತಾಳೆ" ಎಂದರು.

ಸಂಗತಿ ಹೀಗೆ —

ನಂದ ಕೃಷ್ಣಬಾಬು ಎಂಬಾತನೊಬ್ಬ ಮೊದಲಲ್ಲಿ ಬರೈಲಿ (ಬಿಹಾರಿನಲ್ಲಿ ಒಂದು ಪಟ್ಟಣ)ಗೆ ಬಂಗಾಳಿ-ಇಂಗ್ಲಿಷ್ ಶಾಲೆಗೆ ಹೆಡ್ ಮಾಸ್ಟರಾಗಿ ಬಂದವರು ಒಳ್ಳೇ ಹೆಸರು ಸಂಪಾದಿಸಿದ್ದರು. ಎಲ್ಲರಿಗೂ ಆಶ್ಚರ್ಯವೇನೆಂದರೆ—ಇಂತಹ ಸುಶಿಕ್ಷಿತ, ಮತ್ತು ದಕ್ಷ, ಪ್ರಾಮಾಣಿಕನಾದ ಮನುಷ್ಯ ದೇಶ ಬಿಟ್ಟು ಇಷ್ಟು ಕಡಿಮೆ ವೇತನದ ಮೇಲೆ ಇಷ್ಟು ದೂರ ಬಂದದ್ದು ಯಾವ ಕಾರಣಕ್ಕಾಗಿ? ಕೇವಲ ವಿದ್ಯಾರ್ಥಿಗಳನ್ನು ಸುಲಭವಾಗಿ ಪರೀಕ್ಷೆಯಲ್ಲಿ ತೇರ್ಗಡೆ ಮಾಡಿಸುವುದರಲ್ಲೊಂದೇ ಅಲ್ಲ ಆತನ ನಿಪುಣತೆ. ಇತರ ಒಳ್ಳೇ ಕೆಲಸಗಳಲ್ಲೆಲ್ಲ ಕೈಹಾಕಿ ಭೇಷ್ ಎನ್ನಿಸಿಕೊಂಡಿದ್ದ. ಇಂತಹ ಸಮಯದಲ್ಲಿ ಹೇಗೋ ವದಂತಿ ಹೊರ ಬಿತ್ತು—ಏನೆಂದರೆ ಆತನ ಹೆಂಡತಿಗೆ ರೂಪವೇನೋ ಇತ್ತು, ಆದರೆ ಕುಲವಿಲ್ಲ. ಯಾವುದೋ ಕೀಳು ಜಾತಿಯಲ್ಲಿ ಹುಟ್ಟಿದ ಹೆಂಗಸು ; ಅಷ್ಟೇ ಅಲ್ಲ, ಅವಳು ಮುಟ್ಟಿದ ನೀರು ತನ್ನ ಪಾನೀಯತೆಯೊಂದನ್ನೇ ಅಲ್ಲದೆ ಉಳಿದೆಲ್ಲ ಸಾತ್ತ್ವಿಕ ಗುಣಗಳನ್ನೂ ಕಳೆದುಕೊಂಡು ಬಿಡುವುದು. ಆತನನ್ನು ಯಾರಾದರೂ ಇದರ ಬಗ್ಗೆ ಪ್ರಶ್ನೆ ಮಾಡಿದರೆ ಆಗ ಆತನು "ಹೌದು, ಜಾತಿಯೇನೋ ಕೀಳು. ಆದರೂ ಅವಳು ನನ್ನ ಹೆಂಡತಿ" ಎಂದು ಹೇಳುತ್ತಿದ್ದ. ಇಂತಹ ಮದುವೆ ವಿಧಿ ಸಮ್ಮತ ಹೇಗಾಯಿತು ಎಂಬ ಪ್ರಶ್ನೆಯೆದ್ದಾಗ ನಂದ ಕೃಷ್ಣಬಾಬು ಹಾಗೆ ಕೇಳಿದವನನ್ನು ಕುರಿತು "ನೋಡಿ, ನೀವು ಸಾಲಿಗ್ರಾಮದ ಸಾಕ್ಷಿಯಾಗಿ ಒಂದಾದ ಮೇಲೊಂದು ಇಬ್ಬರು ಹೆಂಡಿರನ್ನು ಲಗ್ನವಾಗಿದ್ದೀರಿ. ಅಲ್ಲದೆ ಈ ದ್ವಿರುಕ್ತಿಯಲ್ಲೂ ತೃಪ್ತರಾಗಿಲ್ಲವೆಂಬುದಕ್ಕೆ ಎಷ್ಟೋ ಪ್ರಮಾಣ ಕೊಟ್ಟಿದ್ದೀರಿ. ಸಾಲಿಗ್ರಾಮದ ಬಗ್ಗೆ ನಾನೇನೂ ಹೇಳಲಾರೆ. ಆದರೆ ಅಂತಸ್ಸಾಕ್ಷಿಯಾದ ದೇವರಿಗೆ ಗೊತ್ತು, ನನ್ನ ವಿವಾಹವು ನಿಮ್ಮ ವಿವಾಹಕ್ಕಿಂತಲೂ ಧರ್ಮಸಮ್ಮತವಾದದ್ದು.

ಪ್ರತಿದಿನ, ಪ್ರತಿ ಮುಹೂರ್ತವೂ ಅದು ಧರ್ಮಸಮ್ಮತ. ಇದಕ್ಕಿಂತಲೂ ಹೆಚ್ಚಾಗಿ ತಮ್ಮ ಸಂಗಡ ಚರ್ಚೆಮಾಡಲು ನನಗಿಷ್ಟವಿಲ್ಲ" ಎಂದು ಬಿಟ್ಟರು.

ಈ ಮಾತನ್ನು ಯಾರಿಗೆ ಹೇಳಿದರೋ ಆತ ಮಾತ್ರ ಸಂತುಷ್ಟನಾಗಲಿಲ್ಲ. ಅದರ ಮೇಲೆ ಬೇರೆ ಜನರಿಗೆ ಹಾನಿ ಮಾಡುವ ಸಾಮರ್ಥ್ಯವೂ ಆತನಲ್ಲಿ ಬೇಕಾದಷ್ಟಿತ್ತು. ಇದರ ಫಲವಾಗಿ ಆದ ಅವನ ಉಪದ್ರವವನ್ನು ಸೈರಿಸಲಾಗದೆ ನಂದಕೃಷ್ಣಬಾಬು ಬರ್ಕೈಲಿಯನ್ನು ಬಿಟ್ಟು ಈಗ ನಾನು ಬಂದಿದ್ದ ಊರಿನಲ್ಲಿ ವಕಾಲತಿ ಆರಂಭಿಸಿದ್ದರು. ಇಲ್ಲೂ ಅವರ ವ್ಯಕ್ತಿತ್ವ ಮೇಲೇರಿತು. ತಮ್ಮ ವೃತ್ತಿಯಲ್ಲಿ ಅತ್ಯಂತ ಷರತ್ತಿನವರಾಗಿದ್ದರು. ಉಪವಾಸವಿದ್ದರೂ ಸರಿ, ಅನ್ಯಾಯವೆಂದು ತೋರಿದ ಕೇಸನ್ನು ತೆಗೆದುಕೊಳ್ಳುತ್ತಿರಲಿಲ್ಲ. ಇದರಿಂದ ಮೊದಲಲ್ಲಿ ಅವರಿಗೆ ಎಷ್ಟೇ ಕಷ್ಟವಾದರೂ, ಕಡೆ ಕಡೆಗೆ ಉನ್ನತಿಯಾಗುತ್ತ ಬಂತು ಏಕೆಂದರೆ ಕಕ್ಷಿಗಾರರು ಅವರಲ್ಲಿ ಸಂಪೂರ್ಣ ಭರವಸೆಯಿಡುತ್ತಿದ್ದರು. ಕ್ರಮೇಣ ನಂದಕೃಷ್ಣಬಾಬು ಒಂದು ಮನೆ ಮಾಡಿ, ಒಂದಿಷ್ಟು ಹಣ ಕೂಡ ಕೂಡಿಸಿಟ್ಟುಕೊಂಡರು. ಅಂತಹ ವೇಳೆಯಲ್ಲಿ ದೇಶದಲ್ಲಿ ವೀರಕ್ಷಾಮ ತಲೆದೋರಿತು. ನಾಡೇ ನಾಶವಾಗುವ ವಿಪತ್ಕಾಲ. ನರಳುವ ಜನತೆಗೆ ಕೂಡಲೆ ಸಹಾಯ ಹಂಚದಿದ್ದರೆ ಅವರು ಉಳಿಯುವಂತೆಯೇ ಇಲ್ಲ. ಯಾರ ಮೇಲೆ ಈ ಭಾರವನ್ನು ವಹಿಸಿದ್ದರೋ ಅವರೆಲ್ಲ ಹಣ, ಧಾನ್ಯಗಳನ್ನು ಒಳಗೊಳಗೇ ಮಾಯ ಮಾಡಿಬಿಡುತ್ತಿದ್ದರು. ಮ್ಯಾಜಿಸ್ಟ್ರೇಟರ ಬಳಿ ಈ ಬಗ್ಗೆ ದೂರುಗಳು ಬಂದಾಗ ಅವರು "ಮತ್ತೆ ಯಾರನ್ನು ನಂಬುವುದು? ಅಂಥ ಒಳ್ಳೇ ಜನ ಎಲ್ಲಿ ಸಿಗುತ್ತಾರೆ?" ಎಂದಾಗ ನಂದಕೃಷ್ಣವು "ನನ್ನನ್ನು ನಂಬುವ ಹಾಗಿದ್ದರೆ ನಾನೀ ಕೆಲಸವನ್ನು ತೃಪ್ತಿಕರವಾಗಿ ನಿರ್ವಹಿಸಬಲ್ಲೆ" ಎಂದರು.

ಹೇಳಿದಂತೆಯೇ ಭಾರ ವಹಿಸಿಕೊಂಡು ಕೆಲಸ ಮಾಡುತ್ತಿದ್ದಾಗ ಒಂದು ದಿನ ಮಧ್ಯಾಹ್ನ ಯಾವುದೋ ಮೈದಾನದ ಒಂದು ಗಿಡದ ನೆರಳಲ್ಲಿ ಇದ್ದಕ್ಕಿದ್ದ ಹಾಗೆ ಹೃದಯಸ್ತಂಭನದಿಂದ ಉಸಿರು ತೊರೆದರು.

ಈ ಕಥೆಯಲ್ಲಿ ಇಷ್ಟು ಮಾತ್ರ ನನಗೆ ಮೊದಲೇ ತಿಳಿದಿತ್ತು. ಇದೇ ವಿಷಯವಾಗಿ ಯಾವುದೋ ಒಂದು ಸಂದರ್ಭದಲ್ಲಿ ಉದಾತ್ತ ಭಾವನೆಯ ಆವೇಗದಲ್ಲಿ ನಾನು ನಮ್ಮ ಕ್ಲಬ್ಬಿನಲ್ಲಿ ಪ್ರಸ್ತಾಪ ಮಾಡುತ್ತ "ಈ ನಂದಕೃಷ್ಣನಂಥವರು ಯಾರು ಬಾಳುವೆಯಲ್ಲಿ ಒಂದು ಆಸ್ತಿ, ಒಂದು ಹೆಸರು ಯಾವುದನ್ನೂ ಗಳಿಸದೆ ಸೋತವರೆನ್ನಿಸಿಕೊಂಡು ಒಣಗಿಹೋಗಿದ್ದಾರೋ ಅಂಥವರೇ ಭಗವಂತನ ನೆರವಾಗಿ ಜೀವನದ ಮಟ್ಟವನ್ನು...." ಇತ್ಯಾದಿ ಇತ್ಯಾದಿ ಹೇಳುತ್ತಿರುವಾಗ ಹಠಾತ್ತಾಗಿ ನನ್ನ ಭಾಷಣದ ನೌಕೆ ಮುಂದೆ ಸಾಗದೆ ನಿಂತುಹೋಯಿತು–ಕಾರಣ ನಮ್ಮ ಗುಂಪಿನಲ್ಲೊಬ್ಬ ಅತಿ ಧನ, ಹೆಸರು ಗಳಿಸಿದ ದೊಡ್ಡಮನುಷ್ಯ ತಾವು ಓದುತ್ತಿದ್ದ ಪೇಪರಿನ ಮೇಲುಗಡೆಯಿಂದ, ತಮ್ಮ

ಚಾಳೀಸಿನ ಮೇಲ್ತುದಿಯಿಂದ ನನ್ನ ಕಡೆ ವ್ಯಂಗ್ಯ ನೋಟದ ಬಾಣವೆಸೆದು "ಹಿಯರ್, ಹಿಯರ್" ಎಂದು ಕೂಗಿಬಿಟ್ಟರು.

ಹೋಗಲಿ ಆ ಮಾತು. ಆಮೇಲೆ ಎಂದೋ ಒಂದು ದಿನ ಈ ನಂದಕೃಷ್ಣರ ವಿಧವೆ ಹೆಂಡತಿ ತಮ್ಮ ಒಬ್ಬಳೇ ಮಗಳೊಂದಿಗೆ ನಾನಾಗ ಆ ಊರಲ್ಲಿ ಯಾವ ಮನೆಯಲ್ಲಿಳಿದುಕೊಂಡಿದ್ದೆನೋ ಅದೇ ಓಣಿಯಲ್ಲೇ ಇದ್ದಾಳೆಂದು ಕೇಳಿದೆ. ದೀಪಾವಳಿಯಲ್ಲಿ ಹುಟ್ಟಿದವಳಾದುದರಿಂದ ಅವಳಿಗೆ "ದೀಪಾಲಿ" ಎಂದು ನಾಮಕರಣ ಮಾಡಿದ್ದರು. ನಂದಕೃಷ್ಣರ ಹೆಂಡತಿಗೆ ಯಾವ ಸಮಾಜದಲ್ಲೂ ಸ್ಥಾನ ದೊರಕದೆ ಕೇವಲ ಒಬ್ಬಂಟಿಗಳಾಗಿಯೇ ಇದ್ದು ಮಗಳನ್ನು ಓದು ಬರೆಹ ಕಲಿಸಿ ಬೆಳೆಸಿಕೊಂಡಿದ್ದಳು. ಈಗ ಆ ಮಗಳಿಗೆ ಇಪ್ಪತ್ತೈದು ವರುಷಗಳು ಮೀರಿಹೋಗಿತ್ತು. ತಾಯಿಯು ರೋಗಿಷ್ಠಳು. ಅಲ್ಲದೆ ವಯಸ್ಸೂ ಕಡಿಮೆಯಿಲ್ಲ. ಯಾವ ದಿನ ಅವಳು ಕಣ್ಣುಮುಚ್ಚಿಕೊಳ್ಳುತ್ತಾಳೋ ಯಾರಿಗೆ ಗೊತ್ತು? ಆಗ ಈ ತಬ್ಬಲಿ ಹುಡುಗಿಗೆ ಗತಿ ಯಾರು? ...ವಿಶ್ವಪತಿ ಬಾಬು ನನಗೆ ವಿಶೇಷ ಅನುನಯದಿಂದ "ಈ ಹುಡುಗಿಗೊಂದು ವರ ದೊರಕಿಸಿಕೊಟ್ಟರೆ ಪುಣ್ಯ ಕಟ್ಟಿಕೊಂಡ ಹಾಗಾಗುತ್ತೆ" ಎಂದು ಪ್ರಾರ್ಥಿಸಿಕೊಂಡರು.

ನಾನು ಈ ವಿಶ್ವಪತಿಬಾಬು ಒಣ ಸ್ವಾರ್ಥಪರ, ಬರೇ ವ್ಯವಹಾರ ಬುದ್ಧಿಯವನು ಎಂದು ಮನಸ್ಸಿನಲ್ಲೇ ಆತನ ಬಗ್ಗೆ ನಿಕೃಷ್ಟ ತೋರಿದ್ದೆ. ವಿಧವೆಯ ತಬ್ಬಲಿ ಮಗಳ ಮೇಲೆ ಆತನು ತೋರುತ್ತಿದ್ದ ಈ ಅನುತಾಪ ಕಂಡು ನನ್ನ ಮನಸ್ಸು ಕರಗಿಹೋಯಿತು. ಪ್ರಾಚೀನ ಪೃಥಿವಿಯ ಎಂದೋ ಅಳಿದುಹೋದ ಮ್ಯಾಮಥ್ (Mammoth) ಎಂಬ ಪೆಡಂಭೂತ ಜಠರದೊಳಗಿಂದ ಅದು ಎಂದೋ ನುಂಗಿದ್ದ ಬೀಜವೊಂದನ್ನು ಹೊರತೆಗೆದು ನೆಲದಲ್ಲಿ ಹೂತು ನೋಡಿದರೆ, ಅದು ಚಿಗುರಿಬಿಟ್ಟಿದೆ–ಎನ್ನಿಸಿತು ನನಗೆ. ಹಾಗೆಯೇ ಮನುಷ್ಯತ್ವವು ವಿಪುಲವಾದ ಹೆಣಗಳ ರಾಶಿಯ ನಡುವೆಯಿದ್ದುಕೊಂಡೂ ಸಾಯಲೆಣಿಸುವುದಿಲ್ಲ.

ನಾನು ವಿಶ್ವಪತಿಯನ್ನು ಕುರಿತು "ನೀವು ಪಾತ್ರನ ಬಗ್ಗೆ ಯೋಚಿಸಬೇಡಿ. ನನಗೊಬ್ಬ ತಿಳಿದವನಿದಾನೆ, ಯಾವ ಅಡಚಣೆಯೂ ಆಗದು. ನೀವು ಸಂಬಂಧ ನಿಷ್ಕರ್ಷೆಮಾಡಿ, ಹಾಗೇ ಲಗ್ನದ ದಿನ ಕೂಡ" ಎಂದುಬಿಟ್ಟೆ.

"ಆದರೆ ಹೆಣ್ಣನ್ನು ನೋಡದೆಯೇ...ಮತ್ತೆ...?"

"ಹೌದು, ನೋಡದೆಯೇನೇ ಆಗುತ್ತೆ."

"ಆದರೆ ಆ ವರನಿಗೇನಾದರೂ ಹಣ ಸಿಗಬಹುದೆಂಬ ಆಸೆಯಿದ್ದರೆ... ಹೇಳುವುದೊಳ್ಳೆಯದು; ಅಂಥದೇನೂ ಹಣವಿಲ್ಲ. ತಾಯಿ ಸತ್ತ ಮೇಲೇ ಮನೆ ಒಂದು ಸಿಗುತ್ತೆ. ಅಷ್ಟೆ. ಅಲ್ಲದೆ ಸಾಮಾನ್ಯ ಒಂದಿಷ್ಟೇನೋ ಸಿಕ್ಕಬಹುದು."

"ವರನಿಗೆ ಸ್ವಂತದ್ದೇ ಬೇಕಾದಷ್ಟು ಆಸ್ತಿಯಿದೆ. ಅವರ ಬಗ್ಗೆ ಯೋಚಿಸಬೇಕಾಗಿಲ್ಲ."

"ಆತನ ಹೆಸರು, ಗೋತ್ರ ಮುಂತಾದ ವಿವರವಾವುದೂ...?"

"ಅದನ್ನ ಈಗ ಹೇಳುವುದಿಲ್ಲ. ಹೇಳಿದರೆ ಅವರಿವರಿಗೆ ತಿಳಿದು ಮದುವೆ ಮುರಿದರೂ ಮುರಿದೀತು."

"ಹಾಗಲ್ಲ...ಹುಡುಗಿಯ ತಾಯಿಗಾದರೂ ವಿವರ ತಿಳಿಸಬೇಕಲ್ಲ?"

"ನೀವು ಹೇಳಿ ಅವರಿಗೆ, ವರನು ಬೇರೆ ಎಲ್ಲ ಮನುಷ್ಯರಂತೆಯೇ ಗುಣ, ದೋಷಗಳಿಂದ ಕೂಡಿದವ. ಆದರೆ ದೋಷಗಳು ಅಷ್ಟು ಹೆಚ್ಚೇನಿಲ್ಲ ಎಂದು ತೋರಬಹುದು. ಗುಣಗಳು ಕೂಡ ಮುಚ್ಚಿ ಮುಗ್ಧವಾಗುವಂಥವಲ್ಲ. ನನಗೆ ತಿಳಿದಿರುವ ಮಟ್ಟಿಗೆ ಯಾವ ಹುಡುಗಿಯ ತಂದೆತಾಯಿಯಾದರೂ ಅವನನ್ನ ಖಂಡಿತ ಒಪ್ಪಿಕೊಳ್ಳುತ್ತಾರೆ. ಆದರೆ ಹುಡುಗಿಗೆ ಏನೆನ್ನಿಸುವುದೋ ಹೇಳಲು ಸಾಧ್ಯವಿಲ್ಲ."

ವಿಶ್ವಪತಿಬಾಬು ಇದೆಲ್ಲ ಕೇಳಿ ಅದೆಷ್ಟು ಉತ್ಸಾಹ, ಕೃತಜ್ಞತೆಗಳನ್ನು ತೋರಿದರೆಂದರೆ ನನಗೆ ಅದನ್ನು ಕಂಡು ಅವರ ಮೇಲೆ ಗೌರವ ಇನ್ನೂ ಹೆಚ್ಚಾಯಿತು. ಅವರೊಡನೆ ಇದುವರೆಗೆ ನಡೆಸುತ್ತಿದ್ದ ಲೇವಾದೇವಿಯ ಬಗ್ಗೆ ದರ ಗಿಟ್ಟುವಂಥದಲ್ಲ ಎಂದುಕೊಂಡಿದ್ದೆ. ಈಗ ಅದರಿಂದ ನಷ್ಟವಾದರೂ ಚಿಂತೆಯಿಲ್ಲ–ಆದಷ್ಟು ಬೇಗ ರಿಜಿಷ್ಟ್ರಿ ಮಾಡಿ, ಪತ್ರಕ್ಕೆ ಯಾವ ತಕರಾರೂ ಇಲ್ಲದೆ ಸಹಿ ಮಾಡಲು ತಯಾರಾದೆ. ಆತನು ನನ್ನನ್ನು ಬೀಳ್ಕೊಟ್ಟು ಹೊರಡುವಾಗ "ವರನಿಗೆ ಹೇಳಿ, ಬೇರೆ ಎಲ್ಲ ವಿಷಯಗಳು ಹೇಗೇ ಇರಲಿ, ಇಂಥ ಗುಣವತಿಯಾದ ಹುಡುಗಿ ಎಲ್ಲೂ ಸಿಗಲಾರಳು" ಎಂದರು.

ಸಮಾಜದ ಆಶ್ರಯವನ್ನೂ ಗೌರವವನ್ನೂ ಕಳೆದುಕೊಂಡಿರುವಂಥ ಹುಡುಗಿಗೆ ಹೃದಯ ಮಧ್ಯದಲ್ಲಿ ಪ್ರತಿಷ್ಠಿಸಿದ್ದಾದರೆ ಅಂಥವಳು ತನ್ನ ಹೃದಯವನ್ನು ಸಮರ್ಪಣೆ ಮಾಡುವುದರಲ್ಲಿ ಕೃಪಣತೆಯನ್ನು ತೋರಿಸಿಯಾಳೆ? ಬಹಳವಾಗಿ ದೊಡ್ಡ ಆಸೆ, ಆಕಾಂಕ್ಷೆಗಳಿಟ್ಟುಕೊಂಡಿರುವಂಥ ಹುಡುಗಿಯ ನಿರೀಕ್ಷೆಗಳಿಗೆ ಕೊನೆಯಿರುವುದಿಲ್ಲ. ಆದರೆ ಈ ದೀಪಾವಳಿಯ ದೀಪವಂತೂ ಮಣ್ಣಿನಿಂದ ಮಾಡಿದುದು. ಅದಕ್ಕೇ ನನ್ನಂತಹವನ ಮಣ್ಣಿನ ಮನೆಯ ಮಾಡದ ಮೇಲೆ ಇಟ್ಟರೆ ಅದರ ದೀಪದ ಶಿಖೆಗೆ ಎಂದಿಗೂ ಅವಮರ್ಯಾದೆಯಾಗದು–ಎಂದುಕೊಂಡೆ.

ಸಂಜೆಯ ವೇಳೆ ದೀಪ ಹೊತ್ತಿಸಿ ವಿಲಾಯಿತಿಯ ಪತ್ರಿಕೆಯೊಂದನ್ನು ಓದುತ್ತಿದ್ದೆ. ಆಗ ಸುದ್ದಿ ಬಂತು–ಯಾವುದೋ ಹುಡುಗಿ ನನ್ನನ್ನು ಕಾಣಲು ಬಂದಿದ್ದಾಳೆಂದು. ಮನೆಯೊಳಗೆ ಹೆಂಗಸರು ಯಾರೂ ಇಲ್ಲ. ಅದರಿಂದ ನನಗೇಕೋ ಸಂಕೋಚವಾಯಿತು. ಯಾವುದಾದರೂ ಮರ್ಯಾದೆಯಾದ ನೆಪ ಹೇಳಿ, ಕಳುಹಿಸಿ ಬಿಡುವ ಎಂದುಕೊಳ್ಳುವ ಹೊತ್ತಿಗೆ ಅವಳೇ ನೇರವಾಗಿ ಒಳಗಡೆ ಬಂದು ನಮಸ್ಕಾರ ಮಾಡಿದಳು. ನನ್ನನ್ನು ಹೊರಗಣಿಂದ ನೋಡಿದವರು ಯಾರೂ ನಂಬುವುದಿಲ್ಲ.

ಆದರೆ ನಿಜವಾಗಿಯೂ ನಾನು ಬಹಳ ಸಂಕೋಚ ಪ್ರಕೃತಿಯವನು. ಆದ್ದರಿಂದ ಅವಳ ಮುಖದ ಕಡೆ ನೋಡಲಿಲ್ಲ. ಅವಳೊಡನೆ ಯಾವ ಮಾತನ್ನೂ ಆಡಲಿಲ್ಲ. ಆಗ ಅವಳೇ "ನನ್ನ ಹೆಸರು ದೀಪಾಲಿ" ಎಂದಳು.

ದನಿ ಬಲು ಸವಿ, ಸಾಹಸಮಾಡಿ ಅವಳ ಮುಖದ ಕಡೆ ನೋಡಿದೆ. ಆ ಮುಖದ ಮೇಲೆ ಬುದ್ಧಿಯ ಮತ್ತು ಕೋಮಲತೆಯ ಲೇಪವಿತ್ತು. ತಲೆಯ ಮೇಲೆ ಮುಸುಗಿಲ್ಲ. ಸಾಧಾರಣ ದೇಶೀ ಸೀರೆ ಉಟ್ಟಿದ್ದಾಳೆ. ಆಗಿನ ಫ್ಯಾಷನ್ನಿನಲ್ಲಿ ಉಟ್ಟಿದ್ದಾಳೆ. ಏನು ಹೇಳೋಣ ಎಂದು ಯೋಚಿಸುತ್ತಿರುವಷ್ಟರಲ್ಲಿ ಅವಳೇ "ನನ್ನ ಮದುವೆ ವಿಷಯದಲ್ಲಿ ನೀವು ಯಾವ ಪ್ರಯತ್ನವನ್ನೂ ಮಾಡಬೇಡಿ, ದಯವಿಟ್ಟು" ಎಂದಳು.

ಬೇರೇನೇ ಇರಲಿ, ದೀಪಾಲಿಯ ಬಾಯಿಂದ ಈ ರೀತಿಯ ಅಡ್ಡಿಯನ್ನು ನಾನೆಂದೂ ನಿರೀಕ್ಷಿಸಿರಲಿಲ್ಲ. ನಾನು ಮದುವೆಯ ಪ್ರಸ್ತಾಪದಿಂದಲೇ ಅವಳ ದೇಹ, ಮನಗಳೆಲ್ಲ ಕೃತಜ್ಞತೆಯಿಂದ ತುಂಬಿಹೋಗಿರುತ್ತವೆ ಎಂದು ಖಂಡಿತವಾಗಿ ನಂಬಿದ್ದೆ.

ಆಗ ನಾನು "ತಿಳಿದಿರುವ, ತಿಳಿಯದಿರುವ ಬೇರೆ ಯಾವ ವರನೊಂದಿಗೂ ನೀನು ಮದುವೆಯಾಗುವುದಿಲ್ಲವೇ?" ಎಂದು ಕೇಳಿದೆ.

"ಇಲ್ಲ, ಯಾವ ವರನೊಂದಿಗೂ ಮಾಡಿಕೊಳ್ಳುವುದಿಲ್ಲ" ಎಂದಳು ಅವಳು. ನನಗೆ ಮನಸ್ತತ್ತ್ವಕ್ಕಿಂತ ವಸ್ತುತತ್ತ್ವದಲ್ಲೆ ಹೆಚ್ಚು ಅನುಭವ. ಅದರಲ್ಲೂ ಹೆಂಗಳ ಮನವರಿಯುವುದಂತೂ ನನ್ನ ಪಾಲಿಗೆ ಬಂಗಲೆ ಕಟ್ಟಿಸುವುದಕ್ಕಿಂತಲೂ ಕಠಿಣ. ಆದರೂ ಅವಳ ಮಾತಿನಲ್ಲಿ ತೋರುತ್ತಿದ್ದ ಅರ್ಥವೇ ಸತ್ಯವಾದ ಅರ್ಥವೆಂದು ನನಗೆ ಅನ್ನಿಸಲಿಲ್ಲ. ಆಗ ನಾನು "ನಾನು ನಿನಗೆಂದು ಹುಡುಕಿರುವ ವರ ತಿರಸ್ಕರಿಸತಕ್ಕಂಥ ವರನಲ್ಲ" ಎಂದೆ.

ದೀಪಾಲಿಯು "ಇಲ್ಲ, ಹಾಗಲ್ಲ, ನಾನಾತನನ್ನು ತಿರಸ್ಕರಿಸಿದೆನೆಂದಲ್ಲ. ಆದರೆ ನಾನು ಮದುವೆಯೇ ಮಾಡಿಕೊಳ್ಳುವುದಿಲ್ಲ" ಎಂದಳು.

ಆಗ ನಾನು "ನೋಡು, ಆ ಮನುಷ್ಯನಿಗೆ ನಿನ್ನ ಬಗ್ಗೆ ಅತ್ಯಂತ ಗೌರವವಿದೆ" ಎಂದೆ.

"ಇರಬಹುದು. ಆದರೆ ನನಗೆ ಮದುವೆ ಬೇಡ. ಮದುವೆ ಮಾಡಿಕೊಳ್ಳೆಂದು ದಯವಿಟ್ಟು ಹೇಳಬೇಡಿ."

"ಒಳ್ಳೇದು ಹಾಗಾದರೆ, ಹೇಳುವುದಿಲ್ಲ. ಹೋಗಲಿ, ನನ್ನಿಂದ ನಿನಗೆ ಬೇರೆ ಯಾವ ವಿಧದಲ್ಲಾದರೂ ಸಹಾಯವಾಗಲಾರದೆ?"

"ನನಗೆ ಯಾವುದಾದರೂ ಹುಡುಗಿಯರ ಶಾಲೆಯಲ್ಲಿ ಕಲಿಸುವ ಕೆಲಸ ಕೊಡಿಸಿ ನನ್ನನ್ನು ಇಲ್ಲಿಂದ ಕಲಿಕತ್ತೆಗೆ ಕೊಂಡೊಯ್ಯುವುದಾದರೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ."

ಆಗ ನಾನು ಒಡನೆಯೇ "ಅದಕ್ಕೇನು? ನೌಕರಿಯಿದೆ. ನಾನು ಒದಗಿಸಿ ಕೊಡಬಲ್ಲೆ" ಎಂದುಬಿಟ್ಟೆ.

ಇದರಲ್ಲಂತೂ ಸ್ವಲ್ಪವೂ ನಿಜವಿಲ್ಲ. ಹೆಣ್ಣುಮಕ್ಕಳ ಸ್ಕೂಲಿನ ವಿಷಯ ನನಗೇನು ಗೊತ್ತಿದೆ? ಆದರೇನು...ಹೆಣ್ಣುಮಕ್ಕಳ ಸ್ಕೂಲನ್ನು ಸ್ಥಾಪನೆ ಮಾಡಿದರೆ ದೋಷವೇನು?

ಆಗ ದೀಪಾಲಿಯು "ಹಾಗಾದರೆ ತಾವು ನಮ್ಮ ಮನೆಗೆ ಬಂದು ನನ್ನ ತಾಯಿಯೊಂದಿಗೆ ಒಮ್ಮೆ ಈ ಮಾತನ್ನು ಕುರಿತು ಪ್ರಸ್ತಾಪ ಮಾಡುತ್ತೀರಾ?" ಎಂದಳು.

"ಒಳ್ಳೇದು ನಾಳೆ ಬೆಳಗ್ಗೆಯೇ ಬರುತ್ತೇನೆ. ಖಂಡಿತ" ಎಂದೆ ನಾನು.

ದೀಪಾಲಿ ಹೊರಟುಹೋದಳು. ನನ್ನ ಪೇಪರೋದುವುದು ಅಲ್ಲೇ ನಿಂತುಹೋಯಿತು. ಮೇಲು ಮಾಳಿಗೆಯ ಮೇಲೆ ಹೋಗಿ ಕುರ್ಚಿಯ ಮೇಲೆ ಕೂತೆ. ಆಕಾಶದ ಕಡೆ ಕಣ್ಣು ಹಾಯಿಸಿ ನಕ್ಷತ್ರಗಳನ್ನು ಕಂಡು "ಕೋಟಿ ಕೋಟಿ ಯೋಜನಗಳ ದೂರದಿಂದ ನೀವು ನಿಜವಾಗಿಯೂ ಮನುಷ್ಯರ ಬಾಳುವೆಯ ಕರ್ಮಸೂತ್ರ ಮತ್ತು ಸಂಬಂಧ ಸೂತ್ರಗಳನ್ನೆಲ್ಲ ನಿಶ್ಶಬ್ದವಾಗಿ ಕೂತು ನೇಯುತ್ತಿದ್ದೀರಾ?" ಎಂದು ಕೇಳಿದೆ.

ಇಂಥ ವೇಳೆಯಲ್ಲಿ ಹೇಳದೆ ಕೇಳದೆ ಹಠಾತ್ತಾಗಿ ವಿಶ್ವಪತಿಬಾಬುವಿನ ಎರಡನೇ ಮಗ ಶ್ರೀಪತಿಯು ಮೇಲೆ ಹತ್ತಿ ಬಂದ. ಅವನೊಡನೆ ಆದ ಮಾತುಕಥೆಯಲ್ಲಿ ತಿಳಿದು ಬಂದ ವಿಷಯ ಇದು—

ಶ್ರೀಪತಿಯು ದೀಪಾಲಿಯನ್ನು ಮದುವೆಯಾಗುವ ಸಲುವಾಗಿ ಮನೆ, ಕುಲ, ಸಮಾಜಗಳನ್ನು ತ್ಯಾಗಮಾಡಲು ಸಿದ್ಧ. ಅವರಪ್ಪನಂತೂ ಇಂಥಾ ಕೆಲಸ ಮಾಡಿದರೆ ತಾನು ಮಗನನ್ನು ಹೊರಗೆ ಹಾಕಿಬಿಡುತ್ತೇನೆ ಎಂದು ಹೆದರಿಸುತ್ತಿದ್ದಾನೆ. ಅದಕ್ಕೆ ದೀಪಾಲಿಯು ತನ್ನ ಸಲುವಾಗಿ ಇಷ್ಟು ದೊಡ್ಡ ಅವಮಾನ ದುಃಖ ಬೇಡ. ಇಷ್ಟು ಅನಾಥ ತ್ಯಾಗವನ್ನು ಯಾರಾದರೂ ಒಪ್ಪಿಕೊಳ್ಳುವಷ್ಟು ಯೋಗ್ಯತೆ ತನಗಿಲ್ಲವೆಂದು ಹೇಳುತ್ತಾಳೆ. ಇದಲ್ಲದೆ ಶ್ರೀಪತಿಯು ಕಿರಿತನದಿಂದಲೂ ಹಣವಂತರ ಮನೆಯಲ್ಲಿ ಬೆಳೆದವನು. ದೀಪಾಲಿಯ ಅಭಿಪ್ರಾಯದಲ್ಲಿ ಅಂಥವನು ಸಮಾಜದಿಂದ ದೂಡಲ್ಪಟ್ಟು ನಿರಾಶ್ರಯನೂ ಆಗಿ ದಾರಿದ್ರ್ಯದ ಸಂಕಟವನ್ನು ಸೈರಿಸಲಾರ. ಇದರ ಬಗ್ಗೆಯೇ ತರ್ಕ ನಡೆದಿದೆ. ಏತರಿಂದಲೂ ಅದರ ಇತ್ಯರ್ಥವಾಗಿಲ್ಲ. ಸರಿಯಾಗಿ ಇಂತಹ ಬಿಕ್ಕಟ್ಟಿನ ಸಮಯದಲ್ಲೇ ನಾನು ನಡುವೆ ಬಂದು ಇವರಿಬ್ಬರ ಮಧ್ಯೆ ಇನ್ನೊಬ್ಬ ಪಾತ್ರನನ್ನು ತಂದು ನಿಲ್ಲಿಸಿ ಸಮಸ್ಯೆಯ ಜಟಿಲತೆಯನ್ನು ಇನ್ನೂ ಹೆಚ್ಚು ಮಾಡಿಬಿಟ್ಟಿದ್ದೇನೆ. ಇದರ ಸಲುವಾಗಿಯೇ ಶ್ರೀಪತಿಯು ನನ್ನ ಮುಂದೆ ಬಂದು ನಾನು ಈ ನಾಟಕರಂಗದಿಂದ ಪ್ರೂಫ್ ಕಾಗದದಲ್ಲಿ ಕತ್ತರಿಸಿ ಹಾಕಿದ ಭಾಗದಂತೆ ಹೊರಗೆ ಹೋಗಬೇಕೆಂದು ಹೇಳುತ್ತಿದ್ದಾನೆ.

ಆಗ ನಾನು "ನೋಡು, ಬಂದವನು ಬಂದುಬಿಟ್ಟೆ. ಈಗ ನೀನು ಹೇಳಿದೆ ಎಂದು ಗಾಡಿ ಬಿಡುವುದಿಲ್ಲ. ಒಂದು ಪಕ್ಷ ಬಿಟ್ಟರೂ ಗಂಟು ಕತ್ತರಿಸಿಹಾಕಿ ಆಮೇಲೆ ಬಿಡುತ್ತೇನೆ" ಎಂದೆ.

ಮದುವೆಯ ದಿನ ಬದಲಾವಣೆಯಾಗಲಿಲ್ಲ. ಆದರೆ ಕೇವಲ ಮದುವಣಿಗ ಮಾತ್ರ ಬೇರೆಯಾದ. ವಿಶ್ವಪತಿಯ ಅನುನಯವನ್ನು ಪಾಲಿಸಿದ್ದೇನೆ. ಆದರೆ ಅದರಿಂದ ಆತನಿಗೆ ಸಂತುಷ್ಟಿಯಾಗಿಲ್ಲ. ದೀಪಾಲಿಯ ಅನುನಯವನ್ನೇನೋ ಪಾಲಿಸಲಾಗಲಿಲ್ಲ. ಮತ್ತು ಅವಳ ಭಾವ, ದೃಷ್ಟಿಗಳಿಂದ ಅವಳಿಗೆ ಬೇಕಾದಷ್ಟು ತೃಪ್ತಿಯಾಗಿದೆಯೆನ್ನಿಸಿತು. ಸ್ಕೂಲಿನಲ್ಲಿ ಕೆಲಸ ಖಾಲಿ ಇತ್ತೋ ಇಲ್ಲವೋ ತಿಳಿಯದು. ಆದರೆ ನನ್ನ ಮನೆಯಲ್ಲಂತೂ ಒಬ್ಬ ಹೆಣ್ಣು ಮಗಳ ಸ್ಥಾನ ಖಾಲಿಯಿತ್ತು. ಅದಂತೂ ಭರ್ತಿಯಾಯಿತು. ನನ್ನಂತಹ ಕೆಲಸಕ್ಕೆ ಬಾರದ ಆಳು ಪೂರ್ತಿಯಾಗಿ ನಿರರ್ಥಕನಲ್ಲವೆಂದು ನನ್ನ ಅರ್ಥ (ಹಣ)ವೇ ಶ್ರೀಪತಿಯ ಮುಂದೆ ಪ್ರಮಾಣ ಮಾಡಿಕೊಟ್ಟಿತು. ಅವನ ಮನೆಯ ದೀಪ ನನ್ನ ಕಲಿಕತ್ತೆಯ ವಾಸಸ್ಥಳದಲ್ಲಿ ಬೆಳಗಿತು. ನಾನಂದುಕೊಂಡಿದ್ದೆ. ಸಮಯದಲ್ಲಿ ಮದುವೆ ಮಾಡಿಕೊಳ್ಳದೆ ಹೋದುದಕ್ಕಾಗಿ ಸಮಯ ಕಳೆದ ಮೇಲೆ ಮಾಡಿಕೊಳ್ಳಬೇಕಾಗಿ ಬರುತ್ತೇನೋ ಎಂದು. ಆದರೆ ಈಗ ನೋಡುತ್ತೇನೆ–ಮೇಲಿರುವವನು ಪ್ರಸನ್ನನಾದರೆ ಒಂದೆರಡು ವರ್ಗಗಳನ್ನು ದಾಟಿಸಿಯಾದರೂ ಡಬ್ಬಲ್ ಪ್ರಮೋಷನ್ ಕೊಟ್ಟುಬಿಡುತ್ತಾನೆ (ಅಂದರೆ ತಂದೆಯಾಗದೆಯೇ ಅಜ್ಜನಾಗುವ ಪ್ರಮೋಷನ್) – ಅದರ ಫಲವಾಗೇ ಇಂದು ಐವತ್ತೈದನೆ ವಯಸ್ಸಿನಲ್ಲೇ ನನ್ನ ಮನೆ ಹೆಣ್ಣು ಮೊಮ್ಮಕ್ಕಳಿಂದ ತುಂಬಿಹೋಗಿದೆ. ಅದರ ಮೇಲೆ ಒಬ್ಬ ಮೊಮ್ಮಗನೂ ಒದಗಿದ್ದಾನೆ. ಆದರೆ, ಪಾಪ, ವಿಶ್ವಪತಿ ಬಾಬುವಿನ ಸಂಗಡ ನನ್ನ ವ್ಯವಹಾರ ಕಡಿದುಹೋಗಿದೆ–ಏಕೆಂದರೆ, ಮದುವಣಿಗ ಅವನ ಮನಸ್ಸಿಗೆ ಬಂದವನಲ್ಲ.

೧೬. ಒಪ್ಪಿಗೆಯಾಗದ ಕಥೆ

ನಮ್ಮ ತಂಡಕ್ಕೆ ಕಳೆ ಕಟ್ಟಿದುದು ಪೊಲಿಟಿಕಲ್ ಲಂಕಾಕಾಂಡದ ಅಂಕದಲ್ಲಿ. ಈಗಿನ ಉತ್ತರ ಕಾಂಡದಲ್ಲಿ ನಮಗಿನ್ನೂ ಬೀಳ್ಕೊಡುವಿಕೆಯಾಗಿಲ್ಲ, ನಿಜ. ಆದರೆ ಗಂಟಲೊಣಗಿದೆ. ಅಷ್ಟೇ ಅಲ್ಲದೆ ಅಂದಿನ ಬೆಂಕಿ, ಕಿಡಿಗಳ ಸಿಡಿತ ಈಗ ಇಲ್ಲ.

ವಂಗ ವಿಭಾಗದ (ವಂಗದೇಶವನ್ನು ಲಾರ್ಡ್ ಕರ್ಜನ್ನನು ವೈಸರಾಯಿಯಾಗಿದ್ದಾಗ ಇಬ್ಭಾಗವಾಗಿ ಒಡೆದ ಕಾಲ) ರಂಗಭೂಮಿಯಲ್ಲಿ ಬಂಡುಕೋರರ ಅಭಿನಯ ಆರಂಭವಾಯಿತು. ಎಲ್ಲರಿಗೂ ಗೊತ್ತಿರುವ ವಿಷಯ–ಈ ನಾಟಕದ ಐದನೇ ಅಂಕದ ದೃಶ್ಯ ಆಲೀಪುರ (ಬಂಡುಕೋರರ ವಿಚಾರಣೆಯಾದ ಮ್ಯಾಜಿಸ್ಟ್ರೇಟ್ ಕೋರ್ಟ್) ವನ್ನು ದಾಟಿ ಅಂಡಮಾನದ ಸಮುದ್ರದ ತೀರದವರೆಗೆ ಹರಡಬೇಕಾಗಿತ್ತು. ಸಮುದ್ರಯಾನಕ್ಕೆ ನಮ್ಮಲ್ಲಿ ಯೋಗ್ಯತೆ ಬೇಕಾದಷ್ಟಿತ್ತು. ಆದರೂ ಅದೃಷ್ಟವಶಾತ್ ಅಲ್ಲಿಯವರೆಗೆ ಹೋಗದೆ ಇಲ್ಲಿನ ಲಾಕಪ್ಪಿನಲ್ಲೇ ನನ್ನ ಅನುಭೋಗ ಸಮಾಪ್ತಿಯಾಯಿತು. ನನಗಿಂತಲೂ ಅದೃಷ್ಟವಂತರಾದ ನನ್ನ ಸಂಗಡಿಗರು ಕೆಲವರಿಗೆ ಅಂಡಮಾನೇ ಅಲ್ಲದೆ ಗಲ್ಲಿಗೇರುವಷ್ಟು ಸರ್ವೋಚ್ಚವಾದ ಪ್ರಮೋಷನ್ ಲಭಿಸಿತ್ತು.

ಆ ಭಾಗ್ಯಶಾಲಿಗಳಿಗೆ ನಮಿಸಿ ಬೀಳ್ಕೊಂಡು ಪಶ್ಚಿಮ ಪ್ರಾಂತದ ಯಾವುದೋ ಒಂದು ಪಟ್ಟಣದಲ್ಲಿ ಹೋಮಿಯೋಪಥಿ ವೈದ್ಯವೃತ್ತಿಯನ್ನ ಕಲಿತು ಪ್ರಾಕ್ಟೀಸು ಮಾಡತೊಡಗಿದೆ.

ಆಗ ಇನ್ನೂ ನಮ್ಮ ತಂದೆ ಬದುಕಿದ್ದರು. ಅವರು ಬಂಗಾಳದ ಒಂದು ದೊಡ್ಡ ಜಿಲ್ಲೆಯ ಸರಕಾರಿ ವಕೀಲರಾಗಿದ್ದರು. ರಾಯ್ ಬಹದ್ದೂರ್ ಪ್ರಶಸ್ತಿಯನ್ನೂ ಪಡೆದಿದ್ದರು. ಅವರು ಅತಿ ಧೋರಣೆಯಿಂದ ನನ್ನನ್ನು ಮನೆಯಿಂದ ಹೊರಗೆ ಹಾಕಿದ್ದರು. ಅವರ ಹೃದಯದ ಸಂಗಡ ನನ್ನ ಸಂಬಂಧ ಕಡಿದುಹೋಯಿತೋ ಇಲ್ಲವೋ ದೇವರಿಗೆ ಗೊತ್ತು. ಆದರೆ ಅವರ ಹಣದ ಚೀಲದೊಂದಿಗಂತೂ ಎಂದೋ ಬೇರೆಯಾಗಿತ್ತು. ನಾನು ಲಾಕಪ್ಪಿನಲ್ಲಿರುವಾಗಲೇ ನನ್ನ ತಾಯಿ ತೀರಿಕೊಂಡಿದ್ದಳು. ನನಗೆ ಸಲ್ಲಬೇಕಾದ ಶಿಕ್ಷೆ ವಜಾ ಆದುದು ಬಹುಶಃ ಈ ಕಾರಣದಿಂದಿರಬೇಕು.

ನನಗೊಬ್ಬಳು ಸೋದರತ್ತೆಯಿದ್ದಾಳೆ. ಆಕೆ ನನ್ನ ನಿಜವಾದ ಅತ್ತೆಯೋ ಅಥವಾ ನಾನು ಹೊಸದಾಗಿ ಸಂಪಾದಿಸಿದ ಬಂಧುವೋ ಎಂಬುದರಲ್ಲಿ ಕೆಲವರಿಗೆ ಸಂದೇಹವಿದೆ. ಅದಕ್ಕೆ ಕಾರಣ, ನಾನು ಪಶ್ಚಿಮ ಪ್ರಾಂತಕ್ಕೆ ಹೋಗುವ ಮೊದಲು

ಆಕೆಯ ಸಂಬಂಧದ ಬಗ್ಗೆ ನನಗೆ ಏನೂ ತಿಳಿದಿರಲಿಲ್ಲ. ಆಕೆ ನನಗೆ ನಿಜವಾಗಿಯೂ ಏನಾಗಬೇಕು ಎಂಬುದರ ಬಗ್ಗೆ ಸಂದೇಹವಿದ್ದರೂ ಇರಲಿ, ಆದರೆ ಆಕೆಯ ಸ್ನೇಹ ನನಗೆ ಲಭಿಸದಿದ್ದರೆ, ಆ ವಾತ್ಸಲ್ಯದ ಬರಗಾಲದಲ್ಲಿ ನನಗೆಷ್ಟು ತಡೆಯಲಾಗದ ಸಂಕಟವಾಗುತ್ತಿತ್ತೋ !

ಆಕೆ ಹುಟ್ಟಿದಾಗಿನಿಂದಲೂ ಪಶ್ಚಿಮ ಪ್ರಾಂತದಲ್ಲೇ ಕಳೆದಿದ್ದಳು. ಅಲ್ಲೇ ಮದುವೆ, ಅಲ್ಲೇ ವೈಧವ್ಯ ಪ್ರಾಪ್ತಿ. ಅಲ್ಲೇ ಗಂಡನ ಆಸ್ತಿ, ಸಂಪತ್ತು. ಆಕೆ ಅದನ್ನ ಕಟ್ಟಿಕೊಂಡೇ ಅಲ್ಲಿದ್ದಳು. ಆಕೆಗಿದಲ್ಲದೆ ಇನ್ನೊಂದು ಬಂಧನವಿತ್ತು. ಅಮಿಯಾ ಎಂಬ ಹುಡುಗಿಯೊಬ್ಬಳು. ಆ ಹುಡುಗಿ ಆಕೆಯ ಗಂಡನ ಮಗಳು – ಆಕೆಗಲ್ಲ. ಅವಳ ತಾಯಿಯು ಅತ್ತೆಯ ಯುವತಿಯಾದ ದಾಸಿಯೊಬ್ಬಳು. ಜಾತಿಯಲ್ಲಿ ನೀರು ಸೇದಿ ಮಾರುವವಳು. ಗಂಡನು ತೀರಿಹೋದ ಮೇಲೆ ಆ ಹುಡುಗಿಯನ್ನಾಕೆ ಮನೆಗೆ ತಂದಿಟ್ಟುಕೊಂಡು ಸಾಕಿದಳು. ಆ ಮಗು ಆಕೆಯೇ ನಿಜವಾದ ತಾಯಿ ಎಂದು ನಂಬಿದ್ದಳು.

ಇಂಥ ಅವಸ್ಥೆಯಲ್ಲಿ ಆಕೆಗೆ ಇನ್ನೊಂದು ಬಂಧನ ಬೆಳೆಯಿತು. ಆ ಬಂಧನ ನಾನೇ. ಜೈಲಿನಿಂದ ಹೊರಗಡೆ ಬಂದಾಗ ನನಗಿರುವ ಸ್ಥಾನ ಅದೆಷ್ಟು ಇಕ್ಕಟ್ಟಿನದು ಎಂದು ಅನುಭವವಾದಾಗ ಈ ವಿಧವೆಯೇ ನನಗೆ ತನ್ನ ಮನೆಯಲ್ಲೂ, ತನ್ನ ಹೃದಯದಲ್ಲೂ ಆಶ್ರಯ ಕೊಟ್ಟಳು. ಅದಾದ ಮೇಲೆ ನಮ್ಮ ತಂದೆಯ ಸಾವಾದಾಗ ತಿಳಿದುಬಂತು, ಮರಣ ಪತ್ರದಲ್ಲಿ ಆತ ನನ್ನನ್ನು ತಮ್ಮ ಆಸ್ತಿಯಿಂದ ದೂರಮಾಡಿರಲಿಲ್ಲ. ಆ ಸುದ್ದಿ ತಿಳಿದು ಅತ್ತೆ ಸಂತೋಷ ದುಃಖಗಳನ್ನು ಒಟ್ಟಿಗೇ ಅನುಭವಿಸಿ ಕಣ್ಣೀರು ಬಿಟ್ಟಳು. ಇನ್ನು ತನ್ನಿಂದ ನನಗೆ ಯಾವ ಉಪಯೋಗವೂ ಇಲ್ಲ ಎಂದುಕೊಂಡಳೇನೋ. ಹಾಗೆಂದು ಸ್ನೇಹದ ಬಂಧನ ಕಡಿದುಹೋಗುತ್ತದೆಯೇ?

ಆಗಾಕೆ "ಅಪ್ಪಾ, ನೀನೆಲ್ಲಾದರೂ ಇರು–ನನ್ನ ಆಶೀರ್ವಾದವಂತೂ ನಿನ್ನ ಹಿಂದೆ ಇದ್ದೇ ಇರುತ್ತೆ" ಎಂದಳು.

ನಾನು "ಅದಂತೂ ಇಲ್ಲದೆ ಎಲ್ಲಿ ಹೋಗುತ್ತದೆ? ಆದರೆ ಅದು ಸಾಲದು, ನೀನೂ ಇರಬೇಕಾಗತ್ತೆ ನನ್ನ ಜತೆಯಲ್ಲಿ. ಇಲ್ಲದೆ ಹೋದರೆ ನಡೆಯುವುದಿಲ್ಲ. ಜೈಲಿನಿಂದ ಹೊರಗೆ ಬಂದು ತಾಯಿಯನ್ನಂತೂ ನೋಡಲಾಗಲಿಲ್ಲ. ಅದಕ್ಕೇ ಏನೋ ಆಕೆಯೇ ನನಗೆ ಬೇರೊಬ್ಬ ತಾಯಿಯನ್ನು ದೊರಕಿಸಲು ನಿನ್ನ ಬಳಿ ಕರೆದುಕೊಂಡು ಬಂದಳು" ಎಂದೆ.

ನನ್ನ ಮಾತಿಗೆ ಎದುರಾಡಲು ಶಕ್ತಳಾಗದೆ ಅತ್ತೆ ತನ್ನ ಪಶ್ಚಿಮ ಪ್ರಾಂತದ ಮನೆ, ಸಂಸಾರವನ್ನು ಎತ್ತಿಕೊಂಡು ನನ್ನ ಸಂಗಡ ಕಲಿಕತ್ತೆಗೆ ಬಂದಳು. ನಾನು ನಕ್ಕು "ನೋಡತ್ತೆ, ನಾನು ಕಲಿಗಾಲದ ಭಗೀರಥ. ನಿನ್ನ ಸ್ನೇಹ ಗಂಗೆಯನ್ನು ಪಶ್ಚಿಮದಿಂದ ಪೂರ್ವದ ಕಡೆ ಹರಿಸಿಕೊಂಡು ಬಂದಿದ್ದೇನೆ" ಎಂದೆ.

ಅತ್ತೆಯೂ ನಕ್ಕು ತನ್ನ ಒದ್ದೆಗಣ್ಣುಗಳನ್ನು ಒರೆಸಿಕೊಂಡಳು. ಅವಳ ಮನಸ್ಸಿನಲ್ಲಿ ಏನೋ ಒಂದು ಖಿನ್ನತೆಯು ಉಂಟಾಗದಿರಲಿಲ್ಲ. "ಎಷ್ಟೋ ದಿನಗಳಿಂದ ಆಸೆ ಇತ್ತು. ಈ ಹುಡುಗಿಗೆ ಯಾವುದಾದರೊಂದು ದಾರಿ ಮಾಡಿಬಿಟ್ಟು ಕೊನೆಯ ವಯಸ್ಸಿನಲ್ಲಿ ತೀರ್ಥಯಾತ್ರೆಗಳನ್ನು ಮಾಡಿಕೊಂಡು ಓಡಾಡೋಣ ಅಂತ. ಆದರೆ, ನೀನು ಬಂದೆ ನೋಡು, ಅದರ ಎದುರು ದಾರಿಯಲ್ಲಿ ಎಳೆದುಕೊಂಡು ಬಂದುಬಿಟ್ಟೆ" ಎಂದಳು.

ಅದಕ್ಕೆ ನಾನು ಸುಮ್ಮನಿರದೆ "ಅತ್ತೆ, ನಾನೇ ನಿನಗೆ ಚಲಿಸುತ್ತಿರುವ ತೀರ್ಥ ಸ್ಥಳ. ನೀನು ಯಾವ ಜಾಗದಲ್ಲಿ ಆತ್ಮದಾನ ಮಾಡಿದರೇನು, ಆ ಜಾಗದಲ್ಲೇ ನಿನ್ನ ದೇವರು ತಾನಾಗಿ ಬಂದು ಅದನ್ನು ಗ್ರಹಣಮಾಡುತ್ತಾನೆ, ನೋಡುತ್ತಿರು. ನಿನ್ನ ಆತ್ಮ ಅಷ್ಟು ಪುಣ್ಯಶಾಲಿ" ಎಂದೆ.

ಎಲ್ಲಕ್ಕಿಂತಲೂ ದೊಡ್ಡ ಆಕಾಂಕ್ಷೆಯೊಂದು ಆಕೆಯ ಮನದಲ್ಲಿ ಪ್ರಬಲವಾಯಿತು...ಆಕೆಗೊಂದು ಅನುಮಾನ-ಸ್ವಭಾವತಃ ನನ್ನ ಪ್ರವೃತ್ತಿಯ ಎಳೆತವಿದ್ದುದು ಅಂಡಮಾನಿನ ಕಡೆ ಎಂದು ಆಕೆಗೆ ಗೊತ್ತು. ಅಷ್ಟಾದರೂ ನನ್ನನ್ನು ತಡೆದು ಹಿಡಿಯುವವರು ಯಾರೂ ಇಲ್ಲದಿದ್ದರೆ ಕಡೆಗೊಂದು ದಿನ ಪೋಲೀಸರ ಸೆರೆಯಲ್ಲಿ ಸಿಕ್ಕಿಬೀಳುತ್ತೇನೆ. ಆಕೆಯ ಉದ್ದೇಶ್ಯವೇನೆಂದರೆ, ಈ ಸೆರೆಗಿಂತಲೂ ಬಲವಾದ ಬೇರೊಂದು ಕೋಮಲವಾದ ಮತ್ತು ಸ್ಥಿರವಾದ ತೋಳ ಸೆರೆಯಲ್ಲಿ ನನ್ನನ್ನು ಸಿಕ್ಕಿಹಾಕಿಸುವ ವ್ಯವಸ್ಥೆ ಮಾಡಿಬಿಟ್ಟು ಆಮೇಲೆ ತಾನು ತೀರ್ಥಯಾತ್ರೆಗೆ ಹೊರಡುವುದು ಎಂಬುದಾಗಿ...ನನಗೆ ಯಾವುದಾದರೊಂದು ಬಂಧನ ಒದಗಿಸದಿದ್ದರೆ ಆಕೆಗೆ ಮುಕ್ತಿಯಿಲ್ಲ.

ನನ್ನ ಚಾರಿತ್ರ್ಯದ ಬಗ್ಗೆ ಆಕೆ ತಪ್ಪು ಲೆಕ್ಕಾಚಾರ ಮಾಡಿದ್ದಳು. ನನ್ನ ಜನ್ಮ ಕುಂಡಲಿಯಲ್ಲಿ ನನ್ನ ಅಂತ್ಯದ ಗ್ರಹ ದೇವತೆ ನನ್ನನ್ನು ಹದ್ದು, ಕಾಗೆಗಳಿಗೆ ಆಹಾರವಾಗಿ ಅರ್ಪಿಸಲು ಹಿಂದೇಟು ಹಾಕದಿರಬಹುದು. ಆದರೆ ವಿವಾಹ ಪಕ್ಷಪಾತಿಯಾದ ಪ್ರಜಾಪತಿ ಬ್ರಹ್ಮನ ಕೈಯಲ್ಲಂತೂ ನಾನು ಸಿಕ್ಕಿಬೀಳದಿರುವ ಹಾಗೆ ಬರೆದುಬಿಟ್ಟಿತ್ತು. ಮದುವೆ ಹೆಣ್ಣುಗಳನ್ನು ಹೆತ್ತವರ ಸಂಖ್ಯೆ ಏನೂ ಕಡಿಮೆಯಿರಲಿಲ್ಲ. ಕಾಲು ಕೆರೆದುಕೊಂಡು ಕಾದಿದ್ದರು ಮುಂದೆ ಬರಲು. ನನ್ನ ತಂದೆಯಿಂದ ಬಂದ ಆಸ್ತಿ ಸಾಧಾರಣವೇನಲ್ಲ ಎಂದು ಎಲ್ಲರಿಗೂ ಗೊತ್ತು. ನಾನು ಮನಸ್ಸು ಮಾಡಿದ್ದರೆ ಮಾವನಾಗಬೇಕೆಂದಿರುವಂಥವನನ್ನು ದಿವಾಳಿಯೆಬ್ಬಿಸಿಯಾದರೂ ಕೇಕೆಹಾಕಿಕೊಂಡು ನಗುನಗುತ್ತಾ ಗಿಟ್ಟಿಸಿಕೊಂಡುಬಿಡುತ್ತಿದ್ದೆ. ಹಾಗೆ ಮಾಡಲಿಲ್ಲ. ನನ್ನ ಭಾವೀ ಜೀವನ ಚರಿತ್ರೆಯನ್ನು ಬರೆಯಬೇಕೆಂದಿರುವವರು ಈ ವಿಷಯವನ್ನು ಮರೆಯಬಾರದು. ಸ್ವದೇಶ ಸೇವೆಯ ಸಂಕಲ್ಪಕ್ಕಾಗಿ ಒಂದು ಕಾಲದಲ್ಲಿ ನನ್ನಿಂದಾದ ಈ ಇಪ್ಪತ್ತು-ಇಪ್ಪತ್ತೈದು ಸಾವಿರರೂಪಾಯಿಗಳ ಸುಲಭ ಸಂಪಾದನೆಯ ತ್ಯಾಗವೇನು

ಸಾಮಾನ್ಯವಲ್ಲ. ಜಮಾ-ಖರ್ಚಿನ ಲೆಕ್ಕಾಚಾರದ ಖಾತೆಯಲ್ಲಿ ಅದೃಶ್ಯವಾದ ಮಸಿಯಲ್ಲಿ ಈ ತ್ಯಾಗವನ್ನು ಬರೆದಿದ್ದ ಮಾತ್ರಕ್ಕೆ ನನ್ನ ಪ್ರಶಂಸೆಯ ಲೆಕ್ಕದಲ್ಲಿ ಮಾತ್ರ ಇದನ್ನು ಕಳೆಯಬಾರದು. ಇಡೀ ಮಹಾಭಾರತಕ್ಕೊಬ್ಬನೇ ಪಿತಾಮಹನಾದ ಭೀಷ್ಮನ ಸಂಗಡ ನನ್ನ ಜೀವನ ಚರಿತ್ರೆಯು ಈ ವಿಷಯದಲ್ಲಿ ತಾಳಿಕೆ ಬರುತ್ತದೆ. ಆದರೆ ಅತ್ತೆಯು ಕಡೆಯವರೆಗೂ ಆಸೆಯನ್ನು ಬಿಡಲಿಲ್ಲ. ಇಂಥ ಸಮಯದಲ್ಲಿ ಭಾರತದ ಪೊಲಿಟಿಕಲ್ ಆಕಾಶದಲ್ಲಿ ನಮ್ಮ ಆ ಕ್ಷಾತ್ರಯುಗದ ಅನಂತರ ಬರುವ ಯುಗದ ಗಾಳಿ ಇನ್ನೂ ಬೀಸುತ್ತಿತ್ತು. ಮೊದಲೇ ಹೇಳಿದ್ದಾಗಿದೆ-ಈ ದಿನಗಳಲ್ಲಾದ ನಾಟಕದಲ್ಲಿ ನಾನು ಪ್ರಧಾನ ನಾಯಕನಲ್ಲ. ಆದರೂ ಫುಟ್‌ಲೈಟ್‌ಗಳ ಬಹಳ ಹಿಂದೆ ಆಗಾಗ ನನ್ನ ಆಗಮನ-ನಿಷ್ಕ್ರಮಣಗಳು ಸ್ವಲ್ಪ ನಿಸ್ತೇಜಭಾವದಲ್ಲಾದರೂ ನಡೆಯುತ್ತಿದ್ದವು, ನಮ್ಮ ಅತ್ತೆಗೆ ಸಮಾಧಾನವಾಗುವಷ್ಟೇನೂ ನಿಸ್ತೇಜವಲ್ಲ. ನನ್ನ ಅಭ್ಯುದಯಕ್ಕೆಂದೇ ಆಕೆ ಕಾಳೀಘಾಟಿನ ದೇವಸ್ಥಾನದಲ್ಲಿ ಸ್ವಸ್ತ್ಯಯನ ಪೂಜೆಯನ್ನು ನಡೆಸಬೇಕೆಂದಿದ್ದಳು ಒಮ್ಮೆ. ಆದರೆ ಇತ್ತೀಚೆಗೆ ನನ್ನ ಭಾಗ್ಯದಾಕಾಶದಲ್ಲಿ ಕೆಂಪು ಪಗಡಿಯವರ (ಕಲಿಕತ್ತೆ ಪೊಲೀಸು ಪಡೆ) ರಕ್ತ ಮೋಡಗಳು ಪೂರ್ತಿಯಾಗಿ ಕಣ್ಮರೆಯಾಗಿದ್ದುದರಿಂದ ಆಕೆಗೆ ಈಗ ಆ ಪೂಜೆ ಅಷ್ಟು ಅಗತ್ಯವೆನ್ನಿಸಲಿಲ್ಲ. ಅದರಲ್ಲೇ ಆಕೆ ದೊಡ್ಡ ತಪ್ಪು ಮಾಡಿದ್ದಳು.

ಆ ದಿನ ನವರಾತ್ರೆಯ ಸಂಭ್ರಮ, ಬಜಾರಿನಲ್ಲಿ ಗಿರಾಕಿಗಳ ಪಿಕೆಟಿಂಗ್ ನಡೆದಿತ್ತು. ನಾನು ಕೇವಲ ನೋಟಕನಾಗಿ ಹೋಗಿದ್ದೆ. ನನ್ನ ಉತ್ಸಾಹದ ಕಾವು ಮಾತ್ರ ೯೪ ಡಿಗ್ರಿಗಳ ಕೆಳಗೇ ಇತ್ತು. ನಾಡಿಯಲ್ಲಿ ಹೆಚ್ಚು ವೇಗವಿರಲಿಲ್ಲ. ಆ ದಿನ ನನಗೆ ಯಾವ ಬಗೆಯಾದ ಉದ್ರೇಕಕ್ಕೂ ಕಾರಣವಿರಲು ಸಾಧ್ಯವಾಗಬಹುದೆಂಬುದಾಗಿ ನನ್ನ ಜಾತಕದ ಜನ್ಮರಾಶಿಯ ಹೊರತಾಗಿ ಬೇರೆಯವರಿಗಾರಿಗೂ ತಿಳಿಯದು. ಇಂಥ ವೇಳೆಯಲ್ಲಿ ಖಾದೀ ಪ್ರಚಾರ ಮಾಡುವ ಯಾರೋ ಬಂಗಾಳೀ ಹೆಂಗಸೊಬ್ಬಳನ್ನು ಪೊಲೀಸು ಸಾರ್ಜೆಂಟೊಬ್ಬನು ತಳ್ಳಿದ. ಒಂದೇ ಒಂದು ಕ್ಷಣದಲ್ಲಿ ನನ್ನ ಅಹಿಂಸೆಯ ಅಸಹಯೋಗದ ಭಾವವು ಪ್ರಬಲವಾದ ದುಸ್ಸಹಯೋಗದಲ್ಲಿ ಧುಮುಕಿತು. ಯಾವ ಯೋಚನೆಯೂ ಮಾಡದೆ ಸ್ವಲ್ಪವೂ ನಿಧಾನಮಾಡದೆ ದುಡುಕಿದುದರ ಫಲವಾಗಿ ಮರುಗಳಿಗೆಯಲ್ಲಿ ಪೊಲೀಸು ಠಾಣೆಯ ಕಡೆ ತಿರುಗಿತು ನನ್ನ ದಾರಿ. ಆಮೇಲೆ ಯಥಾಪ್ರಕಾರ ಲಾಕಪ್ಪಿನ ಹಸಿದ ಕೊರಳಿನಿಂದ ಸಾಗಿ ಜೈಲಿನ ಕತ್ತಲ ಜಠರ ಪ್ರಾಂತಕ್ಕೆ ಬಂದು ತಲಪಿದೆ. ಹೋಗುವುದಕ್ಕೆ ಮೊದಲು ಅತ್ತೆಗೆ ಹೇಳಿದೆ, "ಇನ್ನು ಮೇಲೆ ಸ್ವಲ್ಪ ಕಾಲದವರೆಗೆ ನಿಮಗೆ 'ಮುಕ್ತಿ'. ಏಕೆಂದರೆ ಸದ್ಯಕ್ಕೆ ನನ್ನನ್ನು ನೋಡಿಕೊಳ್ಳುವುದಕ್ಕೆ ಜನರ ಅಭಾವವಿರುವುದಿಲ್ಲ. ಆದ್ದರಿಂದ ಈ ಸುಯೋಗದಲ್ಲೇ ನೀವು ಹೋಗಿ ನಿಮ್ಮ ತೀರ್ಥ ಯಾತ್ರೆ ಮುಗಿಸಿಕೊಂಡು ಬಂದುಬಿಡಿ. ಅಲ್ಲಿಯವರೆಗೆ ಅಮಿಯಾ ಕಾಲೇಜು ಹಾಸ್ಟಲಿನಲ್ಲಿ ಇರುತ್ತಾಳೆ. ಮನೆಯಲ್ಲೂ ನೋಡಿಕೊಳ್ಳುವ, ವಿಚಾರಿಸಿಕೊಳ್ಳುವ ಜನರಿದ್ದಾರೆ. ಈಗ ನೀವು

ಹದಿನಾರಾಣೆ ದೇವರ ಸೇವೆಯಲ್ಲಿ ಮನವಿಟ್ಟರೆ ದೇವ ಮಾನವರಲ್ಲಿ ಯಾರೂ ನಿಮ್ಮನ್ನು ಆಕ್ಷೇಪಣೆ ಮಾಡುವುದಿಲ್ಲ" ಎಂದೆ.

ಜೈಲುಖಾನೆಯನ್ನು ಬರೇ ಜೈಲುಖಾನೆ ತಾನೇ ಎಂದೆಣಿಸಿಕೊಂಡಿದ್ದೆ. ಅಲ್ಲಿ ಯಾವ ಬಗೆಯ ಹಕ್ಕು ಬಾಧ್ಯತೆಗಳೂ, ಯಾವ ಚಪಲ, ಬಯಕೆಗಳೂ ನನ್ನನ್ನು ಬಾಧಿಸಲಿಲ್ಲ. ಅಲ್ಲಿ ಸುಖ, ಸನ್ಮಾನ, ಸೌಜನ್ಯ, ನೆಮ್ಮದಿ, ಗಡದ್ದು ಊಟಗಳ ಅಭಾವವಿದ್ದುದನ್ನು ಕಂಡು ವಿಸ್ಮಿತನಾಗಲಿಲ್ಲ, ಕಂಗೆಡಲಿಲ್ಲ. ಕಠೋರ ನಿಯಮಗಳನ್ನು ಕಠೋರ ಭಾವದಲ್ಲೇ ಅಂಗೀಕರಿಸಿದ್ದೆ. ಅವುಗಳಿಗೆ ಎದುರುಬೀಳುವುದು ಬರೇ ನಾಚಿಕೆಗೇಡೆಂದೇ ಅಂದುಕೊಂಡೆ.

ಶಿಕ್ಷೆಯ ಅವಧಿ ಪೂರೈಸುವುದಕ್ಕೆ ಸ್ವಲ್ಪ ಮೊದಲೇ ಬಿಡುಗಡೆ ಪಡೆದೆ. ನಾಲ್ಕೂ ಕಡೆಯಿಂದ ಕೈಚಪ್ಪಾಳೆಯ ಸ್ವಾಗತ ದೊರೆಯಿತು. ವಂಗದೇಶದ ಗಾಳಿ ಎಂದಿನಂತೆ ಬೀಸುತ್ತಿದೆ ಎನ್ನಿಸಿತು–"ಒನ್ಸ್‌ಮೋರ್–ಎಕ್ಸಲೆಂಟ್–ಅದ್ಭುತ–ಭೇಷ್–ಭಲೇ ಭಲೇ!" ಮನಸ್ಸಿಗೇಕೋ ಬೇಸರವಾಯಿತು, ಯಾರಿಗೆ ಬೇಕು ಇವೆಲ್ಲ! ಅನುಭವಿಸಿದವನು ಹೇಗೋ ಅನುಭವಿಸಿದ. ಸುಮ್ಮನೆ. ಮತ್ತು "ಮೃಷ್ಟಾನ್ನಮಿತರೇ ಜನಾಃ" (ಮಿಕ್ಕವರಂತೂ ಮೃಷ್ಟಾನ್ನ ಉಣ್ಣುತ್ತಲೇ ಇದ್ದರು). ಸ್ವಾರಸ್ಯವಾಗಿರುವುದಕ್ಕೆಲ್ಲ "ಭೇಷ್, ಭಲೆ" ಎಂದುಬಿಟ್ಟರಾಯಿತು. ಅದೂ ಎಷ್ಟು ಹೊತ್ತು! ರಂಗದ ಪರದೆ ತಟಕ್ಕನೆ ಇಳಿದು ಬೀಳುತ್ತದೆ. ದೀಪಗಳಾರಿಹೋಗುತ್ತವೆ. ಇನ್ನೇನು ಮರೆತುಹೋಗುವುದಕ್ಕೆ ಎಷ್ಟು ಹೊತ್ತು ಬೇಕು? ಕೇವಲ ಬೇಡಿ, ಕೈಕೋಳಗಳ ಬರೆಯನ್ನ ಚರ್ಮ, ಎಲುಬುಗಳ ಮೇಲೆ ಹಾಕಿಸಿಕೊಂಡಿರುವವರಿಗೆ ಮಾತ್ರ ಮರೆಯುವುದು ಸತ್ತಮೇಲೇ!

ಅತ್ತೆ ಇನ್ನೂ ತೀರ್ಥಯಾತ್ರೆಯಲ್ಲೇ ಇದ್ದಾಳೆ. ಎಲ್ಲಿ ಅನ್ನುವುದು ಗೊತ್ತೇ ಇಲ್ಲ. ಇಷ್ಟರಲ್ಲಿ ದಸರಾ ಉತ್ಸವದ ದಿನಗಳು ಹತ್ತಿರ ಬಂದುವು. ಒಂದು ದಿನ ಬೆಳಗ್ಗೆ ನನ್ನ ಗೆಳೆಯನೊಬ್ಬ–ಪತ್ರಿಕಾ ಸಂಪಾದಕ–ನನ್ನನ್ನು ಕಾಣಲು ಬಂದ.

"ನಮ್ಮ ದಸರಾ ವಿಶೇಷ ಸಂಚಿಕೆಗೆ ಒಂದು ಏನಾದರೂ ಬರೆದುಕೊಡಯ್ಯ!" ಎಂದ.

"ಕವಿತೆಯೇ?"

"ಛೇ, ಕವಿತೆ ಯಾಕೆ? ನಿನ್ನ ಜೀವನಚರಿತ್ರೆ ಬರೆದುಕೊಡು."

"ಅದೇನು ಒಂದು ಸಂಚಿಕೆಯಲ್ಲಿ ಪೂರೈಸುವುದಿಲ್ಲವಲ್ಲ?"

"ಆಗದಿದ್ದರೇನೀಗ–ಧಾರಾವಾಹಿಯಾಗಿ ಬರಲೇಳು."

"ದಮ್ಮಯ್ಯ ಬೇಡ, ಕೇಳಿದ್ದೀಯೋ ಇಲ್ಲವೋ....ಶಿವನ ಹೆಂಡತಿ, ಸತಿ ದಕ್ಷಬ್ರಹ್ಮನ ಯಜ್ಞಕುಂಡದಲ್ಲಿ ಬಿದ್ದು ಸತ್ತಾಗ ವಿಷ್ಣುವಿನ ಸುದರ್ಶನ ಚಕ್ರ ಅವಳ

ಮೈಯನ್ನು ತುಂಡು ತುಂಡಾಗಿ ಕತ್ತರಿಸಿ ಆಕಾಶದಲ್ಲಿ ಹರಡಿಬಿಟ್ಟಿತ್ತು. ನನ್ನ ಜೀವನಚರಿತ್ರೆಯನ್ನು ನಿನ್ನ ಸಂಪಾದಕೀಯ ಚಕ್ರದಿಂದ ಕತ್ತರಿಸಿ ಹಾಗೇ ತುಂಡು ತುಂಡುಮಾಡಿ ಸಂಚಿಕೆ ಸಂಚಿಕೆಯಲ್ಲೂ ಹರಡುವುದು ನನಗಿಷ್ಟವಿಲ್ಲ. ಬರೆದರೆ ಒಂದೇ ಸಲ ಒಟ್ಟಿಗೇ ಬರೆದುಹಾಕುತ್ತೇನೆ–ಪ್ರಕಟವಾಗಲಿ, ಆಗದಿರಲಿ."

"ಹಾಗಾದರೆ ಒಂದು ಕೆಲಸ ಮಾಡು. ನಿನ್ನ ಜೀವನದಲ್ಲಿ ನಡೆದ ಸ್ವಾರಸ್ಯವಾದ ವಿಶೇಷ ಘಟನೆಯೊಂದನ್ನ ಬರೆದುಕೊಡು."

"ಎಂಥಾ ಘಟನೆ?"

"ಎಂಥಾದ್ದೇ? ನಿನ್ನ ಜೀವನದಲ್ಲಿ ಎಂದೂ ಅನುಭವಿಸದೆ ಇದ್ದಷ್ಟು ಕಠೋರವಾದ ಅನುಭವ–ನಿನ್ನ ಮನಸ್ಸಿನ ಮೇಲೆ ಹೆಚ್ಚಾದ ಪರಿಣಾಮವುಂಟು ಮಾಡಿದ್ದು!"

"ಅದನ್ನ ಬರೆದರೇನಾಗತ್ತೆ?"

"ಚೆನ್ನಾಯಿತು ಬಿಡು! ಓದುಗರಿಗೆ ತಿಳಿದುಕೊಳ್ಳುವುದಕ್ಕೆ ಆಸೆಯಿಲ್ಲವೆ?"

"ಅಷ್ಟು ಕುತೂಹಲವೇ? ಒಳ್ಳೇದು, ಬರೆಯೋಣಂತೆ!"

"ಭೇಷ್. ಹಾಗಿದ್ದರೆ....ಆದರೆ ಜ್ಞಾಪಕ ಇರಲಿ—ಎಲ್ಲಕ್ಕಿಂತಲೂ ಹೆಚ್ಚು ಕಹಿಯಾದ ಅನುಭವ! ಗೊತ್ತಾಯಿತಲ್ಲ?"

"ಅಂದರೆ ಎಲ್ಲಕ್ಕಿಂತಲೂ ಕಹಿಯಾದ ನನ್ನ ಅನುಭವ ಬರೆದರೆ ಓದುಗರಿಗೆ ಅಷ್ಟಕ್ಕಷ್ಟು ಸವಿ ಅನ್ನು! ನನಗೆ ಸಂಕಟವಾದಷ್ಟೂ ಅವರಿಗಷ್ಟು ಮಜಾ! ಒಳ್ಳೇದು ಬಿಡು. ಆದರೆ ನೋಡು, ಹೆಸರುಗಿಸರು ಬದಲಾಯಿಸಬೇಕಾಗುತ್ತೆ."

"ಹಾಗೇ ಮಾಡು ಅದಕ್ಕೇನು! ಅಷ್ಟು ಭಯಂಕರ ಸಂಗತಿಗಳು ಜರುಗಿದ್ದರೆ ಇತಿಹಾಸದ ಗುರುತನ್ನ ಬದಲಾಯಿಸಲೇಬೇಕು. ಇಲ್ಲದೆ ಹೋದರೆ ಗಲಾಟೆಯಾದೀತು. ನನಗೆ ಅಂಥ ಭಯಂಕರವಾದ ಸಂಗತಿಯೇ ಬೇಕು. ಪುಟವೊಂದಕ್ಕೆ ನಿನಗೆ..."

"ಮೊದಲು ನಾನು ಬರೆದದ್ದನ್ನ ನೋಡು. ಆಮೇಲೆ ಅದಕ್ಕೆ ಬೆಲೆ ಚೌಕಾಶಿ ಮಾಡೋಣಂತೆ!"

"ಆದರೆ ಬೇರೆ ಯಾರಿಗೂ ಇದು ತಿಳೀಕೂಡದು. ಬೇರೆ ಯಾರಿಗೂ ಕೊಡಕೂಡದು ಹೇಳಿದ್ದೇನೆ. ಯಾರೆಷ್ಟು ಬೆಲೆ ಕೊಡುವುದಕ್ಕೆ ಬಂದರೂ ನಾನು ಅದಕ್ಕಿಂತಲೂ ಹೆಚ್ಚಾಗಿ...."

"ಒಳ್ಳೇದೊಳ್ಳೇದು...ಹಾಗೇ ಆಗಲಿ." ಕಡೆಯಲ್ಲಿ ಎದ್ದು ಹೋಗುವಾಗ ಅವನು "ನಿಮ್ಮ ಈ ಇವರಿದಾರಲ್ಲ?...ಯಾರು ಗೊತ್ತು ತಾನೆ? ಹೆಸರು ಹೇಳುವುದಿಲ್ಲ. ಅದೇಪ್ಪಾ ನಿಮ್ಮ ಸಾಹಿತ್ಯಧುರಂಧರ?...ತಾನೊಬ್ಬ ದೊಡ್ಡ ಬರಹಗಾರ ಎಂಬ ಸೊಕ್ಕು. ಆದರೆ ನೋಡು, ಏನೇ ಹೇಳು, ನಿನ್ನ ಶೈಲಿ ಮುಂದೆ ಅವರ ಶೈಲಿ, ಕಾನ್‌ಪುರದ ಬೂಟಿನ ಮುಂದೆ ಮರದ ಮೆಟ್ಟು ಇದ್ದ ಹಾಗೆ" ಎಂದುಬಿಟ್ಟು ಹೋದ.

ನನಗೆ ಗೊತ್ತಾಯಿತು ಅವನ ಉದ್ದೇಶ್ಯ. ನನ್ನನ್ನ ಮೇಲೇರಿಸುವುದೊಂದು ನೆಪ ಮಾತ್ರ, ಹೋಲಿಸುತ್ತ ಹೋಗಿ ಸಾಹಿತ್ಯಧುರಂಧರನನ್ನು ಕೆಳಗೆಳೆಯುವುದೇ ಗುರಿ!

ಇಲ್ಲಿ ಮುಗಿಯಿತು ನನ್ನ ಪೀಠಿಕೆ. ಇನ್ನು ಮುಂದೆ ನನ್ನ ಕಹಿ ಅನುಭವದ ಕಥೆ—

* * *

'ಸಂಧ್ಯಾ' ಪತ್ರಿಕೆಯನ್ನು ಎಂದಿನಿಂದ ಓದಲು ಆರಂಭಿಸಿದೆನೋ ಆ ದಿನದಿಂದ ನನ್ನ ಊಟ, ಉಲ್ಲಾಸಗಳ ಬಗ್ಗೆ ಕಠಿಣವಾದ ಅನಿಯಮ–ಅದನ್ನು ನನ್ನ ಜೈಲುಯಾತ್ರೆಯ ರಿಹರ್ಸಲ್ ಎಂದರೂ ಎನ್ನಬಹುದು.

ಮೈ ಮೇಲೆ ಯಾವ ಬಗೆಯಾದ ಆಸಕ್ತಿಯನ್ನೂ ತೋರದ ಅಭ್ಯಾಸ ಬೆಳೆದುಹೋಯಿತು. ಅದಕ್ಕೇ ಮೊದಲ ಬಾರಿ ನನ್ನನ್ನ ಜೈಲಿಗೆಳೆದುಕೊಂಡು ಹೋದಾಗ ನನ್ನ ಪ್ರಾಣಪಕ್ಷಿ ತಲ್ಲಣಿಸಲಿಲ್ಲ. ಆಮೇಲೆ ಹೊರಗೆ ಬಂದು ನನ್ನ ಯೋಗಕ್ಷೇಮದ ಬಗ್ಗೆ ಯಾವ ಸೇವೆ ಶುಶ್ರೂಷೆಗಳ ಕೈಯೂ ಬೀಳುವುದು ನನಗೆ ಸಹನೆಯಾಗದು. ಇದನ್ನ ಕಂಡು ನಮ್ಮ ಅತ್ತೆಗೆ ನೋವು. ನಾನದಕ್ಕೆ "ಅತ್ತೆ, ಸ್ನೇಹದ ನಡುವೆ ಮುಕ್ತಿ, ಸೇವೆಯ ನಡುವೆ ಬಂಧನ. ಅಷ್ಟೇ ಅಲ್ಲದೆ–ಒಬ್ಬರ ದೇಹದ ಮೇಲೆ ಬೇರೊಬ್ಬ ದೇಹಧಾರಿಯಾದವರ ಕಟ್ಟಳೆ, ಕಾನೂನು ನಡೆಸಹೋಗುವುದಕ್ಕೆ Dyarchy ಅಂದರೆ 'ದ್ವೈರಾಜ್ಯ' ಅನ್ನುತ್ತಾರೆ–ಅದರ ವಿರುದ್ಧವಾಗೇ ಅಲ್ಲವೇ ನಮ್ಮಗಳ ಅಸಹಕಾರ?" ಎಂದೆ.

ಆಗ ಆಕೆ ಮುಗುಳ್ನಗೆಯಿಂದ ನಿಟ್ಟುಸಿರು ಬಿಡುತ್ತಲೇ "ಹಾಗೇ ಆಗಲಪ್ಪ. ಇನ್ನು ನಾನು ನಿನಗೆ ಬೇಸರ ಮಾಡುವುದಿಲ್ಲ" ಎಂದಳು.

ನಾನೊಬ್ಬ ಮೂಢ. ಸದ್ಯ, ತಾಪತ್ರಯ ತಪ್ಪಿಸಿಕೊಂಡೆನಲ್ಲ ಎಂದುಕೊಂಡೆ.

ಸ್ನೇಹಸೇವೆಗಳಲ್ಲಿ ಒಂದು ಗೂಢವಾದ ರೂಪವಿದೆ ಎಂಬುದು ಗೊತ್ತಿರಲಿಲ್ಲ ನನಗೆ. ಅದರ ಆಕರ್ಷಣವನ್ನು ತಳ್ಳಿಹಾಕುವುದು ಸಾಧ್ಯವೇ ಇಲ್ಲ. ದರಿದ್ರನಾದ ಶಿವನು ತನ್ನ ಭಿಕ್ಷೆಯ ಜೋಳಿಗೆಯನ್ನು ಹಿಡಿದುಕೊಂಡು ತನ್ನ ದಾರಿದ್ರ್ಯ ಗೌರವದಲ್ಲೇ ಮಗ್ನನಾಗಿರುವಾಗ ಅವನಿಗೆ, ಯಾವುದೋ ಮಾಯೆಯಲ್ಲಿ ಯಾವುದೋ ಗಳಿಗೆಯಲ್ಲಿ ಆ ಜೋಳಿಗೆಯನ್ನು ಲಕ್ಷ್ಮಿಯು ನವುರಾದ ರೇಶಿಮೆಯ ದಾರದಲ್ಲಿ ಹೆಣೆದಿದ್ದಾಳೆ, ಅದರ ಚಿನ್ನದ ಜರಿಯ ಬೆಲೆಗೆ ಸೂರ್ಯ, ಚಂದ್ರ, ನಕ್ಷತ್ರಗಳನ್ನೂ ಕೊಳ್ಳಬಹುದು ಎಂಬುದು ತಿಳಿಯುವುದೇ ಇಲ್ಲ. ಭಿಕ್ಷಾನ್ನವನ್ನು ತಿನ್ನುತ್ತಿದ್ದೇನೆ ಎಂದುಕೊಂಡು ಆ ಬೂದಿ ಬೈರಾಗಿಯು ನಿಶ್ಚಿಂತನಾಗಿರುವಾಗ, ಅನ್ನಪೂರ್ಣೆಯು ಆ ಅನ್ನದಲ್ಲಿ ಎಂತಹ ಮಸಾಲೆ ಬೆರೆಸಿದ್ದಾಳೆಂದರೆ ದೇವರಾಜನಾದ ಇಂದ್ರನೂ ಆ ಪ್ರಸಾದ ತನಗೂ ದೊರೆಯಲೆಂದು ನಂದಿಯ ಕಿವಿಯಲ್ಲಿ ಪಿಸುಮಾತಿನಲ್ಲಿ

ಬೇಡಿಕೊಳ್ಳುತ್ತಿದ್ದಾನೆಂದು ಶಿವನಿಗೆ ಗೊತ್ತಿಲ್ಲ. ನನ್ನ ಅವಸ್ಥೆಯೂ ಅದೇ ರೀತಿಯಾಯಿತು. ಶಯನದಲ್ಲಿ, ವಸನದಲ್ಲಿ, ಅಶನದಲ್ಲಿ ಅತ್ತೆಯು ತನ್ನ ಅದೃಶ್ಯ ಕೈವಾಡವನ್ನು ಎಷ್ಟುಮಟ್ಟಿಗೆ ಪಸರಿಸಿದ್ದರೂ, ದೇಶದ ಯೋಗಕ್ಷೇಮದಲ್ಲಿ ಮಗ್ನನಾಗಿರುವ ನನಗೆ ಅರಿವಾಗಲೇ ಇಲ್ಲ. ನಾನೇ ಮನದಲ್ಲೇ ನನ್ನ ತಪಸ್ಯ ಕಠಿಣವಾಗಿ ಕಳೆಯುತ್ತಿದೆ ಎಂದುಕೊಂಡೇ ಇದ್ದೆ. ನನ್ನ ಭ್ರಾಂತಿ ಕಳಚಿಬಿದ್ದದ್ದು ನಾನು ಮತ್ತೆ ಜೈಲಿಗೆ ಹೋದಾಗ. ಅತ್ತೆಯ ಕೈಯ ಉಪಚಾರಕ್ಕೂ ಜೈಲು ಅಧಿಕಾರಿಗಳು ಮಾಡುವ ಉಪಚಾರಕ್ಕೂ ನಡುವೆ ಇರುವ ಅಗಾಧ ವ್ಯತ್ಯಾಸ ಗೋಚರವಾದಾಗ. ಆ ವ್ಯತ್ಯಾಸವನ್ನು ಯಾವ ಬಗೆಯ ಅದ್ವೈತಬುದ್ಧಿಯ ಚಮತ್ಕಾರದಿಂದಲೂ ಸಮನ್ವಯ ಮಾಡಲು ಸಾಧ್ಯವಾಗಲಿಲ್ಲ. ಅದನ್ನ ಮರೆಯಲು ಕೇವಲ ಮನದಲ್ಲೇ ಗೀತೆಯ ಶ್ಲೋಕಗಳನ್ನು ಹೇಳಿಕೊಳ್ಳತೊಡಗಿದೆ: ನಿಸ್ತ್ರೈಗುಣ್ಯೋಭವಾರ್ಜುನ–ಹಾಯ್, ತಪಸ್ವಿಯೇ, ಅನ್ನಪೂರ್ಣೆಯ ಸಮಾನಳಾದ ಅತ್ತೆಯ ನಾನಾಗುಣಗಳು ಉಪಕರಣ ಸಂಯೋಗದಿಂದ ಹೃದಯ ಪ್ರಾಂತವನ್ನು ಪಾರಾಗಿ ನೇರವಾಗಿ ಪಾಕಯಂತ್ರದಲ್ಲಿ ಪ್ರವೇಶಮಾಡಿಬಿಟ್ಟಿವೆ–ಅದು ನಿನಗೆ ಅರಿವಾಗಲೇ ಇಲ್ಲ. ಜೈಲುಖಾನೆಗೆ ಬಂದಮೇಲೇ ಆ ಜಾಗದಲ್ಲಿ ವಿಪಾಕವುಂಟಾಗ ತೊಡಗಿತು. ತತ್ಫಲವಾಗಿ ಏನಾಯಿತೆಂದರೆ, ವಜ್ರಾಘಾತ, ಹೊರತು ಬೇರೆ ಯಾವ ಏಟನಿಂದಲೂ ಬೀಳದೇ ಇರತಕ್ಕಂಥ ಮೈ, ಅಸ್ವಸ್ಥವಾಗಿ ಹಾಸುಗೆ ಹಿಡಿಯಬೇಕಾಯಿತು. ಜೈಲಿನ ಅಧಿಕಾರಿಗಳು ಬಿಡುಗಡೆ ಮಾಡಿದರೂ ನನ್ನ ರೋಗರುಜಿನಗಳಿಂದ ಬಿಡುಗಡೆಯಾಗಲಿಲ್ಲ. ತಲೆನೋವು, ಅಜೀರ್ಣ, ಮಧ್ಯಾಹ್ನದ ಹೊತ್ತು ಪ್ರತಿ ದಿನವೂ ಜ್ವರ–ಕ್ರಮೇಣ ಹೂವಿನ ಹಾರ, ತುರಾಯಿಗಳು, ಕೈ ಚಪ್ಪಾಳೆಗಳೆಲ್ಲ ಬಾಡಿ ತಣ್ಣಗಾಗಿಹೋದರೂ ಈ ಈತಿಬಾಧೆಗಳು ಮಾತ್ರ ಇನ್ನೂ ಪೀಡಿಸುತ್ತಲೇ ಇದ್ದುವು.

ಆಗ ಮನಸ್ಸಿನಲ್ಲಿ "ಅತ್ತೆಯೇನೋ ತೀರ್ಥಯಾತ್ರೆಗೆ ಹೋಗಿದ್ದಾಳೆ. ಈ ಅಮಿಯಾಳಿಗೇನೂ ಕರ್ತವ್ಯಜ್ಞಾನ ಬೇಡವೇ?" ಎಂದುಕೊಂಡೆ. ಆದರೆ ಅವಳನ್ನು ಅಂದು ಪ್ರಯೋಜನವೇನು? ಇದಕ್ಕೆ ಮೊದಲು ಎಂದೋ ಒಮ್ಮೆ ನನಗೆ ಅಸ್ವಸ್ಥವಾದಾಗ ಅತ್ತೆ ಅವಳನ್ನ ನನಗೆ ಶುಶ್ರೂಷೆಮಾಡಲು ಕಳುಹಿಸಿದ್ದಳು. ನಾನೇ "ನನಗದೆಲ್ಲ ಸರಿಬೀಳುವುದಿಲ್ಲ" ಎಂದು ಆಕ್ಷೇಪಣೆ ಮಾಡಿ ಕಳುಹಿಸಿಬಿಟ್ಟಿದ್ದೆ.

ಅತ್ತೆ ಆಗ "ಯಾಕಪ್ಪ, ಅಮಿಯಾಳಿಗೆ ಈಗಲಿಂದಲೂ ಇಂಥವುಗಳಲ್ಲಿ ಅನುಭವವಾಗಲಿ ಅಂತ ಹೇಳಿದೆ. ನಿನಗೆ ಉಪಚಾರ ಮಾಡಬೇಕು ಅಂತಲ್ಲ" ಅಂದಿದ್ದಳು.

ಅದಕ್ಕೆ ನಾನು "ಹಾಗೆ ಬೇಕಿದ್ದರೆ ಆಸ್ಪತ್ರೆಯಲ್ಲಿ ನರ್ಸ್ ಕೆಲಸ ಕಲಿಯುವುದಕ್ಕೆ ಕಳುಹಿಸು" ಎಂದಿದ್ದೆ.

ಅತ್ತೆ ಅದಕ್ಕೆ ರೇಗಿ ಮಾತಾಡದೆ ಸುಮ್ಮನಾಗಿ ಹೋದಳು.

ಇಂದು ಹಾಸಿಗೆಯ ಮೇಲೆ ಬಿದ್ದುಕೊಂಡು ಅಂದುಕೊಳ್ಳುತ್ತೇನೆ: "ಒಂದು ಪಕ್ಷ ನಾನು ಅಡ್ಡಿಮಾಡಿದ್ದಿರಬಹುದು, ಹಿಂದೆ ಯಾವಾಗಲೋ. ಹಾಗಂತ ಅದನ್ನ ವೇದವಾಕ್ಯ ಅಂತ ಪಾಲಿಸಬೇಕೆ? ಹಿರಿಯರ ಮಾತು ಅಂದರೆ ಅಷ್ಟು ನಿಷ್ಠೆಯಿರಬೇಕೇ ಅದೂ ಈ ಕಲಿಯುಗದಲ್ಲಿ!"

ಸಾಧಾರಣ ಸಾಂಸಾರಿಕ ಸಣ್ಣ ದೊಡ್ಡ ವಿಷಯಗಳೆಷ್ಟೋ ನಮ್ಮಂಥ ದೇಶಭಕ್ತರ ದೃಷ್ಟಿಗೆ ಬೀಳುವುದೇ ಇಲ್ಲ. ಆದರೆ ಕಾಯಿಲೆಯಿಂದ ಹಾಸಿಗೆ ಹಿಡಿದ ಮೇಲೆ ಈ ನಡುವೆ ನನ್ನ ದೃಷ್ಟಿ ಚುರುಕಾಗಿಬಿಟ್ಟಿದೆ. ನನ್ನ ಗಮನಕ್ಕೆ ಹೆಚ್ಚಾಗಿ ಕಂಡುಬಂದುದೊಂದೇನೆಂದರೆ ನನ್ನ ಗೈರುಹಾಜರಿಯಲ್ಲಿ ಅಮಿಯಾಳಿಗೂ ದೇಶಸೇವೆಯ ಹುಚ್ಚು ಹಿಡಿದು ಹೋಗಿದೆ. ಇದಕ್ಕೆ ಮೊದಲು ನನ್ನ ಮೇಲುಪಂಕ್ತಿಯಿಂದಲೂ ಬೋಧನೆಗಳಿಂದಲೂ ಅವಳಲ್ಲಿ ಅಂತಹ ಉತ್ಸಾಹಕರವಾದ ದೇಶಭಕ್ತಿ ಹುಟ್ಟಿರಲಿಲ್ಲ. ಈಗ ನೋಡಿದರೆ ಅವಳು ಕಾಲೇಜನ್ನೂ ಬಿಟ್ಟು ಅಸಹಕಾರ ಚಳವಳಿಯಲ್ಲಿ ಧುಮುಕಿದ್ದಾಳೆ. ಎಂಥ ದೊಡ್ಡ ಸಭೆಯ ಎದುರಾಗಿಯಾದರೂ ನಿಂತು ಸಭಾಕಂಪವಿಲ್ಲದೆ ಮಾತಾಡಬಲ್ಲಳು. ಅನಾಥಾಲಯದ ಫಂಡಿಗೆ ಚಂದಾ ವಸೂಲಿ ಮಾಡಲು ಗುರುತಿಲ್ಲದವರ ಮನೆಗಳಿಗೆಲ್ಲ ಹೋಗಿ ಚಂದಾ ಡಬ್ಬಿ ಹಿಡಿಯಲು ಹಿಂಜರಿಯುತ್ತಿರಲಿಲ್ಲ. ಇನ್ನೂ ಒಂದು ನನ್ನ ಗಮನಕ್ಕೆ ಬಂತು. ಅನಿಲನೆಂಬ ಯುವಕನೊಬ್ಬ ಅವಳ ಈ ಕಠಿಣ ಸಾಧನೆ, ತ್ಯಾಗಗಳನ್ನು ಕಂಡು ಉತ್ಸಾಹಿತನಾಗಿ ಅವಳನ್ನು 'ದೇವಿ'ಯೆಂದು ಸಂಬೋಧಿಸುತ್ತಿದ್ದ. ಅವಳ ಹುಟ್ಟಿದ ಹಬ್ಬದ ದಿನ ಅದೇ ಭಕ್ತಿಯಿಂದ ಒಂದು ಒಡಕು ಛಂದಸ್ಸಿನಲ್ಲಿ ಸ್ತೋತ್ರ ಬರೆದು ಅದನ್ನ ಚಿನ್ನದ ಅಕ್ಷರಗಳಲ್ಲಿ ಮುದ್ರಣ ಮಾಡಿಸಿ ಅವಳಿಗೆ ಉಪಹಾರವಾಗಿ ಅರ್ಪಿಸಿದ್ದ.

ನಾನೂ ಅಂಥದೇನಾದರೂ ಒಂದು ಮಾಡಲೇಬೇಕು. ಇಲ್ಲದೆ ಹೋದರೆ ಕಷ್ಟಕ್ಕೆ ಬರುತ್ತದೆ. ಅತ್ತೆಯಿದ್ದ ಕಾಲದಲ್ಲಿ ಆಳುಕಾಳುಗಳು ಯಥಾನಿಯಮದಲ್ಲಿ ಕೆಲಸ ಮಾಡುತ್ತಿದ್ದರು. ಏನಾದರೂ ಬೇಕಾದಾಗ ಯಾರಾದರೊಬ್ಬರು ಹಾಜರಾಗುತ್ತಿದ್ದರು. ಈಗಲೋ, ಒಂದು ಗ್ಲಾಸು ನೀರು ಬೇಕಾದರೆ ನನ್ನ ನೌಕರ ಮೇದಿನೀಪುರ ವಾಸಸ್ಥನಾದ ಶ್ರೀಮಾನ್ ಜಲಧರನು ಅಕಸ್ಮಾತ್ತಾಗಿ ಬಂದಾನೇನೋ ಎಂದು ಚಾತಕಪಕ್ಷಿಯ ಹಾಗೆ ಕಾದಿರುತ್ತೇನೆ. ಸಮಯಕ್ಕೆ ಸರಿಯಾಗಿ ಔಷಧಿ ಕುಡಿಯಬೇಕಾದರೆ ಸ್ವಭಾವತಃ ಮರವೆಯಿರುವ ನನ್ನ ಮನಸ್ಸಿನ ಮೇಲೇ ಏಕಮಾತ್ರ ಭರವಸೆ. ನನ್ನ ಚಿರದಿನಗಳ ನಿಯಮ ವಿರುದ್ಧವಾದರೂ ಕಾಯಿಲೆ ಮಲಗಿರುವ ಸಮಯದಲ್ಲಿ ಹಾಜರಿರಲು ಅಮೀಯಾಳನ್ನು ಕರೆಕಳುಹಿಸಿದ್ದೆ, ಒಂದೆರಡು ಬಾರಿ. ಆದರೆ ಹೆಜ್ಜೆ ಸಪ್ಪಳವಾದರೆ ಸಾಕು ಅವಳು ಬಾಗಿಲ ಕಡೆ ಬೆಚ್ಚಿ ನೋಡುತ್ತ ಚಡಪಡಿಸುತ್ತಿದ್ದುದನ್ನು ಕಂಡು ನಾನು ಮನದಲ್ಲೇ "ಪಾಪ!" ಎಂದುಕೊಳ್ಳುತ್ತಿದ್ದೆ.

"ಅಮಿಯಾ, ಇವತ್ತು ಖಂಡಿತವಾಗಿ ನಿನಗೆ ಮೀಟಿಂಗೋ ಏನಾದರೂ ಇದ್ದೇ ಇರಬೇಕು, ಅಲ್ಲವೆ?" ಎನ್ನುತ್ತಿದ್ದೆ.

ಅವಳು "ಇದ್ದರೇನಣ್ಣಯ್ಯಾ, ಇರತ್ತೆ, ಇನ್ನೂ ಸ್ವಲ್ಪ ಹೊತ್ತು ಇದೆ" ಎನ್ನುತ್ತಿದ್ದಳು.

ನಾನಾಗ "ಛೆ ಛೆ! ಏನು ಮಾತು! ಕರ್ತವ್ಯ ಮೊದಲು..." ಎನ್ನುತ್ತಿದ್ದೆ.

ಆದರೆ, ಆಗಾಗ ಗಮನಕ್ಕೆ ಬರುತ್ತಿತ್ತು : ಕರ್ತವ್ಯಕ್ಕೆ ಎಷ್ಟೋ ಮುಂಚೆ ಅನಿಲ ಬಂದು ಹಾಜರಾಗುತ್ತಿದ್ದ. ಆದ್ದರಿಂದ ಅಮಿಯಾಳ ಕರ್ತವ್ಯದ ಉತ್ಸಾಹಕ್ಕೆ ಅಡ್ಡಿಯೇನಾದರೂ ಆದೀತೆಂದು ನಾನು ಹೆಚ್ಚು ಮಾತೇನೂ ಆಡಲಾಗುತ್ತಿರಲಿಲ್ಲ.

ಬರೇ ಅನಿಲನೊಬ್ಬನೇ ಅಲ್ಲ, ಸ್ಕೂಲು ಕಾಲೇಜುಗಳನ್ನು ತ್ಯಜಿಸಿದ ಎಷ್ಟೋ ಹುಡುಗರು ನಮ್ಮ ಮನೆಯ ಮೊದಲನೇ ಅಂತಸ್ತಿನ ಕೋಣೆಯಲ್ಲಿ ಚಾ ಮತ್ತು ಸ್ಫೂರ್ತಿಯನ್ನು ಸೇವಿಸಲು ಬಂದು ಸೇರುತ್ತಿದ್ದರು. ಅವರೆಲ್ಲರೂ ಅಮಿಯಾಳನ್ನು ಯುಗಲಕ್ಷ್ಮಿಯೆಂದು ಸಂಬೋಧನೆ ಮಾಡುತ್ತಿದ್ದರು. ಕೆಲವು ಪದವಿಗಳಿರುತ್ತವೆ-ರಾಯ್ ಬಹಾದ್ದೂರ್ ಪದವಿಯಂತೆ-ಚೆನ್ನಾಗಿ ಮಡಿಕೆ ಹಾಕಿದ ಅಂಗವಸ್ತ್ರದಂತೆ-ಯಾರಿಗೆ ಅದು ಲಭಿಸುತ್ತೋ ಅವರು ನಿರ್ಯೋಚನೆಯಿಂದ ಕೊರಳಿಗೆ ತಗಲಿ ಹಾಕಿಕೊಂಡು ಓಡಾಡಬಹುದು. ಇನ್ನೊಂದು ಬಗೆಯ ಪದವಿಯಿರುತ್ತೆ-ಯಾರಿಗೆ ಅದು ದೊರೆಯುತ್ತೋ ಅಂಥವರು ಪಾಪ, ಮೂರು ಹೊತ್ತೂ ಪದವಿಗೆ ತಕ್ಕ ಯೋಗ್ಯತೆ ತಮಗೆ ಇದೆಯೋ ಇಲ್ಲವೋ ಎಂಬ ಅನುಮಾನದಿಂದ ಆ ಯೋಗ್ಯತೆ ತೋರ್ಪಡಿಸಿಕೊಳ್ಳುವುದಕ್ಕೆ ಆತುರಾತುರವಾಗಿರುತ್ತಾರೆ. ನಮ್ಮ ಅಮಿಯಾಳೂ ಅಂಥವರ ಪಂಗಡಕ್ಕೆ ಸೇರಿದವಳು ಎಂದು ಸ್ಪಷ್ಟವಾಗಿ ಗೊತ್ತಾಯಿತು ನನಗೆ. ಸದಾ ಅತ್ಯಂತ ಉತ್ಸಾಹದ ಅಲೆಯ ಮೇಲಿರದೆ ಹೋದರೆ ಅವಳಿಗೆ ಸರಿಹೋಗುತ್ತಲೇ ಇರಲಿಲ್ಲ. ಊಟ ನಿದ್ದೆಗಳಿಗೇ ಅವಳಿಗೆ ಸಮಯ ಸಿಗದೆ ಇರುವಂತೆ ಎಲ್ಲೋ ಯಾವುದೋ ಒಂದು ಸಡಗರದ ಕಾರ್ಯಕಲಾಪದಲ್ಲಿರುತ್ತಾಳೆ. ಅವಳಿಗಾಗಿ ಹುಡುಕಿಕೊಂಡು ಕೇರಿ ಕೇರಿಗಳಲ್ಲಿ ಅಲೆಯಬೇಕಾಗುತ್ತದೆ. ಯಾರಾದರೂ 'ಏಕೆ ಹೀಗೆಲ್ಲ ಮಾಡುತ್ತೀಯೆ, ಮೈ ಆರೋಗ್ಯ ಕೆಡುವುದಿಲ್ಲವೆ?' ಎಂದು ಕೇಳಿದರೆ ಸುಮ್ಮನೆ ನಗುತ್ತಾಳೆ. ಆಶ್ಚರ್ಯಕರವಾದ ನಗು. ಅವಳ ಭಕ್ತರು "ನೀವು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ. ನಾವು ಹೇಗೋ ಉಳಿದ ಕೆಲಸ ಮಾಡಿ ಪೂರೈಸುತ್ತೇವೆ" ಎಂದಾಗ ಅವಳಿಗೆ ಕೆಟ್ಟದೆನಿಸುತ್ತದೆ. ದೇಹಶ್ರಮವನ್ನು ತಪ್ಪಿಸುವುದೊಂದು ದೊಡ್ಡ ಉಪಕಾರವೆ? ದುಃಖಗೌರವದಿಂದ ಅವಳನ್ನ ವಂಚಿತಳಾಗಿ ಮಾಡುವುದೊಂದು ವಿಡಂಬನವಲ್ಲವೆ? ಅವಳು ಮಾಡಿರುವ ತ್ಯಾಗಗಳನ್ನು ಸ್ವೀಕಾರ ಮಾಡಿರುವವರ ಪಟ್ಟಿಯಲ್ಲಿ ನಾನೂ ಒಬ್ಬ ಸೇರಿದ್ದೇನೆ. ಜೈಲಿಗೆ ಹೋಗಿ ನಾನಾ ಕಷ್ಟಗಳನ್ನು ಅನುಭವಿಸಿರುವಂಥ ಅವಳ ಇಷ್ಟು ದೊಡ್ಡ ಅಣ್ಣ-ಉಲ್ಲಾಸ್‌ಕರ್, ಕಾನಾಯಿ, ಬಾರೀನ್, ಉಪೇಂದ್ರ, ಮುಂತಾದವರ ಸಂಗಡ

ಒಂದೇ ನಕ್ಷತ್ರ ಮಂಡಲದಲ್ಲಿ ಸ್ಥಾನ ಪಡೆದಿರುವಂಥ ದೇಶಭಕ್ತ ಅಣ್ಣ–ಗೀತೆಯ ಎರಡನೇ ಅಧ್ಯಾಯವನ್ನು ಪೂರ್ತಿಮಾಡಿ, ಕೊನೆಯ ಅಧ್ಯಾಯದ ಕಡೆ ಮುಂದು ಮುಂದಕ್ಕೆ ಹೋಗುತ್ತಿರುವಂಥ ಅಣ್ಣ–ಅಂಥವನನ್ನು ಕೂಡ ಯಥೋಚಿತವಾಗಿ ನೋಡಿಕೊಳ್ಳುವುದಕ್ಕೆ ಅವಳಿಗೆ ಸಮಯವಿಲ್ಲ. ಅಷ್ಟು ದೊಡ್ಡ ಸ್ಯಾಕ್ರಿಫೈಸ್ (ತ್ಯಾಗ). ಒಂದು ದಿನ ಅವಳನ್ನು ಸ್ತೋತ್ರ ಮಾಡುವ ಭಕ್ತದಳ ಬಾರದಿದ್ದಾಗ ಆ ಅಭಾವವನ್ನು ಮುಚ್ಚಲು ನಾನೇ ಅವಳ ಉತ್ಸಾಹದ ಚಟಕ್ಕೆ ಗ್ರಾಸ ಒದಗಿಸಿದೆ–"ನೋಡು, ಅಮಿಯಾ, ವ್ಯಕ್ತಿಗತ ಮನುಷ್ಯರ ಸಂಗಡ ಸಂಬಂಧವಿಡುವುದು ನಿನ್ನಂಥವಳಿಗಲ್ಲ–ನಿನ್ನ ಸಂಬಂಧವಿಂದು ಇಡೀ ವರ್ತಮಾನದ ಯುಗಕ್ಕೇ!" ಎಂದು ಹೇಳಿಬಿಟ್ಟೆ. ನನ್ನ ಶ್ಲಾಘನೆಯನ್ನು ನಿಜವೆಂದೇ ಅವಳು ಗಂಭೀರ ಭಾವದಿಂದ ಮೌನವಾಗಿ ಅಂಗೀಕರಿಸಿದಳು. ಪಾಪ, ಅವಳೇನು ಮಾಡಿಯಾಳು? ಜೈಲಿಗೆ ಹೋಗಿಬಂದಾಗಲಿಂದ ನನ್ನ ಹಾಸ್ಯವು ಒಳಗೊಳಗೇ ಹರಿದುಕೊಳ್ಳುತ್ತಿದೆ. ನನ್ನ ಪರಿಚಯವಿಲ್ಲದಿರುವವರು ನನ್ನನ್ನು ಹೊರಗಡೆಯಿಂದ ಅತಿ ಗಂಭೀರ ಪ್ರಕೃತಿಯವನು ಎಂದುಕೊಳ್ಳುತ್ತಾರೆ.

ಹಾಸಿಗೆ ಮೇಲೆ ಒಬ್ಬನೇ ಬಿದ್ದುಕೊಂಡಿದ್ದು ಬಾಲ್ಕೊನಿಯ ಕಟಕಟೆಯ ಕಡೆ ನೋಡುತ್ತ ಸುಮ್ಮನೆ ಚಿಂತಿಸುತ್ತೇನೆ. "ವಿಮುಖಾ ಬಾಂಧವಾಯಾಂತಿ!" (ಬಾಂಧವರೂ ವಿಮುಖರಾಗುತ್ತಾರೆ). ಹಠಾತ್ತಾಗಿ ಮನಸ್ಸಿಗೆ ಬಂತು–ಒಂದು ದಿನ ಎಲ್ಲಿಂದಲೋ, ಒಂದು ಕಂತ್ರಿನಾಯಿ ನನ್ನ ಮನೆಯ ವರಾಂಡದ ಮೂಲೆಯಲ್ಲಿ ಬಂದು ಆಸರೆ ಪಡೆದಿತ್ತು. ಮೈಮೇಲಿನ ಕೂದಲೆಲ್ಲ ಉದುರಿಹೋಗಿದೆ. ಜೀರ್ಣವಾದ ಚರ್ಮದ ತಳಗಡೆ ಮೂಳೆಗಳೆಲ್ಲ ಕಾಣಬರುತ್ತಿವೆ ಅರ್ಧ ಸತ್ತ ಅವಸ್ಥೆ. ಅತ್ಯಂತ ಅಸಹ್ಯದಿಂದ ಅದನ್ನು "ಹೈ ಹೋಗಾಚೆ–ದೂರ"– ಎಂದು ಗದರಿ ಓಡಿಸಿದ್ದೆ. ಇವತ್ತು ಜ್ಞಾಪಕಕ್ಕೆ ಬಂದು ಯೋಚಿಸಿದೆ–ಅಷ್ಟು ಕ್ರೂರವಾಗೇಕೆ ಅದನ್ನು ಓಡಿಸಿದೆ! ಯಾವುದೋ ಗುರುತಿಲ್ಲದ ಬೀದಿಯ ನಾಯಿಯೆಂದಲ್ಲ; ಅದರ ಅಂಗಾಂಗಳ ಮೇಲೆಲ್ಲ ಸಾವಿನ ಜಾಡು ಮುಸುಕಿದೆಯೆಂದು–ಪ್ರಾಣದ ಸಂಗೀತ ಸಭೆಯಲ್ಲಿ ಅದರ ಇರುವಿಕೆಯೊಂದು ಅಪಸ್ವರ. ಅದರ ರುಗ್ಣತೆಯೊಂದು ಅಪಮಾನ. ಅದರ ಸಂಗಡ ನನ್ನನ್ನು ಹೋಲಿಸಿಕೊಂಡೆ ಈಗ. ನಾಲ್ಕು ದಿಕ್ಕೂ ಓಡುತ್ತಿರುವ ಜೀವಪ್ರವಾಹದ ನಡುವೆ ನನ್ನ ಕಾಯಿಲೆಯೊಂದು ಸ್ಥಾವರವಸ್ತು. ಪ್ರವಾಹಕ್ಕೆ ತಡೆ. ಆ ಕಾಯಿಲೆಯು "ಸುಮ್ಮನೆ ಒಂದು ಕಡೆ ಬಿದ್ದುಕೊಂಡಿರು" ಎಂದು ಆದೇಶ ಕೊಡುತ್ತದೆ. ಜೀವ ಸುಮ್ಮನಿರದೆ "ಓಡು...ದಿಕ್ಕು ದಿಕ್ಕಿಗೆ ಸುಮ್ಮನೆ ಓಡುತ್ತ ಅಲೆದಾಡು" ಎನ್ನುತ್ತಿರುತ್ತದೆ. ರೋಗದ ಬಂಧನದಲ್ಲಿ ಸಿಕ್ಕಿಹಾಕಿಕೊಂಡಿರುವ ತಾನೇ ರೋಗವಿಲ್ಲದವನನ್ನು ಬಂಧಿಸಲು ಹೋಗುತ್ತದೆ. ಎಂತಹ ದೊಡ್ಡ ಅಪರಾಧ! ಅದಕ್ಕಾಗಿಯೇ ಜೀವಲೋಕದ ಮೇಲಿನ ಎಲ್ಲ ಹಂಗುಗಳನ್ನೂ ತೆಗೆದೊಗೆಯಬೇಕೆಂದು ಗೀತೆಯನ್ನು ತೆಗೆದು ಕೂತೆ. ಸ್ಥಿತ

ಪ್ರಜ್ಞತೆಯ ಅವಸ್ಥೆಯಲ್ಲಿ ಬಂದು ಸೇರುವ ಹೊತ್ತಿಗೆ, ಮನವು ರೋಗ-ಅರೋಗ ದ್ವಂದ್ವವನ್ನು ದೂರ ಬಿಟ್ಟು ಬಂದಿರುವ ಸಮಯ. ಅಂಥ ವೇಳೆಯಲ್ಲಿ ಯಾರೋ ಒಬ್ಬರು ನನ್ನ ಕಾಲು ಮುಟ್ಟಿ ಪ್ರಣಾಮ ಮಾಡಿದಂತೆ ತೋರಿತು. ಗೀತೆಯ ಹಾಳೆಯಿಂದ ಕಣ್ಣನ್ನಿಳಿಸಿ ನೋಡಿದರೆ, ಅತ್ತೆಯ ಆಶ್ರಯದಲ್ಲಿದ್ದ ಹೆಂಗಸರಲ್ಲಿ ಒಬ್ಬಾಕೆ. ಇಷ್ಟರವರೆಗೆ ಆಕೆಯನ್ನು ದೂರದಿಂದ ನೋಡಿದ್ದೆ ಅಷ್ಟೆ. ಬೇರೇನೂ ಪರಿಚಯವಿಲ್ಲ. ಅಕೆಯ ಹೆಸರು ಕೂಡ ತಿಳಿಯದು. ಮುಖದ ಮೇಲೆ ಮುಸುಗೆಳೆದುಕೊಂಡು ಆಕೆ ನನ್ನ ಕಾಲ ಮೇಲೆ ಮೃದುವಾಗಿ ನಿಧಾನವಾಗಿ ಕೈಯಾಡಿಸತೊಡಗಿದಳು.

ಆಗ ತತ್‌ಕ್ಷಣ ಹೊಳೆಯಿತು. "ಹೌದು, ಆಕೆ ಇದಕ್ಕೆ ಹಿಂದೆ ಆಗಾಗ ನನ್ನ ಕೋಣೆಯ ಬಾಗಿಲ ಹೊರಗಡೆ ನೆರಳಿನಂತೆ ಬಾರಿ ಬಾರಿ ಬಂದು ಹಾಗೇ ಹಿಂತಿರುಗಿ ಹೊರಟುಹೋಗುತ್ತಿದ್ದಳು. ಈಕೆಯೇ ಖಂಡಿತ. ಕೋಣೆಯೊಳಗೆ ಬರಲು ಸಾಹಸವಿಲ್ಲದೆ ಹಾಗೇ ಹೋಗುತ್ತಿದ್ದಳು, ಪಾಪ. ಇಂದು ಅದು ಹೇಗೋ ಧೈರ್ಯಮಾಡಿ ನಾಚಿಗೆ, ಭಯಗಳನ್ನು ದೂರಮಾಡಿ ಒಳಗಡೆ ಬಂದು ಪ್ರಣಾಮ ಮಾಡಿ ಕೂತಳು.

ನಾನು ಒಮ್ಮೆ ಒಬ್ಬ ಅಸಹಾಯ ಹೆಣ್ಣುಮಗಳನ್ನು ಅಪಮಾನದಿಂದ ಬಿಡಿಸಲು ದುಃಖ ಸ್ವೀಕಾರದ ಅರ್ಘ್ಯವನ್ನು ಹೆಣ್ಣು ಜನ್ಮಕ್ಕೆ ಅರ್ಪಿಸಿದ್ದೆ. ಈಕೆ ಬಹುಶಃ ನಾಡಿನ ಇಡೀ ಹೆಣ್ಣು ಜಾತಿಯ ಪರವಾಗಿ ಅದರ ಪಾವತಿಯನ್ನು ಸ್ವೀಕಾರ ಮಾಡಲು ನನ್ನ ಕಾಲ ಬಳಿ ಬಂದು ಕೂತಿದ್ದಾಳೆ. ಜೈಲಿನಿಂದ ಹೊರಗೆ ಬಂದು ಅನೇಕ ಸಭೆಗಳಲ್ಲಿ ಅನೇಕ ಮಾಲೆಗಳನ್ನು ಪಡೆದಿದೆ. ಆದರೆ ಇಂದು ಮನೆಯ ಕೋಣೆಯೊಳಗೆ ಹಾಸಿಗೆ ಮೇಲೆ ಬಿದ್ದುಕೊಂಡು ಈ ಬಗೆಯಾಗಿ ಒಬ್ಬ ಹೆಸರರಿಯದ ಹೆಣ್ಣು ಕೈಯಿಂದ ಬಂದ ಸನ್ಮಾನ ನನ್ನ ಎದೆಯಾಳವನ್ನು ಮುಟ್ಟಿತು. ನಿಸ್ತ್ರೈಗುಣ್ಯನಾಗಬೇಕೆಂದು ಹೊರಟು ಈ ಜೈಲಿನಲ್ಲಿ ದುಡಿತ ಮಾಡಿದ ಗಂಡಸಿನ ಬಹುಕಾಲದಿಂದ ಒಣಗಿದ್ದ ಕಂಗಳು ಇಂದೇಕೋ ಹಠಾತ್ತಾಗಿ ಒದ್ದೆಯಾದುವು. ಮೊದಲೇ ಹೇಳಿದ್ದೆ-ಸೇವೆ ಮಾಡಿಸಿಕೊಂಡು ಅಭ್ಯಾಸ ನನಗಿಲ್ಲವೆಂದು. ಯಾರಾದರೂ ಕಾಲನ್ನು ಒತ್ತಲು ಬಂದರೆ ನನಗೆ ಆಗುತ್ತಿರಲಿಲ್ಲ. ಗದರಿಸಿ ಕಳಿಸಿಬಿಡುತ್ತಿದ್ದೆ. ಇಂದು ಈ ಸೇವೆಯನ್ನು ತಳ್ಳಿಹಾಕಬೇಕೆಂಬ ಭಾವನೆ ಮನದಲ್ಲಿ ಸುಳಿಯಲೇ ಇಲ್ಲ.

ಖುಲನಾ ಜಿಲ್ಲೆಯ ಯಾವುದೋ ಗ್ರಾಮ, ಅತ್ತೆಯ ಮಾವನ ಮನೆ. ಆ ಊರಿನ ಆಕೆಗೆ ಸಂಬಂಧವುಳ್ಳ ಮೂರು ನಾಲ್ಕು ಹೆಣ್ಣು ಮಕ್ಕಳನ್ನು ಆಕೆ ಕರೆತಂದು ಮನೆಯಲ್ಲಿ ಇಟ್ಟುಕೊಂಡಿದ್ದಳು. ಅತ್ತೆಯ ಪೂಜೆ, ವ್ರತಗಳಲ್ಲಿ ನೆರವಾಗಲು ಆ ಹುಡುಗಿಯರು ಕೆಲಸಕ್ಕೆ ಬರುತ್ತಿದ್ದರು. ಅತ್ತೆಯ ನಾನಾ ವಿಧವಾದ ಕೆಲಸ, ಹವ್ಯಾಸಗಳಲ್ಲಿ ಅವರ ಸಹಾಯವಿಲ್ಲದೆ ಆಗುತ್ತಿರಲಿಲ್ಲ. ಈ ಮನೆಯಲ್ಲಿ ಬೇರೆ ಎಲ್ಲ

ಸ್ಥಳಗಳಲ್ಲೂ ಅಮಿಯಾಳಿಗೆ ಅಧಿಕಾರಪತ್ತು. ಆದರೆ ಪೂಜೆಯ ಮನೆಯಲ್ಲಿ ಇಲ್ಲ. ಅಮಿಯಾಳಿಗೆ ಅದೇಕೆಂದು ಗೊತ್ತಿಲ್ಲ. ತಿಳಿದುಕೊಳ್ಳಲು ಪ್ರಯತ್ನವನ್ನೂ ಮಾಡಲಿಲ್ಲ. ಅತ್ತೆಯು ಅಂದುಕೊಂಡಿದ್ದಳೇನೋ, ಅಮಿಯಾಳಿಗೆ ಚೆನ್ನಾಗಿ ಓದು, ಬರೆಹ ಕಲಿಸಿದ ಮೇಲೆ ಅವಳು ಹೇಗಿದ್ದರೂ ಅತಿ ದೊಡ್ಡ ದರ್ಜೆಯ ಮನೆತನದಲ್ಲಿ ಮದುವೆಯಾಗಿ ಹೋಗುತ್ತಾಳೆ. ಅಂಥ ಮನೆಯಲ್ಲಿ ಪೂಜೆ ಪುರಸ್ಕಾರಗಳಿಗೆ ಯಾವ ಅಗತ್ಯವೂ ಇರುವುದಿಲ್ಲ. ಆಚಾರ, ಮಡಿ, ಮೈಲಿಗೆಗಳ ತಾಪತ್ರಯವೇ ಇರುವುದಿಲ್ಲ. ಬ್ರಾಹ್ಮಣ, ಬ್ರಹ್ಮಚಾರಿಗಳು ಅಂಥ ಮನೆ ಕಡೆ ಹೋಗಿ ಯಾರೂ ಲಕ್ಷ್ಯ ಮಾಡದೆ ಬರಿಗೈಯಲ್ಲಿ ವಾಪಸ್ಸು ಬರುತ್ತಾರೆ.–ಹೀಗೆಲ್ಲ ಆಕೆ ತಿಳಿದುಕೊಂಡಿದ್ದರೆ ಅದು ಬಹಳ ತಪ್ಪು. ಆದರೆ ಯೋಚನೆ ಮಾಡದೆ ಹೋದರೆ, ಇದಲ್ಲದೆ ಬೇರೆ ಯಾವ ದಾರಿಯೂ ಸಾಧ್ಯವಿಲ್ಲ. ತಂದೆಯ ಪಾತಕದಿಂದ ಮಗಳನ್ನು ಪೂರ್ತಿಯಾಗಿ ಉದ್ಧಾರಮಾಡುವವರು ಯಾರು? ಈ ಕಾರಣದಿಂದ ಆಕೆ ಅಮಿಯಾಳನ್ನು ಸೋಮಾರಿತನದ ಇಳಿಜಾರು ತೀರವನ್ನು ದಾಟಿ ಈಗಿನ ಕಾಲದ ಆಚಾರಹೀನತೆಯ ನಡುವೆ ಸುರಕ್ಷಿತ ಸ್ಥಳಕ್ಕೆ ಏರಿಹೋಗಲು ತಡೆಮಾಡಲಿಲ್ಲ. ಎಳೆಯ ವಯಸ್ಸಿನಿಂದಲೂ ಗಣಿತದಲ್ಲೂ ಇಂಗ್ಲಿಷು ಪಾಠದಲ್ಲೂ ಅಮಿಯಾಳು ಕ್ಲಾಸಿನಲ್ಲಿ ಮೊದಲನೆಯವಳಾಗೇ ಬರುತ್ತಿದ್ದಳು. ವರುಷ ವರುಷಕ್ಕೂ ಮಿಷನರಿ ಸ್ಕೂಲಿನಿಂದ ಫ್ರಾಕ್ ಧರಿಸಿ ಜಡೆಯಲ್ಲಾಡಿಸಿಕೊಂಡು ಏನಿಲ್ಲವೆಂದರೂ ಮೂರು ನಾಲ್ಕು ಪ್ರೈಜುಗಳನ್ನು ಗಿಟ್ಟಿಸಿಕೊಂಡು ಬರುತ್ತಿದ್ದಳು. ಯಾವುದೋ ಒಂದು ವರುಷ ಪರೀಕ್ಷೆಯಲ್ಲಿ ಅಕಸ್ಮಾತ್ತಾಗಿ ಎರಡನೆಯವಳಾಗಿ ಬಂದದ್ದರಿಂದ ಆ ಸಲ ಮಲಗುವ ಕೋಣೆಯ ಬಾಗಿಲನ್ನು ಮುಚ್ಚಿಕೊಂಡು ಅತ್ತು ಅತ್ತು ಕಣ್ಣುಗಳನ್ನು ಊದಿಸಿಕೊಂಡಳು. ಪ್ರಾಯೋಪವೇಶನ ಮಾಡುವುದಕ್ಕೆ ಕೂಡ ತಯಾರಿದ್ದಳು. ಹೀಗೆ ಪರೀಕ್ಷಾ ದೇವತೆಯ ಬಳಿ ಸಿದ್ಧಿಯ ವ್ರತವನ್ನು ಹಿಡಿದು ಅದರ ಸಾಧನೆಯಲ್ಲೇ ಬಹುಕಾಲ ಮಗ್ನವಾಗಿದ್ದಳು. ಕೊನೆಗೆ ಈಗ ಅಸಹಕಾರದ ಯೋಗಿನೀ ಮಂತ್ರದಲ್ಲಿ ದೀಕ್ಷಿತಳಾದ ಮೇಲೂ ಪರೀಕ್ಷಾ ದೇವಿಯ ವ್ರತವನ್ನು ಬಿಟ್ಟುಬಿಟ್ಟಿದ್ದರೂ ಕೂಡ ಅವಳು ಮೊದಲ ಶ್ರೇಣಿಯಲ್ಲಿ ಉತ್ತೀರ್ಣಳಾದಳು.

ಓದು ಬರೆಹದಲ್ಲಿ ಮಗ್ನಳಾಗುವುದರಲ್ಲಿ ಹೇಗೋ ಓದುಬರೆಹ ಬಿಡುವುದರಲ್ಲೂ ಹಾಗೇ. ಯಾವುದರಲ್ಲೂ ಅವಳು ಯಾರಿಗೂ ಹಿಂದಾಗುವಂಥ ಹೆಣ್ಣಲ್ಲ. ಓದು ಬರಹ ಹಿಡಿದು ಖ್ಯಾತಿ ಪಡೆದಿದ್ದಂತೆಯೇ ಅದನ್ನು ಬಿಟ್ಟುಬಿಟ್ಟು ಇನ್ನೂ ಹೆಚ್ಚು ಖ್ಯಾತಿ ಗಳಿಸಿದಳು. ಇಂದು ಅವಳ ಬಳಿ ಬರುವ ಪ್ರೈಜುಗಳೇ ಬೇರೆ ನಮೂನೆ. ಅವು ಓಡಾಡುತ್ತವೆ, ಹರಟುತ್ತವೆ. ಕೊರಳು ಗದ್ಗದ ಮಾಡಿಕೊಳ್ಳುತ್ತವೆ. ಕಂಗಳನ್ನ ಒದ್ದೆಮಾಡಿಕೊಳ್ಳುತ್ತವೆ, ಕವಿತೆಗಳನ್ನು ಕೂಡ ಬರೆಯುತ್ತವೆ.

ಇಂಥ ಅಮಿಯಾಳಿಗೆ ತನ್ನ ಸಾಕುತಾಯಿಯ ಅತ್ತೆಯ ಗ್ರಾಮದಿಂದ ಬಂದಿದ್ದ ಹಳ್ಳಿಯ ಹೆಣ್ಣುಗಳ ಮೇಲೆ ಅಷ್ಟಾಗಿ ಗೌರವವಿಲ್ಲದಿದ್ದುದು ಆಶ್ಚರ್ಯವೇನಲ್ಲ. ಅವಳು ಪ್ರೋತ್ಸಾಹಿಸುತ್ತಿದ್ದ ಅನಾಥಾಲಯಕ್ಕೆ ಒಂದು ಸಮಯ ಚಂದಾ ಹಣಕ್ಕಿಂತಲೂ ಅನಾಥರ ಅಭಾವವೇ ಹೆಚ್ಚಾಗಿದ್ದಾಗ ಅವಳು ಈ ಹೆಂಗಸರನ್ನು ಅನಾಥಾಲಯಕ್ಕೆ ಏಕೆ ಕಳುಹಿಸಕೂಡದು ಎಂದು ಅತ್ತೆಯ ಬಳಿ ಎಷ್ಟೋ ಬಾರಿ ಹೇಳಿದ್ದುಂಟು. ಆಗ ಅತ್ತೆ "ಏನು ಮಾತೇ ಇದು? ಇವರೇನು ಅನಾಥರಲ್ಲ. ನಾನು ಬದುಕಿರುವುದೇತಕ್ಕೆ? ಅನಾಥರಾಗಲಿ, ಸನಾಥರಾಗಲಿ, ಹೆಣ್ಣುಮಕ್ಕಳಿಗೆ ಬೇಕಾಗಿರುವುದು ಮನೆ. ಅನಾಥಾಲಯದ ಮಧ್ಯೆ ಅವರ ಮೇಲೊಂದು ಮುದ್ರೆ ಹಾಕಿ ಗೋಣೀಚೀಲದಲ್ಲಿ ಹಾಕಿ ಹೊಲಿದಿಡುವುದು ಯಾಕೆ? ನಿನಗೆ ಇವರ ಮೇಲೆ ಅಷ್ಟೊಂದು ದಯೆಯಿದ್ದರೆ ಅದನ್ನ ತೋರಿಸಲಿಕ್ಕೆ ನಿನಗೆ ಮನೆಯಿಲ್ಲವೇನು?" ಎಂದುಬಿಟ್ಟಳು.

ಏನಾದರಾಗಲಿ, ಆ ಹೆಂಗಸು ತಲೆ ತಗ್ಗಿಸಿಕೊಂಡು ನನ್ನ ಕಾಲನ್ನು ನೀವುತ್ತಿದ್ದಾಗ ನಾನು ಅತಿ ಸಂಕೋಚದಿಂದ, ಮತ್ತು ಮನಕದಡಿದವನಾಗಿ ಒಂದು ವೃತ್ತಿಪತ್ರಿಕೆಯನ್ನು ಕೈಯಲ್ಲಿ ಹಿಡಿದುಕೊಂಡು ಜಾಹೀರಾತುಗಳ ಕಡೆ ಕಣ್ಣು ಹಾಯಿಸತೊಡಗಿದೆ. ಇಂಥ ವೇಳೆಯಲ್ಲಿ ಹಠಾತ್ತಾಗಿ ಅನಿರೀಕ್ಷಿತವಾಗಿ ಅಮಿಯಾ ಕೋಣೆಯೊಳಗೆ ಹೊಕ್ಕು ಎದುರಿಗೆ ನಿಂತಳು. ನವಯುಗದವರ ಉಪಯೋಗಕ್ಕೆಂದು ಸೋದರತಿಲಕದ ವ್ರತದ ಮೇಲೆ ಹೊಸ ಲೇಖನ ಬರೆದಿದ್ದಳು. ಅದನ್ನು ಇಂಗ್ಲಿಷಿನಲ್ಲಿ ತರ್ಜುಮೆ ಮಾಡಿಸಿ ಪ್ರಕಟಿಸಬೇಕೆಂದು ಅವಳ ಇಷ್ಟ. ಅದಕ್ಕೆ ಅವಳಿಗೆ ನನ್ನ ಸಹಾಯ ಆವಶ್ಯಕವಿತ್ತು. ಈ ಲೇಖನದ ಒರಿಜಿನಲ್ ಐಡಿಯಾದಿಂದ ಅವಳ ಭಕ್ತದಳದವರು ಅಲ್ಲಾಡಿಹೋಗಿದ್ದರು. ಇದರ ಬಗ್ಗೆ ದೊಡ್ಡದಾಗಿ ಸಮಾರಂಭ ಮಾಡಬೇಕೆಂದು ಅವರೆಲ್ಲ ನಡುಕಟ್ಟಿ ನಿಂತಿದ್ದರು.

ಕೋಣೆಯನ್ನು ಹೊಕ್ಕೊಡನೆ ಸೇವಾನಿರತಳಾದ ಹೆಂಗಸನ್ನ ಕಂಡು ಅಮಿಯಾಳ ಮುಖಭಾವ ಅತ್ಯಂತ ಬಿರುಸಾಗಿ ಹೋಯಿತು. ತನ್ನ ದೇಶ ವಿಖ್ಯಾತನಾದ ಅಣ್ಣ ಒಂದು ಸುಳುವು ಕೊಟ್ಟಿದ್ದಿದ್ದರೆ ಸಾಕು, ಸೇವೆ ಮಾಡಲಿಕ್ಕೆ ಜನರ ಅಭಾವವಿರಬೇಕೆ? ಅಷ್ಟು ಜನರಿದ್ದೂ ಕಡೆಗೆ ಈ?...

ಅವಳಿಗೆ ಸಹಿಸಲಾಗಲಿಲ್ಲ. "ಅಣ್ಣಾ, ಹರಿಮತಿಯನ್ನು ನೀನುಹೇಳಿ...?" ಪ್ರಶ್ನೆಯನ್ನು ಪೂರ್ತಿ ಮಾಡಲು ಬಿಡದೆ ಪಟ್ಟೆಂದು "ಕಾಲೇಕೋ ತುಂಬಾ ನೋಯುತಾಯಿತ್ತು ಕಣೆ" ಎಂದುಬಿಟ್ಟೆ.

ಪೊಲೀಸು ಸಾರ್ಜೆಂಟಿನ ಕೈಯಿಂದ ಒಬ್ಬ ಹೆಣ್ಣುಮಗಳ ಮಾನವನ್ನು ಕಾಪಾಡಲು ಹೋಗಿ ಜೈಲಿಗೂ ಹೋಗಿದ್ದೆ. ಇಂದು ಒಬ್ಬ ಹೆಂಗಸಿನ ಕೋಪದಿಂದ ಇನ್ನೊಬ್ಬ ಹೆಂಗಸನ್ನು ಉಳಿಸಲು ಸುಳ್ಳು ಮಾತನ್ನು ಹೇಳಬೇಕಾಯಿತು. ಈ

ಜಾರಿಯೂ ಶಿಕ್ಷೆಯಾಗದೆ ಹೋಗಲಿಲ್ಲ. ಅಮಿಯಾಳು ನನ್ನ ಕಾಲಬಳಿ ಕೂತಳು. ಹರಿಮತಿಯು ನೊಂದ ಮೇಲುದನಿಯಲ್ಲಿ ಅವಳಿಗೆ ಏನೋ ಹೇಳಿದಳು. ಅವಳು ಸ್ವಲ್ಪ ಮೂತಿಯನ್ನು ಸೊಟ್ಟಮಾಡಿ ಉತ್ತರವೇನೂ ಹೇಳದಿದ್ದಳು. ಹರಿಮತಿಯು ನಿಧಾನವಾಗಿ ಎದ್ದು ಹೊರಗೆ ಹೊರಟುಹೋದಳು. ಆಗ ಅಮಿಯಾಳು ನನ್ನ ಕಾಲನ್ನು ಹಿಡಿದು ನೀವತೊಡಗಿದಳು. ಕಷ್ಟವಾದದ್ದು ನನಗೆ. ಹೇಗೆ ತಾನೇ "ಬೇಕಿಲ್ಲ, ನನಗಿದು ಇಷ್ಟವಾಗುವುದಿಲ್ಲ" ಎಂದು ಹೇಳಲಿ? ಇಷ್ಟು ದಿನದವರೆಗೆ ನನ್ನ ಕಾಲ ಬಗ್ಗೆ ನನ್ನ ಇಚ್ಛಾನುಸಾರವಾಗಿ ಯಾವ ಅಧಿಕಾರವಿಟ್ಟುಕೊಂಡಿದ್ದೆನೋ ಇನ್ನು ಮೇಲೆ ಅದು ನಡೆಯುವುದಿಲ್ಲವೆಂದು ತೋರಿತು.

ಧಡಭಡವೆಂದು ಕಾಲೆಳೆದುಕೊಂಡು ಎದ್ದುಕೂತು "ಅಮಿಯಾ, ಎಲ್ಲಿ ಕೊಡು ನಿನ್ನ ಲೇಖನ, ಅದನ್ನೀಗಲೇ ತರ್ಜುಮೆ ಮಾಡಿಬಿಡೋಣ" ಎಂದೆ.

"ಈಗ ಬೇಡಣ್ಣ, ನಿನ್ನ ಕಾಲು ನೋಯುತ್ತ ಇದೆ. ಸ್ವಲ್ಪ ನೀವುತೇನೆ, ಸುಮ್ಮನೆ ಮಲಗಿಕೋ."

"ಛೆಛೆ, ಇಲ್ಲ, ಕಾಲೆಲ್ಲಿ ನೋಯುತ್ತೆ,–ಊಂ, ಹೌದು, ಹೌದು...ಸ್ವಲ್ಪ ನೋಯುತಾ ಇದೆ, ಸ್ವಲ್ಪವೇ–ನಿಜ. ಮತ್ತೇ...ನೋಡು. ನಿನ್ನ ಈ ಸೋದರ ತಿಲಕದ ಹೊಸ ಐಡಿಯ ಬಹಳ ಚಮತ್ಕಾರವಾಗಿದೆ. ಅಲ್ಲಾ ಅದು ಹೇಗೆ ಇಂಥ ಅದ್ಭುತ ಐಡಿಯ ನಿನ್ನ ತಲೆಯಲ್ಲಿ ಹೊಳೆಯಿತು! ಆಶ್ಚರ್ಯ ! ನೋಡು, ನೀನು ಬರೆದಿರುವುದು– ವರ್ತಮಾನ ಯುಗದಲ್ಲಿ ಅಣ್ಣ ತಮ್ಮಂದಿನ ಹಣೆ ಅತಿ ವಿಶಾಲವಾಗಿಹೋಗಿದೆ, ಇಡೀ ಬಂಗಾಳ ದೇಶದಲ್ಲೆಲ್ಲ ಹರಡಿಹೋಗಿದೆ. ಯಾವುದೇ ಒಂದು ಮನೆಯಲ್ಲಿ ಮಾತ್ರ ಅದು ನಿಂತಿರುವುದಿಲ್ಲ, ಎಂದು. ಈ ಐಡಿಯಾ ಸಾಮಾನ್ಯವಲ್ಲ. ಅತಿ ದೊಡ್ಡ ಭಾವನೆ, ...ಎಲ್ಲೀ ಕೊಡು... ನಾನೀಗಲೇ ಬರೆದುಹಾಕಿಬಿಡುತ್ತೇನೆ. With the advent of the present age, the Brother's brow, waiting for its auspicious anointment from the sisters of Bengal, has grown immensely beyond the narrowness of domestic privacy, beyond the boundaries of the individual home. ಇಂಥ ಐಡಿಯದಂತೆ ಐಡಿಯ ಹೊಳೆದರೆ ಲೇಖನಿ ಹುಚ್ಚು ಓಟದಲ್ಲಿ ಓಡುತ್ತದೆ." ಅಮಿಯಾಳ ಕಾಲೊತ್ತುವಿಕೆಯ ಆತುರ ಪೂರ್ತಿಯಾಗಿ ಇಳಿದುಹೋಯಿತು–ನನ್ನ ತಲೆಯೇನೋ ನಿಜವಾಗಿ ನೋಯುತ್ತಿತ್ತು. ಬರೆಯಲು ಸ್ವಲ್ಪವೂ ಆಸಕ್ತಿಯಾಗುತ್ತಿರಲಿಲ್ಲ. ಆದರೂ ಆಸ್ಪಿರಿನ್ ಗುಳಿಗೆಯನ್ನು ನುಂಗಿ ಬರೆಯಲು ಕೂತೆ.

ಮರುದಿನ ಮಧ್ಯಾಹ್ನ ನನ್ನ ಆಳು ಜಲಧರ ನಿದ್ದೆಯಲ್ಲಿ ಮುಳುಗಿದ್ದಾನೆ. ಹಜಾರದಲ್ಲಿ ದರವಾನನು ತುಳಸೀದಾಸನ ರಾಮಾಯಣವನ್ನು ಓದುತ್ತಿದ್ದಾನೆ. ನಮ್ಮ ಓಣಿಯ ತಿರುಗಣೆಯ ಕಡೆಯಿಂದ ಕರಡಿ ಕುಣಿಸುವವನ ಬುಡುಬುಡಿಕೆಯ

ಶಬ್ದ ಕೇಳಬರುತ್ತಿದೆ. ವಿಶ್ರಾಂತಿಯನ್ನೇ ತೊರೆದ ಅಮಿಯಾ ತನ್ನ ಯುಗಲಕ್ಷ್ಮಿಯ ಕರ್ತವ್ಯಪಾಲನೆಗಾಗಿ ಹೊರಗೆ ಹೊರಟಿದ್ದಾಳೆ. ಇಂಥ ಸಮಯದಲ್ಲಿ ಬಾಗಿಲ ಹೊರಗಡೆ ನಿರ್ಜನವಾದ ವರಾಂಡದಲ್ಲಿ ಭೀರುವಾದ ನೆರಳೊಂದು ಕಾಣಬಂತು. ಕೊನೆಗೆ ಹಿಂದೇಟು ಹಾಕುತ್ತಲೇ ಹಠಾತ್ತಾಗಿ ಒಂದು ಸಮಯದಲ್ಲಿ ಅದೇ ಹೆಂಗಸು ಕೈಯಲ್ಲೊಂದು ಬೀಸಣಿಗೆಯನ್ನು ಹಿಡಿದುಕೊಂಡು ನನ್ನ ತಲೆದೆಸೆಯಲ್ಲಿ ಕೂತು ಗಾಳಿ ಹಾಕಲು ತೊಡಗಿದಳು. ಆಗ ಗೊತ್ತಾಯಿತು, ಹಿಂದಿನ ದಿನ ಅಮಿಯಾಳ ಮುಖಭಾವವನ್ನು ಕಂಡಿದ್ದವಳಿಗೆ ಮತ್ತೆ ಕಾಲನ್ನು ಒತ್ತುವುದಕ್ಕೆ ಸಾಹಸ ಬರಲಿಲ್ಲ. ಇಷ್ಟು ಹೊತ್ತಿಗೆ ನವ ವಂಗದೇಶದ ಸೋದರತಿಲಕದ ಪ್ರಚಾರ ಸಭೆ ಸೇರಿರುತ್ತದೆ. ಅಮಿಯಾ ಅದರಲ್ಲಿ ವ್ಯಸ್ತಳಾಗಿರುತ್ತಾಳೆ. ಅದಕ್ಕೇ ಸ್ವಲ್ಪ ಧೈರ್ಯಮಾಡಿ ಕಾಲೇಕೋ ತುಂಬಾ ನೋಯುತ್ತಿದೆ ಎಂದು ಹೇಳಿಬಿಡೋಣವೇ ಎಂದುಕೊಳ್ಳುತ್ತಿದ್ದೆ. ಸದ್ಯ, ಅದೃಷ್ಟಕ್ಕೆ ಹೇಳಿಬಿಡಲಿಲ್ಲ. ಸುಳ್ಳು ಮಾತು ಬಾಯಿಂದ ಹೊರಗೆ ಬರಲೇ ಬೇಡವೇ ಎಂದು ಹಿಂದೇಟು ಹಾಕುತ್ತಿರುವಾಗ ಸರಿಯಾಗಿ ಅದೇ ಸಮಯದಲ್ಲಿ ಅನಾಥಾಲಯದ ತ್ರೈಮಾಸಿಕ ರಿಪೋರ್ಟನ್ನ ಕೈಯಲ್ಲಿ ಹಿಡಿದು ಬಿರುಗಾಳಿಯಂತೆ ಪ್ರವೇಶಮಾಡಿದಳು ಅಮಿಯಾ! ಹರಿಮತಿಯ ಬೀಸಣಿಗೆ ಬೀಸುವಿಕೆಯ ನಡುವೆ ಹಠಾತ್ತಾಗಿ ಏನೋ ಅಡ್ಡಿ ಬಂದಂತಾಯಿತು. ಅವಳ ಹೃತ್ಪಿಂಡದ ಚಾಂಚಲ್ಯ ಮತ್ತು ಮುಖದ ವಿವರ್ಣತೆಯನ್ನು ಬಣ್ಣಿಸುವುದು ಕಷ್ಟ. ಅನಾಥಾಲಯದ ಆ ಸೆಕ್ರೆಟರಿಯ ಭಯದಿಂದ ಅವಳ ಬೀಸಣಿಗೆಯ ಗತಿಯು ಅತ್ಯಂತ ಮೃದುವಾಗುತ್ತ ಬಂತು.

ಅಮಿಯಾ ಹಾಸಿಗೆಯ ಒಂದು ಅಂಚಿನಲ್ಲಿ ಕೂತು ಅತಿ ಗಡುಸಾದ ದನಿಯಲ್ಲಿ ಹೇಳತೊಡಗಿದಳು–"ನೋಡಣ್ಣ, ನಮ್ಮ ನಾಡಿನಲ್ಲಿ ಮನೆಮನೆಗಳಲ್ಲಿ ಎಷ್ಟು ಆಶ್ರಯಹೀನರಾದ ಹೆಂಗಸರು ದೊಡ್ಡ ದೊಡ್ಡ ಗೃಹಸ್ಥರ ಮನೆಗಳಲ್ಲಿ ಪಾಲಿಸಲ್ಪಟ್ಟು ದಿನ ಕಳೆಯುತ್ತ ಇದ್ದಾರೆ. ಆದರೆ ಇಂಥ ಧನಿಕರ ಮನೆಗಳಲ್ಲಿ ಅವರುಗಳ ಆವಶ್ಯಕತೆ ಸ್ವಲ್ಪವೂ ಇರುವುದಿಲ್ಲ. ಬಡ ಹೆಂಗಸರು, ದುಡಿದು ತಿನ್ನಬೇಕಾದಂಥವರು–ಅಂಥವರ ಸ್ವಂತ ಅನ್ನ ಸಂಪಾದಿಸಿಕೊಳ್ಳುವುದಕ್ಕೆ ಈ ಧನಿಕ ಮನೆಯವರು ಅಡ್ಡ ಬರುತ್ತಾರೆ, ಅಷ್ಟೇ. ಇಂಥ ಹೆಂಗಸರು ಸಾಮಾನ್ಯ ಜನರ ಸೇವೆಯಲ್ಲಿ ನಿರತರಾದರೆ, ನಮ್ಮ ಅನಾಥಾಲಯದಂಥ ಕೆಲಸದಲ್ಲಿ...ಹಾಗೇನಾದರೂ ಆಗುವ ಪಕ್ಷದಲ್ಲಿ...." ಅರ್ಥ ಮಾಡಿಕೊಂಡೆ. ನನಗೆ ಹೇಳುವ ನೆಪದಲ್ಲಿ ಹರಿಮತಿಯ ಮೇಲೆ ಉದ್ದೇಶಿಸಿ ಈ ಭಾಷಣದ ಕಲ್ಲು ಮಳೆ. ಆಗ ನಾನು ಸುಮ್ಮನಿರದೆ "ಅಂದರೆ, ನೀನು ಮಾತ್ರ ನನ್ನ ಇಷ್ಟ ಚಪಲಗಳ ಅನುಸಾರವಾಗಿ ಹೋಗಬೇಕು. ಮತ್ತೆ ಆಶ್ರಯವಿಲ್ಲದವರು ಮಾತ್ರ ನಿನ್ನ ಆಜ್ಞೆಯ ಅನುಸಾರವಾಗಿ. ನೀನಂತೂ ಅನಾಥಾಲಯದ ಸೆಕ್ರೆಟರಿಯಾಗಬೇಕು. ಅವರುಗಳು ಅನಾಥಾಲಯದ ಸೇವಕಿಯರು. ಅದರ ಬದಲಾಗಿ ನೀನೇ ಸ್ವಂತ ಸೇವೆಯ ಕೆಲಸದಲ್ಲಿ ತೊಡಗು. ಆಗ ತಿಳಿಯುತ್ತದೆ.

ಆ ಕೆಲಸ ನಿನ್ನ ಕೈಲಿ ಸಾಗದು ಎಂದು. ಅನಾಥರನ್ನು ಕೂಡಿಸಿಡುವುದು ಸಾಧ್ಯವಾಗಬಹುದು, ಆದರೆ ಅವರ ಸೇವೆಮಾಡುವುದು ಸುಲಭವಲ್ಲ. ನಿನ್ನ ನಿರ್ಬಂಧ ಕೇಳ್ವಿಕೆಯನ್ನು ನಿನ್ನ ಬಳಿಯೇ ಕೇಳಿಕೊ. ಬೇರೊಬ್ಬರ ಬಳಿಯಲ್ಲ" ಎಂದು ಒಂದೇ ಸಮನೆ ಹೇಳಿಬಿಟ್ಟೆ.

ನನ್ನದು ಕ್ಷಾತ್ರ ಸ್ವಭಾವ. ಮಧ್ಯೆ ಮಧ್ಯೆ "ಅಕ್ರೋಧೇನ ಜಯೇತ್ ಕ್ರೋಧಮ್" ಎಂಬುದನ್ನು ಮರೆತುಬಿಡುತ್ತೇನೆ. ಅದರ ಫಲವೇನಾಯಿತೆಂದರೆ, ಅಮಿಯಾ ಅತ್ತೆಯ ಪರಿವಾರದವಳೇ ಆದ ಇನ್ನೊಬ್ಬ ಹೆಂಗಸನ್ನು ಕರೆತಂದು ಮುಂದೆ ನಿಲ್ಲಿಸಿದಳು. ಅವಳ ಹೆಸರು ಪ್ರಸನ್ನೆ. ಅವಳನ್ನ ನನ್ನ ಕಾಲ ಬಳಿ ಕೂಡಿಸಿ "ಅಣ್ಣನ ಕಾಲು ನೋಯುತ್ತದಂತೆ. ನೀನು ಸ್ವಲ್ಪ ಒತ್ತು" ಎಂದು ಹೇಳಿದಳು. ಅವಳು ಬಹಳ ನಮ್ರತೆಯಿಂದ ನಿಧಾನವಾಗಿ ಒತ್ತಲು ತೊಡಗಿದಳು. ಈ ನತದೃಷ್ಟ ಅಣ್ಣನು ಈಗ ಯಾವ ಬಾಯಿಂದ ತನ್ನ ಕಾಲಲ್ಲಿ ಯಾವ ಬಗೆಯ ನೋವೂ ಇಲ್ಲವೆಂದು ಹೇಗೆ ಹೇಳಬಲ್ಲ? ಈ ಬಗೆಯಾಗಿ ಕಾಲೊತ್ತುವಿಕೆಯಿಂದ ಕೇವಲ ತನ್ನನ್ನು ಅಪಮಾನ ಮಾಡಲಾಗುತ್ತಿದೆಯೆಂದು ಹೇಗೆತಾನೇ ತಿಳಿಸಬಲ್ಲ? ಮನದಲ್ಲೇ ಅಂದುಕೊಂಡೆ–ರೋಗಶಯ್ಯೆಯಲ್ಲಿನ್ನು ರೋಗಿಗೆ ಸ್ಥಳವಿಲ್ಲ. ಇದಕ್ಕಿಂತಲೂ ನವವಂಗ ದೇಶದ ಸೋದರತಿಲಕದ ಸಮಿತಿಯ ಸಭಾಪತಿಯಾಗುವುದೇ ಚೆನ್ನ...ಬೀಸಣಿಗೆಯ ಗಾಳಿ ಕ್ರಮೇಣ ನಿಂತುಹೋಗುತ್ತ ಬಂತು. ಹರಿಮತಿಯು ಸ್ಪಷ್ಟವಾಗಿ ಅಸ್ತ್ರವು ತನ್ನ ಕಡೆಯೇ ಗುರಿಯಿಟ್ಟದ್ದು ಎಂದು ಅರಿತುಕೊಂಡುಬಿಟ್ಟಳು. ಏಕೆಂದರೆ ಪ್ರಸನ್ನೆಯನ್ನು ಕರೆತಂದು ಹರಿಮತಿಯನ್ನು ಓಡಿಸುವುದು, ಕಂಟಕೇನೈವ ಕಂಟಕಮ್...ಸ್ವಲ್ಪ ಹೊತ್ತಾದ ಮೇಲೆ ಬೀಸಣಿಗೆಯನ್ನು ನೆಲದ ಮೇಲಿಟ್ಟು ಅವಳು ಎದ್ದು ನಿಂತಳು. ನನ್ನ ಕಾಲ ಬಳಿ ತಲೆಯನ್ನು ತಾಗಿಸಿ ಪ್ರಣಾಮಮಾಡಿ ನಿಧಾನವಾಗಿ ಎರಡು ಕಾಲುಗಳ ಮೇಲೂ ಮೃದುವಾಗಿ ಕೈಯಾಡಿಸಿ ಹೊರಟುಹೋದಳು.

ಮತ್ತೆ ನಾನು ಗೀತೆಯನ್ನು ತೆರೆಯಬೇಕಾಯಿತು. ಆದರೂ ಶ್ಲೋಕಗಳ ನಡುವಣಿಂದ ಬಾಗಿಲ ಕಂಡಿಯ ಕಡೆ ದೃಷ್ಟಿಹಾಯಿಸಿ ನೋಡಲೆತ್ನಿಸಿದೆ. ಪ್ರಯೋಜನವಿಲ್ಲ. ಆ ಹಿಂದೆ ಕಂಡುಬಂದಿದ್ದ ಭೀರುವಾದ ನೆರಳು ಮತ್ತೆ ಕಾಣಬರಲಿಲ್ಲ, ಎಲ್ಲೂ. ಅವಳ ಬದಲಾಗಿ ಪ್ರಸನ್ನೆಯು ಆಗಾಗ ಬರುತ್ತಾಳೆ. ಪ್ರಸನ್ನೆಯ ದೃಷ್ಟಾಂತ ನೋಡಿ ಅತ್ತೆಯ ಆಶ್ರಿತರಾದ ಇನ್ನೂ ಇಬ್ಬರು ಮೂವರು ಹುಡುಗಿಯರು ಅಮಿಯಾಳ ಪ್ರಖ್ಯಾತ ದೇಶಭಕ್ತ ಅಣ್ಣನ ಸೇವೆಯಲ್ಲಿ ನಿರತರಾದರು. ಒಬ್ಬರಾದ ಮೇಲೊಬ್ಬರಂತೆ ಸರದಿಮಾಡಿಕೊಂಡು ನನಗೆ ಸದಾ ಸೇವೆ ಮಾಡುತ್ತಿರಬೇಕೆಂದು ಅಮಿಯಾ ವ್ಯವಸ್ಥೆ ಮಾಡಿದಳು. ಆಮೇಲೆ ಒಂದು ದಿನ ಸಮಾಚಾರ ತಿಳಿಯಿತು, ಹರಿಮತಿಯು ಒಂದು ದಿನ ಯಾರಿಗೂ ಏನೂ ಹೇಳದೆ ಕಲಿಕತ್ತೆಯನ್ನು ಬಿಟ್ಟು ತನ್ನ ಹಳ್ಳಿಕೊಂಪೆಯ ಮನೆಗೆ ಹೊರಟುಹೋಗಿದ್ದಳು.

–ಇಷ್ಟು ನನ್ನ ಕಥೆ.

ತಿಂಗಳಿನ ಹನ್ನೆರಡನೇ ತಾರೀಖು ನನ್ನ ಸಂಪಾದಕ ಗೆಳೆಯ ಬಂದದ್ದೇ "ಇದೇನಿದು ತಮಾಷೆ! ಚೆನ್ನಾಯಿತು ಬಿಡು. ಬರೇ ಹುಡುಗಾಟಿಕೆ ಅಂತ ಕಾಣುತ್ತದೆ, ಇದೇನೇ ನಿನ್ನ ಅತ್ಯಂತ ಕಹಿಯಾದ ಅನುಭವದ ಕಥೆ?" ಎಂದ.

ನಾನು ನಕ್ಕು "ಯಾಕೆ, ದಸರೆಯ ಬಜಾರಿನಲ್ಲಿ ಇದಕ್ಕೆ ಬೆಲೆಯಿಲ್ಲವೆ?" ಎಂದೆ.

"ಎಂದೆಂದಿಗೂ ಇಲ್ಲ. ಇದು ಪೂರ್ತಿಯಾಗಿ ಅತಿ ಸಾಮಾನ್ಯ ದರ್ಜೆಯ ಬರೆಹ."

ಸಂಪಾದಕನ ತಪ್ಪಲ್ಲ. ಜೈಲು ವಾಸವಾದ ಮೇಲಿಂದಲೂ ನನ್ನ ಕಂಬನಿ ಅಂತರಂಗದೊಳಗೇ ಹರಿದುಕೊಂಡು ಹೋಗುತ್ತಿದೆ. ಜನರು ಹೊರಗಿನಿಂದ ನನ್ನನ್ನು ಅತ್ಯಂತ ಲಘುಸ್ವಭಾವದ ಆಳೆಂದು ತಿಳಿದುಕೊಂಡಿದ್ದಾರೆ. ಕಥೆಯನ್ನು ನನಗೆ ಹಿಂದಕ್ಕೆ ಕೊಡಲಾಯಿತು. ಸರಿಯಾಗಿ ಅದೇ ಘಳಿಗೆ ಬಂದ ಅನಿಲ, ನನ್ನನ್ನು ಕಂಡು "ಬಾಯಲ್ಲಿ ಏನೋ ಹೇಳಲಿಕ್ಕೆ ಆಗದು ನನಗೆ. ಈ ಕಾಗದ ಓದಿ" ಎಂದ.

ಕಾಗದದಲ್ಲಿ ಅಮಿಯಾಳನ್ನು, ಅವನ ಆರಾಧ್ಯ ದೇವಿಯನ್ನು, ಯುಗ ಲಕ್ಷ್ಮಿಯನ್ನು ಲಗ್ನವಾಗಲು ಇಷ್ಟ ತೋರಿಸಿಕೊಂಡಿದ್ದಾನೆ. ಅಮಿಯಾಳಿಗೆ ಅಸಮ್ಮತಿಯಿಲ್ಲವೆಂದೂ ತಿಳಿಸಿದ್ದಾನೆ.

ಆಗ ಅವನಿಗೆ ಅಮಿಯಾಳ ಜನನದ ಸಂಗತಿ ಹೇಳಬೇಕಾಯಿತು. ಸಾಧಾರಣವಾಗಿ ಹೇಳಲು ತಯಾರಿರುತ್ತಿರಲಿಲ್ಲ. ಆದರೆ ಗೊತ್ತಿತ್ತು. ಹೀನ ಜಾತಿಯವರ ಮೇಲೆ ಅನಿಲನಿಗೆ ಶ್ರದ್ಧಾಪೂರ್ಣವಾದ ಅನುಕಂಪವಿತ್ತು. ಅದನ್ನು ಪ್ರಕಟಮಾಡುತ್ತಿದ್ದ ಆಗಾಗ. ನಾನವನಿಗೆ "ನೋಡಪ್ಪ, ಪೂರ್ವಿಕರ ಕಳಂಕ ಜನ್ಮದ ಪ್ರವೇಶದ್ವಾರದಲ್ಲೇ ಕರಗಿಹೋಗುತ್ತದೆ. ಅದನ್ನು ಅಮಿಯಾಳ ಬದುಕಿನ ರೀತಿಯಲ್ಲೇ ನೀನು ಕಂಡಿದ್ದೀಯೆ. ಅವಳೊಂದು ಕಮಲ...ಕೆಸರಿನ ಕಲೆ ಕೂಡ ಇಲ್ಲ" ಎಂದೆ.

ನವವಂಗ ದೇಶದ ಸೋದರತಿಲಕದ ಸಭೆ ಇದಾದ ಅನಂತರ ಸೇರಲಿಲ್ಲ. ತಿಲಕ ತಯಾರಾಗಿದೆ. ಹಣೆ ಎಲ್ಲೋ ಓಡಿಹೋಗಿದೆ. ಇನ್ನೂ ಸಂಗತಿ ಕೇಳಿದೆ. ಅನಿಲನು ಕಲಿಕತ್ತೆಯನ್ನು ತೊರೆದು ಕೊಮಿಲ್ಲಾ ಜಿಲ್ಲೆಯ ಯಾವುದೋ ಊರಿನಲ್ಲಿ ಸ್ವರಾಜ್ಯ ಪ್ರಚಾರದ ಯಾವುದೋ ಒಂದು ಕೆಲಸ ಕೈಗೊಂಡಿದ್ದಾನೆ.

ಅಮಿಯಾಳು ಮತ್ತೆ ಕಾಲೇಜಿನಲ್ಲಿ ಸೇರಲು ಪ್ರಯತ್ನ ಮಾಡುತ್ತಿದ್ದಾಳೆ. ಈ ಮಧ್ಯೆ ಅತ್ತೆ ತೀರ್ಥಯಾತ್ರೆ ಮುಗಿಸಿಕೊಂಡು ಮರಳಿ ಬಂದ ಮೇಲೆ ಶುಶ್ರೂಷೆಯ ಏಳೆಂಟು ಕೈಗಳ ಬೇಡಿಯಿಂದ ನನ್ನ ಕಾಲು, ಸದ್ಯ, ಬಿಡುಗಡೆ ಪಡೆದಿದೆ.

೧೭. ಸಂಸ್ಕಾರ

ಚಿತ್ರಗುಪ್ತನು ಪಾಪಿಗಳಿಗೆ ಅಗೋಚರವಾಗಿರುವ ಅದೆಷ್ಟೋ ಪಾಪಗಳ ಲೆಕ್ಕವನ್ನು ದೊಡ್ಡ ದೊಡ್ಡ ಅಕ್ಷರಗಳಲ್ಲಿ ತನ್ನ ಖಾತೆಯಲ್ಲಿ ಬರೆದಿಟ್ಟಿರುತ್ತಾನೆ. ಅಂಥ ಪಾಪವೊಂದನ್ನೇ ನಾನು ಮಾಡಿದ್ದೇನೆ. ಅದನ್ನು ಪಾಪವೆಂದು ತಿಳಿದುಕೊಂಡೂ ಇದ್ದೇನೆ. ಬೇರಾರಿಗೂ ಗೊತ್ತಿಲ್ಲ. ನಾನೀಗ ಬರೆಯುತ್ತಿರುವ ಕಥೆ ಅದನ್ನು ಕುರಿತದ್ದೆ. ಚಿತ್ರಗುಪ್ತನ ಮುಂದೆ ಜವಾಬು ಕೊಡಬೇಕಾದ ಸಂದರ್ಭ ಬರುವುದಕ್ಕೆ ಮೊದಲೇ ಪೂರ್ತಿಯಾಗಿ ಒಪ್ಪಿಕೊಂಡುಬಿಟ್ಟರೆ ಅಪರಾಧ ಸ್ವಲ್ಪ ಹಗುರವಾಗಬಹುದು.

ಸಂಗತಿ ನಡೆದದ್ದು ಮೊನ್ನೆ ಶನಿವಾರ ರಾತ್ರಿ. ಆ ದಿನ ನಮ್ಮ ಕೇರಿಯ ಜೈನ ಮಂದಿರದಲ್ಲಿ ಯಾವುದೋ ಒಂದು ಉತ್ಸವ. ನನ್ನ ಹೆಂಡತಿ ಕಾಳಿಕಾಳನ್ನು ಕರೆದುಕೊಂಡು ಮೋಟರಿನಲ್ಲಿ ಹೊರಟಿದ್ದೆ. ಸಂಜೆ ನನ್ನ ಗೆಳೆಯ ನಯನಮೋಹನನ ಮನೆಯಲ್ಲಿ ಚಹಾಗೆ ಕರೆ ಬಂದಿತ್ತು.

ನನ್ನ ಹೆಂಡತಿಗೆ ಕಾಳಿಕಾ ಎಂಬ ಹೆಸರಿಟ್ಟದ್ದು ನನ್ನ ಮಾವನ ಮನೆಯಲ್ಲೆ. ನನ್ನ ಜವಾಬುದಾರಿಯೇನಿಲ್ಲ ಅದರಲ್ಲಿ. ಹೆಸರಿಗೆ ಅನ್ವರ್ಥವಾದ ಸ್ವಭಾವ ಅವಳಿಗಿಲ್ಲ. ಅವಳ ಅಭಿಪ್ರಾಯ ಆಕ್ಷೇಪಣೆಗಳೆಲ್ಲ ಪರಿಸ್ಫುಟವಾದುವೇ. ಬಡಾ ಬಜಾರಿನಲ್ಲಿ ವಿದೇಶೀ ಬಟ್ಟೆಗಳ ವಿರುದ್ಧ ಪಿಕೆಟಿಂಗ್ ಆರಂಭವಾಗಿದ್ದಾಗ, ಸ್ವಯಂಸೇವಕ ದಳದವರು ಆಕೆಯ ಮೇಲೆ ಭಕ್ತಿಯಿಂದ ಧ್ರುವವ್ರತಾ ಎಂಬ ಹೆಸರಿಟ್ಟಿದ್ದರು. ನನ್ನ ಹೆಸರು ಗಿರೀಂದ್ರ. ದಳದವರು ನನ್ನನ್ನ ನನ್ನ ಹೆಂಡತಿಯ ಗಂಡ ಎಂಬುದಾಗಿ ಅರಿತಿದ್ದರು. ನನ್ನ ಹೆಸರಿನ ಸಾರ್ಥಕತೆಯ ಬಗ್ಗೆ ನನಗೆ ಅಷ್ಟಾಗಿ ಯೋಚನೆಯಿಲ್ಲ. ದೇವರ ದಯೆಯಿಂದ ಪಿತ್ರಾರ್ಜಿತ ಆಸ್ತಿ, ಕೀರ್ತಿಗಳ ದೆಸೆಯಿಂದ ನನಗೂ ಸ್ವಲ್ಪ ಸಾರ್ಥಕತೆಯಿದೆ. ಅದರ ಕಡೆ–ಚಂದಾ ವಸೂಲು ಮಾಡುವ ಸಮಯದಲ್ಲಾದರೂ,– ಈ ದಳದವರ ಗಮನ ಬೀಳದೆ ಇರುವದಿಲ್ಲ.

ಹೆಂಡತಿಯ ಸಂಗಡ ಗಂಡನ ಸ್ವಭಾವದ ಹೊಂದಾಣಿಕೆಯಿಲ್ಲದಿದ್ದರೆ ದಾಂಪತ್ಯದ ಹೊಂದಾಣಿಕೆ ಚೆನ್ನಾಗಿ ಆಗುತ್ತದೆ. ಒಣ ಮಣ್ಣಿನ ಸಂಗಡ ನೀರಿನ ಝರಿಯಂತೆ. ನನ್ನ ಪ್ರಕೃತಿ ಅತ್ಯಂತ ಸಡಿಲವಾದುದು. ಯಾವುದನ್ನೂ ಹೆಚ್ಚಾಗಿ ಹಿಡಿದಿಟ್ಟುಕೊಳ್ಳಲಾರೆ. ನನ್ನ ಹೆಂಡತಿಯ ಪ್ರಕೃತಿಯೋ ಅತ್ಯಂತ ಬಿಗಿ. ಏನನ್ನು

ಹಿಡಿದರೂ ಸ್ವಲ್ಪದರಲ್ಲಿ ಬಿಡುವವಳಲ್ಲ. ನಮ್ಮಿಬ್ಬರಲ್ಲಿನ ಈ ವ್ಯತ್ಯಾಸದ ಗುಣವೇ ನಮ್ಮ ಸಂಸಾರದ ಶಾಂತಿರಕ್ಷಣೆಯನ್ನು ಮಾಡಿದೆ.

ಕೇವಲ ಒಂದು ಸ್ಥಳದಲ್ಲಿ ನಮ್ಮ ನಡುವೆ ಸಾಮಂಜಸ್ಯವಾಗದೆ ಹೋಯಿತು- ಆಮೇಲೆ ಸಹ ಅದು ಹಾಗೇ ಉಳಿದುಹೋಯಿತು. ಕಾಳಿಕಾ ನನಗೆ ಸ್ವದೇಶಿಯಲ್ಲಿ ವಿಶ್ವಾಸವಿಲ್ಲ ಎಂದುಕೊಂಡಿದ್ದಳು. ತನ್ನ ಈ ಬಗೆಯ ನಂಬಿಕೆಯ ಮೇಲೆ ಅವಳಿಗೆ ದೃಢ ವಿಶ್ವಾಸ. ಅದಕ್ಕೇ ಎಷ್ಟೋ ಬಾರಿ ನನ್ನ ಆಂತರಿಕವಾದ ದೇಶಭಕ್ತಿಯ ಬಗ್ಗೆ ರುಜುವಾತು ಕೊಟ್ಟಿದ್ದರೂ, ಅದು ಆಚರಣೆಯಲ್ಲಂತೂ ಇಲ್ಲದಿದ್ದುದರಿಂದ ಆ ದೇಶಭಕ್ತಿ ಸುಳ್ಳೆಂದೇ ಅವಳ ವಾದ.

ಕಿರಿತನದಿಂದಲೂ ನಾನು ಪುಸ್ತಕಪ್ರಿಯ. ಹೊಸ ಪುಸ್ತಕದ ಹೆಸರು ಕೇಳಿದೊಡನೆಯೇ ಹೋಗಿ ಕೊಳ್ಳುತ್ತಿದ್ದೆ. ಕೊಳ್ಳುವುದೊಂದೇ ಅಲ್ಲದೆ ಅದನ್ನ ಓದಿ ಮುಗಿಸುತ್ತಲೂ ಇದ್ದೆ ಎಂದು ನನ್ನ ಶತ್ರುವಾದಂಥವನೂ ಒಪ್ಪಿಕೊಳ್ಳುತ್ತಾನೆ. ಓದಿದ್ದು ಸಾಲದೆ ಅದರ ಬಗ್ಗೆ ಬೇರೆಯವರೊಂದಿಗೆ ತರ್ಕ ವಿತರ್ಕ ಮಾಡದೆ ಬಿಡುತ್ತಿರಲಿಲ್ಲ. ಇಂತಹ ಚರ್ಚೆಗಳಿಗೆ ಬೇಸತ್ತ ಗೆಳೆಯರು ನನ್ನತ್ತ ಬರುವುದನ್ನು ತೊರೆದಿದ್ದರೂ ಕೊನೆಗೆ ಒಬ್ಬ ಗೆಳೆಯ ಮಾತ್ರ ಇನ್ನೂ ಉಳಿದುಕೊಂಡಿದ್ದಾನೆ. ಅವನೇ ವನವಿಹಾರಿ. ಅವನೊಬ್ಬನೇ ನನ್ನ ಸಂಗಡ ಭಾನುವಾರದ ದಿನ ಹರಟೆ ಕೊಚ್ಚುವವನು. ನಾನವನಿಗೆ ಕೋಣ ಬಿಹಾರಿ ಎಂದು ಹೆಸರಿಟ್ಟಿದ್ದೇನೆ. ಮಾಳಿಗೆಯ ಮೇಲೆ ಕೂತು ಅವನೊಡನೆ ಹರಟೆ ಹೊಡೆಯುತ್ತ ಹೊಡೆಯುತ್ತ ಒಂದೊಂದು ದಿನ ರಾತ್ರಿ ಎರಡು ಘಂಟೆ ಹೊಡೆದು ಹೋಗುತ್ತದೆ. ನಾವು ಹೀಗೆ ಹರಟೆಯ ಅಮಲಿನಲ್ಲಿ ಮುಳುಗಿದಂಥ ದಿನಗಳು ನಮಗೆ ಒಳ್ಳೆಯದಾಗುವುದಿಲ್ಲ. ಆಗಿನ ಕಾಲದ ಪೊಲೀಸರು ಯಾರ ಮನೆಯಲ್ಲಾದರೂ ಭಗವದ್ಗೀತೆಯನ್ನು ಕಂಡರೆ ಸಾಕು, ಸೆಡಿಷನ್‌ಗೆ (ರಾಜದ್ರೋಹ) ಪ್ರಯಾಣ ಪಡೆಯುತ್ತಿದ್ದರು. ನನ್ನನ್ನು ಅವರು ಶ್ಯಾಮವರ್ಣ ಲೇಪಿಸಿಕೊಂಡ ಬಿಳಿಯ ದ್ವೈಪಾಯನನೆಂಬಂತೆ ಎಣಿಸುತ್ತಿದ್ದರು. ಸರಸ್ವತಿಯ ಬಣ್ಣ ಬಿಳಿಯದೆಂದೇ ಆ ದೇವತೆಗೆ ದೇಶಭಕ್ತರಿಂದ ಪೂಜೆ ಸಲ್ಲುವುದು ಕಷ್ಟವಾಗಿತ್ತು. ಯಾವ ಸರೋವರದಲ್ಲಿ ಆಕೆಯ ಶ್ವೇತಪದ್ಮ ಅರಳುವುದೋ ಆ ಸರೋವರದ ನೀರಿನಿಂದ ದೇಶದ ಹಣೆಯನ್ನು ಸುಡುತ್ತಿರುವ ಬೆಂಕಿ ಆರಲಾರದು, ಇನ್ನೂ ಏರುತ್ತದೆ ಎಂಬ ಮಾತೂ ಹುಟ್ಟಿಕೊಂಡಿತ್ತು.

ನನ್ನ ಸಹಧರ್ಮಿಣಿಯ ಮೇಲುಪಂಕ್ತಿ ಮತ್ತು ನಿರಂತರವಾದ ಬೋಧನೆಗಳನ್ನೂ ನಿರಾಕರಿಸಿ ನಾನು ಖದ್ದರನ್ನು ಧರಿಸುವ ಮೋಹದಲ್ಲಿ ಬೀಳಲಿಲ್ಲ. ಖದ್ದರಿನಲ್ಲಿ ದೋಷವಿದೆಯೆಂಬ ಕಾರಣದಿಂದಲ್ಲ. ಅದರಲ್ಲೇನೂ ಸೊಗಸಿಲ್ಲ ಎಂಬುದೂ ಅಲ್ಲ. ನಾನು ವೇಷಭೂಷಗಳಲ್ಲಿ ಶೋಕಿಯವನಂತೂ ಅಲ್ಲ. ಅದಕ್ಕೆ ವ್ಯತಿರಿಕ್ತವೇ, ಪೂರ್ತಿಯಾಗಿ. ಸ್ವದೇಶೀ ಚಳವಳಿಯ ವಿರುದ್ಧವಾಗಿ ನಾನೆಷ್ಟೋ ಅಪರಾಧ ಮಾಡಿರಬಹುದು-ಆದರೆ ಶುಭ್ರತೆ ಮಾತ್ರ ಅದಗಲ್ಲೊಂದಲ್ಲ. ಕೊಳಕಾದ ಒರಟಾದ

ಅರಿವೆಯೇ ನನ್ನ ಉಡುಪು. ಅಸ್ತವ್ಯಸ್ತವಾಗಿ ಬಟ್ಟೆ ಹಾಕುವುದೇ ನನ್ನ ಅಭ್ಯಾಸ. ಕಾಳಿಕಾಳ ಭಾವನೆಗಳು ಬದಲಾವಣೆಯಾಗುವ ಪೂರ್ವದಲ್ಲಿ ಚೀಣಾ ಬಜಾರಿನಲ್ಲಿ ತಯಾರಾಗುವ ಒರಟು ಬೂಟನ್ನು ಧರಿಸುತ್ತಿದ್ದೆ. ಅದನ್ನು ನಿತ್ಯವೂ ಕರಿಪಾಲೀಷು ಹಾಕುವುದನ್ನ ಮರೆತು ಹಾಗೇ ಕಾಲಿಗೆ ಮೆಟ್ಟಿಕೊಂಡು ಹೋಗುತ್ತಿದ್ದೆ. ಕಾಲುಚೀಲ ಹಾಕಿಕೊಳ್ಳುವುದಕ್ಕೇ ಬೇಸರ. ಷರ್ಟು ಹಾಕದೆ ಬರೇ ಜುಬ್ಬಾವನ್ನೇ ಧರಿಸುತ್ತಿದ್ದೆ. ಅದರಲ್ಲೇ ನನಗೆಷ್ಟೋ ಆರಾಮ. ಆ ಜುಬ್ಬಾದಲ್ಲೂ ಒಂದೆರಡು ಗುಂಡಿಗಳಿಲ್ಲದಿದ್ದರೂ ನನಗೆ ಲಕ್ಷ್ಯವಿರುತ್ತಿರಲಿಲ್ಲ. ಇತ್ಯಾದಿ ಕಾರಣಗಳಿಂದ ಕಾಳಿಕಾಳ ಸಂಗಡ ನನ್ನ ಸಂಪೂರ್ಣ ವಿಚ್ಛೇದವಾಗುವ ಹೆದರಿಕೆಯೂ ಆಗಿತ್ತು.

ಅವಳು ಆಗಾಗ "ನೋಡಿ, ನಿಮ್ಮ ಜೊತೆಯಲ್ಲಿ ಎಲ್ಲಿ ಹೊರಗಡೆ ಹೋಗಲಿಕ್ಕೂ ನನಗೆ ನಾಚಿಗೆಯಾಗುತ್ತದೆ" ಎನ್ನುತ್ತಿದ್ದಳು. ನಾನು ಅದಕ್ಕೆ "ನನ್ನ ಜೊತೆಯಲ್ಲೇಕೆ ಬರಬೇಕು? ನನ್ನನ್ನು ಬಿಟ್ಟು ನೀನೊಬ್ಬಳೇ ಹೊರಡಬಹುದಲ್ಲ?" ಎಂದು ಉತ್ತರ ಕೊಡುತ್ತಿದ್ದೆ.

ಇಂದು ಆ ಯುಗ ಬದಲಾಯಿಸಿದೆ. ಆದರೆ ನನ್ನ ಅದೃಷ್ಟದ ಬದಲಾವಣೆಯಾಗಿಲ್ಲ. ಈಗಲೂ ಕಾಳಿಕಾ ನನ್ನನ್ನು ಕಂಡು "ನಿಮ್ಮ ಜೊತೆಯಲ್ಲಿ ಹೋಗುವುದಕ್ಕೆ ನಾಚಿಗೆಯಾಗುತ್ತದೆ" ಎಂದೇ ಹೇಳುತ್ತಾಳೆ. ಹಿಂದೆ ಅವಳು ಯಾವ ದಳದಲ್ಲಿದ್ದಳೋ ನಾನು ಅದರಲ್ಲಿ ಸೇರಿರಲಿಲ್ಲ. ಇಂದು ಯಾವ ದಳಕ್ಕೆ ಸೇರಿದ್ದಾಳೋ ಅದರ ಪದ್ಧತಿಯನ್ನೂ ನಾನು ಅಂಗೀಕಾರ ಮಾಡಿಲ್ಲ. ಈ ಕಾರಣದಿಂದ ನನ್ನ ದೆಸೆಯಿಂದಾಗಿ ನನ್ನ ಹೆಂಡತಿಗೆ ಆಗುತ್ತಿದ್ದ ನಾಚಿಗೆಯಂತೂ ಹಾಗೇ ಉಳಿಯಿತು. ಇದು ನನ್ನ ಸ್ವಭಾವದ ದೋಷದಿಂದಲೇ. ಯಾವ ದಳವೇ ಆಗಿರಲಿ, ಬೂಟಾಟಿಕೆ ಮಾಡುವುದು ನನ್ನಿಂದ ಸಾಧ್ಯವಿಲ್ಲ. ಸಂಕೋಚವಾಗುತ್ತದೆ. ಬೇರೆಯವರ ಭಿನ್ನ ಅಭಿಪ್ರಾಯಗಳನ್ನು ಸಹನೆ ಮಾಡಿಕೊಂಡು ಸುಮ್ಮನಿರುವಂಥ ಹೆಂಗಸಲ್ಲ, ಕಾಳಿಕಾ. ಬೆಟ್ಟದಿಂದ ಧುಮುಕುವ ನೀರಿನ ಝರಿ ದಪ್ಪನೆಯ ಕಲ್ಲನ್ನು ಬಾರಿಬಾರಿಗೂ ಸುತ್ತಿ ಸುತ್ತಿ ಮೇಲೆ ಹರಿದು ಬಿರುಸಾಗಿ ಹೊಡೆಯುತ್ತ ಎಳೆದುಕೊಂಡು ಹೋಗಲು ವೃಥಾ ಶ್ರಮಿಸುತ್ತಿರುವಂತೆ ಭಿನ್ನ ರುಚಿಯಿರುವವರನ್ನು ಕೂತಿರುವಾಗ, ಓಡಾಡುವಾಗ, ಹಗಲು ರಾತ್ರಿ ಸುಮ್ಮನೆ ಎಳೆಯುತ್ತಿರಲಾಗದಿದ್ದರೆ ಕಾಳಿಕಾಗೆ ಹೊತ್ತು ಕಳೆಯದು. ವ್ಯತ್ಯಾಸ ಎಂಬ ಹೆಸರಿನ ವಸ್ತುವಿನ ಸ್ಪರ್ಶಮಾತ್ರದಿಂದ ಅವಳ ನರ, ಸ್ನಾಯುಗಳಲ್ಲಿ ತಡೆಯಲಾಗದ ಕೆರೆತ ಶುರುವಾಗುತ್ತದೆ. ಅವಳು ಸುಮ್ಮನೆ ಚಡಪಡಿಸುತ್ತಿರುವಂತೆ ಮಾಡುತ್ತದೆ.

ಮೊನ್ನೆ ಚಹಾ ಕುಡಿಯಲು ಗೆಳೆಯನ ಮನೆಗೆ ಹೋಗುವ ಮೊದಲು ನನ್ನ ಖದ್ದರಲ್ಲದ ಉಡುಪನ್ನು ಕಂಡು ಸಾವಿರದೊಂದು ಸಲ ಆಡಿಕೊಂಡು ಆಡಿಕೊಂಡು ಅವಳ ಕೊರಳ ದನಿಯಲ್ಲಿ ಮಾಧುರ್ಯವುಳಿಯದೆ ಹೋಯಿತು.

ಬುದ್ಧಿ, ಅಭಿಮಾನಗಳಿರುವವನು ಯಾರೂ ಇಂಥ ಬೈಗಳನ್ನು ಮರುಮಾತಾಡದೆ ಸಹಿಸಿಕೊಂಡಿರಲಾರ. ಸ್ವಭಾವದ ಉದ್ರೇಕವು ಎದುರುವಾದಿಸುವ ವ್ಯರ್ಥ ಪ್ರಯತ್ನಕ್ಕೊ ಉತ್ಸಾಹಕೊಡುತ್ತದೆ. ಆದ್ದರಿಂದ ನಾನೂ ಸಾವಿರದೊಂದು ಸಲ ಕಾಳಿಕಾಗೆ ಅವಳಷ್ಟೇ ಬಿರುಸಾಗಿ ಹೇಳಿದೆ–"ನೋಡು, ಈ ಹೆಂಗಸರು ದೇವರು ಕೊಟ್ಟ ಕಂಗಳ ಮೇಲೆ ಕರಿಯ ಬಣ್ಣದ ಒರಟು ಬಟ್ಟೆಯ ಮುಸುಗನ್ನು ಎಳೆದುಕೊಂಡು ಆಚಾರದ ಸಂಗಡ ಸೆರಗನ್ನು ಗಂಟು ಕಟ್ಟಿಕೊಂಡು ನಡೆಯುತ್ತಾರೆ. ತಿಳಿವಿಗಿಂತಲೂ ತೋರಿಕೆಗೇ ಬೆಲೆ. ಬದುಕಿನಲ್ಲಿ ಎಲ್ಲ ವ್ಯವಹಾರಗಳನ್ನೂ ಅಭಿರುಚಿ ಮತ್ತು ಬುದ್ಧಿಗಳ ಕ್ಷೇತ್ರದಿಂದ ಎಳೆದು ಸಂಸ್ಕಾರದ ಜನಾನಾದಲ್ಲಿ ಪರದೆ ಹಾಕಿ ಕೂರಿಸಿಡದೆ ಹೋದರೆ ಅವರಿಗೆ ಬದುಕಿದ ಹಾಗೇ ಇಲ್ಲ. ನಮ್ಮ ಈ ಆಚಾರ ಜೀರ್ಣವಾದ ನಾಡಿನಲ್ಲಿ ಖದ್ದರು ಧರಿಸುವುದೂ ಇದೇ ರೀತಿಯಾದ ಅರಿಶಿನ, ಕುಂಕುಮ, ತಿಲಕ ಹಚ್ಚಿಕೊಂಡಿರುವ ಸಂಪ್ರದಾಯದಂತೆಯೇ ಒಂದು ಪದ್ಧತಿಯಾಗಿರುವುದರಿಂದಲೇ ಹೆಂಗಸರಿಗೆ ಇಷ್ಟೊಂದು ಆನಂದ, ಗೊತ್ತೇ?"

ಕಾಳಿಕಾ ಇದಕ್ಕೇನೂ ಜವಾಬು ಹೇಳಲಾರದೆ ಮುಖ ಕೆಂಪು ಮಾಡಿಕೊಂಡು ಸುಮ್ಮನಿದ್ದಳು. ಆ ಮೇಲೆ ತತ್‌ಕ್ಷಣ ಮನಸ್ಸಿಗೆ ತೋಚಿದ ಹಾಗೆ ಆಡಿಕೊಳ್ಳತೊಡಗಿದಳು. ಅವಳು ಮಾಡುತ್ತಿದ್ದ ಸದ್ದು ಕೇಳಿ ಮಗ್ಗುಲ ಮನೆಯ ಮನೆಗೆಲಸದವಳೊಬ್ಬಳು ಬಹುಶಃ, ಹೆಂಡತಿಗೆ ತಕ್ಕಷ್ಟು ಒಡವೆಗಳನ್ನು ಕೊಡದೆ ಮೋಸಮಾಡಿರಬೇಕೆಂದು ಊಹಿಸಿರಬೇಕು. ಕಾಳಿಕಾ "ನೋಡಿ, ಖದ್ದರನ್ನು ನೀವು ಅರ್ಥಮಾಡಿಕೊಂಡಿಲ್ಲ. ಅದನ್ನು ಧರಿಸುವುದರಿಂದಾಗುವ ಶುಚಿತ್ವ ಯಾವತ್ತು ಗಂಗಾ ಸ್ನಾನಕ್ಕೆ ಸಮಾನವಾಗುತ್ತೋ ದೇಶ ಆವಾಗ ಬದುಕುತ್ತದೆ. ವಿಚಾರ ಯಾವಾಗ ಸ್ವಭಾವದ ಸಂಗಡ ಒಂದಾಗುತ್ತೋ ಆವಾಗಲೇ ಅದು ಆಚಾರವಾಗುತ್ತದೆ. ಚಿಂತನೆ ಯಾವಾಗ ಆಕಾರದಲ್ಲಿ ಕಟ್ಟಿಹಾಕಲ್ಪಡುತ್ತೋ ಆಗಲೇ ಅದು ಸಂಸ್ಕಾರವಾಗುತ್ತದೆ, ಆಗ ಮನುಷ್ಯ ಕಣ್ಣು ಮುಚ್ಚಿಕೊಂಡೇ ಕೆಲಸ ಮಾಡಿಕೊಂಡು ಹೋಗಬಹುದು. ಕಣ್ಣು ತೆಗೆಯಲು ಹೆದರಿಕೆಯೂ ಇರುವುದಿಲ್ಲ" ಎಂದಳು ತನ್ನದೇ ಆದ ಧೋರಣೆಯಲ್ಲಿ.

ಈ ಮಾತುಗಳೆಲ್ಲ ಅಧ್ಯಾಪಕ ನಯನಮೋಹನರ ಆಪ್ತ ವಾಕ್ಯಗಳು. ಅವುಗಳಿಂದ ಕೊಟೇಶನ್ ಮಾರ್ಕು ಮಾತ್ರ ಸವೆದುಹೋಗಿದೆ. ಕಾಳಿಕಾ ಅವುಗಳನ್ನು ಸ್ವಂತ ಬುದ್ಧಿಯ ಮಾತುಗಳೆಂದು ತಿಳಿದಿದ್ದಾಳೆ.

'ಮೂಗನಿಗೆ ಶತ್ರುವಿಲ್ಲ' ಎಂಬ ಮಾತು ಯಾವನೋ ಮಹಾತ್ಮ ಹೇಳಿದ್ದಾನೆ. ಬಹುಶಃ ಅವನಿಗೆ ಮದುವೆಯಾಗಿರಲಿಲ್ಲವೇನೋ! ನಾನು ಜವಾಬೇನೂ ಕೊಡದೇ ಇದ್ದುದನ್ನು ಕಂಡು ಕಾಳಿಕಾಳಿಗೆ ಇಮ್ಮಡಿ ಕೋಪ ಬಂತು. ಅವಳ ನುಡಿಯ

ಭಾರವೂ ಇಮ್ಮಡಿಯಾಯಿತು. "ಜಾತಿ ಭೇದವನ್ನು ನೀವು ಬಾಯಲ್ಲಿ ಮಾತ್ರ ನಿರಾಕರಿಸುತ್ತೀರಿ. ಆದರೆ ಆಚರಣೆಯಲ್ಲಿ ಅದರ ವಿರುದ್ಧವಾಗೇನೂ ಮಾಡುವುದಿಲ್ಲ. ನಾವು ಖದ್ದರನ್ನು ಧರಿಸುತ್ತ ಆ ಭೇದದ ಮೇಲೆ ಅಖಂಡವಾದ ಬಿಳಿಯ ಬಣ್ಣವನ್ನು ಹರಡಿಬಿಟ್ಟಿದ್ದೇವೆ. ಆವರಣ ಭೇದವನ್ನು ತೊಡೆದುಹಾಕಿ ವರ್ಣಭೇದದ ತೊಗಲನ್ನೂ ಅಳಿಸಿಬಿಟ್ಟಿದ್ದೇವೆ. ಗೊತ್ತೇನು?" ಎಂದಳು. ನಾನೂ ಹೇಳಬೇಕೆಂದು ಹೊರಟಿದ್ದೆ– "ವರ್ಣಭೇದವನ್ನು ಬಾಯಲ್ಲಿ ನಿರಾಕರಿಸಿದ್ದು ನಿಜ–ಎಂದಿನಿಂದ ಅಂದರೆ, ಮುಸಲ್ಮಾನರು ಅಡಿಗೆ ಮಾಡಿದ ಕೋಳಿಯ ಹುಳಿಯನ್ನು ಬಾಯಲ್ಲಿ ಹಾಕಿಕೊಂಡಾಗಿನಿಂದ. ಆದರೆ ಬಾಯಿಯ ಮಾತಾಗಲಿಲ್ಲ, ಬಾಯಿಯ ಕೆಲಸ. ಅದರ ಗತಿ ಆಂತರ್ಯದ ದಿಕ್ಕಿನಲ್ಲಿ. ಉಡುಪು ಹಾಕಿ ವರ್ಣಭೇದವನ್ನು ಮುಚ್ಚ ಹೋಗುವುದು ಬಾಹ್ಯದ ಬಡಾಯಿ. ಅದರಿಂದ ಭೇದ ಮುಚ್ಚಬಹುದೇ ವಿನಾ ಅದನ್ನ ಅಳಿಸಿಹಾಕಲಾಗುವುದಿಲ್ಲ." ಆದರೆ ಈ ತರ್ಕವನ್ನು ಬಾಯಲ್ಲಿ ಆಡುವ ಸಾಹಸ ಬರಲಿಲ್ಲ ನನಗೆ. ನಾನೊಬ್ಬ ಭೀರುವಾದ ಗಂಡಸು. ಅದಕ್ಕೇ ಚರ್ಚೆಯನ್ನು ಕಾಳಿಕಾ ತನ್ನ ಗೆಳತಿಯರ ಮನೆಗೆ ತೆಗೆದುಕೊಂಡು ಹೋಗಿ ಅದನ್ನೂ ಅಗಸನ ಮನೆಯ ಅರಿವೆಯಂತೆ ಒಗೆದು, ಹಿಂಡಿ ತರುವಳು. ದಾರ್ಶನಿಕ ಪ್ರೊಫೆಸರ್, ನಯನಮೋಹನನ ಕಡೆಯಿಂದ ಪ್ರತಿ ವಾದವನ್ನು ಸಂಗ್ರಹಮಾಡಿ ಬಂದ ಕಾಳಿಕಾಳ ಉರಿಯುವ ಕಂಗಳು ನೀರವ ನುಡಿಯಲ್ಲಿ ನನ್ನನ್ನು ಕುರಿತು "ಅಂತೂ ಸೋತುಹೋದಿರಿ!" ಎಂದು ಹೇಳುತ್ತಿವೆ.

ನಯನಮೋಹನನ ಮನೆಗೆ ಚಹಾ ನಿಮಂತ್ರಣಕ್ಕೆ ಹೋಗುವ ಮನಸ್ಸೇ ಇರಲಿಲ್ಲ ನನಗೆ. ಖಂಡಿತವಾಗಿ ಗೊತ್ತು. ಅಲ್ಲಿ ಹಿಂದೂ ಕಲ್ಚರಿನಲ್ಲಿ ಸಂಪ್ರದಾಯ ಮತ್ತು ಸ್ವತಂತ್ರಬುದ್ಧಿ, ಆಚಾರ, ವಿಚಾರಗಳ ಆಪೇಕ್ಷಿಕ (Relative) ಸ್ಥಾನವಾವುದು, ಮತ್ತು ಆ ಆಪೇಕ್ಷಿಕತೆಯು ನಮ್ಮ ದೇಶವನ್ನು ಬೇರೆಲ್ಲ ದೇಶಗಳಿಗಿಂತ ಹೆಚ್ಚಾಗಿ ಉತ್ಕರ್ಷವಾಗಿಸುವುದು ಹೇಗೆ–ಈ ಮುಂತಾದ ತತ್ತ್ವಗಳ ಬಗ್ಗೆ ಚಹಾ ಟೇಬಲ್ಲಿನ ಸುತ್ತ ಬಿಸಿ ಬಿಸಿ ಚಹಾದ ಆವಿಯಂತೆ ಸೂಕ್ಷ್ಮ ಭಾವನೆಗಳಿಂದ ಅಲ್ಲಿನ ವಾತಾವರಣವು ತುಂಬ ಆರ್ದ್ರವಾಗುವ ಸಂಭವವಿರುತ್ತದೆ. ಈ ಕಡೆ ಚಿನ್ನದ ಅಕ್ಷರಗಳಲ್ಲಿ ಮುದ್ರಿಸಿರುವ ಘನವಾದ ರಟ್ಟುಗಳಲ್ಲಿ ರಕ್ಷಿತವಾಗಿರುವ ಹೊಸ ಹೊಸ ಪುಸ್ತಕಗಳು ಆಗತಾನೇ ಅಂಗಡಿಯಿಂದ ತರಲ್ಪಟ್ಟು ನನ್ನ ತಲೆದಿಂಬಿನ ಮಗ್ಗುಲಲ್ಲಿ ನನಗಾಗಿ ಕಾದಿರುತ್ತವೆ. ಶುಭದೃಷ್ಟಿ ಮಾತ್ರ ಆಗಿದೆ. ಆದರೆ ಇನ್ನೂ ಅವುಗಳ ಮೇಲಿನ ಬಾಕಿ ಕಾಗದದ ಮೇಲು ಮುಸುಕನ್ನು ತೆಗೆದಿಲ್ಲ. ಅವುಗಳ ಬಗ್ಗೆ ನನ್ನ ಅನುರಾಗದ ಪ್ರಕಟಣೆಗಾಗಿ ನನ್ನ ಎದೆ ಘಳಿಗೆ ಘಳಿಗೆಗೂ ಹೊಡೆದುಕೊಳ್ಳಹತ್ತಿದೆ. ಆದರೂ ಅವುಗಳನ್ನು ಅಲ್ಲೇ ಬಿಟ್ಟು ಹೊರಗೆ ಹೊರಡಬೇಕಾಯಿತು. ಕಾರಣ, ಧ್ರುವ ವ್ರತಳಾದವಳ

ಇಚ್ಛೆಯ ಆವೇಗಕ್ಕೇನಾದರೂ ಅಡ್ಡಿ, ಆತಂಕ ಬಂದರೆ ಆಗ ಅದು ಅವಳ ಮಾತಿನಲ್ಲಿ, ಮೌನದಲ್ಲಿ ಸುಂಟರಗಾಳಿಯಷ್ಟು ಭೀಕರ ರೂಪ ತಾಳೀತು. ಆಗ ಅದು ನನಗೆ ಅಷ್ಟಾಗಿ ಆರೋಗ್ಯದಾಯಕವಲ್ಲ.

ಮನೆಯಿಂದ ಸ್ವಲ್ಪ ದೂರ ಮಾತ್ರ ಹೊರಟಿದ್ದೆವು. ಅಲ್ಲಿ ರಸ್ತೆಯ ಅಂಚಿನಲ್ಲಿರುವ ಬೀದಿಯ ಕೊಳಾಯಿಯ ಕಟ್ಟೆಯನ್ನು ಹಾದುಕೊಂಡು ಎದುರು ಬದಿಯ ಹೆಂಚಿನ ಮನೆಯ ಪಕ್ಕದಲ್ಲಿ ಸ್ಥೂಲ ಮೈಯುಳ್ಳ ಹಿಂದೂಸ್ಥಾನಿ ತಿಂಡಿ ಮಾರುವವನ ಅಂಗಡಿಯ ಮುಂದೆ ರಾಶಿರಾಶಿಯಾಗಿ ಎಣ್ಣೆಯಲ್ಲಿ ಹುರಿದ ನಾನಾ ಬಗೆಯ ಅಪಥ್ಯವಾದ ತಿಂಡಿ ತಯಾರಾಗುವ ಸ್ಥಳದ ಎದುರಾಗಿ ಬಂದೊಡನೆ ನೋಡಿದರೆ ಏನೋ ಗಲಭೆಯಾಗುತ್ತಿರುವುದು ಕಾಣಬಂತು. ನಮ್ಮ ನೆರೆಮನೆಯವರಾದ ಮಾರವಾಡಿ ಗೃಹಸ್ಥರು ನಾನಾ ಬಗೆಯ ಬೆಲೆಯಾದ ಪೂಜಾ ಸಾಮಗ್ರಿಗಳನ್ನು ಹಿಡಿದುಕೊಂಡು ಆಗತಾನೇ ಹೊರಬಿದ್ದಿದ್ದಾರೆ. ಇಂಥಾ ಸಮಯದಲ್ಲಿ ಈ ಜಾಗದಲ್ಲಿ ಬಂದು ಅಲ್ಲಿ ತಡೆದುಬಿಟ್ಟಿದ್ದಾರೆ. ಇದ್ದಕ್ಕಿದ್ದಹಾಗೆ "ಹೊಡೀ, ಹೊಡೀ" ಎಂಬ ದನಿಗಳು ಎದ್ದುವು. ಯಾರೋ ಜೇಬುಗಳ್ಳ ಸಿಕ್ಕಿಹಾಕಿಕೊಂಡಿದ್ದಾನೆ. ಪಾಪ, ಎಂದುಕೊಂಡೆ. ಅವನಿಗೆ ಶಿಕ್ಷೆಯಾಗುತ್ತಿರಬೇಕು.

ಮೋಟಾರಿನ ಹಾರನನ್ನು ಕೂಗಿಸುತ್ತ ಉದ್ರೇಕಗೊಂಡ ಜನರ ಗುಂಪಿನ ನಡುವೆಯವರೆಗೂ ಬಂದು ನೋಡುತ್ತೇನೆ-ನಮ್ಮ ಕೇರಿಯ ಮುದಿ ಮ್ಯುನಿಸಿಪಲ್ ಮೇಥರ (ಕಸ ಗುಡಿಸುವವ)ನನ್ನು ಉಸಿರು ಬರದಂತೆ ಹೊಡೆಯುತ್ತಿದ್ದಾರೆ. ಸ್ವಲ್ಪ ಹೊತ್ತಿಗೆ ಮೊದಲು ಕೊಳಾಯಿಯ ಕೆಳಗೆ ಮಿಂದು ಒಗೆದ ಬಟ್ಟೆ ಉಟ್ಟು ಎಡಗೈಯಲ್ಲಿ ಒಂದು ಬಕೆಟ್ಟಿನಲ್ಲಿ ನೀರು ಮತ್ತು ಬಗಲಲ್ಲಿ ಪೊರಕೆ ಹಿಡಿದುಕೊಂಡು ರಸ್ತೆಯ ಬದಿಯಲ್ಲಿ ಹೋಗುತ್ತಿದ್ದ ಆ ಮೇಥರ.

ಮೈಮೇಲೊಂದು ಹರಿದ ಕಿರಿ ಅಂಗಿ, ಗಂಟು ಕಟ್ಟಿರುವ ಕೂದಲಿನ್ನೂ ಒದ್ದೆ. ಬಲಗೈಯನ್ನು ಹಿಡಿದುಕೊಂಡು ಸಂಗಡ ಹೋಗುತ್ತಿದ್ದ ಹುಡುಗ ಅವನ ಮೊಮ್ಮಗ. ಏಳೆಂಟು ವರುಷ ವಯಸ್ಸಿರಬೇಕು. ಇಬ್ಬರೂ ನೋಡಲಿಕ್ಕೆ ಅಂದವಾಗಿರುವ ಮೈಕಟ್ಟುಳ್ಳವರು. ಲಕ್ಷಣವಾದ ಮುಖಗಳು. ಆ ಗುಂಪಿನಲ್ಲಿ ಯಾರೊಡನೆಯೋ ಅವರಿಬ್ಬರ ಮೈ ತಾಕಿದ್ದೀತು. ಅದರ ಫಲವಾಗಿ ಈ ಏಟುಗಳ ಸುರಿಮಳೆ. ಮೊಮ್ಮಗ ಅಳುತ್ತಾನೆ. ಎಲ್ಲರಿಗೂ ಬೇಡಿಕೊಳ್ಳುತ್ತಾನೆ "ಅಜ್ಜನನ್ನು ಹೊಡೆಯಬೇಡಿ...ಅಜ್ಜನನ್ನು ಹೊಡೆಯಬೇಡಿ." ಮುದುಕನೂ ಕೈ ಜೋಡಿಸಿ ಮೊರೆಯಿಡುತ್ತಿದ್ದಾನೆ. "ನೋಡಲಿಲ್ಲ, ಒಡೆಯಾ, ನೋಡದೆ ಎಡವಟ್ಟಾಗಿಹೋಯಿತು. ಮಾಫು ಮಾಡಿಬಿಡಿ ಇದೊಂದು ಸಲ." ಆದರೆ ಅಹಿಂಸೆಯೇ ಧರ್ಮವಾಗಿರುವಂಥವರ ಮನ ಕರಗಲಿಲ್ಲ. ರೋಷ ಇನ್ನೂ ಮೇಲೇರಿತು. ಮುದುಕನ ಹೆದರಿದ ಕಂಗಳಿಂದ ನೀರು ಸೋರುತ್ತಿದೆ-ದಾಡಿಯೆಲ್ಲ ರಕ್ತ.

ನನಗಿನ್ನು ಸಹಿಸಲಾಗಲಿಲ್ಲ. ಅವರುಗಳೊಡನೆ ಜಗಳವಾಡಲು ಇಳಿಯುವುದು ಅಸಾಧ್ಯ. ಮನಸ್ಸು ಮಾಡಿದೆ. ಮೇಥರನನ್ನು ನನ್ನ ಗಾಡಿಯಲ್ಲಿ ಹತ್ತಿಸಿ ಕೂಡಿಸಿಕೊಂಡು ಇವರಿಗೆಲ್ಲ ನಾನು ಧಾರ್ಮಿಕರ ತಂಡದವನಲ್ಲ ಎಂದು ತೋರಿಸಿ ಕೊಡುತ್ತೇನೆ.

ನನ್ನ ಚಚ್ಚರವನ್ನು ಕಂಡು ಕಾಳಿಕಾ ನನ್ನ ಮನದ ಭಾವ ಊಹಿಸಿದಳು. ಬಲವಾಗಿ ನನ್ನ ಕೈಗಳನ್ನು ಬಿಗಿದು ಹಿಡಿದು "ಏನು ಮಾಡುತ್ತಿದ್ದೀರಿ? ಅವನೊಬ್ಬ ಮೇಥರ" ಎಂದಳು.

ನಾನು "ಮೇಥರನಾದರೇನು? ಹಾಗೆಂದು ಅವನನ್ನು ಅನ್ಯಾಯವಾಗಿ ಹೊಡೆಯುವುದೆ?" ಎಂದೆ. ಕಾಳಿಕಾ "ತಪ್ಪು ಅವನದೇ! ರಸ್ತೆಯ ನಡುವೆ ಯಾಕೆ ಹೋಗಬೇಕಾಗಿತ್ತೂ? ಮಗ್ಗುಲಿಗೆ ಸರಿದು ಹೋಗಿದ್ದರೆ ಅವನಿಗೇನು ಅವಮಾನವಾಗುತ್ತಿತ್ತು?" ಎಂದಳು.

"ಇಲ್ಲ, ನಿನಗೆ ಅದು ಗೊತ್ತಾಗುವುದಿಲ್ಲ. ನಾನವನನ್ನ ಈಗಲೇ ಗಾಡಿಯೊಳಗೆ ಕೂರಿಸಿಕೊಂಡು ಹೋಗುತ್ತೇನೆ" ಎಂದೆ, ಒಂದೇ ಹಠದಿಂದ.

"ಹಾಗಾದರೆ ನಾನಿಲ್ಲೇ ಈ ಕ್ಷಣ ಇಳಿದುಬಿಡುತ್ತೇನೆ ಗಾಡಿಯಿಂದ. ಮೇಥರನನ್ನ ಗಾಡಿಯಲ್ಲಿ ಕೂರಿಸಿಕೊಂಡು ಹೋಗಲಾರೆ. ಬೆಸ್ತನಾಗಬಹುದು, ಬೇಡನಾಗಬಹುದು...ಆದರೆ...ಮೇಥರ?... ಛಿ ಛೀ?" ಎಂದಳು ಕಾಳಿಕಾ.

ನಾನಾಗ "ಏನಂದೆ? ನೋಡು, ಸ್ನಾನ ಮಾಡಿ ಎಷ್ಟು ಚೊಕ್ಕಟವಾಗಿ ಕಾಣುತ್ತಾನೆ. ಅವನ ಅರಿವೆ ನೋಡು. ಎಷ್ಟು ಶುಭ್ರವಾಗಿದೆ? ಇವರಲ್ಲೆಷ್ಟೋ ಜನಕ್ಕಿಂತ ಇವನು ಶುಭ್ರವಾಗಿದ್ದಾನೆ" ಎಂದೆ.

"ಏನಿದ್ದರೇನು? ಅವನಂತೂ ಮೇಥರ." ಆಗ ನಾನು ಡ್ರೈವರಿಗೆ "ಗಂಗಾದೀನ್, ಹಾರ್ನ್ ಮಾಡಿ ಗಾಡಿ ನಡೆಸು" ಎಂದೆ.

ಅಂತೂ ನನಗೇ ಸೋಲು. ನಾನೊಬ್ಬ ಹೇಡಿ. ನಯನಮೋಹನ ಅದಾದ ಮೇಲೆ ಸಮಾಜ ತತ್ತ್ವದ ಮೇಲೆ ಗಂಭೀರವಾದೊಂದು ಸಮಸ್ಯಾಪರಿಹಾರವನ್ನು ವ್ಯಕ್ತಗೊಳಿಸಿದ್ದ. ನನ್ನ ಕಿವಿಗದು ಬೀಳಲೂ ಇಲ್ಲ. ನಾನದಕ್ಕೆ ಜವಾಬು ಕೊಡಲಿಲ್ಲ.

೧೮. ಬಲಾಯಿ

ಮನುಷ್ಯರ ಬಾಳುವೆಯೆಂಬುದು ಪೃಥಿವಿಯ ನಾನಾ ಜೀವಿಗಳ ಇತಿಹಾಸದ ನಾನಾ ಅಧ್ಯಾಯಗಳ ಉಪಸಂಹಾರ ಮಾತ್ರ,-ಎಂಬುದೊಂದು ಹೇಳಿಕೆ. ಪುರಾತನ ಕಾಲದ ಮನುಷ್ಯರಲ್ಲಿ ಗೂಢವಾಗಿದ್ದ ನಾನಾ ಜೀವ ಜಂತುಗಳ ಪರಿಚಯ ನಮಗಾಗಿದೆ, ಅದು ನಮಗೆ ಗೊತ್ತಿರುವ ವಿಷಯ. ವಸ್ತುತಃ ನಾವು ಮನುಷ್ಯನೆನ್ನುವ ಜೀವವನ್ನು ನಮ್ಮಗಳೊಳಗೆ ಗೂಢವಾಗಿ ಅಡಗಿರುವ ಜೀವ ಜಂತುಗಳ ಅಂಶಗಳೊಂದಿಗೆ ಒಂದಾಗಿ ಸೇರಿಸಿ ಅಂಗೀಕರಿಸಿದ್ದೇವೆ. ನಮ್ಮ ಹುಲಿ, ಹಸುಗಳನ್ನು ಒಂದೇ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದೇವೆ-ಹಾವು, ಮುಂಗಸಿಗಳನ್ನೂ ಒಂದೇ ಪಂಜರದಲ್ಲಿ ಹಿಡಿದಿಟ್ಟಿದ್ದೇವೆ. ರಾಗಿಣಿ ಎಂಬುದಾವುದಿದೆಯೋ, ಅದನ್ನು, ನಮ್ಮೊಳಗಡೆ ಇರುವ ಸ-ರಿ-ಗ-ಮಗಳ ಸಮುದಾಯವು ಸಂಗೀತವಾಗಿ ದನಿಸುತ್ತದೆ. ಅದಾದ ಅನಂತರ ಆ ಸ್ವರಗಳ ನಡುವೆ ಇನ್ನಾವ ಗಲಾಟೆಯೂ ಸಾಗದು. ಆದರೆ ಸಂಗೀತದ ನಡುವೆ ಒಂದೊಂದು ಸ್ವರ ಮಾತ್ರ ಬೇರೆ ಸ್ವರಗಳ ಜೊತೆಗೆ ಸೇರದೆ ವಿಶೇಷ ಯೋಗ್ಯತೆಯನ್ನು ಪಡೆದು ಮೇಲೇರುತ್ತದೆ. ಒಂದರಲ್ಲಿ ಮಧ್ಯಮ, ಇನ್ನೊಂದರಲ್ಲಿ ಕೋಮಲ ಗಾಂಧಾರ, ಇನ್ಯಾವುದರಲ್ಲೋ ಪಂಚಮ-ಹೀಗೆ.

ನನ್ನ ಅಣ್ಣನ ಮಗ ಬಲಾಯಿ,-ಅವನ ಪ್ರಕೃತಿಯಲ್ಲಿ ಹೇಗೋ ಗಿಡ, ಮರಗಳ ಮೂಲ ಸ್ವರಗಳೇ ಪ್ರಬಲವಾಗಿಬಿಟ್ಟಿವೆ-ಎಳೆತನದಿಂದಲೂ ಸುಮ್ಮನೆ ಗಿಡ, ಮರಗಳನ್ನು ನೋಡುತ್ತ ಇರುವುದೇ ಅವನ ಅಭ್ಯಾಸ; ಅವನ್ನು ಹಿಡಿದು, ಹತ್ತಿ ಅಲ್ಲಾಡಿಸುವುದಿಲ್ಲ.

ಮೂಡಲ ಮುಗಿಲಲ್ಲಿ ಕರಿಮೋಡಗಳು ಸ್ತರಸ್ತರವಾಗಿ ಸೇರಿಕೊಂಡು ಸಮಯ ಕಾಯುತ್ತ ಇರುವಾಗ ಅವನ ಮನದೊಳಗೆ ಒದ್ದೆಯಾದ ಗಾಳಿ ಬೀಸಿ ಶ್ರಾವಣದ ಅಡವಿಯ ಗಂಧವನ್ನೆಲ್ಲ ಹೊತ್ತು ತಂದು ತುಂಬುತ್ತದೆ. ಝುರಝುರನೆ ಮಳೆ ಸುರಿಯತೊಡಗಿದಾಗ ಅವನು ಮೈ ಬಿಚ್ಚಿಕೊಂಡು ಆನಂದದಿಂದ ನೆನೆದು ಓಡಾಡುತ್ತಾನೆ. ಮಳೆಯ ಸಂಗೀತವನ್ನು ಮೈಯೆಲ್ಲ ಕಿವಿ ಮಾಡಿಕೊಂಡು ಕೇಳುತ್ತಾನೆ. ಮಾಳಿಗೆಯ ಮೇಲೆ ಮಧ್ಯಾಹ್ನದ ವೇಳೆಗೆ ಬಸಿಲು ಬಿದ್ದಿರುವಾಗಲೂ ಮೈ ಬಿಚ್ಚಿಕೊಂಡು ಓಡಾಡುತ್ತಾನೆ. ಆಕಾಶದಿಂದೆಲ್ಲ ಏನೋ ಒಂದು ಆಪ್ಯಾಯಮಾನವಾದುದನ್ನು ಕಸಿದು ಮೈಮರೆಯುತ್ತಾನೆ. ಮಾಘ ಮಾಸದ ಕಡೆಯಲ್ಲಿ ಮಾವಿನ ಮೊಗ್ಗುಗಳನ್ನು ಕೈಯಲ್ಲಿ ಹಿಡಿದಾಗ ಅದರೊಳಗಿನ ನಿಬಿಡವಾದ ಆನಂದ

ಅವನ ನೇತ್ರದ ನಡುವೆ ಎಚ್ಚರವಾಗೇಳುತ್ತದೆ-ಯಾವುದೋ ಒಂದು ತಿಳಿಸಲಾಗದ ನೆನಪಿನಿಂದೆಂಬಂತೆ. ಫಾಲ್ಗುಣ ಮಾಸದಲ್ಲಿ ಹೂಬಿಟ್ಟ ಸಾಲವನದಂತೆ ಅವನ ಒಳಗಿನ ಪ್ರಕೃತಿಯು ನಾಲ್ದೆಸೆಗಳೂ ಬಿಚ್ಚಿ ಹರಡಿಕೊಳ್ಳುತ್ತದೆ-ತುಂಬಿ ಬರುತ್ತದೆ. ಅದಕ್ಕೊಂದು ಹೊಸ ಬಣ್ಣದ ಮೆರುಗು ಏರುತ್ತದೆ.

ಆಗವನಿಗೆ ಒಬ್ಬನೇ ಕೂತುಕೊಂಡು ತನ್ನಲ್ಲೇ ಮಾತಾಡಿಕೊಳ್ಳಲು ಇಷ್ಟವಾಗುತ್ತದೆ. ತಾನು ಕೇಳಿರುವ ಕಥೆಗಳನ್ನೆಲ್ಲ ಕಲಸು ಮೇಲೋಗರ ಮಾಡಿ ಅಸಂಬದ್ಧವಾಗಿಯಾದರೂ ಆಡಿಕೊಳ್ಳಬೇಕೆನ್ನಿಸುತ್ತದೆ. ಅತಿ ಪುರಾತನ ಆಲದ ಮರದ ಪೊಟರೆಯಲ್ಲಿ ಗೂಡು ಕಟ್ಟಿಕೊಂಡಿರುವ ಮುದಿ ಹಕ್ಕಿ ದಂಪತಿಯಾದ ಬೆಂಗಮ ಬೆಂಗಮಿಗಳ ಕಥೆ ನೆನಪಿಗೆ ಬರುತ್ತದೆ. ಈ ಅಗಲವಾದ ಕಣ್ಣುಗಳ ರೆಪ್ಪೆಯಲುಗಿಸದೆ ನೋಡುತ್ತಿರುವ ಹುಡುಗ ಹೆಚ್ಚು ಮಾತಾಡಲಾರ. ಆದುದರಿಂದ ಅವನು ಮನದೊಳಗೇ ಹೆಚ್ಚಾಗಿ ಭಾವಿಸಬೇಕಾಗುತ್ತದೆ. ಒಮ್ಮೆ ಅವನನ್ನು ಒಂದು ಬೆಟ್ಟದ ಮೇಲೆ ಕರೆದುಕೊಂಡು ಹೋಗಿದ್ದೆ. ನಾವಿಳಿದುಕೊಂಡಿದ್ದ ಮನೆಯ ಮುಂದೆ ಒತ್ತಾಗಿ ಬೆಳೆದ ಸೊಂಪಾದ ಹಸಿರು ಹುಲ್ಲು ಬೆಟ್ಟದ ಇಳಿಜಾರೆಲ್ಲ ಹರಡಿ, ಅದನ್ನೂ ಹಾದು ತಳದವರೆಗೂ ವ್ಯಾಪಿಸಿಬಿಟ್ಟಿತ್ತು. ಅದನ್ನು ನೋಡಿ ಅವನ ಸಂತೋಷ ಹಿಡಿಸಲಾರದೆ ಹೋಯಿತು. ಹುಲ್ಲಿನ ಹೊದಿಕೆಯೊಂದು ಸ್ಥಿರವಾದ ವಸ್ತುವೆಂಬಂತೆ ಅವನಿಗನ್ನಿಸಲಿಲ್ಲ. ಆ ಹುಲ್ಲಿನ ರಾಶಿ ತನ್ನನ್ನ ತಾನೇ ತುಂಬಿಕೊಳ್ಳುತ್ತದೆ. ಬಹುಶಃ ಹಾಗೇ ಬೆಟ್ಟದ ಇಳಿಜಾರಿನ ಮೇಲೆಲ್ಲ ಹರಡಿಕೊಂಡು ಹೋಗಿರುವುದು. ಇನ್ನೂ ತುಂಬುತ್ತಲೇ ಹೋಗಿ, ಬೆಟ್ಟದ ತಪ್ಪಲವರೆಗೂ ಓಡಿಹೋಗಿದೆ ಹುಲ್ಲು. ಅದನ್ನು ನೋಡಿ ನೋಡಿ ಹಿಗ್ಗು ಹಿಡಿಸಲಾರದೆ ತಾನೂ ಹುಲ್ಲೇ ತುಂಬಿಕೊಳ್ಳುತ್ತಿದ್ದೇನೆ ಎಂಬ ಹುಚ್ಚಿನಲ್ಲಿ ಮುಳುಗುತ್ತಿದ್ದ. ಮೈಯೆಲ್ಲ ಹುಲ್ಲೇ ತುಂಬಿಕೊಳ್ಳುತ್ತಿದೆ. ತುಂಬಿಕೊಂಡು ತುಂಬಿಕೊಂಡೇ ಹುಲ್ಲಿನ ತುದಿಗಳ ಮೇಲೆ ಮುಖವಿಟ್ಟು ಕಚಗುಳಿಯಿಟ್ಟಂತಾಗಿ ಕೂಡಲೆ ಮೇಲೆ ನೆಗೆದು ಖಿಲ್ಲೆಂದು ನಗುತ್ತಿದ್ದ.

ರಾತ್ರಿಯೆಲ್ಲ ಮಳೆ ಸುರಿದು ನಿಂತ ಮೇಲೆ ಬೆಳಗಿನ ಜಾವದ ಮೊದಲಲ್ಲಿ ಎದುರು ಬದಿಯ ಗುಡ್ಡದ ಶಿಖರದ ಕಡೆಯಿಂದ ಕೆಂಪು ಬಂಗಾರದ ಬೆಳಕು ದೇವದಾರುವನದ ಮೇಲೆ ಬಂದು ಬೀಳುತ್ತದೆ. ಆಗವನು ಯಾರಿಗೂ ಹೇಳದೆ ಮೆಲ್ಲ ಮೆಲ್ಲಗೆ ಹೋಗಿ ಆ ದೇವದಾರುವನದ ನಿಶ್ಶಬ್ದವಾದ ನೆರಳಿನಡಿಯಲ್ಲಿ ಒಬ್ಬನೇ ಸದ್ದುಮಾಡದೆ ನಿಂತಿರುತ್ತಾನೆ. ಮೈಯೆಲ್ಲ ಝುಮ ಝುಮವೆನ್ನುತ್ತಿರುತ್ತದೆ. ಆ ಪ್ರಕಾಂಡವಾದ ಮರಗಳೊಳಗಡೆಯಿರುವ ಮನುಷ್ಯರು ಅವನಿಗೆ ಕಾಣಬರುತ್ತಿರುವಂತೆ ಅನ್ನಿಸುತ್ತದೆ. ಅವರು ಯಾರೂ ಮಾತಾಡರು. ಆದರೆ ಅವರೆಲ್ಲರಿಗೂ ಎಲ್ಲಾ ಗೊತ್ತಿರಬೇಕು. ಅವರೆಲ್ಲ ಬಹಳ ಹಿಂದಿನ ಕಾಲದ ಅಜ್ಜಂದಿರಿರಬೇಕು. "ಒಂದೂರಲ್ಲಿ ಒಬ್ಬ ರಾಜ" ಎಂಬ ಕಾಲದವರಿರಬೇಕು.

ಅವನ ಆ ಭಾವನೆಗಳಲ್ಲಿ ಮುಳುಗಿದ ಕಣ್ಣುಗಳು ಕೇವಲ ಮುಗಿಲ ಕಡೆಯೊಂದೇ ಅಲ್ಲ ನೋಡುತ್ತಿರುವುದು. ನಾನೆಷ್ಟೋ ಬಾರಿ ನೋಡಿದ್ದೇನೆ, ಅವನು ನನ್ನ ತೋಟದೊಳಗಡೆ ಓಡಾಡುತ್ತ ಸುಮ್ಮನೆ ನೆಲದ ಕಡೆ ಏನೋ ಹುಡುಕುತ್ತಿರುವಂತೆ ನೋಡುತ್ತಿರುತ್ತಾನೆ. ಹೊಸದಾಗಿ ಮೊಳೆತಿರುವ ಮೊಳಕೆಗಳು ತಮ್ಮ ಅತಿ ಮೃದು, ಅತಿ ಡೊಂಕಾದ ನೆತ್ತಿಗಳನ್ನು ಮೇಲೆತ್ತಿಕೊಂಡು ಬೆಳಕಿನಲ್ಲಿ ಬೆಳೆದಿದ್ದಿರುತ್ತವೆ. ಅವುಗಳನ್ನು ದಿಟ್ಟಿಸಿ ನೋಡುವುದರಲ್ಲಿ ಅವನ ಔತ್ಸುಕ್ಯಕ್ಕೆ ಸೀಮೆಯೇ ಇಲ್ಲ. ಪ್ರತಿ ದಿನವೂ ನೆಲದ ಮೇಲೆ ಕೂತು "ಆಮೇಲೆ, ಆಮೇಲೆ, ಆಮೇಲೆ?" ಎಂದು ಕೇಳುತ್ತಿರುವನೇನೊ ಎಂಬಂತೆ ಅವುಗಳ ಕಡೆ ಬಾಗಿ ಕಿವಿ ನೀಡುತ್ತಿರುವನು- ಅವೆಲ್ಲ ಅವನ ಎಂದೆಂದೂ ಮುಗಿಯದ ಕಥೆಗಳು. ಆಗತಾನೆ ಮೊಳೆತ ಅತಿ ಎಳೆಯ ಎಲೆಗಳು. ಅವುಗಳೊಡನೆ ಅವನಿಗೇನೋ ಒಂದು ಸಮವಯಸ್ಕತೆಯ ಭಾವನೆ. ಅದನ್ನು ಅವನು ಹೇಗೆ ಹೊರತೋರಬಲ್ಲ? ಅವುಗಳೂ ಸಹ ಅವನನ್ನೇನೋ ಪ್ರಶ್ನೆ ಕೇಳುವಂತೆ ಅವನ ಕಡೆ ಬಾಗುವುದು. ಬಹುಶಃ "ನಿನ್ನ ಹೆಸರೇನು, ನಿಮ್ಮ ಅಮ್ಮ ಎಲ್ಲಿ ಹೋದಳು?" ಎಂದೆಲ್ಲ ಕೇಳುತ್ತವೇನೋ. ಬಲಾಯಿ ತನ್ನೊಳಗೇ ಜವಾಬು ಹೇಳಬಹುದು-"ನನಗೆಲ್ಲಿದಾಳೆ ಅಮ್ಮ; ಇಲ್ಲವಲ್ಲ!" ಯಾರಾದರೂ ಗಿಡಗಳಿಂದ ಹೂ ಕಿತ್ತರೆ ಅವನಿಗೆ ಬಹಳ ನೋವು. ಇತರರು ಅವನ ಈ ಸೂಕ್ಷ್ಮತೆಯನ್ನು ಅರ್ಥಮಾಡಿಕೊಳ್ಳಲಾರರು. ಅದವನಿಗೆ ಗೊತ್ತು. ಆದ್ದರಿಂದ ಅವನು ತನ್ನ ನೋವನ್ನು ಒಳಗೇ ಅಡಗಿಸಿಟ್ಟುಕೊಳ್ಳುವನು. ಅವನ ವಯಸ್ಸಿನ ಹುಡುಗರನೇಕರು ಕಲ್ಲು ಬೀರಿ ನೆಲ್ಲಿಕಾಯಿಗಳನ್ನು ಬೀಳಿಸುವಾಗ ಅವನಿಗೆ ಏನೂ ಹೇಳಲಿಕ್ಕಾಗುವುದಿಲ್ಲ. ಅಲ್ಲಿಂದ ಸುಮ್ಮನೆ ಮೋರೆ ತಿರುಗಿಸಿಕೊಂಡು ಹೊರಟು ಬಂದುಬಿಡುತ್ತಾನೆ. ಅವನ ಸಂಗಡಿಗರಲ್ಲಿ ಕೆಲವರು ಅವನನ್ನು ರೇಗಿಸಲೆಂದು ತೋಟದೊಳಗೆ ನಡೆಯುತ್ತ ಕೈಯಲ್ಲಿ ಚಾಬೂಕು ಹಿಡಿದು ಅಕ್ಕಪಕ್ಕದ ಗಿಡಗಳ ಮೇಲೆಲ್ಲ ಸುಮ್ಮನೆ ಬಲವಾಗಿ ಹೊಡೆದುಕೊಂಡು ಹೋಗುತ್ತಾರೆ. ಪಟ್ಟೆಂದು ತಿರುಗಿ ಬಕುಳದ ಗಿಡದ ಒಂದು ರೆಂಬೆಯನ್ನು ಮುರಿದು ತೆಗೆದುಕೊಳ್ಳುತ್ತಾರೆ. ಅವನಿಗೆ ಅಳು ಬರುವಂತಾದರೂ ಅಳಲು ನಾಚಿಗೆ;-ಯಾರಾದರೂ ಹುಚ್ಚನೆಂದರೆ? ಅವನಿಗೆ ಅತಿ ಸಂಕಟವಾಗುವ ದಿನವೆಂದರೆ ಹುಲ್ಲು ಕೊಯ್ಯುವವನು ಬಂದು ಹುಲ್ಲು ಕೊಯಿದು ಸಮನೆಲ ಮಾಡುವಾಗ. ಏಕೆಂದರೆ, ಆ ಹುಲ್ಲು ರಾಶಿಯ ನಡುವೆ ಅವನೆಷ್ಟೋ ಸಲ ಬೇರೆ ಸಣ್ಣ, ಪುಟ್ಟ ಸಸಿಗಳು ಮೊಳೆತಿರುವುದನ್ನು ಕಂಡುಹಿಡಿದು ಆನಂದಿಸಿದ್ದ. ಕಿರುಬೆರಳಿನಷ್ಟು ಉದ್ದ ಕೂಡ ಇಲ್ಲ. ಅತಿ ಪುಟ್ಟ ಬಳ್ಳಿಯೊಂದು, ನೀಲಿ, ಹಳದಿ ಬಣ್ಣಗಳು ಕಲೆತಿರುವ ಹೆಸರಿಲ್ಲದ ಹೂವೊಂದು. ಅತಿ ಸಣ್ಣದು, ಅಲ್ಲಲ್ಲಿ ಬರೇ ಮುಳ್ಳಿನ ಗಿಡವೊಂದು, ಆದರೂ ತುದಿಯಲ್ಲಿ ಕಡುನೀಲಿಯ ಸುಂದರ ಹೂ, ಅದರ ಗರ್ಭದೊಳಗಿಂದ ಕಿರಿದಾದೊಂದು

ಹೊಂಬೊಗರು ಹೊರಟಿದೆ-ಬೇಲಿಯ ಸಮೀಪದಲ್ಲಿ ಎಲ್ಲೋ ಒಂದು ಕಡೆ ಕರಿಮೋಡದ ಬಣ್ಣದ ಬಳ್ಳಿ, ಇನ್ನೆಲ್ಲೋ ಅನಂತ ಮೂಲದ ಬಳ್ಳಿ. ಹಕ್ಕಿ ತಿಂದುಗುಳಿದ ನಿಂಬೇಬೀಜ ಬಿದ್ದು ಪುಟ್ಟ ಪುಟ್ಟ ಎಳೆಹಸಿರು ಸಸಿಗಳೆದ್ದುಕೊಂಡಿವೆ. ಅದೆಷ್ಟು ಸೊಗಸು ಅವುಗಳ ಎಲೆಗಳು! ಅವೆಲ್ಲವನ್ನೂ ಹುಲ್ಲುಗತ್ತರಿಯಿಂದ ಕತ್ತರಿಸಿ ಕತ್ತರಿಸಿ ಬಿಸುಡುವನು. ಆ ಆಳು ಕೆಟ್ಟವನು. ಅವುಗಳು ಯಾವುವೂ ಹೂದೋಟದ ಶೋಕಿಯ ಗಿಡಗಳಲ್ಲವಲ್ಲ! ಅವುಗಳ ದೂರನ್ನು ಯಾರು ಕೇಳುವವರು?

ಒಂದೊಂದು ದಿನ ಅವನು ಚಿಕ್ಕಮ್ಮನ ತೊಡೆಯ ಮೇಲೆ ಬಂದು ಕೂತು ದನಿಯೇರಿಸಿ "ಚಿಕ್ಕಮ್ಮಾ, ಆ ಹುಲ್ಲು ಕೊಯ್ಯುವ ಆಳಿಗೆ ಹೇಳಿ, ನನ್ನ ಗಿಡಗಳನ್ನೆಲ್ಲ ಕುಯ್ಯಬೇಡ ಅಂತ" ಎಂದು ದೂರುವನು.

"ಇದೇನೋ ಬಲಾಯಿ, ಹುಚ್ಚನ ಹಾಗೆ ಮಾತಾಡುತ್ತೀ? ಅದೆಲ್ಲ ಜಂಗಲಾಗಿ ಬೆಳೆದುಬಿಟ್ಟಿದ್ದೆ; ಸುಡುಗಾಡು! ಕಸದ ಗಿಡಗಳು! ಅವನ್ನ ಕುಯಿದುಹಾಕದೆ ಹೋದರೆ ಹೇಗೋ, ಅಸಹ್ಯ!" ಎನ್ನುವಳು ಚಿಕ್ಕಮ್ಮ.

ಅಂದಿನಿಂದ ಅವನಿಗೆ ಗೊತ್ತಾಗಿಹೋಗಿತ್ತು. ಅವನೊಳಗಾಗುವ ಅನೇಕ ನೋವು ಯಾತನೆಗಳು ಅವನದೇ ಪ್ರತ್ಯೇಕ. ಸುತ್ತಮುತ್ತಲ ಜನರಲ್ಲಿ ಯಾರಲ್ಲೂ ಅದರ ಮಾರ್ದನಿಯಿಲ್ಲ.

ಈ ಹುಡುಗನ ನಿಜವಾದ ವಯಸ್ಸು ಇಂದಿನದಲ್ಲ-ಅದೇ ಕೋಟ್ಯನುಕೋಟಿ ವರುಷಗಳ ಹಿಂದೆ, ಅತಿ ಆದಿಯಲ್ಲಿ ಯಾವ ದಿನ ಸಮುದ್ರದ ಬಸಿರಿನಿಂದ ಹೊಸದಾಗಿ ಎದ್ದು ಬಂದ ಕೆಸರಿನ ಸ್ತರಗಳ ನಡುವೆ ಪೃಥಿವಿಯ ಭಾರೀ ಅಡವಿಯು ತನ್ನ ಹುಟ್ಟಿದ ಮೊದಲ ರೋದನವನ್ನು ಹೊರಡಿಸಿತೋ,- ಆ ದಿನ ಪಶುಪಕ್ಷಿಗಳಿರಲಿಲ್ಲ, ಬದುಕಿನ ಕಲರವವಿರಲಿಲ್ಲ; ನಾಲ್ಕು ದಿಕ್ಕೂ ಬರೀ ಕಲ್ಲು, ಕೆಸರು ಮತ್ತು ನೀರು. ನೀರು-ಎಲ್ಲಿ ನೋಡಿದರೂ ನೀರು. ಕಾಲದ ಹಾದಿಯಲ್ಲಿ ಜೀವಗಳೆಲ್ಲದರ ಮೊದಲಿನದಾದ ಗಿಡ, ಸೂರ್ಯನ ಕಡೆ ಕೈಜೋಡಿಸೆತ್ತಿ ಕೂಗಿ ಕೇಳಿಕೊಳ್ಳುತ್ತಿದೆ-"ನಾನು ಇರುತ್ತೇನೆ. ಬದುಕುತ್ತೇನೆ. ನಾನು ಸದಾ ದಾರಿಗನಾಗಿರುತ್ತೇನೆ. ಸಾವಾದ ಮೇಲೆ ಸಾವಿನ ನಡುವಣಿಂದ ಕೊನೆಯೇ ಇಲ್ಲದ ಜೀವವರಳುವ ತೀರ್ಥಸ್ಥಳದ ಕಡೆ ಯಾತ್ರೆ ಹೊರಡುತ್ತೇನೆ-ಬಿಸಿಲಲ್ಲಿ, ಮೋಡದಲ್ಲಿ, ಹಗಲು, ರಾತ್ರಿ, ಸದಾ." ಗಿಡದ ಅಂದಿನ ಕೂಗು ವನಗಳಲ್ಲಿ ಕೇಳಬರುತ್ತಿದೆ. "ನಾನೂ ಇರುತ್ತೇನೆ, ಇರಬೇಕು; ಬದುಕಬೇಕು, ಬಾಳಬೇಕು." ವಿಶ್ವ ಪ್ರಾಣದ ಮೂಕಧಾತ್ರಿಯಾದ ಈ ಗಿಡ ಅನವರತವೂ ಕಾಲದ ಮೂಲಕ ಸ್ವರ್ಗವೆಂಬ ಧೇನುವಿನ ಹಾಲು ಕರೆದು ಪೃಥಿವಿಯ ಅಮೃತ ಭಂಡಾರವನ್ನು ತುಂಬಲೋಸುಗ ಪ್ರಾಣದ ತೇಜಸ್ಸನ್ನು ಪ್ರಾಣದ ರಸವನ್ನು ಪ್ರಾಣದ ಲಾವಣ್ಯವನ್ನು ಸಂಚಯ ಮಾಡುತ್ತದೆ. ಮತ್ತು ಉತ್ಕಂಠಿತವಾದ ಪ್ರಾಣದ ವಾಣಿ ಹಗಲಿರುಳೂ ಮುಗಿಲಿಗೇರಿ "ನಾನು ಇರಬೇಕು,

ನಾನು ಬದುಕಬೇಕು, ಬದುಕುತ್ತೇನೆ" ಎಂದು ಕೂಗುತ್ತಿರುವಂತೆ ಮಾಡುತ್ತದೆ. ಆ ವಿಶ್ವಪ್ರಾಣದ ವಾಣಿಯನ್ನೇ ಯಾವುದೋ ಒಂದು ವಿಧದಲ್ಲಿ ತನ್ನ ನೆತ್ತರ ನಡುವೆ ಕೇಳಿಸಿಕೊಂಡಿದ್ದನೇನೋ ಈ ಬಲಾಯಿ. ನಾವೆಲ್ಲ ಮಾತ್ರ ಅದನ್ನು ತಿಳಿಯದೆ ನಕ್ಕುಬಿಟ್ಟಿದ್ದೆವು.

ಒಂದು ದಿನ ಬೆಳಗ್ಗೆ ವೃತ್ತಪತ್ರಿಕೆ ಓದುತ್ತಿದ್ದೆ. ಈ ಬಲಾಯಿ ನನ್ನ ಗಮನವನ್ನು ಸೆಳೆದು ಹಠಮಾಡಿ ಕೈಹಿಡಿದು ತೋಟದೊಳಗೆ ಕರೆದುಕೊಂಡು ಹೋದ. ಅಲ್ಲೊಂದು ಸ್ಥಳದಲ್ಲಿ ಒಂದು ಸಸಿ ಹೊರಟುಕೊಂಡದ್ದನ್ನು ತೋರಿಸಿ

"ಚಿಕ್ಕಪ್ಪಾ, ಈ ಗಿಡ ಯಾವುದು?" ಎಂದು ಕೇಳಿದ.

ನೋಡಿದೆ. ಯಾವುದೋ ಬೂರುಗದ ಗಿಡದ ಸಸಿ ತೋಟದ ದಮ್ಮಸ್ಸು ಮಾಡಿದ ಹೋಗಿ ಬರುವ ರಸ್ತೆಯಲ್ಲಿ ಹುಟ್ಟಿಕೊಂಡಿದೆ.

ಪಾಪ! ಬಲಾಯಿ ನನ್ನಲ್ಲಿಗೆ ಕರೆತಂದು ದೊಡ್ಡ ತಪ್ಪು ಮಾಡಿಬಿಟ್ಟಿದ್ದ. ಅಷ್ಟು ಚಿಕ್ಕ ಎಳೆಯ ಸಸಿ, ಯಾವಾಗ ಎದ್ದುಕೊಂಡಿತ್ತೋ ಏನೋ, ಮಗುವಿನ ಮೊದಲ ಅಳುವಿನ ದನಿಯಂತೆ ಹುಟ್ಟಿದೊಡನೆ ಬಲಾಯಿಯ ಕಣ್ಣಿಗೆ ಬಿದ್ದಿದೆ. ಅದಾದ ಮೇಲೆ ಪ್ರತಿದಿನ ಬಲಾಯಿ ತನ್ನ ಕೈಯಿಂದಲೇ ನೀರೆರೆಯುತ್ತ ಬಂದಿದಾನೆ. ಬೆಳಗ್ಗೆ, ಸಂಜೆ ತಪ್ಪದೆ ನಿತ್ಯವೂ ವ್ಯಗ್ರನಾಗಿ ಅದೆಷ್ಟುಮಟ್ಟಿಗೆ ಬೆಳೆದಿದೆಯೆಂದು ನೋಡುತ್ತಾನೆ. ಬೂರುಗದ ಗಿಡ ಬೆಳೆಯುವುದು ಬೇಗ. ಆದರೆ ಆ ಬಲಾಯಿಯ ಅವಸರಕ್ಕೆ ತೃಪ್ತಿಮಾಡುವಷ್ಟು ಬೇಗ ಬೆಳೆಯಲು ಅದಕ್ಕೆ ಸಾಧ್ಯವಿಲ್ಲ. ಆ ಗಿಡ ಒಂದು ಅಡಿ ಎತ್ತರ ಬೆಳೆದೊಡನೆ ಅದರ ಪತ್ರ ಸಮೃದ್ಧಿಯನ್ನು ಕಂಡು ಇದಾವುದೋ ಅದ್ಭುತವಾದ ಗಿಡ ಎಂದು ರೊಮಾಂಚಪಡೆದ ಬಲಾಯಿ. ಮಗುವಿನ ಮೊದಲ ಬುದ್ಧಿಯ ಮೊಳೆತವನ್ನು ಕಂಡು ಅಚ್ಚರಿಯಾಗುವ ತಾಯಂತೆ ಅಚ್ಚರಿಯಾದ ಬಲಾಯಿ. ನನ್ನನ್ನೂ ಹಾಗೇ ಅಚ್ಚರಿಗೊಳಿಸಲೆಂದೇ ಬಂದು ಬಲವಂತವಾಗಿ ಕರೆದೊಯ್ದಿದ್ದ.

ನಾನು ಕೂಡಲೇ "ಮಾಲಿ (ತೋಟಗಾರ)ಗೆ ಹೇಳಬೇಕು, ಇದನ್ನು ಕಿತ್ತು ಎಸೆಯಲಿ" ಎಂದೆ.

ಬಲಾಯಿಯು ಬೆಚ್ಚಿಬಿದ್ದ. ಏನು ಭಯಂಕರ ಮಾತು! "ಇಲ್ಲ, ಚಿಕ್ಕಪ್ಪಾ, ಅದನ್ನು ಕಿತ್ತುಹಾಕಿಸಬೇಡಿ. ನಿಮ್ಮ ಕಾಲಿಗೆ ಬೀಳ್ತೇನೆ. ಬೇಡಿ" ಎಂದು ಅಂಗಲಾಚಿದ.

ನಾನು ರೇಗಿ "ಇದೇನೋ ಬಲಾಯಿ, ಹುಚ್ಚುಮಾತು! ಅಲ್ಲಾ ಹೋಗಿ ಬರುವ ರಸ್ತೆ ನಡುವೆ ಬೆಳೆದುಬಿಟ್ಟಿದೆ. ದೊಡ್ಡದಾಗಿಬಿಟ್ಟರೆ ಸುತ್ತಮುತ್ತೆಲ್ಲ ಬೂರಗದ ಹತ್ತಿ ಗಾಳಿಯಲ್ಲಿ ತುಂಬಿಹೋದೀತು ಆಮೇಲೆ!" ಎಂದೆ.

ನನ್ನೆಡೆಯಲ್ಲಿ ಅವನ ಮಾತು ನಡೆಯದೆ ಇದ್ದುದನ್ನು ಕಂಡು ಅವನ ಚಿಕ್ಕಮ್ಮನ ಬಳಿಗೆ ಹೋದ. ಆಕೆಯ ತೊಡೆಯಮೇಲೆ ಕೂತು ಕೊರಳನ್ನು ತಬ್ಬಿಕೊಂಡು

ಬಿಕ್ಕಿ ಬಿಕ್ಕಿ ಅಳುತ್ತ "ಚಿಕ್ಕಮ್ಮಾ...ನೀವು ಚಿಕ್ಕಪ್ಪನಿಗೆ ಹೇಳಿ, ಗಿಡ ಕಿತ್ತುಹಾಕಿಸಬೇಡ ಅಂತ" ಎಂದು ಬೇಡಿಕೊಂಡ.

ಅವನು ಒಳ್ಳೆಯ ಉಪಾಯವನ್ನೇ ಮಾಡಿದ್ದ. ಅವನ ಚಿಕ್ಕಮ್ಮ ನನ್ನನ್ನು ಕರೆದು "ಕೇಳಿದಿರಾಂದ್ರೆ. ಅವನ ಗಿಡವನ್ನು ಕಿತ್ತುಹಾಕಿಸದೆ ಹೋದರೆ ನಿಮ್ಮ ತೋಟ ಹಾಳಾಗುತ್ತೆಯೆ? ಇದ್ದುಕೊಂಡು ಹೋಗಲಿ ಬಿಡಿ" ಎಂದಳು. ಇದ್ದುಕೊಂಡು ಹೋಗಲಿ ಎಂದುಬಿಟ್ಟೆ. ಮೊದಲಲ್ಲೇ ಬಲಾಯಿ ನನಗೆ ಅದನ್ನು ತೋರಿಸದೆ ಹೋಗಿದ್ದರೆ ನನಗೆ ಅದರಮೇಲೆ ಗಮನವೇ ಇರುತ್ತಿರಲಿಲ್ಲ. ಈಗಂತೂ ನಿತ್ಯವೂ ಅದು ನನ್ನ ಕಣ್ಣಿಗೆ ಬೀಳುತ್ತದೆ. ಒಂದೆರಡು ವರುಷಗಳಲ್ಲಿ ನಾಚಿಗೆಯಿಲ್ಲದೆ ಆಳೆತ್ತರ ಬೆಳೆದುಹೋಗಿದೆ. ಬಲಾಯಿಯಂತೂ ಆ ಗಿಡ ಬಿಟ್ಟರೆ ಅವನಿಗೆ ಬೇರಾವುದೂ ಆಪ್ತವಾದುದಿಲ್ಲವೆಂಬಂತೆ ಆಗಿಬಿಟ್ಟಿದ್ದಾನೆ. ಅಷ್ಟು ಸ್ನೇಹ ಅದರ ಮೇಲೆ.

ಗಿಡವನ್ನು ಪ್ರತಿ ದಿನವೂ ತೋರಿಸುತ್ತಾನೆ, ಏನೂ ತಿಳಿಯದವನ ಹಾಗೆ. ಆ ಹಾಳುಗಿಡ ಯಾರನ್ನೂ ಲೆಕ್ಕಿಸದೆ ಸುಮ್ಮನೆ ಬೆಳೆಯುತ್ತ ಹೋಗುತ್ತಿದೆ. ತಲೆ ಎತ್ತಿಕೊಂಡು ಜಂಬದಿಂದ ಮೆರೆಯುತ್ತದೆ. ನೋಡಿದವರೆಲ್ಲ 'ಈ ಗಿಡ ಇಲ್ಲಿ ಏನು ಮಾಡುತ್ತಿದೆ?' ಎಂದು ಅಚ್ಚರಿಪಡುತ್ತಾರೆ. ಇನ್ನೂ ಎರಡು ಮೂರು ಬಾರಿ ಅದರ ಮರಣದಂಡನೆ ಬಗ್ಗೆ ಪ್ರಸ್ತಾಪ ಬಂತು. ಬಲಾಯಿಗೆ ಆಸೆ ತೋರಿಸಿದೆ. "ನೋಡು, ಇದರ ಬದಲಾಗಿ ಇನ್ನೂ ಚೆನ್ನಾಗಿರುವ ರೋಜಾ ಹೂವಿನ ಗಿಡಗಳ ಸಸಿಗಳನ್ನು ತರಿಸಿಕೊಡುತ್ತೇನೆ" ಎಂದೆ. ಹಾಗೇನಾದರೂ ನಿನಗೆ ಬೂರುಗದ ಗಿಡದ ಮೇಲೆ ಅಷ್ಟು ಹುಚ್ಚಿರುವ ಹಾಗಿದ್ದರೆ ಬೇರೊಂದು ಸಸಿ ತರಿಸಿ ಬೇಲಿಯ ಪಕ್ಕದಲ್ಲಿ ನೆಡಿಸುವ ಹಾಗೆ ಹೇಳುತ್ತೇನೆ. ನೋಡುವುದಕ್ಕೆ ಎಷ್ಟು ಚೆಂದವಾಗಿರುತ್ತೋ!" ಎಂದೆ.

ಆದರೆ ಇದನ್ನು ಕತ್ತರಿಸಿ ಹಾಕುವ ಮಾತೆತ್ತಿದ ತತ್‌ಕ್ಷಣ ಅವನು ಹೆದರಿಕೆಯಿಂದ ಬೆಚ್ಚಿಬೀಳುತ್ತಾನೆ. ಆಗವನ ಚಿಕ್ಕಮ್ಮ "ಆಹಾ, ಬಿಡೀಂದ್ರೆ ಸಾಕು ನಿರ್ವಾಕವಿಲ್ಲ. ಈಗಿದು ಚೆನ್ನಾಗಿ ಕಾಣದೆ ವಕ್ರವಾಗಿ ಕಾಣುತ್ತೇನು?" ಎಂದು ಮೂಗು ಮುರಿಯುತ್ತಾಳೆ. ಎಲ್ಲಿಗೆ ಹೋಗೋಣ!

ನನ್ನ ಅತ್ತಿಗೆ ಸತ್ತುಹೋದ ಮೇಲಿಂದ ಈ ಮಗು ಅವಳ ಕಂಕುಳಲ್ಲೇ ಬೆಳೆದಿದೆ. ಆ ಸಾವಿನ ಶೋಕದಿಂದಲೇ ನಮ್ಮಣ್ಣನಿಗೂ ಮನಸ್ಸು ಕೆಟ್ಟು ವಿಲಾಯಿತಿಗೆ ಇಂಜಿನಿಯರಿಂಗ್ ಕಲಿಯಲು ಹೋದ.

ಮಗು ಮಾತ್ರ ಮಕ್ಕಳಿಲ್ಲದ ನಮ್ಮ ಮನೆಯನ್ನು ಬೆಳಗುತ್ತ ಬಂದಿದೆ.

ಹತ್ತು ಹನ್ನೊಂದು ವರುಷಗಳಾದ ಮೇಲೆ ಅಣ್ಣ ವಿಲಾಯಿತಿಯಿಂದ ಮರಳಿ ಬಂದು ಬಲಾಯಿಯನ್ನು ವಿಲಾಯಿತಿಯಲ್ಲೇ ಪ್ರೌಢ ವಿದ್ಯಾಭ್ಯಾಸ ಮಾಡಿಸುತ್ತೇನೆಂದು

ಕರೆದುಕೊಂಡು ಹೋದ. ವಿಲಾಯಿತಿಗೆ ಹೋಗುವ ಮೊದಲು ಒಂದೆರಡು ವರುಷ ಬಲಾಯಿಯು ತಂದೆಯ ಜೊತೆಯಲ್ಲೇ ಸಿಮ್ಲಾದಲ್ಲಿರಬೇಕೆಂದು ಮಾತು.

ಅಳುತ್ತ ಅಳುತ್ತ ಚಿಕ್ಕಮ್ಮನನ್ನು ಬೀಳ್ಕೊಂಡು ಹೊರಟುಹೋದ ಬಲಾಯಿ. ಆಮೇಲೆ ನನ್ನ ಮನೆ ಶೂನ್ಯ.

ಇನ್ನೂ ಎರಡು ವರುಷ ಕಳೆದುವು. ಈ ನಡುವೆ ಅವನ ಚಿಕ್ಕಮ್ಮ ಅವನನ್ನು ನೆನೆಸಿಕೊಂಡು ಸುಮ್ಮನೆ ಕಂಬನಿ ಸುರಿಸುತ್ತಿದ್ದಳು. ಬಲಾಯಿಯು ಮಲಗುತ್ತಿದ್ದ ಕೋಣೆಗೆ ಹೋಗಿ ಅವನ ಹರಕಲಾದ ಹಳೆಯ ಚಪ್ಪಲಿ, ಒಡೆದುಹೋಗಿದ್ದ ಅವನ ರಬ್ಬರು ಚಂಡು, ಮತ್ತು ಪ್ರಾಣಿ, ಜಂತುಗಳ ಚಿತ್ರ ಕಥೆಗಳ ಪುಸ್ತಕ...ಇವುಗಳನ್ನೆಲ್ಲ ಸುಮ್ಮನೆ ಮುಟ್ಟಿ ಅಲುಗಿಸಿ ದುಃಖವನ್ನು ಬೆಳೆಸಿಕೊಳ್ಳುತ್ತಾಳೆ.

ಇಷ್ಟರೊಳಗೆ ಈ ಚಿಹ್ನೆ, ಈ ನೆನಪುಗಳೆಲ್ಲವನ್ನೂ ಬಿಟ್ಟುಹೋದ ಬಲಾಯಿ ಎಷ್ಟೋ ದೊಡ್ಡವನಾಗಿ ಬೆಳೆದುಬಿಟ್ಟಿದ್ದಾನೆ–ಎಂಬ ವಿಷಯವನ್ನು ನೆನಹಿಗೆ ತಂದುಕೊಂಡು ಸುಮ್ಮನೆ ಚಿಂತಿಸುತ್ತಾಳೆ.

ಯಾವುದೋ ಒಂದು ಸಮಯದಲ್ಲಿ ನೋಡಿದೆ. ಈ ಕೆಲಸಕ್ಕೆ ಬಾರದ ಬೂರುಗದ ಪೋಕರಿ ಗಿಡ ಯಾರಿಗೂ ಕಾಣದಂತೆ ಯಾವ ಕಾಲದಲ್ಲಿ ದೊಡ್ಡದಾಯಿತೋ, ಬೆಳೆದು ನಿಂತುಬಿಟ್ಟಿದೆ ದಿಟ್ಟತನದಿಂದ. ಇಷ್ಟುದಿನ ಇದರ ಕಡೆ ಗಮನ ಕೊಡಲಿಲ್ಲ–ನನ್ನನ್ನು ಕೇಳುವವರಾರು ಎಂದು ಸೊಕ್ಕಿನಿಂದ ನಿಂತಿದೆ. ಇನ್ನಿದನ್ನು ಹೀಗೆ ಬಿಟ್ಟರೆ ಆಗದು–ಅಂದದ್ದೇ ಮಾಲಿಯನ್ನು ಕರೆಸಿ ಕಡಿಸಿಹಾಕಿಸಿಬಿಟ್ಟೆ. ಮುಗಿಯಿತು ಅದರ ಕಥೆ!

ಒಂದು ದಿನ ಸಿಮಲಾಯಿಂದ ಬಲಾಯಿ ತನ್ನ ಚಿಕ್ಕಮ್ಮನಿಗೊಂದು ಕಾಗದ ಬರೆದ–"ಚಿಕ್ಕಮ್ಮ, ನನ್ನ ಆ ಬೂರುಗದ ಗಿಡದ ಫೋಟೋ ಒಂದನ್ನು ಕಳಿಸಿಕೊಡಿ ಆದಷ್ಟು ಬೇಗ" ಎಂದು.

ವಿಲಾಯಿತಿಗೆ ಹೋಗುವ ಮೊದಲು ಒಮ್ಮೆ ನಮ್ಮಲ್ಲಿಗೆ ಬಂದು ಒಂದೆರಡು ದಿನ ಇದ್ದು ಹೋಗುವ ಮಾತಿತ್ತು. ಆಗಲಿಲ್ಲ. ಬಲಾಯಿ ತನ್ನೊಡನೆ ತನ್ನ ಹಳೆಯ ಗೆಳೆಯನ ಫೋಟೋ ಒಂದನ್ನು ತೆಗೆದುಕೊಂಡು ಹೋಗಲು ಬಯಸಿದ್ದ.

ಅವನ ಚಿಕ್ಕಮ್ಮ ನನ್ನನ್ನು ಕರೆದು "ಯಾರಾದರೊಬ್ಬ ಫೋಟೋಗ್ರಾಫ್‌ರನ್ನು ಕರೆಸಿ ಅಂದ್ರೆ" ಎಂದಳು.

"ಯಾಕೆ?" ಎಂದೆ.

ಬಲಾಯಿಯ ಕಾಗದವನ್ನು ನನಗೆ ತೋರಿಸಿದಳು. "ಆ ಗಿಡವನ್ನು ಕತ್ತರಿಸಿ ಹಾಕಿ ಆಯಿತು" ಅಂದುಬಿಟ್ಟೆ.

ಬಲಾಯಿಯ ಚಿಕ್ಕಮ್ಮ ಅಂದಿನಿಂದ ಎರಡು ದಿನ ಅನ್ನವೇ ತಿನ್ನಲಿಲ್ಲ. ಆಮೇಲೆ ಎಷ್ಟೋ ದಿನಗಳವರೆಗೂ ನನ್ನೊಡನೆ ಮಾತು ಕೂಡ ಬಿಟ್ಟುಬಿಟ್ಟಳು. ಬಲಾಯಿಯ ತಂದೆ ಅವಳ ಕಂಕುಳಿಂದವನನ್ನು ಕಸಿದುಕೊಂಡು ಹೋಗಿದ್ದ;– ಅವಳ ನಾಡಿಯಿಂದ ಕತ್ತರಿಸಿಕೊಂಡು ಹೋಗಿದ್ದಂತೆ ಅವಳ ಅನುಭವ. ಮತ್ತೆ ಕಡೆಗೆ ಅವನ ಚಿಕ್ಕಪ್ಪ ತನ್ನ ಬಲಾಯಿಯ ಪ್ರಾಣದ ವಸ್ತುವಾದ ಆ ಬೂರುಗದ ಗಿಡವನ್ನು ನಿರ್ದಯೆಯಿಂದ ಕತ್ತರಿಸಿಹಾಕಿದ್ದಾನೆ. ಅದರ ಜೊತೆಯಲ್ಲಿ ಅವಳ ಸಮಸ್ತ ಹೃದಯದ ಸಂಪತ್ತನ್ನೆಲ್ಲ ಸೂರೆಮಾಡಿ ಹಾಳು ಮಾಡಿದ್ದಾನೆ. ಅದನ್ನು ಅವಳು ಹೇಗೆತಾನೆ ಮರೆತಾಳು? ಈ ಗಿಡ ತನ್ನ ಬಲಾಯಿಯ ಪ್ರತಿಬಿಂಬ. ಅವನದೇ ಪ್ರಾಣದ ಬಂಧು!

೧೯. ಚಿತ್ರಕಾರ

ಮೈಮೆನ್‌ಸಿಂಗ್ ನಗರದ ಹೈಸ್ಕೂಲಿನಿಂದ ಮೆಟ್ರಿಕ್ ಪಾಸುಮಾಡಿ ನಮ್ಮ ಗೋವಿಂದನು ಕಲಿಕತ್ತೆಗೆ ಬಂದ.

ವಿಧವೆಯಾದ ತಾಯಿಯ ಬಳಿ ಅಲ್ಪಸ್ವಲ್ಪ ಬಂಡವಾಳದ ಹಣ ಇತ್ತು. ಆದರೆ ಎಲ್ಲಕ್ಕಿಂತ ದೊಡ್ಡದಾದ ಬಂಡವಾಳ ಅವನಲ್ಲಿತ್ತು–ಅದು ಅವನ ಕದಲಿಸಲಾಗದ ಸಂಕಲ್ಪ. ಅವನು ಮನಸ್ಸು ಮಾಡಿದ್ದ. ಏನೇ ಆಗಲಿ, ಬಾಳುವೆಯನ್ನೇ ಪಣವಾಗಿಟ್ಟಾದರೂ ಸರಿ, ಕಾಸು ಮಾಡಲೇಬೇಕು, ಎಂದು. ಸದಾ ಅವನ ಭಾಷೆಯಲ್ಲಿ ಹಣಕ್ಕೆ ಕಾಸು ಎಂದೇ ಒಕ್ಕಣೆ. ಒಟ್ಟಿನಲ್ಲಿ ಅವನ ಮನದಲ್ಲಿ ಹೆಚ್ಚಾಗಿ ದರ್ಶನ, ಸ್ಪರ್ಶನ, ಘ್ರಾಣಗಳಿಗೆ ಯೋಗ್ಯವಾದ ಪ್ರತ್ಯಕ್ಷ ಪದಾರ್ಥವೊಂದಿತ್ತು.

ಅವನಿಗೆ ದೊಡ್ಡ ಹೆಸರುಗಳ ಮೇಲೆ ಮೋಹವಿರಲಿಲ್ಲ. ಅತಿ ಸಾಧಾರಣವಾದ ಆ ಕಾಸು ಸಂತೆ ಸಂತೆಗಳಲ್ಲಿ, ಪೇಟೆ ಪೇಟೆಗಳಲ್ಲಿ ಕೈಯಿಂದ ಕೈಗೆ ತಿರುಗುತ್ತ ಸವೆದು ಕೊಳಕಾಗಿಹೋಗುವ 'ಕಾಸು.' ತಾಮ್ರದ ವಾಸನೆಯಿರುವ 'ಕಾಸು.' ಕುಬೇರನ ಆದಿಮ ಸ್ವರೂಪ ಮತ್ತು ಬೆಳ್ಳಿಯಲ್ಲಿ, ಚಿನ್ನದಲ್ಲಿ, ಕಾಗದದಲ್ಲಿ, ಹುಂಡಿ (Cheque)ಯಲ್ಲಿ ನಾನಾರೂಪವನ್ನು ಪಡೆದು ಮನುಷ್ಯರ ಮನವನ್ನು ಮುತ್ತಿಗೆ ಹಾಕಿಬಿಟ್ಟಿರುವ 'ಕಾಸು.'

ನಾನಾ ಅಂಕುಡೊಂಕಾದ ದಾರಿಗಳಲ್ಲಿ ಹಾದು ನಾನಾ ಕೆಸರು ನೆಲಗಳಲ್ಲಿ ಕಾಲಿಟ್ಟು ಮೈ ಮಲಿನ ಮಾಡಿಕೊಂಡು ಮಾಡಿಕೊಂಡೇ ಇಂದು ಗೋವಿಂದ ತನ್ನ ಕಾಸೆಂಬ ಹೊಳೆಯ ವಿಶಾಲ ಪ್ರವಾಹದ ಚೆನ್ನಾಗಿ ಕಟ್ಟಿಹಾಕಿದ ಘಾಟಿಗೆ ಬಂದು ತಲಪಿದ್ದಾನೆ. ಗೋಣಿಚೀಲಗಳ ವ್ಯಾಪಾರಿಯಾದ ದೊಡ್ಡ ಸಾಹೇಬ ಮ್ಯಾಕ್‌ಡ್ಯೂಗಾಲ್‌ರ ಹೆಡ್ ಗುಮಾಸ್ತೆಯ ಆಸನದಲ್ಲಿ ಈಗ ಅವನ ಧ್ರುವ ಪ್ರತಿಷ್ಠೆಯಾಗಿದೆ.

ಎಲ್ಲರೂ ಅವನಿಗೆ ನಾಮಕರಣ ಮಾಡಿದ್ದುದು ಮ್ಯಾಕ್ ಮಲಾಲ್ (ಮ್ಯಾಕ್‌ರ ಮೆಚ್ಚಿನವ) ಎಂದು.

ಗೋವಿಂದನ ದಾಯಾದಿ ಸೋದರನಾದ ಮುಕುಂದನು ವಕೀಲಿ ವೃತ್ತಿಯಲ್ಲಿ ಚೆನ್ನಾಗಿ ದುಡಿದು ಒಬ್ಬ ವಿಧವೆ ಹೆಂಡತಿ, ನಾಲ್ಕು ವರುಷದ ಮಗ, ಕಲಿಕತ್ತೆಯಲ್ಲೊಂದು ಮನೆ, ಸ್ವಲ್ಪ ನಗದು ಹಣ–ಇವೆಲ್ಲ ಬಿಟ್ಟು ಸ್ವರ್ಗಕ್ಕೆ ಪಯಣ ಬೆಳೆಸಿದ್ದ. ಆಸ್ತಿಯ ಜತೆಗೆ ಸಾಲವೂ ಇತ್ತು. ಆದರೂ ಅವನ ಕುಟುಂಬದ ಅನ್ನ, ಬಟ್ಟೆಗಳಿಗೆ ಸಾಕಾಗುವಷ್ಟು

ಹೇಗೋ ಸಾಗುತ್ತಿತ್ತು. ಹೆಚ್ಚಾಗಿಲ್ಲ. ಈ ಕಾರಣದಿಂದ ಅವನ ಮಗ ಚೂನೀಲಾಲನು ನೆರೆಹೊರೆಯವರ ಮೆಚ್ಚುಗೆಗೆ ಪಾತ್ರನಾಗುವಷ್ಟು ವಿದ್ಯಾಭ್ಯಾಸ ಕಲಿಯಲು ಆಗದೆ ಹೋಯಿತು.

ಮುಕುಂದಣ್ಣನ ಉಯಿಲಿನ ಅನುಸಾರವಾಗಿ ಈ ಕುಟುಂಬದ ಸಂಪೂರ್ಣ ಭಾರ ಗೋವಿಂದನ ಹೆಗಲ ಮೇಲೇ ಬಿದ್ದಿತ್ತು. ಗೋವಿಂದನು ಅಣ್ಣನ ಮಗನ ಕಿವಿಯಲ್ಲಿ ಎಳೆತನದಿಂದಲೂ 'ಕಾಸು ಮಾಡೋ, ಕಾಸು ಮಾಡಬೇಕು', ಎಂದು ಊದುತ್ತಿದ್ದ.

ಮಗನ ಇಂಥ ದೀಕ್ಷೆಯ ಹಾದಿಗೆ ಅಡ್ಡಿ ಬಂದದ್ದು ಅವನ ತಾಯಿ ಸತ್ಯವತಿಯಿಂದ. ಆಕೆಗೆ ಕಿರಿತನದಿಂದಲೂ ಶಿಲ್ಪವಿದ್ಯೆಯಲ್ಲಿ ಅತ್ಯಂತ ಆಸಕ್ತಿ. ಹೂ ಹಣ್ಣುಗಳಿಂದ, ಮರದ ಎಲೆಗಳಿಂದ, ಹೊಟ್ಟಿನಿಂದ, ತಿಂಡಿಪದಾರ್ಥಗಳಿಂದ, ಕಾಗದ ಕತ್ತರಿಸಿ, ಬಟ್ಟೆ ಕತ್ತರಿಸಿ, ಮಣ್ಣಿನಿಂದ, ಹಿಟ್ಟಿನಿಂದ, ಮರದ ಗೋಂದಿನಿಂದ ನಾನಾಬಗೆಯ ಚಮತ್ಕಾರವಾದ ವಸ್ತುಗಳನ್ನು ರಚಿಸುವ ಹವ್ಯಾಸವಿತ್ತು ಆಕೆಗೆ. ಈ 'ಹುಚ್ಚು' ಅವಳಿಗಿದ್ದುದರಿಂದ ಎಷ್ಟೋ ಸಂಕಟಕ್ಕೂ ಕಾರಣವಾಯಿತು. ಆವಶ್ಯಕವಿಲ್ಲದ, ಅಕಾರಣವಾದುದರ ವೇಗ ಆಷಾಢ ಮಾಸದ ಹೊಳೆಯ ನೆರೆಯಂತೆ. ಅದರ ಪ್ರವಾಹದಲ್ಲಿ ಉಪಯೋಗವಾಗುವಂಥ ಯಾವ ಹರಿಗೋಲನ್ನೂ ನಡೆಸಿಕೊಂಡು ಹೋಗುವುದು ಮಾತ್ರ ಅಸಾಧ್ಯ. ಆಗಾಗ ದೂರುಗಳೂ ಬೇಕಾದಷ್ಟು ಬರುತ್ತಿದ್ದುವು. ಬಂಧು ಬಳಗಗಳ ಮನೆಗೆ ಔತಣಕ್ಕೆ ಕರೆದಿದ್ದುದನ್ನು ಸತ್ಯವತಿ ಮರೆತುಬಿಡುತ್ತಿದ್ದಳು.

ತನ್ನ ಕೋಣೆಯಲ್ಲಿ ಬಾಗಿಲು ಹಾಕಿಕೊಂಡು ಒಂದು ಮರದ ತುಂಬ ಜೇಡಿ ಮಣ್ಣು ತುಂಬಿಸಿಕೊಂಡು ಏನೋ ಕೆಲಸ ಮಾಡುತ್ತ ಕಾಲ ತಳ್ಳುತ್ತಿದ್ದಳು. ಸಂಬಂಧಿಕರು ಜಂಭ, ದುರಹಂಕಾರ ಎಂದರು. ಅವರಿಗೆ ತೃಪ್ತಿಯಾಗುವ ನೆಪ ಹೇಳುವುದಕ್ಕೂ ಸಾಧ್ಯವಿಲ್ಲ. ಈ ಕೆಲಸಗಳಲ್ಲೂ ಒಳಿತು ಕೆಡಕುಗಳ ಮೌಲ್ಯಗಳ ವಿಚಾರ ನಡೆಯಬಹುದು ಎಂಬ ತತ್ತ್ವ, ಪುಸ್ತಕಗಳನ್ನೋದಿದ ಲಾಯರ್ ಮುಕುಂದನಂಥವನಿಗೂ ಗೊತ್ತಿರುವ ವಿಷಯ.

ಆರ್ಟ್–'ಕಲೆ' ಎಂಬ ಶಬ್ದದ ಪ್ರಭಾವದಿಂದ ಮೈನವಿರೇಳುವುದು. ಆದರೆ ತನ್ನ ಈ ಹಳೆಯ ಕಾಲದ ಹೆಂಡತಿಯ ಕೈವಾಡವಿರುವ ಈ ಕೆಲಸಗಳಲ್ಲೂ ಈ ಶಬ್ದಕ್ಕೆ ಯಾವುದೋ ಒಂದು ಸ್ಥಾನವಿದೆಯೆಂಬುದನ್ನು ಆತ ಒಪ್ಪಿಕೊಳ್ಳಲಾರ. ಈ ಮನುಷ್ಯನ ಸ್ವಭಾವ, ನಡೆಗಳಲ್ಲೆಲ್ಲೂ ಚುಚ್ಚುವಂಥದು, ತಿವಿಯುವಂಥದು ಯಾವುದೂ ಇಲ್ಲ. ಆದ್ದರಿಂದ ಹೆಂಡತಿಯು ಅನಾವಶ್ಯಕ 'ಖಯಾಲಿ' ಕೆಲಸಗಳಲ್ಲಿ ಸಮಯ ನಷ್ಟಮಾಡುವುದನ್ನು ನೋಡಿಯೂ ಆತ ನಕ್ಕು ಗೇಲಿಮಾಡಿಬಿಡುತ್ತಿದ್ದ. ಆದರೆ ಆ ನಗೆಯಲ್ಲಿ ವ್ಯಂಗ್ಯವಾಗಲಿ ಅಣಕವಾಗಲಿ ಇರುತ್ತಿರಲಿಲ್ಲ. ಸ್ನೇಹವಿತ್ತು. ಇದರ ಬಗ್ಗೆ ಯಾರಾದರೂ ಹುಜ್ಜೆತ್ತಿದರೆ ಆತ ಅದಕ್ಕೆ ಪ್ರತಿವಾದ ಮಾಡುತ್ತಿದ್ದ.

ಮುಕುಂದನ ಸ್ವಭಾವದಲ್ಲಿ ವಿಚಿತ್ರವಾದೊಂದು ವೈಪರೀತ್ಯವಿತ್ತು. ವಕಾಲತಿಯಲ್ಲಿ ಅತಿ ಪ್ರವೀಣ, ಆದರೆ ಮನೆವಾಳ್ತೆಯಲ್ಲಿ ಮಾತ್ರ ಬುದ್ಧಿ ಕಡಿಮೆ. 'ಕಾಸು' ಅವನ ವ್ಯವಹಾರದ ನಡುವೆ ಹೊಳೆಯಾಗಿ ಹರಿದಿತ್ತು, ಆದರೆ ಅದು ಅವನ ಧ್ಯಾನಕ್ಕೆ ಅಡ್ಡಿಯಾಗಿ ಬರುತ್ತಿರಲಿಲ್ಲ. ಆದ್ದರಿಂದ ಅವನ ಮನಸ್ಸು ಮುಕ್ತವಾಗೇ ಇತ್ತು. ಅನುಗತ ಆಳುಕಾಳುಗಳ ಮೇಲೂ ಮನೆಯವರ ಮೇಲೂ ತನ್ನ ಇಷ್ಟವೇನಾದರೂ ನೆರವೇರಿಸಿಕೊಳ್ಳಲು ಜೋರು ಮಾಡಬೇಕಾಗಿರಲಿಲ್ಲ. ಬಾಳುವೆಯ ಯಾತ್ರೆ ಅತಿ ಸುಗಮವಾಗೇ ಇತ್ತು. ಎಡರು, ತೊಡರುಗಳಾವುದೂ ಇರಲಿಲ್ಲ. ಮನೆಯ ಇತರೇ ಜನ ಸತ್ಯವತಿಯ 'ಖಯಾಲಿ'ಯ ಬಗ್ಗೆ ಟೀಕೆಮಾಡ ಹೊರಟಾಗ ಆತ ಅದನ್ನಲ್ಲೇ ನಿಲ್ಲಿಸಿಬಿಡುತ್ತಿದ್ದ. ಆಗಾಗ ಕೋರ್ಟಿನಿಂದ ಮರಳುವಾಗ ದಾರಿಯಲ್ಲಿ ರಾಧಾ ಬಜಾರಿಗೆ ಹೋಗಿ ಅಲ್ಲಿಂದ ಸ್ವಲ್ಪ ಬಣ್ಣವೋ, ಬಣ್ಣದ ರೇಶಿಮೆ ದಾರವೋ, ಬಣ್ಣದ ಪೆನ್ಸಿಲೋ ಏನಾದರೂ ತಂದು ಸತ್ಯವತಿಗೆ ತಿಳಿಯದಂತೆ ಅವಳ ಮಲಗುವ ಕೋಣೆಯಲ್ಲಿದ್ದ ಮರದ ಪೆಟ್ಟಿಗೆಯ ಮೇಲೆ ಜೋಡಿಸಿಟ್ಟು ಬರುತ್ತಿದ್ದ.

ಯಾವತ್ತಾದರೂ ಸತ್ಯವತಿ ಬರೆದಿದ್ದ ಒಂದನ್ನು ಕೈಗೆತ್ತಿಕೊಂಡು 'ಭೇಷ್, ಇದಂತೂ ಬಹಳ ಚಲೋ ಇದೆ' ಎನ್ನುತ್ತಿದ್ದ. ಒಂದು ದಿನ ಒಬ್ಬ ಮನುಷ್ಯನ ಚಿತ್ರವನ್ನು ತಲೆಕೆಳಗಾಗಿ ಹಿಡಿದು ಅದರ ಕಾಲುಗಳನ್ನು ಹಕ್ಕಿಯ ಮುಂಡವೆಂದು ತಿಳಿದುಕೊಂಡು "ಸತೂ, ಇದಕ್ಕೆ ಕಟ್ಟುಹಾಕಿಸಿಡಬೇಕು. ಈ ಬಕ ಪಕ್ಷಿಯ ಚಿತ್ರ ಬಹಳ ಚಮತ್ಕಾರವಾಗಿ ಬಂದಿದೆ" ಎಂದುಬಿಟ್ಟಿದ್ದ. ಮುಕುಂದನು ತನ್ನ ಹೆಂಡತಿಯ ಚಿತ್ರಕಲೆಯನ್ನು ಏನೋ ಒಂದು ಹುಡುಗಾಟಿಕೆಯ ಚಪಲವೆಂದು ಅದರಿಂದಲೇ ಏನೋ ಒಂದು ತಮಾಷೆಯನ್ನನುಭವಿಸುತ್ತಿದ್ದ. ಹೆಂಡತಿಯೂ ತನ್ನ ಗಂಡನ ಚಿತ್ರ ವಿಮರ್ಶೆಯಿಂದ ಅದೇ ಬಗೆಯ ತಮಾಷೆಯನ್ನನುಭವಿಸುತ್ತಿದ್ದಳು. ಸತ್ಯವತಿಯು ಮನದಲ್ಲಿ ನಿಶ್ಚಯವಾಗಿ ತಿಳಿದುಕೊಂಡಿದ್ದಳು–ವಂಗದೇಶದಲ್ಲಿ ಬೇರೆ ಯಾವ ಕುಟುಂಬದಲ್ಲೂ ಇಷ್ಟು ಉತ್ತೇಜನ, ಇಷ್ಟು ಪ್ರೋತ್ಸಾಹ, ಇಷ್ಟು ಬೆಂಬಲವನ್ನು ಅವಳು ನಿರೀಕ್ಷೆಮಾಡುತ್ತಿರಲಿಲ್ಲ. ತನ್ನ ಕಲಾಸಾಧನೆಯಲ್ಲಿ ಅವಳ ಈ ತುಳಿದಿಡಲಾಗದ ಉತ್ಸಾಹಕ್ಕೆ ಯಾವ ಮನೆಯಲ್ಲೂ ಇಷ್ಟು ವಿಶ್ವಾಸದಿಂದ ದಾರಿಗೊಡುತ್ತಿರಲಿಲ್ಲ. ಈ ಕಾರಣದಿಂದ ಅವಳ ಇಂಥ ಒಳ್ಳೆಯ ಗಂಡ ಅವಳ ಯಾವ ರಚನೆಯನ್ನಾಗಲಿ ಅದ್ಭುತ ಅತ್ಯುಕ್ತಿಯಿಂದ ಹೊಗಳಿದಾಗ ಸತ್ಯವತಿಗೆ ಕಂಬನಿ ತಡೆದಿಟ್ಟುಕೊಳ್ಳಲಾಗುತ್ತಿರಲಿಲ್ಲ.

ಇಂಥ ದುರ್ಲಭವಾದ ಸೌಭಾಗ್ಯವನ್ನು ಸಹ ಕಳೆದುಕೊಳ್ಳಬೇಕಾಯಿತು ಸತ್ಯವತಿ. ಒಂದು ದಿನ, ಸಾಯುವ ಮೊದಲು, ಗಂಡ ಅವಳನ್ನ ಕರೆದು "ನೋಡು– ನಾನು ಆಸ್ತಿ ಎಷ್ಟು ಬಿಟ್ಟುಹೋಗುತ್ತೇನೋ, ಅದರಲ್ಲಿ ಅರ್ಧದಷ್ಟು ಸಾಲ ಕೂಡ ಇದೆ. ಆದ್ದರಿಂದ ಯಾರಾದರೂ ಎಂಥ ಬಿರುಕಿರುವ ದೋಣಿಯನ್ನು ಕೂಡ

ನಡುನೀರಲ್ಲಿ ನಡೆಸಿಕೊಂಡು ಹೋಗುವಂಥವನಿದ್ದರೆ ಅವನ ಜವಾಬುದಾರಿಗೆ ಇದನ್ನು ಬಿಡಬೇಕು" ಎಂದು ಹೇಳಿದ್ದ. ಅದರ ಅನುಸಾರವಾಗೇ ಸತ್ಯವತಿಯು ನಾಲ್ಕೂ ಕಡೆ ವಿಚಾರಿಸಿ ಇದಕ್ಕೆ ದಾಯಾದಿ ಗೋವಿಂದನೇ ತಕ್ಕ ಆಳು ಎಂದು ನಿರ್ಧರಿಸಿ ತನ್ನ ಮತ್ತು ಮಗ ಚೂನೀಲಾಲನ ಯೋಗಕ್ಷೇಮದ ಭಾರವನ್ನು ಅವನ ಮೇಲೇ ಹಾಕಿಬಿಟ್ಟಿದ್ದಳು. ಗೋವಿಂದನು ಮೊದಲನೇ ದಿನದಿಂದಲೇ ಹೇಳಿಬಿಟ್ಟಿದ್ದ–ಪ್ರಪಂಚದಲ್ಲಿ ಎಲ್ಲದಕ್ಕೂ ಮೇಲು, ಎಲ್ಲದಕ್ಕೂ ಅಗ್ರವಾಗಿರುವುದು ಕಾಸು ಎಂದು.

ಗೋವಿಂದನ ಈ ಉಪದೇಶದ ನಡುವೆ ಅದೆಂಥ ಆಳವಾದ ಹೀನತೆಯಿತ್ತೆಂದರೆ ಅದರಿಂದ ಸತ್ಯವತಿಗೆ ಆಗಾಗ ಅತ್ಯಂತ ಅಸಹ್ಯವೆನಿಸುತ್ತಿತ್ತು.

ಆದರೂ ನಾನಾ ರೂಪದಲ್ಲಿ ಆಹಾರ, ವ್ಯವಹಾರಗಳಲ್ಲಿ ಕಾಸಿನ ಕಾರುಬಾರು ನಡೆದುಕೊಂಡುಹೋಯಿತು. ಅದರ ಬಗ್ಗೆ ಮಾತು ಮಾತಿಗೆ ಚಿಂತಿಸದೆ ಹೋದರೆ ಯಾವ ಅಗೌರವತೆಯೂ ತೋರುತ್ತಿರಲಿಲ್ಲ. ಅದೊಂದೇ ಅಲ್ಲ ಬೇಸರ ತರುವಂಥದು. ಆದರೆ ಇದರಿಂದ ಮಗನ ಮನುಷ್ಯತ್ವಕ್ಕೆ ಪೆಟ್ಟು ಬೀಳುತ್ತದಲ್ಲ ಎಂದು. ಆದರೆ ಅನುಭವಿಸದೆ ವಿಧಿಯಿಲ್ಲ. ಏಕೆಂದರೆ ಅತ್ಯಂತ ಸುಕುಮಾರ ಮನೋಭಾವವಿರುವಂಥವರಿಗೆ, ಅಸಾಮಾನ್ಯ ಸೂಕ್ಷ್ಮತೆ ಆತ್ಮಗೌರವಗಳಿರುವವರಿಗೆ ರಕ್ಷಣೆ ಸುಲಭವಲ್ಲ. ಅವರನ್ನ ನೋಯಿಸುವುಕ್ಕೆ, ಅವಮಾನಮಾಡುವುಕ್ಕೆ ಸಾಧಾರಣ ಒರಟು ಸ್ವಭಾವದರಿಗೆ ಅಷ್ಟು ಪ್ರಯಾಸವಾಗುವುದಿಲ್ಲ.

ಶಿಲ್ಪ ಕಲೆಗೆ ಹಲಕೆಲವು ಸಲಕರಣೆಗಳು ಆವಶ್ಯಕ. ಇಷ್ಟು ದಿನ ಸತ್ಯವತಿಯು ಅವುಗಳನ್ನು ಅಪೇಕ್ಷಿಸದೆಯೇ ಪಡೆಯುತ್ತಿದ್ದಳು. ಅವುಗಳಿಗಾಗಿ ಅವಳು ಎಂದೂ ಮನಸ್ಸು ಚಿಕ್ಕದಾಗಿ ಮಾಡಿಕೊಳ್ಳಬೇಕಾಗಿರಲಿಲ್ಲ. ಸಂಸಾರ ವಹಿವಾಟದ ಲೆಕ್ಕಾಚಾರದಲ್ಲಿ ಇದೆಲ್ಲ 'ಅನಾವಶ್ಯಕ' ಸಾಮಗ್ರಿಗಳನ್ನು ಖರ್ಚಿನ ಪಟ್ಟಿಯಲ್ಲಿ ಸೇರಿಸಿಡಲು ಅವಳ ಮನವೊಡಂಬಡಲಿಲ್ಲ. ಆದ್ದರಿಂದವಳು ತನ್ನ ಆಹಾರದ ವೆಚ್ಚದಲ್ಲಿ ಸ್ವಲ್ಪ ಸ್ವಲ್ಪವಾಗಿ ಉಳಿಸಿಕೊಂಡು ಗುಟ್ಟಾಗಿ ತನ್ನ ಶಿಲ್ಪದ ಸಲಕರಣೆಗಳನ್ನು ಕೊಂಡು ತರುತ್ತಿದ್ದಳು. ತನ್ನ ಶಿಲ್ಪದ ಕೆಲಸವನ್ನೂ ಕೂಡ ಗುಟ್ಟಾಗಿ ತನ್ನ ಮಲಗುವ ಮನೆಯಲ್ಲಿ ಬಾಗಿಲೆಲ್ಲ ಮುಚ್ಚಿಕೊಂಡು ಮಾಡುತ್ತಿದ್ದಳು. ಯಾರಾದರೂ ಆಡಿಕೊಳ್ಳುವರೆಂಬ ಹೆದರಿಕೆಯಿಂದಲ್ಲ. ಅರಸಿಕರ ದೃಷ್ಟಿ ಬಿದ್ದೀತಲ್ಲ ಎಂಬ ಸಂಕೋಚದಿಂದ. ಇಂದು ಅವಳ ಮಗ ಚೂನಿಯೊಬ್ಬನೇ ಅವಳ ಶಿಲ್ಪರಚನೆಗೆ ನೋಟಕ ಮತ್ತು ವಿಮರ್ಶಕ. ಸಾಲದೆ ಕ್ರಮೇಣ ರಚನೆಯ ಕೆಲಸದಲ್ಲೂ ಅವನ ಸಹಕಾರ ದೊರೆಯುತ್ತ ಬಂತು. ಅವನಿಗೂ ಇದರ ಅಮಲು ಹಿಡಿದು ಹೋಯಿತು. ಮಗನ ಈ ಅಪರಾಧ ಹೊರಬೀಳದೆ ಹೋಗುವುದಿಲ್ಲ. ಪುಸ್ತಕದ ಹಾಳೆಗಳನ್ನು ಕೂಡ ಅತಿಕ್ರಮಿಸಿ ಗೋಡೆಗಳ ಮೈಮೇಲೆಲ್ಲ ಅದು ತೋರಿಸಿಕೊಳ್ಳಲಾರಂಭಿಸಿತು. ಕೈ, ಮೋರೆ, ಜುಬ್ಬದ ತೋಳುಗಳ

ಮೇಲೆ ಮಸಿಯ ಮಚ್ಚೆಗಳು ಕಣ್ಣಿಗೆ ಬಿದ್ದು ದೂರು ಹೇಳತೊಡಗುತ್ತವೆ. ಕಾಸಿನ ಸಂಪಾದನೆಯ ತಪಸ್ಯದಿಂದ ಮಗುವಿನ ಮನಸ್ಸನ್ನು ಕೂಡ ತಪ್ಪಿಸಲು ಇಂದ್ರದೇವ ಬಿಡುವಂಥವನಲ್ಲ. ಹೀಗಾಗಿ ಚಿಕ್ಕಪ್ಪನ ಕೈಯಲ್ಲಿ ಅನೇಕ ಶಾಸ್ತಿಯನ್ನು ಅನುಭವಿಸಬೇಕಾಯಿತು ಚೂನೀಲಾಲ.

ಒಂದು ಕಡೆ ಅವನ ಮೇಲೆ ಶಾಸನ ಕಠಿಣವಾಗುತ್ತ ಬಂದಂತೆಲ್ಲ ಇನ್ನೊಂದು ಕಡೆ ಅವನಮ್ಮ ಅವನ ಅಪರಾಧವನ್ನು ಮುಂದುವರಿಸಲು ನೆರವಾಗಲು ತೊಡಗಿದಳು. ಆಫೀಸಿನ ದೊಡ್ಡ ಸಾಹೇಬ ಆಗಾಗ ತನ್ನ ಹೆಡ್‌ಕ್ಲಾರ್ಕನ್ನು ಸಂಗಡ ಕರೆದುಕೊಂಡು ಹೊರಗಡೆ 'ಸರ್ಕೀಟು' ಹೋಗುತ್ತಿದ್ದಾಗೆಲ್ಲ ತಾಯಿ, ಮಗ ಇಬ್ಬರಿಗೂ ಆನಂದ ಹಿಡಿಸಲಾಗುತ್ತಿರಲಿಲ್ಲ. ಆಗ ಅವರಿಬ್ಬರೂ ಆಡುತ್ತಿದ್ದ ಹುಡುಗಾಟಿಕೆಗೆ ಮಿತಿಯೇ ಇರುತ್ತಿರಲಿಲ್ಲ. ಬ್ರಹ್ಮ ಇನ್ನೂ ಸೃಷ್ಟಿ ಮಾಡದೇ ಇದ್ದ ಜಂತುಗಳನ್ನೆಲ್ಲ ಇವರಿಬ್ಬರೂ ನಿರ್ಜೀವ ಆಕಾರದಲ್ಲಿ, ಸಂಕ್ಷೇಪ ರೂಪದಲ್ಲಿ ಸೃಷ್ಟಿಮಾಡುವುದರಲ್ಲಿ ತನ್ಮಯರಾಗುತ್ತಿದ್ದರು. ಬೆಕ್ಕಿನ ಚಹರೆಯೊಂದಿಗೆ ಹುಂಜದ ಚಹರೆ ಸೇರಿಹೋಗುತ್ತಿತ್ತು. ಅಷ್ಟೇಕೆ ಮೀನಿಗೂ ಹಕ್ಕಿಗೂ ವ್ಯತ್ಯಾಸ ತೋರುವುದು ಕಷ್ಟವಾಗುತ್ತಿತ್ತು. ಇಂಥ ಸೃಷ್ಟಿಕಾರ್ಯಗಳನ್ನು ಕಾಪಾಡುವುದಕ್ಕೆ ಉಪಾಯವಿರಲಿಲ್ಲ. ಹೆಡ್‌ಕ್ಲಾರ್ಕ್ ಬಾಬುಗಳು ಊರಿಗೆ ಮರಳಿ ಬರುವುದಕ್ಕೆ ಮುಂಚೆ ಅವುಗಳ ಗುರುತೇ ಇಲ್ಲದಂತೆ ಅಳಿಸಿಹಾಕಿಬಿಡಬೇಕಾಗಿತ್ತು. ಈ ಶಿಲ್ಪಿಗಳಿಬ್ಬರ ಸೃಷ್ಟಿ ಲೀಲೆಯಲ್ಲಿ ಬ್ರಹ್ಮ, ರುದ್ರರಿಬ್ಬರೂ ಇದ್ದರು. ಕೇವಲ ಮಹಾವಿಷ್ಣುವಿಗೆ ಮಾತ್ರ ಅವಕಾಶವಿಲ್ಲ.

ಶಿಲ್ಪಕಲೆಯ ಸಾಂಕ್ರಾಮಿಕ ಸತ್ಯವತಿಯ ವಂಶಸ್ಥರಲ್ಲಿ ಸ್ವಲ್ಪ ಜೋರಾಗೇ ತಗುಲಿತ್ತೇನೋ. ಅದಕ್ಕೆ ನಿದರ್ಶನವಾಗಿ, ಸತ್ಯವತಿಗಿಂತಲೂ ವಯಸ್ಸಿನಲ್ಲಿ ಹಿರಿಯನಾದ ಅವಳ ಅಣ್ಣನ ಮಗನೊಬ್ಬ ರಂಗಲಾಲನೆಂಬವನು ಚಿತ್ರಕಲೆಯಲ್ಲಿ ಹಠಾತ್ತಾಗಿ ಹೆಸರುವಾಸಿಯಾಗಿಬಿಟ್ಟ. ಅಂದರೆ, ದೇಶದ ರಸಿಕರೆಲ್ಲ ಅವನ ಕೃತಿಗಳ ಅದ್ಭುತತನದ ಬಗ್ಗೆ ದೊಡ್ಡ ಕೋಲಾಹಲ ಮಾಡಿಬಿಟ್ಟರು. ಅವರುಗಳು ಯಾವ ರೂಪವಾಗಿ ಕಲ್ಪನೆಮಾಡುವವರೋ ಅದರೊಡನೆ ಅವನ ಕಲ್ಪನೆ ಸ್ವಲ್ಪವೂ ಹೊಂದಿಕೊಳ್ಳದಿದ್ದುದನ್ನು ಕಂಡು ಅವನ ಪ್ರತಿಭೆಯ ಬಗ್ಗೆಯೇ ಅವರಿಗೆ ತಿರಸ್ಕಾರವುಂಟಾಯಿತು. ಆಶ್ಚರ್ಯವೇನೆಂದರೆ ಈ ತಿರಸ್ಕಾರ ಕ್ಷೇತ್ರದ ವಿರೋಧ, ವಿದ್ರೂಪದ ಆವರಣದಲ್ಲೇ ಅವನ ಖ್ಯಾತಿ ಇನ್ನೂ ಮೇಲೇರಲುತೊಡಗಿತು. ಅವನ ಕೃತಿಗಳನ್ನು ಸಂಕೋಚವೇ ಇಲ್ಲದೆ ನಕಲು ಮಾಡುತ್ತಿದ್ದವರು ಸಹ ಅವನು ನಿಜವಾದ ಆರ್ಟಿಸ್ಟೇ ಅಲ್ಲವೆಂದೂ ಅವನ ಟೆಕ್ನಿಕ್ ಅತ್ಯಂತ ಒರಟಾದದ್ದೆಂದೂ ಸಿದ್ಧಾಂತಮಾಡಲು ಮುಂದೆ ಬರತೊಡಗಿದರು. ಇಂಥ ಪರಮನಿಂದಿತನಾದ ಚಿತ್ರಕಾರನು ಒಂದು ದಿನ ಹೆಡ್‌ಕ್ಲಾರ್ಕ್ ಬಾಬುಗಳು ಊರಲ್ಲಿಲ್ಲದಿರುವಾಗ ತನ್ನ ಸೋದರತ್ತೆಯ ಮನೆಗೆ ಬಂದ. ಬಾಗಿಲನ್ನು ಬಡಿದು ಬಡಿದು ಕಡೆಗೆ ಒಳಗೆ ಪ್ರವೇಶಮಾಡಿದಾಗ ನೋಡುತ್ತಾನೆ–ನೆಲದ ಮೇಲೆ

ಕಾಲಿಡುವುದಕ್ಕೇ ಸ್ಥಳವಿಲ್ಲ. ಸಂಗತಿಯೆಲ್ಲ ತಿಳಿದುಬಂದು ಹೋಯಿತು. ಆಗ ರಂಗಲಾಲನು ಮೂಗಿನ ಮೇಲೆ ಬೆರಳಿಟ್ಟುಕೊಂಡು "ಇಷ್ಟು ದಿನಗಳಾದ ಮೇಲೆ ಕಂಡುಬಂತು, ಈ ಚೂನಿಯ ಪ್ರಾಣದೊಳಗಿಂದ ಸೃಷ್ಟಿ ಮೂರ್ತಿಯೊಂದು ಹೊಸದಾಗಿ ಹೊರಬಿದ್ದಿದಾನೆ. ಇದರಲ್ಲಿ ನಕಲು ವಿದ್ಯೆಯ ಚಿಹ್ನೆಯೇನೂ ಕಾಣುವುದಿಲ್ಲ. ಯಾವ ವಿಧಾತ ರೂಪಸೃಷ್ಟಿ ಮಾಡುತ್ತಾನೋ ಅಂಥವನ ವಯಸ್ಸಿನ ಜೊತೆಗೆ ಇವನ ವಯಸ್ಸು ಹೊಂದಿಕೊಳ್ಳುತ್ತದೆ. ಬರೆದಿರುವ ಚಿತ್ರಗಳನ್ನೆಲ್ಲ ಹೊರಗೆ ತೆಗೆದು ನನಗೆ ತೋರಿಸು" ಎಂದ.

ಎಲ್ಲಿಂದ ಹೊರಗೆ ತೆಗೆಯುತ್ತಾನೆ? ಯಾವ ಕಲೆಗಾರ ಬಣ್ಣ ಬಣ್ಣದಲ್ಲಿ, ಬೆಳಕಿನಲ್ಲಿ, ನೆರಳಿನಲ್ಲಿ, ಮುಗಿಲು ಮುಗಿಲುಗಳಲ್ಲಿ ಚಿತ್ರ ಬರೆಯುತ್ತಾನೋ ಅವನು ತನ್ನ ಮಂಜಿನ ನಕ್ಷೆಗಳನ್ನೂ ಮರೀಚಿಕೆ ಕಾಮನಬಿಲ್ಲುಗಳನ್ನೂ ದುಗುಡವಿಲ್ಲದೆ ಒತ್ತಟ್ಟಿಗೆ ಎಲ್ಲಿ ಸರಿಸಿಬಿಡುತ್ತಾನೋ ಆ ಸ್ಥಳಕ್ಕೇ ಈ ತಾಯಿ, ಮಗನ ಕೀರ್ತಿಫಲಗಳೂ ಸರಿಸಲ್ಪಟ್ಟಿದ್ದುವು. ರಂಗಲಾಲನು ಆಣೆಯಿಟ್ಟುಕೊಂಡು ತನ್ನ ಸೋದರತ್ತೆಗೆ ಹೇಳಿದ– "ಇನ್ನು ಮೇಲಿಂದ ನೀವಿಬ್ಬರೂ ಏನೇನು ಚಿತ್ರಗಳನ್ನು ಬರೆಯುತ್ತೀರೋ ಏನೇನು ಸಾಮಾನು ನಿರ್ಮಿಸುತ್ತೀರೋ ಎಲ್ಲಾ ಬೇರೆ ತೆಗೆದಿಡಿ. ನಾನು ಬಂದು ಅವನ್ನೆಲ್ಲ ತೆಗೆದುಕೊಂಡು ಹೋಗುತ್ತೇನೆ."

ಹೆಡ್‌ಕ್ಲಾರ್ಕ್ ಬಾಬು ಇನ್ನೂ ಬಂದಿರಲಿಲ್ಲ. ಬೆಳಗ್ಗೆಯಿಂದ ಶ್ರಾವಣದ ಛಾಯೆಯಲ್ಲಿ ಆಕಾಶವು ಧ್ಯಾನಮಗ್ನವಾಗಿತ್ತು. ಮಳೆ ಬೀಳುತ್ತಿತ್ತು. ಹೊತ್ತು ಗಡಿಯಾರದ ಯಾವ ಅಂಕಿಯ ಬಳಿ ನಿಂತಿದೆಯೋ ಲೆಕ್ಕವೇ ಇಲ್ಲ. ಅದನ್ನು ನೋಡಿ ತಿಳಿದುಕೊಳ್ಳುವುದಕ್ಕೆ ಯಾರಿಗೆ ಲಕ್ಷ್ಯ? ಇಂದು ಚೂನೀಬಾಬು ಹಡಗನ್ನು ತೇಲಿಸುವ ಚಿತ್ರ ಬರೆಯತೊಡಗಿದ್ದಾನೆ. ನದಿಯ ಅಲೆಗಳು ಮೊಸಳೆ ರೂಪದಲ್ಲಿ ಹಾಂ ಎಂದು ಬಾಯಿಬಿಟ್ಟು ನೌಕೆಯನ್ನು ನುಂಗಲು ಹೊರಟಿವೆ–ಎಂಬ ಭಾವ. ಮುಗಿಲಿನ ಮೋಡಗಳ ಸಂದಣಿ ಕೂಡ ಮೇಲುಗಡೆಯಿಂದ ಚಾದರವನ್ನು ಹಾರಿಸುತ್ತ ಉತ್ಸಾಹ ಕೊಡುತ್ತಿವೆಯೆಂಬಂತೆ ತೋರಿ ಬರುತ್ತಿದೆ. ಆದರೆ ಮೊಸಳೆಗಳು ಸಾಧಾರಣ ಮೊಸಳೆಗಳಲ್ಲ. ಮತ್ತು ಮೋಡಗಳನ್ನು ಕಂಡು "ಧೂಮಜ್ಯೋತಿಃಸಲಿಲ ಮರುತಾತ್ ಸನ್ನಿವೇಶಃ" ಎಂದು ಹೇಳಿದರೆ ಅತ್ಯುಕ್ತಿಯಾಡಿದಂತಾದೀತು. ಅಲ್ಲದೆ ಈ ಮಾತನ್ನೂ ಹೇಳಬೇಕಾಗುತ್ತದೆ–ಸತ್ಯ ಹೇಳಬೇಕಾದರೆ–ಇಂತಹ ನೌಕೆಯನ್ನು ನಿರ್ಮಿಸಿದಲ್ಲಿ ಯಾವ ಇನ್‌ಷುರೆನ್ಸ್ ಆಫೀಸೂ ಅದರ ಸುರಕ್ಷಿತತೆಯ ಬಗ್ಗೆ ಹೊಣೆ ಹೊತ್ತುಕೊಳ್ಳಲಾರದು. ಚಿತ್ರರಚನೆ ನಡೆದಿದೆ ಒಂದೇ ಸಮನೆ. ಆಕಾಶದ ಚಿತ್ರಕಾರನೂ ತನ್ನ ಖುಷಿ ಬಂದಂತೆ ರಚಿಸುತ್ತಿದ್ದಾನೆ–ಮತ್ತು ಭೂಮಿಯ ಈ ಮನೆಯೊಳಗೆ ಕೂತು ಬರೆಯುತ್ತಿರುವ ಅರಳಿದ, ಅಮಲು ತುಂಬಿದ ಕಣ್ಣುಗಳ ಹುಡುಗನೂ ಹಾಗೇ ಮಾಡುತ್ತಿದ್ದಾನೆ. ತಾಯಿ ನೋಡುತ್ತಿದ್ದಾಳೆ.

ಇಬ್ಬರಿಗೂ ಎಚ್ಚರಿಕೆಯಿಲ್ಲ, ಬಾಗಿಲು ತೆಗೆದೇ ಇದೆಯೆಂದು!

ಹೆಡ್‌ಕ್ಲಾರ್ಕ್ ಬಾಬು ಬಂದೇ ಬಿಟ್ಟರು.

"ಏನಾಗುತ್ತಾಯಿದೆಯಿಲ್ಲೀ?" ಎಂದು ಗರ್ಜಿಸಿದರು.

ಹುಡುಗನ ಎದೆ ನಡುಗತೊಡಗಿತು.

ಮೋರೆ ಗೋಡೆಯ ಬಣ್ಣವಾಯಿತು.

ಸ್ಪಷ್ಟವಾಗಿ ಗೊತ್ತಾಯಿತೀಗ ಗೋವಿಂದನಿಗೆ. ಪರೀಕ್ಷೆಯಲ್ಲಿ ಚೂನೀಲಾಲನಿಗೆ ಇತಿಹಾಸದ ಇಸವಿಗಳು ಮರೆತುಹೋಗುತ್ತವೆ, ಅದಕ್ಕೆ ಕಾರಣವೇನು ಎಂದು. ಈ ನಡುವೆ ಚೂನೀಲಾಲನು ಚಿತ್ರವನ್ನು ತನ್ನ ಚಾದರದಿಂದ ಮುಚ್ಚಲು ವ್ಯರ್ಥಪ್ರಯತ್ನ ಮಾಡಿದಾಗ ಅಪರಾಧವು ಇನ್ನೂ ಸ್ಪಷ್ಟವಾಗಿ ಹೊರಬಿತ್ತು. ಅದನ್ನ ಎಳೆದು ಗೋವಿಂದನು ಏನನ್ನ ಕಂಡನೋ ಅದರಿಂದ ಅವನಿಗೆ ಮಾತೇ ಹೊರಡಲಿಲ್ಲ. ಏನಿದು ಅವಾಂತರ? ಇದಕ್ಕಿಂತಲೂ ಇತಿಹಾಸದ ತಪ್ಪು ಇಸವಿಯಾದರೂ ಮೇಲು. ಚಿತ್ರವನ್ನು ಕಾಲಲ್ಲಿ ಒದ್ದು ಕಿತ್ತು ಚೂರುಚೂರಾಗಿ ಹರಿದು ಹಾಕಿದ. ಚೂನೀಲಾಲನು ಬಿಕ್ಕಿ ಬಿಕ್ಕಿ ಅಳುತ್ತ ನೆಲದ ಮೇಲೆ ಬಿದ್ದುಕೊಂಡ.

ಸತ್ಯವತಿಯು ಏಕಾದಶಿಯ ದಿವಸ ಸಾಧಾರಣವಾಗಿ ದೇವರ ಮನೆಯಲ್ಲಿರುತ್ತಿದ್ದಳು. ಅಲ್ಲಿಂದಲೇ ಮಗನ ರೋದನವನ್ನು ಕೇಳಿಸಿಕೊಂಡು ಓಡಿ ಬಂದಳು. ಹರಿದ ಚಿತ್ರದ ಚೂರುಗಳನ್ನೂ ನೆಲದ ಮೇಲೆ ಹೊರಳಾಡುತ್ತಿದ್ದ ಮಗನನ್ನೂ ಕಂಡಳು. ಗೋವಿಂದನಾಗ ಇತಿಹಾಸದ ಇಸವಿ ತಪ್ಪು ಹೇಳುವುದರ ಮೂಲಕಾರಣಗಳನ್ನು ಆರಿಸಿಕೊಳ್ಳುತ್ತಿದ್ದ-ಹೊರಗಡೆ ಬಿಸಾಡಲು.

ಸತ್ಯವತಿ ಇಷ್ಟು ದಿನ ಗೋವಿಂದನ ವ್ಯವಹಾರಕ್ಕೆ ವಿರುದ್ಧವಾಗಿ ಯಾವ ಮಾತನ್ನೂ ಆಡಿದವಳಲ್ಲ. ಈತನ ಮೇಲೆ, ತನ್ನ ಗಂಡ ನಂಬಿಕೊಂಡಿದ್ದದ್ದು- ಎಂಬುದನ್ನು ಸ್ಮರಿಸಿ ಆಕೆ ನಿಶ್ಶಬ್ದವಾಗಿ ಎಲ್ಲವನ್ನೂ ಸಹಿಸಿಕೊಂಡಿದ್ದಳು. ಇಂದು ಆಕೆ ಕಂಬನಿ ತುಂಬಿದ, ಕ್ರೋಧದಿಂದ ನಡುಗುವ ದನಿಯಲ್ಲಿ "ನೀವು ಯಾಕೆ ಚೂನಿಯ ಚಿತ್ರ ಹರಿದುಹಾಕಿದ್ದು?" ಎಂದು ಪ್ರಶ್ನಿಸಿದಳು.

"ಯಾಕೇ? ಇದೇನೇ ಅವನ ಓದುಬರೆಹ? ಕೊನೆಗೆ ಅವನಿಗೇನು ಗತಿಯಾಗತ್ತೆ?" ಎಂದು ಗುಡುಗಿದ ಗೋವಿಂದ.

"ಕೊನೆಗೆ ಅವನು ಬೀದಿಯ ಭಿಕಾರಿಯಾದರೂ ಅದೇ ಒಳ್ಳೆಯದು. ಆದರೆ ಎಂದೆಂದಿಗೂ ಅವನು ನಿಮ್ಮ ಹಾಗೆ ಆಗದಿರಲಿ. ದೇವರು ಅವನಿಗೆ ಕೊಟ್ಟಿರುವ ಸಂಪತ್ತೆ ಅವನಿಗೆ ಗೌರವ. ಅದು ನಿಮ್ಮ ಕಾಸಿನ ಗರ್ವಕ್ಕಿಂತಲೂ ದೊಡ್ಡದಾಗಲಿ- ಇದೇ ಅವನಿಗೆ ನನ್ನ ಆಶೀರ್ವಾದ" ಎಂದಳು ಸತ್ಯವತಿ.

ಗೋವಿಂದನ ಮೈ ನಡುಗಿತು. ಮೋರೆ ಕೆಂಪಗಾಯಿತು. ಸುಮ್ಮನಿರಲಾಗದೆ "ನನ್ನ ಜವಾಬುದಾರಿ ನಾನು ಹಾಗೆ ಸುಮ್ಮನೆ ಬಿಟ್ಟುಕೊಡಲಾರೆ. ಅದೆಂದಿಗೂ

ನಡೆಯೋದಿಲ್ಲ. ನಾಳೆಯೇ ಅವನನ್ನು ಬೋರ್ಡಿಂಗ್ ಸ್ಕೂಲಿಗೆ ಸೇರಿಸಿಬಿಡುತ್ತೇನೆ. ಇಲ್ಲದೆ ಹೋದರೆ ಹಾಳು ಮಾಡಿಬಿಡುತೀರಿ ಹುಡುಗನನ್ನು ನೀವು" ಎಂದು ಕೂಗಿ ಹೆಡ್‌ಕ್ಲಾರ್ಕ್‌ಬಾಬು ಆಫೀಸಿಗೆ ಹೊರಟುಹೋದ.

ಮಳೆ ಜೋರಾಗಿ ಬೀಳಲು ತೊಡಗಿತು. ರಸ್ತೆ ನೀರಿನಿಂದ ತುಂಬಿಹೋಯಿತು. ಸತ್ಯವತಿಯು ಚೂನಿಯ ಕೈಹಿಡಿದುಕೊಂಡು "ನಡೆಯಪ್ಪಾ ಮಗು ಹೋಗೋಣ" ಎಂದಳು.

"ಎಲ್ಲಿಗಮ್ಮಾ?" ಎಂದ ಚೂನಿ.

"ಇಲ್ಲಿಂದ ಮೊದಲು ಹೊರಗೆ ಹೋಗೋಣ."

ರಂಗಲಾಲನ ಮನೆಯ ಬಾಗಿಲ ಮುಂದೆ ಮೊಣಕಾಲುದ್ದ ನೀರು. ಸತ್ಯವತಿಯು ಚೂನೀಲಾಲನನ್ನ ಕರೆದುಕೊಂಡು ಅವನ ಮನೆಯನ್ನು ಪ್ರವೇಶಿಸಿದಳು. ರಂಗಲಾಲನು ಅಚ್ಚರಿಯಿಂದ ಮಾತಿಲ್ಲದೆ ನೋಡುತ್ತಿದ್ದ.

ಸತ್ಯವತಿ "ಅಪ್ಪಾ, ರಂಗೂ, ಇನ್ನು ಮೇಲಿಂದ ನೀನೇ ಎಲ್ಲ ಇವನಿಗೆ. ಎಲ್ಲಾ ಭಾರವೂ ನಿನ್ನದೆ. ಹಾಳು ಆ ಕಾಸಿನ ನರಕದಿಂದ ಇವನನ್ನು ಕಾಪಾಡು" ಎಂದಳು.

೨೦. ಕದ್ದು ತಂದ ಧನ

೧

ಮಹಾಕಾವ್ಯಗಳ ಯುಗದಲ್ಲಿ ಹೆಂಡತಿಯನ್ನು ಪೌರುಷದ ಬಲದಿಂದ ಗೆಲ್ಲಬೇಕಾಗಿತ್ತು. ಅಂಥ ಭಾಗ್ಯಶಾಲಿಗೆ ರಮಣೀರತ್ನವೇ ಲಭಿಸುತ್ತಿತ್ತು. ನಾನೋ ಈಗಿನ ಕಾಲದವ–ಹೇಡಿತನದಿಂದ, ಮೋಸದಿಂದ, ಗೆದ್ದೆ ನನ್ನ ರಮಣೀ ರತ್ನವನ್ನು. ಈ ವಿಷಯವನ್ನು ತಿಳಿದುಕೊಳ್ಳಲು ನನ್ನ ಹೆಂಡತಿಗೆ ಬಹಳ ದಿನಗಳು ಬೇಕಾಯಿತು. ಆದರೆ ನಾನು ಸಾಧನೆ ಮಾಡಿದುದು ಮದುವೆಯಾದ ಮೇಲೆ. ಮೋಸಮಾಡಿ ಮದುವೆ ಮಾಡಿಕೊಂಡವಳಿಗೆ ನಾನು ಸರಿಯಾದ ಬೆಲೆಯನ್ನು ದಿನದಿನವೂ ಕೊಡುತ್ತ ಬಂದಿದ್ದೇನೆ.

ದಾಂಪತ್ಯದ ಸತ್ತ್ವವನ್ನು ಪೂರ್ತಿಯಾಗಿ ಅನುಭವ ಮಾಡಬೇಕಾದರೆ ಪ್ರತಿದಿನವೂ ಹೊಸದೆಂದು ತಿಳಿದು ಆಚರಿಸಬೇಕಾಗುತ್ತದೆ. ಬಹಳ ಜನ ಗಂಡಸರು ಈ ಮಾತನ್ನು ಮರೆತು ಹೋಗುತ್ತಾರೆ. ಅವರು ಮೊದಲಲ್ಲಿ ಕಸ್ಟಮ್ ಹೌಸ್ (Custom House)ನಿಂದ ಸಮಾಜದ Clearance Certificate ತಂದು ತೋರಿಸಿ ಮಾಲನ್ನು ಬಿಡುಗಡೆ ಪಡೆದು ಆಮೇಲೆ ತಮ್ಮ ಹೊಣೆ ಮುಗಿಯಿತೆಂದು ಉದಾಸೀನರಾಗಿಬಿಡುತ್ತಾರೆ. ತಮ್ಮ ಹೆಂಡತಿಯ ಪಹರೆದಾರರಾಗಿರುವ ಅಧಿಕಾರದ ಪ್ರತಾಪಕ್ಕೆ ಮೇಲಿನವನಿಂದ ಸರ್ಟಿಫಿಕೇಟನ್ನು ಪಡೆದು ಬಂದ ಮೇಲೆ ಬಾಷಿಂಗ, ಮದುವೆ ಸೂಟಿನ ಯೂನಿಫಾರಮನ್ನು ಬಿಚ್ಚಿಟ್ಟು ಆಮೇಲಿಂದ ತಮ್ಮ ಯೋಗ್ಯತೆ ಅಲ್ಲಿಗೆ ಮುಗಿಯಿತೆಂದು ತೆಪ್ಪನಿದ್ದುಬಿಡುತ್ತಾರೆ.

ಮದುವೆಯೆಂಬುದು ಚಿರಜೀವನದ ಗಾನಪಾತ್ರ, ಅದರ ಪಲ್ಲವಿಯು ಒಂದೇ ಆದರೂ ಹಾಡಿನ ವಿಸ್ತಾರ ಪ್ರತಿದಿನದ ಹೊಸಹೊಸ ಪರ್ಯಾಯಗಳಲ್ಲಿ. ಈ ಸತ್ಯವನ್ನು ನಾನು ಚೆನ್ನಾಗಿ ತಿಳಿದುಕೊಂಡುದು ಸುನೇತ್ರಳ ಕಡೆಯಿಂದಲೇ. ಅವಳಲ್ಲಿ ಅನುರಾಗದ ನಿಧಿಯೇ ಕೂಡಿಟ್ಟಿದೆ. ಅದರ ಸಮಾರಂಭ ಪೂರೈಸುವುದಕ್ಕೇ ತಯಾರಿಲ್ಲ. ಮನೆಯಂಗಳದಲ್ಲಿ ನಾಲ್ಕು ಪ್ರಹರಗಳೂ ದನಿಸುತ್ತದೆ ಅದರ ಶಹಾನಾ ರಾಗಿಣಿ.

ಆಫೀಸಿನಿಂದ ಮರಳಿ ಬಂದಾಗ ಒಂದೊಂದು ದಿನ ನೋಡಿದರೆ ನನಗಾಗಿ ತಯಾರಾಗಿದೆ ಕರಬೂಜು ಹಣ್ಣಿನ ಪಾನಕ; ಪಕ್ಕದಲ್ಲೇ ಒಂದು ಬೆಳ್ಳಿಯ ತಟ್ಟೆಯ ಮೇಲೆ ನೀರು ಚಿಮುಕಿಸಿಟ್ಟಿರುವ ಮಲ್ಲಿಗೆಯ ಮಾಲೆ; ಒಳಗೆ ಹೋಗುವುದಕ್ಕೆ ಮೊದಲೇ ಗಮ್ಮೆಂದು ಮೂಗಿಗೆ ಹೊಡೆಯುವುದು ಅದರ ಕಂಪೇ. ಇನ್ನೊಂದು

ದಿನ ಐಸ್‌ಕ್ರೀಮಿನ ಯಂತ್ರದಲ್ಲಿ ತಯಾರಾದ ತಾಳೇ ನುಂಗು, ರಸಮಿಶ್ರಿತವಾದ ತಂಪಾದ ಪಾನೀಯ. ಪಕ್ಕದಲ್ಲೇ ಒಂದು ಚಹಾ ತಟ್ಟೆಯಲ್ಲಿ ಒಂದೇ ಒಂದು ಸೂರ್ಯಕಾಂತಿ ಹೂ. ಇದಕ್ಕೆಲ್ಲ ಸ್ಫೂರ್ತಿಯೇನೆಂದು ಹೇಳಬೇಕಾಗಿಲ್ಲ. ಇಷ್ಟೇ–ಅವಳು ನನ್ನ ಅಸ್ತಿತ್ವವನ್ನು ಹೊಸಹೊಸದಾಗಿ ಅನುಭವ ಮಾಡಬೇಕಂತೆ. ಹಳೆಯದನ್ನು ಹೊಸದಾಗಿ ಮಾಡಿ ಅನುಭವ ಮಾಡುವ ಶಕ್ತಿ ಕಲಾವಿದರಿಗೆ ಇರುವುದು. ಮತ್ತು ಇತರೇ ಜನರು, ಪಾಪ, ಯಾಂತ್ರಿಕವಾದ ಬಳಕೆಯ ದಾರಿಯಲ್ಲಿ ಜಾರಿಕೊಂಡು ಹೋಗಬೇಕಾಗಿರುತ್ತದೆ.

ನಿತ್ಯ ಹೊಸದಾಗಿ ಅನುರಾಗ ತೋರಿ ಅನುರಾಗವನ್ನನುಭವಿಸುವ ಪ್ರತಿಭೆ ಸುನೇತ್ರೆಗೆ ಇದೆ. ಹೊಸ ಅನುಭವಗಳನ್ನೂ ಉದ್ರೇಕಗಳನ್ನೂ ಪ್ರಚೋದಿಸುವಂಥ ಸೇವಾ ವಿಧಾನ ಸಹ ಇದೆ.

ಇಂದು ನಮ್ಮ ಮಗಳು ಅರುಣಳಿಗೆ ಹದಿನೇಳು ವರುಷಗಳಾಗಿವೆ. ಇದೇ ವಯಸ್ಸಿನಲ್ಲೇ ಸುನೇತ್ರಳಿಗೂ ಮದುವೆಯಾದದ್ದು ನನ್ನೊಂದಿಗೆ. ಈಗವಳಿಗೆ ಮೂವತ್ತೆಂಟು ವರುಷ. ಆದರೂ ಪ್ರತಿನಿತ್ಯ ಅಂದವಾಗಿ ಅಲಂಕಾರ ಮಾಡಿಕೊಳ್ಳುವುದು–ಪ್ರತಿ ದಿನ ಪೂಜೆಗೆ ನೈವೇದ್ಯವನ್ನು ಸಿದ್ಧಗೊಳಿಸಿದಂತೆ, ತನ್ನನ್ನೇ ಅರ್ಪಣೆ ಮಾಡಿ ಕೊಡಲು ಮಾಡುವ ಆಹ್ನಿಕ ಅನುಷ್ಠಾನವೆಂದು ಅವಳಿಗೆ ಗೊತ್ತು.

ಸುನೇತ್ರಳಿಗೆ ಕೇವಲ ಶಾಂತಿಪುರದ ಕಪ್ಪು ಬಾರ್ಡರಿನ ಬಿಳಿಯ ಸೀರೆಯನ್ನುಡುವ ಆಸೆ. ಪ್ರಚಾರಕರ ಧಿಕ್ಕಾರವನ್ನವಳು ಪ್ರತಿವಾದವಿಲ್ಲದೆ ಅಂಗೀಕರಿಸುವಳು. ಆದರೆ ಖಾದಿಯನ್ನು ಮಾತ್ರ ಸ್ವೀಕಾರ ಮಾಡಳು. ಅವಳ ವಾದವೇನೆಂದರೆ–"ಸ್ವದೇಶೀನೂಲುವವರ ನೂಲು, ಸ್ವದೇಶೀ ನೆಯಿಗೆಯವರ ಕೈಮಗ್ಗದ ಬಟ್ಟೆ ನನಗೆ ಪ್ರಿಯವೇ–ಆದರೆ ಕಲಾವಿದರಾದ ಅವರಿಗೆ ಬರೇ ನೂಲು ಚೆನ್ನಾಗಿದ್ದರೆ ಸಾಕು. ಆದರೆ ನನಗೆ ಬಟ್ಟೆ ಕೂಡ ಚೆನ್ನಾಗಿರಬೇಕು." ನಿಜವಾದ ವಿಷಯವೇನೆಂದರೆ ಅವಳ ಅಭಿಪ್ರಾಯದಲ್ಲಿ ತೆಳುವಾದ ಬಿಳಿಯ ಬಣ್ಣದ ಸೀರೆಗೆ ಬೇರೆ ಎಲ್ಲ ಬಣ್ಣಗಳ ರವಿಕೆ, ಜಾಕೆಟ್ಟುಗಳೂ ಹೊಂದಿಕೊಳ್ಳುತ್ತವೆ. ಅವಳು ಅದೇ ಬಟ್ಟೆಯಿಂದಲೇ ನಾನಾ ರೂಪಗಳಲ್ಲಿ ಹೊಸತನವನ್ನು ತೋರಿಸಿಕೊಳ್ಳುವಳು. ಅವಳು ಪ್ರಯತ್ನಪಟ್ಟು ಸಿಂಗರಿಸಿಕೊಂಡಿರುವಳೆಂಬ ಭಾವ ಮಾತ್ರ ಬರುವುದಿಲ್ಲ.

ಅವಳು ನನ್ನ ಅರ್ಧಚೇತನವಾದ ಮನದ ದಿಗಂತವು ಅವಳ ಉಡುಪಿನ ಸೊಗಸಿನಿಂದ ಬೆಳಗಲ್ಪಡುತ್ತದೆಂದು ತಿಳಿಯುತ್ತಾಳೆ. ನನಗೆ ಏನೋ ಆನಂದವಾಗುತ್ತದೆ–ಏತರಿಂದ ಆನಂದವಾಗುತ್ತಿದೆಯೆಂದು ಮಾತ್ರ ಗೊತ್ತಿಲ್ಲ.

ಪ್ರತ್ಯೇಕ ಮನುಷ್ಯರಲ್ಲೂ ನಾನೊಬ್ಬನಿದ್ದೇನೆ ಎಂಬೀ ಅಪರಿಮೇಯ ರಹಸ್ಯದ ಅಸೀಮ ಮೌಲ್ಯವನ್ನು ಎಚ್ಚರಿಸುತ್ತದೆ ಇಂತಹ ಪ್ರೇಮ. ಅಹಂಕಾರದ

ಖೋಟಾನಾಣ್ಯವು ಇದರ ಮುಂದೆ ತುಚ್ಛವಾಗಿ ಹೋಗುತ್ತದೆ. ಸುನೇತ್ರಳು ತನ್ನ ಮನ, ಪ್ರಾಣಗಳಿಂದ ಈ ಪರಮ ಮೌಲ್ಯವನ್ನು ನನಗೆ ಅರ್ಪಿಸುತ್ತ ಬಂದಿದ್ದಾಳೆ- ಈ ಇಪ್ಪತ್ತೊಂದು ವರುಷಗಳಿಂದ. ಅವಳ ಶುಭ್ರವಾದ ಹಣೆಯ ಮೇಲೆ ಕುಂಕುಮದ ಬೊಟ್ಟಿನ ಮಧ್ಯೆ ಪ್ರತಿದಿನವೂ ಅಕ್ಲಾಂತ ವಿಸ್ಮಯದ ವಾಣಿಯು ಲಿಖಿತವಾಗಿರುತ್ತದೆ. ಅವಳ ನಿಖಿಲ ಜಗತ್ತಿನ ಏಕಾಂತಸ್ಥಾನದ ಮೇಲೆ ಅಧಿಕಾರ ಪಡೆದುಕೊಂಡಿದ್ದೇನೆ ನಾನು. ಈ ಕಾರಣದಿಂದ ಸಾಧಾರಣವಾಗಿ ಜಗತ್ತಿನಲ್ಲಿ ಅವರಿವರು ಏನಾಗಿದ್ದಾರೋ ಅದಕ್ಕಿಂತಲೂ ಹೆಚ್ಚಾಗೇನೂ ಆಗದೆ ಹೋದೆ. ಸಾಧಾರಣರನ್ನು ಸಾಧಾರಣರನ್ನಾಗಿ ಆವಿಷ್ಕಾರ ಮಾಡಿಬಿಡುತ್ತದೆ, ಪ್ರೇಮವೆಂಬುದು. ಶಾಸ್ತ್ರದಲ್ಲಿ ನಿನ್ನನ್ನೇ ತಿಳಿದುಕೋ ಎಂದು ಹೇಳಲ್ಪಟ್ಟಿದೆ. ಆನಂದದಲ್ಲಿ ನನ್ನನ್ನು ನಾನು ತಿಳಿದುಕೊಂಡಿದ್ದೇನೆ. ಮತ್ತೊಬ್ಬ ವ್ಯಕ್ತಿ ಪ್ರೇಮದಲ್ಲಿ ನನ್ನ ಆ 'ನಾನು' ಎಂಬುದನ್ನು ತಿಳಿದುಕೊಂಡಿದ್ದಾಳೆ.

೨

ನಮ್ಮಪ್ಪ ಯಾವುದೋ ಹೆಸರುವಾಸಿಯಾದ ಬ್ಯಾಂಕಿನ ಡೈರೆಕ್ಟರುಗಳಲ್ಲೊಬ್ಬನಾಗಿದ್ದ. ನಾನು ಆ ಬ್ಯಾಂಕಿನ ಒಬ್ಬ ಪಾಲುದಾರನಾದೆ. Sleeping partner ಅನ್ನುತ್ತಾರಲ್ಲ ಹಾಗಲ್ಲ. ನಮ್ಮಪ್ಪ ನನ್ನನ್ನು ಎಲ್ಲ ಕಡೆಯಿಂದಲೂ ಲಗಾಮು ಕಟ್ಟಿ ಆಫೀಸಿನ ಕೆಲಸದಲ್ಲಿ ತಗುಲಿ ಹಾಕಿದರು. ಆದರೆ ನನ್ನ ಮೈ, ಮನಸ್ಸುಗಳು ಮಾತ್ರ ಈ ಕೆಲಸದಲ್ಲಿ ಹೊಂದಿಕೊಳ್ಳಲಿಲ್ಲ. ನಾನು ಫಾರೆಸ್ಟ್ ವಿಭಾಗದಲ್ಲೆಲ್ಲಾದರೂ ಇನ್ಸ್‌ಪೆಕ್ಟರ್ ಪದವಿ ಸಿಕ್ಕಿದರೆ ಹಾಯಾಗಿರಬಹುದೆಂದುಕೊಂಡಿದ್ದೆ. ಬಯಲು ಭೂಮಿಯ ವಿಶಾಲ ಆವರಣದಲ್ಲಿ ಅಲೆದಾಡಿಕೊಂಡಿರೋಣ, ಶಿಕಾರಿ ಮಾಡುವ ಖಯಾಲಿಯನ್ನು ತೃಪ್ತಿಪಡಿಸಿಕೊಳ್ಳೋಣ ಎಂದಿದ್ದೆ. ಆದರೆ ಅಪ್ಪನಿಗೆ ಬೇಕಾಗಿದ್ದುದು ಪದವಿ, ಅಂತಸ್ತು, ನನ್ನನ್ನು ಕುರಿತು ಅವರು "ಲೋ, ಇಂಥ ಕೆಲಸ ಬೇರೊಬ್ಬ ಬಂಗಾಳಿಯವನಿಗೆ ಸುಲಭವಾಗಿ ಸಿಗುವಂಥದಲ್ಲೋ" ಎಂದರು. ನಾನು ಸೋಲೊಪ್ಪಿಕೊಳ್ಳಬೇಕಾಯಿತು. ಅದೂ ಅಲ್ಲದೆ ಹೆಣ್ಣು ಮಕ್ಕಳ ಕಂಗಳಲ್ಲಿ ಗಂಡಸರ ಪದವಿ, ಅಂತಸ್ತು ಅತ್ಯಂತ ಬೆಲೆಯುಳ್ಳದ್ದೆಂದು ತಿಳಿಯಿತು. ಸುನೇತ್ರಳ ಅಕ್ಕನ ಗಂಡ ಪ್ರೊಫೆಸರ್. ಇಂಪೀರಿಯಲ್ ಸರ್ವಿಸಿನಲ್ಲಿದ್ದ ಆತ. ಅದರ ದೆಸೆಯಿಂದ ಹೆಂಗಸರ ಕೂಟದಲ್ಲಿ ಅವನ ಮನೆಯ ಹೆಂಗಸರು ಸದಾ ತಲೆಯೆತ್ತಿಕೊಂಡು ತಿರುಗುತ್ತಿದ್ದರು. ನಾನೇನಾದರೂ ಫಾರೆಸ್ಟ್ ಇಲಾಖೆಯ ಜಂಗ್ಲಿ ಇನ್ಸ್‌ಪೆಕ್ಟರನಾಗಿದ್ದು "ಸೋಲಾ" ಟೋಪಿಯೊಳಗೆ ತಲೆ ಹುದುಗಿಸಿಕೊಂಡು, ಹುಲಿ, ಕರಡಿಗಳ ಚರ್ಮಗಳಿಂದ ನನ್ನ ಮನೆಯ ನೆಲವನ್ನು ಹಾಸಿದ್ದಿದ್ದರೆ, ಆಗ ನನ್ನ ದೇಹದ ದೊಡ್ಡತನವೆಷ್ಟೋ ಕಡಮೆಯಾಗಿಬಿಡುತ್ತಿತ್ತು. ಅದರೊಡನೆಯೇ ದೊಡ್ಡ ಪದವಿಗಳಲ್ಲಿದ್ದ ಐದಾರು ನೆರೆಹೊರೆಯವರ ಮುಂದೆ ನನ್ನ ಪದಗೌರವ ಕೂಡ ಕೆಳಗಿಳಿಯುತ್ತಿತ್ತು. ಯಾರಿಗೆ ಗೊತ್ತು, ಈ

ಕೆಳಗಿಳಿಯುವಿಕೆಯಿಂದ ಮನೆಯ ಹೆಂಗಸರ ಆತ್ಮಾಭಿಮಾನ ಕೂಡ ಎಷ್ಟೋ ನಷ್ಟ ಹೊಂದುತ್ತಿತ್ತೇನೋ.

ಈ ಕಡೆ ನನ್ನ ಪ್ರಾಯದ ಜೀವಧಾರೆ ಆಫೀಸಿನ ಡೆಸ್ಕಿನಲ್ಲಿ ಕಟ್ಟಿ ಹಾಕಿದ ಸ್ಥಾವರತ್ವದ ಹೊರೆಯಿಂದ ಮಂದವಾಗುತ್ತ ಬರಹತ್ತಿತ್ತು. ಬೇರಾವ ಗಂಡಸಾದರೂ ಆಗಿದ್ದರೆ ಈ ಬದಲಾವಣೆಯನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ನಿಶ್ಚಿಂತೆಯಿಂದ ಹೊಟ್ಟೆಯ ಸುತ್ತಳತೆ ಏರುತ್ತಿರುವುದು ದುರದೃಷ್ಟವೆಂದು ಗಣಿಸುತ್ತಿರಲಿಲ್ಲ. ಆದರೆ ನನಗೆ ಅದು ಸಾಧ್ಯವಿಲ್ಲ. ನನಗೆ ಗೊತ್ತು–ಸುನೇತ್ರಳು ಮುಗ್ಧಳಾಗಿದ್ದುದು ಕೇವಲ ನನ್ನ ಗುಣದಿಂದ ಮಾತ್ರವಲ್ಲ. ನನ್ನ ದೇಹ ಸೌಷ್ಠವದಿಂದ. ವಿಧಿದತ್ತವಾದ ವರಮಾಲ್ಯವನ್ನು ಅಂಗದಲ್ಲಿ ಪಡೆದು ಅವಳನ್ನೊಂದು ದಿನ ವರಿಸಿ ಮನೆಗೆ ಕರೆತಂಧ ಮೇಲೆ ಖಂಡಿತವಾಗಿಯೂ ಪ್ರತಿ ದಿನ ಸತ್ಕಾರದಲ್ಲೂ ಅದರ ಪ್ರಯೋಜನವಿರುತ್ತದೆ. ಆಶ್ಚರ್ಯವೇನೆಂದರೆ, ಸುನೇತ್ರಳ ಯೌವನವು ಇಂದಿಗೂ ಮಾಸದೆ ಇದೆ.–ನೋಡುತ್ತ ನೋಡುತ್ತ ನನ್ನ ಪ್ರಾಯವೇ ಇಳಿಮುಖವಾಗುತ್ತಿದೆ.–ಬ್ಯಾಂಕಿನಲ್ಲಿ ಮಾತ್ರ ಹಣ ಜಮಾ ಆಗುತ್ತಿದೆ.

ನಮ್ಮಿಬ್ಬರ ಮಿಲನದ ಮೊದಲ ಅಭ್ಯುದಯವನ್ನು ಮತ್ತೆ ಕಣ್ಮುಂದೆ ಪ್ರತ್ಯಕ್ಷಮಾಡಿಸಿದವಳು ನನ್ನ ಮಗಳು ಅರುಣಾ. ಅವಳ ತಾರುಣ್ಯದ ಹೊಸ ನೇಸರುದಯದಲ್ಲಿ ನಮ್ಮಿಬ್ಬರ ದಾಂಪತ್ಯದ ಅಂದಿನ ಉಷಾರುಣ ರಾಗವು ಕಂಡುಬರುತ್ತಿದೆ. ನನ್ನ ಮನಸ್ಸೆಲ್ಲ ಅದನ್ನು ನೋಡಿ ಪುಳಕಿತವಾಗುತ್ತಿದೆ. ಶೈಲೇಶನ ಕಡೆ ನೋಡಿ, ನನ್ನ ಅಂದಿನ ವಯಸ್ಸು, ಪ್ರಾಯದ ಸೊಂಪು ಅವನ ಅವಯವಗಳಲ್ಲಿ ಕಂಡುಬರುವುದನ್ನು ಗಮನಿಸಿ ನನ್ನನ್ನ ನಾನೇ ಮರೆಯುತ್ತೇನೆ. ಯೌವನದ ಆ ಕ್ಷಿಪ್ರಶಕ್ತಿ, ಆ ಅಜಸ್ರಪ್ರಫುಲ್ಲತೆ ಮತ್ತೆ ಗಳಿಗೆ ಗಳಿಗೆಗೂ ಏಟುತಿಂದ ಅಭಿಲಾಷೆಯ, ಕುಂದಿದ ಉತ್ಸಾಹದ ಉಕ್ಕುವಿಕೆ–ಎಲ್ಲ ಅದೇ ಬಗೆಯಾಗಿದೆ.

ಹಿಂದೆ ಒಂದು ದಿನ ನಾನು ಯಾವ ದಾರಿಯಲ್ಲಿ ಹೊರಟಿದ್ದೆನೋ, ಆ ದಾರಿ ಅವನ ಎದುರಾಗಿಯೂ ಇದೆ, ಈಗ. ಅದೇ ಬಗೆಯಾಗಿಯೇ ಅರುಣಳ ತಾಯಿಯ ಮನವನ್ನು ವಶಮಾಡಿಕೊಳ್ಳಲು ನಾನಾ ಉಪಾಯಗಳನ್ನೂ ಹೂಡುತ್ತಾನೆ–ಶೈಲೇಶ. ಕೇವಲ ನಾನು ಮಾತ್ರ ಸಾಕಷ್ಟು ಅವನ ಗಮನಕ್ಕೆ ಬಂದಿಲ್ಲ. ಈ ಕಡೆ ಅರುಣಳಿಗೆ ಚೆನ್ನಾಗಿ ಗೊತ್ತು–ಅವಳ ತಂದೆಯೇ ಅವಳ ನೋವು ಎಲ್ಲಿದೆಯೆಂಬುದನ್ನು ತಿಳಿದುಕೊಳ್ಳಬಲ್ಲವನು ಎಂದು. ಒಂದೊಂದು ದಿನ ಏತಕ್ಕೋ ಏನೋ, ಇದ್ದಕ್ಕಿದ್ದಂತೆ ಕಂಗಳಲ್ಲಿ ಕಾಣಬರದ ಕಂಬನಿಯ ದೈನ್ಯವನ್ನು ತುಂಬಿಕೊಂಡು ಸುಮ್ಮನೆ ಬಂದು ನನ್ನ ಕಾಲ ಬಳಿಯ ಮೋಡಾ (ಬೆತ್ತದ ಕಾಲುಮಣೆ) ಮೇಲೆ ಕೂಡುವಳು. ಅವಳ ತಾಯಿ ನಿಷ್ಠುರಳಾಗಬಲ್ಲಳು. ಆದರೆ ನನ್ನಿಂದ ಸಾಧ್ಯವಿಲ್ಲ.

ಅರುಣಳ ಮನದ ವ್ಯಥೆಯನ್ನು ಅವಳ ತಾಯಿ ಅರ್ಥ ಮಾಡಿಕೊಳ್ಳಲಾರಳೆಂದಲ್ಲ. ಆದರೆ ಅವಳ ಅಭಿಪ್ರಾಯದಲ್ಲಿ ಇದೆಲ್ಲ "ಪ್ರಭಾತೇ

ಮೇಘಾಡಂಬರಮ್"-ಸ್ವಲ್ಪ ಕಾಲ ಕಳೆದರೆ ಎಲ್ಲಾ ಚದರಿಹೋಗುತ್ತವೆ ಎಂದು. ಈ ವಿಷಯದಲ್ಲಿ ನನಗೂ ಸುನೇತ್ರಳಿಗೂ ಮತೈಕ್ಯವಿಲ್ಲ. ಹಸಿವನ್ನು ನೀಗಲು ಬಿಡದೆ ಹೋದರೆ ಹಸಿವನ್ನು ತುಳಿದಿಡಲಾಗದೆಂದೊಂದೇ ಅಲ್ಲ-ಎರಡನೇ ಬಾರಿ ಎಲೆ ಹಾಕಿದಾಗ ಹೃದಯದ ಜಿಹ್ವೆಯಲ್ಲಿ ಹೊಸ ಅನುರಾಗದ ಸ್ವಾದ ಅಳಿಸಿಹೋಗುತ್ತದೆ. ಮಧ್ಯಾಹ್ನದ ವೇಳೆ ಮುಂಜಾನೆಯ ರಾಗವನ್ನ ಹಿಡಿಯ ಹೋದರೆ ಅದು ಕೈಗೆ ಸಿಗುವುದಿಲ್ಲ. ಯಜಮಾನಿ ಹೇಳುವುದೇನೆಂದರೆ-"ವಿವೇಚನೆ ಮಾಡುವ ವಯಸ್ಸು ಬರಲಿ ಮೊದಲು, ಆಮೇಲೆ ಬೇಕಾದರೆ"-ಇತ್ಯಾದಿ-ಆದರೆ ಹಾಂಯ್! ವಿವೇಚನೆ ಮಾಡುವ ವಯಸ್ಸು ಪ್ರೀತಿಸುವ ವಯಸ್ಸಿನ ವಿರೋಧಗತಿಯಲ್ಲಿರುವುದಲ್ಲ!

ಕೆಲವು ದಿನಗಳ ಮೊದಲು ಬಂದಿತ್ತು "ತುಂಬು ಮೋಡದ ಸೊಂಪು ಭಾದ್ರಪದ." ಭಾರಿ ಮಳೆಯ ಹೊಡೆತದ ಮರೆಯಲ್ಲಿ ಕಲಿಕತ್ತೆಯ ಇಟ್ಟಿಗೆ, ಮರದ ತೊಲೆಗಳಿಂದ ಕಟ್ಟಿದ್ದ ಮನೆಗಳೆಲ್ಲ ಮೆತ್ತಗಾಗಿಬಿಟ್ಟುವು. ಷಹರಿನ ಪ್ರಖರವಾದ ಬಾಯಿಗಾರಿಕೆ ಈಗಂತೂ ಗದ್ಗದ ಕೊರಳದನಿಯಂತೆ ಅಸ್ಪಷ್ಟವಾಗಿ ಹೋಯಿತು. ಅರುಣಾ ನನ್ನ ಲೈಬ್ರರಿ ಕೋಣೆಯಲ್ಲಿ ಪರೀಕ್ಷೆಯ ವ್ಯಾಸಂಗದಲ್ಲಿ ಮುಳುಗಿರುವಳೆಂದು ಅವಳ ತಾಯಿ ತಿಳಿದಿದ್ದಳು. ನಾನೊಂದು ಪುಸ್ತಕವನ್ನು ತರಲು ಹೋಗಿ ನೋಡುತ್ತೇನೆ-ಮೋಡ ಕವಿದಿದ್ದ ಮುಗಿಲ ಸಂಜೆಯ ಛಾಯೆಯಲ್ಲಿ ಕಿಟಕಿಯ ಬಳಿ ಅವಳು ಸುಮ್ಮನೆ ಕೂತಿದ್ದಾಳೆ. ಇನ್ನೂ ಕೂದಲನ್ನ ಬಾಚಿಲ್ಲ. ಮೂಡಲ ಕಡೆಯಿಂದ ಬರುವ ಗಾಳಿಯಿಂದ ಮಳೆಯ ಇರಚಲು ಬಂದು ಬೀಳುತ್ತಿದೆ, ಅವಳ ಕೆದರಿದ ಕೂದಲ ಮೇಲೆ.

ಸುನೇತ್ರಳಿಗೆ ಏನೂ ಹೇಳದೆ ಕೂಡಲೇ ಶೈಲೇನನನ್ನು ಚಹಾ ಕುಡಿಯಲು ಬರಬೇಕೆಂದು ಆಮಂತ್ರಿಸಿ ಕಾಗದ ಬರೆದು ನನ್ನ ಮೋಟರ್ ಗಾಡಿಯನ್ನು ಅವರ ಮನೆಗೆ ಕಳುಹಿಸಿದೆ. ಶೈಲೇನನು ಬಂದ. ಅವನ ಆಕಸ್ಮಿಕ ಆಗಮನವು ಸುನೇತ್ರಳಿಗೆ ಇಷ್ಟವಾಗಲಿಲ್ಲವೆಂದು ತಿಳಿಯುವುದು ಕಷ್ಟವಾಗಲಿಲ್ಲ. ನಾನು ಶೈಲೇನನನ್ನು ಕುರಿತು "ಗಣಿತದಲ್ಲಿ ನನಗಿರುವ ತಿಳಿವಳಿಕೆ ಈಗ ಮುನ್ನೋಡುತ್ತಿರುವ (Physics) ಭೌತಶಾಸ್ತ್ರಕ್ಕೆ ಉಪಯೋಗ ಬರುವುದಿಲ್ಲ. ಅದಕ್ಕೇ ನಿನಗೆ ಹೇಳಿಕಳುಹಿಸಿದೆ. Quantum Theory ಯನ್ನು ಸಾಧ್ಯವಾದಷ್ಟೂ ತಿಳಿದುಕೊಳ್ಳುವ ಆತುರವಿದೆ-" ಎಂದೆ.

ಹೇಳಿದೆನಷ್ಟೆ-ಆದರೆ ನನ್ನ ಇಳಿವಯಸ್ಸಿನ ವಿದ್ಯಾರ್ಜನೆಯ ಪ್ರಯತ್ನ ಹೆಚ್ಚು ದೂರ ಹೋಗಲಿಲ್ಲವೆಂದು ಹೇಳಬೇಕಾಗಿಲ್ಲ. ಅರುಣಳು ತನ್ನ ತಂದೆಯ ಈ ಚಾತುರ್ಯವನ್ನು ಸ್ಪಷ್ಟವಾಗಿ ಊಹಿಸಿಕೊಂಡುಬಿಟ್ಟಿದ್ದಾಳೆಂದೇ ನನ್ನ ನಿಶ್ಚಯ ನಂಬಿಕೆ.

ಇಂಥ ಆದರ್ಶ ಅಪ್ಪ ಬೇರೆ ಯಾರ ಕುಟುಂಬದಲ್ಲೂ ಇರಲಿಕ್ಕಿಲ್ಲವೆಂದೂ ಅವಳು ಅಂದುಕೊಳ್ಳುತ್ತಿರುತ್ತಾಳೆ.

ಕ್ವಾಂಟವರ್ ಥಿಯರಿಯ ಆರಂಭದಲ್ಲೇ ಟೆಲಿಫೋನ್ ಬೆಲ್ ಹೊಡೆದುಕೊಳ್ಳಲಾರಂಭಿಸಿತು. ಧಡಬಡನೆ ಎದ್ದು "ಜರೂರಿ ಕೆಲಸದ ಕರೆಯಿದೆ. ನೀವಿಬ್ಬರೂ ಒಂದು ಕೆಲಸ ಮಾಡಿ–ಅಲ್ಲಿಯವರೆಗೆ ಪಾರ್ಲರ್ ಟೆನಿಸನ್ನು ಆಡುತ್ತಾಯಿರಿ. ಕೆಲಸ ಮುಗಿಸಿಕೊಂಡು ಬೇಗ ಬಂದುಬಿಡುತ್ತೇನೆ" ಎಂದೆ. ಟೆಲಿಫೋನಿನಲ್ಲಿ ಬಂದ ದನಿಯೇ ಬೇರೆ–"ಹ್ಯಾಲೋ, ಅದು ಹನ್ನೆರಡುನೂರ ಇಂತಿಷ್ಟನೇ ನಂಬರಾ?" ಎಂದು. ನಾನು "ಇಲ್ಲ, ಇಲ್ಲಿನ ನಂಬರು ಏಳುನೂರ ಇಂತಿಷ್ಟನೇ ನಂಬರು" ಎಂದು ಉತ್ತರಿಸಿದೆ.

ಮರುಗಳಿಗೆಯೇ ಕೆಳಗಡೆಯ ಕೋಣೆಗೆ ಹೋಗಿ ಯಾವುದೋ ಹಳೆಯ ಪತ್ರಿಕೆಯನ್ನು ತೆಗೆದುಕೊಂಡು ಓದುತ್ತ ಕೂತೆ. ಕತ್ತಲಾಗುತ್ತ ಬಂತು. ದೀಪ ಹೊತ್ತಿಸಿದೆ.

ಸುನೇತ್ರ ಒಳಗೆ ಬಂದಳು. ಅತ್ಯಂತ ಗಂಭೀರವಾದ ಮುಖ. ನಾನು ನಗುತ್ತ "ಮೀಟಿಯರಾಲಜಿಸ್ಟ್ ನಿನ್ನ ಮುಖ ನೋಡಿದರೆ ಬಿರುಗಾಳಿಯ ಸಿಗ್ನಲ್ ಕೊಟ್ಟುಬಿಡುತ್ತಾನೆ" ಎಂದೆ.

ನನ್ನ ಹಾಸ್ಯವನ್ನು ಅಲ್ಲಗಳೆದು ಅವಳು "ನೀವು ಯಾಕೆ ಸುಮ್ಮನೆ ಶೈಲೇಶನಿಗೆ ಇಷ್ಟು ಸಲಿಗೆ ಕೊಡುವುದು, ಬಾರಿ ಬಾರಿಗೂ?" ಎಂದಳು.

ನಾನು "ಸಲಿಗೆ ಕೊಡುವವನು ನಾನಲ್ಲ. ಸಲಿಗೆ ಕೊಡುವ ಆಳು ಅದೃಶ್ಯನಾಗಿ ಅವನ ಅಂತರಾತ್ಮದಲ್ಲೇ ಇದಾನೆ" ಎಂದೆ.

"ಅವರಿಬ್ಬರು ಪರಸ್ಪರ ಭೇಟಿಯಾಗುವುದನ್ನು ಕೆಲವು ದಿನ ತಡೆದಿಟ್ಟಿದ್ದರೆ ಈ ಹುಡುಗಾಟಿಕೆ ತನಗೆ ತಾನೇ ಕಡಿದು ಹೋಗುತಾಯಿತ್ತು."

"ಹುಡುಗಾಟಿಕೆಯನ್ನು ಕಟುಕರ ಹಾಗೆ ಕಡಿದುಹಾಕುವುದೇಕೆ? ದಿನ ಕಳೆಯುತ್ತೆ, ವಯಸ್ಸು ಬೆಳೆಯುತ್ತೆ. ಇಂಥ ಹುಡುಗಾಟಿಕೆ ಆಮೇಲೆ ಬಾ ಅಂದರೂ ಬರುವುದಿಲ್ಲ."

"ನೀವು ಗ್ರಹನಕ್ಷತ್ರ ನಂಬದಿರಬಹುದು. ನಾನು ನಂಬುತ್ತೇನೆ. ಅವರಿಬ್ಬರಿಗೂ ಅವು ಸೇರುವುದಿಲ್ಲ."

"ಗ್ರಹನಕ್ಷತ್ರಗಳು ಎಲ್ಲಿ, ಯಾವ ರೀತಿ ಸೇರಿಕೊಳ್ಳುತ್ತವೋ ನಮ್ಮ ಕಣ್ಣಿಗಂತೂ ಬೀಳುವುದಿಲ್ಲ. ಆದರೆ ಆ ಹುಡುಗ, ಹುಡುಗಿ ಸೇರಿಕೊಂಡಿದ್ದಾರೆ, ಒಳಗೊಳಗೇ– ಆ ವಿಷಯ ಮಾತ್ರ ಬಹಳ ಸ್ಪಷ್ಟವಾಗೇ ಕಾಣಬರುತ್ತೆ."

"ನಿಮಗೆ ಅರ್ಥವಾಗುವುದಿಲ್ಲ, ನನ್ನ ಮಾತು. ನಾವು ಹುಟ್ಟುವಾಗೇ ನಮ್ ನಮ್ಮ ಯಥಾರ್ಥವಾದ ಜೋಡಿ ನಿಷ್ಕರ್ಷೆಯಾಗಿ ಹೋಗಿರುತ್ತೆ. ವ್ಯಾಮೋಹದ ಸೆಳೆತಕ್ಕೆ

ಸಿಕ್ಕಿ ಬೇರೆ ಯಾರನ್ನಾದರೂ ಸ್ವೀಕಾರ ಮಾಡಿದರೆ ಆಗ ತಿಳಿಯದೆ ಆದರೂ ಅಸತೀತ್ವ ಆದಹಾಗೆ ಆಗತ್ತೆ ಗೊತ್ತಾ ನಿಮಗೆ? ಆಗ ಎಷ್ಟು ದುಃಖ, ಎಷ್ಟು ಅಪಮಾನ ಸಹಿಸಬೇಕಾಗತ್ತೆ ಅದಕ್ಕೆ ಶಿಕ್ಷೆಯಾಗಿ ಗೊತ್ತಾ?"

"ಗೊತ್ತಿಲ್ಲ. ಆದರೆ ಯಥಾರ್ಥವಾದ ಜೋಡಿ ಯಾವುದು ಅಂಬೋದನ್ನ ಗುರುತು ಹಿಡಿಯುವುದು ಹೇಗೆ ಹೇಳು ಮತ್ತೆ."

"ಹೇಗಾ? ನಕ್ಷತ್ರಗಳ ಸ್ವಹಸ್ತದಿಂದ ಸ್ವಂತ ಅಕ್ಷರಗಳಲ್ಲಿ ಮಾಡಿದ ಜನ್ಮ ಕುಂಡಲಿ. ಇಲ್ಲವೇ...?"

೩

ಆಗ ಇನ್ನು ಸುಮ್ಮನೆ ಮುಚ್ಚಿಡಲಾಗಲಿಲ್ಲ. ಹೇಳಬೇಕಾಗಿ ಬಂತು.

ನನ್ನ ಮಾವ, ಅಂದರೆ ಸುನೇತ್ರಳ ತಂದೆ ಅಜಿತ್ ಕುಮಾರ ಭಟ್ಟಾಚಾರ್ಯ. ಅತಿ ಪುರಾತನ ಪಂಡಿತವಂಶಸ್ಥ. ಬಾಲ್ಯದಿಂದಲೂ ಚತುಷ್ಪಾಠಗಳ ಹವಾಮಾನದಲ್ಲಿ ಬೆಳೆದಿದ್ದರು. ಆಮೇಲೆ ಕಲಿಕತ್ತೆಗೆ ಬಂದು ಕಾಲೇಜಿನಲ್ಲಿ ಗಣಿತ ಶಾಸ್ತ್ರದಲ್ಲಿ ಎಂ.ಎ. ಡಿಗ್ರಿ ತೆಗೆದುಕೊಂಡರು. ಜ್ಯೋತಿಷ್ಯದಲ್ಲಿ ಅವರಿಗೆಷ್ಟು ವಿಶ್ವಾಸವೋ ಅಷ್ಟೇ ಪಾಂಡಿತ್ಯ ಕೂಡ. ಅವರ ತಂದೆ ಹೆಸರಾದ ನೈಯಾಯಿಕ ಪಂಡಿತರಾಗಿದ್ದರು. ಈಶ್ವರನಿನ್ನೂ ಅಸಿದ್ಧನೆಂದೇ ಅವರ ಮತ. ನಮ್ಮ ಮಾವನೂ ದೇವ, ದೇವಿಯರನ್ನಾರನ್ನೂ ನಂಬುತ್ತಿರಲಿಲ್ಲವೆಂಬುದಕ್ಕೆ ಪ್ರಮಾಣ ದೊರೆತಿದೆ. ಆದರೆ ಆ ನಂಬಿಕೆಯೆಲ್ಲಾ ವ್ಯರ್ಥವಾಗದೆ ಒಟ್ಟಾಗಿ ಸೇರಿ ಗ್ರಹನಕ್ಷತ್ರಗಳ ಮೇಲೆ ಬಿದ್ದಿತ್ತು. ಒಂದು ಬಗೆಯ ಅಂಧ ನಂಬಿಕೆಯೇ. ಇಂಥ ಮನೆಯಲ್ಲಿ ಹುಟ್ಟಿದವಳು ಸುನೇತ್ರ. ಬಾಲ್ಯದಿಂದಲೂ ಅವಳಿಗೆ ನಾಲ್ಕು ದಿಕ್ಕೂ ಗ್ರಹ, ನಕ್ಷತ್ರಗಳ ಕಠಿಣವಾದ ಕಾವಲು.

ನಾನಂತೂ ಪ್ರೊಫೆಸರರ ಮೆಚ್ಚಿನ ಶಿಷ್ಯ. ಸುನೇತ್ರಳಿಗೂ ಆತ ಪಾಠ ಹೇಳಿಕೊಡುತ್ತಿದ್ದರು. ನಾವಿಬ್ಬರೂ ಪರಸ್ಪರ ಸೇರುವುದಕ್ಕೆ ಬಾರಿ ಬಾರಿಗೂ ಅವಕಾಶ ದೊರೆಯುತ್ತಿತ್ತು. ಅಂಥ ಸುಯೋಗಗಳು ವ್ಯರ್ಥವಾಗಲಿಲ್ಲವೆಂಬ ಸುದ್ದಿ ತಂತಿಯಿಲ್ಲದೆ ವಿದ್ಯುದ್ವಾರ್ತೆಯಿಂದ ನನ್ನ ಬಳಿ ವ್ಯಕ್ತವಾಯಿತು. ನನ್ನ ಅತ್ತೆಯ ಹೆಸರು ವಿಭಾವತಿ. ಹಿಂದಿನ ಕಾಲದ ಆವರಣದಲ್ಲಿ ಆಕೆ ಹುಟ್ಟಿದ್ದಾದರೂ ಗಂಡನ ಪ್ರಭಾವದಿಂದ ಆಕೆಯ ಮನಸ್ಸು ಹಳೆಯ ಸಂಸ್ಕಾರದಿಂದ ಮುಕ್ತ ಮತ್ತು ಸ್ವಚ್ಛವಾಗಿತ್ತು. ಆಕೆ ಗಂಡನಿಗಿಂತಲೂ ಒಂದು ಮೆಟ್ಟಲು ಮೇಲೆ ಹೋಗಿದ್ದಳು. ಗ್ರಹನಕ್ಷತ್ರಗಳಲ್ಲೂ ಆಕೆಗೆ ನಂಬಿಕೆಯಿಲ್ಲ. ತನ್ನ ಇಷ್ಟದೇವತೆಯಲ್ಲಿ ಮಾತ್ರವೇ ನಂಬಿಕೆ. ಇದರ ಬಗ್ಗೆ ಆಕೆ ಎಷ್ಟೋ ಬಾರಿ ಹಾಸ್ಯ ಮಾಡುತ್ತಿದ್ದಳು. "ನೀವೇನೋ ಹೆದರಿಕೊಂಡು ಹೆದರಿಕೊಂಡು ಸಣ್ಣ, ಪುಟ್ಟ ಪ್ಯಾದೆಗಳಿಗೆ ಹೋಗಿ ಸಲಾಮು ಮಾಡುತ್ತ ಓಡಾಡಿ. ನಾನಂತೂ ಸ್ವಯಂ ರಾಜನ ಬಳಿ ಹೋಗಿ ಆಶ್ರಯಮಾಡುವಂಥವಳು."

ಆಗ ಆಕೆಯ ಗಂಡ "ಮೋಸಹೋಗುತ್ತಿ ನೋಡುತ್ತಿರು. ಆ ರಾಜ ಇದ್ದರೆ ಇದ್ದ. ಇಲ್ಲದೆ ಹೋದರೆ ಇಲ್ಲ. ಆದರೆ ಲಾಠಿ ಕೊರಳ ಮೇಲೇ ಇಟ್ಟುಕೊಂಡು ಯಾವಾಗಲೂ ಸಿದ್ಧ ಪ್ಯಾದೆಗಳ ದಳ" ಎನ್ನುವರು.

ಅದಕ್ಕೆ ಸೋಲದೆ ನಮ್ಮತ್ತೆ "ಮೋಸಹೋದರೂ ಒಳ್ಳೆಯದೇ. ಹಾಗೆಂದು ಹೇಳಿ ಹೊರಬಾಗಿಲ ದರ್ಬಾರಿನಲ್ಲಿ ಕಾವಲಿರುವ ಚಡಾವು, ಮೆಟ್ಟುಗಳ ಮುಂದೆ ತಲೆಬಾಗಿಸುವವಳಲ್ಲ" ಎನ್ನುವಳು.

ನಮ್ಮತ್ತೆಗೆ ನನ್ನ ಮೇಲೆ ಬಹಳ ಇಷ್ಟ. ಆಕೆಯ ಬಳಿ ನನ್ನ ಎದೆಯೊಳಗಿನ ಮಾತುಗಳೆಲ್ಲ ತಡೆಯಿಲ್ಲದೆ ಹೊರಗೆ ಬರುತ್ತಿದ್ದುವು.

ಒಂದು ದಿನ ಅವಕಾಶ ಮಾಡಿಕೊಂಡು ನಾನು ಆಕೆಗೆ "ಅಮ್ಮಾ, ನಿಮಗಂತು ಮಗನಿಲ್ಲ. ನನಗೆ ತಾಯಿಯಿಲ್ಲ. ಮಗಳನ್ನು ಕೊಟ್ಟು ನನಗೆ ನಿಮ್ಮ ಮಗನ ಸ್ಥಾನವನ್ನು ದಾನಮಾಡಿ. ನಿಮ್ಮ ಒಪ್ಪಿಗೆ ಪಡೆದ ಮೇಲೆ ಪ್ರೊಫೆಸರರ ಕಾಲು ಹಿಡಿಯುತ್ತೇನೆ ಹೋಗಿ" ಎಂದೆ.

ಆಕೆ "ಪ್ರೊಫೆಸರ ಕಾಲು ಹಿಡಿಯುವ ಮಾತು ಆಮೇಲೆ. ಮೊದಲು ನಿನ್ನ ಜಾತಕ ತೆಗೆದುಕೊಂಡು ಬಾ ನನ್ನ ಹತ್ತಿರ" ಎಂದಳು.

ತಂದುಕೊಟ್ಟೆ. ಆಕೆ ಅದನ್ನ ಗಮನಿಸಿ ನೋಡಿ "ನಡೆಯುವುದಿಲ್ಲ. ಪ್ರೊಫೆಸರರು ಒಪ್ಪಿಗೆ ಕೊಡುವುದಿಲ್ಲ. ಪ್ರೊಫೆಸರರ ಮಗಳು ಸಹ ತಂದೆಯ ಶಿಷ್ಯಳು ಇದರಲ್ಲಿ" ಎಂದಳು.

"ಹುಡುಗಿಯ ತಾಯಿ?" ಎಂದು ಕೇಳಿದೆ.

"ನನ್ನ ವಿಷಯ ಹೇಳಬೇಡ. ನನಗೆ ನಿನ್ನ ಮನಸ್ಸು ಗೊತ್ತು. ನನ್ನ ಮಗಳ ಮನಸ್ಸೂ ಗೊತ್ತು. ಅದಕ್ಕಿಂತ ಹೆಚ್ಚಾಗಿ ತಿಳಿಯಲು ನಾನೇನು ನಕ್ಷತ್ರ ಲೋಕಕ್ಕೆ ಪ್ರಯಾಣ ಬೆಳೆಸುವ ಚಪಲ ನನಗಿಲ್ಲ" ಎಂದಳು.

ನನ್ನ ಮನದಲ್ಲಿ ವಿಪ್ಲವವೆದ್ದಿತು. ಇದೇನನ್ಯಾಯ? "ಇಂತಹ ಅವಾಸ್ತವವಾದ ಅಡ್ಡಿಯನ್ನು ಒಪ್ಪಿಕೊಳ್ಳುವುದು ತುಂಬಾ ಅನ್ಯಾಯ" ಎಂದೆ.

ಆದರೆ ಅವಾಸ್ತವವಾದಂಥ ಅಡ್ಡಿಯ ವಿರುದ್ಧ ಹೋರಾಡುವುದು ಹೇಗೆ? ಅದರ ಮೇಲೆ ಕೊಡುವ ಪೆಟ್ಟು ತಗುಲಲಿಕ್ಕೆ ಅದಕ್ಕೆ ಮೈಯಿದ್ದರೆ ತಾನೆ?

ಈ ಕಡೆ ಹುಡುಗಿಗೆ ಸಂಬಂಧದ ಪ್ರಸ್ತಾಪಗಳು ನಾನಾ ಕಡೆಯಿಂದ ಬರ ತೊಡಗಿದವು. ಗ್ರಹ ನಕ್ಷತ್ರಗಳ ಸಮ್ಮತಿ ಇರುವಂಥವೆಷ್ಟೋ ಇದ್ದವು ಅವುಗಳಲ್ಲಿ. ಆದರೆ ಹುಡುಗಿ ತಾನು ಲಗ್ನವೇ ಆಗುವುದಿಲ್ಲವೆಂದು ಕಡೆಯವರೆಗೂ ಕನ್ಯೆಯಾಗೇ ಇರುತ್ತೇನೆಂದೂ ಹಠಹಿಡಿದು ಕೂತಳು. ವಿದ್ಯೆಯ ಸಾಧನೆಯಲ್ಲೇ ಬಾಳುವೆಯನ್ನು ಕಳೆಯುತ್ತೇನೆಂದಳು.

ಅವಳ ತಂದೆ ಅವಳ ಮನಸ್ಸಿನ ಅರ್ಥ ತಿಳಿದುಕೊಳ್ಳದೆ ಹೋದರು. ಆತನು ಗಣಿತಶಾಸ್ತ್ರ ವಿದುಷಿ ಲೀಲಾವತಿಯ ಆದರ್ಶವನ್ನು ನೆನೆದುಕೊಂಡರು. ತಾಯಿಗೆ ಅರ್ಥವಾಯಿತು. ಗೋಪ್ಯವಾಗಿ ಕಂಬನಿ ಸುರಿಸತೊಡಗಿದರು. ಕಡೆಗೊಂದು ದಿನ ಆಕೆಯು ನನ್ನ ಕೈಯಲ್ಲೊಂದು ಕಾಗದವನ್ನು ಕೊಟ್ಟು "ಇದು ಸುನೇತ್ರಳ ಜಾತಕ. ಇದನ್ನು ಎಲ್ಲಾದರೂ ತೋರಿಸಿ ನಿನ್ನ ಜಾತಕ ಅದರೊಡನೆ ಸರಿಹೋಗುವಂತೆ ಬದಲಾಯಿಸಿಕೊಂಡು ಬಾ. ನನ್ನ ಮಗಳಿಗೆ ಅಕಾರಣವಾಗಿ ದುಃಖವಾಗುವುದು ನನಗೆ ಸಹಿಸಲಸಾಧ್ಯ" ಎಂದಳು.

ಆಮೇಲೇನಾಯಿತೆಂದು ಹೇಳುವುದಿಲ್ಲ. ಜಾತಕದ ಅಂಕಿಗಳ ಬಲೆಯಿಂದ ಸುನೇತ್ರಳನ್ನು ಬಿಡಿಸಿ ತಂದೆ. ಕಂಬನಿಯನ್ನೊರೆಸಿಕೊಳ್ಳುತ್ತ ಅವಳ ತಾಯಿ "ಪುಣ್ಯ ಕಟ್ಟಿಕೊಂಡೆಯಪ್ಪಾ ಮಗೂ" ಎಂದಳು.

ಆಮೇಲೆ ಇಪ್ಪತ್ತೊಂದು ವರುಷಗಳು ಹೇಗೋ ಕಳೆದುಹೋದುವು.

೪

ಗಾಳಿಯ ವೇಗ ಹೆಚ್ಚಾಗುತ್ತಾ ಬಂತು. ಸುರಿಯುವ ಮಳೆಗೆ ತಡೆಯೇ ಇಲ್ಲ. ನಾನು ಸುನೇತ್ರಳನ್ನು ಕುರಿತು "ದೀಪ ಕಣ್ಣಿಗೆ ಹೊಡೆಯುತ್ತದೆ. ಆರಿಸಿ ಬಿಡುತ್ತೇನೆ" ಎಂದದ್ದೇ ಆರಿಸಿಯೂ ಬಿಟ್ಟೆ.

ಮಳೆಯ ಧಾರೆಯ ಮಧ್ಯದೊಳಗಿಂದ ಬೀದಿಯ ದೀಪದ ಲ್ಯಾಂಪಿನ ಮಂದವಾದ ಬೆಳಕು ಕತ್ತಲ ಕೋಣೆಯನ್ನು ಹೊಕ್ಕಿತು. ಸೋಫಾ ಮೇಲೆ ಸುನೇತ್ರಳನ್ನು ನನ್ನ ಮಗ್ಗುಲಲ್ಲಿ ಕೂಡಿಸಿಕೊಂಡೆ.

ಆಮೇಲೆ ಅವಳ ಕಡೆ ತಿರುಗಿ "ಸುನಿ, ನನ್ನನ್ನು ನೀನು ಯಥಾರ್ಥವಾದ ಜೋಡಿಯೆಂದು ಅಂದುಕೊಂಡಿದ್ದೀಯಾ?" ಎಂದೆ.

"ಇದೇನು ಇಷ್ಟು ದಿನಗಳಾದಮೇಲೆ ಈ ಪ್ರಶ್ನೆ? ಅದಕ್ಕೆ ಜವಾಬು ಕೊಡಲೆ ಬೇಕೇನೋ?"

"ಹಾಗಲ್ಲ. ನಿನ್ನ ಗ್ರಹ ನಕ್ಷತ್ರಗಳು ಒಪ್ಪಿಲ್ಲದೆ ಹೋದರೆ?"

"ಒಪ್ಪಿಲ್ಲದೆ ಏನು? ನನಗೆ ಗೊತ್ತಿಲ್ಲ ಅಂದುಕೊಂಡಿದ್ದೀರೇನು?"

"ಇಷ್ಟು ದಿನ ಅನ್ಯೋನ್ಯವಾಗಿ ಕಳೆದೆವು. ಯಾವುದಾದರೂ ಸಂಶಯ ಯಾವತ್ತಾದರೂ ಹುಟ್ಟಿದೆಯೇ ನಿನ್ನ ಮನಸ್ಸಿನಲ್ಲಿ?"

"ನೋಡಿ, ಇಂಥ ಕೆಲಸಕ್ಕೆ ಬಾರದ ಮಾತೆಲ್ಲ ಆಡಿದರೆ ನೋಡಿಕೊಳ್ಳಿ. ನನಗೆ ರೇಗತ್ತೆ ಇನ್ನ."

"ಸುನಿ, ಇಬ್ಬರೂ ಅನ್ಯೋನ್ಯವಾಗೇ ಸುಖ, ಎಷ್ಟೋ ದುಃಖ ಕೂಡ ಅನುಭವಿಸಿದ್ದೇವೆ, ಎಷ್ಟೋ ಸಲ. ನಮ್ಮ ಮೊದಲನೇ ಮಗು ಎಂಟನೇ ತಿಂಗಳಲ್ಲಿ

ಹೋಗಿಬಿಟ್ಟಿತು. ಟೈಫಾಯಿಡ್ ಕಾಯಿಲೆಯಲ್ಲಿ ನರಳಿ ನಾನು ಸಾಯುವ ಸ್ಥಿತಿಯಲ್ಲಿದ್ದಾಗ ನಮ್ಮಪ್ಪನ ಸಾವಾಯಿತು. ಕಡೆಗೆ ನೋಡಿದರೆ ನಮ್ಮಣ್ಣನೇ ಉಯಿಲನ್ನು ತಂತ್ರದಿಂದ ಬದಲಾಯಿಸಿ ಆಸ್ತಿಯೆಲ್ಲ ದಕ್ಕಿಹಾಕಿಕೊಂಡುಬಿಟ್ಟ. ಇಂದು ನನ್ನ ನೌಕರಿಯೇ ನಮಗಿರುವ ಒಂದೇ ಆಧಾರ. ನಿಮ್ಮಮ್ಮನ ಸ್ನೇಹವೇ ನನ್ನ ಬಾಳುವೆಯ ಧ್ರುವತಾರೆಯಾಗಿತ್ತು. ನವರಾತ್ರೆಯ ಹಬ್ಬಕ್ಕೆ ಊರಿಗೆ ಹೋಗುತ್ತಿರುವಾಗ ನಾಕೆ ಮುಳುಗಿಹೋಗಿ ಗಂಡ ಹೆಂಡಿರಿಬ್ಬರೂ ಪರಲೋಕಕ್ಕೆ ಹೋಗಿಬಿಟ್ಟರು. ನೋಡಿದರೆ ವ್ಯವಹಾರ ಬುದ್ಧಿಯಿಲ್ಲದ ನಿಮ್ಮ ತಂದೆ, ಪ್ರೊಫೆಸರರು, ದೊಡ್ಡ ಸಾಲದ ಹೊರೆ ಬಿಟ್ಟು ಹೋಗಿದ್ದರು. ಆ ಸಾಲ ನಾನೇ ತಲೆಯ ಮೇಲೆ ಹೊತ್ತುಕೊಂಡೆ. ಇದೆಲ್ಲ ದುರ್ಯೋಗಗಳೂ ನಡೆದದ್ದು ನನ್ನ ದುಷ್ಟಗ್ರಹಗಳ ಚೇಷ್ಟೆಯಿಂದಲೇ ಅಲ್ಲ ಎಂದು ಹೇಗೆ ಹೇಳಲಿ? ಮೊದಲಿಂದಲೂ ತಿಳಿದಿದ್ದರೆ ನೀನು ನನ್ನನ್ನು ಮದುವೆ ಮಾಡಿಕೊಳ್ಳುವುದಕ್ಕೇ ಒಪ್ಪುತ್ತಿರಲಿಲ್ಲ."

ಆಗ ಯಾವ ಮಾತೂ ಆಡದೆ ಸುನೇತ್ರ ನನ್ನ ಮೈಮೇಲೆ ಬಿದ್ದು ಬಿಗಿಯಾಗಿ ಅಪ್ಪಿಕೊಂಡಳು. ನಾನು ಸುನೇತ್ರಳ ಮೈದಡವುತ್ತ "ಎಲ್ಲ ದುಃಖ, ದುರ್ಲಕ್ಷಣಗಳನ್ನೂ ಮುಳುಗಿಸುವಷ್ಟು ಬಲವತ್ತರವಾದುದು ನಮ್ಮ ಪರಸ್ಪರ ಪ್ರೇಮ. ನಮ್ಮ ಜೀವನದಲ್ಲಿ ಇದಕ್ಕೆ ಬೇಕಾದಷ್ಟು ಪ್ರಮಾಣ ದೊರಕಿಲ್ಲವೆ?" ಎಂದೆ.

"ಖಂಡಿತ-ಖಂಡಿತ ಮಾಡಿಕೊಟ್ಟಿದೆ."

"ಒಂದುಪಕ್ಷ, ಗ್ರಹಚಾರವಶಾತ್, ನೀನು ಬದುಕಿದ್ದಾಗಲೇ ನನ್ನ ಸಾವಾದರೆ-ಆ ನಷ್ಟವನ್ನು ನಾನು ಬದುಕಿರುವಾಗಲೇ ಪೂರ್ತಿಮಾಡಲಾರೆನೆ?"

"ಬಿಡತು ಅನ್ನಿ...ಸಾಕು..ಸಾಕು ಆ ಮಾತನ್ನಲ್ಲಿಗೇ ಬಿಡಿ."

"ಸಾವಿತ್ರಿಯ ಸಂಗಡ ಸತ್ಯವಾನನ ಒಂದೇ ದಿವಸದಷ್ಟು ಮಿಲನವೂ ಚಿರವಿಯೋಗಕ್ಕಿಂತ ಅತಿ ಬಲವತ್ತರವಾಗಿದ್ದುದರಿಂದಲೇ ಅವಳು ಮೃತ್ಯು ಗ್ರಹವನ್ನು ಕಂಡು ಹೆದರಲಿಲ್ಲ. ಹೌದೋ ಅಲ್ಲವೋ...ಹೇಳು."

ಮಾತಾಡದೆ ಸುಮ್ಮನೆಯೇ ಇದ್ದಳು ಸುನೇತ್ರ. ನಾನಾಗ "ನೋಡು, ಸುನಿ, ನಿನ್ನ ಅರುಣಳು ಶೈಲೇನನನ್ನು ಅಷ್ಟು ಪ್ರೀತಿಸುತ್ತಾಳೆ. ಅದು ಸಾಲದೆ? ಅದೇ ಯಥೇಷ್ಟ. ಉಳಿದದ್ದೆಲ್ಲ ತಿಳಿಯದೆ ಇರುವುದೇ ಒಳ್ಳೆಯದು, ಏನಂತಿ ಸುನಿ?" ಎಂದೆ.

ಸುನೇತ್ರಳು ಆಗಲೂ ಉತ್ತರ ಕೊಡಲಿಲ್ಲ. ನಾನು ಮತ್ತೆ "ನೋಡು, ಸುನೀ, ನಿನ್ನನ್ನು ಮೊದಲು ನಾನು ಪ್ರೀತಿಸಿದಾಗ ದೊಡ್ಡ ಆತಂಕ ಎದುರಿಗೆ ಬಂದಿತ್ತು. ಅದನ್ನು ಅತಿಕ್ರಮಿಸುವುದಕ್ಕೆ ಮುಂಚೆ ನನಗೆಷ್ಟು ಸಂಕಟವಾಗಿತ್ತೋ. ಹಾಗಿರುವಾಗ ನನ್ನ ಬಾಳುವೆಯ ಎರಡನೇ ಬಾರಿ ಮತ್ತೆ ಆ ಹಳೆಯ ದುಃಖವನ್ನು ಏನು ಮಾಡಿದರೂ ಬರಮಾಡಿಕೊಳ್ಳಲಾರೆ, ಯಾವ ಗ್ರಹ ನಕ್ಷತ್ರಗಳ ಪ್ರೀತ್ಯರ್ಥಕ್ಕಾಗದಿದ್ದರೂ

ಸರಿ! ಅವರಿಬ್ಬರ ಜಾತಕಗಳ ಅಂಕಿಗಳನ್ನು ಸರಿಹೊಂದಿಸಲಿಕ್ಕೆ ಹೋಗಿ ಸುಮ್ಮನೆ ಇಲ್ಲದ ಭಯ, ಸಂಶಯಗಳು ಬರುವ ಹಾಗೆ ನಾನೆಂದಿಗೂ ಮಾಡುವುದಿಲ್ಲ. ಖಂಡಿತ" ಎಂದೆ.

ಸರಿಯಾಗಿ ಅದೇ ಘಳಿಗೆಯಲ್ಲಿ ಮೆಟ್ಟಲುಗಳ ಕಡೆಯಿಂದ ಕಾಲ ಸಪ್ಪಳ ಕೇಳಬಂತು. ಶೈಲೇನನು ಇಳಿದು ಹೊರಗೆ ಹೋಗುತ್ತಿದ್ದ. ಸುನೇತ್ರಳು ಧಡಬಡನೆ ಎದ್ದು ಗಟ್ಟಿಯಾಗಿ ಅವನನ್ನು ಕೂಗಿದಳು: "ಏನಪ್ಪಾ ಶೈಲೇನ? ಆಗಲೇ ಹೊರಟುಬಿಟ್ಟೆಯೇನು? ಇಷ್ಟು ಬೇಗ?" ಎಂದಳು.

ಶೈಲೇನನು ಅದು ವ್ಯಂಗ್ಯ ಆಕ್ಷೇಪಣೆಯೆಂದು ತಿಳಿದು ಸ್ವಲ್ಪ ಹೆದರುತ್ತ ಹೆದರುತ್ತ "ಹೌದು. ಹೊತ್ತಾಗಿಹೋಯಿತು. ಹತ್ತಿರ ಗಡಿಯಾರ ಇರಲಿಲ್ಲ. ಗೊತ್ತೇ ಆಗಲಿಲ್ಲ" ಎಂದ.

ಸುನೇತ್ರಳು "ಇಲ್ಲ, ಹೊತ್ತೇನೂ ಆಗಿಲ್ಲ. ಇವತ್ತು ರಾತ್ರಿ ನೀನಿಲ್ಲೇ ಊಟಮಾಡಿಕೊಂಡು ಹೋಗಬೇಕು" ಎಂದಳು.

ಅದಕ್ಕೇ ಅಲ್ಲವೆ ಸಲಿಗೆಯೆನ್ನುವುದು! ಆ ರಾತ್ರಿಯೇ ನಾನು ನಮ್ಮ ಮದುವೆಗೆ ಮುಂಚೆ ಮಾಡಿದ ಜಾತಕದ ಮೋಸವನ್ನು ಕುರಿತು ಸುನೇತ್ರಳಿಗೆ ವಿಶದವಾಗಿ ಹೇಳಿಬಿಟ್ಟೆ. ಆಗವಳು ಅಚ್ಚರಿಯಿಂದ ಮೊದಲು ನಂಬಲಿಲ್ಲ. ಆಮೇಲೆ ಮೆಲ್ಲನೆ "ಹೇಳದಿದ್ದರೇನೇ ಚೆನ್ನಾಗಿತ್ತು" ಎಂದಳು.

"ಏಕೆ?"

"ಇನ್ನು ಮೇಲೆ ಸುಮ್ಮ ಸುಮ್ಮನೆ ಎಲ್ಲದಕ್ಕೂ ಭಯಪಡಬೇಕಾಗುತ್ತದೆ."

"ಏತರ ಭಯ? ವೈಧವ್ಯದ ಭಯವೇ?" ಬಹಳ ಹೊತ್ತು ಸುಮ್ಮನೆಯೇ ಇದ್ದಳು ಸುನಿ. ಆಮೇಲೆ "ಇಲ್ಲ. ಭಯಪಡುವುದಿಲ್ಲ. ನಾನು ಒಂದು ಪಕ್ಷ ನಿಮ್ಮನ್ನು ತೊರೆದು ಸತ್ತುಹೋದರೆ ಆಗ ನನ್ನ ಸಾವು ಇಬ್ಬರ ಸಾವಾದಂತಾಗುತ್ತದೆ." ಎಂದಳು.

ISBN No : 978-81-905692-0-0